ಶ್ರೀಮನ್ಮಹಾಭಾರತ

ಭಾರತ ದರ್ಶನ ಪ್ರಕಾಶನ



ಅಶ್ವಮೇಧಿಕ ಪರ್ವ
ಆಶ್ರಮವಾಸಿಕಪರ್ವ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥

ಸಂಪುಟ ೩೧

ಭಾರತ ದರ್ಶನ ಪ್ರಕಾಶನ

ಶ್ರೀಮನ್ಮಹಾಭಾರತ

(ವ್ಯಾಸಭಾರತದ ಕನ್ನಡ ಸರಳಾನುವಾದ)

ಭಾತಿ ಸರ್ವೇಷು ವೇದೇಷು
ರತಿಃ ಸರ್ವೇಷು ಜನ್ತುಷು ।
ತರಣಂ ಸರ್ವತೀರ್ಥಾನಾಂ
ತೇನ ಭಾರತಮುಚ್ಯತೇ ॥

ಸಂಪುಟ 31

ಮುದ್ರಕರು:
ಭಾರತ ದರ್ಶನ ಮುದ್ರಣಾಲಯ
163, ಮಂಜುನಾಥ ರಸ್ತೆ, 2ನೇ ಬ್ಲಾಕ್, ತ್ಯಾಗರಾಜನಗರ,
ಬೆಂಗಳೂರು - 560 028
ದೂರವಾಣಿ: 080-26765381

ಪ್ರಥಮ ಇ-ಮುದ್ರಣ ಜನವರಿ ೨೦೧೪

ಆದಿ ಅಧ್ಯಕ್ಷರು:
ಪರಮಪೂಜ್ಯ ಶ್ರೀ ಶ್ರೀ
ರಂಗಪ್ರಿಯಮಹಾದೇಶಿಕಸ್ವಾಮಿಗಳವರು

ಆದಿ ವ್ಯವಸ್ಥಾಪಕ ಸಂಪಾದಕರು:
ದಿ॥ ಕೆ.ಎಸ್. ಕೌಶಿಕ್ ('ವಿಶ್ವಾಮಿತ್ರ')

ಆದಿ ಸಂಪಾದಕರು:
ದಿ॥ ವಿದ್ವಾನ್ ಹೆಚ್.ಎನ್. ರಂಗಸ್ವಾಮೀ

ಆದಿ ಸಂಪಾದಕರು:
ದಿ॥ ವಿದ್ವಾನ್ ರಾಮೇಶ್ವರಾವಧಾನೀ

ಸಂಪಾದಕ ಮಂಡಲಿ:

ಶ್ರೀ ಶ್ರೀಹರಿ
ಶ್ರೀ ನೆ.ವೆಂ. ಶ್ರೀನಿವಾಸರಾಯ

ಶ್ರೀ ವಿ. ಸೂರ್ಯನಾರಾಯಣ್, M.A. B.Com., B.L.,
ಕೋಶಾಧ್ಯಕ್ಷರು

ವಿನಮ್ರವಚನಗಳು

ಪರಮಕಾರುಣಿಕನಾದ ಪರಮಾತ್ಮನ ದಿವ್ಯಾನುಗ್ರಹದಿಂದಲೂ, ಮಹಾಗುರುವಿನ ದಿವ್ಯಾಶೀರ್ವಾದಗಳಿಂದಲೂ, ಸತ್ಪುರುಷರ ಸಹಕಾರ-ಸದಾಶಯಗಳಿಂದಲೂ ಮೂವತ್ತೊಂದನೆಯ ಸಂಪುಟವನ್ನು ಹೊರತಂದು, ದಿವ್ಯ ಕುಸುಮವಾದ ಈ ಸಂಪುಟವನ್ನು ಪರಮಾತ್ಮನ ದಿವ್ಯಪಾದಾರವಿಂದಗಳಲ್ಲಿ ಸಮರ್ಪಿಸಿ, ಅವನ ಪ್ರಸಾದರೂಪವಾದ ಈ ಮಹಾಭಾರತಕುಸುಮವನ್ನೇ ಪ್ರಿಯವಾಚಕರ ಅಂಜಲಿಪುಟಗಳಲ್ಲಿ ಇಡುತ್ತಿದ್ದೇವೆ. ಅಘಟಿತಘಟನಾ ಸಮರ್ಥನಾದ ಪರಮಾತ್ಮನು ಪಂಗುವೊಬ್ಬನನ್ನು ಮಹಾಭಾರತವೆಂಬ ಮಹಾಪರ್ವತಕ್ಕೆ ಹತ್ತಿಸಿಬಿಟ್ಟಿದ್ದಾನೆ. ತುತ್ತತುದಿಗೆ ಹೋಗಲು ಇನ್ನೊಂದು ಮೆಟ್ಟಿಲು ಮಾತ್ರವೇ ಉಳಿದಿದೆ. ದಿವ್ಯಪುರುಷನ ಕರಾವಲಂಬನದಿಂದ ಆ ಮೆಟ್ಟಿಲನ್ನೂ ಸುಗಮವಾಗಿ ನಿರ್ವಿಘ್ನವಾಗಿ ಹತ್ತಬಹುದೆಂಬ ಭರವಸೆಯು ಮೂಡಿಬಂದಿದೆ. ಈ ಸಂಪುಟದಲ್ಲಿ ಆಶ್ವಮೇಧಿಕ ಮತ್ತು ಆಶ್ರಮವಾಸಿಕ ಪರ್ವಗಳೆರಡೂ ಮುಗಿದಿವೆ. ಪ್ರಕ್ಷಿಪ್ತವೆಂದು ಪರಿಗಣಿಸಲ್ಪಟ್ಟಿರುವ ವೈಷ್ಣವ ಧರ್ಮವನ್ನೂ, ಉಮಾ-ಮಹೇಶ್ವರಸಂವಾದದ ಸ್ವಲ್ಪಭಾಗವನ್ನೂ ಈ ಸಂಪುಟದಲ್ಲಿ ಅಳವಡಿಸಲಾಗಿದೆ. ಈ ಎರಡು ಪ್ರಕರಣಗಳಲ್ಲಿಯೂ ಧಾರ್ಮಿಕವಿಷಯಗಳೇ ಹೆಚ್ಚು ಅಡಕವಾಗಿರುವುದರಿಂದ ಇವನ್ನು ಸೇರಿಸಲು ನಿಶ್ಚಯಿಸಲಾಯಿತು.

ಈಗಾಗಲೇ ನಮ್ಮ ಪ್ರಿಯಗ್ರಾಹಕರೆಲ್ಲರಿಗೂ ಪತ್ರಗಳ ಮೂಲಕ ತಿಳಿಸಿರುವಂತೆ ಉತ್ತರಾಯಣದ ಕಡೆಯಲ್ಲಿ ಕೊನೆಯದಾದ ಮೂವತ್ತೆರಡನೆಯ ಸಂಪುಟದ ಪ್ರಕಾಶನ ಮಹಾಮಂಗಳಸಮಾರಂಭವು ನಡೆಯಲಿದೆ. ಈ ಮಹಾಮಂಗಳಸಮಾರಂಭದಲ್ಲಿ ನಮ್ಮ ಗ್ರಾಹಕರು ಪಾಲ್ಗೊಳ್ಳಬೇಕು. ನೇರವಾಗಿ ಭಾಗವಹಿಸಲು ಸಾಧ್ಯವಾಗದಿದ್ದರೂ ಅಲ್ಪಕಾಣಿಕೆಯ ಮೂಲಕವಾದರೂ ಅವರು ಈ ಸಮಾರಂಭದಲ್ಲಿ ಪಾಲ್ಗೊಳ್ಳಬೇಕು. ಕಾಣಿಕೆಯ ಪ್ರಸ್ತಾಪವನ್ನೆತ್ತಿದೊಡನೆಯೇ ಗ್ರಾಹಕರು ಹಣವಸೂಲಿಗೆ ಇದೊಂದು ಮಾರ್ಗವೆಂದು ದಯಮಾಡಿ ಭಾವಿಸಬಾರದು. ಅತಿಮಹತ್ತ್ವಪೂರ್ಣವೂ ಹೆಚ್ಚು ದೊಡ್ಡದೂ ಆದ ಮಹಾಭಾರತದ ಪ್ರಕಟಣೆಯೆಂಬ ಈ ಮಹಾಕಾರ್ಯವು ಪರಮಾತ್ಮನ ದಯೆಯಿಂದ ನಡೆದು, ಅವನ ಪ್ರೀತ್ಯರ್ಥವಾಗಿಯೇ ನಡೆಯುವ ಸಮಾರಂಭದಲ್ಲಿ ಪಾಲ್ಗೊಳ್ಳಲು ಸದವಕಾಶವು

ಸಿಕ್ಕಿರುವುದಕ್ಕಾಗಿ ಸಂತೋಷದಿಂದ ಕಾಣಿಕೆಯನ್ನು ಕಳುಹಿಸಬೇಕು. ಅಂತಹವರು ಮಾತ್ರವೇ ಕಳುಹಿಸಲಿ. ಇದೇ ಭಾವನೆಯಿಂದ ಗ್ರಾಹಕರಲ್ಲದವರೂ ಯಥಾಶಕ್ತಿ ಕಾಣಿಕೆಯನ್ನು ಕಳುಹಿಸಬಹುದಾಗಿದೆ. ನಾವು ಪತ್ರದಲ್ಲಿ ಕಾಲಮಿತಿಯನ್ನು ದಿನಾಂಕ ೧೫-೪-೧೯೮೫ ಎಂದು ಸೂಚಿಸಿದ್ದರೂ ಕಾಣಿಕೆಯನ್ನು ಕಳುಹಿಸಲು ಅವಕಾಶವಿದೆ. ಕಳುಹಿಸಿ ಕೃತಾರ್ಥರಾಗಬಹುದು.

ಅನೇಕರು ಈಗಾಗಲೇ ಹೆಚ್ಚು ವಂತಿಗೆಯನ್ನು ಕಳುಹಿಸಿ ಒತ್ತಾಸೆ ನೀಡಿರುತ್ತಾರೆ. ಆದರೆ ಜಾಹಿರಾತಿನ ವಿಷಯದಲ್ಲಿ ಮಾತ್ರ ನಮ್ಮ ಗ್ರಾಹಕರಾಗಿರುವ ಕೈಗಾರಿಕೋದ್ಯಮಿಗಳು ಅಷ್ಟೊಂದು ಆಸಕ್ತಿಯನ್ನು ತೋರಿಲ್ಲ. ನಮ್ಮ ಗ್ರಾಹಕವರ್ಗದಲ್ಲಿರುವ ಸಾವಿರಾರು ಹಣವಂತರಲ್ಲಿ ಒಂದು ಸಾವಿರಮಂದಿ ಶುಭಾಶಯಗಳ ಜಾಹಿರಾತನ್ನು ಕಳುಹಿಸಿದರೂ ನಮಗೆ ಸಾಕಷ್ಟಾಗುತ್ತದೆ. ಈಗಲಾದರೂ ಅವರು ಸಮಾರಂಭವು ತಮಗೂ ಸೇರಿದ್ದೆಂಬ ಭಾವನೆಯಿಂದ ಒಡನೆಯೇ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿಸುತ್ತೇವೆ. ಸಮಾರಂಭಕ್ಕೆ ಬೇಕಾಗುವ ಸಾಮಗ್ರಿಗಳನ್ನು (ಅಕ್ಕಿ, ಬೇಳೆ, ಬೆಲ್ಲ ಮುಂತಾದುವು) ಕಳುಹಿಸುವ ಬಗ್ಗೆ ನಾವು ಪ್ರಸ್ತಾಪಿಸದಿದ್ದರೂ ಅನೇಕ ಉದಾರಿಗಳು ಸಾಮಗ್ರಿಗಳನ್ನು ಕಳುಹಿಸಲು ಮುಂದೆ ಬಂದಿರುತ್ತಾರೆ. ಇವರಿಗೆ ಅಭಿನಂದನೆಗಳು. ಅನುಕೂಲವಿದ್ದವರು ಸಮಾರಂಭಕ್ಕೆ ಸಾಮಗ್ರಿಗಳನ್ನು ಕಳುಹಿಸಬಹುದು. ಸಮಾರಂಭವನ್ನು ಅತ್ಯಂತಯಶಸ್ವಿಯಾಗಿ ನಡೆಸಬೇಕೆಂಬ ಆಕಾಂಕ್ಷೆ ಬಹಳವಾಗಿದೆ. ಆದರೆ ನಾವು ನಿರೀಕ್ಷಿಸಿದ್ದಷ್ಟು ಉತ್ತೇಜನ ಇದುವರೆಗೂ ಲಭಿಸಿಲ್ಲ. ಇನ್ನು ೩೫ ದಿವಸಗಳು ಮಾತ್ರವೇ ಉಳಿದಿವೆ. ನಮ್ಮ ಗ್ರಾಹಕರೆಲ್ಲರೂ ಸಹಕಾರನೀಡಿದರೆ ಪರಮಾದ್ಭುತವಾದ ರೀತಿಯಲ್ಲಿ ಈ ಸಮಾರಂಭವನ್ನು ನಡೆಸಬಹುದು. ಪರಮಾತ್ಮನು ಈ ವಿಷಯದಲ್ಲಿ ಎಲ್ಲರಿಗೂ ಪ್ರೇರಣೆಯನ್ನು ಕೊಡಲಿ—ಎಂದು ಪ್ರಾರ್ಥಿಸುತ್ತೇವೆ.

ರಾಮಾಯಣದ ಸಂಪುಟಗಳಿಗೂ ಈಗೊಂದು-ಆಗೊಂದು ಹೀಗೆ ಚಂದಾಹಣವು ಬರುತ್ತಿದೆ. ಮಹಾಭಾರತದ ಗ್ರಾಹಕರೆಲ್ಲರೂ ರಾಮಾಯಣಕ್ಕೆ ಗ್ರಾಹಕರಾಗುವರೆಂಬ ಭರವಸೆಯಿಂದಿದ್ದೇವೆ. ಮಹಾಭಾರತವನ್ನು ಮುಗಿಸಿ ರಾಮಾಯಣವನ್ನು ಪ್ರಕಟಿಸಬೇಕೆನ್ನುವ ಕಾರಣದಿಂದಲೂ ಮಹಾಭಾರತದ ಗ್ರಾಹಕರೆಲ್ಲರೂ ರಾಮಾಯಣಕ್ಕೂ ಗ್ರಾಹಕರಾಗಲೆಂಬ ಆಶಯ

ದಿಂದಲೂ ಆಕ್ಷಯಸಂವಂತ್ಸರದ ಶ್ರೀರಾಮನವಮಿಯಂದು ಪ್ರಾರಂಭಿಸತಕ್ಕುದೆಂದು ನಿರ್ಧರಿಸಲಾಗಿದೆ. ಸುಲಭರೀತಿಯಲ್ಲಿ ಪಡೆದುಕೊಳ್ಳುವಂತಾಗಲೆಂಬ ಕಾರಣದಿಂದ ಮೂರು ಕಂತುಗಳಲ್ಲಿ ಚಂದಾಹಣವನ್ನು ಕೊಡಲು ಅವಕಾಶ ಮಾಡಿಕೊಡಲಾಗಿದೆ. ಈ ಅವಕಾಶವನ್ನು ಗ್ರಾಹಕರು ಸದುಪಯೋಗಪಡಿಸಿಕೊಳ್ಳುವರೆಂಬ ಭರವಸೆಯಿದೆ. ಚಂದಾಹಣ ೬೪೦ ಪುಟಗಳ ಹತ್ತು ಸಂಪುಟಗಳ ಪೂರ್ಣಮಾಲೆಗೆ ಸಾಧಾರಣ ಪ್ರತಿ ೧೨೦/-ರೂ.ಗಳು ಕ್ಯಾಲಿಕೋ ಪ್ರತಿ ೧೫೦/-ರೂ.ಗಳು.

೩೧ ಮತ್ತು ೩೨ನೆಯ ಸಂಪುಟಗಳಿಗಾಗಿ ಸಾಧಾರಣಪ್ರತಿಗಳಿಗೆ ೨೪/-ರೂ.ಗಳನ್ನೂ ಕ್ಯಾಲಿಕೋಪ್ರತಿಗಳಿಗೆ ೨೮/-ರೂ.ಗಳನ್ನೂ ಕಳುಹಿಸುವಂತೆ ಪ್ರಾರ್ಥಿಸಲಾಗಿತ್ತು. ಇನ್ನೂ ಅನೇಕರು ಈ ಬಗೆಗೆ ಗಮನಕೊಟ್ಟಿರುವುದಿಲ್ಲ. ಸಾಧ್ಯವಾದಷ್ಟು ಬೇಗ ಕಳುಹಿಸಿಕೊಡಬೇಕಾಗಿ ವಿನಂತಿಸುತ್ತೇವೆ. ಕೆಲವರು ೧ ಸಂಪುಟಕ್ಕೆ ೨೪/-೦೦ ರೂ.ಗಳೆಂದು ಅಥವಾ ೨೮/-೦೦ ರೂ.ಗಳೆಂದು ಭಾವಿಸಿ ೪೮/-೦೦ ಯಾ ೫೬/-೦೦ ರೂ.ಗಳನ್ನು ಕಳುಹಿಸಿರುತ್ತಾರೆ. ಮುಂದೆ ಯಾರೂ ಹಾಗೆ ಕಳುಹಿಸಬಾರದು. ೨ ಸಂಪುಟಗಳೂ ಸೇರಿ ಈ ಬೆಲೆಯನ್ನು ಇಡಲಾಗಿದೆ. ೧-೧-೧೯೮೫ಕ್ಕೆ ಮುಂಚೆ ೨೯೪/-೦೦ ಅಥವಾ ೩೫೮/-೦೦ ರೂ. ಚಂದಾಹಣ ಕೊಟ್ಟಿರುವವರಾಗಲೀ ೧-೧-೧೯೮೫ ನಂತರ ೩೬೦/-೦೦ ಯಾ ೪೪೦/-೦೦ ರೂ.ಚಂದಾಹಣ ಕೊಟ್ಟಿರುವವರಾಗಲೀ ೨೪/-೦೦ ಯಾ ೨೮/-೦೦ ರೂ.ಗಳನ್ನು ಕಳುಹಿಸಬೇಕಾಗಿಲ್ಲ.

ಮಹಾಭಾರತವನ್ನು ತೆಗೆದುಕೊಳ್ಳಲು ಸಾಲದ ಯೋಜನೆಯನ್ನು ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕಿನವರು, ಸರ್.ಎಂ.ವಿಶ್ವೇಶ್ವರಯ್ಯ ಕೋ-ಆಪರೇಟಿವ್ ಬ್ಯಾಂಕಿನವರೂ ಮುಂದುವರಿಸಿದ್ದಾರೆಂದು ತಿಳಿಸಲು ಹರ್ಷಿಸುತ್ತೇವೆ. ಕೆನರಾ, ಸಿಂಡಿಕೇಟ್, ಕಾರ್ಪೋರೇಷನ್ ಮತ್ತು ಕರ್ನಾಟಕ ಬ್ಯಾಂಕುಗಳ ಕೇಂದ್ರ ಕಛೇರಿಗಳಿಗೂ ಸಾಲದ ಯೋಜನೆಯನ್ನು ಮುಂದುವರಿಸಲು ಪ್ರಾರ್ಥನಾಪತ್ರವನ್ನು ಕಳುಹಿಸಿಕೊಡಲಾಗಿದೆ. ಮುಂದಿನ ಕೆಲವು ದಿವಸಗಳಲ್ಲಿ ಅವರಿಂದಲೂ ಸದುತ್ತರವನ್ನು ನಿರೀಕ್ಷಿಸಿದ್ದೇವೆ.

ಈಗ ನಮ್ಮಲ್ಲಿ ಹದಿನೆಂಟು ಸಂಪುಟಗಳು ಮಾತ್ರವೇ ಇವೆ. ಮೂವತ್ತು ಸಂಪುಟಗಳಲ್ಲಿ ಹನ್ನೆರಡು ಸಂಪುಟಗಳನ್ನು ಪುನರ್ಮುದ್ರಿಸ

ಬೇಕಾಗಿದೆ. ಮೊದಲನೆಯ ಮೂರು ಸಂಪುಟಗಳೇ ಇಲ್ಲವಾಗಿವೆ. ಆದರೆ ಇದರಿಂದ ನೂತನ ಗ್ರಾಹಕರು ನಿರಾಶರಾಗಬೇಕಾಗಿಲ್ಲ. ಈಗ ಮೊದಲಿಗಿಂತಲೂ ಬೇಗ ಹಿಂದಿನ ಸಂಪುಟಗಳನ್ನು ಪುನರ್ಮುದ್ರಿಸುವ ವ್ಯವಸ್ಥೆಮಾಡಲಾಗಿದೆ. ಮೂವತ್ತನೆಯ ಸಂಪುಟವು ಹೊರಬಿದ್ದನಂತರ ಹದಿನಾಲ್ಕನೆಯ ಸಂಪುಟದ ಪುನರ್ಮುದ್ರಣವು ಮುಗಿದಿದೆ. ಹದಿನೈದನೆಯ ಸಂಪುಟದ ಮುದ್ರಣವೂ ಮುಗಿದಿದ್ದು ಬೈಂಡಿಂಗ್ ಆಗಬೇಕಾಗಿದೆ. ಮೂವತ್ತೆರಡನೆಯ ಸಂಪುಟವು ಮುಗಿದೊಡನೆಯೇ ಮೊದಲನೆಯ ಮೂರು ಸಂಪುಟಗಳನ್ನೂ ಸಾಧ್ಯವಾದಷ್ಟು ಬೇಗ ಪುನರ್ಮುದ್ರಣ ಮಾಡಿಕೊಡಲಾಗುವುದು.

ಹಿಂದಿನಂತೆಯೇ ಅನೇಕ ಅಭಿಮಾನಿಗಳು ಈ ಸಂಪುಟಕ್ಕಾಗಿ ಸಹಾಯದ್ರವ್ಯವನ್ನು ಕಳುಹಿಸಿಕೊಟ್ಟಿರುತ್ತಾರೆ. ಇವರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು.

೩೦ನೆಯ ಸಂಪುಟದ ಪ್ರಕಾಶನಸಮಾರಂಭವು ಜನವರಿ ೧೪, ಉತ್ತರಾಯಣಪುಣ್ಯಕಾಲದಂದು ನಡೆಯಿತು. ಅನಂತಕಿರಣನಾದ ಸೂರ್ಯಭಗವಂತನ ಆರಾಧನೆಯ ದಿವಸ. ಅಂದು ಭಾರತದರ್ಶನದ ೨೯ನೆಯ ಜನ್ಮದಿನೋತ್ಸವ. ಹಾಗೆಯೇ ಶ್ರೀಮನ್ಮಹಾಭಾರತದ ೩೦ನೇ ಸಂಪುಟದ ಪ್ರಕಾಶನಕಾರ್ಯವೂ ಸಹ ಬೆಂಗಳೂರು ಜಯನಗರದ ಶ್ರೀ ಚಾಮರಾಜು ಕಲ್ಯಾಣಮಂಟಪದಲ್ಲಿ ವ್ಯವಸ್ಥೆಗೊಂಡಿತ್ತು.

ವೇದಘೋಷದ ನಂತರ ಶ್ರೀಮತಿ ನಾಗವೇಣಿಯವರು ಸ್ವಾಗತಪದ್ಯಮಾಲಿಕೆಯನ್ನು ವಾಚಿಸಿದರು. ಸಂಪಾದಕಮಂಡಳಿಯ ಪರವಾಗಿ ವಿದ್ವಾನ್ ಹೆಚ್.ಎನ್.ರಂಗಸ್ವಾಮಿಯವರು 'ಭಾರತ ದರ್ಶನ'ವು ಈವರೆಗೆ ನಡೆದು ಬಂದ ದಾರಿಯನ್ನು ವಿವರಿಸಿ ಎಲ್ಲರನ್ನೂ ಸ್ವಾಗತಿಸಿದರು.

ರಾಮಚಂದ್ರಾಪುರಮಠದ ಪೂಜ್ಯ ಶ್ರೀ ಶ್ರೀ ರಾಘವೇಂದ್ರಭಾರತೀ ಸ್ವಾಮಿಗಳವರ ಸಾನ್ನಿಧ್ಯದಲ್ಲಿ ರಾಜ್ಯಸರ್ಕಾರದ ಕುಂದು-ಕೊರತೆಗಳ ಮಂತ್ರಿಗಳಾದ ಶ್ರೀಲಕ್ಷ್ಮೀಸಾಗರ್‌ರವರು ಭಾರತಸರಸ್ವತಿಗೆ ಪೂಜೆಗೈದು ಸಂಪುಟವನ್ನು ಪ್ರಕಾಶನಗೊಳಿಸಿದರು.

ಅನಂತರ ಪ್ರಕಾಶಿತಸಂಪುಟವನ್ನು ಪರಿಚಯಿಸಿದ ವೇ||ಬ್ರ||ಶ್ರೀ|| ಎಚ್. ಎಸ್. ವರದದೇಶಿಕಾಚಾರ್ಯರಂಗಪ್ರಿಯರವರು–'ಜ್ಞಾನದ ಉಪಾ

ಸನೆ ಹೇಗೆ-ಎಂಬ ಬಗ್ಗೆ ಮಾರ್ಗದರ್ಶನವನ್ನು ಮಹಾಭಾರತದಲ್ಲಿ ಕಾಣಬಹುದಾಗಿದೆ. ಪ್ರಸ್ತುತ ಸಂಪಟದಲ್ಲಿ ಅಂತಃಶತ್ರುಗಳಿಗೂ ಹಾಗೂ ಬಹಿಃಶತ್ರುಗಳಿಗೂ ಭೀಷಣನಾದ ಇಚ್ಛಾಮರಣಿಯಾದ ಭೀಷ್ಮನ ನಿರ್ಯಾಣವು ನಿರೂಪಿತವಾಗಿದೆ. ದಯಾಮಯನಾದ ಶ್ರೀಕೃಷ್ಣನು ಭಗವದ್ಗೀತೆಯ ಸಾರರೂಪವಾದ ಅನುಗೀತೆಯನ್ನು ಅರ್ಜುನನಿಗೆ ಉಪದೇಶಿಸಿರುವ ಭಾಗವೂ ಅಂತರ್ಗತವಾಗಿದೆ. ಮಹಾಭಾರತವು ಧರ್ಮ ಸಂಹಿತೆಯಾಗಿ, ಅರ್ಥಸಂಹಿತೆಯಾಗಿ, ಧರ್ಮಕ್ಕೆ ವಿರುದ್ಧವಲ್ಲದ ಕಾಮ ಸಂಹಿತೆಯಾಗಿ ಹಾಗು ಪುರುಷಾರ್ಥಗಳಲ್ಲಿ ಮೂರ್ಧನ್ಯವಾದ ಮೋಕ್ಷಸಂಹಿತೆ ಯಾಗಿಯೂ ಸಮಗ್ರಜನತೆಗೆ ಚಿರಕಾಲ ಮಾರ್ಗದರ್ಶನವನ್ನು ನೀಡುತ್ತಿದೆ. ಸ್ಮೃತಿರೂಪವಾಗಿ, ಪುರಾಣರೂಪವಾಗಿ, ಇತಿಹಾಸರೂಪವಾಗಿ, ಕಾವ್ಯರೂಪ ವಾಗಿ, ಕಾವ್ಯದಲ್ಲಿನ ಆನಂದರೂಪವಾಗಿ, ಸದಾಚಾರಸಂಹಿತೆಯಾಗಿ, ವಿಶ್ವಕೋಶರೂಪವಾಗಿಯೂ ಇರುವಂತಹ ಈ ಗ್ರಂಥರತ್ನವನ್ನು ಎಲ್ಲರೂ ಪಡೆದು, ಓದಿ ಧನ್ಯರಾಗಬೇಕು'–ಎಂದೂ ತಿಳಿಸಿದರು.

ಸಚಿವರಾದ ಶ್ರೀಲಕ್ಷ್ಮೀಸಾಗರ್ ಅವರು ಮಾತನಾಡುತ್ತಾ ಪ್ರಾಚೀನ ಕಾಲದ ಸಮಾಜವ್ಯವಸ್ಥೆ, ಜನರ ಆಶೋತ್ತರಗಳು, ಸಾಮಾಜಿಕ-ರಾಜಕೀಯ ಹಾಗೂ ಆಧ್ಯಾತ್ಮಿಕಮೌಲ್ಯಗಳನ್ನು ಅತ್ಯಂತ ಉತ್ತಮ ರೀತಿಯಿಂದ ಸಾರುವ ಶ್ರೀಮನ್ಮಹಾಭಾರತವು ಭಾರತದೇಶದ ಭವ್ಯಸಂಸ್ಕೃತಿಯ ಮಣಿದರ್ಪಣ ದಂತಿದೆ. ಡಿ॥ಡಿ.ವಿ.ಜಿ.ಯವರು ನುಡಿದಂತೆ–'ಈ ಗ್ರಂಥವು ಪ್ರಾಚೀನ ಭಾರತದ ಸಾಮಾಜಿಕ ಹಾಗೂ ಆರ್ಥಿಕಜೀವನದ ಇತಿಹಾಸವಾಗಿದೆ'– ಎಂದೂ ತಿಳಿಸಿದರು. ಸಂಸ್ಕೃತಭಾಷೆಯಲ್ಲಿ ಗಾಢವಾದ ಪರಿಶ್ರಮವನ್ನು ಪಡೆಯುತ್ತಿರುವ ಜನರ ಸಂಖ್ಯೆಯು ದಿನೇ ದಿನೇ ಕ್ಷೀಣಿಸುತ್ತಿರುವುದರ ಬಗೆಗೆ ಬಹಳ ಶೋಕವನ್ನು ವ್ಯಕ್ತಪಡಿಸಿದ ಅವರು ಭಾರತದರ್ಶನ ಸಂಸ್ಥೆಯು ಕನ್ನಡ ಜನತೆಗೆ ಮಾಡಿರುವ ಶಾಶ್ವತ ಉಪಕಾರದ ಬಗೆಗೆ ಪ್ರಶಂಸಿಸಿದರು. ರಾಜ್ಯಸರ್ಕಾರದ ಕಡೆಯಿಂದ ಆಗಬೇಕಾಗಿರುವ ಸಹಾಯ-ಸಹಕಾರಗಳನ್ನು ಕುಂದು-ಕೊರತೆಗಳ ಸಚಿವರಾದ ತಾವು ಆಗುಮಾಡಿಸಿಕೊಡುವುದಾಗಿಯೂ ಆಶ್ವಾಸನೆಯನ್ನಿತ್ತರು.

ಜಗದ್ಗುರು ಶ್ರೀ ಶ್ರೀ ಶಂಕರಾಚಾರ್ಯ ಶ್ರೀ ಶ್ರೀ ರಾಘವೇಂದ್ರ ಭಾರತೀ ಸ್ವಾಮಿಗಳವರು ಅನುಗ್ರಹಭಾಷಣವನ್ನು ಮಾಡುತ್ತಾ– 'ಇಡೀ

ದೇಶದಲ್ಲಿ ಜನಜಾಗರಣೆ ಈಗ ಅತ್ಯಂತ ಅಪೇಕ್ಷಿತ. ಇದಕ್ಕಾಗಿ ನಾವು ಕಿಂಚಿತ್ತಾದರೂ ತ್ಯಾಗಮಾಡಲೇಬೇಕಾಗಿದೆ. ಯಾವುದೇ ವ್ಯಕ್ತಿಯ ಮನಸ್ಸು ವಿಮನವಾದಾಗ ಸದ್ವಿಷಯದಲ್ಲಿ ಪ್ರಚೋದನೆಯಾಗಬೇಕು. ಪೂರ್ವ-ಪಶ್ಚಿಮ-ಉತ್ತರ-ದಕ್ಷಿಣಗಳಲ್ಲೂ ನಮ್ಮ ಭಾರತದೇಶವು ಮೊದಲಿಗಿಂತ ಚಿಕ್ಕದಾಗಿದೆ. ಇವುಗಳ ಹಿನ್ನೆಲೆಯಲ್ಲಿ ನಮ್ಮ ದೇಶ, ಧರ್ಮ ಹಾಗೂ ಸಂಸ್ಕೃತಿಗಳ ಪುನರುಜ್ಜೀವನಕ್ಕಾಗಿ ಮಹಾಭಾರತದ ಅಧ್ಯಯನವು ಅತ್ಯಂತ ಅಪೇಕ್ಷಿತ. ಮಹಾಭಾರತದ ಕಥೆಯು ಸುಳ್ಳಲ್ಲ. ಖಂಡಿತ ನಡೆದದ್ದು. ಆದ್ದರಿಂದಲೇ ಇತಿ+ಹ+ಆಸ=ಹಿಂದೆ ಹೀಗೆಯೇ ನಡೆದಿದ್ದಿತು ಎಂಬ ಅರ್ಥವನ್ನು ಕೊಡುವ 'ಇತಿಹಾಸ' ಪದದ ಬಳಕೆಯು ಬಂದಿದೆ'–ಎಂದು ಅನುಗ್ರಹಿಸಿದರು. ತಾವು ಈ ಹಿಂದೆ ೧೫ನೇ ಸಂಪುಟದ ಕಾರ್ಯಕ್ರಮಕ್ಕೆ ಬಂದಿದ್ದಾಗಿಯೂ ಈಗ ಮೂವತ್ತನೆಯ ಸಂಪುಟದ ಪ್ರಕಾಶನಕ್ಕೆ ಬಂದಿರುವುದು ತಮಗೆ ಆನಂದವನ್ನುಂಟುಮಾಡಿದೆಯೆಂದೂ ತಿಳಿಸಿದರು.

ಬಳಿಕ ಪೂಜ್ಯಸ್ವಾಮಿಗಳವರು ಸಂಪಾದಕಮಂಡಳಿಯ ಸದಸ್ಯರಿಗೆ ಸುವರ್ಣಮಂತ್ರಾಕ್ಷತೆಯನ್ನಿತ್ತು ವೇ||ಬ್ರ||ೀ ಟಿ.ಆರ್.ಸುಬ್ರಹ್ಮಣ್ಯಶಾಸ್ತ್ರೀ ಉರುಫ್ ಥಳಿ ಗುಂಡಪ್ಪಶಾಸ್ತ್ರಿಗಳು ವಿದ್ವಾಂಸರಿಗಾಗಿ ತಂದಿದ್ದ ಶಾಲುಗಳನ್ನು ಹೊದ್ದಿಸಿ ಆಶೀರ್ವದಿಸಿದರು. ಶ್ರೀ ಟಿ.ಎನ್. ಪ್ರಭಾಕರ್‌ರವರ ವಂದನಾರ್ಪಣೆಯನಂತರ ಸಾಮೂಹಿಕಶಾಂತಿಪಾಠದೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು.

ಸುಪ್ರಸಿದ್ಧ ಸಾಹಿತಿಗಳಾದ ಡಾ|| ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರು ಈ ಸಂಪುಟಕ್ಕೆ ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿರುತ್ತಾರೆ. ಇವರಿಗೆ ನಮ್ಮ ಹೃತ್ಪೂರ್ವಕವಂದನೆಗಳು.

ಪ್ರಕಾಶನಸಮಿತಿಯ ಅಧ್ಯಕ್ಷರಾದ ವಿದ್ವಾನ್ ಹೆಚ್.ಎಸ್.ವರದ ದೇಶಿಕಾಚಾರ್ಯರಂಗಪ್ರಿಯರ ನೇತೃತ್ವದಲ್ಲಿ ಸಂಪಾದಕಮಂಡಲಿಯ ವಿದ್ವಾಂಸರು ಯಥಾಪೂರ್ವ ಶ್ರಮವಹಿಸಿ ಗ್ರಂಥವನ್ನು ಸಂಪಾದಿಸಿ ಕೊಡುತ್ತಿದ್ದಾರೆ. ಈ ಮಹಾನುಭಾವರೆಲ್ಲರೂ ಹದಿಮೂರು ವರ್ಷಗಳ ಅವಿರತವಾದ ತಪಸ್ಸನ್ನೇ ಮಾಡಿರುತ್ತಾರೆಂದರೆ ಅತಿಶಯೋಕ್ತಿಯಲ್ಲ. ಯಾವ ವಿಧವಾದ ಪ್ರತಿಫಲಾಪೇಕ್ಷೆಯೂ ಇಲ್ಲದೇ ಹದಿಮೂರು ವರ್ಷಗಳು

ಅನವರತವಾಗಿ ಒಂದು ಕಾರ್ಯವನ್ನು ನಿರ್ವಹಿಸುವುದೆಂದರೆ ಈಗಿನ ಕಾಲದಲ್ಲಿ ಅಚ್ಚರಿಯ ಸಂಗತಿಯೇ ಸರಿ. ಆದರೂ ಮಹಾನುಭಾವನಾದ ಪರಮಕಾರುಣಿಕನಾದ ಪರಮಾತ್ಮನ ಇಚ್ಛೆಯಂತೆ ಇದು ನಡೆಯುತ್ತಿದೆ. ಅವರೆಲ್ಲರಿಗೂ ನಮ್ಮ ಹೃತ್ಪೂರ್ವಕವಂದನೆಗಳನ್ನು ಸಮರ್ಪಿಸುತ್ತೇವೆ.

ತೆರೆಯ ಮರೆಯಲ್ಲಿ ಅನೇಕರು ಮಹಾಭಾರತಪ್ರಚಾರಕ್ಕಾಗಿ ಬಹಳ ಶ್ರಮಿಸುತ್ತಿದ್ದಾರೆ. ಮಹಾಮಂಗಳಸಮಾರಂಭವನ್ನು ಯಶಸ್ವಿಗೊಳಿಸಲೂ ಬಹಳವಾಗಿ ಶ್ರಮಿಸುತ್ತಿದ್ದಾರೆ. ಪರಮಾತ್ಮನು ಸಕಲರಿಗೂ ಕಲ್ಯಾಣ ವನ್ನುಂಟುಮಾಡಲಿ.

–ಪ್ರಕಾಶಕರು

ಶಾಂತಿಃ ಪುಷ್ಟಿಸ್ತುಷ್ಟಿಶ್ಚಾಸ್ತು–ಸಮಸ್ತಸನ್ಮಙ್ಗಳಾನಿ ಭವನ್ತು

ಮುನ್ನುಡಿ

ಮಹಾಭಾರತದ ಮಹತ್ತ್ವ

ರಾಮಾಯಣ-ಮಹಾಭಾರತಗಳು ಭರತವರ್ಷದ ಆರ್ಷೇಯ-ಅಲೌಕಿಕ ಸಂಪತ್ತು. ಈ ಸಂಪತ್ತು, ರಾಜ್ಯ-ಚಕ್ರಾಧಿಪತ್ಯ-ಐಶ್ವರ್ಯಗಳಿಗಿಂತ ಹೆಚ್ಚು ಮತ್ತು ಶಾಶ್ವತವಾದುದು. ಏಕೆಂದರೆ: ಆ ಸಂಪತ್ತು ಕಾಲಗತಿಯಲ್ಲಿ ನಾಶವಾಗಲೂಬಹುದು ಮತ್ತು ಕಡಿಮೆಯಾಗಲೂಬಹುದು. ಆದರೆ ಮಹಾಕಾವ್ಯಗಳಿಂದ ಜನಜೀವನಕ್ಕೆ ಬರುವ ಬೆಲೆ ಅಮೂಲ್ಯವಾದುದು; ಅದರ ಪ್ರಭಾವ ದೀರ್ಘಕಾಲ ನಿಲ್ಲತಕ್ಕುದ್ದು ಮತ್ತು ಸ್ಫೂರ್ತಿದಾಯಕವೂ ಆದುದು. ಭರತವರ್ಷವೇ ಆಂಗ್ಲೇಯರಿಗೆ ನೂರಐವತ್ತು ವರ್ಷಗಳ ಕಾಲ ಅಧೀನರಾಜ್ಯವಾಗಿದ್ದರೂ ರಾಜಕೀಯಸ್ವಾತಂತ್ರ್ಯವನ್ನು ಕಳೆದುಕೊಂಡಿತೇ ಹೊರತು, ತನ್ನ ಸರ್ವಸ್ವವನ್ನೂ ಕಳೆದುಕೊಳ್ಳಲಿಲ್ಲ. ಪಶುಶಕ್ತಿ, ಆಯುಧಗಳಿಗಿಂತ ಮಿಗಿಲಾದ ಆತ್ಮಶಕ್ತಿಯ ತಾಯಿಬೇರಿನ ಆಶ್ರಯದಿಂದ ಭಾರತದೇಶ ಸಜೀವವಾಗಿತ್ತು.

ಮಹಾಭಾರತ ಮಹದ್ಗ್ರಂಥ

ಇದಕ್ಕೆ ಮುಖ್ಯಕಾರಣ ರಾಮಾಯಣ-ಮಹಾಭಾರತಗಳು. ಅವು ಕಥೆಗಳೇ (ಇತಿಹಾಸ-ಪುರಾಣ). ಅವು ಬೋಧಿಸುವುದು ಧರ್ಮದ ಮೇಲ್ಮೆಯನ್ನು. ಮಹಾಭಾರತ ಸಂಸ್ಕೃತಗ್ರಂಥಗಳಲ್ಲೆಲ್ಲ ದೊಡ್ಡದು. ಇದರಲ್ಲಿ ಸುಮಾರು ಒಂದು ಲಕ್ಷವನ್ನೂ ಮೀರಿ ಶ್ಲೋಕಗಳಿವೆ. ಇದು ಒಂದು ಬರಿಯ ದೊಡ್ಡ-ಭಾರವಾದ-ಗ್ರಂಥಮಾತ್ರವೇ ಅಲ್ಲ. ಮಹತ್ತಾದ ಗ್ರಂಥವೂ ಹೌದು. ಮಹಾಭಾರತಕಾರನು, ಭಾರತಚಕ್ರಾಧಿಪತ್ಯಕ್ಕಾಗಿ ಕೌರವ-ಪಾಂಡವರೊಳಗೆ ಸಂಭವಿಸಿದ ಯುದ್ಧಕಥೆಯನ್ನು ಹೇಳುತ್ತಿರುವನಾದರೂ ಅದರ ಜೊತೆಯಲ್ಲಿ ಅಸಂಖ್ಯಾತವಾದ ಉಪಕಥೆಗಳು, ನೀತಿಬೋಧಕ ಪ್ರಸಂಗಗಳು, ಧಾರ್ಮಿಕ-ಲೌಕಿಕ-ವೇದಾಂತವಿಷಯಗಳು-ಇವುಗಳನ್ನೆಲ್ಲ ಹೇಳಿದ್ದಾನೆ. ಭರತಖಂಡದಲ್ಲಿ ಅನೇಕ ಸಣ್ಣರಾಜ್ಯಗಳಿದ್ದು ಒಂದೊಂದು ರಾಜ್ಯವೂ ಸ್ವತಂತ್ರವಾಗಿ ರಾಜತಂತ್ರದಲ್ಲಿ ಸ್ಪರ್ಧಿಸುತ್ತಿದ್ದ ಕಾಲ ಅದು. ಭಾರತೀಯರ ಬುದ್ಧಿ, ಪ್ರಜ್ಞೆ, ಧೈರ್ಯ, ಸಾಹಸ—ಇವುಗಳ ಅತ್ಯುಚ್ಚ ಮತ್ತು ಅತಿ ಅಧಮತನದ ಉದಾಹರಣೆಗಳೆಲ್ಲಾ ಅಲ್ಲಿ ಚಿತ್ರಿತವಾಗಿವೆ. ಮನುಷ್ಯ

ಸ್ವಭಾವದಲ್ಲಿರುವ ಮೂಢನಂಬಿಕೆ, ಮೂಢತ್ವಪುರಸ್ಕಾರ, ಅದ್ಭುತದಲ್ಲಿ ಆಸಕ್ತಿ, ಪವಾಡ–ಇವುಗಳನ್ನು ಕವಿ ಉಪಯೋಗಿಸಿಕೊಂಡಿದ್ದಾನೆ. ಸ್ತ್ರೀ-ಪುರುಷ ನಾಯಕ-ನಾಯಕಿಯರು ಮತ್ತು ಜನತೆಯನ್ನು ವ್ಯಾಸರು ಇದ್ದುದು ಇದ್ದಂತೆ ಅಂಗೀಕರಿಸಿದರೂ, ಎಲ್ಲ ಪಾತ್ರಗಳಿಗೂ ಒಂದು ಉನ್ನತ ಧ್ಯೇಯ-ಆದರ್ಶಗಳನ್ನೂ ಧಾರ್ಮಿಕಪ್ರಚೋದನೆಯ ಒತ್ತಡವನ್ನೂ ಕೊಟ್ಟಿದ್ದಾರೆ. ಮನುಷ್ಯನ ಹೃದಯದಲ್ಲಿ ತುಮುಲಯುದ್ಧವನ್ನು ಹೂಡಿರುವ ಕಾಮ-ಕ್ರೋಧ-ಲೋಭ-ಮೋಹ-ಮದ-ಮಾತ್ಸರ್ಯ, ಇಂದ್ರಿಯಲಂಪಟತನ, ಹಠಮಾರಿತನ, ಬರ್ಬರ ಔದ್ಧತ್ಯ, ಕುಡಿತ, ಜೂಜಿನ ಪ್ರೇಮ–ಇವುಗಳನ್ನೆಲ್ಲ ಕವಿ ಪ್ರಾಮಾಣಿಕವಾಗಿ ಸತ್ಯವಾಗಿ ವರ್ಣಿಸಿದ್ದಾನೆ. ಆದರೂ ಈ ಧ್ಯೇಯಬಾಹಿರತೆ, ಕ್ರೌರ್ಯ, ಅಸತ್ಯ, ಸಮಯಸಾಧಕನೀತಿ ಇದ್ದರೂ ಸಹ, ಪಾತ್ರಗಳು ಬಾಳಿನ ಗುರಿಯತ್ತ ಧ್ಯೇಯದತ್ತ ತೊಳಲುವುದನ್ನು ಬಿಡಲಿಲ್ಲವೆಂದು ತೋರಿಸಿದ್ದಾನೆ. ಸೊಗಸಾದ ಆಕರ್ಷಣೀಯವಾದ ಕಥೆ, ಜೊತೆಗೆ ತಾತ್ತ್ವಿಕಸತ್ಯನಿರೂಪಣೆ–ಇವುಗಳಿಂದ ಮಹಾಭಾರತ ಎಂದೆಂದಿಗೂ ಮಾನವಜನಾಂಗಕ್ಕೆ ಧರ್ಮಸ್ಫೂರ್ತಿಯನ್ನೂ ಧರ್ಮಪಟುತೆಯನ್ನೂ ನೀಡುವ ಜ್ಞಾನಭಂಡಾರವಾಗಿದೆ.

ಆಧುನಿಕತೆಯ ಹುಚ್ಚಿನಲ್ಲಿ ಇಂದಿನ ವಿಜ್ಞಾನ ಔದ್ಯೋಗಿಕರಣದ ಕಣ್ಣುಕೋರೈಸುವ ಸುಖಲೋಲುಪತೆಯ ಅನ್ವೇಷಣೆಯಲ್ಲಿ–"ಹಳೆಯದೆಲ್ಲ ತ್ಯಾಜ್ಯ"–ಎನ್ನುವಷ್ಟರಿಂದಲೇ ನಮ್ಮ ಜವಾಬ್ದಾರಿ ಮುಗಿದುಹೋಗುವುದಿಲ್ಲ. ಹಳೆಯದರಲ್ಲಿ ಶ್ರೇಷ್ಠವಾದುದನ್ನು ಅಮರವಾದುದನ್ನು-ಚಿರಂಜೀವ-ಜೀವಚೈತನ್ಯವನ್ನು ನಾವು ಉಳಿಸಿಕೊಂಡು ಅದರ ಮೇಲೆಯೇ ಮುಂದಿನ ಬಾಳನ್ನು ಕಟ್ಟಬೇಕು. ಹಳೆಯದರ ತಿಳಿವು ಇಲ್ಲದಿದ್ದಲ್ಲಿ ಹೊಸಜ್ಞಾನ ಸಹ ಅಪೂರ್ಣವಾಗುತ್ತದೆ. ನಾವು ಎಷ್ಟೇ ಬೇಡವೆಂದರೂ, ಹಳೆಯ ಸಂಸ್ಕೃತಿಯಿಂದ ತಪ್ಪಿಸಿಕೊಳ್ಳಲಾರೆವು. ನಾವು ಎಷ್ಟರಮಟ್ಟಿಗೆ ಅದರ ಭಾಗ ಎಂಬುದನ್ನು ಅರಿಯಬೇಕು. ನಮ್ಮ ಜನಾಂಗ ಹಿಂದೆ ಬಾಳಿದ ಬಾಳನ್ನು ನೋಡಿ ಅದರ ಬೆಳಕಿನಲ್ಲಿ ನಮ್ಮ ಕಾಲಕ್ಕೆ ಮುಂದಲದನ್ನು ರೂಪಿಸಿಕೊಳ್ಳುವುದೇ ನಮ್ಮ ಪುನರುಜ್ಜೀವನ. ಹಿಂದಲದನ್ನೇ ನಾವು ಮತ್ತೆ ಬಾಳುವುದು ಒಂದು ಪುನರಾವರ್ತನೆ ಮಾತ್ರವಾಗುತ್ತದೆ. ನಾವು ನಮ್ಮ ಪೂರ್ವಿಕರ ಜೀವನದ ಸೃಜನಶಕ್ತಿ-ಸೃಷ್ಟಿಯ ಆತ್ಮಗಳನ್ನು ಕರಗತಮಾಡಿ

ಕೊಂಡು ಇಂದಿನ ಸಂಕೀರ್ಣಹೊಸದೃಷ್ಟಿಗೆ ಅವನ್ನು ಅಳವಡಿಸಿಕೊಳ್ಳಬೇಕು. ಆಗ ಅವುಗಳ ಪರಿಣಾಮ ಹಿಂದಲದಕ್ಕಿಂತ ಪೂರ್ಣವಾಗಿ ಹೊಸದೇ ಆದರೂ ಜೀವನಕ್ಕೆ ಚೈತನ್ಯವನ್ನು ಕೊಡುವುದಾಗುತ್ತದೆ.

ಶಾಶ್ವತ ಆದರ್ಶ

ಮಹಾಭಾರತ-ಅದರಲ್ಲಿರುವ ಪಾತ್ರಗಳ ಯೋಗ್ಯತೆಯಿಂದ ನಮಗೆ ಶಾಶ್ವತ ಆದರ್ಶವೇ ಆಗಿದೆ ಎನ್ನಬಹುದು. ಭರತವರ್ಷಕ್ಕಂತೂ ಈ ಆದರ್ಶ ಎಂದಿಗೂ ಹಳೆಯದೂ, ಅನವಶ್ಯಕವೂ, ಅಪ್ರಯೋಜಕವೂ ಆಗಲಾರದು. ಭೀಷ್ಮ, ದ್ರೌಪದೀ, ಕೃಷ್ಣ, ಯುಧಿಷ್ಠಿರ, ನಳ-ದಮಯಂತಿ, ಸಾವಿತ್ರಿ-ಸತ್ಯವಾನ, ಕರ್ಣ, ಗಾಂಧಾರೀ, ಕುಂತೀ–ಇವರೆಲ್ಲ ನೋವು-ಕಷ್ಟ-ದುಃಖದ ಮಾರ್ಗದಿಂದಲೇ ಪೂರ್ಣಗುರಿ ಸಾಧ್ಯ ಎಂಬುದಕ್ಕೆ ನಿದರ್ಶನರಾಗಿರುತ್ತಾರೆ. ಅಂದಿನ ಸಮಾಜದಲ್ಲಿದ್ದ ಡಂಬಾಚಾರ, ಪಿತೂರಿ, ಬರ್ಬರತನ, ಮೋಸ–ಇವುಗಳನ್ನೆಲ್ಲ ಕವಿ ವರ್ಣಿಸಿದರೂ ಧರ್ಮಸ್ಥಾಪನೆಯ ಗುರಿಯೇ ಕವಿಯ ಆದರ್ಶ. ಧರ್ಮವೆಲ್ಲಿದೆಯೋ ಅಲ್ಲಿಯೇ ಜಯ (**ಯತೋ ಧರ್ಮಸ್ತತೋ ಜಯಃ**) ರಾಜ್ಯದ ಆಳ್ವಿಕೆಯ ಹೊಣೆ ಹೊತ್ತರೂ ಸಹ ಧರ್ಮಿಷ್ಠರಾಗಿರಬೇಕೆಂಬುದೂ ಕವಿಯ ಆಶಯ. (**ಸ್ವಸ್ತಿ ಪ್ರಜಾಭ್ಯಃ ಪರಿಪಾಲಯನ್ತಾಂ ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ**)

ಮಹಾಭಾರತ ದುರಂತದ ಕಥೆಯೂ ಹೌದು. ಆದುದರಿಂದ ಅದನ್ನು ಓದುವವನಿಗೆ ಬರುವುದು ವೈರಾಗ್ಯ ಮತ್ತು ಶಾಂತಿ. ಒಬ್ಬ ಕವಿ ಮಹಾಭಾರತವನ್ನು ಕುರಿತು ಹೀಗೆ ಹೇಳುತ್ತಾನೆ: "ದುರ್ಯೋಧನನು ಚತುಸ್ಸಾಗರಪರ್ಯಂತವಾದ ಭೂಮಿಯನ್ನು ಆಳಿ, ತೊಡೆಮುರಿದು ಬಿದ್ದನು. ಹತ್ತಿರ ಒಬ್ಬರೂ ಇಲ್ಲದೆ, ಅವನು ಬದುಕಿದ್ದಾಗಲೇ ಅವನನ್ನು ತೋಳಗಳು ಹಿಡಿದು ತಿಂದವು. ವಿಶ್ವವನ್ನೇ ಗೆದ್ದ ಪರಾಕ್ರಮಿ ಅರ್ಜುನ, ದನಕಾಯುವವನಿಗೆ ಸೋತನು. ಯಾದವರು ಸ್ವಯೂಥಕಲಹದಿಂದಲೇ ನಾಶವಾದರು. ಇವೆಲ್ಲವನ್ನೂ ಚಿಂತಿಸಿ ಶಾಂತಿಯ ಕಡೆಗೆ ಮನಸ್ಸು ಕೊಡಿ. ಈ ಶಾಂತಿಯೂ ವೈರಾಗ್ಯವೂ ಲಭಿಸುವುದು ಧರ್ಮದಿಂದ. ಆದುದರಿಂದ ಜೀವಿಯು ಧರ್ಮಾಚರಣೆಯಲ್ಲಿ ತೊಡಗಬೇಕು."

ಧಾರ್ಮಿಕ ವಿಶ್ವಕೋಶ

ಧರ್ಮವೆಂದರೆ ಜಗತ್ತಿಗೆ ಆಧಾರವಾದುದು, ಎತ್ತಿ ನಿಲ್ಲಿಸುತ್ತಿರುವುದು ಎಂದು ಅರ್ಥ. ಪ್ರಪಂಚದ ಸುಖ-ಶಾಂತಿಗೆ ಅದೇ ಅವಲಂಬನೆ. ಭಾರತಕಾರನು ತನ್ನ ಎಲ್ಲ ಪಾತ್ರಗಳ ಮೂಲಕವೂ-ಶಾಂತಿಪರ್ವ ಮತ್ತು ಅನುಶಾಸನಿಕಪರ್ವಗಳಲ್ಲಿ ಹೆಚ್ಚಾಗಿಯೂ ಇದನ್ನೇ ಪ್ರತಿಪಾದಿಸಿದ್ದಾನೆ. ಧರ್ಮ, ಅರ್ಥ, ಕಾಮ, ಮೋಕ್ಷ—ಈ ನಾಲ್ಕು ಪುರುಷಾರ್ಥಗಳ ಪರಸ್ಪರ ಸಂಬಂಧವೂ, ಆ ಗುರಿಯನ್ನು ಮುಖ್ಯವಾಗಿ ಇಟ್ಟುಕೊಂಡು ಜೀವನವನ್ನು ನಡೆಸುವವರ ಸ್ವಭಾವಗಳೂ, ಕವಿಗೆ ಆಳವಾಗಿ ಪರಿಚಯವಾಗಿವೆ. ಅರ್ಥ-ಕಾಮಗಳನ್ನು ಅನುಸರಿಸುವವರೂ, ಧರ್ಮದ ಆಕರ್ಷಣೆಯಿಂದ ಬಿಡಲ್ಪಟ್ಟವರಲ್ಲ. ಧರ್ಮವೇ ಅಂತಿಮಗುರಿ ಎಂಬುದನ್ನು ಕವಿ ತೋರಿಸಿದ್ದಾನೆ. "ಚತುರ್ವಿಧಪುರುಷಾರ್ಥಗಳ ವಿಷಯದಲ್ಲಿ, ಇಲ್ಲಿರುವುದನ್ನು ನೀವು ಇತರ ಕವಿಗಳಲ್ಲಿಯೂ ಕಾಣಬಹುದು. ಆದರೆ ಇಲ್ಲಿ ಇಲ್ಲದುದು ನಿಮಗೆ ಬೇರೆಲ್ಲಿಯೂ ಸಿಗುವುದಿಲ್ಲ"—ಎನ್ನುತ್ತಾನೆ. ಇದು ಬರಿಯ ಬಡಾಯಿಯ ಮಾತಂತೂ ಅಲ್ಲ. ಅಧ್ಯಾತ್ಮಜ್ಞಾನವನ್ನು ಎರಕಹೊಯ್ದು ಇಟ್ಟಿರುವಂತಿರುವ ಅನೇಕಭಾಗಗಳು ಮಹಾಭಾರತದಲ್ಲಿವೆ. ಭಗವದ್ಗೀತೆಯೊಂದೇ ಸಾಕು. ಇದು ಮಾನವರಿಗೆ ಜೀವನಧರ್ಮಶಾಸ್ತ್ರದ ಕೈಪಿಡಿಯಾಗಿದೆ. ಜಗತ್ತಿನ ನಾನಾಭಾಗದ ಬಹುಮಂದಿ ಆಧ್ಯಾತ್ಮಸಾಧಕರು ಭಗವದ್ಗೀತೆಯಿಂದ ಸಿದ್ಧಿಯ ಶಿಖರವನ್ನು ಏರಿದ್ದಾರೆ. ಯಕ್ಷಪ್ರಶ್ನೆ, ವಿದುರನೀತಿ ಮುಂತಾದುವು ನೀತಿಮಾರ್ಗದರ್ಶನ ಸಾಧನಗಳು. ಮಹಾಭಾರತದ ಅಂತರ್ಗತ ಸನತ್ಸುಜಾತೀಯ ಒಂದು ಅದ್ಭುತಕಾವ್ಯವೂ ಹೌದು; ಧಾರ್ಮಿಕಪ್ರವಚನವೂ ಹೌದು. ಶಾಂತಿ ಮತ್ತು ಅನುಶಾಸನಪರ್ವಗಳಲ್ಲಿ ಭೀಷ್ಮಾಚಾರ್ಯರು ರಾಜನೀತಿ, ಸಾಮಾಜಿಕನಿಷ್ಠೆ, ವ್ಯಕ್ತಿಯ ಹೊಣೆಗಾರಿಕೆ, ಆಳ್ವಿಕೆಗಾರರು ಮತ್ತು ಸರ್ಕಾರಗಳ ಸ್ಥಾನ—ಇವನ್ನೆಲ್ಲ ಕೂಲಂಕಷವಾಗಿ ಉದಾಹರಣೆ-ಕಥೆ-ದೃಷ್ಟಾಂತಗಳೊಂದಿಗೆ ನಿರೂಪಿಸಿದ್ದಾರೆ. ಮಹಾಭಾರತ ಧಾರ್ಮಿಕವಿಶ್ವಕೋಶ.

ಮಹಾಭಾರತದ ಪ್ರಮುಖನಾಯಕ ಯುಧಿಷ್ಠಿರ; ಎಂದಿಗೂ ಧರ್ಮವನ್ನೇ ಆಚರಿಸಲು ಯತ್ನಿಸುತ್ತಿರುವ ಸಾಧಕ. ಆದರೆ ಆತನೊಬ್ಬನೇ ಅಲ್ಲ; ಕಾವ್ಯದ ಎಲ್ಲ ಪಾತ್ರಗಳೂ-ಸತ್ತ್ವರಜಸ್ತಮೋಗುಣಿಗಳಾಗಿದ್ದರೂ-ಧರ್ಮಕ್ಕೆ ಅತಿ ಹೆಚ್ಚಾದ ಮೌಲ್ಯವನ್ನು ತೆತ್ತು ಅದನ್ನೇ ಆಚರಿಸಲು ಪ್ರಯತ್ನಿಸುತ್ತಾರೆ.

ಕಾವ್ಯದ ಉದ್ದಕ್ಕೂ ಸತತವಾಗಿ ಹರಿಯುತ್ತಿರುವುದು ಧರ್ಮಶ್ರದ್ಧೆಯ ಒಂದೇ ಪ್ರವಾಹ.

ಧರ್ಮಕ್ಕೇ ಜಯ

ಮಹಾಭಾರತದಲ್ಲಿ ಕೃಷ್ಣ ಮತ್ತು ಧರ್ಮ ಎರಡೂ ಒಂದೇ. ಕುಂತಿಯು ಯುಧಿಷ್ಠಿರನಿಗೆ–"ನಿನ್ನ ಮನಸ್ಸು ಸದಾ ಧರ್ಮದಲ್ಲಿ ನೆಲಸಿರಲಿ"–ಎಂದು ಹೇಳುತ್ತಾಳೆ. ದುರ್ಯೋಧನನ ತಾಯಿ ಗಾಂಧಾರಿಗೆ ಸಹ ಧರ್ಮದ ಮಹತ್ತ್ವ ಚೆನ್ನಾಗಿ ಗೊತ್ತಾಗಿದ್ದಿತು. ಅವಳು ದುರ್ಯೋಧನನಿಗೆ–"ಧರ್ಮ ಯಾರಲ್ಲಿದೆಯೋ ಅವರಿಗೇ ಜಯ"–ಎಂದು ಹೇಳುತ್ತಾಳೆ. ಕರ್ಣನೂ ಸಹ ಯುಧಿಷ್ಠಿರನೊಂದಿಗೆ ಯುದ್ಧಮಾಡುತ್ತಿದ್ದರೂ–"ಧರ್ಮಿಷ್ಠನಾದ ಯುಧಿಷ್ಠಿರನ ಭುಜಾಲಿಂಗನ, ಪವಿತ್ರಸಂಗ ನನಗೆ ಒಂದು ಸಲವಾದರೂ ಉಂಟಾದರೆ ನಾನು ಪುನೀತನಾಗುತ್ತೇನೆ"–ಎಂದು ಹೇಳುತ್ತಾನೆ. "ನಾವು ಧರ್ಮವನ್ನು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ, ಉಳಿಸುತ್ತದೆ. ಅದಕ್ಕೆ ಅಪಚಾರ ಮಾಡಿದರೆ ಅದು ನಮ್ಮನ್ನು ನಾಶಮಾಡುತ್ತದೆ"–ಎಂದು ವ್ಯಾಸರು ಹೇಳುತ್ತಾರೆ. ಮಹಾಭಾರತದಲ್ಲಿ ಧರ್ಮ ಮತ್ತು ನೀತಿಪ್ರವಾಹ ಅವಿಭಾಜ್ಯವಾಗಿ ಹರಿಯುತ್ತದೆ. ನೀತಿವಂತರಾಗದಿದ್ದರೆ ಧರ್ಮಿಷ್ಠರಾಗುವುದು ಸಾಧ್ಯವಿಲ್ಲ. ಆದರೆ ಬರೀ ನೀತಿ ಸಾಲದು; ಧಾರ್ಮಿಕಭಾವನೆಯ ಅಂತಃಸ್ಫೂರ್ತಿ ಬೇಕು. ವ್ಯಾಸರು ಧರ್ಮ ಮತ್ತು ನೀತಿಗಳನ್ನು ನೇರವಾಗಿ ಬೋಧಿಸುವುದಿಲ್ಲ. ಧರ್ಮಾಚರಣೆಯಿಂದ ಎಲ್ಲ ಪುರುಷಾರ್ಥಗಳೂ ದೊರಕುವುದೆಂಬುದನ್ನು ಪಾತ್ರಗಳ ಪ್ರಭಾವ-ಆಚರಣೆಯಿಂದ ತೋರಿಸಿದ್ದಾರೆ. "ಆದರೂ ಜನತೆ ಧರ್ಮವನ್ನು ಆಚರಿಸುವುದಿಲ್ಲವಲ್ಲ?"–ಎಂದು ಕೊರಗುತ್ತಾರೆ. "ನಾನು ಕೈ ಎತ್ತಿ ಸಾರಿ ಹೇಳುತ್ತೇನೆ. ಧರ್ಮದಿಂದಲೇ ವೈಭವ, ಇಷ್ಟಾರ್ಥಸಿದ್ಧಿ ಎಲ್ಲ ದೊರಕುತ್ತದೆ. ಹೀಗಿದ್ದರೂ ಮನುಷ್ಯರು ಯಾಕೆ ಧರ್ಮವನ್ನು ಮೀರುತ್ತೀರಿ? ಯಾವುದೋ ಸುಖದ ಬಯಕೆಗಾಗಿ ಯಾವುದೋ ನಷ್ಟದ ಭಯಕ್ಕಾಗಿ ಅಥವಾ ಮೋಹದಿಂದ ಧರ್ಮವನ್ನು ಬಿಡಬೇಡಿ"–ಎನ್ನುತ್ತಾರೆ. ಕೊನೆಗೆ ಧೃತರಾಷ್ಟ್ರನು ಸಹ–"ದೈವದ ಇಚ್ಛೆಯನ್ನು ಮನುಷ್ಯಪ್ರಯತ್ನದಿಂದ ಬದಲಾಯಿಸುವುದು ಸಾಧ್ಯವಿಲ್ಲ"–ಎನ್ನುತ್ತಾನೆ. ಮತ್ತೊಂದೆಡೆ ವ್ಯಾಸರು–"ಧರ್ಮವನ್ನು ಎಂದೂ ಬಿಡಬಾರದು. ಯಾಕೆಂದರೆ: ಧರ್ಮವೇ ಅಮರ, ಅದೇ ಶಾಶ್ವತ. ಧರ್ಮಾಚರಣೆಯಲ್ಲಿ ಒದಗುವ ಕಷ್ಟ ಕ್ಷಣಿಕ"–ಎನ್ನುತ್ತಾರೆ. ಧರ್ಮವನ್ನು ಬಿಟ್ಟವನು ಎಷ್ಟೇ ದೊಡ್ಡವನಾದರೂ, ಅದಕ್ಕಾಗಿ ದಂಡವನ್ನು

ತೆರಲೇಬೇಕಾಗುತ್ತದೆ. ಶಾಪಾದಪಿ-ಶರಾದಪಿಯಾದ ದ್ವಿಜನೂ ಸರ್ವವನ್ನೂ ತಿಳಿದವನೂ ಆದ ಚಾಪಾಚಾರ್ಯ ದ್ರೋಣ, ಅಭಿಮನ್ಯುವನ್ನು ಅಧರ್ಮದಿಂದ ಕೊಲ್ಲಲು ಪ್ರೇರಿಸಿದುದರಿಂದ ಧರ್ಮರಾಜನು–"ಅಶ್ವತ್ಥಾಮ ಸತ್ತ"–ಎಂಬ ಸುಳ್ಳು ಹೇಳಬೇಕಾಯಿತು. ಆ ಸುಳ್ಳನ್ನು ಹೇಳಿದ ಕೂಡಲೇ ಧರ್ಮರಾಜನ ಧರ್ಮಶಕ್ತಿ ಕಡಿಮೆಯಾಗಿ, ಭೂಮಿಯಿಂದ ಮೇಲೆ ನಿರಾಧಾರದಲ್ಲಿ ಇದ್ದ ಅವನ ರಥ ನೆಲದ ಮೇಲೆ ಕುಸಿಯಿತು.

ಯಸ್ಯ ಪೂರ್ವಂ ರಥಃ ಪೃಥ್ವ್ಯಾಶ್ಚತುರಂಗುಲಮುಚ್ಛ್ರಿತಃ।
ಬಭೂವೈವಂ ಚ ತೇನೋಕ್ತೇ ತಸ್ಯ ವಾಹಾಃ ಸ್ಪೃಶನ್ ಮಹೀಮ್ ॥

ಭೀಷ್ಮನಂತಹ ಆದರ್ಶವ್ಯಕ್ತಿ, ಜಗತ್ತಿನ ಯಾವ ರಾಷ್ಟ್ರದಲ್ಲಿಯೂ ಅಪೂರ್ವವೇ. ಅಂಥವರು ಮಾನವಕುಲವನ್ನೇ ಉದ್ಧಾರಮಾಡುವರು. ತಂದೆಗೆ ಬೇಕಾದ ಹೆಣ್ಣನ್ನು ಕೊಡುವ ವಿಷಯದಲ್ಲಿ ಹೆಣ್ಣಿನ ತಂದೆಗೆ–ತನ್ನ ಮಗಳ ಮಗ ರಾಜನಾಗುವನೇ? ಎಂದು ಸಂಶಯ ಬಂದಾಗ ಭೀಷ್ಮನು–"ನಿನ್ನ ಮಗಳಲ್ಲಿ ಹುಟ್ಟುವ ಮಗನು ರಾಜನಾಗುತ್ತಾನೆ" ಎಂದು ಪ್ರತಿಜ್ಞೆಮಾಡಿದನು. ಆದರೂ ಹೆಣ್ಣಿನ ತಂದೆ–"ನಿನಗೆ ರಾಜ್ಯ ಬೇಡವಾಗಬಹುದು. ಆದರೆ ನಿನ್ನ ಮಕ್ಕಳ ವಿಷಯವೋ? ಅವರು ನನ್ನ ಮಗಳ ಮಗನನ್ನು ಹೊಡೆದಟ್ಟಿ ರಾಜರಾಗಬಹುದು. ಆ ವಿಷಯದಲ್ಲಿಯೂ ನೀನು ಪ್ರತಿಜ್ಞೆಮಾಡಬೇಕಾಗಿದೆ"–ಎಂದನು. ಭೀಷ್ಮನು ಹೇಳಿದನು: "ದಾಶರಾಜಾ! ಕೇಳು. ನಾನು ಮೊದಲು ರಾಜ್ಯತ್ಯಾಗ ಮಾಡಿದೆ. ಇನ್ನು ಬ್ರಹ್ಮಚಾರಿಯಾಗಿ ಇರುವುದಾಗಿ ಪ್ರತಿಜ್ಞೆ ಮಾಡುತ್ತೇನೆ"–ಎಂದು ಕಠೋರವ್ರತವನ್ನು ತೊಟ್ಟನು. ಅನಂತರ ಕಾಲಾನುಕಾಲಕ್ಕೆ ಭೀಷ್ಮನ ಮಲತಾಯಿಯ ಮಕ್ಕಳಿಬ್ಬರೂ ನಾಶವಾಗಿ ಕೊನೆಗೆ ತಮ್ಮನ ಧರ್ಮಪತ್ನಿಯರಲ್ಲಿ ಮಕ್ಕಳನ್ನು ಪಡೆದು ರಾಜ್ಯವನ್ನು ಅನುಭವಿಸುತ್ತ ಸಂತಾನವನ್ನು ಮುಂದುವರಿಸಬೇಕೆಂದು ತಾಯಿ ಹೇಳಿದಾಗ ಭೀಷ್ಮನು ಹೀಗೆ ಉತ್ತರ ಕೊಟ್ಟನು: "ತಾಯೇ! ಹಿಂದೆ ನಿನಗಾಗಿ ಒಂದು ವ್ರತವನ್ನು ತೊಟ್ಟೆನು. ಅದನ್ನೇ ಇಂದೂ ನಡೆಸುತ್ತೇನೆ. ತಾನು ಮೂರು ಲೋಕದ ರಾಜ್ಯವನ್ನೂ ಬಿಡುವೆನು. ಆದರೆ ಸತ್ಯವನ್ನು ಮಾತ್ರ ಬಿಡಲಾರೆನು. ಪೃಥ್ವಿಯು ಗಂಧವನ್ನು ಬಿಡಲಿ, ಜ್ಯೋತಿಯು ರೂಪಹೀನವಾಗಲಿ, ವಾಯುವು ಸ್ಪರ್ಶವನ್ನು ತೊರೆಯಲಿ, ಸೂರ್ಯನು ಪ್ರಕಾಶವನ್ನು ನೀಗಿಕೊಳ್ಳಲಿ, ಧೂಮಕೇತುವು

ತಣ್ಣಗಾಗಲಿ-ನಾನು ಮಾತ್ರ ಸತ್ಯವನ್ನು ಎಂದೂ ಬಿಡೆನು.” ಹೀಗೆ ಭೀಷ್ಮನ ಹೃದಯವನ್ನು ತಿಳಿದು ಸತ್ಯವತಿ ತನ್ನ ಇನ್ನೊಬ್ಬ ಮಗನಾದ ವ್ಯಾಸನನ್ನು ಕರೆದು ವಿಚಿತ್ರವೀರ್ಯನ ಸಂತಾನವನ್ನು ಮುಂದುವರಿಸುವ ಯೋಚನೆ ಮಾಡಿದಳು.

ಮಹಾಭಾರತದ ಎರಡನೆಯ ಮುಖ್ಯಪಾತ್ರ ಶ್ರೀಕೃಷ್ಣ. ಶ್ರೀಕೃಷ್ಣನು ದೇವರೆಂಬ ಮಾತು ಇರಲಿ. ಅವನು ವಿವೇಕಿ, ಪರಾಕ್ರಮಿ, ರಾಜರೆಲ್ಲರ ಮರ್ಯಾದೆಗೆ ಪಾತ್ರನಾಗಿದ್ದವನು. ನಿಜವಾಗಿ ಪಾಂಡವರ ಮಿತ್ರ. ಯೋಗ್ಯರು ಬಾಳದಂತೆ ಮಾಡುತ್ತಿದ್ದ ದುಷ್ಟರ ಧ್ವಂಸಕ. “ದೇವರೇ ಭೂಮಿಯಲ್ಲಿ ಅವತರಿಸಿದರೂ ಕೃಷ್ಣ ನಡೆದುದಕ್ಕಿಂತ ಬೇರೆ ರೀತಿಯಲ್ಲಿ ನಡೆಯಲಾರ”–ಎನ್ನುವಂತೆ ಬಾಳಿದ. ಅವನು ಭೂಮಿಯಲ್ಲಿ ಇರುವವರೆಗೆ ಒಂದು ಕಟ್ಟುಪಾಡು, ಶಾಂತಿ ಮುಂತಾದುವು ಜಗತ್ತಿನಲ್ಲಿ ಸಾಧ್ಯವಾಗಿದ್ದುವು. ಪಾಂಡವರು ಇನ್ನೂ ರಾಜ್ಯವಾಳುತ್ತಿರುವಾಗಲೇ ಒಂದು ದಿನ ಶ್ರೀಕೃಷ್ಣ ದಿವಂಗತನಾದನೆಂಬ ಸುದ್ದಿ ಯುಧಿಷ್ಠಿರನಿಗೆ ತಿಳಿಯಿತು. ಪಾಂಡವರಿಗೆ–ತಮ್ಮ ನೆಂಟ, ಒಬ್ಬನೇ ಮಿತ್ರ, ಲೋಕದ ಒಬ್ಬನೇ ಒಬ್ಬ ಸತ್ಪುರುಷ ನಾಶವಾದುದ ರಿಂದ–“ಇನ್ನು ಇಲ್ಲಿ ಬಾಳುವುದು ಸಾಕು”–ಎನಿಸಿತು. ಅನಂತರ ಪಾಂಡವರೂ ಭೂಮಿಯನ್ನು ಬಿಟ್ಟು ಹೋಗುವ ಯೋಚನೆ ಮಾಡಿದರು.

ಇನ್ನು ದ್ರೌಪದಿ. ದ್ರೌಪದಿಯು ಮಹಾಭಾರತದ ಅತ್ಯುಚ್ಚಸ್ತ್ರೀ. ಅವಳು ಪ್ರಾರಂಭದಿಂದಲೂ ಅತಿಕಷ್ಟವನ್ನು ಅನುಭವಿಸಿದುದರಿಂದ ಒಂದೊಂದು ವೇಳೆ ತುಂಬ ನಿಷ್ಠುರಳೂ ಆಗುತ್ತಿದ್ದುದುಂಟು. ಆದರೆ ಆಕೆಯ ಸಹನೆ ಅನ್ಯಾದೃಶವಾದುದು. ಒಬ್ಬನನ್ನು ವರಿಸಿ ಅನಂತರ ಕುಂತಿ ಹೇಳಿದಳೆಂದೂ, ಐದು ಜನರಿಗೂ ಅದು ಪ್ರಿಯವಾಯಿತೆಂದೂ ಐವರು ಪತಿಯರೊಡನೆ ಬಾಳಿದವಳು ಆಕೆ. ರಾಜಸೂಯಯಾಗವನ್ನು ಮಾಡಿದವನ ಪಟ್ಟಮಹಿಷಿ ಯಾದರೂ, ದುರ್ಯೋಧನನ ರಾಜಸಭೆಯಲ್ಲಿ ಅವಮಾನಿತಳಾದಳು. ಗಂಡಂದಿರು ಸತ್ಯದ ಮಾತನ್ನಾಡುತ್ತ ರಾಜ್ಯವನ್ನು ಶತ್ರುಗಳಿಗೆ ಒಪ್ಪಿಸಿ ಕಾಡಿನಲ್ಲಿ ಅಲೆದಾಡಿದಾಗ ಅವರನ್ನು ನೋಡಿ ಕನಿಕರಿಸಿ ಯುಧಿಷ್ಠಿರನೊಡನೆ ಕಠಿಣವಾಕ್ಯಗಳನ್ನು ಆಡಿದುದುಂಟು. ಆದರೆ ಯುಧಿಷ್ಠಿರನು ಧರ್ಮವನ್ನು

ಆಚರಿಸಬಾರದೆಂಬುದು ಆಕೆಯ ಮತವಲ್ಲ. ಯುಧಿಷ್ಠಿರನ ಧರ್ಮ, ಅವನನ್ನು ಕಾಡಿನಲ್ಲಿ ಕಂದ-ಮೂಲಗಳನ್ನು ತಿನ್ನುವ ಭಿಕಾರಿಯನ್ನಾಗಿ ಮಾಡಿತಲ್ಲ! "ಶತ್ರುಗಳನ್ನು ದಮನಮಾಡಿ ಸತ್ಪುರುಷರಿಗೆ ದಾನಧರ್ಮಮಾಡಿ ವಿದ್ಯೆಗಳಿಗೆ ಆಶ್ರಯನಾಗಿ ಬಾಳುವುದಲ್ಲವೇ ನಿಜವಾದ ಪ್ರೀತಿ, ಧರ್ಮ?"–ಎಂದು ಆಕೆ ಒಂದು ಸಲ ಯುಧಿಷ್ಠಿರನಿಗೆ ಹೇಳಿದ್ದಳು.

ದ್ರೌಪದಿಯ ವಿಶೇಷಗುಣ-ಅವಳ ಕಾರ್ಯದಕ್ಷತೆ ಮತ್ತು ಪಾತಿವ್ರತ್ಯ. ಅವಳು ಎಲ್ಲ ಗಂಡಂದಿರಿಗೂ ಯಾವಾಗಲೂ ಪ್ರಿಯಳಾಗಿಯೇ ನಡೆದುಕೊಂಡಳು. ಗಂಡಂದಿರೆಲ್ಲ ಅವಳ ಅಧೀನದಲ್ಲಿ ನಡೆಯುತ್ತಾರೆಯೋ ಎಂಬಂತೆ ತೋರುತ್ತಿತ್ತು. ಅವಳು ಎಲ್ಲ ಪತಿಗಳಿಗೂ ಅನುಕೂಲೆಯಾಗಿದ್ದಳು. ಒಂದು ಸಲ ಸತ್ಯಭಾಮೆ ದ್ರೌಪದಿಯನ್ನು –"ನಿನ್ನ ಗಂಡಂದಿರನ್ನು ನೀನು ಹೇಗೆ ಸ್ವಾಧೀನದಲ್ಲಿ ಇಟ್ಟುಕೊಂಡಿರುವೆ?'–ಎಂದು ಕೇಳಿದಳು. ಅವಳಿಗೆ ಯಾವಾಗಲೂ–"ಶ್ರೀಕೃಷ್ಣ ತನ್ನ ಸ್ವಾಧೀನದಲ್ಲಿ ಇಲ್ಲ"-ಎಂಬ ಭ್ರಮೆ. ದ್ರೌಪದಿಯು–"ತನ್ನ ಗಂಡಂದಿರನ್ನು ಸ್ವಾಧೀನದಲ್ಲಿ ಇಟ್ಟುಕೊಳ್ಳುವುದು ಔಷಧಮಂತ್ರಗಳಿಂದ ಅಲ್ಲ. ಗಂಡನನ್ನು ಒಲಿಸಿಕೊಳ್ಳಬೇಕಾದರೆ ಬರಿಯ ಅವನೊಬ್ಬನಿಗೆ ಉಪಚಾರಮಾಡಿದರೆ ಸಾಲದು. ಗಂಡನ ಹಿರಿಯರನ್ನು ಆದರಿಸಬೇಕು. ಗೌರವಿಸಬೇಕು. ಕುಂತಿಯ ವಿಷಯದಲ್ಲಿ ನಾನು ಹೀಗೆ ಮಾಡುತ್ತಿದ್ದೇನೆ. ನಾನು ಆಕೆಗೆ ಎಂದೂ ಪ್ರತಿ ನುಡಿದವಳಲ್ಲ. ಆಕೆಯನ್ನು ಯಾವಾಗಲೂ ಗೌರವಿಸಿದ್ದೇನೆ. ನಾನು ದಿನಾ ಅವಳನ್ನು ಉಪಚರಿಸಿ ಆಕೆಯ ಸ್ನಾನಭೋಜನ-ಆಚ್ಛಾದನಾದಿಗಳನ್ನು ಗಮನಿಸುತ್ತೇನೆ. ಅವಳಿಗೆ ಇಲ್ಲದ ಊಟ-ನಿದ್ರೆಗಳನ್ನು ನಾನು ಅನುಭವಿಸುವುದಿಲ್ಲ. ಆಕೆ ನನಗೆ ಪೃಥ್ವಿಗೆ ಸಮಾನಳು.

ನನ್ನ ಗಂಡಂದಿರನ್ನು ನಾನು ಅಹಂಕಾರವನ್ನು ಬಿಟ್ಟು ಕಾಮ-ಕ್ರೋಧ ಗಳಿಲ್ಲದೆ ಅವರ ಇತರ ಹೆಂಡಿರೊಂದಿಗೆ ಪ್ರಯತ್ನಪೂರ್ವಕವಾಗಿ ಉಪಚರಿ ಸಿದ್ದೇನೆ. ಸ್ತ್ರೀಯು ಪತಿಗೆ ಅಹಿತವಾದ ಕಾರ್ಯವನ್ನು ಮಾಡದಿರಬೇಕು. ಪತಿಯ ಸೇವೆಯಲ್ಲಿ ಸಲಿಗೆಯನ್ನು ವಹಿಸಬಾರದು. ಇದು ಹಿರಿದು, ಇದು ಕಿರಿದು ಎನ್ನದಂತೆ ಅವರ ಸೇವೆಮಾಡಿ ಅವರ ಮನಸ್ಸನ್ನು ಅನುಸರಿಸಿದ್ದೇನೆ. ದೇವ-ಮನುಷ್ಯರು, ಗಂಧರ್ವರು, ತರುಣರು, ಅಲಂಕೃತರು, ಶ್ರೀಮಂತರು,

ರೂಪವಂತರು ಯಾರೂ ಇವರಲ್ಲದೇ ನನ್ನ ಪಾಲಿಗೆ ಗಂಡಸರಲ್ಲ. ಇವರು ಊಟಮಾಡದಿದ್ದರೆ ಕುಳ್ಳಿರದಿದ್ದರೆ ನಾನು ಊಟಮಾಡುವುದಿಲ್ಲ. ಸ್ನಾನ ಮಾಡುವುದಿಲ್ಲ. ಕುಳ್ಳಿರುವುದಿಲ್ಲ. ಗಂಡಂದಿರು ಎಲ್ಲಿಗಾದರೂ ಹೋಗಿದ್ದವರು ಹಿಂದಕ್ಕೆ ಬಂದಾಗ ಎದ್ದು ಹೋಗಿ ಅವರನ್ನು ಎದುರುಗೊಂಡು ಉಪಚರಿಸುತ್ತೇನೆ. ಪಾತ್ರೆ-ಪದಾರ್ಥಗಳನ್ನು ಶುಭ್ರವಾಗಿಟ್ಟು ಹೊತ್ತಿಗೆ ಸರಿಯಾಗಿ ರುಚಿಯಾದ ಆಹಾರವನ್ನೇ ನೀಡಿದ್ದೇನೆ. ಮನೆಯಲ್ಲಿ ಎಲ್ಲವನ್ನೂ ಜೋಪಾನವಾಗಿಟ್ಟು ಮನೆಯನ್ನು ಚೊಕ್ಕಟವಾಗಿಟ್ಟಿದ್ದೇನೆ. ನಾನು ಸದಾ ಗಂಡಂದಿರ ಸೇವೆಯಲ್ಲಿ ನಿರತಳಾಗಿದ್ದೇನೆ. ಅವರು ಊರಲ್ಲಿಲ್ಲದ ಕಾಲದಲ್ಲಿ ಅಲಂಕಾರ, ಹೂವು, ಒಳ್ಳೆಯ ವಸ್ತುಗಳನ್ನು ತ್ಯಜಿಸಿದ್ದೇನೆ. ನನ್ನ ಪತಿಗಳು ಒಲ್ಲದ ಊಟ-ಪಾನಗಳನ್ನು ನಾನು ಸ್ವೀಕರಿಸೆ. ನನ್ನ ಪತಿಗಳು ಮೃದುಸ್ವಭಾವದವರು. ಸತ್ಯಶೀಲರು. ಸತ್ಯಧರ್ಮನಿರತರು. ಆದರೂ ಕ್ರೂರಿಗಳೂ ಕೋಪಿಷ್ಠರೂ ಆಗಿದ್ದರೆ ಹೇಗೋ ಹಾಗೆ ನಾನು ಅವರನ್ನು ಉಪಚರಿಸಿದ್ದೇನೆ. ಸ್ತ್ರೀಯರಿಗೆ ಪತಿಯ ಆಶ್ರಯವೇ ಧರ್ಮ. ಗಂಡನೇ ದೇವರು, ಗಂಡನೇ ಗತಿ. ಗಂಡನ ವಿಷಯದಲ್ಲಿ ಯಾವ ಹೆಂಗಸು ತಾನೇ ಅಪ್ರಿಯವನ್ನು ಮಾಡಿಯಾಳು?"–ಎಂದಳು.

ದ್ರೌಪದಿ ಚಕ್ರವರ್ತಿನಿಯಾದರೂ ಪತಿಗಳ ಸೇವೆಯನ್ನು ತಾನೇ ಸ್ವತಃ ತನ್ನ ಕೈಯಿಂದ ಮಾಡಿದಳು. ಎಲ್ಲ ವಿಷಯಗಳಲ್ಲಿಯೂ ಎಚ್ಚರಿಕೆಯಿಂದ ಮನೆಗೆ ಕಣ್ಣಾಗಿದ್ದಳು. "ಸಾವಿರಾರು ದಾಸಿಯರು ಅರಮನೆಯಲ್ಲಿ ಇರುತ್ತಿರಲಾಗಿ ಅವರೆಲ್ಲರ ಗುರುತು ನನಗೆ ಇದ್ದಿತು. ಹೆಸರೂ ಗೊತ್ತಿದ್ದಿತು. ಅವರ ಊಟ, ವಸನ ಎಲ್ಲ ಕಷ್ಟ-ಸುಖಗಳನ್ನೂ ನಾನು ಅರಿತಿದ್ದೆನು. ಅವರ ಗುಣಾವಗುಣಗಳನ್ನು ಬಲ್ಲವಳಾಗಿದ್ದೆನು. ಸಾವಿರಾರು ಆನೆ-ಕುದುರೆಗಳು ಲಾಯದಲ್ಲಿದ್ದಾಗ ಅವುಗಳ ಮೇಲುವಿಚಾರಣೆಯನ್ನು ನೋಡಿಕೊಂಡಿದ್ದೇನೆ. ಆನೆ-ಕುದುರೆ-ದನ-ಕರುಗಳ ರಕ್ಷಣೆ ಮತ್ತು ರಕ್ಷಕರ ತಪ್ಪುಗಳನ್ನು ನಾನು ಅರಿತಿದ್ದೇನೆ. ನನ್ನ ಪತಿಗಳು ಎಲ್ಲ ಹೊಣೆಯನ್ನೂ ನನ್ನ ಮೇಲೆಯೇ ಬಿಟ್ಟು ತಮ್ಮ ರಾಜಕಾರಣ-ಧರ್ಮಾಚರಣೆಯಲ್ಲಿ ನಿಶ್ಚಿಂತೆಯಿಂದ ನಿರತರಾಗಿರುತ್ತಿದ್ದರು. ಇಷ್ಟೆಲ್ಲ ಕೆಲಸಗಳನ್ನು ಮಾಡುತ್ತ ಪತಿಗಳನ್ನೆಲ್ಲ ಸಂತೋಷದಲ್ಲಿ ಇಟ್ಟಿರುವುದು ನನಗೆ ಸುಲಭವಾದ ಕಾರ್ಯವಾಗಿರಲಿಲ್ಲ. ಆದರೆ ಕಷ್ಟವಾಯಿತೆಂದು ನಾನು ಸೋಲಲಿಲ್ಲ. ಹಗಲೂ-ರಾತ್ರಿ ದುಡಿದೆನು.

ಎಲ್ಲವನ್ನೂ ನೋಡಿಕೊಂಡೆನು. ಎಲ್ಲರೂ ಮಲಗಿದ ಮೇಲೆ ಮಲಗಿ ಎಲ್ಲರಿಗಿಂತ ಮುಂಚೆ ಎದ್ದಿದ್ದೇನೆ. ನಾನು ಗಂಡಂದಿರನ್ನು ವಶಮಾಡಿಕೊಳ್ಳಲು ಮಾಡಿದ ತಪಸ್ಸು ಇದು"–ಎಂದು ಉತ್ತರಿಸಿದಳು.

ಆಧುನಿಕಮಹಿಳೆಯರಿಗೆ ದ್ರೌಪದಿಯ ಆಚರಣೆಯಿಂದ ಕೆಲವಾದರೂ ಉಪದೇಶ ದೊರೆಯಬಹುದೇ?

ಹೀಗೆ ಮಹಾಭಾರತದಲ್ಲಿ ಎಲ್ಲ ಪಾತ್ರಗಳೂ ನಮಗೆ ಧರ್ಮವನ್ನು ಅತ್ಯುಚ್ಚರೀತಿಯಲ್ಲಿ ಬೋಧಿಸುತ್ತವೆ. ಧರ್ಮದಿಂದ ಪ್ರೇರಿತವಾದ ನೀತಿ ಇದು. ಭೀಷ್ಮಾಚಾರ್ಯರು ಒಂದೆಡೆ–"ಒಂದು ವೇಳೆ ಸ್ವಶಕ್ತಿಯಿಂದ ಎಲ್ಲವನ್ನೂ ಗಳಿಸಿದ್ದೇನೆ-ಎನ್ನುವವನೊಬ್ಬನನ್ನು ನೀವು ಸಂಧಿಸಿದರೂ ಆಳವಾಗಿ ನೋಡಿದರೆ ಅದೂ ಸಹ ಪರಮಾತ್ಮನ ದಯೆಯೇ ಹೊರತು ಅನ್ಯಥಾ ಅಲ್ಲ ಎಂಬುದು ನಿಮಗೆ ಗೊತ್ತಾಗುತ್ತದೆ"–ಎನ್ನುತ್ತಾರೆ. ವ್ಯಾಸರು–"ನಿಮ್ಮ ಕರ್ತವ್ಯವನ್ನು ನೀವು ಮಾಡಿ. ದೇವರ ಇಚ್ಛೆಗೆ ತಲೆಬಾಗಿ"–ಎನ್ನುತ್ತಾರೆ. ಮತ್ತೊಂದೆಡೆ ವ್ಯಾಸರೇ–"ನಾನು ಎಲ್ಲ ವೇದಗಳ ಸಾರವನ್ನೂ ಕಡೆದು ನೋಡಿದ್ದೇನೆ, ಧರ್ಮವನ್ನು ಆಚರಿಸಿ. ದೇವರನ್ನು ಧ್ಯಾನಿಸಿ, ಎಂಬುದೊಂದೇ ನನಗೆ ದೊರೆತ ಸಾರ"–ಎನ್ನುತ್ತಾರೆ.

ಮಹಾಭಾರತದ ಉಪದೇಶ

ಮನುಷ್ಯನ ಬಾಳ್ವೆಗೆ ಮೂಲಸೂತ್ರಗಳು ಯಾವುವು? ವ್ಯಾಸರು ಹೀಗೆ ಹೇಳುತ್ತಾರೆ–"ಪಾಪದ ಮೂಲಕಾರಣ-ಮಹಾಗ್ರಾಹಿಯಾದ ಲೋಭ. ಲೋಭದಿಂದ ಅಧರ್ಮ, ದುಃಖ, ಮೋಸ, ಅನ್ಯಾಯ. ಹೀಗೆ ಎಲ್ಲದರ ಮೂಲವೂ ಲೋಭವೇ. ಜಿತಾತ್ಮರಾಗಿ ಲೋಭವನ್ನು ಜಯಿಸ ಬೇಕು. ರಾಗ, ದ್ವೇಷ, ಮೋಹ, ಹರ್ಷ, ಶೋಕ, ಅಭಿಮಾನ, ಕ್ರೋಧ, ದರ್ಪ, ಆಲಸಿಕೆ, ಇತರರ ಉತ್ಕರ್ಷದಲ್ಲಿ ಅಸೂಯೆ-ಇವೆಲ್ಲ ಅಜ್ಞಾನದ ಫಲ. ತನ್ನ ಮೇಲೆ ತನ್ನ ಹತೋಟಿಗೆ ಸಮಾನವಾದ ಧರ್ಮ ಬೇರೊಂದು ಇಲ್ಲ. ಕ್ಷಮೆ, ಸಹನೆ, ಅಹಿಂಸೆ, ಸಮತ್ವ, ಸತ್ಯ, ಅಕೃತ್ರಿಮತೆ, ಇಂದ್ರಿಯ ನಿಗ್ರಹ, ದಕ್ಷತೆ, ಮೃದುತ್ವ, ಅಕಾರ್ಯಮಾಡಲು ನಾಚಿಕೆ, ಚಾಪಲ್ಯವಿಲ್ಲ ದಿರುವಿಕೆ, ಕಾರ್ಪಣ್ಯವಿಲ್ಲದಿರುವುದು, ಆತುರವಿಲ್ಲದಿರುವುದು, ತೃಪ್ತಿ, ಪ್ರಿಯವಾದಿತ್ವ, ಅನಸೂಯೆ–ಇವೆಲ್ಲ ತನ್ನನ್ನು ತಾನು ಹತೋಟಿಯಲ್ಲಿಟ್ಟು

ಕೊಳ್ಳುವುದರಲ್ಲಿ ಅಡಗಿವೆ. ಸತ್ಯವೇ ಸನಾತನವಾದ ಧರ್ಮ. ಸತ್ಯವೇ ಶಾಶ್ವತ ಧರ್ಮ, ಸತ್ಯವೇ ಬ್ರಹ್ಮ. ಸತ್ಯವೇ ಮಹಾನ್ ಯಜ್ಞ. ಸತ್ಯದಲ್ಲಿಯೇ ಎಲ್ಲವೂ ಪ್ರತಿಷ್ಠಿತವಾಗಿವೆ."

ವ್ಯಕ್ತಿ-ಧರ್ಮ

ಸತ್ಯವೆಂಬುದು ಹದಿಮೂರು ಬಗೆ. ಸತ್ಯವಾಕ್ಕು, ಸಮತೆ, ದಮ (ಮಾತ್ಸರ್ಯವಿಲ್ಲದಿರುವುದು), ಕ್ಷಮೆ, ನಾಚಿಕೆ, ಸಹಿಷ್ಣುತೆ, ದ್ವೇಷರಾಹಿತ್ಯ, ತ್ಯಾಗ, ಧ್ಯಾನ, ಆರ್ಯತ್ವ, ಸ್ಥೈರ್ಯ, ದಯೆ, ಅಹಿಂಸೆ–ಹೀಗೆ ಹದಿಮೂರು ಬಗೆಯೂ ಸತ್ಯವೇ. ಅಮೃತತ್ವವೂ ಮರಣವೂ ಈ ದೇಹದಲ್ಲಿಯೇ ಇವೆ. ಮೋಹದಿಂದ ಮೃತ್ಯುವುಂಟಾಗುತ್ತದೆ. ಸತ್ಯದಿಂದ ಅಮೃತತ್ವವುಂಟಾಗುತ್ತದೆ. ವಿದ್ಯೆಗೆ ಸಮಾನವಾದುದು ಯಾವುದೂ ಇಲ್ಲ. ಸತ್ಯಕ್ಕೆ ಸಮಾನವಾದ ತಪಸ್ಸು ಇಲ್ಲ. ಆಸೆಗೆ ಸಮನಾದ ದುಃಖವಿಲ್ಲ. ತ್ಯಾಗಕ್ಕೆ ಸಮನಾದ ಸುಖವಿಲ್ಲ. ಸ್ವಂತ ಇಚ್ಛೆಯಿಂದ ದರಿದ್ರನಾಗುವವನಿಗೆ ಶತ್ರುಗಳೇ ಇಲ್ಲ. ಕಷ್ಟವಾದರೂ ಇದೇ ಯೋಗ್ಯರಿಗೆ ಸುಲಭಮಾರ್ಗ. ಎಲ್ಲವನ್ನೂ ಬಿಟ್ಟ ಶುದ್ಧಾತ್ಮನಿಗೆ ಸಮನಾದವರು ಯಾರೂ ಇಲ್ಲ. ದಾರಿದ್ರ್ಯವನ್ನೂ ರಾಜತ್ವವನ್ನೂ ತಕ್ಕಡಿಯಲ್ಲಿಟ್ಟು ತೂಗಿದಾಗ ಗುಣದಿಂದ ಕೂಡಿದ ದಾರಿದ್ರ್ಯವೇ ಹೆಚ್ಚು ಭಾರವಾಯಿತು. ಮೃತ್ಯುವಿನ ದವಡೆಯಲ್ಲಿ ಸಿಕ್ಕಿದ ಮನುಷ್ಯನಂತೆ ಧನವಂತ ಯಾವಾಗಲೂ ಬೆದರುತ್ತಲೇ ಇರುತ್ತಾನೆ. ಆಸೆಗಳನ್ನು ಬಿಡುವುದು ಆಸೆಗಳನ್ನು ಪೂರೈಸಿಕೊಳ್ಳುವುದಕ್ಕಿಂತ ಹೆಚ್ಚು ಉತ್ತಮ. ತಮ್ಮ ಆಸೆಗಳೆಲ್ಲ ಪೂರ್ತಿಯಾಯಿತು–ಎಂದು ಹೇಳಬಲ್ಲವರು ಜಗತ್ತಿನಲ್ಲಿ ಇಲ್ಲ. ಎಲೈ ಕಾಮುಕ! ಆಸೆಗಳನ್ನು ಬಿಡು; ಬಿಟ್ಟು ಶಾಂತನಾಗು. ಸರ್ವಭೂತಗಳಿಗೂ ಹಿತವಾಗುವ ಪ್ರೀತಿಯ ಮಾತುಗಳನ್ನೇ ಹೇಳು. ತಿರಸ್ಕಾರ, ಬೈಗುಳ, ಕಾಠಿಣ್ಯ, ಅಪವಾದಗಳ ಮಾತನ್ನು ಆಡಬಾರದು. ಕಷ್ಟದಲ್ಲಿರುವವರಿಗೆ ಇನ್ನೊಂದು ಕಷ್ಟವನ್ನು ಕೊಡಬಾರದು. ಕೆಟ್ಟ ಮಾತುಗಳನ್ನು ಆಡಬಾರದು. ದೀನರಿಂದ ದೊಡ್ಡ ವಸ್ತುಗಳನ್ನು ಸ್ವೀಕರಿಸಬಾರದು. ಸದಾಶಿಶ್ನೋದರ ಪರಾಯಣರು, ಇತರರ ಗಂಟನ್ನು ಅಪಹರಿಸುವುದರಲ್ಲಿಯೇ ನಿರತರು, ಕೆಟ್ಟಮಾತುಗಳನ್ನು ಆಡುವವರು–ಇವರೆಲ್ಲ ಅಧರ್ಮಿಗಳೆಂದು ತಿಳಿದು, ದೇವರು ಅವರಿಂದ ವಿಮುಖನಾಗುತ್ತಾನೆ.

"ಇತರರ ವಸ್ತುಗಳಿಗೆ ಕೈಚಾಚದೆ ತನಗೆ ಬೇಕಾದಷ್ಟನ್ನು ಪ್ರಾಮಾಣಿಕತೆಯಿಂದ ದುಡಿದು ಸಂಪಾದಿಸಿ ಗೃಹಸ್ಥಜೀವನ ನಡೆಸುವುದು ತಪ್ಪಲ್ಲ. ಮನೆ

ಇರಲಿ; ಮಠ ಇರಲಿ. ಮದುವೆಯಾಗು; ಧನಗಳಿಸು; ಮಕ್ಕಳನ್ನು ಪಡೆದು ಅವರನ್ನು ಬೆಳೆಸಿ ದೊಡ್ಡವರನ್ನು ಮಾಡು; ಎಲ್ಲ ಆದಮೇಲೆಯೇ ಸಂಸಾರದಿಂದ ವಿಮುಖನಾಗು. ವೈರಾಗ್ಯಕ್ಕೆ ಎಂದೂ ಆತುರಪಡಬೇಕಾದು ದಿಲ್ಲ. ಹಿಡಿತದಲ್ಲಿ ಇಟ್ಟುಕೊಂಡು ಇಂದ್ರಿಯಗಳನ್ನು ಬೆಳಸಿಕೊಂಡವನು ಅವನ್ನು ಜಯಿಸಿದಂತೆಯೇ.

"ಮನುಷ್ಯನಾದವನು ಯಾವ ಕಷ್ಟಬಂದರೂ ಸಹಿಸಿಕೊಂಡು ಬಾಳಬೇಕು. ನಿರಾಶನಾಗಬಾರದು. ಆತ್ಮಹತ್ಯದ ಯೋಚನೆ ಮಾಡಬಾರದು. ಸುಖ-ಅಸುಖಗಳು ಬಾಳಿಗೆ ಸ್ವಾಭಾವಿಕ. ಮನುಷ್ಯನಿಗೆ ಮಾತ್ರವಲ್ಲ. ಹುಳು-ಹುಪ್ಪಟೆ, ಇರುವೆಗೆ ಸಹ ಇದು ತಪ್ಪಿದ್ದಲ್ಲ. ಮನುಷ್ಯಜನ್ಮ ದೊರೆಯುವುದು ತುಂಬ ಕಷ್ಟ. "ಮಾನವಜನ್ಮ ದೊಡ್ಡದು, ಇದನ್ನು ಹಾಳುಮಾಡಬೇಡಿರೋ ಹುಚ್ಚಪ್ಪಗಳಿರ" ಎಂದರು ಪುರಂದರದಾಸರು. ಕಷ್ಟಬಂದಿತೆಂದು ಪ್ರಾಣಬಿಡುವುದು ಸರಿಯಲ್ಲ. ಎಂತಹ ಕಾಲದಲ್ಲಿಯೂ ಧೈರ್ಯದಿಂದ ಇರಬೇಕು. ಜೀವಂತನಾಗಿ ಉಳಿದವನು ಪುಣ್ಯವನ್ನು ಪಡೆಯುತ್ತಾನೆ. ಶುಭವನ್ನು ಕಾಣುತ್ತಾನೆ. ಸತ್ತವನು ಶತ್ರುಗಳನ್ನು ಜಯಿಸನು. ಮನುಷ್ಯನಿಗೆ ಒಳ್ಳೆಯದು ಕೆಟ್ಟದ್ದು-ಎರಡೂ ಅನಿತ್ಯ. ಇದನ್ನು ಅರಿತು ಕಷ್ಟಬಂದ ಕಾಲದಲ್ಲಿ ಶುಭವನ್ನು ಕಾಯುತ್ತ ಧೈರ್ಯದಿಂದ ಇರಬೇಕು. ಒಮ್ಮೆ ಬಡಿದವರು ಇನ್ನೊಮ್ಮೆ ತಾವೇ ಬಡಿಸಿಕೊಳ್ಳುತ್ತಾರೆ. ತಳ್ಳಿದವರು ತಳ್ಳಿಸಿಕೊಳ್ಳುತ್ತಾರೆ. ಅದೃಷ್ಟಕ್ಕೆ ಅತಿ ಎತ್ತರವಾದುದೂ ಇಲ್ಲ. ಅತಿ ಭಾರವಾದುದು ಇಲ್ಲ. ಆದುದರಿಂದ ಯಾವ ಗಳಿಗೆಯಲ್ಲಿ ಬೇಕಾದರೂ ಶುಭಕ್ಕೆ-ಅಶುಭಕ್ಕೆ ಬದಲಾಗಬಹುದು.

ಸಮಾಜದಲ್ಲಿ ನಡವಳಿಕೆ

ವ್ಯಕ್ತಿ ಆಸೆಗೆ ಮಿತಿ ಇಟ್ಟುಕೊಂಡರೆ-ಸಮಾಜದಲ್ಲಿ ಹೊಡೆದಾಟವಾಗು ವುದಿಲ್ಲ. ಪರಸ್ಪರ ಈರ್ಷೆ ತಪ್ಪುತ್ತದೆ. ತಮ್ಮ ಸಂಸಾರನಿರ್ವಹಣೆಗೆ-ಪರಿವಾರ ರಕ್ಷಣೆಗೆ ಬೇಕಾದಷ್ಟನ್ನು ಇಟ್ಟುಕೊಂಡು ಉಳಿದ ಸಂಪತ್ತನ್ನು ತಮಗಿಂತ ಬಡವರಿಗಾಗಿ ಕೊಡಬೇಕು. ಕೀರ್ತಿ ಮುಖ್ಯ. ಅಕೀರ್ತಿವಂತನು ಧನಿಕನಾದರೂ ಸತ್ತಂತೆ. ಹಸಿದವನಿಗೆ ಅನ್ನಹಾಕುವುದು ಅತ್ಯುತ್ತಮದಾನ. ಶತ್ರುವಿಗೂ ಆತಿಥ್ಯನೀಡಬೇಕು. ಸಾವಿನಿಂದ ತಪ್ಪಿಸುವುದು ದೊಡ್ಡ ದಾನ.

ಪುರುಷರ ಶೀಲ

ವಿವಾಹವು ಸಮಾಜಕ್ಷೇಮಕ್ಕೆ ಬಹುಮುಖ್ಯಸಾಧನ. ಸಮಾಜದಲ್ಲಿ ಪ್ರತಿಯೊಬ್ಬರೂ ಇದನ್ನು ಪಾಲಿಸಬೇಕು. ತನ್ನ ಪತ್ನಿಯನ್ನು ಮಾತ್ರ ಸೇರುವವನು ಬ್ರಹ್ಮಚಾರಿ. ಪರಪತ್ನಿಯನ್ನು ಸೇರುವವನು ವ್ಯಭಿಚಾರಿ; ಬ್ರಹ್ಮಘಾತಕ. ಪರಸ್ತ್ರೀಯರ ವಿಷಯದಲ್ಲಿ ಪುರುಷರು ಸಂಯಮದಿಂದ ನಡೆಯಬೇಕು.

ಕಲ್ಯಾಣರಾಜ್ಯದಲ್ಲಿ ಪಾನಗೃಹಗಳನ್ನೂ, ವೇಶ್ಯಾಗಾರಗಳನ್ನೂ, ಅವುಗಳ ಭಕ್ತರನ್ನೂ ಹತೋಟಿಯಲ್ಲಿ ಇಡಬೇಕು. ಪರರ ದುಡಿಮೆಯಿಂದ ಜೀವಿಸುವ ಇಂಥ ಜನ ರಾಜ್ಯಕ್ಕೆ ಕೇಡನ್ನುಂಟುಮಾಡುತ್ತಾರೆ. ಅವರನ್ನು ಹಾಗೆಯೇ ಬಿಟ್ಟರೆ ಆ ಪಾಪ ಸರ್ಕಾರಕ್ಕೆ ತಟ್ಟುತ್ತದೆ. ಸರಿಯಾದ ಆಳ್ವಿಕೆ ಇರುವ ರಾಜ್ಯದಲ್ಲಿ ಅನ್ನವನ್ನು ಬೇಡುವ ಮನುಷ್ಯನಿರಬಾರದು. ರಾಷ್ಟ್ರವೂ ಸಹ ಇತರರಿಂದ ಅನ್ನ ಬೇಡಬಾರದು. ಪರರ ಯೋಗ-ಕ್ಷೇಮವನ್ನು ನೋಡಿಕೊಳ್ಳುವ ಜನ ಸಮಾಜದಲ್ಲಿ ಹೆಚ್ಚಬೇಕು. ಪರಹಿಂಸಕರು ಹೆಚ್ಚಾಗಬಾರದು. ಇಂಥವರು ಶಿಕ್ಷೆಗೆ ಅರ್ಹರು. ಭಿಕ್ಷುಕರನ್ನು ಗೋರಕ್ಷಣೆ, ಕೃಷಿ, ವಾಣಿಜ್ಯ ಇಂಥ ಯಾವುದಾದರೂ ಕೆಲಸದಲ್ಲಿ ಹೂಡಿ ದುಡಿಸಬೇಕು. ಇವೆಲ್ಲ ಮಹಾಭಾರತದ ವಾಕ್ಯಗಳು.

ಸರ್ಕಾರದ ಕರ್ತವ್ಯ

ಸಾಧುಜನರ ರಕ್ಷಣೆ, ಪ್ರಜೆಗಳ ಹಿತ, ಎಲ್ಲ ನೀತಿ (ಕುಟಿಲ ನೀತಿಸಹ)ಯಿಂದ ಶತ್ರುಗಳ ದಮನ, ಸೈನ್ಯವನ್ನು ಸಂತೋಷದಲ್ಲಿ ಇಟ್ಟಿರುವುದು, ನಗರಗಳನ್ನು ನೋಡಿಕೊಳ್ಳುವುದು, ಶತ್ರುಗಳ ನಡುವೆ ಇರುವ ಮಿತ್ರರನ್ನು ಆದಷ್ಟು ಕಾಪಾಡುವುದು, ಅತಿಧೈರ್ಯವನ್ನು ಮಾಡದೇ ಇರುವುದು, ಹಗೆಯನ್ನು ಉಪೇಕ್ಷಿಸದೇ ಇರುವುದು–ಇವು ರಾಷ್ಟ್ರದ ಕರ್ತವ್ಯಗಳು. ಒಳ್ಳೆಯ ರಾಜ್ಯದಲ್ಲಿ ಅಧಿಕಾರಿಗಳ ಸಂಖ್ಯೆ ಬಹಳವಾಗಿರಬಾರದು.

ಪ್ರತಿ ತಲೆಮಾರಿಗೂ ಹೊಸಸಂದೇಶ

ಮಹಾಭಾರತದ ನೀತಿ-ಧರ್ಮ ಹಳೆಯದಾದರೂ ಅದರಲ್ಲಿ ಪ್ರತಿತಲೆಮಾರಿಗೂ ಹೊಸ ಸಂದೇಶವಿದೆ. ಪ್ರತಿ ತಲೆಮಾರಿಗೂ

ತಮತಮಗೆ ಅನುಕೂಲವಾದಂತೆ ಆ ಸಂದೇಶವನ್ನು ಅನ್ವಯಿಸಿಕೊಳ್ಳಬಹುದು. ಆದುದರಿಂದಲೇ ಅದಕ್ಕೆ ಐದನೆಯ ವೇದವೆಂದು ಹೆಸರು. ಈ ಗ್ರಂಥ ಜಗತ್ತಿನ ಎಲ್ಲ ಭಾಷೆಗಳಿಗೂ ಸಂಕ್ಷೇಪವಾಗಿ ಅನುವಾದವಾಗಿದ್ದರೂ ರಷ್ಯದವರು ತಮ್ಮ ಭಾಷೆಗೆ ಪೂರ್ಣವಾಗಿ ಅನುವಾದಿಸಿಕೊಂಡಿದ್ದಾರೆ. ಒಟ್ಟಿನಲ್ಲಿ ಇದು ನಮ್ಮ ರಾಷ್ಟ್ರಕಾವ್ಯ. ನಮ್ಮ ರಾಷ್ಟ್ರಧರ್ಮ. ಇದರ ವ್ಯಾಸಂಗದಿಂದ ಮನುಷ್ಯ ಜಯವನ್ನು ಗಳಿಸುತ್ತಾನೆ-ಎಂದು ಮಹಾಭಾರತದಲ್ಲಿಯೇ ಹೇಳಿದೆ. ಮಹಾಭಾರತಕ್ಕೆ ಜಯ ಎಂದೇ ಹೆಸರು. ಇದರ ಕರ್ತನಿಗೆ ಕವಿಬ್ರಹ್ಮನೆಂದೂ ಹೆಸರು. ಇದರ ಸಂದೇಶವನ್ನು ನಾವು ಆಸ್ವಾದಿಸಿ ಕರ್ತವ್ಯಪರರಾದರೆ ನಮ್ಮ ಪಥ ಸುಗಮವಾಗುವುದು.

ಈ ಮಹದ್ಗ್ರಂಥದ-ಕನ್ನಡ ಅವತರಣಿಕೆಯ-ಪ್ರಕಾಶನಕಾರ್ಯವನ್ನು ಬೆಂಗಳೂರು ಭಾರತದರ್ಶನ ಪ್ರಕಾಶನ ಸಂಸ್ಥೆಯವರು ಅನೇಕವರುಷಗಳ ಕೆಳಗೆ ಪ್ರಾರಂಭಿಸಿ, ಈಗಾಗಲೇ ಮೂವತ್ತು ಸಂಪುಟಗಳನ್ನು ಹೊರತಂದಿದ್ದಾರೆ. ಇದರ ಮೊದಲನೆಯ ಸಂಪುಟ ಕೆಲವು ವರುಷಗಳ ಕೆಳಗೆ ಪ್ರಕಟವಾದಾಗ-ಇದರ ಮೂವತ್ತು ಗ್ರಂಥಗಳು ಪ್ರಕಟವಾಗುವುವೇ? ಯಾವಾಗ? ಎಂಬ ಸಂಶಯ ನನ್ನನ್ನು ಕಾಡಿತು. ಆದರೆ ಕಾಲಕಳೆದಂತೆ ಅವಧಿಗೆ ಸರಿಯಾಗಿ ಗ್ರಂಥಗಳು ಪ್ರಕಟವಾದುದನ್ನು ನೋಡಿ ನನಗೆ ವಿಸ್ಮಯವೂ ಆನಂದವೂ ಉಂಟಾಯಿತು. ಶ್ರೀಮಾನ್ ವಿದ್ವಾನ್ ವರದ ದೇಶಿಕಾಚಾರ್ಯರಂಗಪ್ರಿಯರ ನೇತೃತ್ವದ ವಿದ್ವಾಂಸರ ಗುಂಪು ಈ ಕಾರ್ಯವನ್ನು ಶ್ಲೋಕಗಳ ಆಯ್ಕೆ, ಅನುವಾದ, ವಿವರಣೆಗಳೊಂದಿಗೆ-ತುಂಬ ಸಮರ್ಪಕವಾಗಿ ಸಿದ್ಧಗೊಳಿಸಿದ್ದಾರೆ. ಅವರ ವಿದ್ವತ್ತು, ವಿಶಾಲವ್ಯಾಸಂಗ, ವಿಮರ್ಶಾಬುದ್ಧಿ, ಕಾರ್ಯತತ್ಪರತೆ, ಸಮಯಪ್ರಜ್ಞೆ-ಎಲ್ಲಕ್ಕಿಂತ ಹೆಚ್ಚಾಗಿ ನಿಸ್ವಾರ್ಥಸೇವೆ, ದೇಶ ಮತ್ತು ಭಾಷಾಸೇವೆ ಯಾರನ್ನಾದರೂ ಚಕಿತಗೊಳಿಸ ತಕ್ಕುದಾಗಿದೆ. ಇವರು ಈಗ ಮೂವತ್ತು ಸಂಪುಟಗಳನ್ನು ಪ್ರಕಟಿಸಿದ್ದಾರೆ. ಇದು ಮೂವತ್ತೊಂದನೆಯ ಸಂಪುಟ.

ಈ ಮೂವತ್ತೊಂದನೆಯ ಸಂಪುಟದ ಕಥೆ: ಯುದ್ಧಾನಂತರ ಯುಧಿಷ್ಠಿರನು-ಯುದ್ಧಕಾಲದಲ್ಲಿ ತಾನು ಮತ್ತು ತಮ್ಮ ಬೆಂಬಲಿಗರು ಬಂಧು-ಮಿತ್ರರನ್ನು ಕೊಂದುದಕ್ಕಾಗಿ ಪಶ್ಚಾತ್ತಾಪಪಟ್ಟು ಪಾಪಪರಿಹಾರಕ್ಕಾಗಿ

ಅಶ್ವಮೇಧಯಾಗವನ್ನು ಮಾಡುವ ವೃತ್ತಾಂತ. ವ್ಯಾಸರು ಮತ್ತು ಕೃಷ್ಣ ಯಾಗದ ಅವಶ್ಯಕತೆ ಇಲ್ಲವೆಂದರೂ ಧರ್ಮರಾಯನು ಮನಸ್ಸಮಾಧಾನಕ್ಕಾಗಿ ಮಾಡಲು ನಿಶ್ಚಯಿಸುತ್ತಾನೆ. ಅನಂತರ ಯಾಗಸಿದ್ಧತೆಗಳು ಪ್ರಾರಂಭ ವಾಗುತ್ತವೆ. ಬಭ್ರುವಾಹನ ಕುದುರೆ ಕಟ್ಟಿ ಅರ್ಜುನನೊಂದಿಗೆ ಯುದ್ಧಮಾಡು ತ್ತಾನೆ. ಯಜ್ಞಮಾಡಿದುದರಿಂದ ಯುಧಿಷ್ಠಿರನ ಮನಸ್ಸಿಗೆ ನೆಮ್ಮದಿಯುಂಟಾಗಿ ಅನಂತರ ಹಸ್ತಿನಾಪುರದಲ್ಲಿ ನಿಂತು ರಾಜ್ಯಭಾರಮಾಡುತ್ತಾನೆ. ಧೃತರಾಷ್ಟ್ರ, ವಿದುರ, ಸಂಜಯ, ಯುಯುತ್ಸು ಎಲ್ಲರೊಂದಿಗೆ ಯುಧಿಷ್ಠಿರ ರಾಜ್ಯಭಾರಮಾಡುತ್ತಾನೆ. ಯಾಗದ ಕೊನೆಯಲ್ಲಿ ಒಂದು ಮುಂಗುಸಿಯ ಕಥೆ ಬರುತ್ತದೆ. ಅದು "ಧನ-ಕನಕಗಳಿಲ್ಲದಿದ್ದರೂ ಶ್ರದ್ಧೆಯಿಂದ ಮಾಡಿದ ನೀರಿನ ದಾನವಾದರೂ-ದೇವರಿಗೆ ಪ್ರಿಯವಾಗುತ್ತದೆ"-ಎಂಬ ತತ್ತ್ವವನ್ನು ಬೋಧಿಸುತ್ತದೆ. ಈ ಸಂಪುಟದಲ್ಲಿಯೇ ಆಶ್ರಮವಾಸಿಕಪರ್ವದ ಕಥೆಯೂ ಇದೆ. ಈ ಸಂಪುಟದಲ್ಲಿಯೂ ತಾತ್ತ್ವಿಕವಿಚಾರಗಳ ಅಪಾರ ವರ್ಣನೆ ಇದೆ.

ಈ ಸಂಸ್ಥೆಯವರು ಮೊದಲು ಮೂವತ್ತು ಸಂಪುಟಗಳಿಗೇ ಈ ಕಾರ್ಯಕ್ಕೆ ಮಂಗಳವನ್ನು ಹಾಡಲು ನಿಶ್ಚಯಿಸಿದ್ದರು. ಈಗ ಮತ್ತೆ ಎರಡು ಸಂಪುಟಗಳನ್ನು ಪ್ರಕಟಿಸಲು ನಿರ್ಣಯಿಸಿದರು. ಇದು ಅಶ್ವಮೇಧಪರ್ವ. ಈ ಸಂಪಾದಕರು ಕೈಗೊಂಡ ಈ ಕಾರ್ಯವೂ ಸಹ ಅಶ್ವಮೇಧಯಾಗವೇ. ಈ ಮೂವತ್ತೆರಡು ಗ್ರಂಥಗಳೇ ಒಂದು ಉತ್ತಮ ಗ್ರಂಥಭಂಡಾರವಾಗುತ್ತದೆ. ಗ್ರಂಥಪ್ರಕಾಶನದಲ್ಲಿ ಇದೊಂದು ನಿಜವಾದ ಮಹತ್ ಮತ್ತು ಬೃಹತ್ ಸಾಧನೆ. ಈ ಸಾಧನೆಗಾಗಿ ನಾನು ಈ ಸಮಿತಿಯನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಈ ಗ್ರಂಥದ ಪ್ರತಿಗಳು ನಮ್ಮ ನಾಡಿನ ಪ್ರತಿ ಮನೆಯಲ್ಲಿಯೂ ಇರಬೇಕು. ಇಂದು ಇತರ ಗ್ರಂಥಗಳಿಗೆ ಇಟ್ಟಿರುವ ಬೆಲೆಗೆ ಹೋಲಿಸಿದರೆ ಇದರ ಬೆಲೆ ತೀರ ಕಡಿಮೆ. ಎಲ್ಲ ಕಾರ್ಯಕರ್ತರೂ ಇಷ್ಟು ವರ್ಷಗಳೂ ಯಾವ ಪ್ರತಿಫಲವೂ ಇಲ್ಲದೇ ದುಡಿದಿದ್ದಾರೆ. ಈ ಪ್ರಕಟಣೆ ಒಂದು ಲೋಕೋಪಕಾರಕ ಮತ್ತು ಜ್ಞಾನಪ್ರಕಾಶನದ ಕಾರ್ಯ. ಅನೇಕಸಂಪುಟಗಳ ಪುನರ್ಮುದ್ರಣವಾಗುತ್ತಿರುವುದು ಇದರ ಜನಪ್ರಿಯತೆಗೆ ಸಾಕ್ಷಿ. ಕೆರೆ, ಆಣೆಕಟ್ಟು, ಭಾವಿ, ನೀರಾವರಿಗಳಂತೆ ಇಂಥ ಗ್ರಂಥಪ್ರಕಾಶನಪ್ರಚಾರವೂ ಸಹ

ಕಲ್ಯಾಣಕಾರ್ಯ. ಇಂಥ ಕಾರ್ಯಗಳಿಗೆ ಜನತೆಯ ಮತ್ತು ಸರ್ಕಾರದ ಪೂರ್ಣಸಹಕಾರ-ಸಹಾಯ ದೊರೆಯಬೇಕು. ಜ್ಞಾನಪ್ರಸಾರದ ವಿಷಯದಲ್ಲಿ ಸರ್ಕಾರ ತುಂಬ ಉದಾರವಾಗಿ ವರ್ತಿಸುತ್ತಿದೆ. ಜನತೆಯೂ ಉದಾರ ಸ್ವಭಾವದ ಮಹನೀಯರೂ ಹಣಸಹಾಯವನ್ನು ಮಾಡುತ್ತಿದ್ದಾರೆ. ಸರ್ಕಾರವು ಸಂಸ್ಥಾನದ ಎಲ್ಲ ಶಾಲೆಗಳಿಗೂ ಈ ಗ್ರಂಥಪ್ರತಿಗಳನ್ನು ಒದಗಿಸಿ ಕೊಡಬೇಕು. ಮುಂದಲ ಸಂಪುಟದೊಂದಿಗೆ ಈ ಬೃಹತ್ಕಾರ್ಯದ ಮಂಗಳವಾಗುವುದು. ಈ ಸಮಿತಿಯವರೂ ಸಹ ಸಾರ್ಥಕವಾದ ಕಾರ್ಯವನ್ನು ಮಾಡಿದ ಕೃತಕೃತ್ಯತಾಭಾವನೆಯನ್ನು ಹೊಂದಬಹುದು. ಅವರಿಂದ ಇನ್ನೂ ಅನೇಕ ಇಂಥ ಉತ್ತಮಕಾರ್ಯಗಳು ನೆರವೇರಲೆಂದು ಹಾರೈಸುತ್ತೇನೆ.

ಈ ಸಂಪುಟಕ್ಕೆ ಮುನ್ನುಡಿಯ ನಾಲ್ಕು ಮಾತುಗಳನ್ನು ಬರೆಯಬೇಕೆಂದು ಕೇಳಿ ಸಮಿತಿಯವರು ನನಗೆ ಗೌರವವನ್ನು ತೋರಿಸಿದ್ದಾರೆ. ಈ ಜ್ಞಾನಯಜ್ಞದಲ್ಲಿ ನಾನು ಈ ರೀತಿ ಭಾಗಿಯಾಗಲೂ ನನಗೆ ಅವಕಾಶಕೊಟ್ಟುದಕ್ಕೆ ನಾನು ಅವರಿಗೆ ಕೃತಜ್ಞನಾಗಿದ್ದೇನೆ.

ಡಾ॥ ಗೊರೂರು ರಾಮಸ್ವಾಮಿ ಅಯ್ಯಂಗಾರ್

ಬೆಂಗಳೂರು :

ತಾ॥ 8-5-1985

ಎರಡನೆಯ ಮುದ್ರಣದ ಪ್ರಸ್ತಾವನೆ.

ಪರಮಾತ್ಮನ ದಯೆಯಿಂದಲೂ ಸತ್ಪುರುಷರ ಸಹಕಾರ ಸದಾಶಯಗಳಿಂದಲೂ ಮಹಾಭಾರತದ ೩೧ನೆಯ ಸಂಪುಟದ ಪುನರ್ಮುದ್ರಣವನ್ನು D.T.Pಮೂಲಕ ಮುಗಿಸುತ್ತಿದ್ದೇವೆ. ದೈವಯೋಗ ದಿಂದ ಲೇಸರ್ ಲೈನ್ ಗ್ರಾಫಿಕ್ಸ್‌ನವರ ಮತ್ತು ಎಲಿಗೆಂಟ್ ಮುದ್ರಣಾಲಯದವರ ಸಹಕಾರವು D.T.Pಮುದ್ರಣದ ಸಿದ್ಧತೆಯಲ್ಲಿ ಹಿಂದಿನಂತೆಯೇ ಮುಂದುವರಿಯುತ್ತಿದೆ. ಇವರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು.

೩೧ನೆಯ ಸಂಪುಟವು ಸಿದ್ಧವಾದೊಡನೆ ಸುಮಾರು ಐದು ನೂರು ಗ್ರಾಹಕರಿಗೆ ಮಹಾಭಾರತದ ೩೨ ಸಂಪುಟಗಳೂ ಲಭಿಸಿದಂತಾಗುತ್ತದೆ. ಕೆನರಾ ಬ್ಯಾಂಕ್ ಮತ್ತು ಸಿಂಡಿಕೇಟ್ ಬ್ಯಾಂಕುಗಳಿಂದ ಸಾಲಪಡೆದು ಗ್ರಾಹಕರಾಗಿದ್ದ ಎಲ್ಲ ಮಹನೀಯರಿಗೂ ಪೂರ್ಣಮಾಲೆಯು ಸಿಕ್ಕಿದಂತಾಗುತ್ತದೆ. ಇವರಲ್ಲಿ ನಾವು ಧನ್ಯತೆಯನ್ನು ಕಾಣುತ್ತಿದ್ದೇವೆ. ಇನ್ನೂ ಸುಮಾರು ೫೦೦ ಗ್ರಾಹಕರಿಗೆ ಮಹಾಭಾರತದ ಉಳಿದ ಸಂಪುಟಗಳನ್ನು ಕೊಡಬೇಕಾಗಿದೆ. ಈ ವರ್ಷಮುಗಿಯುವುದರೊಳಗಾಗಿ ೩೦೦ ಮಂದಿಗಾದರೂ ಪೂರ್ಣಮಾಲೆಯನ್ನು ಪೂರ್ಣಗೊಳಿಸಿಕೊಡಲು ಯೋಜಿಸಲಾಗಿದೆ. ಭಗವಂತನ ದಯೆಯಿಂದ ಸತ್ಸಂಕಲ್ಪವು ಕೈಗೂಡ ಬೇಕಾಗಿದೆ. ಮಹಾಭಾರತದ ಪೂರ್ಣಮಾಲೆಗಳನ್ನು ಪಡೆದುಕೊಂಡಿರುವವ ರೆಲ್ಲರೂ ರಾಮಾಯಣ ಮತ್ತು ಭಾಗವತಗಳಿಗೂ ಗ್ರಾಹಕರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿಸುತ್ತೇವೆ.

ಸಂಪಾದಕ ಮಂಡಲಿಯ ವಿದ್ವಾಂಸರು ಈ ಸಂಪುಟದ ತಪ್ಪು-ಒಪ್ಪುಗಳನ್ನು ನೋಡಿಕೊಟ್ಟು ಸಹಕರಿಸಿರುತ್ತಾರೆ. ಇತರರೆಲ್ಲರಿಗೂ ನಮ್ಮ ಹೃತ್ಪೂರ್ವಕವಂದನೆಗಳು. ಹಿತೈಷಿಗಳಿಗೂ ವಂದನೆಗಳು.

–ಪ್ರಕಾಶಕರು.

ಶ್ರೀಮನ್ಮಹಾಭಾರತ-ಮೂವತ್ತೊಂದನೆಯ ಸಂಪುಟದ ವಿಷಯಾನುಕ್ರಮಣಿಕೆ

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀಮಜ್ಜಗದ್ಗುರು
ಶಂಕರಾಚಾರ್ಯ ಶ್ರೀಮದ್ರಾಮಚಂದ್ರಾಪುರಮಠಸ್ಥ
ಶ್ರೀಮದ್ರಾಘವೇಂದ್ರಭಾರತೀ ಶ್ರೀಸ್ವಾಮಿಭಿಃ

ಅಸ್ಮದತ್ಯಂತ ಪ್ರಿಯಶಿಷ್ಯ ಕೇಶವಸುಬ್ರಹ್ಮಣ್ಯ ಕೌಶಿಕರು, ಭಾರತದರ್ಶನ ಪ್ರಕಾಶನ, ತ್ಯಾಗರಾಜನಗರ, ಬೆಂಗಳೂರು-೨೮ ಇವರಿಗೆ:

|| ಶ್ರೀಮನ್ನಾರಾಯಣಸ್ಮರಣಪುರಸ್ಸರಂ ಸಂದಿಷ್ಟೋ ಽಯಂ ಸಂದೇಶಃ ||

ಅದಾಗಿ: ಶ್ರೀಮನ್ಮಹಾಭಾರತದ ೩೧ನೆಯ ಸಂಪುಟವನ್ನು ಮುಗಿಸಿ ಪ್ರಕಾಶನಕ್ಕೆ ಸಿದ್ಧಗೊಳಿಸಿರುವುದನ್ನು ತಿಳಿದು ಅತ್ಯಂತ ಸಂತೋಷವಾಯಿತು. ಮಹಾಭಾರತ-ಪರ್ವತದ ತುತ್ತತುದಿಯನ್ನು ಮುಟ್ಟಿರುವಿರಿ. ಮತ್ತೊಂದು ಸಂಪುಟದೊಡನೆ, ಹದಿಮೂರು ವರುಷಗಳ ಹಿಂದೆ ಪ್ರಾರಂಭಿಸಿದ ಮಹಾಕಾರ್ಯವು ಮುಗಿದು ಕನ್ನಡಜನರಿಗೆ ಒಂದು ಮಹಾನಿಧಿಯೇ ದೊರೆತಂತಾಗುತ್ತದೆ. ಮೂವತ್ತೆರಡನೆಯ ಸಂಪುಟವು ನಿರ್ವಿಘ್ನವಾಗಿ ಮುಗಿಯುವುದೆಂಬುದರಲ್ಲಿ ಸಂದೇಹವೇ ಇಲ್ಲ.

ಈ ಮೂವತ್ತೊಂದನೆಯ ಸಂಪುಟದಲ್ಲಿ ಅಶ್ವಮೇಧ-ಆಶ್ರಮವಾಸಪರ್ವಗಳು ಮುಗಿದಿವೆ. ಮಹಾಭಾರತದ ವ್ಯಕ್ತಿಗಳ ಚಿತ್ರಣವು ಮಹಾಭಾರತವು ಸಂಪೂರ್ಣವಾದನಂತರವೇ ತಿಳಿದುಬರುವುದೆಂಬುದಕ್ಕೆ ಈ ಸಂಪುಟದಲ್ಲಿ ಒಂದು ನಿದರ್ಶನವಿದೆ. ಕುಂತಿಯು ಮಕ್ಕಳು ಪಡೆದ ರಾಜ್ಯದ ಸುಖವನ್ನು ಪರಿತ್ಯಜಿಸಿ ಗಾಂಧಾರೀ-ಧೃತರಾಷ್ಟ್ರರೊಡನೆ ಅರಣ್ಯಕ್ಕೆ ಹೊರಟುಬಿಡುತ್ತಾಳೆ. ಆ ಸಮಯದಲ್ಲಿ ಮಕ್ಕಳ ಪ್ರಶ್ನೆಗೆ ಅವಳು ಹೇಳುವ ಉತ್ತರದಿಂದ ಕುಂತಿಯು ಎಂತಹ ವೀರಮಾತೆಯೆಂಬುದು ಸ್ಪಷ್ಟವಾಗುತ್ತದೆ. (ಆಶ್ರಮವಾಸಪರ್ವ ಅಧ್ಯಾಯ ೧೭), ಧೃತರಾಷ್ಟ್ರನ ರಾಜನೀತಿಯ ಉಪದೇಶವು ಶ್ಲಾಘ್ಯವಾಗಿದೆ. (ಅಧ್ಯಾಯ ೫,೬ ಮತ್ತು ೭). ವಿಷ್ಣುಧರ್ಮಪರ್ವದಲ್ಲಿ ಸದಾಚಾರಕ್ಕೆ ಸಂಬಂಧಿಸಿದಂತೆ ಅನೇಕ ವಿಷಯಗಳು ಅಡಕವಾಗಿವೆ. ಒಟ್ಟಿನಲ್ಲಿ, ಈ ಸಂಪುಟವೂ ಹಿಂದಿನ ಸಂಪುಟಗಳಂತೆ ಸರ್ವೋಪಯುಕ್ತವಾಗಿದೆ. ಕನ್ನಡನಾಡಿನ ಜನರು "ಐದನೆಯ ವೇದ"ವೆಂದು ಪ್ರಸಿದ್ಧವಾಗಿರುವ ಮಹಾಭಾರತವನ್ನು ಅಧ್ಯಯನಮಾಡಿ ಸತ್ಪ್ರಜೆಗಳಾಗಲೆಂದು ಆಶಿಸುತ್ತೇವೆ.

ಶ್ರೀ ಸೀತಾರಾಮಚಂದ್ರ-ಚಂದ್ರಮೌಳೀಶ್ವರರ ಅನುಗ್ರಹದಿಂದ ಮುಂದಿನದೊಂದು ಸಂಪುಟವೂ ಯಶಸ್ವಿಯಾಗಿ ಹೊರಬಂದು, ಈ ಮಹಾಗ್ರಂಥವು ಆಚಂದ್ರಾರ್ಕವಾಗಿ ಬೆಳಗಲೆಂದು ಸುವರ್ಣಮಂತ್ರಾಕ್ಷತೆಯೊಂದಿಗೆ ಆಶೀರ್ವದಿಸುತ್ತೇವೆ.

ಇತಿ,

ಶ್ರೀಮನ್ನಾರಾಯಣ ಸ್ಮೃತಯಃ

ಮಿತಿ:- ಶ್ರೀ ಕ್ರೋಧನ ಸಂವತ್ಸರದ ವೈಶಾಖ ಕೃಷ್ಣ ೮ ಯು (ತಾ||೧೨-೫-೧೯೮೫) ಭಾನುವಾಸರೇ.

ವಸತಿ:- ತೀರ್ಥರಾಜಪುರವಿರಾಜಿತ ಶ್ರೀ ತುಂಗಾತೀರಸ್ಥ
ಶ್ರೀರಾಮಚಂದ್ರಾಪುರಮಠೇ (ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲಾ)

ಶ್ರೀಗಣೇಶಾಯ ನಮಃ ಶ್ರೀಮಹಾಸರಸ್ವತ್ಯೈ ನಮಃ ಶ್ರೀಸದ್ಗುರವೇ ನಮಃ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥

ಶ್ರೀಮನ್ಮಹಾಭಾರತ-ಆಶ್ವಮೇಧಿಕಪರ್ವ
ಮುವತ್ತೊಂದನೆಯ ಸಂಪುಟ

೬೨ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ವ್ಯಾಸರ ಆಜ್ಞಾನುಸಾರವಾಗಿ ಯುಧಿಷ್ಠಿರನು ಕುದುರೆಯ ರಕ್ಷಣೆಗೆ ಅರ್ಜುನನನ್ನೂ, ರಾಜ್ಯ ಮತ್ತು ನಗರಗಳ ರಕ್ಷಣೆಗೆ ಭೀಮಸೇನ-ನಕುಲರನ್ನೂ, ಕುಟುಂಬಪಾಲನೆಗೆ ಸಹದೇವನನ್ನೂ ನಿಯಮಿಸಿದುದು

ವೈಶಂಪಾಯನರು ಹೇಳುತ್ತಾರೆ:

ಏವಮುಕ್ತಸ್ತು ಕೃಷ್ಣೇನ ಧರ್ಮಪುತ್ರೋ ಯುಧಿಷ್ಠಿರಃ ।
ವ್ಯಾಸಮಾಮನ್ತ್ರ್ಯ ಮೇಧಾವೀ ತತೋ ವಚನಮಬ್ರವೀತ್ ॥೧॥

“ಜನಮೇಜಯ! ಅಶ್ವಮೇಧಯಾಗವನ್ನು ಮಾಡುವಂತೆಯೂ, ಅದಕ್ಕೆ ತನ್ನ ಸಂಪೂರ್ಣಸಹಕಾರವಿರುವುದೆಂದೂ-ಶ್ರೀಕೃಷ್ಣನು ಹೇಳಲು ಮೇಧಾವಿಯಾದ ಧರ್ಮಪುತ್ರನಾದ ಯುಧಿಷ್ಠಿರನು ವ್ಯಾಸರನ್ನು ಕರೆಯಿಸಿ ಅವರೊಡನೆ ಈ ಮಾತುಗಳನ್ನು ಹೇಳಿದನು:

ಯದಾ ಕಾಲಂ ಭವಾನ್ವೇತ್ತಿ ಹಯಮೇಧಸ್ಯ ತತ್ತ್ವತಃ ।
ದೀಕ್ಷಯಸ್ವ ತದಾ ಮಾಂ ತ್ವಂ ತ್ವಯ್ಯಾಯತ್ತೋ ಹಿ ಮೇ ಕ್ರತುಃ ॥

“ಪೂಜ್ಯರೇ! ಅಶ್ವಮೇಧಯಾಗಮಾಡಲು ಯಾವ ಕಾಲವು ಸಮುಚಿತವಾಗಿರುವುದೆಂದು ತಾವು ಯಥಾವತ್ತಾಗಿ ತಿಳಿಯುವಿರೋ-ಆಗಲೇ ನನಗೆ ಯಜ್ಞದ ದೀಕ್ಷೆಯನ್ನು ಕೊಡಿರಿ. ಏಕೆಂದರೆ: ನಾನು

ಮಾಡಲಿರುವ ಈ ಅಶ್ವಮೇಧಯಜ್ಞವು ತಮ್ಮನ್ನೇ ಅವಲಂಬಿಸಿದೆ.”

ವ್ಯಾಸರು ಹೇಳುತ್ತಾರೆ:

“ಕುಂತೀಪುತ್ರನೇ! ಯುಧಿಷ್ಠಿರ! ನಿನ್ನಿಂದ ಯಜ್ಞವನ್ನು ಮಾಡಿಸಬೇಕಾದ ಕಾಲವು ಸನ್ನಿಹಿತವಾದೊಡನೆಯೇ ಪೈಲ, ಯಾಜ್ಞವಲ್ಕ್ಯ ಇವರೇ ಮುಂತಾದ ಋತ್ವಿಜರೊಡನೆ ನಾನೂ ಆಗಮಿಸಿ ನಿನ್ನ ಯಜ್ಞದ ವಿಧಿ- ವಿಧಾನಗಳೆಲ್ಲವನ್ನೂ ಸಮಗ್ರವಾಗಿ ಮಾಡಿಕೊಡುತ್ತೇನೆ. ಇದರಲ್ಲಿ ಸಂಶಯವೇ ಇಲ್ಲ.

ಚೈತ್ರ್ಯಾಂ ಹಿ ಪೌರ್ಣಮಾಸ್ಯಾಂ ತು ತವ ದೀಕ್ಷಾ ಭವಿಷ್ಯತಿ।
ಸಮ್ಭಾರಾಃ ಸಮ್ಭ್ರಿಯನ್ತಾಂ ಚ ಯಜ್ಞಾರ್ಥಂ ಪುರುಷರ್ಷಭ ॥೪॥

ಪುರುಷಶ್ರೇಷ್ಠನೇ! ಮುಂದಿನ ಚೈತ್ರಶುದ್ಧ ಪೂರ್ಣಿಮೆಯಂದು ನಿನ್ನ ಯಜ್ಞದೀಕ್ಷೆಯ ಸಮಾರಂಭವು ನಡೆಯುತ್ತದೆ. ಅಷ್ಟರೊಳಗಾಗಿ ಯಜ್ಞದ ಸಲುವಾಗಿ ಸಾಮಗ್ರಿಗಳನ್ನು ಸಂಗ್ರಹಿಸು.

ಅಶ್ವವಿದ್ಯೆಯನ್ನು ತಿಳಿದಿರುವ ಸೂತರೂ ಮತ್ತು ಬ್ರಾಹ್ಮಣರೂ ನಿನ್ನ ಯಜ್ಞಾರ್ಥಸಿದ್ಧಿಗಾಗಿ ಪವಿತ್ರವಾದ ಕುದುರೆಯು ಯಾವುದೆಂಬುದನ್ನು ಪರೀಕ್ಷಿಸಲಿ. ಶಾಸ್ತ್ರವಿಧಿಗೆ ಅನುಸಾರವಾಗಿ ಆ ಕುದುರೆಯನ್ನು ಬಿಟ್ಟುಬಿಡು. ಅದು ನಿನ್ನ ಉಜ್ಜ್ವಲವಾದ ಯಶಸ್ಸನ್ನು ಪ್ರದರ್ಶಿಸುತ್ತಾ ಸಮುದ್ರವೇ ವಸ್ತ್ರವಾಗಿ ಉಳ್ಳ ಅಖಂಡಭೂಮಂಡಲದಲ್ಲಿಯೂ ಸಂಚರಿಸಲಿ.”

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಬ್ರಹ್ಮವಾದಿಗಳಾದ ವ್ಯಾಸರು ಹೀಗೆ ಹೇಳಲು, ಹಾಗೆಯೇ ಆಗಲೆಂದು ಹೇಳಿ, ಪೃಥಿವೀವಲ್ಲಭನಾದ ಯುಧಿಷ್ಠಿರನು ಅವರು ಹೇಳಿದಂತೆಯೇ ಎಲ್ಲವನ್ನೂ ಮಾಡಿದನು. ಯಾವ-ಯಾವ ಸಾಮಗ್ರಿಗಳನ್ನು ತರಬೇಕೆಂದು ಸಂಕಲ್ಪಿಸಲಾಗಿದ್ದಿತೋ–ಅದರಂತೆ ಧರ್ಮಪುತ್ರನಾದ, ಮಹಾತ್ಮನಾದ ಯುಧಿಷ್ಠಿರರಾಜನು ಎಲ್ಲ ಸಾಮಗ್ರಿಗಳನ್ನೂ ತಂದು, ಯಜ್ಞಕ್ಕೆ ಬೇಕಾಗುವ ಸಾಮಗ್ರಿಗಳೆಲ್ಲವನ್ನೂ ತಂದಿರುವುದಾಗಿ ಕೃಷ್ಣದ್ವೈಪಾಯನರಿಗೆ ತಿಳಿಸಿದನು. ಅದಕ್ಕೆ ಉತ್ತರವಾಗಿ ಮಹಾತೇಜಸ್ವಿಗಳಾದ ವ್ಯಾಸರು ಧರ್ಮಜನಿಗೆ ಹೇಳಿದರು:

ಯಥಾಕಾಲಂ ಯಥಾಯೋಗ್ಯಂ ಸಜ್ಜಾಃ ಸ್ಮ ತವ ದೀಕ್ಷಣೇ ॥೯॥

"ಯುಧಿಷ್ಠಿರ! ನಾವು ಸಮುಚಿತವಾದ ಕಾಲದಲ್ಲಿ ಸಮುಚಿತವಾದ ಯೋಗದಲ್ಲಿ ನಿನಗೆ ಯಜ್ಞದೀಕ್ಷೆಯನ್ನು ಕೊಡಲು ಸಿದ್ಧರಾಗಿದ್ದೇವೆ.

ಸ್ಫ್ಯಶ್ಚ ಕೂರ್ಚಶ್ಚ ಸೌವರ್ಣೋ ಯಚ್ಚಾನ್ಯದಪಿ ಕೌರವ।
ತತ್ರ ಯೋಗ್ಯಂ ಭವೇತ್ಕಿಂಚಿದ್ರೌಕ್ಮಂ ತತ್ಕ್ರಿಯತಾಮಿತಿ ॥೧೦॥

ಈ ಮಧ್ಯದಲ್ಲಿ ನೀನು ಸುವರ್ಣಮಯವಾದ ಸ್ಫ್ಯವನ್ನೂ (ಕತ್ತಿಯಾಕಾರದ ಒಂದು ವಸ್ತು) ಮತ್ತು ಕೂರ್ಚವನ್ನೂ ಮಾಡಿಸು. ಬೇರೆ ಯಾವುದಾದರೂ ಸುವರ್ಣಮಯವಾದ ಸಾಮಗ್ರಿಗಳ ಅವಶ್ಯಕತೆಯಿದ್ದರೆ ಅವುಗಳನ್ನೂ ಮಾಡಿಸು.

ಇಂದು ಶಾಸ್ತ್ರವಿಧಿಗೆ ಅನುಸಾರವಾಗಿ ಯಜ್ಞದ ಕುದುರೆಗಳನ್ನು ಯಥಾಕ್ರಮವಾಗಿ ಭೂಮಂಡಲದಲ್ಲಿ ಸಂಚರಿಸಲು ಬಿಟ್ಟುಬಿಡು. ಆ ಕುದುರೆಯು ಯಥಾಶಾಸ್ತ್ರವಾಗಿ ಯಥಾವಿಧಿಯಾಗಿ ಸುರಕ್ಷಿತವಾಗಿ ಭೂಮಿಯಲ್ಲಿ ಸಂಚರಿಸಿಬರಲಿ."

ಯುಧಿಷ್ಠಿರನು ಹೇಳುತ್ತಾನೆ:

"ಬ್ರಾಹ್ಮಣಶ್ರೇಷ್ಠರೇ! ಸೂತರೂ ಮತ್ತು ಬ್ರಾಹ್ಮಣರೂ ಪರೀಕ್ಷಿಸಿ ಯಜ್ಞಾರ್ಥವಾಗಿ ತಂದಿರುವ ಕುದುರೆಯು ಇದೇ ಆಗಿದೆ. ಈಗ ನಮ್ಮಿಂದ ಬಿಡಲ್ಪಡುವ ಇದು ಮನಬಂದಂತೆ ಭೂಮಿಯಲ್ಲಿ ಸುತ್ತಾಡುತ್ತದೆ. ಈ ಸಂಬಂಧದಲ್ಲಿ ನೀವೇ ನಮಗೆ ಉತ್ತಮವಾದ ಸಲಹೆಯೊಂದನ್ನು ಕೊಡಬೇಕಾಗಿದೆ. ಸ್ವೇಚ್ಛೆಯಿಂದ ಭೂಮಿಯಲ್ಲಿ ಸಂಚರಿಸುವ ಈ ಕುದುರೆಯನ್ನು ಯಾರು ರಕ್ಷಿಸಬೇಕೆಂದು ತಾವೇ ಹೇಳಬೇಕು."

ಜನಮೇಜಯ! ಯುಧಿಷ್ಠಿರನು ಹೀಗೆ ಪ್ರಶ್ನಿಸಲು ವ್ಯಾಸರು ಹೇಳಿದರು:

ಭೀಮಸೇನಾದವರಜಃ ಶ್ರೇಷ್ಠಃ ಸರ್ವಧನುಷ್ಮತಾಮ್।
ಜಿಷ್ಣುಃ ಸಹಿಷ್ಣುರ್ಧೃಷ್ಣುಶ್ಚ ಸ ಏನಂ ಪಾಲಯಿಷ್ಯತಿ।
ಶಕ್ತಃ ಸ ಹಿ ಮಹೀಂ ಜೇತುಂ ನಿವಾತಕವಚಾನ್ತಕಃ ॥೧೫॥

“ಯುಧಿಷ್ಠಿರ! ಭೀಮಸೇನನ ತಮ್ಮನಾದ, ಸರ್ವಧನುಷ್ಮಂತರಲ್ಲಿಯೂ ಶ್ರೇಷ್ಠನಾದ, ವಿಜಯೋತ್ಸಾಹಿಯಾದ, ಸಹನಶೀಲನಾದ, ಧೈರ್ಯಶಾಲಿಯಾದ ಅರ್ಜುನನು ಈ ಕುದುರೆಯನ್ನು ರಕ್ಷಿಸುತ್ತಾನೆ. ನಿವಾತಕವಚರ ಸಂಹಾರಕನಾದ ಅವನು ಏಕಾಕಿಯಾಗಿ ಭೂಮಂಡಲವನ್ನೇ ಜಯಿಸಲು ಸಮರ್ಥನಾಗಿದ್ದಾನೆ.

ತಸ್ಮಿನ್ ಹ್ಯಸ್ತ್ರಾಣಿ ದಿವ್ಯಾನಿ ದಿವ್ಯಂ ಸಂಹನನಂ ತಥಾ।
ದಿವ್ಯಂ ಧನುಶ್ಚೇಷುಧೀ ಚ ಸ ಏನಮನುಯಾಸ್ಯತಿ ॥೧೬॥

ಅರ್ಜುನನಲ್ಲಿ ದಿವ್ಯಾಸ್ತ್ರಗಳಿವೆ. ದಿವ್ಯಕವಚವಿದೆ. ದಿವ್ಯವಾದ ಧನುಸ್ಸೂ ಬತ್ತಳಿಕೆಗಳೂ ಇವೆ. ಅವನು ಈ ಅಶ್ವಮೇಧಾಶ್ವವನ್ನು ಹಿಂಬಾಲಿಸಿ ಹೋಗುವನು.

ಸ ಹಿ ಧರ್ಮಾರ್ಥಕುಶಲಃ ಸರ್ವವಿದ್ಯಾವಿಶಾರದಃ।
ಯಥಾಶಾಸ್ತ್ರಂ ನೃಪಶ್ರೇಷ್ಠ ಚಾರಯಿಷ್ಯತಿ ತೇ ಹಯಮ್ ॥೧೭॥

ಅರ್ಜುನನು ಧರ್ಮಾರ್ಥಕುಶಲನು. ಸರ್ವವಿದ್ಯಾವಿಶಾರದನು. ಅವನು ನಿನ್ನ ಈ ಯಜ್ಞಾಶ್ವವನ್ನು ಶಾಸ್ತ್ರಾನುಸಾರವಾಗಿ ಸುತ್ತಾಡಿಸುತ್ತಾನೆ.

ರಾಜಪುತ್ರೋ ಮಹಾಬಾಹುಃ ಶ್ಯಾಮೋ ರಾಜೀವಲೋಚನಃ।
ಅಭಿಮನ್ಯೋಃ ಪಿತಾ ವೀರಃ ಸ ಏನಂ ಪಾಲಯಿಷ್ಯತಿ ॥೧೮॥

ರಾಜಪುತ್ರನಾದ, ಮಹಾಬಾಹುವಾದ, ಶ್ಯಾಮಾಂಗನಾದ, ಕಮಲಾಕ್ಷನಾದ, ಅಭಿಮನ್ಯುವಿನ ತಂದೆಯಾದ, ವೀರನಾದ ಅರ್ಜುನನು ಈ ನಿನ್ನ ಯಜ್ಞದ ಕುದುರೆಯನ್ನು ರಕ್ಷಿಸುತ್ತಾನೆ.

ಭೀಮಸೇನೋಽಪಿ ತೇಜಸ್ವೀ ಕೌಂತೇಯೋಽಮಿತವಿಕ್ರಮಃ।
ಸಮರ್ಥೋ ರಕ್ಷಿತುಂ ರಾಷ್ಟ್ರಂ ನಕುಲಶ್ಚ ವಿಶಾಂಪತೇ ॥೧೯॥

ಪ್ರಜಾನಾಥನೇ! ಮಹಾತೇಜಸ್ವಿಯಾದ, ಮಹಾಪರಾಕ್ರಮಿಯಾದ, ಕುಂತಿಯ ಮಗನಾದ ಭೀಮಸೇನನು ರಾಷ್ಟ್ರವನ್ನು ರಕ್ಷಿಸಲು ಸಮರ್ಥನಾಗಿದ್ದಾನೆ. ಅಂತೆಯೇ ನಕುಲನೂ ರಾಷ್ಟ್ರರಕ್ಷಣೆಗೆ ಸಮರ್ಥನಾಗಿದ್ದಾನೆ.(ಅವರಿಬ್ಬರೂ ರಾಷ್ಟ್ರದ ರಕ್ಷಣೆಗಾಗಿ ಇಲ್ಲಿಯೇ ಇರಲಿ.)

ಸಹದೇವಸ್ತು ಕೌರವ್ಯ ಸಮಾಧಾಸ್ಯತಿ ಬುದ್ಧಿಮಾನ್ ।
ಕುಟುಮ್ಬತನ್ತ್ರಂ ವಿಧಿವತ್ಸರ್ವಮೇವ ಮಹಾಯಶಾಃ ॥೨೦॥

ಮಹಾಯಶೋವಂತನಾದ, ಬುದ್ಧಿವಂತನಾದ ಸಹದೇವನು ಕುಟುಂಬ ರಕ್ಷಣೆಯ ವಿಷಯವಾಗಿ ಸಮಸ್ತಕಾರ್ಯಗಳನ್ನೂ ನಿರ್ವಹಿಸುತ್ತಾನೆ."

ಜನಮೇಜಯ! ವ್ಯಾಸರು ಹೀಗೆ ಹೇಳಲು ಕುರುಕುಲತಿಲಕನಾದ ಯುಧಿಷ್ಠಿರನು ಅವರು ಹೇಳಿದಂತೆಯೇ ಎಲ್ಲವನ್ನೂ ನ್ಯಾಯೋಚಿತವಾದ ರೀತಿಯಲ್ಲೇ ಮಾಡಿದನು. ವ್ಯಾಸರು ಹೇಳಿದಂತೆ ಅರ್ಜುನನನ್ನು ಕುದುರೆಯ ರಕ್ಷಣೆಗಾಗಿ ನಿರ್ದೇಶಿಸಿ ಹೇಳಿದನು:

"ಅರ್ಜುನ! ಇತ್ತ ಬಾ. ನೀನು ಈ ಯಜ್ಞದ ಕುದುರೆಯನ್ನು ರಕ್ಷಿಸು. ನೀನಿದನ್ನು ರಕ್ಷಿಸಲು ಸಮರ್ಥನಾಗಿರುವೆ. ಬೇರೆ ಯಾವ ಮನುಷ್ಯನೂ ಇದನ್ನು ರಕ್ಷಿಸಲು ಸಮರ್ಥನಲ್ಲ. ಈ ಕುದುರೆಯು ಭೂಮಂಡಲದಲ್ಲಿ ಸುತ್ತಾಡುವಾಗ ಅನೇಕ ರಾಜರು (ನನ್ನ ಸಾರ್ವಭೌಮತ್ವವನ್ನು ಒಪ್ಪಲು ಇಷ್ಟಪಡದೆ) ನಿನ್ನನ್ನು ಎದುರಿಸಲು ಬರಬಹುದು. ಆ ಸಮಯದಲ್ಲಿ ನೀನು ಅವರೊಡನೆ ಯುದ್ಧವಾಗದ ರೀತಿಯಲ್ಲಿ ಚಾತುರ್ಯದಿಂದ ವ್ಯವಹರಿಸಬೇಕು. ನಾನು ಈ ಅಶ್ವಮೇಧಯಾಗಮಾಡುತ್ತಿರುವುದನ್ನು ನೀನು ಎಲ್ಲ ರಾಜರಿಗೂ ತಿಳಿಯಪಡಿಸಬೇಕು ಮತ್ತು ಯಜ್ಞವು ನಡೆಯುವ ಸಮಯದಲ್ಲಿ ಬರುವಂತೆ ಅವರನ್ನು ಆಹ್ವಾನಿಸಬೇಕು."

ಜನಮೇಜಯ! ಯುಧಿಷ್ಠಿರನು ಹೀಗೆ ಸವ್ಯಸಾಚಿಯಾದ ಅರ್ಜುನನಿಗೆ ಹೇಳಿ ರಾಜ್ಯದ ಮತ್ತು ನಗರದ ರಕ್ಷಣೆಯ ಭಾರವನ್ನು ಭೀಮಸೇನನಿಗೂ ನಕುಲನಿಗೂ ವಹಿಸಿಕೊಟ್ಟನು. ಧೃತರಾಷ್ಟ್ರನ ಅನುಮತಿಯನ್ನು ಪಡೆದು ಕುಟುಂಬರಕ್ಷಣೆಯಲ್ಲಿ ಯೋಧಶ್ರೇಷ್ಠನಾದ ಸಹದೇವನನ್ನು ನೇಮಿಸಿದನು.

೭೨ನೆಯ ಅಧ್ಯಾಯವು ಮುಗಿಯಿತು.

ಅರ್ಜುನನು ಸೇನೆಯೊಡನೆ ಯಜ್ಞಾಶ್ವವನ್ನು ಅನುಸರಿಸಿಹೋದುದು

ವೈಶಂಪಾಯನರು ಹೇಳುತ್ತಾರೆ:

ದೀಕ್ಷಾಕಾಲೇ ತು ಸಂಪ್ರಾಪ್ತೇ ತತಸ್ತೇ ಸುಮಹರ್ತ್ವಿಜಃ।
ವಿಧಿವದ್ದೀಕ್ಷಯಾಮಾಸುರಶ್ವಮೇಧಾಯ ಪಾರ್ಥಿವಮ್ ॥೧॥

ಜನಮೇಜಯ! ವ್ಯಾಸರು ಹೇಳಿದ್ದ ದೀಕ್ಷಾಕಾಲವು ಸನ್ನಿಹಿತವಾಗಲಾಗಿ, ಮಹಾತ್ಮರಾದ ಆ ಋತ್ವಿಜರು (ಬ್ರಹ್ಮಾ, ಅಧ್ವರ್ಯು, ಹೋತಾ ಮತ್ತು ಉದ್ಗಾತೃಗಳು) ಅಶ್ವಮೇಧಯಾಗದ ಸಲುವಾಗಿ ಯುಧಿಷ್ಠಿರನಿಗೆ ವಿಧಿವತ್ತಾಗಿ ದೀಕ್ಷೆಯನ್ನು ಕೊಟ್ಟರು. ಪಶುಬಂಧಾದಿ ಕರ್ಮಗಳನ್ನು ಮಾಡಿ ದೀಕ್ಷಿತನಾದ ಮಹಾತೇಜಸ್ವಿಯಾದ ಯುಧಿಷ್ಠಿರನು ಋತ್ವಿಜರೊಡನೆ ಬಹಳವಾಗಿ ಶೋಭಿಸಿದನು. ಅಶ್ವಮೇಧಯಜ್ಞದ ಸಲುವಾಗಿ ಬಿಡಬೇಕಾಗಿದ್ದ ಕುದುರೆಯನ್ನು ಬ್ರಹ್ಮವಾದಿಗಳಾದ ಮಹಾತೇಜಸ್ವಿಗಳಾದ ವ್ಯಾಸರೇ ಶಾಸ್ತ್ರವಿಧಿಗೆ ಅನುಸಾರವಾಗಿ ಬಿಟ್ಟುಬಿಟ್ಟರು. ಆ ಸಮಯದಲ್ಲಿ ದೀಕ್ಷಿತನಾಗಿ ಸುವರ್ಣಮಯವಾದ ಮಾಲೆಯನ್ನು ಧರಿಸಿ ಸುವರ್ಣಕಂಠನಾಗಿದ್ದ ಧರ್ಮರಾಜನು ಪ್ರಜ್ವಲಿಸುತ್ತಿರುವ ಅಗ್ನಿಯಂತೆಯೇ ಕಾಣುತ್ತಿದ್ದನು. ರೇಷ್ಮೆಯ ವಸ್ತ್ರವನ್ನುಟ್ಟು ದಂಡವನ್ನು ಹಿಡಿದು ಕೃಷ್ಣಾಜಿನವನ್ನು ಧರಿಸಿ ಯುಧಿಷ್ಠಿರನು ಆ ಯಜ್ಞಮಂಟಪದಲ್ಲಿ ಸಾಕ್ಷಾತ್ ಪ್ರಜಾಪತಿಬ್ರಹ್ಮನಂತೆಯೇ ಹೆಚ್ಚು-ಹೆಚ್ಚಾಗಿ ಪ್ರಕಾಶಿಸುತ್ತಿದ್ದನು. ಅದೇ ರೀತಿಯಲ್ಲಿ ಸಮಾನವಸ್ತ್ರಧಾರಿಗಳಾಗಿದ್ದ ಯುಧಿಷ್ಠಿರನ ಋತ್ವಿಜರೂ ಪ್ರಜಾಪತಿಬ್ರಹ್ಮನಂತೆಯೇ ಕಾಣುತ್ತಿದ್ದರು. ಅರ್ಜುನನೂ ಕೂಡ ಆ ಸಮಯದಲ್ಲಿ ಪ್ರಜ್ವಲಿಸುವ ಅಗ್ನಿಯಂತೆಯೇ ಕಾಣುತ್ತಿದ್ದನು. ಶ್ವೇತಾಶ್ವನಾದ ಅವನು ಧರ್ಮರಾಜನ ಅಪ್ಪಣೆಯಂತೆ ಚಿತ್ರವರ್ಣದಿಂದ ಕೂಡಿದ್ದ ಆ ಯಜ್ಞಾಶ್ವವನ್ನು ವಿಧಿವತ್ತಾಗಿ ಅನುಸರಿಸುತ್ತಾ ಹೋದನು. ತೋಳುಪಟ್ಟಿಯನ್ನೂ, ಕೈಚೀಲವನ್ನೂ, ಗೋಧಾಂಗುಲಿತ್ರವನ್ನೂ ಧರಿಸಿದ್ದ ಅರ್ಜುನನು ಸಂತೋಷಭರಿತನಾಗಿ ಗಾಂಡೀವಧನುಸ್ಸನ್ನು ಟೇಂಕರಿಸುತ್ತಾ ಕುದುರೆಯನ್ನು ಹಿಂಬಾಲಿಸಿ ಹೋದನು. ಯಜ್ಞದ ಕುದುರೆಯನ್ನು ರಕ್ಷಿಸಲು ಪ್ರಯಾಣಹೊರಟಿದ್ದ

ಕುರುಶ್ರೇಷ್ಠನಾದ ಅರ್ಜುನನನ್ನು ನೋಡುವ ಸಲುವಾಗಿ ಬಾಲಕರು ಮೊದಲ್ಗೊಂಡು ಮುದುಕರವರೆಗಿನ ಪ್ರಜೆಗಳಿಂದ ಕೂಡಿದ ಹಸ್ತಿನಾಪಟ್ಟಣವೇ ಬಂದಿತು. ಯಜ್ಞದ ಕುದುರೆಯನ್ನೂ ಮತ್ತು ಅದನ್ನು ಅನುಸರಿಸಿ ಹೋಗುತ್ತಿದ್ದ ಅರ್ಜುನನನ್ನೂ ನೋಡುವ ಸಲುವಾಗಿ ಆಗಮಿಸಿದ್ದ ಪ್ರಜೆಗಳ ಪರಸ್ಪರ ನುಗ್ಗಾಟದಿಂದ ಎಲ್ಲರ ಮುಖಗಳಲ್ಲಿಯೂ ಬೆವರು ಹುಟ್ಟಿ ಸೆಕೆಯು ಉಂಟಾಯಿತು. ಕುಂತಿಯ ಮಗನಾದ ಅರ್ಜುನನನ್ನು ನೋಡುತ್ತಿದ್ದ ಪ್ರಜೆಗಳ ಜಯಕಾರನಿನಾದವು ದಿಕ್ಕುಗಳನ್ನೂ ಆಕಾಶವನ್ನೂ ತುಂಬಿಬಿಟ್ಟಿತು.

ಏಷ ಗಚ್ಛತಿ ಕೌನ್ತೇಯಸ್ತುರಗಶ್ಚೈವ ದೀಪ್ತಿಮಾನ್ ।
ಯಮನ್ವೇತಿ ಮಹಾಬಾಹುಃ ಸಂಸ್ಪೃಶನ್ಧನುರುತ್ತಮಮ್ ॥೧೨॥

"ಅದೋ ನೋಡಿರಿ! ಅಲ್ಲಿ ಅರ್ಜುನನು ಹೋಗುತ್ತಿದ್ದಾನೆ. ಕಾಂತಿಯಿಂದ ಯುಕ್ತವಾದ ಕುದುರೆಯೂ ಹೋಗುತ್ತಿದೆ. ಮಹಾಬಾಹುವಾದ ಅರ್ಜುನನು ಧನುಸ್ಸನ್ನು ಟೇಂಕರಿಸುತ್ತಾ ಅದರ ಹಿಂದೆಯೇ ಹೋಗುತ್ತಿದ್ದಾನೆ."

ಉದಾರಬುದ್ಧಿಯವನಾದ ಅರ್ಜುನನು ಜನರಾಡಿಕೊಳ್ಳುತ್ತಿದ್ದ ಆ ಮಾತನ್ನು ಕೇಳಿದನು.

ಸ್ವಸ್ತಿ ತೇಽಸ್ತು ವ್ರಜಾರಿಷ್ಟಂ ಪುನಶ್ಚೈವ ಹಿ ಭಾರತ ॥೧೩॥

"ಭಾರತನೇ! ನಿನಗೆ ಮಂಗಳವಾಗಲಿ. ಪ್ರಯಾಣವು ಸುಖಕರವಾಗಿರಲಿ. ಕ್ಷೇಮದಿಂದ ಹಿಂದಿರುಗು."

ಜನಮೇಜಯ! ಇತರ ಕೆಲವರು ಮನುಷ್ಯರು ಅರ್ಜುನನನ್ನು ನೋಡಿ ಹೀಗೆ ಹೇಳುತ್ತಿದ್ದರು:

ನೈನಂ ಪಶ್ಯಾಮ ಸಮ್ಮರ್ದೇ ಧನುರೇತತ್ಪ್ರದೃಶ್ಯತೇ ।
ಏತದ್ಧಿ ಭೀಮನಿರ್ಹ್ರಾದಂ ವಿಶ್ರುತಂ ಗಾಣ್ಡೀವಂ ಧನುಃ ॥೧೪॥

ಸ್ವಸ್ತಿ ಗಚ್ಛತ್ವರಿಷ್ಟೋ ವೈ ಪನ್ಥಾನಮಕುತೋಭಯಮ್ ।
ನಿವೃತ್ತಮೇನಂ ದ್ರಕ್ಷ್ಯಾಮಃ ಪುನರೇಷ್ಯತಿ ಚ ಧ್ರುವಮ್ ॥೧೫॥

"ಈ ಜನಜಂಗುಳಿಯಲ್ಲಿ ಅರ್ಜುನನನ್ನು ನಾವು ಕಾಣುತ್ತಿಲ್ಲ. ಈಗ ಆ ವಿಖ್ಯಾತವಾದ ಧನುಸ್ಸನ್ನಾದರೂ ನೋಡುತ್ತಿದ್ದೇವೆ. ಭಯಂಕರವಾಗಿ ಶಬ್ದಮಾಡುವ ಆ ಧನುಸ್ಸು 'ಗಾಂಡಿವ' ಎಂಬ ಹೆಸರಿನಿಂದ ವಿಖ್ಯಾತವಾಗಿದೆ. ಯಜ್ಞದ ಕುದುರೆಯನ್ನು ಅನುಸರಿಸಿ ಹೊರಟಿರುವ ಈ ಅರ್ಜುನನಿಗೆ ಮಂಗಳವಾಗಲಿ. ಯಾವ ವಿಧವಾದ ತೊಂದರೆಯೂ ಇಲ್ಲದೇ ನಿರ್ಭಯವಾದ ಮಾರ್ಗದಲ್ಲಿವನು ಪ್ರಯಾಣಮಾಡಲಿ. ಕ್ಷೇಮದಿಂದ ಇವನು ಹಿಂದಕ್ಕೆ ಬರುವುದು ನಿಶ್ಚಯ. ಹಾಗೆ ವಿಜಯಿಯಾಗಿ ಬರುವ ಪಾರ್ಥನನ್ನು ನಾವೆಲ್ಲರೂ ಪುನಃ ನೋಡೋಣ."

ಜನಮೇಜಯ! ಇವೇ ಮುಂತಾದ ಸ್ತ್ರೀ-ಪುರುಷರ ಸುಮಧುರವಾದ ಮಾತುಗಳನ್ನು ಉದಾರಬುದ್ಧಿಯವನಾದ ಅರ್ಜುನನು ಪುನಃ ಪುನಃ ಕೇಳುತ್ತಲೇ ಇದ್ದನು. ಯಜ್ಞಕರ್ಮಗಳಲ್ಲಿ ಕುಶಲನಾದ, ವೇದಪಾರಂಗತನಾದ ಯಾಜ್ಞವಲ್ಕ್ಯರ ಶಿಷ್ಯನೊಬ್ಬನು ವಿಘ್ನಗಳ ಉಪಶಮನಕ್ಕಾಗಿ ಅರ್ಜುನನೊಡನೆ ಹೊರಟನು. ಧರ್ಮರಾಜನ ಆಣತಿಯಂತೆ ವೇದವೇದಾಂಗಪಾರಂಗತರಾದ ಬ್ರಾಹ್ಮಣರೂ, ಕ್ಷತ್ರಿಯರೂ ಮಹಾತ್ಮನಾದ ಅರ್ಜುನನನ್ನು ಶಾಸ್ತ್ರವಿಧಿಗೆ ಅನುಸಾರವಾಗಿ ಅನುಸರಿಸಿಹೋದರು. ಪಾಂಡವರು ತಮ್ಮ ಅಸ್ತ್ರಗಳ ಬಲದಿಂದ ಜಯಿಸಿದ್ದ ಎಲ್ಲ ದೇಶಗಳಲ್ಲಿಯೂ ಅನುಕ್ರಮವಾಗಿ ಆ ಕುದುರೆಯು ಸಂಚರಿಸತೊಡಗಿತು. ಹಾಗೆ ಸಂಚರಿಸುತ್ತಿರುವಾಗ ಯಾವ ಯಾವ ದೇಶದಲ್ಲಿ ಯಾವ ಯಾವ ರಾಜರೊಡನೆ ಅರ್ಜುನನು ಯುದ್ಧಮಾಡಬೇಕಾಯಿತೆಂಬುದನ್ನೂ ಮತ್ತು ಅದ್ಭುತವಾದ ಆ ಯುದ್ಧಗಳ ಮಹತ್ತ್ವವನ್ನೂ ನಿನಗೆ ಹೇಳುವೆನು:

ಆ ಯಜ್ಞಾಶ್ವವು ಪ್ರದಕ್ಷಿಣಾಕಾರವಾಗಿ ಭೂಮಿಯಲ್ಲಿ ಸಂಚರಿಸುತ್ತಿದ್ದಿತು. ಅದು ಮೊದಲು ಉತ್ತರದೇಶದಕಡೆಗೆ ಹೋಯಿತು. ಆ ದಿಕ್ಕಿನಲ್ಲಿದ್ದ ಅನೇಕ ರಾಜರ ರಾಜ್ಯಗಳಲ್ಲಿ ಪದವಿನ್ಯಾಸಮಾಡಿ ಶ್ರೇಷ್ಠವಾದ ಆ ಕುದುರೆಯು ಮೆಲ್ಲ-ಮೆಲ್ಲನೆ ಪೂರ್ವದಿಕ್ಕಿಗೆ ತಿರುಗಿತು. ಮಹಾರಥನಾದ ಅರ್ಜುನನೂ ಅದನ್ನು ಹಿಂಬಾಲಿಸಿದನು. ಮಹಾಭಾರತದ ಯುದ್ಧದಲ್ಲಿ ತಮ್ಮ ಬಂಧುಗಳನ್ನು ಕಳೆದುಕೊಂಡಿದ್ದ ಸಾವಿರಾರು ಕ್ಷತ್ರಿಯರು

ಸೇಡುತೀರಿಸಿಕೊಳ್ಳಲು ಅರ್ಜುನನೊಡನೆ ಯುದ್ಧಮಾಡಿದರು. ಹಾಗೆ ಯುದ್ಧಮಾಡಿದವರ ಸಂಖ್ಯೆಯು ಎಣಿಸಲಾಗದಷ್ಟು ಅಪಾರವಾಗಿದ್ದಿತು. ಹಿಂದೆ ಪಾಂಡವರಿಂದ ಪರಾಭವಗೊಂಡಿದ್ದ ಕತ್ತಿಗಳನ್ನೂ ಧನುಸ್ಸುಗಳನ್ನೂ ಹಿಡಿದಿದ್ದ ಕಿರಾತರೂ, ಯವನರೂ, ಮ್ಲೇಚ್ಛರೂ ಅರ್ಜುನನನ್ನು ಎದುರಿಸಿ ಯುದ್ಧಮಾಡಿದರು. ಹೃಷ್ಟ-ಪುಷ್ಟರಾದ ಸೈನಿಕರಿಂದಲೂ ವಾಹನಗಳಿಂದಲೂ ಯುಕ್ತರಾಗಿದ್ದ, ಯುದ್ಧದುರ್ಮದರಾದ, ಶ್ರೇಷ್ಠರಾದ (ಆರ್ಯರಾದ) ಮಹೀಪಾಲರೂ ಅರ್ಜುನನನ್ನು ಎದುರಿಸಿದರು. ಹೀಗೆ ಯಜ್ಞದ ಕುದುರೆಯು ಸರ್ವತ್ರ ಸಂಚರಿಸುತ್ತಿದ್ದಾಗ ನಾನಾದೇಶಗಳಲ್ಲಿ ಗುಂಪುಗೂಡಿ ಆಗಮಿಸಿದ ರಾಜರಿಗೂ ಅರ್ಜುನನಿಗೂ ಅಲ್ಲಲ್ಲಿ ಯುದ್ಧವು ನಡೆಯಿತು. ಯಾವ ಯುದ್ಧಗಳು ಎರಡೂ ಪಕ್ಷಗಳ ದೃಷ್ಟಿಯಿಂದ ಕಷ್ಟದಾಯಕವಾಗಿದ್ದುವೋ ಮತ್ತು ಮಹತ್ತ್ವದ್ದಾಗಿದ್ದುವೋ–ಅಂತಹ ಅರ್ಜುನನ ಯುದ್ಧಪ್ರಕರಣಗಳನ್ನು ವಿವರಿಸಿ ಹೇಳುವೆನು.

೭೩ನೆಯ ಅಧ್ಯಾಯವು ಮುಗಿಯಿತು.

೭೪ನೆಯ ಅಧ್ಯಾಯ — ಅನುಗೀತಾಪರ್ವ (ಮುಂದುವರಿದಿದೆ.)

ಅರ್ಜುನನಿಂದ ತ್ರಿಗರ್ತರ ಪರಾಜಯ

ವೈಶಂಪಾಯನರು ಹೇಳುತ್ತಾರೆ:

ತ್ರಿಗರ್ತೈರಭವದ್ಯುದ್ಧಂ ಕೃತವೈರೈಃ ಕಿರೀಟಿನಃ ।
ಮಹಾರಥಸಮಾಜ್ಞಾತೈರ್ಹತಾನಾಂ ಪುತ್ರನಪ್ತೃಭಿಃ ॥೧॥

ಪಾರೀಕ್ಷಿತ! ಯುದ್ಧದ ಕುದುರೆಯು ಭೂಮಂಡಲದಲ್ಲಿ ಸಂಚರಿಸುತ್ತಿದ್ದಾಗ ತ್ರಿಗರ್ತರ ದೇಶಕ್ಕೂ ಹೋಯಿತು. ಕುರುಕ್ಷೇತ್ರದಲ್ಲಿ ಹತರಾಗಿದ್ದ ತ್ರಿಗರ್ತರ ಮಕ್ಕಳು ಮೊಮ್ಮಕ್ಕಳು ಆ ರಾಜ್ಯವನ್ನಾಳುತ್ತಿದ್ದರು. ಅವರೆಲ್ಲರೂ ಮಹಾರಥರೆಂದು ವಿಖ್ಯಾತರಾಗಿದ್ದರು. ಅರ್ಜುನನನ್ನು ಬಹಳವಾಗಿ ದ್ವೇಷಿಸುತ್ತಿದ್ದರು. ಯುಧಿಷ್ಠಿರನ ಅಶ್ವಮೇಧಾಶ್ವವು ತಮ್ಮ ರಾಜ್ಯಕ್ಕೆ ಬಂದೊಡನೆಯೇ ಅದನ್ನು ಬಂಧಿಸಿದರು. ಅದರ ಪರಿಣಾಮವಾಗಿ ಅರ್ಜುನನಿಗೂ ತ್ರಿಗರ್ತರಿಗೂ ಘೋರಯುದ್ಧವಾಯಿತು. ಅದರ ವಿವರವನ್ನು ಹೇಳುವೆನು ಕೇಳು.

ಶ್ರೇಷ್ಠವಾದ ಅಶ್ವಮೇಧಾಶ್ವವು ತಮ್ಮ ರಾಜ್ಯದ ಗಡಿಗೆ ಬಂದಿರುವುದನ್ನು ತಿಳಿದು ವೀರರಾದ ತ್ರಿಗರ್ತಯೋಧರು ಕವಚಗಳನ್ನು ಧರಿಸಿ, ಬತ್ತಳಿಕೆಯನ್ನು ಬೆನ್ನಿಗೆ ಕಟ್ಟಿಕೊಂಡು, ಸಿಂಗರಿಸಿದ ಉತ್ತಮವಾದ ಕುದುರೆಗಳಿಂದ ಯುಕ್ತವಾದ ರಥಗಳಲ್ಲಿ ಕುಳಿತು, ಯಜ್ಞದ ಕುದುರೆಯನ್ನು ಸುತ್ತುಗಟ್ಟಿ ಅದನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಅನುವಾದರು. ಅರಿಮರ್ದನನಾದ ಅರ್ಜುನನು ತ್ರಿಗರ್ತವೀರರು ಯಜ್ಞದ ಕುದುರೆಯನ್ನು ತಡೆಯುತ್ತಿರುವುದನ್ನು ನೋಡಿ ಸ್ವಲ್ಪಹೊತ್ತು ಯೋಚಿಸುತ್ತಿದ್ದು, ಯುಧಿಷ್ಠಿರನು ಹೇಳಿದ್ದ ಮಾತನ್ನು ಸ್ಮರಿಸಿ, ಸಾಂತ್ವನಪೂರ್ವಕವಾದ ಮಾತುಗಳಿಂದಲೇ ತ್ರಿಗರ್ತರಿಗೆ ಕುದುರೆಯನ್ನು ಬಂಧಿಸಬಾರದೆಂದು ಹೇಳಿದನು. ಅರ್ಜುನನು ಹೇಳಿದ ಮಾತನ್ನು ತಿರಸ್ಕರಿಸಿ ತ್ರಿಗರ್ತಯೋಧರು ಬಾಣಗಳಿಂದ ಅವನನ್ನು ಪ್ರಹರಿಸತೊಡಗಿದರು. ತಮೋಗುಣ-ರಜೋಗುಣಗಳಿಂದ ಆವಿಷ್ಟರಾಗಿದ್ದ ತ್ರಿಗರ್ತಯೋಧರನ್ನು ಅರ್ಜುನನು ಪ್ರತ್ಯಸ್ತ್ರಗಳ ಪ್ರಯೋಗದಿಂದ ತಡೆಯುತ್ತಾ ನಗು-ನಗುತ್ತಲೇ ಹೇಳಿದನು:

ನಿವರ್ತಧ್ವಮಧರ್ಮಜ್ಞಾಃ ಶ್ರೇಯೋ ಜೀವಿತಮೇವ ಚ ॥೬॥

"ಧರ್ಮವನ್ನು ತಿಳಿಯದ ವೀರರೇ! ಯುದ್ಧದಿಂದ ಹಿಂದಿರುಗಿರಿ. ಈ ಸಮಯದಲ್ಲಿ ಜೀವವನ್ನು ಉಳಿಸಿಕೊಳ್ಳುವುದೇ ನಿಮಗೆ ಶ್ರೇಯಸ್ಕರವು."

ಜನಮೇಜಯ! ಅರ್ಜುನನು ಶತ್ರುಗಳೊಡನೆ ಹೀಗೆ ಹೇಳಲು ಕಾರಣವೇನೆಂದರೆ ಅರ್ಜುನನನ್ನು ಯಜ್ಞಾಶ್ವದ ರಕ್ಷಣೆಗಾಗಿ ಯುಧಿಷ್ಠಿರನು ನಿಯೋಜಿಸಿದಾಗ 'ಹತಬಾನ್ಧವಾ ನ ತೇ ಪಾರ್ಥ ಹನ್ತವ್ಯಾಃ ಪಾರ್ಥಿವಾಃ' 'ಬಂಧುಗಳನ್ನು ಕಳೆದುಕೊಂಡ ರಾಜರನ್ನು ನೀನು ಕೊಲ್ಲಬಾರದು'– ಎಂದು ಕಟ್ಟಪ್ಪಣೆಮಾಡಿದ್ದನು. ಧೀಮಂತನಾದ ಧರ್ಮರಾಜನು ಹೇಳಿದ್ದ ಆ ಮಾತನ್ನು ಸ್ಮರಿಸಿ ಅರ್ಜುನನು ತ್ರಿಗರ್ತಯೋಧರಿಗೆ ಹಿಂದಿರುಗುವಂತೆ ಹೇಳಿದನು. ಆದರೆ ಅವರು ಯುದ್ಧದಿಂದ ಹಿಮ್ಮೆಟ್ಟಲೇ ಇಲ್ಲ. ಬಳಿಕ ಅರ್ಜುನನು ಯುದ್ಧದಲ್ಲಿ ತ್ರಿಗರ್ತಾಧಿಪತಿಯಾದ ಸೂರ್ಯವರ್ಮನನ್ನು

ಬಾಣಗಳ ಸಮೂಹದಿಂದ ಮುಚ್ಚಿ ಗಹ-ಗಹಿಸಿ ನಕ್ಕನು. ಮರುಕ್ಷಣ ದಲ್ಲಿಯೇ ತ್ರಿಗರ್ತದೇಶದ ವೀರರು ರಣಘೋಷದಿಂದಲೂ ರಥಚಕ್ರಗಳ ಗಡ-ಗಡಾ ಶಬ್ದದಿಂದಲೂ ಎಲ್ಲ ದಿಕ್ಕುಗಳನ್ನೂ ತುಂಬುತ್ತಾ ಅರ್ಜುನನನ್ನು ಆಕ್ರಮಿಸಿದರು. ಬಳಿಕ ಸೂರ್ಯವರ್ಮನು ತನ್ನ ಕೈಚಳಕವನ್ನು ತೋರಿಸುತ್ತಾ ಬಗ್ಗಿರುವ (ಕೆಳಮುಖವಾದ) ಗಿಣ್ಣುಗಳಿಂದ ಕೂಡಿದ್ದ ನೂರು ಬಾಣಗಳನ್ನು ಅರ್ಜುನನ ಮೇಲೆ ಪ್ರಯೋಗಿಸಿದನು. ಅದೇ ರೀತಿಯಲ್ಲಿ ಸೂರ್ಯವರ್ಮನ ಅನುಯಾಯಿಗಳಾದ, ಮಹಾಧನುಷ್ಮಂತರಾದ ತ್ರಿಗರ್ತ ಯೋಧರು ಅರ್ಜುನನನ್ನು ಸಂಹರಿಸುವ ಇಚ್ಛೆಯಿಂದ ಅವನ ಮೇಲೆ ಬಾಣಗಳ ಮಳೆಯನ್ನೇ ಸುರಿಸಿದರು. ಅದಕ್ಕೆ ಪ್ರತಿಯಾಗಿ ಅರ್ಜುನನು ಶಿಂಜಿನಿಯ ಮುಖದಿಂದ ಹೊರಹೊರಟ ಅನೇಕಬಾಣಗಳಿಂದ ತ್ರಿಗರ್ತ ಯೋಧರು ಬಿಟ್ಟಿದ್ದ ಬಾಣಗಳನ್ನು ಕತ್ತರಿಸಿದನು. ಒಡನೆಯೇ ಅವೆಲ್ಲವೂ ಭೂಮಿಯಲ್ಲಿ ತೊಪ-ತೊಪನೆ ಬಿದ್ದುವು. ಸೂರ್ಯವರ್ಮನ ತಮ್ಮನಾದ, ತೇಜಸ್ವಿಯಾದ, ಯುವಕನಾದ ಕೇತುವರ್ಮನು ತನ್ನ ಅಣ್ಣನ ಸಲುವಾಗಿ ಯಶೋವಂತನಾದ ಅರ್ಜುನನೊಡನೆ ಯುದ್ಧದಲ್ಲಿ ತೊಡಗಿದನು. ಯುದ್ಧದಲ್ಲಿ ಕೇತುವರ್ಮನು ತನ್ನ ಮೇಲೆ ಬೀಳುತ್ತಿರುವುದನ್ನು ನೋಡಿ ಶತ್ರುಹಂತಕನಾದ ಬೀಭತ್ಸುವು ನಿಶಿತವಾದ ಬಾಣಗಳಿಂದ ಅವನನ್ನು ಸಂಹರಿಸಿದನು. ಕೇತುವರ್ಮನು ಹತನಾದನಂತರ ಮಹಾರಥನಾದ ಧೃತವರ್ಮನು ರಥದಲ್ಲಿ ಕುಳಿತು ಅವಸರದಿಂದ ಅರ್ಜುನನನ್ನು ಸಮೀಪಿಸಿ ಕ್ಷಣಮಾತ್ರದಲ್ಲಿ ಅವನನ್ನು ಬಾಣಗಳಿಂದ ಮುಚ್ಚಿಬಿಟ್ಟನು. ಇನ್ನೂ ಬಾಲಕ ನಾಗಿದ್ದ ಧೃತವರ್ಮನ ಬಾಣಕ್ಷೇಪದ ಶೀಘ್ರತೆಯನ್ನು ನೋಡಿ ವೀರನಾದ, ಮಹಾತೇಜಸ್ವಿಯಾದ ಗುಡಾಕೇಶನು ಸಂತೋಷಪಟ್ಟನು. ಧೃತವರ್ಮನು ಬತ್ತಳಿಕೆಯಿಂದ ಬಾಣಗಳನ್ನು ತೆಗೆದುಕೊಳ್ಳುವುದನ್ನಾಗಲೀ ಧನುಸ್ಸಿನಲ್ಲಿ ಅನುಸಂಧಾನಮಾಡುವುದನ್ನಾಗಲೀ ನೋಡಲು ಅರ್ಜುನನಿಗೆ ಸಾಧ್ಯವಾಗು ತ್ತಿರಲಿಲ್ಲ. ಬಾಣಗಳ ಮಳೆಗರೆಯುತ್ತಿದ್ದುದನ್ನು ಮಾತ್ರವೇ ಕಾಣುತ್ತಿದ್ದನು. ಅರ್ಜುನನು ರಣಭೂಮಿಯಲ್ಲಿ ಧೃತವರ್ಮನ ಉತ್ಸಾಹವನ್ನು ಹೆಚ್ಚಿಸುತ್ತಾ

ಬಾಣಪ್ರಯೋಗದಲ್ಲಿ ಅವನ ಕೈಚಳಕವನ್ನು ಮನಸ್ಸಿನಲ್ಲಿಯೇ ಸ್ವಲ್ಪಕಾಲ ಶ್ಲಾಘಿಸಿದನು. ಮಹಾಬಾಹುವಾದ ಕುರುವೀರನಾದ ಅರ್ಜುನನು– ಸರ್ಪದಂತೆ ಕ್ರುದ್ಧನಾಗಿ ಧೃತವರ್ಮನು ಯುದ್ಧಮಾಡುತ್ತಿದ್ದರೂ ಪ್ರೀತಿಯ ಕಾರಣದಿಂದಾಗಿ ಅವನ ಪ್ರಾಣಗಳನ್ನು ತೆಗೆಯಲಿಲ್ಲ. ಮಹಾತೇಜಸ್ವಿಯಾದ ಅರ್ಜುನನು ಪ್ರೀತಿಯ ಕಾರಣದಿಂದ ಶತ್ರುವಿನ ಮೇಲೆ ಪ್ರಾಣಾಪಹಾರಕವಾದ ಬಾಣಗಳನ್ನು ಬಿಡದೆ ಮೆದುವಾಗಿ ಯುದ್ಧಮಾಡುತ್ತಿದ್ದುದರಿಂದ ಆ ಸದವಕಾಶವನ್ನು ಉಪಯೋಗಿಸಿಕೊಂಡು ಧೃತವರ್ಮನು ಅರ್ಜುನನ ಮೇಲೆ ಪ್ರದೀಪ್ತವಾದ ಬಾಣವೊಂದನ್ನು ಪ್ರಯೋಗಿಸಿದನು. ಅವನು ಪ್ರಯೋಗಿಸಿದ ಆ ತೀಕ್ಷ್ಣವಾದ ಬಾಣವು ಬಹಳ ರಭಸದಿಂದ ಬಂದು ಅರ್ಜುನನ ಕೈಯಲ್ಲಿ ನೆಟ್ಟುಕೊಂಡಿತು. ಮೋಹವಶನಾದ ಅರ್ಜುನನ ಗಾಂಡೀವವು ಅವನ ಕೈಯಿಂದ ಜಾರಿ ನೆಲದ ಮೇಲೆ ಬಿದ್ದಿತು. ಸವ್ಯಸಾಚಿಯ ಕೈಯಿಂದ ಜಾರಿ ಕೆಳಕ್ಕೆ ಬೀಳುತ್ತಿದ್ದ ಆ ಧನುಸ್ಸು ಇಂದ್ರನ ಧನುಸ್ಸಿನಂತೆಯೇ (ಕಾಮನ ಬಿಲ್ಲಿನಂತೆಯೇ) ಕಾಣುತ್ತಿದ್ದಿತು. ಹೀಗೆ ಅರ್ಜುನನ ದಿವ್ಯವಾದ ಧನುಸ್ಸು ಕೆಳಕ್ಕೆ ಬಿದ್ದು ಹೋಗಲಾಗಿ ಧೃತವರ್ಮನು ಆ ರಣರಂಗದಲ್ಲಿ ಅಟ್ಟಹಾಸದಿಂದ ನಗತೊಡಗಿದನು. ಅದನ್ನು ನೋಡಿ ರೋಷಾವಿಷ್ಟನಾದ ಅರ್ಜುನನು ಕೈಯಿಂದ ರಕ್ತವನ್ನು ಒರೆಸಿಕೊಂಡು, ಕೆಳಕ್ಕೆ ಬಿದ್ದ ಧನುಸ್ಸನ್ನೆತ್ತಿಕೊಂಡು ಧೃತವರ್ಮನ ಮೇಲೆ ಬಾಣಗಳ ಮಳೆಯನ್ನೇ ಸುರಿಸಿದನು. ಅರ್ಜುನನ ಬಾಣಾದಾನ-ಸಂಧಾನ-ಪ್ರಮೋಕ್ಷಣಾದಿ ಕರ್ಮಗಳನ್ನು ಪ್ರಶಂಸೆಮಾಡುತ್ತಿದ್ದ ನಾನಾವಿಧವಾದ ಪ್ರಾಣಿಗಳ ಕೋಲಾಹಲ ಶಬ್ದವು ಗಗನವನ್ನು ಮುಟ್ಟಿತು. ಬಳಿಕ ಪರಮಕ್ರುದ್ಧನಾಗಿದ್ದ, ಕಾಲ, ಅಂತಕ ಮತ್ತು ಯಮರಿಗೆ ಸದೃಶನಾಗಿದ್ದ ಅರ್ಜುನನನ್ನು ನೋಡಿ ತ್ರಿಗರ್ತಯೋಧರು ಎಲ್ಲ ಕಡೆಗಳಿಂದಲೂ ಮುತ್ತಿಗೆ ಹಾಕಿದರು. ಧೃತವರ್ಮನನ್ನು ರಕ್ಷಿಸುವ ಸಲುವಾಗಿ ತ್ರಿಗರ್ತಯೋಧರು. ಅರ್ಜುನನನ್ನು ಸುತ್ತುಗಟ್ಟಿ ನಿಂತರು. ಆದರಿಂದ ಧನಂಜಯನು ಮತ್ತೂ ಕೋಪಗೊಂಡು ಮಹೇಂದ್ರನ ವಜ್ರಾಯುಧಕ್ಕೆ ಸಮಾನವಾಗಿದ್ದ ಲೋಹಮಯವಾದ ಅನೇಕ ಬಾಣಗಳಿಂದ ಹದಿನೆಂಟು ಪ್ರಮುಖಯೋಧರನ್ನು ಕ್ಷಣಮಾತ್ರದಲ್ಲಿ ಸಂಹರಿಸಿದನು. ತ್ರಿಗರ್ತಯೋಧರು ತನ್ನ ಬಾಣಗಳಿಂದ ವಿಧ್ವಸ್ತರಾಗುತ್ತಿರುವುದನ್ನು ಕಂಡು ಧನಂಜಯನು ಗಟ್ಟಿಯಾಗಿ ನಗುತ್ತಾ ತ್ವರೆಯಿಂದ

ಅಳಿದುಳಿದಿದ್ದ ಯೋಧರನ್ನು ಸರ್ಪಾಕಾರದ ಬಾಣಗಳಿಂದ ಪ್ರಹರಿಸಿದನು. ಅರ್ಜುನನ ಬಾಣಗಳಿಂದ ಪೀಡಿತರಾದ ತ್ರಿಗರ್ತದೇಶದ ಮಹಾರಥರು ಉತ್ಸಾಹಶೂನ್ಯರಾಗಿ ದಿಕ್ಕು-ದಿಕ್ಕಿಗೂ ಓಡಿಹೋದರು. ಸಂಶಪ್ತಕರ ಸಂಹಾರಕನಾದ, ಪುರುಷಶ್ರೇಷ್ಠನಾದ ಅರ್ಜುನನನ್ನು ಅವರೆಲ್ಲರೂ ಪುನಃ ಸಂಧಿಸಿ ಹೇಳಿದರು:

ತವಾಸ್ಮ ಕಿಂಕರಾಃ ಸರ್ವೇ ಸರ್ವೇ ವೈ ವಶಗಾಸ್ತವ ।
ಆಜ್ಞಾಪಯಸ್ವ ನಃ ಪಾರ್ಥ ಪ್ರಹ್ವಾನ್ಪ್ರೇಷ್ಯಾನವಸ್ಥಿತಾನ್ ।
ಕರಿಷ್ಯಾಮಃ ಪ್ರಿಯಂ ಸರ್ವಂ ತವ ಕೌರವನನ್ದನ ॥೩೨॥

"ಅರ್ಜುನ! ನಾವೆಲ್ಲರೂ ಈಗ ನಿನ್ನ ಸೇವಕರಾಗಿದ್ದೇವೆ. ನಿನ್ನ ಅಧೀನರಾಗಿದ್ದೇವೆ. ವಿನೀತರಾದ ಸೇವಕರಾಗಿರುವ ನಮಗೆ ಆಜ್ಞಾಪಿಸು. ಕುರುಪುತ್ರನೇ! ನಿನಗೆ ಪ್ರಿಯವಾದುದೆಲ್ಲವನ್ನೂ ನಾವು ಮಾಡುತ್ತೇವೆ."

ಜನಮೇಜಯ! ತ್ರಿಗರ್ತಯೋಧರು ಹೇಳಿದ ವಿನಯಪೂರ್ವಕವಾದ ಆ ಮಾತನ್ನು ಕೇಳಿ ಗಾಂಡೀವಿಯು ಹೇಳಿದನು:

ಜೀವಿತಂ ರಕ್ಷತ ನೃಪಾಃ ಶಾಸನಂ ಪ್ರತಿಗೃಹ್ಯತಾಮ್ ॥೩೪॥

"ರಾಜರೇ! ನೀವು ನಮ್ಮ ಅಧಿಕಾರವನ್ನೊಪ್ಪಿಕೊಂಡು ನಿಮ್ಮ ಪ್ರಾಣಗಳನ್ನುಳಿಸಿಕೊಳ್ಳಿರಿ."

೭೪ನೆಯ ಅಧ್ಯಾಯವು ಮುಗಿಯಿತು.

೭೫ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಪ್ರಾಗ್ಜ್ಯೋತಿಷಪುರದ ರಾಜನಾದ ವಜ್ರದತ್ತನೊಡನೆ ಅರ್ಜುನನ ಯುದ್ಧ

ವೈಶಂಪಾಯನರು ಹೇಳುತ್ತಾರೆ:

ಪ್ರಾಗ್ಜ್ಯೋತಿಷಮಥಾಭ್ಯೇತ್ಯ ವ್ಯಚರತ್ಸಹಯೋತ್ತಮಃ ।
ಭಗದತ್ತಾತ್ಮಜಸ್ತತ್ರ ನಿರ್ಯಯೌ ರಣಕರ್ಕಶಃ ॥೧॥

ಜನಮೇಜಯ! ಯುಧಿಷ್ಠಿರನ ಅಶ್ವಮೇಧಾಶ್ವವು ಪ್ರಾಗ್ಜ್ಯೋತಿಷ ಪುರವನ್ನು ಪ್ರವೇಶಿಸಿ ಅಲ್ಲಿ ಸಂಚರಿಸತೊಡಗಿತು. ರಣಭಯಂಕರನಾದ,

ಭಗದತ್ತನ ಮಗನಾದ ವಜ್ರದತ್ತನು ಕುದುರೆಯನ್ನು ಬಂಧಿಸುವ ಸಲುವಾಗಿ ರಾಜಧಾನಿಯಿಂದ ಹೊರಟನು. ಪಾಂಡುಪುತ್ರನಾದ ಯುಧಿಷ್ಠಿರನ ಯಜ್ಞಾಶ್ವವು ತನ್ನ ರಾಜ್ಯದ ಎಲ್ಲೆಗೆ ಬಂದಿರುವುದನ್ನು ತಿಳಿದು ಮಹೀಪತಿಯಾದ ವಜ್ರದತ್ತನು ಯುದ್ಧಸನ್ನದ್ಧನಾದನು. ವಜ್ರದತ್ತನು ನಗರದಿಂದ ಹೊರಟು ತನ್ನ ಕಡೆಗೆ ಬರುತ್ತಿದ್ದ ಕುದುರೆಯನ್ನು ಬಂಧಿಸಿ ಕುದುರೆಯೊಡನೆ ಪಟ್ಟಣದ ಕಡೆಗೆ ಪ್ರಯಾಣಮಾಡಿದನು. ಅದನ್ನು ನೋಡಿ ಕುರುಶ್ರೇಷ್ಠನಾದ, ಮಹಾಬಾಹುವಾದ ಅರ್ಜುನನು ಗಾಂಡೀವಧನುಸ್ಸನ್ನು ಟೇಂಕರಿಸುತ್ತಾ ಬಹಳ ವೇಗವಾಗಿ ವಜ್ರದತ್ತನನ್ನು ಆಕ್ರಮಿಸಿದನು. ಗಾಂಡೀವಧನುಸ್ಸಿನಿಂದ ಬಿಡಲ್ಪಟ್ಟ ಬಾಣಗಳಿಂದ ವಿಮೋಹಿತನಾದ ವಜ್ರದತ್ತನು, ಕುದುರೆಯನ್ನು ಬಿಟ್ಟು ನಗರಕ್ಕೆ ಹೋಗಿ ಕವಚವನ್ನು ತೊಟ್ಟು, ಶ್ರೇಷ್ಠವಾದ ಆನೆಯ ಮೇಲೆ ಕುಳಿತು ಪಟ್ಟಣದಿಂದ ಹೊರಬಂದು ಪಾರ್ಥನನ್ನು ಆಕ್ರಮಿಸಿದನು.

ಆ ಸಮಯದಲ್ಲಿ ವಜ್ರದತ್ತನ ತಲೆಯ ಮೇಲೆ ಶ್ವೇತಚ್ಛತ್ರಿಯಿದ್ದಿತು. ಸೇವಕರು ಬಿಳಿಯ ಚಾಮರಗಳನ್ನು ಬೀಸುತ್ತಿದ್ದರು. ವಜ್ರದತ್ತನು ಮಹಾರಥನಾದ ಅರ್ಜುನನನ್ನು ಸಮೀಪಿಸಿ ಬಾಲ್ಯಚಾಪಲ್ಯದಿಂದಲೂ ಮೂರ್ಖತೆಯಿಂದಲೂ ಅವನನ್ನು ಯುದ್ಧಕ್ಕೆ ಆಹ್ವಾನಿಸಿದನು. ಅತ್ಯಂತಕ್ರುದ್ಧನಾಗಿದ್ದ ವಜ್ರದತ್ತನು ಮದೋದಕವನ್ನು ಸುರಿಸುತ್ತಿದ್ದ ಪರ್ವತೋಪಮವಾದ ಮಹಾಗಜವನ್ನು ಅರ್ಜುನನ ಮೇಲೆ ಎರಗಿ ಬೀಳುವಂತೆ ಪ್ರಚೋದಿಸಿದನು. ಆ ಆನೆಯು, ಮಹಾಮೇಘವು ಮಳೆಯನ್ನು ಸುರಿಸುವಂತೆ ಮದೋದಕವನ್ನು ಸುರಿಸುತ್ತಿದ್ದಿತು. ಶತ್ರುಪಕ್ಷದ ಆನೆಯನ್ನು ತಡೆದು ನಿಲ್ಲಿಸಲು ಸಮರ್ಥವಾಗಿದ್ದಿತು. ಶಾಸ್ತ್ರವಿಧಿಗೆ ಅನುಸಾರವಾಗಿ ರಣರಂಗದಲ್ಲಿ ಯುದ್ಧಮಾಡುವ ಸಲುವಾಗಿಯೇ ಅದು ಸಜ್ಜಾಗಿದ್ದಿತು. ಸ್ವಾಮಿಯ ಅಧೀನದಲ್ಲಿದ್ದು ಅವನ ಸೂಚನೆಯಂತೆ ನಡೆದುಕೊಳ್ಳುತ್ತಿದ್ದಿತು. ಯುದ್ಧೋನ್ಮತ್ತವಾಗಿದ್ದಿತು. ಮಹಾಬಲನಾದ ವಜ್ರದತ್ತನು ಅಂತಹ ಮದಿಸಿದ ಆನೆಯನ್ನು ಅಂಕುಶದಿಂದ ತಿವಿದು ಶತ್ರುವಿನ ಮೇಲೆ ಬೀಳಲು ಪ್ರಚೋದಿಸಲಾಗಿ ಆ ಆನೆಯು ಮುನ್ನುಗ್ಗಿ ಪಾರ್ಥನ ಮೇಲೆ ಬೀಳುತ್ತಾ ಆಕಾಶಕ್ಕೆ ನೆಗೆಯುತ್ತಿರುವುದೋ ಎಂಬಂತೆ ಕಾಣುತ್ತಿದ್ದಿತು. ವಜ್ರದತ್ತನು ಆನೆಯ ಮೇಲೆ ಕುಳಿತು ತನ್ನನ್ನು ಆಕ್ರಮಿಸಲು ಬರುತ್ತಿರುವುದನ್ನು ನೋಡಿ ಪರಮಕ್ರುದ್ಧನಾದ ಅರ್ಜುನನು–ತಾನು ಭೂಮಿಯ ಮೇಲೆ ನಿಂತಿದ್ದರೂ

ಆನೆಯ ಮೇಲಿದ್ದ ವಜ್ರದತ್ತನೊಡನೆ ಯುದ್ಧದಲ್ಲಿ ತೊಡಗಿದನು. ಕ್ರುದ್ಧನಾದ ವಜ್ರದತ್ತನು ಅಗ್ನಿಸದೃಶವಾಗಿದ್ದ ಶಲಭಗಳಂತೆ ವೇಗವುಳ್ಳವುಗಳಾಗಿದ್ದ ತೋಮರಗಳನ್ನು ಅರ್ಜುನನ ಮೇಲೆ ಪ್ರಯೋಗಿಸಿದನು. ವಜ್ರದತ್ತನು ಪ್ರಯೋಗಿಸಿದ ತೋಮರಗಳು ಹತ್ತಿರಕ್ಕೆ ಬರುವ ಮುನ್ನವೇ ಅವುಗಳನ್ನು ಆಕಾಶದಲ್ಲಿದ್ದಾಗಲೇ ಅರ್ಜುನನು–ಆಕಾಶಚಾರಿಗಳಾದ ಗಾಂಡೀವಧನುಸ್ಸಿನಿಂದ ಪ್ರಮುಕ್ತವಾದ ತೀಕ್ಷ್ಣವಾದ ಬಾಣಗಳಿಂದ ಒಂದೊಂದು ತೋಮರವನ್ನೂ ಎರಡು-ಮೂರು ಭಾಗಗಳಾಗಿ ಕತ್ತರಿಸಿದನು. ವಜ್ರದತ್ತನು, ತಾನು ಬಿಟ್ಟ ತೋಮರಗಳೆಲ್ಲವೂ ಖಂಡಿಸಲ್ಪಟ್ಟು ಕೆಳಕ್ಕೆ ಬಿದ್ದುದನ್ನು ನೋಡಿ ನಿರಂತರವಾಗಿ ಬಾಣಗಳನ್ನು ಅರ್ಜುನನ ಮೇಲೆ ತ್ವರೆಯಿಂದ ಪ್ರಯೋಗಿಸಿದನು. ಅದಕ್ಕೆ ಪ್ರತಿಯಾಗಿ ಕ್ರುದ್ಧನಾದ ಅರ್ಜುನನು ಅತಿತ್ವರೆಯಿಂದ ಸುವರ್ಣಮಯವಾದ ರೆಕ್ಕೆಗಳನ್ನು ಹೊಂದಿದ್ದ ನೇರವಾಗಿ ಹೋಗುವ ಬಾಣಗಳನ್ನು ವಜ್ರದತ್ತನ ಮೇಲೆ ಪ್ರಯೋಗಿಸಿದನು. ಆ ಮಹಾಯುದ್ಧದಲ್ಲಿ ಅರ್ಜುನನ ತೀಕ್ಷ್ಣವಾದ ಬಾಣಗಳಿಂದ ಪ್ರಹೃತನಾದ ಮಹಾತೇಜಸ್ವಿಯಾದ ವಜ್ರದತ್ತನು ಬಹಳವಾಗಿ ಗಾಯಗೊಂಡು ನೆಲದ ಮೇಲೆ ಬಿದ್ದುಬಿಟ್ಟನು. ಆದರೆ ಅವನು ಜ್ಞಾನಶೂನ್ಯನಾಗಿರಲಿಲ್ಲ. ಪುನಃ ವಜ್ರದತ್ತನು ಶ್ರೇಷ್ಠವಾದ ಆನೆಯಮೇಲೆ ಕುಳಿತು ವಿಜಯವನ್ನು ಗಳಿಸುವ ಆಸೆಯಿಂದ ಏಕಾಗ್ರಚಿತ್ತನಾಗಿ ವಿಜಯನ ಮೇಲೆ ಅನೇಕ ಬಾಣಗಳನ್ನು ಪ್ರಯೋಗಿಸಿದನು. ಅದರಿಂದ ಕ್ರುದ್ಧನಾದ ಧನಂಜಯನು ಪೊರೆಯನ್ನು ಬಿಟ್ಟ ಹಾವುಗಳಂತಿದ್ದ ಮತ್ತು ಪ್ರಜ್ವಲಿಸುವ ಯಜ್ಞೇಶ್ವರನಂತೆಯೇ ತೇಜೋವಿಶಿಷ್ಟವಾಗಿದ್ದ ಬಾಣಗಳನ್ನು ವಜ್ರದತ್ತನ ಆನೆಯ ಮೇಲೆ ಪ್ರಯೋಗಿಸಿದನು. ಅರ್ಜುನನ ಆ ಬಾಣಗಳ ಪ್ರಹಾರದಿಂದ ಬಹಳವಾಗಿ ಗಾಯಗೊಂಡ ವಜ್ರದತ್ತನ ಆನೆಯು ಧಾರಾಕಾರವಾಗಿ ರಕ್ತವನ್ನು ಸುರಿಸುತ್ತಾ ಗೈರಿಕಾದಿಧಾತುಗಳಿಂದ ಮಿಶ್ರವಾದ ನೀರಿನಿಂದ ಪ್ರವಹಿಸುವ ಝರಿಯುಳ್ಳ ಪರ್ವತದಂತೆಯೇ ಪ್ರಕಾಶಿಸಿತು.

೭೫ನೆಯ ಅಧ್ಯಾಯವು ಮುಗಿಯಿತು.

ಅರ್ಜುನನಿಂದ ವಜ್ರದತ್ತನ ಪರಾಜಯ

ವೈಶಂಪಾಯನರು ಹೇಳುತ್ತಾರೆ:

ಏವಂ ತ್ರಿರಾತ್ರಮಭವತ್ತದ್ಯುದ್ಧಂ ಭರತರ್ಷಭ।
ಅರ್ಜುನಸ್ಯ ನರೇನ್ದ್ರೇಣ ವೃತ್ರೇಣೇವ ಶತಕ್ರತೋಃ ॥೧॥

ಜನಮೇಜಯ! ಹೀಗೆ ವಜ್ರದತ್ತನಿಗೂ ಅರ್ಜುನನಿಗೂ– ವೃತ್ರನಿಗೂ ವಾಸವನಿಗೂ ನಡೆದ ಯುದ್ಧದಂತೆ ಮೂರು ದಿವಸಗಳ ಪರ್ಯಂತವಾಗಿ ಯುದ್ಧವು ನಡೆಯಿತು.

ನಾಲ್ಕನೆಯ ದಿವಸ ಮಹಾಬಲನಾದ ವಜ್ರದತ್ತನು ಗಟ್ಟಿಯಾಗಿ ಅಟ್ಟಹಾಸಪೂರ್ವಕವಾಗಿ ನಗುತ್ತಾ ಹೀಗೆ ಹೇಳಿದನು:

ಅರ್ಜುನಾರ್ಜುನ ತಿಷ್ಠಸ್ವ ನ ಮೇ ಜೀವನ್ವಿಮೋಕ್ಷ್ಯಸೇ।
ತ್ವಾಂ ನಿಹತ್ಯ ಕರಿಷ್ಯಾಮಿ ಪಿತುಸ್ತೋಯಂ ಯಥಾವಿಧಿ ॥೩॥

"ಎಲವೋ ಅರ್ಜುನ! ನಿಲ್ಲು! ನಿಲ್ಲು! ಜೀವಸಹಿತವಾಗಿ ನನ್ನಿಂದ ಬಿಡಿಸಿಕೊಂಡು ಹೋಗಲಾರೆ. ನಿನ್ನನ್ನು ಸಂಹರಿಸಿ ನನ್ನ ತಂದೆಗೆ ವಿಧಿಪೂರ್ವಕವಾದ ತರ್ಪಣವನ್ನು ಕೊಡುತ್ತೇನೆ.

ವೃದ್ಧನಾಗಿದ್ದ ನಿನ್ನ ತಂದೆಯು ನನ್ನ ತಂದೆಗೆ ಮಿತ್ರನಾಗಿದ್ದನು. ಆದರೂ ನೀನು ವೃದ್ಧನಾದ ನನ್ನ ತಂದೆಯನ್ನು ಸಂಹರಿಸಿದೆ. ಅವನ ಮಗನಾದ ನಾನೀಗ ನಿನ್ನೊಡನೆ ಯುದ್ಧಕ್ಕೆ ಬಂದಿರುವೆನು. ನಾನಿನ್ನೂ ಬಾಲಕನೇ ಸರಿ. ಆದರೂ ನನ್ನೊಡನೆ ಯುದ್ಧಮಾಡು. ನಿನ್ನ ಪರಾಕ್ರಮ ವನ್ನು ತೋರು." ಹೀಗೆ ಹೇಳಿ ಕ್ರುದ್ಧನಾಗಿದ್ದ ವಜ್ರದತ್ತನು ಪುನಃ ತನ್ನ ಆನೆಯನ್ನು ಅರ್ಜುನನ ಮೇಲೆ ಎರಗಿ ಹೋಗುವಂತೆ ಪ್ರಚೋದಿಸಿದನು. ಬುದ್ಧಿವಂತನಾದ ವಜ್ರದತ್ತನಿಂದ ಪ್ರಚೋದಿಸಲ್ಪಟ್ಟ ಆ ಆನೆಯು ಆಕಾಶಕ್ಕೆ ಹತ್ತಿ ಹೋಗುತ್ತಿರುವುದೋ ಎಂಬಂತೆ ವೇಗವಾಗಿ ಅರ್ಜುನನ ಕಡೆಗೆ ಧಾವಿಸಿತು. ಬಳಿಕ ಆ ಮಹಾಗಜವು–ಮೇಘವು ನೀಲಪರ್ವತದ ಮೇಲೆ ಮಳೆಗರೆಯುವಂತೆ–ಸೊಂಡಿಲಿನಿಂದ ನೀರಿನ ತುಂತುರುಗಳನ್ನು

ಅರ್ಜುನನ ಮೇಲೆ ಸುರಿಸಿತು. ವಜ್ರದತ್ತನಿಂದ ಪ್ರಚೋದಿತವಾದ ಆ ಆನೆಯು ಮೇಘದಂತೆ ಬಾರಿ-ಬಾರಿಗೂ ಗರ್ಜನೆಮಾಡುತ್ತಾ ಮುಖದಿಂದ ಹೊರಟ ಚೀತ್ಕಾರ-ಕೋಲಾಹಲಗಳೊಡನೆ ಅರ್ಜುನನನ್ನು ಆಕ್ರಮಿಸಿತು. ಶ್ರೇಷ್ಠವಾದ ಆ ಆನೆಯು ನರ್ತನಮಾಡುತ್ತಿರುವುದೋ ಎಂಬಂತೆ ಹೆಜ್ಜೆಗಳನ್ನಿಡುತ್ತಾ ಕೌರವಮಹಾರಥನಾದ ಅರ್ಜುನನ ಬಳಿಗೆ ಬಂದಿತು. ವಜ್ರದತ್ತನ ಆನೆಯು ತನ್ನ ಕಡೆಗೆ ವೇಗವಾಗಿ ಬರುತ್ತಿರುವುದನ್ನು ನೋಡಿ ಶತ್ರುಹಂತಕನಾದ ಅರ್ಜುನನು ವಿಚಲಿತನಾಗದೇ ಗಾಂಡೀವಧನುಸ್ಸನ್ನು ಆಶ್ರಯಿಸಿ ಸಜ್ಜಾಗಿ ನಿಂತನು. ವಜ್ರದತ್ತನು ಕುದುರೆಯನ್ನು ಬಂಧಿಸಿ ಯಜ್ಞಕಾರ್ಯಕ್ಕೆ ವಿಘ್ನವನ್ನುಂಟುಮಾಡುತ್ತಿರುವುದನ್ನೂ ಹಿಂದೆ ಅವನ ತಂದೆಯಾದ ಭಗದತ್ತನಿಗೂ ತನಗೂ ಇದ್ದ ವೈರವನ್ನೂ ಸ್ಮರಿಸಿ ಅರ್ಜುನನು ಅತ್ಯಂತಕುಪಿತನಾದನು.

ಬಳಿಕ ಅರ್ಜುನನು–ತೀರವು ಉಕ್ಕಿ ಬರುವ ಸಮುದ್ರವನ್ನು ತಡೆಯುವಂತೆ–ಬಾಣಗಳ ಸಮೂಹದಿಂದ ಆ ಮಹಾಗಜವನ್ನು ತಡೆದನು. ಅರ್ಜುನನಿಂದ ತಡೆಯಲ್ಪಟ್ಟ ಶೋಭಾಯಮಾನವಾಗಿದ್ದ ಆ ಶ್ರೇಷ್ಠವಾದ ಆನೆಯು ಬಾಣಗಳಿಂದ ಚುಚ್ಚಲ್ಪಟ್ಟ ಅಂಗಾಂಗವುಳ್ಳದ್ದಾಗಿ ಎದ್ದುನಿಂತ ಮುಳ್ಳುಗಳುಳ್ಳ ಮುಳ್ಳುಹಂದಿಯಂತೆ ನಿಂತಿದ್ದಿತು. ಅರ್ಜುನನು ಬಾಣಗಳ ಪ್ರಹಾರದಿಂದ ತನ್ನ ಮಹಾಗಜವನ್ನು ತಡೆದುದನ್ನು ನೋಡಿ ವಜ್ರದತ್ತನು ಕ್ರೋಧಮೂರ್ಛಿತನಾಗಿ ಚೂಪಾದ ಬಾಣಗಳನ್ನು ಅರ್ಜುನನ ಮೇಲೆ ಪ್ರಯೋಗಿಸಿದನು. ಮಹಾಬಾಹುವಾದ ಅರ್ಜುನನಾದರೋ ಶತ್ರುಗಳಿಗೆ ಘಾಸಿಯನ್ನುಂಟುಮಾಡುವ ಬಾಣಗಳಿಂದ ವಜ್ರದತ್ತನು ಬಿಟ್ಟ ಎಲ್ಲ ಬಾಣಗಳನ್ನೂ ತಡೆದುಬಿಟ್ಟನು. ಅರ್ಜುನನ ಆ ಬಾಣಪ್ರಯೋಗಕೌಶಲ್ಯವು ಪರಮಾದ್ಭುತವಾಗಿದ್ದಿತು. ಪ್ರಾಗ್ಜ್ಯೋತಿಷರ ರಾಜನಾದ ವಜ್ರದತ್ತನು ಅದರಿಂದ ಪರಮಕ್ರುದ್ಧನಾಗಿ ಪುನಃ ಪರ್ವತೋಪಮವಾಗಿದ್ದ ಮಹಾಗಜವನ್ನು ಬಲಪೂರ್ವಕವಾಗಿ ಅರ್ಜುನನ ಮೇಲೆ ನುಗ್ಗಿಸಿದನು. ಪಾಕಶಾಸನಿಯು ಮಹಾಗಜವು ತನ್ನ ಮೇಲೆ ಎರಗಿ ಬೀಳುತ್ತಿರುವುದನ್ನು ನೋಡಿ ಅಗ್ನಿಸದೃಶವಾದ ಒಂದು ಬಾಣವನ್ನು ಆನೆಯ ಮೇಲೆ ಬಲಪೂರ್ವಕವಾಗಿ ಪ್ರಯೋಗಿಸಿದನು. ಆ ಬಾಣವು ಮಹಾಗಜದ ಮರ್ಮಸ್ಥಳದಲ್ಲಿ ಹೊಕ್ಕಿತು.

ಒಡನೆಯೇ ಮಹಾಗಜವು ವಜ್ರಾಯುಧದಿಂದ ಪ್ರಹೃತವಾದ ಪರ್ವತದಂತೆ ಭೂಮಿಯ ಮೇಲೆ ಬಿದ್ದಿತು. ಧನಂಜಯನ ಬಾಣದಿಂದ ಗಾಯಗೊಂಡು ನೆಲದ ಮೇಲೆ ಬೀಳುತ್ತಿದ್ದ ಆ ಆನೆಯು ವಜ್ರಾಯುಧದಿಂದ ಪೀಡಿಸಲ್ಪಟ್ಟು ಭೂಮಿಯೊಳಗೆ ಕುಸಿಯುತ್ತಿರುವ ಪರ್ವತದಂತೆಯೇ ಕಾಣುತ್ತಿದ್ದಿತು. ಆನೆಯೊಂದಿಗೆ ವಜ್ರದತ್ತನೂ ಕೆಳಕ್ಕೆ ಬಿದ್ದನು. ಆ ಸಮಯದಲ್ಲಿ ಅರ್ಜುನನು ಅವನಿಗೆ ಆಶ್ವಾಸನೆಯನ್ನು ನೀಡುತ್ತಾ 'ನ ಭೇತವ್ಯಂ ನ ಭೇತವ್ಯಂ' 'ಭಯಪಡುವ ಕಾರಣವಿಲ್ಲ!'–ಎಂದು ಕೂಗಿ ಹೇಳಿದನು.

"ರಾಜಕುಮಾರ! ಕುದುರೆಯ ಹಿಂದೆ ಅದರ ರಕ್ಷಣೆಗಾಗಿ ಹೊರಟ ನನಗೆ ಯುಧಿಷ್ಠಿರನು–

ರಾಜಾನಸ್ತೇ ನ ಹನ್ತವ್ಯಾ ಧನಂಜಯ ಕಥಂಚನ ॥೨೧॥

'ಧನಂಜಯ! ರಾಜರನ್ನು ನೀನು ಯಾವುದೇ ಕಾರಣದಿಂದಲೂ ಸಂಹರಿಸಕೂಡದು-ಇಷ್ಟುಮಾತ್ರದಿಂದ ಎಲ್ಲವನ್ನೂ ಮಾಡಿದಂತಾಯಿತು. ಯುದ್ಧದಲ್ಲಿ ಯಾವ ಯೋಧರನ್ನೂ ಸಂಹರಿಸಬಾರದು'–ಎಂದು ಹೇಳಿರುವನು.

ಸುಹೃದರೊಡನೆ ಯುಧಿಷ್ಠಿರನು ಮಾಡಲಿರುವ ಅಶ್ವಮೇಧಯಾಗಕ್ಕೆ ಬಂದು ಆ ಮಹೋತ್ಸವದಲ್ಲಿ ಪಾಲುಗೊಂಡು ಆನಂದವನ್ನು ಅನುಭವಿಸಬೇಕೆಂದು ಎಲ್ಲ ರಾಜರಿಗೂ ಹೇಳುವಂತೆಯೂ-ಹೇಳಿರುವನು.

ರಾಜಕುಮಾರ! ನನ್ನ ಅಣ್ಣನು ಹೇಳಿರುವ ಆ ಮಾತನ್ನು ಕೇಳಿರುವ ನಾನು ಅವನ ಅಭಿಪ್ರಾಯಕ್ಕೆ ಅನುಸಾರವಾಗಿ ನಿನ್ನನ್ನು ಕೊಲ್ಲುವುದಿಲ್ಲ. ಎದ್ದೇಳು! ನಿನಗೆ ಯಾವ ಭಯವೂ ಇಲ್ಲ. ಕುಶಲಿಯಾಗಿ ಮುಂಬರುವ ಚೈತ್ರಮಾಸದ ಶ್ರೇಷ್ಠವಾದ ಹುಣ್ಣಿಮೆಯಂದು ನೀನು ಹಸ್ತಿನಾಪುರಕ್ಕೆ ಬರಬೇಕು. ಆ ದಿನ ಧೀಮಂತನಾದ ಯುಧಿಷ್ಠಿರನ ಅಶ್ವಮೇಧಯಾಗವು ಪ್ರಾರಂಭವಾಗುತ್ತದೆ."

ಜನಮೇಜಯ! ಅರ್ಜುನನು ಹೀಗೆ ಹೇಳಲು ಪರಾಜಿತನಾದ ವಜ್ರದತ್ತನು 'ತಥಾಸ್ತು' 'ಹಾಗೆಯೇ ಆಗಲಿ'–ಎಂದು ಪ್ರತ್ಯುತ್ತರವನ್ನಿತ್ತನು.

ಅಲ್ಲಿ ೭೬ನೆಯ ಅಧ್ಯಾಯವು ಮುಗಿಯಿತು.

೭೭ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಸೈಂಧವರೊಡನೆ ಅರ್ಜುನನ ಯುದ್ಧ

ವೈಶಂಪಾಯನರು ಹೇಳುತ್ತಾರೆ:

ಸೈನ್ಧವೈರಭವದ್ಯುದ್ಧಂ ತತಸ್ತಸ್ಯ ಕಿರೀಟಿನಃ ।
ಹತಶೇಷೈರ್ಮಹಾರಾಜ ಹತಾನಾಂ ಚ ಸುತೈರಪಿ ॥೧॥

ಪಾರಿಕ್ಷಿತನೇ! ಪ್ರಾಗ್ಜ್ಯೋತಿಷಪುರದಿಂದ ಹೊರಟ ಕುದುರೆಯು ಯಥೇಚ್ಛವಾಗಿ ಸಂಚರಿಸುತ್ತಾ ಸಿಂಧೂದೇಶಕ್ಕೆ ಹೋಯಿತು. ಅಲ್ಲಿಯೂ ಕೂಡ ಸೈಂಧವರು ಕುದುರೆಯನ್ನು ಕಟ್ಟಿಹಾಕಿದರು. ಅದರ ಪರಿಣಾಮವಾಗಿ ಭಾರತಯುದ್ಧದಲ್ಲಿ ಅಳಿದುಳಿದಿದ್ದ ಕ್ಷತ್ರಿಯರಿಗೂ ಮತ್ತು ಅಲ್ಲಿ ಸಾವನ್ನಪ್ಪಿದ ಕ್ಷತ್ರಿಯರ ಮಕ್ಕಳಿಗೂ ಅರ್ಜುನನೊಡನೆ ಯುದ್ಧವು ನಡೆಯಿತು.

ಯಜ್ಞದ ಕುದುರೆಯೂ ಮತ್ತು ಅರ್ಜುನನೂ ತಮ್ಮ ರಾಜ್ಯಕ್ಕೆ ಬಂದಿರುವರೆಂಬುದನ್ನು ತಿಳಿದು ಸಿಂಧುದೇಶದ ಕ್ಷತ್ರಿಯರು ಅಸಹನೆಯಿಂದ ಕೂಡಿದವರಾಗಿ ಪಾರ್ಥನನ್ನು ಎದುರಿಸಲು ಧಾವಿಸಿದರು. ವಿಷಕ್ಕೆ ಸಮಾನ ರಾಗಿ ಭಯಂಕರರಾಗಿದ್ದ ಆ ಕ್ಷತ್ರಿಯರು ಯಜ್ಞಾಶ್ವವನ್ನು ಬಂಧಿಸಿದರು. ಭೀಮನ ತಮ್ಮನಾದ ಅರ್ಜುನನಿಗೆ ಸ್ವಲ್ಪವಾದರೂ ಅವರು ಭಯಪಡಲಿಲ್ಲ. ಯಜ್ಞದ ಕುದುರೆಗೆ ಸ್ವಲ್ಪದೂರದಲ್ಲಿಯೇ ಧನುಸ್ಸನ್ನು ಹಿಡಿದು ನೆಲದ ಮೇಲೆ ನಿಂತಿದ್ದ ಅರ್ಜುನನಿಂದಲೇ ಯುದ್ಧದಲ್ಲಿ ಪರಾಜಿತರಾಗಿದ್ದ ಮಹಾವೀರ್ಯರಾದ ಆ ರಾಜರು ಅವನನ್ನು ಈಗಲಾದರೂ ಜಯಿಸಬೇಕೆನ್ನುವ ಅಭಿಲಾಷೆಯಿಂದ ಸುತ್ತುವರಿದು ನಿಂತರು. ಆ ಸೈಂಧವರಾಜರು ತಮ್ಮ ನಾಮ-ಗೋತ್ರಗಳನ್ನೂ ತಾವು ಮಾಡಿರುವ ನಾನಾಪ್ರಕಾರವಾದ ಸಾಹಸಕರ್ಮಗಳನ್ನೂ ಹೇಳಿಕೊಳ್ಳುತ್ತಾ ಅರ್ಜುನನನ್ನು ಬಾಣಗಳಿಂದ ಮುಚ್ಚಿಬಿಟ್ಟರು. ಆನೆಗಳನ್ನು ತಡೆದು ನಿಲ್ಲಿಸಲು ಸಮರ್ಥವಾದ ಬಾಣಗಳನ್ನು ಬಿಡುತ್ತಾ ವಿಜಯೇಚ್ಛುಗಳಾದ ಸೈಂಧವರು ಅರ್ಜುನನನ್ನು ಮುತ್ತಿದರು. ಯುದ್ಧದಲ್ಲಿ ಭಯಂಕರವಾದ ಕರ್ಮವನ್ನು ಮಾಡುವ ಅರ್ಜುನನು ತಮ್ಮ ಮುಂದೆ ಪದಾತಿಯಾಗಿ ನಿಂತಿರುವುದನ್ನು ಕಂಡು ರಥಸ್ಥರಾಗಿದ್ದ ಎಲ್ಲ

ಸೈಂಧವರೂ ಅವನೊಡನೆ ಯುದ್ಧದಲ್ಲಿ ತೊಡಗಿದರು. ನಿವಾತಕವಚರಿಗೆ ಯಮಪ್ರಾಯನಾಗಿದ್ದ, ಸಂಶಪ್ತಕರೆಲ್ಲರನ್ನೂ ಸಂಹರಿಸಿದ, ಸೈಂಧವನ ಹಂತಕನಾದ, ವೀರನಾದ ಆ ಅರ್ಜುನನನ್ನು ಎಲ್ಲ ಸೈಂಧವವೀರರೂ ಎಲ್ಲ ಕಡೆಗಳಿಂದಲೂ ಬಾಣಗಳಿಂದ ಪ್ರಹರಿಸತೊಡಗಿದರು. ಸಾವಿರ ರಥಸೈನ್ಯ ದಿಂದಲೂ ಹತ್ತುಸಾವಿರ ಅಶ್ವಸೈನ್ಯದಿಂದಲೂ ಯುಕ್ತರಾಗಿದ್ದ ಸೈಂಧವಕ್ಷತ್ರಿ ಯರು ಅರ್ಜುನನನ್ನು ಮಧ್ಯದಲ್ಲಿ ಸೇರಿಸಿಕೊಂಡು (ಏಕಾಕಿಯಾದ ಮತ್ತು ಪದಾತಿಯಾಗಿರುವ ಅರ್ಜುನನನ್ನು ಜಯಿಸಿಯೇ ತೀರುವೆವೆಂಬ ವಿಶ್ವಾಸ ದಿಂದ) ಸಂತುಷ್ಟವಾದ ಮನಸ್ಸುಳ್ಳವರಾಗಿದ್ದರು. ಹಿಂದೆ ನಡೆದ ಭಾರತ ಯುದ್ಧದಲ್ಲಿ ಸವ್ಯಸಾಚಿಯು ಸಿಂಧುರಾಜನಾದ ಜಯದ್ರಥನನ್ನು ಸಂಹರಿಸಿದುದನ್ನು ಸ್ಮರಿಸುತ್ತಾ ಸೈಂಧವಕ್ಷತ್ರಿಯರು ಮೇಘದಂತೆ ಅರ್ಜುನನ ಮೇಲೆ ಬಾಣಗಳ ಮಳೆಗರೆದರು. ಅವರು ಬಿಟ್ಟ ಬಾಣಗಳಿಂದ ಆಚ್ಛಾದಿತ ನಾದ ಅರ್ಜುನನು ಮೋಡಗಳ ಮಧ್ಯದಲ್ಲಿರುವ ಸೂರ್ಯನಂತೆಯೇ ಪ್ರಕಾಶಿಸುತ್ತಿದ್ದನು. ಬಾಣಗಳಿಂದ ಆಚ್ಛಾದಿತನಾಗಿದ್ದ ಪಾಂಡವಶ್ರೇಷ್ಠನಾದ ಅರ್ಜುನನು ಆ ಸಮಯದಲ್ಲಿ ಪಂಜರದೊಳಗಿರುವ ಪಕ್ಷಿಯಂತೆಯೇ ಕಾಣುತ್ತಿದ್ದನು. ಹೀಗೆ ಅರ್ಜುನನು ಬಾಣಗಳಿಂದ ಪೀಡಿಸಲ್ಪಡುತ್ತಿರಲಾಗಿ ಮೂರು ಲೋಕಗಳಲ್ಲಿಯೂ ಹಾಹಾಕಾರವುಂಟಾಯಿತು. ಸೂರ್ಯನೂ ಪ್ರಭೆಯಿಂದ ರಹಿತನಾದನು. ಆ ಸಮಯದಲ್ಲಿ ರೋಮಾಂಚಕರವಾದ ಚಂಡಮಾರುತವು ಬೀಸತೊಡಗಿತು. ರಾಹುವು ಸೂರ್ಯ-ಚಂದ್ರರಿಬ್ಬರನ್ನೂ ಏಕಕಾಲದಲ್ಲಿ ನುಂಗಿದನು. ಎಲ್ಲ ಕಡೆಗಳಲ್ಲಿಯೂ ಬೀಳುತ್ತಿದ್ದ ಉಲ್ಕೆಗಳು ಸೂರ್ಯನ ಮೇಲೂ ಬೀಳುತ್ತಿದ್ದುವು. ಕೈಲಾಸಮಹಾಪರ್ವತವೂ ನಡುಗತೊಡಗಿತು. ಅರ್ಜುನನಿಗುಂಟಾದ ಆ ದುಃಸ್ಥಿತಿಯನ್ನು ನೋಡಿ ಸಪ್ತರ್ಷಿಗಳೂ ಭಯಗೊಂಡರು. ದುಃಖ-ಶೋಕಗಳಿಂದ ಯುಕ್ತರಾಗಿದ್ದ ಅವರು ಬಿಸಿ-ಬಿಸಿಯಾದ ನಿಟ್ಟುಸಿರು ಬಿಡುತ್ತಿದ್ದರು. ಉಲ್ಕೆಗಳು ಚಂದ್ರನಲ್ಲಿದ್ದ ಮೊಲವನ್ನೂ ಭೇದಿಸಿಕೊಂಡು ಚಂದ್ರಮಂಡಲದ ಸುತ್ತಲೂ ಬೀಳತೊಡಗಿದುವು. ಹೊಗೆಯಿಂದ ವ್ಯಾಪ್ತವಾಗಿದ್ದ ಎಲ್ಲ ದಿಕ್ಕುಗಳೂ ವಿಪರೀತವಾಗಿ ಕಾಣುತ್ತಿದ್ದುವು. ಕತ್ತೆಯ ಬಣ್ಣ ಮತ್ತು ಎಣ್ಣೆಗೆಂಪಿನ ಬಣ್ಣ

ಇವುಗಳ ಸಮ್ಮಿಶ್ರದಿಂದ ಉಂಟಾದ ಬಣ್ಣವುಳ್ಳ, ಕಾಮನ ಬಿಲ್ಲುಗಳಿಂದ ಕೂಡಿದ್ದ, ಮಿಂಚಿನಿಂದ ಯುಕ್ತವಾಗಿದ್ದ ಮೇಘಗಳು ಆಕಾಶದಲ್ಲಿ ವ್ಯಾಪಿಸಿ ರಕ್ತ-ಮಾಂಸಗಳನ್ನು ಸುರಿಸತೊಡಗಿದುವು.

ಜನಮೇಜಯ! ಅರ್ಜುನನು ಶತ್ರುಗಳು ಬಿಟ್ಟ ಬಾಣಗಳಿಂದ ಆಚ್ಛಾದಿತನಾಗಿರಲಾಗಿ, ಇಂತಹ ಉತ್ಪಾತಗಳು ಕಾಣಿಸಿಕೊಂಡುವು. ಅದೊಂದು ಪರಮಾದ್ಭುತವಾಗಿ ಕಾಣುತ್ತಿದ್ದಿತು. ಎಲ್ಲ ಕಡೆಗಳಿಂದಲೂ ಬಾಣಗಳ ಸಮೂಹದಿಂದ ಸುತ್ತುವರಿಯಲ್ಪಟ್ಟಿದ್ದ ಅರ್ಜುನನು ವಿಮೋಹಿತನಾದನು. ಅವನ ಕೈಯಿಂದ ಗಾಂಡೀವವೂ ಮತ್ತು ಕೈಚೀಲವೂ ಜಾರಿಬಿದ್ದುವು. ಹೀಗೆ ಮಹಾರಥನಾದ ಅರ್ಜುನನು ಮೂರ್ಛಿತನಾಗಿದ್ದರೂ ಸೈಂಧವರು ಬಾಣಗಳನ್ನು ಸುರಿಸುತ್ತಲೇ ಇದ್ದರು.

ದೇವತೆಗಳು ಅರ್ಜುನನು ಮೂರ್ಛೆಹೊಂದಿರುವನೆಂಬುದನ್ನು ತಿಳಿದು ಭಯಗೊಂಡ ಮನಸ್ಸುಳ್ಳವರಾದರು. ಅರ್ಜುನನಿಗೆ ಪ್ರಾಪ್ತವಾದ ಆಪತ್ತಿನ ನಿವಾರಣೆಗಾಗಿ ಶಾಂತಿಕರ್ಮವನ್ನು ಸಮಾಲೋಚಿಸಿದರು. ದೇವತೆಗಳ ಸಲಹೆಯಂತೆ ಎಲ್ಲ ದೇವರ್ಷಿಗಳೂ, ಸಪ್ತರ್ಷಿಗಳೂ ಮತ್ತು ಬ್ರಹ್ಮರ್ಷಿಗಳೂ ಧೀಮಂತನಾದ ಪಾರ್ಥನ ವಿಜಯಕ್ಕಾಗಿ ಮಹಾಮಂತ್ರಗಳನ್ನು ಜಪಿಸತೊಡಗಿದರು. ದೇವತೆಗಳ ಪ್ರಯತ್ನದಿಂದಾಗಿ ಅರ್ಜುನನ ತೇಜಸ್ಸು ಪುನಃ ಉದ್ದೀಪನಗೊಂಡಿತು. ಮರುಕ್ಷಣದಲ್ಲಿಯೇ ಶ್ರೇಷ್ಠವಾದ ಅಸ್ತ್ರಗಳನ್ನು ತಿಳಿದಿದ್ದ ಧೀಮಂತನಾದ ಅರ್ಜುನನು ರಣಾಂಗಣದಲ್ಲಿ ಪರ್ವತದಂತೆ ಸುಸ್ಥಿರವಾಗಿ ನಿಂತನು. ದಿವ್ಯವಾದ ಗಾಂಡೀವಧನುಸ್ಸಿನ ಶಿಂಜಿನಿಯನ್ನು ಪುನಃ ಪುನಃ ಸೆಳೆದುಬಿಡುತ್ತಾ ಟೇಂಕರಿಸುತ್ತಿರುವಾಗ ಆ ಶಬ್ದವು ಯಂತ್ರದ ಶಬ್ದದಂತೆ ಗಟ್ಟಿಯಾಗಿ ಸರ್ವತ್ರ ಕೇಳಿಸುತ್ತಿದ್ದಿತು. ಬಳಿಕ ಅರ್ಜುನನು ಇಂದ್ರನು ಮಳೆಗರೆಯುವಂತೆ ಗಾಂಡೀವಧನುಸ್ಸಿನ ಮೂಲಕವಾಗಿ ಬಾಣಗಳ ಮಳೆಯನ್ನೇ ಶತ್ರುಗಳ ಮೇಲೆ ಸುರಿಸಿದನು. ಪತಂಗಗಳಿಂದ ಆವೃತವಾದ ವೃಕ್ಷಗಳಂತೆ ಪಾರ್ಥನ ಬಾಣಗಳಿಂದ ವ್ಯಾಪ್ತರಾದ ರಾಜಸಹಿತರಾದ ಎಲ್ಲ ಸೈಂಧವಯೋಧರೂ ಅದೃಶ್ಯರಾದರು. ಅನವರತವಾಗಿ ಕೇಳಿಬರುತ್ತಿದ್ದ ಗಾಂಡೀವಧನುಸ್ಸಿನ ಟೇಂಕಾರಶಬ್ದದಿಂದ ಸೈಂಧವ

ಕ್ಷತ್ರಿಯರು ಭಯಗೊಂಡರು. ಕೆಲವರು ಭಯಪೀಡಿತರಾಗಿ ಓಡಿಹೋದರು. ಮತ್ತೆ ಕೆಲವರು ಶೋಕಪೀಡಿತರಾಗಿ ಕಣ್ಣೀರು ಸುರಿಸಿದರು. ಹೀಗೆ ಎಲ್ಲರೂ ದುಃಖಿತರಾದರು. ಮಹಾಬಲಿಷ್ಠನಾದ ಪುರುಷಸಿಂಹನಾದ ಅರ್ಜುನನು ಪಂಜಿನ ಚಕ್ರದಂತೆ ಸರ್ವತ್ರ ಸಂಚರಿಸುತ್ತಾ ಸೈಂಧವರ ಮೇಲೆ ಬಾಣಗಳ ಸಮೂಹವನ್ನೇ ಪುಂಖಾನುಪುಂಖವಾಗಿ ಬಿಡುತ್ತಿದ್ದನು. ಶತ್ರುಸೂದನನಾದ ಅರ್ಜುನನು ವಜ್ರಧರನಾದ ಮಹೇಂದ್ರನಂತೆ ಎಲ್ಲ ದಿಕ್ಕುಗಳಲ್ಲಿಯೂ ಇಂದ್ರಜಾಲಸದೃಶವಾದ ಬಾಣಜಾಲವನ್ನು ಸುರಿಸುತ್ತಿದ್ದನು. ಶರತ್ಕಾಲದಲ್ಲಿ ಮೇಘಗಳ ಸಮೂಹವನ್ನು ಛಿನ್ನ-ಭಿನ್ನಗೊಳಿಸುವ ಸೂರ್ಯನಂತೆ ಮೇಘಗಳ ಸಮೂಹಕ್ಕೆ ಸಮಾನವಾಗಿದ್ದ ಸೈಂಧವಸೈನ್ಯವನ್ನು ಬಾಣಗಳ ವೃಷ್ಟಿಯಿಂದ ಛಿನ್ನ-ಭಿನ್ನಗೊಳಿಸಿ ಕುರುಶ್ರೇಷ್ಠನಾದ ಅರ್ಜುನನು ಪ್ರಕಾಶಿಸಿದನು.

೭೭ನೆಯ ಅಧ್ಯಾಯವು ಮುಗಿಯಿತು.

೭೮ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಅರ್ಜುನ-ಸೈಂಧವರ ಯುದ್ಧ: ದುಃಶಲೆಯ ಕೋರಿಕೆಯಂತೆ ಯುದ್ಧದ ಪರಿಸಮಾಪ್ತಿ

ವೈಶಂಪಾಯನರು ಹೇಳುತ್ತಾರೆ:

ತತೋ ಗಾಣ್ಡೀವಭೃಚ್ಛೂರೋ ಯುದ್ಧಾಯ ಸಮುಪಸ್ಥಿತಃ ।
ವಿಬಭೌ ಯುಧಿ ದುರ್ಧರ್ಷೋ ಹಿಮವಾನಚಲೋ ಯಥಾ ॥೧॥

ಜನಮೇಜಯ! ಯುದ್ಧಸನ್ನದ್ಧನಾಗಿದ್ದ, ಗಾಂಡೀವಧರನಾದ, ಶೂರನಾದ, ಶತ್ರುಗಳಿಂದ ಎದುರಿಸಲು ಅಸಾಧ್ಯನಾದ ಅರ್ಜುನನು ರಣಾಂಗಣದಲ್ಲಿ ಅಚಲನಾದ ಹಿಮವಂತನಂತೆಯೇ ಪ್ರಕಾಶಿಸುತ್ತಿದ್ದನು.

ಬಹಳವಾಗಿ ಕೋಪಗೊಂಡಿದ್ದ ಸೈಂಧವಯೋಧರು ಪುನಃ ಸಂಘಟಿತ ರಾಗಿ ಅರ್ಜುನನನ್ನು ಎದುರಿಸಿ ಅವನ ಮೇಲೆ ಬಾಣಗಳ ಮಳೆಗರೆದರು. ಸೈಂಧವವೀರರು ಯುದ್ಧದಲ್ಲಿ ಮರಣಹೊಂದುವ ಆಶೆಯಿಂದ ಪುನಃ ಸಂಘಟಿತರಾಗಿ ಬಂದು ತನ್ನ ಮೇಲೆ ಬಾಣಬಿಡುತ್ತಿರುವುದನ್ನು ನೋಡಿ

ಅರ್ಜುನನು ಗಟ್ಟಿಯಾಗಿ ನಗುತ್ತಾ ಸುಮಧುರವಾದ ಈ ಮಾತುಗಳನ್ನು ಹೇಳಿದನು:

ಯುಧ್ಯಧ್ವಂ ಪರಯಾ ಶಕ್ತ್ಯಾ ಯತಧ್ವಂ ವಿಜಯೇ ಮಮ ।
ಕುರುಧ್ವಂ ಸರ್ವಕಾರ್ಯಾಣಿ ಮಹದ್ವೋ ಭಯಮಾಗತಮ್ ॥೪॥

ಏಷ ಯೋತ್ಸ್ಯಾಮಿ ಸರ್ವಾಂಸ್ತು ನಿವಾರ್ಯ ಶರವಾಗುರಾಮ್ ।
ತಿಷ್ಠಧ್ವಂ ಯುದ್ಧಮನಸೋ ದರ್ಪಂ ಶಮಯಿತಾಸ್ಮಿ ವಃ ॥೫॥

"ಸೈಂಧವವೀರರೇ! ನಿಮ್ಮಲ್ಲಿರುವ ಶಕ್ತಿಯೆಲ್ಲವನ್ನೂ ಯೋಜಿಸಿ ನನ್ನೊಡನೆ ಯುದ್ಧಮಾಡಿರಿ. ನನ್ನನ್ನು ಜಯಿಸುವ ಸಲುವಾಗಿ ಪೂರ್ಣಪ್ರಯತ್ನವನ್ನೂ ಮಾಡಿರಿ. ಆದರೆ ನೀವು ಯುದ್ಧಕ್ಕೆ ತೊಡಗುವ ಮೊದಲು ಮಾಡಬೇಕಾಗಿರುವ ಕಾರ್ಯಗಳೆಲ್ಲವನ್ನೂ ಪೂರ್ಣಗೊಳಿಸಿ ಬನ್ನಿರಿ. ಏಕೆಂದರೆ. ನಿಮಗೀಗ ಪ್ರಾಣಭಯವು ಸನ್ನಿಹಿತವಾಗಿದೆ. ನೀವು ಬಿಟ್ಟಿರುವ ಬಾಣಗಳ ಜಾಲಗಳೆಲ್ಲವನ್ನೂ ಕ್ಷಣಮಾತ್ರದಲ್ಲಿ ತುಂಡರಿಸಿ ನಿಮ್ಮೊಡನೆ ಯುದ್ಧಮಾಡುತ್ತೇನೆ. ಯುದ್ಧಮಾಡುವ ಮನಸ್ಸಿನಿಂದ ನಿಲ್ಲಿರಿ. ನಾನು ನಿಮ್ಮೆಲ್ಲರ ದರ್ಪವನ್ನೂ ಕ್ಷಣಮಾತ್ರದಲ್ಲಿ ಉಪಶಮನಗೊಳಿಸುತ್ತೇನೆ."

ಗಾಂಡೀವಧರನಾದ ಅರ್ಜುನನು ಕೋಪದಿಂದಲೇ ಹೀಗೆ ಹೇಳಿ ಯುದ್ಧಕ್ಕೆ ಸಜ್ಜಾಗಿ ನಿಂತನು. ಆದರೆ ಮರುಕ್ಷಣದಲ್ಲಿಯೇ ಅವನಿಗೆ ಧರ್ಮಾತ್ಮನಾದ ಅಣ್ಣನು ಹೇಳಿದ್ದ 'ನ ಹನ್ತವ್ಯಾ ರಣೇ ತಾತ ಕ್ಷತ್ರಿಯಾ ವಿಜಿಗೀಷವಃ, ಜೇತವ್ಯಾಃ'–'ಮಗು! ಯುದ್ಧದಲ್ಲಿ ವಿಜಯೇಚ್ಛುಗಳಾದ ಕ್ಷತ್ರಿಯರನ್ನು ಕೊಲ್ಲಬಾರದು; ಜಯಿಸಬೇಕು'–ಎಂಬ ಮಾತು ನೆನಪಿಗೆ ಬಂದಿತು. ಪುರುಷಶ್ರೇಷ್ಠನಾದ ಅರ್ಜುನನು ಅದನ್ನೇ ಚಿಂತಿಸತೊಡಗಿದನು. 'ರಾಜನೇನೋ ಯುದ್ಧಕ್ಕೆ ಬರುವ ರಾಜರನ್ನು ಸಂಹರಿಸಬಾರದೆಂದು ಹೇಳಿರುವನು. ಧರ್ಮಜನ ಆ ಶುಭವಾಕ್ಯವು ಸುಳ್ಳಾಗದಂತೆ ನಾನು ಹೇಗೆ ವರ್ತಿಸಲಿ? ಯುಧಿಷ್ಠಿರನ ಮಾತಿನಂತೆ ರಾಜರನ್ನು ಸಂಹರಿಸಬಾರದು. ಆದರೆ ಕುದುರೆಯನ್ನು ರಕ್ಷಿಸಿಕೊಂಡು ಬರಬೇಕೆಂಬ ಅವನ ಆಜ್ಞೆಯನ್ನೂ ಪರಿಪಾಲಿಸಬೇಕು. ಇದನ್ನು ಹೇಗೆ ಸಾಧಿಸಲಿ?'–ಹೀಗೆ ಮುಹೂರ್ತಕಾಲ

ಯೋಚಿಸಿ ಪುರುಷಶ್ರೇಷ್ಠನಾದ ಅರ್ಜುನನು ಯುದ್ಧದುರ್ಮದರಾದ ಸೈಂಧವರನ್ನು ಕುರಿತು ಹೇಳಿದನು:

ಶ್ರೇಯೋ ವದಾಮಿ ಯುಷ್ಮಾಕಂ ನ ಹಿಂಸೇಯಮವಸ್ಥಿತಾನ್।
ಯಶ್ಚ ವಕ್ಷ್ಯತಿ ಸಂಗ್ರಾಮೇ ತವಾಸ್ಮೀತಿ ಪರಾಜಿತಃ।
ಏತಚ್ಛ್ರುತ್ವಾ ವಚೋ ಮಹ್ಯಂ ಕುರುಧ್ವಂ ಹಿತಮಾತ್ಮನಃ ॥೧೧॥

"ಸೈಂಧವವೀರರೇ! ಶ್ರೇಯಸ್ಕರವಾದ ಮಾತೊಂದನ್ನು ನಿಮಗೆ ಹೇಳುತ್ತೇನೆ. ಈ ರಣಾಂಗಣದಲ್ಲಿ ಯಾವನು–'ನಾನು ಪರಾಜಿತನಾಗಿದ್ದೇನೆ; ನಿನ್ನವನಾಗಿದ್ದೇನೆ (ನಿನ್ನ ಅಧೀನನಾಗಿದ್ದೇನೆ)'–ಎಂದು ಹೇಳುವನೋ ಅವನು ನನ್ನೆದುರಿನಲ್ಲಿ ನಿಂತಿದ್ದರೂ ನಾನವನನ್ನು ಹಿಂಸಿಸುವುದಿಲ್ಲ. (ಅವನ ಮೇಲೆ ಬಾಣಪ್ರಯೋಗಮಾಡುವುದಿಲ್ಲ.) ಈ ನನ್ನ ಮಾತನ್ನು ಕೇಳಿದನಂತರ ನಿಮಗೆ ಯಾವುದು ಹಿತಕರವೋ ಅದನ್ನು ಮಾಡಿರಿ.

ತತೋಽನ್ಯಥಾ ಕೃಚ್ಛ್ರಗತಾ ಭವಿಷ್ಯಥ ಮಯಾರ್ದಿತಾಃ।

ಒಂದು ವೇಳೆ ನೀವು ನಾನು ಹೇಳಿದಂತೆ ಮಾಡದೇ ಯುದ್ಧವನ್ನೇ ಮುಂದುವರಿಸಿದರೆ ನನ್ನಿಂದ ಮರ್ದಿಸಲ್ಪಡುವ ನೀವು ಮಹಾಸಂಕಟಕ್ಕೀಡಾಗುವಿರಿ."

ಅರ್ಜುನನು ಹೀಗೆ ಹೇಳಿ ಅವರ ಪ್ರತಿಕ್ರಿಯೆಯನ್ನು ವೀಕ್ಷಿಸಿದನು. (ಆದರೆ ಸೈಂಧವವೀರರಲ್ಲಿ ಯಾವನೊಬ್ಬನೂ ಅರ್ಜುನನು ಹೇಳಿದಂತೆ ಶರಣಾಗತನಾಗಲು ಮುಂದೆ ಬರಲಿಲ್ಲ.) ಅದರಿಂದ ಅತಿಕ್ರುದ್ಧನಾದ ಅರ್ಜುನನು ಅವನಂತೆಯೇ ಅತಿಕ್ರುದ್ಧರಾಗಿದ್ದ, ವಿಜಯಗಳಿಸುವ ಆಸೆಯನ್ನು ಹೊಂದಿದ್ದ ಸೈಂಧವವೀರರೊಡನೆ ಯುದ್ಧಮಾಡಲು ಉಪಕ್ರಮಿಸಿದನು. ಆ ಸಮಯದಲ್ಲಿ ಸೈಂಧವರು ಬಗ್ಗಿದ ಗಿಣ್ಣುಗಳಿಂದ ಕೂಡಿದ್ದ ಒಂದು ಕೋಟಿ (ಅಸಂಖ್ಯಾತ) ಬಾಣಗಳನ್ನು ಗಾಂಡೀವಧರನಾದ ಅರ್ಜುನನ ಮೇಲೆ ಸುರಿಸಿದರು. ವಿಷಸರ್ಪಗಳ ವಿಷಕ್ಕೆ ಸಮಾನವಾಗಿದ್ದ ಅತ್ಯಂತಕ್ರೂರವಾಗಿದ್ದ ಆ ಬಾಣಗಳು ತನ್ನ ಮೇಲೆ ರಭಸದಿಂದ ಬರುತ್ತಿರುವುದನ್ನು ಕಂಡು ಧನಂಜಯನು ನಿಶಿತವಾದ ಬಾಣಗಳಿಂದ ಮಧ್ಯದಲ್ಲಿಯೇ ಅವುಗಳೆಲ್ಲ ವನ್ನೂ ಕತ್ತರಿಸಿ ಹಾಕಿದನು. ಸಾಣೆಯ ಕಲ್ಲಿನಿಂದ ಹರಿತಗೊಳಿಸಿದ್ದ, ಹದ್ದಿನ

ರೆಕ್ಕೆಗಳನ್ನು ಹೊಂದಿದ್ದ, ಸೈಂಧವಯೋಧರಿಂದ ಬಿಡಲ್ಪಟ್ಟ ಬಾಣಗಳನ್ನು ತ್ವರೆಯಿಂದ ಕತ್ತರಿಸಿ ಸೈಂಧವರಲ್ಲಿ ಒಬ್ಬೊಬ್ಬ ಯೋಧನನ್ನೂ ನಿಶಿತವಾದ ಬಾಣಗಳಿಂದ ಗಾಯಗೊಳಿಸಿದನು. ಜಯದ್ರಥನು ಅರ್ಜುನನಿಂದಲೇ ಹತನಾದುದನ್ನು ಪುನಃ ಪುನಃ ಸ್ಮರಿಸಿಕೊಳ್ಳುತ್ತಾ ಸೈಂಧವರಾಜರು ಧನಂಜಯನ ಮೇಲೆ ಪ್ರಾಸಗಳನ್ನೂ ಶಕ್ತ್ಯಾಯುಧಗಳನ್ನೂ ಪುನಃ ಪುನಃ ಪ್ರಯೋಗಿಸುತ್ತಲೇ ಇದ್ದರು. ಪ್ರಾಸ-ಶಕ್ತ್ಯಾದಿ ಎಲ್ಲ ಆಯುಧಗಳನ್ನೂ ಅರ್ಜುನನು ಮಧ್ಯಮಾರ್ಗದಲ್ಲಿಯೇ ಕತ್ತರಿಸಿ ಗರ್ಜನೆಮಾಡಿದನು. ಹೀಗೆ ಜಯದ್ರಥಹಂತಕನನ್ನು ಸಂಹರಿಸಬೇಕೆನ್ನುವ ಸೈಂಧವರಾಜರ ಸಂಕಲ್ಪವನ್ನು ವಿಫಲಗೊಳಿಸಿದನು. ವಿಜಯವನ್ನು ಬಯಸಿ ತನ್ನನ್ನು ಆಕ್ರಮಿಸಲು ಮುನ್ನುಗ್ಗಿ ಬರುತ್ತಿದ್ದವರ ತಲೆಗಳನ್ನು ಬಗ್ಗಿದ ಗಿಣ್ಣುಗಳುಳ್ಳ ಭಲ್ಲಗಳೆಂಬ ಬಾಣಗಳಿಂದ ಕತ್ತರಿಸಿ ಹಾಕಿದನು. ಅದರಿಂದ ಭಯಗೊಂಡ ಅನೇಕ ಸೈಂಧವಯೋಧರು ಪಲಾಯನಮಾಡಿದರು. ಮತ್ತೆ ಕೆಲವರು ಪುನಃ ಸಂಘಟಿತರಾಗಿ ಪಾರ್ಥನೊಡನೆ ಯುದ್ಧಮಾಡಲು ಬರುತ್ತಿದ್ದರು. ಹೀಗೆ ಸೈಂಧವಯೋಧರ ಗಮನಾಗಮನಗಳ ಶಬ್ದವು ಪೂರ್ಣವಾದ ಸಮುದ್ರದ ಗಂಭೀರಧ್ವನಿಯನ್ನು ಅನುಕರಿಸುತ್ತಿದ್ದಿತು. ಮಹಾತೇಜಸ್ವಿಯಾದ ಅರ್ಜುನನಿಂದ ಸೈಂಧವಯೋಧರು ಅಪಾರಸಂಖ್ಯೆಯಲ್ಲಿ ಹತರಾಗುತ್ತಿದ್ದರೂ ಎದೆಗುಂದದೇ ಅಳಿದುಳಿದವರು ತಮ್ಮ ಬಲ ಮತ್ತು ಉತ್ಸಾಹಗಳಿಗೆ ಅನುಗುಣವಾಗಿ ಅರ್ಜುನನೊಡನೆ ಯುದ್ಧಮಾಡುತ್ತಲೇ ಇದ್ದರು. ಪುನಃ ಅರ್ಜುನನು ಬಗ್ಗಿದ ಗಿಣ್ಣುಗಳಿದ್ದ ಬಾಣಗಳ ಪ್ರಹಾರದಿಂದ ಸೈಂಧವವೀರರನ್ನು ಸಂಜ್ಞಾಹೀನರನ್ನಾಗಿ ಮಾಡಿದನು. ಅವರ ಸೈನಿಕರೂ ಮತ್ತು ವಾಹನಗಳೂ ಬಹಳವಾಗಿ ಬಳಲಿದುವು. ಸೈಂಧವವೀರರೆಲ್ಲರೂ ಬಹಳವಾಗಿ ದಣಿದಿರುವರೆಂಬುದನ್ನು ತಿಳಿದು ಧೃತರಾಷ್ಟ್ರನ ಮಗಳಾದ ದುಃಶಲೆಯು ಎಲ್ಲ ಯೋಧರೂ ಯುದ್ಧವನ್ನು ನಿಲ್ಲಿಸಿ ಶಾಂತರಾಗಲೆಂಬ ಅಭಿಲಾಷೆಯಿಂದ ಸುರಥನ ವೀರಪುತ್ರನಾದ ತನ್ನ ಮೊಮ್ಮಗನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಅರ್ಜುನನ ಬಳಿಗೆ ಬಂದಳು.

ದುಃಶಲೆಯು ಧನಂಜಯನ ಬಳಿಗೆ ಬಂದು ಆರ್ತಸ್ವರದಿಂದ ಅಳತೊಡಗಿದಳು. ಅವಳನ್ನು ನೋಡಿದೊಡನೆಯೇ ಅರ್ಜುನನು ಧನುಸ್ಸನ್ನು ತ್ಯಜಿಸಿ ಅಳುತ್ತಿದ್ದ ತಂಗಿಯನ್ನು ಯಥೋಚಿತವಾಗಿ ಸತ್ಕರಿಸಿ ಸಂತೈಸಿ 'ಕಿಂ

ಕರವಾಣಿ?'–'ನಾನು ನಿನಗಾಗಿ ಏನು ಮಾಡಲಿ?'–ಎಂದು ಪ್ರಶ್ನಿಸಿದನು. ಅದಕ್ಕುತ್ತರವಾಗಿ ದುಃಶಲೆಯು ಹೇಳಿದಳು:

ಏಷ ತೇ ಭರತಶ್ರೇಷ್ಠ ಸ್ವಸ್ರೀಯಸ್ಯಾತ್ಮಜಃ ಶಿಶುಃ।
ಅಭಿವಾದಯತೇ ಪಾರ್ಥ ತಂ ಪಶ್ಯ ಭರತರ್ಷಭ ॥೨೬॥



"ಪಾರ್ಥ! ಈ ಬಾಲಕನು ನಿನ್ನ ತಂಗಿಯ ಮಗನ ಮಗನು. ಇವನನ್ನು ನೋಡು. ಪುರುಷಶ್ರೇಷ್ಠನೇ! ಇವನು ನಿನಗೆ ಅಭಿವಾದನಮಾಡುತ್ತಿದ್ದಾನೆ."

ದುಃಶಲೆಯು ಹೀಗೆ ಹೇಳಲು ಅರ್ಜುನನು ಈ ಬಾಲಕನ ತಂದೆ

ಯಾದ ಸುರಥನೆಲ್ಲಿರುವನೆಂದು ದುಃಶಲೆಯನ್ನು ಪ್ರಶ್ನಿಸಿದನು. ಅದಕ್ಕುತ್ತರವಾಗಿ ದುಃಶಲೆಯು ಹೇಳಿದಳು:

“ಅರ್ಜುನ! ಈ ಬಾಲಕನ ತಂದೆಯಾದ ಸುರಥನು ಪಿತೃಶೋಕದಿಂದ ಸಂತಪ್ತನಾಗಿ ಮತ್ತು ವಿಷಾದಪೀಡಿತನಾಗಿ ಮೃತ್ಯುವಶನಾದನು. ಯುದ್ಧದಲ್ಲಿ ಅರ್ಜುನನು ತನ್ನ ತಂದೆಯನ್ನು ಸಂಹರಿಸಿದನೆಂಬ ಸಮಾಚಾರವನ್ನು ಸುರಥನು ಹಿಂದೆಯೇ ಕೇಳಿದ್ದನು. ತಂದೆಯು ಮರಣಹೊಂದಿದುದರಿಂದ ದುಃಖಪೀಡಿತನಾಗಿದ್ದ ನನ್ನ ಮಗ ಸುರಥನು, ಈಗ ನೀನು ಕುದುರೆಯ ಹಿಂದೆ ಎಲ್ಲ ರಾಜರೊಡನೆಯೂ ಯುದ್ಧಮಾಡಲು ಬರುತ್ತಿರುವೆಯೆಂಬ ವಾರ್ತೆಯನ್ನು ಕೇಳಿದೊಡನೆಯೇ ಪ್ರಾಣಗಳನ್ನೇ ತೊರೆದುಬಿಟ್ಟನು. ಅನಘನೇ! ‘ಅರ್ಜುನನು ಕುದುರೆಯೊಡನೆ ನಮ್ಮ ದೇಶದೊಳಕ್ಕೆ ಕಾಲಿಟ್ಟಿದ್ದಾನೆ’–ಎಂಬ ವಾರ್ತೆಯನ್ನು ಕೇಳಿದೊಡನೆಯೇ (ಬೀಭತ್ಸುವಿನ ಹೆಸರನ್ನು ಕೇಳಿದೊಡನೆಯೇ) ವಿಷಾದಪೀಡಿತನಾದ ನನ್ನ ಮಗನು ಭೂಮಿಯ ಮೇಲೆ ಬಿದ್ದು ಪ್ರಾಣಗಳನ್ನು ತೊರೆದನು. ಪ್ರಭುವೇ! ನನ್ನ ಮಗನು ಹೀಗೆ ಪ್ರಾಣಬಿಟ್ಟಿದ್ದನ್ನು ನೋಡಿ ಅವನ ಮಗನನ್ನು ಕರೆದುಕೊಂಡು ನಿನ್ನಿಂದ ರಕ್ಷಣೆಯನ್ನು ಬಯಸಿ ನಾನಿಲ್ಲಿಗೆ ಬಂದಿರುವೆನು.”

ಜನಮೇಜಯ! ಹೀಗೆ ಹೇಳಿದ ದೀನಳಾದ ದುಃಶಲೆಯು ಪುನಃ ಆರ್ತಸ್ವರದಿಂದ ವಿಲಪಿಸತೊಡಗಿದಳು. ಅವಳ ಹೃದಯವಿದ್ರಾವಕವಾದ ಮಾತನ್ನು ಕೇಳಿ ದೈನ್ಯದಿಂದ ಮುಖವನ್ನು ಕೆಳಕ್ಕೆ ಮಾಡಿಕೊಂಡು ನಿಂತಿದ್ದ ಅರ್ಜುನನೊಡನೆ ದುಃಶಲೆಯು ಪುನಃ ಹೇಳಿದಳು:

“ಕುರುಕುಲಾವತಂಸನೇ! ಧರ್ಮಜ್ಞನೇ! ದೀನಳಾಗಿಯೂ ಆರ್ತ ಳಾಗಿಯೂ ಇರುವ ನಿನ್ನ ಈ ತಂಗಿಯನ್ನು ನೋಡು ಮತ್ತು ಹಸುಳೆ ಯಾಗಿರುವ ನಿನ್ನ ತಂಗಿಯ ಮೊಮ್ಮಗನನ್ನು ನೋಡು. ನಮ್ಮ ವಿಷಯದಲ್ಲಿ ದಯೆತೋರುವುದು ನಿನ್ನ ಕರ್ತವ್ಯವಾಗಿದೆ. ನನ್ನ ಅಣ್ಣನಾದ ಮಂದಬುದ್ಧಿ ಯವನಾದ ದುರ್ಯೋಧನನನ್ನೂ-ನನ್ನ ಪತಿಯಾದ ಜಯದ್ರಥನನ್ನೂ ಮರೆತುಬಿಡು. (ಅವರು ನಿಮ್ಮ ವಿಷಯದಲ್ಲಿ ಮಾಡಿದ ದುಷ್ಕಾರ್ಯಗಳನ್ನು ಸ್ಮರಿಸಿಕೊಳ್ಳಬೇಡ.) ಶತ್ರುಹಂತಕನಾದ ಪರೀಕ್ಷಿತನು ಅಭಿಮನ್ಯುವಿಗೆ ಹುಟ್ಟಿ

ದಂತೆ ಮಹಾಭುಜನಾದ ಈ ನನ್ನ ಮೊಮ್ಮಗನು ಸುರಥನಿಗೆ ಹುಟ್ಟಿರುವನು. ಇವನನ್ನು ಕರೆದುಕೊಂಡು ಸಮಸ್ತಯೋಧರನ್ನೂ ಶಾಂತಿಗೊಳಿಸುವ ಸಲುವಾಗಿ ನಿನ್ನ ಬಳಿಗೆ ಆಗಮಿಸಿರುವೆನು. ಮಂದಬುದ್ಧಿಯಾದ ಜಯದ್ರಥನ ಮೊಮ್ಮಗನು ನಿನ್ನ ಶರಣಾರ್ಥಿಯಾಗಿ ಇಲ್ಲಿಗೆ ಬಂದಿರುವನು. ಆದುದರಿಂದ ಇವನ ವಿಷಯದಲ್ಲಿ ದಯೆತೋರುವುದು ನಿನ್ನ ಕರ್ತವ್ಯವಾಗಿದೆ. ಅರಿಂದಮನೇ! ಧನಂಜಯ! ಈ ಬಾಲಕನು ತಲೆಬಾಗಿ ನಮಸ್ಕರಿಸುತ್ತಾ ಶಾಂತ್ಯರ್ಥವಾಗಿ ನಿನ್ನನ್ನು ಬೇಡಿಕೊಳ್ಳುತ್ತಿದ್ದಾನೆ. ಆದುದರಿಂದ ದಯಮಾಡಿ ಕೋಪಗೊಳ್ಳಬೇಡ. ಬಂಧುಗಳನ್ನು ಕಳೆದುಕೊಂಡಿರುವ, ಏನೂ ತಿಳಿಯದ ಈ ಬಾಲಕನ ವಿಷಯದಲ್ಲಿ ಕೃಪೆಮಾಡು. ಅನಾರ್ಯನಾದ, ಕ್ರೂರಿಯಾದ, ನಿಮಗೆ ಬಹಳವಾಗಿ ಅಪರಾಧವನ್ನೆಸಗಿದ ಈ ಬಾಲಕನ-ಪಿತಾಮಹನಾದ ಜಯದ್ರಥನನ್ನು ಮರೆತುಬಿಡು. ಈ ಬಾಲಕನ ವಿಷಯದಲ್ಲಿ ಪ್ರಸನ್ನನಾಗು."

ಜನಮೇಜಯ! ಹೀಗೆ ದುಃಶಲೆಯು ಕರುಣಾಜನಕವಾದ ಮಾತನ್ನು ಹೇಳುತ್ತಿರಲಾಗಿ ಅರ್ಜುನನು ಗಾಂಧಾರೀದೇವಿಯನ್ನೂ ಧೃತರಾಷ್ಟ್ರರಾಜ ನನ್ನೂ ಸ್ಮರಿಸಿ ದುಃಖಶೋಕಪೀಡಿತನಾಗಿ ಇವೆಲ್ಲಕ್ಕೂ ಕಾರಣಭೂತವಾದ ಕ್ಷತ್ರಧರ್ಮವನ್ನೇ ನಿಂದಿಸಿದನು. 'ಯಾವ ಕ್ಷತ್ರಿಯಧರ್ಮದ ಪರಿಪಾಲನೆಗಾಗಿ ನಾನು ನನ್ನ ಬಂಧುಗಳನ್ನು ಯಮನ ಪಟ್ಟಣಕ್ಕೆ ಕಳುಹಿಸಿದನೋ ಅಂತಹ ಧರ್ಮಕ್ಕೆ ಧಿಕ್ಕಾರವಿರಲಿ!'–ಎಂದೂ ಅರ್ಜುನನು ಉದ್ಗರಿಸಿದನು. ಹೀಗೆ ಹೇಳಿ ಅರ್ಜುನನು ದುಃಶಲೆಯನ್ನು ಸಂತೈಸಿದನು ಹಾಗೂ ಆ ಬಾಲಕನ ವಿಷಯದಲ್ಲಿ ಪ್ರಸನ್ನನಾದನು. ಪ್ರೀತಿಯಿಂದ ತಂಗಿಯನ್ನಾಲಿಂಗಿಸಿಕೊಂಡು ಒಳ್ಳೆಯ ಮಾತುಗಳನ್ನಾಡಿ ಮನೆಗೆ ಕಳುಹಿಸಿಕೊಟ್ಟನು. ಸುಮುಖಿಯಾದ ದುಃಶಲೆಯು ಮಹಾಸಮರದಿಂದ ತನ್ನ ಕಡೆಯ ಯೋಧರೆಲ್ಲರೂ ಹಿಂದಿರುಗುವಂತೆ ಮಾಡಿ, ಅರ್ಜುನನನ್ನು ಯಥೋಚಿತವಾಗಿ ಸತ್ಕರಿಸಿ ಅರಮನೆಗೆ ಹಿಂದಿರುಗಿದಳು. ಹೀಗೆ ಅರ್ಜುನನು ಆ ಎಲ್ಲ ಸೈಂಧವವೀರರನ್ನೂ ಜಯಿಸಿ ಸ್ವೇಚ್ಛೆಯಿಂದ ಸಂಚಾರಮಾಡುತ್ತಿದ್ದ ಯಜ್ಞದ ಕುದುರೆಯನ್ನು ಅನುಸರಿಸಿ ಹೊರಟನು.

ಯಾವ ರೀತಿಯಲ್ಲಿ ಪಿನಾಕಪಾಣಿಯಾದ ದೇವದೇವನಾದ ಈಶ್ವರನು

ಆಕಾಶದಲ್ಲಿ ಮೃಗವನ್ನೇ ಅನುಸರಿಸಿ ಹೋಗುತ್ತಿದ್ದನೋ–ಹಾಗೆಯೇ ಅರ್ಜುನನು ಯಜ್ಞಸಂಬಂಧವಾದ ಕುದುರೆಯನ್ನು ಶಾಸ್ತ್ರವಿಧಿಗೆ ಅನುಸಾರವಾಗಿ ಹಿಂಬಾಲಿಸಿದನು. ಆ ಯಜ್ಞಾಶ್ವವು ಇಚ್ಛೆಬಂದಂತೆ ಆಯಾ ದೇಶಗಳಲ್ಲಿ ಪಾರ್ಥನ ಯುದ್ಧಕರ್ಮವನ್ನು ಅಡಿಗಡಿಗೂ ಹೆಚ್ಚಿಸುತ್ತಾ ಅನುಕ್ರಮವಾಗಿ ಸಂಚರಿಸುತ್ತಿದ್ದಿತು. ಹೀಗೆ ಸಂಚರಿಸುತ್ತಾ ಮಣಿಪುರ ರಾಜನ ರಾಜ್ಯವನ್ನು ಅರ್ಜುನನೊಡನೆ ಪ್ರವೇಶಿಸಿತು.”

೭೮ನೆಯ ಅಧ್ಯಾಯವು ಮುಗಿಯಿತು.

೭೯ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಅರ್ಜುನ–ಬಭ್ರುವಾಹನರ ಯುದ್ಧ: ಅರ್ಜುನನ ಮರಣ

ವೈಶಂಪಾಯನರು ಹೇಳುತ್ತಾರೆ:

ಶ್ರುತ್ವಾ ತು ನೃಪತಿಃ ಪ್ರಾಪ್ತಂ ಪಿತರಂ ಬಭ್ರುವಾಹನಃ।
ನಿರ್ಯಯೌ ವಿನಯೇನಾಥ ಬ್ರಾಹ್ಮಣಾರ್ಥಪುರಃಸರಃ ॥೧॥

ಜನಮೇಜಯ! ಆ ಸಮಯದಲ್ಲಿ ಮಣಿಪುರಕ್ಕೆ ರಾಜನಾಗಿದ್ದ ಬಭ್ರುವಾಹನನು, ತನ್ನ ತಂದೆಯು ಕುದುರೆಯನ್ನನುಸರಿಸಿ ತನ್ನ ದೇಶಕ್ಕೆ ಬಂದಿರುವನೆಂಬ ವಾರ್ತೆಯನ್ನು ಕೇಳಿ ವಿನಯದಿಂದ ಅವನನ್ನು ಎದುರ್ಗೊಳ್ಳಲು ಬ್ರಾಹ್ಮಣರನ್ನು ಮುಂದೆಮಾಡಿಕೊಂಡು ಕಾಣಿಕೆಯನ್ನು ತೆಗೆದುಕೊಂಡು ಪಟ್ಟಣದಿಂದ ಹೊರಟನು. ಮೇಧಾವಿಯಾದ ಧನಂಜಯನು ಕ್ಷತ್ರಧರ್ಮದ ಶೌರ್ಯವನ್ನು ಸ್ಮರಿಸುತ್ತಾ ಮಣಿಪುರೇಶ್ವರನು ಹೀಗೆ ಕ್ಷತ್ರಧರ್ಮಕ್ಕೆ ವಿರುದ್ಧವಾಗಿ ವಿನೀತವಾಗಿ ತನ್ನ ಬಳಿಗೆ ಬರುತ್ತಿರುವುದನ್ನು ಶ್ಲಾಘಿಸಲಿಲ್ಲ. ಧರ್ಮಾತ್ಮನಾದ ಫಾಲ್ಗುನನು ಕುಪಿತನಾಗಿಯೇ ತನ್ನ ಮಗನಿಗೆ ಹೇಳಿದನು: “ಮಗು! ಈ ವಿಧವಾದ ವ್ಯವಹಾರವು ನಿನಗೆ ತಕ್ಕುದಲ್ಲ. ಈ ವಿಧವಾದ ವ್ಯವಹಾರದಿಂದ ನೀನು ಕ್ಷತ್ರಧರ್ಮದಿಂದ ಬಹಿಷ್ಕೃತನಾಗಿರುವೆಯೆಂದು ತಿಳಿಯುವೆನು. ಏಕೆಂದರೆ: ಯುಧಿಷ್ಠಿರನ ಯಜ್ಞಕ್ಕೆ ಸಂಬಂಧಿಸಿದ ಕುದುರೆಯನ್ನು ಸಂರಕ್ಷಿಸುತ್ತಾ ನಾನು ಈ ಕುದುರೆಯನ್ನೇ ಅನುಸರಿಸಿ ನಿನ್ನ ದೇಶಕ್ಕೆ ಆಗಮಿಸಿರುವೆನು. ಕ್ಷತ್ರ

ಧರ್ಮಕ್ಕೆ ಅನುಸಾರವಾಗಿ ನೀನು ಕುದುರೆಯನ್ನೇಕೆ ಕಟ್ಟಿಹಾಕಲಿಲ್ಲ? ನನ್ನೊಡನೆ ಯುದ್ಧವನ್ನೇಕೆ ಮಾಡಲಿಲ್ಲ?

ಧಿಕ್ತ್ವಾಮಸ್ತು ಸುದುರ್ಬುದ್ಧಿಂ ಕ್ಷತ್ರಧರ್ಮಬಹಿಷ್ಕೃತಮ್ ।
ಯೋ ಮಾಂ ಯುದ್ಧಾಯ ಸಮ್ಪ್ರಾಪ್ತಂ ಸಾಮ್ನೈವ ಪ್ರತ್ಯಗೃಹ್ಣಥಾಃ ॥

ಕ್ಷತ್ರಧರ್ಮದಿಂದ ಬಹಿಷ್ಕೃತನಾಗಿರುವ ದುರ್ಬುದ್ಧಿಯವನಾದ ನಿನಗೆ ಧಿಕ್ಕಾರವಿರಲಿ! ಯುದ್ಧಕ್ಕಾಗಿ ಆಗಮಿಸಿರುವ ನನ್ನನ್ನು ಸಾಮೋಪಾಯದಿಂದ ಸ್ವಾಗತಿಸುತ್ತಿರುವೆಯಲ್ಲವೇ!

ನ ತ್ವಯಾ ಪುರುಷಾರ್ಥೋ ಹಿ ಕಶ್ಚಿದಸ್ತೀಹ ಜೀವತಾ।
ಯಸ್ತ್ವಂ ಸ್ತ್ರೀವದ್ಯಥಾಪ್ರಾಪ್ತಂ ಮಾಂ ಸಾಮ್ನಾಪ್ರತ್ಯಗೃಹ್ಣಥಾಃ ॥೬॥

ನೀನು ಜೀವಂತನಾಗಿದ್ದರೂ ಯಾವ ಪುರುಷಾರ್ಥವನ್ನೂ ಸಾಧಿಸಿಲ್ಲ. (ನೀನು ಬದುಕಿರುವುದರಿಂದ ಯಾವ ಪುರುಷಾರ್ಥವೂ ಇಲ್ಲ.) ಯುದ್ಧ ಮಾಡಲು ಆಗಮಿಸಿರುವ ನನ್ನನ್ನು ನೀನು ಹೆಂಗಸಿನಂತೆ ಸೌಮ್ಯತೆಯಿಂದ ಸ್ವಾಗತಿಸುತ್ತಿರುವೆ.

ಯದ್ಯಹಂ ನ್ಯಸ್ತಶಸ್ತ್ರಸ್ತ್ವಾಮಾಗಚ್ಛೇಯಂ ಸುದುರ್ಮತೇ ।
ಪ್ರಕ್ರಿಯೇಯಂ ಭವೇದ್ಯುಕ್ತಾ ತಾವತ್ತವ ನರಾಧಮ ॥೭॥

ದುರ್ಬುದ್ಧಿಯವನೇ! ನರಾಧಮನೇ! ನಾನೇನಾದರೂ ಶಸ್ತ್ರಗಳನ್ನು ಬದಿಗಿಟ್ಟು ಇಲ್ಲಿಗೆ ಬಂದಿದ್ದೆನಾದರೆ ಆಗ ನೀನು ಸೌಮ್ಯವಾಗಿ ನನ್ನನ್ನು ಸ್ವಾಗತಿಸುವುದು ಯುಕ್ತವಾಗಿರುತ್ತಿದ್ದಿತು."

ಜನಮೇಜಯ! ತನ್ನ ಪತಿಯು ಮಗನೊಡನೆ ಹೀಗೆ ಹೇಳುತ್ತಿದ್ದುದನ್ನು ಕೇಳಿ ನಾಗಕನ್ಯೆಯಾದ ಉಲೂಪಿಯು ಬಭ್ರುವಾಹನನಿಗಾದ ತಿರಸ್ಕಾರವನ್ನು ಸಹಿಸಿಕೊಳ್ಳಲಾರದೇ ಭೂಮಿಯನ್ನೇ ಭೇದಿಸಿಕೊಂಡು ಪಾತಾಳದಿಂದ ಹೊರಬಂದಳು. ಆ ಸಮಯದಲ್ಲಿ ಬಭ್ರುವಾಹನನು ಮುಖವನ್ನು ತಗ್ಗಿಸಿ ಮುಂದೇನು ಮಾಡಬೇಕೆಂಬುದರ ಬಗೆಗೆ ಸಮಾಲೋಚಿಸುತ್ತಿರುವುದನ್ನೂ, ಯುದ್ಧಾರ್ಥಿಯಾದ ತಂದೆಯು ಮಗನನ್ನು ಬಾರಿ-ಬಾರಿಗೂ ಕಠೋರವಾದ ಮಾತುಗಳಿಂದ ಧಿಕ್ಕರಿಸುತ್ತಿರುವುದನ್ನೂ ಅವಳು

ನೋಡಿದಳು. ಮನೋಹರವಾದ ಅಂಗಗಳಿಂದ ಕೂಡಿದ್ದ ನಾಗಕನ್ಯೆಯಾದ ಉಲೂಪಿಯು ಧರ್ಮವಿಶಾರದನಾದ ಬಭ್ರುವಾಹನನಿಗೆ ಧರ್ಮಸಮ್ಮತವಾದ ಈ ಮಾತನ್ನು ಹೇಳಿದಳು:

ಉಲೂಪೀಂ ಮಾಂ ನಿಬೋಧ ತ್ವಂ ಮಾತರಂ ಪನ್ನಗಾತ್ಮಜಾಮ್ ।
ಕುರುಷ್ವ ವಚನಂ ಪುತ್ರ ಧರ್ಮಸ್ತೇ ಭವಿತಾ ಪರಃ ॥೧೧॥

“ಪುತ್ರಕ! ನನ್ನನ್ನು ನಾಗಕನ್ಯೆಯಾದ ಉಲೂಪಿಯೆಂದು ತಿಳಿ. ನಾನು ನಿನ್ನ ತಾಯಿಯೂ ಆಗಿದ್ದೇನೆ. ನನ್ನ ಮಾತಿನಂತೆ ನಡೆದುಕೊ. ಇದರಿಂದ ನಿನಗೆ ಮಹಾಧರ್ಮವೇ ಲಭಿಸುತ್ತದೆ.

ಯುಧ್ಯಸ್ವೈನಂ ಕುರುಶ್ರೇಷ್ಠಂ ಪಿತರಂ ಯುದ್ಧದುರ್ಮದಮ್ ।
ಏವಮೇಷ ಹಿ ತೇ ಪ್ರೀತೋ ಭವಿಷ್ಯತಿ ನ ಸಂಶಯಃ ॥೧೨॥

ಕುರುಕುಲಶ್ರೇಷ್ಠನಾಗಿರುವ, ಯುದ್ಧದ ಮದದಿಂದ ಕೊಬ್ಬಿರುವ ತಂದೆಯಾದ ಅರ್ಜುನನೊಡನೆ ಯುದ್ಧವನ್ನು ಮಾಡು. ಹೀಗೆ ಯುದ್ಧಮಾಡುವುದರಿಂದಲೇ ನಿನ್ನ ತಂದೆಯು ನಿನ್ನ ವಿಷಯದಲ್ಲಿ ಪ್ರಸನ್ನನಾಗುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ.”

ಜನಮೇಜಯ! ಹೀಗೆ ತಾಯಿಯಿಂದ ಉತ್ಸಾಹಗೊಳಿಸಲ್ಪಟ್ಟ ಮಹಾ ತೇಜಸ್ವಿಯಾದ ಬಭ್ರುವಾಹನನು ತಂದೆಯೊಡನೆ ಯುದ್ಧಮಾಡಲು ಮನಸ್ಸು ಮಾಡಿದನು. ಅನಂತರ ರಾಜಕುಮಾರನು ಸುವರ್ಣಮಯವಾದ ಕವಚವನ್ನು ತೊಟ್ಟುಕೊಂಡು ಶಿರಸ್ತ್ರಾಣವನ್ನು ಧರಿಸಿ ನೂರಾರು ಬತ್ತಳಿಕೆ ಗಳಿಂದ ತುಂಬಿದ್ದ ಶ್ರೇಷ್ಠವಾದ ರಥವನ್ನು ಆರೋಹಣಮಾಡಿದನು. ರಾಜನಾದ ಬಭ್ರುವಾಹನನು ಸಕಲವಿಧವಾದ ಯುದ್ಧಸಾಮಗ್ರಿಗಳಿಂದ ತುಂಬಿಹೋಗಿದ್ದ, ಮನೋವೇಗವುಳ್ಳ ಕುದುರೆಗಳಿಂದ ಯುಕ್ತವಾಗಿದ್ದ, ಚಕ್ರವೇ ಮೊದಲಾದ ಇತರ ಅವಶ್ಯಕ ವಸ್ತುಗಳಿಂದ ಕೂಡಿದ್ದ, ಸುವರ್ಣ ಮಯವಾದ ಆಭರಣಗಳಿಂದ ವಿಭೂಷಿತವಾಗಿದ್ದ, ಕಾಂತಿಯುಕ್ತವಾಗಿದ್ದ, ಸುವರ್ಣಮಯವಾದ ರಥದಲ್ಲಿ ಕುಳಿತು ಪರಮಪೂಜ್ಯವಾದ ಸಿಂಹಧ್ವಜ ವನ್ನು ರಥದ ಮೇಲೇರಿಸಿಕೊಂಡು ಅರ್ಜುನನೊಡನೆ ಯುದ್ಧಮಾಡುವ

ಸಲುವಾಗಿ ಹೊರಟನು. ಬಳಿಕ ವೀರನಾದ ಅರ್ಜುನತನಯನು ಪಾರ್ಥನಿಂದ ರಕ್ಷಿಸಲ್ಪಡುತ್ತಿದ್ದ ಯಜ್ಞದ ಕುದುರೆಯನ್ನು ಹಯಶಿಕ್ಷಾವಿಶಾರದರಾದ ಪುರುಷರ ಮೂಲಕವಾಗಿ ಬಂಧಿಸಿದನು. ಯಜ್ಞದ ಕುದುರೆಯನ್ನು ತನ್ನ ಮಗನು ಬಂಧಿಸಿದುದನ್ನು ಪದಾತಿಯಾಗಿಯೇ ಅರ್ಜುನನು ನಿರೋಧಿಸಿದನು. ಮಣಿಪುರದ ವೀರರಾಜನು ನಿಶಿತವಾದ, ಸರ್ಪೋಪಮವಾದ, ಬಾಣಗಳ ಸಮೂಹಗಳಿಂದ ಅರ್ಜುನನನ್ನು ಅನೇಕಪ್ರಕಾರವಾಗಿ ಪೀಡಿಸಿದನು. ಪ್ರಸನ್ನಮನಸ್ಕರಾಗಿದ್ದ ತಂದೆ-ಮಕ್ಕಳ ನಡುವೆ ಮಹಾಭಯಂಕರವಾದ ದೇವಾಸುರಯುದ್ಧಕ್ಕೆ ಸಮಾನವಾದ ಯುದ್ಧವೇ ನಡೆಯುತ್ತಿದ್ದಿತು. ಆ ಯುದ್ಧಕ್ಕೆ ಸಮಾನವಾದ ಯುದ್ಧವೇ ಹಿಂದೆ ನಡೆದಿರಲಿಲ್ಲವೋ ಎಂಬಂತಹ ಯುದ್ಧವು ನಡೆಯಿತು. ಬಭ್ರುವಾಹನನು ನಗು-ನಗುತ್ತಲೇ ಬಗ್ಗಿದ ಗಿಣ್ಣಿನಿಂದ ಕೂಡಿದ್ದ ಬಾಣದಿಂದ ನರಶ್ರೇಷ್ಠನಾದ ಅರ್ಜುನನ ಕೊರಳಿಗೆ ಎಲುಬಿನ ಪ್ರದೇಶದಲ್ಲಿ ಪ್ರಹರಿಸಿದನು. ಬಹಳ ಚೂಪಾಗಿದ್ದ ಆ ಬಾಣವು ಬಿಲದೊಳಗೆ ಹಾವು ನುಸುಳಿಹೋಗುವಂತೆ ರೆಕ್ಕೆಗಳ ಸಹಿತವಾಗಿ ಅರ್ಜುನನ ಕುತ್ತಿಗೆಯ ಪ್ರದೇಶದಲ್ಲಿ ಹೊಕ್ಕು ಜತ್ರುವನ್ನೇ ಭೇದಿಸಿ ಹೊರಬಂದು ಭೂಮಿಯಲ್ಲಿ ಸೇರಿಕೊಂಡಿತು. ಅದರಿಂದ ಧೀಮಂತನಾದ ಅರ್ಜುನನಿಗೆ ಅತ್ಯಂತವೇದನೆಯಾಯಿತು. ತನ್ನ ಶ್ರೇಷ್ಠವಾದ ಧನುಸ್ಸನ್ನು ಅವಲಂಬಿಸಿ ಹಾಗೆಯೇ ನಿಂತುಕೊಂಡನು. ಆಗ ಅವನು ದಿವ್ಯವಾದ ತೇಜಸ್ಸಿನಿಂದ ಕೂಡಿರುವ ಯಜ್ಞಪಶುವಿನಂತೆಯೇ ಕಾಣುತ್ತಿದ್ದನು. ಸ್ವಲ್ಪಹೊತ್ತು ಕಳೆದನಂತರ ಇಂದ್ರನ ಮಗನಾದ, ಪುರಷಶ್ರೇಷ್ಠನಾದ, ಮಹಾದ್ಯುತಿಯಾದ ಅರ್ಜುನನು ಎಚ್ಚರಗೊಂಡು ಮಗನನ್ನು ಪ್ರಶಂಸೆಮಾಡುತ್ತಾ ಈ ಮಾತನ್ನು ಹೇಳಿದನು:

ಸಾಧು ಸಾಧು ಮಹಾಬಾಹೋ ವತ್ಸ ಚಿತ್ರಾಙ್ಗದಾತ್ಮಜ ।
ಸದೃಶಂ ಕರ್ಮ ತೇ ದೃಷ್ಟ್ವಾ ಪ್ರೀತಿಮಾನಸ್ಮಿ ಪುತ್ರಕ ।
ವಿಮುಞ್ಚಾಮ್ಯೇಷ ತೇ ಬಾಣಾನ್ಪುತ್ರ ಯುದ್ಧೇ ಸ್ಥಿರೋ ಭವ ॥

"ಮಹಾಬಾಹುವೇ! ಚಿತ್ರಾಂಗದೆಯ ಮಗನೇ! ಭಲೇ! ಭಲೇ! ಅರ್ಜುನಪುತ್ರನಿಗೆ ಅನುರೂಪವಾದ ನಿನ್ನ ಸಾಹಸಕಾರ್ಯವನ್ನು ನೋಡಿ

ನಾನು ಸುಪ್ರೀತನಾಗಿದ್ದೇನೆ. ನಾನೀಗ ನಿನ್ನ ಮೇಲೆ ಬಾಣಗಳನ್ನು ಬಿಡುವೆನು; ಸ್ಥಿರವಾಗಿ ನಿಲ್ಲು."

ಹೀಗೆ ಹೇಳಿ ಶತ್ರುಹಂತಕನಾದ ಅರ್ಜುನನು ಬಭ್ರುವಾಹನನ ಮೇಲೆ ಬಾಣಗಳ ಮಳೆಗರೆದನು. ಗಾಂಡೀವಧನುಸ್ಸಿನಿಂದ ಬಿಡಲ್ಪಟ್ಟ ವಜ್ರಾಯುಧಕ್ಕೂ ಸಿಡಿಲಿಗೂ ಸಮಾನವಾದ ಅರ್ಜುನನ ನಾರಾಚಗಳನ್ನು ಬಭ್ರುವಾಹನನು ಭಲ್ಲಗಳಿಂದ ಎರಡೆರಡು, ಮೂರು-ಮೂರು ತುಂಡುಗಳಾಗಿ ಕತ್ತರಿಸಿದನು. ಮರುಕ್ಷಣದಲ್ಲಿಯೇ ಅರ್ಜುನನು ಸುವರ್ಣಮಯವಾದ, ತಾಲವೃಕ್ಷದಂತಿದ್ದ, ಸುವರ್ಣಾಭರಣಭೂಷಿತವಾದ ಬಭ್ರುವಾಹನನ ರಥದ ಧ್ವಜವನ್ನು ದಿವ್ಯವಾದ ಬಾಣಗಳಿಂದಲೂ ಕ್ಷುರದಿಂದಲೂ ಕತ್ತರಿಸಿ ಹಾಕಿದನು. ಪುನಃ ಅರ್ಜುನನು ನಗು-ನಗುತ್ತಾ ಮಹಾಕಾಯವುಳ್ಳ ಬಭ್ರುವಾಹನನ ಕುದುರೆಗಳನ್ನು ಸತತವಾದ ಶರಪ್ರಹಾರಗಳಿಂದ ನಿರ್ಜೀವಿಗಳನ್ನಾಗಿ ಮಾಡಿಬಿಟ್ಟನು. (ಸಂಹರಿಸಿದನು.) ಅದರಿಂದ ಮಹಾಕೋಪಗೊಂಡ ರಾಜನು ರಥದಿಂದಿಳಿದು ತಂದೆಯಾದ ಅರ್ಜುನನೊಡನೆ ಪದಾತಿಯಾಗಿಯೇ ಯುದ್ಧಮಾಡತೊಡಗಿದನು. ವಜ್ರಧರನಾದ ಇಂದ್ರನ ಮಗನಾದ, ಕುಂತೀಪುತ್ರರಲ್ಲಿ ಶ್ರೇಷ್ಠನಾದ ಅರ್ಜುನನು ಮಗನ ಪರಾಕ್ರಮವನ್ನು ನೋಡಿ ಸುಪ್ರೀತನಾದನು. ಮಗನನ್ನು ಹೆಚ್ಚಾಗಿ ಪೀಡಿಸಹೋಗಲಿಲ್ಲ. ತಂದೆಯು ತನ್ನನ್ನು ಹೆಚ್ಚಾಗಿ ಪೀಡಿಸದೇ ಇದ್ದುದರಿಂದ ಅರ್ಜುನನು ಯುದ್ಧದಿಂದ ವಿಮುಖನಾಗಿರುವನೆಂದೇ ಭಾವಿಸಿದ ಬಲಿಷ್ಠನಾದ ಬಭ್ರುವಾಹನನು ಸರ್ಪಾಕಾರದಿಂದಿದ್ದ ಬಾಣಗಳಿಂದ ಅರ್ಜುನನನ್ನು ಬಹಳವಾಗಿ ಪೀಡಿಸಿದನು. ಬಳಿಕ ಬಾಲ್ಯಚಾಪಲ್ಯದಿಂದ ನಿಶಿತವಾದ, ಸುಂದರವಾದ ರೆಕ್ಕೆಗಳನ್ನು ಹೊಂದಿದ್ದ ಬಾಣದಿಂದ ಅರ್ಜುನನ ಎದೆಗೆ ಗುರಿಯಿಟ್ಟು ಬಲವಾಗಿ ಪ್ರಹರಿಸಿದನು. ಅತ್ಯಂತದುಃಖದಾಯಕವಾದ ಆ ಬಾಣವು ಪಾಂಡುಪುತ್ರನ ಮರ್ಮಸ್ಥಳವನ್ನು ಭೇದಿಸಿಕೊಂಡು ಹೃದಯದೊಳಗೆ ಹೊಕ್ಕಿತು. ಪುತ್ರನಿಂದ ಬಿಡಲ್ಪಟ್ಟ ಆ ಬಾಣದಿಂದ ಬಹಳವಾಗಿ ಗಾಯಗೊಂಡ ಕುರುನಂದನನಾದ ಅರ್ಜುನನು ಮೂರ್ಛಿತನಾಗಿ ಭೂಮಿಯ ಮೇಲೆ ಬಿದ್ದನು. ಕೌರವಧುರಂಧರನಾದ ವೀರನಾದ

ಅರ್ಜುನನು ಮೂರ್ಛಿತನಾಗಿ (ಗತಪ್ರಾಣನಾಗಿ) ನೆಲದ ಮೇಲೆ ಬೀಳಲಾಗಿ ಚಿತ್ರಾಂಗದೆಯ ಮಗನಾದ ಬಭ್ರುವಾಹನನೂ ಮೂರ್ಛಿತನಾಗಿ ಬಿದ್ದನು. ರಣಾಂಗಣದಲ್ಲಿ ಬಭ್ರುವಾಹನನು ಮಹಾಪರಾಕ್ರಮದಿಂದ ತಂದೆಯೊಡನೆ ಕಾದಾಡುತ್ತಿದ್ದನು. ಅರ್ಜುನನ ಬಾಣಗಳಿಂದ ಬಹಳವಾಗಿ ಗಾಯಗೊಂಡಿದ್ದ ರಾಜಕುಮಾರನು ಅರ್ಜುನನು ಯುದ್ಧದಲ್ಲಿ ಹತನಾದುದನ್ನು ನೋಡಿದೊಡನೆಯೇ ಮೂರ್ಛಿತನಾಗಿ ಕೆಳಗೆ ಬಿದ್ದು ಭೂಮಿಯನ್ನು ತಬ್ಬಿಕೊಂಡನು.

ಪತಿಯು ಹತನಾಗಿರುವುದನ್ನೂ ಮಗನು ನೆಲದ ಮೇಲೆ ಬಿದ್ದಿರುವುದನ್ನೂ ನೋಡಿ ಚಿತ್ರಾಂಗದೆಯು ಸಂತಪ್ತಹೃದಯಳಾಗಿ ರಣರಂಗಕ್ಕೆ ಬಂದಳು. ಶೋಕದಿಂದ ಸಂತ್ರಸ್ತವಾದ ಹೃದಯದಿಂದ ಕೂಡಿದ್ದ, ಗಳ- ಗಳನೆ ಅಳುತ್ತಿದ್ದ, ಭಯಂಕರದೃಶ್ಯವನ್ನು ನೋಡಿ ನಡುಗುತ್ತಿದ್ದ ಮಣಿಪುರದರಸನಾದ ಬಭ್ರುವಾಹನನ ತಾಯಿಯು ತನ್ನ ಪತಿಯಾದ ಅರ್ಜುನನು ಸತ್ತುಬಿದ್ದಿರುವುದನ್ನು ಕಂಡಳು.

೭೯ನೆಯ ಅಧ್ಯಾಯವು ಮುಗಿಯಿತು.

೮೦ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಚಿತ್ರಾಂಗದೆಯ ವಿಲಾಪ: ಮೂರ್ಛೆಯಿಂದ ಎಚ್ಚರಗೊಂಡ ಬಭ್ರುವಾಹನನ ಶೋಕ: ಉಲೂಪಿಯ ಪ್ರಯತ್ನದಿಂದ ಸಂಜೀವನಮಣಿಯ ಮೂಲಕವಾಗಿ ಅರ್ಜುನನು ಬದುಕಿದುದು

ವೈಶಂಪಾಯನರು ಹೇಳುತ್ತಾರೆ:

ತತೋ ಬಹುತರಂ ಭೀರುರ್ವಿಲಪ್ಯ ಕಮಲೇಕ್ಷಣಾ।
ಮುಮೋಹ ದುಃಖಸಂತಪ್ತಾ ಪಪಾತ ಚ ಮಹೀತಲೇ ॥೧॥

ಜನಮೇಜಯ! ಬಳಿಕ ಕಮಲನಯನೆಯಾದ ಭೀರುಸ್ವಭಾವದ ಚಿತ್ರಾಂಗದೆಯು ಪತಿವಿಯೋಗದುಃಖದಿಂದ ಸಂತಪ್ತಳಾಗಿ ಬಹಳ ಹೊತ್ತಿನ ವರೆಗೆ ಗೋಳಾಡುತ್ತಲೇ ಇದ್ದು ಮೂರ್ಛಿತಳಾಗಿ ನೆಲದ ಮೇಲೆ ಬಿದ್ದಳು.

ಸ್ವಲ್ಪ ಹೊತ್ತು ಕಳೆದ ನಂತರ ದಿವ್ಯರೂಪವತಿಯಾದ ಚಿತ್ರಾಂಗದಾದೇವಿಯು ಎಚ್ಚರಗೊಂಡು ನಾಗಕನ್ಯೆಯಾದ ಉಲೂಪಿಯನ್ನು ನೋಡಿ ಹೀಗೆ ಹೇಳಿದಳು:



"ಉಲೂಪಿಯೇ! ನಮ್ಮ ಸ್ವಾಮಿಯಾದ ಅರ್ಜುನನು ಈ ರಣಭೂಮಿಯಲ್ಲಿ ಸತ್ತುಬಿದ್ದಿರುವುದನ್ನು ನೋಡು. ಸಮರವಿಜಯಿಯಾದ ಅರ್ಜುನನು ನಿನ್ನ ಪ್ರೇರಣೆಯಿಂದಲೇ ನನ್ನ ಮಗನ ಬಾಣದಿಂದ ಹತನಾದನು.

ಅಕ್ಕ! ನೀನು ಆರ್ಯಧರ್ಮವನ್ನು ತಿಳಿದವಳಲ್ಲವೇ? ಪತಿವ್ರತೆ

ಯಲ್ಲವೇ? ಹಾಗಿದ್ದರೂ ಪತಿಯೊಡನೆ ಯುದ್ಧಮಾಡುವಂತೆ ಪುತ್ರನನ್ನೇಕೆ ಪ್ರಚೋದಿಸಿದೆ? ನಿನ್ನ ಪ್ರೇರಣೆಯಿಂದಲೇ ಬಭ್ರುವಾಹನನು ತಂದೆಯೊಡನೆ ಯುದ್ಧದಲ್ಲಿ ತೊಡಗಿ ಅವನನ್ನು ಸಂಹರಿಸಿದನು. ಒಂದು ವೇಳೆ ಧನಂಜಯನು ನಿನಗೆ ಸರ್ವಥಾ ಅಪರಾಧಿಯೇ ಆಗಿದ್ದರೂ ಅವನನ್ನು ನನಗಾಗಿ ಕ್ಷಮಿಸಿಬಿಡು. ನಾನು ಬೇಡಿಕೊಳ್ಳುತ್ತೇನೆ. ಅರ್ಜುನನನ್ನು ಬದುಕಿಸು. ಆರ್ಯಳೇ! ಶೋಭನಳೇ! ನೀನು ಧರ್ಮಜ್ಞಳೆಂದು ಮೂರು ಲೋಕಗಳಲ್ಲಿಯೂ ಖ್ಯಾತಿಯನ್ನು ಪಡಿದಿರುವೆ. ಮಗನ ಮೂಲಕವಾಗಿ ಪತಿಯ ಮರಣಕ್ಕೆ ಕಾರಣಳಾದರೂ ನೀನು ದುಃಖಿಸುತ್ತಿಲ್ಲ. ಪಶ್ಚಾತ್ತಾಪವನ್ನೂ ಪಡುತ್ತಿಲ್ಲ. ಪನ್ನಗನಂದಿನಿಯೇ! ನಾನು ಮಗನು ಹತನಾದುದಕ್ಕಾಗಿ ದುಃಖಪಡುವುದಿಲ್ಲ. ಪತಿಯು ಹತನಾದುದಕ್ಕಾಗಿ ಶೋಕಿಸುತ್ತೇನೆ. ಅನೇಕ ದಿವಸಗಳನಂತರ ಆಗಮಿಸಿದ ಪತಿಗೆ ನಾನು ಇಂತಹ ಆತಿಥ್ಯವನ್ನು ನೀಡಿದೆನಲ್ಲವೇ?"

ಜನಮೇಜಯ! ಯಶಸ್ವಿನಿಯಾದ ಚಿತ್ರಾಂಗದೆಯು ನಾಗಕನ್ಯೆಯಾದ ಉಲೂಪಿಗೆ ಹೀಗೆ ಹೇಳಿ ನಿಶ್ಚೇಷ್ಟನಾಗಿ ಬಿದ್ದಿದ್ದ ಪತಿಯ ಬಳಿಗೆ ಹೋಗಿ ಬಿಕ್ಕಿ-ಬಿಕ್ಕಿ ಅಳುತ್ತಾ ಹೇಳಿದಳು:

"ಕುರುರಾಜನಿಗೆ ಪ್ರಿಯತಮನಾದವನೇ! ನನಗೆ ಪ್ರಿಯನಾದವನೇ! ಮಹಾಬಾಹುವೇ! ಪ್ರಾಣನಾಥನೇ! ಎದ್ದೇಳು. ನಿನ್ನ ಈ ಯಜ್ಞದ ಕುದುರೆಯನ್ನು ನಾನೇ ಬಿಟ್ಟುಕೊಟ್ಟಿದ್ದೇನೆ. ವಿಭುವೇ! ಧರ್ಮರಾಜನ ಯಜ್ಞಸಂಬಂಧವಾದ ಈ ಕುದುರೆಯ ಜೊತೆಯಲ್ಲಿ ನೀನು ಹೋಗಲೇಬೇಕಾಗಿರುವುದಲ್ಲವೇ? ಹಾಗಿದ್ದರೂ ಭೂಮಿಯ ಮೇಲೇಕೆ ಮಲಗಿರುವೆ? ಕುರುನಂದನನೇ! ನನ್ನ ಮತ್ತು ಕುರುಗಳ (ಯುಧಿಷ್ಠಿರಾದಿಗಳ) ಪ್ರಾಣಗಳು ನಿನ್ನನ್ನೇ ಆಶ್ರಯಿಸಿವೆ. ಇತರರಿಗೆ ಪ್ರಾಣದಾತನಾದ ನೀನೇ ಏಕಿಂದು ಪ್ರಾಣಗಳನ್ನು ಪರಿತ್ಯಜಿಸಿರುವೆ?"

ಜನಮೇಜಯ! ಚಿತ್ರಾಂಗದೆಯು ಪುನಃ ಉಲೂಪಿಯ ಕಡೆಗೆ ತಿರುಗಿ ಹೇಳಿದಳು:

"ಉಲೂಪಿ! ಗತಪ್ರಾಣನಾಗಿ ನೆಲದ ಮೇಲೆ ಬಿದ್ದಿರುವ ಈ ನಿನ್ನ ಪತಿಯನ್ನು ಚೆನ್ನಾಗಿ ನೋಡು. ಪುತ್ರನನ್ನು ಪ್ರೋತ್ಸಾಹಿಸಿ ಪತಿಯನ್ನು

ಕೊಲ್ಲಿಸಿದೆ. ಆದರೂ ನೀನು ದುಃಖಪಡುತ್ತಿಲ್ಲ. ಮೃತ್ಯುವಶನಾಗಿ ಭೂಮಿಯಲ್ಲಿ ಬಿದ್ದಿರುವ ಈ ಬಾಲಕನು ಅನಂತಕಾಲದವರೆಗೂ ಹೀಗೆಯೇ ಮಲಗಿರಲಿ. ಆದರೆ ನಿದ್ರೆಯನ್ನು ಜಯಿಸಿರುವ, ಕೆಂಗಣ್ಣನಾದ ನನ್ನ ಪತಿಯಾದ ಈ ವಿಜಯನು ಚೆನ್ನಾಗಿ ಬದುಕಲಿ.

ನಾಪರಾಧೋಽಸ್ತಿ ಸುಭಗೇ ನರಾಣಾಂ ಬಹುಭಾರ್ಯತಾ ।
ಪ್ರಮದಾನಾಂ ಭವತ್ಯೇಷ ಮಾ ತೇಽಭೂದ್ಬುದ್ಧಿರೀದೃಶೀ ॥೧೪॥

ಸೌಭಾಗ್ಯವತಿಯೇ! ಪುರುಷರಿಗೆ ಬಹುಪತ್ನಿಯರಿದ್ದರೆ ಅದರಿಂದ ದೋಷವೇನೂ ಇಲ್ಲ. ಅದು ಅಪರಾಧವೂ ಅಲ್ಲ. ಆದರೆ ಪ್ರಮದೆಯರಿಗೆ ಬಹುಪತಿಗಳಿರಬಾರದು. (ಸ್ತ್ರೀಯು ಅನೇಕಪುರುಷರೊಡನೆ ಸಂಬಂಧವನ್ನು ಬೆಳಸಿದರೆ ಅದು ಅಪರಾಧವಾಗುತ್ತದೆ.) ಆದುದರಿಂದ ನಿನಗೆ ಇಂತಹ ಕ್ರೂರವಾದ ಬುದ್ಧಿಯಿರುವುದು ಬೇಡ.

ಸಖ್ಯಂ ಚೈತತ್ಕೃತಂ ಧಾತ್ರಾ ಶಶ್ವದವ್ಯಯಮೇವ ತು ।
ಸಖ್ಯಂ ಸಮಭಿಜಾನೀಹಿ ಸತ್ಯಂ ಸಙ್ಗತಮಸ್ತು ತೇ ॥೧೫॥

ಪತಿ-ಪತ್ನಿಯರ ಮೈತ್ರಿಯು (ಸಂಬಂಧವು) ಬ್ರಹ್ಮನಿಂದಲೇ ಆದುದು. ಈ ಮೈತ್ರಿಯು ದೃಢವಾದುದು ಮತ್ತು ಶಾಶ್ವತವಾದುದು. ನಿನಗೂ ಅರ್ಜುನನೊಡನೆ ಇಂತಹುದೇ ಸಂಬಂಧವಿದೆ. ಆದುದರಿಂದ ಈ ಸಖ್ಯದ ತತ್ತ್ವವನ್ನೂ ನೀನೂ ತಿಳಿ. ನಿನಗೂ ಮತ್ತು ಅರ್ಜುನನಿಗೂ ಆಗಿರುವ ಮೈತ್ರಿಯು ಸತ್ಯವಾಗಿ ಪರಿಣಮಿಸಲಿ. ಸಾರ್ಥಕವಾಗಲಿ.

ಪುತ್ರೇಣ ಪಾತಯಿತ್ವೈನಂ ಪತಿಂ ಯದಿ ನ ಮೇಽದ್ಯ ವೈ ।
ಜೀವನ್ತಂ ದರ್ಶಯಸ್ಯದ್ಯ ಪರಿತ್ಯಕ್ಷ್ಯಾಮಿ ಜೀವಿತಮ್ ॥೧೬॥

ಮಗನ ಮೂಲಕವಾಗಿ ಪತಿಯನ್ನು ಸಂಹರಿಸಿರುವ ನೀನು ಈಗೇನಾದರೂ ಜೀವಂತನಾದ ನನ್ನ ಪತಿಯನ್ನು ತೋರಿಸದಿದ್ದರೆ ನಾನು ಪ್ರಾಣಗಳನ್ನು ತ್ಯಾಗಮಾಡುತ್ತೇನೆ.

ಸಾಹಂ ದುಃಖಾನ್ವಿತಾ ದೇವಿ ಪತಿಪುತ್ರವಿನಾಕೃತಾ।
ಇಹೈವ ಪ್ರಾಯಮಾಶಿಷ್ಯೇ ಪ್ರೇಕ್ಷನ್ತ್ಯಾಸ್ತೇ ನ ಸಂಶಯಃ ॥೧೭॥

ದೇವಿ! ನಾನೀಗ ಪತಿಯಿಂದಲೂ ಪುತ್ರನಿಂದಲೂ ವಿಹೀನಳಾಗಿ

ದುಃಖದಲ್ಲಿ ಮುಳುಗಿಹೋಗಿದ್ದೇನೆ. ನೀನು ನೋಡುತ್ತಿರುವಂತೆಯೇ ಪ್ರಾಯೋಪವೇಶಮಾಡಿ ಪ್ರಾಣಗಳನ್ನು ತೊರೆಯುತ್ತೇನೆ.”

ಜನಮೇಜಯ! ಚಿತ್ರವಾಹನನ ಮಗಳಾದ ಚಿತ್ರಾಂಗದೆಯು ಸವತಿಯಾದ ನಾಗಕನ್ಯೆಗೆ ಹೀಗೆ ಹೇಳಿ ಪ್ರಾಯೋಪವೇಶವ್ರತವನ್ನು ಕೈಗೊಂಡು ಮೌನವಾಗಿ ಕುಳಿತಳು. ಚಿತ್ರಾಂಗದೆಯು ಬಹಳ ಹೊತ್ತಿನವರೆಗೂ ಅಳುತ್ತಿದ್ದು ಬಳಿಕ ಅಳುವನ್ನು ನಿಲ್ಲಿಸಿ, ಪತಿಯ ಎರಡು ಪಾದಗಳನ್ನೂ ಹಿಡಿದುಕೊಂಡು ಕುಳಿತಳು. ಅದೇ ಸಮಯದಲ್ಲಿ ದೀನಳಾಗಿದ್ದ ಅವಳು ಮಗನು ದೀರ್ಘವಾಗಿ ಉಸಿರಾಡುತ್ತಿದ್ದುದನ್ನು ಗಮನಿಸಿದಳು. ಸ್ವಲ್ಪಹೊತ್ತಿನಲ್ಲಿಯೇ ಬಭ್ರುವಾಹನರಾಜನು ಚೇತನಗೊಂಡು ರಣಾಂಗಣದಲ್ಲಿ ತಾಯಿಯಿರುವುದನ್ನು ನೋಡಿ ದುಃಖದಿಂದ ಹೇಳಿದನು:

“ಅಯ್ಯೋ ವಿಧಿಯೇ! ಇದುವರೆಗೂ ಸುಖದಿಂದಲೇ ವೃದ್ಧಿಯನ್ನು ಹೊಂದಿದ ನನ್ನ ತಾಯಿಯೀಗ ಭೂಮಿಯಲ್ಲಿ ಬಿದ್ದಿರುವ ಮೃತನಾದ ತನ್ನ ಪತಿಯೊಡನೆ ತಾನೂ ಮರಣಹೊಂದಲು ನಿಶ್ಚಯಿಸಿ ಅವನ ಜೊತೆಯಲ್ಲಿಯೇ ಮಲಗಿದ್ದಾಳೆ. ಇದಕ್ಕಿಂತಲೂ ದುಃಖಕರವಾದುದು ಮತ್ತೇನಿದೆ? ರಣರಂಗದಲ್ಲಿ ಯಾರನ್ನು ಸಂಹರಿಸಲು ಯಾರಿಂದಲೂ ಸಾಧ್ಯವೇ ಆಗುತ್ತಿರಲಿಲ್ಲವೋ, ಯಾವನು ಶತ್ರುಗಳ ಹಂತಕನೋ, ಎಲ್ಲ ಶಸ್ತ್ರಧಾರಿಗಳಲ್ಲಿಯೂ ಶ್ರೇಷ್ಠನೋ–ಅಂತಹ ಅರ್ಜುನನು ನನ್ನಿಂದ ಮರಣಹೊಂದಿರುವುದನ್ನು ಈ ನನ್ನ ತಾಯಿಯು ನೋಡುತ್ತಿದ್ದಾಳೆ. ನಿಶ್ಚಯವಾಗಿಯೂ ಚಿತ್ರಾಂಗದಾದೇವಿಯ ಹೃದಯವು ಬಹಳ ದೃಢವಾದುದೇ ಆಗಿರಬೇಕು. ಏಕೆಂದರೆ: ವಿಶಾಲವಾದ ವಕ್ಷಃಸ್ಥಳದಿಂದ ಕೂಡಿರುವ ಮಹಾಬಾಹುವಾದ ಪತಿಯು ಮರಣಹೊಂದಿರುವುದನ್ನು ನೋಡುತ್ತಿದ್ದರೂ ಇವಳ ಹೃದಯವು ಸೀಳಿಹೋಗಿಲ್ಲ. (ಇವಳಿಗೆ ಹೃದಯಾಘಾತವಾಗಿಲ್ಲ.) ಅಂತಕಾಲವು ಸನ್ನಿಹಿತವಾಗದಿದ್ದರೆ ಮನುಷ್ಯನು ಯಾವುದೇ ಸ್ಥಿತಿಯಲ್ಲಿದ್ದರೂ ಮರಣಹೊಂದುವುದು ಅತ್ಯಂತಕಠಿಣವೇ ಸರಿ. ಇಂತಹ ಸಂಕಟಸಮಯದಲ್ಲಿಯೂ ನನ್ನ ಪ್ರಾಣವಾಗಲೀ ನನ್ನ ತಾಯಿಯ ಪ್ರಾಣವಾಗಲೀ ಹೊರಟುಹೋಗಲಿಲ್ಲ. ಅಯ್ಯೋ! ಅಯ್ಯೋ! ನನಗೆ ಧಿಕ್ಕಾರವಿರಲಿ!

ಪುತ್ರನಾದ ನನ್ನಿಂದ ಹತನಾದ ಈ ಕುರುವೀರನ ಸುವರ್ಣಮಯವಾದ ಕವಚವು ಕಳಚಿ ಕೆಳಗೆ ಬಿದ್ದಿರುವುದನ್ನಾದರೂ ನೋಡಿರಿ. ಭೋ! ಭೋ ಬ್ರಾಹ್ಮಣರೇ! ಇದೋ ಇಲ್ಲಿ ಪುತ್ರನಾದ ನನ್ನಿಂದ ಸಂಹರಿಸಲ್ಪಟ್ಟು ವೀರಶಯನದಲ್ಲಿ ಮಲಗಿರುವ ವೀರನಾದ ನನ್ನ ತಂದೆಯನ್ನು ನೋಡಿರಿ. ಕುರುಮುಖ್ಯನಾದ ಯುಧಿಷ್ಠಿರನಿಂದ ಪ್ರಯಾಣದ ಸಮಯದಲ್ಲಿ ವಿಘ್ನೋಪಶಾಂತಿಗೆ ನಿಯುಕ್ತರಾಗಿ ಯಜ್ಞದ ಕುದುರೆಯನ್ನೇ ಅನುಸರಿಸಿ ಬಂದಿರುವ ಬ್ರಾಹ್ಮಣರು ನನ್ನಿಂದ ಹತನಾಗಿರುವ ಈ ಪಾಂಡವವೀರನಿಗೆ ಯಾವ ಶಾಂತಿಕರ್ಮವನ್ನು ಮಾಡುವರು? ಬ್ರಾಹ್ಮಣರೇ! ಅತ್ಯಂತಕ್ರೂರನಾಗಿರುವ, ಪಾಪಿಷ್ಠನಾಗಿರುವ, ರಣಾಂಗಣದಲ್ಲಿ ತಂದೆಯನ್ನೇ ಸಂಹರಿಸಿರುವ ನನಗೆ ಯಾವ ಪ್ರಾಯಶ್ಚಿತ್ತವಿದೆಯೆಂಬುದನ್ನು ನಿರ್ದೇಶಿಸಿರಿ.

ದುಶ್ಚರಾ ದ್ವಾದಶಸಮಾ ಹತ್ವಾ ಪಿತರಮದ್ಯ ವೈ।
ಮಮೇಹ ಸುನೃಶಂಸಸ್ಯ ಸಂವೀತಸ್ಯಾಸ್ಯ ಚರ್ಮಣಾ ॥೨೯॥

ಶಿರಃಕಪಾಲೇ ಚಾಸ್ಯೈವ ಯುಂಜತಃ ಪಿತುರದ್ಯ ಮೇ।
ಪ್ರಾಯಶ್ಚಿತ್ತಂ ಹಿ ನಾಸ್ತ್ಯನ್ಯದ್ಧತ್ವಾದ್ಯ ಪಿತರಂ ಮಮ ॥೩೦॥

ತಂದೆಯನ್ನೇ ಕೊಂದಿರುವ ನಾನು ಮುಂದೆ ಹನ್ನೆರಡು ವರ್ಷಗಳು ಬಹಳ ಕಷ್ಟದಿಂದಲೇ ಕಳೆಯಬೇಕಾಗಿದೆ. ಅತ್ಯಂತಕ್ರೂರಿಯಾದ ನಾನು ಈ ನನ್ನ ತಂದೆಯ ಚರ್ಮವನ್ನೇ ಹೊದೆದುಕೊಂಡು ಇವನ ಕಪಾಲವನ್ನೇ ಕೈಯಲ್ಲಿ ಹಿಡಿದು ಹನ್ನೆರಡು ವರ್ಷಗಳ ಕಾಲ ಭೂಮಂಡಲದಲ್ಲಿ ಸಂಚಾರಮಾಡಬೇಕು. ತಂದೆಯನ್ನೇ ಕೊಲೆಮಾಡಿರುವ ನನಗೆ ಬೇರಾವ ಪ್ರಾಯಶ್ಚಿತ್ತವೂ ಇಲ್ಲ."

ಜನಮೇಜಯ! ಬಭ್ರುವಾಹನನು ಹೀಗೆ ವಿಲಪಿಸುತ್ತಾ ತನ್ನ ಸಪತ್ನೀಮಾತೃವಾದ (ಬಲತಾಯಿಯಾದ) ಉಲೂಪಿಯ ಕಡೆಗೆ ತಿರುಗಿ ಹೇಳಿದನು:

"ತಾಯೇ! ನಾಗರಾಜಕುಮಾರಿಯೇ! ಇದೋ ಇಲ್ಲಿ ನೋಡು. ನಾನು ನಿನ್ನ ಪತಿಯನ್ನೇ ವಧಿಸಿಬಿಟ್ಟೆನು. ಯುದ್ಧದಲ್ಲಿ ಅರ್ಜುನನನ್ನು ಸಂಹರಿಸಿ ನಿನಗೆ ಪ್ರಿಯವಾದ ಕಾರ್ಯವನ್ನು ಮಾಡಿದೆನು. ಆದರೆ ನಾನು

ಮಾತ್ರ ಪ್ರಾಣವನ್ನು ಉಳಿಸಿಕೊಂಡು ಬದುಕಿರಲಾರೆನು. ನನ್ನ ತಂದೆಯು ಹೋದ ಮಾರ್ಗವನ್ನೇ ಅನುಸರಿಸಿ ಹೋಗುವೆನು (ಪ್ರಾಣತ್ಯಾಗ ಮಾಡುವೆನು.)

ತಾಯೇ! ಅರ್ಜುನನಂತೆ ನಾನೂ ಪ್ರಾಣತ್ಯಾಗಮಾಡಿದನಂತರ ನೀನು ಸುಪ್ರೀತಳಾಗು. ತಂದೆಯಿಲ್ಲದೇ ನಾನು ಬದುಕಿರುವುದಿಲ್ಲವೆಂದು ಸತ್ಯದ ಮೇಲೆ ಶಪಥಮಾಡಿ ಹೇಳುತ್ತೇನೆ."

ಜನಮೇಜಯ! ದುಃಖಶೋಕಪೀಡಿತನಾದ ಬಭ್ರುವಾಹನರಾಜನು ಹೀಗೆ ಹೇಳಿ ಆಚಮನಮಾಡಿ ದುಃಖದಿಂದ ಹೀಗೆ ಹೇಳಿದನು:

"ಈ ಪ್ರಪಂಚದಲ್ಲಿರುವ ಚರಾಚರಪ್ರಾಣಿಗಳೆಲ್ಲವೂ ಈ ನನ್ನ ಮಾತನ್ನು ಕೇಳಲಿ. ನಾಗರಾಜಕುಮಾರಿಯೇ! ತಾಯೇ! ನೀನೂ ಈಗ ನಾನು ಹೇಳಲಿರುವ ಸತ್ಯವಾದ ಈ ಮಾತನ್ನು ಕೇಳು.

ಯದಿ ನೋತ್ತಿಷ್ಠತಿ ಜಯಃ ಪಿತಾ ಮೇ ನರಸತ್ತಮಃ।
ಅಸ್ಮಿನ್ನೇವ ರಣೋದ್ದೇಶೇ ಶೋಷಯಿಷ್ಯೇ ಕಲೇವರಮ್ ॥೩೬॥

ನನ್ನ ತಂದೆಯಾದ, ನರಶ್ರೇಷ್ಠನಾದ, ಜಯನಾಮಕನಾದ ಅರ್ಜುನನು ಸಚೇತನನಾಗಿ ಏಳದಿದ್ದರೆ–ಈ ರಣಾಂಗಣದಲ್ಲಿಯೇ ನಾನು ಆಮರಣಾಂತವಾಗಿ ಉಪವಾಸವಿದ್ದು ದೇಹವನ್ನು ಶೋಷಿಸಿಬಿಡುವೆನು.

ನ ಹಿ ಮೇ ಪಿತರಂ ಹತ್ವಾ ನಿಷ್ಕೃತಿರ್ವಿದ್ಯತೇ ಕ್ವಚಿತ್।
ನರಕಂ ಪ್ರತಿಪತ್ಸ್ಯಾಮಿ ಧ್ರುವಂ ಗುರುವಧಾರ್ದಿತಃ ॥೩೭॥

ತಂದೆಯನ್ನೇ ಕೊಲೆಮಾಡಿರುವ ನನಗೆ ಪ್ರಾಯಶ್ಚಿತ್ತವೆಂಬುದೇ ಇಲ್ಲ. ಗುರುವನ್ನು (ತಂದೆಯನ್ನು) ವಧಿಸಿದ ಪಾಪದಿಂದ ಪೀಡಿತನಾದ ನಾನು ನಿಶ್ಚಯವಾಗಿಯೂ ನರಕದಲ್ಲಿಯೇ ಬೀಳುತ್ತೇನೆ.

ವೀರಂ ತು ಕ್ಷತ್ರಿಯಂ ಹತ್ವಾ ಗೋಶತೇನ ಪ್ರಮುಚ್ಯತೇ।
ಪಿತರಂ ತು ನಿಹತ್ಯೈವಂ ದುರ್ಲಭಾ ನಿಷ್ಕೃತಿರ್ಮಮ ॥೩೮॥

ವೀರನಾದ ಕ್ಷತ್ರಿಯನೊಬ್ಬನನ್ನು ಕೊಂದುದೇ ಆದರೆ ನೂರು ಗೋವುಗಳನ್ನು ದಾನಮಾಡುವುದರಿಂದ ಆ ಪಾಪದ ವಿಮೋಚನೆಯಾಗುತ್ತದೆ. ಆದರೆ ಹೀಗೆ ತಂದೆಯನ್ನೇ ಕೊಂದಿರುವ ನನಗೆ ಈ ಮಹಾಪಾಪದಿಂದ ಬಿಡುಗಡೆಯೇ ಇಲ್ಲ.

ಏಷ ಏಕೋ ಮಹಾತೇಜಾಃ ಪಾಣ್ಡುಪುತ್ರೋ ಧನಂಜಯಃ।
ಪಿತಾ ಚ ಮಮ ಧರ್ಮಾತ್ಮಾ ತಸ್ಯ ಮೇ ನಿಷ್ಕೃತಿಃ ಕೃತಃ ॥೩॥

ಪಾಂಡುವಿನ ಮಗನಾದ ಈ ಧನಂಜಯನು ಅದ್ವಿತೀಯನಾದ ವೀರನು; ಮಹಾತೇಜಸ್ವಿಯು; ಧರ್ಮಾತ್ಮನು; ಮೇಲಾಗಿ ನನ್ನ ತಂದೆಯು. ಅಂತಹವನನ್ನು ಕೊಂದಿರುವ ನನಗೆ ಆ ಮಹಾಪಾಪದ ಪರಿಹಾರವು ಹೇಗೆ ತಾನೇ ಸಾಧ್ಯವಾಗುವುದು?"

ಜನಮೇಜಯ! ಧನಂಜಯನ ಮಗನಾದ, ಮಹಾಬುದ್ಧಿಶಾಲಿಯಾದ ಬಭ್ರುವಾಹನನು ಹೀಗೆ ಹೇಳಿ ಆಚಮನಮಾಡಿ ಆಮರಣಾಂತವಾದ ಉಪವಾಸವ್ರತವನ್ನು ಕೈಗೊಂಡು ಮೌನವಾಗಿ ಕುಳಿತನು. ಹೀಗೆ ಪಿತೃಶೋಕದಿಂದ ಸಂತಪ್ತನಾಗಿದ್ದ ಮಣಿಪುರದರಸನಾದ ಬಭ್ರುವಾಹನನು, ತನ್ನ ತಾಯಿಯಾದ ಚಿತ್ರಾಂಗದೆಯೊಡನೆ ಉಪವಾಸವನ್ನು ಕೈಗೊಂಡು ಕುಳಿತುಕೊಂಡಾಗ ನಾಗಕನ್ಯೆಯಾದ ಉಲೂಪಿಯು ಸಂಜೀವನಮಣಿಯನ್ನು ಸ್ಮರಿಸಿಕೊಂಡಳು. ಸ್ಮರಿಸುತ್ತಲೇ ಸರ್ಪಗಳ ಜೀವನಕ್ಕೆ ಆಧಾರಭೂತವಾದ ಆ ಮಣಿಯು ಅವಳ ಬಳಿಗೆ ಬಂದಿತು. ನಾಗರಾಜಕನ್ಯೆಯಾದ ಉಲೂಪಿಯು ಅದನ್ನೆತ್ತಿಕೊಂಡು ಸೈನಿಕರ ಮನಸ್ಸಿಗೆ ಆಹ್ಲಾದವನ್ನುಂಟುಮಾಡುವ ಈ ಮಾತನ್ನು ಹೇಳಿದಳು:

"ಮಗು! ಬಭ್ರುವಾಹನ! ಎದ್ದೇಳು. ದುಃಖಿಸಬೇಡ. ನೀನು ಅರ್ಜುನನನ್ನು ಜಯಿಸಿರುವುದಿಲ್ಲ. ಜಿಷ್ಣುವು ಮನುಷ್ಯರಿಗೂ ಮತ್ತು ಇಂದ್ರಸಹಿತರಾದ ಸಮಸ್ತದೇವತೆಗಳಿಗೂ ಅಜೇಯನಾಗಿದ್ದಾನೆ. ಪುರುಷ ಶ್ರೇಷ್ಠನಾದ, ಯಶೋವಂತನಾದ ನಿನ್ನ ತಂದೆಗೆ ಪ್ರಿಯವನ್ನುಂಟುಮಾಡುವ ಸಲುವಾಗಿಯೇ ನಾನು ಈ 'ಮೋಹಿನೀ' ಎಂಬ ಮಾಯಾವಿದ್ಯೆಯನ್ನು ಪ್ರದರ್ಶಿಸಿದೆನು. ಶತ್ರುವೀರರನ್ನು ಸಂಹರಿಸಲು ಸಮರ್ಥನಾದ ಕೌರವನು ರಣರಂಗದಲ್ಲಿ ಯುದ್ಧಮಾಡುವಾಗ ತನ್ನ ಪುತ್ರನ (ನಿನ್ನ) ಬಲವೆಷ್ಟಿರ ಬಹುದೆಂದು ಜಿಜ್ಞಾಸೆಮಾಡುತ್ತಿದ್ದನು. ಅರ್ಜುನನ ಮನಸ್ಸಿನ ಇಂಗಿತವನ್ನು ತಿಳಿದೇ ನಾನು ನಿನ್ನನ್ನು ಅರ್ಜುನನೊಡನೆ ಯುದ್ಧಮಾಡಲು ಪ್ರೇರಿಸಿದೆನು. ನಿನ್ನ ತಂದೆಯ ಇಚ್ಛೆಗೆ ಅನುಸಾರವಾಗಿ ನೀನು ಅವನೊಡನೆ ಯುದ್ಧಮಾಡಿ

ರುವುದರಿಂದ ಲೇಶಮಾತ್ರವಾದ ಪಾಪವಾದರೂ ನಿನಗೆ ಪ್ರಾಪ್ತವಾಗುವುದೆಂದು ಸಂದೇಹಿಸಬೇಡ.

ಋಷಿರೇಷ ಮಹಾನಾತ್ಮಾ ಪುರಾಣಃ ಶಾಶ್ವತೋಽಕ್ಷರಃ ।
ನೈನಂ ಶಕ್ತೋ ಹಿ ಸಂಗ್ರಾಮೇ ಜೇತುಂ ಶಕ್ರೋಽಪಿ ಪುತ್ರಕ ॥೧೪॥

ಮಗು! ಈ ಅರ್ಜುನನು ಸಾಮಾನ್ಯಕ್ಷತ್ರಿಯನಲ್ಲ. ಮಹಾತ್ಮನಾದ ಈತನು ನರನೆಂಬ ಮಹರ್ಷಿಯು. ಮಹಾತ್ಮನೂ, ಸನಾತನನೂ, ಶಾಶ್ವತನೂ ಮತ್ತು ಅವಿನಾಶಿಯೂ ಆಗಿರುವನು. ಯುದ್ಧದಲ್ಲಿವನನ್ನು ಇಂದ್ರನೂ ಜಯಿಸಲು ಸಮರ್ಥನಲ್ಲ.

ಅಯಂ ತು ಮೇ ಮಣಿರ್ದಿವ್ಯಃ ಸಮಾನೀತೋ ವಿಶಾಮ್ಪತೇ ।
ಮೃತಾನ್ಮೃತಾನ್ಪನ್ನಗೇನ್ದ್ರಾನ್ಯೋ ಜೀವಯತಿ ನಿತ್ಯದಾ ॥೪೯॥
ಏನಮಸ್ಯೋರಸಿ ತ್ವಂ ಚ ಸ್ಥಾಪಯಸ್ವ ಪಿತುಃ ಪ್ರಭೋ ।
ಸಂಜೀವಿತಂ ತದಾ ಪಾರ್ಥಂ ಸತ್ವಂ ದ್ರಷ್ಟಾಸಿ ಪಾಣ್ಡವಮ್ ॥೫೦॥

ಪ್ರಜಾನಾಥನೇ! ನಾನು ಈ ದಿವ್ಯಮಣಿಯನ್ನು ತಂದಿದ್ದೇನೆ. ಇದು ಸಾಯುವ ಸರ್ಪಗಳನ್ನು ಅನುದಿನವೂ ಬದುಕಿಸುತ್ತಲೇ ಇರುತ್ತದೆ. ಈ ಮಣಿಯನ್ನು ನಿನ್ನ ತಂದೆಯ ಎದೆಯ ಮೇಲಿಡು. ಒಡನೆಯೇ ಪುನಃ ಬದುಕಿ ಮೇಲೇಳುವ ಕುಂತೀಪುತ್ರನನ್ನು ನೀನೇ ಕಾಣುವೆ."

ಜನಮೇಜಯ! ಉಲೂಪಿಯು ಹೀಗೆ ಹೇಳಲು ಮಹಾತೇಜಸ್ವಿಯಾದ ಪಾಪರಹಿತನಾದ ಬಭ್ರುವಾಹನನು ತನ್ನ ತಂದೆಯ ವಕ್ಷಃಸ್ಥಳದಲ್ಲಿ ಆ ಸಂಜೀವನಮಣಿಯನ್ನು ಸ್ನೇಹಪೂರ್ವಕವಾಗಿ ಇಟ್ಟನು. ಆ ಮಣಿಯನ್ನಿಟ್ಟೊಡನೆಯೇ ವೀರನಾದ ಅರ್ಜುನನು, ಬಹಳ ಹೊತ್ತು ಮಲಗಿದ್ದು ಎಚ್ಚರಗೊಂಡವನಂತೆ ಕೆಂಪಾಗಿದ್ದ ತನ್ನ ಎರಡು ಕಣ್ಣುಗಳನ್ನೂ ಉಜ್ಜಿಕೊಳ್ಳುತ್ತಾ ಸಜೀವನಾಗಿ ಎದ್ದು ಕುಳಿತನು. ಸಂಜ್ಞೆಯನ್ನು ಹೊಂದಿ ಮೇಲೆದ್ದು ಕುಳಿತ, ಸ್ವಸ್ಥನಾಗಿದ್ದ, ಮನನಶೀಲನಾದ, ಮಹಾತ್ಮನಾದ ತಂದೆಯನ್ನು ನೋಡಿ ಬಭ್ರುವಾಹನನು ಅವನಿಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸಿದನು. ಶ್ರೀಮಂತನಾದ ಪುರುಷಸಿಂಹನಾದ ಅರ್ಜುನನು ಉಜ್ಜೀವಿತನಾಗಿ ಮೇಲೆದ್ದು ಕುಳಿತುಕೊಳ್ಳಲು ಅವನ ತಂದೆಯಾದ

ಇಂದ್ರನು ಮಹಾಸಂಭ್ರಮದಿಂದ ಮಗನ ಮೇಲೆ ದಿವ್ಯಕುಸುಮಗಳನ್ನು ಸುರಿಸಿದನು. ಯಾರೂ ಬಾರಿಸದೇ ಇದ್ದರೂ ದೇವದುಂದುಭಿಗಳು ಮೇಘದ ಗರ್ಜನೆಗೆ ಸಮಾನವಾಗಿ ಮೊಳಗಿದುವು. 'ಸಾಧು-ಸಾಧು' ಎಂಬ ಮಹಾಶಬ್ದವು ಆಕಾಶದಲ್ಲಿ ಸರ್ವತ್ರ ಕೇಳಿಬರುತ್ತಿದ್ದಿತು. ಸಂಪೂರ್ಣವಾಗಿ ಸಮಾಧಾನಹೊಂದಿದ ಮಹಾಬಾಹುವಾದ ಅರ್ಜುನನು ಮೇಲೆದ್ದು ಬಭ್ರುವಾಹನನನ್ನು ತಬ್ಬಿಕೊಂಡು ಅವನ ನೆತ್ತಿಯನ್ನು ಆಘ್ರಾಣಿಸಿದನು. ದೂರದಲ್ಲಿ ಉಲೂಪಿಯೊಡನೆ ನಿಂತಿದ್ದ ಶೋಕಾವಿಷ್ಟಳಾಗಿದ್ದ ಬಭ್ರುವಾಹನನ ತಾಯಿಯನ್ನೂ ಅರ್ಜುನನು ನೋಡಿದನು. ಅವಳ ಶೋಕಕ್ಕೆ ಕಾರಣವನ್ನು ತಿಳಿಯದೇ ವಿಸ್ಮಿತನಾದ ಅರ್ಜುನನು ಮಗನನ್ನು ಪ್ರಶ್ನಿಸಿದನು:

"ಶತ್ರುಹಂತಕನೇ! ಈ ರಣಾಂಗಣವು ಶೋಕ-ವಿಸ್ಮಯ-ಹರ್ಷಗಳಿಂದ ಕೂಡಿರುವಂತೆ ಕಾಣುತ್ತಿದೆ. ಇದಕ್ಕೆ ಕಾರಣವು ನಿನಗೇನಾದರೂ ತಿಳಿದಿದ್ದರೆ ಹೇಳು. ನಿನ್ನ ತಾಯಿಯು ಈ ಯುದ್ಧಭೂಮಿಗೇಕೆ ಬಂದಳು? ನಾಗಕನ್ಯೆಯಾದ ಉಲೂಪಿಯಾದರೂ ಇಲ್ಲಿಗೆ ಬಂದುದರ ಕಾರಣವೇನು? ನನ್ನ ಮಾತಿನಿಂದಲೇ ಈ ರಣಾಂಗಣದಲ್ಲಿ ನಮ್ಮಿಬ್ಬರಿಗೂ ಪರಸ್ಪರವಾಗಿ ಯುದ್ಧವು ನಡೆಯಿತು. ಆದರೆ ಸ್ತ್ರೀಯರಿಲ್ಲಿಗೇಕೆ ಬಂದರೆಂಬುದನ್ನು ತಿಳಿಯಲು ಬಯಸುತ್ತೇನೆ."

ಜನಮೇಜಯ! ಅರ್ಜುನನು ಹೀಗೆ ಪ್ರಶ್ನಿಸಲು, ಮಣಿಪುರದರಸನು ಅರ್ಜುನನ ಪಾದಗಳಿಗೆರಗಿ ಅವನನ್ನು ಪ್ರಸನ್ನಗೊಳಿಸಿ, ರಣಾಂಗಣಕ್ಕೆ ಸ್ತ್ರೀಯರು ಬಂದುದಕ್ಕೆ ಕಾರಣವನ್ನು ಉಲೂಪಿಯನ್ನು ಕೇಳಿ ತಿಳಿದುಕೊಳ್ಳಬೇಕೆಂದು ಪ್ರಾರ್ಥಿಸಿಕೊಂಡನು.

೮೦ನೆಯ ಅಧ್ಯಾಯವು ಮುಗಿಯಿತು.

ಅರ್ಜುನನ ಕೇಳಿಕೆಗೆ ಉಲೂಪಿಯು ತಾನು ರಣಾಂಗಣಕ್ಕೆ ಬಂದುದರ ಕಾರಣವನ್ನೂ ಅರ್ಜುನನ ಪರಾಜಯದ ರಹಸ್ಯವನ್ನೂ ಹೇಳಿದುದು: ಮಗನ ಮತ್ತು ಪತ್ನಿಯರ ಅನುಮತಿಯನ್ನು ಪಡೆದು ಅರ್ಜುನನು ಪುನಃ ಕುದುರೆಯ ಹಿಂದೆ ಹೊರಟುದು

ಅರ್ಜುನನು ಪ್ರಶ್ನಿಸುತ್ತಾನೆ.

ಕಿಮಾಗಮನಕೃತ್ಯಂ ತೇ ಕೌರವ್ಯಕುಲನನ್ದಿನಿ ।
ಮಣಿಪೂರಪತೇರ್ಮಾತುಸ್ತಥೈವ ಚ ರಣಾಜಿರೇ ॥೧॥

"ಸರ್ಪಗಳ ರಾಜನಾದ ಕೌರವ್ಯನ ಕುಲಕ್ಕೆ ಆನಂದವನ್ನುಂಟುಮಾಡುವವಳೇ! ನಾಗಕನ್ಯೆಯೇ! ಈ ರಣಭೂಮಿಗೆ ನೀನು ಬಂದ ಕಾರಣವೇನು? ಮಣಿಪುರಪತಿಯ ತಾಯಿಯಾದ ಚಿತ್ರಾಂಗದೆಯಾದರೂ ಇಲ್ಲಿಗೇಕೆ ಬಂದಳು? ನಾಗಕುವರಿಯೇ! ಚಂಚಲವಾದ ಕಟಾಕ್ಷವುಳ್ಳವಳೇ! ಉಲೂಪಿ! ಈ ಮಣಿಪುರದರಸನಿಗೆ ಒಳ್ಳೆಯದನ್ನು ಮಾಡಬೇಕೆಂಬ ಅಭಿಲಾಷೆಯುಳ್ಳವಳಾಗಿರುವೆಯಲ್ಲವೇ? ನನಗೂ ಕೂಡ ಒಳ್ಳೆಯದಾಗಬೇಕೆಂದು ನೀನು ಬಯಸುವೆಯಲ್ಲವೇ? ಪ್ರಿಯದರ್ಶನಳೇ! ಸ್ಥೂಲವಾದ ನಿತಂಬಗಳಿಂದ ಕೂಡಿರುವವಳೇ! ನಾನಾಗಲೀ, ನನ್ನ ಮಗ ಬಭ್ರುವಾಹನನಾಗಲೀ ತಿಳಿಯದೇ ಯಾವುದಾದರೂ ಅಪ್ರಿಯವಾಗುವಂತಹ ಕಾರ್ಯವನ್ನು ನಿನಗೆ ಮಾಡಿಲ್ಲವಲ್ಲವೇ? ರಾಜಪುತ್ರಿಯಾದ, ನಿನಗೆ ಸವತಿಯಾದ, ಚಿತ್ರವಾಹನಪುತ್ರಿಯಾದ, ಸುಂದರವಾದ ಕಟಿಪ್ರದೇಶದಿಂದ ಕೂಡಿರುವ ಚಿತ್ರಾಂಗದೆಯು ನಿನಗೆ ಯಾವುದಾದರೂ ಅತ್ಯಲ್ಪವಾದ ಅಪರಾಧವನ್ನಾದರೂ ಮಾಡಿಲ್ಲವಲ್ಲವೇ?"–ಹೀಗೆ ಪ್ರಶ್ನಿಸಿದ ಅರ್ಜುನನಿಗೆ ನಾಗರಾಜಕನ್ಯೆಯಾದ ಉಲೂಪಿಯು ಯಥೋಚಿತವಾಗಿ ಉತ್ತರಿಸಿದಳು:

"ಪ್ರಾಣವಲ್ಲಭನೇ! ನೀನಾಗಲೀ ಈ ಬಭ್ರುವಾಹನನಾಗಲೀ ನನಗೆ ಯಾವ ಅಪರಾಧವನ್ನೂ ಮಾಡಿಲ್ಲ. ಇವನ ತಾಯಿಯಾದ ಚಿತ್ರಾಂಗದೆಯೂ ನನಗೆ ಯಾವ ಅಪರಾಧವನ್ನೂ ಮಾಡಿಲ್ಲ. ಮೇಲಾಗಿ ಇವಳು ಯಾವಾಗಲೂ ನನ್ನ ಸೇವಕಿಯಂತೆಯೇ ಇರುತ್ತಾಳೆ. ನಾನಿಲ್ಲಿಗೆ

ಬಂದು ಯಾವ ರೀತಿಯಲ್ಲಿ ಯಾವ ಯಾವ ಕಾರ್ಯಗಳನ್ನು ಮಾಡಿದೆನೆಂಬುದನ್ನು ಹೇಳುವೆನು; ಕೇಳು. ಆದರೆ ಯಾವುದೇ ಕಾರಣದಿಂದಲೂ ನೀನು ನನ್ನ ಮೇಲೆ ಕೋಪಗೊಳ್ಳಬಾರದು. ಈ ವಿಷಯವಾಗಿ ಮೊದಲೇ ನಾನು ತಲೆಬಾಗಿ ನಮಸ್ಕರಿಸುತ್ತಾ ನಿನ್ನನ್ನು ಬೇಡಿಕೊಳ್ಳುತ್ತೇನೆ. ನಾನು ಮಾಡಿದುದು ಹೊರನೋಟಕ್ಕೆ ನಿನಗೆ ಅಪ್ರಿಯವಾಗಿ ಕಂಡುಬಂದರೂ ವಾಸ್ತವವಾಗಿ ನಿನಗೆ ಪ್ರಿಯವಾದ ಕಾರ್ಯವನ್ನೇ ನಾನು ಮಾಡಿದ್ದೇನೆ. 'ನಾನೇನು ಮಾಡಿದೆನು? ಯಾವುದಕ್ಕಾಗಿ ಮಾಡಿದೆನು?' ಈ ಎಲ್ಲವನ್ನೂ ಸಮಗ್ರವಾಗಿ ಕೇಳು.

ಮಹಾಭಾರತದ ಯುದ್ಧದಲ್ಲಿ ನೀನು ಭೀಷ್ಮನನ್ನು ಅಧರ್ಮದಿಂದ ಸಂಹರಿಸಿದೆ. ಆ ಪಾಪಕ್ಕೆ ಪ್ರಾಯಶ್ಚಿತ್ತರೂಪವಾಗಿ ನಾನು ಈ ಕಾರ್ಯವನ್ನು ಮಾಡಬೇಕಾಯಿತು.

ನ ಹಿ ಭೀಷ್ಮಸ್ತ್ವಯಾ ವೀರ ಯುಧ್ಯಮಾನೋ ಹಿ ಪಾತಿತಃ ।
ಶಿಖಣ್ಡಿನಾ ತು ಸಂಯುಕ್ತಸ್ತಮಾಶ್ರಿತ್ಯ ಹತಸ್ತ್ವಯಾ ॥೮॥

ವೀರನೇ! ಭೀಷ್ಮನು ನಿನ್ನೊಡನೆ ನೇರವಾಗಿ ಯುದ್ಧಮಾಡುವಾಗ ಅವನನ್ನು ನೀನು ಸಂಹರಿಸಲಿಲ್ಲ. ಶಿಖಂಡಿಯು ಭೀಷ್ಮನನ್ನು ಎದುರಿಸಿ ನಿಂತಿದ್ದನು. (ಶಿಖಂಡಿಯು ಎದುರಾಗಿ ನಿಂತುದರಿಂದ ಅವನು ಹಿಂದೆ ಹೆಂಗಸಾಗಿದ್ದ ಕಾರಣ ಭೀಷ್ಮನು ಅವನ ಮೇಲೆ ಬಾಣಗಳನ್ನು ಪ್ರಯೋಗಿಸುತ್ತಿರಲಿಲ್ಲ.) ಆ ಸಮಯದಲ್ಲಿ ನೀನು ಶಿಖಂಡಿಯನ್ನು ಆಶ್ರಯಿಸಿ (ಅವನ ಪಕ್ಕದಲ್ಲಿ ನಿಂತು) ಭೀಷ್ಮನನ್ನು ಸಂಹರಿಸಿದೆ. ಆ ಮಹಾಪಾಪಕ್ಕೆ ತಕ್ಕುದಾದ ಶಾಂತಿಕರ್ಮವನ್ನು (ಪ್ರಾಯಶ್ಚಿತ್ತವನ್ನು) ಮಾಡಿಕೊಳ್ಳದೇ ಮರಣಹೊಂದಿದ್ದರೆ ಆ ಮಹಾಪಾಪದ ಫಲವಾಗಿ ನಿಶ್ಚಯವಾಗಿಯೂ ನರಕದಲ್ಲಿ ಬೀಳುತ್ತಿದ್ದೆ. ಮಹಾಮತಿಯೇ! ಹಿಂದೆ ನೀನು ಮಾಡಿದ ಆ ಅಪರಾಧಕ್ಕೆ ವಸುಗಳೂ ಮತ್ತು ಭೀಷ್ಮನ ತಾಯಿಯಾದ ಗಂಗಾದೇವಿಯೂ ಪುತ್ರನಿಂದ ಪರಾಜಯವನ್ನು ಹೊಂದುವ ಪ್ರಾಯಶ್ಚಿತ್ತವನ್ನೇ ವಿಧಿಸಿದ್ದರು. ಭೀಷ್ಮನು ಹತನಾದನಂತರ ನಾನೊಮ್ಮೆ ಗಂಗಾನದಿಯ ತೀರದಲ್ಲಿದ್ದಾಗ ವಸುಗಳು ಹೇಳಿದ ಆ ಮಾತನ್ನು ನಾನು ಕೇಳಿಸಿಕೊಂಡೆನು. ವಸುಗಳೆಲ್ಲರೂ ಒಟ್ಟಾಗಿ ಸೇರಿ ಮಹಾನದಿಯಾದ ಗಂಗೆಯಲ್ಲಿ ಮಿಂದು ಭಾಗೀರಥಿಯ ಸಮ್ಮತಿಯನ್ನು ಪಡೆದು ಘೋರವಾದ ಈ ಮಾತನ್ನು ಹೇಳಿದರು:

ಏಷ ಶಾನ್ತನವೋ ಭೀಷ್ಮೋ ನಿಹತಃ ಸವ್ಯಸಾಚಿನಾ ।
ಅಯುಧ್ಯಮಾನಃ ಸಂಗ್ರಾಮೇ ಸಂಸಕ್ತೋಽನ್ಯೇನ ಭಾಮಿನಿ ॥೧೩॥
ತದನೇನಾನುಷಙ್ಗೇಣ ವಯಮದ್ಯ ಧನಂಜಯಮ್ ।
ಶಾಪೇನ ಯೋಜಯಾಮೇತಿ ತಥಾಸ್ತ್ವಿತಿ ಚ ಸಾಬ್ರವೀತ್ ॥೧೪॥

"ಭಾಮಿನಿಯೇ! ಶಾಂತನುವಿನ ಮಗನಾದ ಭೀಷ್ಮನು ಬೇರೆಯವರೊಡನೆ ಯುದ್ಧದಲ್ಲಿ ತೊಡಗಿದ್ದನು. ಅರ್ಜುನನೊಡನೆ ಯುದ್ಧಮಾಡುತ್ತಿರಲಿಲ್ಲ. ಅಂತಹ ಸಮಯದಲ್ಲಿ ಅರ್ಜುನನು ಭೀಷ್ಮನನ್ನು ಸಂಹರಿಸಿದನು. ಅರ್ಜುನನ ಆ ಅಪರಾಧಕ್ಕಾಗಿ ನಾವೆಲ್ಲರೂ ಅವನಿಗೆ ಶಾಪಕೊಡುತ್ತೇವೆ."

ಪತಿದೇವನೇ! ವಸುಗಳ ಆ ಮಾತನ್ನು ಕೇಳಿ ಗಂಗಾದೇವಿಯೂ-'**ತಥಾಸ್ತು**' 'ಹಾಗೆಯೇ ಆಗಲಿ'–ಎಂದು ಹೇಳಿ ನಿನಗೆ ಶಾಪಕೊಡಲು ಸಮ್ಮತಿಸಿದಳು. ವಸುಗಳ ಮಾತನ್ನೂ ಗಂಗೆಯು ಅವರ ಮಾತಿಗೆ ಸಮ್ಮತಿಸಿದುದನ್ನೂ ಕೇಳಿ ನಾನು ಬಹುದುಃಖಿತೆಯಾದೆನು. ಪಾತಾಳಕ್ಕೆ ಹೋಗಿ ನನ್ನ ತಂದೆಗೆ ಈ ಎಲ್ಲ ವಿಷಯಗಳನ್ನೂ ಹೇಳಿದೆನು. ಆ ವಾರ್ತೆಯನ್ನು ಕೇಳಿದ ನನ್ನ ತಂದೆಯೂ ದುಃಖಿತನಾಗಿ ವಸುಗಳ ಬಳಿಗೆ ಹೋಗಿ ನಿನ್ನ ಸಲುವಾಗಿ ಅವರನ್ನು ಬಹಳವಾಗಿ ಪ್ರಾರ್ಥಿಸಿಕೊಂಡನು. ಪುನಃ ಪುನಃ ಪ್ರಾರ್ಥಿಸಿಕೊಳ್ಳಲಾಗಿ ಕೃಪಾವಿಷ್ಟರಾದ ವಸುಗಳು ನನ್ನ ತಂದೆಗೆ ಹೀಗೆ ಹೇಳಿದರು:

ಪುತ್ರಸ್ತಸ್ಯ ಮಹಾಭಾಗ ಮಣಿಪೂರೇಶ್ವರೋ ಯುವಾ
ಸ ಏನಂ ರಣಮಧ್ಯಸ್ಥಃ ಶರೈಃ ಪಾತಯಿತಾ ಭುವಿ ।
ಏವಂ ಕೃತೇ ಸ ನಾಗೇನ್ದ್ರ ಮುಕ್ತಶಾಪೋ ಭವಿಷ್ಯತಿ ॥೧೫॥

"ಮಹಾಭಾಗನೇ! ನಾಗೇಂದ್ರನೇ! ಮಣಿಪುರಕ್ಕೆ ರಾಜನಾದ ಯುವಕನಾದ ಅರ್ಜುನನ ಮಗನು, ರಣಭೂಮಿಯಲ್ಲಿ ಬಾಣಗಳಿಂದ ಅರ್ಜುನನನ್ನು ಭೂಮಿಯಲ್ಲಿ ಕೆಡವಿದಾಗ ಅರ್ಜುನನು ನಮ್ಮ ಶಾಪದಿಂದ ವಿಮುಕ್ತನಾಗುತ್ತಾನೆ. ನೀನಿನ್ನು ಹೋಗಿ ಬಾ"–ಎಂಬುದಾಗಿ ವಸುಗಳು ನನ್ನ ತಂದೆಗೆ ಹೇಳಿದರು. ನನ್ನ ತಂದೆಯು ಆ ವಿಷಯವನ್ನು ನನಗೆ ಹೇಳಿದನು.

ಅದರಂತೆ ನಾನು ಬಭ್ರುವಾಹನನನ್ನು ನಿನ್ನೊಡನೆ ಯುದ್ಧಮಾಡಲು ಪ್ರಚೋದಿಸಿ ನಿನ್ನನ್ನೀಗ ವಸುಗಳ ಶಾಪದಿಂದ ಮುಕ್ತಗೊಳಿಸಿದ್ದೇನೆ. ಯುದ್ಧದಲ್ಲಿ ನಿನ್ನನ್ನು ದೇವರಾಜನೂ ಪರಾಜಯಗೊಳಿಸಲಾರನು. ಪುತ್ರನಾದರೋ ತಂದೆಯ ಆತ್ಮನೇ ಆಗಿರುವನೆಂದು ಶ್ರುತಿಗಳು ಸಾರುತ್ತವೆ. ಆದುದರಿಂದ ಆತ್ಮಸದೃಶನಾದ ಪುತ್ರನಿಂದ ನೀನೀಗ ಪರಾಜಿತನಾಗಿರುವೆ. ಇದರಲ್ಲಿ ನನ್ನ ದೋಷವೇನೂ ಇಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ. ವಿಭುವೇ! ಅರ್ಜುನ! ನೀನು ಹೇಗೆ ಭಾವಿಸುವೆ?”

ಜನಮೇಜಯ! ಉಲೂಪಿಯು ಹೀಗೆ ಹೇಳಲು ಪ್ರಸನ್ನಾತ್ಮನಾದ ಅರ್ಜುನನು ಹೇಳಿದನು:

“ದೇವಿ! ನೀನು ನನ್ನ ಪಾಪಪರಿಹಾರಕ್ಕಾಗಿ ಯಾವ ಕಾರ್ಯಗಳನ್ನು ಮಾಡಿರುವೆಯೋ–ಆ ಎಲ್ಲ ಕಾರ್ಯಗಳೂ ನನಗೆ ಪರಮಪ್ರಿಯವೇ ಆಗಿವೆ.”

ಅರ್ಜುನನು ಉಲೂಪಿಗೆ ಹೀಗೆ ಹೇಳಿ ಚಿತ್ರಾಂಗದೆಗೂ ಉಲೂಪಿಗೂ ಕೇಳಿಸುವಂತೆ ಮಣಿಪುರಾಧಿಪತಿಯಾದ ಪುತ್ರನಾದ ಬಭ್ರುವಾಹನನಿಗೆ ಹೇಳಿದನು:

“ನರೇಶ್ವರನೇ! ಚೈತ್ರಶುದ್ಧ ಹುಣ್ಣಿಮೆಯ ದಿನದಿಂದ ಯುಧಿಷ್ಠಿರನ ಅಶ್ವಮೇಧಯಾಗವು ಪ್ರಾರಂಭವಾಗುತ್ತದೆ. ಅಲ್ಲಿಗೆ ನೀನು ನಿನ್ನ ತಾಯಂದಿರನ್ನೂ ಅಮಾತ್ಯರನ್ನೂ ಕರೆದುಕೊಂಡು ಬರಬೇಕು.”

ಜನಮೇಜಯ! ಅರ್ಜುನನು ಹೀಗೆ ಹೇಳಲು ಧೀಮಂತನಾದ ಬಭ್ರುವಾಹನರಾಜನು ಕಂಬನಿದುಂಬಿದ ಕಣ್ಣುಗಳಿಂದ ಕೂಡಿದವನಾಗಿ ತಂದೆಯನ್ನು ಕುರಿತು ಹೇಳಿದನು:

“ಧರ್ಮಜ್ಞನೇ! ತಂದೆಯೇ! ನಿನ್ನ ಆಜ್ಞಾನುಸಾರವಾಗಿ ಅಶ್ವಮೇಧಯಾಗಕ್ಕೆ ತಾಯಂದಿರನ್ನೂ ಅಮಾತ್ಯರನ್ನೂ ಕರೆದುಕೊಂಡು ಬರುವೆನು. ಅಶ್ವಮೇಧಮಹಾಯಾಗದ ಸಮಯದಲ್ಲಿ ನಾನು ಬ್ರಾಹ್ಮಣರಿಗೆ ಊಟಬಡಿಸುವ ಸೇವೆಯನ್ನು ಮಾಡುತ್ತೇನೆ. ನನ್ನ ಅನುಗ್ರಹಾರ್ಥವಾಗಿ ನೀನು ದಯಮಾಡಿ ನಿನ್ನ ಪತ್ನಿಯರೊಡನೆ ನಿನ್ನದೇ ಆಗಿರುವ ಮಣಿಪುರವನ್ನು

ಪ್ರವೇಶಿಸು. ಈ ವಿಷಯದಲ್ಲಿ ನೀನು ಪುನಃ ವಿಚಾರಮಾಡಲು ಹೋಗಬೇಡ. ಪ್ರಭುವೇ! ವಿಜಯಿಗಳಲ್ಲಿ ಶ್ರೇಷ್ಠನಾದವನೇ! ನಿನ್ನದೇ ಆಗಿರುವ ಅರಮನೆಯಲ್ಲಿ ಒಂದು ರಾತ್ರಿ ಸುಖವಾಗಿ ತಂಗಿದ್ದು ನಾಳೆಯೇ ನೀನು ಕುದುರೆಯ ಜೊತೆಯಲ್ಲಿ ಪ್ರಯಾಣಮಾಡಬಹುದಾಗಿದೆ."

ಜನಮೇಜಯ! ಬಭ್ರುವಾಹನನು ಹೀಗೆ ಹೇಳಲು ಕಪಿಧ್ವಜನಾದ ಕೌಂತೇಯನು ನಸುನಗುತ್ತಾ ಚಿತ್ರಾಂಗದೆಯ ಮಗನಿಗೆ ಹೇಳಿದನು:

"ಮಹಾಬಾಹುವೇ! ದೀಕ್ಷೆಯನ್ನು ಕೈಗೊಂಡು ಶಾಸ್ತ್ರೋಕ್ತವಾದ ನಿಯಮಗಳನ್ನು ಪಾಲಿಸುತ್ತಾ ಕುದುರೆಯೊಡನೆ ಹೋಗುತ್ತಿರುವೆನೆಂಬ ವಿಷಯವು ನಿನಗೆ ತಿಳಿದೇ ಇದೆ. ವಿಶಾಲಾಕ್ಷನೇ! ಈ ನನ್ನ ದೀಕ್ಷೆಯು ಪೂರ್ಣವಾಗುವವರೆಗೆ ನಾನು ನಿನ್ನ ಪಟ್ಟಣವನ್ನು ಪ್ರವೇಶಿಸುವುದಿಲ್ಲ. ಈ ಯಜ್ಞದ ಕುದುರೆಯು ಸ್ವೇಚ್ಛೆಯಿಂದ ಹೋಗುತ್ತಿರುತ್ತದೆ. ಅದರ ಹಿಂದೆ ನಾನು ಹೋಗುತ್ತಿರಬೇಕೇ ಹೊರತು ಯಾವುದೇ ಕಾರಣದಿಂದಲೂ ಅದರ ಗಮನವನ್ನು ನಿರ್ಬಂಧಿಸುವ ಸಾಧ್ಯತೆಯಿಲ್ಲ. ಆದುದರಿಂದ ನನಗೆ ಉಳಿದುಕೊಳ್ಳಲು ನಿರ್ದಿಷ್ಟವಾದ ಸ್ಥಾನವಿರಲೂ ಸಾಧ್ಯವೇ ಇಲ್ಲ. ನಾನು ಹೋಗಿ ಬರುವೆನು. ನಿನಗೆ ಮಂಗಳವಾಗಲಿ."

ಜನಮೇಜಯ! ಅರ್ಜುನನು ಹೀಗೆ ಹೇಳಲು ಬಭ್ರುವಾಹನನು ಅಲ್ಲಿಯೇ ತನ್ನ ತಂದೆಯನ್ನು ಯಥೋಚಿತವಾಗಿ ಪೂಜಿಸಿ ಸತ್ಕರಿಸಿದನು. ಅನಂತರ ಭಾರ್ಯೆಯರಾದ ಉಲೂಪೀ-ಚಿತ್ರಾಂಗದೆಯರ ಅನುಮತಿಯನ್ನು ಪಡೆದು ಭರತಶ್ರೇಷ್ಠನಾದ ಅರ್ಜುನನು ಯಜ್ಞಾಶ್ವವನ್ನನುಸರಿಸಿ ಹೊರಟನು.

೮೧ನೆಯ ಅಧ್ಯಾಯವು ಮುಗಿಯಿತು.

೮೨ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಮಗಧರಾಜನಾದ ಮೇಘಸಂಧಿಯ ಪರಾಜಯ

ವೈಶಂಪಾಯನರು ಹೇಳುತ್ತಾರೆ:

ಸ ತು ವಾಜೀ ಸಮುದ್ರಾನ್ತಾಂ ಪರ್ಯೇತ್ಯ ವಸುಧಾಮಿಮಾಮ್।
ನಿವೃತ್ತೋಽಭಿಮುಖೋ ರಾಜನ್ಯೇನ ವಾರಣಸಾಹ್ವಯಮ್ ॥೧॥

ಜನಮೇಜಯ! ಅನಂತರ ಆ ಯಜ್ಞಾಶ್ವವು ಸಮುದ್ರಪರ್ಯಂತವಾಗಿ ಭೂಮಂಡಲದ ಎಲ್ಲ ಕಡೆಗಳಲ್ಲಿಯೂ ಸಂಚರಿಸಿ ಬಳಿಕ ಹಸ್ತಿನಾಪುರಕ್ಕೆ ಅಭಿಮುಖವಾಗಿ ಹೊರಟಿತು.



ಕಿರೀಟಧಾರಿಯಾದ ಅರ್ಜುನನೂ ಕುದುರೆಯನ್ನು ಹಿಂಬಾಲಿಸುತ್ತಿದ್ದನು. ದೈವೇಚ್ಛೆಯಿಂದ ಆ ಕುದುರೆಯು ಮುಂದೆ ರಾಜಗೃಹವೆಂಬ ಪಟ್ಟಣವನ್ನು ಪ್ರವೇಶಿಸಿತು. ಕ್ಷತ್ರಧರ್ಮವನ್ನು ಚೆನ್ನಾಗಿ ಪರಿಪಾಲಿಸುತ್ತಿದ್ದ, ಸಹದೇವನ ಮಗನಾದ, ವೀರನಾದ ಮೇಘಸಂಧಿಯು ಯಜ್ಞಾಶ್ವವು ತನ್ನ

ಪಟ್ಟಣದ ಬಳಿಗೆ ಬಂದುದನ್ನು ನೋಡಿ ಅರ್ಜುನನನ್ನು ಯುದ್ಧಕ್ಕೆ ಆಹ್ವಾನಿಸಿದನು. ಮೇಘಸಂಧಿಯು ಧನುರ್ಬಾಣಗಳನ್ನೂ ಬತ್ತಳಿಕೆಯನ್ನೂ ತೆಗೆದುಕೊಂಡು ರಥದಲ್ಲಿ ಕುಳಿತು ಪಟ್ಟಣದಿಂದ ಹೊರಹೊರಟು ಪದಾತಿಯಾಗಿದ್ದ ಅರ್ಜುನನನ್ನು ಆಕ್ರಮಿಸಿದನು. ಮಹಾತೇಜಸ್ವಿಯಾಗಿದ್ದ ಮೇಘಸಂಧಿಯು ಅರ್ಜುನನ ಬಳಿಗೆ ಬಂದು ಬಾಲ್ಯಚಾಪಲ್ಯದಿಂದ ಈ ಮಾತುಗಳನ್ನು ಹೇಳಿದನು. ಕೌಶಲ್ಯದಿಂದವನು ಈ ಮಾತನ್ನು ಹೇಳಲಿಲ್ಲ.

ಕಿಮಯಂ ಚಾರ್ಯತೇ ವಾಜೀ ಸ್ತ್ರೀಮಧ್ಯ ಇವ ಭಾರತ ।
ಹಯಮೇನಂ ಹರಿಷ್ಯಾಮಿ ಪ್ರಯತಸ್ವ ವಿಮೋಕ್ಷಣೇ ॥೬॥

“ಭಾರತನೇ! ಇದುವರೆಗೂ ನೀನು ಈ ಕುದುರೆಯನ್ನು ಹೆಂಗಸರ ಮಧ್ಯದಲ್ಲಿಯೇ ನಡೆಸಿಕೊಂಡು ಬಂದಿರುವೆಯೆಂದು ಭಾವಿಸಿದ್ದೇನೆ. (ಗಂಡಸರ ಮಧ್ಯದಲ್ಲಿ ನಡೆಸಿಕೊಂಡು ಬಂದಿದ್ದರೆ ಈ ಕುದುರೆಯು ಇಷ್ಟುದೂರ ಬರಲು ಅವಕಾಶವೇ ಇರಲಿಲ್ಲ. ವೀರಾಧಿವೀರರಾದ ಪುರುಷರು ಈ ವೇಳೆಗಾಗಲೇ ಈ ಕುದುರೆಯನ್ನು ಕಟ್ಟಿಹಾಕಿ ಯುಧಿಷ್ಠಿರನ ಸಂಕಲ್ಪವನ್ನೇ ವಿಫಲಗೊಳಿಸುತ್ತಿದ್ದರು.) ಪುರುಷಶ್ರೇಷ್ಠನಾಗಿರುವ ನಾನೀಗ ಈ ಕುದುರೆಯನ್ನು ಹಿಡಿದು ಕಟ್ಟಿಹಾಕುತ್ತೇನೆ. ಬಿಡಿಸಿಕೊಳ್ಳಲು ಪ್ರಯತ್ನಿಸು.

ಅದತ್ತಾನುನಯೋ ಯುದ್ಧೇ ಯದಿ ತ್ವಂ ಪಿತೃಭಿರ್ಮಮ ।
ಕರಿಷ್ಯಾಮಿ ತವಾತಿಥ್ಯಂ ಪ್ರಹರ ಪ್ರಹರಾಮಿ ಚ ॥೭॥

ಹಿಂದೆ ನನ್ನ ತಂದೆಯೇ ಮೊದಲಾದ ಪೂರ್ವಜರು ಯುದ್ಧದಲ್ಲಿ ನಿನಗೆ ಸ್ವಾಗತ-ಸತ್ಕಾರಾದಿಗಳನ್ನು ನೀಡದಿರಬಹುದು. ಆದರೆ ಈಗ ನಾನು ಯುದ್ಧಭೂಮಿಯಲ್ಲಿ ನಿನ್ನನ್ನು ಯಥೋಚಿತವಾಗಿ ಸತ್ಕರಿಸುತ್ತೇನೆ. ಮೊದಲು ನೀನು ನನ್ನನ್ನು ಬಾಣಗಳಿಂದ ಪ್ರಹರಿಸು. ಅನಂತರ ನಾನು ಪ್ರಹರಿಸುತ್ತೇನೆ.”

ಜನಮೇಜಯ! ಮೇಘಸಂಧಿಯು ಔದ್ಧತ್ಯದಿಂದ ಹೀಗೆ ಹೇಳಲು ಅರ್ಜುನನು ನಗುತ್ತಿರುವನೋ ಎಂಬ ಮುಖಭಾವವನ್ನು ಹೊಂದಿ ಹೇಳಿದನು:

“ನರೇಶ್ವರನೇ! ನನ್ನ ಹಿರಿಯಣ್ಣನು–ಮಾರ್ಗದಲ್ಲಿ ಕುದುರೆಯ

ಗಮನಕ್ಕೆ ವಿಘ್ನವನ್ನುಂಟುಮಾಡಿದವರನ್ನು ನಿವಾರಿಸುವಂತೆ ವ್ರತದ ದೀಕ್ಷೆಯನ್ನು ಕೊಟ್ಟಿರುತ್ತಾನೆ. ಈ ವಿಷಯವು ನಿಶ್ಚಯವಾಗಿ ನಿನಗೂ ತಿಳಿದೇ ಇದೆ. ಆದುದರಿಂದ ನೀನು ನಿನಗೆ ಶಕ್ತಿಯಿರುವಷ್ಟು ನನ್ನನ್ನು ಪ್ರಹರಿಸು. ಇದರಿಂದ ನನಗೆ ಕೋಪವೇನೂ ಇಲ್ಲ."

ಜನಮೇಜಯ! ಅರ್ಜುನನು ಹೀಗೆ ಹೇಳುತ್ತಲೇ ಮಗಧೇಶ್ವರನಾದ ಮೇಘಸಂಧಿಯು–ಸಹಸ್ರಾಕ್ಷನಾದ ಇಂದ್ರನು ಮಳೆಗರೆಯುವಂತೆ–ಸಾವಿರಾರು ಬಾಣಗಳನ್ನು ತಾನೇ ಮೊದಲು ಅರ್ಜುನನ ಮೇಲೆ ಸುರಿಸಿದನು. ಮರುಕ್ಷಣದಲ್ಲಿಯೇ ಶೂರನಾದ ಗಾಂಡೀವಿಯು, ಮೇಘಸಂಧಿಯು ಪ್ರಯತ್ನಪೂರ್ವಕವಾಗಿ ಬಿಟ್ಟಿದ್ದ ಸಾವಿರಾರು ಬಾಣಗಳನ್ನೂ ಗಾಂಡೀವ ಧನುಸ್ಸಿನಿಂದ ಪ್ರಮುಕ್ತವಾದ ಬಾಣಗಳಿಂದ ವ್ಯರ್ಥಗೊಳಿಸಿದನು. ಕಪಿಧ್ವಜನು ಮಗಧೇಶ್ವರನ ಬಾಣಗಳನ್ನು ವ್ಯರ್ಥಗೊಳಿಸಿದುದಲ್ಲದೇ ಪ್ರದೀಪ್ತವಾದ ಮುಖಗಳುಳ್ಳ ಸರ್ಪಗಳಂತೆಯೇ ಇದ್ದ, ಜಾಜ್ಜ್ವಲ್ಯಮಾನವಾದ ಬಾಣಗಳನ್ನು ಮೇಘಸಂಧಿಯ ಮೇಲೆ ಪ್ರಯೋಗಿಸಿದನು. ಅರ್ಜುನನು ಮೇಘಸಂಧಿಯ ಧ್ವಜ, ಪತಾಕೆ, ದಂಡ, ರಥ, ಯಂತ್ರ, ಕುದುರೆಗಳು ಮತ್ತು ಇತರ ರಥಾಂಗಗಳು–ಇವೆಲ್ಲದರ ಮೇಲೂ ಬಾಣಗಳನ್ನು ಪ್ರಯೋಗಿಸಿದನು. ಆದರೆ ಮೇಘಸಂಧಿಯ ಮೇಲಾಗಲೀ ಅವನ ಸಾರಥಿಯ ಮೇಲಾಗಲೀ ಬಾಣಗಳನ್ನು ಪ್ರಯೋಗಿಸಲಿಲ್ಲ. ಅರ್ಜುನನು ಹೀಗೆ ಎದುರಾಳಿಗೆ ಪೀಡೆಯಾಗದ ರೀತಿಯಲ್ಲಿ ಅಣ್ಣನ ಆಣತಿಗೆ ಅನುಸಾರವಾಗಿ ಯುದ್ಧಮಾಡುತ್ತಿರುವುದನ್ನು ಮೇಘಸಂಧಿಯು ಬೇರೆಯಾಗಿ ಭಾವಿಸಿದನು. ಸ್ವಭುಜಪರಾಕ್ರಮದಿಂದಲೇ ತನ್ನನ್ನು ತಾನು ರಕ್ಷಿಸಿಕೊಳ್ಳುತ್ತಿರುವೆನೆಂದೂ ಅರ್ಜುನನಿಗೆ ತನ್ನನ್ನು ಗಾಯಗೊಳಿಸಲು ಸಾಧ್ಯವಿಲ್ಲವೆಂದೂ ಭಾವಿಸಿ ಅರ್ಜುನನ ಮೇಲೆ ಅವ್ಯಾಹತವಾಗಿ ಬಾಣಗಳನ್ನು ಸುರಿಸಿದನು. ಮಾಗಧನ ಬಾಣಗಳಿಂದ ಬಹಳವಾಗಿ ಗಾಯಗೊಂಡು ರಕ್ತಸಿಕ್ತನಾಗಿದ್ದ ಅರ್ಜುನನು–ವಸಂತರ್ತುವಿನಲ್ಲಿ ಪುಷ್ಪಿತವಾದ ಮುತ್ತುಗದ ಮರದಂತೆಯೇ ಪ್ರಕಾಶಿಸಿದನು. ಅರ್ಜುನನು ಧರ್ಮಜನು ಹೇಳಿದ್ದಂತೆ ಮೇಘಸಂಧಿಯನ್ನು ಬಾಣಗಳಿಂದ ಪ್ರಹರಿಸುತ್ತಿರಲಿಲ್ಲ. ಅದಕ್ಕೆ ಬದಲಾಗಿ ಮೇಘಸಂಧಿಯು ಅರ್ಜುನನನ್ನು ಬಾರಿ-ಬಾರಿಗೂ ನಿಶಿತವಾದ ಬಾಣಗಳಿಂದ ಗಾಯಗೊಳಿಸುತ್ತಲೇ ಇದ್ದನು. ಈ ಕಾರಣದಿಂದಲೇ ಅವನು ಲೋಕವೀರನಾದ ಅರ್ಜುನನ ಮುಂದೆ ಅಷ್ಟುಹೊತ್ತು ನಿಲ್ಲಲು ಸಾಧ್ಯವಾಯಿತು.

ಅದರ ಪರಿಣಾಮವಾಗಿ ಅರ್ಜುನನೂ ಕುಪಿತನಾದನು. ಧನುಸ್ಸನ್ನು ಸುದೀರ್ಘವಾಗಿ ಸೆಳೆದು ಬಾಣಗಳನ್ನು ವೇಗವಾಗಿ ಬಿಡುತ್ತಾ ಮೇಘಸಂಧಿಯ ಕುದುರೆಗಳನ್ನೂ ಸಾರಥಿಯನ್ನೂ ಕ್ಷಣಮಾತ್ರದಲ್ಲಿ ಸಂಹರಿಸಿದನು. ಮತ್ತೊಮ್ಮೆ ಮಾಗಧನ ವಿಚಿತ್ರವಾದ ಮತ್ತು ದೊಡ್ಡದಾದ ಧನುಸ್ಸನ್ನು ಕ್ಷುರದಿಂದ ಕತ್ತರಿಸಿದನು. ಅವನ ಕೈಚೀಲ, ಪತಾಕೆ, ಧ್ವಜಗಳೆಲ್ಲವೂ ಅರ್ಜುನನ ಬಾಣಪ್ರಹಾರಗಳಿಂದ ಕ್ಷಣಮಾತ್ರದಲ್ಲಿ ಕೆಳಗುರುಳಿದುವು. ಕುದುರೆಗಳಿಂದಲೂ, ಸಾರಥಿಗಳಿಂದಲೂ, ಧನುಸ್ಸಿನಿಂದಲೂ ವಿಹೀನನಾಗಿದ್ದ ಮೇಘಸಂಧಿಯು ವ್ಯಥೆಗೊಂಡನು. ಆದರೂ ವೇಗವಂತನಾದ ಮಾಗಧನು ಕ್ಷತ್ರಧರ್ಮವನ್ನು ಪರಿಪಾಲಿಸುತ್ತಾ ಧೈರ್ಯಗೆಡದೇ ಗದೆಯನ್ನೆತ್ತಿಕೊಂಡು ಅರ್ಜುನನ ಕಡೆಗೆ ಧಾವಿಸಿದನು. ಮೇಘಸಂಧಿಯು ಎಷ್ಟು ವೇಗವಾಗಿ ಅರ್ಜುನನ ಕಡೆಗೆ ಧಾವಿಸಿದನೋ–ಅಷ್ಟೇ ವೇಗವಾಗಿ ಅವನ ಕೈಯಲ್ಲಿದ್ದ ಗದೆಯು ಕೆಳಕ್ಕೆ ಬಿದ್ದಿತು. ಅರ್ಜುನನು ರಣಹದ್ದಿನ ರೆಕ್ಕೆಗಳಿದ್ದ ಅನೇಕಬಾಣಗಳಿಂದ ಸುವರ್ಣಭೂಷಿತವಾಗಿದ್ದ ಆ ಗದೆಯನ್ನು ಅನೇಕಪ್ರಕಾರವಾಗಿ ತುಂಡರಿಸಿದನು. ಗದೆಯಲ್ಲಿದ್ದ ಮಣಿಕಟ್ಟು ಚೆಲ್ಲಾ-ಪಿಲ್ಲಿಯಾಯಿತು. ಗದೆಯೂ ನುಚ್ಚುನೂರಾಯಿತು. ಮುಷ್ಟಿಯಿಂದ ಬಿಡಲ್ಪಟ್ಟ ಹೆಣ್ಣುಸರ್ಪದಂತೆ ಆ ಗದೆಯು ನೆಲದ ಮೇಲೆ ಬಿದ್ದಿತು. ರಥದಿಂದಲೂ, ಧನುಸ್ಸಿನಿಂದಲೂ ಮತ್ತು ಗದೆಯಿಂದಲೂ ವಿಹೀನನಾಗಿದ್ದ ಮಾಗಧನನ್ನು ಅರ್ಜುನನು ಸಂತೈಸುತ್ತಾ ಹೇಳಿದನು:

"ಮಗು! ನೀನು ಕ್ಷತ್ರಧರ್ಮವನ್ನು ಸಾಕಷ್ಟು ಪ್ರದರ್ಶಿಸಿರುವೆ. ನೀನಿನ್ನು ನಿನ್ನ ಪಟ್ಟಣಕ್ಕೆ ಹಿಂದಿರುಗು. ನೀನಿನ್ನೂ ಬಾಲಕನು. ಆದರೂ ರಣರಂಗದಲ್ಲಿ ನೀನು ಮಾಡಿದ ಸಾಹಸಕಾರ್ಯವು ಅತಿಶಯವಾಗಿದೆ. (ಬಾಲಕನಾದರೂ ಯುವಕನು ತೋರುವ ಪರಾಕ್ರಮವನ್ನೇ ತೋರಿಸಿರುವೆ. ನಿನ್ನ ಈ ವಯಸ್ಸಿಗೆ ನೀನು ತೋರಿರುವ ಪರಾಕ್ರಮವು ಹೆಚ್ಚಿನದೇ ಆಗಿದೆ.) ಎದುರಿಸಿ ಬರುವ ರಾಜರನ್ನು ಯಾವುದೇ ಕಾರಣದಿಂದಲೂ ಸಂಹರಿಸಬಾರದೆಂದು ಯುಧಿಷ್ಠಿರನು ಆದೇಶವನ್ನಿತ್ತಿದ್ದಾನೆ. ಈ ಕಾರಣದಿಂದಲೇ ನೀನು ನನಗೆ ಅಪರಾಧಮಾಡಿಯೂ ಜೀವಿಸಿರಲು ಸಾಧ್ಯವಾಗಿದೆ."

ಜನಮೇಜಯ! ಅರ್ಜುನನ ಆ ಮಾತನ್ನು ಕೇಳಿ ಮೇಘಸಂಧಿಯು ತಾನು ಯುದ್ಧದಲ್ಲಿ ಅರ್ಜುನನಿಂದ ನಿರಾಕೃತನಾದೆನೆಂದು ತಿಳಿದು, ಅವನ ಮಾತನ್ನು ಸತ್ಯವೆಂದು ಭಾವಿಸಿ ಅರ್ಜುನನ ಬಳಿಗೆ ಹೋಗಿ ಕೈಜೋಡಿಸಿ ಪ್ರಾರ್ಥಿಸಿದನು:

"ಅರ್ಜುನ! ನಿನಗೆ ಮಂಗಳವಾಗಲಿ. ನಾನು ಪರಾಜಿತನಾಗಿದ್ದೇನೆ. ಇನ್ನು ಮುಂದೆ ನಿನ್ನೊಡನೆ ಯುದ್ಧಮಾಡಲಾರೆನು. ನನ್ನಿಂದ ಯಾವ ಕಾರ್ಯವಾಗಬೇಕಾಗಿರುವುದೋ ಅದನ್ನು ಹೇಳು. ಆ ಕಾರ್ಯವು ಪೂರ್ಣವಾಯಿತೆಂದೇ ಭಾವಿಸು. ನೀನು ಹೇಳುವ ಯಾವುದೇ ಕಾರ್ಯವನ್ನಾಗಲೀ ಮಾಡಲು ಸಿದ್ಧನಾಗಿರುವೆನು."

ಹೀಗೆ ಪ್ರಾರ್ಥಿಸಿದ ಮೇಘಸಂಧಿಯನ್ನು ಅರ್ಜುನನು ಸಂತೈಸುತ್ತಾ ಹೇಳಿದನು:

"ನರೇಶ್ವರನೇ! ಮುಂದಿನ ಚೈತ್ರದ ಹುಣ್ಣಿಮೆಯಿಂದ ಪ್ರಾರಂಭವಾಗುವ ನಮ್ಮ ರಾಜನ ಅಶ್ವಮೇಧಯಾಗಕ್ಕೆ ನೀನು ಆಗಮಿಸಬೇಕು."

ಜನಮೇಜಯ! ಅರ್ಜುನನ ಆ ಮಾತಿಗೆ ಮೇಘಸಂಧಿಯು ಹಾಗೆಯೇ ಆಗಲೆಂದು ಹೇಳಿ ಯುದ್ಧವೀರನಾದ ಅರ್ಜುನನನ್ನೂ ಮತ್ತು ಯಜ್ಞದ ಕುದುರೆಯನ್ನೂ ವಿಧಿವತ್ತಾಗಿ ಪೂಜಿಸಿ ಸತ್ಕರಿಸಿದನು. ಅನಂತರ ಆ ಕುದುರೆಯು ಪುನಃ ಯಥೇಷ್ಟವಾಗಿ ಸಂಚಾರಹೊರಟಿತು. ಸಮುದ್ರದ ತೀರದಲ್ಲಿಯೇ ಹೋಗುತ್ತಿದ್ದ ಆ ಕುದುರೆಯು ವಂಗ-ಪುಂಡ್ರ-ಕೋಸಲ ದೇಶಗಳಿಗೂ ಹೋಯಿತು. ಆ ದೇಶಗಳಲ್ಲಿದ್ದ ಅನೇಕ ಮ್ಲೇಚ್ಛಸೈನಿಕರನ್ನು ಅರ್ಜುನನು ಗಾಂಡೀವಧನುಸ್ಸಿನಿಂದ ಗೆದ್ದನು.

೮೨ನೆಯ ಅಧ್ಯಾಯವು ಮುಗಿಯಿತು.

ಕುದುರೆಯು ದಕ್ಷಿಣ ಮತ್ತು ಪಶ್ಚಿಮಸಮುದ್ರಗಳ ತೀರಗಳಲ್ಲಿ ಸಂಚರಿಸುತ್ತಾ ದ್ವಾರಕಾ, ಪಂಚನದ ಮತ್ತು ಗಾಂಧಾರ ದೇಶಗಳನ್ನು ಪ್ರವೇಶಿಸಿದುದು

ವೈಶಂಪಾಯನರು ಹೇಳುತ್ತಾರೆ:

ಮಾಗಧೇನಾರ್ಚಿತೋ ರಾಜನ್ಪಾಣ್ಡವಃ ಶ್ವೇತವಾಹನಃ।
ದಕ್ಷಿಣಾಂ ದಿಶಮಾಸ್ಥಾಯ ಚಾರಯಾಮಾಸ ತಂ ಹಯಮ್ ॥೧॥

ಜನಮೇಜಯ! ಮಗಧದೇಶದ ರಾಜನಾದ ಮೇಘಸಂಧಿಯಿಂದ ಸತ್ಕೃತನಾದ ಶ್ವೇತವಾಹನನಾದ ಅರ್ಜುನನು ದಕ್ಷಿಣದಿಕ್ಕಿನ ಕಡೆಗೆ ಕುದುರೆಯನ್ನು ನಡೆಸಿಕೊಂಡು ಹೋದನು. ಇಚ್ಛಾನುಸಾರವಾಗಿ ಸಂಚರಿಸುತ್ತಿದ್ದ ಬಲಿಷ್ಠವಾದ ಆ ಕುದುರೆಯು ಅಲ್ಲಿಂದ ಪುನಃ ಹಿಂದಿರುಗಿ ಚೇದಿ ದೇಶೀಯರ ಸುಂದರರಾಜಧಾನಿಯಾದ ಶುಕ್ತಿ (ಮಾಹಿಷ್ಮತೀ) ಎಂಬ ಹೆಸರಿನ ಪಟ್ಟಣವನ್ನು ಪ್ರವೇಶಿಸಿತು. ಅಲ್ಲಿ ಶಿಶುಪಾಲನ ಮಗನಾದ ಶರಭನು ಕ್ಷತ್ರಧರ್ಮಾನುಸಾರವಾಗಿ ಮಹಾಬಲಿಷ್ಠನಾದ ಅರ್ಜುನನನ್ನು ಪೂಜಿಸಿದನು. ಬಳಿಕ ಶ್ರೇಷ್ಠವಾದ ಆ ಕುದುರೆಯು ಕಾಶೀ, ಕೋಸಲ, ಕಿರಾತ, ತಂಗಣ–ಇವೇ ಮೊದಲಾದ ದೇಶಗಳಲ್ಲಿ ಅನುಕ್ರಮವಾಗಿ ಸಂಚರಿಸಿತು. ಆ ಎಲ್ಲ ದೇಶಗಳಲ್ಲಿಯೂ ಧನಂಜಯನು ಯಥಾವಿಧಿಯಾಗಿ ಸತ್ಕಾರವನ್ನು ಸ್ವೀಕರಿಸಿ ಪುನಃ ಹಿಂದಿರುಗಿ ಕುದುರೆಯನ್ನನುಸರಿಸಿ ದಶಾರ್ಣದೇಶಕ್ಕೆ ಬಂದನು.

ದಶಾರ್ಣದೇಶದಲ್ಲಿ ಬಲಿಷ್ಠನಾದ ಅರಿಮರ್ದನನಾದ ಚಿತ್ರಾಂಗದ ನೆಂಬ ರಾಜನಿದ್ದನು. ಅವನೊಡನೆ ಅರ್ಜುನನು ಭಯಂಕರವಾದ ಯುದ್ಧವನ್ನೇ ಮಾಡಬೇಕಾಯಿತು. ಪುರುಷಶ್ರೇಷ್ಠನಾದ ಅರ್ಜುನನು ಚಿತ್ರಾಂಗದನನ್ನು ಪರಾಜಯಗೊಳಿಸಿ ತನ್ನ ಸಾಮಂತನನ್ನಾಗಿ ಮಾಡಿ ಕೊಂಡು, ನಿಷಾದರಾಜನಾದ ಏಕಲವ್ಯನ ರಾಜ್ಯಕ್ಕೆ ಕುದುರೆಯನ್ನನುಸರಿಸಿ ಹೋದನು. ಏಕಲವ್ಯನ ಮಗನು ಅರ್ಜುನನನ್ನು ಯುದ್ಧದ ಮೂಲಕ

ವಾಗಿಯೇ ಸ್ವಾಗತಿಸಿದನು. ಆ ಸಮಯದಲ್ಲಿ ಅರ್ಜುನನಿಗೂ ನಿಷಾದರಿಗೂ ರೋಮಾಂಚಕರವಾದ ಯುದ್ಧವೇ ನಡೆಯಿತು. ಯುದ್ಧಗಳಲ್ಲಿ ಯಾವಾಗಲೂ ಅಪಜಯವೆಂಬುದನ್ನೇ ಕಾಣದ, ಎದುರಿಸಲು ಅಸಾಧ್ಯನಾದ ಕೌಂತೇಯನು ಯಜ್ಞಕ್ಕೆ ವಿಘ್ನವನ್ನುಂಟುಮಾಡುವ ಸಲುವಾಗಿ ಯುದ್ಧಕ್ಕೆ ಬಂದ ಏಕಲವ್ಯನ ಮಗನನ್ನು ಯುದ್ಧದಲ್ಲಿ ಗೆದ್ದನು. ನಿಷಾದರಾಜನನ್ನು ಜಯಿಸಿದನಂತರ ಇಂದ್ರನ ಮಗನಾದ ಅರ್ಜುನನು ಅವನಿಂದಲೂ ಸತ್ಕೃತನಾಗಿ ಪುನಃ ಕುದುರೆಯನ್ನನುಸರಿಸಿ ದಕ್ಷಿಣಸಮುದ್ರದ ತೀರಪ್ರದೇಶಕ್ಕೆ ಹೋದನು. ದಕ್ಷಿಣದೇಶದಲ್ಲಿ ದ್ರಾವಿಡರೂ, ಆಂಧ್ರರೂ, ರೌದ್ರರೂ, ಮಾಹಿಷಕರೂ, ಕೋಲಾಚಲದ ಪ್ರಾಂತದಲ್ಲಿರುವವರೂ ಅರ್ಜುನನೊಡನೆ ಯುದ್ಧಮಾಡಿದರು. ಕಿರೀಟಿಯು ಅವರೊಡನೆ ಹೆಚ್ಚು ಶ್ರಮಪಡದೇ ಯುದ್ಧಮಾಡಿ ಅವರೆಲ್ಲರನ್ನೂ ಗೆದ್ದನು. ಕುದುರೆಗೆ ಅಧೀನನಾಗಿದ್ದ ಅರ್ಜುನನು ಅದರ ಹಿಂದೆಯೇ ಸೌರಾಷ್ಟ್ರದೇಶಕ್ಕೆ ಹೋದನು. ಅಲ್ಲಿಂದ ಮುಂದೆ ಗೋಕರ್ಣಕ್ಕೂ ಪ್ರಭಾಸಕ್ಷೇತ್ರಕ್ಕೂ ಹೋದನು. ಬಳಿಕ ಕುರುರಾಜನಾದ ಯುಧಿಷ್ಠಿರನ ಶ್ರೀಯುಕ್ತವಾದ ಆ ಕುದುರೆಯು ವೃಷ್ಣಿವೀರರಿಂದ ಪಾಲಿಸಲ್ಪಡುತ್ತಿದ್ದ ರಮ್ಯವಾದ ದ್ವಾರಾವತಿಗೆ ಹೋಯಿತು. ಯಾದವಕುಮಾರರು ಶ್ರೇಷ್ಠವಾದ ಆ ಯಜ್ಞಾಶ್ವವನ್ನು ಬಲಾತ್ಕಾರವಾಗಿ ಬಂಧಿಸಿ ಅರ್ಜುನನ ಮೇಲೆ ಯುದ್ಧಕ್ಕೆ ಹೊರಟರು. ಆದರೆ ಉಗ್ರಸೇನನು ಯಾದವರನ್ನು ಯುದ್ಧಕ್ಕೆ ಹೋಗದಂತೆ ತಡೆದನು. ಬಳಿಕ ವೃಷ್ಣಿ ಮತ್ತು ಅಂಧಕರ ಪತಿಯಾದ ಉಗ್ರಸೇನನು ಅರ್ಜುನನ ಸೋದರಮಾವನಾದ ವಸುದೇವನನ್ನು ಜೊತೆಯಲ್ಲಿ ಕರೆದುಕೊಂಡು ಅರ್ಜುನನ ಬಳಿಗೆ ಬಂದನು. ಇಬ್ಬರೂ ಭರತಶ್ರೇಷ್ಠನನ್ನು ವಿಧಿವತ್ತಾಗಿ ಪೂಜಿಸಿ ಸತ್ಕರಿಸಿದರು. ಅನಂತರ ಅರ್ಜುನನು ಉಗ್ರಸೇನ-ವಸುದೇವರ ಅನುಮತಿಯನ್ನು ಪಡೆದು ಕುದುರೆಯ ಮಾರ್ಗವನ್ನೇ ಅನುಸರಿಸಿ ಪ್ರಯಾಣಮಾಡಿದನು. ಬಳಿಕ ಕುದುರೆಯು ಸಮುದ್ರದ ಪಶ್ಚಿಮತೀರದಲ್ಲಿದ್ದ ಸಂಪತ್ಸಮೃದ್ಧವಾಗಿದ್ದ ದೇಶಗಳಲ್ಲಿ ಅನುಕ್ರಮವಾಗಿ ಸಂಚರಿಸುತ್ತಾ ಪಂಚನದಪ್ರದೇಶವನ್ನು ಪ್ರವೇಶಿಸಿತು. ಅನಂತರ ಗಾಂಧಾರದೇಶವನ್ನು ಪ್ರವೇಶಿಸಿ ಸ್ವೇಚ್ಛೆಯಿಂದ ಸಂಚರಿಸತೊಡಗಿತು.

ಅರ್ಜುನನೂ ಅದನ್ನೇ ಹಿಂಬಾಲಿಸುತ್ತಾ ಹೋದನು. ಹಿಂದಿದ್ದ ವೈರವನ್ನೇ ಮುಂದುವರಿಸಿಕೊಂಡು ಹೋಗುತ್ತಿದ್ದ ಗಾಂಧಾರರಾಜನಾದ ಶಕುನಿಯ ಮಗನಿಗೂ ಮತ್ತು ಅರ್ಜುನನಿಗೂ ಘೋರವಾದ ಯುದ್ಧವಾಯಿತು.

೮೩ನೆಯ ಅಧ್ಯಾಯವು ಮುಗಿಯಿತು.

೮೪ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಶಕುನಿಯ ಮಗನ ಪರಾಜಯ

ವೈಶಂಪಾಯನರು ಹೇಳುತ್ತಾರೆ:

ಶಕುನೇಸ್ತನಯೋ ವೀರೋ ಗಾನ್ಧಾರಾಣಾಂ ಮಹಾರಥಃ।
ಪ್ರತ್ಯುದ್ಯಯೌ ಗುಡಾಕೇಶಂ ಸೈನ್ಯೇನ ಮಹತಾ ವೃತಃ ॥೧॥

ಜನಮೇಜಯ! ಗಾಂಧಾರವೀರನಾದ, ಮಹಾರಥನಾದ ಶಕುನಿಯ ಮಗನು ಆನೆ, ಕುದುರೆ ಮತ್ತು ರಥಗಳಿಂದ ಯುಕ್ತವಾದ, ಪತಾಕಾ-ಧ್ವಜಗಳ ಮಾಲೆಯಿಂದ ಸಮಲಂಕೃತವಾದ ಮಹಾಸೈನ್ಯದಿಂದ ಪರಿವೃತನಾಗಿ ಅರ್ಜುನನೊಡನೆ ಯುದ್ಧಮಾಡಲು ಹೊರಟನು. ಭಾರತಯುದ್ಧದಲ್ಲಿ ತಮ್ಮ ರಾಜನಾದ ಶಕುನಿಯ ವಧೆಯನ್ನು ಸಹಿಸದಿದ್ದ ಆ ಗಾಂಧಾರಯೋಧರು ಧನುಸ್ಸುಗಳನ್ನು ಹಿಡಿದುಕೊಂಡು ಸಂಘಟಿತರಾಗಿ ಅರ್ಜುನನ ಮೇಲೆ ದಾಳಿಮಾಡಲು ಹೊರಟರು. ಯುದ್ಧಮಾಡಲು ಬಂದ ಗಾಂಧಾರ ಪ್ರಮುಖರಿಗೆ ಅಪರಾಜಿತನಾದ ಧರ್ಮಾತ್ಮನಾದ ಅರ್ಜುನನು ಯುಧಿಷ್ಠಿರನು ಹೇಳಿಕಳುಹಿಸಿದ್ದ ಸಂದೇಶವನ್ನು ಹೇಳಿದನು. ಆದರೆ ಅದನ್ನು ಗಾಂಧಾರ ವೀರರು ಮಾನ್ಯಮಾಡಲಿಲ್ಲ. ಅರ್ಜುನನು ಸಾಂತ್ವಪೂರ್ವಕವಾದ ಮಾತುಗಳಿಂದ ಅವರನ್ನು ಯುದ್ಧಮಾಡದಂತೆ ತಡೆಯುತ್ತಿದ್ದರೂ ಅಸಹನಶೀಲರಾದ ಅವರು ಕುದುರೆಯನ್ನು ಸುತ್ತುವರಿದು ಬಂಧಿಸಹೊರಟರು. ಅದನ್ನು ನೋಡಿ ಅರ್ಜುನನು ಕುಪಿತನಾದನು. ಬಳಿಕ ಅರ್ಜುನನು ಗಾಂಡೀವಧನುಸ್ಸಿನಿಂದ ಬಿಡಲ್ಪಟ್ಟ ಪ್ರದೀಪ್ತವಾದ ಅಗ್ರಭಾಗಗಳುಳ್ಳ ಕ್ಷುರಗಳಿಂದ ಹೆಚ್ಚಿನ ಪ್ರಯತ್ನವಿಲ್ಲದೇ ಗಾಂಧಾರಯೋಧರ ತಲೆಗಳನ್ನು ತುಂಡರಿಸಿದನು. ಬಾಣಗಳ ಸುರಿಸುವಿಕೆಯಿಂದ ಬಹಳವಾಗಿ ಪೀಡಿತರಾದ ಗಾಂಧಾರಯೋಧರು ಪಾರ್ಥನಿಂದ ಪರಾಜಿತರಾಗಿ ಕುದುರೆಯನ್ನು ಬಿಟ್ಟು ಅತ್ಯಂತವೇಗವಾಗಿ ಪಲಾಯನಮಾಡಿದರು. ಕೆಲವು ಗಾಂಧಾರಯೋಧರು

ಅರ್ಜುನನನ್ನು ನಿಶಿತವಾದ ಬಾಣಗಳಿಂದ ಪೀಡಿಸುತ್ತಿದ್ದರೂ ಪಾಂಡುನಂದನನು ಅವರನ್ನು ಹೆಸರುಗಳಿಂದಲೇ ಕರೆಯುತ್ತಾ ಅವರ ಶಿರಸ್ಸುಗಳನ್ನು ಕತ್ತರಿಸುತ್ತಿದ್ದನು. ಹೀಗೆ ಎಲ್ಲ ಕಡೆಗಳಲ್ಲಿಯೂ ಗಾಂಧಾರಸೈನಿಕರು ವಧಿಸಲ್ಪಡುತ್ತಿರಲಾಗಿ ಗಾಂಧಾರರಾಜನಾದ ಶಕುನಿಯ ಮಗನು ಅರ್ಜುನನನ್ನು ನಿರೋಧಿಸಿದನು. ಕ್ಷತ್ರಧರ್ಮವನ್ನು ಪರಿಪಾಲಿಸುತ್ತಾ ತನ್ನೊಡನೆ ಯುದ್ಧ ಮಾಡುತ್ತಿದ್ದ ಶಕುನಿಯ ಮಗನಿಗೆ ಅರ್ಜುನನು-"ಮಹಾರಾಜ! ಯುಧಿಷ್ಠಿರನ ಆಜ್ಞಾನುಸಾರವಾಗಿ ನಾನು ರಾಜನನ್ನು ಕೊಲ್ಲುವುದಿಲ್ಲ. ಯುದ್ಧವನ್ನು ನಿಲ್ಲಿಸು. ಮುಂದುವರಿಸಿ ಪರಾಜಿತನಾಗಬೇಡ"–ಎಂದು ಹೇಳಿದನು.

ಜನಮೇಜಯ! ಶಕುನಿಯ ಮಗನು ಅಜ್ಞಾನದಿಂದ ವಿಮೋಹಿತನಾಗಿ, ಅರ್ಜುನನ ಆ ಹಿತವಚನವನ್ನು ಅನಾದರಣೆಮಾಡಿ, ಇಂದ್ರನ ಪರಾಕ್ರಮಕ್ಕೆ ಸದೃಶವಾದ ಪರಾಕ್ರಮವನ್ನು ಹೊಂದಿದ್ದ ಅರ್ಜುನನನ್ನು ಶೀಘ್ರಗಾಮಿಗಳಾದ ಬಾಣಗಳಿಂದ ಮುಚ್ಚಿದನು. ಮರುಕ್ಷಣದಲ್ಲಿಯೇ ಮಹಾತ್ಮನಾದ ಅರ್ಜುನನು ಶಕುನಿಯ ಮಗನ ಶಿರಸ್ತ್ರಾಣವನ್ನು ಅರ್ಧಚಂದ್ರವೆಂಬ ಬಾಣದಿಂದ ಜಯದ್ರಥನ ತಲೆಯನ್ನು ಹಾರಿಸಿದಂತೆ ಹಾರಿಸಿಬಿಟ್ಟನು. ಅರ್ಜುನನ ಆ ಕೈಚಳಕವನ್ನು ನೋಡಿ ಗಾಂಧಾರಯೋಧರೆಲ್ಲರೂ ವಿಸ್ಮಿತರಾದರು. ಉದ್ದೇಶಪೂರ್ವಕವಾಗಿಯೇ ಅರ್ಜುನನು ರಾಜನನ್ನು ಸಂಹರಿಸಲಿಲ್ಲವೆಂಬುದನ್ನು ಎಲ್ಲ ಗಾಂಧಾರರೂ ತಿಳಿದುಕೊಂಡರು. ಆ ಸಮಯದಲ್ಲಿ ಶಕುನಿಯ ಮಗನು ಪಲಾಯನಮಾಡಲು ಸಮಯವನ್ನು ಹುಡುಕುತ್ತಿದ್ದನು. ಸಿಂಹವನ್ನು ಕಂಡ ಸಣ್ಣ-ಸಣ್ಣ ಮೃಗಗಳು ಓಡಿಹೋಗುವಂತೆ–ಅರ್ಜುನನ ಬಾಣಗಳಿಗೆ ಹೆದರಿ ಗಾಂಧಾರಯೋಧರೊಡನೆ ಶಕುನಿಯ ಮಗನು ಪಲಾಯನಮಾಡಿದನು. ರಣರಂಗದಲ್ಲಿಯೇ ಸಂಘಟಿತರಾಗಿ ಪುನಃ ಯುದ್ಧಕ್ಕೆ ಬರಲು ಸುತ್ತಾಡುತ್ತಿದ್ದ ಗಾಂಧಾರಯೋಧರ ಶಿರಸ್ಸುಗಳನ್ನು ಪಾರ್ಥನು ಬಗ್ಗಿದ ಗಿಣ್ಣುಗಳಿಂದ ಕೂಡಿದ್ದ ಭಲ್ಲಗಳಿಂದ ವೇಗವಾಗಿ ಕತ್ತರಿಸಿದನು. ಪಾರ್ಥನಿಂದ ಬಿಡಲ್ಪಟ್ಟ ಗಾಂಡೀವಧನುಸ್ಸಿನಿಂದ ಹೊರಬರುತ್ತಿದ್ದ ಬಾಣಗಳು ಯೋಧರು ಮೇಲೆತ್ತಿದ್ದ ಭುಜಗಳನ್ನು ಕತ್ತರಿಸಿದುವು. ಆದರೆ ತಮ್ಮ ಭುಜಗಳು ಪಾರ್ಥನ ಬಾಣಗಳಿಂದ ಕತ್ತರಿಸಲ್ಪಟ್ಟಿವೆಯೆಂಬುದನ್ನೇ ಅವರು ಸ್ವಲ್ಪಕಾಲದವರೆಗೆ ತಿಳಿಯುತ್ತಿರಲಿಲ್ಲ. ಭ್ರಾಂತಿಗೊಂಡ ಪದಾತಿಗಳಿಂದಲೂ ಆನೆಗಳಿಂದಲೂ ಕುದುರೆಗಳಿಂದಲೂ ಕೂಡಿದ್ದ ಗಾಂಧಾರಸೇನೆಯು ಪಲಾಯನಮಾಡತೊಡಗಿತು. ಹತವಾದ

ಮತ್ತು ನಾಶಹೊಂದಿದ ಆ ಸೈನ್ಯವು ಪುನಃ ಪುನಃ ಸಂಘಟಿತವಾಗಿ ಪಾರ್ಥನೊಡನೆ ಯುದ್ಧಮಾಡಲು ಬರುತ್ತಲೇ ಇದ್ದಿತು. ಆದರೆ ಸ್ವಲ್ಪಹೊತ್ತಿನಲ್ಲಿಯೇ ಪಾರ್ಥನು ಅವರೆಲ್ಲರನ್ನೂ ವಿನಾಶಗೊಳಿಸಿದನು. ಅಳಿದುಳಿದವರು ಓಡಿಹೋದರು. ಶ್ರೇಷ್ಠಕರ್ಮನಾದ ವೀರನಾದ ಅರ್ಜುನನ ಮುಂದೆ ಯಾವನೊಬ್ಬನೂ ಕಾಣಿಸಲಿಲ್ಲ. ಅರ್ಜುನನ ಬಾಣಗಳನ್ನು ಸಹಿಸಿಕೊಳ್ಳಲು ಸಮರ್ಥರಾಗಿದ್ದ ಶತ್ರುಯೋಧರೆಲ್ಲರೂ ಅರ್ಜುನನಿಂದ ಹತರಾಗಿ ಹೋದರು. ಅನಂತರ ಅತ್ಯಂತ ಭಯಗೊಂಡ ರಾಜನ ತಾಯಿಯು (ಶಕುನಿಯ ಪತ್ನಿಯು) ವೃದ್ಧರಾದ ಮಂತ್ರಿಗಳನ್ನು ಮುಂದೆಮಾಡಿಕೊಂಡು ಉತ್ತಮವಾದ ಅರ್ಘ್ಯ-ಪಾದ್ಯಾದಿಗಳನ್ನು (ಕಾಣಿಕೆಗಳನ್ನು) ತೆಗೆಸಿಕೊಂಡು ಪಟ್ಟಣದಿಂದ ಹೊರಟು ರಣಭೂಮಿಗೆ ಬಂದಳು. ಬಂದೊಡನೆಯೇ ಯುದ್ಧಮಾಡುವುದರಲ್ಲಿಯೇ ಏಕಾಗ್ರಚಿತ್ತನಾಗಿದ್ದ ಮತ್ತು ಯುದ್ಧದುರ್ಮದನಾಗಿದ್ದ ಮಗನನ್ನು ಯುದ್ಧವನ್ನು ಮುಂದುವರಿಸದಂತೆ ತಡೆದಳು. ಕ್ಲಿಷ್ಟವಾದ ಕರ್ಮವನ್ನು ಅನಾಯಾಸವಾಗಿ ಮಾಡುವ ಜಿಷ್ಣುವನ್ನು ಪ್ರಿಯವಾದ ಮಾತುಗಳಿಂದ ಪ್ರಸನ್ನಗೊಳಿಸಿದಳು. ಸಮರ್ಥನಾದ ಅರ್ಜುನನು ಪ್ರಸನ್ನನಾಗಿ ಅವಳನ್ನು ಪುರಸ್ಕರಿಸಿದನು. ಶಕುನಿಯ ಮಗನನ್ನು ಸಂತೈಸುತ್ತಾ ಹೇಳಿದನು:

"ಮಹಾಬಾಹುವೇ! ಶತ್ರುಹಂತಕನೇ! ನಿಷ್ಪಾಪನೇ! ನನ್ನೊಡನೆ ಯುದ್ಧಮಾಡಬೇಕೆಂದು ನಿಶ್ಚಯಿಸಿದ ಈ ನಿನ್ನ ಬುದ್ಧಿಯು ನನಗೆ ಪ್ರಿಯವಾಗಲಿಲ್ಲ. ಏಕೆಂದರೆ: ನೀನು ನನ್ನ ಸಹೋದರನೇ ಆಗಿರುವೆ. ನನ್ನ ತಾಯಿಯೂ ನಿನ್ನ ಸೋದರತ್ತೆಯೂ ಆದ ಗಾಂಧಾರಿಯನ್ನು ಸ್ಮರಿಸಿ ಧೃತರಾಷ್ಟ್ರನ ಸಲುವಾಗಿ ನಾನು ನಿನ್ನನ್ನು ಉಪೇಕ್ಷಿಸಿದೆನು. ಅದರಿಂದಲೇ ನಿನ್ನ ಅನುಯಾಯಿಗಳೆಲ್ಲರೂ ಹತರಾದರೂ ನೀನಿನ್ನೂ ಜೀವಂತನಾಗಿ ಉಳಿದಿರುವೆ. ಇನ್ನು ಮುಂದೆ ನಮ್ಮೊಡನೆ ಹೀಗೆ ವರ್ತಿಸಬೇಡ. ವೈರವು ಉಪಶಮನಗೊಳ್ಳಲಿ. ನಿನ್ನ ನಿಕಟಬಂಧುಗಳಾದ ನಮ್ಮೊಡನೆ ಯುದ್ಧಮಾಡಬೇಕೆನ್ನುವ ಈ ವಿಧವಾದ ಬುದ್ಧಿಯು ನಿನಗೆ ಮುಂದೆಂದೂ ಉಂಟಾಗದಿರಲಿ. ಮುಂದಿನ ಚೈತ್ರಶುದ್ಧ ಹುಣ್ಣಿಮೆಯಿಂದ ಪ್ರಾರಂಭವಾಗುವ ಯಜ್ಞದಲ್ಲಿ ಭಾಗವಹಿಸಲು ನೀನು ಅವಶ್ಯವಾಗಿ ಹಸ್ತಿನಾಪಟ್ಟಣಕ್ಕೆ ಬರಬೇಕು."

ಲಳನೆಯ ಅಧ್ಯಾಯವು ಮುಗಿಯಿತು.

ಯಜ್ಞಭೂಮಿಯ ಸಿದ್ಧತೆ

ವೈಶಂಪಾಯನರು ಹೇಳುತ್ತಾರೆ:

ಇತ್ಯುಕ್ತ್ವಾನುಯಯೌ ಪಾರ್ಥೋ ಹಯಂ ಕಾಮವಿಹಾರಿಣಮ್ ।
ನ್ಯವರ್ತತ ತತೋ ವಾಜೀ ಯೇನ ನಾಗಾಹ್ವಯಂ ಪುರಮ್ ॥೧॥

ಜನಮೇಜಯ! ಅರ್ಜುನನು ಶಕುನಿಯ ಮಗನಿಗೆ ಹೀಗೆ ಹೇಳಿ ಸ್ವೇಚ್ಛಾವಿಹಾರಿಯಾದ ಕುದುರೆಯನ್ನು ಅನುಸರಿಸಿ ಹೊರಟನು. ಬಳಿಕ ಆ ಕುದುರೆಯು ಗಾಂಧಾರರಾಜ್ಯದಿಂದ ಹಸ್ತಿನಾಪುರಕ್ಕೆ ಹಿಂದಿರುಗಿತು.

ಆ ವೇಳೆಗೆ ಯುಧಿಷ್ಠಿರನು ಚಾರರ ಮೂಲಕವಾಗಿ ಯಜ್ಞದ ಕುದುರೆಯು ಹಿಂದಿರುಗುತ್ತಿರುವುದನ್ನೂ ಜೊತೆಯಲ್ಲಿ ಹೋಗಿದ್ದ ಅರ್ಜುನನು ಕುಶಲದಿಂದಿರುವನೆಂಬುದನ್ನೂ ಕೇಳಿ ಪ್ರಸನ್ನಚಿತ್ತನಾದನು. ವಿಜಯನು ಗಾಂಧಾರದೇಶದಲ್ಲಿ ಮತ್ತು ಇತರ ದೇಶಗಳಲ್ಲಿ ತೋರಿದ ಸಾಹಸಕರ್ಮಗಳನ್ನೂ ಮತ್ತು ತಾನು ಹೇಳಿದಂತೆ ನಡೆದುಕೊಂಡುದನ್ನೂ ಕೇಳಿ ಯುಧಿಷ್ಠಿರನ ಸಂತೋಷಕ್ಕೆ ಪಾರವೇ ಇಲ್ಲವಾಯಿತು. ಅಂದು ಪುಷ್ಯನಕ್ಷತ್ರದಿಂದ ಕೂಡಿದ ಮಾಘ ಶುದ್ಧ ದ್ವಾದಶೀ ತಿಥಿಯಾಗಿದ್ದಿತು. ಮಹಾತೇಜಸ್ವಿಯಾದ, ಮಹೀಪತಿಯಾದ ಯುಧಿಷ್ಠಿರನು ತನ್ನ ಸಹೋದರರಾದ ಭೀಮ-ನಕುಲ-ಸಹದೇವರನ್ನು ಕರೆಯಿಸಿದನು. ಧರ್ಮಾತ್ಮರಲ್ಲಿ ಶ್ರೇಷ್ಠನಾದ ಯುಧಿಷ್ಠಿರನು ಮೊದಲು ಶತ್ರುಗಳನ್ನು ಪ್ರಹರಿಸುವವರಲ್ಲಿ ಶ್ರೇಷ್ಠನಾದ ಭೀಮಸೇನನನ್ನು ಸಂಬೋಧಿಸಿ ಹೇಳಿದನು: "ಭೀಮಸೇನ! ನಿನ್ನ ತಮ್ಮನಾದ ಅರ್ಜುನನು ಯಜ್ಞಾಶ್ವದ ಜೊತೆಯಲ್ಲಿ ಹಸ್ತಿನಾಪುರದ ಕಡೆಗೆ ಬರುತ್ತಿದ್ದಾನೆಂದು ಅವನ ಜೊತೆಯಲ್ಲಿ ಹೋಗಿದ್ದ ಪುರುಷರು ಮುಂದಾಗಿ ಬಂದು ಹೇಳಿರುವರು. ಯಜ್ಞವನ್ನು ಆರಂಭಿಸಬೇಕಾಗಿರುವ ಕಾಲವು ಹತ್ತಿರಕ್ಕೆ ಬರುತ್ತಿದೆ. ಕುದುರೆಯೂ ವಿಶ್ವಪರ್ಯಟನಮಾಡಿ ನಮ್ಮ ಸಮೀಪಕ್ಕೆ ಬರುತ್ತಿದೆ. ಇದು ಮಾಘಮಾಸದ ಹುಣ್ಣಿಮೆಯಾಗಿದೆ. ಈ ಮಧ್ಯದಲ್ಲಿ ಕೇವಲ ಒಂದು ಮಾಸವು (ಫಾಲ್ಗುಣವು) ಮಾತ್ರವೇ ಉಳಿದಿದೆ. ಆದುದರಿಂದ ವೇದಪಾರಂಗತರಾದ ವಿದ್ವಾಂಸರನ್ನು ಈಗಲೇ ಕಳುಹಿಸಿರಿ. ಅವರು ಅಶ್ವಮೇಧಯಜ್ಞದ ಸಿದ್ಧಿಗಾಗಿ ಪ್ರಶಸ್ತವಾದ ಸ್ಥಳವು ಯಾವುದೆಂಬುದನ್ನು ನೋಡಿಕೊಂಡು ಬರಲಿ."

ಯುಧಿಷ್ಠಿರನು ಹೀಗೆ ಹೇಳುತ್ತಲೇ ಭೀಮನು ನಿವೇಶನದ ಪರೀಕ್ಷಾರ್ಥವಾಗಿ ಬ್ರಾಹ್ಮಣರನ್ನು ಕಳುಹಿಸಿಕೊಟ್ಟನು. ಪುರುಷಶ್ರೇಷ್ಠನಾದ ಗುಡಾಕೇಶನು ಬರುತ್ತಿರುವನೆಂಬ ವಾರ್ತೆಯನ್ನು ಕೇಳಿ ಅವನಿಗೂ ಬಹಳ ಸಂತೋಷವಾಯಿತು. ಬಳಿಕ ಭೀಮಸೇನನು ಪ್ರಾಜ್ಞರಾದ ಸ್ಥಪತಿಗಳೊಡನೆ ಯಜ್ಞಕರ್ಮದಲ್ಲಿ ಕುಶಲವಾದ ಬ್ರಾಹ್ಮಣರನ್ನು ಮುಂದೆಮಾಡಿಕೊಂಡು ಪಟ್ಟಣದಿಂದ ಹೊರಟನು. ಶ್ರೀಮಂತನಾದ ಭೀಮಸೇನನು ಶಾಲವೃಕ್ಷಗಳ ಸಮೂಹದಿಂದ ಕೂಡಿದ್ದ ಭೂಪ್ರದೇಶವನ್ನು ಅಳತೆಮಾಡಿಸಿದನು. ಅನಂತರ ರಾಜಮಾರ್ಗಗಳಿಂದ ಕೂಡಿ ಸಂಘಟಿತವಾಗಿದ್ದ ಯಜ್ಞಶಾಲೆಯನ್ನು ಯಥಾವಿಧಿಯಾಗಿ ಕಟ್ಟಿಸಿದನು. ಯಜ್ಞಶಾಲೆಯ ಸುತ್ತಲೂ ನೂರಾರು ಸೌಧಗಳಿದ್ದುವು. ನೆಲವು ಶ್ರೇಷ್ಠವಾದ ಮಣಿಗಳಿಂದಲೂ, ರತ್ನಗಳಿಂದಲೂ ಖಚಿತವಾಗಿದ್ದಿತು. ಸುವರ್ಣದಿಂದಲೂ, ರತ್ನಗಳಿಂದಲೂ ಸಮಲಂಕೃತವಾಗಿದ್ದ ಅಂತಹ ಯಜ್ಞಶಾಲೆಯನ್ನು ಭೀಮಸೇನನು ವಿಧಿವತ್ತಾಗಿ ಕಟ್ಟಿಸಿದನು. ಯಜ್ಞಶಾಲೆಯಲ್ಲಿದ್ದ ಕಂಬಗಳು ಸುವರ್ಣಮಯವಾಗಿಯೂ ಚಿತ್ರಿತವಾಗಿಯೂ ಇದ್ದುವು. ಎಲ್ಲೆಡೆಗಳಲ್ಲಿಯೂ ದೊಡ್ಡ ದೊಡ್ಡ ತೋರಣಗಳಿದ್ದುವು. ಧರ್ಮಾತ್ಮನಾದ ಭೀಮಸೇನನು ಯಜ್ಞಶಾಲೆಯ ಎಲ್ಲ ಕಡೆಗಳಲ್ಲಿಯೂ ಶುದ್ಧವಾದ ಸುವರ್ಣವನ್ನೇ ಉಪಯೋಗಿಸಿದ್ದನು. ಅಂತಃಪುರದ ಸ್ತ್ರೀಯರಿಗೂ, ಹಲವಾರು ದೇಶಗಳಿಂದ ಆಗಮಿಸುವ ರಾಜರಿಗೂ ಮತ್ತು ಬ್ರಾಹ್ಮಣರಿಗೂ ತಂಗಲು ಹಲವಾರು ಶ್ರೇಷ್ಠವಾದ ಭವನಗಳನ್ನು ವಿಧಿವತ್ತಾಗಿ ಕಟ್ಟಿಸಿದನು. ಅನಂತರ ಭೀಮಸೇನನು ಧರ್ಮರಾಜನ ಆಜ್ಞಾನುಸಾರವಾಗಿ ಅಕ್ಲಿಷ್ಟಕರ್ಮರಾದ (ಕಷ್ಟವಾದ ಕಾರ್ಯಗಳನ್ನೂ ಸುಲಭವಾಗಿ ಮಾಡುವ) ರಾಜರನ್ನು ಆಹ್ವಾನಿಸಲು ಎಲ್ಲ ದೇಶಗಳಿಗೂ ದೂತರನ್ನು ಕಳುಹಿಸಿಕೊಟ್ಟನು. ಹಾಗೆ ಆಹ್ವಾನಿತರಾದ ರಾಜರು ಕುರುಪತಿಯಾದ ಯುಧಿಷ್ಠಿರನಿಗೆ ಪ್ರಿಯವನ್ನುಂಟುಮಾಡಲು ಅನೇಕವಿಧವಾದ ರತ್ನಗಳನ್ನೂ, ಸ್ತ್ರೀಯರನ್ನೂ, ಕುದುರೆಗಳನ್ನೂ, ಆಯುಧಗಳನ್ನೂ ತೆಗೆದುಕೊಂಡು ಹಸ್ತಿನಾಪುರಕ್ಕೆ ಆಗಮಿಸಿದರು. ಹಾಗೆ ಆಗಮಿಸಿ ತಮಗಾಗಿಯೇ ನಿರ್ಮಿತವಾಗಿದ್ದ ಶಿಬಿರಗಳನ್ನು ಪ್ರವೇಶಿಸಲು ಮಾಡುತ್ತಿದ್ದ ರಾಜರ ಕೋಲಾಹಲಶಬ್ದವು ಸಮುದ್ರದ ಗಂಭೀರಗರ್ಜನೆಯಂತೆಯೇ

ಇದ್ದು ಆಕಾಶವನ್ನು ಮುಟ್ಟುತ್ತಿದ್ದಿತು. ಕುರುಕುಲವರ್ಧನನಾದ ಯುಧಿಷ್ಠಿರನು ಯಜ್ಞದ ಸಲುವಾಗಿ ಆಗಮಿಸಿದ ಅಭ್ಯಾಗತರಿಗೆ ಅತಿಮಾನುಷವಾದ ಅನ್ನ-ಪಾನಾದಿಗಳ ಮತ್ತು ಹಾಸಿಗೆಗಳ ವ್ಯವಸ್ಥೆಮಾಡಿದನು. ಭರತ ಶ್ರೇಷ್ಠನಾದ ಧರ್ಮರಾಜನು ರಾಜರ ವಾಹನಗಳಿಗೂ (ಕುದುರೆ-ಆನೆ ಮುಂತಾದುವುಗಳಿಗೂ) ಧಾನ್ಯದಿಂದಲೂ, ಕಬ್ಬಿನಿಂದಲೂ ಮತ್ತು ಹಸುವಿನ ಹಾಲಿನಿಂದಲೂ ಸಮೃದ್ಧವಾಗಿದ್ದ ಶಾಲೆಗಳನ್ನು ಬಿಟ್ಟುಕೊಟ್ಟನು. ಧೀಮಂತನಾದ ಧರ್ಮರಾಜನ ಆ ಮಹಾಯಾಗಕ್ಕೆ ಬ್ರಹ್ಮವಾದಿಗಳಾದ ಅನೇಕಮುನಿಗಳು ಆಗಮಿಸಿದರು. ಭೂಮಂಡಲದಲ್ಲಿದ್ದ ಶ್ರೇಷ್ಠರಾದ ಬ್ರಾಹ್ಮಣರೆಲ್ಲರೂ ಶಿಷ್ಯರೊಡನೆ ಅಲ್ಲಿಗೆ ಆಗಮಿಸಿದರು. ಅವರೆಲ್ಲರನ್ನೂ ಯುಧಿಷ್ಠಿರನು ಆದರಪೂರ್ವಕವಾಗಿ ಸ್ವಾಗತಿಸಿದನು. ಮಹಾತೇಜಸ್ವಿಯಾದ ಧರ್ಮಜನು ದಂಭವನ್ನು ಸಂಪೂರ್ಣವಾಗಿ ಪರಿತ್ಯಜಿಸಿ, ಆಗಮಿಸಿದ ಬ್ರಾಹ್ಮಣರು ಶಿಬಿರಗಳಿಗೆ ಹೋಗುವವರೆಗೂ ಅವರನ್ನು ಅನುಸರಿಸಿ ತಾನೇ ಹೋಗುತ್ತಿದ್ದನು. ಯಜ್ಞಮಂಟಪದ ನಿರ್ಮಾಣಕಾರ್ಯವನ್ನು ಪೂರ್ಣಗೊಳಿಸಿ ಸ್ಥಪತಿಗಳೂ ಮತ್ತು ಇತರ ಶಿಲ್ಪಿಗಳೂ ಧರ್ಮರಾಜನಿಗೆ ನಿವೇದಿಸಿದರು. ಯಾವ ನ್ಯೂನತೆಯೂ ಇಲ್ಲದೇ ಯಜ್ಞಶಾಲೆಯು ನಿರ್ಮಿತವಾದುದನ್ನು ಕೇಳಿ ಧರ್ಮದಿಂದ ಯಾವಾಗಲೂ ಚ್ಯುತನಾಗದ, ಸ್ವಲ್ಪವೂ ಆಲಸ್ಯವಿಲ್ಲದ ಯುಧಿಷ್ಠಿರನು ತನ್ನ ಅನುಜರೊಡನೆ ಪರಮ ಹೃಷ್ಟನಾದನು. ಆ ಮಹಾಯಜ್ಞವು ನಡೆಯುತ್ತಿರಲಾಗಿ ವಾಗ್ಮಿಗಳಾದ ತಾರ್ಕಿಕರು ತಮ್ಮ ಎದುರಾಳಿಗಳನ್ನು ಜಯಿಸುವ ಸಲುವಾಗಿ ಅನೇಕಪ್ರಕಾರವಾದ ಹೇತುವಾದಗಳನ್ನು ಮಂಡಿಸುತ್ತಿದ್ದರು. ಯಜ್ಞಸಮಾರಂಭದಲ್ಲಿ ಭಾಗವಹಿಸಲು ಆಗಮಿಸಿದ್ದ ರಾಜರು ಇಂದ್ರನ ಯಜ್ಞಶಾಲೆಯಂತೆಯೇ ಭೀಮಸೇನನಿಂದ ನಿರ್ಮಿತವಾಗಿದ್ದ ಯಜ್ಞಶಾಲೆಯ ಸೊಬಗನ್ನೂ ಯಜ್ಞದ ವಿಧಿ-ವಿಧಾನಗಳನ್ನೂ ವೀಕ್ಷಿಸಿದನು. ಆ ರಾಜರು ಯಜ್ಞಶಾಲೆಯ ಸುತ್ತಲೂ ಹಾರಾಡುತ್ತಿದ್ದ ಸುವರ್ಣಮಯವಾದ ತೋರಣಗಳನ್ನೂ, ಹಂಸತೂಲಿಕಾತಲ್ಪಗಳನ್ನೂ, ರತ್ನಖಚಿತವಾದ ಸಿಂಹಾಸನಗಳನ್ನೂ ರಮಣೀಯವಾದ ವಿಹಾರಸ್ಥಾನಗಳನ್ನೂ, ಅನೇಕ ರತ್ನರಾಶಿಗಳನ್ನೂ ನೋಡಿದರು. ಬಿಂದಿಗೆ

ಗಳನ್ನೂ, ಪಾತ್ರೆಗಳನ್ನೂ, ಕಡಾಯಿಗಳನ್ನೂ, ಕಲಶಗಳನ್ನೂ, ಶರಾವೆಗಳನ್ನೂ ನಾನಾದೇಶಗಳಿಂದ ಆಗಮಿಸಿದ್ದ ರಾಜರು ಕುತೂಹಲದಿಂದ ನೋಡಿದರು. ಆದರೆ ಚಿನ್ನದ್ದಲ್ಲದ ಯಾವ ಪಾತ್ರೆ-ಪದಾರ್ಥಗಳನ್ನೂ ಅವರು ಅಲ್ಲಿ ಕಾಣಲಿಲ್ಲ. ಶಾಸ್ತ್ರವಿಧಿಗೆ ಅನುಸಾರವಾಗಿ ದಾರುಮಯವಾದ ಯೂಪಗಳನ್ನು ನಿರ್ಮಿಸಿದ್ದರೂ ಅವೂ ಕೂಡ ಸುವರ್ಣಭೂಷಿತ ವಾಗಿದ್ದುವು. ಆ ಯೂಪಗಳೆಲ್ಲವೂ ವಿಹಿತವಾದ ಕಾಲದಲ್ಲಿ ವಿಧಿವತ್ತಾಗಿ ನಿರ್ಮಿಸಲ್ಪಟ್ಟಿದ್ದುವು. ತೇಜೋಮಯವಾದ ಅಂತಹ ಯೂಪಸ್ತಂಭಗಳನ್ನು ರಾಜರು ವೀಕ್ಷಿಸಿದರು. ಭೂಮಿಯ ಮೇಲಿರಬಹುದಾದ ಮತ್ತು ನೀರಿನಲ್ಲಿರಬಹುದಾದ ಸಮಸ್ತಪ್ರಾಣಿಗಳನ್ನೂ ಅಲ್ಲಿಗೆ ಕರೆತಂದಿರುವುದನ್ನು ದೇಶ-ದೇಶಗಳಿಂದ ಆಗಮಿಸಿದ್ದ ರಾಜರು ನೋಡಿದರು. ಹಸುಗಳು, ಎಮ್ಮೆಗಳು, ವೃದ್ಧೆಯರಾದ ಸ್ತ್ರೀಯರು, ಜಲಚರಪ್ರಾಣಿಗಳು, ಮಾಂಸಾಹಾರಿ ಗಳಾದ ಪ್ರಾಣಿಗಳು, ಪಕ್ಷಿಗಳು, ಜರಾಯುಜ, ಸ್ವೇದಜ, ಅಂಡಜ, ಉದ್ಭಿಜ್ಜಗಳೆಂಬ ನಾಲ್ಕು ಪ್ರಕಾರವಾದ ಪ್ರಾಣಿಗಳು, ಪರ್ವತಜೀವಿಗಳಾದ ಪ್ರಾಣಿಗಳು, ಸಮುದ್ರದ ತೀರಪ್ರದೇಶದಲ್ಲಿರುವ ಪ್ರಾಣಿಗಳು–ಈ ಎಲ್ಲ ಪ್ರಾಣಿಗಳನ್ನೂ ದೇಶ-ದೇಶಗಳಿಂದ ಯಜ್ಞವನ್ನು ನೋಡುವ ಸಲುವಾಗಿ ಆಗಮಿಸಿದ್ದ ರಾಜರು ಅಲ್ಲಿ ಕಂಡರು. ಹೀಗೆ ಆ ಯಜ್ಞಶಾಲೆಯು ಪಶುಗಳು-ಗೋವುಗಳು-ಧನ-ಧಾನ್ಯ– ಇವೆಲ್ಲವುಗಳಿಂದಲೂ ಸಮೃದ್ಧ ವಾಗಿದ್ದಿತು ಮತ್ತು ಆನಂದಮಯವಾಗಿದ್ದಿತು. ಅಂತಹ ಸರ್ವಾಂಗ ಸುಂದರವಾದ ಯಜ್ಞಶಾಲೆಯನ್ನು ನೋಡಿ ರಾಜರು ಬಹಳವಾಗಿ ವಿಸ್ಮಯಗೊಂಡರು. ಅಲ್ಲಿ ಬ್ರಾಹ್ಮಣರಿಗೂ ವೈಶ್ಯರಿಗೂ ಸಮೃದ್ಧವಾದ ಮೃಷ್ಟಾನ್ನವಿದ್ದಿತು. ಒಂದು ಲಕ್ಷಜನ ಬ್ರಾಹ್ಮಣರ ಊಟವಾದೊಡನೆಯೇ ಒಂದು ಬಾರಿಗೆ ಮೇಘಗರ್ಜನೆಗೆ ಅನುರೂಪವಾದ ಶಬ್ದವುಳ್ಳ ದುಂದುಭಿಯನ್ನು ಬಾರಿಸುತ್ತಿದ್ದರು. ದಿವಸಗಳು ಕಳೆದಂತೆಲ್ಲಾ ಅಂತಹ ದುಂದುಭಿಶಬ್ದಗಳು ಬಾರಿ-ಬಾರಿಗೂ ಕೇಳಿಸುತ್ತಲೇ ಇದ್ದುವು. (ಅನುದಿನವೂ ಅನೇಕಲಕ್ಷ ಜನರು ಅಲ್ಲಿ ಊಟಮಾಡುತ್ತಿದ್ದರು.) ಧೀಮಂತನಾದ ಧರ್ಮರಾಜನ ಅಶ್ವಮೇಧಯಾಗವು ಅನುದಿನವೂ ಹೀಗೆ ನಡೆಯುತ್ತಿದ್ದಿತು.

ಪರ್ವತೋಪಮವಾದ ಅನೇಕಾನೇಕ ಅನ್ನದ ರಾಶಿಗಳನ್ನೂ, ಮೊಸರಿನ ಕಾಲುವೆಗಳನ್ನೂ, ತುಪ್ಪದ ಕೊಳಗಳನ್ನೂ ರಾಜರು ನೋಡಿದರು. ಧರ್ಮರಾಜನ ಯಜ್ಞದಲ್ಲಿ ನಾನಾದೇಶಗಳಿಂದ ಜನರು ಆಗಮಿಸಿದುದನ್ನು ನೋಡಿದರೆ-ಜಂಬೂದ್ವೀಪವೆಲ್ಲವೂ ಒಂದೇ ಕಡೆಯಲ್ಲಿ ಸೇರಿದೆಯೋ ಎಂಬಂತೆ ಕಾಣುತ್ತಿದ್ದಿತು. ಸಾವಿರಾರು ಜಾತಿಗಳ ಪುರುಷರು ಹೇರಳವಾದ ಐಶ್ವರ್ಯದೊಡನೆ ಅಲ್ಲಿಗೆ ಆಗಮಿಸಿದ್ದರು. ಸುವರ್ಣಮಯವಾದ ಹಾರಗಳನ್ನೂ ಶುದ್ಧವಾದ ಮಣಿಗಳಿಂದ ಕೂಡಿದ ಕುಂಡಲಗಳನ್ನೂ ಹಾಕಿಕೊಂಡಿದ್ದ ರಾಜರು ನೂರಾರು-ಸಾವಿರಾರು ದ್ವಿಜರಿಗೆ ಊಟಮಾಡಿಸುತ್ತಿದ್ದರು. ಅವರ ಅನುಯಾಯಿಗಳು ಕೂಡ ಬ್ರಾಹ್ಮಣರಿಗೆ ರಾಜಭೋಗ್ಯವಾದ ವಿಧ-ವಿಧವಾದ ಅನ್ನ-ಪಾನಾದಿಗಳನ್ನು ಬಡಿಸುತ್ತಿದ್ದರು.

ಲಜನೆಯ ಅಧ್ಯಾಯವು ಮುಗಿಯಿತು.

ಲ೬ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಯುಧಿಷ್ಠಿರನು ಭೀಮಸೇನನಿಗೆ ರಾಜರನ್ನು ಸತ್ಕರಿಸಲು ಆದೇಶವನ್ನಿತ್ತುದು

ವೈಶಂಪಾಯನರು ಹೇಳುತ್ತಾರೆ:

ಸಮಾಗತಾನ್ವೇದವಿದೋ ರಾಜ್ಞಶ್ಚ ಪೃಥಿವೀಶ್ವರಾನ್ ।
ದೃಷ್ಟ್ವಾ ಯುಧಿಷ್ಠಿರೋ ರಾಜಾ ಭೀಮಸೇನಮಭಾಷತ ॥೧॥

ಜನಮೇಜಯ! ಯಜ್ಞಕ್ಕೆ ಆಗಮಿಸಿದ್ದ ವೇದವಿದರಾದ ಬ್ರಾಹ್ಮಣರನ್ನೂ ಪೃಥಿವೀಪತಿಗಳಾದ ರಾಜರನ್ನೂ ನೋಡಿ ಯುಧಿಷ್ಠಿರನು ಭೀಮಸೇನನಿಗೆ ಹೇಳಿದನು:

“ಭೀಮಸೇನ! ನರಶ್ರೇಷ್ಠರಾದ ಭೂಮಂಡಲಾಧೀಶ್ವರರೆಲ್ಲರೂ ಇಲ್ಲಿಗೆ ಆಗಮಿಸಿರುವರು. ಇವರೆಲ್ಲರೂ ಸತ್ಕಾರಕ್ಕೆ ಯೋಗ್ಯರಾಗಿರುವವರು. ನೀನು ಇವರೆಲ್ಲರನ್ನೂ ಯಥಾಯೋಗ್ಯವಾಗಿ ಸತ್ಕರಿಸು.”

ಜನಮೇಜಯ! ನರೇಂದ್ರನಾದ, ಯಶೋವಂತನಾದ ಧರ್ಮರಾಜನು ಹೀಗೆ ಹೇಳಲು ಮಹಾತೇಜಸ್ವಿಯಾದ ಭೀಮಸೇನನು ನಕುಲ-ಸಹದೇವರೊಡನೆ ಕೂಡಿಕೊಂಡು ಎಲ್ಲ ರಾಜರನ್ನೂ ಯಥೋಚಿತವಾಗಿ ಸತ್ಕರಿಸಿದನು. ಬಳಿಕ ಸಮಸ್ತಪ್ರಾಣಿಗಳಲ್ಲಿಯೂ ಶ್ರೇಷ್ಠನಾದ ಗೋವಿಂದನು ಬಲಭದ್ರನನ್ನು ಮುಂದೆಮಾಡಿಕೊಂಡು ಸಾತ್ಯಕಿ, ಪ್ರದ್ಯುಮ್ನ, ಗದ, ನಿಶಠ, ಸಾಂಬ, ಕೃತವರ್ಮಾ-ಇವರೇ ಮೊದಲಾದ ವೃಷ್ಣಿವೀರರೊಡನೆ ಧರ್ಮರಾಜನ ಬಳಿಗೆ ಬಂದನು. ಮಹಾರಥನಾದ ಭೀಮಸೇನನು ಅವರೆಲ್ಲರನ್ನೂ ಸರ್ವೋತ್ಕೃಷ್ಟವಾದ ರೀತಿಯಲ್ಲಿ ಸತ್ಕರಿಸಿದನು. ಬಳಿಕ ಅವರೆಲ್ಲರೂ ನಾನಾವಿಧವಾದ ರತ್ನಗಳಿಂದ ಸಮೃದ್ಧವಾಗಿದ್ದ ಭವನಗಳನ್ನು ಪ್ರವೇಶಿಸಿದರು. ಯುಧಿಷ್ಠಿರನ ಬಳಿಯಲ್ಲಿ ಕುಳಿತು ಮಾತುಕತೆಗಳನ್ನಾಡುತ್ತಿದ್ದ ಶ್ರೀಕೃಷ್ಣನು, ಕಡೆಯಲ್ಲಿ ಯಜ್ಞದ ಕುದುರೆಯ ರಕ್ಷಣೆಗಾಗಿ ಹೊರಟ ಅರ್ಜುನನು, ಎದುರಿಸಿ ಬಂದ ರಾಜರೊಡನೆ ಯುದ್ಧಗಳನ್ನು ಮಾಡಿ ಬಹಳ ಕೃಶನಾಗಿರುವನೆಂಬ ವಿಷಯವನ್ನೂ ಹೇಳಿದನು. ಶ್ರೀಕೃಷ್ಣನಿಂದ ಆ ಮಾತನ್ನು ಕೇಳಿದ ಯುಧಿಷ್ಠಿರನು ಆತಂಕಗೊಂಡು ಇಂದ್ರನ ಮಗನಾದ ಅರ್ಜುನನಿಗೆ ಸಂಬಂಧಿಸಿದಂತೆ ಎಲ್ಲ ವಿಷಯಗಳನ್ನೂ ಹೇಳಬೇಕೆಂದು ಮಧುಸೂದನನನ್ನು ಪುನಃ ಪುನಃ ಪ್ರಾರ್ಥಿಸಿದನು. ಧರ್ಮರಾಜನ ಆಶಯದಂತೆ ಶ್ರೀಕೃಷ್ಣನು ಅರ್ಜುನನ ವಿಷಯವನ್ನು ಹೇಳತೊಡಗಿದನು:

"ಯುಧಿಷ್ಠಿರ! ನನ್ನ ಬಳಿಗೆ ದ್ವಾರಕಾವಾಸಿಯೂ ನನ್ನ ಆಪ್ತನೂ ಆಗಿದ್ದ ಪುರುಷನೊಬ್ಬನು ಒಮ್ಮೆ ಬಂದಿದ್ದನು. ಅವನು ಯುದ್ಧದಿಂದ ಬಳಲಿ ಬಹಳ ಕೃಶನಾಗಿದ್ದ ಪಾಂಡವಶ್ರೇಷ್ಠನಾದ ಅರ್ಜುನನನ್ನು ನೋಡಿದ್ದನಂತೆ. ಆ ಪುರುಷನು ನನ್ನೊಡನೆ ಈ ಮಾತನ್ನೂ ಹೇಳಿದನು. ಮಹಾಬಾಹುವಾದ ಅರ್ಜುನನು ಈಗ ಹಸ್ತಿನಾಪಟ್ಟಣದ ಸಮೀಪದಲ್ಲಿಯೇ ಇರುವನಂತೆ. ಆದುದರಿಂದ ನೀನೀಗ ಅಶ್ವಮೇಧಯಜ್ಞದ ಸಿದ್ಧಿಗಾಗಿ ಮಾಡಬೇಕಾಗಿರುವ ಎಲ್ಲ ಕಾರ್ಯಗಳನ್ನೂ ಮಾಡು." ಶ್ರೀಕೃಷ್ಣನು ಹೀಗೆ ಹೇಳಲು ಯುಧಿಷ್ಠಿರನು ಹೇಳುತ್ತಾನೆ: "ಸೌಭಾಗ್ಯದ ಕಾರಣದಿಂದ ಅರ್ಜುನನು ಕುಶಲನಾಗಿ ಹಿಂದಿರುಗುತ್ತಿದ್ದಾನೆ. ಪಾಂಡವಸೇನಾಮುಖ್ಯನಾದ ಅರ್ಜುನನು ಯಜ್ಞದ ಸಂಬಂಧವಾಗಿ ಯಾವುದಾದರೂ ಸಂದೇಶ

ವನ್ನು ಕಳುಹಿಸಿರುವನೇ? ಅದನ್ನು ನಿನ್ನಿಂದಲೇ ತಿಳಿಯಲು ಬಯಸುತ್ತೇನೆ"–ಎಂದನು.

ಧರ್ಮಜನು ಹೀಗೆ ಹೇಳಲಾಗಿ ವೃಷ್ಣಿ ಮತ್ತು ಅಂಧಕರ ನಾಯಕನಾದ, ವಾಗ್ಮಿಯಾದ ಶ್ರೀಕೃಷ್ಣನು ಧರ್ಮಜನಿಗೆ ಹೇಳಿದನು:

"ಯುಧಿಷ್ಠಿರ! ಆ ನನ್ನ ಆಪ್ತಪುರುಷನು ಪಾರ್ಥನ ಮಾತನ್ನೇ ಸ್ಮರಿಸಿಕೊಳ್ಳುತ್ತಾ ಸಕಾಲದಲ್ಲಿ ಈ ವಿಷಯವನ್ನು ನಿನಗೂ ತಿಳಿಸಬೇಕೆಂದು ಹೇಳಿರುವನು. ಆ ಆಪ್ತಪುರುಷನು ಹೇಳಿದ ಅರ್ಜುನನ ಸಂದೇಶವನ್ನೇ ಯಥಾವತ್ತಾಗಿ ನಿನಗೂ ಹೇಳುವೆನು; ಕೇಳು:

ಆಗಮಿಷ್ಯನ್ತಿ ರಾಜಾನಃ ಸರ್ವೇ ವೈ ಕೌರವರ್ಷಭ ।
ಪ್ರಾಪ್ತಾನಾಂ ಮಹತಾಂ ಪೂಜಾ ಕಾರ್ಯಾಹ್ಯೇತತ್ಕ್ಷಮಂ ಹಿ ನಃ ॥

"ಕೌರವಶ್ರೇಷ್ಠನೇ! ಧರ್ಮಜ! ಭೂಮಂಡಲದ ಎಲ್ಲ ರಾಜರೂ ಅಶ್ವಮೇಧಯಜ್ಞದಲ್ಲಿ ಭಾಗವಹಿಸಲು ಆಗಮಿಸುತ್ತಾರೆ. ಹಾಗೆ ಆಗಮಿಸುವ ಮಹಾರಾಜರನ್ನು ಯಥೋಚಿತವಾಗಿ ಸತ್ಕರಿಸುವುದು ನಮಗೆ ಯೋಗ್ಯವಾಗಿದೆ."

ಹೀಗೆ ಹೇಳಿದನಂತರ ಅರ್ಜುನನು ಮುಂದುವರಿದು ಹೇಳಿದನಂತೆ: 'ಮಾನದನೇ! ನನ್ನ ಪರವಾಗಿ ನೀನು ಯುಧಿಷ್ಠಿರನನ್ನು ಹೀಗೆ ವಿಜ್ಞಾಪಿಸಿಕೊಳ್ಳಬೇಕು.

ಯಥಾ ಚಾತ್ಯಯಿಕಂ ನ ಸ್ಯಾದ್ಯದರ್ಘ್ಯಾಹರಣೇಽಭವತ್ ॥೧೬॥

ರಾಜಸೂಯಯಾಗದ ಸಮಯದಲ್ಲಿ ಅರ್ಘ್ಯಪ್ರದಾನಮಾಡುವಾಗ ಯಾವ ದುರ್ಘಟನೆಯು ನಡೆಯಿತೋ–ಅಂತಹ ದುರ್ಘಟನೆಯು ಈಗ ಪುನಃ ಸಂಭವಿಸಬಾರದು'. ಹೀಗೆ ಆ ಆಪ್ತಪುರುಷನು ಅರ್ಜುನನ ಸಂದೇಶವನ್ನು ಹೇಳಿ ಮತ್ತೂ ನನ್ನೊಡನೆ ಹೀಗೆ ಹೇಳಿದನು: "ಕೃಷ್ಣ! ಅರ್ಜುನನ ಆದೇಶದಂತೆ ಯುಧಿಷ್ಠಿರನು ನಡೆದುಕೊಳ್ಳುವುದು ಯುಕ್ತವಾಗಿದೆ. ಇದಕ್ಕೆ ನೀನೂ ಅನುಮತಿಯನ್ನು ನೀಡಬೇಕು. ರಾಜರ ಪರಸ್ಪರದ್ವೇಷದಿಂದ ಪುನಃ ಪ್ರಜೆಗಳು ವಿನಾಶಹೊಂದಬಾರದು."

ಆಪ್ತಪುರುಷನು ಹೀಗೆ ಸಲಹೆಯನ್ನಿತ್ತು ಧನಂಜಯನು ಹೇಳಿದ್ದ ಮತ್ತೊಂದು ಸಂದೇಶವನ್ನೂ ನನ್ನೊಡನೆ ಅರುಹಿದನು. ಅದನ್ನೂ ನಿನಗೆ ಯಥಾವತ್ತಾಗಿ ಹೇಳುವೆನು; ಕೇಳು.

"ಈ ನಮ್ಮ ಯಜ್ಞಕ್ಕೆ ಮಣಿಪುರದ ಅರಸನಾದ, ಮಹಾತೇಜಸ್ವಿಯಾದ, ನನ್ನ ಪ್ರಿಯಪುತ್ರನಾದ ಬಭ್ರುವಾಹನನೂ ಆಗಮಿಸುತ್ತಾನೆ. ಅವನು ಭಕ್ತನೂ, ನನ್ನಲ್ಲಿ ಸದಾ ಅನುರಕ್ತನೂ ಆಗಿರುವನು. ಆದುದರಿಂದ ನೀನು ಅವನನ್ನು ನನ್ನ ಸಲುವಾಗಿ ಸತ್ಕರಿಸಬೇಕು."

ಜನಮೇಜಯ! ಅರ್ಜುನನ ಆ ಸಂದೇಶವನ್ನು ಕೇಳಿ ಧರ್ಮಜನಾದ ಯುಧಿಷ್ಠಿರನು ಅವನ ಸಂದೇಶವಾಕ್ಯವನ್ನು ಪ್ರಶಂಸೆಮಾಡುತ್ತಾ ಹೇಳಿದನು.

೮೬ನೆಯ ಅಧ್ಯಾಯವು ಮುಗಿಯಿತು.

೮೭ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಅರ್ಜುನನ ವಿಷಯವಾಗಿ ಯುಧಿಷ್ಠಿರ-ಕೃಷ್ಣರ ಸಂಭಾಷಣೆ: ಹಸ್ತಿನಾಪುರಕ್ಕೆ ಅರ್ಜುನನ ಆಗಮನ: ಉಲೂಪೀ-ಚಿತ್ರಾಂಗದೆಯರೊಡನೆ ಬಭ್ರುವಾಹನನ ಆಗಮನ

ಯುಧಿಷ್ಠಿರನು ಹೇಳುತ್ತಾನೆ:

ಶ್ರುತಂ ಪ್ರಿಯಮಿದಂ ಕೃಷ್ಣ ಯತ್ತ್ವಮರ್ಹಸಿ ಭಾಷಿತುಮ್ ।
ತನ್ಮೇಽಮೃತರಸಂ ಪುಣ್ಯಂ ಮನೋ ಹ್ಲಾದಯತಿ ಪ್ರಭೋ ॥೧॥

"ಪ್ರಭುವೇ! ಶ್ರೀಕೃಷ್ಣ! ನಿನ್ನಿಂದ ಹೇಳಲ್ಪಟ್ಟ ಪರಮಪ್ರಿಯವಾದ ಅರ್ಜುನನ ಸಂದೇಶವನ್ನು ಕೇಳಿದೆನು. ಇಂತಹ ಕರ್ಣಾನಂದಕರವಾದ ಮಾತುಗಳನ್ನು ಹೇಳಲು ನೀನು ಮಾತ್ರ ಸಮರ್ಥನಾಗಿರುವೆ. ನನಗಂತೂ ನೀನು ಹೇಳಿದ ಮಾತು ಅಮೃತದಷ್ಟು ರುಚಿಯಾಗಿದೆ; ಪುಣ್ಯಪ್ರಾಪಕವಾಗಿದೆ ಮತ್ತು ಮನಸ್ಸನ್ನು ಆಹ್ಲಾದಗೊಳಿಸುವುದಾಗಿದೆ.

ಹೃಷೀಕೇಶನೇ! ಭಿನ್ನ-ಭಿನ್ನದೇಶಗಳಲ್ಲಿ ಕುದುರೆಯನ್ನನುಸರಿಸಿ ಹೋಗುತ್ತಿದ್ದ ಅರ್ಜುನನಿಗೂ ಮತ್ತು ಅಲ್ಲಿಯ ರಾಜರಿಗೂ ಯುದ್ಧಗಳಾದುವೆಂದು ನಾನು ಕೇಳಿದೆನು. ಜನಾರ್ದನ! ಧೀಮಂತನೇ!

ವಿಜಯನು ಯಾವಾಗಲೂ ಸುಖದಿಂದ ವಂಚಿತನೇ ಆಗಿದ್ದಾನೆ. ಇದಕ್ಕೆ ಕಾರಣವೇನಿರಬಹುದೆಂದು ನನ್ನ ಮನಸ್ಸು ಯಾವಾಗಲೂ ಸಂಕಟಪಡುತ್ತಿದೆ. ಈ ವಿಷಯವನ್ನೇ ನಾನು ಏಕಾಂತದಲ್ಲಿಯೂ ಚಿಂತಿಸುತ್ತಿರುತ್ತೇನೆ. ನಮ್ಮೈವರಲ್ಲಿ ಅವನೇ ಯಾವಾಗಲೂ ಹೆಚ್ಚಾಗಿ ದುಃಖಕ್ಕೆ ಭಾಗಿಯಾಗಿರತಕ್ಕವನು.

ಕಿಂ ನು ತಸ್ಯ ಶರೀರೇಽಸ್ತಿ ಸರ್ವಲಕ್ಷಣಪೂಜಿತೇ।
ಅನಿಷ್ಟಂ ಲಕ್ಷಣಂ ಕೃಷ್ಣ ಯೇನ ದುಃಖಾನ್ಯುಪಾಶ್ನುತೇ ॥೫॥

ಸರ್ವಲಕ್ಷಣಗಳಿಂದ ಸಂಪನ್ನವಾಗಿರುವ ಅವನ ಶರೀರದಲ್ಲಿ ಯಾವ ಅನಿಷ್ಟವಾದ ಲಕ್ಷಣವಿದೆ? ಯಾವ ಕಾರಣದಿಂದ ಅವನು ಈ ವಿಧವಾದ ದುಃಖಗಳನ್ನು ಅನುಭವಿಸುತ್ತಿದ್ದಾನೆ?

ಅತೀವಾಸುಖಭೋಗೀ ಸ ಸತತಂ ಕುನ್ತಿನನ್ದನಃ।
ನ ಹಿ ಪಶ್ಯಾಮಿ ಬೀಭತ್ಸೋರ್ನಿನ್ದ್ಯಂ ಗಾತ್ರೇಷು ಕಿಂಚನ ।
ಶ್ರೋತವ್ಯಂ ಚೇನ್ಮಯೈತದ್ವೈ ತನ್ಮೇ ವ್ಯಾಖ್ಯಾತುಮರ್ಹಸಿ ॥೬॥

ಕುಂತಿಯ ಮಗನಾದ ಅರ್ಜುನನು ಸತತವಾಗಿ ಅತಿಯಾದ ಕಷ್ಟವನ್ನೇ ಅನುಭವಿಸುತ್ತಿದ್ದಾನೆ. ಅವನ ಅವಯವಗಳಲ್ಲಿ ಅಶುಭವಾದ ಒಂದು ಲಕ್ಷಣವನ್ನೂ ನಾನು ಕಾಣುತ್ತಿಲ್ಲ. ಹೀಗಿರುವಾಗ ಅವನೇಕೆ ಇಷ್ಟು ದುಃಖವನ್ನು ಅನುಭವಿಸುತ್ತಿದ್ದಾನೆ? ಇದರ ಕಾರಣವನ್ನು ನಾನು ಕೇಳಬಹುದಾಗಿದ್ದರೆ ಹೇಳುವ ಕೃಪೆಮಾಡು."

ಜನಮೇಜಯ! ಯುಧಿಷ್ಠಿರನು ಹೀಗೆ ಪ್ರಶ್ನಿಸಲಾಗಿ ಭೋಜವಂಶದ ಕ್ಷತ್ರಿಯರನ್ನು ವೃದ್ಧಿಗೊಳಿಸುವ ಕೃಷ್ಣರೂಪಿಯಾದ ವಿಷ್ಣುವು ಚೆನ್ನಾಗಿ ಯೋಚಿಸಿದನಂತರ ಮಹತ್ತ್ವಪೂರ್ಣವಾದ ಈ ಉತ್ತರವನ್ನಿತ್ತನು.

ನ ಹ್ಯಸ್ಯ ನೃಪತೇ ಕಿಂಚಿತ್ಸಂಶ್ಲಿಷ್ಟಮುಪಲಕ್ಷಯೇ ।
ಋತೇ ಪುರುಷಸಿಂಹಸ್ಯ ಪಿಣ್ಡಿಕೇಽಸ್ಯಾಧಿಕೇ ಯತಃ ॥೮॥

"ನರೇಶ್ವರನೇ! ಪುರುಷಸಿಂಹನಾದ ಅರ್ಜುನನ ಮೊಳಕಾಲುಗಳ ಹಿಂಭಾಗಗಳು ಇರಬೇಕಾದುದಕ್ಕಿಂತಲೂ ಸ್ವಲ್ಪ ದಪ್ಪನಾಗಿರುವುದರ ಹೊರ

ತಾಗಿ ಅವನ ಅವಯವಗಳಲ್ಲಿ ಬೇರೆ ಯಾವ ವಿಧವಾದ ಅವಲಕ್ಷಣಗಳನ್ನೂ ನಾನು ಕಾಣುತ್ತಿಲ್ಲ.

ಸ ತಾಭ್ಯಾಂ ಪುರುಷವ್ಯಾಘ್ರೋ ನಿತ್ಯಮಧ್ವಸು ವರ್ತತೇ ।
ನ ಚಾನ್ಯದನುಪಶ್ಯಾಮಿ ಯೇನಾಸೌ ದುಃಖಭಾಜನಮ್ ॥೯॥

ಮೊಳಕಾಲುಗಳ ಹಿಂಭಾಗಗಳು ದಪ್ಪವಾಗಿರುವುದರಿಂದ ಅವನು ನಿತ್ಯವೂ ಪ್ರಯಾಣಮಾಡುತ್ತಲೇ ಇರಬೇಕಾಗುತ್ತದೆ. ಅವನ ದುಃಖಕ್ಕೆ ಬೇರೆ ಯಾವ ಕಾರಣವೂ ನನಗೆ ಕಾಣುತ್ತಿಲ್ಲ."

ಧೀಮಂತನಾದ ಶ್ರೀಕೃಷ್ಣನು ಹೀಗೆ ಹೇಳಲಾಗಿ ಪುರುಷಶ್ರೇಷ್ಠನಾದ ಯುಧಿಷ್ಠಿರನು ವೃಷ್ಣಿಶ್ರೇಷ್ಠನಿಗೆ-'ಪ್ರಭುವೇ! ನೀನು ಹೇಳಿದಂತೆಯೇ ಸರಿ'-ಎಂದು ಹೇಳಿದನು.

ಆ ಸಮಯದಲ್ಲಿ ದ್ರುಪದಕುಮಾರಿಯಾದ ಕೃಷ್ಣೆಯು ಓರೆನೋಟದಿಂದ ಅಸೂಯಾಪೂರ್ವಕವಾಗಿ ಶ್ರೀಕೃಷ್ಣನನ್ನು ನೋಡಿದಳು. (ಅರ್ಜುನನಲ್ಲಿರುವ ದೋಷವನ್ನು ಶ್ರೀಕೃಷ್ಣನು ಹೇಳಿದುದು ಅವಳಿಗೆ ಅಸಮಾಧಾನವಾಯಿತು.) ಕೇಶಿಹಂತಕನಾದ ಶ್ರೀಕೃಷ್ಣನು ದ್ರೌಪದಿಯ ಪ್ರೇಮಪೂರ್ವಕವಾದ ವರ್ತನೆಯನ್ನು ಆನಂದದಿಂದಲೇ ಗ್ರಹಣ ಮಾಡಿದನು. ದ್ರೌಪದಿಯ ಸಖನಾದ (ಪತಿಯಾದ) ಅರ್ಜುನನ ಮಿತ್ರನಾದ ಹೃಷಿಕೇಶನೂ ಸಾಕ್ಷಾತ್ ಧನಂಜಯನೇ ಆಗಿದ್ದನು. (ಅವರಿಬ್ಬರಲ್ಲಿ ಯಾವ ಭೇದವೂ ಇರಲಿಲ್ಲ. ಆದುದರಿಂದಲೇ ಶ್ರೀಕೃಷ್ಣನಿಗೆ ಅರ್ಜುನನಲ್ಲಿದ್ದ ದೋಷವು ತಿಳಿದಿದ್ದಿತು.) ಆ ಸಮಯದಲ್ಲಿ ಭೀಮಸೇನನೇ ಮೊದಲಾದ ಕೌರವರೂ ಮತ್ತು ಯಾಜಕರೂ ಶುಭಾವಹವಾದ ಧನಂಜಯನ ಕಥೆಯನ್ನು ಕೇಳಿ ಪ್ರಸನ್ನರಾದರು. ಅವರೆಲ್ಲರೂ ಅರ್ಜುನನಿಗೆ ಸಂಬಂಧಿಸಿದ ವಿಷಯಗಳನ್ನು ಹೀಗೆ ಮಾತನಾಡಿಕೊಳ್ಳುತ್ತಿರುವಾಗಲೇ ಮಹಾತ್ಮನಾದ ವಿಜಯನ ದೂತನೊಬ್ಬನು ಅಲ್ಲಿಗೆ ಆಗಮಿಸಿದನು. ಬುದ್ಧಿವಂತನಾದ ಆ ದೂತನು ಕುರುಶ್ರೇಷ್ಠನಾದ ಯುಧಿಷ್ಠಿರನ ಬಳಿಗೆ ಬಂದು ನಮಸ್ಕರಿಸಿ ಪುರುಷಸಿಂಹನಾದ ಅರ್ಜುನನು ನಗರದ ಸಮೀಪಕ್ಕೆ ಬಂದಿರುವುದನ್ನು ನಿವೇದಿಸಿದನು. ಅರ್ಜುನನು ಬಂದನೆಂಬ ವಾರ್ತೆಯನ್ನು ಕೇಳಿದೊಡ

ನೆಯೇ ಆನಂದಬಾಷ್ಪಗಳಿಂದ ವ್ಯಾಪ್ತವಾದ ಕಣ್ಣುಗಳಿಂದ ಕೂಡಿದ್ದ ಯುಧಿಷ್ಠಿರನು, ಸಂತೋಷಸಮಾಚಾರವನ್ನು ತಿಳಿಸಿದ ದೂತನಿಗೆ ಅಪಾರವಾದ ಧನವನ್ನು ಬಹುಮಾನವಾಗಿ ಕೊಟ್ಟನು. ಅನಂತರ ಎರಡನೆಯ ದಿವಸ ಕೌರವಧುರಂಧರನಾದ ಅರ್ಜುನನು ಪತ್ತನಾಭಿಮುಖವಾಗಿ ಬರುತ್ತಿರಲಾಗಿ ದೊಡ್ಡದಾದ ಕೋಲಾಹಲವುಂಟಾಯಿತು. ಇಂದ್ರನ ಉಚ್ಚೈಃಶ್ರವಸ್ಸೆಂಬ ಕುದುರೆಯ ವೇಗಕ್ಕೆ ಸಮಾನವಾದ ವೇಗವುಳ್ಳ, ಹತ್ತಿರದಲ್ಲಿಯೇ ಬರುತ್ತಿದ್ದ ಯಜ್ಞಾಶ್ವದ ಪಾದಸಂಘಟ್ಟನೆಗಳಿಂದ ಹುಟ್ಟಿದ ಧೂಳು ಆಕಾಶದಲ್ಲಿ ಅದ್ಭುತವಾಗಿ ಶೋಭಿಸುತ್ತಿದ್ದಿತು. ಬರುತ್ತಿರುವಾಗ ಮಾರ್ಗದಲ್ಲಿ ಅರ್ಜುನನು ಜನರಾಡುತ್ತಿದ್ದ ಹರ್ಷದಾಯಕವಾದ ಮಾತುಗಳನ್ನು ಕೇಳಿದನು.

ದಿಷ್ಟ್ಯಾಸಿ ಪಾರ್ಥ ಕುಶಲೀ ಧನ್ಯೋ ರಾಜಾ ಯುಧಿಷ್ಠಿರಃ ॥೧೮॥

"ಪಾರ್ಥ! ಸೌಭಾಗ್ಯದ ಕಾರಣದಿಂದ ನೀನು ಕುಶಲಿಯಾಗಿರುವೆ. ನಿನ್ನ ಆಗಮನದಿಂದ ಯುಧಿಷ್ಠಿರರಾಜನೂ ಧನ್ಯನಾದನು.

ಕೋಽನ್ಯೋ ಹಿ ಪೃಥಿವೀಂ ಕೃತ್ಸ್ನಾಂ ಜಿತ್ವಾ ಹಿ ಯುಧಿ ಪಾರ್ಥಿವಾನ್।
ಚಾರಯಿತ್ವಾ ಹಯಶ್ರೇಷ್ಠಮುಪಾಗಚ್ಛೇದೃತೇಽರ್ಜುನಾತ್ ॥೧೯॥

ಅರ್ಜುನನನ್ನು ಬಿಟ್ಟು ಬೇರೆ ಯಾವನು ತಾನೇ ಭೂಮಂಡಲದ ಎಲ್ಲ ರಾಜರನ್ನೂ ಯುದ್ಧದಲ್ಲಿ ಗೆದ್ದು ಸಮಗ್ರಭೂಮಂಡಲದಲ್ಲಿ ಶ್ರೇಷ್ಠವಾದ ಯಜ್ಞಾಶ್ವವನ್ನು ತಿರುಗಿಸಿಕೊಂಡು ಬಂದಾನು?

ಯೇ ವ್ಯತೀತಾ ಮಹಾತ್ಮಾನೋ ರಾಜಾನಃ ಸಗರಾದಯಃ ।
ತೇಷಾಮಪೀದೃಶಂ ಕರ್ಮ ನ ಕದಾಚನ ಶುಶ್ರುಮ ॥೨೦॥

ಹಿಂದಿನ ಕಾಲದಲ್ಲಿ ಯಾವ ಸಗರಾದಿ ಚಕ್ರವರ್ತಿಗಳು ಆಗಿಹೋದರೋ ಅವರು ಕೂಡ ಇಂತಹ ಅದ್ಭುತಕರ್ಮವನ್ನು ಮಾಡಿದ್ದರೆಂಬುದನ್ನು ನಾವು ಯಾವಾಗಲೂ ಕೇಳಿಲ್ಲ.

ನೈತದನ್ಯೇ ಕರಿಷ್ಯನ್ತಿ ಭವಿಷ್ಯಾ ವಸುಧಾಧಿಪಾಃ ।
ಯತ್ತ್ವಂ ಕುರುಕುಲಶ್ರೇಷ್ಠ ದುಷ್ಕರಂ ಕೃತವಾನಸಿ ॥೨೧॥

ಕುರುಕುಲಶ್ರೇಷ್ಠನೇ! ಮುಂದಿನ ರಾಜರು ಕೂಡ ನೀನು ಮಾಡಿರುವ ದುಷ್ಕರವಾದ ಇಂತಹ ಕರ್ಮವನ್ನು ಮಾಡಲಾರರು.”

ಇವೇ ಮುಂತಾಗಿ ಹೇಳುತ್ತಿದ್ದ ಪ್ರಜೆಗಳ ಕರ್ಣಾನಂದಕರವಾದ ಮಾತುಗಳನ್ನು ಕೇಳುತ್ತಾ ಧರ್ಮಾತ್ಮನಾದ ಅರ್ಜುನನು ಯಜ್ಞಮಂಟಪವನ್ನು ಪ್ರವೇಶಿಸಿದನು. ಆ ಸಮಯದಲ್ಲಿ ಅಮಾತ್ಯಸಹಿತನಾದ ಯುಧಿಷ್ಠಿರನೂ ಯದುಕುಲನಂದನನಾದ ಶ್ರೀಕೃಷ್ಣನೂ ಧೃತರಾಷ್ಟ್ರನನ್ನು ಮುಂದೆ ಮಾಡಿಕೊಂಡು ಅರ್ಜುನನನ್ನು ಇದಿರ್ಗೊಂಡರು. ಅರ್ಜುನನು ತಂದೆಯ ಕಾಲುಗಳಿಗೂ ಧೀಮಂತನಾದ ಧರ್ಮರಾಜನ ಕಾಲುಗಳಿಗೂ ನಮಸ್ಕರಿಸಿ, ಭೀಮಾದಿಗಳನ್ನು ಸಂಪೂಜಿಸಿ, ಕೇಶವನನ್ನು ಆಲಿಂಗಿಸಿಕೊಂಡನು. ಯುಧಿಷ್ಠಿರನು ಶ್ರೀಕೃಷ್ಣನೇ ಮೊದಲಾದವರಿಂದ ಕೂಡಿಕೊಂಡು ಅರ್ಜುನನನ್ನು ಸ್ವಾಗತಿಸಿ-ಸತ್ಕರಿಸಿದನು. ಅದಕ್ಕೆ ಪ್ರತಿಯಾಗಿ ಅರ್ಜುನನೂ ಅವರೆಲ್ಲರನ್ನೂ ಯಥಾವಿಧಿಯಾಗಿ ಪೂಜಿಸಿದನು. ಸಮುದ್ರದ ತೀರವನ್ನು ಸೇರಲು ಬಯಸಿ ಈಜಿಕೊಂಡು ತೀರವನ್ನು ಸೇರಿದವನು ವಿಶ್ರಾಂತಿಯನ್ನು ಹೊಂದುವಂತೆ–ಮಹಾಬಾಹುವಾದ ಅರ್ಜುನನು ದುಸ್ತರವಾದ ಕಾರ್ಯವನ್ನು ಮುಗಿಸಿ ವಿಶ್ರಾಂತಿಯನ್ನು ಪಡೆದನು.

ಆ ಸಮಯದಲ್ಲಿಯೇ ಧೀಮಂತನಾದ ಬಭ್ರುವಾಹನನು ತಾಯಂದಿರಿಂದ ಕೂಡಿಕೊಂಡು ಹಸ್ತಿನಾಪುರಕ್ಕೆ ಆಗಮಿಸಿದನು. ಬಭ್ರುವಾಹನನು ಆಗಮಿಸಿದೊಡನೆಯೇ ಕುರುವೃದ್ಧರನ್ನೂ ಇತರ ರಾಜರನ್ನೂ ಅಭಿವಾದನಪೂರ್ವಕವಾಗಿ ನಮಸ್ಕರಿಸಿದನು. ಅವರಿಂದಲೂ ಯಥೋಚಿತವಾಗಿ ಸತ್ಕೃತನಾದ ಮಣಿಪುರದರಸನು ಪಿತಾಮಹಿಯಾದ ಕುಂತಿಯ ಶ್ರೇಷ್ಠವಾದ ಅರಮನೆಗೆ ಹೋದನು.

೮೭ನೆಯ ಅಧ್ಯಾಯವು ಮುಗಿಯಿತು.

೮೮ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಉಲೂಪೀ-ಚಿತ್ರಾಂಗದೆಯರೊಡನಿದ್ದ ಬಭ್ರುವಾಹನನಿಗೆ ಪುರಸ್ಕಾರ: ಅಶ್ವಮೇಧಾರಂಭ

ವೈಶಂಪಾಯನರು ಹೇಳುತ್ತಾರೆ:

ಸ ಪ್ರವಿಶ್ಯ ಮಹಾಬಾಹುಃ ಪಾಣ್ಡವಾನಾಂ ನಿವೇಶನಮ್ ।
ಪಿತಾಮಹೀಮಭ್ಯವನ್ದತ್ಸಾಮ್ನಾ ಪರಮವಲ್ಗುನಾ ॥೧॥



ಜನಮೇಜಯ! ಮಹಾಬಾಹುವಾದ ಬಭ್ರುವಾಹನನು ಪಾಂಡವರ

ಅರಮನೆಯನ್ನು ಪ್ರವೇಶಿಸಿ ವಿನೀತನಾಗಿ ಸುಮಧುರವಾದ ಮಾತುಗಳನ್ನಾಡುತ್ತಾ ಪಿತಾಮಹಿಯಾದ ಕುಂತಿಗೆ ಅಭಿವಾದನಮಾಡಿದನು.

ಬಳಿಕ ಚಿತ್ರಾಂಗದೆಯೂ-ಕೌರವ್ಯನಾಗನ ಮಗಳಾದ ಉಲೂಪಿಯೂ ವಿನೀತರಾಗಿ ಕುಂತಿಯ ಮತ್ತು ದ್ರೌಪದಿಯ ಬಳಿಗೆ ಜೊತೆಯಲ್ಲಿಯೇ ಹೋದರು. ಸುಭದ್ರೆಯನ್ನೂ ಮತ್ತು ಇತರ ಕುರುಕುಲಸ್ತ್ರೀಯರನ್ನೂ ಉಲೂಪೀ-ಚಿತ್ರಾಂಗದೆಯರು ಕಂಡು ಮಾತನಾಡಿಸಿದರು. ಕುಂತಿಯು ಇಬ್ಬರಿಗೂ ಅನೇಕವಿಧವಾದ ರತ್ನಗಳನ್ನು ಬಳುವಳಿಯಾಗಿ ಕೊಟ್ಟಳು. ದ್ರೌಪದೀ, ಸುಭದ್ರೆ ಮತ್ತು ಇತರ ಕುರುಕುಲಸ್ತ್ರೀಯರೂ ಉಲೂಪೀ-ಚಿತ್ರಾಂಗದೆಯರಿಗೆ ವಿಧ-ವಿಧವಾದ ಪಾರಿತೋಷಿಕಗಳನ್ನು ಕೊಟ್ಟರು. ಬಳಿಕ ಅವರಿಬ್ಬರೂ ಬಹುಮೂಲ್ಯವಾದ ಹಾಸಿಗೆಗಳಿಂದಲೂ ಆಸನಗಳಿಂದಲೂ ಅಲಂಕೃತವಾಗಿದ್ದ ಭವನಗಳಲ್ಲಿ ತಂಗಿದರು. ಅರ್ಜುನನಿಗೆ ಹಿತವನ್ನೂ ಪ್ರಿಯವನ್ನೂ ಉಂಟುಮಾಡುವ ಸಲುವಾಗಿ ಕುಂತಿದೇವಿಯೇ ಇಬ್ಬರು ರಾಜಕುಮಾರಿಯರನ್ನೂ ಸತ್ಕರಿಸಿ ಉಪಚರಿಸಿದಳು. ಕುಂತಿಯಿಂದ ಸತ್ಕೃತನಾದ ಮಹಾತೇಜಸ್ವಿಯಾದ ಬಭ್ರುವಾಹನರಾಜನು ಮಹೀಪಾಲನಾದ ಧೃತರಾಷ್ಟ್ರರಾಜನನ್ನು ಯಥಾವಿಧಿಯಾಗಿ ಸೇವಿಸಿದನು. ಮಹಾತೇಜಸ್ವಿಯಾದ ಬಭ್ರುವಾಹನನು ರಾಜನಾದ ಯುಧಿಷ್ಠಿರನನ್ನೂ, ಭೀಮನೇ ಮೊದಲಾದ ಪಾಂಡವರನ್ನೂ ಸಂಧಿಸಿ ವಿನಯಪೂರ್ವಕವಾಗಿ ಅಭಿವಾದನ ಮಾಡಿದನು. ಯುಧಿಷ್ಠಿರಾದಿಗಳು ಅರ್ಜುನನ ಪ್ರಿಯಪುತ್ರನಾದ ಮಣಿಪುರದ ರಾಜನನ್ನು ಗಾಢವಾಗಿ ಆಲಿಂಗಿಸಿಕೊಂಡು ಯಥಾವಿಧಿಯಾಗಿ ಸತ್ಕರಿಸಿದರು. ಅವನ ವಿಷಯದಲ್ಲಿ ಸುಪ್ರೀತರಾದ ಮಹಾರಥರಾದ ಪಾಂಡವರು ಅವನಿಗೆ ಅಪಾರವಾದ ಐಶ್ವರ್ಯವನ್ನು ಪಾರಿತೋಷಿಕವಾಗಿ ಕೊಟ್ಟರು. ಅದೇ ರೀತಿಯಲ್ಲಿ ಮಣಿಪುರದರಸನು ಚಕ್ರ-ಗದಾಧರನಾದ ಶ್ರೀಕೃಷ್ಣನನ್ನು ಪ್ರದ್ಯುಮ್ನನಂತೆಯೇ ವಿನಯಪೂರ್ವಕವಾಗಿ ಸೇವಿಸಿದನು. ಆ ರಾಜನಿಗೆ ಶ್ರೀಕೃಷ್ಣನು ಬಹುಮೂಲ್ಯವೂ ಮತ್ತು ಸರ್ವರಿಂದಲೂ ಪ್ರಶಂಸಿತವೂ ಆಗಿದ್ದ, ಸುವರ್ಣಾಭರಣಗಳಿಂದ ಸಮಲಂಕೃತವಾಗಿದ್ದ, ದಿವ್ಯವಾದ ಕುದುರೆಗಳಿಂದ ಯುಕ್ತವಾಗಿದ್ದ ರಥವನ್ನು ಬಳುವಳಿಯಾಗಿ ಕೊಟ್ಟನು. ಬಳಿಕ ಯುಧಿಷ್ಠಿರ-ಭೀಮಸೇನ-ಅರ್ಜುನ-ನಕುಲ-ಸಹದೇವರು ಪ್ರತ್ಯೇಕ-ಪ್ರತ್ಯೇಕವಾಗಿ ಬಭ್ರು

ವಾಹನನನ್ನು ಸತ್ಕರಿಸಿ ಅವನಿಗೆ ಅಪಾರವಾದ ಐಶ್ವರ್ಯವನ್ನು ಕೊಟ್ಟರು. ಅಂದಿನಿಂದ ಮೂರನೆಯ ದಿವಸ ಸತ್ಯವತಿಯ ಮಕ್ಕಳಾದ ವ್ಯಾಸಮುನಿಗಳು ಯುಧಿಷ್ಠಿರನ ಬಳಿಗೆ ಹೋಗಿ ಹೇಳಿದರು:

"ಕೌಂತೇಯನೇ! ಇಂದಿನಿಂದಲೇ ನೀನು ಯಜ್ಞವನ್ನು ಆರಂಭಿಸು. ಯಜ್ಞವನ್ನು ಪ್ರಾರಂಭಿಸಲು ಇಂದು ಶುಭದಿನವಾಗಿದೆ. ಯಜ್ಞದ ಮುಹೂರ್ತವು ಉಪಸ್ಥಿತವಾಗಿದೆ. ಯಾಜಕರು ಯಜ್ಞವನ್ನು ಆರಂಭಿಸುವಂತೆ ಪ್ರೇರಿಸುತ್ತಿದ್ದಾರೆ. ರಾಜೇಂದ್ರನೇ! ಯಜ್ಞದಲ್ಲಿ ಯಾವುದಕ್ಕೂ ಕೊರತೆಯಿರಬಾರದು. ಈ ಕ್ರತುವಿನ ಹೆಸರೇ 'ಅಹೀನ'-ಯಾವುದರಲ್ಲಿಯೂ ನ್ಯೂನತೆಯಿಲ್ಲದುದು-(ಸರ್ವಾಂಗಪೂರ್ಣ) ಎಂಬುದಾಗಿದೆ. (ಅನೇಕ ದಿವಸ ಸಾಧ್ಯವಾದ ಸೋಮಯಾಗಕ್ಕೂ 'ಅಹೀನ' ಎಂದು ಹೆಸರು.) ಇದರಲ್ಲಿ ಕಾಂಚನವನ್ನು ಬಹಳವಾಗಿ ಉಪಯೋಗಿಸುವುದರಿಂದ ಈ ಯಜ್ಞವು ಬಹುಸುವರ್ಣಕಯಜ್ಞವೆಂಬ ಖ್ಯಾತಿಯನ್ನೂ ಪಡೆದಿದೆ. ಯಜ್ಞಕ್ಕೆ ಪ್ರಧಾನಕಾರಣರು ಬ್ರಾಹ್ಮಣರೇ ಆಗಿದ್ದಾರೆ. ಆದುದರಿಂದ ನೀನು ಅವರಿಗೆ ಮೂರುಪಟ್ಟು ಅಧಿಕವಾಗಿ ದಕ್ಷಿಣೆಯನ್ನು ಕೊಡು. ಹೀಗೆ ಮಾಡುವುದರಿಂದ ಒಂದೇ ಯಜ್ಞಮಾಡಿದರೂ ಮೂರು ಯಜ್ಞಗಳನ್ನು ಮಾಡಿದ ಫಲವು ಲಭಿಸುತ್ತದೆ. ಬಹುದಕ್ಷಿಣಾಯುಕ್ತವಾದ ಮೂರು ಅಶ್ವಮೇಧಯಾಗಗಳ ಫಲವನ್ನು ಪಡೆದು ನೀನು ಜ್ಞಾತಿಗಳನ್ನು ವಧೆಮಾಡಿದ ಪಾಪದಿಂದ ಮುಕ್ತನಾಗುವೆ. ನಿನಗೆ ಲಭಿಸುವ ಅಶ್ವಮೇಧದ ಅವಭೃಥಸ್ನಾನವು ಪವಿತ್ರವಾದುದು, ಶ್ರೇಷ್ಠವಾದುದು, ಪಾವನವಾದುದು ಮತ್ತು ಉತ್ತಮವಾದುದು. (ಇದನ್ನು ಮಾಡಿ ನೀನು ಸಮಸ್ತಪಾಪಗಳಿಂದಲೂ ಬಿಡುಗಡೆ ಹೊಂದುವೆ.)"

ಜನಮೇಜಯ! ಮಹಾಬುದ್ಧಿವಂತರಾದ ವ್ಯಾಸರು ಹೀಗೆ ಹೇಳಲು ಧರ್ಮಾತ್ಮನಾದ ತೇಜಸ್ವಿಯಾದ ಯುಧಿಷ್ಠಿರನು ಅಶ್ವಮೇಧಯಜ್ಞದ ಸಿದ್ಧಿಗಾಗಿ ದೀಕ್ಷೆಯನ್ನು ಗ್ರಹಣಮಾಡಿದನು. ಮಹಾಬಾಹುವಾದ ಯುಧಿಷ್ಠಿರನು ಅನೇಕಪ್ರಕಾರವಾದ ಅನ್ನಗಳಿಂದಲೂ ದಕ್ಷಿಣೆಗಳಿಂದಲೂ ಯುಕ್ತವಾದ, ಸಕಲಕಾಮನೆಗಳನ್ನೂ ಕೊಡುವ ಮಹಾಗುಣದಿಂದ ಯುಕ್ತ

ವಾದ ಅಶ್ವಮೇಧವೆಂಬ ಹೆಸರಿನ ಮಹಾಯಜ್ಞವನ್ನು ಆರಂಭಿಸಿದನು. ಆ ಯಜ್ಞಮಂಟಪದಲ್ಲಿ ವೇದವಿದರಾದ, ಸರ್ವಜ್ಞರಾದ (ಶಾಸ್ತ್ರಜ್ಞರಾದ) ಚೆನ್ನಾಗಿ ಶ್ರೌತಶಿಕ್ಷಣವನ್ನು ಪಡೆದ ಯಾಜಕರು ವಿಧಿವತ್ತಾಗಿ ಯಜ್ಞಮಂಟಪದ ಸುತ್ತಲೂ ತಿರುಗಾಡುತ್ತಾ ಕರ್ಮಗಳನ್ನು ಮಾಡುತ್ತಿದ್ದರು. ಆ ಯಾಜಕರು ಮಾಡುತ್ತಿದ್ದ ಕರ್ಮಗಳಲ್ಲಿ ಸ್ಖಾಲಿತ್ಯವಿರಲಿಲ್ಲ. ಮಾಡಬೇಕಾದ ಯಾವ ಕರ್ಮವನ್ನೂ ಬಿಡಲಿಲ್ಲ. ಶ್ರೇಷ್ಠರಾದ ಬ್ರಾಹ್ಮಣರು ಎಲ್ಲ ಕಾರ್ಯಗಳನ್ನೂ ಕ್ರಮವಾಗಿಯೂ ಯಥೋಚಿತವಾದ ರೀತಿಯಲ್ಲಿಯೂ ಮಾಡುತ್ತಿದ್ದರು. ದ್ವಿಜಶ್ರೇಷ್ಠರು ಘರ್ಮವೆಂಬ ಹೆಸರಿನ ಪ್ರವರ್ಗ್ಯವನ್ನು (ಅಶ್ವಮೇಧಾಂಗಭೂತವಾದ ಒಂದು ಯಾಗವನ್ನು) ಮಾಡಿ ಅಭೀಷ್ಟವನ್ನು (ಸೋಮಲತೆಯನ್ನು ಕುಟ್ಟಿ ರಸವನ್ನು ಹಿಂಡುವ ಕಾರ್ಯವನ್ನು) ಮಾಡಿದರು. ಸೋಮಪಾನಮಾಡುವುದರಲ್ಲಿ ಶ್ರೇಷ್ಠರಾದ, ಶಾಸ್ತ್ರಕ್ಕೆ ಅನುಸಾರವಾಗಿ ನಡೆಯುವ ವಿದ್ವಾಂಸರು-ಸೋಮಲತೆಯಿಂದ ರಸವನ್ನು ತೆಗೆದು ಅದರ ಮೂಲಕವಾಗಿ ಆನುಪೂರ್ವಿಯಾಗಿ ಮೂರು ಸವನಗಳನ್ನು ಮಾಡಿದರು.

ನ ತತ್ರ ಕೃಪಣಃ ಕಶ್ಚಿನ್ನ ದರಿದ್ರೋ ಬಭೂವ ಹ ।
ಕ್ಷುಧಿತೋ ದುಃಖಿತೋ ವಾಪಿ ಪ್ರಾಕೃತೋ ವಾಪಿ ಮಾನವಃ ॥೨೩॥

ಆ ಯಜ್ಞಕ್ಕೆ ಆಗಮಿಸಿದವರಲ್ಲಿ ಕೃಪಣನಾಗಲೀ, ದರಿದ್ರನಾಗಲೀ, ಹಸಿದವನಾಗಲೀ, ದುಃಖಿತನಾಗಲೀ, ಅಸಂಸ್ಕೃತನಾದ ಮನುಷ್ಯನಾಗಲೀ ಯಾವನೊಬ್ಬನೂ ಇರಲಿಲ್ಲ. ಶತ್ರುಸೂದನನಾದ ಮಹಾತೇಜಸ್ವಿಯಾದ ಭೀಮಸೇನನು ರಾಜನ ಆಜ್ಞಾನುಸಾರವಾಗಿ ಭೋಜನವನ್ನು ಅಪೇಕ್ಷಿಸಿದವರಿಗೆ ಭೋಜನವನ್ನು ಮಾಡಿಸುವ ಕಾರ್ಯದಲ್ಲಿ ನಿರಂತರವಾಗಿ ನಿರತನಾಗಿದ್ದನು. ಯಜ್ಞವೇದಿಯನ್ನು ನಿರ್ಮಿಸುವುದರಲ್ಲಿ ನಿಷ್ಣಾತರಾದ ಯಾಜಕರು ಶಾಸ್ತ್ರದ ವಿಧಿಗೆ ಅನುಸಾರವಾಗಿ ಅನುದಿನವೂ ಎಲ್ಲ ಕಾರ್ಯಗಳನ್ನೂ ಮಾಡುತ್ತಿದ್ದರು. ಬುದ್ಧಿವಂತನಾದ ಯುಧಿಷ್ಠಿರನ ಯಜ್ಞದಲ್ಲಿ ಷಡಂಗಸಹಿತವಾದ ವೇದವನ್ನು ಅಧ್ಯಯನಮಾಡದ, ವ್ರತಾನುಷ್ಠಾನವನ್ನು ಮಾಡದ, ಅಧ್ಯಾಪನಕರ್ಮದಲ್ಲಿ ಕುಶಲನಲ್ಲದ, ವಾದ-ವಿವಾದಗಳಲ್ಲಿ ವಿಚಕ್ಷಣನಲ್ಲದ ಸದಸ್ಯನಿರಲಿಲ್ಲ. ಬಳಿಕ ಯೂಪಸ್ಥಾಪನೆಯ ಸಮಯವು

ಸನ್ನಿಹಿತವಾದೊಡನೆಯೇ ಯಾಜಕರು ಯಜ್ಞಭೂಮಿಯಲ್ಲಿ ಆರು ಬಿಲ್ವ ಯೂಪಗಳನ್ನೂ, ಆರು ಖಾದಿರ (ಕಗ್ಗಲಿ) ಯೂಪಗಳನ್ನೂ, ಆರು ಪಲಾಶಯೂಪಗಳನ್ನೂ, ಎರಡು ದೇವದಾರುಯೂಪಗಳನ್ನೂ, ಒಂದು ಶ್ಲೇಷ್ಮಾತ್ರಕ (ಚಳ್ಳೇಮರ) ಯೂಪವನ್ನೂ ಹೀಗೆ ಒಟ್ಟು ಇಪ್ಪತ್ತೊಂದು ಯೂಪಗಳನ್ನು ಸಿದ್ಧಗೊಳಿಸಿದರು. ಧರ್ಮರಾಜನ ಆಜ್ಞಾನುಸಾರವಾಗಿ ಭೀಮನು ಯಜ್ಞಮಂಟಪದ ಅಲಂಕಾರಾರ್ಥವಾಗಿ ಸುವರ್ಣಮಯವಾದ ಇತರ ಯೂಪಗಳನ್ನೂ ಮಾಡಿಸಿದನು. ನಾನಾಬಣ್ಣಗಳ ವಸ್ತ್ರಗಳಿಂದ ಸಮಲಂಕೃತವಾದ, ರಾಜರ್ಷಿಯಾದ ಯುಧಿಷ್ಠಿರನ ಯಜ್ಞಸಂಬಂಧವಾದ ಆ ಯೂಪಗಳು-ಆಕಾಶದಲ್ಲಿ ಸಪ್ತರ್ಷಿಗಳಿಂದ ಸಹಿತರಾದ, ಮಹೇಂದ್ರನ ಅನುಸಾರಿಗಳಾದ ದೇವತೆಗಳಂತೆಯೇ ಪ್ರಕಾಶಿಸುತ್ತಿದ್ದುವು. ಚಯನಕ್ಕಾಗಿ ಅಲ್ಲಿಗೆ ಸುವರ್ಣಮಯವಾದ ಇಟ್ಟಿಗೆಗಳು ತರಲ್ಪಟ್ಟಿದ್ದುವು. ಅವುಗಳಿಂದಲೇ ನಿರ್ಮಿತವಾಗಿದ್ದ ಚಯನವು ದಕ್ಷಪ್ರಜಾಪತಿಯ ಚಯನದಂತೆಯೇ ಪ್ರಕಾಶಿಸುತ್ತಿದ್ದಿತು. ಅಲ್ಲಿ ನಾಲ್ಕು ಚಿತಿಗಳಿದ್ದುವು. ಅವುಗಳಲ್ಲಿ ಪ್ರತಿಯೊಂದರ ಉದ್ದ-ಅಗಲಗಳು ಹದಿನೆಂಟು ಗೇಣುಗಳಿದ್ದುವು. ಸುವರ್ಣಮಯವಾದ ರೆಕ್ಕೆಗಳನ್ನು ಹೊಂದಿದ್ದ ಪ್ರಧಾನಚಿತಿಯು ಗರುಡನ ಆಕಾರದಲ್ಲಿದ್ದಿತು ಮತ್ತು ತ್ರಿಕೋಣಾಕಾರವಾಗಿದ್ದಿತು. ಬಳಿಕ ವಿದ್ವಾಂಸರು ಶಾಸ್ತ್ರಾನುಸಾರವಾಗಿ ಪಶುಗಳನ್ನು ನಿಯೋಜಿಸಿದರು. ಭಿನ್ನ-ಭಿನ್ನದೇವತೆಗಳನ್ನು ಉದ್ದೇಶಿಸಿ ಯಾಜಕರು ಅಗ್ನಿಚಯನಕರ್ಮದಲ್ಲಿ ಪಕ್ಷಿಗಳನ್ನೂ, ಪಶುಗಳನ್ನೂ, ಶಾಸ್ತ್ರದಲ್ಲಿ ಹೇಳಿರುವ ಲಕ್ಷಣಗಳುಳ್ಳ ಋಷಭಗಳನ್ನೂ, ಜಲಚರಪ್ರಾಣಿಗಳನ್ನೂ ಒಟ್ಟಾಗಿ ಸೇರಿಸಿದರು. ಕುಂತೀಪುತ್ರನಾದ, ಮಹಾತ್ಮನಾದ ಯುಧಿಷ್ಠಿರನ ಯಜ್ಞದಲ್ಲಿದ್ದ ಆ ಯೂಪಗಳಲ್ಲಿ ಮೂರು ನೂರು ಪಶುಗಳು ಬಂಧಿಸಲ್ಪಟ್ಟಿದ್ದುವು. ಅವುಗಳಲ್ಲಿ ಶ್ರೇಷ್ಠವಾದ ಕುದುರೆಯು ಪ್ರಧಾನವಾಗಿದ್ದಿತು. ಸಾಕ್ಷಾತ್ ದೇವರ್ಷಿಗಳಿಂದ ಸಮಾಕುಲವಾಗಿದ್ದ ಯುಧಿಷ್ಠಿರನ ಆ ಯಜ್ಞವು ಬಹಳವಾಗಿ ಶೋಭಿಸುತ್ತಿದ್ದಿತು. ಗಂಧರ್ವಗಣವು ಹಾಡುತ್ತಿದ್ದ ಸಂಗೀತವೂ ಅಪ್ಸರೆಯರ ನೃತ್ಯವೂ ಯಜ್ಞದ ಶೋಭೆಯನ್ನು ಮತ್ತಷ್ಟು ಹೆಚ್ಚಿಸಿತು. ಆ ಯಜ್ಞಮಂಟಪವು ಕಿಂಪುರುಷರಿಂದ ಸಮಾಕುಲವಾಗಿದ್ದಿತು. ಕಿನ್ನರರಿಂದ ಶೋಭಾಯಮಾನವಾಗಿ

ಕಾಣುತ್ತಿದ್ದಿತು. ಸಿದ್ಧರ ಮತ್ತು ಬ್ರಾಹ್ಮಣರ ನಿವಾಸಗಳಿಂದ ಸಮಾವೃತವಾಗಿದ್ದಿತು. ದ್ವಿಜಶ್ರೇಷ್ಠರಾದ, ಸರ್ವಶಾಸ್ತ್ರಗಳ ರಚಯಿತೃಗಳಾದ, ಯಜ್ಞಕರ್ಮದಲ್ಲಿ ಕುಶಲಿಗಳಾದ ವ್ಯಾಸಶಿಷ್ಯರು ಸದಾ ಯಜ್ಞಸಭೆಯಲ್ಲಿ ಇರುತ್ತಿದ್ದರು. ನಾರದರೂ, ಮಹಾತೇಜಸ್ವಿಗಳಾದ ತುಂಬುರರೂ, ವಿಶ್ವಾವಸು-ಚಿತ್ರಸೇನರೂ, ಗೀತಕೋವಿದರಾದ ಇತರರೂ ಅಲ್ಲಿದ್ದರು. ಸುಪ್ರಸಿದ್ಧರಾದ ಗಾಯಕರಾದ ಇನ್ನೂ ಅನೇಕಸಂಗೀತವಿದ್ವಾಂಸರೂ ಆ ಯಜ್ಞಮಂಟಪದಲ್ಲಿದ್ದರು. ಯಜ್ಞಕರ್ಮದ ಮಧ್ಯದಲ್ಲಿ ಬಿಡುವು ಸಿಕ್ಕಿದಾಗ ಹಾಡುಗಾರಿಕೆಯಲ್ಲಿ ಕುಶಲರಾದ ಮತ್ತು ನೃತ್ಯವಿಶಾರದರಾದ ಗಂಧರ್ವರು ತಮ್ಮ ನೃತ್ಯ-ಗಾಯನಗಳಿಂದ ಬ್ರಾಹ್ಮಣರನ್ನು ಸಂತೋಷಗೊಳಿಸುತ್ತಿದ್ದರು.

೮೮ನೆಯ ಅಧ್ಯಾಯವು ಮುಗಿಯಿತು.

೮೯ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಯುಧಿಷ್ಠಿರನು ಬ್ರಾಹ್ಮಣರಿಗೆ ದಕ್ಷಿಣೆಯನ್ನೂ-ರಾಜರಿಗೆ ಪಾರಿತೋಷಿಕಗಳನ್ನೂ ಕೊಟ್ಟು ಕಳುಹಿಸಿದುದು

ವೈಶಂಪಾಯನರು ಹೇಳುತ್ತಾರೆ:

ಶ್ರಪಯಿತ್ವಾ ಪಶೂನನ್ಯಾನ್ವಿಧಿವದ್ದ್ವಿಜಸತ್ತಮಾಃ ।
ತಂ ತುರಙ್ಗಂ ಯಥಾಶಾಸ್ತ್ರಮಾಲಭನ್ತ ದ್ವಿಜಾತಯಃ ॥೧॥

ಜನಮೇಜಯ! ದ್ವಿಜಶ್ರೇಷ್ಠರು ಇತರ ಪಶುಗಳನ್ನು ವಿಧಿವತ್ತಾಗಿ ಬೇಯಿಸಿ (ಹೋಮಮಾಡಿ) ಬಳಿಕ ಶ್ರೇಷ್ಠವಾದ ಆ ಕುದುರೆಯನ್ನು ಶಾಸ್ತ್ರವಿಧಿಗೆ ಅನುಸಾರವಾಗಿ ಆಲಂಭನ (ವಿಶಸನ) ಮಾಡಿದರು. ಬಳಿಕ ಯಾಜಕರು ಕುದುರೆಯನ್ನು ವಿಧಿವತ್ತಾಗಿ ಬೇಯಿಸಿ ಮಂತ್ರ-ದ್ರವ್ಯ-ಶ್ರದ್ಧೆ ಗಳೆಂಬ ಮೂರು ಕಲೆಗಳಿಂದ ಯುಕ್ತಳಾದ ಮನನಶೀಲಳಾದ ದ್ರೌಪದಿ ಯನ್ನು ಅದರ ಬಳಿಯಲ್ಲಿ ಕುಳ್ಳಿರಿಸಿದರು. ಬಳಿಕ ಏಕಾಗ್ರಚಿತ್ತರಾದ ಬ್ರಾಹ್ಮಣರು ಶಾಸ್ತ್ರವಿಧಿಗೆ ಅನುಸಾರವಾಗಿ ಕುದುರೆಯಿಂದ ವಪೆಯನ್ನು ತೆಗೆದು ವಿಧಿವತ್ತಾಗಿ ಅದನ್ನು ಬೇಯಿಸಿದರು. ಸಮಸ್ತಪಾಪಗಳನ್ನೂ ಪರಿಹರಿಸುವ ಆ ವಪೆಯಿಂದ ಹೊರಟ ಹೊಗೆಯ ವಾಸನೆಯನ್ನು

ಧರ್ಮರಾಜನು ತನ್ನ ಸಹೋದರರೊಡನೆ ಶಾಸ್ತ್ರವಿಧಿಗೆ ಅನುಸಾರವಾಗಿ ಆಘ್ರಾಣಿಸಿದನು. ಕುದುರೆಯ ಉಳಿದ ಅಂಗಗಳನ್ನು ಧೀರರಾದ ಎಲ್ಲ ಹದಿನಾರು ಋತ್ವಿಜರೂ ಅಗ್ನಿಯಲ್ಲಿ ಹೋಮಮಾಡಿದರು. ಇಂದ್ರನ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ ಯುಧಿಷ್ಠಿರನ ಅಶ್ವಮೇಧಯಾಗವನ್ನು ಹೀಗೆ ಸಮಾಪನಗೊಳಿಸಿ ಸಶಿಷ್ಯರಾದ ಭಗವಾನ್ ವ್ಯಾಸರು ಅವನನ್ನು ಅಭ್ಯುದಯಸೂಚಕವಾಗಿ ಆಶೀರ್ವದಿಸಿದರು. ಬಳಿಕ ಯುಧಿಷ್ಠಿರನು ಎಲ್ಲ ಬ್ರಾಹ್ಮಣರಿಗೂ ಒಂದು ಸಾವಿರ ಕೋಟಿ (ಖರ್ವ ಸಂಖ್ಯೆಯ) ಸುವರ್ಣನಾಣ್ಯಗಳನ್ನು ಕೊಟ್ಟು ವ್ಯಾಸರಿಗೆ ಅಖಂಡಭೂಮಂಡಲ ವನ್ನೇ ದಾನವಾಗಿ ಕೊಟ್ಟನು. ಸತ್ಯವತಿಯ ಪುತ್ರರಾದ ವ್ಯಾಸರು ಯುಧಿಷ್ಠಿರ ನಿಂದ ಅಖಂಡಭೂಮಂಡಲವನ್ನೇ ದಾನವಾಗಿ ಪಡೆದು ಹೇಳಿದರು:

ವಸುಧಾ ಭವತಸ್ತ್ವೇಷಾ ಸಂನ್ಯಸ್ತಾ ರಾಜಸತ್ತಮ ।
ನಿಷ್ಕ್ರಯೋ ದೀಯತಾಂ ಮಹ್ಯಂ ಬ್ರಾಹ್ಮಣಾ ಹಿ ಧನಾರ್ಥಿನಃ ॥೯॥

"ನೃಪಶ್ರೇಷ್ಠನೇ! ನಿನ್ನದೇ ಆಗಿದ್ದ ಈ ಭೂಮಂಡಲವನ್ನು ಪುನಃ ನಿನ್ನ ಅಧಿಕಾರಕ್ಕೆ ಒಪ್ಪಿಸುವೆನು. ನೀನು ಈ ಭೂಮಂಡಲದ ಬೆಲೆಯನ್ನು ನನಗೆ ಕೊಟ್ಟುಬಿಡು. ಬ್ರಾಹ್ಮಣರು ಧನಾರ್ಥಿಗಳಷ್ಟೆ! (ರಾಜ್ಯಾರ್ಥಿಗಳಲ್ಲ.)"

ವ್ಯಾಸರು ಹೀಗೆ ಹೇಳಲು ಸಹೋದರರ ಜೊತೆಯಲ್ಲಿದ್ದ, ಮಹಾತ್ಮನಾದ ಯುಧಿಷ್ಠಿರನು ನೆರೆದಿದ್ದ ಮಹಾತ್ಮರಾದ ರಾಜರ ಮಧ್ಯದಲ್ಲಿ ಬ್ರಾಹ್ಮಣರನ್ನು ಕುರಿತು ಈ ಮಾತನ್ನು ಹೇಳಿದನು:

ಅಶ್ವಮೇಧೇ ಮಹಾಯಜ್ಞೇ ಪೃಥಿವೀ ದಕ್ಷಿಣಾ ಸ್ಮೃತಾ ।
ಅರ್ಜುನೇನ ಜಿತಾ ಚೇಯಮೃತ್ವಿಗ್ಭ್ಯಃ ಪ್ರಾಪಿತಾ ಮಯಾ ॥೧೧॥
ವನಂ ಪ್ರವೇಕ್ಷ್ಯೇ ವಿಪ್ರಾಗ್ರ್ಯಾ ವಿಭಜಧ್ವಂ ಮಹೀಮಿಮಾಮ್।
ಚತುರ್ಧಾ ಪೃಥಿವೀಂ ಕೃತ್ವಾ ಚಾತುರ್ಹೋತ್ರಪ್ರಮಾಣತಃ ॥೧೨॥
ನಾಹಮಾದಾತುಮಿಚ್ಛಾಮಿ ಬ್ರಹ್ಮಸ್ವಂ ದ್ವಿಜಸತ್ತಮಾಃ।
ಇದಂ ನಿತ್ಯಂ ಮನೋ ವಿಪ್ರಾ ಭ್ರಾತೃಣಾಂ ಚೈವ ಮೇ ಸದಾ ॥೧೩॥

"ವಿಪ್ರಶ್ರೇಷ್ಠರೇ! ಅಶ್ವಮೇಧಮಹಾಯಜ್ಞದಲ್ಲಿ ಭೂಮಂಡಲವನ್ನೇ ದಕ್ಷಿಣೆಯ ರೂಪದಲ್ಲಿ ಕೊಡಬೇಕೆಂಬ ವಿಧಿಯಿದೆ. ಈ ಭೂಮಂಡಲವು

ಅರ್ಜುನನಿಂದ ಜಯಿಸಲ್ಪಟ್ಟಿತು. ಅದನ್ನೇ ನಾನು ಋತ್ವಿಜರಿಗೆ ದಕ್ಷಿಣೆಯ ರೂಪದಲ್ಲಿ ದಾನಮಾಡಿದ್ದೇನೆ. ಭೂಮಂಡಲವನ್ನೇ ದಾನಮಾಡಿರುವ ನಾನಿನ್ನು ಅರಣ್ಯಕ್ಕೆ ಹೋಗುತ್ತೇನೆ. ಈ ಪೃಥ್ವಿಯನ್ನು ನೀವೇ ಹಂಚಿಕೊಳ್ಳಿರಿ. ನೀವು ಚಾತುರ್ಹೋತ್ರಯಜ್ಞದ* ಪ್ರಮಾಣಾನುಸಾರವಾಗಿ ಭೂಮಿಯನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಿ ಹಂಚಿಕೊಳ್ಳಿರಿ. ಬ್ರಾಹ್ಮಣರ ಸ್ವತ್ತನ್ನು ತೆಗೆದುಕೊಳ್ಳಲು ನಾನು ಇಷ್ಟಪಡುವುದಿಲ್ಲ. ನನ್ನ ಮತ್ತು ನನ್ನ ಸೋದರರ ಸ್ಥಿರವಾದ ಅಭಿಪ್ರಾಯವೂ ಇದೇ ಆಗಿದೆ.”

ಜನಮೇಜಯ! ಯುಧಿಷ್ಠಿರನು ಹೀಗೆ ಹೇಳಲು, ಭೀಮನೇ ಮೊದಲಾದ ಸಹೋದರರೂ-ದ್ರೌಪದಿಯೂ-‘ಏವಮೇತತ್’ ‘ಇದು ಹೀಗೆಯೇ ಸರಿ. ಮಹಾರಾಜನು ಹೇಳಿದುದೇ ನಮ್ಮೆಲ್ಲರ ಅಭಿಮತವೂ ಆಗಿದೆ’–ಎಂದು ಒಕ್ಕೊರಳಿನಿಂದ ಹೇಳಿದರು. ಧರ್ಮರಾಜನು ಹೇಳಿದುದಕ್ಕೆ ಅವರ ಆ ಪ್ರತಿಕ್ರಿಯೆಯನ್ನು ಕೇಳಿ ಎಲ್ಲರೂ ರೋಮಾಂಚಿತರಾದರು. ಆಕಾಶದಲ್ಲಿ ‘ಸಾಧು–ಸಾಧು’ ‘ಭಲೇ-ಭಲೇ’ –ಎಂಬ ಶಬ್ದವು ಕೇಳಿಬಂದಿತು. ಅದೇ ರೀತಿಯಲ್ಲಿ ಪಾಂಡವರ ನಿಲುವನ್ನು ಪ್ರಶಂಸೆಮಾಡುತ್ತಿದ್ದ ಬ್ರಾಹ್ಮಣರ ಶಬ್ದವೂ ಸ್ಪಷ್ಟವಾಗಿ ಕೇಳಿಸುತ್ತಿದ್ದಿತು. ಪಾಂಡವರ ಆ ಮಾತನ್ನು ಪ್ರಶಂಸೆಮಾಡುತ್ತಾ ಮುನಿಶ್ರೇಷ್ಠರಾದ ಕೃಷ್ಣದ್ವೈಪಾಯನರು ಬ್ರಾಹ್ಮಣರ ಮಧ್ಯದಲ್ಲಿ ಯುಧಿಷ್ಠಿರನಿಗೆ ಪುನಃ ಹೇಳಿದರು:

ದತ್ತೈಷಾ ಭವತಾ ಮಹ್ಯಂ ತಾಂ ತೇ ಪ್ರತಿದದಾಮ್ಯಹಮ್ ।
ಹಿರಣ್ಯಂ ದೀಯತಾಮೇಭ್ಯೋ ಬ್ರಾಹ್ಮಣೇಭ್ಯೋ ಧರಾಸ್ತು ತೇ ॥೧೭॥

“ಯುಧಿಷ್ಠಿರ! ನೀನು ಈ ಪೃಥ್ವಿಯನ್ನು ನನಗೆ ದಾನಮಾಡಿರುವೆ. ಪುನಃ ನಾನು ಇದನ್ನು ನಿನಗೆ ವಹಿಸಿಕೊಡುತ್ತೇನೆ. ಭೂಮಿಯ ಪ್ರತ್ಯಾಮ್ನಾಯವಾಗಿ ನೀನು ಸುವರ್ಣವನ್ನು ಈ ಬ್ರಾಹ್ಮಣರಿಗೆ ಕೊಡು. ಭೂಮಿಯು ನಿನ್ನ ಅಧಿಕಾರದಲ್ಲಿಯೇ ಇರಲಿ.”

---

*ಚಾತುರ್ಹೋತ್ರ: ಅಧ್ವರ್ಯು, ಉದ್ಗಾತೃ, ಹೋತೃ ಮತ್ತು ಬ್ರಹ್ಮರೂಪವಾದ ನಾಲ್ವರಿಂದ ನಡೆಸಲ್ಪಡುವ ಯಾಗ. ಒಂದೊಂದು ಗುಂಪಿನಲ್ಲಿ ನಾಲ್ಕು ನಾಲ್ಕು ಜನ ಋತ್ವಿಜರು. ಒಟ್ಟು ಹದಿನಾರು ಮಂದಿ. ಅವರಲ್ಲಿ ಪ್ರಧಾನರು ಬ್ರಹ್ಮಾ, ಅಧ್ವರ್ಯು, ಹೋತೃ ಮತ್ತು ಉದ್ಗಾತೃ-ಇವರಲ್ಲಿ ದಕ್ಷಿಣೆಯ ವಿಭಾಗಕ್ರಮವನ್ನು ವೇದದಲ್ಲಿಯೇ ಹೇಳಿದೆ.

ವ್ಯಾಸರು ಹೀಗೆ ಹೇಳಿದನಂತರ ವಾಸುದೇವನು ಯುಧಿಷ್ಠಿರನಿಗೆ ಹೇಳಿದನು:

ಯಥಾಹ ಭಗವಾನ್ವ್ಯಾಸಃ ತಥಾ ತ್ವಂ ಕರ್ತುಮರ್ಹಸಿ ॥೧೯॥

"ಯುಧಿಷ್ಠಿರ! ಪೂಜ್ಯರಾದ ವ್ಯಾಸರು ಹೇಗೆ ಹೇಳುವರೋ– ಅದರಂತೆ ನಡೆದುಕೊಳ್ಳುವುದೇ ನಿನಗೆ ಯೋಗ್ಯವಾಗಿದೆ."

ಜನಮೇಜಯ! ವಾಸುದೇವನು ಹೀಗೆ ಹೇಳಲು ಸುಪ್ರೀತನಾದ ಯುಧಿಷ್ಠಿರನು ಸಹೋದರರೊಡನೆ ಕೋಟಿ-ಕೋಟ್ಯಾತ್ಮಕವಾದ ಮೂರು ಪಟ್ಟು ಹೆಚ್ಚಾದ ಯಜ್ಞದಕ್ಷಿಣೆಯನ್ನು ವಿಪ್ರರಿಗೆ ಕೊಟ್ಟನು.

ನ ಕರಿಷ್ಯತಿ ತಲ್ಲೋಕೇ ಕಶ್ಚಿದನ್ಯೋ ನರಾಧಿಪಃ ।
ಯತ್ಕೃತಂ ಕುರುರಾಜೇನ ಮರುತ್ತಸ್ಯಾನುಕುರ್ವತಾ ॥೨೦॥

ದಕ್ಷಿಣೆಯನ್ನು ಕೊಡುವುದರಲ್ಲಿ ಮರುತ್ತರಾಜನ ಮಾರ್ಗವನ್ನೇ ಅನುಸರಿಸಿದ ಯುಧಿಷ್ಠಿರನು ಮಾಡಿದಂತೆ ಅಶ್ವಮೇಧಯಾಗವನ್ನು ಲೋಕದಲ್ಲಿ ಬೇರೆ ಯಾವ ರಾಜನೂ ಮಾಡಲಾರನು.

ವಿದ್ವಾಂಸರಾದ ಕೃಷ್ಣದ್ವೈಪಾಯನಮುನಿಗಳು ರಾಶಿ-ರಾಶಿಯಾಗಿದ್ದ ಆ ಸುವರ್ಣವನ್ನು ಪ್ರತಿಗ್ರಹಿಸಿ ಋತ್ವಿಜರಿಗೆ ಕೊಟ್ಟುಬಿಟ್ಟರು. ಅದನ್ನವರು ನಾಲ್ಕು ಭಾಗಗಳನ್ನಾಗಿ ವಿಂಗಡಿಸಿ ಹಂಚಿಕೊಂಡರು. ಯುಧಿಷ್ಠಿರನು ಭೂಮಿಯ ಮೌಲ್ಯವನ್ನು ಸುವರ್ಣದ ರೂಪದಲ್ಲಿ ಕೊಟ್ಟು ಪಾಪಗಳೆಲ್ಲವನ್ನೂ ಕಳೆದುಕೊಂಡು ಸ್ವರ್ಗವನ್ನು ಜಯಿಸಿ ತನ್ನ ಸಹೋದರರೊಡನೆ ಆನಂದಪಟ್ಟನು.

ಋತ್ವಿಜರು ಅನಂತವಾದ ಆ ಸುವರ್ಣರಾಶಿಯನ್ನು ಪಡೆದುಕೊಂಡು ಅತ್ಯುತ್ಸಾಹದಿಂದಲೂ, ಅತ್ಯಾನಂದದಿಂದಲೂ ಬ್ರಾಹ್ಮಣರಿಗೆ ಅದನ್ನು ಹಂಚಿಕೊಟ್ಟರು. ಯಜ್ಞವಾಟದಲ್ಲಿ ಅಲಂಕಾರಾರ್ಥವಾಗಿ ಯಾವ ಸುವರ್ಣಾಭರಣಗಳಿದ್ದುವೋ, ಸುವರ್ಣಮಯವಾದ ತೋರಣಗಳಿದ್ದುವೋ, ಯೂಪಗಳಿದ್ದುವೋ, ಬಿಂದಿಗೆಗಳಿದ್ದುವೋ, ಪಾತ್ರೆಗಳಿದ್ದುವೋ, ಇಟ್ಟಿಗೆಗಳಿದ್ದುವೋ–ಅವೆಲ್ಲವನ್ನೂ ಯುಧಿಷ್ಠಿರನ ಅಣತಿಯಂತೆ ಅವರು ಪರಸ್ಪರವಾಗಿ ಹಂಚಿಕೊಂಡರು. ಅನಂತರ ಬ್ರಾಹ್ಮಣರಿಗೆ ಅಲ್ಲಿಗೆ ಆಗಮಿಸಿದ್ದ ಇತರ

ಕ್ಷತ್ರಿಯರೂ, ವೈಶ್ಯರೂ, ಶೂದ್ರರೂ ಮತ್ತು ಇತರ ಮ್ಲೇಚ್ಛಜಾತಿಗಳ ಜನರೂ ಯಥಾಶಕ್ತಿ ಐಶ್ವರ್ಯವನ್ನು ಕೊಟ್ಟರು. ಧೀಮಂತನಾದ ಧರ್ಮರಾಜನಿಂದ ಕೊಡಲ್ಪಟ್ಟ ಐಶ್ವರ್ಯದಿಂದ ಸಂತೃಪ್ತರಾದ ಎಲ್ಲ ಬ್ರಾಹ್ಮಣರೂ ಆನಂದತುಂದಿಲರಾಗಿ ತಮ್ಮ-ತಮ್ಮ ಮನೆಗಳಿಗೆ ತೆರಳಿದರು. ಮಹಾದ್ಯುತಿಗಳಾದ ವ್ಯಾಸರು ಆ ಮಹಾಸುವರ್ಣದ ರಾಶಿಯಲ್ಲಿ ತಮಗೆ ಲಭಿಸಿದ ಭಾಗವನ್ನು ಅತ್ಯಾದರದಿಂದ ಕುಂತಿಗೆ ಕೊಟ್ಟುಬಿಟ್ಟರು. ಮಾವನವರು (ವ್ಯಾಸರು) ಪ್ರೀತಿಪೂರ್ವಕವಾಗಿ ಕೊಟ್ಟ ಆ ಮಹಾಧನವನ್ನು ತೆಗೆದುಕೊಂಡು ಪ್ರಸನ್ನಚಿತ್ತಳಾದ ಕುಂತಿಯು ಆ ಮಹೈಶ್ವರ್ಯದಿಂದ ಸಾರ್ವಜನಿಕವಾದ ದೊಡ್ಡ ದೊಡ್ಡ ಪುಣ್ಯಕಾರ್ಯಗಳನ್ನು ಮಾಡಿದಳು. ಯಜ್ಞದ ಕಡೆಯಲ್ಲಿ ಅವಭೃಥಸ್ನಾನವನ್ನು ಮಾಡಿ ಪಾಪರಹಿತನಾದ ಯುಧಿಷ್ಠಿರನು ತನ್ನ ಅನುಜರೊಡನೆ ಮಹೇಂದ್ರನು ದೇವತೆಗಳೊಡನೆ ರಾರಾಜಿಸುವಂತೆ ಪ್ರಕಾಶಿಸಿದನು. ಯಜ್ಞದಲ್ಲಿ ಭಾಗವಹಿಸುವ ಸಲುವಾಗಿ ಆಗಮಿಸಿದ್ದ ಮಹೀಪಾಲರಿಂದ ಸುತ್ತುವರಿಯಲ್ಪಟ್ಟಿದ್ದ ಪಾಂಡವರು–ತಾರೆಗಳ ಸಮೂಹಗಳಿಂದ ಸಮಾವೃತವಾದ ಗ್ರಹಗಳಂತೆಯೇ-ಶೋಭಿಸುತ್ತಿದ್ದರು. ಬಳಿಕ ಧರ್ಮರಾಜನು ಯಜ್ಞಕ್ಕೆ ಆಗಮಿಸಿದ್ದ ರಾಜರೆಲ್ಲರಿಗೂ ವಿವಿಧವಾದ ರತ್ನಗಳನ್ನೂ, ಆನೆಗಳನ್ನೂ, ಕುದುರೆಗಳನ್ನೂ, ಸ್ತ್ರೀಯರನ್ನೂ, ವಸ್ತ್ರಗಳನ್ನೂ, ಚಿನ್ನವನ್ನೂ ಪಾರಿತೋಷಿಕವಾಗಿ ಕೊಟ್ಟನು. ಅಪರಿಮಿತವಾದ ರಾಜರ ಸಮೂಹಕ್ಕೆ ಐಶ್ವರ್ಯವನ್ನು ಹಂಚಿಕೊಟ್ಟು ಕುಂತಿಯ ಪುತ್ರನಾದ ಧರ್ಮಜನು ಕುಬೇರನನ್ನು ಕರೆಯಿಸಿ ವಿಪುಲವಾದ ಐಶ್ವರ್ಯವನ್ನು ಕೊಟ್ಟು ಅವನ ದೇಶಕ್ಕೆ ಕಳುಹಿಸಿಕೊಟ್ಟನು. ಧೀಮಂತನಾದ ಧರ್ಮರಾಜನು ದುಃಶಲೆಯ ಮೊಮ್ಮಗನಾದ ಇನ್ನೂ ಬಾಲಕನಾಗಿದ್ದ ರಾಜಕುಮಾರನನ್ನು ತಂಗಿಯ ಮೇಲಿನ ಪ್ರೀತಿಯಿಂದ ಅವನ ತಂದೆಯ ರಾಜ್ಯಕ್ಕೇ ರಾಜನನ್ನಾಗಿ ಮಾಡಿದನು. ಜಿತೇಂದ್ರಿಯನಾದ ಯುಧಿಷ್ಠಿರನು ಉಳಿದೆಲ್ಲ ರಾಜರಿಗೂ ಅಪಾರವಾದ ಧನವನ್ನಿತ್ತು ಯಥಾಯೋಗ್ಯವಾಗಿ ಸತ್ಕರಿಸಿ ಅವರವರ ದೇಶಗಳಿಗೆ ಕಳುಹಿಸಿಕೊಟ್ಟನು. ಮಹಾತ್ಮನಾದ ಗೋವಿಂದನನ್ನೂ, ಮಹಾಬಲನಾದ ಬಲದೇವನನ್ನೂ, ಪ್ರದ್ಯುಮ್ನನೇ ಮೊದಲಾದ ಸಾವಿರಾರು ವೃಷ್ಣಿವೀರರನ್ನೂ ಮಹಾತೇಜಸ್ವಿಯಾದ ಯುಧಿಷ್ಠಿರನು ಸಹೋದರರೊಡನೆ ಯಥಾವಿಧಿಯಾಗಿ ಪೂಜಿಸಿ ಸತ್ಕರಿಸಿ ಅವರ ದೇಶಕ್ಕೆ ಕಳುಹಿಸಿಕೊಟ್ಟನು.

ಜನಮೇಜಯ! ಈ ಪ್ರಕಾರವಾಗಿ ಯುಧಿಷ್ಠಿರನ ಅಶ್ವಮೇಧಯಾಗವು ನಡೆಯಿತು. ಆ ಯಜ್ಞದಲ್ಲಿ ಅನ್ನ-ಧನ-ರತ್ನಗಳು ರಾಶಿ-ರಾಶಿಯಾಗಿ ಬಿದ್ದಿದ್ದುವು. ಸುರೆ ಮತ್ತು ಮೈರೇಯಗಳ ಸಮುದ್ರವೇ ಅಲ್ಲಿದ್ದಿತು. ತುಪ್ಪವನ್ನೇ ಕೆಸರಿನ ರೂಪದಲ್ಲಿ ಹೊಂದಿದ್ದ ಅನೇಕ ಸರೋವರಗಳಿದ್ದುವು. ಅನ್ನದ ಪರ್ವತಗಳೇ ಇದ್ದುವು. ರಸದಿಂದ ಪೂರ್ಣವಾದ ಕೆಸರಿಲ್ಲದ ನದಿಗಳು ಹರಿಯುತ್ತಿದ್ದುವು. ಭಕ್ಷ್ಯ-ಭೋಜ್ಯಾದಿ ಖಾದ್ಯಪದಾರ್ಥಗಳನ್ನೂ ಖಾಂಡವರಾಗವನ್ನೂ (ಭಕ್ಷ್ಯವಿಶೇಷ) ಮಾಡುತ್ತಿದ್ದವರ ಮತ್ತು ತಿನ್ನುತ್ತಿದ್ದವರ, ವಧಿಸಲ್ಪಡುತ್ತಿದ್ದ ಪಶುಗಳ ಕೊನೆಯೆಂಬುದನ್ನೇ ಜನಗಳು ಕಾಣದಾದರು. ಅನವರತವಾಗಿ ಮಾಡುವುದು, ತಿನ್ನುವುದು ಆ ಯಜ್ಞಸಮಾರಂಭದಲ್ಲಿ ಸಾಗುತ್ತಲೇ ಇದ್ದಿತು. ಆ ಯಜ್ಞಮಂಟಪವು–ತಿಂದು, ಕುಡಿದು ಅಮಲೇರಿದ್ದ ಮತ್ತು ಆನಂದತುಂದಿಲರಾಗಿದ್ದ ಪುರುಷರ ಸಮೂಹದಿಂದಲೂ ಯುವತೀಜನರಿಂದಲೂ ಕೂಡಿದ್ದಿತು. ಮೃದಂಗ-ಶಂಖಗಳ ನಿನಾದದಿಂದ ಮತ್ತೂ ಮನೋಹರವಾಗಿ ಕಾಣುತ್ತಿದ್ದಿತು. "ಯಾರಿಗೆ ಯಾವ ವಸ್ತುವು ಬೇಕಾಗಿರುವುದೋ–ಅವರಿಗೆ ಆ ವಸ್ತುವನ್ನು ಕೊಡಿರಿ. ಎಲ್ಲರೂ ಇಚ್ಛಾನುಸಾರವಾಗಿ ಭೋಜನಮಾಡಿರಿ!"–ಎಂಬ ಘೋಷಣೆಯು ಹಗಲು-ರಾತ್ರಿಗಳಲ್ಲಿ ಆಗುತ್ತಲೇ ಇದ್ದಿತು. ಅದಕ್ಕೆ ತಡೆಯೆಂಬುದೇ ಇರಲಿಲ್ಲ. ಹೃಷ್ಟ-ಪುಷ್ಟರಾದ ಜನರಿಂದ ನಿಬಿಡವಾಗಿದ್ದ ಮತ್ತು ಮಹೋತ್ಸವಸದೃಶವಾದ ಧರ್ಮರಾಜನ ಆ ಮಹಾಯಜ್ಞವನ್ನು ಕುರಿತು ನಾನಾದೇಶಗಳ ನಿವಾಸಿಗಳಾದ ಪ್ರಜೆಗಳು ಬಹಳ ದಿವಸಗಳವರೆಗೂ ಪರಸ್ಪರವಾಗಿ ಹೇಳಿಕೊಳ್ಳುತ್ತಲೇ ಇದ್ದರು. ಭರತಶ್ರೇಷ್ಠನಾದ ಯುಧಿಷ್ಠಿರನು ಆ ಮಹಾಯಜ್ಞದಲ್ಲಿ ಧನದ, ಕಾಮನಾವಸ್ತುಗಳ, ರತ್ನಗಳ ಮತ್ತು ರಸಗಳ ಮಹಾವರ್ಷವನ್ನೇ ಸುರಿಸಿ ಪಾಪರಹಿತನಾಗಿ ಕೃತಕೃತ್ಯನಾಗಿ ಹಸ್ತಿನಾಪುರವನ್ನು ಪ್ರವೇಶಿಸಿದನು."

೮೯ನೆಯ ಅಧ್ಯಾಯವು ಮುಗಿಯಿತು.

ಮುಂಗುಸಿಯ ಕಥೆ

ಜನಮೇಜಯನು ಪ್ರಶ್ನಿಸುತ್ತಾನೆ:

ಪಿತಾಮಹಸ್ಯ ಮೇ ಯಜ್ಞೇ ಧರ್ಮರಾಜಸ್ಯ ಧೀಮತಃ ।
ಯದಾಶ್ಚರ್ಯಮಭೂತ್ಕಿಂಚಿತ್ತದ್ಭವಾನ್ವಕ್ತುಮರ್ಹತಿ ॥೧॥

"ವೈಶಂಪಾಯನರೇ! ನನ್ನ ಪಿತಾಮಹನಾದ, ಧೀಮಂತನಾದ ಧರ್ಮರಾಜನ ಯಜ್ಞಸಮಯದಲ್ಲಿ ಯಾವುದಾದರೂ ಆಶ್ಚರ್ಯಕರವಾದ ಘಟನೆಯು ನಡೆಯಿತೇ? ಹಾಗೇನಾದರೂ ನಡೆದಿದ್ದರೆ ಅದನ್ನು ಹೇಳುವ ಕೃಪೆಮಾಡಿರಿ."

ವೈಶಂಪಾಯನರು ಹೇಳುತ್ತಾರೆ:

"ರಾಜಸಿಂಹನೇ! ಅಶ್ವಮೇಧಮಹಾಯಜ್ಞವು ಮುಗಿದನಂತರ ಮಹಾಶ್ಚರ್ಯಕರವಾದ ಘಟನೆಯೊಂದು ನಡೆಯಿತು. ಅದು ಯಾವುದೆಂಬುದನ್ನು ಹೇಳುವೆನು, ಕೇಳು. ಭರತಶ್ರೇಷ್ಠನೇ! ಯುಧಿಷ್ಠಿರನ ಆ ಮಹಾಯಜ್ಞದಲ್ಲಿ ಬ್ರಾಹ್ಮಣಶ್ರೇಷ್ಠರೂ, ಜ್ಞಾತಿಗಳೂ, ಸಂಬಂಧಿಗಳೂ, ಬಂಧುಗಳೂ, ದೀನರೂ, ಅಂಧರೂ, ಕೃಪಣರೂ ತೃಪ್ತರಾದನಂತರ ಅವನು ಮಾಡಿದ ಮಹಾದಾನವು ಎಲ್ಲ ದಿಕ್ಕುಗಳಲ್ಲಿಯೂ ಘೋಷಿಸಲ್ಪಡುತ್ತಿದ್ದಿತು. ಧರ್ಮರಾಜನ ತಲೆಯ ಮೇಲೆ ಪುಷ್ಪವೃಷ್ಟಿಯು ಸುರಿಯಿತು. ಆ ಸಮಯದಲ್ಲಿ ನೀಲಾಕ್ಷ-ಎಂಬ ಹೆಸರಿನ ಮುಂಗುಸಿಯು ಅಲ್ಲಿಗೆ ಬಂದಿತು. ಅದರ ಒಂದು ಪಾರ್ಶ್ವವು ಸುವರ್ಣಮಯವಾಗಿದ್ದಿತು. ಬಂದೊಡನೆಯೇ ಅದು ಸಿಡಿಲಿನಂತೆ ಭಯಂಕರವಾಗಿ ಗರ್ಜಿಸಿತು. ಬಿಲದಲ್ಲಿ ವಾಸಮಾಡುವ, ಧೈರ್ಯಶಾಲಿಯಾಗಿದ್ದ ದೊಡ್ಡದಾಗಿದ್ದ ಆ ಮುಂಗುಸಿಯು ಒಮ್ಮೆ ಘೋರವಾದ ಗರ್ಜನೆಯನ್ನು ಮಾಡಿ ಮೃಗ-ಪಕ್ಷಿಗಳನ್ನು ಭಯಗೊಳಿಸುತ್ತಾ ಮನುಷ್ಯರಂತೆಯೇ ಮಾತನಾಡುತ್ತಾ ಹೀಗೆ ಹೇಳಿತು:

ಸಕ್ತುಪ್ರಸ್ಥೇನ ವೋ ನಾಯಂ ಯಜ್ಞಸ್ತುಲ್ಯೋ ನರಾಧಿಪಾಃ ।
ಉಞ್ಛವೃತ್ತೇರ್ವದಾನ್ಯಸ್ಯ ಕುರುಕ್ಷೇತ್ರನಿವಾಸಿನಃ ॥೨॥

"ನರಾಧಿಪರೇ! ನಿಮ್ಮ ಈ ಯಜ್ಞದಲ್ಲಿ ಮಾಡಿದ ದಾನವು ಕುರುಕ್ಷೇತ್ರದಲ್ಲಿ ವಾಸಮಾಡುತ್ತಿರುವ ಉಂಛವೃತ್ತಿಯಿಂದ ಜೀವಿಸುತ್ತಿರುವ ಉದಾರಿಯಾದೊಬ್ಬ ಬ್ರಾಹ್ಮಣನು ಒಂದು ಸೇರು ಹಿಟ್ಟನ್ನು ದಾನಮಾಡಿದುದಕ್ಕೂ ಸಮಾನವಲ್ಲ."



ಜನಮೇಜಯ! ಮುಂಗುಸಿಯ ಆ ಮಾತನ್ನು ಕೇಳಿ ಬ್ರಾಹ್ಮಣರೆಲ್ಲರೂ ವಿಸ್ಮಿತರಾದರು. ಅವರೆಲ್ಲರೂ ಒಟ್ಟಾಗಿ ಸೇರಿ ನಕುಲನನ್ನು ಪ್ರಶ್ನಿಸಿದರು. "ಮುಂಗುಸಿಯೇ! ಯುಧಿಷ್ಠಿರನು ಮಾಡಿದ ಈ ಯಜ್ಞಕ್ಕೆ ಅನೇಕಸತ್ಪುರುಷರು ಆಗಮಿಸಿದ್ದಾರೆ. ಈಗ ನೀನು ಎಲ್ಲಿಂದ ಬಂದೆ?

ನಿನ್ನಲ್ಲಿರುವ ಶ್ರೇಷ್ಠವಾದ ಬಲವು ಯಾವುದು? ನಿನಗೆ ಶಾಸ್ತ್ರಜ್ಞಾನವೇನಿದೆ? ನೀನು ಯಾರನ್ನಾಶ್ರಯಿಸಿ ಜೀವಿಸುತ್ತಿರುವೆ? ನಮ್ಮ ಯಜ್ಞವನ್ನು ಹೀಗೆ ನಿಂದಿಸುತ್ತಿರುವ ನಿನ್ನನ್ನು ಯಾರೆಂದು ತಿಳಿಯೋಣ? ನಾವಾದರೋ ನಾನಾವಿಧವಾದ ಯಜ್ಞಸಾಮಗ್ರಿಗಳನ್ನು ಏಕತ್ರ ಸಂಗ್ರಹಿಸಿ ಶಾಸ್ತ್ರವಿಧಿಗೆ ಯಾವ ಲೋಪವೂ ಉಂಟಾಗದಂತೆ ಸಮಗ್ರವಾಗಿ ಈ ಯಜ್ಞವನ್ನು ಮಾಡಿರುತ್ತೇವೆ. ಶಾಸ್ತ್ರದಲ್ಲಿ ಹೇಳಿರುವಂತೆ ನ್ಯಾಯೋಚಿತವಾದ ರೀತಿಯಲ್ಲಿ ಮಾಡಬೇಕಾದ ಕಾರ್ಯವನ್ನು ನಿರ್ವಹಿಸಿದ್ದೇವೆ.

ಪೂಜಾರ್ಹಾಃ ಪೂಜಿತಾಶ್ಚಾತ್ರ ವಿಧಿವಚ್ಛಾಸ್ತ್ರದರ್ಶನಾತ್ ।
ಮನ್ತ್ರಾಹುತಿಹುತಶ್ಚಾಗ್ನಿರ್ದತ್ತಂ ದೇಯಮಮತ್ಸರಮ್ ॥೧೨॥

ಶಾಸ್ತ್ರದಲ್ಲಿ ಹೇಳಿರುವಂತೆ ಪೂಜೆಗೆ ಯೋಗ್ಯರಾದವರನ್ನು ವಿಧಿವತ್ತಾಗಿ ಸತ್ಕರಿಸಲಾಯಿತು. ಅಗ್ನಿಯು ಮಂತ್ರಪೂರ್ವಕವಾಗಿ ಆಹುತಿಗಳಿಂದ ತಣಿಸಲ್ಪಟ್ಟನು. ಕೊಡಬೇಕಾದ ವಸ್ತುವನ್ನು ಯಾವ ವಿಧವಾದ ಮಾತ್ಸರ್ಯವೂ ಇಲ್ಲದೇ ದಾನಮಾಡಲಾಯಿತು.

ತುಷ್ಟಾ ದ್ವಿಜಾತಯಶ್ಚಾತ್ರ ದಾನೈರ್ಬಹುವಿಧೈರಪಿ ।
ಕ್ಷತ್ರಿಯಾಶ್ಚ ಸುಯುದ್ಧೇನ ಶ್ರಾದ್ಧೈಶ್ಚಾಪಿ ಪಿತಾಮಹಾಃ ॥೧೩॥
ಪಾಲನೇನ ವಿಶಸ್ತುಷ್ಟಾಃ ಕಾಮೈಸ್ತುಷ್ಟಾ ವರಸ್ತ್ರಿಯಃ।
ಅನುಕ್ರೋಶೈಸ್ತಥಾ ಶೂದ್ರಾ ದಾನಶೇಷೈಃ ಪೃಥಗ್ಜನಾಃ ॥೧೪॥

ಬಹುವಿಧವಾದ ದಾನಗಳಿಂದ ಬ್ರಾಹ್ಮಣರು ತೃಪ್ತರಾಗಿದ್ದಾರೆ. ಅಶ್ವಮೇಧಯಾಗಕ್ಕೆ ಮೊದಲು ಮಾಡಿದ ಧರ್ಮಯುದ್ಧದಿಂದ ಕ್ಷತ್ರಿಯರು ತೃಪ್ತರಾಗಿದ್ದಾರೆ. ನಾಂದೀಶ್ರಾದ್ಧದ ಮೂಲಕವಾಗಿ ಪಿತಾಮಹ-ಪ್ರಪಿತಾಮಹರು ತೃಪ್ತರಾಗಿದ್ದಾರೆ. ಪಾಲನೆಯಿಂದ ವೈಶ್ಯರು ತೃಪ್ತರಾಗಿದ್ದಾರೆ. ದಯಾಪೂರ್ಣವಾಗಿ ನೋಡಿಕೊಳ್ಳುವಿಕೆಯಿಂದ ಶೂದ್ರರು ತೃಪ್ತರಾಗಿದ್ದಾರೆ. ದಾನ ಕೊಟ್ಟು ಮಿಕ್ಕ ವಸ್ತುಗಳ ಪ್ರದಾನದಿಂದ ಬೇರೆ-ಬೇರೆ ಜಾತಿಯ ಜನರು ತೃಪ್ತರಾಗಿದ್ದಾರೆ.

ಜ್ಞಾತಿಸಮ್ಬನ್ಧಿನಸ್ತುಷ್ಟಾಃ ಶೌಚೇನ ಚ ನೃಪಸ್ಯ ನಃ।
ದೇವಾ ಹವಿರ್ಭಿಃ ಪುಣ್ಯೈಶ್ಚ ರಕ್ಷಣೈಃ ಶರಣಾಗತಾಃ ॥೧೫॥

ಜ್ಞಾತಿಗಳು ಮತ್ತು ಸಂಬಂಧಿಗಳು ನಮ್ಮ ರಾಜನ ಶುದ್ಧವ್ಯವಹಾರದಿಂದ ತೃಪ್ತರಾಗಿದ್ದಾರೆ. ದೇವತೆಗಳು ಪವಿತ್ರವಾದ ಹವಿಸ್ಸಿನಿಂದ ತೃಪ್ತರಾಗಿದ್ದಾರೆ. ಶರಣಾಗತರಾಗಿ ಬಂದವರು ರಕ್ಷಣೆಯಿಂದ ತೃಪ್ತರಾಗಿದ್ದಾರೆ.

ಹೀಗೆ ಈ ಯಜ್ಞದಿಂದ ಎಲ್ಲರಿಗೂ ಸಂತೃಪ್ತಿಯಾಗಿರುವಾಗ ನೀನು ಯಜ್ಞದಲ್ಲಿ ಯಾವ ನ್ಯೂನತೆಯನ್ನು ಕೇಳಿ ಅಥವಾ ಕಂಡು ಈ ಮಹಾಯಜ್ಞವನ್ನು ಧಿಕ್ಕರಿಸುತ್ತಿರುವೆ? ಸತ್ಯಸಂಧನೇ! ಬ್ರಾಹ್ಮಣರ ಅಪೇಕ್ಷೆಯಂತೆ ಪ್ರಶ್ನಿಸಲ್ಪಟ್ಟಿರುವ ನೀನು ಸತ್ಯವು ಯಾವುದೆಂಬುದನ್ನು ಹೇಳು. ನಿನ್ನ ಮಾತು ವಿಶ್ವಾಸಾರ್ಹವಾಗಿದೆ. ನೀನು ಪ್ರಾಜ್ಞನಾಗಿರುವೆ. ದಿವ್ಯವಾದ ರೂಪವನ್ನು ಹೊಂದಿರುವೆ. ಬ್ರಾಹ್ಮಣರೊಡನೆ ನಿನ್ನ ಸಮಾಗಮವಾಗಿದೆ. ಆದುದರಿಂದ ನೀನು ನಮ್ಮ ಪ್ರಶ್ನೆಗಳಿಗೆ ಅವಶ್ಯವಾಗಿ ಉತ್ತರವನ್ನು ಕೊಡಬೇಕು."

ಬ್ರಾಹ್ಮಣರು ಹೀಗೆ ಪ್ರಶ್ನಿಸಲು ಮುಂಗುಸಿಯು ನಗುತ್ತಾ ಹೇಳಿತು:

"ಬ್ರಾಹ್ಮಣರೇ! ನಾನು ಹೇಳಿರುವ ಮಾತು ಸುಳ್ಳಲ್ಲ. ಅಥವಾ ದರ್ಪದಿಂದಲೂ ಈ ಮಾತನ್ನು ಹೇಳಲಿಲ್ಲ. ನಾನು ಹೇಳಿದ ಮಾತನ್ನು (ಉಂಛವೃತ್ತಿಯ ಬ್ರಾಹ್ಮಣನು ಮಾಡಿದ ಸೇರು ಹಿಟ್ಟಿನ ದಾನಕ್ಕೆ ಈ ಯಜ್ಞದಲ್ಲಿ ಮಾಡಿದ ದಾನವು ಸಾಟಿಯಿಲ್ಲವೆಂಬ ಮಾತನ್ನು) ನೀವೂ ಕೇಳಿರುವಿರಿ.

ದ್ವಿಜಸತ್ತಮರೇ! ಆದರೂ ನಾನು ಈ ವಿಷಯವನ್ನು ನಿಮ್ಮೊಡನೆ ಅವಶ್ಯವಾಗಿ ಹೇಳಲೇಬೇಕಾಗಿದೆ. ಯಥಾವತ್ತಾಗಿ ಈ ವಿಷಯವನ್ನು ಹೇಳುವೆನು, ಏಕಾಗ್ರಚಿತ್ತರಾಗಿ ಕೇಳಿರಿ. ಕುರುಕ್ಷೇತ್ರದಲ್ಲಿ ವಾಸಿಸುತ್ತಿದ್ದ ಉಂಛವೃತ್ತಿಯಿಂದ ಜೀವಿಸುತ್ತಿದ್ದ ಉದಾರಿಯಾದ ಬ್ರಾಹ್ಮಣನ ಅದ್ಭುತವೂ ಉತ್ತಮವೂ ಆದ ದಾನಕರ್ಮವನ್ನು ನಾನು ನೋಡಿದೆನು ಹಾಗೂ ಅದರ ಫಲವನ್ನೂ ಅನುಭವಿಸಿದೆನು. ಒಂದು ಸೇರು ಹಿಟ್ಟಿನ ದಾನದ ಪ್ರಭಾವದಿಂದ ಹೆಂಡತಿ-ಮಗ-ಸೊಸೆಯರಿಂದ ಕೂಡಿದ ದ್ವಿಜಶ್ರೇಷ್ಠನು ಸ್ವರ್ಗವನ್ನು ಹೊಂದಿದನು. ನನ್ನ ಈ ಶರೀರದ ಅರ್ಧಭಾಗವು ಸುವರ್ಣಮಯ ವಾಯಿತು. ಅತ್ಯಲ್ಪವೇ ಆಗಿದ್ದರೂ ನ್ಯಾಯವಾದ ರೀತಿಯಲ್ಲಿ ಸಂಪಾದಿಸಿದ ಬ್ರಾಹ್ಮಣನು ಕೊಟ್ಟದಾನದ ಮಹತ್ತಾದ ಫಲವೇನೆಂಬುದನ್ನು ಹೇಳುವೆನು; ಕೇಳಿರಿ.

ಬಹಳಮಂದಿ ಧರ್ಮಜ್ಞಪುರುಷರಿಂದ ತುಂಬಿರುವ ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಉಂಛವೃತ್ತಿಯಿಂದ[1] ಜೀವನವನ್ನು ನಿರ್ವಹಿಸುತ್ತಿದ್ದ ಬ್ರಾಹ್ಮಣನು [2]ಕಾಪೋತಿಯಾಗಿದ್ದನು. ತನ್ನ ಹೆಂಡತಿ, ಮಗ ಮತ್ತು ಸೊಸೆಯರೊಡನೆ ಯಾವಾಗಲೂ ತಪಸ್ಸಿನಲ್ಲಿಯೇ ನಿರತನಾಗಿದ್ದ ಅವನು ಶುದ್ಧವಾದ ಆಚಾರ-ವಿಚಾರವುಳ್ಳವನೂ, ಧರ್ಮಾತ್ಮನೂ, ಜಿತೇಂದ್ರಿಯನೂ ಆಗಿದ್ದನು. ಪ್ರತಿ ಆರನೆಯ ಕಾಲದಲ್ಲಿ (ಮೂರು ದಿವಸಗಳಿಗೊಮ್ಮೆ) ಆ ಬ್ರಾಹ್ಮಣನು ತನ್ನ ಕುಟುಂಬದವರೊಡನೆ ಭೋಜನಮಾಡುತ್ತಿದ್ದನು. ಒಂದು ವೇಳೆ ಆ ಆರನೆಯ ಕಾಲದಲ್ಲಿಯೂ ಆಹಾರವು ಸಿಕ್ಕದಿದ್ದರೆ ಪುನಃ ಮತ್ತೊಂದು ಆರನೆಯ ಕಾಲವು ಬರುವವರೆಗೂ ಕಾಯ್ದಿದ್ದು ಊಟಮಾಡುತ್ತಿದ್ದನು. (ಮೂರನೆಯ ದಿನ ಆಹಾರವು ಸಿಕ್ಕದಿದ್ದರೆ ಪುನಃ ಆರನೆಯ ದಿನ ಊಟಮಾಡುತ್ತಿದ್ದನೇ ಹೊರತು ಮಧ್ಯದಲ್ಲಿ ಊಟಮಾಡುತ್ತಿರಲಿಲ್ಲ.) ಹೀಗೆಯೇ ಇರುತ್ತಿರಲಾಗಿ ಒಮ್ಮೆ ದಾರುಣವಾದ ದುರ್ಭಿಕ್ಷವುಂಟಾಯಿತು. ಆ ದಿನಗಳಲ್ಲಿ ಧರ್ಮಾತ್ಮನಾದ ಆ ಬ್ರಾಹ್ಮಣನ ಹತ್ತಿರ ಕಾಳುಗಳ ಸಂಗ್ರಹವೂ ಇರಲಿಲ್ಲ. ಹೊಲ-ಗದ್ದೆಗಳೆಲ್ಲವೂ ಪೂರ್ಣವಾಗಿ ಒಣಗಿಹೋಗಿದ್ದುವು. ಆದುದರಿಂದ ಆ ಬ್ರಾಹ್ಮಣನು ಅತ್ಯಂತನಿರ್ಧನನಾದನು. ಆರನೆಯ ಕಾಲವು ಬಂದುಹೋಗುತ್ತಿದ್ದಿತೇ ಹೊರತು ಬ್ರಾಹ್ಮಣಕುಟುಂಬದವರಿಗೆ ಊಟವು ಮಾತ್ರ ಇರುತ್ತಿರಲಿಲ್ಲ. ಎಲ್ಲರೂ ಹಸಿವಿನಿಂದ ಪೀಡಿತರಾದರು. ಜ್ಯೇಷ್ಠಶುಕ್ಲ ಪಕ್ಷದ ಒಂದು ದಿನ ಅವರು, ಮಧ್ಯಾಹ್ನದ ವೇಳೆಯಲ್ಲಿ ಸೂರ್ಯನು ಬಹಳವಾಗಿ ತಾಪವನ್ನುಂಟುಮಾಡುತ್ತಿದ್ದಾಗ ಕಾಳುಗಳನ್ನು ಆರಿಸಿಕೊಂಡು ಬರಲು ಹೊರಟರು. ತಪೋನಿಷ್ಠನಾಗಿದ್ದ ಆ ಬ್ರಾಹ್ಮಣನು ಹಸಿವಿನಿಂದಲೂ ಬಿಸಿಲಿನಿಂದಲೂ ಪೀಡಿತನಾಗಿದ್ದನು. ಅಂತಹ ಕಷ್ಟದೆಸೆಯಲ್ಲಿದ್ದರೂ ಅವನಿಗೆ ಕಾಳುಗಳು ಸಿಕ್ಕಲೇ ಇಲ್ಲ. ಹಸಿವಿನಿಂದ ಪೀಡಿತನಾಗಿಯೇ ಅವನು ತನ್ನ ಪರಿವಾರದವರೊಡನೆ ಕಾಲವನ್ನು ಕಳೆಯುತ್ತಿದ್ದನು.

---

[1]ಉಞ್ಛವೃತ್ತಿ: ಗದ್ದೆ-ಹೊಲಗಳನ್ನು ಕುಯ್ದನಂತರ ಕೆಳಗೆ ಉದುರಿರುವ ಕಾಳುಗಳನ್ನು ಆರಿಸಿಕೊಂಡು ಅದರಿಂದ ಜೀವಿಸುವಿಕೆ.

[2]**ಕಾಪೋತಿ:** ಕಪೋತದ ವೃತ್ತಿ : ಉಂಛವೃತ್ತಿ. ಕಪೋತಗಳು ಹೊಲಗದ್ದೆಗಳಲ್ಲಿ ಬಿದ್ದಿರುವ ಕಾಳುಗಳನ್ನು ಹೆಕ್ಕಿ ತಿನ್ನುವುವು ಮತ್ತು ಕೂಡಿಸಿ ಇಟ್ಟುಕೊಳ್ಳುವುವು. ಅದರಂತೆ ಮನುಷ್ಯನೂ ನಡೆಸಿದರೆ ಅದು ಕಪೋತವೃತ್ತಿ ಎನಿಸುವುದು.

ಪ್ರಾಣಗಳನ್ನು ಉಳಿಸಿಕೊಳ್ಳುವುದೂ ಅವನಿಗೆ ಬಹಳ ಕಷ್ಟವೇ ಆಗಿದ್ದಿತು. ಮತ್ತೊಮ್ಮೆ ಆರನೆಯ ಕಾಲವು (ಮೂರನೆಯ ದಿನವು) ಪ್ರಾಪ್ತವಾಗಲು ಆ ಬ್ರಾಹ್ಮಣನೂ ಮತ್ತು ಅವನ ಕುಟುಂಬದವರೂ ಸೇರಿ ಒಂದು ಸೇರಿನಷ್ಟು ಯವೆಯನ್ನು ಸಂಗ್ರಹಿಸಿದರು. ತಪಸ್ವಿಗಳಾದ ಅವರು ಆ ಯವೆಯನ್ನು ಹಿಟ್ಟುಮಾಡಿದರು. ಅನಂತರ ಎಲ್ಲರೂ ಸ್ನಾನಾಹ್ನಿಕಾದಿಗಳನ್ನು ಮುಗಿಸಿ ಅಗ್ನಿಯಲ್ಲಿ ಯಥಾವಿಧಿಯಾಗಿ ಹೋಮಮಾಡಿ ಒಂದೊಂದು ಪಾವಿನಷ್ಟು ಹಿಟ್ಟನ್ನು ನಾಲ್ವರೂ ಹಂಚಿಕೊಂಡರು. ಆ ಹಿಟ್ಟನ್ನು ಭುಂಜಿಸಬೇಕೆನ್ನುವ ವೇಳೆಗೆ ಸರಿಯಾಗಿ ಬ್ರಾಹ್ಮಣನೊಬ್ಬನು ಅತಿಥಿಯಾಗಿ ಅವರ ಕುಟೀರಕ್ಕೆ ಆಗಮಿಸಿದನು. ಭೋಜನದ ವೇಳೆಗೆ ಸರಿಯಾಗಿ ಅತಿಥಿಯು ಬಂದುದಕ್ಕಾಗಿ ಅವರೆಲ್ಲರೂ ಪ್ರಹೃಷ್ಟರಾಗಿ ಬಂದ ಅತಿಥಿಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಕುಶಲವನ್ನು ಕೇಳಿದರು. ವಿಶುದ್ಧಚಿತ್ತರಾದ, ಜಿತೇಂದ್ರಿಯರಾದ, ಶ್ರದ್ಧಾಳುಗಳಾದ, ಮನಸ್ಸನ್ನು ಅಧೀನದಲ್ಲಿಟ್ಟುಕೊಂಡಿದ್ದ, ದೋಷದೃಷ್ಟಿಯಿಲ್ಲದ, ಕ್ರೋಧರಹಿತರಾದ, ಸತ್ಪುರುಷರಾದ, ಮಾತ್ಸರ್ಯವಿಲ್ಲದ, ಮಾನ-ಮದ-ಕ್ರೋಧಗಳನ್ನು ಸಂಪೂರ್ಣವಾಗಿ ತ್ಯಜಿಸಿದ್ದ, ಧರ್ಮಜ್ಞರಾದ ಆ ದ್ವಿಜಶ್ರೇಷ್ಠರು ಪರಸ್ಪರವಾಗಿ ಗೋತ್ರ ಮತ್ತು ಬ್ರಹ್ಮಚರ್ಯಗಳನ್ನು (ಯಾವ ಗುರುಗಳಲ್ಲಿ ವಿದ್ಯಾಭ್ಯಾಸಮಾಡಿದವರೆಂಬುದನ್ನು) ಪರಸ್ಪರವಾಗಿ ಪರಿಚಯಿಸಿಕೊಂಡು ಹಸಿವಿನಿಂದ ಪೀಡಿತನಾಗಿದ್ದ ಅತಿಥಿಯನ್ನು ಕುಟೀರದೊಳಕ್ಕೆ ಕರೆದುಕೊಂಡು ಹೋದರು. ಬಳಿಕ ಅತಿಥಿಗೆ ಅರ್ಘ್ಯ-ಪಾದ್ಯಾದಿಗಳನ್ನು ನೀಡುತ್ತಾ ಹೇಳಿದರು:

"ಬ್ರಾಹ್ಮಣೋತ್ತಮನೇ! ಇದು ಅರ್ಘ್ಯ. ಇದನ್ನು ಸ್ವೀಕರಿಸು. ಇದು ಪಾದ್ಯ. ಇದನ್ನು ಸ್ವೀಕರಿಸು. ಇದು ನಿನ್ನ ದರ್ಭಾಸನ. ಇದರ ಮೇಲೆ ಕುಳಿತುಕೋ"-ಎಂದು ಹೇಳಿ ಅವನನ್ನು ಕುಳ್ಳಿರಿಸಿ ಪುನಃ ಹೇಳಿದರು: "ಇದೋ ಇವು ಶುದ್ಧವಾದ ಹಿಟ್ಟಿನುಂಡೆಗಳು. ನಿಯಮಪೂರ್ವಕವಾಗಿ ಸಂಪಾದಿಸಿದುವುಗಳು. ದ್ವಿಜಶ್ರೇಷ್ಠನೇ! ನಿನಗೆ ಮಂಗಳವಾಗಲಿ. ನಾನು ಕೊಡುವ ಈ ಹಿಟ್ಟಿನುಂಡೆಗಳನ್ನು ಪ್ರತಿಗ್ರಹಿಸು."

ಬ್ರಾಹ್ಮಣನು ಹೀಗೆ ಪ್ರಾರ್ಥಿಸಲು ಅತಿಥಿಯು ಬ್ರಾಹ್ಮಣನ ಪಾಲಿಗೆ ಬಂದಿದ್ದ ಒಂದು ಪಾವಿನಷ್ಟು ಹಿಟ್ಟಿನ ಉಂಡೆಯನ್ನು ಭಕ್ಷಿಸಿದನು. ಆದರೆ ಅಷ್ಟರಿಂದ ಅವನು ತೃಪ್ತನಾಗಲಿಲ್ಲ. ಉಂಛಬ್ರಾಹ್ಮಣನು ಅತಿಥಿಯಿನ್ನೂ

ಕ್ಷುಧಾರ್ತನಾಗಿಯೇ ಇರುವುದನ್ನು ಕಂಡು ಅವನನ್ನು ತೃಪ್ತಿಗೊಳಿಸಲು ಆಹಾರವನ್ನು ಎಲ್ಲಿಂದ ತರುವುದು?-ಎಂಬುದಾಗಿ ಯೋಚಿಸತೊಡಗಿದನು.

ಆ ಸಮಯದಲ್ಲಿ ಅವನ ಭಾರ್ಯೆಯು ಪತಿಗೆ–"ಪತಿದೇವ! ನನ್ನ ಭಾಗದ ಹಿಟ್ಟನ್ನು ಕೊಡು. ಇದನ್ನು ಭುಂಜಿಸಿದನಂತರವಾದರೂ ಈ ಅತಿಥಿಯು ಪರಿತುಷ್ಟನಾಗಿ ಪ್ರಯಾಣಮಾಡಲಿ"–ಎಂದು ಹೇಳಿದಳು.

ಪತಿವ್ರತೆಯಾದ ಭಾರ್ಯೆಯು ಹೀಗೆ ಹೇಳಲು ಉಂಛಬ್ರಾಹ್ಮಣನು ತನ್ನ ಪತ್ನಿಯೂ ಹಸಿವಿನಿಂದ ಬಳಲುತ್ತಿರುವಳೆಂಬುದನ್ನು ತಿಳಿದು ಅವಳಿಂದ ಅವಳ ಭಾಗದ ಹಿಟ್ಟನ್ನು ತೆಗೆದುಕೊಳ್ಳಲು ಇಷ್ಟಪಡಲಿಲ್ಲ. ವಿದ್ವಾಂಸನಾದ ವಿಪ್ರಶ್ರೇಷ್ಠನು ತನ್ನಲ್ಲಿಯೇ ತರ್ಕಿಸಿ ತಪಸ್ವಿಯಾದ ತನ್ನ ಪತ್ನಿಯು ವೃದ್ಧೆಯೂ, ಹಸಿವಿನಿಂದ ಪೀಡಿತಳೂ, ಬಳಲಿರುವವಳೂ, ಬಾಡಿದ ಮುಖವುಳ್ಳವಳೂ, ಚರ್ಮ-ಮೂಳೆಗಳನ್ನು ಮಾತ್ರವೇ ಹೊಂದಿರುವವಳೂ, ನಡುಗುತ್ತಿರುವವಳೂ ಆಗಿರುವಳೆಂಬುದನ್ನು ತಿಳಿದು ಹೇಳಿದನು:

ಅಪಿ ಕೀಟಪತಙ್ಗಾನಾಂ ಮೃಗಾಣಾಂ ಚೈವ ಶೋಭನೇ ।
ಸ್ತ್ರಿಯೋ ರಕ್ಷ್ಯಾಶ್ಚ ಪೋಷ್ಯಾಶ್ಚ ನ ತ್ವೇವಂ ವಕ್ತುಮರ್ಹಸಿ ॥೪೫॥

"ಹುಳು-ಹುಪ್ಪಟೆಗಳಿಗೂ ಮೃಗ-ಪಕ್ಷಿಗಳಿಗೂ ಸ್ತ್ರೀಯರನ್ನು (ಹೆಣ್ಣು ಹುಳುಗಳನ್ನೂ, ಹೆಣ್ಣು ಪಕ್ಷಿಗಳನ್ನೂ, ಹೆಣ್ಣು ಮೃಗಗಳನ್ನೂ) ರಕ್ಷಿಸುವುದು ಮತ್ತು ಪೋಷಿಸುವುದು ಕರ್ತವ್ಯವಾಗಿರುವಾಗ ಮನುಷ್ಯನ ವಿಷಯವಾಗಿ ಹೇಳಬೇಕಾಗಿಯೇ ಇಲ್ಲ. ಆದುದರಿಂದ 'ನನ್ನ ಭಾಗದ ಹಿಟ್ಟನ್ನು ಕೊಡುವೆನು'–ಎಂದು ನೀನು ಹೇಳುವುದು ಯುಕ್ತವಲ್ಲ.

ಅನುಕಮ್ಪ್ಯೋ ನರಃ ಪತ್ನ್ಯಾ ಪುಷ್ಟೋ ರಕ್ಷಿತ ಏವ ಚ ।
ಪ್ರಪತೇದ್ಯಶಸೋ ದೀಪ್ತಾತ್ಸ ಚ ಲೋಕಾನ್ನ ಚಾಪ್ನುಯಾತ್ ॥೪೬॥

ಯಾವನು ಹೆಂಡತಿಯ ಕೃಪೆಗೆ ಪಾತ್ರನಾಗಿ ಅವಳಿಂದಲೇ ಪೋಷಿಸಲ್ಪಡುವನೋ ಮತ್ತು ರಕ್ಷಿಸಲ್ಪಡುವನೋ ಅಂತಹವನು ಉಜ್ಜ್ವಲವಾದ ಕೀರ್ತಿಯಿಂದ ಭ್ರಷ್ಟನಾಗುತ್ತಾನೆ. ಒಳ್ಳೆಯ ಲೋಕಗಳೂ ಅವನಿಗೆ ಲಭಿಸುವುದಿಲ್ಲ.

ಧರ್ಮಕಾಮಾರ್ಥಕಾರ್ಯಾಣಿ ಶುಶ್ರೂಷಾ ಕುಲಸಂತತಿಃ ।
ದಾರೇಷ್ವಧೀನೋ ಧರ್ಮಶ್ಚ ಪಿತೄಣಾಮಾತ್ಮನಸ್ತಥಾ ॥೪೭॥



ಧರ್ಮಕಾರ್ಯಗಳಿಗೆ ಸಂಬಂಧಿಸಿದ ಕಾರ್ಯಗಳು, ಸೇವೆ, ಶುಶ್ರೂಷೆ, ವಂಶಪರಂಪರೆಯ ರಕ್ಷಣೆ-ಇವೆಲ್ಲವೂ ಸ್ತ್ರೀಗೆ ಅಧೀನವಾಗಿವೆ. ಪಿತೃಗಳ ಮತ್ತು ತನ್ನ ಧರ್ಮವೂ ಪತ್ನಿಯನ್ನೇ ಆಶ್ರಯಿಸಿದೆ.

ನ ವೇತ್ತಿ ಕರ್ಮತೋ ಭಾರ್ಯಾರಕ್ಷಣೇ ಯೋಽಕ್ಷಮಃ ಪುಮಾನ್।
ಅಯಶೋ ಮಹದಾಪ್ನೋತಿ ನರಕಂ ಚೈವ ಗಚ್ಛತಿ ॥೪೮॥

ಯಾವ ಪುರುಷನು ಭಾರ್ಯೆಯನ್ನು ರಕ್ಷಿಸುವುದು ತನ್ನ ಕರ್ತವ್ಯವೆಂದು ಭಾವಿಸುವುದಿಲ್ಲವೋ ಅಥವಾ ಭಾರ್ಯೆಯನ್ನು ರಕ್ಷಿಸುವುದರಲ್ಲಿ ಅಸಮರ್ಥನೋ-ಅವನು ಮಹತ್ತಾದ ಅಪಯಶಸ್ಸನ್ನು ಗಳಿಸುತ್ತಾನೆ. ಮರಣಾನಂತರ ನರಕಗಳಲ್ಲಿಯೂ ಬೀಳುತ್ತಾನೆ."

ಬ್ರಾಹ್ಮಣನು ಹೀಗೆ ಹೇಳಲು ಭಾರ್ಯೆಯು ಹೇಳಿದಳು:

"ದ್ವಿಜಶ್ರೇಷ್ಠನೇ! ಪ್ರಸನ್ನನಾಗು; ಧರ್ಮಾರ್ಥಗಳು ನಮ್ಮಿಬ್ಬರಿಗೂ ಸಮಾನವಲ್ಲವೇ? ಆದುದರಿಂದ ಸೇರಿನ ನಾಲ್ಕನೆಯ ಒಂದು ಭಾಗಹಿಟ್ಟನ್ನು ನನ್ನಿಂದ ಸ್ವೀಕರಿಸು. ಸಂತೃಪ್ತನಾಗದಿರುವ ಅತಿಥಿಗೆ ಕೊಡು.

ಸತ್ಯಂ ರತಿಶ್ಚ ಧರ್ಮಶ್ಚ ಸ್ವರ್ಗಶ್ಚ ಗುಣನಿರ್ಜಿತಃ ।
ಸ್ತ್ರೀಣಾಂ ಪತಿಸಮಾಧೀನಂ ಕಾಂಕ್ಷಿತಂ ಚ ದ್ವಿಜರ್ಷಭ ॥೫೦॥

ದ್ವಿಜಶ್ರೇಷ್ಠನೇ! ಸ್ತ್ರೀಯರ-ಸತ್ಯ, ರತಿ, ಧರ್ಮ, ತನ್ನ ಗುಣಗಳಿಂದ ಜಯಿಸಲ್ಪಟ್ಟ ಸ್ವರ್ಗ ಮತ್ತು ಅಭಿಲಾಷೆಗಳನ್ನು ಪೂರ್ಣಗೊಳಿಸಿಕೊಳ್ಳುವುದು–ಇವೆಲ್ಲವೂ ಪತಿಯ ಅಧೀನವಾಗಿವೆ.

ಋತುರ್ಮಾತುಃ ಪಿತುರ್ಬೀಜಂ ದೈವತಂ ಪರಮಂ ಪತಿಃ ।
ಭರ್ತುಃ ಪ್ರಸಾದಾನ್ನಾರೀಣಾಂ ರತಿಪುತ್ರಫಲಂ ತಥಾ ॥೫೧॥

ತಾಯಿಯ ರಜಸ್ಸು, ತಂದೆಯ ರೇತಸ್ಸು–ಈ ಎರಡೂ ಸೇರುವುದರಿಂದ ವಂಶದ ವೃದ್ಧಿಯಾಗುತ್ತದೆ. ಪತಿಯೇ ಸ್ತ್ರೀಗೆ ಶ್ರೇಷ್ಠನಾದ ದೇವತೆ. ಪತಿಯ ಪ್ರಸನ್ನತೆಯಿಂದಲೇ ಸ್ತ್ರೀಯರಿಗೆ ರತಿಸುಖವೂ ಮತ್ತು ಪುತ್ರರೂಪವಾದ ಫಲವೂ ಲಭಿಸುತ್ತದೆ.

ಪಾಲನಾದ್ಧಿ ಪತಿಸ್ತ್ವಂ ಮೇ ಭರ್ತಾಸಿ ಭರಣಾಚ್ಚ ಮೇ ।
ಪುತ್ರಪ್ರದಾನಾದ್ವರದಸ್ತಸ್ಮಾತ್ಸಕ್ತೋನ್ಪ್ರಯಚ್ಛ ಮೇ ॥೫೨॥

ನನ್ನನ್ನು ಪಾಲಿಸುತ್ತಿರುವುದರಿಂದ ನೀನು 'ಪತಿ'–ಎಂಬ ಹೆಸರನ್ನು ಪಡೆದಿರುವೆ. ಭರಿಸುವೆಯಾದುದರಿಂದ ಭರ್ತೃವೂ ಆಗಿರುವೆ. ಪುತ್ರಪ್ರದಾನದಿಂದ ವರದನೂ ಆಗಿರುವೆ. ಆದುದರಿಂದ ನನ್ನಲ್ಲಿರುವ ಈ ಹಿಟ್ಟನ್ನು ಅತಿಥಿಗೆ ಕೊಡು.

ಜರಾಪರಿಗತೋ ವೃದ್ಧಃ ಕ್ಷುಧಾರ್ತೋ ದುರ್ಬಲೋ ಭೃಶಮ್ ।
ಉಪವಾಸಪರಿಶ್ರಾನ್ತೋ ಯದಾ ತ್ವಮಪಿ ಕರ್ಶಿತಃ ॥೫೩॥

ನೀನು ಕೂಡ ಮುಪ್ಪಿನಿಂದ ಜೀರ್ಣನಾಗಿರುವೆ; ವೃದ್ಧನಾಗಿರುವೆ; ಹಸಿವಿನಿಂದ ಬಳಲಿರುವೆ; ಅತಿದುರ್ಬಲನಾಗಿರುವೆ. ಉಪವಾಸಮಾಡಿ ಮಾಡಿ ಶ್ರಾಂತನಾಗಿರುವೆ. ಕ್ಷೀಣಕಾಯನಾಗಿರುವೆ. ಹೀಗಿರುವಾಗ ನನ್ನದೇನು ವಿಶೇಷ?"

ಬ್ರಾಹ್ಮಣಸತ್ತಮರೇ! ಪತ್ನಿಯು ಹೀಗೆ ಹೇಳಲು ಉಂಛಬ್ರಾಹ್ಮಣನು ಅವಳಿಂದ ಹಿಟ್ಟನ್ನು ತೆಗೆದುಕೊಂಡು ಅತಿಥಿಗೆ ಹೇಳಿದನು:

"ದ್ವಿಜಶ್ರೇಷ್ಠನೇ! ಈ ಹಿಟ್ಟನ್ನೂ ನೀನು ಪುನಃ ಭೋಜನಾರ್ಥವಾಗಿ ಸ್ವೀಕರಿಸು." ಅತಿಥಿಯು ಅದನ್ನು ಪ್ರತಿಗ್ರಹಿಸಿ ಭಕ್ಷಿಸಿದನು. ಆದರೆ ಅದರಿಂದಲೂ ಅವನಿಗೆ ತೃಪ್ತಿಯಾಗಲಿಲ್ಲ. ಉಂಛಬ್ರಾಹ್ಮಣನು ಅದನ್ನು ಗಮನಿಸಿ ಪುನಃ ಚಿಂತಾಕ್ರಾಂತನಾದನು. ತಂದೆಯು ಚಿಂತಾಕ್ರಾಂತನಾದುದನ್ನು ನೋಡಿ ಮಗನು ಹೇಳಿದನು:

ಸಕ್ತೂನಿಮಾನ್ಪ್ರಗೃಹ್ಯ ತ್ವಂ ದೇಹಿ ವಿಪ್ರಾಯ ಸತ್ತಮ ।
ಇತ್ಯೇವ ಸುಕೃತಂ ಮನ್ಯೇ ತಸ್ಮಾದೇತತ್ಕರೋಮ್ಯಹಮ್ ॥೫೬॥

"ತಂದೆಯೇ! ನನ್ನಲ್ಲಿರುವ ಈ ಹಿಟ್ಟನ್ನು ತೆಗೆದುಕೊಂಡು ಅತಿಥಿಯಾದ ಬ್ರಾಹ್ಮಣನಿಗೆ ಕೊಡು. ಹೀಗೆ ಮಾಡುವುದೇ ಪುಣ್ಯಕರವೆಂದು (ಒಳ್ಳೆಯ ಕೆಲಸವೆಂದು) ನಾನು ಭಾವಿಸುತ್ತೇನೆ. ಆದುದರಿಂದಲೇ ನಾನು ಈ ಹಿಟ್ಟನ್ನು ಅತಿಥಿಯ ಸಲುವಾಗಿ ಕೊಡುತ್ತಿದ್ದೇನೆ.

ಭವಾನ್ಹಿ ಪರಿಪಾಲ್ಯೋ ಮೇ ಸರ್ವದೈವ ಪ್ರಯತ್ನತಃ।
ಸಾಧೂನಾಂ ಕಾಂಕ್ಷಿತಂ ಯಸ್ಮಾತ್ಪಿತುರ್ವೃದ್ಧಸ್ಯ ಪಾಲನಮ್ ॥೫೭॥

ನಾನು ನಿಮ್ಮನ್ನು ಪ್ರಯತ್ನಪೂರ್ವಕವಾಗಿ ಸರ್ವದಾ ಪರಿಪಾಲಿಸಬೇಕು. ವೃದ್ಧನಾದ ತಂದೆಯನ್ನು ಪಾಲಿಸಬೇಕೆಂಬುದು ಸಾಧುಜನರ ಅಪೇಕ್ಷೆಯಾಗಿದೆ.

ಪುತ್ರಾರ್ಥೋ ವಿಹಿತೋ ಹ್ಯೇಷ ವಾರ್ಧಕೇ ಪರಿಪಾಲನಮ್।
ಶ್ರುತಿರೇಷಾ ಹಿ ವಿಪ್ರರ್ಷೇ ತ್ರಿಷು ಲೋಕೇಷು ಶಾಶ್ವತೀ ॥೫೮॥

ವೃದ್ಧನಾದ ತಂದೆಯನ್ನು ಪರಿಪಾಲಿಸಬೇಕೆಂಬುದು ಪುತ್ರನಿಗೆ ವಿಹಿತ

ವಾದ ಧರ್ಮವಾಗಿದೆ. ಬ್ರಹ್ಮರ್ಷಿಯೇ! ಮೂರು ಲೋಕಗಳಲ್ಲಿಯೂ ಸನಾತನವಾದ ಈ ಶ್ರುತಿಯು ಪ್ರಸಿದ್ಧವಾಗಿದೆ.

ಪ್ರಾಣಧಾರಣಮಾತ್ರೇಣ ಶಕ್ಯಂ ಕರ್ತುಂ ತಪಸ್ತ್ವಯಾ ।
ಪ್ರಾಣೋ ಹಿ ಪರಮೋ ಧರ್ಮಃ ಸ್ಥಿತೋ ದೇಹೇಷು ದೇಹಿನಾಮ್॥

ಪ್ರಾಣಗಳ ಧಾರಣೆಯಿಂದಲೇ ತಪಸ್ಸನ್ನು ಮಾಡಲು ನಿನಗೆ ಸಾಧ್ಯವಾಗುವುದು. ದೇಹಧಾರಿಗಳಿಗೆ ಶರೀರದಲ್ಲಿರುವ ಪ್ರಾಣಗಳ ಧಾರಣೆಯೇ ಪರಮಧರ್ಮವಾಗಿದೆ. ಆದುದರಿಂದ ನನ್ನ ಪಾಲಿನ ಹಿಟ್ಟನ್ನು ತೆಗೆದುಕೊಂಡು ಅತಿಥಿಗೆ ಕೊಡು."

ಅಪಿ ವರ್ಷಸಹಸ್ರೀ ತ್ವಂ ಬಾಲ ಏವ ಮತೋ ಮಮ ।
ಉತ್ಪಾದ್ಯ ಪುತ್ರಂ ಹಿ ಪಿತಾ ಕೃತಕೃತ್ಯೋ ಭವೇತ್ಸುತಾತ್ ॥೬೦॥

"ಮಗು! ನಿನಗೆ ಸಾವಿರ ವರ್ಷಗಳಾದರೂ ನನ್ನ ದೃಷ್ಟಿಯಿಂದ ನೀನು ಬಾಲಕನೇ ಸರಿ. ಮನುಷ್ಯನು ಮಗನನ್ನು ಪಡೆದನಂತರವೇ ಮಗನಿಂದಲೇ ಕೃತಕೃತ್ಯನಾದನೆಂದು ಭಾವಿಸುತ್ತಾನೆ.

ಬಾಲಾನಾಂ ಕ್ಷುದ್ಬಲವತೀ ಜಾನಾಮ್ಯೇತದಹಂ ಪ್ರಭೋ ।
ವೃದ್ಧೋಽಹಂ ಧಾರಯಿಷ್ಯಾಮಿ ತ್ವಂ ಬಲೀ ಭವ ಪುತ್ರಕ ॥೬೧॥

ಮಗು! ಬಾಲಕರಿಗೆ ಹಸಿವು ಬಹಳವಾಗಿರುವುದೆಂಬುದನ್ನು ನಾನು ತಿಳಿದಿರುತ್ತೇನೆ. ಮುದುಕನಾದ ನಾನು ಹಸಿವನ್ನು ತಡೆದುಕೊಂಡು ಪ್ರಾಣಧಾರಣೆ ಮಾಡಬಲ್ಲೆನು. ಆದುದರಿಂದ ನಿನ್ನ ಭಾಗಕ್ಕೆ ಬಂದಿರುವ ಹಿಟ್ಟನ್ನು ತಿಂದು ನೀನು ಬಲಿಷ್ಠನಾಗು.

ಜೀರ್ಣೇನ ವಯಸಾ ಪುತ್ರ ನ ಮಾಂ ಕ್ಷುದ್ಬಾಧತೇಽಪಿ ಚ।
ದೀರ್ಘಕಾಲಂ ತಪಸ್ತಪ್ತಂ ನ ಮೇ ಮರಣತೋ ಭಯಮ್ ॥೬೨॥

ಪುತ್ರ! ನಾನು ವೃದ್ಧನಾಗಿ ಜೀರ್ಣಾವಸ್ಥೆಯಲ್ಲಿರುವುದರಿಂದ ನನ್ನನ್ನು ಹಸಿವು ಹೆಚ್ಚು ಬಾಧೆಪಡಿಸುವುದಿಲ್ಲ. ಮೇಲಾಗಿ ನಾನು ದೀರ್ಘಕಾಲ ತಪಸ್ಸಿನಲ್ಲಿಯೇ ಕಳೆದಿದ್ದೇನೆ. ಆದುದರಿಂದ ನನಗೆ ಮರಣದ ಭಯವಿಲ್ಲ."

ಮಗನು ಹೇಳುತ್ತಾನೆ:

ಅಪತ್ಯಮಸ್ಮಿ ತೇ ಪುಂಸಸ್ತ್ರಾಣಾತ್ಪುತ್ರ ಇತಿ ಸ್ಮೃತಃ।
ಆತ್ಮಾ ಪುತ್ರಃ ಸ್ಮೃತಸ್ತಸ್ಮಾತ್ತ್ರಾಹ್ಯಾತ್ಮಾನಮಿಹಾತ್ಮನಾ ॥೬೩॥

"ತಂದೆಯೇ! ನಾನು ನಿನ್ನ ಪುತ್ರನಾಗಿದ್ದೇನೆ. ಪುರುಷನನ್ನು (ತಂದೆಯನ್ನು) ರಕ್ಷಣೆಮಾಡುವ ಕಾರಣದಿಂದಲೇ ಮಗನನ್ನು ಪುತ್ರನೆಂದು ಕರೆಯುತ್ತಾರೆ. ಮಗನೇ ತಂದೆಯ ಆತ್ಮವೆಂದೂ ಹೇಳುತ್ತಾರೆ. ಆದುದರಿಂದ ಆತ್ಮಭೂತನಾದ ಮಗನ ಮೂಲಕವಾಗಿ ನಿನ್ನ ರಕ್ಷಣೆಯನ್ನು ಮಾಡಿಕೊಳ್ಳುವುದು ಯೋಗ್ಯವಾಗಿದೆ."

ತಂದೆಯು ಹೇಳುತ್ತಾನೆ:

ರೂಪೇಣ ಸದೃಶಸ್ತ್ವಂ ಮೇ ಶೀಲೇನ ಚ ದಮೇನ ಚ।
ಪರೀಕ್ಷಿತಶ್ಚ ಬಹುಧಾ ಸಕ್ತೂನಾದದ್ಮಿ ತೇ ಸುತ ॥೬೪॥

"ಮಗು! ನೀನು ರೂಪ, ಶೀಲ, ಇಂದ್ರಿಯಸಂಯಮ-ಇವೆಲ್ಲದರಲ್ಲಿಯೂ ನನಗೆ ಸಮಾನನಾಗಿರುವೆ. ಈ ಗುಣಗಳು ನಿನ್ನಲ್ಲಿವೆಯೇ?–ಎಂಬುದನ್ನು ದೃಢಪಡಿಸಿಕೊಳ್ಳಲು ನಿನ್ನನ್ನು ಹಲವಾರು ಬಾರಿ ಪರೀಕ್ಷಿಸಿಯೂ ಇದ್ದೇನೆ. ಆದುದರಿಂದ ನಿನ್ನ ಆಶಯದಂತೆ ನಿನ್ನಲ್ಲಿರುವ ಹಿಟ್ಟಿನುಂಡೆಗಳನ್ನು ಅತಿಥಿಯ ಸಲುವಾಗಿ ತೆಗೆದುಕೊಳ್ಳುತ್ತೇನೆ."

ಬ್ರಾಹ್ಮಣಶ್ರೇಷ್ಠರೇ! ತಂದೆಯು ಹೀಗೆ ಹೇಳಿ ಪ್ರೀತಾತ್ಮನಾಗಿ ಮಗನಿಂದ ಹಿಟ್ಟಿನುಂಡೆಗಳನ್ನು ತೆಗೆದುಕೊಂಡು ನಗುತ್ತಿರುವನೋ ಎಂಬ ಮುಖಭಾವದಿಂದ ಕೂಡಿದವನಾಗಿ ಅವನ್ನು ಅತಿಥಿಗೆ ಕೊಟ್ಟನು.

ಅವುಗಳನ್ನು ಭಕ್ಷಿಸಿದನಂತರವೂ ಅತಿಥಿಯು ತೃಪ್ತನಾಗಲೇ ಇಲ್ಲ. ಅದರಿಂದ ಧರ್ಮಾತ್ಮನಾದ ಉಂಛಬ್ರಾಹ್ಮಣನು ನಾಚಿಕೆಪಟ್ಟುಕೊಂಡನು. ಬ್ರಾಹ್ಮಣೋತ್ತಮರೇ! ಹಿಂದೆಯೇ ಹೇಳಿದ್ದಂತೆ ಆ ಉಂಛಬ್ರಾಹ್ಮಣನಿಗೆ ಶೀಲ-ಸದ್ಗುಣಗಳಿಂದ ಯುಕ್ತಳಾದ ಸೊಸೆಯಿದ್ದಳು. ಬ್ರಾಹ್ಮಣನಿಗೆ ಪ್ರಿಯವನ್ನುಂಟುಮಾಡಬೇಕೆಂಬ ಆಸೆಯಿಂದ ತನ್ನ ಪಾಲಿಗೆ ಬಂದಿದ್ದ ಹಿಟ್ಟಿನುಂಡೆಗಳನ್ನು ತೆಗೆದುಕೊಂಡು ಮಾವನ ಮುಂದಿಟ್ಟು ಹೇಳಿದಳು:

ಸಂತಾನಾತ್ತವ ಸಂತಾನಂ ಮಮ ವಿಪ್ರ ಭವಿಷ್ಯತಿ।
ಸಕ್ತೂನಿಮಾನತಿಥಯೇ ಗೃಹೀತ್ವಾ ಸಮ್ಪ್ರಯಚ್ಛ ಮೇ ॥೬೫॥

"ಪೂಜ್ಯರೇ! ನಿಮ್ಮ ಸಂತಾನದಿಂದ (ಮಗನಿಂದ) ನನಗೆ ಸಂತಾನವಾಗುತ್ತದೆ. ನೀವು ಪರಮಪೂಜ್ಯರಾಗಿರುವಿರಿ. ಆದುದರಿಂದ ನನ್ನ ಈ ಹಿಟ್ಟಿನುಂಡೆಗಳನ್ನು ತೆಗೆದುಕೊಂಡು ಅತಿಥಿಗೆ ಕೊಡಿರಿ.

ತವ ಪ್ರಸಾದಾನ್ನಿರ್ವೃತ್ತಾ ಮಮ ಲೋಕಾಃ ಕಿಲಾಕ್ಷಯಾಃ।
ಪುತ್ರೇಣ ತಾನವಾಪ್ನೋತಿ ಯತ್ರ ಗತ್ವಾ ನ ಶೋಚತಿ ॥೭೯॥

ನಿಮ್ಮ ಅನುಗ್ರಹದಿಂದಲೇ ನನಗೆ ಅಕ್ಷಯವಾದ ಲೋಕಗಳು ಸಿದ್ಧವಾಗಿವೆ. ಅಂತಹ ಶುಭಲೋಕಗಳನ್ನು ಜನರು ಪುತ್ರನ ಮೂಲಕ ಪಡೆದುಕೊಳ್ಳುತ್ತಾರೆ. ಆ ಪುಣ್ಯಲೋಕಗಳಿಗೆ ಹೋದನಂತರ ಶೋಕಪಡಬೇಕಾಗುವುದಿಲ್ಲ. (ಸುಖಮಯವಾಗಿರುತ್ತದೆ.)

ಧರ್ಮಾದ್ಯಾ ಹಿ ಯಥಾ ತ್ರೇತಾ ವಹ್ನಿತ್ರೇತಾ ತಥೈವ ಚ।
ತಥೈವ ಪುತ್ರಪೌತ್ರಾಣಾಂ ಸ್ವರ್ಗಸ್ತ್ರೇತಾ ಕಿಲಾಕ್ಷಯಃ ॥೮೦॥

ಯಾವ ರೀತಿಯಲ್ಲಿ ಧರ್ಮ, ಅರ್ಥ, ಕಾಮ–ಇವು ಮೂರು ಸ್ವರ್ಗಕ್ಕೆ ಸಾಧನಭೂತಗಳಾಗಿವೆಯೋ ಮತ್ತು ಆಹವನೀಯ, ಗಾರ್ಹಪತ್ಯ, ದಕ್ಷಿಣಾಗ್ನಿ–ಈ ಮೂರು ಅಗ್ನಿಗಳು ಯಜ್ಞದ ಮೂಲಕವಾಗಿ ಸ್ವರ್ಗಕ್ಕೆ ಸಾಧನಗಳಾಗಿರುವುವೋ–ಅದೇ ರೀತಿಯಲ್ಲಿ ಪುತ್ರ-ಪೌತ್ರ-ಪ್ರಪೌತ್ರರೆಂಬ ಮೂರು ಬಗೆಯ ಸಂತಾನವು ಅಕ್ಷಯವಾದ ಸ್ವರ್ಗಪ್ರಾಪ್ತಿಗೆ ಕಾರಣಭೂತವಾಗಿದೆ.

ಪಿತೃನ್ನೃಣಾತ್ತಾರಯತಿ ಪುತ್ರ ಇತ್ಯನುಶುಶ್ರುಮ।
ಪುತ್ರಪೌತ್ರೈಶ್ಚ ನಿಯತಂ ಸಾಧುಲೋಕಾನುಪಾಶ್ನುತೇ ॥೮೧॥

ಪುತ್ರನು ತಂದೆಯನ್ನು ಪಿತೃಋಣದಿಂದ ವಿಮುಕ್ತನನ್ನಾಗಿ ಮಾಡುವನೆಂದು ನಾವು ಕೇಳಿದ್ದೇವೆ. ಪುತ್ರ-ಪೌತ್ರರ ಮೂಲಕವಾಗಿ ಮನುಷ್ಯನು ನಿಶ್ಚಯವಾಗಿಯೂ ಒಳ್ಳೆಯ ಲೋಕಗಳಿಗೆ ಹೋಗಿ ಸುಖವನ್ನು ಅನುಭವಿಸುತ್ತಾನೆ."

ಮಾವನು ಹೇಳುತ್ತಾನೆ:

ವಾತಾತಪವಿಶೀರ್ಣಾಙ್ಗೀಂ ತ್ವಾಂ ವಿವರ್ಣಾಂ ನಿರೀಕ್ಷ್ಯ ವೈ।
ಕರ್ಶಿತಾಂ ಸುವ್ರತಾಚಾರೇ ಕ್ಷುಧಾವಿಹ್ವಲಚೇತಸಮ್ ॥೮೨॥

ಕಥಂ ಸಕ್ತೂನ್ಗ್ರಹೀಷ್ಯಾಮಿ ಭೂತ್ವಾ ಧರ್ಮೋಪಘಾತಕಃ।
ಕಲ್ಯಾಣವೃತ್ತೇ ಕಲ್ಯಾಣಿ ನೈವಂ ತ್ವಂ ವಕ್ತುಮರ್ಹಸಿ ॥೭೩॥

"ಉತ್ತಮವ್ರತಾಚಾರಗಳುಳ್ಳವಳೇ! ಗಾಳಿ-ಬಿಸಿಲುಗಳ ಹೊಡೆತಕ್ಕೆ ಸಿಕ್ಕಿ ನಿನ್ನ ಶರೀರವೆಲ್ಲವೂ ಸುಕ್ಕಾಗಿ ಹೋಗಿದೆ. ಕಾಂತಿಯಿಂದ ಹೀನಳಾಗಿರುವ, ಕೃಶಳಾಗಿರುವ, ಹಸಿವಿನಿಂದ ಕ್ಲೇಶಗೊಂಡ ಮನಸ್ಸಿನಿಂದ ಕೂಡಿರುವ ನಿನ್ನನ್ನು ನೋಡಿಯೂ ಧರ್ಮಘಾತಕನಾಗಿ ನಿನ್ನಿಂದ ಹಿಟ್ಟಿನುಂಡೆಗಳನ್ನು ಹೇಗೆ ತೆಗೆದುಕೊಳ್ಳಲಿ? ಮಂಗಳಕರವಾದ ಆಚಾರ-ವ್ಯವಹಾರವುಳ್ಳವಳೇ! ಕಲ್ಯಾಣಿ! ಅನೇಕ ದಿವಸಗಳನಂತರ ಲಭಿಸಿರುವ ಈ ಹಿಟ್ಟನ್ನು ಅತಿಥಿಯ ಸಲುವಾಗಿ ತೆಗೆದುಕೊಳ್ಳುವಂತೆ ಹೇಳುವುದು ನಿನಗೆ ಉಚಿತವಲ್ಲ.

ಷಷ್ಠೇ ಕಾಲೇ ವ್ರತವತೀಂ ಶೌಚಶೀಲತಪೋಽನ್ವಿತಾಮ್।
ಕೃಚ್ಛ್ರವೃತ್ತಿಂ ನಿರಾಹಾರಾಂ ದ್ರಕ್ಷ್ಯಾಮಿ ತ್ವಾಂ ಕಥಂ ಶುಭೇ ॥೭೪॥

ನೀನು ಅನುದಿನವೂ ಶೌಚ, ಸದಾಚಾರ ಮತ್ತು ತಪಸ್ಸುಗಳಲ್ಲಿ ನಿರತಳಾಗಿದ್ದು ಆರನೆಯ ಕಾಲದಲ್ಲಿ (ಮೂರು ದಿನಗಳಿಗೊಮ್ಮೆ) ಊಟಮಾಡುವ ವ್ರತವನ್ನು ನಮ್ಮಂತೆಯೇ ಕೈಗೊಂಡಿರುವೆ. ಶುಭಾಂಗಿಯೇ! ನೀನು ಬಹಳ ಕಷ್ಟದಿಂದ ಜೀವನವನ್ನು ಸಾಗಿಸುತ್ತಿರುವೆ. ಹೀಗಿರುವಾಗ ಬಹಳದಿವಸಗಳನಂತರ ನಿನ್ನ ಪಾಲಿಗೆ ಬಂದಿರುವ ಹಿಟ್ಟನ್ನೂ ತೆಗೆದುಕೊಂಡು ನಿರಾಹಾರಳಾಗುವ ನಿನ್ನನ್ನು ನಾನು ಹೇಗೆ ನೋಡಲಿ?

ಬಾಲಾ ಕ್ಷುಧಾರ್ತಾ ನಾರೀ ಚ ರಕ್ಷ್ಯಾ ತ್ವಂ ಸತತಂ ಮಯಾ।
ಉಪವಾಸಪರಿಶ್ರಾನ್ತಾ ತ್ವಂ ಹಿ ಬಾನ್ಧವನನ್ದಿನೀ ॥೭೫॥

ಮೊದಲನೆಯದಾಗಿ ನೀನಿನ್ನೂ ಬಾಲೆಯಾಗಿರುವೆ. ಎರಡನೆಯದಾಗಿ ಹಸಿವಿನಿಂದ ಪೀಡಿತಳಾಗಿರುವೆ. ಅಬಲೆಯಾಗಿರುವೆ. ಮೂರನೆಯದಾಗಿ ಉಪವಾಸವನ್ನು ಮಾಡಿ ಮಾಡಿ ಅತ್ಯಂತ ದುರ್ಬಲಳಾಗಿರುವೆ. ನಾಲ್ಕನೆಯದಾಗಿ ಸೇವೆಯ ಮೂಲಕವಾಗಿ ಬಂಧುಗಳ ಪ್ರೀತಿಗೂ ಪಾತ್ರಳಾಗಿರುವೆ. ಆದುದರಿಂದ ನಿನ್ನನ್ನು ಸರ್ವಪ್ರಕಾರದಿಂದಲೂ ರಕ್ಷಿಸುವುದು ನನ್ನ ಕರ್ತವ್ಯವಾಗಿದೆ."

ಸೊಸೆಯು ಹೇಳುತ್ತಾಳೆ:

ಗುರೋರ್ಮಮ ಗುರುಸ್ತ್ವಂ ವೈ ಯತೋ ದೈವತದೈವತಮ್।
ದೇವಾತಿದೇವಸ್ತಸ್ಮಾತ್ತ್ವಂ ಸಕ್ತೂನಾದತ್ಸ್ವ ಮೇ ಪ್ರಭೋ ॥೭೬॥

"ಪೂಜ್ಯರೇ! ನೀವು ನನ್ನ ಗುರುವಿಗೂ (ಪತಿಗೂ) ಗುರುವಾಗಿರುವಿರಿ. ನನ್ನ ಪತಿದೇವನಿಗೂ ದೇವತೆಯಾಗಿರುವಿರಿ. ಆದುದರಿಂದ ಈ ಹಿಟ್ಟಿನುಂಡೆಗಳನ್ನು ಅತಿಥಿಯನ್ನು ತಣಿಸುವ ಸಲುವಾಗಿ ಸ್ವೀಕರಿಸಿರಿ.

ದೇಹಃ ಪ್ರಾಣಶ್ಚ ಧರ್ಮಶ್ಚ ಶುಶ್ರೂಷಾರ್ಥಮಿದಂ ಗುರೋಃ।
ತವ ವಿಪ್ರ ಪ್ರಸಾದೇನ ಲೋಕಾನ್ಪ್ರಾಪ್ಸ್ಯಾಮ್ಯಭೀಪ್ಸಿತಾನ್ ॥೭೭॥

ನನ್ನ ಈ ಶರೀರ, ಪ್ರಾಣ ಮತ್ತು ಧರ್ಮ–ಇವೆಲ್ಲವೂ ಗುರುವಿನ (ನಿಮ್ಮ) ಸೇವೆಗಾಗಿಯೇ ಮೀಸಲಾಗಿವೆ. ವಿಪ್ರಶ್ರೇಷ್ಠರೇ! ನಿಮ್ಮ ಅನುಗ್ರಹದಿಂದಲೇ ನಾನಪೇಕ್ಷಿಸುವ ಲೋಕಗಳನ್ನು ಹೊಂದುತ್ತೇನೆ.

ಅವೇಕ್ಷ್ಯಾ ಇತಿ ಕೃತ್ವಾಹಂ ದೃಢಭಕ್ತೇತಿ ವಾ ದ್ವಿಜ।
ಚಿನ್ತ್ಯಾ ಮಮೇಯಮಿತಿ ವಾ ಸಕ್ತೂನಾದಾತುಮರ್ಹಸಿ ॥೭೮॥

'ಇವಳನ್ನು ಚೆನ್ನಾಗಿ ನೋಡಿಕೊಳ್ಳಬೇಕು'–ಎಂಬ ಭಾವನೆಯಿಂದಾಗಲೀ 'ಇವಳು ನನ್ನಲ್ಲಿಯೇ ದೃಢವಾದ ಭಕ್ತಿಯುಳ್ಳವಳಾಗಿದ್ದಾಳೆ'–ಎಂದು ಭಾವಿಸಿಯಾಗಲೀ 'ಇವಳು ನನ್ನವಳು; ಇವಳು ಹೇಳಿರುವುದು ಚಿಂತನೀಯವಾಗಿದೆ'–ಎಂಬ ಅಭಿಮತದಿಂದಾಗಲೀ ಅತಿಥಿಗೆ ಕೊಡುವ ಸಲುವಾಗಿ ನನ್ನ ಪಾಲಿನ ಈ ಹಿಟ್ಟನ್ನು ನೀವು ತೆಗೆದುಕೊಳ್ಳುವುದು ಯೋಗ್ಯವಾಗಿದೆ."

ಮಾವನು ಹೇಳುತ್ತಾನೆ:

ಅನೇನ ನಿತ್ಯಂ ಸಾಧ್ವಿ ತ್ವಂ ಶೀಲವೃತ್ತೇನ ಶೋಭಸೇ।
ಯಾ ತ್ವಂ ಧರ್ಮವ್ರತೋಪೇತಾ ಗುರುವೃತ್ತಿಮವೇಕ್ಷಸೇ ॥೭೯॥

ತಸ್ಮಾತ್ಸಕ್ತೂನ್ಗ್ರಹೀಷ್ಯಾಮಿ ವಧು ನಾರ್ಹಸಿ ವಞ್ಚನಾಮ್।
ಗಣಯಿತ್ವಾ ಮಹಾಭಾಗೇ ತ್ವಾಂ ಹಿ ಧರ್ಮಭೃತಾಂ ವರೇ ॥೮೦॥

"ಮಗಳೇ! ಅತಿಥಿಸತ್ಕಾರವೆಂಬ ಧರ್ಮದ ರಕ್ಷಣೆಗಾಗಿ ಪ್ರಾಣರಕ್ಷಣೆಗೆ ಆಧಾರಭೂತವಾಗಿದ್ದ ಹಿಟ್ಟನ್ನು ಕೊಟ್ಟುಬಿಡಲು ಸಿದ್ಧಳಾಗಿರುವುದರಿಂದ

ನೀನು ಸಾಧ್ವೀಶಿರೋಮಣಿಯಾಗಿರುವೆ. ನಿತ್ಯವೂ ಸೌಶೀಲ್ಯದಿಂದಲೂ ಸದಾಚಾರದಿಂದಲೂ ಶೋಭಿಸುತ್ತಿರುವೆ. ಧರ್ಮದ ಮತ್ತು ವ್ರತಗಳ ಆಚರಣೆಯಲ್ಲಿಯೇ ನಿರತಳಾಗಿರುವ ನೀನು ಗುರುಜನರ ಸೇವೆಯಲ್ಲಿಯೇ ನೆಟ್ಟದೃಷ್ಟಿಯುಳ್ಳವಳಾಗಿರುವೆ. (ಏಕಾಗ್ರಚಿತ್ತಳಾಗಿರುವೆ.) ಆದುದರಿಂದ ಅತಿಥಿಸತ್ಕಾರದ ಪುಣ್ಯದಿಂದ ನೀನು ವಂಚಿತಳಾಗಬಾರದು. ಧರ್ಮಾತ್ಮರಲ್ಲಿ ಶ್ರೇಷ್ಠಳಾದವಳೇ! ಪುಣ್ಯಾತ್ಮರಲ್ಲೊಬ್ಬಳನ್ನಾಗಿ ನಿನ್ನನ್ನು ಪರಿಗಣಿಸಿ ನಿನ್ನಲ್ಲಿರುವ ಹಿಟ್ಟಿನುಂಡೆಗಳನ್ನು ಅತಿಥಿಯ ಸಲುವಾಗಿ ತೆಗೆದುಕೊಳ್ಳುತ್ತೇನೆ."

ಮಂಗುಸಿಯು ಹೇಳುತ್ತದೆ:

"ಬ್ರಾಹ್ಮಣಶ್ರೇಷ್ಠರೇ! ಹೀಗೆ ಉಂಛಬ್ರಾಹ್ಮಣನು ಸೊಸೆಗೆ ಹೇಳಿ ಅವಳಿಂದ ಹಿಟ್ಟಿನುಂಡೆಗಳನ್ನು ತೆಗೆದುಕೊಂಡು ಅತಿಥಿಗೆ ಭುಂಜಿಸಲು ಕೊಟ್ಟನು. ಅದನ್ನು ಭುಂಜಿಸಿದನಂತರ ಅತಿಥಿಯು ಮಹಾತ್ಮನಾದ ಬ್ರಾಹ್ಮಣನ ವಿಷಯದಲ್ಲಿ ಸಂತುಷ್ಟನಾದನು. ವಾಸ್ತವವಾಗಿ ಉಂಛಬ್ರಾಹ್ಮಣನ ಸತ್ತ್ವವನ್ನು ಪರೀಕ್ಷಿಸಲು ಬ್ರಾಹ್ಮಣಪುರುಷನ ವೇಷವನ್ನು ಧರಿಸಿ ಧರ್ಮನೇ ಅಲ್ಲಿಗೆ ಆಗಮಿಸಿದ್ದನು. ಪ್ರೀತಾತ್ಮನಾದ ದ್ವಿಜಶ್ರೇಷ್ಠನ ರೂಪವನ್ನು ಧರಿಸಿದ್ದ ವಾಗ್ಮಿಯಾದ ಧರ್ಮನು ಬ್ರಾಹ್ಮಣನಿಗೆ ಹೇಳಿದನು:

ಶುದ್ಧೇನ ತವ ದಾನೇನ ನ್ಯಾಯೋಪಾತ್ತೇನ ಧರ್ಮತಃ ।
ಯಥಾಶಕ್ತಿ ವಿಸೃಷ್ಟೇನ ಪ್ರೀತೋಽಸ್ಮಿ ದ್ವಿಜಸತ್ತಮ ।
ಅಹೋ ದಾನಂ ಘುಷ್ಯತೇ ತೇ ಸ್ವರ್ಗೇ ಸ್ವರ್ಗನಿವಾಸಿಭಿಃ ॥೮೩॥

"ದ್ವಿಜಶ್ರೇಷ್ಠನೇ! ನ್ಯಾಯವಾದ ರೀತಿಯಲ್ಲಿ ಧರ್ಮಮಾರ್ಗದಿಂದ ಸಂಪಾದಿಸಿದ ನೀನು ಮಾಡಿರುವ ದಾನವು ಶುದ್ಧವಾಗಿದೆ. ಈ ದಾನವನ್ನು ನೀನು ಶಕ್ತಿಮೀರಿ ಮಾಡಿರುವೆ. ಇದರಿಂದ ನಾನು ಸುಪ್ರೀತನಾಗಿದ್ದೇನೆ. ಸ್ವರ್ಗದಲ್ಲಿ ವಾಸಮಾಡುತ್ತಿರುವ ದೇವತೆಗಳೂ ಕೂಡ ನೀನು ಮಾಡಿರುವ ಶುದ್ಧವಾದ ಈ ದಾನವನ್ನು ಮಹತ್ತ್ವದ್ದೆಂದು ಉದ್ಘೋಷಿಸುತ್ತಾರೆ. ಇದೋ ಅಲ್ಲಿ ನೋಡು! ಅಂತರಿಕ್ಷದಿಂದ ಪುಷ್ಪವೃಷ್ಟಿಯಾಗುತ್ತಿದೆ. ದೇವರ್ಷಿಗಳು, ದೇವತೆಗಳು, ಗಂಧರ್ವರು, ದೇವಶ್ರೇಷ್ಠರು, ದೇವದೂತರು–ಇವರೆಲ್ಲರೂ ನೀನು ಮಾಡಿರುವ ದಾನದಿಂದ ವಿಸ್ಮಿತರಾಗಿ ನಿನ್ನನ್ನು ಸ್ತೋತ್ರಮಾಡುತ್ತಾ

ಆಕಾಶದಲ್ಲಿ ನಿಂತಿದ್ದಾರೆ. ಬ್ರಹ್ಮಲೋಕದಲ್ಲಿ ಸಂಚರಿಸುವ ಬ್ರಹ್ಮರ್ಷಿಗಳು ವಿಮಾನಾರೂಢರಾಗಿ ನಿನ್ನ ದರ್ಶನವನ್ನು ಅಪೇಕ್ಷಿಸುತ್ತಿದ್ದಾರೆ. ಆದುದರಿಂದ ನೀನೀಗಲೇ ಸ್ವರ್ಗಲೋಕಕ್ಕೆ ಹೋಗು. ಈ ಪುಣ್ಯಕರ್ಮದಿಂದ ನೀನು ಪಿತೃಲೋಕಕ್ಕೆ ಹೋಗಿರುವ ನಿನ್ನ ಪಿತೃಗಳನ್ನು ಉದ್ಧರಿಸಿರುವೆ. ಮುಂದೆ ಅನೇಕ ಯುಗಗಳವರೆಗೆ ನಿನ್ನ ವಂಶದಲ್ಲಿ ಹುಟ್ಟುವವರೆಲ್ಲರೂ ಈ ನಿನ್ನ ಪುಣ್ಯಕರ್ಮದ ಪ್ರಭಾವದಿಂದ ಉದ್ಧಾರವಾಗುತ್ತಾರೆ. ಸುವ್ರತನೇ! ನೀನು ಬ್ರಹ್ಮಚರ್ಯ ದಿಂದಲೂ, ದಾನದಿಂದಲೂ, ಯಜ್ಞದಿಂದಲೂ, ತಪಸ್ಸಿನಿಂದಲೂ ಮತ್ತು ಸಂಕರವಿಲ್ಲದ ಧರ್ಮದಿಂದಲೂ ಯುಕ್ತನಾಗಿರುವುದರಿಂದ ಸ್ವರ್ಗಕ್ಕೆ ಹೋಗಲು ಯೋಗ್ಯನಾಗಿರುವೆ. ಉತ್ತಮವಾದ ವ್ರತಗಳನ್ನು ಪರಿಪಾಲಿಸುವ ಬ್ರಾಹ್ಮಣಶ್ರೇಷ್ಠನೇ! ನೀನು ಪರಮಶ್ರದ್ಧೆಯಿಂದ ತಪಸ್ಸನ್ನು ಮಾಡಿರುವೆ. ಆದುದರಿಂದ ನೀನು ಮಾಡಿದ ಶ್ರದ್ಧಾಯುಕ್ತವಾದ ಈ ದಾನದಿಂದ ದೇವತೆಗಳೂ ಸುಪ್ರೀತರಾಗಿದ್ದಾರೆ. ಇಂತಹ ಕಷ್ಟಕಾಲದಲ್ಲಿಯೂ ನೀನು ಶುದ್ಧವಾದ ಮನಸ್ಸಿನಿಂದ ದಾನಮಾಡಿರುವೆ. ಈ ಪುಣ್ಯಕರ್ಮದ ಪ್ರಭಾವದಿಂದ ನೀನು ಸ್ವರ್ಗವನ್ನು ಜಯಿಸಿರುವೆ.

ಕ್ಷುಧಾ ನಿರ್ಣುದತಿ ಪ್ರಜ್ಞಾಂ ಧರ್ಮಬುದ್ಧಿಂ ವ್ಯಪೋಹತಿ।
ಕ್ಷುಧಾಪರಿಗತಜ್ಞಾನೋ ಧೃತಿಂ ತ್ಯಜತಿ ಚೈವ ಹಿ।
ಬುಭುಕ್ಷಾಂ ಜಯತೇ ಯಸ್ತು ಸ ಸ್ವರ್ಗಂ ಜಯತೇ ಧ್ರುವಮ್॥೯೨॥

ಹಸಿವು ಪ್ರಜ್ಞೆಯನ್ನು ಹಾಳುಮಾಡಿಬಿಡುತ್ತದೆ. ಧರ್ಮಬುದ್ಧಿಯನ್ನು ಹೋಗಲಾಡಿಸುತ್ತದೆ. ಜ್ಞಾನವು ನಾಶವಾಗುವುದರಿಂದ ಮನುಷ್ಯನು ಧೈರ್ಯಗೆಡುತ್ತಾನೆ. ಈ ಬಗೆಯ ಸಕಲವಿಧವಾದ ಆಪತ್ತಿಗೂ ಕಾರಣವಾದ ಹಸಿವನ್ನು ಯಾವನು ಜಯಿಸುವನೋ–ಅಂತಹವನು ಸ್ವರ್ಗವನ್ನು ಜಯಿಸುವುದು ನಿಶ್ಚಯ.

ಯದಾ ದಾನರುಚಿಃ ಸ್ಯಾದ್ವೈ ತದಾ ಧರ್ಮೋ ನ ಸೀದತಿ ।
ಅನವೇಕ್ಷ್ಯ ಸುತಸ್ನೇಹಂ ಕಲತ್ರಸ್ನೇಹಮೇವ ಚ।
ಧರ್ಮಮೇವ ಗುರುಂ ಜ್ಞಾತ್ವಾ ತೃಷ್ಣಾ ನ ಗಣಿತಾ ತ್ವಯಾ ॥೯೩॥

ದಾನಮಾಡುವ ಅಭಿರುಚಿಯುಳ್ಳವನಿಗೆ ಧರ್ಮದ ಹಾನಿಯಾಗುವುದಿಲ್ಲ. ಮಗನಲ್ಲಿನ ಸ್ನೇಹವನ್ನೂ ಗಣಿಸದೇ ಭಾರ್ಯೆಯಲ್ಲಿನ ಸ್ನೇಹವನ್ನೂ ನೋಡದೇ ದಾನಧರ್ಮವೇ ಶ್ರೇಷ್ಠವೆಂದು ಭಾವಿಸಿ ಯಾರೊಬ್ಬರ ಹಸಿವು-ಬಾಯಾರಿಕೆಗಳನ್ನೂ ನೀನು ಗಣನೆಗೆ ತೆಗೆದುಕೊಳ್ಳಲೇ ಇಲ್ಲ.

ದ್ರವ್ಯಾಗಮೋ ನೃಣಾಂ ಸೂಕ್ಷ್ಮಃ ಪಾತ್ರೇ ದಾನಂ ತತಃ ಪರಮ್ ।
ಕಾಲಃ ಪರತರೋ ದಾನಾಚ್ಛ್ರದ್ಧಾ ಚೈವ ತತಃ ಪರಾ ।
ಸ್ವರ್ಗದ್ವಾರಂ ಸುಸೂಕ್ಷ್ಮಂ ಹಿ ನರೈರ್ಮೋಹಾನ್ನ ದೃಶ್ಯತೇ ॥೯೪॥

ಎಲ್ಲಕ್ಕೂ ಮೊದಲು ಮನುಷ್ಯನು ನ್ಯಾಯವಾದ ರೀತಿಯಲ್ಲಿ ಹಣವನ್ನು ಸಂಪಾದಿಸುವ ಉಪಾಯವನ್ನು ತಿಳಿದುಕೊಳ್ಳುವುದು ಸೂಕ್ಷ್ಮವಿಷಯವಾಗಿದೆ. ಅನಂತರ ಸತ್ಪಾತ್ರನು ಯಾರೆಂಬುದನ್ನು ವಿವೇಚಿಸಿ ದಾನಮಾಡುವುದು ಎರಡನೆಯದಾಗಿದೆ. ಉಚಿತವಾದ ಕಾಲವರಿತು ದಾನಮಾಡುವುದು ಅದಕ್ಕಿಂತಲೂ ಶ್ರೇಷ್ಠವಾದುದು. ಶ್ರದ್ಧೆಯಿಂದ ದಾನಮಾಡುವುದು ಕಾಲವರಿತು ದಾನಮಾಡುವುದಕ್ಕಿಂತಲೂ ಹೆಚ್ಚಿನದು. ಸ್ವರ್ಗದ್ವಾರವು ಅತಿಸೂಕ್ಷ್ಮವಾದುದು. ಮೋಹವಶರಾದವರು ಅದನ್ನು ಕಾಣಲಾರರು.

ಸ್ವರ್ಗಾರ್ಗಲಂ ಲೋಭಬೀಜಂ ರಾಗಗುಪ್ತಂ ದುರಾಸದಮ್ ।
ತಂ ತು ಪಶ್ಯನ್ತಿ ಪುರುಷಾ ಜಿತಕ್ರೋಧಾ ಜಿತೇನ್ದ್ರಿಯಾಃ ।
ಬ್ರಾಹ್ಮಣಾಸ್ತಪಸಾ ಯುಕ್ತಾ ಯಥಾಶಕ್ತಿ ಪ್ರದಾಯಿನಃ ॥೯೫॥

ಸ್ವರ್ಗದ ಬಾಗಿಲಿಗೆ ಲೋಭದ ಬೀಜವು ಅಗಳಿಯಾಗಿದೆ. ಅದು ರಾಗದಿಂದ ರಕ್ಷಿತವಾಗಿದೆ. ಪ್ರವೇಶಿಸಲು ಬಹಳ ಕಷ್ಟಸಾಧ್ಯವಾಗಿದೆ. ಕೋಪವನ್ನು ಜಯಿಸಿದ, ಜಿತೇಂದ್ರಿಯರಾದ, ತಪೋನಿಷ್ಠರಾದ, ಯಥಾಶಕ್ತಿ ದಾನಮಾಡುವ ಬ್ರಾಹ್ಮಣರು ಲೋಭ-ರಾಗಗಳನ್ನು ಪರಿತ್ಯಜಿಸಿ ಸ್ವರ್ಗವನ್ನು ಕಾಣುತ್ತಾರೆ.

ಸಹಸ್ರಶಕ್ತಿಶ್ಚ ಶತಂ ಶತಶಕ್ತಿರ್ದಶಾಪಿ ಚ ।
ದದ್ಯಾದಪಶ್ಚ ಯಃ ಶಕ್ತ್ಯಾ ಸರ್ವೇ ತುಲ್ಯಫಲಾಃ ಸ್ಮೃತಾ ॥೯೬॥

ದಾನಮಾಡುವ ಮನುಷ್ಯನಲ್ಲಿ ಸಾವಿರವಸ್ತುಗಳನ್ನು ದಾನಮಾಡುವ

ಸಾಮರ್ಥ್ಯವಿದ್ದಾಗ ಶ್ರದ್ಧಾಪೂರ್ವಕವಾಗಿ ನೂರು ವಸ್ತುಗಳನ್ನಾದರೂ ದಾನಮಾಡಿದರೆ ಸಾವಿರ ವಸ್ತುಗಳನ್ನು ದಾನಮಾಡಿದ ಫಲವು ಲಭಿಸುತ್ತದೆ. ನೂರು ವಸ್ತುಗಳನ್ನು ದಾನಮಾಡುವ ಸಾಮರ್ಥ್ಯವಿರುವವನು ಶ್ರದ್ಧಾಪೂರ್ವಕವಾಗಿ ಹತ್ತು ವಸ್ತುಗಳನ್ನು ದಾನಮಾಡಿದರೆ ನೂರು ವಸ್ತುಗಳನ್ನು ದಾನಮಾಡಿದ ಫಲವು ಲಭಿಸುತ್ತದೆ. ಯಾವುದನ್ನೂ ದಾನಮಾಡಲು ಶಕ್ತಿಯಿಲ್ಲದವನು ಶ್ರದ್ಧಾಪೂರ್ವಕವಾಗಿ ಬಾಯಾರಿದವನಿಗೆ ತನ್ನ ಶಕ್ತಿಗೆ ಅನುಸಾರವಾಗಿ ಕುಡಿಯಲು ನೀರು ಕೊಟ್ಟರೆ ಅಂತಹವನೂ ನೂರು-ಹತ್ತು ವಸ್ತುಗಳನ್ನು ದಾನಮಾಡಿದವರಿಗೆ ಲಭಿಸುವ ಫಲವನ್ನೇ ಹೊಂದುತ್ತಾನೆ.

ರನ್ತಿದೇವೋ ಹಿ ನೃಪತಿರಪಃ ಪ್ರಾದಾದಕಿಂಚನಃ ।
ಶುದ್ಧೇನ ಮನಸಾ ವಿಪ್ರ ನಾಕಪೃಷ್ಠಂ ತತೋ ಗತಃ ॥೯೭॥

ವಿಪ್ರಶ್ರೇಷ್ಠನೇ! ರಾಜನಾದ ರಂತಿದೇವನು ಅಕಿಂಚನನಾಗಿದ್ದನು. (ಅವನ ಬಳಿ ಏನೂ ಇರಲಿಲ್ಲ.) ಆ ಸಮಯದಲ್ಲವನು ಶುದ್ಧವಾದ ಮನಸ್ಸಿನಿಂದ ಬಾಯಾರಿದವನಿಗೆ ತನ್ನಲ್ಲಿದ್ದ ಜಲವನ್ನೇ ದಾನಮಾಡಿದನು. ಈ ಒಂದು ಪುಣ್ಯಕರ್ಮದಿಂದಲೇ ಅವನು ಸ್ವರ್ಗಕ್ಕೆ ಹೋದನು.

ನ ಧರ್ಮಃ ಪ್ರೀಯತೇ ತಾತ ದಾನೈರ್ದತ್ತೈರ್ಮಹಾಫಲೈಃ ।
ನ್ಯಾಯಲಬ್ಧೈರ್ಯಥಾ ಸೂಕ್ಷ್ಮೈಃ ಶ್ರದ್ಧಾಪೂತೈಃ ಸ ತುಷ್ಯತಿ ॥೯೮॥

ನ್ಯಾಯವಲ್ಲದ ರೀತಿಯಲ್ಲಿ ಸಂಪಾದಿಸಿದ ಹಣದ ಮೂಲಕ ಮಹಾಫಲಗಳನ್ನು ಕೊಡುವ ದೊಡ್ಡ-ದೊಡ್ಡ ದಾನಗಳನ್ನು ಮಾಡುವುದರಿಂದ ಧರ್ಮಕ್ಕೆ (ಧರ್ಮಪುರುಷನಿಗೆ) ಪ್ರೀತಿಯುಂಟಾಗುವುದಿಲ್ಲ. ದಾನದ್ರವ್ಯವು ಅತಿ ಸಣ್ಣದೇ ಆಗಿದ್ದರೂ ಅದು ನ್ಯಾಯವಾದ ರೀತಿಯಲ್ಲಿ ಸಂಪಾದಿಸಿದುದಾಗಿದ್ದರೆ ಶ್ರದ್ಧೆಯಿಂದ ಪವಿತ್ರವಾಗಿದ್ದರೆ ಅಂತಹ ದಾನದಿಂದ ಧರ್ಮಪುರುಷನು ಸಂತುಷ್ಟನಾಗುತ್ತಾನೆ.

ಗೋಪ್ರದಾನಸಹಸ್ರಾಣಿ ದ್ವಿಜೇಭ್ಯೋಽದಾನ್ನೃಗೋ ನೃಪಃ ।
ಏಕಾಂ ದತ್ತ್ವಾ ಸ ಪಾರಕ್ಯಾಂ ನರಕಂ ಸಮುಪದ್ಯತ ॥೯೯॥

ನೃಗರಾಜನು ಹಲವು ಸಾವಿರ ಗೋವುಗಳನ್ನು ಬ್ರಾಹ್ಮಣರಿಗೆ ದಾನವಾಗಿ

ಕೊಟ್ಟನು. ಆದರೆ ಆ ಗೋವುಗಳ ಸಮೂಹದಲ್ಲಿ ಒಂದು ಮಾತ್ರ ಬೇರೆಯವರಿಗೆ ಸೇರಿದುದಾಗಿದ್ದಿತು. ಅದನ್ನು ಅಜ್ಞಾನದಿಂದ ದಾನಕೊಟ್ಟನಾದ ಕಾರಣ ಅವನು ನರಕಕ್ಕೆ ಹೋಗಬೇಕಾಯಿತು. (ಮಹಾಫಲದಾಯಕವಾದ ಸಾವಿರ ಗೋವುಗಳನ್ನು ದಾನಮಾಡಿದರೂ ನೃಗನಿಗೆ ಅಂತಹ ಅವಸ್ಥೆಯುಂಟಾಯಿತು.)

ಆತ್ಮಮಾಂಸಪ್ರಸಾದೇನ ಶಿಬಿರೌಶೀನರೋ ನೃಪಃ ।
ಪ್ರಾಪ್ಯ ಪುಣ್ಯಕೃತಾಲ್ಲೋಕಾನ್ಮೋದತೇ ದಿವಿ ಸುವ್ರತಃ ॥೧೦೦॥

ಉಶೀನರರನ ಮಗನಾದ, ಸುವ್ರತನಾದ ಶಿಬಿಯು ತನ್ನ ಶರೀರದ ಮಾಂಸವನ್ನೇ ದಾನವಾಗಿ ಕೊಟ್ಟು ಪುಣ್ಯಾತ್ಮರಿಗೆ ಲಭಿಸುವ ಲೋಕಗಳನ್ನು ಹೊಂದಿ ಈಗಲೂ ಅಲ್ಲಿ ಆನಂದಪಡುತ್ತಿದ್ದಾನೆ.

ವಿಭವೋ ನ ನೃಣಾಂ ಪುಣ್ಯಂ ಸ್ವಶಕ್ತ್ಯಾ ಸ್ವಾರ್ಜಿತಂ ಸತಾಮ್।
ನ ಯಜ್ಞೈರ್ವಿವಿಧೈರ್ವಿಪ್ರ ಯಥಾನ್ಯಾಯೇನ ಸಂಚಿತೈಃ ॥೧೦೧॥

ವೈಭವದಿಂದ ಕೂಡಿದ ದಾನಗಳೇ ಪುಣ್ಯದಾಯಕಗಳಲ್ಲ. ಸತ್ಪುರುಷರು ತಮ್ಮ ಶಕ್ತಿಗೆ ಅನುಸಾರವಾಗಿ ಒಳ್ಳೆಯ ರೀತಿಯಲ್ಲಿ ಗಳಿಸಿ ಮಾಡಿದ ಅಲ್ಪವಸ್ತುಗಳ ದಾನವೇ ಮಹಾಪುಣ್ಯದಾಯಕವಾಗುತ್ತದೆ. ನ್ಯಾಯವಾದ ರೀತಿಯಲ್ಲಿ ಸಂಪಾದಿಸಿದ ವಸ್ತುವನ್ನು ಶ್ರದ್ಧೆಯಿಂದ ದಾನಮಾಡಿದ ಪುಣ್ಯವು ವಿಧ-ವಿಧವಾದ ಯಜ್ಞಗಳನ್ನು ಮಾಡುವುದರಿಂದಲೂ ಲಭಿಸುವುದಿಲ್ಲ.

ಕ್ರೋಧಾದ್ದಾನಫಲಂ ಹನ್ತಿ ಲೋಭಾತ್ಸ್ವರ್ಗಂ ನ ಗಚ್ಛತಿ ।
ನ್ಯಾಯವೃತ್ತಿರ್ಹಿ ತಪಸಾ ದಾನವಿತ್ಸ್ವರ್ಗಮಶ್ನುತೇ ॥೧೦೨॥

ಮನುಷ್ಯನು ಕೋಪಗೊಳ್ಳುವುದರಿಂದ ದಾನಮಾಡಿದ ಫಲವನ್ನು ಹಾಳುಮಾಡಿಕೊಳ್ಳುತ್ತಾನೆ. ಲೋಭಿಯಾಗಿದ್ದರೆ ಸ್ವರ್ಗಕ್ಕೆ ಹೋಗಲಾರನು. ನ್ಯಾಯೋಚಿತವಾದ ರೀತಿಯಲ್ಲಿ ಜೀವನವನ್ನು ನಿರ್ವಹಿಸುವವನು ಮತ್ತು ತಪಸ್ಸಿನಿಂದ ದಾನದ ಮಹತ್ತ್ವವನ್ನು ತಿಳಿದಿರತಕ್ಕವನು ಸ್ವರ್ಗವನ್ನು ಹೊಂದುತ್ತಾನೆ.

ನ ರಾಜಸೂಯೈರ್ಬಹುಭಿರಿಷ್ಟ್ವಾ ವಿಪುಲದಕ್ಷಿಣೈಃ ।
ನ ಚಾಶ್ವಮೇಧೈರ್ಬಹುಭಿಃ ಫಲಂ ಸಮಮಿದಂ ತವ ॥೧೦೩॥

ಸಕ್ತುಪ್ರಸ್ಥೇನ ವಿಜಿತೋ ಬ್ರಹ್ಮಲೋಕಸ್ತ್ವಯಾಕ್ಷಯಃ ॥೧೦೪॥

ನೀನಿಂದು ಗಳಿಸಿರುವ ಮಹಾಫಲಕ್ಕೆ ಬಹುದಕ್ಷಿಣಾಯುಕ್ತವಾದ ಅನೇಕ ರಾಜಸೂಯಯಾಗಗಳನ್ನು ಮಾಡಿದುದರಿಂದ ಲಭಿಸುವ ಫಲವಾಗಲೀ, ಅನೇಕ ಅಶ್ವಮೇಧಗಳನ್ನು ಮಾಡಿದುದರಿಂದ ಲಭಿಸುವ ಫಲವಾಗಲೀ ಸಮವಾಗುವುದಿಲ್ಲ. ಸೇರು ಹಿಟ್ಟನ್ನು ದಾನಮಾಡಿದುದರಿಂದ ಅಕ್ಷಯವಾದ ಬ್ರಹ್ಮಲೋಕವನ್ನೇ ನೀನು ಜಯಿಸಿರುವೆ.

ವಿಪ್ರಶ್ರೇಷ್ಠನೇ! ನೀನು ಧೂಳಿನಿಂದ (ರಜೋಗುಣದಿಂದ) ರಹಿತರಾದ ಬ್ರಹ್ಮಲೋಕಕ್ಕೆ ಹೊರಡು. ನೀವೆಲ್ಲರೂ ಅಲ್ಲಿಗೆ ಹೋಗಲು ಈ ವಿಮಾನವು ಸಿದ್ಧವಾಗಿದೆ. ಇಚ್ಛಾನುಸಾರವಾಗಿ ಹತ್ತಿರಿ. ದ್ವಿಜಶ್ರೇಷ್ಠನೇ! ನನ್ನನ್ನು ನೋಡು. ನಾನು ಸಾಕ್ಷಾತ್ ಧರ್ಮಪುರುಷನೇ ಆಗಿರುವೆನು. ನೀನು ನಿನ್ನ ದೇಹವನ್ನು ಸಂಸಾರಸಾಗರದಿಂದ ಪಾರುಮಾಡಿಕೊಂಡಿರುವೆ. ಸ್ಥಿರವಾದ ಕೀರ್ತಿಯನ್ನು ಗಳಿಸಿರುವೆ. ಹೆಂಡತಿ, ಮಗ ಮತ್ತು ಸೊಸೆಯರೊಡನೆ ಸ್ವರ್ಗಕ್ಕೆ ಹೋಗು.”

ಬ್ರಾಹ್ಮಣೋತ್ತಮರೇ! ಧರ್ಮನು ಹೀಗೆ ಹೇಳಲಾಗಿ ಉಂಛಬ್ರಾಹ್ಮಣನು ಹೆಂಡತಿ, ಮಗ ಮತ್ತು ಸೊಸೆಯರೊಡನೆ ವಿಮಾನದಲ್ಲಿ ಕುಳಿತು ಸ್ವರ್ಗಕ್ಕೆ ಹೊರಟುಹೋದನು. ಅವರೆಲ್ಲರೊಡನೆ ಉಂಛಬ್ರಾಹ್ಮಣನು ಸ್ವರ್ಗಕ್ಕೆ ಹೋದನಂತರ ನಾನು ನಾನಿದ್ದ ಬಿಲದಿಂದ ಹೊರಬಂದೆನು. ಆ ಸ್ಥಳದಲ್ಲಿ ಹರಡಿದ್ದ ಹಿಟ್ಟಿನ ವಾಸನೆಯನ್ನು ಆಘ್ರಾಣಿಸಿದ್ದರಿಂದಲೂ, ಅಲ್ಲಿದ್ದ ನೀರಿನಲ್ಲಿ ನೆನೆದುದರಿಂದಲೂ, ಅಲ್ಲಿ ಬಿದ್ದಿದ್ದ ದಿವ್ಯಪುಷ್ಪಗಳ ಮೇಲೆ ಓಡಾಡಿದುದರಿಂದಲೂ, ಸತ್ಪುರುಷನಾದ ಆ ಉಂಛಬ್ರಾಹ್ಮಣನು ದಾನವಾಗಿ ಕೊಟ್ಟ ಹಿಟ್ಟಿನ ಕಣಗಳ ಸಂಪರ್ಕದಿಂದಲೂ ಮತ್ತು ಬ್ರಾಹ್ಮಣನ ಪ್ರಭಾವದಿಂದಲೂ ನನ್ನ ತಲೆಯು ಸುವರ್ಣಮಯವಾಯಿತು. ವಿಪ್ರಶ್ರೇಷ್ಠರೇ! ಸತ್ಯನಿಷ್ಠನಾದ ಆ ಉಂಛಬ್ರಾಹ್ಮಣನು ಹಿಟ್ಟನ್ನು ದಾನವಾಗಿ ಕೊಟ್ಟುದರ ಪರಿಣಾಮವಾಗಿ ನನ್ನ ಅರ್ಧಶರೀರವೇ ಸುವರ್ಣಮಯವಾಗಿಬಿಟ್ಟಿತು.

ಧೀಮಂತನಾದ ಆ ಬ್ರಾಹ್ಮಣನ ತಪಸ್ಸಿನ ಪ್ರಭಾವದಿಂದ ನನ್ನ ಅರ್ಧಪಾರ್ಶ್ವವು ಸುವರ್ಣಮಯವಾಗಿರುವುದನ್ನು ನೀವೇ ಚೆನ್ನಾಗಿ ನೋಡಿರಿ. ಈ ಒಂದು ಪಾರ್ಶ್ವವು ಸುವರ್ಣವಾಗಿರುವಂತೆ ಮತ್ತೊಂದು ಪಾರ್ಶ್ವವೂ ಹೇಗೆ ಸುವರ್ಣ ಮಯವಾದೀತೆಂದು ನಾನು ಅಂದಿನಿಂದಲೂ ಚಿಂತಿಸುತ್ತಲೇ ಇದ್ದೇನೆ. ಮತ್ತೊಂದು ಪಾರ್ಶ್ವವನ್ನು ಚಿನ್ನದ್ದನ್ನಾಗಿ ಮಾಡಿಕೊಳ್ಳುವ ಆಶಯದಿಂದ ನಾನು ತಪೋವನಗಳಿಗೂ ಯಜ್ಞನಡೆಯುವ ಸ್ಥಳಗಳಿಗೂ ಸಂತೋಷದಿಂದ ಪುನಃ ಪುನಃ ಹೋಗುತ್ತೇನೆ. ಧೀಮಂತನಾದ ಕುರುರಾಜನ ಯಜ್ಞವು ನಡೆಯುವುದೆಂದು ತಿಳಿದು ಅತ್ಯಾಶೆಯನ್ನಿಟ್ಟುಕೊಂಡು ಇಲ್ಲಿಗೂ ಬಂದೆನು. ಆದರೆ ಇಲ್ಲಿಯೂ ನನ್ನ ಮತ್ತೊಂದು ಪಾರ್ಶ್ವವು ಸುವರ್ಣವಾಗಲಿಲ್ಲ. ಬ್ರಾಹ್ಮಣರೇ! ಈ ಕಾರಣದಿಂದಲೇ ನಾನು ಉಂಛಬ್ರಾಹ್ಮಣನ ಸೇರುಹಿಟ್ಟಿನ ದಾನಕ್ಕೆ ಈ ಯಜ್ಞವು ಸರ್ವಥಾ ಸಮವಲ್ಲವೆಂದು ಹೇಳಿದೆನು. ಹಿಟ್ಟಿನ ಕಣಗಳ ಸಂಸ್ಪರ್ಶದಿಂದಲೇ ನನ್ನ ಒಂದು ಭಾಗವು ಸುವರ್ಣಮಯ ವಾಯಿತು. ಆದುದರಿಂದ ಈ ಮಹಾಯಜ್ಞವು ಆ ಉಂಛಬ್ರಾಹ್ಮಣನ ಹಿಟ್ಟಿನ ಕಣಗಳಿಗೂ ಸಮಾನವಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ."

ವೈಶಂಪಾಯನರು ಹೇಳುತ್ತಾರೆ:

"ಜನಮೇಜಯ! ಮುಂಗುಸಿಯು ಧರ್ಮರಾಜನ ಯಜ್ಞದಲ್ಲಿ ಭಾಗವಹಿಸಿದ್ದ ಬ್ರಾಹ್ಮಣರಿಗೆ ಹೀಗೆ ಹೇಳಿ ಅಲ್ಲಿಯೇ ಮಾಯವಾಯಿತು. ಬಳಿಕ ಬ್ರಾಹ್ಮಣರೂ ತಮ್ಮ ತಮ್ಮ ಮನೆಗಳಿಗೆ ಹೊರಟುಹೋದರು. ಮಹಾರಾಜ! ಅಶ್ವಮೇಧಮಹಾಯಾಗವು ನಡೆಯುತ್ತಿದ್ದಾಗ ನಡೆದ ಆಶ್ಚರ್ಯಕರವಾದ ಈ ಘಟನೆಯನ್ನು ನಿನಗೆ ಸಮಗ್ರವಾಗಿ ಹೇಳಿರುವೆನು. ಈ ಯಜ್ಞದ ಸಂಬಂಧದಲ್ಲಿ ಜರುಗಿದ ಇಂತಹ ಆಶ್ಚರ್ಯಕರ ಘಟನೆಯನ್ನು ಕೇಳಿ ನೀನು ಆಶ್ಚರ್ಯಪಡಬೇಕಾಗಿಲ್ಲ. ಸಾವಿರಾರು ಕೋಟಿಮಂದಿ ಋಷಿಗಳು ಯಜ್ಞವನ್ನು ಮಾಡದೇ ತಪಸ್ಸಿನ ಪ್ರಭಾವದಿಂದಲೇ ಸ್ವರ್ಗಕ್ಕೆ ಹೋಗಿರುವರು.

ಅದ್ರೋಹಃ ಸರ್ವಭೂತೇಷು ಸಂತೋಷಃ ಶೀಲಮಾರ್ಜವಮ್ ।
ತಪೋ ದಮಶ್ಚ ಸತ್ಯಂ ಚ ಪ್ರದಾನಂ ಚೇತಿ ಸಮ್ಮಿತಮ್ ॥೧೨೦॥

ಯಾವ ಪ್ರಾಣಿಗೇ ಆದರೂ ದ್ರೋಹವನ್ನೆಸಗದೇ ಇರುವುದು, ಸದಾ ಸಂತುಷ್ಟನಾಗಿರುವುದು, ಒಳ್ಳೆಯ ಚಾರಿತ್ರ್ಯ, ಸರಳತೆ, ತಪಶ್ಚರಣೆ, ಜಿತೇಂದ್ರಿಯತೆ, ಸತ್ಯನಿಷ್ಠೆ, ನ್ಯಾಯವಾದ ರೀತಿಯಲ್ಲಿ ಸಂಪಾದಿಸಿದುದನ್ನು ಶ್ರದ್ಧಾಪೂರ್ವಕವಾಗಿ ಸತ್ಪಾತ್ರನಿಗೆ ದಾನಕೊಡುವುದು–ಇವೆಲ್ಲವೂ ಯಜ್ಞ ಮಾಡಿದ ಫಲಕ್ಕೆ ಸಮಾನವಾದ ಫಲವನ್ನೇ ಕೊಡುತ್ತವೆ."

೯೦ನೆಯ ಅಧ್ಯಾಯವು ಮುಗಿಯಿತು.

೯೧ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಹಿಂಸೆಯಿಂದ ಯುಕ್ತವಾದ ಧರ್ಮದ ಮತ್ತು ಯಜ್ಞದ ನಿಂದನೆ

ಜನಮೇಜಯನು ಪ್ರಶ್ನಿಸುತ್ತಾನೆ:

ಯಜ್ಞೇ ಸಕ್ತಾ ನೃಪತಯಸ್ತಪಃಸಕ್ತಾ ಮಹರ್ಷಯಃ ।
ಶಾನ್ತಿವ್ಯವಸ್ಥಿತಾ ವಿಪ್ರಾಃ ಶಮೋ ದಮ ಇತಿ ಪ್ರಭೋ ॥೧॥

"ಪ್ರಭಾವಶಾಲಿಗಳಾದ ವೈಶಂಪಾಯನರೇ! ರಾಜರು ಯಜ್ಞಮಾಡುವುದರಲ್ಲಿ ಆಸಕ್ತರಾಗಿರುತ್ತಾರೆ. ಮಹರ್ಷಿಗಳು ತಪಸ್ಸಿನಲ್ಲಿ ನಿರತರಾಗಿರುತ್ತಾರೆ. ಶಮದಲ್ಲಿಯೂ ಆಸಕ್ತರಾದ ಬ್ರಾಹ್ಮಣರು ಶಾಂತಿಯನ್ನು (ಮೋಕ್ಷವನ್ನು) ಪಡೆಯಲು ಆಶಿಸುತ್ತಾರೆ. ಮನಸ್ಸಿನ ನಿಗ್ರಹದಿಂದ ಇಂದ್ರಿಯಸಂಯಮವು (ದಮವು) ಸಿದ್ಧವಾಗುತ್ತದೆ. ಆದರೆ ಯಜ್ಞಗಳನ್ನು ಮಾಡುವುದರಿಂದ ಪ್ರಾಪ್ತವಾಗುವ ಫಲವು ಬೇರೆ ಯಾವುದೇ ಕರ್ಮಗಳಿಂದಲೂ ಲಭಿಸುವುದಿಲ್ಲವೆಂಬುದು ನನ್ನ ಅಭಿಮತವಾಗಿದೆ. ಇದರಲ್ಲಿ ನನಗೆ ಸಂದೇಹವೇ ಕಾಣುತ್ತಿಲ್ಲ. ಅನೇಕರಾಜರೂ ಮತ್ತು ಬ್ರಾಹ್ಮಣರೂ ಯಜ್ಞಗಳಿಂದ ದೇವತೆಗಳನ್ನು ಸಂಪೂಜಿಸಿ ಈ ಲೋಕದಲ್ಲಿ ಕೀರ್ತಿಯನ್ನು ಗಳಿಸಿ ಅವಸಾನಕಾಲದಲ್ಲಿ ಸ್ವರ್ಗವನ್ನು ಹೊಂದಿರುವರು. ಸಾವಿರ ಕಣ್ಣುಗಳುಳ್ಳ ಮಹಾತೇಜಸ್ವಿಯಾದ ಇಂದ್ರನು ಅಪಾರದಕ್ಷಿಣೆಗಳಿಂದ ಕೂಡಿದ ಯಜ್ಞಗಳನ್ನು ಮಾಡಿ ಸಮಗ್ರವಾದ ದೇವರಾಜ್ಯವನ್ನೇ ಪಡೆದುಕೊಂಡನು. ಐಶ್ವರ್ಯದಿಂದಲೂ ಪರಾಕ್ರಮದಿಂದಲೂ ಇಂದ್ರನಿಗೆ ಸದೃಶನಾದ ಯುಧಿಷ್ಠಿರನೂ ಭೀಮಾರ್ಜುನರೇ ಮುಂತಾದ ತನ್ನ ಸಹೋದರರನ್ನು ಮುಂದುಮಾಡಿಕೊಂಡು ಅಶ್ವಮೇಧ

ಯಾಗವನ್ನು ಸಮೃದ್ಧಿಯಿಂದ ಮಾಡಿದನು. ಆದರೆ ಮಹಾತ್ಮನಾದ ಯುಧಿಷ್ಠಿರಮಹಾರಾಜನ ಆ ಅಶ್ವಮೇಧಯಾಗವನ್ನು ಮುಂಗುಸಿಯು ಯಾವ ಕಾರಣದಿಂದ ನಿಂದಿಸಿತು?”

ವೈಶಂಪಾಯನರು ಹೇಳುತ್ತಾರೆ:

“ಜನಮೇಜಯ! ನಾನೀಗ ಯಜ್ಞದ ಶ್ರೇಷ್ಠವಾದ ವಿಧಿಗಳನ್ನೂ ಮತ್ತು ಫಲಗಳನ್ನೂ ಯಥಾವತ್ತಾಗಿ ವಿವರಿಸಿ ಹೇಳುವೆನು; ಕೇಳು:

ಹಿಂದೊಮ್ಮೆ ಇಂದ್ರನು ಯಜ್ಞವನ್ನು ಮಾಡುತ್ತಿದ್ದನು. ಮಹರ್ಷಿಗಳೆಲ್ಲರೂ ಮಂತ್ರವನ್ನು ಉಚ್ಚರಿಸುತ್ತಿದ್ದರು. ಋತ್ವಿಜರು ತಮ್ಮ-ತಮ್ಮ ಕರ್ಮಗಳಲ್ಲಿ ಏಕಾಗ್ರತೆಯುಳ್ಳವರಾಗಿದ್ದರು. ಯಜ್ಞಕರ್ಮವು ವಿಧ್ಯುಕ್ತವಾದ ರೀತಿಯಲ್ಲಿ ನಡೆಯುತ್ತಿದ್ದಿತು. ಉತ್ತಮಗುಣಯುಕ್ತವಾದ ಆಹುತಿಗಳನ್ನು ಅಗ್ನಿಯಲ್ಲಿ ಹೋಮಮಾಡುತ್ತಿದ್ದರು. ಒಬ್ಬ ದೇವತೆಯಾದ ಮೇಲೆ ಮತ್ತೊಬ್ಬ ದೇವತೆಯನ್ನು ಮಂತ್ರಪೂರ್ವಕವಾಗಿ ಆಹ್ವಾನಿಸುತ್ತಿದ್ದರು. ಶ್ರೇಷ್ಠರಾದ ಮಹರ್ಷಿಗಳು ಪ್ರೇಕ್ಷಕರಾಗಿ ಕುಳಿತಿದ್ದರು. ಬ್ರಾಹ್ಮಣರು ಪ್ರಸನ್ನಚಿತ್ತರಾಗಿ ಸುಸ್ವರವಾಗಿ ವೇದಮಂತ್ರಗಳನ್ನು ಪಠಿಸುತ್ತಿದ್ದರು. ಪಶುಗಳ ಆಲಂಭನಸಮಯವು ಸನ್ನಿಹಿತವಾಯಿತು. ಆಲಂಭನಕ್ಕಾಗಿ ಪಶುಗಳನ್ನು ಕರೆತಂದಾಗ ಮಹರ್ಷಿಗಳು ಕೃಪಾವಿಷ್ಟರಾದರು. ತಪೋಧನರಾದ ಮಹರ್ಷಿಗಳು ದೀನಭಾವದಿಂದಿದ್ದ ಆ ಪಶುಗಳನ್ನು ನೋಡಿ ಇಂದ್ರನನ್ನು ಸಂಧಿಸಿ ಪಶುಬಲಿಯಿಂದ ಕೂಡಿರುವ ಈ ಯಜ್ಞವು ಶುಭವಲ್ಲವೆಂದು ಹೇಳಿದರು:

ಅಪರಿಜ್ಞಾನಮೇತತ್ತೇ ಮಹಾಂತಂ ಧರ್ಮಮಿಚ್ಛತಃ ।
ನ ಹಿ ಯಜ್ಞೇ ಪಶುಗಣಾ ವಿಧಿದೃಷ್ಟಾಃ ಪುರಂದರ ॥೧೩॥

“ಪುರಂದರನೇ! ನೀನು ಈ ಯಜ್ಞದ ಮೂಲಕವಾಗಿ ಮಹಾಧರ್ಮವನ್ನು (ಪುಣ್ಯವನ್ನು) ಪಡೆಯಬೇಕೆಂದು ಇಚ್ಛಿಸಿರುವೆ. ಆದರೆ ಅಜ್ಞಾನವಶದಿಂದ ನೀನು ಪಶುಬಲಿಯಲ್ಲಿ ತೊಡಗಿರುವೆ. ಯಜ್ಞದಲ್ಲಿ ಪಶುಗಳನ್ನು ಬಲಿಕೊಡುವುದು ಶಾಸ್ತ್ರಗಳಲ್ಲಿ ಕಂಡುಬರುವುದಿಲ್ಲ.

ಧರ್ಮೋಪಘಾತಸ್ತ್ವೇಷ ಸಮಾರಮ್ಭಸ್ತವ ಪ್ರಭೋ ॥೧೪॥

ಪಶುಗಳ ಆಲಂಭನದಿಂದ ಕೂಡಿರುವ ಈ ಯಜ್ಞಸಮಾರಂಭವು ಧರ್ಮಕ್ಕೆ ಆಘಾತವನ್ನೇ ಉಂಟುಮಾಡುತ್ತದೆ. ಈ ಯಜ್ಞವು ಧರ್ಮಯುಕ್ತವಾದ ಯಜ್ಞವಾಗುವುದಿಲ್ಲ. ಹಿಂಸೆಯು ಎಂದಿಗೂ ಧರ್ಮವಾಗುವುದಿಲ್ಲ.

ಆಗಮೇನೈವ ತೇ ಯಜ್ಞಂ ಕುರ್ವನ್ತು ಯದಿ ಚೇಚ್ಛಸಿ ।
ವಿಧಿದೃಷ್ಟೇನ ಯಜ್ಞೇನ ಧರ್ಮಸ್ತೇ ಸುಮಹಾನ್ಭವೇತ್ ॥೧೫॥

ನೀನು ಇಚ್ಛಿಸುವುದಾದರೆ ಬ್ರಾಹ್ಮಣರು ಶಾಸ್ತ್ರಾನುಸಾರವಾಗಿಯೇ ಈ ಯಜ್ಞವನ್ನು ಮಾಡಲಿ. ಶಾಸ್ತ್ರವಿಧಿಗೆ ಅನುಸಾರವಾಗಿ ಯಜ್ಞಮಾಡುವುದರಿಂದ ನಿನಗೆ ಮಹತ್ತರವಾದ ಪುಣ್ಯವು ಲಭಿಸುತ್ತದೆ.

ಯಜ ಬೀಜೈಃ ಸಹಸ್ರಾಕ್ಷ ತ್ರಿವರ್ಷಪರಮೋಷಿತೈಃ ।
ಏಷ ಧರ್ಮೋ ಮಹಾಞ್ಶಕ್ರ ಮಹಾಗುಣಫಲೋದಯಃ ॥೧೬॥

ಸಹಸ್ರಾಕ್ಷನೇ! ಮೂರು ವರ್ಷ ಹಳೆಯದಾದ ಬೀಜಗಳಿಂದ (ಯವ-ಗೋಧಿ-ಮುಂತಾದ ಧಾನ್ಯಗಳಿಂದ) ಯಜ್ಞಮಾಡು. ಮಹಾಗುಣ ಗಳುಳ್ಳ ಫಲದಾಯಕವಾದ ಇದೇ ಮಹಾಧರ್ಮವಾಗಿದೆ.

ಜನಮೇಜಯ! ತತ್ತ್ವದರ್ಶಿಗಳಾದ ಋಷಿಗಳು ಹೇಳಿದ ಮಾತನ್ನು ಸ್ವಾಭಿಮಾನದ ಕಾರಣದಿಂದ ಇಂದ್ರನು ಮಾನ್ಯಮಾಡಲಿಲ್ಲ. ಮೋಹವಶ ನಾದನು. ಇಂದ್ರನ ಆ ಮಹಾಯಜ್ಞವು ನಡೆಯುತ್ತಿದ್ದ ಸಮಯದಲ್ಲಿ ತಪಸ್ವಿಗಳಲ್ಲಿ ಪರಸ್ಪರವಾಗಿ ದೊಡ್ಡದಾದ ವಿವಾದವೇ ಉಂಟಾಯಿತು. ಕೆಲವರು ಜಂಗಮಪ್ರಾಣಿಗಳ ಮೂಲಕ (ಪಶ್ವಾದಿಗಳ ಮೂಲಕವಾಗಿ) ಯಜ್ಞಮಾಡಬೇಕೆಂದು ಹೇಳುತ್ತಿದ್ದರು. ಮತ್ತೆ ಕೆಲವರು ಸ್ಥಾವರವಸ್ತುಗಳ ಮೂಲಕ (ಧಾನ್ಯ-ಫಲಾದಿಗಳ ಮೂಲಕ) ಯಜ್ಞಮಾಡುವುದೇ ಉಚಿತ ವೆಂದು ಹೇಳುತ್ತಿದ್ದರು. ತತ್ತ್ವದರ್ಶಿಗಳಾದ ಆ ಋಷಿಗಳು ಆ ವಿವಾದದಿಂದ ಬಹಳ ಖಿನ್ನರಾದರು. ಆಗ ಅವರು ಇಂದ್ರನೊಡನೆ ಸಮಾಲೋಚಿಸಿ ಉಪರಿಚರವಸುವಿನ ಬಳಿಗೆ ಹೋಗಿ ಅವನನ್ನು ಪ್ರಶ್ನಿಸಿದರು- "ಮಹೀಪತಿಯೇ! ಧರ್ಮದ ವಿಷಯದಲ್ಲಿ ನಾವೆಲ್ಲರೂ ಸಂದೇಹಗ್ರಸ್ತ ರಾಗಿದ್ದೇವೆ. ನೀನೀಗ ಸತ್ಯವನ್ನು ಹೇಳು. ಮಹಾಭಾಗನೇ! ಯಜ್ಞದ ವಿಷಯ ದಲ್ಲಿ ಶಾಸ್ತ್ರವು ಏನು ಹೇಳುತ್ತದೆ? ಮುಖ್ಯವಾದ ಪಶುಗಳ ಮೂಲಕವಾಗಿ ಯಜ್ಞಮಾಡಬೇಕೆಂದು ಹೇಳುವುದೋ? ಮೂರು ವರ್ಷ ಹಳೆಯದಾದ

ಬೀಜಗಳಿಂದಲೂ ರಸಗಳಿಂದಲೂ ಯಜ್ಞಮಾಡಬೇಕೆಂದು ಹೇಳು ವುದೋ?”

ಜನಮೇಜಯ! ಉಪರಿಚರವಸುವು ಅವರ ಮಾತನ್ನು ಕೇಳಿ ಪಕ್ಷ-ಪ್ರತಿಪಕ್ಷಗಳ ಸಾರಾಸಾರಗಳನ್ನು ವಿಚಾರಿಸದೆಯೇ ಯಾವ ಸಮಯದಲ್ಲಿ ಯಾವ ವಸ್ತುವು ಲಭಿಸುವುದೋ ಅದರಿಂದ ಯಜ್ಞಮಾಡಬೇಕೆಂದು ಹೇಳಿಬಿಟ್ಟನು. ಚೇದಿಗಳ ರಾಜನಾದ ಉಪರಿಚರವಸುವು ತನ್ನನ್ನು ಕೇಳಿದ ಪ್ರಶ್ನೆಗೆ ಅಸತ್ಯವಾದ ನಿರ್ಣಯವನ್ನು ಕೊಟ್ಟ ಕಾರಣ ಪಾತಾಳಲೋಕಕ್ಕೆ ಹೊರಟುಹೊದನು.

ತಸ್ಮಾನ್ನ ವಾಚ್ಯಂ ಹ್ಯೇಕೇನ ಬಹುಜ್ಞೇನಾಪಿ ಸಂಶಯೇ ।
ಪ್ರಜಾಪತಿಮುಪಾಹಾಯ ಸ್ವಯಂಭುವಮೃತೇ ಪ್ರಭುಮ್ ॥೨೪॥

ಆದುದರಿಂದ ಶಾಸ್ತ್ರವಿಷಯದಲ್ಲಿ ಯಾವುದಾದರೂ ಸಂದೇಹವುಂಟಾ ದಾಗ ಅನೇಕ ಶಾಸ್ತ್ರಗಳನ್ನು ತಿಳಿದವನಾಗಿದ್ದರೂ ಪ್ರಭುವಾದ ಸ್ವಯಂಭುವಾದ ಪ್ರಜಾಪತಿಯನ್ನು ಬಿಟ್ಟು ಯಾವ ಒಬ್ಬನೂ ವಿವೇಚಿಸದೇ ನಿರ್ಣಯವನ್ನು ಹೇಳಿಬಿಡಬಾರದು.

ತೇನ ದತ್ತಾನಿ ದಾನಾನಿ ಪಾಪೇನಾಶುದ್ಧಬುದ್ಧಿನಾ ।
ತಾನಿ ಸರ್ವಾಣ್ಯನಾದೃತ್ಯ ನಶ್ಯನ್ತಿ ವಿಪುಲಾನ್ಯಪಿ ॥೨೫॥

ಅಶುದ್ಧಬುದ್ಧಿಯವನಾದ ಪಾಪಿಷ್ಠನಾದ ಅಂತಹ ಪ್ರಾಣಿಹಿಂಸಕನಿಂದ ಕೊಡಲ್ಪಡುವ ದಾನವು ಎಷ್ಟೇ ಅಧಿಕವಾಗಿದ್ದರೂ ನಾಶಹೊಂದುತ್ತದೆ.

ತಸ್ಯಾಧರ್ಮಪ್ರವೃತ್ತಸ್ಯ ಹಿಂಸಕಸ್ಯ ದುರಾತ್ಮನಃ ।
ದಾನೇನ ಕೀರ್ತಿರ್ಭವತಿ ನ ಪ್ರೇತ್ಯೇಹ ಚ ದುರ್ಮತೇಃ ॥೨೬॥

ಅಧರ್ಮಪ್ರವೃತ್ತನಾದ, ದುರಾತ್ಮನಾದ ಪಶುಹಿಂಸಕನಿಗೆ ದಾನಮಾಡು ವುದರಿಂದ ಇಹ-ಪರಗಳೆರಡರಲ್ಲಿಯೂ ಕೀರ್ತಿಯು ಲಭಿಸುವುದಿಲ್ಲ.

ಅನ್ಯಾಯೋಪಗತಂ ದ್ರವ್ಯಮಭೀಕ್ಷ್ಣಂ ಯೋ ಹ್ಯಪಣ್ಡಿತಃ ।
ಧರ್ಮಾಭಿಶಙ್ಕೀ ಯಜತೇ ನ ಸ ಧರ್ಮಫಲಂ ಲಭೇತ್ ॥೨೭॥

ಯಾವ ಮೂರ್ಖನು ಅನ್ಯಾಯಮಾರ್ಗದಲ್ಲಿ ಬಾರಿ-ಬಾರಿಗೂ ದ್ರವ್ಯವನ್ನು ಸಂಗ್ರಹಿಸುತ್ತಾ ಅದೇ ಧರ್ಮವೆಂದು ಭಾವಿಸಿ ಹಾಗೆ ಸಂಗ್ರಹಿಸಿದ

ಧನದಿಂದ ಯಾಗಮಾಡುವನೋ–ಅಂತಹವನು ಧರ್ಮಫಲವನ್ನು ಹೊಂದುವುದಿಲ್ಲ.

ಧರ್ಮವೈತಂಸಿಕೋ ಯಸ್ತು ಪಾಪಾತ್ಮಾ ಪುರುಷಾಧಮಃ ।
ದದಾತಿ ದಾನಂ ವಿಪ್ರೇಭ್ಯೋ ಲೋಕವಿಶ್ವಾಸಕಾರಣಮ್ ॥೨೮॥

ಜನರಿಂದ ಹೊಗಳಿಸಿಕೊಳ್ಳಲು ತೋರಿಕೆಯ ಧರ್ಮಕಾರ್ಯಗಳನ್ನು ಮಾಡುವ ಹಿಂಸಕನಾದ, ಪಾಪಿಷ್ಠನಾದ ಪುರುಷಾಧಮನು ಲೋಕದ ಜನರಿಂದ ಹೆಚ್ಚು ವಿಶ್ವಾಸವನ್ನು ಗಳಿಸಿಕೊಳ್ಳುವ ಸಲುವಾಗಿ ಬ್ರಾಹ್ಮಣರಿಗೆ ದಾನಮಾಡುತ್ತಾನೆ.

ಪಾಪೇನ ಕರ್ಮಣಾ ವಿಪ್ರೋ ಧನಂ ಪ್ರಾಪ್ಯ ನಿರಂಕುಶಃ ।
ರಾಗಮೋಹಾನ್ವಿತಃ ಸೋಽನ್ತೇ ಕಲುಷಾಂ ಗತಿಮಶ್ನುತೇ ॥೨೯॥

ಯಾವ ಬ್ರಾಹ್ಮಣನು ಪಾಪಕರ್ಮದಿಂದ ಸ್ವೇಚ್ಛಾಪ್ರವೃತ್ತನಾಗಿ ರಾಗಮೋಹಗಳಿಗೆ ವಶನಾಗಿರುವನೋ–ಅವನು ಕಡೆಯಲ್ಲಿ ಕಲುಷಿತವಾದ ಗತಿಯನ್ನು (ದುರ್ಗತಿಯನ್ನು) ಹೊಂದುವನು.

ಅಪಿ ಸಂಚಯಬುದ್ಧಿರ್ಹಿ ಲೋಭಮೋಹವಶಂಗತಃ ।
ಉದ್ವೇಜಯತಿ ಭೂತಾನಿ ಪಾಪೇನಾಶುದ್ಧಬುದ್ಧಿನಾ ॥೩೦॥

ಲೋಭ-ಮೋಹಕ್ಕೆ ವಶನಾದ ಮನುಷ್ಯನು ಯಾವಾಗಲೂ ಯಾವುದೇ ಮಾರ್ಗದಿಂದಲಾದರೂ ಧನವನ್ನು ಸಂಗ್ರಹಿಸಬೇಕೆಂಬ ಬುದ್ಧಿಯುಳ್ಳ ವನಾಗಿರುತ್ತಾನೆ. ಪಾಪಿಷ್ಠವಾದ ಮತ್ತು ಅಶುದ್ಧವಾದ ಬುದ್ಧಿಯಿಂದ ಕೂಡಿದ ಅವನು ಪ್ರಾಣಿಗಳನ್ನು ತನ್ನ ಕುಕರ್ಮಗಳಿಂದ ಉದ್ವೇಗಗೊಳಿಸುತ್ತಾನೆ.

ಏವಂ ಲಬ್ಧ್ವಾ ಧನಂ ಮೋಹಾದ್ಯೋ ಹಿ ದದ್ಯಾದ್ಯಜೇತ ವಾ ।
ನ ತಸ್ಯ ಸ ಫಲಂ ಪ್ರೇತ್ಯ ಭುಙ್ಕ್ತೇ ಪಾಪಧನಾಗಮಾತ್ ॥೩೧॥

ಹೀಗೆ ಯಾವನು ಮೋಹವಶನಾಗಿ ಅನ್ಯಾಯಮಾರ್ಗದಿಂದ ಧನವನ್ನು ಸಂಪಾದಿಸಿ ಅದನ್ನು ದಾನಮಾಡುವನೋ ಅಥವಾ ಯಜ್ಞಮಾಡು ವನೋ– ಅವನು ಯಜ್ಞಮಾಡಿದ ಅಥವಾ ದಾನಮಾಡಿದ ಫಲವನ್ನು

ಅವಸಾನಾನಂತರ ಹೊಂದುವುದಿಲ್ಲ. ಪಾಪಕಾರ್ಯಗಳ ಮೂಲಕವಾಗಿ ಧನವನ್ನು ಸಂಗ್ರಹಿಸಿದುದೇ ಇದಕ್ಕೆ ಕಾರಣವಾಗಿರುತ್ತದೆ.

ಉಞ್ಛಂ ಮೂಲಂ ಫಲಂ ಶಾಕಮುದಪಾತ್ರಂ ತಪೋಧನಾಃ ।
ದಾನಂ ವಿಭವತೋ ದತ್ತ್ವಾ ನರಾಃ ಸ್ವರ್ಯಾನ್ತಿ ಧಾರ್ಮಿಕಾಃ ॥೩೨॥

ಗದ್ದೆ-ಹೊಲಗಳನ್ನು ಕೊಯ್ದನಂತರ ಆಯ್ದು ತಂದ ಕಾಳು, ಗೆಡ್ಡೆ-ಗೆಣಸುಗಳು, ಹಣ್ಣು-ಹಂಪಲುಗಳು, ಜಲಪಾತ್ರೆ–ಇವುಗಳನ್ನು ತಮ್ಮ ಶಕ್ತಿಗೆ ಅನುಗುಣರಾಗಿ ದಾನಮಾಡಿ ಮಹರ್ಷಿಗಳು ಸ್ವರ್ಗಕ್ಕೆ ಹೋಗುತ್ತಾರೆ.

ಏಷ ಧರ್ಮೋ ಮಹಾಯೋಗೋ ದಾನಂ ಭೂತದಯಾ ತಥಾ ।
ಬ್ರಹ್ಮಚರ್ಯಂ ತಥಾ ಸತ್ಯಮನುಕ್ರೋಶೋ ಧೃತಿಃ ಕ್ಷಮಾ ॥೩೩॥
ಸನಾತನಸ್ಯ ಧರ್ಮಸ್ಯ ಮೂಲಮೇತತ್ಸನಾತನಮ್ ।
ಶ್ರೂಯನ್ತೇ ಹಿ ಪುರಾವೃತ್ತಾ ವಿಶ್ವಾಮಿತ್ರಾದಯೋ ನೃಪಾಃ ॥೩೪॥

ಇದೇ ಧರ್ಮ; ಇದೇ ಮಹಾಯೋಗ. ದಾನ, ಪ್ರಾಣಿದಯೆ, ಬ್ರಹ್ಮಚರ್ಯ, ಸತ್ಯನಿಷ್ಠೆ, ಕಾರುಣ್ಯ, ಧೈರ್ಯ, ಕ್ಷಮೆ–ಇವು ಸನಾತನಧರ್ಮಕ್ಕೆ ಸನಾತನವಾದ ಬೇರುಗಳಾಗಿವೆ. ವಿಶ್ವಾಮಿತ್ರನೇ ಮುಂತಾದ ರಾಜರು ಇದರಿಂದಲೇ ಸಿದ್ಧಿಪಡೆದರೆಂಬುದನ್ನು ನಾವು ಕೇಳಿದ್ದೇವೆ.

ವಿಶ್ವಾಮಿತ್ರ, ಅಸಿತ, ಜನಕರಾಜ, ಕಕ್ಷಸೇನ, ಆರ್ಷ್ಟಿಷೇಣ, ಭೂಪಾಲನಾದ ಸಿಂಧುದ್ವೀಪ–ಇವರೇ ಮುಂತಾದ ಅನೇಕರಾಜರು ಮತ್ತು ತಪಸ್ವಿಗಳು ಸತ್ಯನಿಷ್ಠೆಯಿಂದಲೂ, ನ್ಯಾಯವಾದ ರೀತಿಯಲ್ಲಿ ಸಂಪಾದಿಸಿದ ಧನವನ್ನು ದಾನಮಾಡಿದುದರಿಂದಲೂ ಸಿದ್ಧಿಯನ್ನು ಪಡೆದಿರುತ್ತಾರೆ.

ಬ್ರಾಹ್ಮಣ-ಕ್ಷತ್ರಿಯ-ಶೂದ್ರರಲ್ಲಿ ಯಾರೇ ಆಗಲೀ ತಪಸ್ಸನ್ನು ಆಶ್ರಯಿಸಿ ದಾನಧರ್ಮವೆಂಬ ಅಗ್ನಿಯಿಂದ ಪರಿಶುದ್ಧರಾಗುವರೋ– ಅವರು ಸ್ವರ್ಗಕ್ಕೆ ಹೋಗುತ್ತಾರೆ.

೯೧ನೆಯ ಅಧ್ಯಾಯವು ಮುಗಿಯಿತು.

ಅಗಸ್ತ್ಯಮಹರ್ಷಿಗಳ ಯಜ್ಞದ ಕಥೆ

ಜನಮೇಜಯನು ಹೇಳುತ್ತಾನೆ:

ಧರ್ಮಾಗತೇನ ತ್ಯಾಗೇನ ಭಗವನ್ಸ್ವರ್ಗಮಸ್ತಿ ಚೇತ್ ।
ಏತನ್ಮೇ ಸರ್ವಮಾಚಕ್ಷ್ವ ಕುಶಲೋ ಹ್ಯಸಿ ಭಾಷಿತುಮ್ ॥೧॥

"ಪೂಜ್ಯರೇ! ಧರ್ಮದ ಮೂಲಕವಾಗಿ (ನ್ಯಾಯೋಚಿತವಾದ ರೀತಿಯಲ್ಲಿ) ಹಣವನ್ನು ಸಂಪಾದಿಸಿ ಅದನ್ನು ತ್ಯಾಗಮಾಡಿದರೆ ಸ್ವರ್ಗವು ಪ್ರಾಪ್ತವಾಗುವುದಾಗಿದ್ದರೆ–ಆ ವಿಷಯವನ್ನು ನನಗೆ ವಿವರಿಸಿ ಹೇಳಿರಿ. ನಿಶ್ಚಯವಾಗಿಯೂ ನೀವು ಪ್ರವಚನಮಾಡುವುದರಲ್ಲಿ ಬಹಳ ಕುಶಲರಾಗಿರುವಿರಿ.

ಉಂಛವೃತ್ತಿಯ ಬ್ರಾಹ್ಮಣನು ನ್ಯಾಯವಾದ ರೀತಿಯಲ್ಲಿ ಸಂಪಾದಿಸಿದ ಹಿಟ್ಟನ್ನು ದಾನಮಾಡಿ ಎಂತಹ ಮಹಾಫಲವನ್ನು ಪಡೆದನೆಂಬ ವಿಷಯವನ್ನು ನೀವು ನನಗೆ ಹೇಳಿದಿರಿ. ನೀವು ಹೇಳಿದುದೆಲ್ಲವೂ ನಿಜವಾಗಿಯೇ ಇದೆ. ಇದರಲ್ಲಿ ಸಂಶಯವೇ ಇಲ್ಲ. ಆದರೆ ಎಲ್ಲ ಯಜ್ಞಗಳ ವಿಷಯದಲ್ಲಿಯೂ ಈ ನಿಶ್ಚಯವೇ ಹೇಗೆ ಶ್ರೇಷ್ಠವಾಗುತ್ತದೆ? ಈ ವಿಷಯವನ್ನು ನೀವು ಸಮಗ್ರವಾಗಿ ಹೇಳುವ ಕೃಪೆಮಾಡಿರಿ."

ವೈಶಂಪಾಯನರು ಹೇಳುತ್ತಾರೆ:

"ಜನಮೇಜಯ! ಈ ವಿಷಯದಲ್ಲಿ ಹಿಂದೆ ಅಗಸ್ತ್ಯರು ಮಹಾಯಾಗವನ್ನು ಮಾಡುತ್ತಿದ್ದಾಗ ನಡೆದ ಪುರಾತನವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಹಿಂದೆ ಸರ್ವಪ್ರಾಣಿಗಳ ಹಿತದಲ್ಲಿಯೂ ಆಸಕ್ತರಾಗಿದ್ದ, ಮಹಾತೇಜಸ್ವಿಗಳಾದ ಅಗಸ್ತ್ಯರು ಹನ್ನೆರಡು ವರ್ಷಗಳಲ್ಲಿ ಮುಗಿಯುವ ಮಹಾಯಜ್ಞದ ದೀಕ್ಷೆಯನ್ನು ಕೈಗೊಂಡರು. ಮಹಾತ್ಮರಾದ ಅಗಸ್ತ್ಯರು ಮಾಡುತ್ತಿದ್ದ ಮಹಾಯಜ್ಞದಲ್ಲಿ ಯಜ್ಞೇಶ್ವರನಿಗೆ ಸಮಾನರಾದ, ತೇಜಸ್ವಿಗಳಾದ ಹೋತೃಗಳಿದ್ದರು. ಅವರಲ್ಲಿ ಕೆಲವರು ಫಲ-ಮೂಲಗಳನ್ನು ಆಹಾರವಾಗಿ ಸೇವಿಸುತ್ತಿದ್ದರು. ತಿನ್ನುವ ಪದಾರ್ಥಗಳನ್ನು ಕಲ್ಲಿನಲ್ಲಿ ಕುಟ್ಟಿ

ಭಕ್ಷಿಸುವ ಅಶ್ಮಕುಟ್ಟರಿದ್ದರು, ಸೂರ್ಯನ ಕಿರಣಗಳನ್ನೇ ಪಾನಮಾಡುವ ಮರೀಚಪರಿದ್ದರು. ಆಹಾರವು ಬೇಕೆ?–ಎಂದು ಇತರರು ಕೇಳಿದನಂತರವೇ ಅವರು ಕೊಟ್ಟ ಆಹಾರವನ್ನು ಸೇವಿಸುತ್ತಿದ್ದ ಪರಿಪೃಷ್ಟಿಕರಿದ್ದರು. ಯಜ್ಞ ಶಿಷ್ಟವಾದ ಅನ್ನವನ್ನು ಮಾತ್ರವೇ ಭೋಜನಮಾಡುವ ವೈಘಸಿಕರಿದ್ದರು. ಸದಾ ಕಾಲದಲ್ಲಿಯೂ ಬ್ರಹ್ಮತತ್ತ್ವದ ವಿಷಯವನ್ನೇ ಚರ್ಚಿಸುತ್ತಿದ್ದ ಪ್ರಸಂಖ್ಯಾನ ರಿದ್ದರು. ಯತಿಗಳೂ, ಬ್ರಹ್ಮಚಾರಿಗಳೂ ಅಲ್ಲಿ ಉಪಸ್ಥಿತರಾಗಿದ್ದರು. ಎಲ್ಲರೂ ಪ್ರತ್ಯಕ್ಷಧರ್ಮವನ್ನು ಪರಿಪಾಲಿಸುತ್ತಿದ್ದರು. ಜಿತಕ್ರೋಧರಾಗಿಯೂ ಜಿತೇಂದ್ರಿಯರಾಗಿಯೂ ಇದ್ದರು. ಮನಸ್ಸನ್ನು ನಿಗ್ರಹಿಸಿದ್ದರು. ಎಲ್ಲರೂ ಹಿಂಸೆಯನ್ನೂ, ಅಹಂಕಾರವನ್ನೂ ವರ್ಜಿಸಿದ್ದರು. ನಿತ್ಯವೂ ಶುದ್ಧವಾದ ಆಚಾರ-ವ್ಯವಹಾರಶೀಲರಾಗಿದ್ದರು. ಇಂದ್ರಿಯಗಳು ಅವರಿಗೆ ಯಾವ ವಿಧವಾದ ಬಾಧೆಗಳನ್ನೂ ಉಂಟುಮಾಡುತ್ತಿರಲಿಲ್ಲ. (ಅವರ ಮನಸ್ಸನ್ನು ವ್ಯಾಕುಲಗೊಳಿಸುತ್ತಿರಲಿಲ್ಲ.) ಅಂತಹ ಮಹರ್ಷಿಗಳು ಅಗಸ್ತ್ಯರು ಆರಂಭಿಸಿದ್ದ ಮಹಾಯಜ್ಞದಲ್ಲಿ ಭಾಗವಹಿಸಿದ್ದರು. ಪೂಜ್ಯರಾದ ಅಗಸ್ತ್ಯರು ಯಜ್ಞದ ಸಲುವಾಗಿ ತಮ್ಮ ಶಕ್ತಿಗೆ ಅನುಸಾರವಾಗಿ ಶುದ್ಧವಾದ ಅನ್ನವನ್ನೇ (ಧಾನ್ಯವನ್ನೇ) ನ್ಯಾಯವಾದ ರೀತಿಯಲ್ಲಿ ಸಂಗ್ರಹಿಸಿದ್ದರು. ಆ ಯಜ್ಞದಲ್ಲಿ ಅಯೋಗ್ಯವಾದ ವಸ್ತುವೆಂಬುದೇ ಯಾವುದೂ ಇರಲಿಲ್ಲ. ಹಾಗೆ ಅಲ್ಲಿ ಸೇರಿದ್ದ ಮುನಿಗಳು ಮಹಾ-ಮಹಾ ಯಾಗಗಳನ್ನು ಮಾಡುತ್ತಿದ್ದರು. ಹೀಗೆ ಅಗಸ್ತ್ಯರ ದ್ವಾದಶವಾರ್ಷಿಕಮಹಾಯಜ್ಞವು ನಡೆಯುತ್ತಿರಲಾಗಿ; ಇಂದ್ರನು ಮಳೆಗರೆ ಯುವುದನ್ನೇ ನಿಲ್ಲಿಸಿಬಿಟ್ಟನು. ಮಹಾತ್ಮರಾದ ಅಗಸ್ತ್ಯರ ಯಜ್ಞಕರ್ಮದ ಮಧ್ಯದಲ್ಲಿ ಅವಕಾಶವು ಸಿಕ್ಕಿದಾಗ ಶುದ್ಧವಾದ ಅಂತಃಕರಣದಿಂದ ಕೂಡಿದ್ದ ಮುನಿಗಳು ಒಂದೆಡೆಯಲ್ಲಿ ಸೇರಿ ಅಗಸ್ತ್ಯರಿಗೆ ಸಂಬಂಧಿಸಿದ ಈ ವಿಷಯವನ್ನು ಪರಸ್ಪರವಾಗಿ ಮಾತನಾಡಿಕೊಳ್ಳುತ್ತಿದ್ದರು.

"ಯಜ್ಞದ ಯಜಮಾನರಾಗಿರುವ ಇವರು ಮಾತ್ಸರ್ಯವಿಲ್ಲದೇ ನಮ್ಮೆಲ್ಲರಿಗೂ ಭೋಜನವನ್ನು ಮಾಡಿಸುತ್ತಿದ್ದಾರೆ. ಆದರೆ ಈ ಪರ್ಜನ್ಯನು ಮಳೆಗರೆಯುತ್ತಲೇ ಇಲ್ಲ. ಮಂದೆ ಆಹಾರಕ್ಕೆ ಬೇಕಾಗುವ ಧಾನ್ಯಗಳು ಹೇಗೆ ಬೆಳೆಯುವುವು? ಅಗಸ್ತ್ಯರ ಹನ್ನೆರಡು ವರ್ಷಗಳ ಪರ್ಯಂತವಾದ ಈ ಯಜ್ಞವು ದೊಡ್ಡ ಯಜ್ಞವೇ ಆಗಿದೆ. ಈ ಹನ್ನೆರಡು ವರ್ಷಗಳ ಕಾಲ

ಇಂದ್ರನು ಮಳೆಗರೆಯುವಂತೆಯೂ ಕಾಣುವುದಿಲ್ಲ. ಆದುದರಿಂದ ಈ ವಿಷಯವನ್ನು ನೀವೆಲ್ಲರೂ ಪರಸ್ಪರವಾಗಿ ಸಮಾಲೋಚಿಸಿ ಮಹಾತಪಸ್ವಿಗಳಾದ ಬುದ್ಧಿಶಾಲಿಗಳಾದ ಅಗಸ್ತ್ಯಮಹರ್ಷಿಗಳ ವಿಷಯದಲ್ಲಿ–ಆರಂಭಿಸಿರುವ ಯಜ್ಞವು ನಿರ್ವಿಘ್ನವಾಗಿ ನಡೆಯುವಂತೆ ಅನುಗ್ರಹಿಸುವುದು ಯೋಗ್ಯವಾಗಿದೆ."

ಯಜ್ಞದಲ್ಲಿ ಭಾಗವಹಿಸಿದ ಮಹರ್ಷಿಗಳೊಬ್ಬರು ಇತರ ಸದಸ್ಯರನ್ನು ಕುರಿತು ಹೀಗೆ ಹೇಳಲಾಗಿ, ಪ್ರತಾಪಶಾಲಿಗಳಾದ ಅಗಸ್ತ್ಯರು ಮುನಿಗಳೆಲ್ಲರಿಗೂ ತಲೆಬಾಗಿ ನಮಸ್ಕರಿಸಿ ಹೇಳಿದರು:

ಯದಿ ದ್ವಾದಶವರ್ಷಾಣಿ ನ ವರ್ಷಿಷ್ಯತಿ ವಾಸವಃ ।
ಚಿನ್ತ್ಯಾಯಜ್ಞಂ ಕರಿಷ್ಯಾಮಿ ವಿಧಿರೇಷ ಸನಾತನಃ ॥೧೭॥

"ಪೂಜ್ಯರೇ! ಒಂದು ವೇಳೆ ಇಂದ್ರನು ಈ ಹನ್ನೆರಡು ವರ್ಷಗಳ ಕಾಲ ಮಳೆಗರೆಯದೆಯೇ ಹೋದರೆ ಮಾನಸಿಕಯಜ್ಞವನ್ನೇ ಮಾಡುತ್ತೇನೆ. ಈ ವಿಧಿಯು ಹಿಂದಿನಿಂದಲೂ ನಡೆದುಕೊಂಡು ಬಂದಿದೆ.

ಯದಿ ದ್ವಾದಶವರ್ಷಾಣಿ ನ ವರ್ಷಿಷ್ಯತಿ ವಾಸವಃ ।
ಸ್ಪರ್ಶಯಜ್ಞಂ ಕರಿಷ್ಯಾಮಿ ವಿಧಿರೇಷ ಸನಾತನಃ ॥೧೮॥

ಇಂದ್ರನೇನಾದರೂ ಹನ್ನೆರಡು ವರ್ಷಗಳು ಮಳೆಗರೆಯದಿದ್ದರೆ-ಸ್ಪರ್ಶಯಜ್ಞವನ್ನೇ ಮಾಡುತ್ತೇನೆ. ಇದೂ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ವಿಧಿಯಾಗಿದೆ.

ಯದಿ ದ್ವಾದಶವರ್ಷಾಣಿ ನ ವರ್ಷಿಷ್ಯತಿ ವಾಸವಃ ।
ಧ್ಯೇಯಾತ್ಮನಾ ಹರಿಷ್ಯಾಮಿ ಯಜ್ಞಾನೇತಾನ್ಯತವ್ರತಃ ॥೧೯॥

ಇಂದ್ರನೇನಾದರೂ ಹನ್ನೆರಡು ವರ್ಷಗಳ ಕಾಲ ಮಳೆಗರೆಯದಿದ್ದರೆ ವ್ರತ-ನಿಯಮಗಳನ್ನು ಪಾಲಿಸುತ್ತಾ ಧ್ಯಾನದ ಮೂಲಕವಾಗಿ ಧ್ಯೇಯರೂಪದಿಂದಿರುವ ಈ ಯಜ್ಞಗಳ ಅನುಷ್ಠಾನವನ್ನು ಮಾಡುತ್ತೇನೆ.

ಬೀಜಯಜ್ಞೋ ಮಯಾಯಂ ವೈ ಬಹುವರ್ಷಸಮಾಚಿತಃ ।
ಬೀಜೈರ್ಹಿ ತಂ ಕರಿಷ್ಯಾಮಿ ನಾತ್ರ ವಿಘ್ನೋ ಭವಿಷ್ಯತಿ ॥೨೦॥

ನಾನು ಬೀಜಯಜ್ಞಗಳನ್ನು ಮಾಡಲೆಂದೇ ಅನೇಕ ವರ್ಷಗಳಿಂದ ಬೀಜಗಳನ್ನು ಸಂಗ್ರಹಿಸಿದ್ದೇನೆ. ಆ ಬೀಜಗಳಿಂದಲೇ ನಾನೀಗ ಯಜ್ಞವನ್ನು ಮಾಡುತ್ತೇನೆ. ಇದರಲ್ಲಿ ಯಾವ ವಿಘ್ನವೂ ಉಂಟಾಗುವುದಿಲ್ಲ.

ನೇದಂ ಶಕ್ಯಂ ವೃಥಾ ಕರ್ತುಂ ಮಮ ಸತ್ರಂ ಕಥಂಚನ ।
ವರ್ಷಿಷ್ಯತೀಹ ವಾ ದೇವೋ ನ ವಾ ವರ್ಷಂ ಭವಿಷ್ಯತಿ ॥೨೧॥

ಇಂದ್ರನು ಇಲ್ಲಿ ಮಳೆಗರೆಯಲಿ; ಮಳೆಗರೆಯದಿರಲಿ–ನಾನು ಆರಂಭಿಸಿರುವ ಯಾಗವನ್ನು ಮಾತ್ರ ಯಾವುದೇ ಕಾರಣದಿಂದಲೂ ವ್ಯರ್ಥಗೊಳಿಸಲು ಸಾಧ್ಯವಾಗುವುದಿಲ್ಲ.

ಅಥವಾಭ್ಯರ್ಥನಾಮಿನ್ದ್ರೋ ನ ಕರಿಷ್ಯತಿ ಕಾಮತಃ ।
ಸ್ವಯಮಿನ್ದ್ರೋ ಭವಿಷ್ಯಾಮಿ ಜೀವಯಿಷ್ಯಾಮಿ ಚ ಪ್ರಜಾಃ ॥೨೨॥

ಮಳೆಗರೆಯಬೇಕೆಂಬ ನನ್ನ ಪ್ರಾರ್ಥನೆಯನ್ನೂ ಇಂದ್ರನೇನಾದರೂ ಸ್ವೇಚ್ಛೆಯಿಂದ ನಿರಾಕರಿಸಿದರೆ–ನಾನೇ ಇಂದ್ರನಾಗುತ್ತೇನೆ. ಪ್ರಜೆಗಳ ಜೀವವನ್ನು ರಕ್ಷಿಸುತ್ತೇನೆ.

ಯೋ ಯದಾಹಾರಜಾತಶ್ಚ ಸ ತಥೈವ ಭವಿಷ್ಯತಿ ।
ವಿಶೇಷಂ ಚೈವ ಕರ್ತಾಸ್ಮಿ ಪುನಃ ಪುನರತೀವ ಹಿ ॥೨೩॥

ಯಾವನು ಯಾವ ಆಹಾರದಿಂದ ಹುಟ್ಟಿರುವನೋ–ಅವನು ಅದೇ ಆಹಾರವನ್ನೇ ಅವಲಂಬಿಸಬೇಕಾಗುತ್ತದೆ. ಅದಕ್ಕಾಗಿ ನಾನು ಪುನಃ ಪುನಃ ವಿಶೇಷವಾದ ಆಹಾರಕ್ಕೂ ವ್ಯವಸ್ಥೆಮಾಡುತ್ತೇನೆ.

ಅದ್ಯೇಹ ಸ್ವರ್ಣಮಭ್ಯೇತು ಯಚ್ಚಾನ್ಯದ್ವಸು ಕಿಂಚನ ।
ತ್ರಿಷು ಲೋಕೇಷು ಯಚ್ಚಾಸ್ತಿ ತದಿಹಾಗಮ್ಯತಾಂ ಸ್ವಯಮ್ ॥೨೪॥

ಮೂರು ಲೋಕಗಳಲ್ಲಿಯೂ ಎಷ್ಟು ಸುವರ್ಣವಿದೆಯೋ ಮತ್ತು ಇತರ ಐಶ್ವರ್ಯಗಳಿವೆಯೋ–ಅವೆಲ್ಲವೂ ಇಲ್ಲಿಗೆ ತಾವಾಗಿಯೇ ಆಗಮಿಸಲಿ.

ದಿವ್ಯಾಶ್ಚಾಪ್ಸರಸಾಂ ಸಂಘಾ ಗನ್ಧರ್ವಾಶ್ಚ ಸಕಿನ್ನರಾಃ ।
ವಿಶ್ವಾವಸುಶ್ಚ ಯೇ ಚಾನ್ಯೇ ತೇಽಪ್ಯುಪಾಸನ್ತು ಮೇ ಮಖಮ್ ॥೨೫॥

ದೇವಲೋಕದ ಅಪ್ಸರೆಯರ ಸಮುದಾಯವೂ, ವಿಶ್ವಾವಸುವೇ

ಮುಂತಾದ ಗಂಧರ್ವಮುಖ್ಯರೂ, ಕಿನ್ನರರೂ ಇಲ್ಲಿಗೆ ಆಗಮಿಸಿ ನಾನು ಮಾಡುತ್ತಿರುವ ಯಜ್ಞವನ್ನು ಉಪಾಸನೆಮಾಡಲಿ.

ಉತ್ತರೇಭ್ಯಃ ಕುರುಭ್ಯಶ್ಚ ಯತ್ಕಿಂಚಿದ್ವಸು ವಿದ್ಯತೇ ।
ಸರ್ವಂ ತದಿಹ ಯಜ್ಞೇಷು ಸ್ವಯಮೇವೋಪತಿಷ್ಠತು ॥೨೬॥
ಸ್ವರ್ಗಃ ಸ್ವರ್ಗಸದಶ್ಚೈವ ಧರ್ಮಶ್ಚ ಸ್ವಯಮೇವ ತು ॥೨೭॥

ಉತ್ತರಕುರುಗಳಲ್ಲಿ ಯಾವ ಐಶ್ವರ್ಯವಿರುವುದೋ–ಆ ಐಶ್ವರ್ಯವೆಲ್ಲವೂ ತಾವಾಗಿಯೇ ಈ ಯಜ್ಞಕ್ಕೆ ಆಗಮಿಸಲಿ. ಸ್ವರ್ಗ, ಸ್ವರ್ಗವಾಸಿಗಳಾದ ದೇವತೆಗಳು ಮತ್ತು ಧರ್ಮ–ಇವರೂ ತಾವಾಗಿಯೇ ಈ ಯಜ್ಞಕ್ಕೆ ಆಗಮಿಸಲಿ.”

ಜನಮೇಜಯ! ಪ್ರಜ್ವಲಿಸುವ ಅಗ್ನಿಯ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ ಅಗಸ್ತ್ಯರು ಹೀಗೆ ಹೇಳಿದೊಡನೆಯೇ ಮುನಿಗಳ ತಪಸ್ಸಿನ ಪ್ರಭಾವದಿಂದಾಗಿ ಎಲ್ಲ ಐಶ್ವರ್ಯಗಳೂ ಅಲ್ಲಿಗೆ ಬಂದುವು. ಎಲ್ಲ ದೇವತೆಗಳೂ ಗಂಧರ್ವಾಪ್ಸರ-ಕಿನ್ನರರೊಡನೆ ಆಗಮಿಸಿದರು. ಅದನ್ನು ನೋಡಿ ಅಲ್ಲಿ ಸದಸ್ಯರಾಗಿದ್ದ ಋಷಿಗಳೆಲ್ಲರೂ ಹೃಷ್ಟರಾದರು. ಅಗಸ್ತ್ಯರ ತಪೋಬಲವನ್ನು ಪ್ರತ್ಯಕ್ಷವಾಗಿಯೇ ನೋಡಿ, ಎಲ್ಲರೂ ವಿಸ್ಮಿತರಾಗಿ ಮಹಾರ್ಥವತ್ತಾದ ಈ ಮಾತನ್ನು ಹೇಳಿದರು:

“ಮಹರ್ಷಿಗಳೇ! ನಿಮ್ಮ ಮಾತಿನಿಂದ ನಾವು ಸುಪ್ರೀತರಾಗಿದ್ದೇವೆ. ಆದರೆ ನಿಮ್ಮ ತಪಸ್ಸನ್ನು ವ್ಯರ್ಥಗೊಳಿಸಲು ಬಯಸುವುದಿಲ್ಲ. ನೀವೀಗ ಮಾಡುತ್ತಿರುವ ಯಜ್ಞಗಳಿಂದಲೇ ನಾವು ಸಂತುಷ್ಟರಾಗಿದ್ದೇವೆ. ನ್ಯಾಯದಿಂದ ಸಂಪಾದಿಸಿದ ಅನ್ನವನ್ನೇ ಭುಂಜಿಸಲು ಇಷ್ಟಪಡುತ್ತೇವೆ. ಯಜ್ಞ, ದೀಕ್ಷೆ, ಹೋಮ ಮತ್ತು ನಾವು ಅಪೇಕ್ಷಿಸಿದ ಯಾವುದೇ ವಸ್ತುಗಳೂ ಇಲ್ಲಿ ನಮಗೆ ಲಭ್ಯವಾಗುತ್ತವೆ. ನ್ಯಾಯದಿಂದ ಸಂಪಾದಿಸಿದ ಆಹಾರವನ್ನೇ ತೆಗೆದುಕೊಳ್ಳುತ್ತಾ ನಮ್ಮ-ನಮ್ಮ ಕರ್ಮಗಳಲ್ಲಿ ನಿರತರಾಗಿರುತ್ತೇವೆ. ನಾವು ಬ್ರಹ್ಮಚರ್ಯವನ್ನು ಪರಿಪಾಲಿಸುತ್ತಾ ನ್ಯಾಯವಾದ ರೀತಿಯಲ್ಲಿ ವೇದಗಳನ್ನು ಅಧ್ಯಯನಮಾಡಿದೆವು. ಅನಂತರ ಉಚಿತವಾದ ರೀತಿಯಲ್ಲಿ ಗೃಹಸ್ಥಾಶ್ರಮಗಳನ್ನು ಪಾಲಿಸಿದೆವು.

ಈಗ ಮನೆಯಿಂದ ಹೊರಟು ವಾನಪ್ರಸ್ಥರಾಗಿದ್ದೇವೆ. ಇಲ್ಲಿ ನಾವು ಧರ್ಮಾನುಸಾರವಾಗಿ ತಪಸ್ಸನ್ನೂ ಆಚರಿಸಿದೆವು. ಹಿಂಸೆಯಿಂದ ರಹಿತವಾಗಿರುವ ನಿಮ್ಮ ಬುದ್ಧಿಯು ನಮಗೆ ಬಹಳ ಪ್ರಿಯವಾಗಿದೆ. ನೀವು ಯಾವಾಗಲೂ ಯಜ್ಞಗಳಲ್ಲಿ ಅಹಿಂಸೆಯನ್ನೇ ಪ್ರತಿಪಾದಿಸುವಿರಿ. ಇದರಿಂದ ನಮಗೆ ಹೆಚ್ಚಿನ ಸಂತೋಷವುಂಟಾಗುತ್ತದೆ. ಯಜ್ಞವು ಸಮಾಪ್ತವಾದನಂತರ ನಿಮ್ಮಿಂದ ಬೀಳ್ಕೊಂಡು ನಾವು ನಮ್ಮ-ನಮ್ಮ ಆಶ್ರಮಗಳಿಗೆ ಹೋಗುತ್ತೇವೆ."

ಜನಮೇಜಯ! ಮಹರ್ಷಿಗಳೆಲ್ಲರೂ ಹಾಗೆ ಹೇಳುತ್ತಿರುವಾಗ ಮಹಾ ತೇಜಸ್ವಿಯಾದ ದೇವರಾಜನಾದ ಪುರಂದರನು ಅಗಸ್ತ್ಯರ ತಪೋಬಲವನ್ನು ನೋಡಿ ಸಮೃದ್ಧಿಯಾಗಿ ಮಳೆಗರೆದನು. ಅಮಿತಪರಾಕ್ರಮನಾದ ಇಂದ್ರನು ಅಗಸ್ತ್ಯರ ಯಜ್ಞವು ಮುಗಿಯುವವರೆಗೂ ಕೇಳಿದಷ್ಟು ಮಳೆಯನ್ನು ಸುರಿಸುತ್ತಿದ್ದನು. ತ್ರಿದಶೇಶ್ವರನು ತಾನಾಗಿಯೇ ಬೃಹಸ್ಪತಿಯನ್ನು ಮುಂದೆ ಮಾಡಿಕೊಂಡು ಯಜ್ಞಭೂಮಿಗೂ ಆಗಮಿಸಿ ಅಗಸ್ತ್ಯರನ್ನು ಪ್ರಸನ್ನಗೊಳಿಸಿದನು. ಪರಮಪ್ರೀತರಾದ ಅಗಸ್ತ್ಯರ ಹನ್ನೆರಡು ವರ್ಷಗಳ ಯಜ್ಞವು ಮುಗಿದನಂತರ ಆರ್ತ್ವಿಜ್ಯವನ್ನು ವಹಿಸಿದ್ದ ಮುನಿಗಳನ್ನು ಯಥಾವಿಧಿಯಾಗಿ ಸತ್ಕರಿಸಿ ಅವರವರ ಮನೆಗಳಿಗೆ ಕಳುಹಿಸಿಕೊಟ್ಟರು."

ಜನಮೇಜಯನು ಪ್ರಶ್ನಿಸುತ್ತಾನೆ:

ಕೋಽಸೌ ನಕುಲರೂಪೇಣ ಶಿರಸಾ ಕಾಞ್ಚನೇನ ವೈ ।
ಪ್ರಾಹ ಮಾನುಷವದ್ವಾಚಮೇತತ್ಪೃಷ್ಟೋ ವದಸ್ವ ಮೇ ॥೬॥

"ಮಹರ್ಷಿಗಳೇ! ಸುವರ್ಣಮಯವಾದ ಶಿರಸ್ಸಿನಿಂದ ಕೂಡಿದ್ದ ಮುಂಗುಸಿಯ ರೂಪದಿಂದ ಧರ್ಮರಾಜನ ಯಜ್ಞಶಾಲೆಗೆ ಬಂದಿದ್ದವನು ಯಾರು? ಮನುಷ್ಯನಂತೆಯೇ ಮಾತನಾಡಿದುದರಿಂದ ಯಾವನೋ ಮನುಷ್ಯನು ಮುಂಗುಸಿಯ ರೂಪದಿಂದ ಅಲ್ಲಿಗೆ ಬಂದಿರಬಹುದೆಂದು ಭಾವಿಸುತ್ತೇನೆ. ಈ ವಿಷಯವನ್ನು ದಯಮಾಡಿ ಹೇಳಿರಿ."

ವೈಶಂಪಾಯನರು ಹೇಳುತ್ತಾರೆ:

"ಜನಮೇಜಯ! ಈ ವಿಷಯವನ್ನು ನೀನು ಈ ಹಿಂದೆ ಪ್ರಶ್ನಿಸಲಿಲ್ಲ; ಆದುದರಿಂದ ನಾನು ಹೇಳಲಿಲ್ಲ. ಆ ಮುಂಗುಸಿಯು ಯಾರೆಂಬುದನ್ನೂ

ಅದಕ್ಕೆ ಮನುಷ್ಯರಂತೆ ಮಾತನಾಡಲು ಹೇಗೆ ಸಾಧ್ಯವಾಯಿತೆಂಬುದನ್ನೂ ಹೇಳುವೆನು; ಕೇಳು.

ಹಿಂದೊಮ್ಮೆ ಮಹಾತ್ಮನಾದ ಜಮದಗ್ನಿಯು ಶ್ರಾದ್ಧಮಾಡಲು ಸಂಕಲ್ಪಿಸಿದನು. ಆ ಸಮಯಕ್ಕೆ ಸರಿಯಾಗಿ ಹೋಮಧೇನುವು ಅವನ ಸಮೀಪಕ್ಕೆ ಬಂದಿತು. ಮಹರ್ಷಿಯು ಅದರ ಹಾಲನ್ನು ತಾನೇ ಕರೆದನು. ಆ ಹಾಲನ್ನು ನೂತನವಾದ, ದೃಢವಾದ ಮತ್ತು ಪವಿತ್ರವಾದ ಪಾತ್ರೆಯಲ್ಲಿಟ್ಟನು. ಆ ಪಾತ್ರೆಯಲ್ಲಿ ಧರ್ಮನು ಕ್ರೋಧದ ರೂಪದಿಂದ ಪ್ರವೇಶಿಸಿದನು. ಋಷಿಗೆ ಅಪ್ರಿಯವಾದ ಕಾರ್ಯವನ್ನು ಮಾಡಿದರೆ ಅದಕ್ಕೆ ಮುನಿಶ್ರೇಷ್ಠನ ಪ್ರತಿಕ್ರಿಯೆಯನ್ನು ತಿಳಿಯುವ ಆಶಯದಿಂದ ಧರ್ಮನು ಪಾತ್ರೆಯಲ್ಲಿದ್ದ ಆ ಹಾಲನ್ನು ಕೆಡಿಸಿದನು. ಧರ್ಮನು ಹಾಲನ್ನು ಕೆಡಿಸಿರುವನೆಂಬುದನ್ನು ತಿಳಿದ ಋಷಿಯು ಅವನ ಮೇಲೆ ಕೋಪಗೊಳ್ಳಲಿಲ್ಲ. ಮರುಕ್ಷಣದಲ್ಲಿಯೇ ಕ್ರೋಧರೂಪನಾಗಿದ್ದ, ಅಸಹನಶೀಲನಾದ ಧರ್ಮನು ಬ್ರಾಹ್ಮಣನ ರೂಪವನ್ನು ಧರಿಸಿ ಭಾರ್ಗವನಿಗೆ ಹೇಳಿದನು:

ಜಿತೋಽಸ್ಮೀತಿ ಭೃಗುಶ್ರೇಷ್ಠ ಭೃಗವೋ ಹ್ಯತಿರೋಷಣಾಃ ।
ಲೋಕೇ ಮಿಥ್ಯಾಪ್ರವಾದೋಽಯಂ ಯತ್ತ್ವಯಾಸ್ಮಿ ವಿನಿರ್ಜಿತಃ ॥

“ಮುನಿಶ್ರೇಷ್ಠನೇ! ನಿನ್ನಿಂದ ನಾನು ಪರಾಜಿತನಾಗಿದ್ದೇನೆ. ಭೃಗುವಂಶದವರು ಮಹಾಕೋಪಿಷ್ಠರೆಂದು ಲೋಕದಲ್ಲಿ ಪ್ರವಾದವಿದ್ದಿತು. (ನೀನು ನನ್ನನ್ನು ಜಯಿಸಿದ ಕಾರಣ) ಆ ಪ್ರವಾದವಿಂದು ಮಿಥ್ಯೆಯಾಗಿ ಪರಿಣಮಿಸಿತು. ಕ್ಷಮಾವಂತನಾದ, ಮಹಾತ್ಮನಾದ ನಿನಗೆ ನಾನು ಅಧೀನನಾದೆನು. ಸತ್ಪುರುಷನೇ! ನಿನ್ನ ತಪಸ್ಸಿಗೆ ನಾನು ಭಯಪಡುತ್ತೇನೆ. ನನ್ನ ಮೇಲೆ ಕೃಪೆದೋರು.”

ಜಮದಗ್ನಿಯು ಹೇಳುತ್ತಾನೆ:

“ಕ್ರೋಧನೇ! ನಿನ್ನನ್ನು ಸಾಕ್ಷಾತ್ತಾಗಿ ನೋಡಿದಂತಾಯಿತು. ನೀನು ನಿಶ್ಚಿಂತನಾಗಿ ಹೋಗಬಹುದು. ನೀನು ನನಗೆ ಯಾವ ಅಪರಾಧವನ್ನೂ ಮಾಡಿಲ್ಲ. ಆದುದರಿಂದ ನಿನ್ನ ಮೇಲೆ ನನಗೆ ಕೋಪವಿಲ್ಲ. ಪಿತೃಗಳ

ಶ್ರಾದ್ಧವನ್ನು ಸಂಕಲ್ಪಿಸಿ ಅವರ ಸಲುವಾಗಿ ನಾನು ಈ ಹಾಲನ್ನು ಇಟ್ಟಿದ್ದೆನು. ಈ ಹಾಲಿಗೆ ಮಹಾಭಾಗ್ಯಶಾಲಿಗಳಾದ ಪಿತೃಗಳು ಅಧಿಪತಿಗಳು. ಆದುದರಿಂದ ಈಗಲೇ ನೀನು ಅವರ ಬಳಿಗೆ ಹೋಗಿ ಈ ವಿಷಯವನ್ನು ತಿಳಿಯಪಡಿಸು."

ಜಮದಗ್ನಿಯು ಹೀಗೆ ಹೇಳಿದೊಡನೆಯೇ ಭಯಪೀಡಿತನಾದ ಕ್ರೋಧನು ಅಲ್ಲಿಯೇ ಕಣ್ಮರೆಯಾದನು. ಮುಂದೆ ಅವನು ಪಿತೃದೇವತೆಗಳ ಶಾಪದಿಂದ ಮುಂಗುಸಿಯಾದನು. ಅದಕ್ಕೆ ಮೊದಲು ಕ್ರೋಧರೂಪಿಯಾಗಿದ್ದ ಧರ್ಮನು ಶಾಪದ ಅಂತ್ಯಕ್ಕಾಗಿ ಪಿತೃದೇವತೆಗಳನ್ನು ಪ್ರಾರ್ಥನೆಯಿಂದ ಪ್ರಸನ್ನಗೊಳಿಸಿದನು. ಸುಪ್ರೀತರಾದ ಪಿತೃಗಳು-ಕ್ರೋಧನು ಧರ್ಮರಾಜನನ್ನು ನಿಂದಿಸಿದಾಗ ಶಾಪದ ವಿಮೋಚನೆಯಾಗುವುದೆಂದು ಹೇಳಿದರು. ಪಿತೃದೇವತೆಗಳು ಹೀಗೆ ಹೇಳಿದನಂತರ ಮುಂಗುಸಿಯಾದ ಧರ್ಮನು ಬಹಳ ಜುಗುಪ್ಸಿತನಾಗಿ ದೇಶ-ದೇಶಗಳಲ್ಲಿದ್ದ ಯಜ್ಞಮಂಟಪಗಳನ್ನೂ ಮತ್ತು ಧರ್ಮಾರಣ್ಯವನ್ನೂ ಸುತ್ತಾಡಿಕೊಂಡು ಕಡೆಗೆ ಧರ್ಮರಾಜನ ಯಜ್ಞಮಂಟಪಕ್ಕೂ ಆಗಮಿಸಿದನು. ಮುಂಗುಸಿಯ ರೂಪದಲ್ಲಿದ್ದ ಕ್ರೋಧನು ಸೇರುಹಿಟ್ಟಿನ ದಾನದ ಮಹಿಮೆಯನ್ನು ಹೇಳಿ ಧರ್ಮಪುತ್ರನ ಯಾಗವನ್ನು ನಿಂದಿಸಿ, ಶಾಪದಿಂದ ಬಿಡುಗಡೆಹೊಂದಿ ಪುನಃ ಧರ್ಮನಾಗಿ ಯುಧಿಷ್ಠಿರನಲ್ಲಿಯೇ ಸೇರಿಹೋದನು. ಮಹಾತ್ಮನಾದ ಯುಧಿಷ್ಠಿರನ ಯಾಗವು ಸಮಾಪ್ತವಾದನಂತರ ಈ ಘಟನೆಯು ನಡೆಯಿತು. ನಾವೆಲ್ಲರೂ ನೋಡುತ್ತಿದ್ದಂತೆಯೇ ಮುಂಗುಸಿಯು ಅದೃಶ್ಯವಾಯಿತು."

(ಅಶ್ವಮೇಧಿಕಪರ್ವದ ಇದೇ ಅಧ್ಯಾಯದಲ್ಲಿ ಮುಂದುವರಿದಿರುವ ವೈಷ್ಣವಧರ್ಮ ಮತ್ತು ಅನುಶಾಸನಪರ್ವದ ೧೪೫ನೆಯ ಅಧ್ಯಾಯದಲ್ಲಿ ಮುಂದುವರಿದಿರುವ ಉಮಾಮಹೇಶ್ವರಸಂವಾದಾಂತರ್ಗತವಾದ ರಾಜಧರ್ಮ-ಇವೆರಡೂ ಅನೇಕ ವಿಷಯಗಳನ್ನೊಳಗೊಂಡು ಲೋಕಪ್ರಸಿದ್ಧವಾಗಿದ್ದರೂ ಮೂಲಭಾರತದಲ್ಲಿ ಇದು ಸೇರಿಲ್ಲವೆಂದೂ ಪ್ರಕ್ಷಿಪ್ತ ಪ್ರಕರಣವೆಂದೂ ವಿದ್ವಾಂಸರ ಅಭಿಪ್ರಾಯವಾಗಿದೆ. ನೀಲಕಂಠದ ವ್ಯಾಖ್ಯಾನವಿರುವ ಪುಸ್ತಕಗಳಲ್ಲಿ ಈ ಪ್ರಕರಣಗಳಿಲ್ಲ. ಇತ್ತೀಚೆಗೆ ಸಂಶೋಧಿಸಿ ಪ್ರಕಟಿಸಿರುವ ಭಂ. ರಿ. ಇನ್ಸ್ಟಿಟ್ಯೂಟಿನವರ ಪುಸ್ತಕದಲ್ಲಿಯೂ ಈ ಪ್ರಕರಣಗಳಿಲ್ಲ. ಗೋರಖಪುರ ಗೀತಾಪ್ರೆಸ್ಸಿನವರು ಪ್ರಕಟಿಸಿರುವ ಪುಸ್ತಕದಲ್ಲಿ ಮಾತ್ರ

ಇದನ್ನು ಪ್ರಕಟಿಸಿದ್ದರೂ ಶ್ಲೋಕಸಂಖ್ಯೆಯನ್ನು ಕೊಡದೇ ಪ್ರಕ್ಷಿಪ್ತದಂತೆಯೇ ಪ್ರಕಟಿಸಿದ್ದಾರೆ. ಪರ್ವಸಂಗ್ರಹಪರ್ವದಲ್ಲಿಯೂ ಈ ಪ್ರಕರಣಗಳು ಸೂಚಿತವಾಗಿಲ್ಲ. ಆದರೂ ಪೂರ್ವಸೂರಿಗ್ರಾಹ್ಯವಾದುದರಿಂದಲೂ ವಿಷಯಗಳು ಸಂಗ್ರಹಯೋಗ್ಯವಾಗಿರುವುದರಿಂದಲೂ ಈ ಪ್ರಕರಣಗಳನ್ನು ನಾವು ೩೧ ಮತ್ತು ೩೨ನೇ ಸಂಪುಟಗಳಲ್ಲಿ ಪ್ರಕಟಿಸಲು ನಿಶ್ಚಯಿಸಿರುತ್ತೇವೆ. ವೈಷ್ಣವಧರ್ಮಪ್ರಕರಣವು ಇಲ್ಲಿ ಯಥಾವತ್ತಾಗಿ ಮುಂದುವರಿದಿದೆ.)

ಪವಿತ್ರವಾದ ಅಶ್ವಮೇಧಪ್ರಕರಣವನ್ನು ಕೇಳಿದನಂತರ ಜನಮೇಜಯನು ವೈಶಂಪಾಯನರನ್ನು ಪ್ರಶ್ನಿಸುತ್ತಾನೆ:

"ಪೂಜ್ಯರೇ! ಅಶ್ವಮೇಧಯಜ್ಞವು ಮುಗಿದುಹೋದನಂತರ ನನ್ನ ಪಿತಾಮಹನಾದ ಯುಧಿಷ್ಠಿರನು ಧರ್ಮಸಂಶಯದ ನಿವಾರಣೆಗಾಗಿ ಕೇಶಿಸೂದನನಾದ ಶ್ರೀಕೃಷ್ಣನನ್ನು ಯಾವ ವಿಷಯವಾಗಿ ಪ್ರಶ್ನಿಸಿದನು?"

ವೈಶಂಪಾಯನರು ಹೇಳುತ್ತಾರೆ:

"ಜನಮೇಜಯ! ಅಶ್ವಮೇಧಯಜ್ಞಾನಂತರ ಯುಧಿಷ್ಠಿರನು ಅವಭೃಥಸ್ನಾನಮಾಡಿ ಕೇಶವನಿಗೆ ನಮಸ್ಕರಿಸಿ ಹೀಗೆ ಹೇಳಿದನು. ಆ ಸಮಯದಲ್ಲಿ ತಪೋಯುಕ್ತರಾದ, ತತ್ವದರ್ಶಿಗಳಾದ ವಸಿಷ್ಠಾದಿಗಳೂ, ಭಕ್ತಗಣಗಳೂ ಪರಮಗುಹ್ಯವಾದ ಉತ್ತಮೋತ್ತಮವಾದ ವೈಷ್ಣವಧರ್ಮವನ್ನು ಕೇಳಲು ಬಯಸಿದವರಾಗಿ ಶ್ರೀಕೃಷ್ಣನನ್ನು ಸುತ್ತುವರಿದು ಕುಳಿತಿದ್ದರು.

ಧರ್ಮಜನು ಹೇಳುತ್ತಾನೆ:

"ಭಕ್ತವತ್ಸಲನೇ! ನಾನು ಶುದ್ಧವಾದ ಭಕ್ತಿಭಾವದಿಂದ ನಿನ್ನ ಚರಣಕಮಲಗಳ ಬಳಿಗೆ ಬಂದಿರುವೆನು. ನೀನೇನಾದರೂ ನನ್ನನ್ನು ಪ್ರಿಯನಾದವನೆಂದೂ, ಭಕ್ತನೆಂದೂ, ನಿನ್ನ ಅನುಗ್ರಹಕ್ಕೆ ಯೋಗ್ಯನೆಂದೂ ಭಾವಿಸಿರುವೆಯಾದರೆ ವೈಷ್ಣವಧರ್ಮವನ್ನು ಹೇಳು. ನಾನು ವೈಷ್ಣವಧರ್ಮದ ರಹಸ್ಯವನ್ನು ಯಥಾವತ್ತಾಗಿ ಕೇಳಬೇಕೆಂದಿರುವೆನು. ಈ ಹಿಂದೆ ನಾನು ಮನು, ವಸಿಷ್ಠ, ಕಶ್ಯಪ, ಗರ್ಗ, ಗೌತಮ, ಗೋಪಾಲಕ, ಪರಾಶರ, ಬುದ್ಧಿವಂತನಾದ ಮೈತ್ರೇಯ, ಉಮೆ, ಮಹೇಶ್ವರ ಮತ್ತು ನಂದಿ - ಇವರೆಲ್ಲರೂ ಹೇಳಿರುವ ಸಮಸ್ತಧರ್ಮಗಳನ್ನೂ ಕೇಳಿದ್ದೇನೆ. ಹಾಗೆಯೇ ಬ್ರಹ್ಮ

ಕಾರ್ತಿಕೇಯ, ಧೂಮಾಯನ, ಕಾಂಡ, ವೈಶ್ವಾನರ, ಭಾರ್ಗವ, ಯಾಜ್ಞವಲ್ಕ್ಯ, ಮಾರ್ಕಂಡೇಯ, ಜೈಮಿನಿ, ಶಕುನಿ, ಪುಲಸ್ತ್ಯ, ಪುಲಹ, ಅಗ್ನಿ, ಅಗಸ್ತ್ಯ, ಮುದ್ಗಲ, ಶಾಂಡಿಲ್ಯ, ಶಲಭ, ವಾಲಖಿಳ್ಯರು, ಸಪ್ತರ್ಷಿಗಳು, ಆಪಸ್ತಂಬ, ಶಂಖ, ಲಿಖಿತ, ಪ್ರಜಾಪತಿ, ಯಮ, ಮಹೇಂದ್ರ, ವ್ಯಾಘ್ರ ಮತ್ತು ವಿಭಾಂಡಕ - ಇವರೆಲ್ಲರೂ ಹೇಳಿರುವ ಧರ್ಮಪ್ರವಚನಗಳನ್ನೂ ಕೇಳಿದ್ದೇನೆ. ನಾರದ, ಕಪೋತ, ವಿದುರ, ಭೃಗು, ಅಂಗಿರಸ, ಕ್ರೌಂಚ, ಮೃದಂಗ, ಸೂರ್ಯ, ಹಾರೀತ, ಪಿಶಂಗ, ಕಪೋತ, ಸುಬಾಲಕ, ಉದ್ದಾಲಕ, ಶುಕ್ರಾಚಾರ್ಯ, ವೈಶಂಪಾಯನ - ಇವರೇ ಮೊದಲಾದವರು ಹೇಳಿದ ಧರ್ಮಪ್ರವಚನಗಳನ್ನೂ ಕೇಳಿದ್ದೇನೆ. ಆದರೆ ಈ ಎಲ್ಲ ಧರ್ಮಗಳಿಗಿಂತಲೂ ನಿನ್ನ ಮುಖಾರವಿಂದದಿಂದ ಹೊರಡುವ ಧರ್ಮ ವಾಣಿಯು ಪಾವನತ್ವದಿಂದಲೂ, ಪಾವಿತ್ರ್ಯದಿಂದಲೂ ವಿಶಿಷ್ಟವಾದುದೆಂದು ನನ್ನ ಭಾವನೆಯಾಗಿದೆ. ಆದುದರಿಂದ ಕೇಶವನೇ! ಶರಣಾಗತನಾಗಿರುವ, ಭಕ್ತನಾಗಿರುವ ನನಗೆ ಪವಿತ್ರವೂ ಶ್ರೇಷ್ಠವೂ ಆದ ನಿನ್ನ ಧರ್ಮವನ್ನು (ವೈಷ್ಣವಧರ್ಮವನ್ನು) ಹೇಳು."

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಧರ್ಮಪುತ್ರನಾದ ಯುಧಿಷ್ಠಿರನು ಹೀಗೆ ಪ್ರಶ್ನಿಸಲಾಗಿ, ಕೇಶವನು ಪರಮಹೃಷ್ಟನಾಗಿ ಸೂಕ್ಷ್ಮವಾದ ಅರ್ಥಗಳುಳ್ಳ ಧರ್ಮಗಳನ್ನು ಹೇಳತೊಡಗಿದನು:

ವೈಷ್ಣವಧರ್ಮ-೧

"ಸುವ್ರತನೇ! ಕುಂತೀಪುತ್ರನೇ! ಹೀಗೆ ಧರ್ಮಗಳನ್ನು ತಿಳಿದುಕೊಳ್ಳುವುದರಲ್ಲಿ ಮತ್ತು ಧರ್ಮಗಳನ್ನು ಆಚರಿಸುವುದರಲ್ಲಿ ಪ್ರಯತ್ನಶೀಲನಾಗಿರುವ ನಿನಗೆ ದುರ್ಲಭವಾದುದು ಈ ಲೋಕದಲ್ಲಿ ಯಾವುದೂ ಇರುವುದಿಲ್ಲ.

ಧರ್ಮದ ವಿಷಯವನ್ನು ಕೇಳಿದರೂ, ಧರ್ಮಕಾರ್ಯವನ್ನು ನೋಡಿದರೂ, ಧರ್ಮವನ್ನು ಪ್ರವಚನಮಾಡಿದರೂ, ಧರ್ಮಕಾರ್ಯಕ್ಕೆ ಅನುಮೋದಿಸಿದರೂ ಮನುಷ್ಯನು ಇಂದ್ರಪದವಿಯನ್ನು ಹೊಂದುತ್ತಾನೆ.

ಧರ್ಮಃ ಪಿತಾ ಚ ಮಾತಾ ಚ ಧರ್ಮೋ ನಾಥಃ ಸುಹೃತ್ತಥಾ ।
ಧರ್ಮೋ ಭ್ರಾತಾ ಸಖಾ ಚೈವ ಧರ್ಮಃ ಸ್ವಾಮೀ ಪರಂತಪ ॥೭೦॥

ಪರಂತಪನೇ! ಧರ್ಮವೇ ತಂದೆ; ಧರ್ಮವೇ ತಾಯಿ; ಧರ್ಮವೇ ರಕ್ಷಕ; ಧರ್ಮವೇ ಸ್ನೇಹಿತ; ಸಹೋದರ; ಸುಹೃತ್ - ಎಲ್ಲವೂ ಧರ್ಮವೇ. ಧರ್ಮವೇ ಸ್ವಾಮಿಯು.

ಧರ್ಮಾದರ್ಥಶ್ಚ ಕಾಮಶ್ಚ ಧರ್ಮಾದ್ಭೋಗಾಃ ಸುಖಾನಿ ಚ ।
ಧರ್ಮಾದೈಶ್ವರ್ಯಮೇವಾಗ್ರ್ಯಂ ಧರ್ಮಾತ್ಸ್ವರ್ಗಗತಿಃ ಪರಾ ॥೭೧॥

ಧರ್ಮದಿಂದಲೇ ಅರ್ಥ, ಕಾಮ, ಭೋಗ, ಸುಖ, ಉತ್ತಮವಾದ ಐಶ್ವರ್ಯ, ಸರ್ವೋತ್ತಮವಾದ ಸ್ವರ್ಗ-ಇವುಗಳು ಲಭಿಸುತ್ತವೆ.

ಧರ್ಮೋಽಯಂ ಸೇವಿತಃ ಶುದ್ಧಸ್ತ್ರಾಯತೇ ಮಹತೋ ಭಯಾತ್ ।
ಧರ್ಮಾದ್ವಿಜತ್ವಂ ದೇವತ್ವಂ ಧರ್ಮಃ ಪಾವಯತೇ ನರಮ್ ॥೭೨॥

ಇಂತಹ ವಿಶುದ್ಧವಾದ ಧರ್ಮವನ್ನು ಸೇವಿಸಿದರೆ (ಆಚರಿಸಿದರೆ) ಆ ಧರ್ಮವು ತನ್ನನ್ನು ಸೇವಿಸಿದವನನ್ನು ಮಹಾಭಯದಿಂದ ಪಾರುಮಾಡುತ್ತದೆ. ಧರ್ಮದಿಂದಲೇ ದ್ವಿಜತ್ವ-ದೇವತ್ವಗಳೂ ಲಭಿಸುತ್ತವೆ. ಧರ್ಮವೇ ಮಾನವನನ್ನು ಪಾವನಗೊಳಿಸುತ್ತದೆ.

ಯದಾ ಚ ಕ್ಷೀಯತೇ ಪಾಪಂ ಕಾಲೇನ ಪುರುಷಸ್ಯ ತು ।
ತದಾ ಸಂಜಾಯತೇ ಬುದ್ಧಿರ್ಧರ್ಮಂ ಕರ್ತುಂ ಯುಧಿಷ್ಠಿರ ॥೭೩॥

ಕಾಲಾನುಕ್ರಮವಾಗಿ ಯಾವಾಗ ಮನುಷ್ಯನ ಪಾಪವು ಕ್ಷೀಣಿಸುವುದೋ-ಆಗ ಮನುಷ್ಯನಿಗೆ ಧರ್ಮಕಾರ್ಯಗಳನ್ನು ಮಾಡಬೇಕೆಂಬ ಬುದ್ಧಿಯುಂಟಾಗುತ್ತದೆ.

ಜನ್ಮಾಂತರಸಹಸ್ರೈಸ್ತು ಮನುಷ್ಯತ್ವಂ ಹಿ ದುರ್ಲಭಮ್ ।
ತದ್ಗತ್ವಾಪೀಹ ಯೋ ಧರ್ಮಂ ನ ಕರೋತಿ ಸ್ವವಞ್ಚಿತಃ ॥೭೪॥

ಜೀವಿಗೆ ಮನುಷ್ಯತ್ವವೆಂಬುದು ಬಹಳ ದುರ್ಲಭವಾದುದು. ಸಾವಿರಾರು ಯೋನಿಗಳಲ್ಲಿ ಜನ್ಮತಾಳಿದರೂ ಮನುಷ್ಯಜನ್ಮವು ಸಿಕ್ಕುವುದು ಕಷ್ಟ. ಅಂತಹ ಮನುಷ್ಯತ್ವವನ್ನು ಪಡೆದನಂತರವೂ ಧರ್ಮವನ್ನಾಚರಿಸದಿದ್ದರೆ ಅವನು ಪುಣ್ಯದಿಂದ ವಂಚಿತನಾಗುತ್ತಾನೆ.

ಕುತ಼್ಿತಾ ಯೇ ದರಿದ್ರಾಶ್ಚ ವಿರೂಪಾ ವ್ಯಾಧಿತಾಸ್ತಥಾ ।
ಪರದ್ವೇಷಾಶ್ಚ ಮೂರ್ಖಾಶ್ಚ ನ ತೈರ್ಧರ್ಮಃ ಕೃತಃ ಪುರಾ ॥೭೫॥

ಈ ಲೋಕದಲ್ಲಿ ಯಾರು ನಿಂದನೆಗೆ ಗುರಿಯಾಗಿರುವರೋ, ದರಿದ್ರರೋ, ಕುರೂಪಿಗಳೋ, ದೀರ್ಘಕಾಲದ ರೋಗಕ್ಕೆ ತುತ್ತಾಗಿರುವರೋ, ಇತರರನ್ನು ಕಾರಣವಿಲ್ಲದೆಯೇ ದ್ವೇಷಿಸುವರೋ ಮತ್ತು ಮೂರ್ಖರೋ-ಅವರೆಲ್ಲರೂ ಹಿಂದೆ ಧರ್ಮವನ್ನು ಆಚರಿಸಿಲ್ಲ. ಅದರ ಪರಿಣಾಮವಾಗಿಯೇ ಈಗ ಇಂತಹ ಅವಸ್ಥೆಯಲ್ಲಿದ್ದಾರೆ.

ಯೇ ಚ ದೀರ್ಘಾಯುಷಃ ಶೂರಾಃ ಪಣ್ಡಿತಾ ಭೋಗಿನಸ್ತಥಾ ।
ನೀರೋಗಾ ರೂಪಸಂಪನ್ನಾಸ್ತೈರ್ಧರ್ಮಃ ಸುಕೃತಃ ಪುರಾ ॥೭೬॥

ಯಾರು ಈಗ ದೀರ್ಘಾಯುಗಳಾಗಿರುವರೋ, ಶೂರರಾಗಿರುವರೋ, ಪಂಡಿತರಾಗಿರುವರೋ, ಭೋಗಿಗಳಾಗಿರುವರೋ, ರೋಗರಹಿತರಾಗಿರುವರೋ, ರೂಪಸಂಪನ್ನರಾಗಿರುವರೋ-ಅಂತಹವರು ಹಿಂದೆ ಧರ್ಮವನ್ನು ಆಚರಿಸಿದ್ದರೆಂದೂ, ಅದರ ಪರಿಣಾಮವಾಗಿಯೇ ಅವರಿಗೆ ಇಂತಹ ಸ್ಥಿತಿಯು ಪ್ರಾಪ್ತವಾಗಿರುವುದೆಂದೂ ತಿಳಿಯಬೇಕು.

ಏವಂ ಧರ್ಮಃ ಕೃತಃ ಶುದ್ಧೋ ನಯತೇ ಗತಿಮುತ್ತಮಾಮ್ ।
ಅಧರ್ಮಂ ಸೇವತೇ ಯಸ್ತು ತಿರ್ಯಗ್ಯೋನ್ಯಾಂ ಪತತ್ಯಸೌ ॥೭೭॥

ಹೀಗೆ ಯಾವನು ಶುದ್ಧಭಾವದಿಂದ ಧರ್ಮವನ್ನು ಆಚರಿಸುವನೋ ಅವನು ಉತ್ತಮಗತಿಯನ್ನು ಹೊಂದುತ್ತಾನೆ. ಅಧರ್ಮಾಚರಣೆಯನ್ನು ಮಾಡಿದವನು ತಿರ್ಯಗ್ಯೋನಿಗಳಲ್ಲಿ (ಪಶು-ಪಕ್ಷಿಗಳೇ ಮುಂತಾದ ಯೋನಿಗಳಲ್ಲಿ) ಹುಟ್ಟುತ್ತಾನೆ.

ಕೌಂತೇಯನೇ! ಪರಮಶ್ರೇಷ್ಠವಾದ ಈ ಧರ್ಮರಹಸ್ಯವನ್ನು ಕೇಳು. ಭಕ್ತನಾದ ನಿನಗೆ ಈ ಶ್ರೇಷ್ಠವಾದ ಧರ್ಮವನ್ನು ಹೇಳುತ್ತೇನೆ. ನೀನು ನನಗೆ ಬಹಳ ಇಷ್ಟನಾಗಿರುವೆ. ಶರಣಾಗತನೂ ಆಗಿರುವೆ. ನಿನಗೆ ಪರಮಶ್ರೇಷ್ಠವಾದ ಆತ್ಮತತ್ತ್ವವನ್ನೇ ಹೇಳುತ್ತೇನೆ. ಹೀಗಿರುವಾಗ ಧರ್ಮದ ರಹಸ್ಯವನ್ನು ಹೇಳುವುದರಲ್ಲಿ ಅತಿಶಯವೇನಿದೆ? ನಾನು ನನ್ನ ಮಾಯೆಯನ್ನೇ

ಆಶ್ರಯಿಸಿ ಧರ್ಮದ ಸಂಸ್ಥಾಪನೆಗೂ-ದುಷ್ಟರ ನಿಗ್ರಹಕ್ಕೂ ಈ ಮಾನುಷ ಜನ್ಮವನ್ನು ತಾಳಿದ್ದೇನೆ. ಮನುಷ್ಯಶರೀರವನ್ನು ಧರಿಸಿರುವ ನನ್ನನ್ನು ಮನುಷ್ಯಮಾತ್ರನೆಂದು ಭಾವಿಸಿ ಯಾರು ಅವಹೇಳನಮಾಡುವರೋ-ಅಂತಹ ಮೂರ್ಖರು ಸಂಸಾರದ ಮಧ್ಯದಲ್ಲಿ ಸಿಕ್ಕಿಹಾಕಿಕೊಂಡು ಬಿಡಿಸಿ ಕೊಳ್ಳಲಾಗದೇ ಹಲವಾರು ಬಾರಿ ಪಶು-ಪಕ್ಷಿಗಳಾಗಿಯೂ ಹುಟ್ಟುತ್ತಾರೆ. ಸರ್ವಪ್ರಾಣಿಗಳ ಹೃದಯಗುಹೆಗಳಲ್ಲಿಯೂ ಇರುವ ನನ್ನನ್ನು ಯಾರು ಹಾಗೆ ಜ್ಞಾನದೃಷ್ಟಿಯಿಂದ ತಿಳಿಯುವರೋ ಮತ್ತು ನನ್ನಲ್ಲಿಯೇ ಅನುರಕ್ತರಾಗಿರು ವರೋ-ಅಂತಹ ನನ್ನ ಭಕ್ತರನ್ನು ನನ್ನ ಪರಮಧಾಮಕ್ಕೆ ಒಯ್ಯುತ್ತೇನೆ. ನನ್ನ ಭಕ್ತರೆಂದಿಗೂ ನಾಶಹೊಂದುವುದಿಲ್ಲ. ಎಲ್ಲ ಪಾಪಗಳಿಂದಲೂ ವಿಮುಕ್ತರಾಗುತ್ತಾರೆ. ನನ್ನ ಭಕ್ತರಿಗೆ ಈ ಮನುಷ್ಯಜನ್ಮವು ಸಫಲವಾಗುತ್ತದೆ. ನನ್ನ ಭಕ್ತರು ಪಾಪಕರ್ಮಗಳಲ್ಲಿ ನಿರತರಾಗಿದ್ದರೂ-ಕಮಲದ ಎಲೆಯು ನೀರಿನಿಂದ ನಿರ್ಲಿಪ್ತವಾಗಿರುವಂತೆ-ಸಕಲವಿಧವಾದ ಪಾಪಗಳಿಂದಲೂ ಮುಕ್ತರಾಗುತ್ತಾರೆ. ಸಾವಿರಾರು ಜನ್ಮಗಳಲ್ಲಿ ಮಾಡಿದ ತಪಸ್ಸಿನ ಫಲವಾಗಿ ಮನುಷ್ಯರ ಹೃದಯವು ಶುದ್ಧವಾಗುತ್ತದೆ. ಅಂತಹ ಶುದ್ಧಾತ್ಮರಲ್ಲಿ ಭಕ್ತಿಭಾವವು ಮೂಡಿಬರುತ್ತದೆ. ಶ್ರೇಷ್ಠವಾದ ಗುಹ್ಯವಾದ, ಕೂಟಸ್ಥವಾದ, ಅಚಲವಾದ ಮತ್ತು ಶಾಶ್ವತವಾದ ನನ್ನ ರೂಪವನ್ನು ನನ್ನ ಭಕ್ತರು ನೋಡುವಂತೆ ದೇವತೆಗಳೂ ನೋಡಲಾರರು. ಅವತಾರಸಮಯಗಳಲ್ಲಿ ಯಾವ ನನ್ನ ಬೇರೆಯ ರೂಪವು ಕಾಣುವುದೋ ಅದನ್ನು, ಸಮಸ್ತಜೀವಿಗಳೂ ಸರ್ವಪ್ರಕಾರಗಳಿಂದಲೂ ನೋಡುತ್ತಾರೆ. ಸಾವಿರಕೋಟಿ ಕಲ್ಪಗಳು ಕಳೆದನಂತರ ಯಾವ ನನ್ನ ವೈಷ್ಣವರೂಪವನ್ನು ದೇವತೆಗಳು ನೋಡುವರೋ-ಅದೇ ರೂಪವನ್ನು ಭಕ್ತರಿಗೂ ತೋರಿಸುತ್ತೇನೆ. (ದೇವತೆಗಳು ನೋಡುವ ಆ ನನ್ನ ದಿವ್ಯರೂಪವನ್ನೇ ಭಕ್ತರೂ ನೋಡುತ್ತಾರೆ.) ಯಾವ ಮನುಷ್ಯನು ನನ್ನನ್ನು ಜಗತ್ತಿನ ಉತ್ಪತ್ತಿ, ಸ್ಥಿತಿ ಮತ್ತು ಲಯಗಳಿಗೆ ಕಾರಣನೆಂದು ತಿಳಿದು ನನ್ನನ್ನೇ ಆಶ್ರಯಿಸುವನೋ-ಅಂತಹವನಿಗೆ ನಾನು ಅನುಗ್ರಹಮಾಡುತ್ತೇನೆ. ಮತ್ತು ಈ ಸಂಸಾರಬಂಧನದಿಂದ ಅವನನ್ನು

ಬಿಡಿಸುತ್ತೇನೆ. ದೇವತೆಗಳಿಗೂ ನಾನು ಮೊದಲಿಗನಾಗಿದ್ದೇನೆ. ಬ್ರಹ್ಮಾದಿ ದೇವತೆಗಳನ್ನೂ ನಾನೇ ಸೃಷ್ಟಿಸಿರುವೆನು. ನಾನು ನನ್ನ ಪ್ರಕೃತಿಯನ್ನೇ ಆಶ್ರಯಿಸಿ ಸಂಪೂರ್ಣಜಗತ್ತನ್ನೂ ಸೃಷ್ಟಿಸುತ್ತೇನೆ. ನಾನು ಅವ್ಯಕ್ತ ಪರಮೇಶ್ವರನಾಗಿದ್ದರೂ ತಮೋಗುಣಕ್ಕೆ ಆಧಾರಭೂತನಾಗಿದ್ದೇನೆ. ರಜೋಗುಣದ ಮಧ್ಯದಲ್ಲಿ ಪ್ರತಿಷ್ಠಿತನಾಗಿ ಉತ್ಕೃಷ್ಟವಾದ ಸತ್ತ್ವಗುಣದಲ್ಲಿಯೂ ವ್ಯಾಪಿಸಿದ್ದೇನೆ. ನನಗೆ ಲೋಭವೆಂಬುದೇ ಇಲ್ಲ. ಬ್ರಹ್ಮನೇ ಮೊದಲ್ಗೊಂಡು ಸ್ತಂಬಪರ್ಯಂತವಾಗಿ ನಾನು ಎಲ್ಲೆಡೆಗಳಲ್ಲಿಯೂ ವ್ಯಾಪಿಸಿಕೊಂಡಿರುತ್ತೇನೆ.

ಸ್ವರ್ಗವೇ ನನ್ನ ತಲೆಯೆಂದು ತಿಳಿ. ಸೂರ್ಯ-ಚಂದ್ರರು ನನ್ನೆರಡು ಕಣ್ಣುಗಳು. ಗೋವು, ಅಗ್ನಿ ಮತ್ತು ಬ್ರಾಹ್ಮಣ-ಇವರೇ ನನ್ನ ಮುಖ ವಾಗಿದ್ದಾರೆ. ವಾಯುವು ನನ್ನ ಶ್ವಾಸವಾಗಿದೆ. ಎಂಟು ದಿಕ್ಕುಗಳೇ ನನ್ನ ಎಂಟು ಬಾಹುಗಳು. ನಕ್ಷತ್ರಗಳೇ ನನ್ನ ಆಭರಣಗಳು. ಸರ್ವಪ್ರಾಣಿಗಳಿಗೂ ಇರಲು ಅವಕಾಶವನ್ನು ಕಲ್ಪಿಸಿಕೊಟ್ಟಿರುವ ಆಕಾಶವೇ ನನ್ನ ವಕ್ಷಃಸ್ಥಳವೆಂದು ತಿಳಿ. ಮೇಘ ಮತ್ತು ವಾಯುಗಳು ಸಂಚರಿಸಲು ಯಾವ ಮಾರ್ಗವಿರು ವುದೋ-ಅದೇ ನನ್ನ ಅವಿನಾಶಿಯಾದ ಜಠರವಾಗಿದೆ. ದ್ವೀಪ, ಸಮುದ್ರ ಮತ್ತು ಕಾಡುಗಳಿಂದ ತುಂಬಿರುವ ಎಲ್ಲ ಚರಾಚರವಸ್ತುಗಳನ್ನೂ ಧರಿಸಿರುವ ಭೂಮಿಯೇ ನನ್ನೆರಡು ಪಾದಗಳಾಗಿವೆ. ಆಕಾಶರೂಪದಲ್ಲಿ ನಾನು ಒಂದು ಗುಣವನ್ನೂ, ವಾಯುವಿನ ರೂಪದಲ್ಲಿ ಎರಡು ಗುಣಗಳನ್ನೂ, ಅಗ್ನಿಯ ರೂಪದಲ್ಲಿ ಮೂರು ಗುಣಗಳನ್ನೂ, ನೀರಿನ ರೂಪದಲ್ಲಿ ನಾಲ್ಕು ಗುಣಗಳನ್ನೂ, ಭೂಮಿಯ ರೂಪದಲ್ಲಿ ಐದು ಗುಣಗಳನ್ನೂ ಹೊಂದಿರು ತ್ತೇನೆ. ಶಬ್ದ-ಸ್ಪರ್ಶಗಳೇ ಮೊದಲಾದ ಯಾವ ಐದು ಗುಣಗಳಿವೆಯೋ-ಅವೆಲ್ಲವೂ ನನ್ನ ಸ್ವರೂಪಗಳೇ ಆಗಿರುವ ಈ ಪಂಚಮಹಾಭೂತಗಳಲ್ಲಿ ಸೇರಿಕೊಂಡಿವೆ. ನಾನು ಸಾವಿರ ಶಿರಸ್ಸುಗಳುಳ್ಳ ಪುರುಷನು. ಸಾವಿರ ಮುಖಗಳನ್ನೂ, ಕಣ್ಣುಗಳನ್ನೂ ಹೊಂದಿದ್ದೇನೆ. ನನಗೆ ಸಾವಿರ ತೋಳುಗಳೂ ಸಾವಿರ ಹೊಟ್ಟೆಗಳೂ ಇವೆ. ಸಾವಿರ ತೊಡೆಗಳೂ ಸಾವಿರ ಕಾಲುಗಳೂ ಇವೆ. ಭೂಮಿಯನ್ನು ಎಲ್ಲ ಕಡೆಗಳಿಂದಲೂ ಧರಿಸಿರುವ ನಾನು ಎಲ್ಲವನ್ನೂ ದಾಟಿ ಹತ್ತು ಅಂಗುಲಗಳಷ್ಟು ಮೇಲಿದ್ದೇನೆ. ಎಲ್ಲ ಪ್ರಾಣಿಗಳಲ್ಲಿಯೂ

ನಾನು ಆತ್ಮಸ್ವರೂಪನಾಗಿರುವುದರಿಂದ ನನ್ನನ್ನು ಸರ್ವವ್ಯಾಪಿಯು-ಎಂದೂ ಕರೆಯುತ್ತಾರೆ. ನಾನು ಅಚಿಂತ್ಯನು, (ಆಲೋಚನೆಗೆ ಸಿಕ್ಕುವವನಲ್ಲ.) ಅನಂತನು. (ನನಗೆ ಅಂತ್ಯವೆಂಬುದೇ ಇಲ್ಲ.) ನಾನು ಅವಧ್ಯನು; ಅಪ್ರಮೇಯನು; ಅವ್ಯಯನು; ನಿರ್ಗುಣನು; ಗುಹ್ಯಸ್ವರೂಪನು; ನಿರ್ದ್ವಂದ್ವನು; ನಿರ್ಮಮನು; ನಿಷ್ಕಲನು; ಮೋಕ್ಷಕ್ಕೆ ಆದಿಕಾರಣನು. ಸುಧಾ, ಸ್ವಧಾ ಮತ್ತು ಸ್ವಾಹಾಸ್ವರೂಪನೂ ನಾನೇ ಆಗಿದ್ದೇನೆ. ನಾನು ನನ್ನ ತೇಜಸ್ಸಿನಿಂದಲೂ, ತಪಸ್ಸಿನಿಂದಲೂ ನಾಲ್ಕು ವಿಧವಾದ ಪ್ರಾಣಿಗಳ ಸಮುದಾಯವನ್ನೂ ಸ್ನೇಹಪಾಶರೂಪವಾದ ರಜ್ಜುವಿನಿಂದ ಬಂಧಿಸಿ ನನ್ನ ಮಾಯೆಯಿಂದ ಧಾರಣೆಮಾಡಿಕೊಂಡಿದ್ದೇನೆ. ನಾಲ್ಕು ಪ್ರಕಾರವಾದ ಹೋತೃಗಳು ಮಾಡುವ ಯಜ್ಞದ ಫಲಭೋಕ್ತೃವೂ ಆಗಿದ್ದೇನೆ. ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧರೆಂಬ ನಾಲ್ಕು ಮೂರ್ತಿಗಳ ಸ್ವರೂಪನೂ ನಾನೇ ಆಗಿದ್ದೇನೆ ದ್ರವ್ಯಯಜ್ಞ, ತಪೋಯಜ್ಞ, ಜ್ಞಾನಯಜ್ಞ, ಸ್ವಾಧ್ಯಾಯಯಜ್ಞಗಳೆಂಬ ನಾಲ್ಕು ಯಜ್ಞಗಳ ಸ್ವರೂಪನಾಗಿದ್ದೇನೆ. ನಾಲ್ಕು ಆಶ್ರಮಗಳನ್ನು ಪ್ರಕಟಪಡಿಸುವವನಾಗಿದ್ದೇನೆ. ಪ್ರಳಯಕಾಲಗಳಲ್ಲಿ ನಾನು ಜಗತ್ತೆಲ್ಲವನ್ನೂ ಸಂಹರಿಸಿ ಜೀವಕೋಟಿಯನ್ನು ನನ್ನ ಗರ್ಭದಲ್ಲಿರಿಸಿಕೊಂಡು ದಿವ್ಯಯೋಗವನ್ನಾಶ್ರಯಿಸಿ ಏಕಾರ್ಣವವಾದ ನೀರಿನಲ್ಲಿ ಪವಡಿಸುತ್ತೇನೆ. ಸಹಸ್ರಯುಗಪರ್ಯಂತವಾದ ಬ್ರಹ್ಮನ ರಾತ್ರಿಯನ್ನು ಆ ಮಹಾರ್ಣವದಲ್ಲಿ ನಿದ್ರಿಸುತ್ತಾ ಕಳೆದು ಅನಂತರ ಸ್ಥಾವರ-ಜಂಗಮಾತ್ಮಕವಾದ ಸಮಸ್ತಪ್ರಾಣಿಗಳನ್ನೂ ಸೃಷ್ಟಿಸುತ್ತೇನೆ. ಪ್ರತಿಯೊಂದು ಕಲ್ಪದಲ್ಲಿಯೂ ನಾನು ಪ್ರಾಣಿಗಳನ್ನು ಸೃಷ್ಟಿಸುತ್ತೇನೆ ಮತ್ತು ಸಂಹರಿಸುತ್ತೇನೆ. ಪ್ರಾಣಿಗಳನ್ನು ನಾನೇ ಸೃಷ್ಟಿಸಿ ಸಂಹರಿಸಿದರೂ ಮಾಯೆಯಿಂದ ವಿಮೋಹಿತವಾದ ಪ್ರಾಣಿಗಳು ನಾನಾರೆಂಬುದನ್ನು ತಿಳಿಯುವುದಿಲ್ಲ. ಅಂಧಕಾರಸ್ವರೂಪನೂ ಆದ ನನ್ನನ್ನು ನಿತ್ಯವೂ ಹುಡುಕಿದರೂ ಶಾಂತವಾದ ದೀಪದ ಗತಿಯು ತಿಳಿಯದಿರುವಂತೆ ನನ್ನ ಗತಿಯು ತಿಳಿಯಲಾರದು. ನಾನಿಲ್ಲದ ಪದಾರ್ಥವೇ ಪ್ರಪಂಚದಲ್ಲಿ ಯಾವುದೂ ಇಲ್ಲ. ನನ್ನಲ್ಲಿ ಪ್ರತಿಷ್ಠಿತವಾಗದ ಪ್ರಾಣಿಯೂ ಪ್ರಪಂಚದಲ್ಲಿ ಯಾವುದೂ ಇಲ್ಲ. (ಎಲ್ಲ ಪ್ರಾಣಿಗಳೂ ನನ್ನಲ್ಲಿವೆ. ಎಲ್ಲ ಪ್ರಾಣಿಗಳಲ್ಲಿಯೂ ನಾನಿದ್ದೇನೆ.) ಈ ಪ್ರಪಂಚದಲ್ಲಿ ಯಾವುದೇ ಪದಾರ್ಥವು ಅಥವಾ ಪ್ರಾಣಿಯು ಸ್ಥೂಲವಾಗಿರಲೀ ಸೂಕ್ಷ್ಮವಾಗಿರಲೀ-ಆ ಎಲ್ಲ ಸ್ಥೂಲ-ಸೂಕ್ಷ್ಮ

ಪ್ರಾಣಿಗಳಲ್ಲಿಯೂ ಸ್ಥೂಲ-ಸೂಕ್ಷ್ಮರೂಪನಾಗಿ ಜೀವಭೂತನಾಗಿಯೇ ಇದ್ದೇನೆ. ಯುಧಿಷ್ಠಿರ! ಹೆಚ್ಚು ಹೇಳುವುದರಿಂದ ಪ್ರಯೋಜನವೇನಿದೆ? ಸತ್ಯವಾದ ಈ ಒಂದು ಮಾತಿನಿಂದಲೇ ನಾನಾರೆಂಬುದನ್ನು ತಿಳಿಸಿಬಿಡುತ್ತೇನೆ.

ಯದ್ಭೂತಂ ಯದ್ಭವಿಷ್ಯಚ್ಚ ತತ್ಸರ್ವಮಹಮೇವ ತು ॥೧೯॥

ಹಿಂದೆ ಯಾವುದಿತ್ತೋ, ಮುಂದೆ ಯಾವುದು ಹುಟ್ಟುವುದೋ-ಆ ಎಲ್ಲವೂ ನಾನೇ ಆಗಿದ್ದೇನೆ.

ಎಲ್ಲ ಪ್ರಾಣಿಗಳನ್ನೂ ನಾನೇ ಸೃಷ್ಟಿಸಿದ್ದೇನೆ. ಆದುದರಿಂದ ಎಲ್ಲ ಪ್ರಾಣಿಗಳೂ ನನ್ನ ಸ್ವರೂಪಗಳೇ ಆಗಿವೆ. ಆದರೆ ಮಾಯೆಯಿಂದ ವಿಮೋಹಿತವಾಗಿರುವ ಈ ಪ್ರಾಣಿಗಳು ನನ್ನನ್ನು ತಿಳಿದುಕೊಂಡಿರುವುದಿಲ್ಲ. ಹೀಗೆ ದೇವಾಸುರಮಾನುಷಾತ್ಮಕವಾದ ಈ ಎಲ್ಲ ಜಗತ್ತೂ ನನ್ನಿಂದಲೇ ಪ್ರಾದುರ್ಭವಿಸುತ್ತದೆ. ಕಡೆಯಲ್ಲಿ ನನ್ನಲ್ಲಿಯೇ ಲೀನವಾಗುತ್ತದೆ."

ವೈಷ್ಣವಧರ್ಮ-೨

ನಾಲ್ಕು ವರ್ಣಗಳ ಕರ್ಮಗಳು ಮತ್ತು ಅವುಗಳ ಫಲಗಳ ವರ್ಣನೆ: ಧರ್ಮದ ಅಭಿವೃದ್ಧಿಗೂ ಪಾಪದ ಕ್ಷಯಕ್ಕೂ ಇರುವ ಉಪಾಯ

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಹೀಗೆ ಪೂಜ್ಯನಾದ ಶ್ರೀಕೃಷ್ಣನು ಎಲ್ಲ ಜಗತ್ತೂ ತನ್ನಿಂದಲೇ ಹುಟ್ಟಿರುವುದೆಂದು ಹೇಳಿ ಯುಧಿಷ್ಠಿರನಿಗೆ ಪವಿತ್ರವಾದ ಧರ್ಮಗಳನ್ನು ವಿವರಿಸಿ ಹೇಳತೊಡಗಿದನು:

"ಪಾಂಡುನಂದನನೇ! ನಾನು ಹೇಳಲಿರುವ ಪವಿತ್ರವೂ, ಪಾಪನಾಶಕವೂ, ಪುಣ್ಯಪ್ರದವೂ ಆದ ಧರ್ಮಶಾಸ್ತ್ರಫಲವನ್ನು ಕೇಳು.

ಯಾವ ಮನುಷ್ಯನು ಶುಚಿಯಾಗಿ, ಏಕಾಗ್ರಚಿತ್ತನಾಗಿ, ತಪೋಯುಕ್ತನಾಗಿ, ಸ್ವರ್ಗ-ಯಶಸ್ಸು ಮತ್ತು ಆಯುಷ್ಯಗಳನ್ನು ಕೊಡುವ, ತಿಳಿಯಲು ಯೋಗ್ಯವಾದ ಧರ್ಮಾಖ್ಯಾನವನ್ನು ಕೇಳುವನೋ-ಅಂತಹ ಶ್ರದ್ಧಾಳು

ವಾದ ಮನುಷ್ಯನ-ಅದರಲ್ಲಿಯೂ ವಿಶೇಷವಾಗಿ ನನ್ನ ಭಕ್ತರ-ಪೂರ್ವ ಸಂಚಿತವಾದ ಸಕಲಪಾಪಗಳೂ ಧರ್ಮಶ್ರವಣದ ಫಲದಿಂದಾಗಿ ವಿನಾಶ ಹೊಂದುತ್ತವೆ.”

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಶ್ರೀಕೃಷ್ಣನ ಪರಮಪವಿತ್ರವಾದ ಮತ್ತು ಸತ್ಯವಾದ ಮಾತನ್ನು ಕೇಳಿ ದೇವರ್ಷಿಗಳೂ, ಬ್ರಹ್ಮರ್ಷಿಗಳೂ, ಗಂಧರ್ವರೂ, ಅಪ್ಸರೆಯರೂ, ಭೂತಗಣಗಳೂ, ಯಕ್ಷರೂ, ಗ್ರಹಗಳೂ, ಗುಹ್ಯಕರೂ, ಭುಜಗರೂ, ವಾಲಖಿಲ್ಯರೂ, ಮಹಾತ್ಮರಾದ ಯೋಗಿಗಳೂ, ತತ್ತ್ವದರ್ಶಿಗಳೂ, ಐದುಕಾಲಗಳಲ್ಲಿಯೂ ಭಗವಂತನ ಉಪಾಸನೆಯನ್ನು ಮಾಡುವ ಭಾಗವತರೂ-ಸಂತೋಷಗೊಂಡ ಮನಸ್ಸಿನಿಂದ ಕೂಡಿದವರಾಗಿ ಧರ್ಮದ ಅದ್ಭುತರಹಸ್ಯವನ್ನು ಚಿಂತಿಸತೊಡಗಿದರು. ಕುತೂಹಲದಿಂದ ತುಂಬಿದವರಾಗಿ, ಪ್ರಹೃಷ್ಟವಾದ ಇಂದ್ರಿಯಗಳಿಂದಲೂ ಮತ್ತು ಮನಸ್ಸಿನಿಂದಲೂ ಕೂಡಿದವರಾಗಿ, ಪರಮಶ್ರೇಷ್ಠವಾದ ವೈಷ್ಣವಧರ್ಮವನ್ನು ಕೇಳಲು ಬಯಸಿ ಮತ್ತು ಆ ವೈಷ್ಣವಧರ್ಮವನ್ನು ಹೃದ್ಗತಮಾಡಿಕೊಳ್ಳಲು ಅಪೇಕ್ಷಿಸಿದವರಾಗಿ ಶ್ರೀಕೃಷ್ಣನಿಗೆ ತಲೆಬಾಗಿ ನಮಸ್ಕರಿಸಿದರು. ಭಗವಂತನ ದಿವ್ಯದೃಷ್ಟಿಯು ಬಿದ್ದೊಡನೆಯೇ ಅವರೆಲ್ಲರೂ ಪಾಪರಹಿತರಾದುದನ್ನು ನೋಡಿ ಯುಧಿಷ್ಠಿರನು ತಾನೂ ಕೂಡ ಶ್ರೀಕೃಷ್ಣನಿಗೆ ತಲೆಬಾಗಿ ನಮಸ್ಕರಿಸಿ ಕೇಶವನನ್ನು ಪ್ರಶ್ನಿಸಿದನು:

“ದೇವೇಶ್ವರನೇ! ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರಿಗೆ ಪ್ರತ್ಯೇಕ-ಪ್ರತ್ಯೇಕವಾದ ಯಾವ ಮಾರ್ಗಗಳಿವೆ?”

ಶ್ರೀಕೃಷ್ಣನು ಹೇಳುತ್ತಾನೆ:

“ಧರ್ಮನಿಷ್ಠರಲ್ಲಿ ಶ್ರೇಷ್ಠನಾದವನೇ! ಯುಧಿಷ್ಠಿರ! ಬ್ರಾಹ್ಮಣಾದಿ ವರ್ಣಕ್ರಮದಿಂದಲೇ ಅವರವರ ಧರ್ಮಗಳನ್ನು ಹೇಳುವೆನು; ಕೇಳು. ಬ್ರಾಹ್ಮಣನಿಗೆ ದುಷ್ಕರವಾದುದು ಯಾವುದೂ ಇಲ್ಲ. ಯಾವ ಬ್ರಾಹ್ಮಣರು ಶಿಖಾ - ಯಜ್ಞೋಪವೀತಿಗಳಾಗಿರುವರೋ, ಸಂಧ್ಯೋಪಾಸನೆಯನ್ನು

ಮಾಡುವರೋ, ಪೂರ್ಣಾಹುತಿಯನ್ನು ಕೊಡುವರೋ, ವಿಧಿವತ್ತಾಗಿ ಅಗ್ನಿ ಹೋತ್ರವನ್ನು ಮಾಡುವರೋ, ವೈಶ್ವದೇವಬಲಿಯನ್ನು ಅರ್ಪಿಸುವರೋ, ಅತಿಥಿಗಳನ್ನು ಸತ್ಕರಿಸುವರೋ, ಸದಾ ಸ್ವಾಧ್ಯಾಯದಲ್ಲಿಯೇ ನಿರತ ರಾಗಿರುವರೋ, ಜಪಯಜ್ಞವನ್ನು ಮಾಡುವರೋ, ಪ್ರಾತಃಕಾಲ-ಸಾಯಂಕಾಲಗಳಲ್ಲಿ ಹೋಮಮಾಡಿದನಂತರವೇ ಊಟಮಾಡುವರೋ, ಶೂದ್ರಾನ್ನವನ್ನು ತಿನ್ನುವುದಿಲ್ಲವೋ, ದಂಭ ಮತ್ತು ಮಿಥ್ಯಾಭಾಷಣಗಳಿಂದ ದೂರವಿರುವರೋ, ತಮ್ಮ ಪತ್ನಿಯರಲ್ಲಿ ಮಾತ್ರವೇ ಅನುರಕ್ತರಾಗಿರು ವರೋ, ಪಂಚಮಹಾಯಜ್ಞಗಳನ್ನು ಮಾಡುವರೋ, ಅಗ್ನಿಹೋತ್ರವನ್ನು ಮಾಡುವರೋ-ಅಂತಹವರ ಪಾಪಗಳನ್ನು ಅವರು ಉಪಾಸಿಸುವ ಅಗ್ನಿತ್ರಯಗಳೇ ಭಸ್ಮಮಾಡಿಬಿಡುತ್ತವೆ. ಹೀಗೆ ಅವರು ಪಾಪಗಳನ್ನು ಕಳೆದುಕೊಂಡು ಬ್ರಹ್ಮಲೋಕಕ್ಕೆ ಹೋಗುತ್ತಾರೆ.

ಕ್ಷತ್ರಿಯನು ಕೂಡ ರಾಜ್ಯಸಿಂಹಾಸನದಲ್ಲಿ ಕುಳಿತು ಸ್ವಧರ್ಮ ಪರಿಪಾಲಕನಾಗಿ ಪ್ರಜೆಗಳನ್ನು ಚೆನ್ನಾಗಿ ಸಂರಕ್ಷಿಸುತ್ತಾ, ಪ್ರಜೆಗಳ ಆದಾಯ ದಲ್ಲಿ ಆರನೆಯ ಒಂದು ಭಾಗವನ್ನು ಮಾತ್ರವೇ ರಾಜಾದಾಯವನ್ನಾಗಿ ಪಡೆದು, ಯಜ್ಞ-ದಾನಗಳಲ್ಲಿ ನಿರತನಾಗಿ, ಧೀರನಾಗಿ, ತನ್ನ ಪತ್ನಿಯಲ್ಲಿ ಮಾತ್ರವೇ ಅನುರಕ್ತನಾಗಿರುತ್ತಾ, ಶಾಸ್ತ್ರವನ್ನು ಅನುಸರಿಸಿ ನಡೆದುಕೊಳ್ಳುತ್ತಾ, ತತ್ತ್ವವನ್ನು ತಿಳಿದು ಪ್ರಜೆಗಳ ಹಿತಕಾರ್ಯದಲ್ಲಿ ನಿರತನಾಗಿರುತ್ತಾ, ಬ್ರಾಹ್ಮಣರಿಗೆ ಬೇಕಾದುದನ್ನು ದಾನಮಾಡುತ್ತಾ, ಸೇವಕರ ಭರಣ-ಪೋಷಣೆ ಗಳಲ್ಲಿ ನಿರತನಾಗಿರುತ್ತಾ, ಸತ್ಯಸಂಧನಾಗಿ ಶುಚಿಯಾಗಿ ಲೋಭ-ದಂಭ ಗಳಿಂದ ರಹಿತನಾಗಿದ್ದರೆ-ದೇವತೆಗಳಿಂದಲೂ ಸೇವಿಸಲ್ಪಡುವ ಉತ್ತಮಗತಿ ಯನ್ನು ಹೊಂದುತ್ತಾನೆ.

ಕೃಷಿ ಮತ್ತು ಗೋವುಗಳ ಪಾಲನೆಯಲ್ಲಿ ನಿರತನಾಗಿ, ಧರ್ಮದ ಅನ್ವೇಷಣೆಯಲ್ಲಿ ತತ್ಪರನಾದ, ದಾನಧರ್ಮದಲ್ಲಿ ನಿರತನಾದ, ಬ್ರಾಹ್ಮಣ ರನ್ನು ಶುಶ್ರೂಷೆಮಾಡುವ, ಸತ್ಯಸಂಧನಾದ, ಶುಚಿಯಾದ, ಲೋಭದಂಭಗಳಿಂದ ರಹಿತನಾದ, ಸರಳನಾದ, ತನ್ನ ಪತ್ನಿಯಲ್ಲಿ ಮಾತ್ರವೇ ಅನುರಕ್ತನಾದ, ಹಿಂಸೆಯನ್ನೂ ದ್ರೋಹವನ್ನೂ ವರ್ಜಿಸಿರುವ, ದೇವ-

ಬ್ರಾಹ್ಮಣಪೂಜಕನಾದ, ವೈಶ್ಯಧರ್ಮವನ್ನು ಯಾವುದೇ ಕಾರಣದಿಂದಲೂ ಪರಿತ್ಯಜಿಸದ ವೈಶ್ಯನು ಸ್ವರ್ಗಕ್ಕೆ ಹೋಗುತ್ತಾನೆ ಮತ್ತು ಅಲ್ಲಿ ಅಪ್ಸರೆಯರಿಂದ ಸೇವಿಸಲ್ಪಡುತ್ತಾನೆ.

ಬ್ರಾಹ್ಮಣಾದಿ ಮೂರು ವರ್ಣಗಳ ಶುಶ್ರೂಷೆಯಲ್ಲಿಯೇ ನಿರತನಾದ, ಅದರಲ್ಲಿಯೂ ವಿಶೇಷವಾಗಿ ಬ್ರಾಹ್ಮಣರಿಗೆ ದಾಸನಂತಿರುವ, ಆಯಾಚಿತವಾಗಿ ದಾನಕೊಡುವ, ಸತ್ಯ-ಶೌಚಯುಕ್ತನಾದ, ಗುರು ಮತ್ತು ದೇವತೆಗಳ ಪೂಜೆಯಲ್ಲಿ ನಿರತನಾಗಿರುವ, ಪರಸ್ತ್ರೀಯರನ್ನು ಕಣ್ಣೆತ್ತಿಯೂ ನೋಡದ, ಇತರರಿಗೆ ಹಿಂಸೆಯನ್ನುಂಟುಮಾಡದಿರುವ, ಸೇವಕರ ಭರಣ-ಪೋಷಣೆಗಳನ್ನು ಮಾಡುವ, ಪ್ರಾಣಿಗಳಿಗೆ ಅಭಯದಾನಮಾಡುವ ಶೂದ್ರನೂ ಸ್ವರ್ಗಕ್ಕೆ ಹೋಗುತ್ತಾನೆ.

ಹೀಗೆ ಸಂಸಾರದಿಂದ ಬಿಡುಗಡೆಹೊಂದಲು ಧರ್ಮಾಚರಣೆಗಿಂತಲೂ ಶ್ರೇಷ್ಠವಾದ ಬೇರೆ ಸಾಧನವೇ ಇಲ್ಲ. ಪಾಪಕರ್ಮಫಲಗಳ ವಿನಾಶಕ್ಕೆ ಧರ್ಮಾಚರಣೆಗಿಂತಲೂ ಬೇರೆಯ ಉಪಾಯವೇ ಇಲ್ಲ. ಅತ್ಯಂತದುರ್ಲಭವಾದ ಮನುಷ್ಯಜನ್ಮವನ್ನು ಪಡೆದನಂತರ ಮನುಷ್ಯನು ಧರ್ಮಕಾರ್ಯವನ್ನೇ ಸದಾ ಮಾಡುತ್ತಿರಬೇಕು. ಧರ್ಮದಲ್ಲಿಯೇ ಅನುರಕ್ತರಾಗಿರುವವರಿಗೆ ಲೋಕದಲ್ಲಿ ಯಾವುದೇ ವಸ್ತುವೂ ದುರ್ಲಭವಲ್ಲ. ಬ್ರಹ್ಮನು ಈ ಜಗತ್ತಿನಲ್ಲಿ ಯಾವ ವರ್ಣಕ್ಕೆ ಯಾವ ಧರ್ಮವೆಂಬುದನ್ನು ವಿಧಾಯಕಮಾಡಿರುವನೋ-ಅಂತಹ ಧರ್ಮವನ್ನೇ ಚೆನ್ನಾಗಿ ಆಚರಿಸುವುದರಿಂದ ಅವನು ತನ್ನ ಪಾಪಗಳೆಲ್ಲವನ್ನೂ ಕಳೆದುಕೊಳ್ಳುತ್ತಾನೆ. ಮನುಷ್ಯನಿಗೆ ಸಹಜವಾದ (ತನ್ನ ವರ್ಣಕ್ಕೆ ಯೋಗ್ಯವಾದ) ಯಾವ ಧರ್ಮವಿರುವುದೋ-ಆ ಧರ್ಮವನ್ನು ಯಾವುದೇ ಕಾರಣದಿಂದಲೂ ಪರಿತ್ಯಜಿಸಬಾರದು. ಅದೇ ಅವನ ಧರ್ಮವಾಗಿರುತ್ತದೆ. (ತನ್ನ ವರ್ಣಾಶ್ರಮೋಕ್ತವಾದ ಧರ್ಮಗಳನ್ನು ಆಚರಿಸುವುದೇ ಅವನ ಪ್ರಧಾನಧರ್ಮವಾಗಿರುತ್ತದೆ.) ಅದರಿಂದಲೇ ಅವನು ಸಿದ್ಧಿಯನ್ನು ಪಡೆಯುತ್ತಾನೆ. ತನ್ನ ಧರ್ಮವು ಅನ್ಯವರ್ಣದ ಧರ್ಮದ ದೃಷ್ಟಿಯಿಂದ ಗುಣರಹಿತವಾಗಿ

ದ್ದರೂ-ಸ್ವಧರ್ಮಾಚರಣೆಯೇ ಪಾಪವನ್ನು ಹೋಗಲಾಡಿಸುತ್ತದೆ. ಹಾಗೆಯೇ ಮನುಷ್ಯನಲ್ಲಿ ಪಾಪಕರ್ಮಗಳು ಹೆಚ್ಚಾದರೆ ಧರ್ಮವೂ ನಾಶವಾಗುತ್ತದೆ. ಅನ್ಯವರ್ಣದವರಿಗೆ ಹೇಳಿರುವ ಕ್ರಿಯೆಯು ಯದ್ಯಪಿ ಧರ್ಮವೇ ಆಗಿದ್ದರೂ ಅಧಿಕಾರಿಯಲ್ಲದವನು ಆ ಧರ್ಮವನ್ನು ಆಚರಿಸಿದರೆ ಪಾಪದ ವೃದ್ಧಿಯುಂಟಾಗುವ ಕಾರಣ ವಿನಾಶಹೊಂದುತ್ತಾನೆ."

ಯುಧಿಷ್ಠಿರನು ಹೇಳುತ್ತಾನೆ:

"ಭಗವಂತನೇ! ದೇವದೇವೇಶನೇ! ಶುಭ ಮತ್ತು ಅಶುಭಕರ್ಮಗಳ ವೃದ್ಧಿ-ಕ್ಷಯಗಳು ಹೇಗಾಗುವುದೆಂಬುದನ್ನು ತಿಳಿಯಲು ನನಗೆ ಹೆಚ್ಚು ಕುತೂಹಲವುಂಟಾಗಿದೆ. ದಯಮಾಡಿ ಹೇಳು."

ಶ್ರೀಕೃಷ್ಣನು ಹೇಳುತ್ತಾನೆ:

"ಮಹಾರಾಜ! ನೀನು ಕೇಳಿರುವ ಈ ಧರ್ಮರಹಸ್ಯವು ತಿಳಿದು ಕೊಳ್ಳಲು ಬಹಳ ಕಷ್ಟತರವಾದುದು. ಮಹಾಜನರೂ ಈ ವಿಷಯದಲ್ಲೇ ಮಗ್ನರಾಗಿರುತ್ತಾರೆ. ಧರ್ಮಸೂಕ್ಷ್ಮವೂ, ಸನಾತನವೂ ಆದ ಶುಭಾಶುಭ ಕರ್ಮಗಳ ವೃದ್ಧಿ-ಕ್ಷಯಗಳು ಹೇಗಾಗುತ್ತವೆಯೆಂಬ ವಿಷಯವನ್ನು ಸಮಗ್ರವಾಗಿ ಹೇಳುವೆನು; ಕೇಳು. ಕುದಿಯುತ್ತಿರುವ ಹೆಚ್ಚು ನೀರಿಗೆ ಸ್ವಲ್ಪ ತಣ್ಣೀರನ್ನು ಬೆರೆಸಿದರೆ ಆ ತಣ್ಣೀರೂ ಕ್ಷಣಮಾತ್ರದಲ್ಲಿ ಬಿಸಿನೀರಾಗಿ ಪರಿವರ್ತನೆ ಹೊಂದುತ್ತದೆ. ಅಂತೆಯೇ ಕೊರೆಯುತ್ತಿರುವ ಹೆಚ್ಚು ತಣ್ಣೀರಿಗೆ ಸ್ವಲ್ಪವೇ ಬಿಸಿನೀರು ಬೆರೆಸಿದರೆ ಮರುಕ್ಷಣದಲ್ಲಿಯೇ ಆ ಬಿಸಿನೀರೂ ತಣ್ಣೀರಾಗುತ್ತದೆ. ಸುಕೃತ-ದುಷ್ಕೃತಗಳ ವಿಷಯವೂ ಹೀಗೆಯೇ. ಹೆಚ್ಚು ಸುಕೃತವನ್ನು ಮಾಡಿದವನು ಒಮ್ಮೆ ಸ್ವಲ್ಪ ಪಾಪಮಾಡಿದರೂ ಅದು ಸುಕೃತದೊಡನೆ ಬೆರೆತುಹೋಗುತ್ತದೆ. ಹೆಚ್ಚು ಪಾಪಮಾಡಿದವನು ಒಮ್ಮೆ ಒಳ್ಳೆಯ ಕಾರ್ಯಮಾಡಿದರೂ ಅದು ಪಾಪಕರ್ಮಗಳೊಡನೆಯೇ ಸೇರಿ ಹೋಗುತ್ತದೆ. ಈ ವಿಷಯದಲ್ಲಿ ಪುನಃ ವಿಚಾರಮಾಡಬೇಕಾಗಿಯೇ ಇಲ್ಲ. ಒಬ್ಬನಲ್ಲಿ ಸುಕೃತ-ದುಷ್ಕೃತಗಳೆರಡೂ ಸಮವಾಗಿರುವುದಾದರೆ ತಾನು ಮಾಡಿದ ಸುಕೃತವನ್ನಾಗಲೀ ದುಷ್ಕೃತವನ್ನಾಗಲೀ-ಮನುಷ್ಯನು ಹೇಳಿ ಕೊಂಡರೆ ಅದು ಕ್ಷೀಣಿಸುತ್ತದೆ. ಹೇಳಿಕೊಳ್ಳದೇ ರಹಸ್ಯವಾಗಿಟ್ಟುಕೊಂಡರೆ ಎರಡೂ ವೃದ್ಧಿಸುತ್ತವೆ (ಮನುಷ್ಯನು ತಾನುಮಾಡಿದ ಪಾಪಕರ್ಮವನ್ನು

ಹೇಳಿ ಪಶ್ಚಾತ್ತಾಪಪಡಬೇಕು. ಮಾಡಿದ ಪಾಪಕರ್ಮವನ್ನು ಗುಟ್ಟಾಗಿಡ ಬಾರದು. ಬಹಿರಂಗಪಡಿಸುವುದರಿಂದ ಪಾಪಕರ್ಮವು ಸವೆಯುತ್ತದೆ. ಮಾಡಿದ ಒಳ್ಳೆಯ ಕಾರ್ಯವನ್ನು ಹೇಳಿಕೊಳ್ಳಬಾರದು. ಹೇಳಿಕೊಂಡರೆ ಪಾಪಕರ್ಮವು ಸವೆದುಹೋಗುವಂತೆಯೇ ಪುಣ್ಯಕರ್ಮವೂ ಸವೆದು ಹೋಗುತ್ತದೆ. ಗುಟ್ಟಾಗಿದ್ದರೆ ಯಾರೊಡನೆಯೂ ಹೇಳಿಕೊಳ್ಳದಿದ್ದರೆ ಪಾಪ ಕರ್ಮದಂತೆಯೇ ಇದೂ ವೃದ್ಧಿಸುತ್ತದೆ. ಪರಿಣಾಮವು ಎರಡಕ್ಕೂ ಒಂದೇ ಆದರೂ ಒಂದು ಅಪೇಕ್ಷಣೀಯ ಮತ್ತೊಂದು ಅನಪೇಕ್ಷಣೀಯ.) ತಾನು ಮಾಡಿದ ಪಾಪಕರ್ಮವನ್ನು ಪ್ರಸಿದ್ಧಪಡಿಸುವುದರಿಂದಲೂ ಮತ್ತು ಮಾಡಿ ದುದಕ್ಕಾಗಿ ಪಶ್ಚಾತ್ತಾಪಪಡುವುದರಿಂದಲೂ ಪಾಪವೂ ವಿನಾಶಹೊಂದುತ್ತದೆ. ಅಂತೆಯೇ ಒಳ್ಳೆಯ ಕಾರ್ಯವನ್ನು ಪ್ರಸಿದ್ಧಿಪಡಿಸಿದರೆ ಅದೂ ನಾಶ ಹೊಂದುತ್ತದೆ. ಸುಕೃತ-ದುಷ್ಕೃತಗಳನ್ನು ಗುಟ್ಟಾಗಿಟ್ಟುಕೊಂಡರೆ ಎರಡೂ ವೃದ್ಧಿಹೊಂದುವುದು ನಿಜ. ಇದರಲ್ಲಿ ಸಂಶಯವೇ ಇಲ್ಲ. ಆದುದರಿಂದ ವಿದ್ವಾಂಸನು ಯಾವುದೇ ಕಾರಣದಿಂದಲೂ ಮಾಡಿದ ಪಾಪಕರ್ಮವನ್ನು ಮುಚ್ಚಿಡಬಾರದು. ದುಷ್ಕೃತವು ಪ್ರಸಿದ್ಧಿಪಡಿಸಿದರೆ ವಿನಾಶಹೊಂದುವ ಕಾರಣ ಅದನ್ನು ಸರ್ವಪ್ರಯತ್ನದಿಂದಲೂ ಬಹಿರಂಗಪಡಿಸಲೇಬೇಕು. ಆದರೆ ಧರ್ಮಕಾರ್ಯವನ್ನು ಮಾತ್ರ ಗುಟ್ಟಾಗಿ ಮಾಡಿ ಅದನ್ನು ಬೇರೆಯವರಲ್ಲಿ ಹೇಳಿಕೊಳ್ಳಬಾರದು.

ವೈಷ್ಣವಧರ್ಮ-೩

ವ್ಯರ್ಥವಾದ ಜನ್ಮ, ದಾನ ಮತ್ತು ಜೀವನಗಳ ವರ್ಣನೆ: ಸಾತ್ತ್ವಿಕದಾನದ ಲಕ್ಷಣ: ದಾನತೆಗೆದುಕೊಳ್ಳಲು ಯೋಗ್ಯನಾದವನ ವರ್ಣನೆ: ಬ್ರಾಹ್ಮಣನ ಮಹಿಮೆ

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಧರ್ಮಜನು-ಕೃಷ್ಣನು ಹೇಳಿದ ಮಾತುಗಳನ್ನು ಕೇಳಿ ಮತ್ತೊಂದು ಧರ್ಮದ ವಿಷಯವಾಗಿ ಶ್ರೀಕೃಷ್ಣನನ್ನು ಪ್ರಶ್ನಿಸಿದನು:

“ಅಚ್ಯುತನೇ! ಯಾವ ಜನ್ಮಗಳು ವ್ಯರ್ಥವಾದುವೆಂದು ಶಾಸ್ತ್ರಗಳು ಹೇಳುತ್ತವೆ? ವ್ಯರ್ಥವಾದ ಫಲವನ್ನು ಕೊಡದ ದಾನಗಳು ಯಾವುವು? ವ್ಯರ್ಥವಾದ ಜೀವನವು ಯಾರದು? ಮನುಷ್ಯನು ಯಾವ ಅವಸ್ಥೆಗಳಲ್ಲಿ

ಮಾಡಿದ ದಾನದ ಫಲವನ್ನು ಈ ಲೋಕದಲ್ಲಿ ಗರ್ಭಸ್ಥನಾಗಿದ್ದಾಗ, ಬಾಲಕನಾಗಿದ್ದಾಗ, ಯುವಕನಾದಾಗ ಮತ್ತು ಮುದುಕನಾದಾಗ ಅನುಭವಿಸುತ್ತಾನೆ? ಸಾತ್ತ್ವಿಕದಾನವು ಯಾವುದು? ರಾಜಸದಾನವು ಯಾವುದು? ತಾಮಸದಾನವು ಯಾವುದು? ಎಂತಹ ದಾನದಿಂದ ದಾನಪಡೆದವನು ಸಂತುಷ್ಟನಾಗುತ್ತಾನೆ? ಉತ್ತಮವಾದ ದಾನವು ಯಾವುದು? ಉತ್ತಮವಾದ ದಾನಗಳಿಂದ ಮನುಷ್ಯರಿಗೆ ಯಾವ ಫಲವು ಸಿಕ್ಕುತ್ತದೆ? ಯಾವ ದಾನದ ಫಲವು ಮನುಷ್ಯನನ್ನು ಸ್ವರ್ಗಕ್ಕೆ ಒಯ್ಯುತ್ತದೆ? ಯಾವ ದಾನದ ಪರಿಣಾಮವಾಗಿ ಪುನಃ ಇಲ್ಲಿಯೇ ಜನ್ಮತಾಳುತ್ತಾನೆ? ಯಾವ ದಾನದ ಫಲವಾಗಿ ಅಧೋಗತಿಯನ್ನು ಹೊಂದುತ್ತಾನೆ? ದೇವದೇವನೇ! ಈ ಎಲ್ಲ ವಿಷಯಗಳನ್ನೂ ಹೇಳುವ ಕೃಪೆಮಾಡು. ದಾನದ ಈ ರಹಸ್ಯವನ್ನು ತಿಳಿಯಲು ಇಚ್ಛಿಸಿದ್ದೇನೆ. ಇದರಲ್ಲಿ ನನಗೆ ಹೆಚ್ಚಿನ ಕುತೂಹಲವುಂಟಾಗಿದೆ. ಮೇಲಾಗಿ ನಿನ್ನ ಮಾತು ಸತ್ಯವೂ ಪುಣ್ಯಪ್ರದವೂ ಆಗಿದೆ."

ಶ್ರೀಕೃಷ್ಣನು ಹೇಳುತ್ತಾನೆ:

"ಯುಧಿಷ್ಠಿರ! ನಿನಗೆ ನಾನು ನ್ಯಾಯಾನುಸಾರವಾಗಿ ಯಥಾವತ್ತಾಗಿ ಎಲ್ಲ ವಿಷಯಗಳನ್ನೂ ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು. ನೀನು ಹೇಳಿದಂತೆಯೇ ಈ ಪ್ರವಚನವು ಪುಣ್ಯಪ್ರದವಾದುದು ಮತ್ತು ಸಕಲವಾದ ಪಾಪಗಳನ್ನೂ ವಿನಾಶಗೊಳಿಸತಕ್ಕುದು.

ಹದಿನಾಲ್ಕು ಬಗೆಯ ಜನ್ಮಗಳು ವ್ಯರ್ಥವಾದುವುಗಳು. ಐವತ್ತೈದು ಬಗೆಯ ದಾನಗಳು ವ್ಯರ್ಥವಾದುವುಗಳು. ಆರು ಪ್ರಕಾರವಾದ ಮನುಷ್ಯನ ಜೀವಿಕೆಗಳು ವ್ಯರ್ಥವಾದುವುಗಳು. ಈ ಎಲ್ಲವನ್ನೂ ನಾನು ಅನುಕ್ರಮವಾಗಿ ಹೇಳುತ್ತೇನೆ.

ಧರ್ಮಘ್ನಾನಾಂ ವೃಥಾ ಜನ್ಮ ಲುಬ್ಧಾನಾಂ ಪಾಪಿನಾಂ ತಥಾ ।
ವೃಥಾ ಪಾಕಂ ಚ ಯೇಽಶ್ನನ್ತಿ ಪರದಾರರತಾಶ್ಚ ಯೇ ।
ಪಾಕಭೇದಕರಾ ಯೇ ಚ ಯೇ ಚ ಸ್ಯುಃ ಸತ್ಯವರ್ಜಿತಾಃ ॥೧೬೦॥

ಧರ್ಮವನ್ನು ನಾಶಗೊಳಿಸುವವರ, ಲೋಭಿಗಳ, ಪಾಪಿಷ್ಠರ, ಬಲಿವೈಶ್ವದೇವಾದಿಗಳನ್ನು ಮಾಡದೇ ಅತಿಥಿಗಳನ್ನು ಸತ್ಕರಿಸದೇ ಕೇವಲ ತಮ

ಗೋಸ್ಕರ ಅಡಿಗೆ ಮಾಡಿಕೊಂಡು ಭೋಜನಮಾಡುವವರ, ಪರಸ್ತ್ರೀಯರಲ್ಲಿ ಅನುರಕ್ತರಾಗಿರುವವರ, ಭೋಜನದಲ್ಲಿ ಪಂಕ್ತಿಭೇದವನ್ನು ಮಾಡುವವರ ಅಸತ್ಯವಾದಿಗಳ ಜನ್ಮವು ವ್ಯರ್ಥ.

ಮೃಷ್ಟಮಶ್ನಾತಿ ಯಶ್ಚೈಕಃ ಕ್ಲಿಶ್ಯಮಾನೈಸ್ತು ಬಾನ್ಧವೈಃ ।
ಪಿತರಂ ಮಾತರಂ ಚೈವ ಉಪಾಧ್ಯಾಯಂ ಗುರುಂ ತಥಾ ॥೧೬೦॥

ಮಾತುಲಂ ಮಾತುಲಾನೀಂ ಚ ಯೋ ನಿಹನ್ಯಾಚ್ಛಪೇತ ವಾ ॥೧೬೧॥

ಬ್ರಾಹ್ಮಣಶ್ಚೈವ ಯೋ ಭೂತ್ವಾ ಸಂಧ್ಯೋಪಾಸನವರ್ಜಿತಃ ।
ನಿಃಸ್ವಾಹೋ ನಿಸ್ಸ್ವಧಶ್ಚೈವ ಶೂದ್ರಾಣಾಮನ್ನಭುಗ್ದ್ವಿಜಃ ॥೧೬೨॥

ಮಮ ವಾ ಶಂಕರಸ್ಯಾಥ ಬ್ರಹ್ಮಣೋ ವಾ ಯುಧಿಷ್ಠಿರ ।
ಅಥವಾ ಬ್ರಾಹ್ಮಣಾನಾಂ ತು ಯೇ ನ ಭಕ್ತಾ ನರಾಧಮಾಃ ।
ವೃಥಾ ಜನ್ಮಾನ್ಯಥೈತೇಷಾಂ ಪಾಪಿನಾಂ ವಿದ್ಧಿ ಪಾಣ್ಡವ ॥೧೬೩॥

ಯಾವನು ಕಷ್ಟಪಡುತ್ತಿರುವ ಬಾಂಧವರೊಡನಿದ್ದರೂ ಒಬ್ಬನೇ ಕುಳಿತು ಮೃಷ್ಟಾನ್ನವನ್ನು ಭುಂಜಿಸುವನೋ-ಅಂತಹವನ ಜನ್ಮವು ವ್ಯರ್ಥವಾದುದು. ಯಾವನು ತಂದೆ-ತಾಯಿಗಳನ್ನೂ, ಉಪಾಧ್ಯಾಯರನ್ನೂ, ಗುರುವನ್ನೂ, ಸೋದರಮಾವನನ್ನೂ, ಅವನ ಪತ್ನಿಯನ್ನೂ ಹಿಂಸೆಮಾಡುವನೋ ಅಥವಾ ನಿಂದಿಸುವನೋ-ಅಂತಹವನ ಜನ್ಮವು ವ್ಯರ್ಥವಾಗುತ್ತದೆ. ಬ್ರಾಹ್ಮಣ ನಾಗಿದ್ದುಕೊಂಡು ಸಂಧ್ಯಾವಂದನೆಯನ್ನು ಬಿಟ್ಟಿರುವವನ, ಅಗ್ನಿಹೋತ್ರಾದಿ ಗಳನ್ನು ಮಾಡದವನ, ಶ್ರಾದ್ಧತರ್ಪಣಾದಿಗಳನ್ನು ಬಿಟ್ಟವನ ಜನ್ಮವು ವ್ಯರ್ಥವಾಗುತ್ತದೆ. ಶೂದ್ರಾನ್ನವನ್ನು ತಿನ್ನುವ ಬ್ರಾಹ್ಮಣನ ಜನ್ಮವು ವ್ಯರ್ಥವಾಗುತ್ತದೆ. ನನಗಾಗಲೀ, ಶಂಕರನಿಗಾಗಲೀ, ಬ್ರಹ್ಮನಿಗಾಗಲೀ, ಬ್ರಾಹ್ಮಣರಿಗಾಗಲೀ-ಭಕ್ತರಾಗದ ನರಾಧಮರ ಜನ್ಮವೂ ವ್ಯರ್ಥವೂ ಸರಿ. ಹೀಗೆ ಇಂತಹ ಪಾಪಿಷ್ಠರ ಜನ್ಮವು ವ್ಯರ್ಥವಾಗುವುದು.

ಅಶ್ರದ್ಧಯಾಪಿ ಯದ್ದತ್ತಮವಮಾನೇನ ವಾಪಿ ಯತ್ ।
ದಮ್ಭಾರ್ಥಮಪಿ ಯದ್ದತ್ತಂ ಯತ್ಪಾಖಣ್ಡಿಹಿತಂ ನೃಪ ॥೧೬೪॥

ಶೂದ್ರಾಚಾರಾಯ ಯದ್ದತ್ತಂ ಯದ್ದತ್ತ್ವಾ ಚಾನುಕೀರ್ತಿತಮ್ ।
ರೋಷಯುಕ್ತಂ ಚ ಯದ್ದತ್ತಂ ಯದ್ದತ್ತಮನುಶೋಚಿತಮ್ ॥೧೬೫॥

ದಮ್ಭಾರ್ಜಿತಂ ಚ ಯದ್ದತ್ತಂ ಯಚ್ಚ ವಾಪ್ಯನೃತಾರ್ಜಿತಮ್ ।
ಬ್ರಾಹ್ಮಣಸ್ವಂ ಚ ಯದ್ದತ್ತಂ ಚೌರ್ಯೇಣಾಪ್ಯರ್ಜಿತಂ ಚ ಯತ್॥೧೬೬॥
ಅಭಿಶಸ್ತಾಹೃತಂ ಯತ್ತು ಯದ್ದತ್ತಂ ಪತಿತೇ ದ್ವಿಜೇ ।
ನಿರ್ಬ್ರಹ್ಮಾಭಿಹೃತಂ ಯತ್ತು ಯದ್ದತ್ತಂ ಸರ್ವಯಾಚಕೈಃ ॥೧೬೭॥
ವಾತ್ಯೈಸ್ತು ಯದ್ಧೃತಂ ದಾನಮಾರೂಢಪತಿತೈಶ್ಚ ಯತ್ ।
ಯದ್ದತ್ತಂ ಸ್ವೈರಿಣೀಭರ್ತುಃ ಶ್ವಶುರಾನ್ನಾನುವರ್ತಿನೇ ॥೧೬೮॥
ಯದ್ಗ್ರಾಮಯಾಚಕಹೃತಂ ಯತ್ಕೃತಘ್ನಹೃತಂ ತಥಾ ।
ಉಪಪಾತಕಿನೇ ದತ್ತಂ ವೇದವಿಕ್ರಯಿಣೇ ಚ ಯತ್ ॥೧೬೯॥
ಸ್ತ್ರೀಜಿತಾಯ ಚ ಯದ್ದತ್ತಂ ಯದ್ದತ್ತಂ ರಾಜಸೇವಿನೇ ।
ಗಣಕಾಯ ಚ ಯದ್ದತ್ತಂ ಯಚ್ಚ ಕಾರಣಿಕಾಯ ಚ ॥೧೭೦॥
ವೃಷಲೀಪತಯೇ ದತ್ತಂ ಯದ್ದತ್ತಂ ಶಸ್ತ್ರಜೀವಿನೇ ।
ಭೃತಕಾಯ ಚ ಯದ್ದತ್ತಂ ವ್ಯಾಲಗ್ರಾಹಿಹೃತಂ ಚ ಯತ್ ॥೧೭೧॥
ಪುರೋಹಿತಾಯ ಯದ್ದತ್ತಂ ಚಿಕಿತ್ಸಕಹೃತಂ ಚ ಯತ್ ।
ಯದ್ವಣಿಕ್ಕರ್ಮಣೇ ದತ್ತಂ ಕ್ಷುದ್ರಮನ್ತ್ರೋಪಜೀವಿನೇ ॥೧೭೨॥
ಯಚ್ಛೂದ್ರಜೀವಿನೇ ದತ್ತಂ ಯಚ್ಚ ದೇವಲಕಾಯ ಚ ।
ದೇವದ್ರವ್ಯಾಶಿನೇ ದತ್ತಂ ಯದ್ದತ್ತಂ ಚಿತ್ರಕರ್ಮಿಣೇ ॥೧೭೩॥
ರಜಕ್ಯೋಪಜೀವಿನೇ ದತ್ತಂ ಯಚ್ಚಮಾಂಸೋಪಜೀವಿನೇ ।
ಸೇವಕಾಯ ಚ ಯದ್ದತ್ತಂ ಯದ್ದತ್ತಂ ಬ್ರಾಹ್ಮಣಬ್ರುವೇ ॥೧೭೪॥
ಅದ್ದೇಶಿನೇ ಚ ಯದ್ದತ್ತಂ ದತ್ತಂ ವಾರ್ಧುಷಿಕಾಯ ಚ ।
ಯದನಾಚಾರಿಣೇ ದತ್ತಂ ಯತ್ತು ದತ್ತಮನಗ್ನಯೇ ॥೧೭೫॥
ಅಸಂಧ್ಯೋಪಾಸಿನೇ ದತ್ತಂ ಯಚ್ಛೂದ್ರಗ್ರಾಮವಾಸಿನೇ ।
ಯನ್ಮಿಥ್ಯಾಲಿಙ್ಗಿನೇ ದತ್ತಂ ದತ್ತಂ ಸರ್ವಾಶಿನೇ ಚ ಯತ್ ॥೧೭೬॥
ನಾಸ್ತಿಕಾಯ ಚ ಯದ್ದತ್ತಂ ಧರ್ಮವಿಕ್ರಯಿಣೇ ಚ ಯತ್ ।
ವರಾಕಾಯ ಚ ಯದ್ದತ್ತಂ ಯದ್ದತ್ತಂ ಕೂಟಸಾಕ್ಷಿಣೇ ॥೧೭೭॥
ಗ್ರಾಮಕೂಟಾಯ ಯದ್ದತ್ತಂ ದಾನಂ ಪಾರ್ಥಿವಪುಙ್ಗವ ।
ವೃಥಾ ಭವತಿ ತತ್ಸರ್ವಂ ನಾತ್ರ ಕಾರ್ಯಾ ವಿಚಾರಣಾ ॥೧೭೮॥

ಯುಧಿಷ್ಠಿರ! ಅಶ್ರದ್ಧೆಯಿಂದಲೂ-ಅವಮಾನಮಾಡಿಯೂ ಕೊಟ್ಟ ದಾನ, ದಾಂಭಿಕವಾಗಿ ಕೊಟ್ಟುದು, ವೈದಿಕಧರ್ಮವನ್ನು ದ್ವೇಷಿಸುವವನಿಗೆ ಮತ್ತು ಶೂದ್ರಾಚಾರವುಳ್ಳವನಿಗೆ ಕೊಟ್ಟುದು, ಕೊಟ್ಟುದಾಗಿ ಹೇಳಿಕೊಂಡುದು, ಕೋಪದಿಂದ ಕೊಟ್ಟುದು, ದಾನಕೊಟ್ಟನಂತರ ಕೊಟ್ಟುದಕ್ಕಾಗಿ ಶೋಕಪಟ್ಟುದು, ದಂಭದಿಂದ ಸಂಪಾದಿಸಿದುದನ್ನು ಕೊಟ್ಟದಾನ, ಸುಳ್ಳುಹೇಳಿ ಸಂಪಾದಿಸಿದುದನ್ನು ಕೊಟ್ಟುದು, ಬ್ರಾಹ್ಮಣನ ಸ್ವತ್ತನ್ನು ಅಪಹರಿಸಿ ಅದನ್ನು ದಾನವಾಗಿ ಕೊಟ್ಟುದು, ಕಳ್ಳತನಮಾಡಿ ಸಂಪಾದಿಸಿದುದನ್ನು ದಾನವಾಗಿ ಕೊಟ್ಟುದು, ನಿಂದ್ಯನಾದ ಪುರುಷನಿಂದ ಕೊಡಲ್ಪಟ್ಟುದು, ಪತಿತನಾದ ಬ್ರಾಹ್ಮಣನಿಗೆ ಕೊಟ್ಟದಾನ, ವೇದವಿಹೀನರಾದವರಿಗೆ ದಾನವಾಗಿ ಕೊಟ್ಟುದು, ಎಲ್ಲರ ಮನೆಯಲ್ಲಿಯೂ ಯಾಚನೆಮಾಡುವವರಿಂದ ಕೊಡಲ್ಪಟ್ಟ ದಾನ, ದಾನಸಂಸ್ಕಾರಹೀನರಾದ ವ್ರಾತ್ಯರಿಂದ ಕೊಡಲ್ಪಟ್ಟ ದಾನ, ಸಂನ್ಯಾಸಾಶ್ರಮವನ್ನು ಸ್ವೀಕರಿಸಿದನಂತರ ಪುನಃ ಗೃಹಸ್ಥಾಶ್ರಮಕ್ಕೆ ಪ್ರವೇಶಿಸಿದ ಪತಿತನಿಂದ ತಂದುದನ್ನು ಕೊಡಲ್ಪಟ್ಟ ದಾನ, ಕುಲಟೆಯ ಗಂಡನಿಗೆ ಕೊಟ್ಟುದು, ಹೆಣ್ಣುಕೊಟ್ಟ ಮಾವನ ಅನ್ನವನ್ನೇ ತಿಂದುಕೊಂಡು ಜೀವಿಕೆಯನ್ನು ನಡೆಸುತ್ತಿರುವವನಿಗೆ ಕೊಟ್ಟ ದಾನ, ಗ್ರಾಮಯಾಚಕನಿಂದ ಮತ್ತು ಕೃತಘ್ನನಾದವನಿಂದ ಕೊಡಲ್ಪಟ್ಟುದು, ಉಪಪಾತಕಗಳನ್ನು ಮಾಡಿದವನಿಗೆ ಕೊಟ್ಟ ದಾನ, ಸಂಬಳವನ್ನು ಪಡೆದುಕೊಂಡು ವೇದವನ್ನು ಹೇಳಿಕೊಡುವವನಿಗೆ ಕೊಟ್ಟುದು, ಹೆಂಗಸಿನ ಅಧೀನದಲ್ಲಿರುವವನಿಗೆ ಕೊಟ್ಟುದು, ಶಾನುಭೋಗ-ಪಟೇಲ, ಶೂದ್ರಸ್ತ್ರೀಯೊಡನೆ ಸಮಾಗಮಮಾಡಿದವ-ಇವರಿಗೆ ಕೊಟ್ಟದಾನ, ಶಸ್ತ್ರಗಳ ಮಾರಾಟದಿಂದ ಜೀವಿಸುವವನಿಗೆ ಮತ್ತು ಕೂಲಿ ತೆಗೆದುಕೊಂಡು ಜೀವಿಸುವವನಿಗೆ ಕೊಟ್ಟ ದಾನ, ನಿಷ್ಠೆಯಿಲ್ಲದ ಪುರೋಹಿತನಿಗೆ ಮತ್ತು ವೈದ್ಯನಿಗೆ ಕೊಟ್ಟ ದಾನ, ಸರ್ಪವನ್ನು ಹಿಡಿಯುವವನಿಗೆ ಕೊಟ್ಟುದು, ವ್ಯಾಪಾರದಿಂದ ಜೀವಿಸುವವನಿಗೆ ಕೊಟ್ಟ ದಾನ, ಕ್ಷುದ್ರವಾದ ಮಂತ್ರಗಳನ್ನು ಜಪಿಸಿಕೊಂಡು ಅದರಿಂದಲೇ ಜೀವಿಕೆಯನ್ನು ನಡೆಸುತ್ತಿರುವವನಿಗೆ ಕೊಟ್ಟುದು, ಶೂದ್ರನಂತೆ ಜೀವಿಸುವವನಿಗೆ ಕೊಟ್ಟ ದಾನ,

ವೇತನವನ್ನು ಪಡೆದು ದೇವಮಂದಿರದಲ್ಲಿ ಪೂಜೆಮಾಡುವವನಿಗೆ ಕೊಟ್ಟ ದಾನ, ದೇವರ ದ್ರವ್ಯವನ್ನು ತಿಂದವನಿಗೆ ಕೊಟ್ಟ ದಾನ, ಚಿತ್ರ ಬರೆಯುವವನಿಗೆ ಕೊಟ್ಟುದು, ನಾಟಕವೃತ್ತಿಯಿಂದ ಜೀವಿಸುವವನಿಗೆ ಕೊಟ್ಟುದು, ಮಾಂಸವನ್ನು ಮಾರಿ ಜೀವಿಕೆಯನ್ನು ನಡೆಸುತ್ತಿರುವವನಿಗೆ ಕೊಟ್ಟ ದಾನ, ಸೇವಕನಿಗೆ ಕೊಟ್ಟದು, ಬ್ರಾಹ್ಮಣೋಚಿತವಾದ ಆಚಾರ-ವ್ಯವಹಾರಗಳಿಲ್ಲದಿದ್ದರೂ ಬ್ರಾಹ್ಮಣನೆಂದು ಹೇಳಿಕೊಳ್ಳುವವನಿಗೆ ಕೊಟ್ಟುದು, ಉಪದೇಶಿಸಲು ಶಕ್ತಿಯಿಲ್ಲದವನಿಗೆ ಕೊಟ್ಟುದು, ಬಡ್ಡಿಹಣದಿಂದ ಜೀವಿಕೆಯನ್ನು ನಡೆಸುವವನಿಗೆ ಕೊಟ್ಟ ದಾನ, ಆಚಾರಹೀನನಿಗೆ ಕೊಟ್ಟುದು, ಅಗ್ನಿಹೋತ್ರ ಮಾಡದವನಿಗೆ, ಸಂಧ್ಯಾವಂದನೆ ಮಾಡದವನಿಗೆ, ಶೂದ್ರರ ಗ್ರಾಮದಲ್ಲಿ ವಾಸಮಾಡುವ ಬ್ರಾಹ್ಮಣನಿಗೆ, ಸುಳ್ಳುವೇಷಗಳನ್ನು ಧರಿಸುವವನಿಗೆ, ಎಲ್ಲೆಂದರಲ್ಲಿ ಸಿಕ್ಕಿದುದನ್ನು ತಿನ್ನುವವನಿಗೆ, ನಾಸ್ತಿಕನಿಗೆ, ಧರ್ಮವನ್ನು ಮಾರುವವನಿಗೆ (ಧರ್ಮದ ಸೋಗಿನಿಂದ ಜೀವಿಸುವವನಿಗೆ), ನೀಚವೃತ್ತಿಯುಳ್ಳವನಿಗೆ, ಸುಳ್ಳುಸಾಕ್ಷಿಹೇಳಿದವನಿಗೆ, ಕೂಟನೀತಿಯನ್ನು ಆಶ್ರಯಿಸಿ ಗ್ರಾಮದಲ್ಲಿ ಪರಸ್ಪರವಾಗಿ ಜಗಳತಂದಿಡುವ ಬ್ರಾಹ್ಮಣನಿಗೆ ಕೊಟ್ಟ ದಾನ-ಇವು ವ್ಯರ್ಥವಾಗುತ್ತವೆ. ಇದರಲ್ಲಿ ಸಂಶಯವೇ ಇಲ್ಲ.

ಯುಧಿಷ್ಠಿರ! ಇವರೆಲ್ಲರೂ ವಿಷಯಲೋಲುಪರು. ಹೆಸರಿಗೆ ಮಾತ್ರವೇ ಬ್ರಾಹ್ಮಣರು. ಇವರು ತಮ್ಮನ್ನೂ ಉದ್ಧರಿಸಿಕೊಳ್ಳುವುದಿಲ್ಲ. ದಾನ ಕೊಡುವವರನ್ನೂ ಉದ್ಧರಿಸುವುದಿಲ್ಲ. ಇವರಿಗೆ ಕೊಡುವ ದಾನವು ಅಪರಿಮಿತವಾಗಿದ್ದರೂ ಬೂದಿಯಲ್ಲಿ ಹೋಮಮಾಡಿದಂತೆ ವ್ಯರ್ಥ ವಾಗುತ್ತದೆ. ಇಂತಹವರಿಗೆ ಕೊಟ್ಟ ದಾನದಿಂದ ಅಲ್ಪ-ಸ್ವಲ್ಪ ಫಲವು ಪ್ರಾಪ್ತವಾದರೂ ರಾಕ್ಷಸರು ಮತ್ತು ಪಿಶಾಚರು ಸಂತೋಷಭರಿತರಾಗಿ ಆ ಫಲವನ್ನೂ ಅಪಹರಿಸಿಬಿಡುತ್ತಾರೆ. ಇಂತಹವರಿಗೆ ಕೊಟ್ಟ ದಾನವು ವ್ಯರ್ಥವಾಗುವುದೆಂದು ಸಂಕ್ಷೇಪವಾಗಿ ಹೇಳಿದ್ದೇನೆ. ಇನ್ನು ಮುಂದೆ ನಾನು ಯಾವ ಯಾವ ಮನುಷ್ಯರ ಜೀವನವು ವ್ಯರ್ಥವೆಂಬುದನ್ನು ಹೇಳುವೆನು.

ಯೇ ಮಾಂ ನ ಪ್ರತಿಪದ್ಯನ್ತೇ ಶಙ್ಕರಂ ವಾ ನರಾಧಮಾಃ ।
ಬ್ರಾಹ್ಮಣಾನ್ವಾ ಮಹೀದೇವಾನ್ವೃಥಾ ಜೀವನ್ತಿ ತೇ ನರಾಃ ॥೧೮೩॥

ಯಾವ ನರಾಧಮರು ನನ್ನನ್ನಾಗಲೀ, ಶಂಕರನನ್ನಾಗಲೀ, ಭೂದೇವತೆಗಳಾದ ಬ್ರಾಹ್ಮಣರನ್ನಾಗಲೀ-ಶರಣುಹೊಂದುವುದಿಲ್ಲವೋ ಅಂತಹವರ ಜೀವನವು ವ್ಯರ್ಥವೇ ಸರಿ.

ಹೇತುಶಾಸ್ತ್ರೇಷು ಯೇ ಸಕ್ತಾಃ ಕುದೃಷ್ಟಿಪಥಮಾಶ್ರಿತಾಃ ।
ದೇವಾನ್ನಿನ್ದನ್ತ್ಯನಾಚಾರಾ ವೃಥಾ ಜೀವನ್ತಿ ತೇ ನರಾಃ ॥೧೮೪॥

ಯಾರು ತರ್ಕಶಾಸ್ತ್ರದಲ್ಲಿಯೇ ಆಸಕ್ತರಾಗಿರುವರೋ, ನಾಸ್ತಿಕರ ದಾರಿಯನ್ನು ಹಿಡಿದಿರುವರೋ, ದೇವತೆಗಳನ್ನು ನಿಂದಿಸುವರೋ ಮತ್ತು ಸದಾಚಾರರಹಿತರಾಗಿರುವರೋ-ಅಂತಹವರ ಜೀವನವು ವ್ಯರ್ಥವೇ ಸರಿ.

ಕುಶಲೈಃ ಕೃತಶಾಸ್ತ್ರಾಣಿ ಪಠಿತ್ವಾ ಯೇ ನರಾಧಮಾಃ ।
ವಿಪ್ರಾನ್ನಿನ್ದನ್ತಿ ಯಜ್ಞಾಂಶ್ಚ ವೃಥಾ ಜೀವನ್ತಿ ತೇ ನರಾಃ ॥೧೮೫॥

ಯಾವ ನರಾಧಮರು ನಾಸ್ತಿಕವಾದದಲ್ಲಿ ಕುಶಲರಾದವರಿಂದ ರಚಿತವಾದ ಶಾಸ್ತ್ರಗಳನ್ನು ಓದಿಕೊಂಡು ಬ್ರಾಹ್ಮಣರನ್ನೂ ಯಜ್ಞಗಳನ್ನೂ ನಿಂದಿಸುವರೋ-ಅಂತಹವರ ಜೀವನವೂ ವ್ಯರ್ಥವೇ ಸರಿ.

ಯೇ ದುರ್ಗಾಂ ವಾ ಕುಮಾರಂ ವಾ ವಾಯುಮಗ್ನಿಂ ಜಲಂ ರವಿಮ್ ।
ಪಿತರಂ ಮಾತರಂ ಚೈವ ಗುರುಮಿನ್ದ್ರಂ ನಿಶಾಕರಮ್ ।
ಮೂಢಾ ನಿನ್ದನ್ತ್ಯನಾಚಾರಾ ವೃಥಾ ಜೀವನ್ತೀ ತೇ ನರಾಃ ॥೧೮೬॥

ಆಚಾರರಹಿತರಾದ ಯಾವ ಮೂಢರು ದುರ್ಗೆಯನ್ನೂ, ಕುಮಾರಸ್ವಾಮಿಯನ್ನೂ, ವಾಯುವನ್ನೂ, ಅಗ್ನಿಯನ್ನೂ, ಜಲವನ್ನೂ, ಸೂರ್ಯನನ್ನೂ, ತಂದೆ-ತಾಯಿಗಳನ್ನೂ, ಗುರುವನ್ನೂ, ಇಂದ್ರನನ್ನೂ, ಚಂದ್ರನನ್ನೂ, ನಿಂದಿಸುವರೋ-ಅಂತಹವರ ಜೀವನವು ವ್ಯರ್ಥವೇ ಸರಿ.

ವಿದ್ಯಮಾನೇ ಧನೇ ಯಸ್ತು ದಾನಧರ್ಮವಿವರ್ಜಿತಃ ।
ಮೃಷ್ಟಮಶ್ನಾತಿ ಯಶ್ಚೈಕೋ ವೃಥಾ ಜೀವತಿ ಸೋಽಪಿ ಚ ॥೧೮೭॥

ಯಾವನು ಧನವಂತನಾಗಿದ್ದರೂ ದಾನ-ಧರ್ಮಗಳನ್ನೂ ಮಾಡುವುದಿಲ್ಲವೋ, ಯಾರಿಗೂ ಕೊಡದೇ ಒಬ್ಬನೇ ಮೃಷ್ಟಾನ್ನವನ್ನು ಭುಂಜಿಸುವನೋ-ಅಂತಹವನ ಜೀವನವೂ ವ್ಯರ್ಥವೇ ಸರಿ.

ಯುಧಿಷ್ಠಿರ! ವ್ಯರ್ಥವಾದ ಜೀವನವು ಯಾವುದೆಂಬುದನ್ನು ಹೇಳಿಯಾಯಿತು. ಇನ್ನು ಮುಂದೆ ದಾನಮಾಡಿದುದರ ಫಲವು ಯಾವ ಕಾಲದಲ್ಲಿ ಲಭಿಸುವುದೆಂಬುದರ ವಿಷಯವಾಗಿ ಹೇಳುತ್ತೇನೆ.

ತಮೋಗುಣದಿಂದ ಯುಕ್ತವಾದ ಮನಸ್ಸಿನಿಂದ ಕೂಡಿ ದಾನಮಾಡುವವನು ಅದರ ಫಲವನ್ನು ಗರ್ಭದಲ್ಲಿರುವಾಗಲೇ ಉಪಭೋಗಿಸುತ್ತಾನೆ. ಈರ್ಷ್ಯೆ ಮತ್ತು ಮಾತ್ಸರ್ಯಗಳಿಂದ ಯುಕ್ತನಾಗಿ ಅರ್ಥಲೋಭದಿಂದ ದಾಂಭಿಕವಾಗಿ ದಾನಮಾಡುವವನು ಬಾಲಕನಾಗಿದ್ದಾಗಲೇ ಅದರ ಫಲವನ್ನು ಅನುಭವಿಸುತ್ತಾನೆ. ಭೋಗಗಳನ್ನು ಭೋಗಿಸಲು ಅಶಕ್ತನಾಗಿ ವ್ಯಾಧಿಗಳಿಂದ ಬಹಳವಾಗಿ ಪೀಡಿಸಲ್ಪಡುತ್ತಿರುವವನು ದಾನಮಾಡಿದರೆ ಅವನು ಅದರ ಫಲವನ್ನು ವೃದ್ಧಾಪ್ಯದಲ್ಲಿ ಅನುಭವಿಸುತ್ತಾನೆ. ಸ್ನಾನಮಾಡಿ ಪವಿತ್ರನಾಗಿ ಪ್ರಸನ್ನನಾದ ಮನಸ್ಸಿನಿಂದಲೂ ಮತ್ತು ಇಂದ್ರಿಯಗಳಿಂದಲೂ ಕೂಡಿ ಶ್ರದ್ಧೆಯಿಂದ ದಾನಮಾಡುವವನು ಅದರ ಫಲವನ್ನು ಯೌವನದಲ್ಲಿ ಅನುಭವಿಸುತ್ತಾನೆ. ದಾನಕೊಡಲು ಯೋಗ್ಯವಾದ ವಸ್ತುವನ್ನು ತಾನೇ ತೆಗೆದುಕೊಂಡು ಹೋಗಿ ಭಕ್ತಿಯಿಂದ ಸತ್ಪಾತ್ರನಲ್ಲಿ ದಾನಮಾಡುವವನು ಸಾಯುವವರೆಗೂ, ಎಲ್ಲ ಕಾಲಗಳಲ್ಲಿಯೂ ಆ ದಾನದ ಫಲವನ್ನು ಅನುಭವಿಸುತ್ತಿರುತ್ತಾನೆ.

ಯುಧಿಷ್ಠಿರ! ದಾನ ಮತ್ತು ದಾನದ ಫಲಗಳು ಸಾತ್ತ್ವಿಕ-ರಾಜಸ-ತಾಮಸಗಳೆಂಬ ಮೂರು ಪ್ರಕಾರವಾಗಿವೆ. ದಾನದ ಗತಿಯೂ ಮೂರು ಪ್ರಕಾರವಾಗಿಯೇ ಇದೆ. ಅದನ್ನೇ ಹೇಳುವೆನು; ಕೇಳು. ‘ದಾನ ಕೊಡುವುದು ನನ್ನ ಕರ್ತವ್ಯವಾಗಿದೆ”-ಎಂದು ಭಾವಿಸಿಕೊಂಡು ಯಾವ ವಿಧವಾದ ಉಪಕಾರವನ್ನೂ ಮಾಡದಿರುವ ಬ್ರಾಹ್ಮಣನಿಗೆ ಕೊಡುವ ದಾನವು ಸಾತ್ತ್ವಿಕವಾದುದು. ಶ್ರೋತ್ರಿಯನೂ, ದರಿದ್ರನೂ ಮತ್ತು ಬಹುಕುಟುಂಬಿಯೂ ಆಗಿರುವ ಬ್ರಾಹ್ಮಣನಿಗೆ ಸಂತುಷ್ಟವಾದ ಮನಸ್ಸಿನಿಂದ ಕೊಡುವ ದಾನವು ಸಾತ್ತ್ವಿಕವಾದುದು. ವೇದಾಕ್ಷರಗಳ ಗಂಧವೇ ಇಲ್ಲದ ವನಿಗೆ, ಹಿಂದೆ ಉಪಕಾರಮಾಡಿರುವವನಿಗೆ ಮತ್ತು ಐಶ್ವರ್ಯವಂತನಿಗೆ

ಕೊಡುವ ದಾನವು ರಾಜಸವು. ನೆಂಟನಿಗೆ, ಪ್ರಮತ್ತನಾಗಿರುವವನಿಗೆ, ಅಪಾತ್ರನಿಗೆ ಫಲಾಭಿಲಾಷೆಯಿಂದ ಕೊಡಲ್ಪಡುವ ದಾನವು ರಾಜಸವು. ವೈಶ್ವದೇವವನ್ನು ಮಾಡದ ಅಶ್ರೋತ್ರಿಯನಾದ ಕಳ್ಳನಿಗೆ ಕೊಡಲ್ಪಡುವ ದಾನವು ತಾಮಸವು, ಕೋಪದಿಂದ ಅವಹೇಳನಪೂರ್ವಕವಾಗಿ ತಿರಸ್ಕಾರದಿಂದ ಕೊಟ್ಟ ದಾನವೂ, ಸೇವಕನಿಗೆ ಕೊಡುವ ದಾನವೂ ತಾಮಸವು. ದೇವತೆಗಳು, ಪಿತೃಗಳು, ಮುನಿಗಳು ಮತ್ತು ಅಗ್ನಿಗಳು ಸಾತ್ತ್ವಿಕದಾನವನ್ನು ಪರಿಗ್ರಹಿಸುತ್ತಾರೆ ಮತ್ತು ಅದರಿಂದ ತೃಪ್ತರಾಗುತ್ತಾರೆ.

ದಾನವರು, ದೈತ್ಯರು, ಗ್ರಹಗಳು, ಯಕ್ಷರು, ರಾಕ್ಷಸರು-ರಾಜಸದಾನವನ್ನು ಪರಿಗ್ರಹಿಸುತ್ತಾರೆ. ದೇವ-ಪಿತೃಗಳು ರಾಜಸದಾನವನ್ನು ತೆಗೆದುಕೊಳ್ಳುವುದಿಲ್ಲ. ಪಿಶಾಚರು, ಪ್ರೇತಗಳು, ಮಲಿನವಾದ ಕರ್ಮವನ್ನು ಮಾಡುವ ಪ್ರೇತಗಳು ತಾಮಸವಾದ ದಾನವನ್ನು ಉಪಭೋಗಿಸುತ್ತವೆ.

(ದಾನಕೊಡುವುದು ಪಾಪಪರಿಹಾರಕ್ಕಾಗಿ ಮತ್ತು ದೇವತಾಪ್ರೀತಿಗಾಗಿ. ಆದರೆ ಸಾತ್ತ್ವಿಕದಾನವನ್ನು ಮಾಡಿದರೆ ಮಾತ್ರವೇ ದೇವತೆಗಳಿಗೆ ಪ್ರಿಯವಾಗುತ್ತದೆಯೇ ಹೊರತು ರಾಜಸ-ತಾಮಸದಾನವನ್ನು ದೇವತೆಗಳ ಪ್ರೀತಿಗಾಗಿ-ಎಂದು ಸಂಕಲ್ಪಿಸಿದರೂ ಅವರು ಅದನ್ನು ಮುಟ್ಟುವುದಿಲ್ಲ. ಆದರೆ ರಾಜಸ-ತಾಮಸದಾನಗಳು ಕೂಡ ವ್ಯರ್ಥವಾಗುವುದಿಲ್ಲ. ದೈತ್ಯ-ದಾನವರು, ಪಿಶಾಚ-ಪ್ರೇತಗಳು ಅಂತಹ ದಾನಗಳಿಂದ ಸುಪ್ರೀತರಾಗಿ ಅವರಿಗೆ ತಕ್ಕುದಾದ ಫಲಗಳನ್ನು ಕೊಡುತ್ತಾರೆ.)

ಯುಧಿಷ್ಠಿರ! ಮುಂದೆ ನಿನಗೆ ಸಾತ್ತ್ವಿಕ-ರಾಜಸ-ತಾಮಸದಾನಿಗಳಿಗೆ ಪ್ರಾಪ್ತವಾಗುವ ಮೂರು ವಿಧವಾದ ಗತಿಯನ್ನು ಹೇಳುವೆನು ಕೇಳು.

ದಾನಗಳಲ್ಲಿ ಸಾತ್ತ್ವಿಕವಾದ ರೀತಿಗಳಲ್ಲಿ ದಾನಮಾಡುವವನು ಉತ್ತಮವಾದ ಫಲವನ್ನು ಹೊಂದುತ್ತಾನೆ. ರಾಜಸವಾದ ರೀತಿಗಳಲ್ಲಿ ದಾನಮಾಡುವವನು ಮಧ್ಯಮಫಲವನ್ನೂ ತಾಮಸರೀತಿಗಳಲ್ಲಿ ದಾನ ಮಾಡುವವನು ಅಧಮಫಲವನ್ನೂ ಉಪಭೋಗಿಸುತ್ತಾನೆ.

ಅಭಿಗಮ್ಯೋಪನೀತಾನಾಂ ದಾನಾನಾಂ ಫಲಮುತ್ತಮಮ್ ।
ಮಧ್ಯಮಂ ತು ಸಮಾಹೂಯ ಜಘನ್ಯಂ ಯಾಚತೇ ಫಲಮ್ ॥

ಸತ್ಪಾತ್ರರನ್ನು ಹುಡುಕಿಕೊಂಡು ಹೋಗಿ ದಾನಕೊಡುವುದು ಉತ್ತಮವಾದ ಫಲವನ್ನು ಕೊಡುತ್ತದೆ. ಸತ್ಪಾತ್ರರನ್ನು ಮನೆಗೆ ಕರೆದುಕೊಡುವ ದಾನವು ಮಧ್ಯಮಫಲವನ್ನು ಕೊಡುತ್ತದೆ. ಯಾಚಿಸಲು ಬಂದವರಿಗೆ ದಾನ ಕೊಡುವುದು ಅಧಮಫಲವನ್ನು ಕೊಡುತ್ತದೆ. ಯಾಚನೆಯನ್ನು ಮಾಡದೇ ಇರುವವನಿಗೆ ದಾನಮಾಡುವವನು ಶ್ರೇಷ್ಠವಾದ ಗತಿಯನ್ನೂ ಮನೆಗೇ ಆಹ್ವಾನಿಸಿ ದಾನಮಾಡುವವನು ಮಧ್ಯಮಗತಿಯನ್ನೂ ಹೊಂದುತ್ತಾನೆ. ಯಾಚಕನಿಗೆ ದಾನಮಾಡುವವನು ಬಹಳ ಕೆಳಗಿನ ಗತಿಯನ್ನು ಹೊಂದುತ್ತಾನೆ.

ಉತ್ತಮಗತಿಯೆಂದರೆ ದೈವೀಗತಿ; ಮಧ್ಯಮಗತಿಯೆಂದರೆ ಮಾನುಷಗತಿ; ಜಘನ್ಯಗತಿಯೆಂದರೆ ತಿರ್ಯಗ್ಯೋನಿಗಳಲ್ಲಿ ಜನ್ಮತಾಳುವುದು. ಹೀಗೆ ಮೂರು ಗತಿಗಳು ಹೇಳಲ್ಪಟ್ಟಿವೆ. ಆಹಿತಾಗ್ನಿಗಳಾದ ಅಗ್ನಿಹೋತ್ರಿಗಳು ದಾನಕೊಡಲು ಸತ್ಪಾತ್ರರು. ಅಂತಹ ವಿಪ್ರರಲ್ಲಿ ಕೊಡುವ ದಾನವು ಅಕ್ಷಯವಾದ ಫಲವನ್ನು ನೀಡುವುದೆಂದು ಹೇಳಲ್ಪಟ್ಟಿದೆ.

ಯುಧಿಷ್ಠಿರ! ದರಿದ್ರರಾಗಿರುವ ಶ್ರೋತ್ರಿಯಬ್ರಾಹ್ಮಣರ ಭರಣ-ಪೋಷಣೆಗಳನ್ನು ಮಾಡು. ಐಶ್ವರ್ಯವಂತರಾದ ಬ್ರಾಹ್ಮಣರನ್ನು ರಕ್ಷಿಸು. ಧನಹೀನರಾದ ದರಿದ್ರರನ್ನೂ ದಾನಗಳ ಪ್ರದಾನದಿಂದ ಚೆನ್ನಾಗಿ ಪೂಜಿಸು. ರೋಗಿಯಾದವನಿಗೆ ಔಷಧಗಳನ್ನು ಕೊಡಿಸಿ ಉಪಚರಿಸಬೇಕೇ ಹೊರತು ರೋಗವಿಲ್ಲದವನಿಗೆ ದೃಢಕಾಯನಿಗೆ ಔಷಧಗಳ ಅವಶ್ಯಕತೆಯೇನಿದೆ?

ಪಾಪಂ ಪ್ರತಿಗೃಹೀತಾರಂ ಪ್ರದಾತುರುಪಗಚ್ಛತಿ ।
ಪ್ರತಿಗ್ರಹೀತುರ್ಯತ್ಪುಣ್ಯಂ ಪ್ರದಾತಾರಮುಪೈತಿ ತತ್ ।
ತಸ್ಮಾದ್ದಾನಂ ಸದಾ ಕಾರ್ಯಂ ಪರತ್ರ ಹಿತಮಿಚ್ಛತಾ ॥೨೧೧॥

ದಾನಿಯ ಪಾಪವು ದಾನದೊಡನೆಯೇ ದಾನವನ್ನು ತೆಗೆದುಕೊಳ್ಳುವನನ್ನು ಹೋಗಿ ಸೇರುತ್ತದೆ. ಇಷ್ಟುಮಾತ್ರವಲ್ಲದೇ ದಾನತೆಗೆದುಕೊಂಡವನಲ್ಲಿರುವ ಪುಣ್ಯವೂ ದಾನಿಗೆ ಸೇರುತ್ತದೆ. (ದಾನಿಯ ದಾನ ಮತ್ತು

ಪಾಪಗಳಿಗೆ ವಿನಿಮಯರೂಪವಾಗಿ ದಾನತೆಗೆದುಕೊಳ್ಳುವವನಲ್ಲಿರುವ ಪುಣ್ಯವು ದಾನಿಗೆ ಸೇರುತ್ತದೆ.) ಆದುದರಿಂದ ಪರಲೋಕದಲ್ಲಿ ತನ್ನ ಹಿತವನ್ನು ಬಯಸುವವನು ದಾನವನ್ನು ಸದಾ ಮಾಡುತ್ತಲೇ ಇರಬೇಕು.

ವೇದಗಳನ್ನು ಅಧ್ಯಯನಮಾಡಿರುವ, ಶುದ್ಧವಾದ ಆಚಾರವನ್ನಿಟ್ಟು ಕೊಂಡಿರುವ, ಶೂದ್ರಾನ್ನವನ್ನು ಭುಂಜಿಸದೇ ಇರುವ ವಿದ್ವಾಂಸರಿಗೆ ಮಹಾದಾನಮಯವಾದ ನಿಧಿಯನ್ನು ಪ್ರಯತ್ನಪೂರ್ವಕವಾಗಿ ಕೊಡಬೇಕು. ಯಾವ ಬ್ರಾಹ್ಮಣನ ಭಾರ್ಯೆಯರು ತಮ್ಮ ಪತಿಯು ಊಟಮಾಡಿದ ನಂತರ ಉಳಿಯುವ ಅನ್ನಶೇಷವನ್ನು ಸಾವಿರಪಾಲು ಅಧಿಕಗುಣದ್ದೆಂದು ಭಾವಿಸುವರೋ-ಅಂತಹ ಬ್ರಾಹ್ಮಣರನ್ನು ನೀನು ಭೋಜನಕ್ಕೆ ಆಹ್ವಾನಿಸು. ದರಿದ್ರಕುಲದಲ್ಲಿ ಹುಟ್ಟಿರುವ ಬ್ರಾಹ್ಮಣನನ್ನು ಆಮಂತ್ರಿಸಿ ಅವನಿಗೆ ಯಾವುದೇ ಕಾರಣದಿಂದಲೂ ನಿರಾಶೆಯನ್ನುಂಟುಮಾಡಬಾರದು. ಅವನ ಆಶೆಯು ಸಂಪೂರ್ಣವಾಗಿ ವಿನಾಶವಾಗದಂತೆ ಅವನನ್ನು ಆದರಿಸಿ ಅವನ ಆಶೆಯನ್ನು ಪೂರ್ಣಗೊಳಿಸಿಕೊಡಬೇಕು. (ಪುನಃ ಅವನಿಗೆ ಇಂತಹುದೇ ಬೇಕೆಂಬ ಆಶೆಯೇ ಮೂಡದ ರೀತಿಯಲ್ಲಿ ಅವನಿಗೆ ದಾನಗಳನ್ನು ಕೊಡಬೇಕು.) ಯಾರು ನನ್ನ ಭಕ್ತರೋ, ನನ್ನಲ್ಲಿಯೇ ಮನಸ್ಸುಳ್ಳವರೋ, ನನ್ನನ್ನೇ ಏಕಾಶ್ರಯನನ್ನಾಗಿ ಪಡೆದಿರುವರೋ, ನನ್ನನ್ನೇ ಸದಾ ಪೂಜಿಸುವರೋ, ನನ್ನನ್ನು ಹೊಂದುವ ಸಲುವಾಗಿಯೇ ನಿಯಮವ್ರತವುಳ್ಳವರಾಗಿರು ವರೋ-ಅಂತಹವರನ್ನು ನೀನು ಪ್ರಯತ್ನಪೂರ್ವಕವಾಗಿ ಸತ್ಕರಿಸಬೇಕು.

ಯುಧಿಷ್ಠಿರ! ಅವರು ಪಾವನರಾಗಬೇಕೆಂದೇ ನಾನು ಎರಡು ಸಂಧ್ಯೆಗಳಲ್ಲಿಯೂ ಯೋಗದಲ್ಲಿ ನೆಲೆಸುತ್ತೇನೆ. ಈ ನನ್ನ ವ್ರತವು ಅವಿಚ್ಛಿನ್ನವಾಗಿ ನಡೆಯುತ್ತಿದೆ. ಆದುದರಿಂದ ಪಾಪರಹಿತರಾದ ನನ್ನ ಭಕ್ತರು ಆತ್ಮಶುದ್ಧಿಗಾಗಿ ಎರಡು ಸಂಧ್ಯೆಗಳಲ್ಲಿಯೂ ಪ್ರಣವಸಹಿತವಾಗಿ **ನಮೋ ನಾರಾಯಣಾಯ**-ಎಂಬ ಅಷ್ಟಾಕ್ಷರೀಮಂತ್ರವನ್ನು ಜಪಿಸುತ್ತಿರಬೇಕು. ಸಂಧ್ಯೆಯಲ್ಲಿ ಅಷ್ಟಾಕ್ಷರೀಮಂತ್ರವನ್ನು ಜಪಿಸುವುದರಿಂದ ಭಕ್ತರ ಪಾಪಗಳೇ ಅಲ್ಲದೇ ಇತರ ಬ್ರಾಹ್ಮಣರ ಪಾಪಗಳೂ ಪರಿಹಾರವಾಗುತ್ತವೆ. ಆದುದರಿಂದ ಆತ್ಮಶುದ್ಧಿಗಾಗಿ ಬ್ರಾಹ್ಮಣರು ಎರಡು ಸಂಧ್ಯೆಗಳಲ್ಲಿಯೂ ಸಂಧ್ಯಾವಂದನೆ

ಯನ್ನು ಮಾಡುವುದಲ್ಲದೇ ಅಷ್ಟಾಕ್ಷರಿಯನ್ನು ಜಪಿಸಬೇಕು. ಯಾವ ಬ್ರಾಹ್ಮಣನು ಹೀಗೆ ಎರಡು ಸಂಧ್ಯೆಗಳಲ್ಲಿಯೂ ಸಂಧ್ಯಾವಂದನೆಯನ್ನು ಮಾಡಿ ಅಷ್ಟಾಕ್ಷರೀಮಂತ್ರವನ್ನೂ ಜಪಿಸುವನೋ-ಅಂತಹ ಬ್ರಾಹ್ಮಣನನ್ನೇ ದೇವ-ಪಿತೃಕಾರ್ಯಗಳಿಗೆ ಜುಗುಪ್ಸೆಯಿಲ್ಲದೇ ಆಮಂತ್ರಿಸಬೇಕು. ಅಂತಹ ಬ್ರಾಹ್ಮಣನೇನಾದರೂ ನಿಂದಿತನಾದರೆ-ಅಗ್ನಿಯು ಕಟ್ಟಿಗೆಯನ್ನು ಸುಟ್ಟು ಭಸ್ಮಮಾಡುವಂತೆ-ಅವನು ಶ್ರಾದ್ಧವನ್ನೇ ಧ್ವಂಸಮಾಡಿಬಿಡುತ್ತಾನೆ.

ಭಾರತಂ ಮಾನವೋ ಧರ್ಮೋ ವೇದಾಃ ಸಾಙ್ಗಾಶ್ಚಿಕಿತ್ಸಿತಮ್ ।
ಆಜ್ಞಾಸಿದ್ಧಾನಿ ಚತ್ವಾರಿ ನ ಹನ್ತವ್ಯಾನಿ ಹೇತುಭಿಃ ॥೨೨೦॥

ಮಹಾಭಾರತ, ಮನುಸ್ಮೃತಿ, ಷಡಂಗಗಳಿಂದ ಯುಕ್ತವಾದ ನಾಲ್ಕು ವೇದಗಳು ಮತ್ತು ಆಯುರ್ವೇದ-ಇವು ನಾಲ್ಕೂ ಪರಮಾತ್ಮನ (ನನ್ನ) ಆಜ್ಞೆಯಿಂದಲೇ ಸಿದ್ಧವಾದುವುಗಳು. ಆದುದರಿಂದ ಇವುಗಳನ್ನು ತರ್ಕದ ಮೂಲಕವಾಗಿ ಖಂಡಿಸಬಾರದು. ಧರ್ಮವನ್ನು ತಿಳಿದವನು ದೇವತೆಗಳಿಗೆ ಸಂಬಂಧಿಸಿದ ಪೂಜಾದಿಕಾರ್ಯಗಳನ್ನು ಮಾಡುತ್ತಿರುವಾಗ ಬ್ರಾಹ್ಮಣರನ್ನು ಅವರು ತಜ್ಞರೇ-ಅಲ್ಲವೇ? ಎಂದು ಪರೀಕ್ಷಿಸಹೋಗಬಾರದು. ಹಾಗೆ ಬ್ರಾಹ್ಮಣರನ್ನು ಪರೀಕ್ಷಿಸಲು ಪ್ರಯತ್ನಿಸಿದರೆ ಯಜಮಾನನು ಮಹಾನಿಂದೆಗೆ ಗುರಿಯಾಗುತ್ತಾನೆ. ಅವರ ಮೇಲೆ ದೋಷಾರೋಪಣೆಯನ್ನು ಮಾಡುವವನು ಕತ್ತೆಯಾಗಿ ಹುಟ್ಟುತ್ತಾನೆ. ತಿರಸ್ಕಾರಭಾವದಿಂದ ಕಾಣುವವನು ಕ್ರಿಮಿಯಾಗಿ ಹುಟ್ಟುತ್ತಾನೆ. ದ್ವೇಷಿಸುವವನು ಕೀಟವಾಗಿ ಹುಟ್ಟುತ್ತಾನೆ. ಬ್ರಾಹ್ಮಣರು ಒಳ್ಳೆಯ ಚಾರಿತ್ರ್ಯವುಳ್ಳವರೇ ಆಗಿರಲಿ; ದುರಾಚಾರಿಗಳೇ ಆಗಿರಲಿ; ಗ್ರಾಮ್ಯಸ್ವಭಾವದವರೇ ಆಗಿರಲಿ; ಸುಸಂಸ್ಕೃತರೇ ಆಗಿರಲಿ-ಅವರನ್ನು ಅವಮಾನಿಸಬಾರದು. ಏಕೆಂದರೆ: ಅವರು ತೋರಿಕೆಗೆ ಹಾಗೆಲ್ಲಾ ಕಂಡರೂ ಯಾವಾಗಲೂ ಬೂದಿಮುಚ್ಚಿದ ಕೆಂಡದಂತೆ ತೇಜೋವಿಶಿಷ್ಟರೇ ಆಗಿರುತ್ತಾರೆ.

ಕ್ಷತ್ರಿಯಂ ಚೈವ ಸರ್ಪಂ ಚ ಬ್ರಾಹ್ಮಣಂ ಚ ಬಹುಶ್ರುತಮ್ ।
ನಾವಮನ್ಯೇತ ಮೇಧಾವೀ ಕೃಶಾನಪಿ ಕದಾಚನ ॥೨೨೧॥

ಕ್ಷತ್ರಿಯ, ಸರ್ಪ ಮತ್ತು ಬ್ರಾಹ್ಮಣರು ದುರ್ಬಲರಾಗಿದ್ದರೂ

ಮೇಧಾವಿಯಾದವನು ಯಾವುದೇ ಕಾರಣದಿಂದಲೂ ಅವರನ್ನು ತಿರಸ್ಕರಿಸಬಾರದು. ಮೂವರೂ ತಮ್ಮನ್ನು ತಿರಸ್ಕರಿಸಿದ ಪುರುಷನನ್ನು ಜೀವಸಹಿತವಾಗಿಯೇ ಸುಟ್ಟುಬಿಡಬಹುದು. ಆದುದರಿಂದ ಬುದ್ಧಿವಂತನಾದವನು ಈ ಮೂವರನ್ನು ಸಂದರ್ಭವು ಒದಗಿಬಂದರೂ ಪ್ರಯತ್ನಪೂರ್ವಕವಾಗಿ ತಿರಸ್ಕರಿಸಬಾರದು. ಯಾವ ರೀತಿಯಲ್ಲಿ ಅಗ್ನಿಯು ಯಾವುದೇ ಅವಸ್ಥೆಯಲ್ಲಿದ್ದರೂ ಮಹತ್ತಾದ ದೇವತೆ ಎಂದೆನಿಸಿಕೊಳ್ಳುವನೋ-ಅದೇ ರೀತಿಯಲ್ಲಿ ಯಾವುದೇ ಸ್ಥಿತಿಯಲ್ಲಿದ್ದರೂ ಬ್ರಾಹ್ಮಣನೂ ಪರಮದೇವತೆಯೇ ಸರಿ. ಅಂಗಹೀನರು, ಕುರುಡರು, ಕುರೂಪಿಗಳು, ಕುಳ್ಳರು ಆಗಿರುವ ಬ್ರಾಹ್ಮಣರನ್ನು ವೇದಪಾರಂಗತರಾದ ವಿದ್ವಾಂಸರ ಜೊತೆಯಲ್ಲಿ ದೇವ ಕಾರ್ಯಗಳಲ್ಲಿ ನಿಯೋಜಿಸಬೇಕು. (ಇದರಿಂದ ದೋಷವು ಉಂಟಾಗುವುದಿಲ್ಲ.) ಅವರಿಗೆ ಕೋಪವುಂಟಾಗುವ ರೀತಿಯಲ್ಲಿ ವರ್ತಿಸಬಾರದು ಮತ್ತು ಅವರಿಗೆ ಯಾವ ವಿಧವಾದ ಕೇಡನ್ನೂ ಮಾಡಬಾರದು. ಏಕೆಂದರೆ: ಅವರು ಶಸ್ತ್ರಪಾಣಿಗಳಲ್ಲ, ಕೋಪವೆಂಬ ಆಯುಧದಿಂದಲೇ ಪ್ರಹರಿಸತಕ್ಕವರು. ಅವರ ಕೋಪವೂ ವಜ್ರಾಯುಧಕ್ಕೆ ಸಮಾನವಾದುದು. ವಜ್ರಾಯುಧದಿಂದ ಇಂದ್ರನು ಅಸುರರನ್ನು ಸಂಹರಿಸುವಂತೆ-ಬ್ರಾಹ್ಮಣರು ಕೋಪದಿಂದಲೇ ಶತ್ರುಗಳನ್ನು ಸಂಹರಿಸಬಲ್ಲರು. ಬ್ರಾಹ್ಮಣರು ಜಾತಿಮಾತ್ರದಿಂದಲೇ ಮಹತ್ತಾದ ದೇವಭಾವವನ್ನು ಹೊಂದುತ್ತಾರೆ. ಸಕಲಪ್ರಾಣಿಗಳ ಧರ್ಮರೂಪವಾದ ಭಂಡಾರವನ್ನು ರಕ್ಷಿಸಲು ಎಲ್ಲ ಬ್ರಾಹ್ಮಣರೂ ಸಮರ್ಥರೇ ಆಗಿರುತ್ತಾರೆ. ಹೀಗಿರುವಾಗ ಪ್ರತಿನಿತ್ಯವೂ ನಿಯತವಾಗಿ ಮತ್ತು ಅವಿಚ್ಛಿನ್ನವಾಗಿ ಎರಡು ಹೊತ್ತೂ ಸಂಧ್ಯಾವಂದನೆಯನ್ನು ಮಾಡುವವರ ವಿಷಯದಲ್ಲಿ ಹೇಳುವುದೇನಿದೆ? ಯಾರ ಮುಖದ ಮೂಲಕವಾಗಿ ದೇವತೆಗಳು ಹವ್ಯವನ್ನೂ ಪಿತೃಗಳು ಕವ್ಯವನ್ನೂ ಪ್ರತಿಗ್ರಹಿಸುವರೋ ಅಂತಹ ಬ್ರಾಹ್ಮಣರಿಗಿಂತಲೂ ಅಧಿಕರಾದವರು ಬೇರೆ ಯಾರು ತಾನೇ ಇದ್ದಾರೆ? ಧರ್ಮದ ಸನಾತನಮೂರ್ತಿಯಾಗಿಯೇ ಬ್ರಾಹ್ಮಣನು ಹುಟ್ಟುತ್ತಾನೆ. ಅವನ ಜನ್ಮವೇ ಧರ್ಮದ ಸಲುವಾಗಿರುತ್ತದೆ. ಬ್ರಹ್ಮಭಾವವನ್ನು ಹೊಂದಲು ಕೂಡ ಅವನು ಸಮರ್ಥನು. ಬ್ರಾಹ್ಮಣನು ತನ್ನದೇ ಆದ ಪದಾರ್ಥವನ್ನು ಭಕ್ಷಿಸುತ್ತಾನೆ. ತನ್ನದೇ ಆದ ವಸ್ತುವನ್ನು ಹೊದೆಯುತ್ತಾನೆ. ತನ್ನದೇ ಆದ ವಸ್ತುವನ್ನು ಇತರರಿಗೆ ಕೊಡುತ್ತಾನೆ.

ಅವನು ದಯಾಪರತೆಯಿಂದ (ಪ್ರಾಣಿಗಳ ವಿಷಯದಲ್ಲಿ ದಯಾಪರ ನಾಗಿ) ತಪಸ್ಸೇ ಮೊದಲಾದ ಸರ್ವಕ್ಷೇಮಕರವಾದ ಸತ್ಕರ್ಮಗಳನ್ನು ಮಾಡುವುದರಿಂದ ಆ ಸತ್ಫಲವನ್ನು ಇತರರು ಭುಂಜಿಸುತ್ತಾರೆ. ಆದುದರಿಂದ ಬ್ರಾಹ್ಮಣರನ್ನು ಯಾವುದೇ ಕಾರಣದಿಂದಲೂ ತಿರಸ್ಕರಿಸಬಾರದು. ಮದ್ಭಕ್ತಾ ಹಿ ದ್ವಿಜಾಃ ಸದಾ-ಬ್ರಾಹ್ಮಣರು ಯಾವಾಗಲೂ ನನ್ನ ಭಕ್ತರೇ ಆಗಿರುತ್ತಾರೆ. ಯಾವ ಬ್ರಾಹ್ಮಣರು ಆರಣ್ಯಕೋಪನಿಷತ್ತಿನಲ್ಲಿ ವರ್ಣಿಸಲ್ಪಟ್ಟಿರುವ ನನ್ನ ನಿಗೂಢವಾದ ಮತ್ತು ನಿಷ್ಕಲವಾದ ಸ್ವರೂಪವನ್ನು ಜ್ಞಾನದೃಷ್ಟಿಯಿಂದ ಕಂಡುಕೊಂಡಿರುವರೋ-ಅಂತಹ ಬ್ರಾಹ್ಮಣರನ್ನು ನೀನು ಪ್ರಯತ್ನಪೂರ್ವಕ ವಾಗಿ ಸತ್ಕರಿಸು. ಯುಧಿಷ್ಠಿರ! ಮನೆಯಲ್ಲಾಗಲೀ, ಪ್ರವಾಸದ ಸಮಯ ದಲ್ಲಾಗಲೀ, ಹಗಲಿನಲ್ಲಾಗಲೀ, ರಾತ್ರಿಯಲ್ಲಾಗಲೀ-ನನ್ನ ಭಕ್ತರಾದ ಬ್ರಾಹ್ಮಣರನ್ನು ಶ್ರದ್ಧೆಯಿಂದ ಸತ್ಕರಿಸಬೇಕು.

ನಾಸ್ತಿ ವಿಪ್ರಸಮಂ ದೈವಂ ನಾಸ್ತಿ ವಿಪ್ರಸಮೋ ಗುರುಃ ।
ನಾಸ್ತಿ ವಿಪ್ರಾತ್ಪರೋ ಬನ್ಧುರ್ನಾಸ್ತಿ ವಿಪ್ರಾತ್ಪರೋ ನಿಧಿಃ ॥೨೩೬॥
ನಾಸ್ತಿ ವಿಪ್ರಾತ್ಪರಂ ತೀರ್ಥಂ ನ ಪುಣ್ಯಂ ಬ್ರಾಹ್ಮಣಾತ್ಪರಮ್ ।
ನ ಪವಿತ್ರಂ ಪರಂ ವಿಪ್ರಾನ್ನ ದ್ವಿಜಾತ್ಪಾವನಂ ಪರಮ್ ।
ನಾಸ್ತಿ ವಿಪ್ರಾತ್ಪರೋ ಧರ್ಮೋ ನಾಸ್ತಿ ವಿಪ್ರಾತ್ಪರಾ ಗತಿಃ ॥೨೩೭॥

ಬ್ರಾಹ್ಮಣನಿಗೆ ಸಮಾನವಾದ ಬೇರೆ ದೇವತೆಯೇ ಇಲ್ಲ. ವಿಪ್ರನಿಗೆ ಸಮಾನನಾದ ಬೇರೆ ಗುರುವಿಲ್ಲ. ವಿಪ್ರನಿಗೆ ಸಮಾನವಾದ ಬೇರೆ ಬಂಧುವಿಲ್ಲ. ಜ್ಞಾನನಿಧಿಯಾಗಿರುವ ಬ್ರಾಹ್ಮಣನಿಗೆ ಸರಿದೂಗುವ ಬೇರೆ ಬೊಕ್ಕಸವಿಲ್ಲ. ಬ್ರಾಹ್ಮಣನಿಗಿಂತಲೂ ಶ್ರೇಷ್ಠವಾದ ಬೇರೆ ಪುಣ್ಯತೀರ್ಥವಿಲ್ಲ. ಬ್ರಾಹ್ಮಣನಿ ಗಿಂತಲೂ ಪವಿತ್ರವಾದುದು ಬೇರೆ ಯಾವುದೂ ಇಲ್ಲ. ಪವಿತ್ರಗೊಳಿಸುವುದ ರಲ್ಲಿ ಬ್ರಾಹ್ಮಣನಿಗಿಂತಲೂ ಬೇರೆ ಯಾರೂ ಇರುವುದಿಲ್ಲ. ಬ್ರಾಹ್ಮಣನಿಗಿಂತಲೂ ಶ್ರೇಷ್ಠವಾದ ಧರ್ಮವಿಲ್ಲ. ಬ್ರಾಹ್ಮಣನಿಗಿಂತಲೂ ಶ್ರೇಷ್ಠನಾದ ಆಶ್ರಯನೂ ಮತ್ತೊಬ್ಬನಿಲ್ಲ.

ಪಾಪಕರ್ಮಗಳ ಫಲವಾಗಿ ನರಕದಲ್ಲಿ ಬೀಳುತ್ತಿರುವ ಮನುಷ್ಯನನ್ನು

ಸತ್ಪಾತ್ರನಾದೊಬ್ಬ ಬ್ರಾಹ್ಮಣನು ಉದ್ಧಾರಮಾಡಬಲ್ಲನು. ಬಾಲ್ಯದಿಂದಲೂ ಆಹಿತಾಗ್ನಿಗಳಾಗಿರುವ, ಶಾಂತರಾಗಿರುವ, ವೃಷಲಾನ್ನವನ್ನು ತಿನ್ನದಿರುವ, ನನ್ನ ಪೂಜೆಯಲ್ಲಿಯೇ ನಿರತರಾಗಿ ನನ್ನ ಭಕ್ತರಾಗಿರುವ ಬ್ರಾಹ್ಮಣರಿಗೆ ಕೊಡುವ ದಾನವು ಅಕ್ಷಯವಾದ ಫಲವನ್ನು ಕೊಡುತ್ತದೆ. ನನ್ನ ಭಕ್ತನಾದ ಬ್ರಾಹ್ಮಣನಿಗೆ ದಾನಗಳನ್ನೂ ಕೊಡುವುದರಿಂದಲೂ, ನಮಸ್ಕರಿಸುವುದರಿಂದಲೂ, ಸತ್ಕಾರಮಾಡುವುದರಿಂದಲೂ, ಅವನನ್ನು ಗೌರವಿಸುವುದರಿಂದಲೂ ಅಥವಾ ಅವನನ್ನು ಸಂದರ್ಶಿಸುವುದರಿಂದಲೂ ಮಾನವನು ಸ್ವರ್ಗವನ್ನು ಹೊಂದುತ್ತಾನೆ. ನನ್ನ ಭಕ್ತನಾದ ಬ್ರಾಹ್ಮಣನು ತನ್ನನ್ನು ಆರಾಧಿಸಿದವರನ್ನು ಸ್ವರ್ಗಕ್ಕೆ ಕಳುಹಿಸಲು ಸಮರ್ಥನಾಗಿದ್ದಾನೆ. ಯಾವ ಮನುಷ್ಯರು ನನ್ನ ಲೀಲಾ ಪ್ರಸಂಗಗಳನ್ನು ಓದುವರೋ, ನನ್ನನ್ನು ನಮಸ್ಕರಿಸುವರೋ ಮತ್ತು ಸರ್ವಕಾಲದಲ್ಲಿಯೂ ನನ್ನನ್ನು ಧ್ಯಾನಮಾಡುವರೋ ಅಂತಹ ಬ್ರಾಹ್ಮಣರನ್ನು ಸಂದರ್ಶಿಸುವುದರಿಂದ ಮತ್ತು ಅವರ ಪಾದಸ್ಪರ್ಶ ಮಾಡುವುದರಿಂದ ಸಕಲಪಾಪಗಳಿಂದಲೂ ಮುಕ್ತರಾಗುತ್ತಾರೆ. ನನ್ನ ಭಕ್ತರಾದ, ನನ್ನಲ್ಲಿಯೇ ಪ್ರಾಣಗಳನ್ನಿರಿಸಿಕೊಂಡಿರುವ, ನನ್ನ ಲೀಲಾಪ್ರಸಂಗ ಗಳನ್ನು ಯಾವಾಗಲೂ ಹಾಡಿ-ಹೊಗಳುವ, ನನ್ನನ್ನೇ ಆಶ್ರಯಿಸಿರುವ, ಬೀಜ ಮತ್ತು ಯೋನಿ ಎರಡರಲ್ಲಿಯೂ ಶುದ್ಧರಾಗಿರುವ (ಶುದ್ಧಾತ್ಮರಾದ ತಂದೆ-ತಾಯಿಗಳನ್ನು ಪಡೆದಿರುವ), ವೃಷಲಾನ್ನವನ್ನು ವರ್ಜಿಸಿರುವ, ಜಿತೇಂದ್ರಿಯರಾದ ಶ್ರೋತ್ರಿಯಬ್ರಾಹ್ಮಣರು ದರ್ಶನಮಾತ್ರದಿಂದಲೇ ಸಂದರ್ಶಿಸಿದವರನ್ನು ಪಾವನಗೊಳಿಸುತ್ತಾರೆ. ಅಂತಹ ಶ್ರೋತ್ರಿಯರ ಮನೆಗೆ ನೀನೇ ಹೋಗಿ ವಿಶೇಷವಾದ ಗೌರವದಿಂದ ಅವರಿಗೆ ದಾನಗಳನ್ನು ಕೊಡಬೇಕು. ಹಾಗೆ ಭಕ್ತಿಪೂರ್ವಕವಾಗಿ ಕೊಡಲ್ಪಡುವ ದಾನವು ಇತರ ದಾನಗಳಿಗಿಂತ ಕೋಟಿಪಾಲು ಹೆಚ್ಚು ಫಲವುಳ್ಳದ್ದಾಗಿರುತ್ತದೆ. ಬ್ರಾಹ್ಮಣನು ಎಚ್ಚರಗೊಂಡಿರಲಿ; ಮಲಗಿರಲಿ; ಪ್ರಯಾಣಮಾಡುತ್ತಿರಲಿ; ಮನೆಯಲ್ಲಿಯೇ ಇರಲಿ-ಅವನು ನನಗೆ ಪರಮಭಕ್ತನಾದುದರಿಂದ ಅವನ ಹೃದಯ ಗುಹೆಯನ್ನು ಬಿಟ್ಟು ನಾನು ಯಾವಾಗಲೂ ಹೊರಹೋಗುವುದೇ ಇಲ್ಲ.

ಅಂತಹ ಬ್ರಾಹ್ಮಣನನ್ನು ಪೂಜಿಸಿದರೂ, ಸಂದರ್ಶಿಸಿದರೂ, ಸ್ಪರ್ಶಿಸಿದರೂ, ಅವನೊಡನೆ ಮಾತನಾಡಿದರೂ ಮನುಷ್ಯನು ಪೂತನಾಗುತ್ತಾನೆ. ಹೀಗೆ ಸ್ಪರ್ಶಿಸುವ ಯಾವುದೇ ವಸ್ತುವನ್ನು ನನ್ನ ಭಕ್ತನಾದ ಬ್ರಾಹ್ಮಣನು ಪಾವನಗೊಳಿಸುತ್ತಾನೆ. ಹೀಗೆ ಯಾವುದೇ ಸ್ಥಿತಿಯಲ್ಲಿಯೂ ನನ್ನ ಭಕ್ತರಿಗೆ ಕೊಡಲ್ಪಡುವ ಎಲ್ಲ ವಿಧವಾದ ದಾನಗಳೂ ಸ್ವರ್ಗಮಾರ್ಗವನ್ನು ಹೊಂದಿಸುತ್ತವೆ."

ವೈಷ್ಣವಧರ್ಮ-೪

ಶುದ್ಧವಾದ ಬೀಜ ಮತ್ತು ಶುದ್ಧವಾದ ಯೋನಿಗಳ ವರ್ಣನೆ: ಗಾಯತ್ರೀಜಪದ ಫಲ: ಬ್ರಾಹ್ಮಣನ ಮಹಿಮೆ: ಬ್ರಾಹ್ಮಣರನ್ನು ತಿರಸ್ಕರಿಸುವುದರಿಂದ ಉಂಟಾಗುವ ದುಷ್ಫಲಗಳು

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಹೀಗೆ ಯುಧಿಷ್ಠಿರನು ಶ್ರೀಕೃಷ್ಣನಿಂದ ಸಾತ್ತ್ವಿಕ-ರಾಜಸ-ತಾಮಸದಾನಗಳ ಸ್ವರೂಪಗಳನ್ನೂ ಅವುಗಳ ಭಿನ್ನ-ಭಿನ್ನಗತಿಗಳನ್ನೂ ಮತ್ತು ಅವುಗಳಿಂದ ಪ್ರಾಪ್ತವಾಗುವ ಪ್ರತ್ಯೇಕ-ಪ್ರತ್ಯೇಕಫಲಗಳನ್ನೂ ಕೇಳಿ ಪ್ರಸನ್ನಚಿತ್ತನಾದನು. ಆದರೆ ಆ ಧರ್ಮಾಮೃತದ ಪಾನದಿಂದ ಅವನಿಗೆ ಸಂಪೂರ್ಣತೃಪ್ತಿಯಾಗಲಿಲ್ಲ. ಮತ್ತಷ್ಟು ಪಾನಮಾಡಬೇಕೆನ್ನಿಸಿತು. ಆದುದರಿಂದ ಧರ್ಮಾತ್ಮನಾದ ಧರ್ಮಜನು ಪುನಃ ಶ್ರೀಕೃಷ್ಣನನ್ನು ಪ್ರಶ್ನಿಸಿದನು.

"ಜಗದೀಶ್ವರನೇ! ಬೀಜ ಮತ್ತು ಯೋನಿಗಳಿಂದ (ವೀರ್ಯ ಮತ್ತು ರಜಸ್ಸುಗಳಿಂದ) ಶುದ್ಧರಾಗಿರುವವರ ಲಕ್ಷಣಗಳನ್ನು ಹೇಳು. ವೀರ್ಯದ ದೋಷದಿಂದ ಎಂತಹ ಮನುಷ್ಯರು ಹುಟ್ಟುವರೆಂಬುದನ್ನು ಹೇಳು. ಆಚಾರದೋಷಗಳನ್ನೂ ಬ್ರಾಹ್ಮಣರ ಉತ್ತಮ-ಮಧ್ಯಮಾದಿ ಭೇದಗಳನ್ನೂ ಮತ್ತು ಅವರಲ್ಲಿರುವ ಗುಣ-ದೋಷಗಳನ್ನೂ ಹೇಳು."

ಶ್ರೀಕೃಷ್ಣನು ಹೇಳುತ್ತಾನೆ:

"ಯುಧಿಷ್ಠಿರ! ಬೀಜ-ಯೋನಿಗಳ ಶುದ್ಧಾತ್ಮಕವಾದ ಯಥಾವತ್ತಾದ ವರ್ಣನೆಯನ್ನು ಹೇಳುವೆನು, ಕೇಳು. ಅವೆರಡೂ ಶುದ್ಧವಾಗಿದ್ದರೆ ಲೋಕದಲ್ಲಿ ಸತ್ಸಂತಾನವು ಬೆಳೆದು ಸರ್ವತ್ರ ಸುಖವುಂಟಾಗುತ್ತದೆ. ಅಶುದ್ಧವಾದರೆ

ಲೋಕವೇ ವಿನಾಶಹೊಂದುತ್ತದೆ. ಅಸ್ಖಲಿತವಾದ ಬ್ರಹ್ಮಚರ್ಯವನ್ನು ಯಾವನು ಯಥಾವಿಧಿಯಾಗಿ ಪರಿಪಾಲಿಸುತ್ತಿರುವನೋ-ಅಂತಹ ವಿಪ್ರನನ್ನೇ ಉತ್ತಮಬೀಜವೆನ್ನುತ್ತಾರೆ. ಅಂತಹವನ ವೀರ್ಯದಿಂದಲೇ ಶುಭ ಸಂತಾನವಾಗುತ್ತದೆ. ಹಾಗೆಯೇ ಕನ್ಯೆಯು ಉತ್ತಮಕುಲಗಳಿಗೆ ಸೇರಿದ ತಂದೆ-ತಾಯಿಗಳುಳ್ಳವಳಾಗಿರಬೇಕು. (ಸತ್ಕುಲಪ್ರಸೂತೆಯಾಗಿರಬೇಕು) ಅಕ್ಷತಯೋನಿಯಾಗಿರಬೇಕು. (ಬೇರೆ ಯಾವ ಪುರುಷನೊಡನೆಯೂ ಸಂಬಂಧವನ್ನು ಹೊಂದಿರಬಾರದು.) ಬ್ರಾಹ್ಮವೇ ಮೊದಲಾದ ಉತ್ತಮ ರೀತಿಯ ವಿವಾಹಪದ್ಧತಿಯಂತೆ ವಿವಾಹಿತಳಾಗಿರಬೇಕು. ಅಂತಹ ಕನ್ಯೆಯು ಗರ್ಭಾದಾನಕ್ಕೆ ಪ್ರಶಸ್ತಳಾದವಳು. ಮನಸ್ಸಿನಿಂದಾಗಲೀ, ಕರ್ಮದಿಂದಾಗಲೀ, ಮಾತಿನಿಂದಾಗಲೀ-ಪರಪುರುಷನ ಸಮಾಗಮಮಾಡಿದ ಸ್ತ್ರೀಯ ಯೋನಿಯು ಗರ್ಭಾದಾನಕ್ಕೆ ಯೋಗ್ಯವಲ್ಲ. ದುಷ್ಟವಾದ ಯೋನಿಯಲ್ಲಿ ಹುಟ್ಟಿದವರು ದೇವ-ಪಿತೃಕಾರ್ಯಗಳಲ್ಲಿ ಭಾಗವಹಿಸಲು, ದಾನತೆಗೆದು ಕೊಳ್ಳಲು, ಜೊತೆಯಲ್ಲಿ ಕೂರಿಸಿಕೊಂಡು ಭೋಜನಮಾಡಲು (ಸಹಪಂಕ್ತಿ ಭೋಜನ ಮಾಡಲು), ಮಾತನಾಡಲು, ಜೊತೆಯಲ್ಲಿ ಮಲಗಲು ಮತ್ತು ಸಂಬಂಧಮಾಡಲು ಯೋಗ್ಯರಲ್ಲ.

ಕಾನೀನಶ್ಚ ಸಹೋಢಶ್ಚ ತಥೋಭೌ ಕುಣ್ಡಗೋಲಕೌ ।
ಆರೂಢಪತಿತಾಜ್ಜಾತಃ ಪತಿತಸ್ಯಾಪಿ ಯಃ ಸುತಃ ।
ಷಡೇತೇ ವಿಪ್ರಚಾಣ್ಡಾಲಾ ನಿಕೃಷ್ಟಾಃ ಶ್ವಪಚಾದಪಿ ॥೨೫೫॥

ವಿವಾಹವಾಗದ ಕನ್ಯೆಯಲ್ಲಿ ಹುಟ್ಟಿದವನು, ವಿವಾಹಸಮಯದಲ್ಲಿ ಗರ್ಭವತಿಯಾದವಳಲ್ಲಿ ಹುಟ್ಟಿದವನು, ಪತಿಯು ಜೀವಿಸಿರುವಾಗಲೇ ಪತ್ನಿಯ ವ್ಯಭಿಚಾರದಿಂದ ಹುಟ್ಟಿದವನು, ಪತಿಯ ಮರಣಾನಂತರ ಅನ್ಯ ಪುರುಷನಿಂದ ಹುಟ್ಟಿದವನು, ಭ್ರಷ್ಟಸಂನ್ಯಾಸಿಯ ವೀರ್ಯದಿಂದ ಹುಟ್ಟಿದ ವನು, ಪತಿತನಾದ ಮನುಷ್ಯನಿಂದ ಹುಟ್ಟಿದವನು-ಈ ಆರುಮಂದಿಯೂ ವಿಪ್ರಚಾಂಡಾಲರು, ಚಾಂಡಾಲರಿಗಿಂತಲೂ ನಿಕೃಷ್ಟರಾದವರು. ಎಲ್ಲೆಂದರಲ್ಲಿ ಯಾವ ಭೇದವೂ ಇಲ್ಲದೆ ಶೂದ್ರಸ್ತ್ರೀಯರಲ್ಲಿಯೂ ರೇತಸ್ಸೇಚನಮಾಡುವ ಕಾಮಚಾರಿಯಾದ ಬ್ರಾಹ್ಮಣನು ಪಾಪಾತ್ಮನೇ ಸರಿ. ಅಂತಹವನ ಬೀಜವು (ರೇತಸ್ಸು) ಶುದ್ಧವಲ್ಲ, ಅಶುದ್ಧವಾದ ರೇತಸ್ಸು ಶುದ್ಧವಾದ ಯೋನಿಯ

ಸ್ತ್ರೀಗೆ ಯೋಗ್ಯವಲ್ಲ. ಅಂತಹ ರೇತಸ್ಸಿನ ಸಂಪರ್ಕದಿಂದ ನಾಯಿನೆಕ್ಕಿದ ಹವಿಸ್ಸಿನಂತೆ ಶುದ್ಧಯೋನಿಯೂ ಅಶುದ್ಧವಾಗುತ್ತದೆ. ವೀರ್ಯವನ್ನು ಆತ್ಮವೆಂದೇ ಹೇಳುತ್ತಾರೆ. ಆದುದರಿಂದ ಅದು ಶ್ರೇಷ್ಠವಾದ ದೇವತೆಯೂ ಆಗಿದೆ. ಆದುದರಿಂದ ಸರ್ವಪ್ರಯತ್ನದಿಂದಲೂ ವೀರ್ಯವು ಪೋಲಾಗದಂತೆ ರಕ್ಷಿಸಿಕೊಳ್ಳಬೇಕು. ಮನುಷ್ಯನು ಅಸ್ಖಲಿತವಾದ ಬ್ರಹ್ಮಚರ್ಯವ್ರತದ ಪರಿಪಾಲನೆಯಿಂದ ಆಯುಸ್ಸು, ತೇಜಸ್ಸು, ಬಲ, ವೀರ್ಯ, ಒಳ್ಳೆಯ ಬುದ್ಧಿ, ಸಂಪತ್ತು, ಮಹಾಯಶಸ್ಸು, ಪುಣ್ಯ ಮತ್ತು ನನ್ನ ಪ್ರೀತಿ-ಇವೆಲ್ಲವನ್ನೂ ಪಡೆದುಕೊಳ್ಳುತ್ತಾನೆ. ಗೃಹಸ್ಥಾಶ್ರಮದಲ್ಲಿದ್ದುಕೊಂಡು ಅಸ್ಖಲಿತವಾದ ಬ್ರಹ್ಮಚರ್ಯವ್ರತವನ್ನು (ಋತುಕಾಲದಲ್ಲಿ ಮಾತ್ರ ಸ್ವಪತ್ನಿಯಲ್ಲಿ ರತರಾದ ಗೃಹಸ್ಥರು ಬ್ರಹ್ಮಚರ್ಯವ್ರತನಿಷ್ಠರೆಂದು ಶಾಸ್ತ್ರವಾಕ್ಯವಿದೆ.) ಪರಿಪಾಲಿಸುತ್ತಾ, ಪಂಚಮಹಾಯಜ್ಞಗಳ ಅನುಷ್ಠಾನದಲ್ಲಿ ತತ್ಪರರಾದ ಬ್ರಾಹ್ಮಣರು ಈ ಭೂಮಿಯಲ್ಲಿ ಧರ್ಮಸ್ಥಾಪನೆಯನ್ನು ಮಾಡುತ್ತಾರೆ. ಯಾರು ಪ್ರಾತಃಕಾಲ-ಸಾಯಂಕಾಲಗಳಲ್ಲಿ ವಿಧಿವತ್ತಾಗಿ ಸಂಧ್ಯೋಪಾಸನೆಯನ್ನು ಮಾಡುವರೋ-ಅಂತಹವರು ವೇದಮಯವಾದ ದೋಣಿಯ ಮೂಲಕ ವಾಗಿ ಈ ಸಂಸಾರಸಾಗರವನ್ನು ತಾವೂ ದಾಟುತ್ತಾರೆ, ಇತರರನ್ನೂ ದಾಟಿಸುತ್ತಾರೆ.

ಯೋ ಜಪೇತ್ಪಾವನೀಂ ದೇವೀಂ ಗಾಯತ್ರೀಂ ವೇದಮಾತರಮ್ ।
ನ ಸೀದೇತ್ಪ್ರತಿಗೃಹ್ಣಾನಃ ಪೃಥಿವೀಂ ಚ ಸಸಾಗರಾಮ್ ॥೨೬೨॥

ಯಾವ ಬ್ರಾಹ್ಮಣನು ಎಲ್ಲರನ್ನೂ ಪಾವನಗೊಳಿಸುವ ವೇದಮಾತೆಯಾದ ಗಾಯತ್ರೀದೇವಿಯ ಮಂತ್ರವನ್ನು (ಎರಡು ಸಂಧ್ಯೆಗಳಲ್ಲಿಯೂ) ಜಪಿಸುವನೋ-ಅಂತಹವನು ಸಮುದ್ರಪರ್ಯಂತವಾದ ಅಖಂಡ ಭೂಮಂಡಲವನ್ನೇ ದಾನವಾಗಿ ತೆಗೆದುಕೊಂಡರೂ ಪ್ರತಿಗ್ರಹದೋಷದಿಂದ ವಿನಾಶಹೊಂದುವುದಿಲ್ಲ.

ಯೇ ಚಾಸ್ಯ ದುಃಸ್ಥಿತಾಃ ಕೇಚಿದ್ಗ್ರಹಾಃ ಸೂರ್ಯಾದಯೋ ದಿವಿ ।
ತೇ ಚಾಸ್ಯ ಸೌಮ್ಯಾ ಜಾಯನ್ತೇ ಶಿವಾಃ ಶುಭಕರಾಸ್ತಥಾ ॥೨೬೩॥

ಗಾಯತ್ರಿಯನ್ನು ಅನವರತವಾಗಿ ಜಪಿಸುವವನಿಗೆ ಸೂರ್ಯನೇ ಮುಂತಾದ ಗ್ರಹಗಳಲ್ಲಿ, ಯಾವ ಗ್ರಹಗಳು ಅಶುಭಸ್ಥಾನದಲ್ಲಿರುವುವೋ-

ಅಂತಹ ಗ್ರಹಗಳೆಲ್ಲವೂ ಅವನಿಗೆ ಗಾಯತ್ರೀಜಪದ ಪ್ರಭಾವದಿಂದಾಗಿ ಸೌಮ್ಯರೂಪಗಳೂ ಶುಭಪ್ರದಗಳೂ ಆಗಿಬಿಡುತ್ತವೆ.

ಅಲ್ಲಲ್ಲಿರುವ, ಭಯಂಕರವಾದ, ಮಾಂಸಾಹಾರಿಗಳಾದ, ಘೋರವಾದ ರೂಪವನ್ನು ಧರಿಸಿರುವ, ದೊಡ್ಡ ಶರೀರಗಳುಳ್ಳ ಪಿಶಾಚಗಳು ಕೂಡ ಗಾಯತ್ರೀಮಂತ್ರವನ್ನು ಎರಡು ಸಂಧ್ಯೆಗಳಲ್ಲಿಯೂ ಜಪಿಸುವ ಬ್ರಾಹ್ಮಣನನ್ನು ಭಯಪಡಿಸಲಾರವು. ವೇದಾಧ್ಯಯನವನ್ನು ಪೂರೈಸಿ ವೇದವ್ರತಗಳನ್ನು ಆಚರಿಸಿರುವ ಬ್ರಾಹ್ಮಣರು ಇತರರನ್ನೂ ಪಾವನ ಗೊಳಿಸುತ್ತಾರೆ. ಯುಧಿಷ್ಠಿರ! ನಾಲ್ಕು ವೇದಗಳಲ್ಲಿಯೂ ಇರುವ ಮಂತ್ರಗಳಲ್ಲಿ ಗಾಯತ್ರೀಮಂತ್ರವೇ ಶ್ರೇಷ್ಠವಾದುದು. ವೇದಾಧ್ಯಯನವನ್ನು ಪೂರ್ಣ ಗೊಳಿಸದೇ ವೇದವ್ರತಗಳನ್ನು ಮಾಡದಿರುವ, ಕೆಟ್ಟಫಲಗಳನ್ನು ಕೊಡುವ ಕುಕರ್ಮಗಳನ್ನು ಆಶ್ರಯಿಸಿರುವ (ದುಷ್ಕರ್ಮಿಗಳಾದ), ಹೆಸರಿಗೆ ಮಾತ್ರವೇ ಬ್ರಾಹ್ಮಣರಾಗಿರುವವರೂ ಗಾಯತ್ರಿಯನ್ನು ಜಪಿಸುತ್ತಿದ್ದರೆ ಪೂಜ್ಯರೇ ಸರಿ. ಹೀಗಿರುವಾಗ ಎರಡು ಕಾಲಗಳಲ್ಲಿಯೂ ಸಂಧ್ಯಾವಂದನೆಗಳನ್ನು ಮಾಡುತ್ತಾ ಗಾಯತ್ರೀಮಂತ್ರವನ್ನು ಜಪಿಸುವ ಬ್ರಾಹ್ಮಣರ ವಿಷಯದಲ್ಲಿ ಹೇಳುವುದೇನಿದೆ?

ಶೀಲಮಧ್ಯಯನಂ ದಾನಂ ಶೌಚಂ ಮಾರ್ದವಮಾರ್ಜವಮ್ ।
ತಸ್ಮಾದ್ವೇದಾದ್ವಿಶಿಷ್ಟಾನಿ ಮನುರಾಹ ಪ್ರಜಾಪತಿಃ ॥೨೬೭॥

ಶೀಲ, ಅಧ್ಯಯನ, ದಾನ, ಶೌಚ, ಮೃದುತ್ವ, ಋಜುತ್ವ - ಈ ಗುಣಗಳು ಬ್ರಾಹ್ಮಣರಿಗೆ ವೇದಕ್ಕಿಂತಲೂ ವಿಶೇಷವಾದುವುಗಳೆಂಬುದು ಮನುಪ್ರಜಾಪತಿಯ ಅಭಿಪ್ರಾಯವಾಗಿದೆ.

ಭೂರ್ಭುವಃ ಸ್ವರಿತಿ ಬ್ರಹ್ಮ ಯೋ ವೇದನಿರತೋ ದ್ವಿಜಃ ।
ಸ್ವದಾರನಿರತೋ ದಾನ್ತಃ ಸ ವಿದ್ವಾನ್ಸ ಚ ಭೂಸುರಃ ॥೨೬೮॥

ಯಾವ ಬ್ರಾಹ್ಮಣನು ಭೂರ್ಭುವಃ ಸ್ವಃ - ಎಂಬ ವ್ಯಾಹೃತಿಗಳೊಡನೆ ಗಾಯತ್ರೀಮಂತ್ರವನ್ನು ಜಪಿಸುವನೋ, ವೇದಗಳ ಅಧ್ಯಯನ-ಅಧ್ಯಾಪನ ಗಳಲ್ಲಿ ನಿರತನಾಗಿರುವನೋ ಮತ್ತು ತನ್ನ ಪತ್ನಿಯಲ್ಲಿ ಮಾತ್ರವೇ ಆಸಕ್ತನಾಗಿರುವನೋ-ಅಂತಹವನೇ ವಿದ್ವಾಂಸನು ಮತ್ತು ಭೂದೇವತೆಯು.

ಯಾವ ಬ್ರಾಹ್ಮಣರು ಪ್ರತಿನಿತ್ಯವೂ ಸಂಧ್ಯೋಪಾಸನೆಯನ್ನು ಮಾಡುವರೋ-ಅವರು ಅವಸಾನಾನಂತರದಲ್ಲಿ ಬ್ರಹ್ಮಲೋಕಕ್ಕೆ ಹೋಗುತ್ತಾರೆ. ಇದರಲ್ಲಿ ಸಂಶಯವೇ ಇಲ್ಲ. ಅಧ್ಯಯನವಿಲ್ಲದಿದ್ದರೂ ಸದಾಚಾರಸಂಪನ್ನನಾಗಿ ವೇದಮಾತೆಯಾದ ಗಾಯತ್ರೀದೇವಿಯ ಮಂತ್ರವನ್ನು ಎಡಬಿಡದೇ ಶ್ರದ್ಧೆಯಿಂದ ನಿಯಮಪೂರ್ವಕವಾಗಿ ಜಪಿಸುವವನೇ ಶ್ರೇಷ್ಠನು. ಆದರೆ ನಾಲ್ಕು ವೇದಗಳನ್ನೂ ಅಧ್ಯಯನಮಾಡಿದ್ದರೂ ನೀತಿ-ನಿಯಮಗಳಿಲ್ಲದೇ ಸಿಕ್ಕಿದುದನ್ನು ಎಲ್ಲೆಂದರಲ್ಲಿ ತಿನ್ನುತ್ತಾ ಯುಕ್ತಾಯುಕ್ತವಿವೇಚನೆಯಿಲ್ಲದೇ ಎಲ್ಲ ಪದಾರ್ಥಗಳನ್ನೂ ವಿಕ್ರಯಿಸುವವನು ಶ್ರೇಷ್ಠನಲ್ಲ.

ಹಿಂದೊಮ್ಮೆ ದೇವತೆಗಳೂ ಮತ್ತು ಋಷಿಗಳೂ ಬ್ರಹ್ಮನನ್ನು ಮುಂದಿಟ್ಟುಕೊಂಡು ಗಾಯತ್ರಿಯನ್ನು ಒಂದು ತಕ್ಕಡಿಯಲ್ಲಿಯೂ ನಾಲ್ಕು ವೇದಗಳನ್ನು ಮತ್ತೊಂದು ತಕ್ಕಡಿಯಲ್ಲಿಯೂ ಇಟ್ಟು ತೂಗಿದರು. ಆಗ ನಾಲ್ಕು ವೇದಗಳಿಗಿಂತಲೂ ಗಾಯತ್ರಿಯೇ ಭಾರವಾಗಿದ್ದುದು ಕಂಡುಬಂದಿತು. ದುಂಬಿಗಳು ಎಲ್ಲ ಹೂವುಗಳಿಂದಲೂ ಸಂಗ್ರಹಿಸಿದ ಮಧುವಿನಂತೆ ಗಾಯತ್ರಿಯು ವೇದಗಳಿಂದ ಸಂಗ್ರಹಿಸಿದ ಸಾರದ ರಸವಾಗಿದೆ. ಆದುದರಿಂದ ಎಲ್ಲ ವೇದಗಳಿಗೂ ಗಾಯತ್ರಿಯೇ ಪ್ರಾಣರೂಪವಾಗಿದೆ. ಗಾಯತ್ರಿಯಿಲ್ಲದ ವೇದಗಳು ನಿರ್ಜೀವ ಜಡವಸ್ತುಗಳೇ ಸರಿ. ನೀತಿ-ನಿಯಮಗಳಿಂದಲೂ ಸದಾಚಾರಗಳಿಂದಲೂ ಭ್ರಷ್ಟನಾಗಿರುವ ಬ್ರಾಹ್ಮಣನು ಚತುರ್ವೇದಿಯೇ ಆಗಿದ್ದರೂ ನಿಂದ್ಯನೇ ಸರಿ. ಶೀಲ-ಸದಾಚಾರಸಂಪನ್ನನಾದ ಬ್ರಾಹ್ಮಣನು ಗಾಯತ್ರಿಯನ್ನು ಮಾತ್ರವೇ ಜಪಿಸುತ್ತಿದ್ದರೂ ಚತುರ್ವೇದಿಯಾದ ಬ್ರಾಹ್ಮಣನಿಗಿಂತಲೂ ಶ್ರೇಷ್ಠನು.

ಸಹಸ್ರಪರಮಾಂ ದೇವೀಂ ಶತಮಧ್ಯಾಂ ದಶಾವರಾಮ್ ।
ಸಾವಿತ್ರೀಂ ಜಪ ಕೌಂತೇಯ ಸರ್ವಪಾಪಪ್ರಣಾಶಿನೀಮ್ ॥೨೭॥

ಪ್ರತಿನಿತ್ಯವೂ ಒಂದುಸಾವಿರ ಬಾರಿ ಗಾಯತ್ರೀಮಂತ್ರವನ್ನು ಜಪಿಸುವುದು ಉತ್ತಮ. ನೂರು ಬಾರಿ ಜಪಿಸುವುದು ಮಧ್ಯಮ. ಹತ್ತುಬಾರಿ ಜಪಿಸುವುದು ಕನಿಷ್ಠವೆಂದು ಹೇಳುತ್ತಾರೆ. ಯುಧಿಷ್ಠಿರ! ನೀನು ಕೂಡ ಸರ್ವಪಾಪಗಳನ್ನೂ ಹೋಗಲಾಡಿಸುವ ಗಾಯತ್ರೀಮಂತ್ರವನ್ನು ಜಪಿಸು.”

ಯುಧಿಷ್ಠಿರನು ಪುನಃ ಪ್ರಶ್ನಿಸುತ್ತಾನೆ:

"ತ್ರೈಲೋಕ್ಯನಾಥನೇ! ಕೃಷ್ಣ! ನೀನು ಸರ್ವಪ್ರಾಣಿಗಳಿಗೂ ಆತ್ಮಸ್ವರೂಪನಾಗಿರುವೆ. ನಾನಾವಿಧವಾದ ಯೋಗಗಳಲ್ಲಿ ತತ್ಪರನಾಗಿರುವವನೇ! ಸರ್ವಶ್ರೇಷ್ಠನೇ! ಯಾವ ಕರ್ಮದಿಂದ ನೀನು ಸಂತುಷ್ಟನಾಗುವೆ?"

ಶ್ರೀಕೃಷ್ಣನು ಹೇಳುತ್ತಾನೆ:

"ಯುಧಿಷ್ಠಿರ! ಒಂದು ಸಾವಿರ ಭಾರದಷ್ಟು (ಭಾರ =೨೦೦೦ ಪಲಗಳ ತೂಕ) ಗುಗ್ಗುಳವೇ ಮೊದಲಾದ ಸುಗಂಧದ್ರವ್ಯಗಳನ್ನು ನನ್ನ ಮುಂದೆ ಹಚ್ಚಿಟ್ಟು ನಿರಂತರವಾಗಿ ನಮಸ್ಕಾರಮಾಡುತ್ತಿದ್ದರೂ, ಭಕ್ಷ್ಯ-ಭೋಜ್ಯಗಳನ್ನೇ ನಿವೇದನೆಮಾಡಿದರೂ, ಋಗ್ಯಜುಸ್ಸಾಮವೇದಗಳ ಮೂಲಕವಾಗಿ ನನ್ನನ್ನು ಸದಾ ಸ್ತೋತ್ರಮಾಡುತ್ತಿದ್ದರೂ-ಬ್ರಾಹ್ಮಣರನ್ನು ಸಂತೋಷಗೊಳಿಸದಿದ್ದರೆ ನಾನು ಸಂತುಷ್ಟನಾಗುವುದಿಲ್ಲ.

ಬ್ರಾಹ್ಮಣೇ ಪೂಜಿತೇ ನಿತ್ಯಂ ಪೂಜಿತೋಽಸ್ಮಿ ನ ಸಂಶಯಃ ।
ಆಕ್ರುಷ್ಟೇ ಚಾಹಮಾಕ್ರುಷ್ಟೋ ಭವಾಮಿ ಭರತರ್ಷಭ ॥೨೯॥

ಭರತಶ್ರೇಷ್ಠನೇ! ಬ್ರಾಹ್ಮಣನು ಪೂಜಿಸಲ್ಪಡುತ್ತಿದ್ದರೆ ನಾನೇ ಪೂಜಿತನಾಗುತ್ತೇನೆ. (ಬ್ರಾಹ್ಮಣರಿಗೆ ಮಾಡುವ ಪೂಜೆಯು ನನ್ನ ಪೂಜೆಯೇ ಆಗುತ್ತದೆ.) ಇದರಲ್ಲಿ ಸಂಶಯವೇ ಇಲ್ಲ. ಬ್ರಾಹ್ಮಣನನ್ನು ದೂಷಿಸಿದರೆ ಅವರು ನನ್ನನ್ನು ದೂಷಿಸಿದಂತೆಯೇ ಆಗುತ್ತದೆ.

ಯಾರು ಬ್ರಾಹ್ಮಣರನ್ನು ಪೂಜಿಸುವರೋ-ಅವರಿಗೆ ಶ್ರೇಷ್ಠವಾದ ಗತಿಯು ನನ್ನಲ್ಲಿಯೇ ಲಭಿಸುತ್ತದೆ. ಏಕೆಂದರೆ: ನಾನು ಭೂಮಿಯಲ್ಲಿ ಬ್ರಾಹ್ಮಣರೂಪದಿಂದಲೇ ವಾಸಮಾಡುತ್ತೇನೆ.

ಯಾವ ಪ್ರಾಜ್ಞನು ನನ್ನಲ್ಲಿಯೇ ಮನಸ್ಸನ್ನು ಇರಿಸಿ ಬ್ರಾಹ್ಮಣರನ್ನು ಸತ್ಕರಿಸುವನೋ-ಅವನನ್ನು ನಾನು ನನ್ನ ರೂಪದಿಂದಲೇ ಕಾಣುತ್ತೇನೆ. ಬ್ರಾಹ್ಮಣರು ಕುರೂಪಿಗಳೇ ಆಗಿದ್ದರೂ, ಕುರುಡರೇ ಆಗಿದ್ದರೂ, ಕುಳ್ಳರೇ ಆಗಿದ್ದರೂ, ದರಿದ್ರರೇ ಆಗಿದ್ದರೂ, ರೋಗಿಗಳೇ ಆಗಿದ್ದರೂ-ಅವರನ್ನು ಪ್ರಾಜ್ಞರಾದವರು ಅನಾದರಣೆಮಾಡಬಾರದು. ಏಕೆಂದರೆ: ಅವರೆಲ್ಲರೂ ನನ್ನ ಸ್ವರೂಪರೇ ಆಗಿದ್ದಾರೆ. ಸಮುದ್ರಪರ್ಯಂತವಾದ ಈ ಭೂಮಂಡಲ

ದಲ್ಲಿ ಎಷ್ಟು ಮಂದಿ ಬ್ರಾಹ್ಮಣಶ್ರೇಷ್ಠರಿರುವರೋ-ಅವರೆಲ್ಲರೂ ನನ್ನ ಸ್ವರೂಪರೇ ಆಗಿರುವರು. ಅವರು ಪೂಜಿತರಾದರೆ ನಾನು ಪೂಜಿತ ನಾದಂತೆಯೇ, ಅಜ್ಞಾನಿಗಳಾದ ಅನೇಕಜನರು ನಾನು ಈ ಭೂಮಂಡಲದಲ್ಲಿ ಬ್ರಾಹ್ಮಣರೂಪದಿಂದ ವಾಸಿಸುತ್ತಿರುವೆನೆಂಬುದನ್ನು ತಿಳಿದಿರುವುದಿಲ್ಲ. ಬ್ರಾಹ್ಮಣರನ್ನು ನಿಂದನೆಮಾಡುವುದರಿಂದ ಯಾರು ಸಂತೋಷಿಸು ವರೋ-ಅಂತಹವರು ಮೃತರಾದನಂತರ ಯಮಲೋಕಕ್ಕೆ ಹೋಗುತ್ತಾರೆ. ಅಲ್ಲಿ ಕ್ರೂರನಾದ, ರಕ್ತಲೋಚನನಾದ ಯಮನು ಅವರನ್ನು ಕೆಳಕ್ಕೆ ಕೆಡವಿ ಎದೆಯನ್ನು ಕಾಲಿನಿಂದ ಮೆಟ್ಟಿಕೊಂಡು ಬೆಂಕಿಯಂತೆ ಕೆಂಪಾಗಿರುವ ಇಕ್ಕಳಗಳಿಂದ ಅವರ ನಾಲಿಗೆಗಳನ್ನು ಕಿತ್ತುಹಾಕುತ್ತಾನೆ. ಯಾವ ಪಾಪಿಷ್ಠರು ಬ್ರಾಹ್ಮಣರನ್ನು ಪಾಪದೃಷ್ಟಿಯಿಂದ ನೋಡುವರೋ-ಅಂತಹ ವೇದಬಾಹ್ಯ ರಾದ, ಬ್ರಹ್ಮದ್ವೇಷಿಗಳಾದ, ಬ್ರಾಹ್ಮಣರಲ್ಲಿ ನಿಷ್ಠೆ ಇಲ್ಲದ ಜನರು ಮರಣ ಹೊಂದಿ ಯಮಲೋಕಕ್ಕೆ ಹೋದನಂತರ, ಯಮನ ಆಜ್ಞಾನುಸಾರವಾಗಿ, ಭಯಂಕರವಾದ ದೊಡ್ಡ ದೇಹಗಳುಳ್ಳ, ವಕ್ರವಾದ ಮುಖದಿಂದ ಕೂಡಿರುವ, ಮಹಾಬಲಿಷ್ಠವಾಗಿರುವ ಪಕ್ಷಿಗಳು ಮುಹೂರ್ತಮಾತ್ರದಲ್ಲಿ ಅವರ ಕಣ್ಣುಗಳನ್ನು ಕಿತ್ತುಹಾಕುತ್ತವೆ. ಯಾವನು ಶ್ರೇಷ್ಠನಾದ ಬ್ರಾಹ್ಮಣನನ್ನು ಪ್ರಹರಿಸುವನೋ, ರಕ್ತಬರುವವರೆಗೂ ಹೊಡೆಯುವನೋ ಅಂತಹವನು ರೌರವಾದಿ ಇಪ್ಪತ್ತೊಂದು ನರಕಗಳನ್ನು ಅನುಕ್ರಮವಾಗಿ ಪ್ರವೇಶಿಸಿ ದಾರುಣವಾದ ಕಷ್ಟವನ್ನು ಅನೇಕ ಸಾವಿರ ವರ್ಷಗಳವರೆಗೆ ಅನುಭವಿಸು ತ್ತಾನೆ. ಅನಂತರ ಅವನನ್ನು ಯಮಭಟರು ಶೂಲಕ್ಕೇರಿಸುತ್ತಾರೆ. ಈ ಶಿಕ್ಷೆಯಾದನಂತರ ಬೆಂಕಿಯಲ್ಲಿ ಬೇಯಿಸುತ್ತಾರೆ. ಅನೇಕ ಸಾವಿರ ವರ್ಷಗಳ ವರೆಗೆ ಅವನನ್ನು ತಲೆಕೆಳಗಾಗಿ ನಿಲ್ಲಿಸಿ ಬೇಯಿಸುತ್ತಲೇ ಇರುತ್ತಾರೆ. ದುರ್ಬುದ್ಧಿಯವನಾದ ಆ ಮನುಷ್ಯನಿಗೆ ಈ ವಿಧವಾದ ನರಕಯಾತನೆಗಳು ಅವನ ಪಾಪಕರ್ಮಗಳ ಫಲವು ಮುಗಿಯುವವರೆಗೂ ಇರುತ್ತವೆ. ಬ್ರಾಹ್ಮಣ ರನ್ನು ಅವಮಾನಗೊಳಿಸಬೇಕೆಂದು ಅಥವಾ ಅವರನ್ನು ವಧಿಸಬೇಕೆಂದು ವಿಚಾರಮಾಡಿ ಯಾವನು ಹೋಗುವನೋ-ಅವನು ಕೂಡ ಒಂದು ಲಕ್ಷ ವರ್ಷಗಳವರೆಗೆ ತಾಮಿಸ್ರವೆಂಬ ನರಕದಲ್ಲಿ ಬೇಯಿಸಲ್ಪಡುತ್ತಾನೆ. ಆದುದ ರಿಂದ ಬ್ರಾಹ್ಮಣನನ್ನು ಕುರಿತು ಅಮಂಗಳವಾದ ಮಾತುಗಳನ್ನಾಡಬಾರದು. ಹಗುರವಾದ ಮತ್ತು ಕಠಿನವಾದ ಮಾತುಗಳನ್ನಾಡಬಾರದು. ಯಾವಾಗಲೂ ಅವನನ್ನು ಅವಮಾನಿಸಬಾರದು. ಯಾವ ಶ್ರೇಷ್ಠಪುರುಷರು ಬ್ರಾಹ್ಮಣರನ್ನು

ಮಧುರವಾದ ಮಾತುಗಳಿಂದ ಸಂತೈಸುತ್ತಾ ಪೂಜಿಸುವರೋ-ಅಂತಹವರಿಂದ ನಾನೇ ಸ್ತುತಿಸಲ್ಪಡುವವನೂ ಪೂಜಿಸಲ್ಪಡುವವನೂ ಆಗುತ್ತೇನೆ. ಅವರು ಬ್ರಾಹ್ಮಣರನ್ನು ಪೂಜಿಸಿದರೂ ನನ್ನನ್ನು ಪೂಜಿಸಿದಂತೆಯೇ ಆಗುತ್ತದೆ. ಇದರಲ್ಲಿ ಸಂಶಯವೇ ಇಲ್ಲ. ಯಾರು ಬ್ರಾಹ್ಮಣರನ್ನು ಭಯಪಡಿಸುವರೋ ಮತ್ತು ನಿಂದಿಸುವರೋ-ಅವರು ನನ್ನನ್ನೇ ಭಯಗೊಳಿಸಿದಂತೆಯೂ ಮತ್ತು ನಿಂದಿಸಿದಂತೆಯೂ ಆಗುತ್ತದೆ. ಇದರಲ್ಲಿ ಸಂಶಯವಿಲ್ಲ."

ವೈಷ್ಣವಧರ್ಮ-೫
ಯಮಲೋಕದ ಮಾರ್ಗದಲ್ಲಿರುವ ಕಷ್ಟಗಳು ಮತ್ತು ಬಿಡಿಸಿಕೊಳ್ಳುವ ಉಪಾಯ

ಯುಧಿಷ್ಠಿರನು ಹೇಳುತ್ತಾನೆ:

"ದೈತ್ಯರನ್ನು ವಿನಾಶಗೊಳಿಸುವ ದೇವದೇವೇಶ್ವರನೇ! ಸರ್ವಜ್ಞನೇ! ಕೇಶವನೇ! ನಿನ್ನ ಭಕ್ತನಾದ ನನಗೆ ಮನುಷ್ಯಲೋಕಕ್ಕೂ ಮತ್ತು ಯಮಧರ್ಮನ ಲೋಕಕ್ಕೂ ಇರುವ ಅಂತರವನ್ನು ಹೇಳು. ಮಹಾದೇವನೇ! ಯಾವಾಗ ಜೀವನು ಪಂಚಭೂತಾತ್ಮಕವಾದ ಶರೀರದಿಂದ ಬೇರ್ಪಡುವನೋ, ಚರ್ಮ-ಮೂಳೆ ಮತ್ತು ಮಾಂಸಗಳಿಂದ ರಹಿತನಾಗುವನೋ-ಆಗ ಅವನು ಅನುಭವಿಸುವ ಸುಖ-ದುಃಖಗಳನ್ನು ಸಮಗ್ರವಾಗಿ ಹೇಳು. ಮನುಷ್ಯಲೋಕದಲ್ಲಿ ಜೀವನು, ತಾನೇ ಮಾಡಿದ ಶುಭಾಶುಭಕರ್ಮಗಳಿಂದ ಬಂಧಿಸಲ್ಪಟ್ಟಿರುತ್ತಾನೆ. ಅವನು ಮರಣಹೊಂದಿದ ನಂತರ ಯಮಧರ್ಮನ ಆಜ್ಞಾನುಸಾರವಾಗಿ ಭಯಂಕರವಾದ, ಎದುರಿಸಲು ಅಸಾಧ್ಯರಾದ ಮತ್ತು ಘೋರಪರಾಕ್ರಮಿಗಳಾದ ಯಮದೂತರು, ಜೀವನನ್ನು ಕಠಿನವಾದ ಪಾಶಗಳಿಂದ ಬಿಗಿದು ಎಳೆದುಕೊಂಡುಹೋಗುತ್ತಾರೆ. ಆ ಸಮಯದಲ್ಲಿ ಜೀವನು ಅವರಿಂದ ತಪ್ಪಿಸಿಕೊಂಡು ಓಡಿಹೋಗಲು ಪ್ರಯತ್ನಿಸುತ್ತಾನೆ-ಎಂಬುದಾಗಿ ನಾನು ಕೇಳಿದ್ದೇನೆ. ಪುಣ್ಯ-ಪಾಪಗಳೆರಡನ್ನೂ ಮಾಡಿರುವ ಜೀವನು ಅಲ್ಲಿ ಸುಖ-ದುಃಖಗಳೆರಡನ್ನೂ ಅನುಭವಿಸುತ್ತಾನೆ. ಹೀಗಿರುವಾಗ

ದುರ್ಧರ್ಷರಾದ ಯಮದೂತರು ಜೀವವನ್ನು ಹೇಗೆ ಯಮಲೋಕಕ್ಕೆ ಕರೆದುಕೊಂಡು ಹೋಗುತ್ತಾರೆ? ಈ ವಿಷಯವನ್ನು ಹೇಳು. ಯಮಲೋಕಕ್ಕೆ ಹೋಗುವ ಸಮಯದಲ್ಲಿ ಜೀವನಿಗೆ ಯಾವ ರೂಪವಿರುತ್ತದೆ? ಅವನು ಎಷ್ಟು ಗಾತ್ರವಿರುತ್ತಾನೆ? ಯಾವ ಬಣ್ಣದಲ್ಲಿರುತ್ತಾನೆ?-ಈ ಎಲ್ಲ ವಿಷಯಗಳನ್ನೂ ವಿಸ್ತಾರವಾಗಿ ಹೇಳು."

ಶ್ರೀಕೃಷ್ಣನು ಹೇಳುತ್ತಾನೆ:

"ಮಹಾರಾಜ! ನರೇಶ್ವರನೇ! ನೀನು ನನ್ನ ಭಕ್ತನಾಗಿರುವೆ. ಆದುದರಿಂದ ನೀನು ಪ್ರಶ್ನಿಸಿರುವ ವಿಷಯಗಳೆಲ್ಲವನ್ನೂ ಯಥಾವತ್ತಾಗಿ ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು.

ಯುಧಿಷ್ಠಿರ! ಮನುಷ್ಯಲೋಕಕ್ಕೂ ಯಮಲೋಕಕ್ಕೂ ಎಂಬತ್ತಾರು ಸಾವಿರ ಯೋಜನೆಗಳ ಅಂತರವಿದೆ. ಮನುಷ್ಯಲೋಕ-ಯಮಲೋಕಗಳ ಮಧ್ಯಮಾರ್ಗದಲ್ಲಿ ವೃಕ್ಷಗಳ ನೆರಳಾಗಲೀ, ತಟಾಕಗಳಾಗಲೀ, ಸರೋವರ ಗಳಾಗಲೀ, ಬಾವಿಗಳಾಗಲೀ, ಸಣ್ಣನದಿಗಳಾಗಲೀ, ಸಣ್ಣಹಳ್ಳಗಳಾಗಲೀ ಇರುವುದಿಲ್ಲ. ಮಂಟಪಗಳಾಗಲೀ, ಸಭಾಮಂದಿರಗಳಾಗಲೀ, ಅರವಟ್ಟಿಗೆ ಗಳಾಗಲೀ, ಮನೆಗಳಾಗಲೀ, ಪರ್ವತ-ನದಿಗಳಾಗಲೀ, ಗುಹೆಗಳಾಗಲೀ ಇರುವುದಿಲ್ಲ. ಗ್ರಾಮವಾಗಲೀ, ಆಶ್ರಮವಾಗಲೀ, ಉದ್ಯಾನವನವಾಗಲೀ, ವನವಾಗಲೀ, ಯಾವುದೇ ಆಶ್ರಯಸ್ಥಾನವಾಗಲೀ ಯಮಲೋಕಕ್ಕೆ ಹೋಗುವ ಮಾರ್ಗದಲ್ಲಿರುವುದಿಲ್ಲ. ಮರಣಕಾಲವು ಸನ್ನಿಹಿತವಾದಾಗ ಜೀವನು ಮರಣಸಂಕಟದಿಂದ ಪೀಡಿಸಲ್ಪಡುತ್ತಿರುತ್ತಾನೆ. ಸ್ವಲ್ಪಹೊತ್ತು ಚಡಪಡಿಸುತ್ತಿದ್ದು ಅನಂತರ ಪ್ರಾಣಗಳು ಕಂಠಗತವಾಗಿ ಯಾವುದಾದರೂ ಕಾರಣಗಳಿಂದ ಶರೀರವನ್ನು ತ್ಯಜಿಸುತ್ತಾನೆ. ಜೀವನು ಅಸ್ವತಂತ್ರನಾಗಿ ಶರೀರದಿಂದ ವಾಯುವಿನೊಡನೆ ಹೊರಬರುತ್ತಾನೆ. ಆರು ಕೋಶಗಳುಳ್ಳ ಶರೀರದಿಂದ ವಾಯುರೂಪವಾಗಿ ಹೊರಬಂದ ಜೀವನು ಅದೇ ರೂಪ-ವರ್ಣ ಮತ್ತು ಪ್ರಮಾಣಗಳಿರುವ ಮತ್ತೊಂದು ಶರೀರವನ್ನು ಪ್ರವೇಶಿಸುತ್ತಾನೆ. ಅದೃಶ್ಯವಾದ ಆ ಶರೀರವನ್ನು ಪ್ರವೇಶಿಸಿದನಂತರ

ಜೀವನೂ ಅದೃಶ್ಯನಾಗಿ ಯಾರ ಕಣ್ಣುಗಳಿಗೂ ಕಾಣಿಸುವುದಿಲ್ಲ. ದೇಹಧಾರಿಗಳ ಅಂತರಾತ್ಮರೂಪವಾದ ಆ ಜೀವವು ಎಂಟು ಅಂಗಗಳಿಂದ ಯುಕ್ತವಾಗಿ ಯಮಲೋಕದ ಕಡೆಗೆ ಹೋಗುತ್ತದೆ. ಆ ಸಮಯದಲ್ಲಿ ಅದನ್ನು ಕತ್ತರಿಸಿದರೂ, ಒಡೆದುಹಾಕಲು ಪ್ರಯತ್ನಿಸಿದರೂ, ಸುಟ್ಟುಹಾಕಿದರೂ, ಪ್ರಹರಿಸಿದರೂ ಅದು ನಾಶಹೊಂದುವುದಿಲ್ಲ. ಯಮರಾಜನ ಆಜ್ಞಾನುಸಾರವಾಗಿ ನಾನಾರೂಪಧಾರಿಗಳಾದ ಭಯಂಕರರಾದ, ಪ್ರಚಂಡರಾದ, ಎದುರಿಸಲು ಅಸಾಧ್ಯರಾದ, ಪ್ರಚಂಡವಾದ ಆಯುಧಗಳನ್ನು ಹಿಡಿದಿರುವ ಯಮದೂತರು ಅಷ್ಟಾಂಗಯುಕ್ತನಾದ ಆ ಜೀವವನ್ನು ಸೆಳೆದೊಯ್ಯುತ್ತಾರೆ. ಆ ಸಮಯದಲ್ಲಿ ಆ ಜೀವನು ಪತ್ನೀ-ಪುತ್ರರೂಪವಾದ ಸ್ನೇಹಬಂಧನದಿಂದ ಬಂಧಿಸಲ್ಪಟ್ಟಿರುತ್ತಾನೆ. ಅಸ್ವತಂತ್ರನಾಗಿ ಯಮಭಟರಿಂದ ಬಲಾತ್ಕಾರಪೂರ್ವಕವಾಗಿ ಸೆಳೆಯಲ್ಪಡುತ್ತಿರುತ್ತಾನೆ. ಅವನು ಮಾಡಿದ ಪುಣ್ಯ-ಪಾಪಗಳು ಅವನನ್ನು ಅನುಸರಿಸಿ ಹೋಗುತ್ತಿರುತ್ತವೆ. ಆ ಸಮಯದಲ್ಲಿ ದುಃಖಪೀಡಿತರಾದ ಆ ಜೀವನ ಬಂಧುಗಳು ಕರುಣಾಜನಕವಾದ ಧ್ವನಿಯಲ್ಲಿ ರೋದನಮಾಡುತ್ತಿರುತ್ತಾರೆ. ಅವನು ಬಂಧುಜನರೆಲ್ಲರನ್ನೂ ಪರಿತ್ಯಜಿಸಿ ಯಾವುದರಲ್ಲಿಯೂ ಆಸಕ್ತಿಯಿಲ್ಲದೆ ಯಮಭಟರೊಡನೆ ಹೋಗುತ್ತಿರುತ್ತಾನೆ. ಅಳುತ್ತಿರುವ ತಾಯಿ-ತಂದೆ-ಸಹೋದರ- ಮಾವ-ಹೆಂಡತಿ-ಮಕ್ಕಳು-ಮಿತ್ರರು-ಇವರೆಲ್ಲರೊಡನೆಯೂ ಆ ಜೀವನ ಸಂಬಂಧವು ಕಡಿದುಹೋಗುತ್ತದೆ. ದೀನವಾದ, ಕಂಬನಿದುಂಬಿದ ಮುಖಗಳಿಂದಲೂ ಕಣ್ಣುಗಳಿಂದಲೂ ಕೂಡಿದ ಬಂಧುಗಳಿಗೆ ಕಾಣಿಸದ ರೀತಿಯಲ್ಲಿ, ಆ ಜೀವನು ತನ್ನ ಪಂಚಭೂತಾತ್ಮಕವಾಗಿದ್ದ ಶರೀರವನ್ನು ಪರಿತ್ಯಜಿಸಿ ವಾಯುಶರೀರನಾಗಿ ಯಮಭಟರ ಜೊತೆಯಲ್ಲಿ ಪ್ರಯಾಣಮಾಡುತ್ತಾನೆ. ಪಾಪಿಷ್ಠರಿಗೆ ಆ ಮಾರ್ಗವು ಅಂಧಕಾರಮಯವಾಗಿರುತ್ತದೆ. ಎಷ್ಟು ನಡೆದರೂ ಮುಗಿಯುವುದೇ ಇಲ್ಲ. ಅಪಾರವಾಗಿರುತ್ತದೆ. ಮಹಾಘೋರವಾಗಿರುತ್ತದೆ. ಭಯಂಕರವೂ, ತಮೋಮಯವೂ, ದುಸ್ತರವೂ, ದುರ್ಗಮವೂ, ಕಡೆಯವರೆಗೂ ದುಃಖಮಯವೂ ಆಗಿರುತ್ತದೆ. ಪೃಥ್ವಿಯಲ್ಲಿ 'ಜೀವ' ಎಂಬ

ಸಂಜ್ಞೆಯನ್ನು ಪಡೆದ ದೇವತೆಗಳೇ ಆಗಲೀ, ಅಸುರರೇ ಆಗಲೀ, ಮನುಷ್ಯರೇ ಆಗಲೀ, ಸ್ತ್ರೀಯರಾಗಲೀ, ಪುರುಷರಾಗಲೀ, ನಪುಂಸಕರಾಗಲೀ, ಬಾಲರಾಗಲೀ, ವೃದ್ಧರಾಗಲೀ, ತರುಣರಾಗಲೀ, ಆಗ ಹುಟ್ಟಿದ ಶಿಶುವಾಗಲೀ, ಗರ್ಭದಲ್ಲಿರುವ ಭ್ರೂಣವಾಗಲೀ-ಯಮರಾಜನ ವಶದಲ್ಲಿರುವ ಇವರೆಲ್ಲರೂ ಒಂದು ದಿನ ಇದೇ ಮಹಾಪಥದ ಮೂಲಕವಾಗಿಯೇ ಪ್ರಯಾಣಮಾಡಬೇಕು. ಪೂರ್ವಾಹ್ಣದಲ್ಲಿ, ಅಪರಾಹ್ಣದಲ್ಲಿ, ಸಂಧ್ಯಾಕಾಲಗಳಲ್ಲಿ, ಪ್ರದೋಷಕಾಲಗಳಲ್ಲಿ, ಅರ್ಧರಾತ್ರಿಯಲ್ಲಿ ಮುಂಜಾನೆಯಲ್ಲಿ ಅರ್ಥಾತ್ ಎಲ್ಲ ಕಾಲಗಳಲ್ಲಿಯೂ ಯಮನ ಪಟ್ಟಣಕ್ಕೆ ಹೋಗುತ್ತಲೇ ಇರುತ್ತಾರೆ. ಎಲ್ಲ ಪ್ರಾಣಿಗಳೂ ಎದುರಿಸಲು ಅಸಾಧ್ಯರಾದ, ಪ್ರಚಂಡರಾದ, ಉಗ್ರಶಾಸಕರಾದ ಮೃತ್ಯುವಿನ ದೂತರಿಂದ ತಳ್ಳಲ್ಪಡುತ್ತಾ ವಿವಶರಾಗಿ ಯಮನ ಮನೆಗೆ ಹೋಗುತ್ತಿರುತ್ತಾರೆ. ಯಮಲೋಕದ ಆ ಹಾದಿಯಲ್ಲಿ ಕೆಲವರು ಭಯದಿಂದ ನಡುಗುತ್ತಿರುತ್ತಾರೆ. ಕೆಲವರು ಹುಚ್ಚರಂತೆ ವರ್ತಿಸುತ್ತಿರುತ್ತಾರೆ. ಕೆಲವರು ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸುತ್ತಿರುತ್ತಾರೆ. ಕೆಲವರು ವೇದನೆಯಿಂದ ಪೀಡಿತರಾಗಿ ಅಳುತ್ತಿರುತ್ತಾರೆ. ಕೆಲವರು ಯಮಭಟರಿಂದ ಭಯಗೊಳಿಸಲ್ಪಟ್ಟು ಉದ್ವಿಗ್ನರಾಗಿರುತ್ತಾರೆ. ಕೆಲವರು ಯಮದೂತರಿಂದ ಪ್ರಹರಿಸಲ್ಪಟ್ಟ ಶರೀರವುಳ್ಳವರಾಗಿರುತ್ತಾರೆ. ಯಮದೂತರ ಭಯೋತ್ಪಾದಕವಾದ ಮಾತುಗಳನ್ನು ಕೇಳುತ್ತಾ ಜೀವರು ಯಮನ ಆಲಯಕ್ಕೆ ಹೋಗುತ್ತಿರುತ್ತಾರೆ. ಧರ್ಮಹೀನರಾದ ಜೀವರು ಕಟ್ಟಿಗೆ, ಬಂಡೆಕಲ್ಲುಗಳು, ದಂಡ, ಪಂಜು, ಚಾವಟಿ ಮತ್ತು ಅಂಕುಶ-ಇವುಗಳಿಂದ ಬಾರಿ-ಬಾರಿಗೂ ಯಮದೂತರಿಂದ ಪ್ರಹರಿಸಲ್ಪಡುತ್ತಾ ಯಮನಪಟ್ಟಣಕ್ಕೆ ಪ್ರಯಾಣಮಾಡುತ್ತಾರೆ. ಇತರರ ಜೀವಕ್ಕೆ ಘಾಸಿಯನ್ನುಂಟುಮಾಡಿದ ಕೊಲೆಪಾತಕರು ಯಮದೂತರ ಅಂಕುಶವೇ ಮೊದಲಾದ ಆಯುಧಗಳ ಪ್ರಹಾರಗಳಿಂದ ಉಂಟಾದ ವೇದನೆಯಿಂದ ಕೂಗಿಕೊಳ್ಳುತ್ತಿರುತ್ತಾರೆ. ವಿಕಾರವಾದ ಧ್ವನಿಯಿಂದ ಅಳುತ್ತಿರುತ್ತಾರೆ. ಮುಂದೆ ಹೋಗಲು ಸಾಧ್ಯವಾಗದೆ ಬೀಳುತ್ತಾ ಏಳುತ್ತಾ ಇರುತ್ತಾರೆ. ಹೀಗೆ ಅವರು ಯಮನ ಪಟ್ಟಣಕ್ಕೆ

ಹೋಗಬೇಕಾಗುತ್ತದೆ. ಜೀವಘಾತಕರು ಹೋಗುತ್ತಿರುವಾಗ-ಶಕ್ತಿ, ಭಿಂದಿ ಪಾಲ, ಶಂಕು, ತೋಮರ, ಬಾಣ, ತ್ರಿಶೂಲಾಗ್ರ-ಇವೇ ಮುಂತಾದ ಆಯುಧಗಳಿಂದ ಪ್ರಹಾರವನ್ನು ತಿಂದುಕೊಂಡು ಯಮಲೋಕಕ್ಕೆ ಹೋಗಬೇಕಾಗುತ್ತದೆ. ಇಷ್ಟುಮಾತ್ರವಲ್ಲ, ನಾಯಿಗಳು, ಹುಲಿಗಳು, ತೋಳಗಳು, ಕಾಗೆಗಳು ಎಲ್ಲ ಕಡೆಗಳಿಂದಲೂ ಕಿತ್ತು ತಿನ್ನುತ್ತಿರುತ್ತವೆ. ಮಾಂಸವನ್ನು ಕತ್ತರಿಸುವ ರಾಕ್ಷಸರು ಕೂಡ ಯಮಪಟ್ಟಣಕ್ಕೆ ಹೋಗುವ ಜೀವಘಾತಕರಾದ ಜೀವರನ್ನು ಪೀಡಿಸುತ್ತಿರುತ್ತಾರೆ.

ಇಲ್ಲಿ ಮಾಂಸಗಳನ್ನು ತಿನ್ನುತ್ತಿದ್ದ ಜೀವವನ್ನು ಯಮಮಾರ್ಗದಲ್ಲಿ ಎಮ್ಮೆಗಳು, ಮೃಗಗಳು, ಹಂದಿಗಳು, ಜಿಂಕೆಗಳು ಕಿತ್ತು ತಿನ್ನುತ್ತಿರುತ್ತವೆ. ಇಂತಹ ದಾರುಣವಾದ ಯಾತನೆಗಳನ್ನು ಅನುಭವಿಸುತ್ತಾ ಪಾಪಮಾಡಿ ದವನು ಯಮಲೋಕಕ್ಕೆ ಹೋಗಬೇಕಾಗುತ್ತದೆ. ಬಾಲಕರನ್ನು ಕೊಲೆ ಮಾಡಿದ ಪಾಪಿಷ್ಠರನ್ನು ಸೂಜಿಯಂತೆ ತೀಕ್ಷ್ಣವಾದ ಮುಖಾಗ್ರಗಳನ್ನು ಹೊಂದಿರುವ ನೊಣಗಳು ಎಲ್ಲ ಕಡೆಗಳಿಂದಲೂ ಮುತ್ತಿಕೊಂಡು ಪೀಡಿಸು ತ್ತಿರುತ್ತವೆ. ಅವುಗಳಿಂದ ಉಂಟಾಗುವ ಯಾತನೆಯನ್ನು ಸಹಿಸಿಕೊಂಡು ಪಾಪಿಷ್ಠನಾದ ಜೀವಿಯು ಹೋಗಬೇಕಾಗುತ್ತದೆ. ವಿಶ್ವಾಸವನ್ನಿಟ್ಟುಕೊಂಡಿ ರುವ ಸ್ವಾಮಿಯನ್ನೂ, ಮಿತ್ರನನ್ನೂ, ಸ್ತ್ರೀಯನ್ನೂ ಕೊಲೆಮಾಡುವ ಮನುಷ್ಯರನ್ನು ಯಮದೂತರು ಯಮಲೋಕಕ್ಕೆ ಕರೆದೊಯ್ಯುವಾಗ ಶಸ್ತ್ರಗಳಿಂದ ಸೀಳುತ್ತಿರುತ್ತಾರೆ. ಯಾರು ಇತರರ ಪ್ರಾಣಗಳನ್ನು ತಿನ್ನುವರೋ ಮತ್ತು ಇತರರಿಗೆ ದುಃಖವನ್ನುಂಟುಮಾಡುವರೋ-ಅಂತಹವರು ರಾಕ್ಷಸ ರಿಂದಲೂ ನಾಯಿಗಳಿಂದಲೂ ಭಕ್ಷಿಸಲ್ಪಡುತ್ತಾ ಯಮಲೋಕಕ್ಕೆ ಹೋಗುತ್ತಾರೆ. ಯಾರು ಇತರರ ಬಟ್ಟೆಗಳನ್ನೂ ಹಾಸಿಗೆ-ಹೊದ್ದಿಕೆಗಳನ್ನೂ ಕದಿಯುವರೋ ಅಂತಹವರು ಪಿಶಾಚಿಗಳಂತೆ ನಗ್ನರಾಗಿ ಯಮಲೋಕದ ಕಡೆಗೆ ಓಡುತ್ತಿರುತ್ತಾರೆ. ಗೋವುಗಳು, ಧಾನ್ಯ, ಸುವರ್ಣ, ಕ್ಷೇತ್ರ, ಗೃಹ-ಇವೇ ಮೊದಲಾದ ಬೇರೆಯವರ ಸ್ವತ್ತನ್ನು ಬಲಾತ್ಕಾರದಿಂದ ಯಾರು ಅಪಹರಿಸುವರೋ ಅಂತಹ ಪಾಪಕರ್ಮಿಗಳಾದ ದುರಾತ್ಮರು ಯಮದೂತ ರಿಂದ ಕಲ್ಲುಗಳಿಂದಲೂ, ಪಂಜುಗಳಿಂದಲೂ, ದಂಡೆಗಳಿಂದಲೂ, ಕಟ್ಟಿಗೆಗಳಿಂದಲೂ ಹೊಡೆಯಲ್ಪಟ್ಟು ಶರೀರಾದ್ಯಂತವಾಗಿ ಗಾಯಗೊಂಡು ಅವಶರಾಗಿ ಯಮನ ಲೋಕಕ್ಕೆ ಹೋಗುತ್ತಾರೆ. ಯಾವ ಮನುಷ್ಯರು

ನರಕವೆಂದರೆ ಭಯಪಡದೇ (ಅದೊಂದು ಕಟ್ಟುಕತೆಯೆಂದು ಭಾವಿಸಿ) ಬ್ರಾಹ್ಮಣನ ಸ್ವತ್ತನ್ನು ಅಪಹರಿಸುವರೋ, ಅವರನ್ನು ನಿಂದಿಸುವರೋ, ಹೊಡೆಯುವರೋ-ಅಂತಹವರು ಯಮಲೋಕಕ್ಕೆ ಹೋಗುವಾಗ ಒಣಗಿದ ಕಂಠವುಳ್ಳವರಾಗುತ್ತಾರೆ. ಯಮದೂತರಿಂದ ಬಂಧಿಸಲ್ಪಟ್ಟಿರುವ ಅವರ ನಾಲಿಗೆ, ಕಣ್ಣುಗಳು ಮತ್ತು ಮೂಗು ಛಿನ್ನ-ಭಿನ್ನಗಳಾಗಿರುತ್ತವೆ.

ಶರೀರಗಳಿಂದ ರಕ್ತ-ಕೀವುಗಳು ಹೊರಬರುತ್ತಿದ್ದು ದುರ್ಗಂಧವು ಸುತ್ತಲೂ ಪ್ರಸರಿಸಿರುತ್ತದೆ. ಗುಳ್ಳೇನರಿಗಳು ಅವರನ್ನು ಕಿತ್ತು ತಿನ್ನುತ್ತಿರುತ್ತವೆ. ಕೋಪಾವಿಷ್ಟರಾದ, ಭಯಂಕರರಾದ ಚಾಂಡಾಲರು ಎಲ್ಲ ಕಡೆಗಳಿಂದಲೂ ಅವರನ್ನು ಹಿಂಸಿಸುತ್ತಾರೆ. ಆ ಸಮಯದಲ್ಲವರು ಕರುಣಾಜನಕವಾದ ಧ್ವನಿಯಲ್ಲಿ ಗಟ್ಟಿಯಾಗಿ ಕೂಗಿಕೊಳ್ಳುತ್ತಾ ಯಮಲೋಕಕ್ಕೆ ಹೋಗುತ್ತಾರೆ. ಯಮಲೋಕಕ್ಕೆ ಹೋದನಂತರ ಆ ಪಾಪಿಷ್ಠರನ್ನು ಅನೇಕ ವಿಷ್ಠಾ (ಮಲ) ಕೂಪಗಳಿಗೆ ತಳ್ಳುತ್ತಾರೆ. ಅಲ್ಲವರು ನಾನಾವಿಧವಾದ ವೇದನೆಗಳನ್ನು ಸಹಿಸಿಕೊಂಡು ಕೋಟಿ-ಕೋಟಿ ವರ್ಷಗಳವರೆಗೆ ಜೀವಿಸಿರಬೇಕಾಗುತ್ತದೆ. ಅನೇಕ ಕೋಟಿವರ್ಷಗಳು ಕಳೆದನಂತರ ನರಕದಿಂದ ಮುಕ್ತರಾಗುವ ಆ ಪಾಪಿಷ್ಠರು ಈ ಲೋಕದಲ್ಲಿ ಮಲದ ಕ್ರಿಮಿಗಳಾಗಿ ಹುಟ್ಟಿ ನೂರು ಕೋಟಿ ವರ್ಷಗಳನ್ನು ಅದೇ ಅವಸ್ಥೆಯಲ್ಲಿಯೇ ಕಳೆಯಬೇಕಾಗುತ್ತದೆ. ಈ ಜನ್ಮದಲ್ಲಿ ದಾನಮಾಡದವರು ಯಮಲೋಕಕ್ಕೆ ಹೋಗುವಾಗ ಒಣಗಿಹೋದ ಕಂಠ, ಮುಖ ಮತ್ತು ದವಡೆಗಳುಳ್ಳವರಾಗುತ್ತಾರೆ. ತಮ್ಮೊಡನಿರುವ ಯಮಭಟ ರನ್ನು, ಪಾನೀಯವನ್ನೂ ಅನ್ನವನ್ನೂ ಕೊಡುವಂತೆ ಪುನಃ ಪುನಃ ಬೇಡಿ ಕೊಳ್ಳುತ್ತಾರೆ. 'ಪ್ರಭುಗಳೇ! ನಾವು ಹಸಿವಿನಿಂದಲೂ ಬಾಯಾರಿಕೆಯಿಂದಲೂ ಪೀಡಿತರಾಗಿದ್ದೇವೆ. ಮುಂದೆ ಪ್ರಯಾಣಮಾಡಲು ನಮ್ಮಿಂದ ಸಾಧ್ಯವೇ ಇಲ್ಲ. ನಮಗೆ ಅನ್ನವನ್ನು ಕೊಡಿರಿ. ನಮಗೆ ನೀರನ್ನು ಕೊಡಿರಿ"-ಹೀಗೆ ದಾನಮಾಡದವರು ದೂತರನ್ನು ಬೇಡಿಕೊಳ್ಳುತ್ತಾ ಯಮಾಲಯವನ್ನು ಸೇರುತ್ತಾರೆ.

ಬ್ರಾಹ್ಮಣರಿಗೆ ಕೊಡಲು ಯೋಗ್ಯವಾದ ದಾನಗಳನ್ನು ಯಾರು ಕೊಡು ವರೋ ಅವರು ಅದರ ಫಲವಾಗಿ ಯಮಾಲಯಕ್ಕೆ ಸುಖವಾಗಿ ಹೋಗು

ತ್ತಾರೆ. ಬ್ರಾಹ್ಮಣರಿಗೆ ಅದರಲ್ಲಿಯೂ ವಿಶೇಷವಾಗಿ ಶ್ರೋತ್ರಿಯರಿಗೆ ಸುಸಂಸ್ಕೃತವಾದ ಅನ್ನವನ್ನು ಪರಮಭಕ್ತಿಯಿಂದ ಕೊಡುವ ಮಹಾತ್ಮರು ಅವಸಾನಾನಂತರದಲ್ಲಿ ಚಿತ್ರಿತವಾದ ವಿಮಾನಗಳಲ್ಲಿ ಕುಳಿತು ಯಮಾಲಯಕ್ಕೆ ಹೋಗುತ್ತಾರೆ. ಹಾಗೆ ಹೋಗುವ ದಾರಿಯಲ್ಲಿ ಸುಂದರಸ್ತ್ರೀಯರೂ ಮತ್ತು ಅಪ್ಸರೆಯರೂ ಅವರ ಸೇವೆಯನ್ನು ಮಾಡುತ್ತಾರೆ. ಯಾರು ನಿತ್ಯವೂ ಸತ್ಯವನ್ನೇ ಆಡುವರೋ ಮತ್ತು ಕಲ್ಮಷರಹಿತವಾದ ಮಾತುಗಳನ್ನಾಡುವರೋ-ಅವರು ಬಿಳಿಯಮೋಡಗಳಿಗೆ ಅನುರೂಪವಾದ ಎತ್ತುಗಳಿಂದ ಕೂಡಿದ ವಿಮಾನಗಳಲ್ಲಿ ಕುಳಿತು ಯಮಲೋಕಕ್ಕೆ ಹೋಗುತ್ತಾರೆ. ಯಾವ ಮನುಷ್ಯರು ಕಪಿಲೆಯೇ ಮೊದಲಾದ ಪವಿತ್ರವಾದ ಗೋವುಗಳನ್ನು ಬ್ರಾಹ್ಮಣರಿಗೆ ಅದರಲ್ಲಿಯೂ ವಿಶೇಷವಾಗಿ ಶ್ರೋತ್ರಿಯರಿಗೆ ದಾನಮಾಡುವರೋ-ಅಂತಹವರು ನಿರ್ಮಲವಾದ ಬಣ್ಣವುಳ್ಳ, ಧರ್ಮದಿಂದ ಪ್ರಾಪ್ತವಾದ ವಿಮಾನದಲ್ಲಿ ಕುಳಿತು ಯಮಲೋಕಕ್ಕೆ ಹೋಗುತ್ತಾರೆ. ಅಲ್ಲಿ ಅಪ್ಸರೆಯರೇ ಅವರ ಸೇವೆಮಾಡುತ್ತಾರೆ. ಯಾರು ಬ್ರಾಹ್ಮಣರಿಗೆ ಪಾದರಕ್ಷೆಗಳನ್ನೂ, ಛತ್ರಿಯನ್ನೂ, ಹಾಸಿಗೆಗಳನ್ನೂ, ಆಸನಗಳನ್ನೂ, ವಸ್ತ್ರಗಳನ್ನೂ, ಆಭರಣಗಳನ್ನೂ ದಾನಮಾಡುವರೋ ಅವರು ಅವಸಾನಾನಂತರ ಸುವರ್ಣಮಯವಾದ ಛತ್ರಿಯಿಂದ ಸುಶೋಭಿತರಾಗಿ ಆಭರಣಾದಿಗಳಿಂದ ಅಲಂಕೃತರಾಗಿ, ಕುದುರೆ, ಎತ್ತು, ಆನೆ-ಇವೇ ಮುಂತಾದ ಸುಂದರವಾದ ವಾಹನಗಳಲ್ಲಿ ಕುಳಿತು ಯಮರಾಜಪುರಕ್ಕೆ ಹೋಗುತ್ತಾರೆ. ಯಾರು ಫಲಗಳನ್ನೂ ಸುಗಂಧಯುಕ್ತವಾದ ಪುಷ್ಪಗಳನ್ನೂ ದಾನಮಾಡುವರೋ-ಅಂತಹವರು ಹಂಸಗಳಿಂದ ಯುಕ್ತವಾದ ವಿಮಾನಗಳಲ್ಲಿ ಕುಳಿತು ಯಮಧರ್ಮನ ಪಟ್ಟಣಕ್ಕೆ ಹೋಗುತ್ತಾರೆ. ಯಾರು ಬ್ರಾಹ್ಮಣರಿಗೆ ತುಪ್ಪದಿಂದ ಯುಕ್ತವಾದ ಬಗೆ-ಬಗೆಯ ಮೃಷ್ಟಾನ್ನವನ್ನು ದಾನಮಾಡುವರೋ ಅವರು ಬಿಳಿಯ ಮೋಡದಂತೆ ಶುಭ್ರವಾಗಿರುವ ಮತ್ತು ವಾಯುವೇಗವುಳ್ಳ ವಿಮಾನಗಳಲ್ಲಿ ಕುಳಿತು ನಾನಾಜನರಿಂದ ಸಮಾಕುಲವಾಗಿರುವ ಪ್ರೇತನಾಥನಾದ ಯಮನ ಪಟ್ಟಣಕ್ಕೆ ಹೋಗುತ್ತಾರೆ. ಸಮಸ್ತಪ್ರಾಣಿಗಳ ಜೀವನಾಧಾರವಾದ ಪಾನೀಯವನ್ನು ದಾನಮಾಡುವವರು ಹಂಸಗಳಿಂದ ಕೂಡಿದ ವಿಮಾನಗಳಲ್ಲಿ ಕುಳಿತು ಅತ್ಯಂತತೃಪ್ತರಾಗಿ ಸುಖವಾಗಿ ಯಮನ ಲೋಕಕ್ಕೆ ಹೋಗುತ್ತಾರೆ. ಯಾರು ಎಳ್ಳನ್ನಾಗಲೀ, ಎಳ್ಳಿನಿಂದ ಮಾಡಿದ ಹಸುವನ್ನಾಗಲೀ ತುಪ್ಪದಿಂದ ಮಾಡಿದ ಗೋವನ್ನಾಗಲೀ ಸೌಮ್ಯಭಾವದಿಂದ ಕೂಡಿ

ಶ್ರೋತ್ರಿಯರಿಗೆ ದಾನಮಾಡುವರೋ-ಅವರು ಸೂರ್ಯಮಂಡಲಸದೃಶವಾದ ನಿರ್ಮಲವಾದ ವಿಮಾನದಲ್ಲಿ ಕುಳಿತು ಗಂಧರ್ವರ ಸುಶ್ರಾವ್ಯವಾದ ಗಾನವನ್ನು ಕೇಳುತ್ತಾ ವೈವಸ್ವತನ ಪಟ್ಟಣಕ್ಕೆ ಹೋಗುತ್ತಾರೆ. ಯಾರು ಈ ಲೋಕದಲ್ಲಿ ವಾಪೀ-ಕೂಪಗಳನ್ನೂ, ಕೆರೆ-ಕೊಳಗಳನ್ನೂ, ಕಾಲುವೆಗಳನ್ನೂ, ಸರೋವರಗಳನ್ನೂ, ನೀರಿನಿಂದ ತುಂಬಿರುವ ಜಲಾಶಯಗಳನ್ನೂ ಕಟ್ಟಿಸುವರೋ ಅಂತಹ ಮಹಾಪ್ರಭೆಯುಳ್ಳ ನಿತ್ಯತೃಪ್ತರಾದ ಮಹಾತ್ಮರು ಚಂದ್ರ ಸದೃಶವಾದ, ದಿವ್ಯವಾದ ಘಂಟೆಗಳ ನಿನಾದದಿಂದ ಕೂಡಿದ ವಿಮಾನಗಳಲ್ಲಿ ಕುಳಿತು ಯಮಲೋಕಕ್ಕೆ ಪ್ರಯಾಣಮಾಡುತ್ತಾರೆ. ಪ್ರಯಾಣಸಮಯದಲ್ಲಿ ದೇವದೂತರು ಅವರಿಗೆ ಚಾಮರಗಳಿಂದಲೂ ಬೀಸಣಿಗೆಗಳಿಂದಲೂ ಗಾಳಿ ಬೀಸುತ್ತಿರುತ್ತಾರೆ. ಯಾರು ನಿರ್ಮಿಸಿರುವ ದೇವಮಂದಿರಗಳೂ, ಮನೆಗಳೂ ಚಿತ್ರ-ವಿಚಿತ್ರವಾಗಿಯೂ ವಿಶಾಲವಾಗಿಯೂ ಮನೋಹರವಾಗಿಯೂ ನೋಡಲು ಯೋಗ್ಯವಾಗಿಯೂ ಮತ್ತು ಕಾಂತಿಯಿಂದ ಕೂಡಿಯೂ ಇರುವುವೋ-ಅಂತಹವರು ಕೂಡ ಅವಸಾನಾನಂತರದಲ್ಲಿ ಬಿಳಿಯಮೋಡದಂತೆ ಶುಭ್ರವಾದ ಕಾಂತಿಯಿದ ಕೂಡಿರುವ, ವಾಯುವೇಗವುಳ್ಳ ವಿಮಾನಗಳಲ್ಲಿ ಕುಳಿತು ನಾನಾದೇಶಗಳ ಜನರಿಂದ ಸಮಾಕುಲವಾದ ಪ್ರೇತನಾಥನ ಆ ಪಟ್ಟಣಕ್ಕೆ ಹೋಗುತ್ತಾರೆ. ಅಂತಹ ಪುಣ್ಯಪುರುಷರು ಯಮಲೋಕಕ್ಕೆ ಹೋಗಿ ಅಲ್ಲಿ ಪ್ರಸನ್ನಚಿತ್ತನಾದ ಮತ್ತು ಸುಖಾಸನದಲ್ಲಿ ಕುಳಿತಿರುವ ಯಮರಾಜನನ್ನು ಸಂದರ್ಶಿಸುತ್ತಾರೆ. ಬಳಿಕ ಯಮನಿಂದಲೂ ಪೂಜಿಸಲ್ಪಟ್ಟವರಾಗಿ ದೇವತೆಗಳಿಗೆ ಸಮಾನರಾಗಿ ಯಮಲೋಕದಲ್ಲಿ ವಾಸಮಾಡುತ್ತಿರುತ್ತಾರೆ. ಮರದಿಂದ ಮಾಡಿದ ಪಾದುಕೆಗಳನ್ನು ದಾನವಾಗಿ ಕೊಟ್ಟವರು ಶ್ರೇಷ್ಠವಾದ ರಥದಲ್ಲಿ ಕುಳಿತು ಸುವರ್ಣಮಣಿಪೀಠದಲ್ಲಿ ಕಾಲುಗಳನ್ನಿಟ್ಟುಕೊಂಡು ಯಮಲೋಕಮಾರ್ಗದಲ್ಲಿ ಸುಖವಾಗಿ ಪ್ರಯಾಣಮಾಡುತ್ತಾರೆ. ತೋಟಗಳನ್ನೂ ವೃಕ್ಷಗಳ ಸಮೂಹಗಳನ್ನೂ (ತೋಪುಗಳನ್ನೂ) ಯಾರು ಬೆಳೆಸುವರೋ ಮತ್ತು ಅವುಗಳಿಗೆ ಕಾಲ-ಕಾಲಕ್ಕೆ ನೀರು- ಗೊಬ್ಬರಗಳನ್ನು ಹಾಕುತ್ತಾ ಅವುಗಳನ್ನು ಚೆನ್ನಾಗಿ ಬೆಳೆಸಿ ಫಲ-ಪುಷ್ಪಗಳಿಂದ ಶೋಭಾಯಮಾನವಾಗಿ ಕಾಣುವಂತೆ ಮಾಡುವರೋ-ಅಂತಹವರು ಆಭೂಷಣಗಳಿಂದ ಸಮಲಂಕೃತರಾಗಿ ದಿವ್ಯವಾದ ವಾಹನಗಳಲ್ಲಿ ಕುಳಿತು ದಿವ್ಯಪುರುಷರಿಂದ ಬಾರಿ-ಬಾರಿಗೂ ಪೂಜಿಸಲ್ಪಡುತ್ತಾ ರಮ್ಯವಾದ ಮತ್ತು ಶೀತಲವಾದ ವೃಕ್ಷಗಳ ನೆರಳಿನಲ್ಲಿ

ಯಮಲೋಕಕ್ಕೆ ಪ್ರಯಾಣಮಾಡುತ್ತಾರೆಯೋ ಯಾರು ಬ್ರಾಹ್ಮಣರಿಗೆ ಕುದುರೆ, ಹಸು, ಆನೆ- ಇವೇ ಮುಂತಾದ ಪ್ರಯಾಣಯೋಗ್ಯವಾದ ವಾಹನಗಳನ್ನು ದಾನವಾಗಿ ಕೊಡುವರೋ-ಅಂತಹವರು ಸುವರ್ಣಸದೃಶವಾದ ವಿಮಾನಗಳಲ್ಲಿ ಕುಳಿತು ಯಮನ ಲೋಕಕ್ಕೆ ಹೋಗುತ್ತಾರೆ. ಭೂದಾನಮಾಡಿದವರು ಸಕಲವಿಧವಾದ ಕಾಮನೆಗಳನ್ನೂ ಪಡೆದು ತೃಪ್ತಿಯನ್ನು ಹೊಂದಿ ಬಾಲಸೂರ್ಯಸದೃಶವಾದ ಎತ್ತುಗಳಿಂದ ಕೂಡಿದ ವಿಮಾನಗಳಲ್ಲಿ ಕುಳಿತು ಯಮಲೋಕಕ್ಕೆ ಹೋಗುತ್ತಾರೆ. ಯಾರು ಶ್ರೇಷ್ಠರಾದ ಬ್ರಾಹ್ಮಣರಿಗೆ ಸುಗಂಧಯುಕ್ತವಾದ ಪದಾರ್ಥಗಳನ್ನೂ ಘಮ-ಘಮಿಸುವ ಪುಷ್ಪಗಳನ್ನೂ ದಾನವಾಗಿ ಕೊಡುವರೋ-ಅಂತಹವರು ಸುಗಂಧಯುಕ್ತರಾಗಿ ಸುಂದರವಾಗಿ ವಿಭೂಷಿತರಾಗಿ ವಿಚಿತ್ರವಾದ ಯಾನಗಳಲ್ಲಿ ಕುಳಿತು ಯಮಧರ್ಮನ ಪಟ್ಟಣಕ್ಕೆ ಹೋಗುತ್ತಾರೆ. ದೀಪದಾನಮಾಡಿದ ಮನುಷ್ಯರು ಸೂರ್ಯನ ತೇಜಸ್ಸಿನಿಂದ ಕೂಡಿದ ವಿಮಾನಗಳಲ್ಲಿ ಕುಳಿತು ಪ್ರಜ್ವಲಿಸುವ ತ್ರೇತಾಗ್ನಿಗಳಂತೆ ತಮ್ಮ ದಿವ್ಯತೇಜಸ್ಸಿನಿಂದ ಹತ್ತು ದಿಕ್ಕುಗಳನ್ನೂ ಬೆಳಗುತ್ತಾ ಯಮಪುರಿಗೆ ಪ್ರಯಾಣಮಾಡುತ್ತಾರೆ. ಮನೆಗಳನ್ನೂ ಮತ್ತು ಆಶ್ರಮಗಳನ್ನೂ ದಾನವಾಗಿ ಕೊಡುವವರು ಸುವರ್ಣಮಯವಾದ ವೇದಿಕೆಗಳಿಂದ ಕೂಡಿದ ಬಾಲಸೂರ್ಯಸದೃಶವಾದ ಮನೆಗಳಲ್ಲಿ (ವಿಮಾನಗಳಲ್ಲಿ) ಕುಳಿತು ಯಮಪುರಿಗೆ ಹೋಗುತ್ತಾರೆ. ಯಾರು ಬ್ರಾಹ್ಮಣರಿಗೆ ಕಾಲು ಮತ್ತು ತಲೆಗೆ ಹಚ್ಚಲು ತೈಲವನ್ನೂ, ಕಾಲುತೊಳೆಯಲು ನೀರನ್ನೂ, ಕುಡಿಯಲು ರುಚಿಯಾದ ಪಾನೀಯವನ್ನೂ ಕೊಡುವರೋ-ಅಂತಹವರು ಕುದುರೆಗಳ ಮೇಲೆ ಕುಳಿತು ಯಮಪುರಿಗೆ ಹೋಗುತ್ತಾರೆ. ದಾರಿನಡೆದು ಆಯಾಸ ಗೊಂಡಿರುವ ಬ್ರಾಹ್ಮಣರನ್ನು ಯಾರು ಮನೆಗೆ ಕರೆತಂದು ಅವರನ್ನು ಯಥೋಚಿತವಾಗಿ ಉಪಚರಿಸಿ ವಿಶ್ರಾಂತಿಪಡೆಯುವಂತೆ ಮಾಡುವರೋ-ಅಂತಹವರು ಚಕ್ರವಾಕಪಕ್ಷಿಗಳಿಂದ ಯುಕ್ತವಾದ ವಿಮಾನದಲ್ಲಿ ಕುಳಿತು ಯಮನ ಲೋಕಕ್ಕೆ ಹೋಗುತ್ತಾರೆ. ಯಾವನು ಬ್ರಾಹ್ಮಣರನ್ನು ಮನೆಗೆ ಸ್ವಾಗತಿಸಿ ಅರ್ಘ್ಯ-ಪಾದ್ಯಾಸನಾದಿಗಳನ್ನಿತ್ತು ಸತ್ಕರಿಸುವನೋ-ಅಂತಹವನು ಪರಮಾನಂದದಿಂದ ಯಮಲೋಕದ ಮಾರ್ಗದಲ್ಲಿ ಪ್ರಯಾಣಮಾಡುತ್ತಾನೆ. ಯಾವನು ಪ್ರತಿನಿತ್ಯವೂ 'ನಮಃ ಸರ್ವಸಹಾಭ್ಯಃ' 'ಎಲ್ಲವನ್ನೂ ಸಹಿಸಿಕೊಳ್ಳುವ (ಕ್ಷಮಾವಂತರಾದ) ನಿಮಗೆ ನಮಸ್ಕಾರವು'–ಎಂದು

ಹೇಳಿಕೊಂಡು ಗೋವುಗಳಿಗೆ ನಮಸ್ಕರಿಸುವನೋ-ಅವನು ಯಮಲೋಕಕ್ಕೆ ಹೋಗುವ ಆ ಮಾರ್ಗದಲ್ಲಿ ಸುಖವಾಗಿ ಪ್ರಯಾಣಮಾಡುತ್ತಾನೆ. ಯಾವನು ಪ್ರತಿನಿತ್ಯವೂ ಪ್ರಾತಃಕಾಲದಲ್ಲಿ ಹಾಸಿಗೆಯಿಂದ ಎದ್ದೊಡನೆಯೇ-'**ನಮೋಽಸ್ತು ವಿಪ್ರದತ್ತಾಯೈ**'-ಎಂದು ಹೇಳಿಕೊಂಡು ನೆಲದ ಮೇಲೆ ಹೆಜ್ಜೆಗಳನ್ನಿಡುವನೋ ಅಂತಹವನು ಇಹದಲ್ಲಿ ಸರ್ವಕಾಮನೆಗಳನ್ನೂ ಪಡೆದು ತೃಪ್ತಾತ್ಮನಾಗಿ, ಅವಸಾನಾನಂತರದಲ್ಲಿ ಸರ್ವಾಭರಣಭೂಷಿತನಾಗಿ ದಿವ್ಯವಾದ ವಿಮಾನದಲ್ಲಿ ಕುಳಿತು ವೈವಸ್ವತನ ಪಟ್ಟಣಕ್ಕೆ ಸುಖವಾಗಿ ಪ್ರಯಾಣಮಾಡುತ್ತಾನೆ. ಯಾರು ಮಧ್ಯಾಹ್ನ ಮತ್ತು ರಾತ್ರಿಗಳಲ್ಲಿ ಊಟ ಮಾಡುತ್ತಾ ಮಧ್ಯದಲ್ಲಿ ಯಾವುದನ್ನೂ ತಿನ್ನುವುದಿಲ್ಲವೋ, ದಂಭವನ್ನೂ ಸುಳ್ಳನ್ನೂ ವರ್ಜಿಸಿರುವರೋ-ಅಂತಹವರು ಕೂಡ ಸಾರಸಪಕ್ಷಿಗಳಿಂದ ಯುಕ್ತವಾದ ವಿಮಾನದಲ್ಲಿ ಕುಳಿತು ಸುಖವಾಗಿ ಯಮಲೋಕಕ್ಕೆ ಹೋಗುತ್ತಾರೆ. ಯಾರು ಪ್ರತಿನಿತ್ಯವೂ ಒಂದೇ ಬಾರಿ ಊಟಮಾಡುವರೋ, ದಂಭ-ಅಸತ್ಯಗಳನ್ನು ವರ್ಜಿಸಿರುವರೋ-ಅಂತಹವರು ಹಂಸಗಳಿಂದ ಯುಕ್ತವಾದ ವಿಮಾನಗಳಲ್ಲಿ ಕುಳಿತು ಯಮಾಲಯಕ್ಕೆ ಸುಖವಾಗಿ ಪ್ರಯಾಣ ಮಾಡುತ್ತಾರೆ.

ಯಾರು ನಾಲ್ಕನೆಯ ಹೊತ್ತಿನಲ್ಲಿ ಊಟಮಾಡಿಕೊಂಡು (ರಾತ್ರಿಯಲ್ಲಿ ಮಾತ್ರ ಊಟಮಾಡುತ್ತಾ ಅಥವಾ ಒಮ್ಮೆ ಊಟಮಾಡಿ ಮೂರು ಕಾಲಗಳನ್ನು ಬಿಟ್ಟು ನಾಲ್ಕನೆಯ ಕಾಲದಲ್ಲಿ ಊಟಮಾಡುತ್ತಾ) ಜಿತೇಂದ್ರಿಯರಾಗಿರುವರೋ, ಅವರು ನವಿಲುಗಳಿಂದ ಯುಕ್ತವಾದ ವಿಮಾನಗಳಲ್ಲಿ ಕುಳಿತು ಯಮಧರ್ಮನ ಪಟ್ಟಣಕ್ಕೆ ಹೋಗುತ್ತಾರೆ. ಯಾರು ಮೂರು ದಿನಕ್ಕೊಮ್ಮೆ ಊಟಮಾಡುತ್ತಾ ಜಿತೇಂದ್ರಿಯರಾಗಿರುವರೋ-ಅವರು ಸುವರ್ಣದಂತೆ ಉಜ್ಜ್ವಲವಾಗಿ ಪ್ರಕಾಶಿಸುವ, ಆನೆಗಳಿಂದ ಯುಕ್ತವಾದ ರಥಗಳಲ್ಲಿ ಕುಳಿತು ಯಮನ ಪಟ್ಟಣಕ್ಕೆ ಹೋಗುತ್ತಾರೆ. ಯಾವನು ಒಂದು ವರ್ಷದವರೆಗೆ ಆರುದಿನಗಳಿಗೊಮ್ಮೆ ಊಟಮಾಡಿಕೊಂಡಿರುವನೋ-ಅಂತಹ ಜಿತೇಂದ್ರಿಯನಾದ, ಕಾಮಕ್ರೋಧಗಳಿಂದ ರಹಿತನಾದ, ಶುಚಿಯಾದ ಮನುಷ್ಯನು ಆನೆಗಳಿಂದ ಯುಕ್ತವಾದ ರಥದಲ್ಲಿ ಕುಳಿತು ಯಮಲೋಕಕ್ಕೆ ಪ್ರಯಾಣಮಾಡುತ್ತಾನೆ. ಹಾದಿಯಲ್ಲಿ ಅವನಿಗೆ ದೇವದೂತರು ಜಯಕಾರಮಾಡುತ್ತಿರುತ್ತಾರೆ. ಒಂದು ವರ್ಷದವರೆಗೆ

ಹದಿನೈದು ದಿವಸಗಳಿಗೊಮ್ಮೆ ಊಟಮಾಡುವವನು ಸಿಂಹಗಳಿಂದ ಯುಕ್ತವಾದ ವಿಮಾನಗಳಲ್ಲಿ ಕುಳಿತು ದಿವ್ಯಸ್ತ್ರೀಯರ ಸಮೂಹಗಳಿಂದ ಸೇವಿಸಲ್ಪಡುತ್ತಿರುವ ರಮ್ಯವಾದ ಧರ್ಮರಾಜನ ಪಟ್ಟಣಕ್ಕೆ ಹೋಗುತ್ತಾನೆ. ಯಾರು ಒಂದು ವರ್ಷದವರೆಗೆ ಮಾಸಕ್ಕೊಮ್ಮೆ ಊಟಮಾಡಿಕೊಂಡಿರುವರೋ-ಅಂತಹ ಜಿತೇಂದ್ರಿಯರು ಕೂಡ ಸೂರ್ಯೋದಯದಂತೆ ಪ್ರಕಾಶಮಾನವಾದ ವಿಮಾನಗಳಲ್ಲಿ ಕುಳಿತು ಯಮಲೋಕಕ್ಕೆ ಹೋಗುತ್ತಾರೆ. ಯಾರು ಗೋವಿನ ಸಲುವಾಗಿ, ಸ್ತ್ರೀಯರ ಸಲುವಾಗಿ ಮತ್ತು ಬ್ರಾಹ್ಮಣರ ಸಲುವಾಗಿ ಪ್ರಾಣಗಳನ್ನು ತೊರೆಯುವರೋ-ಅಂತಹವರು ಸೂರ್ಯನ ಪ್ರಭೆಯಂತೆ ಪ್ರಭೆಯುಳ್ಳವರಾಗಿ ದೇವಕನ್ಯೆಯರಿಂದ ಸೇವಿಸಲ್ಪಡುತ್ತಾ ಯಮನ ಲೋಕಕ್ಕೆ ಹೋಗುತ್ತಾರೆ. ಯಾವ ದ್ವಿಜಶ್ರೇಷ್ಠರು ಬಹುದಕ್ಷಿಣೆಗಳಿಂದ ಕೂಡಿದ ಯಜ್ಞಗಳನ್ನು ಮಾಡುವರೋ-ಅಂತಹವರು ಕೂಡ ಹಂಸ-ಸಾರಸಪಕ್ಷಿಗಳಿಂದ ಯುಕ್ತವಾದ ವಿಮಾನಗಳಲ್ಲಿ ಕುಳಿತು ಯಮನ ಲೋಕಕ್ಕೆ ಹೋಗುತ್ತಾರೆ. ಪರಪೀಡೆಯನ್ನು ಮಾಡದೇ ತಮ್ಮ ಕುಟುಂಬವನ್ನು ಪಾಲನೆಮಾಡುವವರು ಸುವರ್ಣಮಯವಾದ ವಿಮಾನಗಳಲ್ಲಿ ಕುಳಿತು ಸುಖವಾಗಿ ಯಮನ ಮಾರ್ಗದಲ್ಲಿ ಪ್ರಯಾಣಮಾಡುತ್ತಾರೆ.”

ವೈಷ್ಣವಧರ್ಮ-೬

ಜಲದಾನ, ಅನ್ನದಾನ ಮತ್ತು ಅತಿಥಿಸತ್ಕಾರಗಳ ಮಹಿಮೆ

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಯುಧಿಷ್ಠಿರನು ಶ್ರೀಕೃಷ್ಣನ ಮುಖಾರವಿಂದದಿಂದ ಯಮನ ಪಟ್ಟಣಕ್ಕೆ ಹೋಗುವ ಹಾದಿಯ ವಿಷಯವನ್ನೂ, ವಿಧ-ವಿಧ ಜೀವಿಗಳು ಆ ಮಾರ್ಗದ ಮೂಲಕ ಸುಖವಾಗಿ ಹೋಗುವ ಉಪಾಯಗಳನ್ನೂ ಕೇಳಿ ಸಂತುಷ್ಟನಾಗಿ ಪುನಃ ಪ್ರಶ್ನಿಸಿದನು:

“ದೇವದೇವೇಶನೇ! ದೈತ್ಯಹಂತಕನೇ! ಋಷಿಗಳ ಸಮೂಹದಿಂದ ಸ್ತುತಿಸಲ್ಪಡುವವನೇ! ಪೂಜ್ಯನೇ! ಭವಭಯವನ್ನು ಹೋಗಲಾಡಿಸುವವನೇ! ಸಹಸ್ರಸೂರ್ಯಪ್ರಕಾಶನೇ! ಎಲ್ಲರ ಉತ್ಪತ್ತಿಗೂ ಕಾರಣ

ವನೇ! ಧರ್ಮಜ್ಞನೇ! ಸರ್ವಧರ್ಮಪ್ರವರ್ತಕನೇ! ಸೌಮ್ಯನೇ! ಅಚ್ಯುತನೇ! ಎಲ್ಲ ದಾನಗಳ ಫಲಗಳನ್ನೂ ಹೇಳು."

ಜನಮೇಜಯ! ಹೀಗೆ ಕೇಳಿದ ಧೀಮಂತನಾದ ಧರ್ಮಪುತ್ರನಿಗೆ ಹೃಷೀಕೇಶನು ಮಹೋನ್ನತಿಯನ್ನು ಹೊಂದಿಸುವ ಪುಣ್ಯಮಯವಾದ ಧರ್ಮಗಳನ್ನು ಹೇಳತೊಡಗಿದನು.

"ಯುಧಿಷ್ಠಿರ! ಲೋಕದಲ್ಲಿ ನೀರನ್ನು ಪ್ರಾಣಿಗಳ ಜೀವನಕ್ಕೆ ಆಧಾರ ಭೂತವಾದುದೆಂದೂ ಶ್ರೇಷ್ಠವಾದುದೆಂದೂ ಹೇಳುತ್ತಾರೆ. ಬಾಯಾರಿ ಬಂದವನಿಗೆ ಪಾನೀಯವನ್ನು ಕೊಡುವುದರಿಂದ ಜೀವನಿಗೆ ತೃಪ್ತಿ ಯುಂಟಾಗುತ್ತದೆ. ಪಾನೀಯವು ದಿವ್ಯವಾದ ಗುಣಗಳಿಂದ ಯುಕ್ತವಾಗಿದೆ. ಪರಲೋಕದಲ್ಲಿಯೂ ಕೂಡ ಪಾನೀಯವು (ಪಾನೀಯದಾನವು) ಮನುಷ್ಯ ನಿಗೆ ಒಳ್ಳೆಯದನ್ನು ಉಂಟುಮಾಡುತ್ತದೆ. ಯಮನ ಪಟ್ಟಣದಲ್ಲಿ ಪುಷ್ಪೋದಕೀ ಎಂಬ ಹೆಸರಿನ ಪರಮಪಾವನವಾದ ನದಿಯಿದೆ. ಈ ಲೋಕದಲ್ಲಿ ಪಾನೀಯವನ್ನು ದಾನಮಾಡಿದವರಿಗೆ ಯಮಲೋಕದಲ್ಲಿರುವ ಆ ನದಿಯು ಸಕಲಕಾಮನೆಗಳನ್ನೂ ಕೊಡುತ್ತದೆ. ಆ ನದಿಯ ನೀರು ಶೀತಲವಾಗಿಯೂ, ಅಕ್ಷಯವಾಗಿಯೂ, ಅಮೃತಕ್ಕೆ ಸಮಾನವಾಗಿಯೂ ಇದೆ. ಈ ಲೋಕದಲ್ಲಿ ಶೀತಲವಾದ ಪಾನೀಯವನ್ನು ದಾನಮಾಡಿದವರಿಗೆ ಆ ನದಿಯು ನಿತ್ಯವೂ ಪರಮಸುಖವನ್ನು ಉಂಟುಮಾಡುತ್ತದೆ. ನೀರನ್ನು ಕುಡಿಯುವುದರಿಂದ ಹಸಿವೂ ಕಡಿಮೆಯಾಗುತ್ತದೆ. ಆದರೆ ಬಾಯಾರಿ ದವನಿಗೆ ಅನ್ನದಿಂದ ಬಾಯಾರಿಕೆಯು ನೀಗುವುದಿಲ್ಲ. ಆದುದರಿಂದ ವಿದ್ವಾಂಸನು ಬಾಯಾರಿಕೆಯಿಂದ ಬಳಲುತ್ತಿರುವವನಿಗೆ ಯಾವಾಗಲೂ ಕುಡಿಯಲು ನೀರನ್ನೇ ಕೊಡಬೇಕು. ನೀರು ಅಗ್ನಿಯ ಮೂರ್ತಿಯಾಗಿದೆ. (ಅಗ್ನಿಯಿಂದ ಹುಟ್ಟಿದೆ. ಅಗ್ನೇರಾಪಃ). ಭೂಮಿಗೆ ಕಾರಣಭೂತವಾಗಿದೆ. (ಅದ್ಭ್ಯಃ ಪೃಥಿವೀ). ಅಮೃತಕ್ಕೂ ಉತ್ಪತ್ತಿಸ್ಥಾನವಾಗಿದೆ. ಆದುದರಿಂದ ಜಲವು ಎಲ್ಲ ಪ್ರಾಣಿಗಳಿಗೂ ಮೂಲಭೂತವಾದುದೆಂದು ವಿದ್ವಾಂಸರು ಹೇಳುತ್ತಾರೆ. ನೀರಿನ ಆಸರೆಯಿಂದಲೇ ಎಲ್ಲ ಪ್ರಾಣಿಗಳೂ ಹುಟ್ಟುತ್ತವೆ ಮತ್ತು ಜೀವವನ್ನು ಧರಿಸುತ್ತವೆ. ಆದುದರಿಂದ ಎಲ್ಲ ದಾನಗಳಿಗಿಂತಲೂ ಜಲದಾನವು ವಿಶಿಷ್ಟವಾದುದು.

ಯಾರು ಬ್ರಾಹ್ಮಣರಿಗೆ ಸುಸಂಸ್ಕೃತವಾದ ಅನ್ನವನ್ನು ದಾನಮಾಡುವರೋ ಅವರು ಅನ್ನಗತಪ್ರಾಣರಾಗಿರುವುದರಿಂದ-ಪ್ರಾಣಗಳನ್ನೇ ದಾನ ಮಾಡಿದಂತಾಗುತ್ತದೆ. ಅನ್ನದಿಂದಲೇ ರಕ್ತ ಮತ್ತು ವೀರ್ಯಗಳು ಉತ್ಪನ್ನವಾಗುತ್ತವೆ. ಅನ್ನದಲ್ಲಿಯೇ ಪ್ರಾಣಿಗಳ ಜೀವವು ಸುಪ್ರತಿಷ್ಠಿತವಾಗಿರುತ್ತದೆ. ಇಂದ್ರಿಯಗಳು ಮತ್ತು ಬುದ್ಧಿಯು ಅನ್ನದಿಂದಲೇ ಪುಷ್ಟವಾಗುತ್ತವೆ. ಅನ್ನವಿಲ್ಲದಿದ್ದರೆ ಸಮಸ್ತಪ್ರಾಣಿಗಳೂ ವಿನಾಶಹೊಂದುತ್ತವೆ. ತೇಜಸ್ಸು, ಬಲ, ರೂಪ, ಸತ್ತ್ವ, ವೀರ್ಯ, ಧೈರ್ಯ, ಕಾಂತಿ, ಜ್ಞಾನ, ಮೇಧೆ ಮತ್ತು ಆಯುಸ್ಸು-ಇವೆಲ್ಲಕ್ಕೂ ಅನ್ನವೇ ಆಧಾರಭೂತವಾಗಿದೆ. ಸಮಸ್ತಲೋಕದಲ್ಲಿಯೂ ಸಮಸ್ತಕಾಲಗಳಲ್ಲಿಯೂ ಇರುವ ದೇವತೆಗಳು, ಮನುಷ್ಯರು ಮತ್ತು ತಿರ್ಯಗ್ಯೋನಿಗಳಲ್ಲಿ ಹುಟ್ಟಿದ ಪ್ರಾಣಿಗಳು-ಇವರೆಲ್ಲರ ಪ್ರಾಣಗಳೂ ಅನ್ನದಲ್ಲಿಯೇ ಪ್ರತಿಷ್ಠಿತವಾಗಿವೆ. (ಅನ್ನದಿಂದಲೇ ಇವರೆಲ್ಲರ ಪ್ರಾಣಗಳೂ ಉಳಿದುಕೊಂಡಿವೆ.) ಅನ್ನವು ಪ್ರಜಾಪತಿಬ್ರಹ್ಮನ ರೂಪವಾಗಿದೆ. ಅನ್ನವೇ ಪ್ರಾಣಿಗಳ ಉತ್ಪತ್ತಿಗೂ ಕಾರಣವಾಗಿದೆ. ಆದುದರಿಂದ ಅನ್ನವು ಸರ್ವಭೂತಮಯವಾಗಿದೆ. ಸಮಸ್ತಜೀವಗಳೂ ಅನ್ನಮಯವೆಂದೇ ಹೇಳುತ್ತಾರೆ. ಪ್ರಾಣ-ಅಪಾನ-ವ್ಯಾನ-ಉದಾನ-ಸಮಾನಗಳೆಂಬ ಐದು ವಾಯುಗಳು ಅನ್ನವನ್ನೇ ಆಧಾರವನ್ನಾಗಿ ಹೊಂದಿ ಪ್ರಾಣಿಗಳನ್ನು ಧರಿಸಿರುತ್ತವೆ. ಎಲ್ಲ ಪ್ರಾಣಿಗಳ ಮಲಗುವಿಕೆ, ಬಾಳುವಿಕೆ, ಗಮನ, ಆಗಮನ, ಗ್ರಹಣ, ಆಕರ್ಷಣ-ಇವೇ ಮೊದಲಾದ ಸಕಲಕರ್ಮಗಳೂ ಮನುಷ್ಯನು ಭಕ್ಷಿಸುವ ಅನ್ನದಿಂದಲೇ ನಡೆಯಲ್ಪಡುತ್ತವೆ. ನಾಲ್ಕು ವಿಧವಾದ ಚರಾಚರಪ್ರಾಣಿಗಳೂ ಅನ್ನದಿಂದಲೇ ಹುಟ್ಟಿವೆ. ಇದು ಪ್ರಜಾಪತಿಯ ಸೃಷ್ಟಿಯಾಗಿದೆ. ಸಮಸ್ತವಿದ್ಯಾಸ್ಥಾನಗಳೂ, ಪಾವನಗೊಳಿಸುವ ಯಜ್ಞಗಳೂ ಅನ್ನದಿಂದಲೇ ನಡೆಸಲ್ಪಡುವುದರಿಂದ ಅನ್ನವೇ ಎಲ್ಲಕ್ಕೂ ಶ್ರೇಷ್ಠವೆಂದು ಹೇಳುತ್ತಾರೆ. ರುದ್ರಾದಿ ಸರ್ವದೇವತೆಗಳೂ, ಪಿತೃಗಳೂ ಮತ್ತು ಅಗ್ನಿಗಳೂ, ಅನ್ನದಿಂದಲೇ ಸಂತುಷ್ಟರಾಗುವುದರಿಂದ ಅನ್ನವೇ ಎಲ್ಲಕ್ಕೂ ವಿಶಿಷ್ಟವಾದುದು. ಪ್ರಭುವಾದ ಪ್ರಜಾಪತಿಯು ಕಲ್ಪ-ಕಲ್ಪಗಳಲ್ಲಿಯೂ ಅನ್ನದಿಂದಲೇ

ಪ್ರಜೆಗಳನ್ನು ಸೃಷ್ಟಿಸಿದನು. ಈ ಕಾರಣದಿಂದ ಅನ್ನದಾನಕ್ಕಿಂತಲೂ ಶ್ರೇಷ್ಠವಾದ ದಾನವು ಹಿಂದೆಯೂ ಇರಲಿಲ್ಲ; ಮುಂದೆಯೂ ಇರುವುದಿಲ್ಲ. ಅನ್ನದಿಂದಲೇ ಧರ್ಮಾರ್ಥ-ಕಾಮಗಳ ನಿರ್ವಾಹವಾಗುವುದರಿಂದ ಈ ಲೋಕದಲ್ಲಾಗಲೀ ಪರಲೋಕದಲ್ಲಾಗಲೀ ಅನ್ನದಾನಕ್ಕಿಂತಲೂ ಅಧಿಕವಾದುದು ಬೇರೆ ಯಾವುದೂ ಇಲ್ಲ.

ಯಕ್ಷ-ರಾಕ್ಷಸರು, ಗ್ರಹಗಳು, ನಾಗಗಳು, ಭೂತಗಳು, ದಾನವರು-ಇವರೆಲ್ಲರೂ ಅನ್ನದಿಂದಲೇ ಸಂತುಷ್ಟರಾಗುತ್ತಾರೆ. ಆದುದರಿಂದ ಅನ್ನವು ಪರಮಶ್ರೇಷ್ಠವಾದುದು. ದರಿದ್ರನಾದ ಮತ್ತು ಶ್ರೋತ್ರಿಯನಾದ ಬ್ರಾಹ್ಮಣನಿಗೆ ಪಂಕ್ತಿಭೇದವನ್ನು ಮಾಡದೇ, ಭಕ್ತಿಭಾವದಿಂದ ದಂಭಾಸತ್ಯರಹಿತನಾಗಿ, ತಾನೇ ಧರ್ಮದಿಂದ ಸಂಪಾದಿಸಿದ ಅನ್ನವನ್ನು ಒಂದು ವರ್ಷಕಾಲ ನೀಡುವವನಿಗೆ ಲಭಿಸುವ ಫಲವೆಷ್ಟೆಂಬುದನ್ನು ಹೇಳುವೆನು; ಕೇಳು. ಒಂದು ಲಕ್ಷ ವರ್ಷಗಳ ಕಾಲ ಮನಬಂದಲ್ಲಿಗೆ ಹೋಗುವ, ಇಚ್ಛಿಸಿದ ರೂಪವನ್ನು ಪಡೆಯುವ ಸಾಮರ್ಥ್ಯವನ್ನು ಪಡೆದುಕೊಂಡು ದೇವಲೋಕದಲ್ಲಿ ಅಪ್ಸರೆಯರಿಂದ ಪೂಜಿಸಲ್ಪಡುತ್ತಾ ಆನಂದದಿಂದಿರುತ್ತಾನೆ. ಅನಂತರ ಪುಣ್ಯವನ್ನು ಕಳೆದುಕೊಂಡು ದೇವಲೋಕದಿಂದ ಜಾರಿದರೂ ಮನುಷ್ಯಲೋಕದಲ್ಲಿ ಬ್ರಾಹ್ಮಣನಾಗಿ ಹುಟ್ಟುತ್ತಾನೆ. ಯಾವನು ಆರು ತಿಂಗಳವರೆಗೆ ಪ್ರತಿನಿತ್ಯವೂ ದರಿದ್ರನಾದ ಬ್ರಾಹ್ಮಣನಿಗೆ ಮೊದಲು ಭಿಕ್ಷೆಯನ್ನು ನೀಡುವನೋ ವರ್ಷಪರ್ಯಂತವೂ ಶ್ರಾದ್ಧಮಾಡಿ ಬ್ರಾಹ್ಮಣನಿಗೆ ಭೋಜನ ಮಾಡಿಸುವನೋ-ಅಂತಹವನಿಗೆ ಲಭಿಸುವ ಪುಣ್ಯಫಲವೆಷ್ಟೆಂಬುದನ್ನು ಹೇಳುವೆನು; ಕೇಳು. ಸಾವಿರ ಗೋವುಗಳನ್ನು ದಾನಮಾಡುವುದರಿಂದ ಎಷ್ಟು ಪುಣ್ಯವು ಲಭಿಸುವುದೋ-ಅದೇ ಪುಣ್ಯವು ಬ್ರಾಹ್ಮಣನಿಗೆ ಆರು ತಿಂಗಳಕಾಲ ಅಗ್ರಭಿಕ್ಷೆಯನ್ನು ನೀಡುವುದರಿಂದ ಉಂಟಾಗುತ್ತದೆ. ಇದರಲ್ಲಿ ಸಂಶಯವೇ ಇಲ್ಲ. ದೇಶ-ಕಾಲಗಳನ್ನು ಅನುಸರಿಸಿ ಪ್ರಯಾಣಹೊರಟಿರುವ, ದಾರಿನಡೆದು ಆಯಾಸಗೊಂಡಿರುವ, ಹಸಿವಿನಿಂದ ಬಳಲಿರುವ, ಅನ್ನವನ್ನು ಅಪೇಕ್ಷಿಸುವ ಬ್ರಾಹ್ಮಣನಿಗೆ ಅನ್ನವನ್ನು ಅವಶ್ಯವಾಗಿ ದಾನಮಾಡಬೇಕು. ಬಹಳ ದೂರ ನಡೆದು ಶ್ರಮದಿಂದ ದುಃಖಿತನಾಗಿರುವ, ಹಸಿವು-ಬಾಯಾರಿಕೆಗಳ ಶ್ರಮದಿಂದ ಆಯಾಸಗೊಂಡಿರುವ, ಆರ್ತನಾದ, ಬಹಳ ಕಷ್ಟದಿಂದ ಹೆಜ್ಜೆ

ಗಳನ್ನಿಡುತ್ತಿರುವ. ಧೂಳಿನಿಂದ ಮುಚ್ಚಿಹೋದ ಪಾದಗಳುಳ್ಳ ಬ್ರಾಹ್ಮಣನು ಈ ಊರಿನಲ್ಲಿ ಅನ್ನದಾತನು ಯಾರೆಂದು ಕೇಳುತ್ತಾ ಅನ್ನದಾತೃವಿನ ಮನೆಗೆ ಬಂದು ಅನ್ನವನ್ನು ಯಾಚಿಸಬಹುದು. ಆ ಸಮಯದಲ್ಲಿ ಗೃಹಸ್ಥನು ಪ್ರಯತ್ನ ಪೂರ್ವಕವಾಗಿ ಅವನನ್ನು ಸತ್ಕರಿಸಬೇಕು. ಏಕೆಂದರೆ ಅವನೇ ಸ್ವರ್ಗಕ್ಕೆ ಸೋಪಾನರೂಪನಾದ ಅತಿಥಿಯು. ಅಂತಹ ಬಳಲಿದ ಅತಿಥಿಯು ತುಷ್ಟನಾದರೆ ಎಲ್ಲ ದೇವತೆಗಳೂ ತುಷ್ಟರಾಗುತ್ತಾರೆ.

ಅತಿಥಿಸತ್ಕಾರದಿಂದ ಅಗ್ನಿಗಳು ತೃಪ್ತಿಹೊಂದುವಂತೆ ಹವಿಸ್ಸಿನಿಂದಾ ಗಲೀ, ಹೋಮಗಳಿಂದಾಗಲೀ, ಪುಷ್ಪಗಳಿಂದಾಗಲೀ, ಚಂದನಾದಿ ಅನುಲೇಪನಗಳಿಂದಾಗಲೀ ತೃಪ್ತಿಹೊಂದುವುದಿಲ್ಲ. ದೇವತಾವಿಗ್ರಹಗಳ ಮೇಲಿರುವ ನಿರ್ಮಾಲ್ಯವನ್ನು ತೆಗೆದು ಶುದ್ಧಿಗೊಳಿಸುವುದು, ಬ್ರಾಹ್ಮಣರು ಊಟಮಾಡಿದನಂತರ ಅವರ ಎಲೆಗಳನ್ನು ತೆಗೆದು ಆ ಸ್ಥಳವನ್ನು ಗೋಮಯದಿಂದ ಶುದ್ಧಿಮಾಡುವುದು, ಹಾದಿನಡೆದು ಆಯಾಸಗೊಂಡಿರುವ ಬ್ರಾಹ್ಮಣನ ಕಾಲುಗಳನ್ನು ಒತ್ತುವುದು, ಕಾಲುಗಳನ್ನು ತೊಳೆದು ಅವನು ಉಳಿದುಕೊಳ್ಳಲು ಮನೆಯಲ್ಲಿ ಜಾಗಮಾಡಿಕೊಡುವುದು, ಮಲಗಲು ಹಾಸಿಗೆಯನ್ನೂ, ಕುಳಿತುಕೊಳ್ಳಲು ಆಸನವನ್ನೂ ಕೊಡುವುದು-ಇವುಗಳಲ್ಲಿ ಒಂದೊಂದು ಕಾರ್ಯವೂ ಗೋದಾನಮಾಡುವುದಕ್ಕಿಂತಲೂ ಹೆಚ್ಚಿನ ಫಲವನ್ನು ಕೊಡುತ್ತದೆ. ಕಾಲುತೊಳೆಯಲು ನೀರು, ಕಾಲಿಗೆ ತಿಕ್ಕಿಕೊಳ್ಳಲು ತುಪ್ಪ, ದೀಪ, ಅನ್ನ ಮತ್ತು ವಾಸಮಾಡಲು ಮನೆ-ಇವುಗಳನ್ನು ಬ್ರಾಹ್ಮಣರಿಗೆ ದಾನಮಾಡುವವನು ಯಮಲೋಕಕ್ಕೆ ಹೋಗುವುದಿಲ್ಲ. ಬ್ರಾಹ್ಮಣನ ಆತಿಥ್ಯ ಮತ್ತು ಭಕ್ತಿಪೂರ್ವಕವಾದ ಸೇವೆ-ಇವುಗಳನ್ನು ಮಾಡಿದರೆ ಮೂವತ್ತುಮೂರು ದೇವತೆಗಳೂ ಶುಶ್ರೂಷಿತರಾಗುತ್ತಾರೆ. ಬ್ರಾಹ್ಮಣರ ಸೇವೆಮಾಡಿದರೆ ದೇವತೆಗಳ ಸೇವೆಮಾಡಿದಂತೆಯೇ ಆಗುತ್ತದೆ.

ಅಭ್ಯಾಗತೋ ಜ್ಞಾತಪೂರ್ವೋ ಹ್ಯಜ್ಞಾತೋಽತಿಥಿರುಚ್ಯತೇ ।।

ಹಿಂದೆ ಪರಿಚಯವಿದ್ದ ಮನುಷ್ಯನು ಮನೆಗೆ ಬಂದರೆ ಅವನನ್ನು ಅಭ್ಯಾಗತನೆನ್ನುತ್ತಾರೆ. ಹಿಂದೆ ಪರಿಚಯವಿಲ್ಲದವನು ಮನೆಗೆ ಬಂದರೆ ಅವನನ್ನು ಅತಿಥಿಯೆನ್ನುತ್ತಾರೆ. ಬ್ರಾಹ್ಮಣನು ಆ ಇಬ್ಬರನ್ನೂ ಆದರಪೂರ್ವಕ ವಾಗಿ ಸತ್ಕರಿಸಬೇಕೆಂದು ಪುರಾಣವಾಕ್ಯವಿದೆ. ಯಾವ ಮನುಷ್ಯನು ಮನೆಗೆ ಬಂದ ಅತಿಥಿಗೆ ಕಾಲಿಗೆ ತಿಕ್ಕಿಕೊಳ್ಳಲು ಎಣ್ಣೆಯನ್ನು ಕೊಟ್ಟು ಅನ್ನ-ಪಾನಾ

ದಿಗಳಿಂದ ಸತ್ಕರಿಸುವನೋ-ಅವನು ನನ್ನನ್ನೇ ಪೂಜಿಸಿದಂತಾಗುತ್ತದೆ. ಅತಿಥಿಸತ್ಕಾರದಿಂದ ನಾನು ತೃಪ್ತನಾಗುತ್ತೇನೆ. ಇದರಲ್ಲಿ ಸಂಶಯವೇ ಇಲ್ಲ. ಅತಿಥಿಸತ್ಕಾರಮಾಡುವವನು ಬಹಳ ಶೀಘ್ರವಾಗಿ ಪಾಪದಿಂದ ಮುಕ್ತನಾಗಿ ನನ್ನ ಅನುಗ್ರಹದಿಂದ ಚಂದ್ರಸದೃಶವಾದ ವಿಮಾನದಲ್ಲಿ ಕುಳಿತು ನನ್ನ ಲೋಕಕ್ಕೆ (ಪರಮಧಾಮಕ್ಕೆ) ಹೋಗುತ್ತಾನೆ. ಬಳಲಿರುವ ಅಭ್ಯಾಗತನನ್ನು ಎಲ್ಲ ದೇವತೆಗಳೂ, ಪಿತೃಗಳೂ ಮತ್ತು ಅಗ್ನಿಗಳೂ ಅನುಸರಿಸಿಬರುತ್ತಾರೆ. ಅಭ್ಯಾಗತಬ್ರಾಹ್ಮಣನು ಸತ್ಕೃತನಾದರೆ ದೇವತೆಗಳೇ ಮೊದಲಾದವರೂ ಪೂಜಿತರಾಗುತ್ತಾರೆ. ಅಭ್ಯಾಗತನೇನಾದರೂ ಸತ್ಕೃತನಾಗದೇ ಹಿಂದಿರುಗಿದರೆ ಪಿತೃಗಳು ನಿರಾಶರಾಗಿಯೇ ಹಿಂದಿರುಗುತ್ತಾರೆ. ಅತಿಥಿಯು ನಿರಾಶನಾಗಿ ಯಾವ ಗೃಹಸ್ಥನ ಮನೆಯಿಂದ ಹಿಂದಿರುಗುವನೋ-ಆ ಗೃಹಸ್ಥನ ಪಿತೃಗಳು ಹದಿನೈದು ವರ್ಷಗಳವರೆಗೆ ಭೋಜನಮಾಡುವುದಿಲ್ಲ. ದೇಶ-ಕಾಲಗಳನ್ನನು ಸರಿಸಿ ಮನೆಗೆ ಆಗಮಿಸುವ ಅತಿಥಿರೂಪನಾದ ಬ್ರಾಹ್ಮಣನನ್ನು ಯಾವನು ಮನೆಯಿಂದ ಹೊರಗಟ್ಟುವನೋ-ಅಂತಹ ಗೃಹಸ್ಥನು ಕೂಡಲೇ ಪತಿತ ನಾಗುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ.

ಚಾಣ್ಡಾಲೋಽಪ್ಯತಿಥಿಃ ಪ್ರಾಪ್ತೋ ದೇಶಕಾಲೇಽನ್ನಕಾಂಕ್ಷಯಾ ।
ಅಭ್ಯುದ್ಗಮೋ ಗೃಹಸ್ಥೇನ ಪೂಜನೀಯಶ್ಚ ಸರ್ವದಾ ॥೪೨೮॥

ದೇಶ-ಕಾಲಗಳನ್ನನುಸರಿಸಿ ಅನ್ನವನ್ನು ಬಯಸಿ ಚಾಂಡಾಲನೇ ಅತಿಥಿ ಯಾಗಿ ಬಂದರೂ ಗೃಹಸ್ಥನು ಮುಂದೆಹೋಗಿ ಅವನನ್ನು ಸ್ವಾಗತಿಸಿ ಸತ್ಕರಿಸಬೇಕು. ಯಾವನು ಅತಿಥಿಯನ್ನು ಸತ್ಕರಿಸುವುದಿಲ್ಲವೋ-ಅವನು ಉಡುವ ಉಣ್ಣೆಯ ಬಟ್ಟೆ, ತಿನ್ನುವ ಅನ್ನ-ಎಲ್ಲವೂ ವ್ಯರ್ಥವೇ ಸರಿ. ಅನುದಿನವೂ ಸಾಂಗವಾಗಿ ಅಧ್ಯಯನಮಾಡಿದ ವೇದಾಧ್ಯಯನವೂ ವ್ಯರ್ಥವೇ ಆಗುತ್ತದೆ. ಯಾರು ಪಾಕಯಜ್ಞ, ಪಿಂಡಮಹಾಯಜ್ಞ ಮತ್ತು ಸೋಮಯಾಗ-ಮುಂತಾದುವುಗಳ ಮೂಲಕವಾಗಿ ದೇವತೆಗಳನ್ನು ಪೂಜಿಸುವರೋ, ಆದರೆ ಮನೆಗೆ ಆಗಮಿಸುವ ಅತಿಥಿಯನ್ನು ಸತ್ಕರಿಸುವುದಿಲ್ಲವೋ-ಅಂತಹವರು ಯಶಸ್ಸನ್ನು ಬಯಸಿಕೊಟ್ಟ ದಾನವೂ ಮಾಡಿದ ಯಜ್ಞವೂ ವ್ಯರ್ಥವಾಗುತ್ತದೆ. ಅತಿಥಿಗೆ ಉಂಟಾಗುವ ನಿರಾಶೆಯು ಮನುಷ್ಯನು ಮಾಡುವ ಸಮಸ್ತಶುಭಕರ್ಮಗಳನ್ನೂ ವಿನಾಶಗೊಳಿಸುತ್ತದೆ.

ಆದುದರಿಂದ ಗೃಹಸ್ಥನು ಶ್ರದ್ಧಾಳುವಾಗಿ ದೇಶ, ಕಾಲ, ಪಾತ್ರ ಮತ್ತು ತನ್ನ ಶಕ್ತಿ-ಈ ಎಲ್ಲವನ್ನೂ ವಿಚಾರಮಾಡಿ ಅಲ್ಪರೂಪದಲ್ಲಾಗಲಿ, ಸಾಧಾರಣ ವಾಗಿಯೇ ಆಗಲಿ, ಮಹತ್ತರವಾಗಿಯೇ ಆಗಲಿ ಅತಿಥಿಸತ್ಕಾರವನ್ನು ಮಾಡಬೇಕು. ಅತಿಥಿಯು ತನ್ನ ಮನೆಯ ಬಾಗಿಲಿಗೆ ಬಂದೊಡನೆಯೇ ಧೀಮಂತನಾದ ಗೃಹಸ್ಥನು ಸುಮುಖನಾಗಿ ಪ್ರಸನ್ನಚಿತ್ತನಾಗಿ ಸ್ವಾಗತ ದಿಂದಲೂ, ಆಸನಪ್ರದಾನದಿಂದಲೂ, ಅರ್ಘ್ಯ-ಪಾದ್ಯಾದಿಗಳ ಪ್ರದಾನ ದಿಂದಲೂ, ಅನ್ನ-ಪಾನಾದಿಗಳಿಂದಲೂ ಸತ್ಕರಿಸಬೇಕು.

ಹಿತಃ ಪ್ರಿಯೋ ವಾ ದ್ವೇಷ್ಯೋ ವಾ ಮೂರ್ಖಃ ಪಣ್ಡಿತ ಏವ ವಾ ।
ಪ್ರಾಪ್ತೋ ಯೋ ವೈಶ್ವದೇವಾನ್ತೇ ಸೋಽತಿಥಿಃ ಸ್ವರ್ಗಸಂಕ್ರಮಃ ॥

ವೈಶ್ವದೇವಬಲಿಯನ್ನು ಕೊಟ್ಟನಂತರ ಮನೆಗೆ ಆಗಮಿಸುವವನು ಪ್ರಿಯ ನಾಗಲೀ, ಹಿತನಾಗಲೀ, ದ್ವೇಷಿಯಾಗಲೀ, ಮೂರ್ಖನಾಗಲೀ, ಪಂಡಿತ ನಾಗಲೀ-ಅವನು ಸ್ವರ್ಗಕ್ಕೆ ಏರಲು ಸೋಪಾನದಂತಿರುವ ಅತಿಥಿಯು.

ಯಜ್ಞಮಾಡಿದ ಫಲವನ್ನು ಬಯಸುವವನು ದೇಶ-ಕಾಲಗಳನ್ನು ಅನುಸರಿಸಿ ಬರುವ, ಹಸಿವಿನಿಂದಲೂ ಬಾಯಾರಿಕೆಯಿಂದಲೂ ದಾರಿನಡೆದ ಶ್ರಮದಿಂದಲೂ ಪೀಡಿತನಾದ ಅತಿಥಿಯನ್ನು ಸತ್ಕರಿಸಿ ಭೋಜನ ಮಾಡಿಸಬೇಕು. ಹವ್ಯ-ಕವ್ಯಗಳಲ್ಲಿ (ದೇವ-ಪಿತೃಸಂಬಂಧವಾದ ಕಾರ್ಯ ಗಳಲ್ಲಿ) ತನಗಿಂತಲೂ ಶ್ರೇಷ್ಠರಾದವರನ್ನು ಆಮಂತ್ರಿಸಿ ವಿಧಿವತ್ತಾಗಿ ಅವರಿಗೆ ಭೋಜನಮಾಡಿಸಬೇಕು. ಮನುಷ್ಯರಿಗೆ ಅನ್ನವೇ ಪ್ರಾಣ. ಆದುದರಿಂದ ಅನ್ನದನು ಪ್ರಾಣದನೇ ಆಗುತ್ತಾನೆ. ಆದುದರಿಂದ ಕಲ್ಯಾಣವನ್ನು ಬಯಸು ವವನು ವಿಶೇಷವಾಗಿ ಅನ್ನದಾನಮಾಡಬೇಕು. ಅನ್ನದಾನಮಾಡಿದವನು ಈ ಲೋಕದಲ್ಲಿ ಸಕಲವಿಧವಾದ ಕಾಮನೆಗಳನ್ನೂ ಪಡೆದು ಸಂತೃಪ್ತನಾಗಿ, ಅವಸಾನಾನಂತರದಲ್ಲಿ ಚೆನ್ನಾಗಿ ಅಲಂಕರಿಸಿಕೊಂಡು ಪೂರ್ಣಚಂದ್ರಪ್ರಕಾಶ ವುಳ್ಳ ವಿಮಾನದಲ್ಲಿ ಕುಳಿತು ಶ್ರೇಷ್ಠರಾದ ಸ್ತ್ರೀಯರಿಂದ ಸೇವಿಸಲ್ಪಡುತ್ತಾ ದೇವಲೋಕಕ್ಕೆ ಹೋಗುತ್ತಾನೆ. ಅಲ್ಲಿ ದೇವತೆಗಳಂತೆಯೇ ಕೋಟಿವರ್ಷಗಳ

ವರೆಗೆ ವಿಹರಿಸುತ್ತಿದ್ದು, ಪುಣ್ಯವು ಕ್ಷೀಣಿಸಿದನಂತರ ಸ್ವರ್ಗದಿಂದ ಜಾರಿ ಈ ಲೋಕಕ್ಕೆ ಬಂದರೂ ಅವನು ಮಹಾಯಶೋವಂತನಾದ ಬ್ರಾಹ್ಮಣನಾಗಿ ಹುಟ್ಟಿ ವೇದಶಾಸ್ತ್ರಾರ್ಥತತ್ವಜ್ಞನಾಗಿ ಭೋಗವಂತನೂ ಆಗುತ್ತಾನೆ. ಯಾವ ಮನುಷ್ಯನು ಶ್ರದ್ಧಾಪೂರ್ವಕವಾಗಿ ಅತಿಥಿಸತ್ಕಾರವನ್ನು ಮಾಡುವನೋ ಅವನು ಮನುಷ್ಯಲೋಕದಲ್ಲಿ ಬ್ರಾಹ್ಮಣನಾಗಿ ಹುಟ್ಟಿ ಮಹಾಧನಿಕನೂ, ಶ್ರೀಮಂತನೂ, ವೇದವೇದಾಂಗಪಾರಂಗತನೂ, ಸರ್ವಶಾಸ್ತ್ರಾರ್ಥ ತತ್ತ್ವಜ್ಞನೂ, ಭೋಗವಂತನೂ ಆಗುತ್ತಾನೆ. ಯಾವ ಮನುಷ್ಯನು ಧರ್ಮದಿಂದ ಸಂಪಾದಿಸಿದ ಹಣದಿಂದ ಒಂದು ವರ್ಷಕಾಲ ತನ್ನ ಮನೆಗೆ ಆಗಮಿಸುವ ಅತಿಥಿಗಳಿಗೆ ಪಂಕ್ತಿಭೇದಮಾಡದೇ ಸತ್ಕಾರಮಾಡುವನೋ-ಅವನು ಪಾಪರಹಿತನಾಗುತ್ತಾನೆ. ಅತಿಥಿಗಳು ಇದೇ ಹೊತ್ತಿನಲ್ಲಿ ಬರಬೇಕೆಂಬ ನಿಯಮವನ್ನಿಡದೇ ಯಾವುದೇ ಸಮಯದಲ್ಲಿ ಎಷ್ಟೇ ಅತಿಥಿಗಳು ಬಂದರೂ ಶ್ರದ್ಧಾಪೂರ್ವಕವಾಗಿ ಅತಿಥಿಗಳನ್ನು ಸತ್ಕರಿಸುವ, ಸತ್ಯವಾದಿಯಾದ, ಜಿತೇಂದ್ರಿಯನಾದ, ಸತ್ಯಸಂಧನಾದ, ಕ್ರೋಧವನ್ನು ಜಯಿಸಿರುವ, ಶಾಖಾಧರ್ಮದಿಂದ ರಹಿತನಾದ, ಅಧರ್ಮದ ಕಾರ್ಯಮಾಡಲು ಭಯಪಡುವ, ಧರ್ಮಿಷ್ಠನಾದ, ವಂಚನೆ ಮತ್ತು ಮಾತ್ಸರ್ಯದಿಂದ ರಹಿತನಾದ, ಶ್ರದ್ಧಾವಂತನಾದ, ನಿತ್ಯಶುಚಿಯಾದ, ಭೋಜನದಲ್ಲಿ ಭೇದಭಾವವನ್ನು ತೋರದಿರುವ, ಮಹಾಯಶೋವಂತನಾದ ಗೃಹಸ್ಥನು ದಿವ್ಯವಾದ ರೂಪವನ್ನು ಧರಿಸಿ ದಿವ್ಯವಾದ ವಿಮಾನದಲ್ಲಿ ಕುಳಿತು ಪುರಂದರನಪುರಕ್ಕೆ (ಅಮರಾವತಿಗೆ) ಹೋಗುತ್ತಾನೆ. ದಾರಿಯುದ್ದಕ್ಕೂ ಅಪ್ಸರೆಯರು ಅವನ ಕೀರ್ತಿಯನ್ನು ಹಾಡುತ್ತಿರುತ್ತಾರೆ. ಅಲ್ಲವನು ದೇವತೆಗಳಿಂದ ಸತ್ಕೃತನಾಗಿ ಒಂದು ಮನ್ವಂತರದವರೆಗೆ ರಮಿಸುತ್ತಿದ್ದು ಪುಣ್ಯವು ಕ್ಷೀಣಿಸಿದನಂತರ ಸ್ವರ್ಗದಿಂದ ಜಾರಿ ಮನುಷ್ಯಲೋಕಕ್ಕೆ ಬಂದರೂ ಬ್ರಾಹ್ಮಣನಾಗಿಯೇ ಹುಟ್ಟಿ ಭೋಗಸಂಪನ್ನನಾಗುತ್ತಾನೆ.”

ವೈಷ್ಣವಧರ್ಮ-೭
ಭೂದಾನ-ತಿಲದಾನಗಳ ಫಲ: ಉತ್ತಮಬ್ರಾಹ್ಮಣನ ಮಹಿಮೆ

ಶ್ರೀಕೃಷ್ಣನು ಮುಂದುವರಿದು ಹೇಳುತ್ತಾನೆ:

"ಯುಧಿಷ್ಠಿರ! ಇನ್ನು ಮುಂದೆ ನಾನು ಉತ್ತಮೋತ್ತಮವಾದ ಭೂದಾನದ ವಿಷಯವಾಗಿ ಹೇಳುತ್ತೇನೆ. ಯಾವನು ದರಿದ್ರನಾದ, ಅಗ್ನಿಹೋತ್ರವನ್ನು ಮಾಡುವ ಶ್ರೋತ್ರಿಯನಾದ ಬ್ರಾಹ್ಮಣನಿಗೆ ರಮ್ಯವಾದ (ಫಲವತ್ತಾದ)ಭೂಮಿಯನ್ನು ದಕ್ಷಿಣೆಯೊಡನೆ ದಾನಮಾಡುವನೋ–ಅವನು ಸರ್ವಕಾಮನೆಗಳನ್ನೂ ಪಡೆದು ತೃಪ್ತಾತ್ಮನಾಗಿ, ಸಮಸ್ತರತ್ನಗಳಿಂದಲೂ ವಿಭೂಷಿತನಾಗಿ, ಸಮಸ್ತಪಾಪಗಳಿಂದಲೂ ಬಿಡುಗಡೆಹೊಂದಿ ಸೂರ್ಯನಂತೆ ಪ್ರಕಾಶಮಾನವಾದ ತೇಜಸ್ಸನ್ನು ಹೊಂದುತ್ತಾನೆ. ಅವಸಾನಾನಂತರದಲ್ಲಿ ಮಹಾಯಶೋವಂತನಾದ ಆ ಪುರುಷನು ಬಾಲಸೂರ್ಯನಂತೆ ಪ್ರಕಾಶಮಾನವಾದ ವಿಚಿತ್ರವಾದ ಧ್ವಜಗಳಿಂದ ಶೋಭಿತವಾದ ದಿವ್ಯವಾದ ವಿಮಾನದಲ್ಲಿ ಕುಳಿತು ನನ್ನ ಲೋಕಕ್ಕೆ (ವೈಕುಂಠಕ್ಕೆ) ಹೋಗುತ್ತಾನೆ.

ನ ಹಿ ಭೂಮಿಪ್ರದಾನಾದ್ವೈ ದಾನಮನ್ಯದ್ವಿಶಿಷ್ಯತೇ ।
ನ ಚಾಪಿ ಭೂಮಿಹರಣಾತ್ಪಾಪಮನ್ಯದ್ವಿಶಿಷ್ಯತೇ ॥೪೫೧॥

ಭೂಮಿದಾನಕ್ಕಿಂತಲೂ ವಿಶಿಷ್ಟವಾದ ಬೇರೆ ದಾನವೇ ಇಲ್ಲ. ಭೂಮಿಯನ್ನು ಕಸಿದುಕೊಳ್ಳುವುದರಿಂದ ಉಂಟಾಗುವ ಪಾಪಕ್ಕಿಂತಲೂ ಮಿಗಿಲಾದ ಬೇರೆಯ ಪಾಪವೂ ಇಲ್ಲ. ಬೇರೆ ಯಾವುದೇ ದಾನವಾದರೂ ಕಾಲಾನುಕ್ರಮವಾಗಿ ನಶಿಸಿಹೋಗುತ್ತದೆ. ಆದರೆ ಪುಣ್ಯಕರವಾದ ಭೂದಾನಕ್ಕೆ (ಭೂದಾನದ ಪುಣ್ಯಕ್ಕೆ) ನಾಶವೆಂಬುದೇ ಇಲ್ಲ. (ಭೂಮಿಯಲ್ಲಿ ಉತ್ಪತ್ತಿಯು ಮತ್ತೆ ಮತ್ತೆ ಬರುವುದರಿಂದ ಭೂದಾನದ ಫಲವೂ ಹೆಚ್ಚುತ್ತಲೇ ಹೋಗುತ್ತದೆ.) ಭೂಮಿಯನ್ನು ದಾನಕೊಟ್ಟವನು ಸುವರ್ಣ-ಮಣಿರತ್ನಗಳನ್ನೂ, ಅಪಾರವಾದ ಧನವನ್ನೂ, ಸಮಸ್ತವಾದ ದಾನಗಳನ್ನೂ ಕೊಟ್ಟಂತೆಯೇ ಆಗುತ್ತದೆ. ಭೂಮಿಯನ್ನು ದಾನವಾಗಿ ಕೊಟ್ಟವನು ಸಮುದ್ರಗಳನ್ನೂ, ನದಿಗಳನ್ನೂ, ಪರ್ವತಗಳನ್ನೂ, ಸಮ-ವಿಷಮ ಪ್ರದೇಶಗಳನ್ನೂ, ಸಮಸ್ತವಾದ ಗಂಧಗಳನ್ನೂ, ರಸಗಳನ್ನೂ ದಾನಮಾಡಿದಂತಾಗುತ್ತದೆ. ಭೂಮಿಯನ್ನು ದಾನಮಾಡಿದವನು ಪುಷ್ಪ-ಫಲಭರಿತವಾದ ವೃಕ್ಷಗಳನ್ನೂ, ಕಮಲ-ಕನ್ನೈದಿಲೆಗಳ ಸಮೂಹಗಳನ್ನೂ ದಾನಮಾಡಿದಂತಾಗುತ್ತದೆ.

ಬಹುದಕ್ಷಿಣೆಗಳುಳ್ಳ ಅಗ್ನಿಷ್ಟೋಮಾದಿ ಯಜ್ಞಗಳಿಂದ ದೇವತೆಗಳನ್ನು ಪೂಜಿಸುವವರು ಕೂಡ ಭೂದಾನಿಗೆ ಲಭಿಸುವ ಫಲವನ್ನು ಪಡೆಯಲಾರರು. ಪೈರು-ಪಚ್ಚೆಗಳಿಂದ ಸಮೃದ್ಧವಾದ ಭೂಮಿಯನ್ನು ಶ್ರೋತ್ರಿಯನಿಗೆ ದಾನಮಾಡಿದರೆ ದಾನಿಯ ಪಿತೃಗಳು ಪ್ರಳಯಕಾಲದವರೆಗೂ ತೃಪ್ತರಾಗಿರುತ್ತಾರೆ. ಬ್ರಾಹ್ಮಣನಿಗೆ ಭೂಮಿಯನ್ನು ದಾನವಾಗಿಕೊಡುವುದರಿಂದ ನಾನೂ ತೃಪ್ತನಾಗುತ್ತೇನೆ. ರುದ್ರ, ಸೂರ್ಯ ಮತ್ತು ಇತರ ಎಲ್ಲ ದೇವತೆಗಳೂ ಸುಪ್ರೀತರಾಗುತ್ತಾರೆ. ಭೂದಾನಮಾಡಿದ ಪುಣ್ಯದಿಂದ ಪೂತಾತ್ಮನಾಗುವ ದಾನಿಯು ನನ್ನ ಲೋಕದಲ್ಲಿಯೇ ವಾಸಮಾಡುತ್ತಾನೆ. ಈ ವಿಷಯವನ್ನು ಪುನಃ ವಿಚಾರಮಾಡುವ ಕಾರಣವಿಲ್ಲ.

ಜೀವಿಕೆಯ ಕಷ್ಟದಿಂದಾಗಿ ಅಲ್ಪ-ಸ್ವಲ್ಪ ಪಾಪಮಾಡುವ ಮನುಷ್ಯನು ಗೋಕರ್ಣದಷ್ಟು ವಿಸ್ತಾರದ ಭೂಮಿಯ ದಾನದಿಂದ ಶುದ್ಧನಾಗುತ್ತಾನೆ. ಮಾಸೋಪವಾಸಮಾಡುವುದರಿಂದ ಯಾವ ಪುಣ್ಯವು ಲಭಿಸುವುದೋ, ಕೃಚ್ಛ್ರ-ಚಾಂದ್ರಾಯಣವ್ರತಗಳನ್ನು ಮಾಡುವುದರಿಂದ ಯಾವ ಪುಣ್ಯವು ಲಭಿಸುವುದೋ–ಆ ಪುಣ್ಯವು ಗೋಕರ್ಣದಷ್ಟು ವಿಸ್ತಾರವಾದ ಭೂದಾನ ಮಾಡುವುದರಿಂದ ಪ್ರಾಪ್ತವಾಗುತ್ತದೆ. ಭೂಮಂಡಲದಲ್ಲಿರುವ ಸಮಸ್ತ ಪುಣ್ಯತೀರ್ಥಗಳಲ್ಲಿಯೂ ಸ್ನಾನಮಾಡುವುದರಿಂದ ಯಾವ ಪುಣ್ಯವು ಲಭಿಸುವುದೋ–ಅದೇ ಪುಣ್ಯವು ಗೋಕರ್ಣದಷ್ಟು ವಿಸ್ತಾರದ ಭೂಮಿಯನ್ನು ದಾನಮಾಡುವುದರಿಂದಲೂ ಲಭಿಸುತ್ತದೆ."

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

"ದೇವದೇವನೇ! ಸುರೇಶ್ವರನೇ! ವಾಸುದೇವನೇ! ನಿನಗೆ ನಮಸ್ಕಾರಮಾಡುತ್ತೇನೆ. ಗೋಕರ್ಣದ ಪ್ರಮಾಣವೆಷ್ಟೆಂಬುದನ್ನು ಹೇಳುವ ಕೃಪೆಮಾಡು."

ವಾಸುದೇವನು ಹೇಳುತ್ತಾನೆ:

"ಯುಧಿಷ್ಠಿರ! ಗೋಕರ್ಣದ ಪ್ರಮಾಣವೆಷ್ಟೆಂಬುದನ್ನು ಹೇಳುವೆನು; ಕೇಳು.

ತ್ರಿಂಶದ್ದಣ್ಡಪ್ರಮಾಣೇನ ಪ್ರಮಿತ್ರಂ ಸರ್ವತೋ ದಿಶಮ್।
ಪ್ರತ್ಯಕ್ಪ್ರಾಗಪಿ ರಾಜೇನ್ದ್ರ ತತ್ತಥಾ ದಕ್ಷಿಣೋತ್ತರಮ್॥
ಗೋಕರ್ಣಂ ತದ್ವಿದಃ ಪ್ರಾಹುಃ ಪ್ರಮಾಣಂ ಧರಣೇರ್ನೃಪ ॥

ಪೂರ್ವ-ಪಶ್ಚಿಮವಾಗಿ ಮತ್ತು ದಕ್ಷಿಣೋತ್ತರವಾಗಿ ಮೂವತ್ತು *ದಂಡಗಳನ್ನು ಅಳೆದರೆ ಎಷ್ಟು ವಿಸ್ತಾರವಿರುವುದೋ ಅದಕ್ಕೆ ಗೋಕರ್ಣವೆಂದು ಭೂಮಿಯ ಅಳತೆಯನ್ನು ತಿಳಿದವರು ಹೇಳುತ್ತಾರೆ.

ಸವೃಷಂ ಗೋಶತಂ ಯತ್ರ ಸುಖಂ ತಿಷ್ಠತ್ಯಯನ್ತ್ರಿತಮ್।
ಸವತ್ಸಂ ಕುರುಶಾರ್ದೂಲ ತಚ್ಚ ಗೋಕರ್ಣಮುಚ್ಯತೇ ॥

ಎಷ್ಟು ವಿಸ್ತಾರವಾದ ಪ್ರದೇಶದಲ್ಲಿ ಹೋರಿಗಳಿಂದಲೂ ಕರುಗಳಿಂದಲೂ ಕೂಡಿರುವ ನೂರು ಗೋವುಗಳು ಸುಖವಾಗಿ ಆರಾಮವಾಗಿ ಇಕ್ಕಟ್ಟಿಲ್ಲದೇ ಇರಲು ಅವಕಾಶವಾಗುವುದೋ-ಅಷ್ಟು ವಿಸ್ತಾರವಿರುವ ಪ್ರದೇಶಕ್ಕೂ ಗೋಕರ್ಣವೆಂದು ಹೇಳುತ್ತಾರೆ.

ಭೂದಾನವನ್ನು ಮಾಡಿದವನ ಸಮೀಪಕ್ಕೆ ಯಮಭಟರೂ ಸುಳಿಯುವುದಿಲ್ಲ. ಮೃತ್ಯುವಿನ ದಂಡಗಳು ಭೂದಾನಿಯನ್ನು ಪ್ರಹರಿಸುವುದಿಲ್ಲ. ಘೋರವಾದ ವರುಣನ ಪಾಶಗಳು ಬಂಧಿಸುವುದಿಲ್ಲ. ದಾರುಣವಾದ ಕುಂಭೀಪಾಕವೇ ಮೊದಲಾದ ನರಕಗಳಲ್ಲಿ ಅವನು ಬೀಳಬೇಕಾಗುವುದಿಲ್ಲ. ರೌರವಾದಿ ನರಕಗಳನ್ನಾಗಲೀ ವೈತರಣೀನದಿಯನ್ನಾಗಲೀ ಭೂದಾನಿಯು ನೋಡಬೇಕಾಗಿಲ್ಲ. ತೀವ್ರವಾದ ಕಷ್ಟಗಳಾಗಲೀ ಯಾತನೆಗಳಾಗಲೀ ಭೂದಾನಿಗೆ ಇರುವುದಿಲ್ಲ. ಅದಕ್ಕೆ ಬದಲಾಗಿ ಚಿತ್ರಗುಪ್ತ, ಕಲಿ, ಕಾಲ, ಕೃತಾಂತ, ಮೃತ್ಯು, ಪೂಜ್ಯನಾದ ಯಮಧರ್ಮ–ಇವರೆಲ್ಲರೂ ಸಾಕ್ಷಾತ್ತಾಗಿಯೇ ಭೂದಾನಿಯನ್ನು ಸತ್ಕರಿಸುತ್ತಾರೆ. ಯುಧಿಷ್ಠಿರ! ನಾನೂ ಕೂಡ ಭೂದಾನಿಯನ್ನು ಪ್ರೀತಿಯಿಂದ ಪೂಜಿಸಿ ಸತ್ಕರಿಸುತ್ತೇನೆ. ರುದ್ರ, ಪ್ರಜಾಪತಿ, ಇಂದ್ರ, ದೇವತೆಗಳು ಮತ್ತು ಋಷಿಗಳು–ಇವರೆಲ್ಲರೂ ಭೂದಾನಿಯನ್ನು ಚೆನ್ನಾಗಿ ಆದರಿಸಿ ಸತ್ಕರಿಸುತ್ತಾರೆ.

ಕೃಶಭೃತ್ಯಸ್ಯ ಕೃಶಗೋಃ ಕೃಶಾಶ್ವಸ್ಯ ಕೃತಾತಿಥೇಃ।
ಭೂಮಿರ್ದೇಯಾ ನರಶ್ರೇಷ್ಠ ಸ ನಿಧಿಃ ಪಾರಲೌಕಿಕಃ ॥೪೭॥

ಯಾವಾತನ ಕುಟುಂಬದ ಜನರು ಜೀವಿಕೆಗೆ ತೊಂದರೆಯಾಗಿ ಕೃಶರಾಗಿರುವರೋ, ಯಾವನ ಹಸುಗಳು ಮತ್ತು ಕುದುರೆಗಳು ದುರ್ಬಲವಾಗಿವೆಯೋ (ಯಾವನು ಮನೆಯಲ್ಲಿರುವ ಹಸುಗಳನ್ನೂ ಕುದುರೆಗಳನ್ನೂ

*ದಂಡ=ನಾಲ್ಕು ಗುದ್ದಮೊಳಗಳ ಅಳತೆ ಅಥವಾ ಒಂದು ಮಾರು.

ಸಾಕಲು ಅಸಮರ್ಥನಾಗಿರುವನೋ), ಯಾವನು ಯಾವಾಗಲೂ ಅತಿಥಿ ಸತ್ಕಾರದಲ್ಲಿಯೇ ನಿರತನಾಗಿರುವನೋ–ಅಂತಹವನಿಗೆ ಭೂದಾನ ಮಾಡಬೇಕು. ಏಕೆಂದರೆ: ಭೂದಾನಫಲವು ಪರಲೋಕಕ್ಕೆ ಹೋಗಲು ಅನುವಾಗುವ ನಿಧಿಯಂತಿರುತ್ತದೆ.

ಸೀದಮಾನಕುಟುಮ್ಬಾಯ ಶ್ರೋತ್ರಿಯಾಯಾಗ್ನಿಹೋತ್ರಿಣೇ।
ವ್ರತಸ್ಥಾಯ ದರಿದ್ರಾಯ ಭೂಮಿರ್ದೇಯಾ ನರಾಧಿಪ ॥೪೭೨॥

ಯಾವನ ಕುಟುಂಬವು ಜೀವಿಕೆಗೆ ಅವಕಾಶವಿಲ್ಲದೇ ನಶಿಸಿ ಹೋಗುವುದರಲ್ಲಿರುವುದೋ–ಅಂತಹ ದರಿದ್ರನಾದ, ಶ್ರೋತ್ರಿಯನಾದ, ವ್ರತ-ನಿಯಮಾದಿಗಳನ್ನು ಆಚರಿಸುವ, ಅಗ್ನಿಹೋತ್ರಿಯಾದ ಬ್ರಾಹ್ಮಣನಿಗೆ ಭೂದಾನಮಾಡಬೇಕು.

ಯಥಾ ಹಿ ಧಾತ್ರೀ ಕ್ಷೀರೇಣ ಪುತ್ರಂ ವರ್ಧಯತಿ ಸ್ವಯಮ್।
ದಾತಾರಮನುಗೃಹ್ಣಾತಿ ದತ್ತಾ ಹ್ಯೇವಂ ವಸುನ್ಧರಾ ॥೪೭೩॥

ಯಾವ ರೀತಿಯಲ್ಲಿ ತಾಯಿಯಾದವಳು ಹಾಲಿನಿಂದ ಮಗುವನ್ನು ಪೋಷಿಸಿ ಬೆಳೆಸುವಳೋ–ಅದೇ ರೀತಿಯಲ್ಲಿ ದಾನವಾಗಿ ಕೊಡಲ್ಪಡುವ ಭೂಮಿದೇವಿಯು ದಾನಿಯನ್ನು ಸರ್ವಪ್ರಕಾರಗಳಿಂದಲೂ ವೃದ್ಧಿಯನ್ನು ಹೊಂದುವಂತೆ ಅನುಗ್ರಹಿಸುತ್ತಾಳೆ.

ಯಾವ ರೀತಿಯಲ್ಲಿ ಗೋವು ತನ್ನಲ್ಲಿಯೇ ಹಾಲನ್ನು ಸೃಷ್ಟಿಸಿ ತನ್ನ ಕರುವಿನ ಧಾರಣ-ಪೋಷಣೆಗಳನ್ನು ಮಾಡುವುದೋ–ಅದೇ ರೀತಿಯಲ್ಲಿ ಸರ್ವಗುಣೋಪೇತಳಾದ ಭೂದೇವಿಯು ತನ್ನನ್ನು ಸತ್ಪಾತ್ರನಿಗೆ ದಾನಮಾಡಿದವನ ಧಾರಣ-ಪೋಷಣೆಗಳನ್ನು ಮಾಡುತ್ತಾಳೆ. ಯಾವ ರೀತಿಯಲ್ಲಿ ನೀರಿನಿಂದ ನೆನೆದ ಬೀಜಗಳು ಮೊಳಕೆಯಾಗುತ್ತವೆಯೋ–ಅದೇ ರೀತಿಯಲ್ಲಿ ಭೂದಾನಮಾಡಿದವನಿಗೆ ಅನುದಿನವೂ ಅವನ ಮನೋರಥಗಳು ಪೂರ್ಣವಾಗುತ್ತಲೇ ಇರುತ್ತವೆ. ಯಾವ ರೀತಿಯಲ್ಲಿ ಸೂರ್ಯನ ತೇಜಸ್ಸು ಸಮಸ್ತವಾದ ಕತ್ತಲೆಯನ್ನೂ ಹೋಗಲಾಡಿಸುವುದೋ–ಅದೇ ರೀತಿಯಲ್ಲಿ ಭೂದಾನವು ದಾನಿಯ ಸಮಸ್ತಪಾಪಗಳನ್ನೂ ಹೋಗಲಾಡಿಸುತ್ತದೆ. ಯಾವನು ಭೂಮಿಯನ್ನು ದಾನಕೊಡುವೆನೆಂದು ಹೇಳಿ ಕೊಡುವುದಿಲ್ಲವೋ ಮತ್ತು ಕೊಟ್ಟುದುದನ್ನು ಹಿಂದಕ್ಕೆ ತೆಗೆದುಕೊಳ್ಳುವನೋ–ಅಂತಹವನು ವರುಣನ ಘೋರವಾದ ಪಾಶಗಳಿಂದ ಬಂಧಿಸಲ್ಪಟ್ಟವನಾಗಿ

ಕೀವು-ರಕ್ತಗಳಿಂದ ತುಂಬಿದ ನರಕದಲ್ಲಿ ದೂಡಲ್ಪಡುತ್ತಾನೆ. ಒಬ್ಬ ಸತ್ಪಾತ್ರನಿಗೆ ತಾನೇ ಭೂಮಿಯನ್ನು ದಾನವಾಗಿ ಕೊಟ್ಟಿರಲಿ, ಇತರರೇ ಕೊಟ್ಟಿರಲಿ–ಯಾವುದಾದರೂ ನೆಪದಿಂದ ಅಂತಹ ದಾನಕೊಟ್ಟ ಭೂಮಿಯನ್ನು ಅಪಹರಿಸುವವನಿಗೆ ಘೋರವಾದ ನರಕದಲ್ಲಿ ಬೀಳುವುದರ ಹೊರತಾಗಿ ಬೇರೆ ಯಾವ ಪ್ರಾಯಶ್ಚಿತ್ತವೂ ಇಲ್ಲ. ಯಾವನು ಬ್ರಾಹ್ಮಣಶ್ರೇಷ್ಠರಿಗೆ ಭೂಮಿಯನ್ನು ದಾನವಾಗಿ ಕೊಟ್ಟು ಅದರ ಪ್ರತಿಫಲವನ್ನು ತಾನೇ ಅನುಭವಿಸುತ್ತಿರುವನೋ–ಅಂತಹ ದುಷ್ಟಾತ್ಮನಾದ ಮೂಢನು ಇಪ್ಪತ್ತೊಂದು ವಿಧವಾದ ನರಕಗಳಲ್ಲಿ ಬೀಳುತ್ತಾನೆ. ನರಕವಾಸವನ್ನು ಅನುಭವಿಸಿ ಹೊರಬಂದನಂತರವೂ ಈ ಭೂಮಿಯಲ್ಲಿ ಅವನು ನಾಯಿಯಾಗಿ ಹುಟ್ಟುತ್ತಾನೆ.

ಹಲಕೃಷ್ಟಾ ಮಹೀ ದೇಯಾ ಸಬೀಜಾ ಸಸ್ಯಮಾಲಿನೀ ।
ಅಥವಾ ಸೋದಕಾ ದೇಯಾ ದರಿದ್ರಾಯ ದ್ವಿಜಾತಯೇ ॥೪೮೦॥

ನೇಗಿಲಿನಿಂದ ಉತ್ತು-ಬಿತ್ತಿರುವ ಭೂಮಿಯನ್ನಾಗಲೀ, ಪೈರಿನಿಂದ ತುಂಬಿರುವ ಭೂಮಿಯನ್ನಾಗಲೀ, ನೀರಿನ ಆಶ್ರಯವಿರುವ ಭೂಮಿಯನ್ನಾಗಲೀ ದರಿದ್ರನಾದ ಬ್ರಾಹ್ಮಣನಿಗೆ ದಾನವಾಗಿ ಕೊಡಬೇಕು. ಸಂತುಷ್ಟವಾದ ಮನಸ್ಸಿನಿಂದ ಅಂತಹ ಭೂಮಿಯನ್ನು ದಾನವಾಗಿ ಕೊಟ್ಟರೆ ಭೂದಾನಮಾಡಿದವನು ಮನಸ್ಸಿನಲ್ಲಿ ಚಿಂತಿಸಿದ ಸರ್ವಕಾಮನೆಗಳನ್ನೂ ಪಡೆದುಕೊಳ್ಳುತ್ತಾನೆ.

ಅನೇಕ ರಾಜರಿಂದ ಭೂಮಿಯು ದಾನಮಾಡಲ್ಪಟ್ಟಿದೆ. ದಾನ ಮಾಡಲ್ಪಡುತ್ತಲೂ ಇದೆ. ಈ ಭೂಮಿಯು ಯಾವಾಗ ಯಾವನ ಅಧಿಕಾರದಲ್ಲಿರುವುದೋ ಅವನು ಆ ಭೂಮಿಯನ್ನು ದಾನಮಾಡಿದರೆ ಅವನಿಗೆ ಅದರ ಫಲವು ಲಭಿಸುತ್ತದೆ.

ಯಾವನು ದರಿದ್ರನಾಗಿರುವ, ವೃತ್ತಿಹೀನನಾಗಿರುವ, ಗೋವುಗಳಿಂದ ಹೀನನಾಗಿರುವ ಬ್ರಾಹ್ಮಣನಿಗೆ ಬೆಳ್ಳಿಯನ್ನು ದಾನವಾಗಿ ಕೊಡುವನೋ–ಅಂತಹವನು ಸಮಸ್ತಪಾಪಗಳಿಂದಲೂ ಮುಕ್ತನಾಗಿ, ಹುಣ್ಣಿಮೆಯ ಚಂದ್ರನ ಪ್ರಕಾಶಕ್ಕೆ ಸಮಾನವಾದ ಪ್ರಕಾಶದಿಂದ ಕೂಡಿದ ವಿಮಾನದಲ್ಲಿ ಕುಳಿತು ಮನಸ್ಸಿಗೆ ಬೇಕಾದ ರೂಪವನ್ನು ಧರಿಸಿ, ಸ್ವೇಚ್ಛೆಯಿಂದ ಸ್ವರ್ಗ ಲೋಕದಲ್ಲಿ ಸಂಚರಿಸುತ್ತಿರುತ್ತಾ ಅಲ್ಲಿ ಎಲ್ಲರಿಂದಲೂ ಪೂಜಿಸಲ್ಪಡುತ್ತಿರು

ತ್ತಾನೆ. ಮಹಾಯಶೋವಂತನಾದ ಅವನು, ಪುಣ್ಯವು ಕ್ಷೀಣಿಸಿದನಂತರ ಈ ಲೋಕದಲ್ಲಿ ಪುನಃ ಅವತರಿಸುತ್ತಾನೆ. ಹಾಗೆ ಹುಟ್ಟುವ ಅವನು ಸಮಸ್ತ ಜನರಿಂದಲೂ ಗೌರವಿಸಲ್ಪಡುತ್ತಾ ವೀರ್ಯವಂತನಾದ ಶ್ರೀಮಂತನಾದ ರಾಜನಾಗುತ್ತಾನೆ.

ಶ್ರೋತ್ರಿಯನಾದ ಬ್ರಾಹ್ಮಣನಿಗೆ ಅದರಲ್ಲಿಯೂ ವಿಶೇಷವಾಗಿ ದರಿದ್ರನಾದ ಶ್ರೋತ್ರಿಯನಿಗೆ ಎಳ್ಳಿನ ರಾಶಿಯನ್ನು ದಾನಮಾಡುವುದರಿಂದ ಪ್ರಾಪ್ತವಾಗುವ ಫಲವೇನೆಂಬುದನ್ನು ಹೇಳುವೆನು; ಕೇಳು;

ಹತ್ತುಸಾವಿರ ವೃಷೋತ್ಸರ್ಗಗಳಿಂದ ಯಾವ ಪುಣ್ಯವು ಲಭಿಸುವುದೋ ಅದೇ ಪುಣ್ಯವನ್ನು ಎಳ್ಳಿನ ರಾಶಿಯನ್ನು ದಾನಮಾಡಿದವನು ಪಡೆದು ಆ ಕ್ಷಣದಲ್ಲಿಯೇ ಪಾಪರಹಿತನಾಗುತ್ತಾನೆ. ಯಾವ ರೀತಿಯಲ್ಲಿ ಪೊರೆಯನ್ನು ಬಿಟ್ಟು ಹಾವು ಶುದ್ಧಶರೀರವಾಗುವುದೋ–ಅದೇ ರೀತಿಯಲ್ಲಿ ತಿಲದಾನ ಮಾಡುವುದರಿಂದ ದಾನಿಯು ಪಾಪಗಳಿಂದ ಮುಕ್ತನಾಗಿ ಶುದ್ಧನಾಗುತ್ತಾನೆ. ಸುವರ್ಣಪುಷ್ಪಗಳಿಂದ ವಿಭೂಷಿತವಾದ ಎಳ್ಳಿನ ರಾಶಿಯನ್ನು ದಾನಮಾಡುವವನು ದಿವ್ಯವಾದ ವಿಮಾನದಲ್ಲಿ ಕುಳಿತು ಪಿತೃಲೋಕದಲ್ಲಿ ಎಲ್ಲರಿಂದಲೂ ಪೂಜಿಸಲ್ಪಡುತ್ತಾನೆ. ತಿಲದಾನಮಾಡಿದವನು ಅರವತ್ತು ಸಾವಿರ ವರ್ಷಗಳ ಕಾಲ ಕಾಮರೂಪಿಯಾಗಿ, ಮಹಾಯಶೋವಂತನಾಗಿ ಸುಖವಾಗಿ ಪಿತೃಲೋಕದಲ್ಲಿ ಆನಂದಿಸುತ್ತಿರುತ್ತಾನೆ. ಮಹಾಭುಜನೇ! ಎಳ್ಳು, ಗೋವುಗಳು, ಸುವರ್ಣ, ಅನ್ನ, ಕನ್ಯೆ, ಭೂಮಿ–ಇವುಗಳನ್ನು ಸತ್ಪಾತ್ರನಾದ ಬ್ರಾಹ್ಮಣನಿಗೆ ದಾನವಾಗಿ ಕೊಟ್ಟರೆ ಅವುಗಳೇ ದಾನಕೊಟ್ಟವನನ್ನು ಉದ್ಧರಿಸುತ್ತವೆ. ಸದಾಚಾರಸಂಪನ್ನನಾದ, ಅಗ್ನಿಹೋತ್ರಿಯಾದ, ಅತ್ಯಾಶೆಯಿಲ್ಲದ ಬ್ರಾಹ್ಮಣನನ್ನು ವಿಧಿವತ್ತಾಗಿ ಸತ್ಕರಿಸಬೇಕು. ಏಕೆಂದರೆ: ಅಂತಹವನನ್ನು ಸತ್ಕರಿಸುವುದರಿಂದ ಪ್ರಾಪ್ತವಾಗುವ ಪುಣ್ಯರಾಶಿಯು ಪರಲೋಕಪ್ರಾಪ್ತಿಗೆ ಬೊಕ್ಕಸದಂತಿರುತ್ತದೆ. ಆಹಿತಾಗ್ನಿಯಾಗಿ, ದರಿದ್ರನಾಗಿರುವ, ಜಿತೇಂದ್ರಿಯನಾಗಿರುವ, ಶೂದ್ರಾನ್ನವನ್ನು ವರ್ಜಿಸಿರುವ ಶ್ರೋತ್ರಿಯನನ್ನು ಪ್ರಯತ್ನಪೂರ್ವಕವಾಗಿ ಸತ್ಕರಿಸಬೇಕು. ನಿತ್ಯಾಗ್ನಿಹೋತ್ರಿಯೂ ಮತ್ತು ವೇದವಿದನೂ ದಾನಕೊಡಲು ಸತ್ಪಾತ್ರರಾಗಿರುತ್ತಾರೆ. ವೃಷಲಾನ್ನವು ಯಾವನ ಹೊಟ್ಟೆಯಲ್ಲಿರುವುದಿಲ್ಲವೋ ಅವನು ಸತ್ಪಾತ್ರರಲ್ಲಿಯೂ ಉತ್ತಮಪಾತ್ರನಾಗುತ್ತಾನೆ.

ಯಚ್ಚ ವೇದಮಯಂ ಪಾತ್ರಂ ಯಚ್ಚ ಪಾತ್ರಂ ತಪೋಮಯಮ್।
ಅಸಂಕೀರ್ಣಂ ಚ ಯತ್ಪಾತ್ರಂ ತತ್ಪಾತ್ರಂ ತಾರಯಿಷ್ಯತಿ ॥೪೯೬॥

ಯಾವನು ವೇದಸಂಪನ್ನನೋ, ಯಾವನು ತಪೋಮಯನೋ, ಸಂಕೀರ್ಣದೋಷವಿಲ್ಲದವನೋ ಅಂತಹವನೇ ದಾನ ತೆಗೆದುಕೊಳ್ಳಲು ಸತ್ಪಾತ್ರನು. ಅಂತಹವನು ದಾನಿಯನ್ನು ಉದ್ಧರಿಸುತ್ತಾನೆ. ನಿತ್ಯವೂ ಅಧ್ಯಯನ-ಅಧ್ಯಾಪನಗಳಲ್ಲಿ ನಿರತರಾಗಿರುವ, ಸಾಂಕರ್ಯದೋಷದಿಂದ ರಹಿತರಾದ, ಜಿತೇಂದ್ರಿಯರಾದ, ಪಂಚಮಹಾಯಜ್ಞಗಳಲ್ಲಿ ನಿರತರಾದ ಬ್ರಾಹ್ಮಣರು ತಮ್ಮನ್ನು ಸತ್ಕರಿಸಿದವರನ್ನು ಉದ್ಧರಿಸುತ್ತಾರೆ.

ಯೇ ಕ್ಷಾನ್ತಿದಾನ್ತಾಃ ಶ್ರುತಿಪೂರ್ಣಕರ್ಣಾ
ಜಿತೇನ್ದ್ರಿಯಾಃ ಪ್ರಾಣಿವಧೇ ನಿವೃತ್ತಾಃ।
ಪ್ರತಿಗ್ರಹೇ ಸಂಕುಚಿತಾ ಗೃಹಸ್ಥಾ-
ಸ್ತೇ ಬ್ರಾಹ್ಮಣಾಸ್ತಾರಯಿತುಂ ಸಮರ್ಥಾಃ ॥೪೯೭॥

ಯಾರು ಕ್ಷಮಾಶೀಲರೋ, ಅಂತರಿಂದ್ರಿಯಗಳನ್ನೂ-ಬಹಿರಿಂದ್ರಿಯಗಳನ್ನೂ ನಿಗ್ರಹಿಸಿರುವರೋ, ಯಾರ ಕಿವಿಗಳು ಯಾವಾಗಲೂ ವೇದವಾಣಿಯಿಂದ ತುಂಬಿರುತ್ತವೆಯೋ, ಯಾರು ಪ್ರಾಣಿವಧೆಯಿಂದ ನಿವೃತ್ತರಾಗಿರುವರೋ, ದಾನತೆಗೆದುಕೊಳ್ಳಲು ಸಂಕೋಚಪಡುವರೋ– ಅಂತಹ ಗೃಹಸ್ಥಬ್ರಾಹ್ಮಣರು ದಾನಿಯನ್ನು ಉದ್ಧರಿಸಲು ಸಮರ್ಥರು.

ನಿತ್ಯೋದಕೀ ನಿತ್ಯಯಜ್ಞೋಪವೀತೀ
ನಿತ್ಯಸ್ವಾಧ್ಯಾಯೀ ವೃಷಲಾನ್ನವರ್ಜೀ।
ಋತೌ ಗಚ್ಛನ್ವಿಧಿವಚ್ಚಾಪಿ ಜುಹ್ವ-
ನ್ಸ ಬ್ರಾಹ್ಮಣಸ್ತಾರಯಿತುಂ ಸಮರ್ಥಃ ॥೪೯೮॥

ಪ್ರತಿನಿತ್ಯವೂ ಪಿತೃಗಳಿಗೆ ತರ್ಪಣಾದಿಗಳನ್ನು ಕೊಡುವ, ಸರ್ವಕಾಲದಲ್ಲಿಯೂ ಯಜ್ಞೋಪವೀತವನ್ನು ಧರಿಸಿರುವ, ಪ್ರತಿನಿತ್ಯವೂ ಸ್ವಾಧ್ಯಾಯಪರಾಯಣನಾದ, ವೃಷಲಾನ್ನವನ್ನು ತಿನ್ನದ, ಋತುಕಾಲದಲ್ಲಿ ಮಾತ್ರವೇ ಪತ್ನಿಯ ಸಮಾಗಮಮಾಡುವ, ವಿಧಿಪೂರ್ವಕವಾಗಿ ಅಗ್ನಿಹೋತ್ರವನ್ನು ಮಾಡುವ ಬ್ರಾಹ್ಮಣನು ಇತರರನ್ನು ಉದ್ಧರಿಸಲು ಸಮರ್ಥನಾಗುತ್ತಾನೆ.

ಬ್ರಾಹ್ಮಣೋ ಯಸ್ತು ಮದ್ಭಕ್ತೋ ಮದ್ರಾಗೀ ಮತ್ಪರಾಯಣಃ ।
ಮಯಿ ಸಂನ್ಯಸ್ತಕರ್ಮಾ ಚ ವಿಪ್ರಸ್ತಾರಯೇದ್ಧ್ರುವಮ್ ॥೪೯॥

ನನ್ನಲ್ಲಿಯೇ ಅನುರಾಗವಿರುವ, ನನ್ನನ್ನೇ ಆಶ್ರಯವನ್ನಾಗಿ ಭಾವಿಸಿರುವ, ಸಕಲಕರ್ಮಗಳ ಫಲವನ್ನೂ ನನಗೇ ಸಮರ್ಪಿಸುವ, ನನ್ನ ಭಕ್ತನಾದ ಬ್ರಾಹ್ಮಣನು ನಿಶ್ಚಯವಾಗಿಯೂ ಇತರರನ್ನು ಉದ್ಧರಿಸುತ್ತಾನೆ.

ದ್ವಾದಶಾಕ್ಷರತತ್ತ್ವಜ್ಞಶ್ಚತುರ್ವ್ಯೂಹವಿಭಾಗವಿತ್ ।
ಅಚ್ಛಿದ್ರಪಞ್ಚಕಾಲಜ್ಞಃ ಸ ವಿಪ್ರಸ್ತಾರಯಿಷ್ಯತಿ ॥೫೦॥

'ಓಂ ನಮೋ ಭಗವತೇ ವಾಸುದೇವಾಯ'-ಎಂಬ ದ್ವಾದಶಾಕ್ಷರ ಮಂತ್ರದ ತತ್ತ್ವವನ್ನೂ, ವಾಸುದೇವ-ಸಂಕರ್ಷಣಾದಿ ಚತುರ್ವ್ಯೂಹಗಳ ವಿಭಾಗವನ್ನೂ, ಪಾಂಚರಾತ್ರಾಗಮೋಕ್ತವಾದ ಐದು ಕಾಲಗಳಲ್ಲಿಯೂ ಮಾಡಬೇಕಾದ ಉಪಾಸನೆಗಳನ್ನೂ ದೋಷರಹಿತವಾಗಿ ಯಾವನು ತಿಳಿದಿರುವನೋ–ಅಂತಹ ಬ್ರಾಹ್ಮಣನು ಇತರರನ್ನು ಉದ್ಧರಿಸುತ್ತಾನೆ."

ವೈಷ್ಣವಧರ್ಮ-೮

ಹಲವು ಬಗೆಯ ದಾನಗಳ ಮಹಿಮೆ

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ವಾಸುದೇವನು ಅನುಕ್ರಮವಾಗಿ ದಾನಗಳ ವಿಷಯಗಳನ್ನು ಹೇಳಿದನಂತರವೂ ಧರ್ಮಶ್ರವಣದಲ್ಲಿ ತೃಪ್ತಿಯನ್ನು ಹೊಂದದಿದ್ದ ಯುಧಿಷ್ಠಿರನು ಪುನಃ ಕೇಶವನನ್ನು ಪ್ರಶ್ನಿಸಿದನು:

"ಪರಂತಪನೇ! ದೇವದೇವನೇ! ಸುರಶ್ರೇಷ್ಠನೇ! ಮಾಧವನೇ! ಅಮೃತಧಾರೆಗೆ ಸಮಾನವಾದ ಈ ಧರ್ಮಪ್ರವಚನವನ್ನು ಎಷ್ಟು ಕೇಳಿದರೂ ನನಗೆ ತೃಪ್ತಿಯೇ ಆಗುತ್ತಿಲ್ಲ. ಮತ್ತೂ ಕೇಳಬೇಕೆನಿಸುತ್ತದೆ. ನೀನು ಇನ್ನೂ ಯಾವ ಯಾವ ದಾನಗಳ ವಿಷಯವಾಗಿ ಹೇಳಿಲ್ಲವೋ–ಅವುಗಳೆಲ್ಲವನ್ನೂ ಮತ್ತು ಅವುಗಳ ಫಲಗಳನ್ನೂ ಅನುಕ್ರಮವಾಗಿ ಹೇಳುವ ಕೃಪೆಮಾಡು."

ಶ್ರೀಕೃಷ್ಣನು ಹೇಳುತ್ತಾನೆ:

"ಪಾಂಡವನೇ! ಬ್ರಾಹ್ಮಣನನ್ನು ಭಕ್ತಿಯಿಂದಲೂ ವಸ್ತ್ರ, ಮಾಲೆ, ಗಂಧಗಳ ಪ್ರದಾನದಿಂದಲೂ ಸಂಪೂಜಿಸಿ, ನಾನಾಪ್ರಕಾರವಾದ ಅನ್ನಗಳಿಂದ ಭೋಜನವನ್ನು ಮಾಡಿಸಿ, ಹಚ್ಚಡದ ಜೊತೆಯಲ್ಲಿ ಹಾಸಿಗೆಯನ್ನು ದಾನಮಾಡುವವನಿಗೆ ಲಭಿಸುವ ಪುಣ್ಯಫಲವನ್ನು ವಿವರಿಸಿ ಹೇಳುವೆನು; ಕೇಳು. ವಿಧಿವತ್ತಾಗಿ ಗೋದಾನಮಾಡುವುದರಿಂದ ಯಾವ ಪುಣ್ಯಫಲವು ಲಭಿಸುವುದೋ ಶಯ್ಯಾದಾನದಿಂದಲೂ ಅದೇ ಪುಣ್ಯವನ್ನು ಪಡೆದು ಶಯ್ಯಾದಾನಿಯು ಪಿತೃಲೋಕದಲ್ಲಿ ಸರ್ವರಿಂದಲೂ ಪೂಜಿತನಾಗುತ್ತಾನೆ. ಸಾವಿರ ಮಂದಿ ಆಹಿತಾಗ್ನಿಗಳನ್ನು ಸತ್ಕರಿಸಿದರೆ ಯಾವ ಪುಣ್ಯವು ಲಭಿಸುವುದೋ ಅದೇ ಪುಣ್ಯವನ್ನು ಶಯ್ಯಾದಾನಮಾಡಿದವನು ಪಡೆಯುತ್ತಾನೆ.

ಯಾವನು ಬ್ರಾಹ್ಮಣನಿಗೆ ಶಿಲ್ಪ, ವೇದ, ಮಂತ್ರ, ಓಷಧಿ (ಆಯುರ್ವೇದ) ಮುಂತಾದ ವಿದ್ಯೆಗಳನ್ನು ದಾನಮಾಡುವನೋ (ಹೇಳಿಕೊಡುವನೋ) ಅವನಿಗೆ ಲಭಿಸುವ ಪುಣ್ಯಫಲವನ್ನು ಕೇಳು.

ವಿದ್ಯಾದಾನಿಯು ವೇದಮಂತ್ರಗಳ ಪ್ರಭಾವದಿಂದಲೇ ಚಲಿಸುವ ಸುಂದರವಾದ ವಿಮಾನದಲ್ಲಿ ಕುಳಿತು ಸಪ್ತರ್ಷಿಗಳ ಲೋಕಕ್ಕೆ ಹೋಗುತ್ತಾನೆ. ಅಲ್ಲಿ ಬ್ರಹ್ಮವಾದಿಗಳಾದ ಮಹರ್ಷಿಗಳಿಂದ ಪೂಜಿಸಲ್ಪಡುತ್ತಾನೆ. ಆ ಲೋಕದಲ್ಲಿ ಮೂವತ್ತು ಚತುರ್ಯುಗಗಳ ಪರ್ಯಂತವಾಗಿ ದೇವತೆಯಂತೆಯೇ ಕ್ರೀಡಿಸುತ್ತಿದ್ದು ಪುಣ್ಯವು ಕ್ಷೀಣಿಸಿದನಂತರ ಈ ಲೋಕದಲ್ಲಿ ಪುನಃ ವೇದವಿದನಾದ ಬ್ರಾಹ್ಮಣನಾಗಿ ಹುಟ್ಟುತ್ತಾನೆ.

ದಾರಿನಡೆದು ಬಳಲಿರುವ ಬ್ರಾಹ್ಮಣನಿಗೆ ಯಾವನು ವಿಶ್ರಾಂತಿಗೆ ಅನುಕೂಲವನ್ನು ಮಾಡಿಕೊಡುವನೋ–ಅವನು ಒಂದು ವರ್ಷ ಮಾಡಿದ ಪಾಪವನ್ನು ಒಡನೆಯೇ ಕಳೆದುಕೊಳ್ಳುತ್ತಾನೆ. ದಾರಿನಡೆದು ಬಳಲಿ ಬಂದಿರುವ ಅತಿಥಿಯ ಪಾದಗಳನ್ನು ಭಕ್ತಿಪೂರ್ವಕವಾಗಿ ನೀರಿನಿಂದ ತೊಳೆಯಬೇಕು. ಹಾಗೆ ಮಾಡಿದಲ್ಲಿ ಹತ್ತುವರ್ಷ ಮಾಡಿದ ಪಾಪಗಳು ನಾಶವಾಗುತ್ತವೆ. ಅವನ ಪಾದಗಳನ್ನು ತುಪ್ಪದಿಂದಾಗಲೀ ಎಣ್ಣೆಯಿಂದಾಗಲೀ ತಿಕ್ಕಿ ಅನಂತರ ಪೂಜೆಮಾಡಬೇಕು. ಹಾಗೆ ಮಾಡುವುದರಿಂದ ಹನ್ನೆರಡು ವರ್ಷಗಳು ಮಾಡಿದ ಪಾಪಗಳೂ ಒಡನೆಯೇ ನಾಶಹೊಂದುತ್ತವೆ. ಆಗಮಿಸಿದ ಬ್ರಾಹ್ಮಣನನ್ನು ಬಂದೊಡನೆಯೇ ಮೇಲೆದ್ದು ಮುಂದೆ ಹೋಗಿ ಸ್ವಾಗತಿಸಿ ಅರ್ಘ್ಯ-ಪಾದ್ಯ-ಆಸನಾದಿಗಳನ್ನು ಕೊಟ್ಟು ಯಾವನು ಪೂಜಿಸುವನೋ–

ಅವನು ದೇವತೆಗಳಿಗೂ ಪ್ರಿಯನಾಗುತ್ತಾನೆ. ಅತಿಥಿಗಳನ್ನು ಸ್ವಾಗತಿಸುವುದರಿಂದ ಅಗ್ನಿಗಳೂ, ಕುಳಿತುಕೊಳ್ಳಲು ಆಸನವನ್ನು ಕೊಡುವುದರಿಂದ ಇಂದ್ರನೂ, ಅತಿಥಿಯು ಬಂದೊಡನೆಯೇ ಪ್ರತ್ಯುತ್ಥಾನಮಾಡುವುದರಿಂದ ಅತಿಥಿಪ್ರಿಯರಾದ ಪಿತೃಗಳೂ ಪ್ರಸನ್ನರಾಗುತ್ತಾರೆ. ಹೀಗೆ ಅಗ್ನಿ, ಇಂದ್ರ ಮತ್ತು ಪಿತೃಗಳ ಪ್ರಸನ್ನತೆಯಿಂದಾಗಿ ಒಂದು ವರ್ಷಮಾಡಿದ ಪಾಪವು ಒಡನೆಯೇ ವಿನಾಶಹೊಂದುತ್ತದೆ. ಯಾವನು ಬ್ರಾಹ್ಮಣನಿಗೆ ಮಾಲೆಗಳಿಂದ ಸಮಲಂಕೃತವಾದ ಆಸನವನ್ನು ದಾನವಾಗಿ ಕೊಡುವನೋ–ಅವನು ಮಣಿಗಳಿಂದ ಚಿತ್ರಿತವಾದ ರಥದಲ್ಲಿ ಕುಳಿತು ಇಂದ್ರಲೋಕಕ್ಕೆ ಹೋಗುತ್ತಾನೆ. ಅಲ್ಲವನು ಇಂದ್ರನ ಸಿಂಹಾಸನದಲ್ಲಿ ಕುಳಿತು, ದೇವಲೋಕದ ನಾರಿಯರಿಂದ ಸುತ್ತುವರಿಯಲ್ಪಟ್ಟವನಾಗಿ, ಅರುವತ್ತು ಸಾವಿರ ವರ್ಷಗಳಕಾಲ ಅಪ್ಸರೆಯರ ಸಮೂಹದೊಡನೆ ಕ್ರೀಡಿಸುತ್ತಿರುತ್ತಾನೆ. ಬ್ರಾಹ್ಮಣನಿಗೆ ವಾಹನವನ್ನು (ಆಸನ-ಕುದುರೆ ಮುಂತಾದುವುಗಳನ್ನು) ದಾನಮಾಡುವವನು ರತ್ನದಿಂದ ಚಿತ್ರಿತವಾದ ವಾಹನದಲ್ಲಿ ಕುಳಿತು ದೇವಲೋಕಕ್ಕೆ ಹೋಗುತ್ತಾನೆ. ಅಲ್ಲವನು ಅನೇಕವರ್ಷಗಳವರೆಗೆ ಅಪ್ಸರೆಯರ ಸಮೂಹಗಳಿಂದ ಸೇವಿಸಲ್ಪಡುತ್ತಿದ್ದು ಇಚ್ಛಾನುಸಾರವಾಗಿ ಕ್ರೀಡಿಸುತ್ತಾ ಪುಣ್ಯವು ಕ್ಷಯಿಸಿದ ನಂತರ ಪುನಃ ಈ ಲೋಕದಲ್ಲಿ ರಾಜನಾಗಿ ಹುಟ್ಟುತ್ತಾನೆ. ಈ ವಿಷಯವನ್ನು ಪುನಃ ವಿಚಾರಮಾಡಬೇಕಾಗಿಯೇ ಇಲ್ಲ. ಯಾವ ಮನುಷ್ಯನು ಹೂವುಗಳಿಂದಲೂ ಚಿಗುರೆಲೆಗಳಿಂದಲೂ ಫಲಗಳಿಂದಲೂ ಸಮೃದ್ಧವಾಗಿರುವ ವೃಕ್ಷವನ್ನು ವಸ್ತ್ರಾಭರಣಗಳಿಂದ ಅಲಂಕರಿಸಿ, ಗಂಧವನ್ನು ಪೂಸಿ, ಮಾಲೆಯನ್ನು ಹಾಕಿ ಪೂಜಿಸಿ, ಶ್ರೋತ್ರಿಯನಾದ ಬ್ರಾಹ್ಮಣನಿಗೆ ಯಥೇಚ್ಛವಾಗಿ ಭೋಜನಮಾಡಿಸಿ ಆ ವೃಕ್ಷವನ್ನು ದಕ್ಷಿಣೆಯೊಡನೆ ದಾನವಾಗಿ ಕೊಡುವನೋ–ಅವನಿಗೆ ಲಭಿಸುವ ಪುಣ್ಯವೆಷ್ಟೆಂಬುದನ್ನು ಹೇಳುವೆನು; ಕೇಳು: ಅವನು ಸುವರ್ಣಖಚಿತವಾದ ಸುಂದರವಾದ ವಿಮಾನದಲ್ಲಿ ಕುಳಿತು ಜಯ-ಜಯಘೋಷಗಳೊಡನೆ ಇಂದ್ರನ ಪಟ್ಟಣವಾದ ಅಮರಾವತಿಗೆ ಹೋಗುತ್ತಾನೆ. ರಮ್ಯವಾದ ಆ ಸ್ವರ್ಗಲೋಕದಲ್ಲಿರುವ ಕಲ್ಪವೃಕ್ಷವು ಅವನು ಮನಸ್ಸಿನಲ್ಲಿ ಬಯಸಿದ ಸರ್ವಸ್ವವನ್ನೂ ಕೊಡುತ್ತದೆ. ಅವನು ದಾನವಾಗಿ ಕೊಟ್ಟ ವೃಕ್ಷದಲ್ಲಿ ಎಷ್ಟು ಎಲೆಗಳಿರುತ್ತವೆಯೋ, ಎಷ್ಟು ಪುಷ್ಪಗಳಿರುತ್ತವೆಯೋ, ಎಷ್ಟು ಫಲಗಳಿರುತ್ತವೆಯೋ, ಅಷ್ಟು ವರ್ಷಗಳಕಾಲ ದಾನಿಯು ಸ್ವರ್ಗಲೋಕದಲ್ಲಿ ಎಲ್ಲರಿಂದಲೂ ಪೂಜಿಸಲ್ಪಡುತ್ತಿರುತ್ತಾನೆ. ಪುಣ್ಯವು

ಕ್ಷೀಣಿಸಿದನಂತರ ಇಂದ್ರಲೋಕದಿಂದ ಚ್ಯುತನಾಗಿ ಮನುಷ್ಯಲೋಕದಲ್ಲಿ ರಾಜನಾಗಿ ಹುಟ್ಟಿ ರಥಾಶ್ವ-ಗಜಗಳಿಂದ ಭರಿತವಾದ ನಗರವನ್ನೂ ರಾಜ್ಯವನ್ನೂ ರಕ್ಷಿಸುತ್ತಾನೆ. ಯಾವ ಮನುಷ್ಯನು ನನ್ನ ಮೇಲಿನ ಭಕ್ತಿಯಿಂದ ನನಗಾಗಿ ಸುಂದರವಾದ ದೇವಾಲಯವನ್ನು ಕಟ್ಟಿಸಿ, ಅದರಲ್ಲಿ ನನ್ನ ವಿಗ್ರಹವನ್ನು ಪ್ರತಿಷ್ಠಾಪಿಸಿ, ಬೇರೆಯವರಿಂದ ಪೂಜೆಯನ್ನು ಮಾಡಿಸುವನೋ ಅಥವಾ ಭಕ್ತಿಭಾವದಿಂದ ತಾನೇ ಮಾಡುವನೋ–ಅಂತಹವನಿಗೆ ಲಭಿಸುವ ಪುಣ್ಯಫಲವೆಷ್ಟೆಂಬುದನ್ನು ಕೇಳು;. ಯುಧಿಷ್ಠಿರ! ಸಾವಿರ ಅಶ್ವಮೇಧಗಳನ್ನು ಮಾಡುವುದರಿಂದ ಯಾವ ಪುಣ್ಯವು ಲಭಿಸುವುದೋ, ಅದೇ ಪುಣ್ಯವನ್ನೇ ಪಡೆದು ನನ್ನ ಶ್ರೇಷ್ಠವಾದ ಪರಂಧಾಮವನ್ನು ಅವನು ಹೊಂದುತ್ತಾನೆ. ಅಂತಹ ಪರಮಭಕ್ತನು ನನ್ನ ಲೋಕದಿಂದ ಯಾವಾಗ ಹಿಂದಿರುಗುವ ನೆಂಬುದು ನನಗೇ ತಿಳಿಯದಾಗಿದೆ. (ಮೋಕ್ಷವನ್ನೇ ಪಡೆಯುತ್ತಾನೆ.)

ದೇವಾಲಯದಲ್ಲಿ, ಬ್ರಾಹ್ಮಣನ ಮನೆಯಲ್ಲಿ, ಗೋಶಾಲೆಯಲ್ಲಿ, ನಾಲ್ಕು ಬೀದಿಗಳು ಸೇರುವ ಚೌಕಿಯಲ್ಲಿ ದೀಪವನ್ನು ಹೊತ್ತಿಸಿಡುವವನಿಗೆ ಲಭಿಸುವ ಪುಣ್ಯಫಲವನ್ನು ಹೇಳುವೆನು; ಕೇಳು. ಅವನು ಸುವರ್ಣಮಯವಾದ ಯಾನವನ್ನು ಹತ್ತಿ ತನ್ನ ತೇಜಸ್ಸಿನಿಂದ ಎಲ್ಲ ದಿಕ್ಕುಗಳನ್ನೂ ಬೆಳಗುತ್ತಾ ಸುರಶ್ರೇಷ್ಠರಿಂದ ಸಂಸೇವ್ಯಮಾನನಾಗಿ ಸೂರ್ಯಲೋಕಕ್ಕೆ ಹೋಗುತ್ತಾನೆ. ಮಹಾತಪಸ್ವಿಯಾದ ಅವನು ಕೋಟಿ ವರ್ಷಗಳವರೆಗೆ ಆದಿತ್ಯಲೋಕದಲ್ಲಿ ಸ್ವೇಚ್ಛೆಯಿಂದ ಕ್ರೀಡಿಸುತ್ತಿದ್ದು ಪುಣ್ಯವು ಕ್ಷಯಹೊಂದಿದನಂತರ ಚ್ಯುತನಾಗಿ ಭೂಲೋಕದಲ್ಲಿ ವೇದ-ವೇದಾಂಗಪಾರಂಗತನಾಗಿ ಹುಟ್ಟುತ್ತಾನೆ.

ಯುಧಿಷ್ಠಿರ! ಕಮಂಡಲುವನ್ನಾಗಲೀ, ಗಿಂಡಿಯನ್ನಾಲೀ, ದೊಡ್ಡ ಜಲಪಾತ್ರೆಯನ್ನಾಗಲೀ ಬ್ರಾಹ್ಮಣನಿಗೆ ದಾನಮಾಡುವವನಿಗೆ ಲಭಿಸುವ ಪುಣ್ಯಫಲವನ್ನು ಕೇಳು: ಪಂಚಗವ್ಯಪ್ರಾಶನಮಾಡುವುದರಿಂದ ಯಾವ ಪುಣ್ಯವು ಲಭಿಸುವುದೋ ಅದೇ ಪುಣ್ಯವು ಜಲಪಾತ್ರೆಯನ್ನು ದಾನಮಾಡು ವವನಿಗೆ ಲಭಿಸುತ್ತದೆ. ಅದರ ಫಲದಿಂದಾಗಿ ಜಲದಾನಿಯು ಸದಾ ತೃಪ್ತನಾಗಿರುತ್ತಾನೆ. ಅವನ ಸರ್ವಾಂಗಗಳಲ್ಲಿಯೂ ಸುಗಂಧವು ಹೊರ ಸೂಸುತ್ತಿರುತ್ತದೆ. ಸಂತುಷ್ಟವಾದ ಇಂದ್ರಿಯ ಮತ್ತು ಮನಸ್ಸುಗಳುಳ್ಳವ ನಾಗುತ್ತಾನೆ. ಹಂಸ-ಸಾರಸಪಕ್ಷಿಗಳಿಂದ ಯುಕ್ತವಾದ ಸುಂದರವಾದ

ವಿಮಾನದಲ್ಲಿ ಕುಳಿತು ದೇವಲೋಕದ ಗಂಧರ್ವರಿಂದ ಸೇವಿಸಲ್ಪಡುತ್ತಿರುವ ವರುಣನ ಲೋಕಕ್ಕೆ ಹೋಗುತ್ತಾನೆ. ಜೀವಿಗಳಿಗೆ ಜೀವನಭೂತವಾದ ನೀರನ್ನು ಬೇಸಿಗೆಯ ಮೂರು ಮಾಸಗಳಲ್ಲಿ ದಾನಮಾಡುವವನಿಗೆ ಲಭಿಸುವ ಪುಣ್ಯಫಲವನ್ನು ಕೇಳು. ಜಲದಾನಿಯು ಪೂರ್ಣಚಂದ್ರನ ಪ್ರಕಾಶದಂತೆ ಪ್ರಕಾಶಯುಕ್ತವಾದ ಸುಂದರವಾದ ವಿಮಾನದಲ್ಲಿ ಕುಳಿತು ಅಪ್ಸರೆಯರಿಂದ ಸೇವಿಸಲ್ಪಡುತ್ತಾ ಇಂದ್ರಲೋಕಕ್ಕೆ ಹೋಗುತ್ತಾನೆ. ಅಭ್ಯಂಜನಮಾಡಿಕೊಳ್ಳಲು ಬ್ರಾಹ್ಮಣನಿಗೆ ಎಣ್ಣೆಯನ್ನು ದಾನಮಾಡುವವನು ಮರುಹುಟ್ಟಿನಲ್ಲಿ ತೇಜಸ್ವಿಯೂ, ದರ್ಶನೀಯನೂ, ಸುಂದರನೂ, ರೂಪವಂತನೂ, ಸೌಭಾಗ್ಯ ಶಾಲಿಯೂ, ಶೂರನೂ, ಪಂಡಿತನೂ ಆದ ಬ್ರಾಹ್ಮಣನಾಗುತ್ತಾನೆ. ವಸ್ತ್ರದಾನ ಮಾಡಿದವನು ಮರುಹುಟ್ಟಿನಲ್ಲಿ ತೇಜಸ್ವಿಯೂ, ಸರ್ವತ್ರಪ್ರಿಯದರ್ಶನನೂ, ಸೌಭಾಗ್ಯಶಾಲಿಯೂ, ಶ್ರೀಮಂತನೂ, ಸ್ತ್ರೀಯರಿಗೆ ಮನೋಹರನೂ ಆಗುತ್ತಾನೆ. ಪಾದರಕ್ಷೆಗಳನ್ನೂ, ಛತ್ರವನ್ನೂ ದಾನವಾಗಿ ಕೊಡುವ ನರಶ್ರೇಷ್ಠನು ಸುವರ್ಣಮಯವಾದ, ಸುಂದರವಾದ, ಶ್ರೇಷ್ಠವಾದ ರಥದಲ್ಲಿ ಕುಳಿತು, ಮಹಾತೇಜೋವಂತನಾಗಿ ಅಪ್ಸರೆಯರ ಸಮೂಹಗಳಿಂದ ಸೇವಿಸಲ್ಪಡುತ್ತಾ ಇಂದ್ರಲೋಕಕ್ಕೆ ಹೋಗುತ್ತಾನೆ. ಮರದ ಪಾದುಕೆಗಳನ್ನು ದಾನಮಾಡುವವರು ಮರದಿಂದ ಮಾಡಿದ ವಿಮಾನದಲ್ಲಿ ಕುಳಿತು ಸುರಶ್ರೇಷ್ಠರಿಂದ ಸೇವಿಸಲ್ಪಡುತ್ತಾ ರಮ್ಯವಾದ ಧರ್ಮರಾಜನ ಪಟ್ಟಣಕ್ಕೆ ಹೋಗುತ್ತಾರೆ.

ಹಲ್ಲುಜ್ಜುವ ಕಡ್ಡಿಯನ್ನು ದಾನವಾಗಿ ಕೊಡುವವನು ಪ್ರಿಯವಾದ ಮಾತುಗಳನ್ನಾಡುವವನೂ, ಸುಗಂಧವನ್ನು ಸೂಸುವ ಮುಖವುಳ್ಳವನೂ, ಶ್ರೀಮಂತನೂ, ಮೇಧಾವಂತನೂ, ಸೌಭಾಗ್ಯಶಾಲಿಯೂ ಆಗುತ್ತಾನೆ. ಯಾವ ಮನುಷ್ಯನು ಅತಿಥಿಗಳನ್ನು ಸತ್ಕರಿಸಿದನಂತರ ಮತ್ತು ಕುಟುಂಬ ವರ್ಗದವರು ಭೋಜನಮಾಡಿದನಂತರ ಊಟಮಾಡುವನೋ, ಸದಾ ವ್ರತನಿಷ್ಠನಾಗಿರುವನೋ–ಸತ್ಯವಾಕ್ಯನೂ, ಕ್ರೋಧರಹಿತನೂ ಆಗಿ ಸ್ನಾನಾದಿಗಳ ಮೂಲಕ ಸರ್ವದಾ ಶುಚಿಯಾಗಿಯೇ ಇರುವನೋ– ಅಂತಹ ವನು ದಿವ್ಯವಾದ ವಿಮಾನದ ಮೂಲಕವಾಗಿ ಇಂದ್ರಲೋಕಕ್ಕೆ ಹೋಗುತ್ತಾನೆ. ವರ್ಷಪರ್ಯಂತವಾಗಿ ದಿನಕ್ಕೆ ಒಂದು ಬಾರಿ ಊಟಮಾಡುತ್ತಾ

ಬ್ರಹ್ಮಚಾರಿಯಾದ, ಕ್ರೋಧವನ್ನು ಜಯಿಸಿರುವ, ಸತ್ಯನಿಷ್ಠನಾದ, ಸದಾಚಾರಿಯಾದ ಪುರುಷನು ದಿವ್ಯವಾದ ವಿಮಾನದಲ್ಲಿ ಕುಳಿತು ಇಂದ್ರಲೋಕಕ್ಕೆ ಹೋಗುತ್ತಾನೆ. ನಾಲ್ಕು ಹೊತ್ತುಗಳಿಗೊಮ್ಮೆ ಊಟಮಾಡುತ್ತಾ ವರ್ಷವನ್ನು ಕಳೆಯುವ, ಬ್ರಹ್ಮಚಾರಿಯಾದ, ಜಿತೇಂದ್ರಿಯನಾದ ಪುರುಷನಿಗೆ ಲಭಿಸುವ ಪುಣ್ಯಫಲವನ್ನು ಕೇಳು: ಅಂತಹ ಪುರುಷನು ವಿಚಿತ್ರವಾದ ರೆಕ್ಕೆಗಳನ್ನು ಹೊಂದಿರುವ ನವಿಲುಗಳಿಂದ ಯುಕ್ತವಾದ, ವಿಚಿತ್ರವಾದ ಧ್ವಜದಿಂದ ಶೋಭಾಯಮಾನವಾಗಿ ಕಾಣುವ, ದಿವ್ಯವಾದ ಯಾನದ ಮೂಲಕವಾಗಿ ಮಹೇಂದ್ರಲೋಕಕ್ಕೆ ಹೋಗುತ್ತಾನೆ. ಯಾವ ಮನುಷ್ಯನು ಪವಿತ್ರನಾಗಿ ನನ್ನಲ್ಲಿಯೇ ನೆಟ್ಟಮನಸ್ಸುಳ್ಳವನಾಗಿ, ನನ್ನ ಶ್ರೀವಿಗ್ರಹದಲ್ಲಿಯೇ ಮನಸ್ಸನ್ನು ಲೀನಗೊಳಿಸುವನೋ–ಅಂತಹ ಮಹಾತಪಸ್ವಿಯು ಸಿದ್ಧರಿಂದಲೂ, ಬ್ರಹ್ಮರ್ಷಿಗಳಿಂದಲೂ, ದೇವತೆಗಳಿಂದಲೂ ಪೂಜಿಸಲ್ಪಡುತ್ತಾ, ಗಂಧರ್ವರ ಸಮೂಹಗಳಿಂದಲೂ ಭೂತಗಣಗಳಿಂದಲೂ ಗಾನಮಾಡಲ್ಪಡುತ್ತಾ, ನನ್ನನ್ನಾಗಲೀ ಶಂಕರನನ್ನಾಗಲೀ ಪ್ರವೇಶಿಸುತ್ತಾನೆ. ಅಂತಹವನಿಗೆ ಪುನರ್ಜನ್ಮವೇ ಇಲ್ಲ. ಈ ವಿಷಯವನ್ನು ಪುನಃ ವಿಚಾರಿಸಬೇಕಾದ ಪ್ರಮೇಯವೇ ಇಲ್ಲ.

ಗೋವಿನ ಸಲುವಾಗಿ, ಹೆಂಗಸಿನ ಸಲುವಾಗಿ, ಗುರುವಿನ ಸಲುವಾಗಿ ಮತ್ತು ಬ್ರಾಹ್ಮಣನ ಸಲುವಾಗಿ ಪ್ರಾಣವನ್ನು ತೊರೆಯುವವರು ಇಂದ್ರಲೋಕಕ್ಕೆ ಹೋಗುತ್ತಾರೆ. ಅಲ್ಲವರು ಒಂದು ಮನ್ವಂತರದವರೆಗೆ ಇಚ್ಛಾನುಸಾರವಾಗಿ ಸಂಚರಿಸುವ ಸುವರ್ಣಮಯವಾದ ವಿಮಾನದಲ್ಲಿ ಕುಳಿತು ದಿವ್ಯನಾರಿಯರಿಂದ ಸೇವಿಸಲ್ಪಡುತ್ತಾ ಆಮೋದ-ಪ್ರಮೋದಗಳಿಂದಿರುತ್ತಾರೆ. ದಾನಕೊಡುವೆನೆಂದು ಹೇಳಿ ಕೊಡದೇ ಇದ್ದರೂ-ಕೊಟ್ಟುದನ್ನು ಅಪಹರಿಸಿದರೂ ಹುಟ್ಟಿದ ಮೊದಲ್ಗೊಂಡು ಮಾಡಿದ ದಾನಗಳೆಲ್ಲವೂ ನಿಷ್ಫಲವಾಗುತ್ತವೆ. ತನಗೆ ಯಾವುದು ಹೆಚ್ಚು ಇಷ್ಟವಾಗುವುದೋ, ಯಾವ ವಸ್ತುವೂ ನ್ಯಾಯವಾದ ರೀತಿಯಲ್ಲಿ ಸಂಪಾದಿಸಲ್ಪಟ್ಟಿದೆಯೋ ಅಂತಹ ವಸ್ತುವನ್ನು ಗುಣವಂತನಾದ ಮನುಷ್ಯನಿಗೆ ದಾನಮಾಡಬೇಕು. ಅದರಿಂದ ಅವನು ಅಕ್ಷಯವಾದ ಫಲವನ್ನು ಪಡೆದುಕೊಳ್ಳುತ್ತಾನೆ."

———

ವೈಷ್ಣವಧರ್ಮ-೯
ಪಂಚಮಹಾಯಜ್ಞಗಳು, ವಿಧಿವತ್ತಾದ ಸ್ನಾನ, ಸ್ನಾನಾಂಗಭೂತವಾದ ಕರ್ಮಗಳು, ಭಗವಂತನಿಗೆ ಪ್ರಿಯವಾದ ಪುಷ್ಪಗಳು ಮತ್ತು ಭಗವದ್ಭಕ್ತರು-ಇವುಗಳ ವರ್ಣನೆ

ಯುಧಿಷ್ಠಿರನು ಹೇಳುತ್ತಾನೆ:

"ದೇವೇಶನೇ! ಕೃಷ್ಣ! ಪಂಚಮಹಾಯಜ್ಞಗಳನ್ನು ಬ್ರಾಹ್ಮಣರು ಹೇಗೆ ಮಾಡುತ್ತಾರೆ? ಅವುಗಳ ನಾಮಧೇಯಗಳನ್ನು ಸಂಪೂರ್ಣವಾಗಿ ಹೇಳುವ ಕೃಪೆಮಾಡು."

ಶ್ರೀಕೃಷ್ಣನು ಹೇಳುತ್ತಾನೆ:

"ಯುಧಿಷ್ಠಿರ! ನಾನು ಹೇಳಲಿರುವ ಪಂಚಮಹಾಯಜ್ಞಗಳ ಸ್ವರೂಪವನ್ನು ಕೇಳು. ಅವುಗಳನ್ನು ಅನುಷ್ಠಾನಮಾಡುವುದರಿಂದಲೇ ಗೃಹಸ್ಥನು ಬ್ರಹ್ಮಲೋಕವನ್ನು ಹೊಂದುತ್ತಾನೆ. ಋಭುಯಜ್ಞ, ಬ್ರಹ್ಮಯಜ್ಞ, ಭೂತಯಜ್ಞ, ಮನುಷ್ಯಯಜ್ಞ ಮತ್ತು ಪಿತೃಯಜ್ಞ–ಇವನ್ನು ಪಂಚಮಹಾಯಜ್ಞಗಳೆಂದು ಹೇಳುತ್ತಾರೆ.

ತರ್ಪಣಂ ಋಭುಯಜ್ಞಃ ಸ್ಯಾತ್ಸ್ವಾಧ್ಯಾಯೋ ಬ್ರಹ್ಮಯಜ್ಞಕಃ ।
ಭೂತಯಜ್ಞೋ ಬಲಿರ್ಯಜ್ಞೋ ನೃಯಜ್ಞೋಽತಿಥಿಪೂಜನಮ್ ।
ಪಿತೄನುದ್ದಿಶ್ಯ ಯತ್ಕರ್ಮ ಪಿತೃಯಜ್ಞಃ ಪ್ರಕೀರ್ತಿತಃ ॥೫೪೭॥

ತರ್ಪಣಕ್ಕೆ ಋಭುಯಜ್ಞವೆನ್ನುತ್ತಾರೆ. ಸ್ವಾಧ್ಯಾಯಕ್ಕೆ ಬ್ರಹ್ಮಯಜ್ಞವೆಂದು ಹೆಸರು. ಸಮಸ್ತಪ್ರಾಣಿಗಳಿಗೂ ಬಲಿಕೊಡುವುದಕ್ಕೆ ಭೂತಯಜ್ಞವೆಂದು ಹೆಸರು. ಅತಿಥಿಸತ್ಕಾರವು ಮನುಷ್ಯಯಜ್ಞ. ಪಿತೃಗಳನ್ನುದ್ದೇಶಿಸಿ ಶ್ರಾದ್ಧಾದಿಕರ್ಮಗಳನ್ನು ಮಾಡುವುದಕ್ಕೆ ಪಿತೃಯಜ್ಞವೆಂದು ಹೆಸರು. ಹುತ, ಅಹುತ, ಪ್ರಹುತ, ಪ್ರಾಶಿತ ಮತ್ತು ಬಲಿದಾನ–ಇವನ್ನು ಪಾಕಯಜ್ಞಗಳೆಂದು ಹೇಳುತ್ತಾರೆ.

ವೈಶ್ವದೇವಾದಯೋ ಹೋಮಾ ಹುತಮಿತ್ಯುಚ್ಯತೇ ಬುಧೈಃ।
ಅಹುತಂ ಚ ಭವೇದ್ದತ್ತಂ ಪ್ರಹುತಂ ಬ್ರಾಹ್ಮಣಾಶಿತಮ್ ॥೫೪೯॥

ವೈಶ್ವದೇವಾದಿ ಕರ್ಮಗಳ ಮೂಲಕವಾಗಿ ದೇವತೆಗಳನ್ನುದ್ದೇಶಿಸಿ ಮಾಡುವ ಹೋಮವನ್ನು ವಿದ್ವಾಂಸರು 'ಹುತ'-ಎಂದು ಕರೆಯುತ್ತಾರೆ. ದಾನಕೊಟ್ಟ ವಸ್ತುವಿಗೆ ಅಹುತವೆಂದು ಹೆಸರು. ಬ್ರಾಹ್ಮಣರಿಗೆ ಭೋಜನಮಾಡಿಸುವುದಕ್ಕೆ ಪ್ರಹುತವೆಂದು ಹೆಸರು.

ಪ್ರಾಣಾಗ್ನಿಹೋತ್ರಹೋತ್ರಂ ಚ ಪ್ರಾಶಿತಂ ವಿಧಿವದ್ವಿದುಃ।
ಬಲಿಕರ್ಮ ಚ ರಾಜೇನ್ದ್ರ ಪಾಕಯಜ್ಞಾಃ ಪ್ರಕೀರ್ತಿತಾಃ ॥೫೫೦॥

ಪ್ರಾಣಾಗ್ನಿಹೋತ್ರದ ವಿಧಿಯಿಂದ ಪ್ರಾಣಗಳಿಗೆ ಐದು ಗ್ರಾಸಗಳನ್ನು ಅರ್ಪಿಸುವುದಕ್ಕೆ ಪ್ರಾಶಿತವೆಂದು ಹೆಸರು. ಹಸುವೇ ಮುಂತಾದ ಪ್ರಾಣಿಗಳ ತೃಪ್ತಿಗಾಗಿ ಅನ್ನಬಲಿಯನ್ನು ಕೊಡುವುದಕ್ಕೆ ಬಲಿದಾನವೆಂದು ಹೆಸರು. ಈ ಐದು ಯಜ್ಞಗಳು ಪಂಚಪಾಕಯಜ್ಞಗಳೆಂದು ಹೇಳಲ್ಪಟ್ಟಿವೆ. ಕೆಲವು ವಿದ್ವಾಂಸರು ಬ್ರಹ್ಮಯಜ್ಞಾದಿಗಳನ್ನು ಪಾಕಯಜ್ಞಗಳೆಂದು ಹೇಳುತ್ತಾರೆ. ಮಹಾಯಜ್ಞಗಳ ಸ್ವರೂಪವನ್ನು ತಿಳಿದಿರುವ ಇತರ ವಿದ್ವಾಂಸರು ಬ್ರಹ್ಮಯಜ್ಞವೇ ಮೊದಲಾದುವುಗಳಿಗೆ ಪಂಚಮಹಾಯಜ್ಞಗಳೆಂದು ಹೇಳುತ್ತಾರೆ. ಇವೆಲ್ಲವೂ ಮಹಾಯಜ್ಞಗಳೆಂದೇ ಸರ್ವಪ್ರಕಾರಗಳಿಂದಲೂ ಹೇಳಲ್ಪಟ್ಟಿವೆ. ಹಸಿದು ಬಂದ ಬ್ರಾಹ್ಮಣರನ್ನು ಸಾಧ್ಯವಾದಮಟ್ಟಿಗೂ ತಪ್ತಿಪಡಿಸಬೇಕೇ ಹೊರತು ನಿರಾಶರನ್ನಾಗಿ ಮಾಡಿ ಹಿಂದಕ್ಕೆ ಕಳುಹಿಸಬಾರದು.

ಆದುದರಿಂದ ವಿದ್ವಾಂಸನಾದ ಬ್ರಾಹ್ಮಣನು ಪ್ರತಿನಿತ್ಯವೂ ಸ್ನಾನಮಾಡಿ ಈ ಮಹಾಯಜ್ಞಗಳ ಅನುಷ್ಠಾನವನ್ನು ಮಾಡಬೇಕು. ಈ ಮಹಾಯಜ್ಞಗಳನ್ನು ಆಚರಿಸದೆಯೇ ಊಟಮಾಡುವ ಬ್ರಾಹ್ಮಣನು ದೋಷನಿವಾರಣೆಗಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕಾಗುತ್ತದೆ."

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

"ದೇವದೇವೇಶನೇ! ದೈತ್ಯಹಂತಕನೇ! ನಿನ್ನ ಭಕ್ತನಾದ ನನಗೆ ಸ್ನಾನದ ವಿಧಿಯನ್ನು ಹೇಳುವ ಕೃಪೆಮಾಡು."

ಶ್ರೀಕೃಷ್ಣನು ಹೇಳುತ್ತಾನೆ:

“ಯುಧಿಷ್ಠಿರ! ಯಾವ ವಿಧಾನದಿಂದ ಬ್ರಾಹ್ಮಣರು ಸ್ನಾನಮಾಡಿದರೆ ಸರ್ವಪಾಪಗಳಿಂದಲೂ ಬಿಡುಗಡೆಹೊಂದುವರೋ–ಅಂತಹ ಪರಮ ಪವಿತ್ರವೂ ಪಾಪನಾಶಕವೂ ಆದ ಸ್ನಾನದ ವಿಧಿಯನ್ನು ಸಮಗ್ರವಾಗಿ ಹೇಳುವೆನು; ಕೇಳು:

ಮೃದಂ ಚ ಗೋಮಯಂ ಚೈವ ತಿಲಂ ದರ್ಭಾಸ್ತಥೈವ ಚ।
ಪುಷ್ಪಾಣ್ಯಪಿ ಯಥಾನ್ಯಾಯಮಾದಾಯ ತು ಜಲಂ ವ್ರಜೇತ್ ॥೫೫೬॥

ಮೃತ್ತಿಕೆ, ಸಗಣಿ, ಎಳ್ಳು, ದರ್ಭೆ, ಪುಷ್ಪಗಳು–ಇವೇ ಮುಂತಾದ ಶಾಸ್ತ್ರೋಕ್ತವಾದ ವಸ್ತುಗಳನ್ನು ತೆಗೆದುಕೊಂಡು ನೀರಿನ ಬಳಿಗೆ ಹೋಗಬೇಕು.

ನದ್ಯಾಂ ಸ್ನಾತ್ವಾ ನ ಚ ಸ್ನಾಯಾದನ್ಯತ್ರ ದ್ವಿಜಸತ್ತಮಃ।
ಸತಿ ಪ್ರಭೂತೇ ಪಯಸಿ ನಾಲ್ಪೇ ಸ್ನಾಯಾತ್ಕದಾಚನ ॥೫೫೭॥

ದ್ವಿಜಶ್ರೇಷ್ಠನು ನದಿಯಲ್ಲಿ ಸ್ನಾನಮಾಡಿದನಂತರ ಬೇರೆಲ್ಲೂ ಸ್ನಾನಮಾಡಬಾರದು. ಅಪಾರವಾದ ನೀರಿನಿಂದ ತುಂಬಿರುವ ಜಲಾಶಯವಿರುವಾಗ ಅಲ್ಪಜಲವಿರುವ ಹಳ್ಳದಲ್ಲಿ ಸ್ನಾನಮಾಡಬಾರದು.

ಗತ್ವೋದಕಸಮೀಪಂ ತು ಶುಚೌ ದೇಶೇ ಮನೋರಮೇ।
ತತೋ ಮೃದ್ಗೋಮಯಾದೀನಿ ತತ್ರ ವಿಪ್ರೋ ವಿನಿಕ್ಷಿಪೇತ್ ॥೫೫೮॥

ಬ್ರಾಹ್ಮಣನು ನದಿಯ ಅಥವಾ ಜಲಾಶಯದ ಬಳಿಗೆ ಹೋಗಿ ಶುದ್ಧವಾದ ಮತ್ತು ಮನೋಹರವಾದ ಸ್ಥಳದಲ್ಲಿ ಮಣ್ಣು-ಸಗಣಿ ಮುಂತಾದುವುಗಳನ್ನಿಡಬೇಕು.

ಬಹಿಃಪ್ರಕ್ಷಾಲ್ಯ ಪಾದೌ ಚ ದ್ವಿರಾಚಮ್ಯ ಪ್ರಯತ್ನತಃ ।
ಪ್ರದಕ್ಷಿಣಂ ಸಮಾವೃತ್ಯ ನಮಸ್ಕುರ್ಯಾತ್ತು ತಜ್ಜಲಮ್ ॥೫೫೯॥

ಪಾತ್ರೆಗಳನ್ನು ತುಂಬಿಕೊಂಡು ಜಲಾಶಯದ ಹೊರಗಡೆಯೇ ಎರಡು ಕಾಲುಗಳನ್ನೂ ತೊಳೆದುಕೊಳ್ಳಬೇಕು. ಅನಂತರ ಎರಡುಬಾರಿ ಆಚಮನಮಾಡಬೇಕು. ಬಳಿಕ ಜಲಾಶಯಕ್ಕೆ ಪ್ರದಕ್ಷಿಣ-ನಮಸ್ಕಾರಗಳನ್ನು ಮಾಡಬೇಕು.

ಸರ್ವದೇವಮಯಾ ಹ್ಯಾಪೋ ಮನ್ಮಯಾಃ ಪಾಂಡುನನ್ದನ।
ತಸ್ಮಾತ್ತಾಸ್ತು ನ ಹನ್ತವ್ಯಾಸ್ತ್ವದ್ಭಿಃ ಪ್ರಕ್ಷಾಲಯೇತ್ಸ್ಥಲಮ್ ॥೫೬೦॥

ನೀರು ಸರ್ವದೇವತೆಗಳ ಮತ್ತು ನನ್ನ ಸ್ವರೂಪವೂ ಆಗಿದೆ. ಆದುದರಿಂದ ನೀರನ್ನು ಬಡಿಯಬಾರದು. (ಹೊಲಸುಮಾಡಬಾರದು.) ತೀರಪ್ರದೇಶದಲ್ಲಿ ಸ್ಥಳವೊಂದನ್ನು ಆರಿಸಿಕೊಂಡು ಜಲಾಶಯದ ನೀರಿನಿಂದ ಆ ಸ್ಥಳವನ್ನು ಶುದ್ಧಿಗೊಳಿಸಬೇಕು.

ಕೇವಲಂ ಪ್ರಥಮಂ ಮಜ್ಜೇನ್ನಾಙ್ಗಾನಿ ವಿಮೃಜೇದ್ಬುಧಃ।
ತತ್ತು ತೀರ್ಥಂ ಸಮಾಸಾದ್ಯ ಕುರ್ಯಾದಾಚಮನಂ ಪುನಃ ॥೫೬೧॥

ವಿದ್ವಾಂಸನಾದವನು ಮೊದಲು ನೀರಿನಲ್ಲಿ ಮುಳುಗಬೇಕು. ಮೈ-ಕೈಯನ್ನು ಉಜ್ಜಿಕೊಳ್ಳಬಾರದು. ಬಳಿಕ ಪುನಃ ಆಚಮನಮಾಡಬೇಕು.

ಗೋಕರ್ಣಾಕೃತಿವತ್ಕೃತ್ವಾ ಕರಂ ತ್ರಿಃ ಪ್ರಪಿಬೇಜ್ಜಲಮ್।
ದ್ವಿಸ್ತತ್ಪರಿಮೃಜೇದ್ವಕ್ತ್ರಂ ಪಾದಾವಭ್ಯುಕ್ಷ್ಯ ಚಾತ್ಮನಃ।
ಶೀರ್ಷಣ್ಯಂ ತು ತತಃ ಪ್ರಾಣಾನ್ಸಕೃದೇವ ತು ಸಂಸ್ಪೃಶೇತ್ ॥೫೬೨॥

ಹಸ್ತವನ್ನು ಹಸುವಿನ ಕಿವಿಯ ರೂಪದಲ್ಲಿಟ್ಟುಕೊಂಡು ಅದರಿಂದ ಮೂರುಬಾರಿ ನೀರನ್ನು ಕುಡಿಯಬೇಕು. ಅನಂತರ ನೀರಿನಿಂದ ಕೂಡಿದ ಕೈಯಿಂದ ಮುಖವನ್ನು ಎರಡು ಬಾರಿ ಸ್ಪರ್ಶಿಸಬೇಕು. ಎರಡು ಪಾದಗಳಮೇಲೂ ಸ್ವಲ್ಪನೀರನ್ನು ಬಿಟ್ಟುಕೊಳ್ಳಬೇಕು. ಬಳಿಕ ಕಂಠದ ಮೇಲ್ಭಾಗದಲ್ಲಿರುವ ಕಿವಿಗಳನ್ನೂ, ಕಣ್ಣುಗಳನ್ನೂ, ಮೂಗನ್ನೂ, ಬಾಯನ್ನೂ, ಪ್ರಾಣಗಳನ್ನೂ (ಪ್ರಾಣಗಳಿರುವ ಸ್ಥಾನಗಳನ್ನೂ) ಒಂದೊಂದು ಬಾರಿ ನೀರಿನಿಂದ ಒದ್ದೆಯಾದ ಕೈಯಿಂದ ಸ್ಪರ್ಶಿಸಬೇಕು.

ಬಾಹೂ ದ್ವೌ ಚ ತತಃ ಸ್ಪೃಷ್ಟ್ವಾ ಹೃದಯಂ ನಾಭಿಮೇವ ಚ ।
ಪ್ರತ್ಯಙ್ಗಮುದಕಂ ಸ್ಪೃಷ್ಟ್ವಾ ಮೂರ್ಧಾನಂ ತು ಪುನಃ ಸ್ಪೃಶೇತ್ ॥

ಎರಡು ಭುಜಗಳನ್ನೂ ಸ್ಪರ್ಶಿಸಿ ಹೃದಯವನ್ನೂ ನಾಭಿಯನ್ನೂ ಸ್ಪರ್ಶಿಸಬೇಕು. ಹೀಗೆ ಎಲ್ಲಾ ಅಂಗಗಳನ್ನೂ ಒದ್ದೆಯಾದ ಕೈಯಿಂದ ಸ್ಪರ್ಶಿಸಿ ಪುನಃ ತಲೆಯನ್ನು ಸ್ಪರ್ಶಿಸಬೇಕು. (ಇದಕ್ಕೆ ಆಚಮನವೆಂದು ಹೆಸರು.)

ಆಪಃ ಪುನನ್ತ್ವಿತ್ಯುಕ್ತ್ವಾ ಚ ಪುನರಾಚಮನಂ ಚರೇತ್।
ಸೋಙ್ಕಾರವ್ಯಾಹೃತೀರ್ವಾಪಿ ಸದಸಸ್ಪತಿಮಿತ್ಯೃಚಮ್ ॥೫೬೪॥

ಬಳಿಕ [೧]ಆಪಃ ಪುನನ್ತು ಎಂಬ ಮಂತ್ರವನ್ನು ಹೇಳಿ [೨]ಓಂಕಾರಸಹಿತವಾದ ವ್ಯಾಹೃತಿಗಳನ್ನಾಗಲೀ ಅಥವಾ [೩]ಸದಸಸ್ಪತಿಮದ್ಭುತಂ ಎಂಬ ಮಂತ್ರವನ್ನಾಗಲೀ ಹೇಳಿ ಆಚಮನಮಾಡಬೇಕು.

ಆಚಮ್ಯ ಮೃತ್ತಿಕಾಃ ಪಶ್ಚಾತ್ತ್ರಿಧಾ ಕೃತ್ವಾ ಸಮಾಲಭೇತ್।
ಋಚೇದಂ ವಿಷ್ಣುರಿತ್ಯಙ್ಗಮುತ್ತಮಾಧಮಮಧ್ಯಮಮ್।
ಆಲಭ್ಯ ವಾರುಣೈಃ ಸೂಕ್ತೈರ್ನಮಸ್ಕೃತ್ಯ ಜಲಂ ತತಃ ॥೫೬೫॥

ಆಚಮನಮಾಡಿದನಂತರ ಮೃತ್ತಿಕೆಯನ್ನು ತೆಗೆದುಕೊಂಡು ಮೂರುಭಾಗಮಾಡಿ [೪]‘ಇದಂ ವಿಷ್ಣುಃ’ ಎಂಬ ಮಂತ್ರವನ್ನು ಹೇಳುತ್ತಾ ಮೃತ್ತಿಕೆಯ ಮೊದಲನೆಯ ಭಾಗವನ್ನು ಶರೀರದ ಮೇಲ್ಭಾಗಕ್ಕೂ ಎರಡನೆಯ ಭಾಗವನ್ನು ಮಧ್ಯಭಾಗಕ್ಕೂ ಮೂರನೆಯ ಭಾಗವನ್ನು ಕೆಳಭಾಗಕ್ಕೂ ಸ್ಪರ್ಶಿಸಿಕೊಂಡು ವರುಣಸೂಕ್ತಗಳನ್ನು ಹೇಳುತ್ತಾ ನೀರಿಗೆ ನಮಸ್ಕರಿಸಿ ನೀರಿಗಿಳಿಯಬೇಕು.

ಸ್ರವನ್ತೀ ಚೇತ್ಪ್ರತಿಸ್ರೋತೇ ಪ್ರತ್ಯರ್ಕಂ ಚಾನ್ಯವಾರಿಷು।
ಮಜ್ಜೇದೋಮಿತ್ಯುದಾಹೃತ್ಯ ನ ಚ ವಿಕ್ಷೋಭಯೇಜ್ಜಲಮ್ ॥೫೬೬॥

ಹರಿಯುವ ನೀರಾಗಿದ್ದರೆ (ನದಿಯಾಗಿದ್ದರೆ) ಪ್ರವಾಹಕ್ಕೆ ಎದುರಾಗಿ ನಿಂತು ಮುಳುಗಬೇಕು. ನಿಂತಿರುವ ನೀರಾಗಿದ್ದರೆ ಸೂರ್ಯನಿಗೆ ಅಭಿಮುಖ

---

[೧]ಓಂ ಆಪಃ ಪುನನ್ತು ಪೃಥಿವೀಂ ಪೃಥಿವೀ ಪೂತಾ ಪುನಾತು ಮಾಮ್ ।ಪುನನ್ತು ಬ್ರಹ್ಮಣಸ್ಪತಿರ್ಬ್ರಹ್ಮಪೂತಾ ಪುನಾತು ಮಾಮ್ । ಯದುಚ್ಛಿಷ್ಟಮಭೋಜ್ಯಂ ಯದ್ವಾ ದುಶ್ಚರಿತಂ ಮಮ । ಸರ್ವಂ ಪುನನ್ತು ಮಾಮಾಪೋಽಸತಾಂ ಚ ಪ್ರತಿಗ್ರಹಗ್ಂ ಸ್ವಾಹಾ ॥

[೨]ಓಂ ಭೂರ್ಭುವಃ ಸುವಃ ।

[೩]ಸದಸಸ್ಪತಿಮದ್ಭುತಂ ಪ್ರಿಯಮಿನ್ದ್ರಸ್ಯ ಕಾಮ್ಯಮ್। ಸನಿಮ್ಮೇಧಾಮಯಾಸಿಷಮ್ ॥

[೪]ಓಂ ಇದಂ ವಿಷ್ಣುರ್ವಿಚಕ್ರಮೇ ತ್ರೇಧಾ ನಿದಧೇ ಪದಮ್ । ಸಮೂಢಮಸ್ಯ ಪಾಗ್ಂಸುರೇ ॥

ವಾಗಿ ಮುಳುಗಬೇಕು 'ಓಂ-ಓಂ' ಎಂದು ಪ್ರಣವೋಚ್ಚಾರಣೆಮಾಡುತ್ತಾ ಮುಳುಗಬೇಕು. ಯಾವುದೇ ಕಾರಣದಿಂದಲೂ ನೀರನ್ನು ಕಲಕಬಾರದು.

ಗೋಮಯಂ ಚ ತ್ರಿಧಾ ಕೃತ್ವಾ ಜಲೇ ಪೂರ್ವಂ ಸಮಾಲಭೇತ್।
ಸವ್ಯಾಹೃತೀಕಾಂ ಸಪ್ರಣವಾಂ ಗಾಯತ್ರೀಂ ಚ ಜಪೇತ್ಪುನಃ ॥೫೬೭॥

ಬಳಿಕ ಗೋಮಯವನ್ನು ಕೈಯಲ್ಲಿಟ್ಟುಕೊಂಡು ಅದನ್ನು ನೀರಿನಲ್ಲಿ ನೆನೆಸಿ ಮೂರು ವಿಭಾಗಮಾಡಿ ಮೃತ್ತಿಕೆಯಂತೆಯೇ ಅದರಲ್ಲಿ ಒಂದು ಭಾಗವನ್ನು ಊರ್ಧ್ವಾಂಗಕ್ಕೂ, ಎರಡನೆಯ ಭಾಗವನ್ನು ಮಧ್ಯಾಂಗಕ್ಕೂ, ಮೂರನೆಯ ಭಾಗವನ್ನು ಅಧರಾಂಗಕ್ಕೂ ಸ್ಪರ್ಶಿಸಿಕೊಳ್ಳಬೇಕು. ಹಾಗೆ ಮಾಡುವಾಗ ವ್ಯಾಹೃತಿಸಹಿತವಾದ ಗಾಯತ್ರೀಮಂತ್ರವನ್ನು ಜಪಿಸುತ್ತಿರಬೇಕು.

ಪುನರಾಚಮನಂ ಕೃತ್ವಾಂ ಮದ್ಗತೇನಾನ್ತರಾತ್ಮನಾ।
ಆಪೋಹಿಷ್ಠೇತಿ ತಿಸೃಭಿರ್ಋಗ್ಭಿಃ ಪೂತೇನ ವಾರಿಣಾ।
ತಥಾ ತರತ್ಸಮನ್ದೀಭಿಃ ಸಿಞ್ಚೇಚ್ಚತಸೃಭಿಃ ಕ್ರಮಾತ್ ॥೫೬೮॥
ಗೋಸೂಕ್ತೇನಾಶ್ವಸೂಕ್ತೇನ ಶುದ್ಧವರ್ಗೇಣ ಚಾತ್ಮನಃ।
ವೈಷ್ಣವೈರ್ವಾರುಣೈಃ ಸೂಕ್ತೈಃ ಸಾವಿತ್ರೈರಿನ್ದ್ರದೈವತೈಃ ॥೫೬೯॥
ವಾಮದೈವ್ಯೇನ ಚಾತ್ಮಾನಮನ್ಯೈರ್ಮನ್ಮಯಸಾಮಭಿಃ।
ಸ್ಥಿತ್ವಾನ್ತಃಸಲಿಲೇ ಸೂಕ್ತಂ ಜಪೇದ್ವಾ ಚಾಘಮರ್ಷಣಮ್ ॥೫೭೦॥

ಪುನಃ ಆಚಮನಮಾಡಿ, ನನ್ನಲ್ಲಿಯೇ ನೆಟ್ಟಮನಸ್ಸುಳ್ಳವನಾಗಿ **ಆಪೋಹಿಷ್ಠಾ ಮಯೋಭುವಃ*** ಇದೇ ಮುಂತಾದ ಮೂರು ಋಕ್ಕುಗಳಿಂದಲೂ, **ತರತ್ಸಮನ್ದೀಧಾವತಿಃ** ಇವೇ ಮುಂತಾದ ನಾಲ್ಕು ಋಕ್ಕುಗಳಿಂದಲೂ, ಗೋಸೂಕ್ತ-ಅಶ್ವಸೂಕ್ತ- ಶುದ್ಧವರ್ಗ-ವೈಷ್ಣವಸೂಕ್ತ-ವಾರುಣಸೂಕ್ತ- ಸಾವಿತ್ರಸೂಕ್ತ-ಐಂದ್ರಸೂಕ್ತ-ವಾಮದೈವ್ಯಸೂಕ್ತಗಳಿಂದಲೂ, ನನ್ನ ಸಂಬಂಧವಾದ ಸಾಮಗಳಿಂದಲೂ ಮಾರ್ಜನವನ್ನು ಮಾಡಿಕೊಳ್ಳಬೇಕು.

***ಓಂ ಆಪೋಹಿಷ್ಠಾ ಮಯೋಭುವಸ್ತಾ ನ ಊರ್ಜೇದಧಾತನ । ಮಹೇರಣಾಯ ಚಕ್ಷಸೇ। ಯೋ ವಃ ಶಿವತಮೋ ರಸಸ್ತಸ್ಯ ಭಾಜಯತೇಹ ನಃ । ಉಶತೀರಿವ ಮಾತರಃ। ತಸ್ಮಾ ಅರಂ ಗಮಾಮ ವೋ ಯಸ್ಯ ಕ್ಷಯಾಯ ಜಿನ್ವಥ । ಆಪೋ ಜನಯಥಾ ಚ ನಃ ॥**

(ಈ ಸೂಕ್ತಗಳನ್ನು ಹೇಳಿಕೊಂಡು ನೀರನ್ನು ಶರೀರಾದ್ಯಂತವಾಗಿ ಪ್ರೋಕ್ಷಿಸಿಕೊಳ್ಳಬೇಕು.) ನೀರಿನಲ್ಲಿಯೇ ಮುಳುಗಿ [1]ಅಘಮರ್ಷಣಸೂಕ್ತವನ್ನು ಜಪಿಸಿಬೇಕು.

ಸವ್ಯಾಹೃತೀಕಾಂ ಸಪ್ರಣವಾಂ ಗಾಯತ್ರೀಂ ವಾ ತತೋ ಜಪೇತ್।
ಆಶ್ವಾಸಮೋಕ್ಷಾತ್ಪ್ರಣವಂ ಜಪೇದ್ವಾ ಮಾಮನುಸ್ಮರನ್ ॥೫೭೧॥

ಅಥವಾ ಪ್ರಣವ ಮತ್ತು ವ್ಯಾಹೃತಿಗಳೊಡನೆ [2]ಗಾಯತ್ರಿಯನ್ನು ಜಪಿಸಬೇಕು. ಅಥವಾ ಉಸಿರು ಕಟ್ಟಿರಲು ಎಷ್ಟು ಹೊತ್ತು ಸಾಧ್ಯವೋ ಅಷ್ಟು ಹೊತ್ತಿನವರೆಗೆ ನನ್ನನ್ನೇ ಸ್ಮರಿಸುತ್ತಾ ಕೇವಲ ಓಂಕಾರವನ್ನಾದರೂ ಜಪಿಸುತ್ತಿರಬೇಕು.

ಉತ್ಪ್ಲುತ್ಯ ತೀರ್ಥಮಾಸಾದ್ಯ ಧೌತೇ ಶುಕ್ಲೇ ಚ ವಾಸಸೀ।
ಶುದ್ಧೇಽಚ್ಛಾದಯೇತ್ಕಕ್ಷೇ ನ ಕುರ್ಯಾತ್ಪರಿಪಾಶಕೇ ॥೫೭೨॥

ಪುನಃ ಮುಳುಗಿ ಸ್ನಾನಮಾಡಿ ತೀರಕ್ಕೆ ಬಂದು ಒಗೆದು, ಮಡಿಮಾಡಿರುವ ಶುದ್ಧವಾದ ಮತ್ತು ಶುಭ್ರವಾದ ವಸ್ತ್ರವನ್ನು ಉಟ್ಟುಕೊಳ್ಳಬೇಕು ಮತ್ತು ಹೊದ್ದುಕೊಳ್ಳಬೇಕು. ಹೊದೆಯುವ ವಸ್ತ್ರವನ್ನು ಹಗ್ಗದ ರೀತಿಯಲ್ಲಿ ತೋಳುಗಳ ಕೆಳಭಾಗದಲ್ಲಿ ಬಿಗಿಯಬಾರದು.

ಪಾಶೇನ ಬದ್ಧ್ವಾ ಕಕ್ಷೇ ಯತ್ಕುರುತೇ ಕರ್ಮ ವೈದಿಕಮ್।
ರಾಕ್ಷಸಾ ದಾನವಾ ದೈತ್ಯಾಸ್ತದ್ವಿಲುಮ್ಪನ್ತಿ ಹರ್ಷಿತಾಃ।
ತಸ್ಮಾತ್ಸರ್ವಪ್ರಯತ್ನೇನ ಕಕ್ಷ್ಯಾಪಾಶಂ ನ ಧಾರಯೇತ್ ॥೫೭೩॥

ತೋಳುಗಳ ಕೆಳಭಾಗದಲ್ಲಿ–ಹಗ್ಗವನ್ನು ಬಿಗಿಯುವಂತೆ–ಹೊದೆಯುವ ವಸ್ತ್ರವನ್ನು ಬಿಗಿದುಕೊಂಡು ಮಾಡುವ ವೈದಿಕಕರ್ಮಗಳ ಫಲವನ್ನು

---

[1] **ಓಂ ಋತಂ ಚ ಸತ್ಯಂ ಚಾಭೀದ್ಧಾತ್ತಪಸೋಽಧ್ಯಜಾಯತ । ತತೋ ರಾತ್ರಿರಜಾಯತ ತತಃ ಸಮುದ್ರೋ ಅರ್ಣವಃ। ಸಮುದ್ರಾದರ್ಣವಾದಧಿಸಂವತ್ಸರೋ ಅಜಾಯತ। ಅಹೋರಾತ್ರಾಣಿ ವಿದಧದ್ವಿಶ್ವಸ್ಯ ಮಿಷತೋ ವಶೀ। ಸೂರ್ಯಾಚನ್ದ್ರಮಸೌ ಧಾತಾ ಯಥಾಪೂರ್ವಮಕಲ್ಪಯತ್। ದಿವಂ ಚ ಪೃಥಿವೀಂ ಚಾನ್ತರಿಕ್ಷಮಥೋ ಸುವಃ।**

[2] **ಓಂ ಭೂರ್ಭುವಃ ಸುವಃ । ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ। ಧಿಯೋ ಯೋ ನಃ ಪ್ರಚೋದಯಾತ್।**

ರಾಕ್ಷಸರೂ, ದಾನವರೂ, ದೈತ್ಯರೂ ಸಂತೋಷದಿಂದ ಅಪಹರಿಸುತ್ತಾರೆ. ಆದುದರಿಂದ ಯಾವುದೇ ಕಾರಣದಿಂದಲೂ ಹೊದೆಯುವ ವಸ್ತ್ರವನ್ನು ತೋಳುಗಳ ಕೆಳಭಾಗದಲ್ಲಿ ಹಗ್ಗದಂತೆ ಬಿಗಿಯಬಾರದು.

ತತಃ ಪ್ರಕ್ಷಾಲ್ಯ ಪಾದೌ ಚ ಹಸ್ತೌ ಚೈವ ಮೃದಾ ಶನೈಃ।
ಆಚಮ್ಯ ಪುನರಾಚಾಮೇತ್ಪುನಃ ಸಾವಿತ್ರಿಯಾ ದ್ವಿಜಃ ॥೫೭೪॥

ಬ್ರಾಹ್ಮಣನು ವಸ್ತ್ರಗಳನ್ನು ಧರಿಸಿದನಂತರ ಆಚಮನಮಾಡಿ, ಕೈ-ಕಾಲುಗಳನ್ನು ಮೃತ್ತಿಕೆಯಿಂದ ತೊಳೆದುಕೊಂಡು ಪುನಃ ಗಾಯತ್ರೀಮಂತ್ರವನ್ನು ಜಪಿಸುತ್ತಾ ಆಚಮನಮಾಡಬೇಕು.

ಪ್ರಾಙ್ಮುಖೋದಙ್ಮುಖೋ ವಾಪಿ ಧ್ಯಾಯನ್ವೇದಾನ್ಸಮಾಹಿತಃ।
ಜಲೇ ಜಲಗತಃ ಶುದ್ಧಃ ಸ್ಥಲ ಏವ ಸ್ಥಲಸ್ಥಿತಃ।
ಉಭಯತ್ರ ಸ್ಥಿತಸ್ತಸ್ಮಾದಾಚಾಮೇದಾತ್ಮಶುದ್ಧಯೇ ॥೫೭೫॥

ಪೂರ್ವಾಭಿಮುಖವಾಗಿ ಅಥವಾ ಉತ್ತರಾಭಿಮುಖವಾಗಿ ಕುಳಿತು ಏಕಾಗ್ರಚಿತ್ತನಾಗಿ ಋಗ್ವೇದಾಯ ಸ್ವಾಹಾ (ನಮಃ) ಮೊದಲಾಗಿ ಹೇಳುತ್ತಾ ಆಚಮನಮಾಡಬೇಕು. ನೀರಿನಲ್ಲಿ ನಿಂತಿರುವ ಮನುಷ್ಯನು ಅಲ್ಲಿಯೇ ಆಚಮನಮಾಡಿದರೂ ಶುದ್ಧನಾಗುತ್ತಾನೆ. ದಂಡೆಯ ಮೇಲೆ ಕುಳಿತಿರುವವನು ಅಲ್ಲಿಯೇ ಆಚಮನಮಾಡಿದರೂ ಶುದ್ಧನಾಗುತ್ತಾನೆ. ಆದುದರಿಂದ ನೀರಿನಲ್ಲಿಯೇ ನಿಂತಿರಲಿ, ದಡದಲ್ಲಿಯೇ ಕುಳಿತಿರಲಿ ಬ್ರಾಹ್ಮಣನು ಆತ್ಮಶುದ್ಧಿಗಾಗಿ ಆಚಮನವನ್ನು ಮಾಡಬೇಕು.

ದರ್ಭೇಷು ದರ್ಭಪಾಣಿಃ ಸನ್ಪ್ರಾಙ್ಮುಖಃ ಸುಸಮಾಹಿತಃ।
ಪ್ರಾಣಾಯಾಮಾಂಸ್ತತಃ ಕುರ್ಯಾನ್ಮದ್ಗತೇನಾನ್ತರಾತ್ಮನಾ ॥೫೭೬॥

ದರ್ಭೆಯನ್ನು ಕೈಯಲ್ಲಿ ಹಿಡಿದುಕೊಂಡು, ದರ್ಭಾಸನದಲ್ಲಿ ಪೂರ್ವಾಭಿಮುಖವಾಗಿ ಏಕಾಗ್ರಚಿತ್ತನಾಗಿ ಕುಳಿತು, ನನ್ನಲ್ಲಿಯೇ ನೆಟ್ಟಮನಸ್ಸುಳ್ಳವನಾಗಿ ಪ್ರಾಣಾಯಾಮಗಳನ್ನು ಮಾಡಬೇಕು.

ಸಹಸ್ರಕೃತ್ವಃ ಸಾವಿತ್ರೀಂ ಶತಕೃತ್ವಸ್ತು ವಾ ಜಪೇತ್।
ಸಮಾಹಿತೋ ಜಪೇತ್ತಸ್ಮಾತ್ಸಾವಿತ್ರ್ಯಾ ಚಾಭಿಮನ್ತ್ರ್ಯ ಚ ।
ಮನ್ದೇಹಾನಾಂ ವಿನಾಶಾಯ ರಕ್ಷಸಾಂ ವಿಕ್ಷಿಪೇಜ್ಜಲಮ್ ॥೫೭೭॥

ಏಕಾಗ್ರಚಿತ್ತನಾಗಿ ಒಂದು ಸಾವಿರ ಬಾರಿ ಅಥವಾ ಒಂದು ನೂರುಬಾರಿ

ಗಾಯತ್ರೀಮಂತ್ರವನ್ನು ಜಪಿಸಬೇಕು. ಮಂದೇಹರೆಂಬ ರಾಕ್ಷಸರನ್ನು ವಿನಾಶಗೊಳಿಸುವ ಸಲುವಾಗಿ ಗಾಯತ್ರೀಮಂತ್ರದಿಂದ ಅಭಿಮಂತ್ರಿಸಿದ ನೀರಿನಿಂದ ಸೂರ್ಯನಿಗೆ ಅರ್ಘ್ಯಪ್ರದಾನಮಾಡಬೇಕು.

ಉದ್ವರ್ಗೋಽಸೀತ್ಯಥಾಚಾನ್ತಃ ಪ್ರಾಯಶ್ಚಿತ್ತಜಲಂ ಕ್ಷಿಪೇತ್ ॥೫೭೮॥

ಅನಂತರ ಆಚಮನಮಾಡಿ ಉದ್ವರ್ಗೋಽಸಿ ಎಂಬ ಮಂತ್ರದಿಂದ ಪ್ರಾಯಶ್ಚಿತ್ತಾರ್ಘ್ಯವನ್ನು ಕೊಡಬೇಕು.

ಅಥಾದಾಯ ಸುಪುಷ್ಪಾಣಿ ತೋಯಮಞ್ಜಲಿನಾ ದ್ವಿಜಃ।
ಪ್ರಕ್ಷಿಪ್ಯ ಪ್ರತಿಸೂರ್ಯಂ ಚ ವ್ಯೋಮಮುದ್ರಾಂ ಪ್ರಕಲ್ಪಯೇತ್ ॥

ಅನಂತರ ಬ್ರಾಹ್ಮಣನು ಬೊಗಸೆಯಲ್ಲಿ ನೀರನ್ನೂ ಸುಗಂಧಯುಕ್ತವಾದ ಹೂಗಳನ್ನೂ ಇಟ್ಟುಕೊಂಡು ಸೂರ್ಯನ ಕಡೆಗೆ ಎರಚಬೇಕು. ಬಳಿಕ ವ್ಯೋಮಮುದ್ರೆಯನ್ನು ಪ್ರದರ್ಶಿಸಬೇಕು.

ತತೋ ದ್ವಾದಶಕೃತ್ವಸ್ತು ಸೂರ್ಯಸ್ಯೈಕಾಕ್ಷರಂ ಜಪೇತ್।
ತತಃ ಷಡಕ್ಷರಾದೀನಿ ಷಟ್ಕೃತ್ವಃ ಪರಿವರ್ತಯೇತ್ ॥೫೮೦॥

ಬಳಿಕ ಸೂರ್ಯನ ಏಕಾಕ್ಷರಮಂತ್ರವನ್ನು ಹನ್ನೆರಡು ಬಾರಿ ಜಪಿಸಬೇಕು. ಷಡಕ್ಷರಮಂತ್ರಾದಿಗಳನ್ನು ಆರು ಬಾರಿ ಜಪಿಸಬೇಕು.

ಪ್ರದಕ್ಷಿಣಂ ಪರಾಮೃಷ್ಯ ಮುದ್ರಯಾ ಸ್ವಮುಖಾನ್ತರೇ।
ಊರ್ಧ್ವಬಾಹುಸ್ತತೋ ಭೂತ್ವಾ ಸೂರ್ಯಮೀಕ್ಷೇತ್ಸಮಾಹಿತಃ ॥
ತನ್ಮಣ್ಡಲಸ್ಥಂ ಮಾಂ ಧ್ಯಾಯೇತ್ತೇಜೋಮೂರ್ತಿಂ ಚತುರ್ಭುಜಮ್
ಉದುತ್ಯಂ ಚ ಜಪೇನ್ಮನ್ತ್ರಂ ಚಿತ್ರಂ ತಚ್ಚಕ್ಷುರಿತ್ಯಪಿ ॥೫೮೨॥
ಸಾವಿತ್ರೀಂ ಚ ಯಥಾಶಕ್ತಿ ಜಪ್ತ್ವಾ ಸೂಕ್ತಂ ಚ ಮಾಮಕಮ್।
ಮನ್ಮಯಾನಿ ಚ ಸಾಮಾನಿ ಪುರುಷವ್ರತಮೇವ ಚ ॥೫೮೩॥

ಆಕಾಶಮುದ್ರೆಯನ್ನು ಪ್ರದಕ್ಷಿಣವಾಗಿ ಬಳಿಸಿ ಮುಖದಲ್ಲಿ ಲೀನಗೊಳಿಸಬೇಕು. ಬಳಿಕ ಎರಡು ಭುಜಗಳನ್ನೂ ಮೇಲೆತ್ತಿಕೊಂಡು ಏಕಾಗ್ರಚಿತ್ತನಾಗಿ ಸೂರ್ಯನ ಕಡೆಗೆ ನೋಡುತ್ತಾ ಸೂರ್ಯಮಂಡಲದ ಮಧ್ಯದಲ್ಲಿರುವ ನನ್ನ ಚತುರ್ಭುಜ-ತೇಜೋಮೂರ್ತಿ-ನಾರಾಯಣ

ಸ್ವರೂಪವನ್ನು ಧ್ಯಾನಮಾಡಬೇಕು. ಆ ಸಮಯದಲ್ಲಿ 'ಉದುತ್ಯಂ'* 'ಚಿತ್ರಂ ದೇವಾನಾಂ'[೧] 'ತಚ್ಚಕ್ಷುಃ'[೨] ಈ ಮಂತ್ರಗಳನ್ನೂ, ಯಥಾಶಕ್ತಿ ಗಾಯತ್ರೀಮಂತ್ರವನ್ನೂ, ನನಗೆ ಸಂಬಂಧಿಸಿದ ವಿಷ್ಣುಸೂಕ್ತಗಳನ್ನೂ, ಸಾಮಗಳನ್ನೂ, ಪುರುಷಸೂಕ್ತವನ್ನೂ ಜಪಿಸಬೇಕು.

ತತಶ್ಚಾಲೋಕಯೇದರ್ಕಂ ಹಂಸಃ ಶುಚಿಷದಿತ್ಯಪಿ ।
ಪ್ರದಕ್ಷಿಣಂ ಸಮಾವೃತ್ಯ ನಮಸ್ಕೃತ್ಯ ದಿವಾಕರಮ್ ॥೫೮೮॥

ಬಳಿಕ **'ಹಗ್ಂಸಃ ಶುಚಿಷತ್'**[೩] ಎಂಬ ಮಂತ್ರವನ್ನು ಹೇಳಿಕೊಂಡು ಸೂರ್ಯನ ಕಡೆಗೆ ನೋಡಬೇಕು. ಪ್ರದಕ್ಷಿಣಾಪೂರ್ವಕವಾಗಿ ನಮಸ್ಕಾರಮಾಡಬೇಕು.

ಹೀಗೆ ಸ್ನಾನವನ್ನೂ ಸಂಧ್ಯೋಪಾಸನೆಯನ್ನೂ ಮಾಡಿದ ಬಳಿಕ ಬ್ರಹ್ಮನಿಗೂ, ನನಗೂ, ಶಂಕರನಿಗೂ, ಪ್ರಜಾಪತಿಗೂ, ದೇವತೆಗಳಿಗೂ, ದೇವರ್ಷಿಗಳಿಗೂ, ಸಾಂಗವಾದ ವೇದಗಳಿಗೂ, ಇತಿಹಾಸಗಳಿಗೂ, ಕ್ರತುಗಳಿಗೂ, ಪುರಾಣಗಳಿಗೂ, ಅಪ್ಸರೆಯರಿಗೂ, ಋತುಗಳಿಗೂ, ಕಲಾಕಾಷ್ಠಾತ್ಮಕವಾದ ಸಂವತ್ಸರಕ್ಕೂ, ಭೂತಸಮುದಾಯಗಳಿಗೂ, ಭೂತಗಳಿಗೂ,

---

***ಓಂ ಉದುತ್ಯಂ ಜಾತವೇದಸಂ ದೇವಂ ವಹನ್ತಿ ಕೇತವಃ । ದೃಶೇ ವಿಶ್ವಾಯ ಸೂರ್ಯಮ್**

[೧] ಓಂ ಚಿತ್ರಂ ದೇವಾನಾಮುದಗಾದನೀಕಂ ಚಕ್ಷುರ್ಮಿತ್ರಸ್ಯ ವರುಣಸ್ಯಾಗ್ನೇಃ । ಆಪ್ರಾದ್ಯಾವಾಪೃಥಿವೀ ಅನ್ತರಿಕ್ಷಗ್ಂ ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ ।

[೨] ಓಂ ತಚ್ಚಕ್ಷುರ್ದೇವಹಿತಂ ಪುರಸ್ತಾಚ್ಛುಕ್ರಮುಚ್ಚರತ್ । ಪಶ್ಯೇಮ ಶರದಃ ಶತಮ್। ಜೀವೇಮ ಶರದಃ ಶತಮ್। ನನ್ದಾಮ ಶರದಃ ಶತಮ್। ಮೋದಾಮ ಶರದಃ ಶತಮ್। ಭವಾಮ ಶರದಃ ಶತಮ್। ಶೃಣವಾಮ ಶರದಃ ಶತಮ್। ಪ್ರಬ್ರವಾಮ ಶರದಃ ಶತಮ್। ಅಜೀತಾಃ ಸ್ಯಾಮ ಶರದಃ ಶತಮ್। ಜ್ಯೋಕ್ಚಸೂರ್ಯಂ ದೃಶೇ। ಯ ಉದಗಾನ್ಮಹತೋರ್ಣವಾದ್ವಿಭ್ರಾಜಮಾನಃ ಸರಿರಸ್ಯ ಮಧ್ಯಾತ್ಸಮಾವೃಷಭೋ ರೋಹಿತಾಕ್ಷಃ ಸೂರ್ಯೋ ವಿಪಶ್ಚಿನ್ಮನಸಾ ಪುನಾತು॥

[೩] ಓಂ ಹಗ್ಂಸಃ ಶುಚಿಷದ್ವಸುರನ್ತರಿಕ್ಷಸದ್ಧೋತಾ ವೇದಿಷದತಿಥಿರ್ದುರೋಣಸತ್ । ನೃಷದ್ವರಸದೃತಸದ್ವ್ಯೋಮಸದಬ್ಜಾ ಗೋಜಾ ಋತಜಾ ಅದ್ರಿಜಾ ಋತಂ ಬೃಹತ್।

ನದಿಗಳಿಗೂ, ಸಾಗರಗಳಿಗೂ, ಪರ್ವತಗಳಿಗೂ, ಪರ್ವತಗಳಲ್ಲಿ ವಾಸಮಾಡುವ ದೇವತೆಗಳಿಗೂ, ಓಷಧಿ-ವನಸ್ಪತಿಗಳಿಗೂ ಉಪವೀತಿಯಾಗಿ ಜಲತರ್ಪಣವನ್ನು ಕೊಡಬೇಕು. ಎರಡು ಕೈಗಳನ್ನೂ ಬೊಗಸೆಯನ್ನಾಗಿ ಮಾಡಿಕೊಂಡು ತರ್ಪಣವನ್ನು ಕೊಡಬೇಕು. ಪ್ರತಿಯೊಬ್ಬ ದೇವತೆಗೂ ಪ್ರತ್ಯೇಕ-ಪ್ರತ್ಯೇಕವಾಗಿ ತರ್ಪಣವನ್ನು ಕೊಡಬೇಕು. ಒಬ್ಬ ದೇವತೆಗೆ ತರ್ಪಣಕೊಡುವಾಗ ತೃಪ್ಯತಾಂ ಎಂದೂ, ಇಬ್ಬರು ದೇವತೆಗಳಿಗೆ ಸೇರಿಸಿ ತರ್ಪಣಕೊಡುವಾಗ ತೃಪ್ಯೇತಾಂ ಎಂದೂ, ಇಬ್ಬರೂ ದೇವತೆಗಳಿಗಿಂತಲೂ ಹೆಚ್ಚು ದೇವತೆಗಳಿಗೆ ತರ್ಪಣವನ್ನು ಕೊಡುವಾಗ ತೃಪ್ಯನ್ತಾಂ-ಎಂದೂ ಹೇಳಿ ಜಲತರ್ಪಣವನ್ನು ಕೊಡಬೇಕು.

ನಿವೀತೀ ತರ್ಪಯೇದ್ವಿದ್ವಾನೃಷೀನ್ಮನ್ತ್ರಕೃತಸ್ತಥಾ।
ಮರೀಚ್ಯಾದೀನೃಷೀಂಶ್ಚೈವ ನಾರದಾದ್ಯಾನ್ಸಮಾಹಿತಃ ॥೫೯॥

ವಿದ್ವಾಂಸನಾದವನು-ಮಂತ್ರದ್ರಷ್ಟಾರರಾದ ಮರೀಚಿಗಳೇ ಮೊದಲಾದ ಋಷಿಗಳಿಗೂ ನಾರದರೇ ಮೊದಲಾದ ಋಷಿಗಳಿಗೂ ನಿವೀತಿಯಾಗಿ (ಜನಿವಾರವನ್ನು ಮಾಲೆಯಂತೆ ಹಾಕಿಕೊಂಡು) ಏಕಾಗ್ರಚಿತ್ತನಾಗಿ ತರ್ಪಣವನ್ನು ಕೊಡಬೇಕು.

ಪ್ರಾಚೀನಾವೀತ್ಯಥೈತಾಂಸ್ತು ತರ್ಪಯೇದ್ದೇವತಾಃ ಪಿತೄನ್।
ತತಸ್ತು ಕವ್ಯವಾಡಗ್ನಿಂ ಸೋಮಂ ವೈವಸ್ವತಂ ತಥಾ ॥೯೦॥
ತತಶ್ಚಾರ್ಯಮಣಂ ಚಾಪಿ ಹ್ಯಗ್ನಿಷ್ವಾತ್ತಾಂಸ್ತಥೈವ ಚ।
ಸೋಮಪಾಂಶ್ಚೈವ ದರ್ಭೇಷು ಸತಿಲೈರೇವ ವಾರಿಭಿಃ ॥೯೧॥

ಅನಂತರ ಪ್ರಾಚೀನಾವೀತಿಯಾಗಿ ಪಿತೃಸಂಬಂಧಿದೇವತೆಗಳಾದ ಕವ್ಯವಾಹನಾದ ಅಗ್ನಿ, ಸೋಮ, ವೈವಸ್ವತ, ಅರ್ಯಮಾ, ಅಗ್ನಿಷ್ವಾತ್ತ ಮತ್ತು ಸೋಮಪರಿಗೆ ಎಳ್ಳಿನಿಂದ ಕೂಡಿದ ನೀರಿನಿಂದ ದರ್ಭೆಯ ಮೇಲೆ ತರ್ಪಣವನ್ನು ಕೊಡಬೇಕು. ಅನಂತರ ಪಿತೃಗಳಿಗೆ ತರ್ಪಣವನ್ನು ಕೊಡಬೇಕು.

ಪಿತೄನ್ಪಿತಾಮಹಾಶ್ಚೈವ ತಥೈವ ಪ್ರಪಿತಾಮಹಾನ್।
ಪಿತಾಮಹೀಸ್ತಥಾ ಚಾಪಿ ತಥೈವ ಪ್ರಪಿತಾಮಹೀಃ ॥೯೨॥

ಮಾತರಂ ಚಾತ್ಮನಶ್ಚೈವ ಗುರುಮಾಚಾರ್ಯಮೇವ ಚ।
ಪಿತೃಮಾತೃಸ್ವಸಾರೌ ಚ ತಥಾ ಮಾತಾಮಹೀಮಪಿ ॥೫೩॥
ಉಪಾಧ್ಯಾಯಾನ್ಸಖೀನ್ಬನ್ಧೂಞ್ಶಿಷ್ಯರ್ತ್ವಿಗ್ ಜ್ಞಾತಿಬಾನ್ಧವಾನ್।
ಪ್ರಮೀತಾನನೃಶಂಸ್ಯಾರ್ಥಂ ತರ್ಪಯೇತ್ತಾನಮತ್ಸರಃ ॥೫೪॥

ಪಿತೃಗಳಿಗೆ ಈ ಕ್ರಮದಲ್ಲಿ ತರ್ಪಣವನ್ನು ಕೊಡಬೇಕು. ತಂದೆ, ಪಿತಾಮಹ (ಅಜ್ಜ), ಪ್ರಪಿತಾಮಹ (ಮುತ್ತಜ್ಜ), ತಾಯಿ, ಪಿತಾಮಹೀ (ತಂದೆಯ ತಾಯಿ), ಪ್ರಪಿತಾಮಹೀ (ಮುತ್ತಜ್ಜಿ), ಗುರು, ಆಚಾರ್ಯ, ಸೋದರತ್ತೆ (ತಂದೆಯ ಅಕ್ಕ ಅಥವಾ ತಂಗಿ), ಚಿಕ್ಕಮ್ಮ ಅಥವಾ ದೊಡ್ಡಮ್ಮ (ತಾಯಿಯ ತಂಗಿ ಅಥವಾ ಅಕ್ಕ), ಮಾತಾಮಹೀ (ತಾಯಿಯ ತಾಯಿ) ಇವರಿಗೆ ತರ್ಪಣವನ್ನು ಕೊಡಬೇಕು. ಉಪಾಧ್ಯಾಯ, ಮಿತ್ರ, ಬಂಧು, ಶಿಷ್ಯ, ಋತ್ವಿಜರು, ಜ್ಞಾತಿಗಳು-ಇವರಲ್ಲಿ ಯಾರು ಮರಣಹೊಂದಿರುವರೋ ಅಂತಹವರಿಗೂ ಕರುಣೆಯಿಂದ ಈರ್ಷ್ಯಾ-ದ್ವೇಷಗಳನ್ನು ಬಿಟ್ಟು ತರ್ಪಣವನ್ನು ಕೊಡಬೇಕು. (ಇದರಲ್ಲಿ ಮಾತಾಮಹವರ್ಗವನ್ನೇ ಬಿಟ್ಟಿರುವುದರಿಂದ ಇದು ಕೇವಲ ದಿಗ್ದರ್ಶನವೆಂದು ತಿಳಿಯಬೇಕೆಂಬುದು ಒಬ್ಬ ವಿದ್ವಾಂಸರ ಅಭಿಪ್ರಾಯವಾಗಿದೆ.)

ತರ್ಪಯಿತ್ವಾ ತಥಾಚಮ್ಯ ಸ್ನಾನವಸ್ತ್ರಂ ಪ್ರಪೀಡಯೇತ್।
ವೃತ್ತಿಂ ಭೃತ್ಯಜನಸ್ಯಾಹುಃ ಸ್ನಾನಂ ಪಾನಂ ಚ ತದ್ವಿದಃ ॥೫೫॥
ಅತರ್ಪಯಿತ್ವಾ ತಾನ್ಪೂರ್ವಂ ಸ್ನಾನವಸ್ತ್ರಂ ನ ಪೀಡಯೇತ್।
ತರ್ಪಯಿತ್ವಾ ತಥಾಚಮ್ಯ ಸ್ನಾನವಸ್ತ್ರಂ ನಿಪೀಡಯೇತ್ ॥೫೬॥

ತರ್ಪಣಮಾಡಿದನಂತರ ಆಚಮನಮಾಡಿ ಸ್ನಾನದ ಸಮಯದಲ್ಲಿ ಉಟ್ಟಿದ್ದ ವಸ್ತ್ರವನ್ನು ಹಿಂಡಬೇಕು. ಆ ವಸ್ತ್ರದ ಜಲವೂ ಕೂಡ ಮೃತರಾದ ಭೃತ್ಯಜನರ ಭಾಗವಾಗಿರುತ್ತದೆ. ಅದು ಅವರ ಸ್ನಾನ ಮತ್ತು ಪಾನಗಳ ಸಲುವಾಗಿರುತ್ತದೆ. ಆದುದರಿಂದ ಸ್ನಾನವಸ್ತ್ರವನ್ನು ಹಿಂಡುವುದರ ಮೂಲಕ ಅವರಿಗೂ ತರ್ಪಣವನ್ನು ಬಿಡಬೇಕು. ಆದರೆ ಹಿಂದೆ ಹೇಳಿದ ದೇವತೆಗಳಿಗೂ, ಋಷಿಗಳಿಗೂ ಮತ್ತು ಪಿತೃಗಳಿಗೂ ತರ್ಪಣವನ್ನು ಕೊಡುವುದಕ್ಕೆ

ಮೊದಲು ಸ್ನಾನವಸ್ತ್ರವನ್ನು ಹಿಂಡಬಾರದು. ದೇವರ್ಷಿ-ಪಿತೃತರ್ಪಣಗಳನ್ನು ಮಾಡಿದನಂತರ ಆಚಮನಮಾಡಿ ಸ್ನಾನವಸ್ತ್ರವನ್ನು ಹಿಂಡಬೇಕು.

ಪೀಡಯೇಚ್ಚ ಪುರಾ ಮೋಹಾದ್ದೇವಾಃ ಸರ್ಷಿಗಣಾಸ್ತಥಾ।
ಪಿತರಸ್ತು ನಿರಾಶಾಸ್ತೇ ಶಪ್ತ್ವಾ ಯಾನ್ತಿ ಯಥಾಗತಮ್ ॥೯೮॥

ಮೋಹವಶನಾಗಿ ಯಾವನು ದೇವರ್ಷಿಪಿತೃತರ್ಪಣಗಳನ್ನು ಕೊಡುವುದಕ್ಕೆ ಮೊದಲೇ ಸ್ನಾನವಸ್ತ್ರವನ್ನು ಹಿಂಡುವನೋ–ಅಂತಹವನ ಈ ಕ್ರಿಯೆಯಿಂದ ದೇವರ್ಷಿಗಳೂ ಪಿತೃಗಳೂ ಕೂಡ ನಿರಾಶರಾಗಿ ಅವನಿಗೆ ಶಾಪಕೊಟ್ಟು ಹಿಂದಿರುಗುತ್ತಾರೆ.

ಪ್ರಕ್ಷಾಲ್ಯ ತು ಮೃದಾ ಪಾದಾವಾಚಮ್ಯ ಪ್ರಯತಃ ಪುನಃ।
ದರ್ಭೇಷು ದರ್ಭಪಾಣಿಃ ಸನ್ಸ್ವಾಧ್ಯಾಯಂ ತು ಸಮಾರಭೇತ್ ॥

ಬಳಿಕ ಬ್ರಾಹ್ಮಣನು ಕಾಲುಗಳನ್ನು ಮಣ್ಣಿನಿಂದ ತೊಳೆದುಕೊಂಡು ದರ್ಭಾಸನದಲ್ಲಿ ಕುಳಿತು ದರ್ಭಪಾಣಿಯಾಗಿ ವೇದಪಠನವನ್ನು ಆರಂಭಿಸಬೇಕು.

ಋಚೋ ವಾಪೀ ಯಜುರ್ವಾಪಿ ಸಾಮಗಾಯಮಥಾಪಿ ಚ ।
ಇತಿಹಾಸಪುರಾಣಾನಿ ಯಥಾಶಕ್ತಿ ನ ಹಾಪಯೇತ್ ॥೬೦೦॥

ಋಗ್ವೇದವನ್ನಾಗಲೀ, ಯಜುರ್ವೇದವನ್ನಾಗಲೀ, ಸಾಮವೇದ ವನ್ನಾಗಲೀ ಪಠನಮಾಡಬೇಕು. ಇತಿಹಾಸ-ಪುರಾಣಗಳನ್ನೂ ಯಥಾಶಕ್ತಿ ಪಾರಾಯಣಮಾಡಬೇಕು. ಬಿಟ್ಟುಬಿಡಬಾರದು.

ಉತ್ಥಾಯ ತು ನಮಸ್ಕೃತ್ಯ ದಿಶೋ ದಿಗ್ದೇವತಾ ಅಪಿ ।
ಬ್ರಹ್ಮಾಣಂ ಚ ತತಶ್ಚಾಗ್ನಿಂ ಪೃಥಿವೀಮೋಷಧೀಸ್ತಥಾ ॥೬೦೧॥
ವಾಚಂ ವಾಚಸ್ಪತಿಂ ಚೈವ ಮಾಂ ಚೈವ ಸರಿತಸ್ತಥಾ।
ನಮಸ್ಕೃತ್ಯ ತಥಾದ್ಭಿಸ್ತು ಪ್ರಣವಾದಿ ಚ ಪೂರ್ವವತ್।
ತತೋ ನಮೋಽದ್ಭ್ಯ ಇತ್ಯುಕ್ತ್ವಾ ನಮಸ್ಕುರ್ಯಾತ್ತು ತಜ್ಜಲಮ್ ॥೬೦೨॥

ವೇದಪಠನವನ್ನು ಪೂರ್ಣಗೊಳಿಸಿ ನಿಂತುಕೊಂಡು-ದಿಕ್ಕುಗಳಿಗೂ, ದಿಗ್ದೇವತೆಗಳಿಗೂ, ಬ್ರಹ್ಮನಿಗೂ, ಅಗ್ನಿಗೂ, ಪೃಥ್ವಿಗೂ, ಓಷಧಿಗಳಿಗೂ,

ವಾಕ್ಕಿಗೂ, ವಾಚಸ್ಪತಿಗೂ, ಸರಿತ್ತುಗಳಿಗೂ ಮತ್ತು ನನಗೂ ನಮಸ್ಕರಿಸಬೇಕು. ಪುನಃ ಓಂ ನಮೋಽದ್ಭ್ಯಃ ಎಂದು ಹೇಳಿ ಜಲಾಶಯಕ್ಕೆ ಹಿಂದಿನಂತೆಯೇ ನಮಸ್ಕಾರಮಾಡಬೇಕು.

ಘೃಣಿಃ ಸೂರ್ಯಸ್ತಥಾದಿತ್ಯಸ್ತಂ ಪ್ರಣಮ್ಯ ಸ್ವಮೂರ್ಧನಿ ।
ತತಸ್ತ್ವಾಲೋಕಯನ್ನರ್ಕಂ ಪ್ರಣವೇನ ಸಮಾಹಿತಃ ।
ತತೋ ಮಾಮರ್ಚಯೇತ್ಪುಷ್ಪೈರ್ಮತ್ಪ್ರಿಯೈರೇವ ನಿತ್ಯಶಃ ॥

ಅನಂತರ ಓಂ ಘೃಣಿಃ ಸೂರ್ಯ ಆದಿತ್ಯೋಂ ಎಂಬ ಸೂರ್ಯಾಷ್ಟಾಕ್ಷರೀ ಮಂತ್ರವನ್ನು ಜಪಿಸುತ್ತಾ ತಲೆಯ ಮೇಲೆ ಎರಡು ಕೈಗಳನ್ನೂ ಜೋಡಿಸಿಟ್ಟುಕೊಂಡು ನಮಸ್ಕರಿಸುತ್ತಾ, ಪ್ರಣವಜಪದ ಮೂಲಕವಾಗಿ ಏಕಾಗ್ರಚಿತ್ತನಾಗಿ ಸೂರ್ಯನನ್ನು ನೋಡಬೇಕು. ಬಳಿಕ ನನಗೆ ಅತ್ಯಂತ ಪ್ರಿಯವಾದ ಪುಷ್ಪಗಳಿಂದ ನನ್ನನ್ನು ನಿತ್ಯವೂ ಆರಾಧಿಸಬೇಕು."

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

"ಮಾಧವನೇ! ಅಚ್ಯುತನೇ! ಯಾವ ಪುಷ್ಪಗಳು ನಿನಗೆ ಅತ್ಯಂತ ಪ್ರಿಯವಾದುವುಗಳು? ಯಾವ ಪುಷ್ಪಗಳಲ್ಲಿ ನಿನ್ನ ಸಾನ್ನಿಧ್ಯವಿರುತ್ತದೆ? ನಿನ್ನ ಭಕ್ತನಾದ ನನಗೆ ಈ ಎಲ್ಲ ವಿಷಯಗಳನ್ನೂ ಹೇಳು."

ಶ್ರೀಕೃಷ್ಣನು ಹೇಳುತ್ತಾನೆ:

"ಮಹಾರಾಜ! ನನಗೆ ಪ್ರಿಯಕರವಾದ ಪುಷ್ಪಗಳು ಯಾವುವೆಂಬುದನ್ನು ಹೇಳುವೆನು; ಅವ್ಯಗ್ರಚಿತ್ತನಾಗಿ ಕೇಳು.

ಕುಮುದಂ ಕರವೀರಂ ಚ ಚಣಕಂ ಚಮ್ಪಕಂ ತಥಾ।
ಮಲ್ಲಿಕಾ ಜಾತಿಪುಷ್ಪಂ ಚ ನನ್ದ್ಯಾವರ್ತಂ ಚ ನನ್ದಿಕಮ್ ॥೬೦೬॥
ಪಲಾಶಪುಷ್ಪಪತ್ರಾಣಿ ದೂರ್ವಾಭೃಙ್ಗಕಮೇವ ಚ ।
ವನಮಾಲಾ ಚ ರಾಜೇನ್ದ್ರ ಮತ್ಪ್ರಿಯಾಣಿ ವಿಶೇಷತಃ ॥೬೦೭॥

ಕುಮುದ-ಬಿಳಿತಾವರೆ (ಬಿಳಿ ನೈದಿಲೆ), ಕರವೀರ (ಕೆಂಪು ಕಣಗಲೆ), ಚಣಕ, ಚಂಪಕ (ಸಂಪಿಗೆ), ಮಲ್ಲಿಗೆ, ಜಾತಿಪುಷ್ಪ (ಜಾಜೀ) ನಂದ್ಯಾವರ್ತ, ನಂದಿಕ, ಮುತ್ತಗದ ಹೂವು ಮತ್ತು ಎಲೆ, ದೂರ್ವೆ, ಭೃಂಗರಾಜ, ವನಮಾಲಾ–ಇವು ನನಗೆ ಪ್ರಿಯವಾದುವುಗಳು.

ಸರ್ವೇಷಾಮಪಿ ಪುಷ್ಪಾಣಾಂ ಸಹಸ್ರಗುಣಮುತ್ಪಲಮ್।
ತಸ್ಮಾತ್ಪದ್ಮಂ ತಥಾ ರಾಜನ್ಪದ್ಮಾತ್ತು ಶತಪತ್ರಕಮ್ ॥
ತಸ್ಮಾತ್ಸಹಸ್ರಪತ್ರಂ ತು ಪುಣ್ಡರೀಕಂ ತತಃ ಪರಮ್।
ಪುಣ್ಡರೀಕಸಹಸ್ರಾತ್ತು ತುಲಸೀ ಗುಣತೋಽಧಿಕಾ ॥೬೦೯॥

ಎಲ್ಲಬಗೆಯ ಪುಷ್ಪಗಳಲ್ಲಿಯೂ ನೈದಿಲೆಯು ಸಾವಿರಪಾಲು ಹೆಚ್ಚು ಗುಣವುಳ್ಳದ್ದು. ನೈದಿಲೆಗಿಂತಲೂ ಪದ್ಮವು ಶ್ರೇಷ್ಠವಾದುದು. ಪದ್ಮಕ್ಕಿಂತಲೂ ಶತಪತ್ರಕಮಲವು ಶ್ರೇಷ್ಠವಾದುದು. ಶತಪತ್ರಕ್ಕಿಂತಲೂ ಸಹಸ್ರಪತ್ರಕಮಲವು ಶ್ರೇಷ್ಠವಾದುದು. ಸಹಸ್ರದಳಕಮಲಕ್ಕಿಂತಲೂ ಪುಂಡರೀಕವು (ಶ್ವೇತಕಮಲವು) ಶ್ರೇಷ್ಠವಾದುದು. ಆದರೆ ಸಾವಿರ ಪುಂಡರೀಕಗಳಿಗಿಂತಲೂ ಗುಣದ ದೃಷ್ಟಿಯಿಂದ ತುಲಸಿಯೇ ಶ್ರೇಷ್ಠವು.

ವಕಪುಷ್ಪಂ ತತಸ್ತಸ್ಮಾತ್ಸೌವರ್ಣಂ ತು ತತೋಽಧಿಕಮ್।
ಸೌವರ್ಣಾತ್ತು ಪ್ರಸೂನಾಚ್ಚ ಮತ್ಪ್ರಿಯಂ ನಾಸ್ತಿ ಪಾಣ್ಡವ ॥೬೧೦॥

ತುಲಸಿಗಿಂತಲೂ ವಕಲಪುಷ್ಪವು (ಪಾದರೀ ಹೂವು) ಶ್ರೇಷ್ಠವಾದುದು. ವಕುಲಪುಷ್ಪಕ್ಕಿಂತಲೂ ಸೌವರ್ಣಪುಷ್ಪವು ಶ್ರೇಷ್ಠವಾದುದು. ಸೌವರ್ಣಪುಷ್ಪಕ್ಕಿಂತಲೂ ಶ್ರೇಷ್ಠವೂ ಮತ್ತು ನನಗೆ ಹೆಚ್ಚು ಪ್ರಿಯವೂ ಆಗಿರುವ ಬೇರೆ ಯಾವ ಪುಷ್ಪವೂ ಇಲ್ಲ.

ಪುಷ್ಪಾಭಾವೇ ತುಲಸ್ಯಾಸ್ತು ಪತ್ರೈರ್ಮಾಮರ್ಚಯೇತ್ಪುನಃ।
ಪತ್ರಾಲಾಭೇ ತು ಶಾಖಾಭಿಃ ಶಾಖಾಲಾಭೇ ಶಿಫಾಲವೈಃ।
ಶಿಫಾಭಾವೇ ಮೃದಾ ತತ್ರ ಭಕ್ತಿಮಾನರ್ಚಯೇತ ಮಾಮ್ ॥೬೧೧॥

ಹೂವು ಸಿಕ್ಕದಿದ್ದರೆ ನನ್ನ ಭಕ್ತನು ನನ್ನನ್ನು ತುಲಸೀದಳಗಳಿಂದ ಪೂಜಿಸಬೇಕು. ತುಲಸೀಪತ್ರವು ಸಿಕ್ಕದಿದ್ದರೆ ತುಲಸೀಕಡ್ಡಿಯಿಂದ ಪೂಜಿಸಬೇಕು. ಕಡ್ಡಿಯೂ ಸಿಕ್ಕದಿದ್ದರೆ ತುಳಸಿ ಬೇರಿನ ತುಂಡುಗಳಿಂದ ಪೂಜಿಸಬೇಕು. ಅದೂ ಸಿಕ್ಕದಿದ್ದರೆ ತುಳಸೀಗಿಡವಿದ್ದ ಸ್ಥಳದಲ್ಲಿರುವ ಮಣ್ಣಿನಿಂದಾದರೂ ನನ್ನನ್ನು ಭಕ್ತಿಯಿಂದ ಪೂಜಿಸಬಹುದು.

ನಾನು ಇನ್ನು ಮುಂದೆ ನನ್ನ ಪೂಜೆಗೆ ಯೋಗ್ಯವಲ್ಲದ ಪುಷ್ಪಗಳ ನಾಮಗಳನ್ನು ಹೇಳುವೆನು; ಏಕಾಗ್ರಚಿತ್ತನಾಗಿ ಕೇಳು: ಕಿಂಕಿಣೀ (ಗೆಜ್ಜೆ ಹೂವು), ಮುನಿಪುಷ್ಪ, ದುರ್ಧೂರ (ಹೆಮ್ಮರದ ಹೂವು), ಪಾಟಲ (ಹಸಿರು

ಪಾದರೀ ಹೂವು), ಅತಿಮುಕ್ತಕ (ತಾಳೇಹೂವು), ಪುನ್ನಾಗ (ಸುರಗೀ ಹೂವು), ನಕ್ತಮಾಲಿಕ (ಹೊಂಗೇಹೂವು), ಯೌಧಿಕ, ಕ್ಷೀರಿಕಾ (ಹಾಲೇ ಹೂವು), ನಿರ್ಗುಂಡೀ (ಲಕ್ಕಿಹೂವು), ಲಾಂಗುಲಿ (ಕೋಳಿಕುಟಕನ ಹೂವು), ಜಪಾ (ದಾಸವಾಳದ ಹೂವು), ಕರ್ಣಿಕಾರ, ಅಶೋಕ, ಸೇವಲಕಾ, ಕಕುಭ (ಕೆಂಪು ಮತ್ತಿ ಹೂವು), ಕೋವಿದಾರ (ಕೆಂಗಾಂಚಾಳದ ಹೂವು), ವೈಭೀತಕ (ತಾರೇ ಹೂವು), ಕುರಂಟಕ, ಕಲ್ಪಕ (ಖರ್ಜೂರದ ಹೂವು), ಕಾಲಕ, ಅಂಕೋಲ, ಗಿರಿಕರ್ಣಿ (ಕಪ್ಪುಚುಕ್ಕೆ ಇರುವ ಹೂವು), ನೀಲೀಬಣ್ಣದ ಪುಷ್ಪಗಳು, ಒಂದೆಲೆಹೂವುಗಳು-ಈ ಎಲ್ಲ ಪುಷ್ಪಗಳನ್ನೂ ವರ್ಜಿಸಬೇಕು.

ಅರ್ಕಪುಷ್ಪಾಣಿ ವರ್ಜ್ಯಾನಿ ಅರ್ಕಪತ್ರಸ್ಥಿತಾನಿ ಚ ।
ವ್ಯಾಧೃತಾಃ ಪಿಚುಮನ್ದಾನಿ ಸರ್ವಾಣ್ಯೇವ ವಿವರ್ಜಯೇತ್ ॥

ಎಕ್ಕದ ಹೂವುಗಳಿಂದಲೂ ನನ್ನನ್ನು ಪೂಜಿಸಬಾರದು. ಎಕ್ಕದ ಎಲೆಯ ಮೇಲಿಟ್ಟಿರುವ ಹೂವುಗಳಿಂದಲೂ ಪೂಜಿಸಬಾರದು. ಹಾಗೆಯೇ ಬೇವಿನ ಹೂವುಗಳೂ ನನ್ನ ಪೂಜೆಗೆ ಯೋಗ್ಯವಲ್ಲ.

ಹೀಗೆ ನಿಷೇಧಿಸಲ್ಪಟ್ಟಿರುವ ಪುಷ್ಪಗಳನ್ನು ಬಿಟ್ಟು ಬಿಳಿಯ ಎಸಳುಗಳಿರುವ ಸುಗಂಧಯುಕ್ತವಾದ ಪುಷ್ಪಗಳಿಂದ ನನ್ನನ್ನು ನನ್ನ ಭಕ್ತನು ಪೂಜಿಸಬೇಕು."

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

"ಮಾಧವನೇ! ನಿನ್ನನ್ನು ಹೇಗೆ ಪೂಜಿಸಬೇಕು? ನಿನ್ನ ಮೂರ್ತಿಗಳು ಯಾವುವು? ಈ ವಿಷಯದಲ್ಲಿ ವೈಖಾನಸರು (ವೈಖಾನಸಾಗಮಕ್ಕೆ ಸಂಬಂಧಿಸಿದವರು) ಏನು ಹೇಳುತ್ತಾರೆ? ಪಾಂಚರಾತ್ರಾಗಮಕ್ಕೆ ಸಂಬಂಧಿಸಿದವರು ಏನು ಹೇಳುತ್ತಾರೆ?"

ಶ್ರೀಕೃಷ್ಣನು ಹೇಳುತ್ತಾನೆ:

"ಪಾಂಡವನೇ! ನನ್ನ ಅರ್ಚನಾಕ್ರಮವನ್ನು ಸಮಗ್ರವಾಗಿ ಕೇಳು.

ಸ್ಥಣ್ಡಿಲೇ ಪದ್ಮಕಂ ಕೃತ್ವಾ ಚಾಷ್ಟಪತ್ರಂ ಸಕರ್ಣಿಕಮ್।
ಅಷ್ಟಾಕ್ಷರವಿಧಾನೇನ ಹ್ಯಥವಾ ದ್ವಾದಶಾಕ್ಷರೈಃ ।
ವೈದಿಕೈರಥ ಮನ್ತ್ರೈಶ್ಚ ಮಮ ಸೂಕ್ತೇನ ವಾ ಪುನಃ ॥೬೨೦॥

ಸ್ಥಾಪಿತಂ ಮಾಂ ತತಸ್ತಸ್ಮಿನ್ನರ್ಚಯಿತ್ವಾ ವಿಚಕ್ಷಣಃ।
ಪುರುಷಂ ಚ ತತಃ ಸತ್ಯಮಚ್ಯುತಂ ಚ ಯುಧಿಷ್ಠಿರ।
ಅನಿರುದ್ಧಂ ಚ ಮಾಂ ಪ್ರಾಹುರ್ವೈಖಾನಸವಿದೋ ಜನಾಃ ॥೬೩೧॥

ಸಮನಾಗಿರುವ ನೆಲದ ಮೇಲೆ (ವೇದಿಕೆಯ ಮೇಲೆ)-ಕರ್ಣಿಕೆಗಳಿಂದ ಯುಕ್ತವಾದ ಅಷ್ಟದಳಪದ್ಮವನ್ನು ರಚಿಸಬೇಕು. ಅಷ್ಟಾಕ್ಷರಮಂತ್ರ ದಿಂದಾಗಲೀ, ದ್ವಾದಶಾಕ್ಷರಮಂತ್ರದಿಂದಾಗಲೀ, ವೈದಿಕಮಂತ್ರಗಳಿಂದಾ ಗಲೀ, ಪುರುಷಸೂಕ್ತದಿಂದಾಗಲೀ ಅದರಲ್ಲಿ ನನ್ನನ್ನು ಆವಾಹಿಸಬೇಕು. ಅಲ್ಲಿ ವೈಖಾನಸಾಗಮವನ್ನು ತಿಳಿದವರು ನನ್ನನ್ನು-ಪುರುಷ, ಸತ್ಯ, ಅಚ್ಯುತ ಮತ್ತು ಅನಿರುದ್ಧ-ಎಂಬ ಹೆಸರುಗಳಿಂದ ತಿಳಿಯುವರು. ಪಾಂಚರಾತ್ರಾಗಮವನ್ನು ತಿಳಿದವರು ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಎಂಬ ಚತುರ್ವ್ಯೂಹಸ್ವರೂಪನೆಂದು ಹೇಳುತ್ತಾರೆ. ಇವುಗಳೇ ಅಲ್ಲದೇ ಸಂಜ್ಞಾಭೇದದಿಂದ ನನ್ನ ಇನ್ನೂ ಅನೇಕಮೂರ್ತಿಗಳೂ ಇವೆ. ಹೆಸರುಗಳು ಬೇರೆಯೇ ಹೊರತು ಅರ್ಥವು ಬೇರೆಯಿಲ್ಲ. ಈ ನಾಮಗಳ ಅರ್ಥವೆಲ್ಲವೂ ನಾನೊಬ್ಬನೇ ಆಗಿದ್ದೇನೆ. ಹೀಗೆ ಭಾವಿಸಿ ವಿದ್ವಾಂಸನು ನನ್ನನ್ನು ಪೂಜಿಸಬೇಕು."

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

"ಅಚ್ಯುತನೇ! ನಿನ್ನ ಭಕ್ತರು ಎಂತಹವರು? ಅವರ ವ್ರತ-ನಿಯಮಗಳಾವುವು? ಭಕ್ತನಾದ ನನಗೆ ಈ ವಿಷಯವನ್ನು ಹೇಳುವ ಕೃಪೆಮಾಡು."

ಶ್ರೀಕೃಷ್ಣನು ಹೇಳುತ್ತಾನೆ:

ಅನನ್ಯದೇವತಾಭಕ್ತಾ ಯೇ ಮದ್ಭಕ್ತಜನಪ್ರಿಯಾಃ।
ಮಾಮೇವ ಶರಣಂ ಪ್ರಾಪ್ತಾ ಮದ್ಭಕ್ತಾಸ್ತೇ ಪ್ರಕೀರ್ತಿತಾಃ ॥೬೩೪॥

"ಯಾರು ಇತರ ದೇವತೆಗಳಿಗೆ ಭಕ್ತರಾಗಿರದೇ ಅನನ್ಯರಾಗಿ ನನ್ನನ್ನೇ ಶರಣುಹೊಂದಿ ನನ್ನ ಭಕ್ತರೇ ಆಗಿರುವರೋ ಮತ್ತು ನನ್ನ ಭಕ್ತಜನರಿಗೆ ಪ್ರಿಯರಾಗಿರುವರೋ–ಅಂತಹವರು ನನ್ನ ಭಕ್ತರೆಂದು ಹೇಳಲ್ಪಡುತ್ತಾರೆ. ಸ್ವರ್ಗಪ್ರಾಪಕವಾದ, ಯಶೋದಾಯಕವಾದ, ವಿಶೇಷವಾಗಿ ನನಗೆ ಅತ್ಯಂತ ಪ್ರಿಯವಾದ ಈ ವ್ರತಗಳನ್ನು ನನ್ನ ಭಕ್ತನು ಆಚರಣೆಯಲ್ಲಿಟ್ಟುಕೊಳ್ಳಬೇಕು.

ನಾನ್ಯದಾಚ್ಛಾದಯೇದ್ವಸ್ತ್ರಂ ಮದ್ಭಕ್ತೋ ಜಲತಾರಣೇ ।
ಸ್ವಸ್ಥಸ್ತು ನ ದಿವಾ ಸ್ವಪ್ಯೇನ್ಮಧುಮಾಂಸಾನಿ ವರ್ಜಯೇತ್ ॥೬೨೯॥

ನನ್ನ ಭಕ್ತನು ನೀರನ್ನು ದಾಟುವಾಗ ಒಂದೇ ವಸ್ತ್ರವನ್ನು ಧಾರಣೆಮಾಡಬೇಕೇ ಹೊರತು ಎರಡನೆಯ ವಸ್ತ್ರವನ್ನು ಧಾರಣೆ ಮಾಡಬಾರದು. (ಭವಸಾಗರವನ್ನು ದಾಟುವಾಗ ನನ್ನ ಭಕ್ತನು ನನ್ನೊಬ್ಬನನ್ನು ಆಶ್ರಯವನ್ನಾಗಿ ಹೊಂದಬೇಕೇ ಹೊರತು ಎರಡನೆಯವನನ್ನು ಆಶ್ರಯಿಸಬಾರದು. ಎಂಬ ಅಲಂಕಾರಿಕವಾದ ಅರ್ಥವನ್ನು ಇದು ಸೂಚಿಸುತ್ತದೆ.) ಆರೋಗ್ಯದಿಂದಿರುವಾಗ ಹಗಲಿನಲ್ಲಿ ಮಲಗಬಾರದು. ಮಧು-ಮಾಂಸಗಳನ್ನು ವರ್ಜಿಸಬೇಕು.

ಪ್ರದಕ್ಷಿಣಂ ವ್ರಜೇದ್ವಿಪ್ರಾನ್ಗಾಮಶ್ವತ್ಥಂ ಹುತಾಶನಮ್।
ನ ಧಾವೇತ್ಪತಿತೇ ವರ್ಷೇ ನಾಗ್ರಭಿಕ್ಷಾಂ ಚ ಲೋಪಯೇತ್ ॥

ಹಾದಿಯಲ್ಲಿ ಸಿಕ್ಕುವ ಬ್ರಾಹ್ಮಣ, ಗೋವು, ಅಶ್ವತ್ಥವೃಕ್ಷ, ಅಗ್ನಿ-ಇವುಗಳನ್ನು ಬಲಕ್ಕೆ ಬಿಟ್ಟುಕೊಂಡು ಹೋಗಬೇಕು. ಮಳೆಗರೆಯುತ್ತಿರುವಾಗ ಓಡಬಾರದು. ಭಿಕ್ಷುವಿಗೆ ಅಗ್ರಭಿಕ್ಷೆಯನ್ನು ಹಾಕುವುದನ್ನು ಬಿಡಬಾರದು.

ಪ್ರತ್ಯಕ್ಷಲವಣಂ ನಾದ್ಯಾತ್ಸೌಭಾಞ್ಜನಕರಞ್ಜನೌ।
ಗ್ರಾಸಮುಷ್ಟಿಂ ಗವೇ ದದ್ಯಾದ್ಧಾನ್ಯಾಮ್ಲಂ ಚೈವ ವರ್ಜಯೇತ್ ॥೬೩೦॥

ಭೋಜನಪಾತ್ರಕ್ಕೆ ನೇರವಾಗಿ ಉಪ್ಪನ್ನು ಹಾಕಿಕೊಂಡು ಊಟಮಾಡಬಾರದು. (ಕಡಿಮೆಯಾಗಿದ್ದರೆ ಅಥವಾ ಉಪ್ಪನ್ನೇ ಹಾಕಿರದಿದ್ದರೆ ಆಹಾರವಸ್ತುವಿನೊಡನೆ ಉಪ್ಪನ್ನು ಬೆರೆಸಿದ ನಂತರ ಬಡಿಸಿಕೊಂಡು ಊಟಮಾಡಬಹುದು.) ಸೌಭಾಂಜನವನ್ನಾಗಲೀ ಹೊಂಗೇಎಣ್ಣೆಯನ್ನಾಗಲೀ ತಿನ್ನಬಾರದು. ಗೋವಿಗೆ ಪ್ರತಿನಿತ್ಯವೂ ಮುಷ್ಟಿಯಷ್ಟು ಗ್ರಾಸವನ್ನು ತಿನ್ನಿಸಬೇಕು. ಹುಳಿಗಂಜಿಯನ್ನು ಕುಡಿಯಬಾರದು.

ತಥಾ ಪರ್ಯುಷಿತಂ ಚಾಪಿ ಪಕ್ವಂ ಪರಗೃಹಾಗತಮ್।
ಅನಿವೇದಿತಂ ಚ ಯದ್ದ್ರವ್ಯಂ ತತ್ಪ್ರಯತ್ನೇನ ವರ್ಜಯೇತ್ ॥

ಇತರರ ಮನೆಗಳಿಂದ ತಂದ ಪಕ್ವಾನ್ನವನ್ನಾಗಲೀ, ಹಳೆಯದಾದ

ಅಥವಾ ಹಳಸಿದ (ತಂಗಳು) ಅನ್ನವನ್ನಾಗಲೀ, ದೇವರಿಗೆ ನಿವೇದನಮಾಡದ ಅನ್ನವನ್ನಾಗಲೀ ಪ್ರಯತ್ನಪೂರ್ವಕವಾಗಿ ಸೇವಿಸಬಾರದು.

ವಿಭೀತಕಕರಞ್ಜಾನಾಂ ಛಾಯಾಂ ದೂರೇ ವಿವರ್ಜಯೇತ್।
ವಿಪ್ರದೇವಪರೀವಾದಾನ್ನ ವದೇತ್ಪೀಡಿತೋಽಪಿ ಸನ್ ॥೬೩೧॥

ತಾರೇಗಿಡದ ನೆರಳಿನಲ್ಲಾಗಲೀ ಹೊಂಗೇಮರದ ನೆರಳಿನಲ್ಲಾಗಲೀ ಕುಳಿತುಕೊಳ್ಳಬಾರದು. (ದೂರದಿಂದಲೇ ಅವುಗಳನ್ನು ವರ್ಜಿಸಬೇಕು.) ಕಷ್ಟದಿಂದ ಪೀಡಿತನಾಗಿದ್ದರೂ ಬ್ರಾಹ್ಮಣರನ್ನಾಗಲೀ ದೇವತೆಗಳನ್ನಾಗಲೀ ನಿಂದಿಸಬಾರದು.

ಉದಿತೇ ಸವಿತರ್ಯಾಪ್ಯ ಕ್ರಿಯಾಯುಕ್ತಸ್ಯ ಧೀಮತಃ।
ಚತುರ್ವೇದವಿದಶ್ಚಾಪಿ ದೇಹೇ ಷಡ್ವೃಷಲಾಃ ಸ್ಮೃತಾಃ ॥೬೩೨॥

ಸೂರ್ಯೋದಯದಿಂದ ಪ್ರಾರಂಭಿಸಿ ನಿತ್ಯವೂ ಕ್ರಿಯಾಶೀಲನಾಗಿರುವ, ಧೀಮಂತನಾದ, ಚತುರ್ವೇದಪಾರಂಗತನಾದ ಬ್ರಾಹ್ಮಣನ ಶರೀರದಲ್ಲಿಯೂ ಆರು ವೃಷಲರಿದ್ದಾರೆಂದು ಹೇಳುತ್ತಾರೆ.

ಕ್ಷತ್ರಿಯಾಃ ಸಪ್ತ ವಿಜ್ಞೇಯಾ ವೈಶ್ಯಾಸ್ತ್ವಷ್ಟೌ ಪ್ರಕೀರ್ತಿತಾಃ।
ನಿಯತಾಃ ಪಾಣ್ಡವಶ್ರೇಷ್ಠ ಶೂದ್ರಾಣಾಮೇಕವಿಂಶತಿಃ ॥೬೩೩॥

ಹಾಗೆಯೇ ಶರೀರದಲ್ಲಿ ಏಳು ಮಂದಿ ಕ್ಷತ್ರಿಯರೂ, ಎಂಟು ಮಂದಿ ವೈಶ್ಯರೂ, ಇಪ್ಪತ್ತೊಂದು ಮಂದಿ ಶೂದ್ರರೂ ನಿಯತರಾಗಿ ಇದ್ದೇ ಇರುತ್ತಾರೆ-ಎಂದು ತಿಳಿಯಬೇಕು.

ಕಾಮಃ ಕ್ರೋಧಶ್ಚ ಲೋಭಶ್ಚ ಮೋಹಶ್ಚ ಮದ ಏವ ಚ ।
ಮಹಾಮೋಹಶ್ಚ ಇತ್ಯೇತೇ ದೇಹೇ ಷಡ್ವೃಷಲಾಃ ಸ್ಮೃತಾಃ ॥೬೩೪॥

ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮಹಾಮೋಹ ಅಥವಾ ಮಾತ್ಸರ್ಯ–ಇವು ಆರು ಶರೀರದಲ್ಲಿರುವ ವೃಷಲರು. (ಧರ್ಮಘಾತಕಶಕ್ತಿಗಳು.)

ಗರ್ವಃ ಸ್ತಮ್ಭೋಹ್ಯಹಂಕಾರ ಈರ್ಷ್ಯಾ ಚ ದ್ರೋಹ ಏವ ಚ ।
ಪಾರುಷ್ಯಂ ಕ್ರೂರತಾ ಚೈವ ಸಪ್ತೈತೇ ಕ್ಷತ್ರಿಯಾಃ ಸ್ಮೃತಾಃ ॥೬೩೫॥

ಗರ್ವ, ಸ್ತಂಭ (ಜಡತ್ವ), ಅಹಂಕಾರ, ಈರ್ಷ್ಯೆ, ದ್ರೋಹ, ಪಾರುಷ್ಯ, ಕ್ರೌರ್ಯ-ಈ ಏಳೂ ಶರೀರದಲ್ಲಿರುವ ಕ್ಷತ್ರಿಯರು. (ರಜಃಪ್ರಧಾನವಾದ ಶಕ್ತಿಗಳು.)

ತೀಕ್ಷ್ಣತಾ ನಿಕೃತಿರ್ಮಾಯಾ ಶಾಠ್ಯಂ ದಮ್ಭೋಹ್ಯನಾರ್ಜವಮ್।
ಪೈಶುನ್ಯಮನೃತಂ ಚೈವ ವೈಶ್ಯಾಸ್ತ್ವಷ್ಟೌ ಪ್ರಕೀರ್ತಿತಾಃ ॥೬೩೬॥

ತೀಕ್ಷ್ಣತೆ, ಕಪಟ, ಮಾಯೆ, ಶಠತ್ವ, ದಂಭ, ಕುಟಿಲತೆ, ಚಾಡಿಕೋರತನ, ಅಸತ್ಯಭಾಷಣ-ಈ ಎಂಟು ಶರೀರದಲ್ಲಿರುವ ವೈಶ್ಯರು. (ಕೇವಲ ಲೌಕಿಕಲಾಭಪ್ರಧಾನವಾದ ರಜಸ್ತಮೋಗುಣಗಳಿಂದ ಉಂಟಾದ ಶಕ್ತಿಗಳು.)

ತೃಷ್ಣಾ ಬುಭುಕ್ಷಾ ನಿದ್ರಾ ಚ ಹ್ಯಾಲಸ್ಯಂ ಚಾಘೃಣಾದಯಃ।
ಆಧಿಶ್ಚಾಪಿ ವಿಷಾದಶ್ಚ ಪ್ರಮಾದೋ ಹೀನಸತ್ತ್ವತಾ ॥೬೩೭॥
ಭಯಂ ವಿಕ್ಲವತಾ ಜಾಡ್ಯಂ ಪಾಪಕಂ ಮನ್ಯುರೇವ ಚ ।
ಆಶಾ ಚಾಶ್ರದ್ದಧಾನತ್ವಮನವಸ್ಥಾಪ್ಯಯನ್ತ್ರಣಮ್।
ಅಶೌಚಂ ಮಲಿನತ್ವಂ ಚ ಶೂದ್ರಾ ಹ್ಯೇತೇ ಪ್ರಕೀರ್ತಿತಾಃ ॥೬೩೮॥

ತೃಷ್ಣೆ, ಯಾವಾಗಲೂ ತಿನ್ನುವ ಇಚ್ಛೆ, ನಿದ್ರೆ, ಆಲಸ್ಯ, ನಿರ್ದಯತೆ, ಕ್ರೌರ್ಯ, ಮಾನಸಿಕಚಿಂತೆ, ವಿಷಾದ, ಪ್ರಮಾದ, ಅಧೀರತೆ, ಭಯ, ಗಾಬರಿಗೊಳ್ಳುವುದು, ಜಡತ್ವ, ಪಾಪಕಾರ್ಯಾನುಷ್ಠಾನ, ಸದಾ ಕ್ರೋಧ, ಮಿತಿಮೀರಿದ ಆಶೆ, ಅಶ್ರದ್ಧೆ, ವ್ಯವಸ್ಥೆಯಿಲ್ಲದಿರುವಿಕೆ, ಮನಸ್ಸು-ಇಂದ್ರಿಯಗಳನ್ನು ನಿಯಂತ್ರಣಗೊಳಿಸದೇ ಇರುವಿಕೆ, ಅಪವಿತ್ರತೆ ಮತ್ತು ಮಾಲಿನ್ಯ–ಈ ಇಪ್ಪತ್ತೊಂದು ಶರೀರದಲ್ಲಿರುವ ಶೂದ್ರರು. (ತಮಃಪ್ರಧಾನ ವಾದ ಶಕ್ತಿಗಳು.)

ಯಸ್ಮಿನ್ನೇತೇ ನ ದೃಶ್ಯನ್ತೇ ಸ ವೈ ಬ್ರಾಹ್ಮಣ ಉಚ್ಯತೇ ॥೬೩೯॥

ಇವು ಯಾವನಲ್ಲಿರುವುದಿಲ್ಲವೋ ಅವನೇ ಬ್ರಾಹ್ಮಣನು. ಆದುದರಿಂದ ಬ್ರಾಹ್ಮಣನು ನನಗೆ ಪ್ರಿಯನಾಗಬೇಕಾದರೆ ಸಾತ್ತ್ವಿಕನಾಗಿ, ನಿತ್ಯಶುಚಿಯಾಗಿ, ಕ್ರೋಧರಹಿತನಾಗಿ ನನ್ನನ್ನು ಯಾವಾಗಲೂ ಪೂಜಿಸಬೇಕು.

ಅಲೋಲಜಿಹ್ವಃ ಸಮುಪಸ್ಥಿತೋ ಧೃತಿಂ
ನಿಧಾಯ ಚಕ್ಷುರ್ಯುಗಮಾತ್ರಮೇವ ತತ್ ।

ಮನಶ್ಚ ವಾಚಂ ಚ ನಿಗೃಹ್ಯ ಚಞ್ಚಲಂ
ಭಯಾನ್ನಿವೃತ್ತೋ ಮಮ ಭಕ್ತ ಉಚ್ಯತೇ ॥೬೪೦॥

ಯಾವನಿಗೆ ನಾಲಿಗೆಯ ಚಪಲವಿಲ್ಲವೋ, ಯಾವನು ಮಹಾಧೈರ್ಯಶಾಲಿಯೋ, ಚಂಚಲವಾದ ಮನಸ್ಸನ್ನೂ ಮತ್ತು ವಾಣಿಯನ್ನೂ ನಿಗ್ರಹಿಸಿ, ಎರಡು ಕಣ್ಣುಗಳ ದೃಷ್ಟಿಯನ್ನೂ ಜೊತೆಗೂಡಿಸಿ ನನ್ನಲ್ಲಿಟ್ಟು ಧ್ಯಾನಿಸುವನೋ, ಭಯದಿಂದ ನಿವೃತ್ತನಾಗಿರುವನೋ (ನಿರ್ಭಯನೋ) ಅವನೇ ನನ್ನ ಭಕ್ತನು.

ಈದೃಶಾಧ್ಯಾತ್ಮಿನೋ ಯೇ ತು ಬ್ರಾಹ್ಮಣಾ ನಿಯತೇನ್ದ್ರಿಯಾಃ।
ತೇಷಾಂ ಶ್ರಾದ್ಧೇಷು ತೃಪ್ಯನ್ತಿ ತೇನ ತೃಪ್ತಾಃ ಪಿತಾಮಹಾಃ ॥೬೪೧॥

ಇಂತಹ ಅಧ್ಯಾತ್ಮಜ್ಞಾನದಿಂದ ಯುಕ್ತರಾದ, ಜಿತೇಂದ್ರಿಯರಾದ ಬ್ರಾಹ್ಮಣರು ಶ್ರಾದ್ಧಗಳಲ್ಲಿ ಭೋಜನಮಾಡಿ ತೃಪ್ತರಾದರೆ ಕರ್ತೃವಿನ ಪಿತೃ-ಪಿತಾಮಹರೂ ತೃಪ್ತರಾಗುತ್ತಾರೆ.

ಧರ್ಮೋ ಜಯತಿ ನಾಧರ್ಮಃ ಸತ್ಯಂ ಜಯತಿ ನಾನೃತಮ್।
ಕ್ಷಮಾ ಜಯತಿ ನ ಕ್ರೋಧಃ ಕ್ಷಮಾವಾನ್ಬ್ರಾಹ್ಮಣೋ ಭವೇತ್ ॥

ಧರ್ಮವೇ ಜಯಿಸುತ್ತದೆ. ಅಧರ್ಮವೆಂದಿಗೂ ಜಯಿಸುವುದಿಲ್ಲ. ಸತ್ಯವೇ ಜಯಿಸುತ್ತದೆ. ಅಸತ್ಯವೆಂದಿಗೂ ಜಯಿಸುವುದಿಲ್ಲ. ಕ್ಷಮಯೇ ಜಯಿಸುತ್ತದೆ. ಕ್ರೋಧವೆಂದಿಗೂ ಜಯಿಸುವುದಿಲ್ಲ. ಆದುದರಿಂದ ಬ್ರಾಹ್ಮಣನು ಯಾವಾಗಲೂ ಕ್ಷಮಾವಂತನಾಗಿರಬೇಕು.”

ವೈಷ್ಣವಧರ್ಮ-೧೦

ಕಪಿಲಾಧೇನುವಿನ ಮತ್ತು ಅದರ ದಾನದ ಮಹಿಮೆ: ಕಪಿಲಾಧೇನುವಿನ ಹತ್ತು ಭೇದಗಳು

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ದಾನಗಳ ಮತ್ತು ತಪಸ್ಸಿನ ಪುಣ್ಯಫಲವನ್ನು ಕೇಳಿ ಸಂತೋಷಗೊಂಡ ಧರ್ಮಪುತ್ರನು ಕೇಶವನನ್ನು ಪುನಃ ಪ್ರಶ್ನಿಸಿದನು:

“ಮಾಧವನೇ! ಅಗ್ನಿಹೋತ್ರದ ಸಿದ್ಧಿಗಾಗಿ ಚತುರ್ಮುಖಬ್ರಹ್ಮನು

ಕಪಿಲಾ ಎಂಬ ಪುಣ್ಯಸ್ವರೂಪಳಾದ ಹೋಮಧೇನುವನ್ನು ಹಿಂದೆ ಸೃಷ್ಟಿಸಿದನು. ಅದನ್ನು ಬ್ರಾಹ್ಮಣರಿಗೆ ಹೇಗೆ ದಾನಕೊಡಬೇಕು? ಯಾವ ದಿನದಲ್ಲಿ ಕೊಡಬೇಕು? ಪುಣ್ಯಲಕ್ಷಣಗಳುಳ್ಳ ಆ ಧೇನುವನ್ನು ಎಂತಹ ಬ್ರಾಹ್ಮಣನಿಗೆ ದಾನಕೊಡಬೇಕು? ಬ್ರಹ್ಮನು ಕಪಿಲಾಧೇನುಗಳಲ್ಲಿ ಎಷ್ಟು ಭೇದಗಳಿವೆಯೆಂದು ಹೇಳಿದ್ದಾನೆ? ಆ ಧೇನುವನ್ನು ದಾನಕೊಡುವವನು ಹೇಗಿರಬೇಕು? ಇದನ್ನು ಯಥಾವತ್ತಾಗಿ ನಿನ್ನಿಂದ ಕೇಳಿ ತಿಳಿಯಬೇಕೆಂದಿರುವೆನು. ಹೇಳುವ ಕೃಪೆಮಾಡು.”

ಜನಮೇಜಯ! ರಾಜಸಭೆಯಲ್ಲಿ ಧರ್ಮಪುತ್ರನು ಶ್ರೀಕೃಷ್ಣನನ್ನು ಹೀಗೆ ಪ್ರಶ್ನಿಸಲು ಕಪಿಲಾಧೇನುಗಳ ಸಂಖ್ಯೆಯನ್ನೂ ಮತ್ತು ಅವುಗಳ ಮಹಿಮೆಯನ್ನೂ ಮಾಧವನು ಹೇಳತೊಡಗಿದನು:

“ಪಾಂಡವನೇ! ಪವಿತ್ರವೂ, ಪಾವನವೂ, ಶ್ರೇಷ್ಠವೂ ಆದ ಕಪಿಲಾ ಗೋವಿನ ಇತಿಹಾಸವನ್ನು ಕೇಳು. ಇದನ್ನು ಕೇಳುವುದರಿಂದ ಮನುಷ್ಯನು ಮಹಾಪಾಪಕರ್ಮಿಯೇ ಆಗಿದ್ದರೂ ಸಕಲಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ.

ಪೂರ್ವಕಾಲದಲ್ಲಿ ಬ್ರಹ್ಮನು ಅಗ್ನಿಹೋತ್ರದ ಸಲುವಾಗಿಯೂ ಮತ್ತು ಬ್ರಾಹ್ಮಣನ ಸಲುವಾಗಿಯೂ ಸಮಸ್ತವಾದ ತೇಜಸ್ಸುಗಳನ್ನೂ ಒಂದೆಡೆಯಲ್ಲಿ ಸಂಗ್ರಹಿಸಿ ಹಾಗೆ ಸಂಗ್ರಹಿಸಿದ ತೇಜಸ್ಸಿನಿಂದಲೇ ಕಪಿಲಾಧೇನುವನ್ನು ಸೃಷ್ಟಿಸಿದನು.

ಪವಿತ್ರಂ ಚ ಪವಿತ್ರಾಣಾಂ ಮಙ್ಗಲಾನಾಂ ಚ ಮಙ್ಗಲಮ್ ।
ಪುಣ್ಯಾನಾಂ ಪರಮಂ ಪುಣ್ಯಂ ಕಪಿಲಾ ಪಾಣ್ಡುನನ್ದನ ॥೬೫೧॥

ಕಪಿಲಾಧೇನುವು ಪವಿತ್ರವಸ್ತುಗಳಿಗೂ ಪರಮಪವಿತ್ರವಾದುದು. ಸಕಲ ಮಂಗಳವಸ್ತುಗಳಿಗೂ ಮಂಗಳಕರವಾದುದು. ಪುಣ್ಯಗಳೆಲ್ಲಕ್ಕೂ ಪರಮಪುಣ್ಯಸ್ವರೂಪವಾದುದು. ತಪಸ್ಸುಗಳಲ್ಲಿ ಶ್ರೇಷ್ಠವಾದ ತಪಸ್ಸೇ ಅದಾಗಿದೆ. ವ್ರತಗಳಲ್ಲಿ ಉತ್ತಮವಾದ ವ್ರತವೂ ಅದೇ ಆಗಿದೆ. ದಾನಗಳಲ್ಲಿ ಶ್ರೇಷ್ಠವಾದ ದಾನವೂ ಅದೇ ಆಗಿದೆ. ಎಲ್ಲದರ ಅಕ್ಷಯಕ್ಕೂ ಇದೇ

ಕಾರಣವಾಗಿದೆ. ಬ್ರಾಹ್ಮಣನು ಕಪಿಲಾಧೇನುವಿನ ಹಾಲಿನಿಂದಾಗಲೀ, ಮೊಸರಿನಿಂದಾಗಲೀ, ತುಪ್ಪದಿಂದಾಗಲೀ ಸಾಯಂಕಾಲ ಮತ್ತು ಪ್ರಾತಃಕಾಲಗಳಲ್ಲಿ ಅಗ್ನಿಹೋತ್ರವನ್ನು ಮಾಡಬೇಕು. ಕಪಿಲಾಧೇನುವಿನ ಹಾಲಿನಿಂದಾಗಲೀ, ಮೊಸರಿನಿಂದಾಗಲೀ, ತುಪ್ಪದಿಂದಾಗಲೀ ಯಾವ ಬ್ರಾಹ್ಮಣರು ವಿಧಿವತ್ತಾಗಿ ಅಗ್ನಿಹೋತ್ರಮಾಡುವರೋ, ಅತ್ಯಂತ ಭಕ್ತಿಭಾವದಿಂದ ಅತಿಥಿಗಳನ್ನು ಸತ್ಕರಿಸುವರೋ, ವೃಷಲಾನ್ನದಿಂದ ವಿರತರಾಗಿರುವರೋ, ದಂಭ ಮತ್ತು ಅಸತ್ಯಗಳನ್ನು ವರ್ಜಿಸಿರುವರೋ–ಅಂತಹ ಬ್ರಾಹ್ಮಣರು ಆದಿತ್ಯಸದೃಶವಾದ ವಿಮಾನಗಳಲ್ಲಿ ಕುಳಿತು ಸೂರ್ಯಮಂಡಲದ ಮಧ್ಯದಿಂದ ಶ್ರೇಷ್ಠವಾದ ಬ್ರಾಹ್ಮಲೋಕಕ್ಕೆ ಹೋಗುತ್ತಾರೆ. ಬ್ರಹ್ಮನ ಆಜ್ಞೆಯಂತೆ ಕಪಿಲಾಧೇನುವಿನ ಕೊಂಬುಗಳ ತುದಿಯಲ್ಲಿ ಸಕಲತೀರ್ಥಗಳೂ ಸರ್ವದಾ ಉಪಸ್ಥಿತವಾಗಿರುತ್ತವೆ. ಯಾವ ಮನುಷ್ಯನು ಪ್ರಾತಃಕಾಲದಲ್ಲೆದ್ದು ಕಪಿಲೆಯ ತಲೆಯಲ್ಲಿರುವ ಕೊಂಬುಗಳ ಮಧ್ಯದಿಂದ ಹರಿದುಬರುವ ನೀರನ್ನು ಪರಿಶುದ್ಧನಾಗಿ ಮತ್ತು ವಿನಯಪೂರ್ವಕವಾಗಿ ಶಿರಸ್ಸಿನಿಂದ ಧರಿಸುವನೋ–ಅವನು ಆ ಪುಣ್ಯತೀರ್ಥಸ್ನಾನದಿಂದ ಒಡನೆಯೇ ಪಾಪಗಳನ್ನು ಕಳೆದುಕೊಳ್ಳುತ್ತಾನೆ. ಬೆಂಕಿಯು ಹುಲ್ಲಿನ ಮೆದೆಯನ್ನು ಕ್ಷಣಮಾತ್ರದಲ್ಲಿ ಭಸ್ಮಮಾಡಿಬಿಡುವಂತೆ–ಕಪಿಲಾಧೇನುವಿನ ಗಂಜಲವನ್ನು ಯಾವನು ಪ್ರಾಣವಾಯುಗಳಿರುವ ಸ್ಥಳಗಳಲ್ಲಿ ಸಂಪ್ರೋಕ್ಷಿಸಿಕೊಳ್ಳುವನೋ ಮತ್ತು ಆ ಗೋಮೂತ್ರದಿಂದಲೇ ಸ್ನಾನಮಾಡುವನೋ–ಅಂತಹವನು ಮೂವತ್ತು ಜನ್ಮಗಳಿಂದ ಸಂಚಿತವಾದ ಪಾಪಗಳಿಂದಲೂ ವಿಮುಕ್ತನಾಗುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ. ಪ್ರತಿನಿತ್ಯವೂ ಪ್ರಾತಃಕಾಲದಲ್ಲಿ ಹಾಸಿಗೆಯಿಂದೆದ್ದೊಡನೆಯೇ ಒಂದು ಮುಷ್ಟಿ ಹುಲ್ಲನ್ನು ಕಪಿಲಾಧೇನುವಿಗೆ ತಿನ್ನಿಸುವವನ ಮೂವತ್ತು ದಿನಗಳ ಪಾಪಗಳು ಒಡನೆಯೇ ಪರಿಹಾರವಾಗುತ್ತವೆ. ಯಾವನು ಪ್ರಾತಃಕಾಲದಲ್ಲಿ ಹಾಸಿಗೆಯಿಂದ ಎದ್ದೊಡನೆಯೇ ಭಕ್ತಿಪೂರ್ವಕವಾಗಿ ಕಪಿಲಾಧೇನುವಿಗೆ ಪ್ರದಕ್ಷಿಣೆ-ನಮಸ್ಕಾರಗಳನ್ನು ಮಾಡುವನೋ–ಅವನು ಅಖಂಡಭೂಮಂಡಲವನ್ನೇ ಪ್ರದಕ್ಷಿಣೆಮಾಡಿದಂತಾಗುತ್ತದೆ. ಇದರಲ್ಲಿ ಸಂಶಯವೇ ಇಲ್ಲ. ಕಪಿಲಾಧೇನುವಿನ ಪಂಚಗವ್ಯದಿಂದ (ಗೋಮೂತ್ರ, ಸಗಣಿ, ಹಾಲು,

ಮೊಸರು ಮತ್ತು ತುಪ್ಪ) ಸ್ನಾನಮಾಡುವವನು ಪವಿತ್ರನಾಗುತ್ತಾನೆ. ಪಂಚಗವ್ಯದಿಂದ ಸ್ನಾನಮಾಡಿದವನು ಗಂಗಾದಿ ಸರ್ವತೀರ್ಥಗಳಲ್ಲಿಯೂ ಸ್ನಾನಮಾಡಿದಂತಾಗುತ್ತದೆ. ಕಪಿಲಾಧೇನುವನ್ನು ನೋಡಿ ಅದರ ಅಂಬಾ-ಎಂಬ ಧ್ವನಿಯನ್ನು ಕೇಳಿದ್ದೇ ಆದರೆ ಅವನ ಒಂದು ದಿವಸದ ಪಾಪವು ಪರಿಹಾರವಾಗುತ್ತದೆ. ಒಂದು ಸಾವಿರ ಗೋವುಗಳನ್ನು ದಾನಮಾಡಿದವನಿಗೆ ಲಭಿಸುವ ಫಲವೂ ಒಂದು ಕಪಿಲಾಗೋವನ್ನು ದಾನಮಾಡಿದವನಿಗೆ ಲಭಿಸುವ ಫಲವೂ ಒಂದೇ ಎಂದು ಲೋಕಪಿತಾಮಹನಾದ ಬ್ರಹ್ಮನು ಹೇಳಿದ್ದಾನೆ. ಯಾವನಾದರೂ ಪ್ರಮಾದವಶದಿಂದ ಒಂದು ಕಪಿಲಾಧೇನುವನ್ನು ಕೊಂದರೆ ಅವನು ಒಂದು ಸಾವಿರ ಗೋವುಗಳನ್ನು ಕೊಂದ ಪಾಪವನ್ನೇ ಹೊಂದುತ್ತಾನೆ. ಕಪಿಲಾಧೇನುಗಳು ಹತ್ತು ವಿಧವೆಂದು ಬ್ರಹ್ಮನು ಹೇಳಿದ್ದಾನೆ.

ಪ್ರಥಮಾ ಸ್ವರ್ಣಕಪಿಲಾ ದ್ವಿತೀಯಾ ಗೌರಪಿಙ್ಗಲಾ।
ತೃತೀಯಾ ರಕ್ತಪಿಙ್ಗಾಕ್ಷೀ ಚತುರ್ಥೀ ಗಲಪಿಙ್ಗಲಾ ॥೬೬॥
ಪಞ್ಚಮೀ ಬಭ್ರುವರ್ಣಾಭಾ ಷಷ್ಠೀ ಚ ಶ್ವೇತಪಿಙ್ಗಲಾ।
ಸಪ್ತಮೀ ರಕ್ತಪಿಙ್ಗಾಕ್ಷೀ ತ್ವಷ್ಟಮೀ ಖುರಪಿಙ್ಗಲಾ ॥೬೭॥
ನವಮೀ ಪಾಟಲಾ ಜ್ಞೇಯಾ ದಶಮೀ ಪುಚ್ಛಪಿಙ್ಗಲಾ।
ದಶೈತಾಃ ಕಪಿಲಾಃ ಪ್ರೋಕ್ತಾಸ್ತಾರಯನ್ತಿ ನರಂ ಸದಾ ॥೬೮॥

ಹೊಂಬಣ್ಣದಿಂದ ಕೂಡಿರುವುದು ಮೊದಲನೆಯದು. (ಇದನ್ನು ಸ್ವರ್ಣಕಪಿಲಾ ಎಂದು ಕರೆಯುತ್ತಾರೆ.) ಎರಡನೆಯದು ಗೌರಪಿಂಗಳಾ. (ಬಿಳೀ ಮತ್ತು ಕಂದುಹಳದೀ ಬಣ್ಣವುಳ್ಳದ್ದು.) ಮೂರನೆಯದು ಅರಕ್ತಪಿಂಗಾಕ್ಷೀ.(ಕಪ್ಪು ಮತ್ತು ಹಳದೀಬಣ್ಣದ ಕಣ್ಣುಗಳುಳ್ಳದ್ದು.) ನಾಲ್ಕನೆಯದು ಗಲಪಿಂಗಲಾ. (ಕುತ್ತಿಗೆಯಲ್ಲಿ ಮಾತ್ರ ಕಂದುಹಳದೀ ಬಣ್ಣವುಳ್ಳದ್ದು.) ಐದನೆಯದು ಬಭ್ರುವರ್ಣಾಭಾ. (ಕೆಂಪುಬೆರೆತ ಕಂದು ಬಣ್ಣದ್ದು.) ಆರನೆಯದು ಶ್ವೇತಪಿಂಗಲಾ. (ಬಿಳೀ ಮತ್ತು ಕಂದುಹಳದೀ ಬಣ್ಣದ್ದು.) ಏಳನೆಯದು ರಕ್ತಪಿಂಗಾಕ್ಷಿ. (ಕೆಂಪು ಮತ್ತು ಕೆಂದುಹಳದೀ

ಬಣ್ಣದ ಕಣ್ಣುಗಳುಳ್ಳದ್ದು.) ಎಂಟನೆಯದು ಖುರಪಿಂಗಲಾ.(ಗೊರಸುಗಳಲ್ಲಿ ಮಾತ್ರವೇ ಕಂದುಹಳದೀಬಣ್ಣವುಳ್ಳದ್ದು.) ಒಂಬತ್ತನೆಯದು ಪಾಟಲಾ. (ಬಿಳಿಪು ಮತ್ತು ಕೆಂಪುಬೆರೆತ ಬಣ್ಣವುಳ್ಳದ್ದು.) ಹತ್ತನೆಯದು ಪುಚ್ಛಪಿಂಗಲಾ. (ಬಾಲದಲ್ಲಿ ಮಾತ್ರವೇ ಕಂದುಹಳದೀಬಣ್ಣವುಳ್ಳದ್ದು.) ಹೀಗೆ ಕಪಿಲಧೇನುಗಳು ಹತ್ತು ಪ್ರಕಾರವಾಗಿ ಹೇಳಲ್ಪಟ್ಟಿವೆ. ಇವು ಯಾವಾಗಲೂ ಮನುಷ್ಯರನ್ನು ಉದ್ಧರಿಸುತ್ತಲೇ ಇರುತ್ತವೆ. ಇವು ಮಂಗಳಮಯವಾದುವುಗಳು. ಪವಿತ್ರವಾದುವುಗಳು. ಸರ್ವವಿಧಪಾಪಗಳನ್ನೂ ಪರಿಹರಿಸತಕ್ಕುವುಗಳು. ಹೀಗೆಯೇ ಎತ್ತುಗಳೂ ಹತ್ತು ಪ್ರಕಾರವಾಗಿವೆ. ಈ ಕಪಿಲಜಾತಿಯ ಎತ್ತುಗಳನ್ನು ಬ್ರಾಹ್ಮಣನು ಮಾತ್ರವೇ ತನ್ನ ಪ್ರಯಾಣಕ್ಕೆ (ಗಾಡಿಗೆ ಹೂಡಲು) ಉಪಯೋಗಿಸಿಕೊಳ್ಳಬಹುದು. ಇತರ ವರ್ಣದವರು ಯಾವುದೇ ಕಾರಣದಿಂದಲೂ ಇದನ್ನು ಸವಾರಿಗಾಗಿ ಉಪಯೋಗಿಸಬಾರದು. ಬ್ರಾಹ್ಮಣನು ಕೂಡ ಇದನ್ನು ಉಳುವುದಕ್ಕಾಗಲೀ ಬೇರೆಯವರು ಕುಳಿತ ಗಾಡಿಯನ್ನು ಎಳೆಯುವುದಕ್ಕಾಗಲೀ ಉಪಯೋಗಿಸಬಾರದು.

ತಾನು ಪ್ರಯಾಣಮಾಡುವ ಗಾಡಿಗೆ ಕಟ್ಟಿದಾಗಲೂ ಹುಂಕಾರಧ್ವನಿಯಿಂದ ಅಥವಾ ಎಲೆಗಳಿರುವ ಕೋಲಿನಿಂದ ಮೃದುವಾಗಿ ಪ್ರಹರಿಸಿ ಎತ್ತುಗಳು ಮುನ್ನಡೆಯುವಂತೆ ಮಾಡಬೇಕು. ದಂಡದಿಂದಾಗಲೀ, ಕೋಲಿನಿಂದಾಗಲೀ, ಹಗ್ಗದಿಂದಾಗಲೀ ಪ್ರಹರಿಸಬಾರದು. ಎತ್ತುಗಳು ಹಸಿವು-ಬಾಯಾರಿಕೆಯಿಂದ ಕೂಡಿರುವಾಗ ಹಾದಿನಡೆದು ಬಳಲಿರುವಾಗ ಅವುಗಳನ್ನು ಗಾಡಿಗೆ ಕಟ್ಟಬಾರದು. ಇಂದ್ರಿಯಗಳು ಶಿಥಿಲವಾಗಿದ್ದರೆ ಅಂತಹವುಗಳನ್ನು ಗಾಡಿಗೆ ಕಟ್ಟಬಾರದು. ಎತ್ತುಗಳು ಹುಲ್ಲುತಿಂದು ತೃಪ್ತವಾಗುವವರೆಗೂ ಬ್ರಾಹ್ಮಣನು ಭೋಜನಮಾಡಬಾರದು. ಅವು ನೀರುಕುಡಿದನಂತರವೇ ನೀರನ್ನು ಕುಡಿಯಬೇಕು. ಶುಶ್ರೂಷೆಮಾಡಲು ಬಯಸುವ ಪುರುಷನಿಗೆ ಕಪಿಲಾಧೇನುವೇ ತಾಯಿಯಾಗಿರುತ್ತದೆ. ಎತ್ತೇ ತಂದೆಯಾಗಿರುತ್ತದೆ. ದಿನದ ಪೂರ್ವಭಾಗದಲ್ಲಿ (ಪ್ರಾತಃಕಾಲದಲ್ಲಿ) ಮಾತ್ರವೇ ಭಾರಹೊರುವ ಎತ್ತುಗಳನ್ನು ಗಾಡಿಗೆ ಕಟ್ಟುವುದು ಯೋಗ್ಯವಾಗಿದೆ. ದಿನದ ಮಧ್ಯಭಾಗದಲ್ಲಿ (ಮಧ್ಯಾಹ್ನದ ಸಮಯದಲ್ಲಿ) ವಿಶ್ರಮಿಸಿಕೊಳ್ಳಲು ಅವು

ಗಳನ್ನು ಬಿಟ್ಟುಬಿಡಬೇಕು. ದಿನದ ಮೂರನೆಯ ಭಾಗದಲ್ಲಿ ಅವಶ್ಯಕತೆಯಿದ್ದರೆ ಮಾತ್ರ ಗಾಡಿಗೆ ಕಟ್ಟಬಹುದು. ಅವಸರದ ಕಾರ್ಯವಾಗಬೇಕಾಗಿರುವಾಗ ಮತ್ತು ಮಾರ್ಗದಲ್ಲಿ ಕಳ್ಳ-ಕಾಕರು ಬರುವರೆಂಬ ಸಂಶಯವುಂಟಾದಾಗ ಮಧ್ಯಾಹ್ನದ ವೇಳೆಯಲ್ಲಿಯೂ ಗಾಡಿಗೆ ಈ ಎತ್ತುಗಳನ್ನು ಕಟ್ಟಿದರೂ ಪಾಪವಿಲ್ಲ.

ಆದರೆ ವಿಶೇಷಕಾರಣವಿಲ್ಲದೆ ಕಪಿಲಜಾತಿಯ ಎತ್ತುಗಳನ್ನು ಮಧ್ಯಾಹ್ನದವೇಳೆಯಲ್ಲಿ ಗಾಡಿಗೆ ಕಟ್ಟಿದರೆ ಭ್ರೂಣಹತ್ಯಾಪಾಪಕ್ಕೆ ಸಮಾನವಾದ ಪಾಪವೇ ಉಂಟಾಗುತ್ತದೆ. ಹಾಗೆ ಮಾಡಿದವನು ರೌರವನರಕಕ್ಕೆ ಹೋಗುತ್ತಾನೆ. ಯಾವನು ಮೋಹವಶನಾಗಿ ಎತ್ತುಗಳ ಶರೀರದಿಂದ ರಕ್ತವು ಬರುವಂತೆ ಮಾಡುವನೋ–ಅಂತಹ ಪಾಪಾತ್ಮನು ಆ ಪಾಪದಿಂದ ನರಕದಲ್ಲಿ ಬೀಳುತ್ತಾನೆಂಬುದರಲ್ಲಿ ಸಂಶಯವೇ ಇಲ್ಲ. ಎಲ್ಲ ನರಕಗಳಲ್ಲಿಯೂ ನೂರು-ನೂರು ವರ್ಷಗಳಿದ್ದು ಪುನಃ ಈ ಮನುಷ್ಯಲೋಕದಲ್ಲಿ ಎತ್ತಾಗಿಯೇ ಹುಟ್ಟುತ್ತಾನೆ. ಆದುದರಿಂದ ಸಂಸಾರದಿಂದ ಮುಕ್ತಿಯನ್ನು ಬಯಸುವ ಮನುಷ್ಯನು ಕಪಿಲಾಧೇನುವನ್ನು ದಾನವಾಗಿ ಕೊಡಬೇಕು. ಅದಕ್ಕೆ ಯಾವುದೇ ರೀತಿಯ ತೊಂದರೆಯನ್ನೂ ಮಾಡಬಾರದು. ಎಲ್ಲ ಯಜ್ಞಗಳಲ್ಲಿಯೂ ಕಪಿಲಾಧೇನುವನ್ನೇ ದಕ್ಷಿಣೆಯನ್ನಾಗಿ ಕೊಡಬೇಕೆಂದು ಶಾಸ್ತ್ರವಚನವಿದೆ. ಆದುದರಿಂದ ಬ್ರಾಹ್ಮಣರಿಗೆ ಯಜ್ಞಗಳಲ್ಲಿ ಕಪಿಲಾಧೇನುವನ್ನೇ ದಕ್ಷಿಣೆಯಾಗಿ ಕೊಡಬೇಕು. ಯಾವನು ಅಗ್ನಿಹೋತ್ರದ ಹೋಮಾರ್ಥವಾಗಿ ಕಪಿಲಧೇನುವನ್ನು ದರಿದ್ರನಾದ, ಬಳಲಿರುವ, ಮಹಾತೇಜಸ್ವಿಯಾದ ಶ್ರೋತ್ರಿಯ ಬ್ರಾಹ್ಮಣನಿಗೆ ಪ್ರಯತ್ನಪೂರ್ವಕವಾಗಿ ದಾನಮಾಡುವನೋ–ಅವನು ಅಂತಹ ದಾನದಿಂದ ಪೂತಾತ್ಮನಾಗಿ ಅವಸಾನಾನಂತರ ನನ್ನ ಲೋಕಕ್ಕೆ ಹೋಗಿ ಅಲ್ಲಿ ಪೂಜಿಸಲ್ಪಡುತ್ತಾನೆ. ಸುವರ್ಣದಿಂದ ಅಲಂಕರಿಸಲ್ಪಟ್ಟ ಕೊಂಬುಗಳಿಂದಲೂ ಮತ್ತು ಗೊರಸುಗಳಿಂದಲೂ ಕೂಡಿರುವ ಕಪಿಲಾಧೇನುವನ್ನು ಯಾವನು ವಿಷುವಯೋಗದಲ್ಲಿ ಅಥವಾ ದಕ್ಷಿಣಾಯನ ಮತ್ತು ಉತ್ತರಾಯಣ ಸಂಕ್ರಮಣಗಳಲ್ಲಿ ದಾನಮಾಡುವನೋ–ಅವನು ಅಶ್ವಮೇಧಯಾಗಮಾಡಿದ ಫಲವನ್ನು ಹೊಂದುತ್ತಾನೆ. ಸಾವಿರ ಅಗ್ನಿಷ್ಟೋಮಯಾಗಗಳು ಒಂದು

ವಾಜಪೇಯಕ್ಕೆ ಸಮನಾದುದು. ಸಾವಿರ ವಾಜಪೇಯಗಳು ಒಂದು ಅಶ್ವಮೇಧಕ್ಕೆ ಸಮಾನವು. ಸಾವಿರ ಅಶ್ವಮೇಧಗಳು ಒಂದು ರಾಜಸೂಯಕ್ಕೆ ಸಮಾನವು. ವಿಧಿವತ್ತಾಗಿ ಸಾವಿರ ಕಪಿಲಾಧೇನುಗಳನ್ನು ದಾನ ಮಾಡುವುದರಿಂದ ರಾಜಸೂಯಯಾಗವನ್ನು ಮಾಡಿದ ಫಲವನ್ನು ಹೊಂದುವ ಮನುಷ್ಯನು ನನ್ನ ಲೋಕದಲ್ಲಿ ಪೂಜಿಸಲ್ಪಡುತ್ತಾನೆ. ಅಲ್ಲಿಂದ ಅವನು ಪುನಃ ಈ ಲೋಕಕ್ಕೆ ಹಿಂದಿರುಗುವುದಿಲ್ಲ. ದಾನಕೊಟ್ಟ ಕಪಿಲಾಧೇನುವು ತನ್ನ ವಿಶಿಷ್ಟಗುಣಗಳಿಂದ ಕಾಮಧೇನುವಾಗಿ ಪರಲೋಕ ದಲ್ಲಿರುವ ದಾತೃವಿನ ಬಳಿಗೆ ಹೋಗುತ್ತದೆ. ಮಹಾವಾಯುವಿನಿಂದ ಒಯ್ಯಲ್ಪಡುವ ನೌಕೆಯು ತೀರಕ್ಕೆ ದಾಟಿಸಲ್ಪಡುವಂತೆ–ದಾನಮಾಡಿದ ಹಸುವು–ತನ್ನ ಕರ್ಮಗಳಿಂದ ಬಂಧಿಸಲ್ಪಟ್ಟು ಘೋರವಾದ ಅಂಧಕಾರದಿಂದ ಕೂಡಿದ ನರಕದಲ್ಲಿ ಬೀಳುತ್ತಿರುವ ಮನುಷ್ಯನನ್ನು ಉದ್ಧರಿಸುತ್ತದೆ. ಮಂತ್ರದಿಂದ ಅಭಿಮಂತ್ರಿಸಿ ಕೊಟ್ಟ ಔಷಧವು ಮನುಷ್ಯನ ರೋಗಗಳನ್ನು ನಿವಾರಿಸುವಂತೆ–ಸತ್ಪಾತ್ರನಲ್ಲಿ ಕೊಡಲ್ಪಟ್ಟ ಕಪಿಲಾಧೇನುವು ಮನುಷ್ಯನ ಸಕಲಪಾಪಗಳನ್ನೂ ಕ್ಷಣಮಾತ್ರದಲ್ಲಿ ನಾಶಗೊಳಿಸುತ್ತದೆ. ಯಾವರೀತಿಯಲ್ಲಿ ಸರ್ಪವು ಪೊರೆಯನ್ನು ಬಿಟ್ಟು ನೂತನವಾದ ಸುಂದರವಾದ ರೂಪವನ್ನು ಹೊಂದುವುದೋ–ಅದೇ ರೀತಿಯಲ್ಲಿ ಕಪಿಲಾಧೇನುವನ್ನು ದಾನ ಮಾಡಿದವನು ತಾನು ಮಾಡಿದ ಎಲ್ಲ ಪಾಪಗಳಿಂದಲೂ ಬಿಡುಗಡೆ ಹೊಂದಿ ವಿರಾಜಿಸುತ್ತಾನೆ. ಪ್ರಜ್ವಲಿಸುವ ದೀಪವು ಮನೆಯಲ್ಲಿ ಅಡಗಿಕೊಂಡಿರುವ ಕತ್ತಲೆಯನ್ನು ತೊಲಗಿಸುವಂತೆ–ಮನುಷ್ಯನು ಕಪಿಲಾಧೇನುವನ್ನು ದಾನ ಮಾಡಿ ತನ್ನಲ್ಲಡಗಿಕೊಂಡಿರುವ ಪಾಪವನ್ನು ಹೊರಗಟ್ಟುತ್ತಾನೆ. ಯಾವನು ಅನುದಿನವೂ ಅಗ್ನಿಹೋತ್ರವನ್ನು ಮಾಡುವನೋ, ಅತಿಥಿಪ್ರಿಯ ನಾಗಿರುವನೋ, ಶೂದ್ರಾನ್ನದಿಂದ ದೂರವಿರುವನೋ, ಜಿತೇಂದ್ರಿಯನೂ ಸತ್ಯವ್ರತನೂ ಸ್ವಾಧ್ಯಾಯಪರಾಯಣನೂ ಆಗಿರುವನೋ–ಅಂತಹವನಿಗೆ ಕೊಟ್ಟ ಕಪಿಲಾಧೇನುವು ದಾನಿಯನ್ನು ಪರಲೋಕದಲ್ಲಿ ಉದ್ಧರಿಸುತ್ತದೆ.”

ವೈಷ್ಣವಧರ್ಮ-೧೧

ಕಪಿಲಾಧೇನುವಿನಲ್ಲಿರುವ ದೇವತೆಗಳ ವಿವರಣೆ: ಧೇನುವಿನ ಮಹಿಮೆ: ಅಯೋಗ್ಯಬ್ರಾಹ್ಮಣನ, ನರಕಪ್ರಾಪಕವಾದ ಪಾಪಗಳ ಮತ್ತು ಸ್ವರ್ಗಪ್ರಾಪಕವಾದ ಪುಣ್ಯಗಳ ವರ್ಣನೆ

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಹೀಗೆ ಯುಧಿಷ್ಠಿರನು ಶ್ರೇಷ್ಠವೂ ಪುಣ್ಯಪ್ರದವೂ ಆದ ಕಪಿಲಾಧೇನುವಿನ ದಾನದ ವಿಧಿ-ನಿಯಮಗಳನ್ನು ಕೇಳಿ ಸಂತೋಷಗೊಂಡ ಮನಸ್ಸುಳ್ಳವನಾಗಿ ಕೇಶವನನ್ನು ಪುನಃ ಪ್ರಶ್ನಿಸಿದನು:

"ದೇವದೇವೇಶನೇ! ಕಪಿಲಾಧೇನುವನ್ನು ಬ್ರಾಹ್ಮಣನಿಗೆ ದಾನ ಕೊಡುವಾಗ ಅದರ ಶರೀರದಲ್ಲಿ ದೇವತೆಗಳು ಹೇಗೆ ನಿವಾಸಮಾಡುತ್ತಿರುತ್ತಾರೆ? ನೀನು ಹೇಳಿದ ಹತ್ತು ಬಗೆಯ ಕಪಿಲಾಗೋವುಗಳಲ್ಲಿ ಪುಣ್ಯಲಕ್ಷಣಗಳುಳ್ಳ ಧೇನುಗಳು ಯಾವುವು?"

ಜನಮೇಜಯ! ಯುಧಿಷ್ಠಿರನು ಹೀಗೆ ಪ್ರಶ್ನಿಸಲು ಸತ್ಯವಾದಿಯಾದ ಶ್ರೀಕೇಶವನು ಗೋಪನೀಯವಿಷಯಗಳಲ್ಲಿ ಅತ್ಯಂತಗೋಪನೀಯವಾದ ಈ ವಿಷಯವನ್ನು ಹೇಳಲು ಉಪಕ್ರಮಿಸಿದನು:

"ಯುಧಿಷ್ಠಿರ! ಧರ್ಮವೂ ಮತ್ತು ರಹಸ್ಯವೂ ಆಗಿರುವ ಶ್ರೇಷ್ಠವಾದ ಈ ವಿಷಯವನ್ನು ಕೇಳು. ಪುಣ್ಯಪ್ರದವಾದ ಮತ್ತು ಶ್ರೇಷ್ಠವಾದ ಈ ಕಪಿಲಾದಾನಪ್ರಕರಣವನ್ನು ಯಾವನು ಪ್ರತಿನಿತ್ಯವೂ ಹಾಸಿಗೆಯಿಂದ ಎದ್ದೊಡನೆಯೇ ಪಠಿಸುವನೋ-ಅಂತಹ ನನ್ನ ಭಕ್ತನಿಗೆ ಲಭಿಸುವ ಪುಣ್ಯಫಲವೆಷ್ಟೆಂಬುದನ್ನು ಕೇಳು.

ಹಾಸಿಗೆಯಿಂದೆದ್ದು ಈ ಅಧ್ಯಾಯವನ್ನು ಪಾರಾಯಣಮಾಡಿದೊಡನೆಯೇ ಮನುಷ್ಯನು ರಾತ್ರಿಯಲ್ಲಿ ಮನಸ್ಸಿನಿಂದಾಗಲೀ, ಮಾತಿನಿಂದಾಗಲೀ, ಕ್ರಿಯೆಯಿಂದಾಗಲೀ ಬುದ್ಧಿಪೂರ್ವಕವಾಗಿ ಮಾಡಿದ ಪಾಪವನ್ನು ಕಳೆದುಕೊಳ್ಳುತ್ತಾನೆ. ಯಾವನು ಶ್ರಾದ್ಧಕಾಲದಲ್ಲಿ ಈ ಅಧ್ಯಾಯವನ್ನು ಪಾರಾಯಣಮಾಡುತ್ತಾ ಬ್ರಾಹ್ಮಣರನ್ನು ಭೋಜನಾದಿಗಳಿಂದ ತೃಪ್ತಿಗೊಳಿಸುವನೋ-ಅಂತಹವನ ಪಿತೃಗಳು ಅತ್ಯಂತಹರ್ಷಿತರಾಗಿ ಅಮೃತವನ್ನೇ

ಪಾನಮಾಡುತ್ತಾರೆ. (ಅಮೃತವನ್ನು ಪಾನಮಾಡಿದಷ್ಟು ಹರ್ಷಿತರಾಗುತ್ತಾರೆ.) ನನ್ನಲ್ಲಿಯೇ ನೆಟ್ಟಮನಸ್ಸುಳ್ಳವನಾಗಿ ಯಾವನು ಈ ಅಧ್ಯಾಯವನ್ನು ಭಕ್ತಿಯಿಂದ ಶ್ರವಣಮಾಡುವನೋ–ರಾತ್ರಿಯಲ್ಲಿ ಮಾಡಿದ ಅವನ ಪಾಪವು ಒಡನೆಯೇ ನಷ್ಟವಾಗಿ ಹೋಗುತ್ತದೆ.

ಯುಧಿಷ್ಠಿರ! ನಾನು ಹತ್ತು ಬಗೆಯ ಕಪಿಲಾಧೇನುಗಳನ್ನು ನಿನಗೆ ಹೇಳಿದೆನು. ಆ ಹತ್ತರಲ್ಲಿ ಯಾವ ಧೇನುಗಳಲ್ಲಿ ವಿಶೇಷವಾದ ಪುಣ್ಯಲಕ್ಷಣಗಳಿವೆಯೆಂಬುದನ್ನು ಹೇಳುವೆನು ಕೇಳು. ಆ ಹತ್ತು ಜಾತಿಯ ಕಪಿಲಾಧೇನುಗಳಲ್ಲಿ ನಾಲ್ಕು ಜಾತಿಯ ಧೇನುಗಳು ಪರಮಶ್ರೇಷ್ಠವಾದುವು. ಪುಣ್ಯಪ್ರದವಾದುವು ಮತ್ತು ಪಾಪಗಳನ್ನು ಹೋಗಲಾಡಿಸತಕ್ಕುವು.

ಸುವರ್ಣಕಪಿಲಾ ಪುಣ್ಯಾ ತಥಾ ರಕ್ತಾಕ್ಷಪಿಙ್ಗಲಾ ।
ಪಿಙ್ಗಲಾಕ್ಷೀ ಚ ಯಾ ಗೌಶ್ಚ ಯಾ ಸ್ಯಾತ್ಪಿಙ್ಗಲಪಿಙ್ಗಲಾ ॥೯೮॥
ಏತಾಶ್ಚತಸ್ರಃ ಪ್ರವರಾಃ ಪವಿತ್ರಾಃ ಪಾಪನಾಶನಾಃ ।
ನಮಸ್ಕೃತಾ ವಾ ದೃಷ್ಟ್ವಾ ವಾ ಘ್ನನ್ತಿ ಪಾಪಂ ನರಸ್ಯ ತು ॥೯೯॥

ಸುವರ್ಣಪಿಂಗಲಾ, ರಕ್ತಾಕ್ಷಪಿಂಗಲಾ, ಪಿಂಗಲಾಕ್ಷೀ ಮತ್ತು ಪಿಂಗಲ ಪಿಂಗಲಾ-ಈ ನಾಲ್ಕು ಬಗೆಯ ಕಾಮಧೇನುಗಳು ಶ್ರೇಷ್ಠವೂ, ಪವಿತ್ರವೂ, ಪಾಪಹರವೂ ಆಗಿವೆ. ಇವುಗಳ ದರ್ಶನ ಮತ್ತು ನಮಸ್ಕಾರಗಳಿಂದಲೇ ಮನುಷ್ಯನ ಪಾಪವು ದೂರವಾಗುತ್ತದೆ.

ಪಾಪನಾಶಕಗಳಾದ ಈ ಕಪಿಲಾಧೇನುಗಳು ಯಾವನ ಮನೆಯಲ್ಲಿರುವುವೋ-ಅಲ್ಲಿ ಶ್ರೀ, ವಿಜಯ, ಕೀರ್ತಿ, ಸಮೃದ್ಧಿ-ಇವುಗಳ ನಿತ್ಯವಾಸವಿರುತ್ತದೆ. ಇವುಗಳ ಹಾಲಿನಿಂದ ಭಗವಾನ್ ಶಂಕರನು ಸುಪ್ರೀತನಾಗುತ್ತಾನೆ. ಇವುಗಳ ಮೊಸರಿನಿಂದ ದೇವತೆಗಳೂ, ತುಪ್ಪದಿಂದ ಯಜ್ಞೇಶ್ವರನೂ ತೃಪ್ತರಾಗುತ್ತಾರೆ. ಕಪಿಲಾಧೇನುವಿನ ತುಪ್ಪ, ಹಾಲು, ಮೊಸರು, ಹಾಲಿನಿಂದ ಮಾಡಿದ ಪಾಯಸ–ಇವುಗಳನ್ನು ಶ್ರೋತ್ರಿಯರಾದ ಬ್ರಾಹ್ಮಣರಿಗೆ ಒಮ್ಮೆ ದಾನಮಾಡಿದರೂ ದಾನಮಾಡಿದವನು ಸಮಸ್ತವಾದ ಪಾಪಗಳಿಂದಲೂ ಮುಕ್ತನಾಗುತ್ತಾನೆ. ಯಾವನು ಜಿತೇಂದ್ರಿಯನಾಗಿ ಒಂದು ದಿವಸ ಉಪವಾಸವಿದ್ದು ಅನಂತರ ಕಪಿಲಾಧೇನುವಿನ ಪಂಚಗವ್ಯವನ್ನು

ಪ್ರಾಶನಮಾಡುವನೋ–ಅವನು ಚಾಂದ್ರಾಯಣಕ್ಕಿಂತಲೂ ಹೆಚ್ಚಿನ ಫಲವನ್ನು ಪಡೆದುಕೊಳ್ಳುತ್ತಾನೆ. ಯಾವನು ಕೋಪ ಮತ್ತು ಅಸತ್ಯಗಳನ್ನು ತೊರೆದು ನನ್ನಲ್ಲಿಯೇ ನೆಟ್ಟಮನಸ್ಸುಳ್ಳವನಾಗಿ ಶುಭಮುಹೂರ್ತದಲ್ಲಿ ಕಪಿಲಾ ಧೇನುವಿನ ಪಂಚಗವ್ಯವನ್ನು ಪ್ರಾಶನಮಾಡುವನೋ–ಅವನು ಶುದ್ಧಾತ್ಮನೂ ಶುದ್ಧಾಂತಃಕರಣನೂ ಆಗುತ್ತಾನೆ. ಯಾವನು ವಿಷುವತ್ಪುಣ್ಯಕಾಲದಲ್ಲಿ ಪ್ರತ್ಯೇಕ-ಪ್ರತ್ಯೇಕವಾಗಿ ಮಂತ್ರಗಳನ್ನು ಹೇಳುತ್ತಾ ಕಪಿಲಾಧೇನುವಿನ ಪಂಚಗವ್ಯದಿಂದ ನನ್ನ ಪ್ರತಿಮೆಯನ್ನಾಗಲೀ ಈಶ್ವರನ ಪ್ರತಿಮೆ (ಲಿಂಗ) ಯನ್ನಾಗಲೀ ಸ್ನಾನಮಾಡಿಸುವನೋ–ಅವನು ಅಶ್ವಮೇಧಯಾಗವನ್ನು ಮಾಡಿದ ಫಲವನ್ನು ಹೊಂದುತ್ತಾನೆ. ಅವನು ಪಾಪಗಳಿಂದ ಬಿಡುಗಡೆ ಹೊಂದಿ ಶುದ್ಧಾಂತಃಕರಣನಾಗಿ ಆಕಾಶವನ್ನು ಶೋಭಾಯಮಾನಗೊಳಿಸುವ ಯಾನದಲ್ಲಿ ಕುಳಿತು ನನ್ನ ಲೋಕಕ್ಕಾಗಲೀ ರುದ್ರನ ಲೋಕಕ್ಕಾಗಲೀ ಹೋಗುತ್ತಾನೆ. ಆದುದರಿಂದ ಪರಲೋಕದಲ್ಲಿ ಹಿತವನ್ನು ಬಯಸುವವನು ಕಪಿಲಾಧೇನುವನ್ನು ದಾನಮಾಡಬೇಕು.

ಅಗ್ನಿಹೋತ್ರವನ್ನು ಮಾಡುವ ಶ್ರೋತ್ರಿಯನಾದ ಬ್ರಾಹ್ಮಣನಿಗೆ ಕಪಿಲಾಧೇನುವನ್ನು ದಾನಮಾಡುವಾಗ ಆ ಧೇನುವಿನ ಎರಡು ಕೋಡುಗಳಲ್ಲಿ ವಿಷ್ಣು ಮತ್ತು ಇಂದ್ರರು ಉಪಸ್ಥಿತರಾಗುತ್ತಾರೆ. ಕೊಂಬುಗಳ ಬುಡದಲ್ಲಿ ಚಂದ್ರನೂ ಮತ್ತು ವಜ್ರಧರನಾದ ಇಂದ್ರನೂ ಇರುತ್ತಾರೆ. ಕೊಂಬಿನ ಮಧ್ಯದಲ್ಲಿ ಬ್ರಹ್ಮನೂ, ಹಣೆಯಲ್ಲಿ ಪರಶಿವನೂ ಇರುತ್ತಾರೆ. ಕಿವಿಗಳಲ್ಲಿ ಅಶ್ವಿನೀದೇವತೆಗಳೂ, ಕಣ್ಣುಗಳಲ್ಲಿ ಸೂರ್ಯ-ಚಂದ್ರರೂ, ಹಲ್ಲುಗಳಲ್ಲಿ ಮರುದ್ದೇವತೆಗಳೂ, ನಾಲಿಗೆಯಲ್ಲಿ ವಾಗ್ದೇವತೆಯಾದ ಸರಸ್ವತಿಯೂ, ರೋಮಕೂಪಗಳಲ್ಲಿ ಮುನಿಗಳೂ, ಚರ್ಮದಲ್ಲಿ ಪ್ರಜಾಪತಿಯೂ, ನಿಃಶ್ವಾಸಗಳಲ್ಲಿ ಆರು ಅಂಗಗಳಿಂದಲೂ ಪದ-ಕ್ರಮಗಳಿಂದಲೂ ಯುಕ್ತವಾದ ವೇದಗಳೂ ಇರುತ್ತವೆ.

ಮೂಗಿನ ಹೊಳ್ಳೆಗಳಲ್ಲಿ ಗಂಧಗಳೂ, ಸುಗಂಧಯುಕ್ತವಾದ ಪುಷ್ಪ ಗಳೂ ಇರುತ್ತವೆ. ಅಧರದಲ್ಲಿ (ಕೆಳತುಟಿಯಲ್ಲಿ) ಎಲ್ಲ ವಸುಗಳೂ, ಮುಖದಲ್ಲಿ ಅಗ್ನಿಯೂ ಇರುತ್ತಾರೆ. ಕಂಕುಳುಗಳಲ್ಲಿ ಸಾಧ್ಯದೇವತೆಗಳೂ, ಕುತ್ತಿಗೆಯಲ್ಲಿ ಪಾರ್ವತಿಯೂ ಇರುತ್ತಾರೆ. ಪೃಷ್ಠಭಾಗದಲ್ಲಿ ನಕ್ಷತ್ರಗಳಿರು

ತ್ತವೆ. ಹಿಳಲಿನ ಪ್ರದೇಶದಲ್ಲಿ ಆಕಾಶವೂ, ಅಪಾನಸ್ಥಾನದಲ್ಲಿ ಸರ್ವತೀರ್ಥಗಳೂ ಇರುತ್ತವೆ. ಗೋಮೂತ್ರದಲ್ಲಿ ಸ್ವತಃ ಗಂಗೆಯೇ ನಿವಾಸಮಾಡಿರುತ್ತಾಳೆ. ಅಷ್ಟೈಶ್ವರ್ಯದಿಂದ ಯುಕ್ತಳಾದ ಮಹಾಲಕ್ಷ್ಮಿಯು ಗೋಮಯದಲ್ಲಿ (ಸಗಣಿಯಲ್ಲಿ)ರುತ್ತಾಳೆ. ಮೂಗಿನಲ್ಲಿ ಸುಂದರಿಯಾದ ಜ್ಯೇಷ್ಠಾದೇವಿಯು ನಿವಾಸಮಾಡಿರುತ್ತಾಳೆ. ನಿತಂಬದಲ್ಲಿ ಪಿತೃದೇವತೆಗಳೂ, ಪುಚ್ಛದಲ್ಲಿ ರಮಾದೇವಿಯೂ ನಿವಾಸಮಾಡಿರುತ್ತಾರೆ. ಎರಡು ಪಾರ್ಶ್ವಗಳಲ್ಲಿಯೂ ಎಲ್ಲ ವಿಶ್ವೇದೇವತೆಗಳೂ ಇದ್ದಾರೆ. ಎದೆಯಲ್ಲಿ ಪ್ರಸನ್ನಚಿತ್ತನಾದ, ಶಕ್ತ್ಯಾಯುಧವನ್ನು ಧರಿಸಿರುವ ಕಾರ್ತಿಕೇಯನಿದ್ದಾನೆ. ಜಾನು-ಜಂಘಾ ಮತ್ತು ಊರುಪ್ರದೇಶಗಳಲ್ಲಿ ಐದು ವಾಯುಗಳು ನಿವಾಸಮಾಡಿಕೊಂಡಿವೆ. ಗೊರಸುಗಳ ಮಧ್ಯದಲ್ಲಿ ಗಂಧರ್ವರೂ ಅಗ್ರಭಾಗಗಳಲ್ಲಿ ಸರ್ಪದೇವತೆಗಳೂ ಇದ್ದಾರೆ. ಕಪಿಲಾಧೇನುವಿನ ನಾಲ್ಕು ಮೊಲೆಗಳಲ್ಲೇ ನಾಲ್ಕು ಸಮುದ್ರಗಳಿವೆ. ರತಿ, ಮೇಧಾ, ಕ್ಷಮಾ, ಸ್ವಾಹಾ, ಶ್ರದ್ಧಾ, ಶಾಂತಿ, ಧೃತಿ, ಸ್ಮೃತಿ, ಕೀರ್ತಿ, ದೀಪ್ತಿ, ಕ್ರಿಯಾ, ಕಾಂತಿ, ತುಷ್ಟಿ, ಪುಷ್ಟಿ, ಸಂತತಿ, ದಿಕ್ಕುಗಳು, ಉಪದಿಕ್ಕುಗಳು–ಇವೆಲ್ಲವುಗಳ ಅಧಿದೇವತೆಗಳು ಯಾವಾಗಲೂ ಕಪಿಲಾಧೇನುವನ್ನು ಸೇವಿಸುತ್ತಿರುತ್ತಾರೆ. ದೇವತೆಗಳು, ಪಿತೃಗಳು, ಗಂಧರ್ವರು, ಅಪ್ಸರೆಯರು, ಲೋಕಗಳು, ದ್ವೀಪಗಳು, ಸಮುದ್ರಗಳು, ಗಂಗಯೇ ಮುಂತಾದ ನದಿಗಳು, ಅಂಗಗಳಿಂದಲೂ ಯಜ್ಞಗಳಿಂದಲೂ ಯುಕ್ತವಾದ ವೇದಗಳು ಇವೆಲ್ಲವೂ ನಾನಾಪ್ರಕಾರವಾದ ಮಂತ್ರಗಳಿಂದ ಕಪಿಲಾಧೇನುವನ್ನು ಪ್ರಸನ್ನತಾಪೂರ್ವಕವಾಗಿ ಸ್ತುತಿಮಾಡುತ್ತವೆ. ವಿದ್ಯಾಧರರು, ಸಿದ್ಧರು, ಭೂತಗಣಗಳು, ತಾರಾಗಣಗಳು-ಇವರೆಲ್ಲರೂ ಕಪಿಲಾಧೇನುವನ್ನು ನೋಡಿ ಪುಷ್ಪವೃಷ್ಟಿಯನ್ನು ಸುರಿಸುತ್ತಾ ಹರ್ಷದಿಂದ ಕೂಡಿ ನರ್ತನಮಾಡುತ್ತಾ ಕಪಿಲಾಧೇನುವಿನ ಗುಣಗಾನಮಾಡುತ್ತವೆ:

ಬ್ರಹ್ಮಣೋತ್ಪಾದಿತಾ ದೇವಿ ವಹ್ನಿಕುಣ್ಡಾನ್ಮಹಾಪ್ರಭಾ।
ನಮಸ್ತೇ ಕಪಿಲೇ ಪುಣ್ಯೇ ಸರ್ವದೇವೈರ್ನಮಸ್ಕೃತೇ।
ಕಪಿಲೇಽಥ ಮಹಾಸತ್ತ್ವೇ ಸರ್ವತೀರ್ಥಮಯೇ ಶುಭೇ ॥೭೨॥
ಅಹೋ ರತ್ನಮಿದಂ ಪುಣ್ಯಂ ಸರ್ವದುಃಖಘ್ನಮುತ್ತಮಮ್।
ಅಹೋ ಧರ್ಮಾರ್ಜಿತಂ ಶುದ್ಧಮಿದಮಗ್ರ್ಯಂ ಮಹಾಧನಮ್ ॥೭೩॥

"ದೇವಿ! ಮಹಾಪ್ರಭೆಯಿಂದ ಕೂಡಿರುವ ನಿನ್ನನ್ನು ಬ್ರಹ್ಮನು

ಅಗ್ನಿಕುಂಡದಿಂದ ಸೃಷ್ಟಿಸಿದ್ದಾನೆ. ಪುಣ್ಯಸ್ವರೂಪಿಣಿಯೇ! ಸಕಲದೇವ ನಮಸ್ಕೃತಳೇ! ಮಹಾಸತ್ತ್ವಳೇ! ಸರ್ವತೀರ್ಥಮಯಳೇ! ಶುದ್ಧಸ್ವರೂಪಳೇ! ನಿನಗೆ ನಮಸ್ಕಾರಮಾಡುತ್ತೇನೆ. ಕಪಿಲಾಗೋರೂಪವಾದ ಈ ರತ್ನವು ಎಷ್ಟು ಪವಿತ್ರವಾಗಿದೆ! ಮತ್ತು ಎಷ್ಟು ಉತ್ತಮವಾಗಿದೆ! ಇದು ಸಮಸ್ತ ದುಃಖಗಳನ್ನೂ ಹೋಗಲಾಡಿಸತಕ್ಕುದು. ಇದು ಧರ್ಮದಿಂದ ಸಂಪಾದಿಸಲ್ಪಟ್ಟ, ಶುದ್ಧವಾದ ಮತ್ತು ಶ್ರೇಷ್ಠವಾದ ಮಹಾಧನವಾಗಿದೆ.”

ಆಕಾಶದಲ್ಲಿರುವ ದೇವತೆಗಳೂ ಕಪಿಲಾಧೇನುವಿನ ಮಂತ್ರವನ್ನು ಹೀಗೆ ಜಪಿಸುತ್ತಿರುತ್ತಾರೆ.”

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

“ದೇವದೇವೇಶನೇ! ದೈತ್ಯಹಂತಕನೇ! ಹವ್ಯ-ಕವ್ಯಗಳಿಗೆ ಸರಿಯಾದ ಕಾಲವು ಯಾವುದು? ಯಜ್ಞಮತ್ತು ಶ್ರಾದ್ಧಕರ್ಮಗಳಲ್ಲಿ ಎಂತಹ ಬ್ರಾಹ್ಮಣರು ಪೂಜೆಗೆ ಯೋಗ್ಯರಾಗಿರುತ್ತಾರೆ ಮತ್ತು ಎಂತಹ ಬ್ರಾಹ್ಮಣರನ್ನು ವರ್ಜಿಸಬೇಕಾಗುತ್ತದೆ? ಈ ವಿಷಯವನ್ನು ಹೇಳುವ ಕೃಪೆಮಾಡು.”

ಶ್ರೀಕೃಷ್ಣನು ಹೇಳುತ್ತಾನೆ:

ದೈವಂ ಪೂರ್ವಾಹ್ಣಿಕಂ ಜ್ಞೇಯಂ ಪೈತೃಕಂ ಚಾಪರಾಹ್ಣಿಕಮ್ ।
ಕಾಲಹೀನಂ ಚ ಯದ್ದಾನಂ ತದ್ದಾನಂ ರಾಜಸಂ ವಿದುಃ ॥೭೨॥

“ಧರ್ಮಜ! ದೇವತೆಗಳಿಗೆ ಸಂಬಂಧಿಸಿದ ಹವ್ಯಕರ್ಮಗಳನ್ನು ಪೂರ್ವಾಹ್ಣದಲ್ಲಿ ಮಾಡುವುದು ಯೋಗ್ಯವಾಗಿದೆ. ಪಿತೃಗಳಿಗೆ ಸಂಬಂಧಿಸಿದ ಕವ್ಯಕರ್ಮಗಳನ್ನು ಅಪರಾಹ್ಣದಲ್ಲಿ ಮಾಡುವುದು ಯೋಗ್ಯವಾಗಿದೆ. ಅಕಾಲದಲ್ಲಿ ಮಾಡಿದ ದಾನವು ರಾಜಸವೆಂದು ಹೇಳಲ್ಪಡುತ್ತದೆ.

ಅವಘುಷ್ಟಂ ಚ ಯದ್ಭುಕ್ತಮನೃತೇನ ಚ ಭಾರತ ।
ಪರಾಮೃಷ್ಟಂ ಶುನಾ ವಾಪಿ ತದ್ಭಾಗಂ ರಾಕ್ಷಸಂ ವಿದುಃ ॥೭೬॥

ದಂಭಕ್ಕಾಗಿ ಡಂಗುರ ಹೊಡೆಸಿ ಇಕ್ಕಿದ ಅನ್ನ, ಸುಳ್ಳಿನಿಂದ ಸಂಪಾದಿಸಿ ಇಕ್ಕಿದ ಅನ್ನ ಮತ್ತು ನಾಯಿಮುಟ್ಟಿದ ಅನ್ನ–ಇವುಗಳನ್ನು ರಾಕ್ಷಸರ ಭಾಗಗಳೆಂದು ವಿದ್ವಾಂಸರು ತಿಳಿಯುತ್ತಾರೆ.

ಯಾವನ್ತಃ ಪತಿತಾ ವಿಪ್ರಾ ಜಡೋನ್ಮತ್ತಾದಯೋಽಪಿ ಚ।
ದೈವೇ ಚ ಪಿತ್ರ್ಯೇ ತೇ ವಿಪ್ರಾ ರಾಜನ್ನಾರ್ಹನ್ತಿ ಸತ್ಕ್ರಿಯಾಮ್॥

ಪತಿತರಾದ, ಉನ್ಮತ್ತರಾದ ಮತ್ತು ಜಡರಾದ ಬ್ರಾಹ್ಮಣರು ದೇವ-ಪಿತೃಸಂಬಂಧವಾದ ಹವ್ಯ-ಕವ್ಯಗಳಲ್ಲಿ ಸತ್ಕಾರಹೊಂದಲು ಯೋಗ್ಯರಲ್ಲ.

ಕ್ಲೀಬಃ ಪ್ಲೀಹೀ ಚ ಕುಷ್ಠೀ ಚ ರಾಜಯಕ್ಷ್ಮಾನ್ವಿತಶ್ಚ ಯಃ।
ಅಪಸ್ಮಾರೀ ಚ ಯಶ್ಚಾಪಿ ಪಿತ್ರ್ಯೇ ನಾರ್ಹನ್ತಿ ಸತ್ಕೃತಿಮ್ ॥೭೨೮॥

ನಪುಂಸಕನು, ಪ್ಲೀಹರೋಗದವನು (ಹೊಟ್ಟೆಯ ಎಡಭಾಗದ ಮಾಂಸ ಗ್ರಂಥಿಯು ಬೆಳೆದು ಉಂಟಾಗುವ ಒಂದು ರೋಗ), ಕುಷ್ಠರೋಗದವನು, ಕ್ಷಯರೋಗದವನು, ಮೂರ್ಛೆರೋಗದವನು–ಇವರೆಲ್ಲರೂ ಪಿತೃಕಾರ್ಯಗಳಲ್ಲಿ ಸತ್ಕಾರಹೊಂದಲು ಯೋಗ್ಯರಲ್ಲ.

ಚಿಕಿತ್ಸಕಾ ದೇವಲಕಾ ಮಿಥ್ಯಾನಿಯಮಧಾರಿಣಃ।
ಸೋಮವಿಕ್ರಯಿಣಶ್ಚಾಪಿ ಶ್ರಾದ್ಧೇ ನಾರ್ಹನ್ತಿ ಸತ್ಕೃತಿಮ್ ॥೭೨೯॥

ಜೀವಿಕೆಗಾಗಿ ವೈದ್ಯವೃತ್ತಿಯಲ್ಲಿರುವವರು, ಜೀವಿಕೆಗಾಗಿ ದೇವರ ಪೂಜೆಯ ವೃತ್ತಿಯಲ್ಲಿರುವವರು, ದಾಂಭಿಕವಾಗಿ ನಿಯಮಾನುಷ್ಠಾನಗಳನ್ನು ಮಾಡುವವರು, ಸೋಮಲತೆಯನ್ನು ಮಾರುವವರು–ಇವರೆಲ್ಲರೂ ಶ್ರಾದ್ಧದಲ್ಲಿ ಸತ್ಕಾರಹೊಂದಲು ಯೋಗ್ಯರಲ್ಲ.

ಗಾಯಕಾ ನರ್ತಕಾಶ್ಚೈವ ಪ್ಲವಕಾ ವಾದಕಾಸ್ತಥಾ।
ಕಥಕಾ ಯೌಧಿಕಾಶ್ಚೈವ ಶ್ರಾದ್ಧೇ ನಾರ್ಹನ್ತಿ ಸತ್ಕೃತಿಮ್ ॥೭೩೦॥

ಗಾಯಕರು, ನರ್ತಕರು, ಕತ್ತಿಯ ಅಲುಗಿನ ಮೇಲೆ ನರ್ತನಮಾಡುವವರು, ವಾದ್ಯಗಳನ್ನು ನುಡಿಸುವವರು, ಕಥೆಗಳನ್ನು ಹೇಳಿ ಜೀವಿಸುವವರು ಮತ್ತು ಯೋಧರು–ಇವರಾರೂ ಶ್ರಾದ್ಧದಲ್ಲಿ ಸತ್ಕಾರಹೊಂದಲು ಯೋಗ್ಯರಲ್ಲ.

ಅನಗ್ನಯಶ್ಚ ಯೇ ವಿಪ್ರಾ ಶವನಿರ್ಯಾತಕಾಶ್ಚ ಯೇ।
ಸ್ತೇನಾಶ್ಚಾಪಿ ವಿಕರ್ಮಸ್ಥಾ ರಾಜನ್ನಾರ್ಹನ್ತಿ ಸತ್ಕೃತಿಮ್ ॥೭೩೧॥

ಅಗ್ನಿಹೋತ್ರವನ್ನು ಮಾಡದಿರುವ, ಜೀವಿಕೆಗಾಗಿ ಹೆಣಹೊರುವ,

ಕಳ್ಳತನಮಾಡುವ ಮತ್ತು ವರ್ಣಾಶ್ರಮಧರ್ಮಕ್ಕೆ ವಿರುದ್ಧವಾದ ಕರ್ಮಗಳಲ್ಲಿ ತೊಡಗಿರುವ ಬ್ರಾಹ್ಮಣರು ಶ್ರಾದ್ಧದಲ್ಲಿ ಸತ್ಕಾರಹೊಂದಲು ಯೋಗ್ಯರಲ್ಲ.

ಅಪರಿಜ್ಞಾತಪೂರ್ವಾಶ್ಚ ಗಣಪುತ್ರಾಶ್ಚ ಯೇ ದ್ವಿಜಾಃ।
ಪುತ್ರಿಕಾಪುತ್ರಕಾಶ್ಚಾಪಿ ಶ್ರಾದ್ಧೇನಾರ್ಹನ್ತಿ ಸತ್ಕೃತಿಮ್ ॥೭೩೨॥

ಅಪರಿಚಿತರಾದ ಬ್ರಾಹ್ಮಣರು, ತಂದೆ ಯಾರೆಂಬುದನ್ನು ತಿಳಿಯದೇ ಸಾಮೂಹಿಕವಾಗಿ ಬ್ರಾಹ್ಮಣರ ಮಕ್ಕಳೆನಿಸಿಕೊಂಡಿರುವ ಬ್ರಾಹ್ಮಣರು, *ಪುತ್ರಿಯನ್ನು ಶಾಸ್ತ್ರೀಯವಾಗಿ ಪುತ್ರಿಕೆಯನ್ನಾಗಿ ಮಾಡಿಕೊಂಡನಂತರ ಅವಳಲ್ಲಿ ಹುಟ್ಟುವ ಮಕ್ಕಳು ಶ್ರಾದ್ಧದಲ್ಲಿ ಸತ್ಕಾರಹೊಂದಲು ಯೋಗ್ಯರಲ್ಲ.

ರಣಕರ್ತಾ ಚ ಯೋ ವಿಪ್ರೋ ಯಶ್ಚ ವಾಣಿಜ್ಯಕೋ ದ್ವಿಜಃ।
ಪ್ರಾಣಿವಿಕ್ರಯವೃತ್ತಿಶ್ಚ ಶ್ರಾದ್ಧೇನಾರ್ಹನ್ತಿ ಸತ್ಕೃತಿಮ್ ॥೭೩೩॥

ಯುದ್ಧದಲ್ಲಿ ಹೋರಾಡುವ, ವ್ಯಾಪಾರಮಾಡುವ, ಪಶು-ಪಕ್ಷಿಗಳನ್ನು ವಿಕ್ರಯಿಸುವ ಬ್ರಾಹ್ಮಣರು ಶ್ರಾದ್ಧದಲ್ಲಿ ಸತ್ಕಾರಹೊಂದಲು ಯೋಗ್ಯರಲ್ಲ.

ಚೀರ್ಣವ್ರತಗುಣೈರ್ಯುಕ್ತಾ ನಿತ್ಯಂ ಸ್ವಾಧ್ಯಾಯತತ್ಪರಾಃ।
ಸಾವಿತ್ರೀಜ್ಞಾಃ ಕ್ರಿಯಾವನ್ತಸ್ತೇ ಶ್ರಾದ್ಧೇ ಸತ್ಕೃತಿಕ್ಷಮಾಃ ॥೭೩೪॥

ವ್ರತಾನುಷ್ಠಾನಗಳನ್ನು ಮಾಡುವ, ಗುಣವಂತರಾದ, ಸದಾ ಸ್ವಾಧ್ಯಾಯಪರಾಯಣರಾದ, ಗಾಯತ್ರೀಮಂತ್ರವನ್ನು ಚೆನ್ನಾಗಿ ತಿಳಿದಿರುವ, ಕ್ರಿಯಾನಿಷ್ಠರಾದ ಬ್ರಾಹ್ಮಣರು ಶ್ರಾದ್ಧದಲ್ಲಿ ಸತ್ಕಾರಕ್ಕೆ ಯೋಗ್ಯರಾಗಿರುತ್ತಾರೆ.

ಶ್ರಾದ್ಧಸ್ಯ ಬ್ರಾಹ್ಮಣಃ ಕಾಲಃ ಪ್ರಾಪ್ತಂ ದಧಿ ಘೃತಂ ತಥಾ।
ದರ್ಭಾಃ ಸುಮನಸಃ ಕ್ಷೇತ್ರಂ ತತ್ಕಾಲೇ ಶ್ರಾದ್ಧದೋ ಭವೇತ್ ॥೭೩೫॥

ಸತ್ಪಾತ್ರನಾದ ಬ್ರಾಹ್ಮಣನ ಆಗಮನವೇ ಶ್ರಾದ್ಧಮಾಡಲು ಉತ್ತಮ ಕಾಲವಾಗಿದೆ. ಯಾವ ಸಮಯದಲ್ಲಿ ಸತ್ಪಾತ್ರನಾದ ಬ್ರಾಹ್ಮಣನು

---

*ಪುತ್ರಿಕಾಪುತ್ರಕಃ =ಔರಸಪುತ್ರನಿಲ್ಲದವನು ತನ್ನ ಪುತ್ರಿಯನ್ನು ಮಗನೆಂದು ಭಾವಿಸಿ ಅವಳಲ್ಲಿ ಜನಿಸಿದ ಪುತ್ರನು ತನಗೆ ಮಗನಾಗಬೇಕೆಂದು ವಿವಾಹಸಮಯದಲ್ಲಿ ಅಳಿಯನಿಗೆ ಹೇಳಿ ಕನ್ಯಾದಾನ ಮಾಡುತ್ತಾನೆ. ಅನಂತರ ಅವಳು ಪುತ್ರಿಕಾ ಎನಿಸಿಕೊಳ್ಳುತ್ತಾಳೆ. ಅವಳ ಮಗನು ತನ್ನ ಮಗನೇ ಆಗುವುದರಿಂದ (ದೌಹಿತ್ರನಾಗದೇ ಇರುವುದರಿಂದ) ಶ್ರಾದ್ಧಕ್ಕೆ ಯೋಗ್ಯನಲ್ಲ.

ಆಗಮಿಸುವನೋ–ಮೊಸರು, ತುಪ್ಪ, ದರ್ಭೆ, ಹೂವು ಮತ್ತು ಪವಿತ್ರವಾದ ಕ್ಷೇತ್ರ– ಇವು ಪ್ರಾಪ್ತವಾಗುವುವೋ–ಆ ಸಮಯದಲ್ಲಿ ಶ್ರಾದ್ಧವನ್ನು ಮಾಡಬೇಕು.*

ಚಾರಿತ್ರನಿರತಾ ರಾಜನ್ಕೃಶಾ ಯೇ ಕೃಶವೃತ್ತಯಃ ।
ತಪಸ್ವಿನಶ್ಚ ಯೇ ವಿಪ್ರಾಸ್ತಥಾ ಭೈಕ್ಷಚರಾಶ್ಚ ಯೇ ।
ಅರ್ಥಿನಃ ಕೇಚಿದಿಚ್ಛನ್ತಿ ತೇಷಾಂ ದತ್ತಂ ಮಹತ್ಫಲಮ್ ॥೭೩೯॥

ಸದಾಚಾರನಿರತರಾದ, ದುರ್ಬಲರಾದ, ವೃತ್ತಿಹೀನರಾದ, ಭಿಕ್ಷಾವೃತ್ತಿಯಿಂದ ಜೀವಿಸುವ, ತಪಸ್ವಿಗಳಾದ ಬ್ರಾಹ್ಮಣರು ಏನನ್ನಾದರೂ ಬೇಡಲು ಬಂದರೆ ಒಡನೆಯೇ ಅವರಿಗೆ ಅದನ್ನು ದಾನಮಾಡಬೇಕು. ಅಂತಹ ದಾನವು ಹೆಚ್ಚು ಫಲವನ್ನು ಕೊಡುತ್ತದೆ.

ಧರ್ಮಾತ್ಮರಲ್ಲಿ ಶ್ರೇಷ್ಠನಾದವನೇ! ಈ ಎಲ್ಲ ವಿಷಯಗಳನ್ನೂ ಸಂಪೂರ್ಣವಾಗಿ ತಿಳಿದುಕೊಂಡು ಯಾವ ಉಪಕಾರವನ್ನೂ ಮಾಡದಿರುವ ದರಿದ್ರನಾದ ಶ್ರೋತ್ರಿಯನಿಗೆ ದಾನಮಾಡು.

ಧರ್ಮಜ್ಞನೇ! ನೀನು ದಾನದ ಅಕ್ಷಯಫಲವನ್ನು ಬಯಸುವೆಯಾದರೆ ನಿನಗೆ ಯಾವ ವಸ್ತುವು ಅತ್ಯಂತಪ್ರಿಯವಾಗಿರುವುದೋ, ಹಾಗೆಯೇ ಶ್ರೋತ್ರಿಯರಿಗೆ ಯಾವ ವಸ್ತುವು ಪ್ರಿಯವಾಗಿರುವುದೋ–ಅದನ್ನು ದಾನಮಾಡು.

ಇನ್ನು ಮುಂದೆ ನಾನು ನರಕಕ್ಕೆ ಯಾರು ಹೋಗುವರೆಂಬುದನ್ನು ಹೇಳುವೆನು, ಕೇಳು.

ಪರದಾರಾಪಹರ್ತಾರಃ ಪರದಾರಾಭಿಮರ್ಶಕಾಃ ।
ಪರದಾರಪ್ರಯೋಕ್ತಾರಸ್ತೇ ವೈ ನಿರಯಗಾಮಿನಃ ॥೭೪೦॥

ಪರಪತ್ನಿಯರನ್ನು ಅಪಹರಿಸುವವರೂ, ಪರಪತ್ನಿಯರ ಸ್ಪರ್ಶ

---

*ಈ ಸ್ಮೃತಿವಾಕ್ಯವು ನಿಯತವಾದ ಪ್ರತ್ಯಾಬ್ದಿಕಶ್ರಾದ್ಧಗಳಿಗೆ ಅನ್ವಯಿಸುವುದಿಲ್ಲವೆಂದೂ, ಸತ್ಪಾತ್ರನಾದ ಬ್ರಾಹ್ಮಣನು ಸಿಕ್ಕಿದಾಗ ಕಾಮ್ಯಶ್ರಾದ್ಧಗಳನ್ನು ಯಾವ ಸಮಯದಲ್ಲಾದರೂ ಮಾಡಬಹುದೆಂದೂ ವಿದ್ವಾಂಸರ ಅಭಿಪ್ರಾಯವಾಗಿದೆ.

ಮಾಡುವವರೂ, ಪರಪತ್ನಿಯರೊಡನೆ ಸಂಬಂಧವನ್ನು (ಸಮಾಗಮವನ್ನು) ಮಾಡುವವರೂ ನರಕಕ್ಕೆ ಹೋಗುತ್ತಾರೆ.

ಸೂಚಕಾಃ ಸಂಧಿಭೇತ್ತಾರಃ ಪರದ್ರವ್ಯೋಪಜೀವಿನಃ।
ವರ್ಣಾಶ್ರಮಾಣಾಂ ಯೇ ಬಾಹ್ಯಾಃ ಪಾಖಣ್ಡಾಶ್ಚೈವ ಪಾಪಿನಃ ।
ಉಪಾಸತೇ ಚ ತಾನೇವ ತೇ ಸರ್ವೇ ನರಕಾಲಯಾಃ ॥೭೪೧॥

ಚಾಡಿಕೋರರು, ಮಾಡಿಕೊಂಡಿದ್ದ ಸಂಧಿಯನ್ನು ಮುರಿಯುವವರು, ಇತರರ ದ್ರವ್ಯದಿಂದ ಜೀವನವನ್ನು ನಡೆಸುವವರು. ವರ್ಣದಿಂದಲೂ ಆಶ್ರಮದಿಂದಲೂ ಭ್ರಷ್ಟರಾದವರು, ವೇದವನ್ನು ನಿಂದಿಸುವ ಪಾಪಿಷ್ಠರಾದ ನಾಸ್ತಿಕರು ಮತ್ತು ಇವರುಗಳನ್ನು ಆಶ್ರಯಿಸಿ ಜೀವಿಕೆಯನ್ನು ನಡೆಸುವವರು–ಇವರೆಲ್ಲರೂ ನರಕಕ್ಕೆ ಹೋಗುತ್ತಾರೆ.

ಕ್ಷಾನ್ತಾನ್ದಾನ್ತಾನ್ಕೃಶಾನ್ಪ್ರಾಜ್ಞಾನ್ದೀರ್ಘಕಾಲಂ ಸಹೋಷಿತಾನ್।
ತ್ಯಜನ್ತಿ ಕೃತಕೃತ್ಯಾ ಯೇ ತೇ ವೈ ನಿರಯಗಾಮಿನಃ ॥೭೪೨॥

ತಮ್ಮ ಜೊತೆಯಲ್ಲಿಯೇ ಬಹಳ ದಿನಗಳಿಂದಲೂ ವಾಸವಾಗಿದ್ದ, ಸಹನಶೀಲರಾದ, ಜಿತೇಂದ್ರಿಯರಾದ, ದುರ್ಬಲರಾದ, ಬುದ್ಧಿವಂತರಾದ ಮನುಷ್ಯರನ್ನು ತಮ್ಮ ಕಾರ್ಯವು ಮುಗಿದಕೊಡಲೇ ಬಿಟ್ಟುಬಿಡುವವರೂ ನರಕಕ್ಕೆ ಹೋಗುತ್ತಾರೆ.

ಬಾಲಾನಾಮಪಿ ವೃದ್ಧಾನಾಂ ಶ್ರಾನ್ತಾನಾಂ ಚಾಪಿ ಯೇ ನರಾಃ।
ಅದತ್ತ್ವಾಶ್ನನ್ತಿ ಮೃಷ್ಟಾನ್ನಂ ತೇ ವೈ ನಿರಯಗಾಮಿನಃ ॥೭೪೩॥

ಯಾರು ಬಾಲಕರಿಗೂ, ವೃದ್ಧರಿಗೂ, ಬಳಲಿರುವವರಿಗೂ ಆಹಾರವನ್ನು ಕೊಡದೇ ಮೃಷ್ಟಾನ್ನವನ್ನು ಊಟಮಾಡುವರೋ–ಅಂತಹವರೂ ನರಕಕ್ಕೆ ಹೋಗುತ್ತಾರೆ.

ದಾನೇನ ತಪಸಾ ಚೈವ ಸತ್ಯೇನ ಚ ದಮೇನ ಚ।
ಯೇ ಧರ್ಮಮನುವರ್ತನ್ತೇ ತೇ ನರಾಃ ಸ್ವರ್ಗಗಾಮಿನಃ ॥೭೪೪॥

ಯುಧಿಷ್ಠಿರ! ಪ್ರಾಚೀನಕಾಲದಲ್ಲಿ ಋಷಿಗಳು–ನರಕಕ್ಕೆ ಇಂತಹವರು ಹೋಗುವರೆಂದು ಹೇಳಿದ್ದಾರೆ. ಮುಂದೆ ನಾನು ಸ್ವರ್ಗಕ್ಕೆ ಎಂತಹವರು ಹೋಗುವರೆಂಬುದನ್ನು ಹೇಳುವೆನು; ಕೇಳು.

ದಾನ, ತಪಸ್ಸು, ಸತ್ಯ ಮತ್ತು ಜಿತೇಂದ್ರಿಯತೆ–ಇವುಗಳ ಮೂಲಕ ಯಾರು ಧರ್ಮಮಾರ್ಗವನ್ನೇ ಅನುಸರಣೆಮಾಡುವರೋ–ಅವರು ಸ್ವರ್ಗಕ್ಕೆ ಹೋಗುತ್ತಾರೆ.

ಶುಶ್ರೂಷಯಾಪ್ಯುಪಾಧ್ಯಾಯಾಚ್ಛ್ರುತಮಾದಾಯ ಪಾಣ್ಡವ ।
ಯೇ ಪ್ರತಿಗ್ರಹನಿಃಸ್ನೇಹಾಸ್ತೇ ನರಾಃ ಸ್ವರ್ಗಗಾಮಿನಃ ॥೭೪೬॥

ಯಾರು ಗುರುಗಳಿಗೆ ಶುಶ್ರೂಷೆಮಾಡುತ್ತಾ ಸಾಂಗವೇದಗಳನ್ನು ಹೃದ್ಗತಮಾಡಿಕೊಳ್ಳುವರೋ ಮತ್ತು ಪ್ರತಿಗ್ರಹದಲ್ಲಿ ನಿರಾಸಕ್ತ ರಾಗಿರುವರೋ–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ಮಧುಮಾಂಸಾಸವೇಭ್ಯಸ್ತು ನಿವೃತ್ತಾ ವ್ರತಿನಸ್ತು ಯೇ ।
ಪರದಾರನಿವೃತ್ತಾ ಯೇ ತೇ ನರಾಃ ಸ್ವರ್ಗಗಾಮಿನಃ ॥೭೪೭॥

ಯಾರು ಮಧು-ಮಾಂಸ ಮತ್ತು ಆಸವಗಳನ್ನು ವರ್ಜಿಸಿ ಉತ್ತಮ ವ್ರತಾನುಷ್ಠಾನಗಳಲ್ಲಿ ನಿರತರಾಗಿರುವರೋ, ಪರಸ್ತ್ರೀಸಂಸರ್ಗವಿಲ್ಲದೇ ಇರುವರೋ–ಅಂತಹವರೂ ಸ್ವರ್ಗಕ್ಕೆ ಹೋಗುತ್ತಾರೆ.

ಮಾತರಂ ಪಿತರಂ ಚೈವ ಶುಶ್ರೂಷನ್ತಿ ಚ ಯೇ ನರಾಃ।
ಭ್ರಾತೄಣಾಮಪಿ ಸಸ್ನೇಹಾಸ್ತೇ ನರಾಃ ಸ್ವರ್ಗಗಾಮಿನಃ ॥೭೪೮॥

ತಾಯಿಯನ್ನೂ, ತಂದೆಯನ್ನೂ ಶುಶ್ರೂಷೆಮಾಡುವ, ಸಹೋದರ ರೊಡನೆ ಪ್ರೀತಿಯಿಂದಿರುವ ಮನುಷ್ಯರು ಸ್ವರ್ಗಕ್ಕೆ ಹೋಗುತ್ತಾರೆ.

ಯೇ ತು ಭೋಜನಕಾಲೇ ತು ನಿರ್ಯಾತಾಶ್ಚಾತಿಥಿಪ್ರಿಯಾಃ।
ದ್ವಾರರೋಧಂ ನ ಕುರ್ವನ್ತಿ ತೇ ನರಾಃ ಸ್ವರ್ಗಗಾಮಿನಃ ॥೭೪೯॥

ಯಾರು ಭೋಜನಕಾಲದಲ್ಲಿ ಮನೆಯಿಂದ ಹೊರಗೆ ಹೋಗಿ ಅತಿಥಿಗಳನ್ನು ಕರೆತಂದು ಸತ್ಕರಿಸುವರೋ ಮತ್ತು ಅತಿಥಿಗಳಿಗಾಗಿ ಯಾವಾಗಲೂ ಬಾಗಿಲನ್ನು ತೆರೆದೇ ಇರುವರೋ–ಅಂತಹ ಅತಿಥಿಪ್ರಿಯರಾದ ಮನುಷ್ಯರು ಸ್ವರ್ಗಕ್ಕೆ ಹೋಗುತ್ತಾರೆ.

ವೈವಾಹಿಕಂ ತು ಕನ್ಯಾನಾಂ ದರಿದ್ರಾಣಾಂ ಚ ಯೇ ನರಾಃ ।
ಕಾರಯನ್ತಿ ಚ ಕುರ್ವನ್ತಿ ತೇ ನರಾಃ ಸ್ವರ್ಗಗಾಮಿನಃ ॥೭೫೦॥

ಬಡಹೆಣ್ಣುಮಕ್ಕಳಿಗೆ ಅಥವಾ ಗಂಡುಮಕ್ಕಳಿಗೆ ಮದುವೆಮಾಡಿಸುವವರು ಮತ್ತು ಮದುವೆಮಾಡುವವರು ಕೂಡ ಸ್ವರ್ಗಕ್ಕೆ ಹೋಗುತ್ತಾರೆ.

ರಸಾನಾಮಥ ಬೀಜಾನಾಮೋಷಧೀನಾಂ ತಥೈವ ಚ ।
ದಾತಾರಃ ಶ್ರದ್ಧಯೋಪೇತಾಸ್ತೇ ನರಾಃ ಸ್ವರ್ಗಗಾಮಿನಃ ॥೭೫೧॥

ಯಾರು ಶ್ರದ್ಧಾಪೂರ್ವಕವಾಗಿ ರಸಗಳನ್ನೂ, ಬೀಜಗಳನ್ನೂ ಮತ್ತು ಓಷಧಿಗಳನ್ನೂ ದಾನಮಾಡುವರೋ ಅವರೂ ಸ್ವರ್ಗಕ್ಕೆ ಹೋಗುತ್ತಾರೆ.

ಪರ್ವದ್ವಯೇ ಚತುರ್ದಶ್ಯಾಮಷ್ಟಮ್ಯಾಂ ಸಂಧ್ಯಯೋರ್ದ್ವಯೋಃ।
ಆರ್ದ್ರಾಯಾಂ ಜನ್ಮನಕ್ಷತ್ರೇ ವಿಷುವೇ ಶ್ರವಣೇಽಥವಾ।
ಯೇ ಗ್ರಾಮ್ಯಧರ್ಮವಿರತಾಸ್ತೇ ನರಾಃ ಸ್ವರ್ಗಗಾಮಿನಃ ॥೭೫೩॥

ಯಾರು ಅಮಾವಾಸ್ಯೆ ಮತ್ತು ಹುಣ್ಣಿಮೆಗಳಲ್ಲಿಯೂ, ಚತುರ್ದಶೀ ಮತ್ತು ಅಷ್ಟಮೀತಿಥಿಗಳಲ್ಲಿಯೂ, ಎರಡು ಸಂಧ್ಯೆಗಳಲ್ಲಿಯೂ, ಆರ್ದ್ರ ಮತ್ತು ಜನ್ಮನಕ್ಷತ್ರಗಳಲ್ಲಿಯೂ, ವಿಷುವತ್ಪುಣ್ಯಕಾಲಗಳಲ್ಲಿಯೂ (ಮೇಷ ಮತ್ತು ತುಲಾ ಸಂಕ್ರಮಣಗಳು ವಿಷುವ ಎನಿಸಿಕೊಳ್ಳುತ್ತವೆ.) ಶ್ರವಣ ನಕ್ಷತ್ರದಲ್ಲಿಯೂ ಸ್ತ್ರೀಸಮಾಗಮಮಾಡುವುದಿಲ್ಲವೋ ಅಂತಹವರೂ ಸ್ವರ್ಗಕ್ಕೆ ಹೋಗುತ್ತಾರೆ.

ಯುಧಿಷ್ಠಿರ! ನಾನು ನಿನಗೆ ಹವ್ಯ-ಕವ್ಯವಿಧಾನಗಳನ್ನೂ, ನರಕ ಮತ್ತು ಸ್ವರ್ಗಗಳಿಗೆ ಹೋಗುವವರನ್ನೂ, ಧರ್ಮ ಮತ್ತು ಅಧರ್ಮಗಳ ವಿಷಯವನ್ನೂ ವರ್ಣಿಸಿದ್ದೇನೆ. ಮತ್ತೆ ನೀನು ಯಾವ ವಿಷಯವನ್ನು ಕೇಳಲು ಬಯಸುತ್ತೀಯೇ?"

ವೈಷ್ಣವಧರ್ಮ-೧೨

ಬ್ರಹ್ಮಹತ್ಯೆಗೆ ಸಮಾನವಾದ ಪಾಪಗಳು: ಅನ್ನದಾನದ ಪ್ರಶಂಸೆ: ತ್ಯಜಿಸಬೇಕಾದ ಅನ್ನಗಳು: ದಾನದ ಫಲ: ಧರ್ಮದ ಪ್ರಶಂಸೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಇದಂ ಮೇ ತತ್ತ್ವತೋ ದೇವ ವಕ್ತುಮರ್ಹಸ್ಯಶೇಷತಃ।
ಹಿಂಸಾಮಕೃತ್ವಾ ಯೋ ಮರ್ತ್ಯೋ ಬ್ರಹ್ಮಹತ್ಯಾಮವಾಪ್ನುಯಾತ್ ॥

"ದೇವೇಶ! ಹಿಂಸೆಯನ್ನೇ ಮಾಡದಿದ್ದರೂ ಯಾವನು ಬ್ರಹ್ಮಹತ್ಯೆಯ ಪಾಪಕ್ಕೆ ಸಮಾನವಾದ ಪಾಪವನ್ನು ಹೊಂದುತ್ತಾನೆ? ಈ ವಿಷಯವನ್ನು ನನಗೆ ಯಥಾವತ್ತಾಗಿ ಸಮಗ್ರವಾಗಿ ಹೇಳು."

ಶ್ರೀಕೃಷ್ಣನು ಹೇಳುತ್ತಾನೆ:

ಬ್ರಾಹ್ಮಣಂ ಸ್ವಯಮಾಹೂಯ ಭಿಕ್ಷಾರ್ಥಂ ವೃತ್ತಿಕರ್ಶಿತಮ್।
ಬ್ರೂಯಾನ್ನಾಸ್ತೀತಿ ಯಃ ಪಶ್ಚಾತ್ತಮಾಹುರ್ಬ್ರಹ್ಮಘಾತಕಮ್ ॥೭೫೬॥

"ಜೀವಿಕೆಗೆ ಮಾರ್ಗವೇ ಇಲ್ಲದ ಬ್ರಾಹ್ಮಣನನ್ನು ಭಿಕ್ಷೆನೀಡುವ ಸಲುವಾಗಿ ತಾನೇ ಆಹ್ವಾನಿಸಿ ಅವನು ಆಗಮಿಸಿದನಂತರ–"ಏನೂ ಇಲ್ಲ; ಹೊರಟುಹೋಗು"–ಎಂದು ಯಾವನು ಹೇಳುವನೋ–ಅಂತಹವನನ್ನು ಬ್ರಹ್ಮಘಾತಕನೆಂದು ಅಥವಾ ಬ್ರಹ್ಮಹತ್ಯೆಮಾಡಿದವನೆಂದು ಹೇಳುತ್ತಾರೆ.

ಮಧ್ಯಸ್ಥಸ್ಯೇಹ ವಿಪ್ರಸ್ಯ ಯೋಽನೂಚಾನಸ್ಯ ಭಾರತ ।
ವೃತ್ತಿಂ ಹರತಿ ದುರ್ಬುದ್ಧಿಸ್ತಮಾಹುರ್ಬ್ರಹ್ಮಘಾತಕಮ್ ॥೭೫೭॥

ದುಷ್ಟಬುದ್ಧಿಯುಳ್ಳ ಯಾವನು ತಟಸ್ಥನಾಗಿರುವ ಬ್ರಹ್ಮವಿದನಾದ ಬ್ರಾಹ್ಮಣನ ಜೀವಿಕೆಯನ್ನು ಅಪಹರಿಸುವನೋ–ಅಂತಹವನನ್ನೂ ಬ್ರಹ್ಮಘಾತಕನೆಂದು ಹೇಳುತ್ತಾರೆ.

ಆಶ್ರಮೇ ವಾಲಯೇ ವಾಪಿ ಗ್ರಾಮೇ ವಾ ನಗರೇಽಪಿ ವಾ।
ಅಗ್ನಿಂ ಯಃ ಪ್ರಕ್ಷಿಪೇತ್ಕ್ರುದ್ಧಸ್ತಮಾಹುರ್ಬ್ರಹ್ಮಘಾತಕಮ್ ॥೭೫೮॥

ಆಶ್ರಮದಲ್ಲೇ ಆಗಲೀ, ಮನೆಯಲ್ಲಿಯೇ ಆಗಲೀ, ಗ್ರಾಮದಲ್ಲಿಯೇ

ಆಗಲೀ, ಪಟ್ಟಣದಲ್ಲಿಯೇ ಆಗಲೀ–ಯಾವನು ಕ್ರುದ್ಧನಾಗಿ ಬೆಂಕಿಯನ್ನಿಡುವನೋ–ಅಂತಹವನನ್ನು ಬ್ರಹ್ಮಘಾತಕನೆಂದು ಹೇಳುತ್ತಾರೆ.

ಗೋಕುಲಸ್ಯ ತೃಷಾರ್ತಸ್ಯ ಜಲಾನ್ತೇ ವಸುಧಾಧಿಪ ।
ಉತ್ಪಾದಯತಿ ಯೋ ವಿಘ್ನಂ ತಮಾಹುರ್ಬ್ರಹ್ಮಘಾತಕಮ್ ॥೭೫॥

ಬಾಯಾರಿಕೆಯಿಂದ ಬಳಲಿ ನೀರುಕುಡಿಯಲು ನೀರಿನ ಬಳಿಗೆ ಹೋಗುತ್ತಿರುವ ಗೋವುಗಳ ಸಮೂಹಕ್ಕೆ ವಿಘ್ನವನ್ನುಂಟುಮಾಡುವವನನ್ನು ಬ್ರಹ್ಮಘಾತಕನೆಂದು ಹೇಳುತ್ತಾರೆ.

ಯಃ ಪ್ರವೃತ್ತಾಂ ಶ್ರುತಿಂ ಸಮ್ಯಕ್ಶಾಸ್ತ್ರಂ ವಾ ಮುನಿಭಿಃ ಕೃತಮ್।
ದೂಷಯತ್ಯನಭಿಜ್ಞಾಯ ತಮಾಹುರ್ಬ್ರಹ್ಮಘಾತಕಮ್ ॥೭೬॥

ಯಾವನು ಪರಂಪರಾಗತವಾದ ಶ್ರುತಿಗಳನ್ನೂ, ಮುನಿಗಳಿಂದ ಪ್ರಣೀತವಾದ ಶಾಸ್ತ್ರಗಳನ್ನೂ ಅರಿತುಕೊಳ್ಳದೇ ವೃಥಾ ನಿಂದಿಸುವನೋ ಅಂತಹವನನ್ನು ಬ್ರಹ್ಮಘಾತಕನೆಂದು ಹೇಳುತ್ತಾರೆ.

ಚಕ್ಷುಷಾ ವಾಪಿ ಹೀನಸ್ಯ ಪಙ್ಗೋರ್ವಾಪಿ ಜಡಸ್ಯ ವಾ।
ಹರೇದ್ವೈ ಯಸ್ತು ಸರ್ವಸ್ವಂ ತಮಾಹುರ್ಬ್ರಹ್ಮಘಾತಕಮ್ ॥೭೭॥

ಕಣ್ಣಿಲ್ಲದವನ, ಕಾಲಿಲ್ಲದವನ ಮತ್ತು ಬುದ್ಧಿಯಿಲ್ಲದವನ ಸರ್ವಸ್ವವನ್ನೂ ಯಾವನು ಅಪಹರಿಸುವನೋ–ಅಂತಹವನನ್ನು ಬ್ರಹ್ಮಘಾತಕನೆಂದು ಹೇಳುತ್ತಾರೆ.

ಗುರುಂ ತ್ವಂಕೃತ್ಯ ಹುಂಕೃತ್ಯ ಅತಿಕ್ರಮ್ಯ ಚ ಶಾಸನಮ್।
ವರ್ತತೇ ಯಸ್ತು ಮೂಢಾತ್ಮಾ ತಮಾಹುರ್ಬ್ರಹ್ಮಘಾತಕಮ್ ॥೭೮॥

ಯಾವ ಮೂಢಾತ್ಮನು ಗುರುವನ್ನು 'ನೀನು-ತಾನು' ಎನ್ನುತ್ತಾ ಹುಂಕಾರದ ಮೂಲಕವಾಗಿ ತಿರಸ್ಕರಿಸುವನೋ, ಅವನ ಆಜ್ಞೆಯನ್ನು ಅತಿಕ್ರಮಿಸಿ ಸ್ವೇಚ್ಛೆಯಿಂದ ವರ್ತಿಸುವನೋ–ಅಂತಹ ಗುರುದ್ರೋಹಿಯನ್ನೂ ಬ್ರಹ್ಮಘಾತಕನೆಂದು ಕರೆಯುತ್ತಾರೆ.

ಯಾವತ್ಸಾರೋ ಭವೇದ್ದೀನಸ್ತನ್ನಾಶೇ ಯಸ್ಯ ದುಃಸ್ಥಿತಿಃ।
ತತ್ಸರ್ವಸ್ವಂ ಹರೇದ್ಯೋ ವೈ ತಮಾಹುರ್ಬ್ರಹ್ಮಘಾತಕಮ್ ॥೭೯॥

ಯಾವ ಒಬ್ಬ ದೀನನಾದ ಮನುಷ್ಯನು ತನ್ನಲ್ಲಿರುವ ಅಲ್ಪ-ಸ್ವಲ್ಪವಸ್ತುಗಳನ್ನೇ ಸಾರಸರ್ವಸ್ವವೆಂದೂ (ಮಹೈಶ್ವರ್ಯವೆಂದೂ) ಭಾವಿಸಿಕೊಂಡಿರುವನೋ ಮತ್ತು ಆ ಅಲ್ಪ-ಸ್ವಲ್ಪ ವಸ್ತುಗಳ ನಷ್ಟದಿಂದ ಅವನಿಗೆ ಅತ್ಯಂತದುಃಸ್ಥಿತಿಯೇ ಉಂಟಾಗುವುದೋ–ಅಂತಹವನ ಬಳಿಯಲ್ಲಿರುವ ಆ ಅಲ್ಪ-ಸ್ವಲ್ಪವಸ್ತುಗಳನ್ನೂ ಅಪಹರಿಸುವವನನ್ನು ಬ್ರಹ್ಮಘಾತಕನೆಂದು ಹೇಳುತ್ತಾರೆ."

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

"ದೇವಶ್ರೇಷ್ಠನೇ! ಎಲ್ಲ ದಾನಗಳಿಗಿಂತಲೂ ಯಾವ ದಾನವು ವಿಶಿಷ್ಟವಾದುದು; ಯಾವ ಬ್ರಾಹ್ಮಣರ ಅನ್ನವು ತಿನ್ನಲು ಯೋಗ್ಯವಲ್ಲ?–ಈ ವಿಷಯಗಳನ್ನು ಹೇಳು."

ಶ್ರೀಕೃಷ್ಣನು ಹೇಳುತ್ತಾನೆ:

"ಯುಧಿಷ್ಠಿರ! ಬ್ರಹ್ಮನೇ ಮೊದಲಾದ ದೇವತೆಗಳೂ ಅನ್ನವನ್ನೇ ಪ್ರಶಂಸೆಮಾಡುತ್ತಾರೆ. ಆದುದರಿಂದ ಅನ್ನದಾನಕ್ಕೆ ಸಮಾನವಾದ ದಾನವು ಹಿಂದೆಯೂ ಇರಲಿಲ್ಲ. ಮುಂದೆಯೂ ಇರಲಾರದು. ಈ ಲೋಕದಲ್ಲಿ ಅನ್ನವೇ ಪ್ರಾಣಿಯ ಬಲವನ್ನು ಹೆಚ್ಚಿಸುತ್ತದೆ. ಅನ್ನವನ್ನೇ ಅವಲಂಬಿಸಿ ಪ್ರಾಣಿಯ ಪ್ರಾಣಗಳೂ ಉಳಿದಿವೆ. ಇನ್ನು ಮುಂದೆ ನಾನು ಯಾರ ಅನ್ನವನ್ನು ತಿನ್ನಬಾರದೆಂಬ ವಿಷಯವಾಗಿ ಹೇಳುತ್ತೇನೆ, ಏಕಾಗ್ರಚಿತ್ತನಾಗಿ ಕೇಳು.

ದೀಕ್ಷಿತಸ್ಯ ಕದರ್ಯಸ್ಯ ಕ್ರುದ್ಧಸ್ಯ ನಿಕೃತಸ್ಯ ಚ ।
ಅಭಿಶಪ್ತಸ್ಯ ಷಣ್ಡಸ್ಯ ಪಾಕಭೇದಕರಸ್ಯ ಚ ॥೭೬೭॥

ಚಿಕಿತ್ಸಕಸ್ಯ ದೂತಸ್ಯ ತಥಾ ಚೋಚ್ಛಿಷ್ಟಭೋಜಿನಃ ।
ಉಗ್ರಾನ್ನಂ ಸೂತಕಾನ್ನಂ ಚ ಶೂದ್ರೋಚ್ಛೇಷಣಮೇವ ಚ ॥೭೬೮॥

ದ್ವಿಷದನ್ನಂ ನ ಭೋಕ್ತವ್ಯಂ ಪತಿತಾನ್ನಂ ಚ ಯಚ್ಚ್ಯುತಮ್।
ತಥಾ ಚ ಪಿಶುನಸ್ಯಾನ್ನಂ ಯಜ್ಞವಿಕ್ರಯಿಣಸ್ತಥಾ ॥೭೬೯॥
ಶೈಲೂಷಂ ತನ್ತುವಾಯಾನ್ನಂ ಕೃತಘ್ನಸ್ಯಾನ್ನಮೇವ ಚ ॥೭೭೦॥

ಸುವರ್ಣಕರ್ತುರ್ವೈಣಸ್ಯ ಶಸ್ತ್ರವಿಕ್ರಯಿಣಸ್ತಥಾ।
ಸೂತಾನಾಂ ಶೌಣ್ಡಿಕಾನಾಂ ಚ ವೈದ್ಯಸ್ಯ ರಜಕಸ್ಯ ಚ ॥೭೭೧॥
ಸ್ತ್ರೀಜಿತಸ್ಯ ನೃಶಂಸಸ್ಯ ತಥಾ ಮಾಹಿಷಿಕಸ್ಯ ಚ।
ಅನಿರ್ದಶಾನಾಂ ಪ್ರೇತಾನಾಂ ಗಣಿಕಾನಾಂ ತಥೈವ ಚ ॥೭೭೨॥

ಯಜ್ಞದಲ್ಲಿ ದೀಕ್ಷಿತನಾಗಿರುವವನ, ಕೃಪಣನ, ಕೋಪಿಷ್ಠನ, ಶಠನ, ಶಾಪಗ್ರಸ್ತನ, ನಪುಂಸಕನ, ಪಂಕ್ತಿಭೇದಮಾಡುವವನ, ಚಿಕಿತ್ಸಕನ, ದೂತನ, ಉಚ್ಛಿಷ್ಟವನ್ನು ತಿನ್ನುವವನ, ಶೂದ್ರಸ್ತ್ರೀಯಲ್ಲಿ ಕ್ಷತ್ರಿಯನಿಂದ ಹುಟ್ಟಿರುವವನ, ಆಶೌಚದಲ್ಲಿರುವವನ ಅನ್ನವನ್ನು ತಿನ್ನಬಾರದು. ವೃಷಲನು ಊಟ ಮಾಡಿದನಂತರ ಉಳಿಯುವ ಅನ್ನವನ್ನು ತಿನ್ನಬಾರದು. ಶತ್ರುವಿನ ಮತ್ತು ಪತಿತನ ಅನ್ನವನ್ನು ತಿನ್ನಬಾರದು. ಚಾಡಿಹೇಳುವವನ, ಯಜ್ಞದ ಫಲವನ್ನು ಮಾರುವವನ, ನರ್ತಕನ, ನೇಯ್ಗೆಯವನ, ಮಾಡಿದ ಉಪಕಾರವನ್ನು ಸ್ಮರಿಸದವನ, ಅಂಬಷ್ಠನ (ವೈಶ್ಯಸ್ತ್ರೀಯಲ್ಲಿ ಬ್ರಾಹ್ಮಣನಿಂದ ಹುಟ್ಟಿದವನ), ನಿಷಾದನ, ರಂಗಭೂಮಿಯಲ್ಲಿ ನಾಟಕವನ್ನು ಆಡುವವನ, ಅಕ್ಕಸಾಲಿಗನ, ವೀಣೆಯನ್ನು ಬಾರಿಸಿಕೊಂಡು ಜೀವಿಸುವವನ, ಆಯುಧಗಳನ್ನು ಮಾರುವವನ, ಸೂತನ, ಹೆಂಡಮಾರುವವನ, ದೈತ್ಯನ, ಮಡಿವಾಳನ, ಹೆಂಗಸಿಗೆ ಅಡಿಯಾಳಾಗಿರುವವನ, ಕ್ರೂರಿಯ, ವೈಶ್ಯಸ್ತ್ರೀಯಲ್ಲಿ ಕ್ಷತ್ರಿಯನಿಂದ ಹುಟ್ಟಿರುವವನ, ಸತ್ತವರ ಮನೆಯಲ್ಲಿ ಹತ್ತು ದಿನಗಳ ಒಳಗೆ ಆ ಮನೆಯವರ ಮತ್ತು ವೇಶ್ಯೆಯ ಅನ್ನವನ್ನು ತಿನ್ನಬಾರದು.

ರಾಜಾನ್ನಂ ತೇಜ ಆದತ್ತೇ ಶೂದ್ರಾನ್ನಂ ಬ್ರಹ್ಮವರ್ಚಸಮ್ ।
ಆಯುಃ ಸುವರ್ಣಕಾರಾನ್ನಂ ಯಶಶ್ಚರ್ಮವಿಕೃನ್ತಿನಃ ॥೭೭೩॥

ರಾಜನ ಅನ್ನವು ತೇಜಸ್ಸನ್ನೂ, ಶೂದ್ರನ ಅನ್ನವು ಬ್ರಹ್ಮವರ್ಚಸ್ಸನ್ನೂ, ಅಕ್ಕಸಾಲಿಗನ ಅನ್ನವು ಆಯುಷ್ಯವನ್ನೂ, ಚಮ್ಮಾರನ ಅನ್ನವು ಯಶಸ್ಸನ್ನೂ ಹಾಳುಮಾಡುತ್ತದೆ.

ಗಣಾನ್ನಂ ಗಣಿಕಾನ್ನಂ ಚ ಲೋಕೇಭ್ಯಃ ಪರಿಕೀರ್ತಿತಮ್ ।
ಪೂಯಂ ಚಿಕಿತ್ಸಕಾನ್ನಂ ಚ ಶುಕ್ಲಂ ತು ವೃಷಲೀಪತೇಃ ।
ವಿಷ್ಠಾ ವಾರ್ಧುಷಿಕಸ್ಯಾನ್ನಂ ತಸ್ಮಾತ್ತತ್ಪರಿವರ್ಜಯೇತ್ ॥೭೭೪॥

ಜನಸಮೂಹದ ಅನ್ನವೂ ಮತ್ತು ಸೂಳೆಯ ಅನ್ನವೂ ಲೋಕಗರ್ಹಿತವಾದುದು. ವೈದ್ಯನ ಅನ್ನವು ಕೀವಿಗೆ ಸಮಾನ. ಶೂದ್ರಸ್ತ್ರೀಪತಿಯಾದ ಬ್ರಾಹ್ಮಣನ ಅನ್ನವು ವೀರ್ಯಕ್ಕೆ ಸಮಾನವಾದುದು. ಬಡ್ಡಿಯಿಂದ ಜೀವಿಸುವವನ ಅನ್ನವು ಅಮೇಧ್ಯಕ್ಕೆ ಸಮಾನವಾದುದು. ಆದುದರಿಂದ ಇವೆಲ್ಲವನ್ನೂ ಪರಿತ್ಯಜಿಸಬೇಕು.

ಅಮತ್ಯಾನ್ನಮಥೈತೇಷಾಂ ಭುಕ್ತ್ವಾ ತು ತ್ರಿಯಹಂ ಕ್ಷಿಯೇತ್ ।
ಮತ್ಯಾ ಭುಕ್ತ್ವಾ ಸಕೃದ್ವಾಪಿ ಪ್ರಾಜಾಪತ್ಯಂ ಚರೇದ್ವಿಜಃ ॥೭೭॥

ಒಂದುವೇಳೆ ತಿಳಿಯದೆ ಇಂತಹವರ ಅನ್ನವನ್ನು ಊಟಮಾಡಿದರೆ ಮೂರುದಿವಸಗಳು ಉಪವಾಸದಿಂದಿರಬೇಕು. ತಿಳಿದಿದ್ದು ಒಂದು ಹೊತ್ತು ಊಟಮಾಡಿದರೂ ಬ್ರಾಹ್ಮಣನಾದವನು ಪಾಪಪರಿಹಾರಕ್ಕಾಗಿ ಪ್ರಾಜಾಪತ್ಯಕೃಚ್ಛ್ರವ್ರತವನ್ನು ಆಚರಿಸಬೇಕು.

ಯುಧಿಷ್ಠಿರ! ದಾನಗಳ ಫಲವೇನೆಂಬುದನ್ನು ಯಥಾವತ್ತಾಗಿ ಕೇಳು. ಜಲದಾನಮಾಡಿದವನು ತೃಪ್ತಿಯನ್ನು ಹೊಂದುತ್ತಾನೆ. ಅನ್ನದಾನಮಾಡಿದವನು ಅಕ್ಷಯವಾದ ಸುಖವನ್ನು ಅನುಭವಿಸುತ್ತಾನೆ. ಎಳ್ಳನ್ನು ದಾನಮಾಡಿದವನು ಇಷ್ಟವಾದ ಸಂತಾನವನ್ನು ಪಡೆಯುತ್ತಾನೆ. ದೀಪದಾನಮಾಡಿದವನು ಪ್ರಕಾಶಮಾನವಾದ ಕಣ್ಣುಗಳುಳ್ಳವನಾಗುತ್ತಾನೆ. ಭೂದಾನಮಾಡಿದವನು ಭೂಮಿಯನ್ನೂ, ಸುವರ್ಣವನ್ನು ದಾನಮಾಡಿದವನು ದೀರ್ಘಾಯುಷ್ಯವನ್ನೂ ಹೊಂದುತ್ತಾರೆ. ಗೃಹದಾನಮಾಡಿದವನು ಶ್ರೇಷ್ಠವಾದ ಮನೆಗಳನ್ನು ಪಡೆಯುತ್ತಾನೆ. ಬೆಳ್ಳಿಯನ್ನು ದಾನಮಾಡಿದವನು ಒಳ್ಳೆಯ ರೂಪವಂತನಾಗುತ್ತಾನೆ. ವಸ್ತ್ರವನ್ನು ದಾನಮಾಡಿದವನು ಚಂದ್ರಲೋಕಕ್ಕೂ, ಕುದುರೆಗಳನ್ನು ದಾನಮಾಡಿದವನು ಅಶ್ವಿನೀದೇವತೆಗಳ ಲೋಕಕ್ಕೂ ಹೋಗುತ್ತಾರೆ. ಗಾಡಿಯನ್ನೆಳೆಯುವ ಎತ್ತನ್ನು ದಾನಮಾಡಿದವನು ಅಪೇಕ್ಷಿಸಿದ ಸಂಪತ್ತನ್ನು ಹೊಂದುತ್ತಾನೆ. ಗೋದಾನಮಾಡಿದವನು ಗೋಲೋಕಕ್ಕೆ ಹೋಗುತ್ತಾನೆ. ಯಾನವನ್ನೂ ಮತ್ತು ಶಯ್ಯೆಯನ್ನೂ ದಾನಮಾಡುವವನು ಸುಂದರಳಾದ ಸ್ತ್ರೀಯನ್ನೂ, ಪ್ರಾಣಿಗಳಿಗೆ ಅಭಯವನ್ನು ನೀಡುವವನು ಐಶ್ವರ್ಯವನ್ನೂ ಹೊಂದುತ್ತಾರೆ. ಧಾನ್ಯಗಳನ್ನು

ದಾನಮಾಡಿದವನು ಶಾಶ್ವತವಾದ ಸೌಖ್ಯವನ್ನು ಹೊಂದುತ್ತಾನೆ. ವೇದವಿದ್ಯೆಯನ್ನು ದಾನಮಾಡಿದವನು ಪರಬ್ರಹ್ಮದೊಡನೆ ಸಮತ್ವವನ್ನು ಹೊಂದುತ್ತಾನೆ. ಸರ್ವೇಷಾಮೇವ ದಾನಾನಾಂ ಬ್ರಹ್ಮದಾನಂ ವಿಶಿಷ್ಯತೇ–ಎಲ್ಲ ದಾನಗಳಿಗಿಂತಲೂ ವೇದವಿದ್ಯಾದಾನವೇ ಪ್ರಶಸ್ತವಾದುದು. ಸುವರ್ಣ, ಭೂಮಿ, ಗೋವು, ಕುದುರೆ, ಆಡು, ವಸ್ತ್ರ, ಹಾಸಿಗೆ ಮತ್ತು ಆಸನ–ಇವೇ ಮುಂತಾದ ವಸ್ತುಗಳನ್ನು ಯಾವನು ಆದರಪೂರ್ವಕವಾಗಿ ಯಥೋಚಿತವಾಗಿ ಸತ್ಕರಿಸಿ ಸತ್ಪಾತ್ರರಿಗೆ ದಾನಮಾಡುವನೋ ಮತ್ತು ಸತ್ಕೃತನಾಗಿ ಯಾವನು ದಾನವನ್ನು ತೆಗೆದುಕೊಳ್ಳುವನೋ–ಅವರಿಬ್ಬರೂ ಸ್ವರ್ಗಕ್ಕೆ ಹೋಗುತ್ತಾರೆ. ಇದಕ್ಕೆ ವಿಪರೀತವಾಗಿ ಔದಾಸೀನ್ಯದಿಂದಾಗಲೀ, ಅಶ್ರದ್ಧೆಯಿಂದಾಗಲೀ, ಈ ವಸ್ತುಗಳನ್ನು ದಾನವಾಗಿ ಕೊಟ್ಟರೆ ಮತ್ತು ಅಸತ್ಕೃತನಾಗಿ ಈ ವಸ್ತುಗಳನ್ನು ದಾನವಾಗಿ ಪಡೆದರೆ ದಾನಿ-ಪ್ರತಿಗ್ರಹಿಗಳಿಬ್ಬರೂ ನರಕಕ್ಕೆ ಹೋಗುತ್ತಾರೆ.

ಅನೃತಂ ನ ವದೇದ್ವಿದ್ವಾಂಸ್ತಪಸ್ತಪ್ತ್ವಾ ನ ವಿಸ್ಮಯೇತ್।
ನಾರ್ತೋಽಪ್ಯಭಿಭವೇದ್ವಿಪ್ರಾನ್ನ ದತ್ತ್ವಾ ಪರಿಕೀರ್ತಯೇತ್ ॥೭೮೨॥

ವಿದ್ವಾಂಸನು ಸುಳ್ಳನ್ನು ಹೇಳಬಾರದು. ತಪಸ್ಸನ್ನು ಮಾಡಿ ಗರ್ವಿಷ್ಠನಾಗಬಾರದು. ಕಷ್ಟದಲ್ಲಿದ್ದರೂ ಬ್ರಾಹ್ಮಣರನ್ನು ಅವಮಾನ ಮಾಡಬಾರದು. ದಾನಕೊಟ್ಟುದನ್ನು ಹೇಳಬಾರದು.

ಯಜ್ಞೋಽನೃತೇನ ಕ್ಷರತಿ ತಪಃ ಕ್ಷರತಿ ವಿಸ್ಮಯಾತ್।
ಆಯುರ್ವಿಪ್ರಾವಮಾನೇನ ದಾನಂ ತು ಪರಿಕೀರ್ತನಾತ್ ॥೭೮೩॥

ಸುಳ್ಳುಹೇಳುವುದರಿಂದ ಯಜ್ಞವು ನಷ್ಟವಾಗುತ್ತದೆ. ಗರ್ವದಿಂದ ತಪಸ್ಸು ನಷ್ಟವಾಗುತ್ತದೆ. ಬ್ರಾಹ್ಮಣರನ್ನು ಅವಮಾನಗೊಳಿಸಿದರೆ ಆಯುಷ್ಯವು ನಷ್ಟವಾಗುತ್ತದೆ. ದಾನಕೊಟ್ಟುದನ್ನು ಹೇಳಿಕೊಳ್ಳುವುದರಿಂದ ದಾನದ ಫಲವು ನಾಶವಾಗುತ್ತದೆ.

ಏಕಃ ಪ್ರಜಾಯತೇ ಜನ್ತುರೇಕ ಏವ ಪ್ರಮೀಯತೇ ।
ಏಕೋಽನುಭುಙ್ಕ್ತೇ ಸುಕೃತಮೇಕಶ್ಚಾಪ್ನೋತಿ ದುಷ್ಕೃತಮ್ ॥೭೮೪॥

ಜೀವನು ಏಕಾಕಿಯಾಗಿ ಹುಟ್ಟುತ್ತಾನೆ. ಏಕಾಕಿಯಾಗಿಯೇ ಸಾಯು

ತ್ತಾನೆ. ಏಕಾಕಿಯಾಗಿಯೇ ತಾನು ಮಾಡಿದ ಸುಕೃತದ ಫಲವನ್ನು ಅನುಭವಿಸುತ್ತಾನೆ. ಏಕಾಕಿಯಾಗಿಯೇ ಪಾಪದ ಫಲವನ್ನೂ ಅನುಭವಿಸುತ್ತಾನೆ.

ಮೃತಂ ಶರೀರಮುತ್ಸೃಜ್ಯ ಕಾಷ್ಠಲೋಷ್ಠಸಮಂ ಕ್ಷಿತೌ।
ವಿಮುಖಾ ಬಾನ್ಧವಾ ಯಾನ್ತಿ ಧರ್ಮಸ್ತಮನುವರ್ತತೇ ॥೭೮೫॥

ಮನುಷ್ಯನು ಮರಣಹೊಂದಿದೊಡನೆಯೇ ಅವನ ಬಂಧುಗಳು ಮೃತಶರೀರವನ್ನು ಕಟ್ಟಿಗೆ ಮತ್ತು ಮಣ್ಣುಹೆಂಟೆಗಳಂತೆ ಭೂಮಿಯಲ್ಲಿರಿಸಿ ವಿಮುಖರಾಗಿ ಹೊರಟುಹೋಗುತ್ತಾರೆ. ಆ ಸಮಯದಲ್ಲಿ ಧರ್ಮವೊಂದೇ ಶರೀರವನ್ನು ತ್ಯಜಿಸಿದ ಜೀವನ ಹಿಂದೆ ಹೋಗುತ್ತದೆ.

ಅನಾಗತಾನಿ ಕಾರ್ಯಾಣಿ ಕರ್ತುಂ ಗಣಯತೇ ಮನಃ।
ಶಾರೀರಕಂ ಸಮುದ್ದಿಶ್ಯ ಸ್ಮಯತೇ ನೂನಮನ್ತಕಃ ॥೭೮೬॥

ತಸ್ಮಾದ್ಧರ್ಮಸಹಾಯಸ್ತು ಧರ್ಮಂ ಸಂಚಿನುಯಾತ್ಸದಾ ।
ಧರ್ಮೇಣ ಹಿ ಸಹಾಯೇನ ತಮಸ್ತರತಿ ದುಸ್ತರಮ್ ॥೭೮೭॥

ಮುಂದು-ಮುಂದಿನ ಕಾರ್ಯಗಳನ್ನು ಮಾಡಲು ಮನುಷ್ಯನ ಮನಸ್ಸು ಲೆಕ್ಕಹಾಕುತ್ತಿರುತ್ತದೆ. ಆದರೆ ಶರೀರದ ಅಸ್ಥಿರತೆಯನ್ನು ಅನುಲಕ್ಷಿಸಿ ಯಮನು ನಗುತ್ತಿರುತ್ತಾನೆ. ಆದುದರಿಂದ ಮನುಷ್ಯನು ಆಪತ್ಕಾಲದಲ್ಲಿ ಧರ್ಮವೊಂದೇ ಸಹಾಯಕವಾಗುವುದೆಂದು ನಿಶ್ಚಯಿಸಿ ನಿರಂತರವಾಗಿ ಪುಣ್ಯಸಂಚಯನದಲ್ಲಿ ತತ್ಪರನಾಗಿರಬೇಕು. ಮನುಷ್ಯನು ಧರ್ಮದ ಸಹಾಯದಿಂದಲೇ ದುಸ್ತರವಾದ, ಅಂಧಕಾರಮಯವಾದ ನರಕವನ್ನು ದಾಟುತ್ತಾನೆ.

ಯೇಷಾಂ ತಟಾಕಾನಿ ಬಹೂದಕಾನಿ
ಸಭಾಶ್ಚ ಕೂಪಾಶ್ಚ ಶುಭಾಃ ಪ್ರಪಾಶ್ಚ।
ಅನ್ನಪ್ರದಾನಂ ಮಧುರಾ ಚ ವಾಣೀ
ಯಮಸ್ಯ ತೇ ನಿರ್ವಿಷಯಾ ಭವನ್ತಿ ॥೭೮೮॥

ಯಾರು ಅಧಿಕವಾದ ನೀರಿನಿಂದ ತುಂಬಿರುವ ಸರೋವರಗಳನ್ನೂ, ಧರ್ಮಶಾಲೆಗಳನ್ನೂ, ಬಾವಿಗಳನ್ನೂ, ಶುಭಕರವಾದ ಅರವಟ್ಟಿಗೆಗಳನ್ನೂ

ನಿರ್ಮಿಸುವರೋ, ಅನ್ನದಾನಮಾಡುವರೋ, ಇತರರೊಡನೆ ಪ್ರಿಯವಾದ ಮತ್ತು ಸುಮಧುರವಾದ ಮಾತುಗಳನ್ನಾಡುವರೋ–ಅಂತಹವರು ಯಮನಿಗೆ ವಿಷಯರಾಗುವುದಿಲ್ಲ. (ಅಂತಹವರಿಗೆ ಯಮನ ಬಾಧೆ ಯಿರುವುದಿಲ್ಲ.)"

ವೈಷ್ಣವಧರ್ಮ–೧೩

ಧರ್ಮದ ಮತ್ತು ಶೌಚದ ಲಕ್ಷಣ: ಸಂನ್ಯಾಸಿಗಳನ್ನೂ ಮತ್ತು ಅತಿಥಿಗಳನ್ನೂ ಸತ್ಕರಿಸಲು ಉಪದೇಶ: ಶಿಷ್ಟಾಚಾರದ, ದಾನಕ್ಕೆ ಪಾತ್ರನಾದ ಬ್ರಾಹ್ಮಣನ ವರ್ಣನೆ: ಅನ್ನದಾನದ ಪ್ರಶಂಸೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

"ಜನಾರ್ದನ! ವಿದ್ವಾಂಸರು–ಧರ್ಮವು ಅನೇಕಪ್ರಕಾರವಾಗಿರುವು ದೆಂದೂ ಮತ್ತು ಅನೇಕವಾದ ಬಾಗಿಲುಗಳುಳ್ಳದ್ದಾಗಿರುವುದೆಂದೂ (ಹಲವು ರೀತಿಗಳಲ್ಲಿ ಆಚರಿಸಲ್ಪಡುವುದೆಂದೂ) ಹೇಳುತ್ತಾರೆ. ನಿಶ್ಚಯವಾಗಿಯೂ ಧರ್ಮದ ಲಕ್ಷಣವೇನು? ಈ ವಿಷಯವನ್ನು ಹೇಳು."

ಶ್ರೀಕೃಷ್ಣನು ಹೇಳುತ್ತಾನೆ:

"ಯುಧಿಷ್ಠಿರ! ಸಂಕ್ಷೇಪವಾಗಿ ಧರ್ಮದ ಮತ್ತು ಶೌಚದ ವಿಧಿಯನ್ನೂ ಮತ್ತು ಅದರ ಕ್ರಮವನ್ನೂ ಹೇಳುವೆನು; ಕೇಳು:

ಅಹಿಂಸಾ ಶೌಚಮಕ್ರೋಧಮಾನೃಶಂಸ್ಯಂ ದಮಃ ಶಮಃ।
ಆರ್ಜವಂ ಚೈವ ರಾಜೇನ್ದ್ರ ನಿಶ್ಚಿತಂ ಧರ್ಮಲಕ್ಷಣಮ್ ॥೭೦॥

ಅಹಿಂಸೆ, ಶೌಚ, ಕ್ರೋಧವಿಲ್ಲದಿರುವಿಕೆ, ಕ್ರೌರ್ಯವಿಲ್ಲದಿರುವಿಕೆ, ದಮ, ಶಮ ಮತ್ತು ಸರಳತೆ-ಇವು ಧರ್ಮದ ನಿಶ್ಚಿತಲಕ್ಷಣಗಳಾಗಿವೆ.

ಬ್ರಹ್ಮಚರ್ಯಂ ತಪಃ ಕ್ಷಾನ್ತಿರ್ಮಧುಮಾಂಸಸ್ಯ ವರ್ಜನಮ್।
ಮರ್ಯಾದಾಯಾಂ ಸ್ಥಿತಿಶ್ಚೈವ ಶಮಃ ಶೌಚಸ್ಯ ಲಕ್ಷಣಮ್ ॥೭೧॥

ಬ್ರಹ್ಮಚರ್ಯೆ, ತಪಸ್ಸು, ಕ್ಷಮೆ, ಮಧು-ಮಾಂಸಗಳ ತ್ಯಾಗ, ಧರ್ಮ ಮರ್ಯಾದೆಯನ್ನು ಮೀರದೇ ಇರುವುದು, ಶಮ–ಇವು ಶೌಚದ (ಪವಿತ್ರತೆಯ) ಲಕ್ಷಣಗಳಾಗಿವೆ.

ಮನುಷ್ಯನು ಬಾಲ್ಯದಲ್ಲಿ ವಿದ್ಯೆಯನ್ನು ಕಲಿಯಬೇಕು. ಯೌವನದಲ್ಲಿ ವಿವಾಹವನ್ನು ಮಾಡಿಕೊಂಡು ಗೃಹಸ್ಥನಾಗಬೇಕು. ಮುಪ್ಪಿನಲ್ಲಿ ಮುನಿವೃತ್ತಿಯನ್ನು ಆಶ್ರಯಿಸಬೇಕು. ಹೀಗೆ ಎಲ್ಲ ಅವಸ್ಥೆಗಳಲ್ಲಿಯೂ ಧರ್ಮಾಚರಣೆಯನ್ನು ಮಾಡಬೇಕು.

ಬ್ರಾಹ್ಮಣಾನ್ನಾವಮನ್ಯೇತ ಗುರೂನ್ಪರಿವದೇನ್ನ ಚ ।
ಯತೀನಾಮನುಕೂಲಃ ಸ್ಯಾದೇಷ ಧರ್ಮಃ ಸನಾತನಃ ॥೮೩॥

ಬ್ರಾಹ್ಮಣರನ್ನು ಅವಮಾನಗೊಳಿಸಬಾರದು. ಗುರುಜನರನ್ನು ನಿಂದಿಸಬಾರದು. ಯತಿಗಳಿಗೆ ಅನುಕೂಲವಾಗಿ ವರ್ತಿಸಬೇಕು. ಇದು ಸನಾತನ ಧರ್ಮವಾಗಿದೆ.

ಯತಿರ್ಗುರುರ್ದ್ವಿಜಾತೀನಾಂ ವರ್ಣಾನಾಂ ಬ್ರಾಹ್ಮಣೋ ಗುರುಃ।
ಪತಿರೇವ ಗುರುಃ ಸ್ತ್ರೀಣಾಂ ಸರ್ವೇಷಾಂ ಪಾರ್ಥಿವೋ ಗುರುಃ॥

ಬ್ರಾಹ್ಮಣರಿಗೆ ಸಂನ್ಯಾಸಿಯೇ ಗುರುವು. ನಾಲ್ಕು ವರ್ಣದವರಿಗೂ ಬ್ರಾಹ್ಮಣನೇ ಗುರುವು. ಹೆಂಗಸರಿಗೆ ಪತಿಯೇ ಗುರುವು. ಎಲ್ಲರಿಗೂ ರಾಜನೇ ಗುರುವು.

ಏಕದಣ್ಡೀ ತ್ರಿದಣ್ಡೀ ವಾ ಶಿಖೀ ವಾ ಮುಣ್ಡಿತೋಽಪಿ ವಾ।
ಕಾಷಾಯದಣ್ಡಧಾರೋಽಪಿ ಯತಿಃ ಪೂಜ್ಯೋ ನ ಸಂಶಯಃ॥

ಸಂನ್ಯಾಸಿಯು ಏಕದಂಡಿಯಾಗಲೀ, ತ್ರಿದಂಡಿಯಾಗಲೀ, ಜಟೆಯುಳ್ಳವನಾಗಿರಲೀ, ಮುಂಡನಮಾಡಿಸಿಕೊಂಡಿರಲೀ–ಕಾಷಾಯವಸ್ತ್ರವನ್ನುಟ್ಟು ದಂಡವನ್ನು ಧರಿಸಿದ್ದರೂ ಕೂಡ–ಅವನು ಪೂಜ್ಯನೆಂಬುದರಲ್ಲಿ ಸಂಶಯವೇ ಇಲ್ಲ. (ಸಂನ್ಯಾಸಿಗಿರಬೇಕಾದ ಗುಣಗಳಿಲ್ಲದಿದ್ದರೂ ಕೇವಲ ಕಾಷಾಯ ದಂಡಧಾರಣೆಮಾಡಿದ್ದರೂ ಅವನು ಪೂಜ್ಯನೇ ಸರಿ.)

ತಸ್ಮಾತ್ತು ಯತ್ನತಃ ಪೂಜ್ಯಾ ಮದ್ಭಕ್ತಾ ಮತ್ಪರಾಯಣಾಃ।
ಮಯಿ ಸಂನ್ಯಸ್ತಕರ್ಮಾಣಃ ಪರತ್ರ ಹಿತಕಾಂಕ್ಷಿಭಿಃ ॥೮೬॥

ಆದುದರಿಂದ ಪರಲೋಕದಲ್ಲಿ ತಮ್ಮ ಕಲ್ಯಾಣವನ್ನು ಬಯಸುವವರು– ನನ್ನ ಭಕ್ತರಾದ, ನನ್ನನ್ನೇ ಆಶ್ರಯಿಸಿರುವ, ಸಕಲಕರ್ಮಫಲಗಳನ್ನೂ ನನ್ನಲ್ಲಿಯೇ ಅರ್ಪಿಸಿರುವ ಸಂನ್ಯಾಸಿಗಳನ್ನು ಪ್ರಯತ್ನಪೂರ್ವಕವಾಗಿ ಸತ್ಕರಿಸಬೇಕು.

ಪ್ರಹರೇನ್ನ ದ್ವಿಜಾನ್ವಿಪ್ರೋ ಗಾಂ ನ ಹನ್ಯಾತ್ಕದಾಚನ ।
ಭ್ರೂಣಹತ್ಯಾಸಮಂ ಚೈವ ಉಭಯಂ ಯೋ ನಿಷೇವತೇ ॥೯೭॥

ವಿಪ್ರನಾದವನು ಬ್ರಾಹ್ಮಣರನ್ನು ಪ್ರಹರಿಸಬಾರದು. ಯಾವುದೇ ಕಾರಣದಿಂದಲೂ ಗೋವನ್ನು ಹಿಂಸಿಸಬಾರದು. ಯಾವನು ಬ್ರಾಹ್ಮಣರನ್ನೂ ಗೋವನ್ನೂ ಪ್ರಹರಿಸುವನೋ ಅಥವಾ ಹಿಂಸಿಸುವನೋ–ಅಂತಹವನಿಗೆ ಭ್ರೂಣಹತ್ಯಾಪಾಪಕ್ಕೆ ಸಮಾನವಾದ ಪಾಪವೇ ಉಂಟಾಗುತ್ತದೆ.

ನಾಗ್ನಿಂ ಮುಖೇನೋಪಧಮೇನ್ನ ಚ ಪಾದೌ ಪ್ರತಾಪಯೇತ್।
ನಾಧಃ ಕುರ್ಯಾತ್ಕದಾಚಿತ್ತು ನ ಪೃಷ್ಠಂ ಪರಿತಾಪಯೇತ್ ॥೯೮॥

ಅಗ್ನಿಯನ್ನು ಬಾಯಿಂದ ಊದಬಾರದು (ಊದುಕೊಳವೆಯ ಮೂಲಕವಾಗಿಯೇ ಊದಬೇಕು.) ಬೆಂಕಿಯಲ್ಲಿ ಕಾಲುಗಳನ್ನು ಕಾಯಿಸಿಕೊಳ್ಳಬಾರದು. ಬೆಂಕಿಯನ್ನು ಕಾಲಿನಿಂದ ತಳ್ಳಬಾರದು. ಬೆಂಕಿಯಿಂದ ಹಿಂಭಾಗವನ್ನು ಕಾಯಿಸಿಕೊಳ್ಳಬಾರದು.

ಶ್ವಚಣ್ಡಾಲಾದಿಭಿಃ ಸ್ಪೃಷ್ಟೋ ನಾಙ್ಗಮಗ್ನೌ ಪ್ರತಾಪಯೇತ್।
ಸರ್ವದೇವಮಯೋ ವಹ್ನಿಸ್ತಸ್ಮಾಚ್ಛುದ್ಧಃ ಸದಾ ಸ್ಪೃಶೇತ್ ॥೯೯॥

ನಾಯಿಯನ್ನಾಗಲೀ, ಚಂಡಾಲನನ್ನಾಗಲೀ ಮುಟ್ಟಿಸಿಕೊಂಡು ಶರೀರವನ್ನು ಅಗ್ನಿಯಲ್ಲಿ ಕಾಯಿಸಿಕೊಳ್ಳಬಾರದು. ಅಗ್ನಿಯು ಸರ್ವದೇವತಾಸ್ವರೂಪನು. ಆದುದರಿಂದ ಯಾವಾಗಲೂ ಅಗ್ನಿಯನ್ನು ಶುದ್ಧನಾಗಿಯೇ ಮುಟ್ಟಬೇಕು.

ಪ್ರಾಪ್ತಮೂತ್ರಪುರೀಷಸ್ತು ನ ಸ್ಪೃಶೇದ್ವಹ್ನಿಮಾತ್ಮವಾನ್।
ಯಾವತ್ತು ಧಾರಯೇದ್ವೇಗಂ ತಾವದಪ್ರಯತೋ ಭವೇತ್ ॥೧೦೦॥

ಬುದ್ಧಿವಂತನಾದವನು ಮಲ-ಮೂತ್ರವಿಸರ್ಜನೆಯ ಅವಸರವುಂಟಾದಾಗ ಅಗ್ನಿಯನ್ನು ಮುಟ್ಟಬಾರದು. ಮಲ-ಮೂತ್ರವಿಸರ್ಜನೆಯ ವೇಗವನ್ನು ಎಲ್ಲಿಯವರೆಗೆ ತಡೆದಿರುತ್ತಾನೆಯೋ–ಅಲ್ಲಿಯವರೆಗೂ ಅವನು ಅಶುದ್ಧನಾಗಿರುತ್ತಾನೆ.”

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

“ಕೃಷ್ಣ! ಯಾರಿಗೆ ದಾನವನ್ನು ಕೊಟ್ಟರೆ ಮಹಾಫಲವು ಲಭಿಸು

ವುದೋ ಅಂತಹ ಬ್ರಾಹ್ಮಣರು ಹೇಗಿರುತ್ತಾರೆ? ಎಂತಹವರಿಗೆ ದಾನಕೊಡಬೇಕು? ಈ ವಿಷಯವನ್ನು ಹೇಳುವ ಕೃಪೆಮಾಡು."

ಶ್ರೀಕೃಷ್ಣನು ಹೇಳುತ್ತಾನೆ:

ಅಕ್ರೋಧನಾಃ ಸತ್ಯಪರಾ ಧರ್ಮನಿತ್ಯಾ ಜಿತೇನ್ದ್ರಿಯಾಃ ।
ತಾದೃಶಾಃ ಸಾಧವೋ ವಿಪ್ರಾಸ್ತೇಭ್ಯೋ ದತ್ತಂ ಮಹಾಫಲಮ್ ॥

"ಕೋಪವಿಲ್ಲದಿರುವ, ಸತ್ಯನಿಷ್ಠರಾದ, ಪ್ರತಿನಿತ್ಯವೂ ಧರ್ಮಕಾರ್ಯಗಳನ್ನೇ ಮಾಡುವ, ಜಿತೇಂದ್ರಿಯರಾದ ಬ್ರಾಹ್ಮಣರೇ ಶ್ರೇಷ್ಠರಾದವರು. ಅಂತಹವರಿಗೆ ಕೊಡುವ ದಾನವು ಮಹಾಫಲದಾಯಕವಾಗುತ್ತದೆ.

ಅಮಾನಿನಃ ಸರ್ವಸಹಾ ದೃಷ್ಟಾರ್ಥಾ ವಿಜಿತೇನ್ದ್ರಿಯಾಃ ।
ಸರ್ವಭೂತಹಿತಾ ಮೈತ್ರಾಸ್ತೇಭ್ಯೋ ದತ್ತಂ ಮಹಾಫಲಮ್ ॥

ಅಭಿಮಾನಶೂನ್ಯರಾದ, ಎಲ್ಲವನ್ನೂ ಸಹಿಸಿಕೊಳ್ಳುವ, ಶಾಸ್ತ್ರಾರ್ಥಗಳನ್ನು ತಿಳಿದಿರುವ, ಇಂದ್ರಿಯಗಳನ್ನು ಜಯಿಸಿರುವ, ಸರ್ವಪ್ರಾಣಿಗಳಿಗೂ ಹಿತವನ್ನುಂಟುಮಾಡುವ, ಎಲ್ಲರೊಡನೆಯೂ ಮೈತ್ರಭಾವದಿಂದಿರುವ ವಿಪ್ರರೇ ಶ್ರೇಷ್ಠರಾದವರು. ಅಂತಹವರಿಗೆ ಕೊಡುವ ದಾನವು ಮಹಾಫಲವನ್ನು ಕೊಡುತ್ತದೆ.

ಅಲುಬ್ಧಾಃ ಶುಚಯೋ ವೈದ್ಯಾ ಹ್ರೀಮನ್ತಃ ಸತ್ಯವಾದಿನಃ ।
ಸ್ವಧರ್ಮನಿರತಾ ಯೇ ತು ತೇಭ್ಯೋ ದತ್ತಂ ಮಹಾಫಲಮ್ ॥

ಲೋಭರಹಿತರಾದ, ಶುದ್ಧರಾದ, ವಿದ್ವಾಂಸರಾದ, ಲಜ್ಜಾಯುಕ್ತರಾದ, ಸತ್ಯವಾದಿಗಳಾದ, ಸ್ವಧರ್ಮನಿರತರಾದ ಬ್ರಾಹ್ಮಣರೇ ಶ್ರೇಷ್ಠರು. ಅಂತಹವರಿಗೆ ಕೊಡುವ ದಾನವು ಮಹಾಫಲವನ್ನು ಕೊಡುತ್ತದೆ.

ಸಾಙ್ಗಾಂಶ್ಚ ಚತುರೋ ವೇದಾನ್ಯೋಽಧೀಯೇತ ದಿನೇ ದಿನೇ ।
ಶೂದ್ರಾನ್ನಂ ಯಸ್ಯ ನೋ ದೇಹೇ ತತ್ಪಾತ್ರಮೃಷಯೋ ವಿದುಃ ॥

ಯಾವ ಬ್ರಾಹ್ಮಣನು ಆರು ಅಂಗಗಳಿಂದ ಕೂಡಿರುವ ನಾಲ್ಕು ವೇದಗಳನ್ನು ಅನುದಿನವೂ ಪಾರಾಯಣಮಾಡುವನೋ ಮತ್ತು ಯಾವನ ದೇಹದಲ್ಲಿ ಶೂದ್ರಾನ್ನವಿರುವುದಿಲ್ಲವೋ-ಅಂತಹವನು ದಾನಕ್ಕೆ ಸತ್ಪಾತ್ರನೆಂದು ಮುನಿಗಳು ತಿಳಿಯುತ್ತಾರೆ.

ದಾನವನ್ನು ಪ್ರತಿಗ್ರಹಿಸುವವನು ಒಳ್ಳೆಯ ಬುದ್ಧಿಯಿಂದಲೂ, ಶಾಸ್ತ್ರಜ್ಞಾನದಿಂದಲೂ, ಸದಾಚಾರದಿಂದಲೂ, ಉತ್ತಮವಾದ ಶೀಲ ದಿಂದಲೂ ಕೂಡಿದವನಾಗಿದ್ದರೆ–ಅಂತಹವನೊಬ್ಬನೇ ದಾನಿಯ ಕುಲವನ್ನು ಉದ್ಧರಿಸಬಲ್ಲನು.

ಅಂತಹ ಬ್ರಾಹ್ಮಣನಿಗೆ ಗೋವನ್ನೂ, ಕುದುರೆಯನ್ನೂ, ಅನ್ನವನ್ನೂ ಮತ್ತು ಐಶ್ವರ್ಯವನ್ನೂ ದಾನಮಾಡಬೇಕು. ಸಾಧುಸಮ್ಮತನಾದ, ಸಕಲಗುಣಸಂಪನ್ನನಾದ ಬ್ರಾಹ್ಮಣನು ಎಲ್ಲಿಯಾದರೂ ಇರುವನೆಂದು ತಿಳಿದರೆ ಅಂತಹವನು ಎಷ್ಟೇ ದೂರದಲ್ಲಿದ್ದರೂ ಅವನನ್ನು ಪ್ರಯತ್ನಪೂರ್ವಕವಾಗಿ ಕರೆತಂದು ಸತ್ಕರಿಸಿ ಸಮಾದರಿಸಬೇಕು."

ಯುಧಿಷ್ಠಿರನು ಹೇಳುತ್ತಾನೆ:

"ಕೃಷ್ಣ! ಧರ್ಮಾಧರ್ಮಗಳ ಲಕ್ಷಣವನ್ನು ಭೀಷ್ಮನು ಹಿಂದೆ ವಿಸ್ತಾರವಾಗಿಯೇ ಉಪದೇಶಿಸಿದ್ದನು. ನೀನು ಅವುಗಳಲ್ಲಿ ಸಾರಭೂತ ವಾದುವುಗಳನ್ನು ಹೇಳು."

ಶ್ರೀಕೃಷ್ಣನು ಹೇಳುತ್ತಾನೆ:

ಅನ್ನೇನ ಧಾರ್ಯತೇ ಸರ್ವಂ ಜಗದೇತಚ್ಚರಾಚರಮ್।
ಅನ್ನಾತ್ಪ್ರಭವತಿ ಪ್ರಾಣಃ ಪ್ರತ್ಯಕ್ಷಂ ನಾಸ್ತಿ ಸಂಶಯಃ ॥೮೯॥

"ಚರಾಚರಾತ್ಮಕವಾದ ಈ ಜಗತ್ತು ಅನ್ನದಿಂದಲೇ ಧರಿಸಲ್ಪಟ್ಟಿದೆ. ಜಗತ್ತಿಗೆ ಅನ್ನವೇ ಆಧಾರಭೂತವಾಗಿದೆ. ಅನ್ನದಿಂದಲೇ ಪ್ರಾಣದ ಉತ್ಪತ್ತಿಯಾಗುತ್ತದೆ. ಇದು ಪ್ರತ್ಯಕ್ಷದಲ್ಲಿ ಕಾಣುವ ವಿಷಯವೇ ಆಗಿದೆ. ಆದುದರಿಂದ ಇದರಲ್ಲಿ ಸಂಶಯವೇ ಇಲ್ಲ.

ಕಲತ್ರಂ ಪೀಡಯಿತ್ವಾಪಿ ದೇಶೇ ಕಾಲೇ ಚ ಶಕ್ತಿತಃ।
ದಾತವ್ಯಂ ಭಿಕ್ಷವೇ ಚಾನ್ನಮಾತ್ಮನೋ ಭೂತಿಮಿಚ್ಛತಾ ॥೯೦॥

ಆತ್ಮಕಲ್ಯಾಣವನ್ನು ಬಯಸುವ ಮನುಷ್ಯನು–ಪತ್ನಿಗೆ ಸ್ವಲ್ಪ ಕಷ್ಟವುಂಟಾದರೂ ದೇಶ-ಕಾಲಗಳನ್ನು ವಿವೇಚಿಸಿ ತನ್ನ ಶಕ್ತಿಗೆ ಅನುಸಾರವಾಗಿ ಸಂನ್ಯಾಸಿಗೆ ಭಿಕ್ಷೆಯಿಡಬೇಕು.

ವಿಪ್ರಮಧ್ವಪರಿಶ್ರಾನ್ತಂ ಬಾಲಂ ವೃದ್ಧಮಥಾಪಿ ವಾ।
ಅರ್ಚಯೇದ್ಗುರುವತ್ಪ್ರೀತೋ ಗೃಹಸ್ಥೋ ಗೃಹಮಾಗತಮ್ ॥೮೧೧॥

ಗೃಹಸ್ಥನಾದವನು–ದಾರಿನಡೆದು ಬಳಲಿ ಮನೆಗೆ ಆಗಮಿಸಿದ ಬ್ರಾಹ್ಮಣನನ್ನಾಗಲೀ, ಬಾಲಕನನ್ನಾಗಲೀ, ವೃದ್ಧನನ್ನಾಗಲೀ–ಪ್ರಸನ್ನವಾದ ಮನಸ್ಸಿನಿಂದ ಗುರುವನ್ನು ಸತ್ಕರಿಸುವಂತೆಯೇ ಸತ್ಕರಿಸಬೇಕು.

ಕ್ರೋಧಮುತ್ಪತಿತಂ ಹಿತ್ವಾ ಸುಶೀಲೋ ವೀತಮತ್ಸರಃ।
ಅರ್ಚಯೇದತಿಥಿಂ ಪ್ರೀತಃ ಪರತ್ರ ಹಿತಭೂತಯೇ ॥೮೧೨॥

ಪಾರಲೌಕಿಕವಾದ ಕಲ್ಯಾಣಪ್ರಾಪ್ತಿಗಾಗಿ ಮನುಷ್ಯನು ಕಾಲಕರ್ಮ ಸಂಯೋಗದಿಂದ ತನ್ನಲ್ಲಿ ಉಂಟಾಗಬಹುದಾದ ಕೋಪವನ್ನು ಪರಿತ್ಯಜಿಸಿ ಮಾತ್ಸರ್ಯವಿಲ್ಲದವನಾಗಿ, ಪ್ರೀತಿಯಿಂದ ಕೂಡಿ, ಶೀಲವಂತನಾಗಿ ಅತಿಥಿಯನ್ನು ಸತ್ಕರಿಸಬೇಕು.

ಅತಿಥಿಂ ನಾವಮನ್ಯೇತ ನಾನೃತಾಂ ಗಿರಮೀರಯೇತ್।
ನ ಪೃಚ್ಛೇದ್ಗೋತ್ರಚರಣಂ ನಾಧೀತಂ ವಾ ಕದಾಚನ ॥೮೧೩॥

ಗೃಹಸ್ಥನು ಅತಿಥಿಯನ್ನು ಯಾವಾಗಲೂ ತಿರಸ್ಕಾರಮಾಡಬಾರದು. ಅವನೊಡನೆ ಸುಳ್ಳುಹೇಳಬಾರದು. ಗೋತ್ರ-ಶಾಖೆ, ಮಾಡಿರುವ ಅಧ್ಯಯನ–ಇವುಗಳ ವಿಷಯವಾಗಿಯೂ ಅವನನ್ನು ಪ್ರಶ್ನಿಸಬಾರದು.

ಚಣ್ಡಾಲೋ ವಾ ಶ್ವಪಾಕೋ ವಾ ಕಾಲೇ ಚ ಕಶ್ಚಿದಾಗತಃ।
ಅನ್ನೇನ ಪೂಜನೀಯಃ ಸ್ಯಾತ್ಪರತ್ರ ಹಿತಮಿಚ್ಛತಾ ॥೮೧೪॥

ಪರಲೋಕದಲ್ಲಿ ಹಿತವನ್ನು ಬಯಸುವ ಗೃಹಸ್ಥನು ಭೋಜನ ಸಮಯದಲ್ಲಿ ಚಂಡಾಲನೇ ಆಗಲೀ, ಶ್ವಪಾಕನೇ (ನಾಯಿಯ ಮಾಂಸವನ್ನು ತಿನ್ನುವವನೇ) ಆಗಲಿ ಮನೆಗೆ ಆಗಮಿಸಿದಲ್ಲಿ ಅವನನ್ನು ಭೋಜನ ಮಾಡಿಸುವುದರ ಮೂಲಕವಾಗಿ ಸತ್ಕರಿಸಬೇಕು.

ಪಿಧಾಯ ತು ಗೃಹದ್ವಾರಂ ಭುಙ್ಕ್ತೇ ಯೋಽನ್ನಂ ಪ್ರಹೃಷ್ಟವಾನ್।
ಸ್ವರ್ಗದ್ವಾರಪಿಧಾನಂ ವೈ ಕೃತಂ ತೇನ ಯುಧಿಷ್ಠಿರ ॥೮೧೫॥

ಯಾವನಾದರೂ ಭಿಕ್ಷುಕನಾಗಲೀ ಅತಿಥಿಯಾಗಲೀ ಬರುವನೆಂಬ

ಲೋಭದಿಂದ ಮನೆಯ ಬಾಗಿಲನ್ನು ಮುಚ್ಚಿಕೊಂಡು ಸಂತೋಷದಿಂದ ಒಬ್ಬನೇ ಕುಳಿತು ಭೋಜನಮಾಡುವವನು ತಾನು ಹೋಗಲಿರುವ ಸ್ವರ್ಗದ ಬಾಗಿಲನ್ನು ತಾನೇ ಮುಚ್ಚಿಕೊಳ್ಳುತ್ತಾನೆ. (ಅತಿಥಿಯು ಬಾರದಂತೆ ಬಾಗಿಲನ್ನು ಮುಚ್ಚಿದರೆ ಅಂತಹವನಿಗೆ ಸ್ವರ್ಗದ ಬಾಗಿಲು ಮುಚ್ಚಿಯೇ ಇರುತ್ತದೆ.)



ಪಿತೄನ್ದೇವಾನೃಷೀನ್ವಿಪ್ರಾನತಿಥೀಂಶ್ಚ ನಿರಾಶ್ರಯಾನ್।
ಯೋ ನರಃ ಪ್ರೀಣಯತ್ಯೇನ್ನೈಸ್ತಸ್ಯ ಪುಣ್ಯಫಲಂ ಮಹತ್ ॥೮೧೬॥

ಯಾವಾತನು-ದೇವತೆಗಳನ್ನೂ, ಪಿತೃಗಳನ್ನೂ, ಋಷಿಗಳನ್ನೂ, ಬ್ರಾಹ್ಮಣರನ್ನೂ, ಅತಿಥಿಗಳನ್ನೂ, ನಿರಾಶ್ರಿತರನ್ನೂ ಅನ್ನಪ್ರದಾನದಿಂದ ತೃಪ್ತಿಗೊಳಿಸುವನೋ–ಅವನಿಗೆ ಅತಿಶಯವಾದ ಪುಣ್ಯವು ಉಂಟಾಗುತ್ತದೆ.

ಕೃತ್ವಾ ತು ಪಾಪಂ ಬಹುಶೋ ಯೋ ದದ್ಯಾದನ್ನಮರ್ಥಿನೇ।
ಬ್ರಾಹ್ಮಣಾಯ ವಿಶೇಷೇಣ ಸರ್ವಪಾಪೈಃ ಪ್ರಮುಚ್ಯತೇ ॥೮೧೭॥

ಬಹಳವಾಗಿಯೇ ಪಾಪವನ್ನು ಮಾಡಿದ್ದರೂ ಯಾವನು ಅನ್ನವನ್ನು ಯಾಚಿಸಿ ಬರುವವನಿಗೆ–ಅದರಲ್ಲಿಯೂ ವಿಶೇಷವಾಗಿ ಬ್ರಾಹ್ಮಣನಿಗೆ–ಅನ್ನದಾನವನ್ನು ಮಾಡುವನೋ ಅಂತಹವನು ಸಮಸ್ತಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ.

ಅನ್ನದಃ ಪ್ರಾಣದೋ ಲೋಕೇ ಪ್ರಾಣದಃ ಸರ್ವದೋ ಭವೇತ್।
ತಸ್ಮಾದನ್ನಂ ವಿಶೇಷೇಣ ದಾತವ್ಯಂ ಭೂತಿಮಿಚ್ಛತಾ ॥೮೧೮॥

ಪ್ರಪಂಚದಲ್ಲಿ ಅನ್ನದಾನಿಯೇ ಪ್ರಾಣದಾತನು. ಪ್ರಾಣದಾತನು ಸಕಲವನ್ನೂ ಕೊಡುವವನಾಗಿದ್ದಾನೆ. (ಪ್ರಾಣದಾನಮಾಡಿದರೆ ಸಮಸ್ತದಾನಗಳನ್ನೂ ಮಾಡಿದಂತಾಗುತ್ತದೆ.) ಆದುದರಿಂದ ಕಲ್ಯಾಣವನ್ನು ಬಯಸುವವನು ವಿಶೇಷವಾಗಿ ಅನ್ನದಾನಮಾಡಬೇಕು.

ಅನ್ನಂ ಹ್ಯಮೃತಮಿತ್ಯಾಹುರನ್ನಂ ಪ್ರಜನನಂ ಸ್ಮೃತಮ್ ।
ಅನ್ನಪ್ರಣಾಶೇ ಸೀದನ್ತಿ ಶರೀರೇ ಪಞ್ಚಧಾತವಃ ॥೮೧೯॥

ಅನ್ನವನ್ನು ಅಮೃತವೆಂದೂ ಹೇಳುತ್ತಾರೆ. ಅನ್ನವನ್ನು ಪ್ರಜೆಗಳ ಉತ್ಪತ್ತಿಗೆ ಕಾರಣವೆಂದೂ ಹೇಳುತ್ತಾರೆ. ಅನ್ನವೇ ನಾಶವಾಗಿ ಹೋದರೆ (ಅನ್ನವನ್ನೇ ತಿನ್ನದಿದ್ದರೆ) ಶರೀರದಲ್ಲಿರುವ ಪಂಚಧಾತುಗಳೂ ಕ್ಷಯಿಸುತ್ತವೆ.

ಬಲಂ ಬಲವತೋ ನಶ್ಯೇದನ್ನಹೀನಸ್ಯ ದೇಹಿನಃ।
ತಸ್ಮಾದನ್ನಂ ವಿಶೇಷೇಣ ಶ್ರದ್ಧಯಾಶ್ರದ್ಧಯಾಪಿ ವಾ ॥೮೨೦॥

ಬಲಿಷ್ಠನಾದ ಮನುಷ್ಯನೇ ಆಗಿದ್ದರೂ ಅನ್ನವನ್ನು ತ್ಯಾಗಮಾಡಿದರೆ ಬಲವನ್ನು ಕಳೆದುಕೊಳ್ಳುತ್ತಾನೆ. ಆದುದರಿಂದ ಶ್ರದ್ಧೆಯಿಂದಲೋ ಅಶ್ರದ್ಧೆಯಿಂದಲೋ ವಿಶೇಷವಾಗಿ ಅನ್ನವನ್ನು ದಾನಮಾಡಬೇಕು.

ಸೂರ್ಯನು ತನ್ನ ಕಿರಣಗಳಿಂದ ಪೃಥ್ವಿಯಲ್ಲಿರುವ ರಸಗಳೆಲ್ಲವನ್ನೂ ಎಳೆದುಕೊಳ್ಳುತ್ತಾನೆ. ಹಾಗೆ ಎಳೆದುಕೊಂಡ ರಸವನ್ನು ವಾಯುವು ಮೋಡ

ಗಳಲ್ಲಿ ಇರಿಸುತ್ತಾನೆ. ಮೇಘಗಳಲ್ಲಿ ಸೇರಿದ ರಸವನ್ನು ಇಂದ್ರನು ಭೂಮಿಯ ಮೇಲೆ ಮಳೆಯ ರೂಪದಲ್ಲಿ ಸುರಿಸುತ್ತಾನೆ. ಅಂತಹ (ರಸಭರಿತವಾದ) ನೀರಿನಿಂದ ನೆನೆಸಲ್ಪಡುವ ಭೂದೇವಿಯು ಸುಪ್ರೀತಳಾಗುತ್ತಾಳೆ. ಭತ್ತ, ರಾಗಿ, ಗೋಧಿ–ಇವೇ ಮುಂತಾದ ಯಾವ ಧಾನ್ಯಗಳಿಂದ ಪ್ರಪಂಚದಲ್ಲಿರುವ ಸಕಲಜನರೂ ಜೀವಿಸಿರುವರೋ–ಅಂತಹ ಆಹಾರಧಾನ್ಯಗಳೆಲ್ಲವೂ ಭೂಮಿಯಲ್ಲಿ ಬೆಳೆಯುತ್ತವೆ. ಆ ಆಹಾರಧಾನ್ಯಗಳಿಂದಲೇ ಮಾಂಸ, ಮೇದಸ್ಸು, ಮೂಳೆ ಮತ್ತು ಮಜ್ಜೆಗಳ ಉತ್ಪತ್ತಿಯಾಗುತ್ತದೆ."

ವೈಷ್ಣವಧರ್ಮ-೧೪

ಭೋಜನ ವಿಧಿ: ಹಸುಗಳಿಗೆ ಹುಲ್ಲುಹಾಕುವ ವಿಧಾನ: ಎಳ್ಳಿನ ಮಹಿಮೆ: ಬ್ರಾಹ್ಮಣನು ಕಬ್ಬನ್ನೂ ಎಳ್ಳನ್ನೂ ಹಿಂಡಬಾರದು

ಯುಧಿಷ್ಠಿರನು ಹೇಳುತ್ತಾನೆ:

"ಮಧುಸೂದನನೇ! ಅನ್ನದಾನದ ಫಲವನ್ನು ಕೇಳಿ ಸಂತೋಷ ವಾಯಿತು. ಇನ್ನು ಮುಂದೆ ನೀನು ಭೋಜನದ ವಿಧಿಯನ್ನು ಹೇಳುವ ಕೃಪೆಮಾಡು."

ಶ್ರೀಕೃಷ್ಣನು ಹೇಳುತ್ತಾನೆ:

"ಯುಧಿಷ್ಠಿರ! ದ್ವಿಜರ ಭೋಜನದ ವಿಧಾನವನ್ನು ಹೇಳುವೆನು; ಕೇಳು:

ಸ್ನಾತಃ ಶುಚಿಃ ಶುಚೌ ದೇಶೇ ನಿರ್ಜನೇ ಹುತಪಾವಕಃ।
ಮಣ್ಡಲಂ ಕಾರಯಿತ್ವಾ ಚ ಚತುರಶ್ರಂ ದ್ವಿಜೋತ್ತಮಃ।
ಕ್ಷತ್ರಿಯಶ್ಚೇತ್ತತೋ ವೃತ್ತಂ ವೈಶ್ಯೋಽರ್ಧೇನ್ದುಸಮಾಕೃತಮ್ ॥

ದ್ವಿಜಶ್ರೇಷ್ಠನು ಸ್ನಾನಮಾಡಿ ಪರಿಶುದ್ಧನಾಗಿ, ಸಂಧ್ಯಾವಂದನೆ-ಅಗ್ನಿಹೋತ್ರಾದಿಗಳನ್ನು ಮುಗಿಸಿದನಂತರ ಏಕಾಂತವಾದ ಪ್ರದೇಶದಲ್ಲಿ ಕುಳಿತು ಚತುರಸ್ರ (ನಾಲ್ಕು ಮೂಲೆಗಳುಳ್ಳ) ಮಂಡಲವನ್ನು ರಚಿಸಬೇಕು. ಕ್ಷತ್ರಿಯನಾದರೆ-ದುಂಡಾದ ಮಂಡಲವನ್ನೂ, ವೈಶ್ಯನಾದರೆ–ಅರ್ಧ ಚಂದ್ರಾಕಾರದ ಮಂಡಲವನ್ನೂ ರಚಿಸಬೇಕು. ನೀರಿನಿಂದ ಮಾಡಿದ ಆ ಮಂಡಲದ ಮೇಲೆ ಭೋಜನದ ಪಾತ್ರೆಯನ್ನು (ಎಲೆಯನ್ನು) ಹಾಕಬೇಕು.

ಆರ್ದ್ರಪಾದಸ್ತು ಭುಞ್ಜೀಯಾತ್ಪ್ರಾಙ್ಮುಖಶ್ಚಾಸನೇ ಶುಚೌ ।
ಪಾದಾಭ್ಯಾಂ ಧರಣೀಂ ಸ್ಪೃಷ್ಟ್ವಾ ಪಾದೇನೈಕೇನ ವಾ ಪುನಃ ॥

ಕಾಲುಗಳನ್ನು ತೊಳೆದುಕೊಂಡು ಪವಿತ್ರವಾದ ಆಸನದಲ್ಲಿ ಪೂರ್ವಾಭಿಮುಖವಾಗಿ ಕುಳಿತುಕೊಳ್ಳಬೇಕು. ಎರಡು ಕಾಲುಗಳನ್ನೂ ಅಥವಾ ಒಂದು ಕಾಲನ್ನಾದರೂ ಭೂಮಿಗೆ ತಗುಲಿಸಿಕೊಂಡೇ ಕುಳಿತಿರಬೇಕು.

ನೈಕವಾಸಾಸ್ತು ಭುಞ್ಜೀಯಾನ್ನ ಚಾನ್ತರ್ಧಾಯ ವಾ ದ್ವಿಜಃ।
ನ ಭಿನ್ನಪಾತ್ರೇ ಭುಞ್ಜೀತ ಪರ್ಣಪೃಷ್ಠೇ ತಥೈವ ಚ ॥೮೨೮॥

ಒಂದೇ ವಸ್ತ್ರವನ್ನು ಉಟ್ಟುಕೊಂಡು (ಉತ್ತರೀಯವಿಲ್ಲದೇ) ಬ್ರಾಹ್ಮಣನು ಊಟಮಾಡಬಾರದು ಮತ್ತು ಶರೀರವೆಲ್ಲವನ್ನೂ ಸಂಪೂರ್ಣವಾಗಿ ಬಟ್ಟೆಯಿಂದ ಮುಚ್ಚಿಕೊಂಡೂ ಊಟಮಾಡಬಾರದು. ಒಡೆದುಹೋಗಿರುವ ತಟ್ಟೆಯಲ್ಲಾಗಲೀ ಎಲೆಯ ಹಿಂಭಾಗದಲ್ಲಾಗಲೀ ಊಟಮಾಡಬಾರದು.

ಅನ್ನಂ ಪೂರ್ವಂ ನಮಸ್ಕುರ್ಯಾತ್ಪ್ರಹೃಷ್ಟೇನಾನ್ತರಾತ್ಮನಾ।
ನಾನ್ಯದಾಲೋಕಯೇದನ್ನಾನ್ನ ಜುಗುಪ್ಸೇತ ತತ್ಪರಃ ॥೮೨೯॥

ಪ್ರಹೃಷ್ಟವಾದ ಮನಸ್ಸಿನಿಂದ ಕೂಡಿ ಮೊದಲು ಅನ್ನಕ್ಕೆ ನಮಸ್ಕಾರ ಮಾಡಬೇಕು. ಊಟಮಾಡುವ ಸಮಯದಲ್ಲಿ ಅನ್ನವನ್ನು ಬಿಟ್ಟು ಬೇರೆ ಯಾವುದನ್ನೂ ನೋಡಬಾರದು. ಬಡಿಸಿರುವ ಅನ್ನದಲ್ಲಿ ಜುಗುಪ್ಸೆಯನ್ನು ಹೊಂದಬಾರದು.

ಜುಗುಪ್ಸಿತಂ ಚ ಯಚ್ಚಾನ್ನಂ ರಾಕ್ಷಸಾ ಏವ ಭುಞ್ಜತೇ।
ಪಾಣಿನಾ ಜಲಮುದ್ಧೃತ್ಯ ಕುರ್ಯಾದನ್ನಂ ಪ್ರದಕ್ಷಿಣಮ್ ॥೮೩೦॥

ಜುಗುಪ್ಸೆಯಿಂದ ಭಾವಿಸಲ್ಪಡುವ ಅನ್ನವನ್ನು ರಾಕ್ಷಸರೇ ತಿಂದುಬಿಡುತ್ತಾರೆ. ಊಟಮಾಡುವ ಮೊದಲು ಕೈಯಲ್ಲಿ ನೀರನ್ನಿಟ್ಟುಕೊಂಡು ಪ್ರದಕ್ಷಿಣಾಕಾರವಾಗಿ ಪಾತ್ರೆಯ ಸುತ್ತಲೂ ಬಿಡಬೇಕು. (ಪರಿಷೇಚನವನ್ನು ಮಾಡಬೇಕು.)

ಪಞ್ಚ ಪ್ರಾಣಾಹುತೀಃ ಕುರ್ಯಾತ್ಸಮನ್ತ್ರಂ ತು ಪೃಥಕ್ಪೃಥಕ್ ॥

ಮಂತ್ರಪೂರ್ವಕವಾಗಿ ಪ್ರತ್ಯೇಕ-ಪ್ರತ್ಯೇಕವಾಗಿ ಐದು ಪ್ರಾಣಾಹುತಿಗಳನ್ನು ಕೊಡಬೇಕು. (ಪ್ರಾಣಾಯ ಸ್ವಾಹಾ। ಅಪಾನಾಯ ಸ್ವಾಹಾ। ವ್ಯಾನಾಯ ಸ್ವಾಹಾ। ಉದಾನಾಯ ಸ್ವಹಾ। ಸಮಾನಾಯ ಸ್ವಾಹಾ* ಈ ಐದೇ ಪ್ರಾಣಾಹುತಿಯ ಮಂತ್ರಗಳು.) ಈ ಮಂತ್ರಗಳನ್ನು ಒಂದೊಂದಾಗಿ ಹೇಳಿಕೊಂಡು ಪ್ರಾಣಾದಿ ಪಂಚವಾಯುಗಳಿಗೆ ಆಹುತಿಯನ್ನು ಕೊಡಬೇಕು.

ಯಥಾ ರಸಂ ನ ಜಾನಾತಿ ಜಿಹ್ವಾ ಪ್ರಾಣಾಹುತೌ ನೃಪ ।
ತಥಾ ಸಮಾಹಿತಃ ಕುರ್ಯಾತ್ಪ್ರಾಣಾಹುತಿಮತನ್ದ್ರಿತಃ ॥೮೩೨॥

ಪ್ರಾಣಾಹುತಿಯನ್ನು ಕೊಡುವ ಸಮಯದಲ್ಲಿ ಅಲಸನಾಗಿರಬಾರದು; ಸ್ಥಿರಚಿತ್ತನಾಗಿರಬೇಕು. ನೇರವಾಗಿ ಪ್ರಾಣಗಳಿಗೆ ಅನ್ನರೂಪದ ಆಹುತಿಯು ತಲುಪಬೇಕೇ ಹೊರತು ಆ ಅನ್ನದ ರಸವನ್ನು (ರುಚಿಯನ್ನು) ನಾಲಗೆಯೂ ಸವಿಯಬಾರದು. ಹಾಗೆ ಪ್ರಾಣಾಹುತಿಗಳನ್ನು ಕೊಡಬೇಕು.

ವಿದಿತ್ವಾನ್ನಮಥಾನ್ನಾದಂ ಪಞ್ಚ ಪ್ರಾಣಾಂಶ್ಚ ಪಾಣ್ಡವ ।
ಯಃ ಕುರ್ಯಾದಾಹುತೀಃ ಪಞ್ಚ ತೇನೇಷ್ಟಾಃ ಪಞ್ಚವಾಯವಃ ॥

ಅನ್ನದ, ಅನ್ನವನ್ನು ತಿನ್ನುವವನ ಮತ್ತು ಪಂಚಪ್ರಾಣಗಳ ತತ್ತ್ವವನ್ನು ತಿಳಿದುಕೊಂಡು ಯಾವನು ಪ್ರಾಣಾಗ್ನಿಹೋತ್ರವನ್ನು ಮಾಡುವನೋ– ಅಂತಹವನು ಪಂಚವಾಯುಗಳ ಯಜ್ಞವನ್ನು ಮಾಡಿದಂತಾಗುತ್ತದೆ.

ಅತೋಽನ್ಯಥಾ ತು ಭುಞ್ಜಾನೋ ಬ್ರಾಹ್ಮಣೋ ಜ್ಞಾನದುರ್ಬಲಃ।
ತೇನಾನ್ನೇನಾಸುರಾನ್ಪ್ರೇತಾನ್ರಾಕ್ಷಸಾಂಸ್ತರ್ಪಯಿಷ್ಯತಿ ॥೮೩೪॥

ಹೀಗೆ ಪ್ರಾಣಾಗ್ನಿಹೋತ್ರವನ್ನು ಮಾಡದೇ ಸುಮ್ಮ-ಸುಮ್ಮನೆ ಕಬಳಿಸುವ ಮೂರ್ಖನಾದ ಬ್ರಾಹ್ಮಣನು ತಾನು ತಿನ್ನುವ ಅನ್ನದ ಮೂಲಕವಾಗಿ ಅಸುರರನ್ನೂ, ಪ್ರೇತಗಳನ್ನೂ, ರಾಕ್ಷಸರನ್ನೂ ತೃಪ್ತಿಗೊಳಿಸುತ್ತಾನೆ.

ವಕ್ತ್ರಪ್ರಮಾಣಾನ್ಪಿಣ್ಡಾಂಶ್ಚ ಗ್ರಸೇದೇಕೈಕಶಃ ಪುನಃ ।
ವಕ್ತ್ರಾಧಿಕಂ ತು ಯತ್ಪಿಣ್ಡಮಾತ್ಮೋಚ್ಛಿಷ್ಟಂ ತದುಚ್ಯತೇ ॥೮೩೫॥

---

*ಸಾಮವೇದಿಗಳು-ಉದಾನಾಯಸ್ವಾಹಾ - ಎಂದು ಹೇಳಿದನಂತರ-ವ್ಯಾನಾಯ ಸ್ವಾಹಾ- ಎಂಬುದನ್ನು ಹೇಳುತ್ತಾರೆ.

ಬಾಯಿಗೆ ಹಿಡಿಸುವಷ್ಟು ತುತ್ತುಗಳನ್ನು ಮಾಡಿಕೊಂಡು ಒಂದು ಬಾರಿಗೆ ಒಂದು ತುತ್ತಿನಂತೆ ಅನ್ನವನ್ನು ತಿನ್ನಬೇಕು. ಬಾಯಿಗೆ ಹಿಡಿಸದಷ್ಟು ದೊಡ್ಡ ತುತ್ತನ್ನು ತಿನ್ನಲು ಹೋಗಿ ಅದರಲ್ಲಿ ಉಳಿಯುವ ಅನ್ನಕ್ಕೆ ಆತ್ಮೋಚ್ಛಿಷ್ಟವೆಂದು ಹೇಳುತ್ತಾರೆ. (ಹಾಗೆ ಉಳಿದ ಅನ್ನವನ್ನು ಪುನಃ ತಿನ್ನಬಾರದು.)

ಪಿಣ್ಡಾವಶಿಷ್ಟಮನ್ಯಚ್ಚ ವಕ್ತ್ರಾನ್ನಿಸ್ಸೃತಮೇವ ಚ ।
ಅಭೋಜ್ಯಂ ತದ್ವಿಜಾನೀಯಾದ್ಭುಕ್ತ್ವಾ ಚಾನ್ದ್ರಾಯಣಂ ಚರೇತ್ ॥

ತುತ್ತಿನಲ್ಲಿ ಉಳಿದ ಅನ್ನವನ್ನೂ, ಬಾಯಿಂದ ಹೊರಬಂದ ಅನ್ನವನ್ನೂ ಪುನಃ ತಿನ್ನಬಾರದು. ಅದು ಅಭೋಜ್ಯವೆನಿಸುತ್ತದೆ. ಹಾಗೆ ತಿಂದರೆ ಪಾಪಪರಿಹಾರಕ್ಕಾಗಿ ಚಾಂದ್ರಾಯಣವ್ರತವನ್ನು ಮಾಡಬೇಕು.

ಸ್ವಮುಚ್ಛಿಷ್ಟಂ ತು ಯೋ ಭುಙ್ಕ್ತೇ ಯೋ ಭುಙ್ಕ್ತೇ ಮುಕ್ತ
ಭೋಜನಮ್।
ಚಾನ್ದ್ರಾಯಣಂ ಚರೇತ್ಕೃಚ್ಛ್ರಂ ಪ್ರಾಜಾಪತ್ಯಮಥಾಪಿ ವಾ ॥೮೩೭॥

ಯಾವನು ತನ್ನ ಉಚ್ಛಿಷ್ಟವನ್ನು ತಿನ್ನುವನೋ–ಒಮ್ಮೆ ತಿಂದು ಬಿಟ್ಟುಹೋದ ಅನ್ನವನ್ನು ಪುನಃ ತಿನ್ನುವನೋ (ಊಟಮಾಡುವಾಗ ಅರ್ಧದಲ್ಲಿ ಯಾವುದೋ ಕಾರ್ಯನಿಮಿತ್ತ ಎದ್ದುಹೋಗಿ ಪುನಃ ಬಂದು ಊಟಮಾಡುವುದು ಮುಕ್ತಭೋಜನವೆನಿಸುತ್ತದೆ.)–ಅಂತಹವನು ಪಾಪಪರಿಹಾರಕ್ಕಾಗಿ ಚಾಂದ್ರಾಯಣಕೃಚ್ಛ್ರವನ್ನಾಗಲೀ ಪ್ರಾಜಾಪತ್ಯಕೃಚ್ಛ್ರವನ್ನಾಗಲೀ ಮಾಡಬೇಕು.

ಸ್ತ್ರೀಪಾತ್ರಭುಙ್ನರಃ ಪಾಪಃ ಸ್ತ್ರೀಣಾಮುಚ್ಛಿಷ್ಟಭುಕ್ತಥಾ।
ತಯಾ ಸಹ ಚ ಯೋ ಭುಙ್ಕ್ತೇ ಸ ಭುಙ್ಕ್ತೇ ಮದ್ಯಮೇವ ಹಿ।
ನ ತಸ್ಯ ನಿಷ್ಕೃತಿರ್ದೃಷ್ಟಾ ಮುನಿಭಿಸ್ತತ್ತ್ವದರ್ಶಿಭಿಃ ॥೮೩೮॥

ಯಾವ ಪಾಪಿಷ್ಠನು ಹೆಂಗಸು ಊಟಮಾಡಿದ ಎಲೆಯಲ್ಲಿ ಊಟಮಾಡುವನೋ, ಹೆಂಗಸಿನ ಉಚ್ಛಿಷ್ಟವನ್ನು ಊಟಮಾಡುವನೋ, ಹೆಂಗಸಿನೊಡನೆ ಒಂದೇ ತಟ್ಟೆಯಲ್ಲಿ ಊಟಮಾಡುವನೋ–ಅಂತಹವನು ಮದ್ಯವನ್ನು ಪಾನಮಾಡುತ್ತಿರುವನೆಂದೇ ತಿಳಿಯಬೇಕು. ತತ್ತ್ವದರ್ಶಿ

ಗಳಾದ ಮಹರ್ಷಿಗಳು ಇಂತಹ ಪಾಪಕ್ಕೆ ಯಾವ ಪ್ರಾಯಶ್ಚಿತ್ತವನ್ನೂ ಕಂಡಿರುವುದಿಲ್ಲ. (ಈ ಪಾಪಕ್ಕೆ ಪ್ರಾಯಶ್ಚಿತ್ತವೇ ಇಲ್ಲ.)

ಪಿಬತಃ ಪತಿತೇ ತೋಯೇ ಭೋಜನೇ ಮುಖನಿಃಸೃತೇ।
ಅಭೋಜ್ಯಂ ತದ್ವಿಜಾನೀಯಾದ್ಭುಕ್ತ್ವಾ ಚಾನ್ದ್ರಾಯಣಂ ಚರೇತ್ ॥

ಭೋಜನದ ಸಮಯದಲ್ಲಿ ನೀರನ್ನು ಕುಡಿಯುವಾಗ ನೀರು ಬಾಯಿಂದ ಜಾರಿ ಅನ್ನದ ಮೇಲೆ ಬಿದ್ದರೆ ಆ ಅನ್ನವು ಅಭೋಜ್ಯವಾಗುತ್ತದೆ. ಮುಂದೆ ಅದನ್ನು ತಿನ್ನಬಾರದು. ಒಂದು ವೇಳೆ ತಿಂದರೆ ಪಾಪಪರಿಹಾರಕ್ಕಾಗಿ ಚಾಂದ್ರಾಯಣವ್ರತವನ್ನು ಮಾಡಬೇಕು.

ಪೀತಶೇಷಂ ತು ತನ್ನಾಮ ನ ಪೇಯಂ ಪಾಣ್ಡುನನ್ದನ।
ಪಿಬೇದ್ಯದಿ ಹಿ ತನ್ಮೋಹಾದ್ವಿಜಶ್ಚಾನ್ದ್ರಾಯಣಂ ಚರೇತ್ ॥೮೪೦॥

ಹಾಗೆಯೇ ಕುಡಿದು ಉಳಿದ ನೀರೂ ಪುನಃ ಕುಡಿಯಲು ಯೋಗ್ಯವಲ್ಲ. ಉಚ್ಛಿಷ್ಟವಾಗುತ್ತದೆ. ಯಾವನಾದರೂ ಬ್ರಾಹ್ಮಣನು ಮೋಹವಶನಾಗಿ ಕುಡಿದುಳಿದ ನೀರನ್ನು ಪುನಃ ಕುಡಿದಲ್ಲಿ ಆ ಪಾಪಪರಿಹಾರಕ್ಕಾಗಿ ಚಾಂದ್ರಾಯಣವ್ರತವನ್ನು ಮಾಡಬೇಕು.

ಮೌನೀ ವಾಪ್ಯಥವಾ ಭೂಮೌ ನಾವಲೋಕ್ಯ ದಿಶಸ್ತಥಾ।
ಭುಞ್ಜೀತ ವಿಧಿವದ್ವಿಪ್ರೋ ನ ಚೋಚ್ಛಿಷ್ಟಂ ಪ್ರದಾಪಯೇತ್ ॥೮೪೧॥

ಬ್ರಾಹ್ಮಣನು ಮೌನಿಯಾಗಿ, ಭೂಮಿಯನ್ನಾಗಲೀ ದಿಕ್ಕುಗಳನ್ನಾಗಲೀ ನೋಡದೇ, ಅನ್ನದಲ್ಲಿಯೇ ಏಕಾಗ್ರತೆಯನ್ನು ಹೊಂದಿ ವಿಧಿವತ್ತಾಗಿ ಊಟಮಾಡಬೇಕು. ತನ್ನ ಉಚ್ಛಿಷ್ಟವನ್ನು ಬೇರೆ ಯಾರಿಗೂ ಕೊಡಬಾರದು.

ಸದಾ ಚಾತ್ಯಶನಂ ನಾದ್ಯಾನ್ನಾತಿಹೀನಂ ಚ ಕರ್ಹಿಚಿತ್।
ಯಥಾನ್ನೇನ ವ್ಯಥಾ ನ ಸ್ಯಾತ್ತಥಾ ಭುಞ್ಜೀತ ನಿತ್ಯಶಃ ॥೮೪೨॥

ಯಾವಾಗಲೂ ಅನ್ನವನ್ನು ಅಧಿಕವಾಗಿಯೂ ತಿನ್ನಬಾರದು. ಕಡಿಮೆಯಾಗಿಯೂ ತಿನ್ನಬಾರದು. ಎಷ್ಟು ಅನ್ನವನ್ನು ತಿನ್ನುವುದರಿಂದ ಶರೀರಕ್ಕಾಗಲೀ ಮನಸ್ಸಿಗಾಗಲೀ ಯಾವ ರೀತಿಯ ವೇದನೆಯೂ ಉಂಟಾಗುವುದಿಲ್ಲವೋ–ಅಷ್ಟು ಅನ್ನವನ್ನು ಪ್ರತಿನಿತ್ಯವೂ ಭುಂಜಿಸಬೇಕು.

ಕೇಶಕೀಟೋಪಪನ್ನಂ ಚ ಮುಖಮಾರುತವೀಜಿತಮ್।
ಅಭೋಜ್ಯಂ ತದ್ವಿಜಾನೀಯಾದ್ಭುಕ್ತ್ವಾ ಚಾನ್ದ್ರಾಯಣಂ ಚರೇತ್ ॥

ಕೂದಲು ಬಿದ್ದ ಅನ್ನವನ್ನಾಗಲೀ, ಹುಳುಗಳಿರುವ ಅನ್ನವನ್ನಾಗಲೀ, ಬಾಯಿಂದ ಊದಿ ಆರಿಸಿದ ಅನ್ನವನ್ನಾಗಲೀ ತಿನ್ನಬಾರದು. ಇವನ್ನು ಅಭೋಜ್ಯಾನ್ನಗಳೆಂದು ತಿಳಿಯಬೇಕು. ಒಂದು ವೇಳೆ ಪ್ರಮಾದದಿಂದ ಇಂತಹ ಅನ್ನವನ್ನು ತಿಂದಲ್ಲಿ ಪಾಪಪರಿಹಾರಕ್ಕಾಗಿ ಚಾಂದ್ರಾಯಣವ್ರತವನ್ನು ಆಚರಿಸಬೇಕು.

ಉತ್ಥಾಯ ಚ ಪುನಃ ಸ್ಪೃಷ್ಟಂ ಪಾದಸ್ಪೃಷ್ಟಂ ಚ ಲಙ್ಘಿತಮ್।
ಅನ್ನಂ ತದ್ರಾಕ್ಷಸಂ ವಿದ್ಯಾತ್ತಸ್ಮಾತ್ತತ್ಪರಿವರ್ಜಯೇತ್ ॥೮೪೪॥

ಊಟಮಾಡುವಾಗ ಎದ್ದುಹೋಗಿ ಪುನಃ ಬಂದು ಮುಟ್ಟಿದುದು, ಕಾಲಿಗೆ ತಗುಲಿದುದು ಮತ್ತು ದಾಟಿದುದು ಇಂತಹ ಅನ್ನಗಳನ್ನು ರಾಕ್ಷಸರು ತಿನ್ನಲು ಯೋಗ್ಯವಾದುದೆಂದು ತಿಳಿಯಬೇಕು. ಆದುದರಿಂದ ಇಂತಹವುಗಳನ್ನು ವರ್ಜಿಸಬೇಕು. (ಊಟದ ಮಧ್ಯದಲ್ಲಿ ಎದ್ದುಹೋಗಿ ಪುನಃ ಬಂದು ಊಟಮಾಡಬಾರದು. ಕಾಲಿಗೆ ತಗುಲಿದ ಮತ್ತು ದಾಟಿದ ಅನ್ನವನ್ನು ಊಟಮಾಡಬಾರದು.)

ಯದ್ಯುತ್ತಿಷ್ಠತ್ಯನಾಚಾನ್ತೋ ಭುಕ್ತವಾನಾಸನಾತ್ತತಃ।
ಸ್ನಾನಂ ಸದ್ಯಃ ಪ್ರಕುರ್ವೀತ ಸೋಽನ್ಯಥಾಽಪ್ರಯತೋ ಭವೇತ್॥

ಭೋಜನಾನಂತರ ಉತ್ತರಾಪೋಶನವನ್ನು ತೆಗೆದುಕೊಳ್ಳದೇ ಬ್ರಾಹ್ಮಣನೇನಾದರೂ ಆಸನದಿಂದ ಎದ್ದುಬಿಟ್ಟರೆ ಒಡನೆಯೇ ಅವನು ಸ್ನಾನಮಾಡಬೇಕು. ಹಾಗೆ ಸ್ನಾನಮಾಡದಿದ್ದರೆ ಅವನು ಅಪವಿತ್ರನಾಗುತ್ತಾನೆ.”

ಯುಧಿಷ್ಠಿರನು ಹೇಳುತ್ತಾನೆ:

“ಮಾನದನೇ! ಕೇಶವನೇ! ತೃಣಮುಷ್ಟಿವಿಧಾನವನ್ನೂ (ಗೋವಿಗೆ ಹುಲ್ಲುತಿನ್ನಿಸುವ ವಿಧಾನವನ್ನೂ) ಎಳ್ಳಿನ ಮಹಿಮೆಯನ್ನೂ, ಕಬ್ಬಿನಿಂದ ಸೋಮನ ಉತ್ಪತ್ತಿಯು ಹೇಗೆ ಆಯಿತೆಂಬುದನ್ನೂ ಹೇಳುವ ಕೃಪೆಮಾಡು.”

ಶ್ರೀಕೃಷ್ಣನು ಹೇಳುತ್ತಾನೆ:

ಪಿತರೋ ವೃಷಭಾ ಜ್ಞೇಯಾ ಗಾವೋ ಲೋಕಸ್ಯ ಮಾತರಃ।
ತಾಸಾಂ ತು ಪೂಜಯಾ ರಾಜನ್ಪೂಜಿತಾಃ ಪಿತೃದೇವತಾಃ ॥೮೪೭॥

"ಪಾಂಡವನೇ! ಎತ್ತುಗಳೇ ಜಗತ್ತಿಗೆ ಪಿತೃಗಳೆಂದೂ, ಹಸುಗಳೇ ಮಾತೆಯರೆಂದೂ ತಿಳಿಯಬೇಕು. ಅವುಗಳನ್ನು ಪೂಜಿಸಿದರೆ ಪಿತೃಗಳನ್ನೂ, ದೇವತೆಗಳನ್ನೂ ಪೂಜಿಸಿದಂತಾಗುತ್ತದೆ.

ಸಭಾ ಪ್ರಪಾ ಗೃಹಾಶ್ಚಾಪಿ ದೇವತಾಯತನಾನಿ ಚ ।
ಶುಧ್ಯಂತಿ ಶಕೃತಾ ಯಾಸಾಂ ಕಿಂ ಭೂತಮಧಿಕಂ ತತಃ ॥೮೪೮॥

ಯಾವುಗಳ ಸಗಣಿಯಿಂದ (ನೀರಿನಲ್ಲಿ ಕದರಿ ಸಾರಿಸುವುದರಿಂದ) ಸಭಾಭವನಗಳೂ, ಅರವಟ್ಟಿಗೆಗಳೂ, ಮನೆಗಳೂ, ದೇವಾಲಯಗಳೂ ಪರಿಶುದ್ಧವಾಗುವುವೋ–ಅಂತಹ ಹಸುಗಳಿಗಿಂತಲೂ ಶ್ರೇಷ್ಠವಾದ ಪ್ರಾಣಿಗಳು ಪ್ರಪಂಚದಲ್ಲಿ ಎಲ್ಲಿವೆ?

ಗ್ರಾಸಮುಷ್ಟಿಂ ಪರಗವೇ ದದ್ಯಾತ್ಸಂವತ್ಸರಂ ತು ಯಃ ।
ಅಕೃತ್ವಾ ಸ್ವಯಮಾಹಾರಂ ಪ್ರಾಪ್ತಸ್ತತ್ಸಾರ್ವಕಾಲಿಕಮ್ ॥೮೪೯॥

ಊಟಮಾಡುವ ಮೊದಲು ಯಾವನು ಒಂದು ಹಿಡಿ ಹುಲ್ಲನ್ನು ಇತರರ ಮನೆಯಲ್ಲಿರುವ ಹಸುವಿಗೆ ಒಂದು ವರ್ಷಕಾಲ ತಿನ್ನಿಸುವನೋ–ಅಂತಹವನು ಸರ್ವಕಾಲದಲ್ಲಿಯೂ ಗೋಸೇವೆಯನ್ನು ಮಾಡಿದ ಫಲವನ್ನು ಹೊಂದುತ್ತಾನೆ.

ಗಾವೋ ಮೇ ಮಾತರಃ ಸರ್ವಾಃ ಪಿತರಶ್ಚೈವ ಗೋವೃಷಾಃ।
ಗ್ರಾಸಮುಷ್ಟಿಂ ಮಯಾ ದತ್ತಂ ಪ್ರತಿಗೃಹ್ಣೀತ ಮಾತರಃ ॥೮೫೦॥
ಇತ್ಯುಕ್ತ್ವಾನೇನ ಮನ್ತ್ರೇಣ ಗಾಯತ್ರ್ಯಾ ವಾ ಸಮಾಹಿತಃ।
ಅಭಿಮನ್ತ್ರ್ಯ ಗ್ರಾಸಮುಷ್ಟಿಂ ತಸ್ಯ ಪುಣ್ಯಫಲಂ ಶೃಣು ॥೮೫೦॥

'ಎಲ್ಲ ಹಸುಗಳೂ ನನ್ನ ತಾಯಂದಿರು. ಎಲ್ಲ ಎತ್ತುಗಳೂ ನನ್ನ ತಂದೆಗಳು. ಗೋಮಾತೆಯರೇ! ನಾನು ಕೊಡಲಿರುವ ಈ ಮುಷ್ಟಿ ಹುಲ್ಲನ್ನು ಸ್ವೀಕರಿಸಿರಿ'-ಎಂಬ ಈ ಮಂತ್ರವನ್ನಾಗಲೀ ಅಥವಾ ಗಾಯತ್ರೀ

ಮಂತ್ರವನ್ನಾಗಲೀ ಹೇಳಿಕೊಂಡು ಏಕಾಗ್ರಚಿತ್ತನಾಗಿ ಮುಷ್ಟಿಹುಲ್ಲನ್ನು ಅಭಿಮಂತ್ರಿಸಿ ಯಾವನು ಗೋವುಗಳಿಗೆ ತಿನ್ನಿಸುವನೋ–ಅಂತಹವನಿಗೆ ಲಭಿಸುವ ಪುಣ್ಯಫಲವನ್ನು ಹೇಳುವೆನು; ಕೇಳು:

ಯತ್ಕೃತಂ ದುಷ್ಕೃತಂ ತೇನ ಜ್ಞಾನತೋಽಜ್ಞಾನತೋಽಪಿ ವಾ।
ತಸ್ಯ ನಶ್ಯತಿ ತತ್ಸರ್ವಂ ದುಃಸ್ವಪ್ನಂ ಚ ವಿನಶ್ಯತಿ ॥೮೫೨॥

ಅಂತಹವನು ಕೆಟ್ಟ ಕೆಲಸವನ್ನು ತಿಳಿದೇ ಮಾಡಿರಲಿ; ತಿಳಿಯದೇ ಮಾಡಿರಲಿ–ಅವನ ಆ ಎಲ್ಲ ಪಾಪಗಳೂ ಒಡನೆಯೇ ಹೋಗಿಬಿಡುತ್ತವೆ. ಗೋಗ್ರಾಸವನ್ನು ಕೊಡುವವನಿಗೆ ದುಃಸ್ವಪ್ನಗಳೂ ಉಂಟಾಗುವುದಿಲ್ಲ.

ತಿಲಾಃ ಪವಿತ್ರಾಃ ಪಾಪಘ್ನಾ ನಾರಾಯಣಸಮುದ್ಭವಾಃ।
ತಿಲಾಞ್ಛ್ರಾದ್ಧೇ ಪ್ರಶಂಸನ್ತಿ ದಾನಂ ಚೇದಮನುತ್ತಮಮ್ ॥೮೫೪॥

ಎಳ್ಳು ನಾರಾಯಣನಿಂದಲೇ ಹುಟ್ಟಿದುದು. ಆದುದರಿಂದ ಎಳ್ಳು ಪವಿತ್ರವಾದುದು. ಪಾಪಗಳನ್ನು ನಾಶಮಾಡತಕ್ಕದ್ದು. ಶ್ರಾದ್ಧಸಮಯಗಳಲ್ಲಿ ಎಳ್ಳನ್ನು ಪ್ರಶಂಸೆಮಾಡುತ್ತಾರೆ. (ಶ್ರಾದ್ಧಗಳಲ್ಲಿ ಪಿತೃಗಳ ಪೂಜೆಗಾಗಿಯೂ ಭಕ್ಷ್ಯಾದಿಗಳ ರೂಪದಲ್ಲಿಯೂ ಎಳ್ಳನ್ನು ಉಪಯೋಗಿಸುತ್ತಾರೆ.) ತಿಲದಾನವಂತೂ ಅತ್ಯಂತಶ್ರೇಷ್ಠವಾದುದು.

ತಿಲಾನ್ದದ್ಯಾತ್ತಿಲಾನ್ಭಕ್ಷ್ಯಾತ್ತಿಲಾನ್ಪ್ರಾತರುಪಸ್ಪೃಶೇತ್।
ತಿಲಂ ತಿಲಮಿತಿ ಬ್ರೂಯಾತ್ತಿಲಾಃ ಪಾಪಹರಾ ಹಿ ತೇ ॥೮೫೪॥

ಎಳ್ಳನ್ನು ದಾನಮಾಡಬೇಕು. ಎಳ್ಳಿನ ಭಕ್ಷ್ಯಗಳನ್ನು ತಿನ್ನಬೇಕು. ಬೆಳಗಾದೊಡನೆಯೇ ಎಳ್ಳನ್ನು ಮುಟ್ಟಬೇಕು. ಯಾವಾಗಲೂ 'ತಿಲ-ತಿಲ' ಎಂದು ಹೇಳುತ್ತಿರಬೇಕು. ಏಕೆಂದರೆ: ಎಳ್ಳು ಸಮಸ್ತಪಾಪಗಳನ್ನೂ ಹೋಗಲಾಡಿಸುತ್ತದೆ.

ತಿಲಾನ್ನ ಪೀಡಯೇದ್ವಿಪ್ರೋ ಯನ್ತ್ರಚಕ್ರೇ ಸ್ವಯಂ ನೃಪ ।
ಪೀಡಯನ್ವಿ ದ್ವಿಜೋ ಮೋಹಾನ್ನರಕಂ ಯಾತಿ ರೌರವಮ್ ॥೮೫೫॥

ಬ್ರಾಹ್ಮಣನು ಎಳ್ಳನ್ನು ಗಾಣಕ್ಕೆ ಹಾಕಿ ತಾನೇ ಅರೆಯಬಾರದು. ಮೋಹವಶನಾಗಿ ಬ್ರಾಹ್ಮಣನು ಎಳ್ಳನ್ನು ಅರೆದರೆ ರೌರವನರಕಕ್ಕೆ ಹೋಗುತ್ತಾನೆ.

ಇಕ್ಷುವಂಶೋದ್ಭವಃ ಸೋಮಃ ಸೋಮವಂಶೋದ್ಭವಾ ದ್ವಿಜಾಃ।
ತಸ್ಮಾನ್ನ ಪೀಡಯೇದಿಕ್ಷುಂ ಯನ್ತ್ರಚಕ್ರೇ ದ್ವಿಜೋತ್ತಮಃ ॥೮೫೬॥

ಸೋಮನು ಕಬ್ಬಿನ ಜಲ್ಲೆಯಲ್ಲಿ ಹುಟ್ಟಿದವನು.* ಬ್ರಾಹ್ಮಣರು ಸೋಮನ ವಂಶಜರು. ಆದುದರಿಂದ ಬ್ರಾಹ್ಮಣನು ಕಬ್ಬನ್ನು ಗಾಣದಲ್ಲಿ ಅರೆಯಬಾರದು." (ಸೋಮಲತೆಯು ಇಕ್ಷುವಂಶಕ್ಕೆ-ಕಬ್ಬಿನ ವಂಶಕ್ಕೆ ಸೇರಿದ ಸಸ್ಯ. ಬ್ರಾಹ್ಮಣರು ಸೋಮನ ವಂಶದವರು. ಇಕ್ಷುವಿಗೆ ಸಮಾನ ವಂಶದವರು. ಆದುದರಿಂದ ಬ್ರಾಹ್ಮಣರು ಕಬ್ಬನ್ನು ಹಿಂಡಬಾರದು)–ಹೀಗೆ ಒಬ್ಬ ವಿದ್ವಾಂಸರು ಇದರ ಅರ್ಥವನ್ನು ವಿವರಿಸಿರುತ್ತಾರೆ.

ವೈಷ್ಣವಧರ್ಮ - ೧೫

ಆಪದ್ಧರ್ಮ: ಶ್ರೇಷ್ಠನಾದ ಮತ್ತು ನಿಂದ್ಯನಾದ ಬ್ರಾಹ್ಮಣನ ವರ್ಣನೆ: ಶ್ರಾದ್ಧಕ್ಕೆ ಉತ್ತಮವಾದ ಕಾಲ: ಮಾನವಧರ್ಮದ ಸಾರ

ಯುಧಿಷ್ಠಿರನು ಹೇಳುತ್ತಾನೆ:

"ಮಾಧವನೇ! ಈಗ ನಾನು ನಿನ್ನಿಂದ ಧರ್ಮಗಳ ವಿಷಯವನ್ನು ಸಂಗ್ರಹವಾಗಿ ಕೇಳಿದೆನು. ಭೋಜನಕ್ಕೆ ಯೋಗ್ಯವಾದ ಮತ್ತು ಅಯೋಗ್ಯವಾದ ಅನ್ನದ ವಿಷಯವಾಗಿಯೂ ಕೇಳಿ ತಿಳಿದುಕೊಂಡೆನು. ಇನ್ನು ಮುಂದೆ ನನಗೆ ಆಪದ್ಧರ್ಮದ ವಿಷಯವಾಗಿ ಹೇಳುವ ಕೃಪೆಮಾಡು."

ಶ್ರೀಕೃಷ್ಣನು ಹೇಳುತ್ತಾನೆ:

ದುರ್ಭಿಕ್ಷೇ ರಾಷ್ಟ್ರಸಮ್ಬಾಧೇಽಪ್ಯಾಶೌಚೇ ಮೃತಸೂತಕೇ।
ಘರ್ಮಕಾಲೇಽಧ್ವನಿ ತಥಾ ನಿಯಮೋ ಯೇನ ಲುಪ್ಯತೇ ॥೮೫೭॥
ದೂರಾಧ್ವಗಮನಾತ್ಶಿನ್ನೋ ದ್ವಿಜಾಲಾಭೇಽಥ ಶೂದ್ರತಃ।
ಅಕೃತಾನ್ನಂ ತು ಯತ್ಕಿಂಚಿದ್ಗೃಹ್ಣೀಯಾದಾತ್ಮವೃತ್ತಯೇ ॥೮೫೮॥

---

*ಚಂದ್ರನು ವಿರಾಟ್ಪುರುಷನ ಮನಸ್ಸಿನಿಂದ ಹುಟ್ಟಿದವನು. ಚನ್ದ್ರಮಾ ಮನಸೋ ಜಾತಃ। (ಪುರುಷಸೂಕ್ತ) ಇಕ್ಷುದಂಡವು ಮನಸ್ತತ್ತ್ವವನ್ನು ಪ್ರತಿನಿಧಿಸುತ್ತದೆ. ಮನೋರೂಪೇಕ್ಷುಕೋದಣ್ಡಾಯೈ ನಮೋ ನಮಃ (ಲಲಿತಾ ಅಷ್ಟೋತ್ತರ) ಆದುದರಿಂದ ಸೋಮನು ಇಕ್ಷುದಂಡದಲ್ಲಿ ಹುಟ್ಟಿದನೆಂದು ಹೇಳಿದೆ.

“ಧರ್ಮಜ! ದುರ್ಭಿಕ್ಷದಲ್ಲಿ, ದೇಶಕ್ಕೆ ಯಾವುದಾದರೂ ವಿಪತ್ತು ಒದಗಿಬಂದಾಗ, ಜಾತಾಶೌಚ-ಮೃತಾಶೌಚಗಳಲ್ಲಿ, ಬೇಸಿಗೆಯಲ್ಲಿ ದಾರಿ ನಡೆಯಬೇಕಾದ ಸಂದರ್ಭವು ಒದಗಿಬಂದಾಗ, ಬ್ರಾಹ್ಮಣನು ನಿಯಮಗಳನ್ನು ಪಾಲಿಸಲು ಆಗದಿರಬಹುದು. ಬಹಳ ದೂರ ನಡೆದು ಬಳಲಿರುವ ಬ್ರಾಹ್ಮಣನು, ಬ್ರಾಹ್ಮಣ-ಕ್ಷತ್ರಿಯ-ವೈಶ್ಯರು ಸಿಕ್ಕದಿದ್ದಾಗ ಶೂದ್ರನಿಂದಾದರೂ ಬೇಯಿಸದೇ ಇರುವ ಆಹಾರವನ್ನು ಜೀವವನ್ನುಳಿಸಿಕೊಳ್ಳುವ ಸಲುವಾಗಿ ಅಲ್ಪ-ಸ್ವಲ್ಪ ತೆಗೆದುಕೊಳ್ಳಬಹುದು.

ಆತುರೋ ದುಃಖಿತೋ ವಾಪಿ ತಥಾರ್ತೋ ವಾ ಬುಭುಕ್ಷಿತಃ।
ಭುಞ್ಜನ್ನವಿಧಿನಾ ವಿಪ್ರಃ ಪ್ರಾಯಶ್ಚಿತ್ತಾಯತೇ ನ ಚ ॥೮೬೦॥

ರೋಗಿಯಾದ, ದುಃಖಿತನಾಗಿರುವ, ಆರ್ತನಾದ, ಹಸಿದಿರುವ ಬ್ರಾಹ್ಮಣನು, ವಿಧಿನಿಯಮಗಳಿಗೆ ವಿರುದ್ಧವಾಗಿ ಊಟಮಾಡಿದರೂ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕಾಗಿಲ್ಲ.

ಅಷ್ಟೈತಾನ್ಯವ್ರತಘ್ನಾನಿ ಆಪೋ ಮೂಲಂ ಘೃತಂ ಪಯಃ।
ಹವಿರ್ಬ್ರಾಹ್ಮಣಕಾಮ್ಯಾ ಚ ಗುರೋರ್ವಚನಮೌಷಧಮ್ ॥೮೬೧॥

ನೀರು, ಬೇರು (ಗೆಡ್ಡೆ-ಗೆಣಸು ಮುಂತಾದುವು), ತುಪ್ಪ, ಹಾಲು, ಹವಿಸ್ಸು, ಬ್ರಾಹ್ಮಣನ ಇಚ್ಛೆಯನ್ನು ಪೂರ್ಣಗೊಳಿಸುವುದು, ಗುರುವಿನ ಆಜ್ಞೆಯನ್ನು ಪಾಲಿಸುವುದು ಮತ್ತು ಔಷಧಸೇವನೆ–ಇವು ಎಂಟು ವ್ರತಕ್ಕೆ ಭಂಗವನ್ನುಂಟುಮಾಡತಕ್ಕುವುಗಳಲ್ಲ.

ಅಶಕ್ತೋ ವಿಧಿವತ್ಕರ್ತುಂ ಪ್ರಾಯಶ್ಚಿತ್ತಾನಿ ಯೋ ನರಃ।
ವಿದುಷಾಂ ವಚನೇನಾಪಿ ದಾನೇನಾಪಿ ವಿಶುದ್ಧ್ಯತಿ ॥೮೬೨॥

ವಿಧಿವತ್ತಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲು ಶಕ್ತಿಯಿಲ್ಲದವನು ವಿದ್ವಾಂಸರ ಮಾತಿನಂತೆಯೂ (ಅವರನ್ನು ಪ್ರಾರ್ಥಿಸಿ ಅವರು ಹೇಳಿದಂತೆ ನಡೆಯುವುದರಿಂದಲೂ) ಮತ್ತು ದಾನಕೊಡುವುದರಿಂದಲೂ ಶುದ್ಧನಾಗುತ್ತಾನೆ.

ಅನೃತಾವೃತುಕಾಲೇ ವಾ ದಿವಾ ರಾತ್ರೌ ತಥಾಪಿ ವಾ।
ಪ್ರೋಷಿತಸ್ತು ಸ್ತ್ರಿಯಂ ಗಚ್ಛೇತ್ಪ್ರಾಯಶ್ಚಿತ್ತೀಯತೇ ನ ಚ ॥೮೬೩॥

ಪರದೇಶದಲ್ಲಿರುವ ಪತಿಯು ಸ್ವದೇಶಕ್ಕೆ ಹಿಂದಿರುಗಿ ಸ್ವಲ್ಪಕಾಲವಿರುವಾಗ–ಋತುಸಮಯದಲ್ಲಾಗಲೀ, ಬೇರೆ ಸಮಯದಲ್ಲಾಗಲೀ, ಹಗಲಿನಲ್ಲಾಗಲೀ, ರಾತ್ರಿಯಲ್ಲಾಗಲೀ–ಭಾರ್ಯೆಯೊಡನೆ ಸಮಾಗಮಮಾಡಬಹುದು. ಅದಕ್ಕಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕಾಗಿಲ್ಲ."

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

"ಮಾಧವನೇ! ಯಾವ ಬ್ರಾಹ್ಮಣರು ಪ್ರಶಂಸೆಗೆ ಅರ್ಹರು? ನಿಂದ್ಯರು ಯಾರು? ಅಷ್ಟಕಾಶ್ರಾದ್ಧಕ್ಕೆ ಸರಿಯಾದ ಕಾಲವು ಯಾವುದು? ಈ ವಿಷಯಗಳನ್ನು ಹೇಳುವ ಕೃಪೆಮಾಡು."

ಶ್ರೀಕೃಷ್ಣನು ಹೇಳುತ್ತಾನೆ:

ಕುಲೀನಃ ಕರ್ಮಕೃದ್ವೈದ್ಯಸ್ತಥಾ ಚಾಪ್ಯನೃಶಂಸ್ಯವಾನ್।
ಶ್ರೀಮಾನೃಜುಃ ಸತ್ಯವಾದೀ ಪಾತ್ರಾಃ ಸರ್ವ ಇಮೇ ದ್ವಿಜಾಃ ॥೮೬॥

"ಉತ್ತಮಕುಲದಲ್ಲಿ ಹುಟ್ಟಿರುವವನು, ಶಾಸ್ತ್ರೋಕ್ತವಾದ ಕರ್ಮಗಳನ್ನು ಅನುಷ್ಠಾನಮಾಡುವವನು, ವಿದ್ವಾಂಸನು, ದಯಾಳುವು, ತೇಜಸ್ವಿಯು, ಸರಳನು ಮತ್ತು ಸತ್ಯವಾದಿಯು–ಇವರೆಲ್ಲರೂ ಸತ್ಪಾತ್ರರಾದ ಬ್ರಾಹ್ಮಣರೇ ಆಗಿರುತ್ತಾರೆ.

ಏತೇ ಚಾಗ್ರಾಸನಸ್ಥಾಸ್ತೇ ಭುಞ್ಜಾನಾಃ ಪ್ರಥಮಂ ದ್ವಿಜಾಃ ।
ತಸ್ಯಾಂ ಪಙ್ಕ್ತ್ಯಾಂ ತು ಯೇ ಚಾನ್ಯೇ ತಾನ್ಪುನನ್ತ್ಯೇವ ದರ್ಶನಾತ್॥

ಇಂತಹವರು ಅಗ್ರಾಸನದಲ್ಲಿ ಕುಳಿತು ಎಲ್ಲರಿಗಿಂತಲೂ ಮೊದಲು ಊಟಮಾಡಲು ಯೋಗ್ಯರಾಗಿದ್ದಾರೆ. ಇವರು ತಮ್ಮ ಸಾಲಿನಲ್ಲಿ ಕುಳಿತಿರುವವರೆಲ್ಲರನ್ನೂ ಅವಲೋಕನಮಾತ್ರದಿಂದಲೇ ಪಾವನಗೊಳಿಸುತ್ತಾರೆ.

ಮದ್ಭಕ್ತಾ ಯೇ ದ್ವಿಜಶ್ರೇಷ್ಠಾ ಮದ್ಗತಾ ಮತ್ಪರಾಯಣಾಃ।
ತಾನ್ಪಙ್ಕ್ತಿಪಾವನಾನ್ವಿದ್ಧಿ ಪೂಜ್ಯಾಂಶ್ಚೈವ ವಿಶೇಷತಃ ॥೮೭॥

ಯಾವ ದ್ವಿಜಶ್ರೇಷ್ಠರು ನನ್ನಲ್ಲಿಯೇ ನೆಟ್ಟ ಮನಸ್ಸುಳ್ಳವರಾಗಿ, ನನ್ನನ್ನೇ ಆಶ್ರಯವನ್ನಾಗಿ ಪಡೆದು, ನನ್ನ ಭಕ್ತರಾಗಿರುವರೋ–ಅವರು ಕೂಡ ಪಂಕ್ತಿಯನ್ನು ಪಾವನಗೊಳಿಸುತ್ತಾರೆ. ಅಂತಹವರು ವಿಶೇಷವಾಗಿ ಪೂಜಾ-ಸತ್ಕಾರಗಳಿಗೆ ಅರ್ಹರು.

ಯುಧಿಷ್ಠಿರ! ನಾನು ಇನ್ನು ಮುಂದೆ ನಿಂದ್ಯರಾದ ಬ್ರಾಹ್ಮಣರು ಯಾರೆಂಬುದನ್ನು ಹೇಳುವೆನು: ಕೇಳು. ಯಾರು ಈ ಲೋಕದಲ್ಲಿ ಇತರರನ್ನು ವಂಚಿಸುತ್ತಾ ಕಾಲಕಳೆಯುವರೋ–ಅವರು ವೇದವೇದಾಂಗಪಾರಂಗತ ರಾಗಿದ್ದರೂ ಪಾಪಿಷ್ಠರೇ ಸರಿ.

ಅನಗ್ನಿರನಧೀಯಾನಃ ಪ್ರತಿಗ್ರಹರುಚಿಸ್ತು ಯಃ।
ಯತಸ್ತತಸ್ತು ಭುಞ್ಜಾನಸ್ತಂ ವಿದ್ಯಾದ್ಬ್ರಹ್ಮದೂಷಕಮ್ ॥೮೯॥

ಅಗ್ನಿಹೋತ್ರವನ್ನು ಮಾಡದವನು, ಅಧ್ಯಯನಮಾಡದವನು, ದಾನವನ್ನು ತೆಗೆದುಕೊಳ್ಳುವುದರಲ್ಲಿಯೇ ಹೆಚ್ಚಿನ ಅಭಿರುಚಿಯುಳ್ಳವನು, ಸಿಕ್ಕಿದ ಕಡೆಗಳಲ್ಲೆಲ್ಲಾ ತಿನ್ನುವವನು–ಇಂತಹವನನ್ನು ದೂಷ್ಯನಾದ ಬ್ರಾಹ್ಮಣ ನೆಂದು ತಿಳಿಯಬೇಕು. (ಬ್ರಾಹ್ಮಣಜಾತಿಗೇ ಕಳಂಕನೆಂದು ಭಾವಿಸಬೇಕು.)

ಮೃತಸೂತಕಪುಷ್ಟಾಙ್ಗೋ ಯಶ್ಚ ಶೂದ್ರಾನ್ನಭುಗ್ದ್ವಿಜಃ।
ಅಹಂ ಚಾಪಿ ನ ಜಾನಾಮಿ ಗತಿಂ ತಸ್ಯ ನರಾಧಿಪ ॥೯೦॥

ಶೂದ್ರಾನ್ನರಸಪುಷ್ಟಾಙ್ಗೋಽಪ್ಯಧೀಯಾನೋ ಹಿ ನಿತ್ಯಶಃ ।
ಜಪತೋ ಜುಹ್ವತೋ ವಾಪಿ ಗತಿರೂರ್ಧ್ವಂ ನ ವಿದ್ಯತೇ ॥೯೧॥

ಯಾವನ ಶರೀರವು ಜಾತಾಶೌಚ-ಮರಣಾಶೌಚಗಳ ಅನ್ನವನ್ನು ಊಟಮಾಡಿಯೇ ಪುಷ್ಟವಾಗಿರುವುದೋ, ಯಾವನು ಶೂದ್ರಾನ್ನವನ್ನು ಭುಂಜಿಸುವನೋ ಮತ್ತು ಶೂದ್ರಾನ್ನರಸದಿಂದಲೇ ಪುಷ್ಟವಾದ ಅವಯವವುಳ್ಳವನಾಗಿರುವನೋ ಅಂತಹವನಿಗೆ ಎಂತಹ ಗತಿಯು ಲಭಿಸುವುದೆಂಬುದು ನನಗೂ ತಿಳಿಯದು. ಅಂತಹವನು ನಿತ್ಯವೂ ಅಧ್ಯಯನ ಮಾಡುತ್ತಿದ್ದರೂ, ಮಂತ್ರಗಳನ್ನು ಜಪಿಸುತ್ತಿದ್ದರೂ, ಅಗ್ನಿಹೋತ್ರವನ್ನು ಮಾಡುತ್ತಿದ್ದರೂ–ಅವನಿಗೆ ಉತ್ತಮಗತಿಯು ಸಿಕ್ಕುವುದಿಲ್ಲ.

ಆಹಿತಾಗ್ನಿಶ್ಚ ಯೋ ವಿಪ್ರಃ ಶೂದ್ರಾನ್ನಾನ್ನ ನಿವರ್ತತೇ।
ಪಞ್ಚ ತಸ್ಯ ಪ್ರಣಶ್ಯನ್ತಿ ಆತ್ಮಾ ಬ್ರಹ್ಮತ್ರಯೋಽಗ್ನಯಃ ॥೯೨॥

ಬ್ರಾಹ್ಮಣನು ನಿತ್ಯಾಗ್ನಿಹೋತ್ರಿಯಾಗಿದ್ದರೂ ಶೂದ್ರಾನ್ನವನ್ನು ಬಿಡದೇ ಭೋಜನಮಾಡುತ್ತಿದ್ದರೆ-ಅಂತಹವನ ಆತ್ಮಜ್ಞಾನ, ವೇದಾಧ್ಯಯನ ಮತ್ತು ಮೂರು ಅಗ್ನಿಗಳು-ಈ ಐದೂ ನಾಶಹೊಂದುತ್ತವೆ.

ಶೂದ್ರಪ್ರೇಷಣಕರ್ತುಶ್ಚ ಬ್ರಾಹ್ಮಣಸ್ಯ ವಿಶೇಷತಃ।
ಭೂಮಾವನ್ನಂ ಪ್ರದಾತವ್ಯಂ ಶ್ವಶೃಗಾಲಸಮೋ ಹಿ ಸಃ ॥೮೭೩॥

ಶೂದ್ರನ ಸೇವೆಯನ್ನು ಮಾಡುವ ಬ್ರಾಹ್ಮಣನಿಗೆ ವಿಶೇಷವಾಗಿ ನೆಲದ ಮೇಲೆ ಅನ್ನವನ್ನು ಬಡಿಸಬೇಕು. ಏಕೆಂದರೆ: ಅವನು ನಾಯಿ-ನರಿಗಳಿಗೆ ಸಮಾನನು.

ಪ್ರೇತಭೂತಂ ತು ಯಃ ಶೂದ್ರಂ ಬ್ರಾಹ್ಮಣೋ ಜ್ಞಾನದುರ್ಬಲಃ।
ಅನುಗಚ್ಛೇನ್ನೀಯಮಾನಂ ತ್ರಿರಾತ್ರಮಶುಚಿರ್ಭವೇತ್ ॥೮೭೪॥

ಜ್ಞಾನದಿಂದ ದುರ್ಬಲನಾಗಿರುವ (ಅಜ್ಞಾನಿಯಾದ) ಬ್ರಾಹ್ಮಣನು ಮರಣಹೊಂದಿದ ಶೂದ್ರನನ್ನು ಶ್ಮಶಾನಕ್ಕೆ ಒಯ್ಯುವಾಗ ಅವನನ್ನು ಅನುಸರಿಸಿಹೋದರೆ ಮೂರು ರಾತ್ರಿಗಳು ಆಶೌಚವಿರಬೇಕು.

ತ್ರಿರಾತ್ರೇ ತು ತತಃ ಪೂರ್ಣೇ ನದೀಂ ಗತ್ವಾ ಸಮುದ್ರಗಾಮ್।
ಪ್ರಾಣಾಯಾಮಶತಂ ಕೃತ್ವಾ ಘೃತಂ ಪ್ರಾಶ್ಯ ವಿಶುದ್ಧ್ಯತಿ ॥೮೭೫॥

ಮೂರು ರಾತ್ರಿಗಳು ಕಳೆದನಂತರ ಸಮುದ್ರಕ್ಕೆ ಸೇರುವ ನದಿಯಲ್ಲಿ ಮಿಂದು, ನೂರು ಪ್ರಾಣಾಯಾಮಗಳನ್ನು ಮಾಡಿ, ತುಪ್ಪವನ್ನು ಕುಡಿಯುವುದರಿಂದ ಶುದ್ಧನಾಗುತ್ತಾನೆ.

ಅನಾಥಂ ಬ್ರಾಹ್ಮಣಂ ಪ್ರೇತಂ ಯೇ ವಹನ್ತಿ ದ್ವಿಜೋತ್ತಮಾಃ।
ಪದೇ ಪದೇಽಶ್ವಮೇಧಸ್ಯ ಫಲಂ ತೇ ಪ್ರಾಪ್ನುವನ್ತಿ ಹಿ ॥೮೭೬॥

ಯಾವ ಶ್ರೇಷ್ಠರಾದ ಬ್ರಾಹ್ಮಣರು ಅನಾಥಬ್ರಾಹ್ಮಣನ ಶವವನ್ನು ಶ್ಮಶಾನಭೂಮಿಗೆ ಹೊತ್ತುಕೊಂಡು ಹೋಗುವರೋ–ಅವರು ಇಡುವ ಪ್ರತಿಯೊಂದು ಹೆಜ್ಜೆಗೂ ಒಂದೊಂದು ಅಶ್ವಮೇಧಯಾಗಮಾಡಿದ ಫಲವನ್ನು ಹೊಂದುತ್ತಾರೆ.

ನ ತೇಷಾಮಶುಭಂ ಕಿಂಚಿತ್ಪಾಪಂ ವಾ ಶುಭಕರ್ಮಣಾಮ್।
ಜಲಾವಗಾಹನಾದೇವ ಸದ್ಯಃ ಶೌಚಂ ವಿಧೀಯತೇ ॥೮೭೭॥

ಅನಾಥಬ್ರಾಹ್ಮಣನ ಶವವಾಹನವೆಂಬ ಶುಭಕರ್ಮವನ್ನು ಮಾಡುವ ಆ ಶ್ರೇಷ್ಠರಾದ ಬ್ರಾಹ್ಮಣರಿಗೆ ಅಶುಭವಾಗಲೀ, ಪಾಪವಾಗಲೀ (ಆಶೌಚ

ವಾಗಲೀ) ಉಂಟಾಗುವುದಿಲ್ಲ. ನೀರಿನಲ್ಲಿ ಸ್ನಾನಮಾಡಿದೊಡನೆಯೇ ಅವರು ಶುದ್ಧರಾಗುತ್ತಾರೆ.

ಶೂದ್ರವೇಶ್ಮನಿ ವಿಪ್ರೇಣ ಕ್ಷೀರಂ ವಾ ಯದಿ ವಾ ದಧಿ ।
ನಿವೃತ್ತೇನ ನ ಭೋಕ್ತವ್ಯಂ ವಿದ್ಧಿ ಶೂದ್ರಾನ್ನಮೇವ ತತ್ ॥೮೭೮॥

ನಿವೃತ್ತಿಮಾರ್ಗಪರಾಯಣನಾಗಿರುವ (ಮೋಕ್ಷಮಾರ್ಗಸಾಧಕನಾದ, ಸಂನ್ಯಾಸಿಯಾದ) ಬ್ರಾಹ್ಮಣನು ಶೂದ್ರನ ಮನೆಯಲ್ಲಿ ಹಾಲನ್ನಾಗಲೀ ಮೊಸರನ್ನಾಗಲೀ ಕುಡಿಯಬಾರದು. ಅದೂ ಕೂಡ ಶೂದ್ರಾನ್ನವೇ ಆಗುತ್ತದೆಂದು ತಿಳಿಯಬೇಕು.

ವಿಪ್ರಾಣಾಂ ಭೋಕ್ತುಕಾಮಾನಾಮತ್ಯನ್ತಂ ಚಾನ್ನಕಾಂಕ್ಷಿಣಾಮ್।
ಯೋ ವಿಘ್ನಂ ಕುರುತೇ ಮರ್ತ್ಯಸ್ತತೋ ನಾನ್ಯೋಽಸ್ತಿ ಪಾಪಕೃತ್॥

ಬಹಳವಾಗಿ ಹಸಿದಿದ್ದು ಊಟಮಾಡುವ ಆಕಾಂಕ್ಷೆಯಿಂದ ಇರುವ ಬ್ರಾಹ್ಮಣರ ಭೋಜನಕ್ಕೆ ವಿಘ್ನವನ್ನುಂಟುಮಾಡುವವನಿಗಿಂತಲೂ ಹೆಚ್ಚು ಪಾಪಿಷ್ಠನು ಬೇರೆ ಯಾವನೂ ಇರಲಾರನು.

ಸರ್ವೇ ಚ ವೇದಾಃ ಸಹ ಷಡ್ಭಿರಙ್ಗೈಃ
ಸಾಂಖ್ಯಂ ಪುರಾಣಂ ಚ ಕುಲೇ ಚ ಜನ್ಮ ।
ನೈತಾನಿ ಸರ್ವಾಣಿ ಗತಿರ್ಭವನ್ತಿ
ಶೀಲವ್ಯಪೇತಸ್ಯ ನೃಪ ದ್ವಿಜಸ್ಯ ॥೮೮೦॥

ಷಡಂಗಗಳಿಂದ ಯುಕ್ತವಾದ ವೇದಗಳಾಗಲೀ, ಸಾಂಖ್ಯಶಾಸ್ತ್ರವಾಗಲೀ, ಪುರಾಣವಾಗಲೀ, ಸತ್ಕುಲದಲ್ಲಿ ಹುಟ್ಟಿರುವುದಾಗಲೀ–ಇವೆಲ್ಲವೂ ಒಟ್ಟಾಗಿ ಸೇರಿದರೂ ಶೀಲ ಮತ್ತು ಸದಾಚಾರಗಳಿಂದ ರಹಿತನಾಗಿರುವ ಬ್ರಾಹ್ಮಣನಿಗೆ ಸದ್ಗತಿಯನ್ನು ಕೊಡಲಾರವು.

ಗ್ರಹೋಪರಾಗೇ ವಿಷುವೇಽಯನಾನ್ತೇ
ಪಿತ್ರ್ಯೇ ಮಘಾಸು ಸ್ವಸುತೇ ಚ ಜಾತೇ ।
ಗಯೇಷು ಪಿಣ್ಡೇಷು ಚ ಪಾಣ್ಡುಪುತ್ರ
ದತ್ತಂ ಭವೇನ್ನಿಷ್ಕಸಹಸ್ರತುಲ್ಯಮ್ ॥೮೮೧॥

ಪಾಂಡುನಂದನನೇ! ಗ್ರಹಣಸಮಯದಲ್ಲಿ, ವಿಷುವಯೋಗದಲ್ಲಿ, ಒಂದು ಅಯನವು ಮುಗಿದು ಮತ್ತೊಂದು ಅಯನವು ಹುಟ್ಟುವ ಸಮಯದಲ್ಲಿ (ದಕ್ಷಿಣಾಯನ ಅಥವಾ ಉತ್ತರಾಯಣಪುಣ್ಯಕಾಲಗಳಲ್ಲಿ), ಪಿತೃಕಾರ್ಯಗಳಲ್ಲಿ, ಮಖಾನಕ್ಷತ್ರದಲ್ಲಿ, ಮಗನು ಹುಟ್ಟಿದ ಸಮಯದಲ್ಲಿ, ಗಯೆಯಲ್ಲಿ ಶ್ರಾದ್ಧಾದಿ ಪಿತೃಕರ್ಮಗಳನ್ನು ಮಾಡುವ ಸಮಯದಲ್ಲಿ– ಕೊಡಲ್ಪಡುವ ಅಲ್ಪದಾನವೂ ಕೂಡ ಒಂದು ಸಾವಿರ ಸುವರ್ಣನಾಣ್ಯಗಳನ್ನು ದಾನಮಾಡಿದುದಕ್ಕೆ ಸಮನಾಗಿರುತ್ತದೆ.

ವೈಶಾಖಮಾಸಸ್ಯ ತು ಯಾ ತೃತೀಯಾ–
ನವದ್ಯಾಸೌ ಕಾರ್ತಿಕಶುಕ್ಲಪಕ್ಷೇ ।
ನಭಸ್ಯ ಮಾಸಸ್ಯ ಚ ಕೃಷ್ಣಪಕ್ಷೇ
ತ್ರಯೋದಶೀ ಪಞ್ಚದಶೀ ಚ ಮಾಘೇ ॥೮೮೨॥
ಉಪಪ್ಲವೇ ಚನ್ದ್ರಮಸೋ ರವೇಶ್ಚ
ಶ್ರಾದ್ಧಸ್ಯ ಕಾಲೋ ಹ್ಯಯನದ್ವಯೇ ಚ ।
ಪಾನೀಯಮಪ್ಯತ್ರ ತಿಲೈರ್ವಿಮಿಶ್ರಂ
ದದ್ಯಾತ್ಪಿತೃಭ್ಯಃ ಪ್ರಯತೋ ಮನುಷ್ಯಃ ।
ಶ್ರಾದ್ಧಂ ಕೃತಂ ತೇನ ಸಮಾ ಸಹಸ್ರಂ
ರಹಸ್ಯಮೇತತ್ಪಿತರೋ ವದನ್ತಿ ॥೮೮೩॥

ವೈಶಾಖಮಾಸದ ಶುಕ್ಲ ತದಿಗೆ, ಕಾರ್ತಿಕಮಾಸದ ಶುಕ್ಲ ತದಿಗೆ, ಭಾದ್ರಪದಮಾಸದ ಕೃಷ್ಣ ತ್ರಯೋದಶೀ, ಮಾಘಮಾಸದ ಅಮಾವಾಸ್ಯೆ, ಚಂದ್ರ-ಸೂರ್ಯರ ಗ್ರಹಣದಿವಸಗಳು ಮತ್ತು ಉತ್ತರಾಯಣ ಮತ್ತು ದಕ್ಷಿಣಾಯನಪುಣ್ಯಕಾಲಗಳು–ಶ್ರಾದ್ಧಮಾಡಲು ಶ್ರೇಷ್ಠವಾದ ಕಾಲಗಳಾಗಿವೆ. ಇಂತಹ ದಿವಸಗಳಲ್ಲಿ ಮನುಷ್ಯನು ಪವಿತ್ರಚಿತ್ತನಾಗಿ ಪಿತೃಗಳ ಸಲುವಾಗಿ ತಿಲಮಿಶ್ರಿತವಾದ ಜಲತರ್ಪಣಮಾಡಿದರೂ ಒಂದು ಸಾವಿರ ವರ್ಷಗಳು ಶ್ರಾದ್ಧಮಾಡಿದ ಫಲವು ಲಭಿಸುತ್ತದೆ. (ಈ ದಿವಸಗಳಲ್ಲಿ ತಿಲಮಿಶ್ರಿತವಾದ ಜಲತರ್ಪಣ ಮಾಡುವುದರಿಂದ ಪಿತೃಗಳು ಒಂದು ಸಾವಿರ ವರ್ಷಗಳವರೆಗೆ ಸಂತುಷ್ಟರಾಗಿರುತ್ತಾರೆ.) ಈ ರಹಸ್ಯವನ್ನು ಪಿತೃಗಳೇ ಹೇಳಿದ್ದಾರೆ.

ಯಸ್ತ್ವೇಕಪಙ್ಕ್ತ್ಯಾಂ ವಿಷಮಂ ದದಾತಿ
ಸ್ನೇಹಾದ್ಭಯಾದ್ವಾ ಯದಿ ವಾರ್ಥಹೇತೋಃ ।
ಕ್ರೂರಂ ದುರಾಚಾರಮನಾತ್ಮವನ್ತಂ
ಬ್ರಹ್ಮಘ್ನಮೇನಂ ಕವಯೋ ವದನ್ತಿ ॥೮೮೪॥

ಯಾವ ಮನುಷ್ಯನು ಸ್ನೇಹದ ಕಾರಣದಿಂದಲೋ, ಭಯದ ಕಾರಣದಿಂದಲೋ, ಧನದ ಕಾರಣದಿಂದಲೋ–ಒಂದೇ ಸಾಲಿನಲ್ಲಿ ಕುಳಿತಿರುವ ಜನರಿಗೆ ಬಡಿಸುವುದರಲ್ಲಿ ಪಂಕ್ತಿಭೇದವನ್ನು ಮಾಡುವನೋ–ಅಂತಹ ಕ್ರೂರನಾದ, ದುರಾಚಾರಿಯಾದ, ಜಿತಾತ್ಮನಲ್ಲದ ಮನುಷ್ಯನನ್ನು ಬ್ರಹ್ಮಹತ್ಯೆಯನ್ನು ಮಾಡಿದವನೆಂದೇ ವಿದ್ವಾಂಸರು ಹೇಳುತ್ತಾರೆ.

ಧನಾನಿ ಯೇಷಾಂ ವಿಪುಲಾನಿ ಸನ್ತಿ
ನಿತ್ಯಂ ರಮನ್ತೇ ಪರಲೋಕಮೂಢಾಃ।
ತೇಷಾಮಯಂ ಶತ್ರುವರಘ್ನ ಲೋಕೋ
ನಾನ್ಯತ್ಸುಖಂ ದೇಹಸುಖೇ ರತಾನಾಮ್ ॥೮೮೫॥

ಶತ್ರುಸೂದನನೇ! ಯುಧಿಷ್ಠಿರ! ಯಾರು ಹೇರಳವಾದ ಹಣವನ್ನು ಹೊಂದಿ ಪರಲೋಕದ ವಿಷಯದಲ್ಲಿ ಮೂಢರಾಗಿ ಸದಾ ಐಹಿಕದಲ್ಲೇ ಆಸಕ್ತರಾಗಿರುತ್ತಾರೆಯೋ–ಅಂತಹ ದೈಹಿಕಸುಖಗಳಲ್ಲಿಯೇ ಆಸಕ್ತರಾಗಿರುವವರಿಗೆ ಐಹಿಕಸುಖವು ಹೊರತಾಗಿ ಪಾರಲೌಕಿಕಸುಖವು ದುರ್ಲಭವೇ ಸರಿ.

ಯೇ ಚೈವ ಮುಕ್ತಾಸ್ತಪಸಿ ಪ್ರಯುಕ್ತಾಃ
ಸ್ವಾಧ್ಯಾಯಶೀಲಾ ಜರಯನ್ತಿ ದೇಹಮ್।
ಜಿತೇನ್ದ್ರಿಯಾ ಭೂತಹಿತೇ ನಿವಿಷ್ಟಾ-
ಸ್ತೇಷಾಮಸೌ ಚಾಪಿ ಪರಶ್ಚ ಲೋಕಃ ॥೮೮೬॥

ಯಾರು ವಿಷಯಾಸಕ್ತಿಯಲ್ಲಿ ವಿರಕ್ತರಾಗಿ ತಪಸ್ಸಿನಲ್ಲಿ ನಿರತರಾಗಿರುವರೋ, ಸರ್ವದಾ ಅಧ್ಯಯನಶೀಲರಾಗಿ ದೇಹವನ್ನು ಸವೆಸುವರೋ, ಜಿತೇಂದ್ರಿಯರಾಗಿರುವರೋ, ಪ್ರಾಣಿಗಳ ಹಿತದಲ್ಲಿಯೇ ಆಸಕ್ತರಾಗಿರು

ವರೋ–ಅಂತಹವರು ಈ ಲೋಕದಲ್ಲಿಯೂ ಸುಖವನ್ನು ಅನುಭವಿಸುತ್ತಾರೆ. ಅವಸಾನನಂತರ ಉತ್ತಮವಾದ ಲೋಕಗಳಿಗೂ ಹೋಗುತ್ತಾರೆ.

ಯೇ ಚೈವ ವಿದ್ಯಾಂ ನ ತಪೋ ನ ದಾನಂ
ನ ಚಾಪಿ ಮೂಢಾಃ ಪ್ರಜನೇ ಯತನ್ತೇ ।
ನ ಚಾಪಿ ಗಚ್ಛನ್ತಿ ಸುಖಾನಿ ಭೋಗಾಂ-
ಸ್ತೇಷಾಮಯಂ ಚಾಪಿ ಪರಶ್ಚ ನಾಸ್ತಿ ॥೮೮॥

ಯಾವ ಮೂಢರು ವಿದ್ಯೆಯನ್ನು ಅಭ್ಯಾಸಮಾಡುವುದಿಲ್ಲವೋ, ತಪಸ್ಸನ್ನು ಮಾಡುವುದಿಲ್ಲವೋ, ದಾನಮಾಡುವುದಿಲ್ಲವೋ, ಶಾಸ್ತ್ರಾನುಸಾರವಾಗಿ ಒಳ್ಳೆಯ ಸಂತಾನವನ್ನು ಪಡೆಯಲು ಪ್ರಯತ್ನಿಸುವುದಿಲ್ಲವೋ, ಬೇರೆ ಯಾವ ವಿಧವಾದ ಸುಖೋಪಭೋಗಗಳನ್ನೂ ಅನುಭವಿಸುವುದಿಲ್ಲವೋ–ಅಂತಹವರಿಗೆ ಈ ಲೋಕದಲ್ಲಿಯೂ ಸುಖವಿಲ್ಲ; ಪರಲೋಕದಲ್ಲಿಯೂ ಸುಖವಿಲ್ಲ."

ಯುಧಿಷ್ಠಿರನು ಹೇಳುತ್ತಾನೆ:

"ನಾರಾಯಣನೇ! ಪುರಾಣಪುರುಷನೇ! ಈಶನೇ! ಸಂಪೂರ್ಣ ಜಗತ್ತಿನಲ್ಲಿಯೂ ವಾಸಮಾಡುತ್ತಿರುವವನೇ! ಶ್ರೀಕೃಷ್ಣ! ನಿನಗೆ ನಮಸ್ಕರಿಸುತ್ತೇನೆ. ಈಗ ನಾನು ನಿನ್ನಿಂದ ಸಮಸ್ತಧರ್ಮಗಳ ಸಾರವನ್ನು ಸಮಗ್ರವಾಗಿ ಕೇಳಬೇಕೆಂದಿರುತ್ತೇನೆ. ಹೇಳುವ ಕೃಪೆಮಾಡು."

ಶ್ರೀಕೃಷ್ಣನು ಹೇಳುತ್ತಾನೆ:

"ಮಹಾಪ್ರಾಜ್ಞನೇ! ಮನುವು ಸೃಷ್ಟಿಯ ಪ್ರಾರಂಭದಲ್ಲಿ ಹೇಳಿದ ಧರ್ಮಸಾರವನ್ನು ಮೊದಲಿನಿಂದಲೂ ಹೇಳುತ್ತೇನೆ. ಮನುವು ಹೇಳಿರುವ ಈ ಧರ್ಮಸಾರವು ಬಹಳ ಪ್ರಾಚೀನವಾದುದು ಮತ್ತು ವೇದಸಮ್ಮತವಾದುದು.

ಅಗ್ನಿಚಿತ್ಕಪಿಲಾ ಸತ್ರೀ ರಾಜಾ ಭಿಕ್ಷುರ್ಮಹೋದಧಿಃ ।
ದೃಷ್ಟಮಾತ್ರಾತ್ಪುನನ್ತ್ಯೇತೇ ತಸ್ಮಾತ್ಪಶ್ಯೇತ ತಾನ್ಸದಾ ॥೯೦॥

ಅಗ್ನಿಚರ್ಯೆಯನ್ನು ಮಾಡುವ ಬ್ರಾಹ್ಮಣ, ಕಪಿಲಾಧೇನು, ಸತ್ರಯಜ್ಞಮಾಡುವವನು, ರಾಜಾ, ಸಂನ್ಯಾಸಿ ಮತ್ತು ಮಹಾಸಾಗರ–ಇವು ದರ್ಶನಮಾತ್ರದಿಂದಲೇ ಮನುಷ್ಯನನ್ನು ಪಾವನಗೊಳಿಸುತ್ತವೆ. ಆದುದರಿಂದ ಇವುಗಳನ್ನು ಸದಾ ದರ್ಶನಮಾಡುತ್ತಲೇ ಇರಬೇಕು.

ಬಹೂನಾಂ ನ ಪ್ರದಾತವ್ಯಾ ಗೌರ್ವಸ್ತ್ರಂ ಶಯನಂ ಸ್ತ್ರಿಯಃ।
ತಾದೃಗ್ಭೂತಂ ತು ತದ್ದಾನಂ ದಾತಾರಂ ನೋಪತಿಷ್ಠತಿ ॥೯೧॥

ಗೋವನ್ನೂ, ವಸ್ತ್ರವನ್ನೂ, ಹಾಸಿಗೆಯನ್ನೂ, ಸ್ತ್ರೀಯರನ್ನೂ ಬಹುಮಂದಿಗೆ ದಾನಮಾಡಬಾರದು. ಹೀಗೆ ಮಾಡಿದರೆ ದಾನದ ಫಲವು ದಾನಿಗೆ ಲಭಿಸುವುದಿಲ್ಲ.

ಮಾ ದದಾತ್ವಿತಿ ಯೋ ಬ್ರೂಯಾದ್ಬ್ರಾಹ್ಮಣೇಷು ಚ ಗೋಷು ಚ।
ತಿರ್ಯಗ್ಯೋನಿಶತಂ ಗತ್ವಾ ಚಣ್ಡಾಲೇಷೂಪಜಾಯತೇ ॥೯೨॥

ಬ್ರಾಹ್ಮಣನಿಗಾಗಲೀ, ಗೋವಿಗಾಗಲೀ, ಆಹಾರವನ್ನು ಕೊಡುತ್ತಿರುವಾಗ 'ಮಾ ದದಾತು' 'ಕೊಡಕೂಡದು'–ಎಂದು ಹೇಳಿ ಯಾವನು ತಡೆಮಾಡುವನೋ–ಅಂತಹವನು ನೂರು ಬಾರಿ ಪಶು-ಪಕ್ಷಿಗಳ ಯೋನಿಗಳಲ್ಲಿ ಹುಟ್ಟಿ ಅನಂತರ ಮನುಷ್ಯಲೋಕದಲ್ಲಿ ಚಂಡಾಲನಾಗಿ ಜನ್ಮತಾಳುತ್ತಾನೆ.

ಬ್ರಾಹ್ಮಣಸ್ವಂ ಚ ಯದ್ದೈವಂ ದರಿದ್ರಸ್ಯೈವ ಯದ್ಧನಮ್।
ಗುರೋಶ್ಚಾಪಿ ಹೃತಂ ರಾಜನ್ಸ್ವರ್ಗಸ್ಥಾನಪಿ ಪಾತಯೇತ್ ॥೯೩॥

ಬ್ರಾಹ್ಮಣರ, ದೇವರ, ದರಿದ್ರನ ಮತ್ತು ಗುರುವಿನ ಧನವು ಕಸಿಯಲ್ಪಟ್ಟರೆ ಅದರ ಅಪಹರಣಕ್ಕೆ ಕಾರಣರಾದವರು ಸ್ವರ್ಗವನ್ನು ಪಡೆಯಲು ಸಾಧಕವಾದ ಇತರ ಕರ್ಮಗಳನ್ನು ಮಾಡಿದ್ದರೂ ಅಥವಾ ದೇವತೆಗಳೇ ಆಗಿದ್ದರೂ ಅವರನ್ನು ಕೆಳಕ್ಕೆ ಬೀಳಿಸಿಬಿಡುತ್ತದೆ.

ಧರ್ಮಂ ಜಿಜ್ಞಾಸಮಾನಾನಾಂ ಪ್ರಮಾಣಂ ಪರಮಂ ಶ್ರುತಿಃ।
ದ್ವಿತೀಯಂ ಧರ್ಮಶಾಸ್ತ್ರಾಣಿ ತೃತೀಯಂ ಲೋಕಸಂಗ್ರಹಃ ॥೯೪॥

ಧರ್ಮತತ್ತ್ವವನ್ನು ತಿಳಿಯಬಯಸುವವರಿಗೆ ವೇದವೇ ಮುಖ್ಯವಾದ

ಮತ್ತು ಶ್ರೇಷ್ಠವಾದ ಪ್ರಮಾಣವಾಗಿದೆ. ಧರ್ಮಶಾಸ್ತ್ರಗಳು ಎರಡನೆಯ ಪ್ರಮಾಣ. ಲೋಕಾಚಾರವು ಮೂರನೆಯ ಪ್ರಮಾಣ.

ಆಸಮುದ್ರಾಚ್ಚ ಯತ್ಪೂರ್ವಾದಾಸಮುದ್ರಾಚ್ಚ ಪಶ್ಚಿಮಾತ್ ।
ಹಿಮಾದ್ರಿವಿನ್ಧ್ಯಯೋರ್ಮಧ್ಯಮಾರ್ಯಾವರ್ತಂ ಪ್ರಚಕ್ಷತೇ ॥೮೫॥

ಪೂರ್ವಸಮುದ್ರದಿಂದ ಪಶ್ಚಿಮಸಮುದ್ರದವರೆಗೂ ಮಧ್ಯೆ ಇರುವ, ಹಿಮಾಲಯದಿಂದ ವಿಂಧ್ಯಪರ್ವತದವರೆಗೂ ಮಧ್ಯೆ ಇರುವ ಭೂಭಾಗವನ್ನು ಆರ್ಯಾವರ್ತವೆಂದು ಹೇಳುತ್ತಾರೆ.

ಸರಸ್ವತೀದೃಷದ್ವತ್ಯೋರ್ದೇವನದ್ಯೋರ್ಯದನ್ತರಮ್।
ತದ್ದೇವನಿರ್ಮಿತಂ ದೇಶಂ ಬ್ರಹ್ಮಾವರ್ತಂ ಪ್ರಚಕ್ಷತೇ ॥೮೬॥

ದೇವನದಿಗಳಾದ ಸರಸ್ವತೀ ಮತ್ತು ದೃಷದ್ವತೀನದಿಗಳಿಗೆ ಮಧ್ಯದಲ್ಲಿರುವ, ದೇವತೆಗಳಿಂದ ನಿರ್ಮಿತವಾಗಿರುವ ದೇಶವನ್ನು ಬ್ರಹ್ಮಾವರ್ತವೆಂದು ಹೇಳುತ್ತಾರೆ.

ಯಸ್ಮಿನ್ದೇಶೇ ಯ ಆಚಾರಃ ಪಾರಮ್ಪರ್ಯಕ್ರಮಾಗತಃ।
ವರ್ಣಾನಾಂ ಸಾನ್ತರಾಲಾನಾಂ ಸ ಸದಾಚಾರ ಉಚ್ಯತೇ ॥೮೭॥

ಯಾವ ದೇಶದಲ್ಲಿ ನಾಲ್ಕು ವರ್ಣಗಳ ಮತ್ತು ಅವುಗಳಲ್ಲಿರುವ ಅವಾಂತರಭೇದಗಳ ಆಚಾರ-ವ್ಯವಹಾರಗಳು ಪರಂಪರಾಗತವಾಗಿ ಬಂದಿವೆಯೋ–ಅಂತಹ ಆಚಾರವನ್ನೇ ಸದಾಚಾರವೆನ್ನುತ್ತಾರೆ.

ಕುರುಕ್ಷೇತ್ರಂ ಚ ಮತ್ಸ್ಯಾಶ್ಚ ಪಞ್ಚಾಲಾಃ ಶೂರಸೇನಯಃ।
ಏತೇ ಬ್ರಹ್ಮರ್ಷಿದೇಶಾಸ್ತು ಬ್ರಹ್ಮಾವರ್ತಾದನನ್ತರಾಃ ॥೮೮॥

ಕುರುಕ್ಷೇತ್ರ, ಮತ್ಸ್ಯದೇಶ, ಪಾಂಚಾಲದೇಶ ಮತ್ತು ಶೂರಸೇನದೇಶಗಳು ಬ್ರಹ್ಮರ್ಷಿಗಳ ದೇಶವಾಗಿದ್ದು ಇವು ಬ್ರಹ್ಮಾವರ್ತದ ಸಮೀಪದಲ್ಲಿವೆ.

ಏತದ್ದೇಶಪ್ರಸೂತಸ್ಯ ಸಕಾಶಾದಗ್ರಜನ್ಮನಃ।
ಸ್ವಂ ಚರಿತ್ರಂ ಚ ಗೃಹ್ಣೀಯುಃ ಪೃಥಿವ್ಯಾಂ ಸರ್ವಮಾನವಾಃ ॥೮೯॥

ಈ ಪ್ರದೇಶದಲ್ಲಿ ಹುಟ್ಟಿರುವ ಬ್ರಾಹ್ಮಣರ ಬಳಿಗೆ ಭೂಮಂಡಲದಲ್ಲಿರುವ ಸರ್ವಮಾನವರೂ ಹೋಗಿ ತಮ್ಮ-ತಮ್ಮ ಆಚಾರ-ವಿಚಾರಗಳನ್ನು ತಿಳಿದುಕೊಂಡು ಹೋಗಬೇಕು.

ಹಿಮವದ್ವಿನ್ಧ್ಯಯೋರ್ಮಧ್ಯಂ ಯತ್ಪ್ರಾಗ್ವಿಶಸನಾದಪಿ ।
ಪ್ರತ್ಯಗೇವ ಪ್ರಯಾಗಾತ್ತು ಮಧ್ಯದೇಶಃ ಪ್ರಕೀರ್ತಿತಃ ॥೯೦೦॥

ಹಿಮವತ್ಪರ್ವತಕ್ಕೂ ವಿಂಧ್ಯಪರ್ವತಕ್ಕೂ ಮಧ್ಯದಲ್ಲಿ ಕುರುಕ್ಷೇತ್ರದಿಂದ ಪೂರ್ವಕ್ಕೂ ಪ್ರಯಾಗದಿಂದ ಪಶ್ಚಿಮಕ್ಕೂ ಇರುವ ಭೂಭಾಗವನ್ನು ಮಧ್ಯದೇಶವೆಂದು ಕರೆಯುತ್ತಾರೆ.

ಕೃಷ್ಣಸಾರಸ್ತು ಚರತಿ ಮೃಗೋ ಯತ್ರ ಸ್ವಭಾವತಃ ।
ಸ ಜ್ಞೇಯೋ ಯಾಜ್ಞಿಕೋ ದೇಶೋ ಮ್ಲೇಚ್ಛದೇಶಸ್ತತಃ ಪರಮ್ ॥

ಯಾವ ದೇಶದಲ್ಲಿ ಕೃಷ್ಣಸಾರವೆಂಬ ಜಿಂಕೆಯು ಸ್ವಾಭಾವಿಕವಾಗಿಯೇ ಸಂಚರಿಸುವುದೋ–ಅದನ್ನು ಯಜ್ಞಮಾಡುವವರಿಗೆ ಯೋಗ್ಯವಾದ ದೇಶವೆಂದು ತಿಳಿಯಬೇಕು. ಇವುಗಳಿಗೆ ಭಿನ್ನವಾದುದು ಮ್ಲೇಚ್ಛದೇಶವಾಗಿದೆ.

ಏತಾನ್ವಿಜ್ಞಾಯ ದೇಶಾಂಸ್ತು ಸಂಶ್ರಯೇರನ್ದ್ವಿಜಾತಯಃ ।
ಶೂದ್ರಸ್ತು ಯಸ್ಮಿಸ್ತಸ್ಮಿನ್ವಾ ನಿವಸೇದ್ವೃತ್ತಿಕರ್ಶಿತಃ ॥೯೦೨॥

ಭೂಮಂಡಲದಲ್ಲಿ ಯಾಜ್ಞಿಕರಿಗೆ ಯೋಗ್ಯವಾದ ದೇಶಗಳು ಯಾವುವು? ಮ್ಲೇಚ್ಛದೇಶಗಳು ಯಾವುವು?–ಎಂಬುದನ್ನರಿತು ಬ್ರಹ್ಮ-ಕ್ಷತ್ರ-ವೈಶ್ಯರು ಯಾಜ್ಞಿಕರ ದೇಶಗಳಲ್ಲಿಯೇ ವಾಸಮಾಡಬೇಕು. ಜೀವನ ನಿರ್ವಹಣೆಗೆ ತೊಂದರೆಯಾಗಿದ್ದರೆ ಮಾತ್ರ ಶೂದ್ರನು ಬೇರೆ ಯಾವ ದೇಶದಲ್ಲಾದರೂ ವಾಸಮಾಡಬಹುದು.

ಆಚಾರಃ ಪ್ರಥಮೋ ಧರ್ಮೋ ಹ್ಯಹಿಂಸಾ ಸತ್ಯಮೇವ ಚ ।
ದಾನಂ ಚೈವ ಯಥಾಶಕ್ತಿ ನಿಯಮಾಶ್ಚ ಯಮೈಃ ಸಹ ॥೯೦೩॥

ಸದಾಚಾರ, ಅಹಿಂಸೆ, ಸತ್ಯನಿಷ್ಠೆ, ಯಥಾಶಕ್ತಿ ದಾನಮಾಡುವುದು, ಯಮ-ನಿಯಮಾದಿಗಳ ಪಾಲನೆ–ಇವು ಮುಖ್ಯಧರ್ಮಗಳಾಗಿವೆ.

ವೈದಿಕೈಃ ಕರ್ಮಭಿಃ ಪುಣ್ಯೈರ್ನಿಷೇಕಾದಿರ್ದ್ವಿಜನ್ಮನಾಮ್ ।
ಕಾರ್ಯಃ ಶರೀರಸಂಸ್ಕಾರಃ ಪಾವನಃ ಪ್ರೇತ್ಯ ಚೇಹ ಚ ॥೯೦೪॥

ಬ್ರಾಹ್ಮಣ-ಕ್ಷತ್ರಿಯ-ವೈಶ್ಯರು ಗರ್ಭಾಧಾನದಿಂದ ಹಿಡಿದು ಅಂತ್ಯೇಷ್ಟಿಯ ವರೆಗಿನ ಎಲ್ಲ ಕರ್ಮಗಳನ್ನೂ ವೇದೋಕ್ತವಾದ ವಿಧಿಮಂತ್ರಗಳಿಂದ

ಮಾಡಬೇಕು. ಈ ಲೋಕದಲ್ಲಾಗಲೀ ಪರಲೋಕದಲ್ಲಾಗಲೀ ವೇದವಿಹಿತವಾದ ಶರೀರಸಂಸ್ಕಾರವು ಮನುಷ್ಯನನ್ನು ಪಾವನಗೊಳಿಸುತ್ತದೆ.

ಗರ್ಭಹೋಮೈರ್ಜಾತಕರ್ಮನಾಮಚೌಲೋಪನಾಯನೈಃ ।
ಸ್ವಾಧ್ಯಾಯೈಸ್ತದ್ವ್ರತೈಶ್ಚೈವ ವಿವಾಹಸ್ನಾತಕವ್ರತೈಃ ।
ಮಹಾಯಜ್ಞೈಶ್ಚ ಯಜ್ಞೈಶ್ಚ ಬ್ರಾಹ್ಮೀಯಂ ಕ್ರಿಯತೇ ತನುಃ ॥೯೦೫॥

ಗರ್ಭದಲ್ಲಿರುವಾಗ ಮಾಡುವ ಪುಂಸವನ-ಸೀಮಂತಹೋಮಗಳು, ಜಾತಕರ್ಮ, ನಾಮಕರಣ, ಚೂಡಾಕರ್ಮ, ಉಪನಯನ, ವೇದಾಧ್ಯಯನ, ವೇದಮಂತ್ರಗಳು, ಸ್ನಾತಕವ್ರತ, ವಿವಾಹ, ಪಂಚಮಹಾಯಜ್ಞಗಳ ಅನುಷ್ಠಾನ ಮತ್ತು ಇತರ ಯಜ್ಞಾನುಷ್ಠಾನ–ಈ ಶುಭಕರ್ಮಗಳಿಂದ ಉಂಟಾದ ಸಂಸ್ಕಾರದಿಂದ ಕರ್ತೃವಿನ ಶರೀರವು ಪರಬ್ರಹ್ಮನನ್ನು ಹೊಂದಲು ಯೋಗ್ಯವಾಗುತ್ತದೆ.*

ಧರ್ಮಾರ್ಥೌ ಯದಿ ನ ಸ್ಯಾತಾಂ ಶುಶ್ರೂಷಾ ವಾಪಿ ತದ್ವಿಧಾ।
ವಿದ್ಯಾ ತಸ್ಮಿನ್ನ ವಕ್ತವ್ಯಾ ಶುಭಂ ಬೀಜಮಿವೋಷರೇ ॥೯೦೬॥

ಯಾವನು ಧರ್ಮಾರ್ಥಪ್ರಾಪಕವಾದ ಕರ್ಮಗಳನ್ನು ಮಾಡುವುದಿಲ್ಲವೋ, ವಿದ್ಯಾಪ್ರಾಪ್ತಿಗೆ ಅನುಕೂಲವಾದ ಶುಶ್ರೂಷೆಯನ್ನೂ ಮಾಡುವುದಿಲ್ಲವೋ–ಅಂತಹವನಿಗೆ ವಿದ್ಯೆಯನ್ನು ಹೇಳಿಕೊಡಬಾರದು. ಹೇಳಿಕೊಟ್ಟರೆ ಒಳ್ಳೆಯ ಬೀಜವನ್ನು ಚೌಳುಭೂಮಿಯಲ್ಲಿ ಬಿತ್ತಿದಷ್ಟೇ ಪ್ರಯೋಜನವಾಗುತ್ತದೆ.

ಲೌಕಿಕಂ ವೈದಿಕಂ ವಾಪಿ ತಥಾಧ್ಯಾತ್ಮಿಕಮೇವ ವಾ।
ಯಸ್ಮಾಜ್ಜ್ಞಾನಮಿದಂ ಪ್ರಾಪ್ತಂ ತಂ ಪೂರ್ವಮಭಿವಾದಯೇತ್॥೯೦೭॥

---

*ಷೋಡಶ ಸಂಸ್ಕಾರಗಳು: ಗರ್ಭಾಧಾನ, ಪುಂಸವನ, ಸೀಮಂತ, ಜಾತಕರ್ಮ, ನಾಮಕರಣ, ಅನ್ನಪ್ರಾಶನ, ಚೌಲ, ಉಪನಯನ, ಪ್ರಾಜಾಪತ್ಯ, ಸೌಮ್ಯ, ಆಗ್ನೇಯ, ವೈಶ್ವದೇವ, ಗೋದಾನ, ಸಮಾವರ್ತನ, ವಿವಾಹ ಮತ್ತು ಅಂತ್ಯೇಷ್ಟಿ. ಎಲ್ಲ ವೇದೋಕ್ತ ಸಂಸ್ಕಾರಗಳಿಗೂ ಆತ್ಮಸಾಕ್ಷಾತ್ಕಾರವೇ ಮುಖ್ಯವಾದ ಧ್ಯೇಯ. ಈ ಎಲ್ಲ ಸಂಸ್ಕಾರಗಳ ಉದ್ದೇಶವೂ ಬ್ರಹ್ಮಪ್ರಾಪ್ತಿಯೇ ಆಗಿದೆ. ಸಾಧಾರಣರೀತಿಯಿಂದ ಹುಟ್ಟಿದವನೊಬ್ಬನನ್ನು ಬ್ರಹ್ಮಸಾಕ್ಷಾತ್ಕಾರಕ್ಕೆ ಒಯ್ಯುವ ಈ ವೇದೋಕ್ತಸಂಸ್ಕಾರಗಳ ಮಹಿಮೆಯು ಅಪಾರವಾದುದು. ಆದರೆ ಈಗ ಈ ಸಂಸ್ಕಾರಗಳಲ್ಲಿ ಕೆಲವು ಮಾತ್ರ ಅನಿವಾರ್ಯವೆನಿಸಿದ ರೀತಿಯಲ್ಲಿ ನಡೆಯುತ್ತಿದ್ದು ಸತ್ತ್ವಹೀನವಾಗಿರುವುದು ದುರ್ದೈವವೇ ಸರಿ.

ಲೌಕಿಕವಿದ್ಯೆಯಾಗಲೀ, ವೈದಿಕವಿದ್ಯೆಯಾಗಲೀ, ಆಧ್ಯಾತ್ಮಿಕವಿದ್ಯೆ ಯಾಗಲೀ–ಯಾರಿಂದ ಆ ಜ್ಞಾನವು ಪ್ರಾಪ್ತವಾಯಿತೋ–ಅಂತಹ ಗುರುವನ್ನು ಮೊದಲು ನಮಸ್ಕರಿಸಬೇಕು.

ಸವ್ಯೇನ ಸವ್ಯಂ ಸಂಗೃಹ್ಯ ದಕ್ಷಿಣೇನ ತು ದಕ್ಷಿಣಮ್।
ನ ಕುರ್ಯಾದೇಕಹಸ್ತೇನ ಗುರೋಃ ಪಾದಾಭಿವಾದನಮ್ ॥೯೦೮॥

ತನ್ನ ಎಡಗೈಯಿಂದ ಗುರುವಿನ ಎಡಗಾಲನ್ನೂ ಬಲಗೈಯಿಂದ ಗುರುವಿನ ಬಲಗಾಲನ್ನೂ ಮುಟ್ಟಿ ಗುರುವಿನ ಪಾದಗಳಿಗೆ ಅಭಿವಾದನಮಾಡಬೇಕು. ಒಂದೇ ಕೈಯಿಂದ ಅಭಿವಾದನಮಾಡಬಾರದು.

ನಿಷೇಕಾದೀನಿ ಕರ್ಮಾಣಿ ಯಃ ಕರೋತಿ ಯಥಾವಿಧಿ ।
ಅಧ್ಯಾಪಯತಿ ಚೈವೈನಂ ಸ ವಿಪ್ರೋ ಗುರುರುಚ್ಯತೇ ॥೯೦೯॥

ಗರ್ಭಾಧಾನವೇ ಮೊದಲಾದ ಸಂಸ್ಕಾರಗಳನ್ನು ಯಥಾವಿಧಿಯಾಗಿ ಯಾವನು ಮಾಡಿಸುವನೋ ಮತ್ತು ವೇದವನ್ನು (ವಿದ್ಯೆಯನ್ನು) ಹೇಳಿಕೊಡುವನೋ–ಅಂತಹ ಬ್ರಾಹ್ಮಣನು ಗುರುವೆಂದು ಹೇಳಲ್ಪಡುತ್ತಾನೆ.

ಕೃತ್ವೋಪನಯನಂ ವೇದಾನ್ಯೋಽಧ್ಯಾಪಯತಿ ನಿತ್ಯಶಃ।
ಸಕಲ್ಪಾನ್ಸರಹಸ್ಯಾಂಶ್ಚ ಸ ಚೋಪಾಧ್ಯಾಯ ಉಚ್ಯತೇ ॥೯೧೦॥

ಉಪನಯನಸಂಸ್ಕಾರವನ್ನು ಮಾಡಿಸಿ, ನಿತ್ಯವೂ ಕಲ್ಪ ಮತ್ತು ರಹಸ್ಯಸಹಿತವಾದ ವೇದಗಳನ್ನು ಯಾವನು ಹೇಳಿಕೊಡುವನೋ–ಅವನನ್ನು ಉಪಾಧ್ಯಾಯನೆಂದು ಹೇಳುತ್ತಾರೆ.

ಸಾಙ್ಗಾಂಶ್ಚ ವೇದಾನಧ್ಯಾಪ್ಯ ಶಿಕ್ಷಯಿತ್ವಾ ವ್ರತಾನಿ ಚ ।
ವಿವೃಣೋತಿ ಚ ಮನ್ತ್ರಾರ್ಥಾನಾಚಾರ್ಯಃ ಸೋಽಭಿಧೀಯತೇ ॥೯೧೧॥

ಯಾವನು ಶಿಕ್ಷಾ-ವ್ಯಾಕರಣಾದಿ ಷಡಂಗಗಳಿಂದ ಸಹಿತವಾದ ವೇದ ಗಳನ್ನು ಅಧ್ಯಯನಮಾಡಿಸಿ, ವೇದವ್ರತಗಳನ್ನೂ ಮಾಡಿಸಿ, ಮಂತ್ರಾರ್ಥ ಗಳನ್ನೂ ವಿವರಿಸಿ ಹೇಳುವನೋ–ಅಂತಹವನನ್ನು ಆಚಾರ್ಯನೆನ್ನುತ್ತಾರೆ.

ಉಪಾಧ್ಯಾಯಾದ್ದಶಾಚಾರ್ಯ ಆಚಾರ್ಯಾಣಾಂ ಶತಂ ಪಿತಾ।
ಪಿತುಃ ಶತಗುಣಂ ಮಾತಾ ಗೌರವೇಣಾತಿರಿಚ್ಯತೇ ॥೯೧೨॥

ಗೌರವದಲ್ಲಿ ಆಚಾರ್ಯನು ಉಪಾಧ್ಯಾಯನಿಗಿಂತಲೂ ಹತ್ತುಪಟ್ಟು ಹೆಚ್ಚಿನವನು. ತಂದೆಯು ಆಚಾರ್ಯನಿಗಿಂತಲೂ ನೂರುಪಟ್ಟು ಹೆಚ್ಚಿನವನು. ತಾಯಿಯು ತಂದೆಗಿಂತಲೂ ನೂರುಪಟ್ಟು ಹೆಚ್ಚಿನವಳು.

ಏತೇಷಾಮಪಿ ಸರ್ವೇಷಾಂ ಗರೀಯಾಞ್ಜ್ಞಾನದೋ ಗುರುಃ ।
ಗುರೋಃ ಪರತರಂ ಕಿಂಚಿನ್ನ ಭೂತಂ ನ ಭವಿಷ್ಯತಿ ॥೯೧೩॥

ಇವರೆಲ್ಲರಿಗಿಂತಲೂ ಆತ್ಮಜ್ಞಾನವನ್ನು ಕೊಟ್ಟ ಗುರುವೇ ಶ್ರೇಷ್ಠನು. ಆತ್ಮಜ್ಞಾನೋಪದೇಶಕನಾದ ಗುರುವಿಗಿಂತಲೂ ಅಧಿಕನು ಹಿಂದೂ ಇರಲಿಲ್ಲ; ಮುಂದೂ ಇರುವುದಿಲ್ಲ.

ತಸ್ಮಾತ್ತೇಷಾಂ ವಶೇ ತಿಷ್ಠೇಚ್ಛುಶ್ರೂಷಾಪರಮೋ ಭವೇತ್।
ಅವಮಾನಾದ್ಧಿ ತೇಷಾಂ ತು ನರಕಂ ಸ್ಯಾನ್ನ ಸಂಶಯಃ ॥೯೦೪॥

ಆದುದರಿಂದ ಯಾವಾಗಲೂ ಮನುಷ್ಯನು ಹಿಂದೆ ಹೇಳಿರುವ ಅಂತಹ ಗುರುಗಳ ಅಧೀನದಲ್ಲಿರಬೇಕು. ಅವರ ಶುಶ್ರೂಷೆಯಲ್ಲಿಯೇ ಯಾವಾಗಲೂ ಆಸಕ್ತನಾಗಿರಬೇಕು. ಅಂತಹವರನ್ನು ಸ್ವಲ್ಪವೇ ಅವಮಾನಿಸಿದರೂ ನರಕವು ಪ್ರಾಪ್ತವಾಗುವುದೆಂಬುದರಲ್ಲಿ ಸಂಶಯವೇ ಇಲ್ಲ.

ಹೀನಾಙ್ಗಾನತಿರಿಕ್ತಾಙ್ಗಾನ್ವಿದ್ಯಾಹೀನಾನ್ವಯೋಽಧಿಕಾನ್।
ರೂಪದ್ರವಿಣಹೀನಾಂಶ್ಚ ಜಾತಿಹೀನಾಂಶ್ಚ ನಾಕ್ಷಿಪೇತ್ ॥೯೧೫॥

ಅಂಗಹೀನರನ್ನೂ, ಹೆಚ್ಚು ಅಂಗಗಳಿರುವವರನ್ನೂ, ಅವಿದ್ಯಾವಂತರನ್ನೂ, ವಯಸ್ಸಿನಿಂದ ಅಧಿಕರಾಗಿರುವವರನ್ನೂ, ರೂಪದಿಂದಲೂ ಧನದಿಂದಲೂ ಹೀನರಾಗಿರುವವರನ್ನೂ, ಜಾತಿಹೀನರನ್ನೂ ನಿಂದಿಸಬಾರದು.

ಶಪತಾ ಯತ್ಕೃತಂ ಪುಣ್ಯಂ ಶಪ್ಯಮಾನಂ ತು ಗಚ್ಛತಿ ।
ಶಪ್ಯಮಾನಸ್ಯ ಯತ್ಪಾಪಂ ಶಪನ್ತಮನುಗಚ್ಛತಿ ॥೯೧೬॥

ನಿಂದಿಸುವವನಲ್ಲಿರುವ ಪುಣ್ಯವು ನಿಂದಿಸಲ್ಪಡುವವನಿಗೆ ಸೇರುತ್ತದೆ. ನಿಂದಿಸಲ್ಪಡುವವನಲ್ಲಿರುವ ಪಾಪವು ನಿಂದಿಸುವವನಿಗೆ ಸೇರುತ್ತದೆ. ಆದುದರಿಂದ ಯಾವಾಗಲೂ ಯಾರನ್ನೂ ನಿಂದಿಸಬಾರದು.

ನಾಸ್ತಿಕ್ಯಂ ವೇದನಿನ್ದಾಂ ಚ ದೇವತಾನಾಂ ಚ ಕುತ್ಸನಮ್ ।
ದ್ವೇಷಂ ದಮ್ಭಂ ಚ ಮಾನಂ ಚ ಕ್ರೋಧಂ ತೈಕ್ಷ್ಣ್ಯಂ ವಿವರ್ಜಯೇತ್ ॥

ನಾಸ್ತಿಕತೆ, ವೇದಗಳ ನಿಂದನೆ, ದೇವತೆಗಳ ದೂಷಣೆ, ದ್ವೇಷ, ದಂಭ, ದುರಭಿಮಾನ, ಕ್ರೋಧ ಮತ್ತು ಕಠೋರತೆ-ಇವುಗಳನ್ನು ಪರಿತ್ಯಜಿಸಬೇಕು."

ವೈಷ್ಣವಧರ್ಮ - ೧೬

ಅಗ್ನಿಯ ಮಹಿಮೆ

ಯುಧಿಷ್ಠಿರನು ಹೇಳುತ್ತಾನೆ:

"ದೇವೇಶನೇ! ಬ್ರಾಹ್ಮಣ-ಕ್ಷತ್ರಿಯ-ವೈಶ್ಯರು ಯಾವ ರೀತಿಯಲ್ಲಿ ಹೋಮಮಾಡಬೇಕು? ಹೇಗೆ ಮಾಡಿದರೆ ಆ ಹೋಮವು ಶಾಸ್ತ್ರವಿಧಿಗೆ ಅನುಸಾರವಾಗಿ ಮಾಡಿದ ಒಳ್ಳೆಯ ಹೋಮವಾಗುತ್ತದೆ?

ಅಗ್ನಿಯಲ್ಲಿ ಎಷ್ಟು ಭೇದಗಳಿವೆ? ಅವುಗಳ ಪ್ರತ್ಯೇಕ-ಪ್ರತ್ಯೇಕವಾದ ಸ್ವರೂಪಗಳಾವುವು? ಯಾವ ಅಗ್ನಿಗೆ ಯಾವ ಸ್ಥಾನವು ಹೇಳಲ್ಪಟ್ಟಿದೆ? ಅಗ್ನಿಹೋತ್ರಿಯು ಯಾವ ಅಗ್ನಿಯಲ್ಲಿ ಹೋಮಮಾಡಿದರೆ ಯಾವ ಲೋಕಕ್ಕೆ ಹೋಗುತ್ತಾನೆ? ಹಿಂದೆ ಅಗ್ನಿಹೋತ್ರವು ಯಾವ ನಿಮಿತ್ತದಿಂದ ಪ್ರಾರಂಭವಾಯಿತು? ದೇವತೆಗಳನ್ನು ತೃಪ್ತಿಪಡಿಸಲು ಹೇಗೆ ಹೋಮಮಾಡುತ್ತಾರೆ? ಹೇಗೆ ಹೋಮಮಾಡಿದರೆ ದೇವತೆಗಳು ಸುಪ್ರೀತರಾಗುತ್ತಾರೆ? ಅಗ್ನಿಗಳನ್ನು ವಿಧಿವತ್ತಾಗಿ ಮಂತ್ರಪೂರ್ವಕವಾಗಿ ಪೂಜಿಸಿದರೆ ಆ ಅಗ್ನಿಗಳು ಅಗ್ನಿಹೋತ್ರಿಗಳನ್ನು ಯಾವ ಸದ್ಗತಿಗೆ ಒಯ್ಯುತ್ತವೆ? ಮೂರು ಅಗ್ನಿಗಳ ಸ್ವರೂಪಗಳನ್ನು ತಿಳಿಯದೇ ಆ ಅಗ್ನಿಗಳಲ್ಲಿ ಅವಿಧಿಪೂರ್ವಕವಾಗಿ ಹೋಮಮಾಡಿದರೆ ಅಥವಾ ಉಪಾಸನೆಯನ್ನು ಕೆಟ್ಟುದಾಗಿ ಮಾಡಿದರೆ ಅಗ್ನಿಗಳು ಅಗ್ನಿಹೋತ್ರಿಗೆ ಯಾವ ಅನಿಷ್ಟಗಳನ್ನು ಉಂಟುಮಾಡುತ್ತವೆ? ಅಗ್ನಿಯನ್ನು ಪರಿತ್ಯಾಗಮಾಡಿರುವ ಪಾಪಾತ್ಮನು ಮುಂದೆ ಯಾವ ಯೋನಿಯಲ್ಲಿ ಹುಟ್ಟುತ್ತಾನೆ? ಸರ್ವಜ್ಞನೇ! ಎಲ್ಲರಿಗಿಂತಲೂ ಅಧಿಕನಾದವನೇ! ನಿನಗೆ ನಮಸ್ಕಾರಮಾಡುತ್ತೇನೆ. ಭಕ್ತಿಭಾವದಿಂದ ನಿನ್ನ ಬಳಿಗೆ ಬಂದಿರುವ ನನಗೆ ಈ ಎಲ್ಲ ವಿಷಯಗಳನ್ನೂ ಸಂಕ್ಷೇಪವಾಗಿ ಹೇಳುವ ಕೃಪೆಮಾಡು."

ಶ್ರೀಕೃಷ್ಣನು ಹೇಳುತ್ತಾನೆ:

“ಮಹಾರಾಜ! ಮಹಾಪುಣ್ಯಪ್ರದವಾದ ಈ ಧರ್ಮಾಮೃತವನ್ನು ಕೇಳು. ಅಗ್ನಿಹೋತ್ರವು ಧರ್ಮಪರಾಯಣರಾದ ಅಗ್ನಿಹೋತ್ರಿಗಳಾದ ಬ್ರಾಹ್ಮಣರನ್ನು ಭವಸಾಗರದಿಂದ ಪಾರುಮಾಡುತ್ತದೆ. ಮಹಾದ್ಯುತಿ ಮಂತನೇ! ಸೃಷ್ಟಿಯ ಆರಂಭದಲ್ಲಿ ನಾನೇ ಬ್ರಹ್ಮಸ್ವರೂಪದಿಂದ ಸಮಸ್ತ ಲೋಕಗಳನ್ನೂ ಸೃಷ್ಟಿಸಿದೆನು. ಲೋಕಗಳಿಗೆ (ಲೋಕದ ಜನರಿಗೆ) ಹಿತವನ್ನುಂಟುಮಾಡುವ ಅಪೇಕ್ಷೆಯಿಂದ ಎಲ್ಲಕ್ಕಿಂತಲೂ ಮೊದಲು ಅಗ್ನಿಯನ್ನೇ ನನ್ನ ಮುಖದಿಂದ ಸೃಷ್ಟಿಸಿದೆನು.

ಯಸ್ಮಾದಗ್ರೇ ಸ ಭೂತಾನಾಂ ಸರ್ವೇಷಾಂ ನಿರ್ಮಿತೋ ಮಯಾ।
ತಸ್ಮಾದಗ್ನೀತ್ಯಭಿಹಿತಃ ಪುರಾಣಜ್ಞೈರ್ಮನೀಷಿಭಿಃ ॥೯೨೫॥

ಹೀಗೆ ಎಲ್ಲ ಪ್ರಾಣಿಗಳಿಗೂ ಅಗ್ರಭಾಗದಲ್ಲಿ (ಮೊದಲು) ಅವನನ್ನು ಸೃಷ್ಟಿಸಿದೆನಾದುದರಿಂದ ಪುರಾಣಗಳನ್ನು ತಿಳಿದ ವಿದ್ವಾಂಸರು ಅವನನ್ನು ‘ಅಗ್ನಿ’-ಎಂದೇ ಕರೆದರು.

ಯಸ್ಮಾತ್ತು ಸರ್ವಕೃತ್ಯೇಷು ಪೂರ್ವಮಸ್ಮೈ ಪ್ರದೀಯತೇ ।
ಆಹುತಿರ್ದೀಪ್ಯಮಾನಾಯ ತಸ್ಮಾದಗ್ನೀತಿ ಕಥ್ಯತೇ ॥೯೨೬॥

ಸಮಸ್ತಕರ್ಮಗಳಲ್ಲಿಯೂ ಎಲ್ಲರಿಗಿಂತಲೂ ಮೊದಲು ಪ್ರಜ್ವಲಿತವಾದ ಅಗ್ನಿಯಲ್ಲಿಯೇ ಆಹುತಿಯು ಕೊಡಲ್ಪಡುವುದರಿಂದ ಅವನನ್ನು ಅಗ್ನಿಯೆಂದು ಕರೆಯುತ್ತಾರೆ.

ಯಸ್ಮಾಚ್ಚ ತು ನಯತ್ಯಗ್ರ್ಯಾಂ ಗತಿಂ ವಿಪ್ರಾನ್ಸುಪೂಜಿತಃ।
ತಸ್ಮಾಚ್ಚ ನಯನಾದ್ರಾಜನ್ದೇವೇಷ್ವಗ್ನೀತಿ ಕಥ್ಯತೇ ॥೯೨೭॥

ಸರಿಯಾಗಿ ಪೂಜಿಸಲ್ಪಟ್ಟರೆ ಅವನು ಬ್ರಾಹ್ಮಣರನ್ನು ಅಗ್ರಗತಿಗೆ (ಪರಮಪದಕ್ಕೆ) ಒಯ್ಯುತ್ತಾನಾದುದರಿಂದಲೂ ದೇವತೆಗಳು ಅವನನ್ನು ‘ಅಗ್ನಿ’ ಎಂದು ಕರೆಯುತ್ತಾರೆ.

ಯಸ್ಮಾಚ್ಚ ದುರ್ಹುತಃ ಸೋಽಯಮಲಂ ಭಕ್ಷಯಿತುಂ ಕ್ಷಣಾತ್।
ಯಜಮಾನಂ ನರಶ್ರೇಷ್ಠ ಕ್ರವ್ಯಾದೋಽಗ್ನಿಸ್ತತಃ ಸ್ಮೃತಃ ॥೯೨೮॥

ವಿಧಿಯನ್ನು ಉಲ್ಲಂಘಿಸಿ ಹೋಮಮಾಡುವ ಯಜಮಾನನನ್ನು ಕ್ಷಣಮಾತ್ರದಲ್ಲಿ ಭಕ್ಷಿಸಲು ಸಮರ್ಥನಾಗಿರುವುದರಿಂದ ಅವನನ್ನು ಕ್ರವ್ಯಾದನೆಂದೂ ಕರೆಯುತ್ತಾರೆ.

ಸರ್ವಭೂತಾತ್ಮಕೋ ರಾಜನ್ದೇವಾನಾಮೇಷ ವೈ ಮುಖಮ್॥

ಸರ್ವಪ್ರಾಣಿಗಳ ಆತ್ಮಸ್ವರೂಪನಾಗಿರುವ ಅಗ್ನಿಯು ದೇವತೆಗಳ ಮುಖಪ್ರಾಯನಾಗಿರುವನು.

ಇಂದ್ರಿಯಗಳನ್ನೂ ಬುದ್ಧಿಯನ್ನೂ ಹತೋಟಿಯಲ್ಲಿಟ್ಟುಕೊಂಡಿರುವ ಸಿದ್ಧರಾದ ಸಪ್ತರ್ಷಿಗಳು ಅಗ್ನಿಯ ಆರಾಧನೆಯಲ್ಲಿಯೇ ನಿರತರಾಗಿದ್ದ ಕಾರಣ ದೇವತೆಗಳೇ ಆದರು.

ಯುಧಿಷ್ಠಿರ! ಏಕಾಗ್ರಚಿತ್ತನಾಗಿ ನಾನೀಗ ಹೇಳಲಿರುವ ಅಗ್ನಿಹೋತ್ರ ಪ್ರಕಾರವನ್ನು ಕೇಳು. ಮೂರು ಅಗ್ನಿಗಳ ಗುಣಗಳಿಗೆ ಅನುಗುಣವಾದ ನಾಮಧೇಯಗಳನ್ನೂ ಹೇಳುತ್ತೇನೆ.

ಗೃಹಾಣಾಂ ಹಿ ಪತಿತ್ವಂ ಹಿ ಗೃಹಪತ್ಯಮಿತಿ ಸ್ಮೃತಮ್।
ಗೃಹಪತ್ಯಂ ತು ಯಸ್ಯಾಸೀತ್ತತ್ತಸ್ಮಾದ್ಗಾರ್ಹಪತ್ಯತಾ ॥೯೩೧॥

ಗೃಹಗಳ ಪತಿತ್ವವನ್ನು (ಒಡೆತನವನ್ನು) ಹೊಂದಿರುವುದು ಗೃಹಪತಿತ್ವವು. ಈ ಗೃಹಪತಿತ್ವವು ಯಾವ ಅಗ್ನಿಯಲ್ಲಿ ನೆಲೆಗೊಂಡಿರುವುದೋ ಆ ಅಗ್ನಿಯು 'ಗಾರ್ಹಪತ್ಯ' ಎನಿಸುತ್ತಾನೆ.

ಯಜಮಾನಂ ತು ಯಸ್ಮಾತ್ತು ದಕ್ಷಿಣಾಂ ತು ಗತಿಂ ನಯೇತ್।
ದಕ್ಷಿಣಾಗ್ನಿಂ ತಮಾಹುಸ್ತೇ ದಕ್ಷಿಣಾಯತನಂ ದ್ವಿಜಾಃ ॥೯೩೨॥

ಯಾವ ಅಗ್ನಿಯು ಯಜಮಾನನನ್ನು ದಕ್ಷಿಣಾಯನದ ಮಾರ್ಗವಾಗಿ ಸ್ವರ್ಗಕ್ಕೆ ಒಯ್ಯುವನೋ ಮತ್ತು ದಕ್ಷಿಣದಲ್ಲಿರುವನೋ–ಆ ಅಗ್ನಿಯನ್ನು ಬ್ರಾಹ್ಮಣರು 'ದಕ್ಷಿಣಾಗ್ನಿ'–ಎಂದು ಕರೆದರು.

ಆಹುತಿಃ ಸರ್ವಮಾಖ್ಯಾತಿ ಹವ್ಯಂ ವೈ ವಹನಂ ಸ್ಮೃತಮ್।
ಸರ್ವಹವ್ಯವಹೋ ವಹ್ನಿರ್ಗತಶ್ಚಾಹವನೀಯತಾಮ್ ॥೯೩೩॥

'ಆಹುತಿ' ಎಂಬುದು 'ಸರ್ವ' ಎಂಬ ಅರ್ಥದ ವಾಚಕ. ಹವ್ಯವನ್ನೇ

ಹವನವೆನ್ನುತ್ತಾರೆ. ಅಗ್ನಿಯು ಸಮಸ್ತಹವ್ಯಗಳನ್ನೂ ಒಯ್ಯುವವನಾದುದರಿಂದ-'ಆಹವನೀಯ'-ಎಂಬ ಹೆಸರನ್ನು ಪಡೆದನು.

ಬ್ರಹ್ಮಾ ಚ ಗಾರ್ಹಪತ್ಯೋಽಗ್ನಿಸ್ತಸ್ಮಿನ್ನೇವ ಹಿ ಸೋಽಭವತ್।
ದಕ್ಷಿಣಾಗ್ನಿಸ್ತ್ವಯಂ ರುದ್ರಃ ಕ್ರೋಧಾತ್ಮಾ ಚಣ್ಡ ಏವ ಸಃ ॥೯೩೪॥

ಬ್ರಹ್ಮನೇ ಗಾರ್ಹಪತ್ಯಾಗ್ನಿಯು. ಏಕೆಂದರೆ: ಅವನು ಹುಟ್ಟಿರುವುದು ಗಾರ್ಹಪತ್ಯಾಗ್ನಿಯಲ್ಲಿಯೇ. ಕ್ರೋಧಾತ್ಮನಾದ ಮತ್ತು ಪ್ರಚಂಡನಾದ ರುದ್ರನೇ ದಕ್ಷಿಣಾಗ್ನಿಸ್ವರೂಪನಾಗಿದ್ದಾನೆ.

ಅಹಮಾಹವನೀಯೋಽಗ್ನಿರಾಹೋಮಾದ್ಯಸ್ಯ ವೈ ಮುಖೇ ॥೯೩೫॥

ಹೋಮದ ಆರಂಭದಿಂದ ಕಡೆಯವರೆಗೂ ಯಾವ ಅಗ್ನಿಯ ಮೂಲಕವಾಗಿ ಆಹುತಿಗಳನ್ನು ಹಾಕುವರೋ-ಅಂತಹ ಆಹವನೀಯಾಗ್ನಿಯು ನಾನೇ ಆಗಿದ್ದೇನೆ.

ಯಾವ ಮನುಷ್ಯನು ಭಕ್ತಿಯಿಂದ ಕೂಡಿದವನಾಗಿ ಪ್ರತಿನಿತ್ಯವೂ ಆಹವನೀಯಾಗ್ನಿಯಲ್ಲಿ ಹೋಮಮಾಡುವನೋ–ಅವನು ಪೃಥ್ವೀ, ಅಂತರಿಕ್ಷ, ಋಷಿಗಳಿಂದ ಯುಕ್ತವಾದ ಸ್ವರ್ಗಲೋಕ–ಇವೆಲ್ಲವನ್ನೂ ಜಯಿಸುತ್ತಾನೆ. ಯಜ್ಞಗಳಲ್ಲಿ ಈ ಅಗ್ನಿಯು ಅಭಿಮುಖವಾಗಿರುವಾಗ ಎಲ್ಲ ಆಹುತಿಗಳೂ ಹೋಮಮಾಡಲ್ಪಡುವುದರಿಂದ ಇದಕ್ಕೆ ಆಹವನೀಯತ್ವ–ಎಂಬ ಪದವಿಯು ಲಭಿಸಿತು. ಆಹವನೀಯಾಗ್ನಿಯು ಮಹಾಕಾಂತಿಯುಳ್ಳದ್ದು. ಅಗ್ನಿಹೋತ್ರಗಳಲ್ಲಿ ಅಥವಾ ಇತರ ಯಜ್ಞಗಳಲ್ಲಿ ಆರಂಭದಿಂದ ಎಲ್ಲ ಕಡೆಗಳಿಂದಲೂ ಎಲ್ಲ ಆಹುತಿಗಳನ್ನೂ ಈ ಅಗ್ನಿಯಲ್ಲಿಯೇ ಹಾಕುವುದರಿಂದ ಈ ಅಗ್ನಿಗೆ ಆಹವನೀಯವೆಂಬ ಹೆಸರು ಬಂದಿತು.

ಆತ್ಮವನ್ನು ತಿಳಿದ ವಿದ್ವಾಂಸರು ಆಧ್ಯಾತ್ಮಿಕ, ಆಧಿದೈವಿಕ ಮತ್ತು ಆಧಿಭೌತಿಕಗಳೆಂಬ ಮೂರು ತಾಪತ್ರಯಗಳು ಮನುಷ್ಯನಿಗೆ ಇವೆಯೆಂದು ಹೇಳುತ್ತಾರೆ.

ಯಸ್ಮಾದ್ವೈ ತ್ರಾಯತೇ ದುಃಖಾದ್ಯಜಮಾನಂ ಹುತೋಽನಲಃ।
ತಸ್ಮಾತ್ತು ವಿಧಿವತ್ಪ್ರೋಕ್ತಮಗ್ನಿಹೋತ್ರಮಿತಿ ಶ್ರುತೌ ॥೯೪೦॥

ವಿಧಿವತ್ತಾಗಿ ಹೋಮಮಾಡಿದನಂತರ ಅಗ್ನಿಯು ಯಜಮಾನನನ್ನು ಆಧ್ಯಾತ್ಮಿಕವೇ ಮೊದಲಾದ ತಾಪತ್ರಯಗಳಿಂದ ರಕ್ಷಿಸುತ್ತದೆ. ಆದುದರಿಂದಲೇ ವೇದದಲ್ಲಿ ಈ ಕರ್ಮವನ್ನು ಅಗ್ನಿಹೋತ್ರವೆಂದು ಕರೆದಿರುತ್ತಾರೆ.

ಲೋಕಕರ್ತೃವಾದ ಬ್ರಹ್ಮನು ಎಲ್ಲಕ್ಕೂ ಮೊದಲು ಅಗ್ನಿಹೋತ್ರವನ್ನು ಪ್ರಕಟಿಸಿದನು. ಅಗ್ನಿಹೋತ್ರ ಮತ್ತು ವೇದಗಳು ತಾವೇ ತಾವಾಗಿ ಪ್ರಾದುರ್ಭವಿಸಿದುವು.

ಅಗ್ನಿಹೋತ್ರಫಲಾ ವೇದಾಃ ಶೀಲವೃತ್ತಫಲಂ ಶ್ರುತಮ್।
ರತಿಪುತ್ರಫಲಾ ದಾರಾ ದತ್ತಭುಕ್ತಫಲಂ ಧನಮ್ ॥೯೪೨॥

ವೇದಾಧ್ಯಯನಕ್ಕೆ ಫಲವು ಅಗ್ನಿಹೋತ್ರವೇ ಆಗಿದೆ. ಶೀಲ-ಸದಾಚಾರ ಗಳೇ ಶಾಸ್ತ್ರಜ್ಞಾನಕ್ಕೆ ಫಲಗಳಾಗಿವೆ. ಸ್ತ್ರೀಯನ್ನು ವಿವಾಹಮಾಡಿಕೊಂಡುದರ ಪ್ರಯೋಜನ ರತಿಸುಖ ಮತ್ತು ಸತ್ಸಂತಾನ. ಧನವಿದ್ದವನು ದಾನಮಾಡಬೇಕು ಮತ್ತು ಸುಖವನ್ನು ಉಪಭೋಗಿಸಬೇಕು. ಆಗಲೇ ಐಶ್ವರ್ಯಕ್ಕೆ ಸಾರ್ಥಕ್ಯ.

ಮೂರು ವೇದಗಳ ಮಂತ್ರಗಳ ಸಂಯೋಗದಿಂದ ಅಗ್ನಿಹೋತ್ರವು ಪ್ರವೃತ್ತವಾಗಿದೆ. ಋಗ್ಯಜುಸ್ಸಾಮಗಳ ಪವಿತ್ರಮಂತ್ರಗಳಿಂದಲೂ, ಮೀಮಾಂಸಾಸೂತ್ರಗಳಿಂದಲೂ ಅಗ್ನಿಹೋತ್ರದ ಪ್ರಯೋಗವಿಧಾನಗಳು ಪ್ರತಿಪಾದಿತವಾಗಿವೆ.

ವಸನ್ತೇ ಬ್ರಾಹ್ಮಣಸ್ಯ ಸ್ಯಾದಾಧೇಯೋಽಗ್ನಿರ್ನರಾಧಿಪ ।
ವಸನ್ತೋ ಬ್ರಾಹ್ಮಣೋ ಜ್ಞೇಯೋ ವೇದಯೋನಿಃ ಸ ಉಚ್ಯತೇ॥

ವಸಂತಋತುವನ್ನು ಬ್ರಾಹ್ಮಣನ ಸ್ವರೂಪವೆಂದೇ ತಿಳಿಯಬೇಕು. ಆ ಋತುವನ್ನು ವೇದಗಳ ಯೋನಿಯೆಂದೂ ಹೇಳುತ್ತಾರೆ. ಆದುದರಿಂದ ಬ್ರಾಹ್ಮಣನು ವಸಂತಋತುವಿನಲ್ಲಿ ಅಗ್ನಿಯನ್ನು ಪ್ರತಿಷ್ಠಾಪಿಸಬೇಕು.

ಅಗ್ನ್ಯಾಧೇಯಂ ತು ಯೇನಾಥ ವಸನ್ತೇ ಕ್ರಿಯತೇಽನಘ ।
ತಸ್ಯ ಶ್ರೀರ್ಬ್ರಹ್ಮವೃದ್ಧಿಶ್ಚ ಬ್ರಾಹ್ಮಣಸ್ಯ ವಿವರ್ಧತೇ ॥೯೫೪॥

ವಸಂತಋತುವಿನಲ್ಲಿ ಅಗ್ನಿಯನ್ನು ಸಂಸ್ಕಾರಪೂರ್ವಕವಾಗಿ ಪ್ರತಿಷ್ಠಾಪಿ

ಸಿದ ಬ್ರಾಹ್ಮಣನಿಗೆ ಸಂಪತ್ತಿನ ಸಮೃದ್ಧಿಯೂ ವೈದಿಕಜ್ಞಾನದ ಅಭಿವೃದ್ಧಿಯೂ ಉಂಟಾಗುತ್ತದೆ.

ಕ್ಷತ್ರಿಯನು ಗ್ರೀಷ್ಮಋತುವಿನಲ್ಲಿ ಅಗ್ನ್ಯಾಧಾನವನ್ನು ಮಾಡುವುದು ಶ್ರೇಷ್ಠವೆಂದು ಹೇಳುತ್ತಾರೆ. ಆ ಋತುವಿನಲ್ಲಿ ಅಗ್ನಿಯನ್ನು ಪ್ರತಿಷ್ಠಾಪಿಸಿದ ಕ್ಷತ್ರಿಯನಿಗೆ ಸಂಪತ್ತು, ಸಂತಾನ, ಪಶುಗಳು, ಧನ, ತೇಜಸ್ಸು, ಬಲ ಮತ್ತು ಯಶಸ್ಸುಗಳು ವೃದ್ಧಿಹೊಂದುತ್ತವೆ.

ಶರತ್ಕಾಲದ ರಾತ್ರಿಯು ವೈಶ್ಯನ ಸ್ವರೂಪವೇ ಆಗಿವೆ. ಶರದೃತುವಿನ ರಾತ್ರಿಯು ವೈಶ್ಯಯೋನಿಯೆಂದು ಹೇಳಲ್ಪಟ್ಟಿದೆ. ಆದುದರಿಂದ ವೈಶ್ಯನು ಶರದೃತುವಿನಲ್ಲಿ ಅಗ್ನಿಯನ್ನು ಆಧಾನಮಾಡಬೇಕು. ಶರದೃತುವಿನಲ್ಲಿ ಅಗ್ನ್ಯಾಧಾನಮಾಡಿದ ವೈಶ್ಯನಿಗೆ ಸಂಪತ್ತು, ಸಂತಾನ, ಆಯುಸ್ಸು, ಪಶುಗಳು ಮತ್ತು ಐಶ್ವರ್ಯಗಳು ವೃದ್ಧಿಸುತ್ತವೆ.

ರಸಗಳು, ತುಪ್ಪವೇ ಮೊದಲಾದ ಜಿಡ್ಡಾದ ಪದಾರ್ಥಗಳು, ಸುಗಂಧ ದ್ರವ್ಯಗಳು, ರತ್ನಗಳು, ಮಣಿಗಳು, ಸುವರ್ಣ ಮತ್ತು ಲೋಹಗಳು–ಈ ಎಲ್ಲವೂ ಅಗ್ನಿಹೋತ್ರದ ಸಲುವಾಗಿಯೇ ಉತ್ಪನ್ನವಾಗಿವೆ. ಆಯುರ್ವೇದ, ಧನುರ್ವೇದ, ಮೀಮಾಂಸಾ, ವಿಸ್ತಾರವಾದ ನ್ಯಾಯಶಾಸ್ತ್ರ ಮತ್ತು ಧರ್ಮಶಾಸ್ತ್ರ–ಇವೆಲ್ಲವೂ ಅಗ್ನಿಹೋತ್ರವನ್ನು ಪ್ರತಿಪಾದಿಸುವ ಸಲುವಾಗಿಯೇ ಇವೆ. ಛಂದಸ್ಸು, ಶಿಕ್ಷಾ, ಕಲ್ಪ, ವ್ಯಾಕರಣ, ಜ್ಯೋತಿಷ, ನಿರುಕ್ತಗಳೂ ಅಗ್ನಿಹೋತ್ರಕ್ಕಾಗಿಯೇ ರಚಿತವಾಗಿವೆ. ಇತಿಹಾಸ-ಪುರಾಣಗಳು, ಗಾಥೆಗಳು, ಉಪನಿಷತ್ತುಗಳು, ಅಥರ್ವಪ್ರಕ್ರಿಯೆಗಳು–ಇವೆಲ್ಲವೂ ಅಗ್ನಿಹೋತ್ರವನ್ನು ಪ್ರತಿಪಾದಿಸುವ ಸಲುವಾಗಿಯೇ ರಚಿತವಾದುವುಗಳು. ತಿಥಿ, ನಕ್ಷತ್ರ, ಯೋಗ, ಮುಹೂರ್ತ, ಕರಣ–ಇವುಗಳ ಕಾಲದ ಜ್ಞಾನವನ್ನು ತಿಳಿಯುವ ಸಲುವಾಗಿಯೇ ಹಿಂದೆ ಜ್ಯೋತಿಷಶಾಸ್ತ್ರವು ರಚಿಸಲ್ಪಟ್ಟಿತು. ಋಗ್ವೇದ-ಯಜುರ್ವೇದ-ಸಾಮವೇದಮಂತ್ರಗಳ ಛಂದಸ್ಸುಗಳನ್ನು ತಿಳಿಯುವ ಸಲುವಾಗಿಯೂ, ಸಂಶಯ ಮತ್ತು ವಿಕಲ್ಪಗಳನ್ನು ಹೋಗಲಾಡಿಸಿ ಅವುಗಳಲ್ಲಿರುವ ತಾತ್ತ್ವಿಕಜ್ಞಾನವನ್ನು ತಿಳಿಯುವ ಸಲುವಾಗಿಯೂ ಛಂದಃಶಾಸ್ತ್ರವು ರಚಿತವಾಯಿತು. ವರ್ಣ, ಅಕ್ಷರ, ಪದಗಳ ಅರ್ಥ, ಸಂಧಿ, ಲಿಂಗ, ನಾಮ, ಧಾತು–ಇವುಗಳ ವಿವೇಚನೆಗಾಗಿ ಹಿಂದೆ ವ್ಯಾಕರಣಶಾಸ್ತ್ರವು ರಚಿತವಾಯಿತು.

ಯೂಪ, ವೇದಿ ಮತ್ತು ಯಜ್ಞಗಳ ಸ್ವರೂಪಗಳನ್ನು ತಿಳಿಯಲು-ಪ್ರೋಕ್ಷಣ, ಶ್ರಪಣ (ಚರುವನ್ನು ಬೇಯಿಸುವುದು) ಮುಂತಾದುವುಗಳನ್ನು ಸರಿಯಾಗಿ ತಿಳಿಯಲು ಮತ್ತು ಯಜ್ಞ ಮತ್ತು ದೇವತೆಗಳಿಗಿರುವ ಸಂಬಂಧವನ್ನು ತಿಳಿಯಲು 'ಶಿಕ್ಷಾ'–ಎಂಬ ವೇದಾಂಗದ ರಚನೆಯಾಯಿತು. ಯಜ್ಞಪಾತ್ರೆಗಳ ಶುದ್ಧಿ, ಯಜ್ಞಸಂಬಂಧವಾದ ಸಾಮಗ್ರಿಗಳ ಸಂಗ್ರಹ, ಸರ್ವ ಯಜ್ಞಗಳ ವೈಕಲ್ಪಿಕವಿಧಾನಗಳ ಜ್ಞಾನ–ಇವುಗಳನ್ನು ತಿಳಿಯುವ ಸಲುವಾಗಿ ಹಿಂದೆ ಕಲ್ಪಶಾಸ್ತ್ರವು ರಚಿತವಾಯಿತು. ಸಮಗ್ರವಾದ ವೇದಗಳಲ್ಲಿ ಪ್ರಯೋಗಿಸಿರುವ ನಾಮ, ಧಾತು ಮತ್ತು ವಿಕಲ್ಪಗಳ ತಾತ್ತ್ವಿಕವಾದ ಅರ್ಥವನ್ನು ನಿಶ್ಚಯಿಸುವ ಸಲುವಾಗಿ ಋಷಿಗಳು ನಿರುಕ್ತವೆಂಬ ಶಾಸ್ತ್ರವನ್ನು ರಚಿಸಿದರು. ಯಜ್ಞಗಳ ವೇದಿಗಳನ್ನು ನಿರ್ಮಿಸುವ ಸಲುವಾಗಿ ಮತ್ತು ಯಜ್ಞಗಳಿಗೆ ಬೇಕಾಗುವ ಸಂಭಾರಗಳ ಸಲುವಾಗಿ ಬ್ರಹ್ಮನು ಪೃಥ್ವಿಯನ್ನು ಸೃಷ್ಟಿಸಿದನು. ಬಳಿಕ ಯಜ್ಞಕ್ಕೆ ಬೇಕಾಗುವ ಇಧ್ಮಗಳ (ಸಮಿತ್ತುಗಳ) ಸಲುವಾಗಿಯೂ ಯೂಪಗಳ ಸಲುವಾಗಿಯೂ ಬ್ರಹ್ಮನು ವನಸ್ಪತಿಗಳನ್ನು ಸೃಷ್ಟಿಸಿದನು. ಗೋವುಗಳೂ ಯಜ್ಞದ ಸಲುವಾಗಿ ಮತ್ತು ಯಜ್ಞದ ದಕ್ಷಿಣೆಯ ಸಲುವಾಗಿ ಪ್ರಾದುರ್ಭವಿಸಿದುವು. ಚಿನ್ನ ಮತ್ತು ಬೆಳ್ಳಿಗಳು ಯಜ್ಞದಲ್ಲಿ ಬೇಕಾಗುವ ಪಾತ್ರೆಗಳ ಸಲುವಾಗಿಯೂ ಕಲಶಗಳ ಸಲುವಾಗಿಯೂ ಪ್ರಾದುರ್ಭವಿಸಿದುವು. ದರ್ಭೆಗಳು ಯಜ್ಞಕುಂಡದ ಸುತ್ತಲೂ ಹರಡುವ ಸಲುವಾಗಿಯೂ ರಾಕ್ಷಸರಿಂದ ಯಜ್ಞವನ್ನು ರಕ್ಷಿಸುವ ಸಲುವಾಗಿಯೂ ಬ್ರಹ್ಮನಿಂದ ಸೃಷ್ಟಿಸಲ್ಪಟ್ಟುವು. ಪೂಜೆಮಾಡುವ ಸಲುವಾಗಿ ಬ್ರಾಹ್ಮಣರ, ನಕ್ಷತ್ರಗಳ ಮತ್ತು ಸ್ವರ್ಗದಲ್ಲಿ ದೇವತೆಗಳ ಸೃಷ್ಟಿಯಾಯಿತು. ಬ್ರಹ್ಮನು ರಕ್ಷಣಾರ್ಥವಾಗಿ ಕ್ಷತ್ರಿಯರನ್ನೂ, ಕೃಷಿ-ಗೋರಕ್ಷ್ಯ-ವಾಣಿಜ್ಯಗಳ ಸಲುವಾಗಿ ವೈಶ್ಯರನ್ನೂ, ಮೂರು ವರ್ಣದವರನ್ನೂ ಶುಶ್ರೂಷೆಮಾಡುವ ಸಲುವಾಗಿ ಶೂದ್ರರನ್ನೂ ಸೃಷ್ಟಿಸಿದನು. ಯಾವ ಬ್ರಾಹ್ಮಣರು ವಿಧಿಪೂರ್ವಕವಾಗಿ ಅಗ್ನಿಹೋತ್ರವನ್ನು ಮಾಡುವರೋ–ಅವರು ದಾನಮಾಡಿದ, ಹೋಮಮಾಡಿದ, ಯಜ್ಞಮಾಡಿದ ಮತ್ತು ಅಧ್ಯಯನ ಮಾಡಿದ ಫಲಗಳನ್ನು ಪಡೆದುಕೊಳ್ಳುತ್ತಾರೆ. ಅಗ್ನಿಹೋತ್ರವನ್ನು ಮಾಡುವುದರಿಂದ ದಾನ-ಯಜ್ಞ-ಹೋಮ ಮತ್ತು ಅಧ್ಯಯನಗಳನ್ನು ಮಾಡಿದಂತೆಯೇ ಆಗುತ್ತದೆ.

ಹೀಗೆ ಬ್ರಾಹ್ಮಣರ ಮೂಲಕವಾಗಿ ಯಾವ ಇಷ್ಟಾ-ಪೂರ್ತಕರ್ಮಗಳು

ನಡೆಯುವುವೋ ಅದರ ಫಲವೆಲ್ಲವನ್ನೂ ನಾನು ಜೋಪಾನವಾಗಿ ಸಂಗ್ರಹಿಸಿ ಆದಿತ್ಯನಲ್ಲಿ ಸ್ಥಾಪಿಸುತ್ತೇನೆ. ಹೀಗೆ ಸೂರ್ಯನು ಅಗ್ನಿಹೋತ್ರಿಗಳ ಯಾವ ಸುಕೃತವನ್ನು ಧರಿಸಿದ್ದಾನೆಯೋ ಅದು ನಾನು ಆ ಆದಿತ್ಯನಲ್ಲಿ ಸ್ಥಾಪಿಸಿದ ಲೋಕದ ಸುಕೃತವೇ ಆಗಿದೆ. ಆದುದರಿಂದ ಪರದೇಶಗಳಿಗೆ ಹೋಗದೇ ಇರುವ ಮತ್ತು ಊರ್ಧ್ವಲೋಕಗಳನ್ನು ಬಯಸುವ ಬ್ರಾಹ್ಮಣರು ವಿಧಿವತ್ತಾಗಿ ನಿತ್ಯವೂ ಅಗ್ನಿಹೋತ್ರವನ್ನು ಮಾಡಬೇಕು. ಯುಧಿಷ್ಠಿರ! ಅಗ್ನಿಹೋತ್ರಿಯು ಅಗ್ನಿಹೋತ್ರವನ್ನು ತನ್ನ ಆತ್ಮಕ್ಕೆ ಸಮಾನವೆಂದೇ ಭಾವಿಸಿ ಯಾವುದೇ ಕಾರಣದಿಂದಲೂ ಅನಾದರಣೆಮಾಡಬಾರದು. ಕ್ಷಣಕಾಲವಾದರೂ ಅದನ್ನು ಬಿಟ್ಟಿರಬಾರದು. ಯಾರು ಬಾಲ್ಯದಿಂದರೂ ಅಗ್ನಿಹೋತ್ರವನ್ನು ಮಾಡುತ್ತಿರುವರೋ, ಶೂದ್ರಾನ್ನವನ್ನು ಪರಿತ್ಯಜಿಸಿರುವರೋ, ಕ್ರೋಧ-ಲೋಭಗಳಿಂದ ರಹಿತರಾಗಿರುವರೋ, ಪ್ರತಿದಿನವೂ ಪ್ರಾತಃಕಾಲದಲ್ಲಿ ಸ್ನಾನಮಾಡುವರೋ, ಜಿತೇಂದ್ರಿಯರಾಗಿದ್ದು ವಿಧಿವತ್ತಾಗಿ ಅಗ್ನಿಹೋತ್ರವನ್ನು ಅನುಷ್ಠಾನ ಮಾಡುವರೋ, ಸದಾ ಅತಿಥಿಗಳ ಸೇವೆಯಲ್ಲಿಯೇ ನಿರತರಾಗಿರುವರೋ, ಶಾಂತಭಾವದಿಂದಿರುತ್ತಾ ಎರಡು ಸಂಧ್ಯೆಗಳಲ್ಲಿಯೂ ಸಂಧ್ಯಾವಂದನೆಗಳ ಮೂಲಕವಾಗಿ ನನ್ನನ್ನೇ ಆಶ್ರಯಿಸಿರುವರೋ–ಅಂತಹವರು ಸೂರ್ಯ ಮಂಡಲವನ್ನು ಭೇದಿಸಿಕೊಂಡು ಪುನರಾವೃತ್ತಿರಹಿತವಾದ ಲೋಕಕ್ಕೆ ಹೋಗುತ್ತಾರೆ.

ಶ್ರುತಿಂ ಕೇಚಿನ್ನಿನ್ದಮಾನಾಃ ಶ್ರುತಿಂ ದೂಷ್ಯನ್ತ್ಯಬುದ್ಧಯಃ ।
ಪ್ರಮಾಣಂ ನ ಚ ಕುರ್ವನ್ತಿ ತೇ ಯಾನ್ತೀಹಾಪಿ ದುರ್ಗತಿಮ್ ॥

ಈ ಪ್ರಪಂಚದಲ್ಲಿ ಯಾವ ಮೂರ್ಖರು ವೇದವನ್ನು ನಿಂದಿಸುತ್ತಾ ಶ್ರುತಿಯಲ್ಲಿ ದೋಷಾರೋಪಣೆಮಾಡುವರೋ, ಶ್ರುತಿಪ್ರಮಾಣವನ್ನು ಗೌರವಿಸುವುದಿಲ್ಲವೋ–ಅಂತಹವರು ಈ ಲೋಕದಲ್ಲಿಯೂ ದುರ್ಗತಿಯನ್ನು ಹೊಂದುತ್ತಾರೆ.

ಪ್ರಮಾಣಮಿತಿಹಾಸಂ ಚ ವೇದಾನ್ಕುರ್ವನ್ತಿ ಯೇ ದ್ವಿಜಾಃ।
ತೇ ಯಾನ್ತ್ಯಮರಸಾಯುಜ್ಯಂ ನಿತ್ಯಮಾಸ್ತಿಕ್ಯಬುದ್ಧಯಃ ॥೬೭॥

ಯಾವ ಅಸ್ತಿಕ್ಯಬುದ್ಧಿಯುಳ್ಳ ದ್ವಿಜರು ವೇದಗಳನ್ನೂ ಇತಿಹಾಸವನ್ನೂ

ಪ್ರಮಾಣವನ್ನಾಗಿ ಭಾವಿಸುವರೋ–ಅಂತಹವರು ದೇವತೆಗಳ ಸಾಯುಜ್ಯವನ್ನು ಹೊಂದುತ್ತಾರೆ.”

ವೈಷ್ಣವಧರ್ಮ - ೧೭

ಚಾಂದ್ರಾಯಣವ್ರತದ ವಿಧಿ: ಪ್ರಾಯಶ್ಚಿತ್ತರೂಪದಲ್ಲಿ ಅದನ್ನು ಮಾಡುವ ಬಗೆ ಮತ್ತು ಮಹಿಮೆ

ಯುಧಿಷ್ಠಿರನು ಹೇಳುತ್ತಾನೆ:

“ಚಕ್ರಾಯುಧನೇ! ಗರುಡಧ್ವಜನೇ! ದೇವೇಶನೇ! ಪೂಜ್ಯನೇ! ನಿನಗೆ ನಮಸ್ಕರಿಸುತ್ತೇನೆ. ದಯಮಾಡಿ ನನಗೆ ಚಾಂದ್ರಾಯಣವ್ರತದ ವಿಧಿಯನ್ನು ಹೇಳುವ ಕೃಪೆಮಾಡು.”

ಶ್ರೀಕೃಷ್ಣನು ಹೇಳುತ್ತಾನೆ:

“ಪಾಂಡವನೇ! ಸರ್ವಪಾಪಗಳನ್ನೂ ಹೋಗಲಾಡಿಸುವ ಚಾಂದ್ರಾಯಣವ್ರತದ ವಿಧಿ-ನಿಯಮಗಳನ್ನು ಯಥಾವತ್ತಾಗಿ ಕೇಳು. ಈ ವ್ರತವನ್ನು ಆಚರಿಸುವುದರಿಂದ ಪಾಪಿಗಳು ಶುದ್ಧಾತ್ಮರಾಗುತ್ತಾರೆ. ಬ್ರಾಹ್ಮಣ ನಾಗಲೀ, ಕ್ಷತ್ರಿಯನಾಗಲೀ, ವೈಶ್ಯನಾಗಲೀ ಯಥಾವತ್ತಾಗಿ ಚಾಂದ್ರಾಯಣ ವ್ರತವನ್ನು ಮಾಡಲು ಬಯಸುವವನು ಮೊಟ್ಟಮೊದಲು ಈ ಕರ್ಮವನ್ನು ಮಾಡಬೇಕು.

ಶೋಧಯೇತ್ತು ಶರೀರಂ ಸ್ವಂ ಪಞ್ಚಗವ್ಯೇನ ಯನ್ತ್ರಿತಃ ।
ಸಶಿರಃ ಕೃಷ್ಣಪಕ್ಷಸ್ಯ ತತಃ ಕುರ್ವೀತ ವಾಪನಮ್ ॥೯೭೫॥

ನಿಯಮದಲ್ಲಿದ್ದುಕೊಂಡು ಪಂಚಗವ್ಯಪ್ರಾಶನದಿಂದ ಶರೀರವನ್ನು ಶುದ್ಧಿಮಾಡಿಕೊಳ್ಳಬೇಕು. ಬಳಿಕ ಕೃಷ್ಣಪಕ್ಷದ ಕಡೆಯಲ್ಲಿ ತಲೆ-ಗಡ್ಡ-ಮೀಸೆಗಳನ್ನು ಕ್ಷೌರಮಾಡಿಸಿಕೊಳ್ಳಬೇಕು.

ಶುಕ್ಲವಾಸಾಃ ಶುಚಿರ್ಭೂತ್ವಾ ಮೌಞ್ಜೀಂ ಬಧ್ನೀತ ಮೇಖಲಾಮ್।
ಪಾಲಾಶದಣ್ಡಮಾದಾಯ ಬ್ರಹ್ಮಚಾರಿವ್ರತೇ ಸ್ಥಿತಃ ॥೯೭೬॥

ಕ್ಷೌರವಾದನಂತರ ಸ್ನಾನವನ್ನುಮಾಡಿ, ಬಿಳಿಯ ವಸ್ತ್ರವನ್ನು ಧರಿಸಿ,

ಮುಂಜಹುಲ್ಲಿನಿಂದ ಮಾಡಿದ ಉಡಿದಾರವನ್ನು ಕಟ್ಟಿಕೊಳ್ಳಬೇಕು. ಮುತ್ತುಗದ ದಂಡವನ್ನು ಹಿಡಿದು ಬ್ರಹ್ಮಚರ್ಯವ್ರತದಲ್ಲಿರಬೇಕು.

ಕೃತೋಪವಾಸಃ ಪೂರ್ವಂ ತು ಶುಕ್ಲಪ್ರತಿಪದಿ ದ್ವಿಜಃ ।
ನದೀಸಂಗಮತೀರ್ಥೇಷು ಶುಚೌ ದೇಶೇ ಗೃಹೇಽಪಿ ವಾ ॥೯೭॥

ದ್ವಿಜನು ಹಿಂದಿನ ದಿನ ಎಂದರೆ ಅಮಾವಾಸ್ಯೆಯ ದಿನ ಉಪವಾಸಮಾಡಿ ಶುಕ್ಲಪಕ್ಷದ ಪ್ರಥಮೆಯ ದಿನ ನದಿಗಳ ಸಂಗಮಸ್ಥಾನದಲ್ಲಾಗಲೀ, ಯಾವುದಾದರೂ ಪವಿತ್ರವಾದ ಸ್ಥಳದಲ್ಲಾಗಲೀ, ಮನೆಯಲ್ಲಾಗಲೀ ವ್ರತವನ್ನು ಆರಂಭಿಸಬೇಕು.

ಆಘಾರಾವಾಜ್ಯಭಾಗೌ ಚ ಪ್ರಣವಂ ವ್ಯಾಹೃತೀಸ್ತಥಾ।
ವಾರುಣಂ ಚೈವ ಪಞ್ಚೈವ ಹುತ್ವಾ ಸರ್ವಾನ್ಯಥಾಕ್ರಮಮ್ ॥೯೮॥
ಸತ್ಯಾಯ ವಿಷ್ಣವೇ ಚೇತಿ ಬ್ರಹ್ಮರ್ಷಿಭ್ಯೋಽಥ ಬ್ರಹ್ಮಣೇ।
ವಿಶ್ವೇಭ್ಯೋ ಹಿ ಚ ದೇವೇಭ್ಯಃ ಸಪ್ರಜಾಪತಯೇ ತಥಾ।
ಷಡುಕ್ತಾ ಜುಹುಯಾತ್ಪಶ್ಚಾತ್ಪ್ರಾಯಶ್ಚಿತ್ತಾಹುತಿಂ ದ್ವಿಜಃ ॥೯೯॥

ಮೊದಲು ನಿತ್ಯಕರ್ಮಗಳನ್ನು ಮುಗಿಸಿ, ಒಂದು ವೇದಿಕೆಯ ಮೇಲೆ ಅಗ್ನಿಯನ್ನು ಸ್ಥಾಪಿಸಿ, ಅದರಲ್ಲಿ ಅನುಕ್ರಮವಾಗಿ ಆಘಾರ, ಆಜ್ಯಭಾಗ, ಪ್ರಣವ, ಮಹಾವ್ಯಾಹೃತಿ ಮತ್ತು ಪಂಚವಾರುಣಹೋಮಗಳನ್ನು ಮಾಡಿ ಸತ್ಯ, ವಿಷ್ಣು, ಬ್ರಹ್ಮರ್ಷಿಗಳು, ಬ್ರಹ್ಮಾ, ವಿಶ್ವೇದೇವತೆಗಳು ಮತ್ತು ಪ್ರಜಾಪತಿ–ಇವರ ಸಲುವಾಗಿ ಆರು ಹೋಮಗಳನ್ನು ಮಾಡಬೇಕು. ಕಡೆಯಲ್ಲಿ ಪ್ರಾಯಶ್ಚಿತ್ತಹೋಮವನ್ನು ಮಾಡಬೇಕು.

ಅತಃ ಸಮಾಪಯೇದಗ್ನಿಂ ಶಾನ್ತಿಂ ಕೃತ್ವಾಥ ಪೌಷ್ಟಿಕೀಮ್।
ಪ್ರಣಮ್ಯ ಚಾಗ್ನಿಂ ಸೋಮಂ ಚ ಭಸ್ಮ ಧೃತ್ವಾ ಯಥಾವಿಧಿ ॥೧೦೦॥
ನದೀಂ ಗತ್ವಾ ವಿಶುದ್ಧಾತ್ಮಾ ಸೋಮಾಯ ವರುಣಾಯ ಚ ।
ಆದಿತ್ಯಾಯ ನಮಸ್ಕೃತ್ವಾ ತತಃ ಸ್ನಾಯಾತ್ಸಮಾಹಿತಃ ॥೧೦೧॥

ಅನಂತರ ಶಾಂತಿ ಮತ್ತು ಪೌಷ್ಟಿಕಕರ್ಮಗಳನ್ನು ಮಾಡಿ (ಪುಣ್ಯಾಹವಾಚನವನ್ನು ಮಾಡಿ) ಅಗ್ನಿಕಾರ್ಯವನ್ನು ಸಮಾಪ್ತಿಗೊಳಿಸಬೇಕು. ಬಳಿಕ ಸೋಮನಿಗೂ ಅಗ್ನಿಗೂ ನಮಸ್ಕರಿಸಿ, ಯಥಾವಿಧಿಯಾಗಿ ಭಸ್ಮವನ್ನು

(ರಕ್ಷೆಯನ್ನು) ಧಾರಣೆಮಾಡಿಕೊಂಡು, ನದಿಯ ಬಳಿಗೆ ಹೋಗಿ ಶುದ್ಧಾಂತಃಕರಣನಾಗಿ ಸೋಮನಿಗೂ, ವರುಣನಿಗೂ, ಸೂರ್ಯನಿಗೂ ನಮಸ್ಕರಿಸಿ ಏಕಾಗ್ರಚಿತ್ತನಾಗಿ ಸ್ನಾನಮಾಡಬೇಕು.

ಉತ್ತೀರ್ಯೋದಕಮಾಚಮ್ಯ ಚಾಸೀನಃ ಪೂರ್ವತೋಮುಖಃ ।
ಪ್ರಾಣಾಯಾಮಂ ತತಃ ಕೃತ್ವಾ ಪವಿತ್ರೈರಭಿಷೇಚನಮ್ ॥೯೮೨॥

ಸ್ನಾನವನ್ನು ಮಾಡಿದನಂತರ ನದಿಯಿಂದ ಮೇಲಕ್ಕೆ ಬಂದು (ವಸ್ತ್ರವನ್ನುಟ್ಟುಕೊಂಡು) ಪೂರ್ವಾಭಿಮುಖವಾಗಿ ಕುಳಿತು ಆಚಮನಮಾಡಿ ಪ್ರಾಣಾಯಾಮಮಾಡಬೇಕು. ಬಳಿಕ ದರ್ಭೆಯಿಂದ ಪ್ರೋಕ್ಷಿಸಿಕೊಳ್ಳಬೇಕು.

ಆಚಾನ್ತಸ್ತ್ವಭಿವೀಕ್ಷೇತ ಊರ್ಧ್ವಬಾಹುರ್ದಿವಾಕರಮ್।
ಕೃತ್ವಾಞ್ಜಲಿಪುಟಃ ಸ್ಥಿತ್ವಾ ಕುರ್ಯಾಚ್ಚೈವ ಪ್ರದಕ್ಷಿಣಮ್ ॥೯೮೩॥

ಪುನಃ ಆಚಮನವನ್ನುಮಾಡಿ ಎರಡು ತೋಳುಗಳನ್ನು ಮೇಲಕ್ಕೆತ್ತಿಕೊಂಡು ಸೂರ್ಯನನ್ನು ನೋಡಬೇಕು. ಬಳಿಕ ಎರಡು ಕೈಗಳನ್ನೂ ಜೋಡಿಸಿಕೊಂಡು ಸೂರ್ಯನಿಗೆ ಪ್ರದಕ್ಷಿಣ-ನಮಸ್ಕಾರಗಳನ್ನು ಮಾಡಬೇಕು.

ನಾರಾಯಣಂ ವಾ ರುದ್ರಂ ವಾ ಬ್ರಹ್ಮಾಣಮಥವಾಪಿ ವಾ ।
ವಾರುಣಂ ಮನ್ತ್ರಸೂಕ್ತಂ ವಾ ಪ್ರಾಗ್ಭೋಜನಮಥಾಪಿ ವಾ ॥೯೮೪॥

ಭೋಜನಕ್ಕೆ ಮೊದಲು ನಾರಾಯಣಸೂಕ್ತವನ್ನಾಗಲೀ, ರುದ್ರಸೂಕ್ತ ವನ್ನಾಗಲೀ, ಬ್ರಹ್ಮಸೂಕ್ತವನ್ನಾಗಲೀ, ವಾರುಣಸೂಕ್ತವನ್ನಾಗಲೀ ಹೇಳಬೇಕು.

ವೀರಘ್ನಮೃಷಭಂ ವಾಪಿ ತಥಾ ಚಾಪ್ಯಘಮರ್ಷಣಮ್।
ಗಾಯತ್ರೀಂ ಮಮ ದೇವೀಂ ವಾ ಸಾವಿತ್ರೀಂ ವಾ ಜಪೇತ್ತತಃ।
ಶತಂ ವಾಷ್ಟಶತಂ ವಾಪಿ ಸಹಸ್ರಮಥವಾ ಪರಮ್ ॥೯೮೫॥

ವೀರಘ್ನಸೂಕ್ತವನ್ನಾಗಲೀ, ಋಷಭಸೂಕ್ತವನ್ನಾಗಲೀ, ಅಘಮರ್ಷಣ ಸೂಕ್ತವನ್ನಾಗಲೀ, ಗಾಯತ್ರೀಮಂತ್ರವನ್ನಾಗಲೀ, ನನ್ನ ಸಂಬಂಧವಾದ ವಿಷ್ಣುಗಾಯತ್ರೀಮಂತ್ರವನ್ನಾಗಲೀ, ಸಾವಿತ್ರೀದೇವಿಯ ಮಂತ್ರವನ್ನಾಗಲೀ ನೂರುಸಲ; ನೂರೆಂಟುಸಲ, ಅವಕಾಶವಿದ್ದಲ್ಲಿ ಸಾವಿರಸಲ ಜಪಿಸಬೇಕು.

ತತೋ ಮಧ್ಯಾಹ್ನಕಾಲೇ ವೈ ಪಾಯಸಂ ಯಾವಕಂ ಹಿ ವಾ।
ಪಾಚಯಿತ್ವಾ ಪ್ರಯತ್ನೇನ ಪ್ರಯತಃ ಸುಸಮಾಹಿತಃ ॥೯೮೬॥

ಮಧ್ಯಾಹ್ನಕಾಲದಲ್ಲಿ ಪವಿತ್ರನಾಗಿ ಮತ್ತು ಏಕಾಗ್ರಚಿತ್ತನಾಗಿ ಯಾವಕವನ್ನಾಗಲೀ (ಯವಧಾನ್ಯದಿಂದ ಮಾಡುವ ಗಂಜಿ) ಪಾಯಸವನ್ನಾಗಲೀ ಸಿದ್ಧಪಡಿಸಬೇಕು.

ಪಾತ್ರಂ ತು ಸುಸಮಾದಾಯ ಸೌವರ್ಣಂ ರಾಜತಂ ತು ವಾ।
ತಾಮ್ರಂ ವಾ ಮೃಣ್ಮಯಂ ವಾಪಿ ಔದುಮ್ಬರಮಥಾಪಿ ವಾ ॥೯೮೭॥
ವೃಕ್ಷಾಣಾಂ ಯಜ್ಞಿಯಾನಾಂ ತು ಪರ್ಣೈರಾರ್ದ್ರೈರಕುತ್ಸಿತೈಃ।
ಪುಟಕೇನ ತು ಗುಪ್ತೇನ ಚರೇದ್ಭೈಕ್ಷಂ ಸಮಾಹಿತಃ ॥೯೮೮॥

ಹಾಗೆ ಅಡಿಗೆಮಾಡಿಕೊಳ್ಳಲು ಸಾಧ್ಯವಾಗದಿದ್ದರೆ ಚಿನ್ನದ ಪಾತ್ರೆಯನ್ನಾಗಲೀ, ಬೆಳ್ಳಿಯ ಪಾತ್ರೆಯನ್ನಾಗಲೀ, ತಾಮ್ರದ ಪಾತ್ರೆಯನ್ನಾಗಲೀ, ಮಣ್ಣಿನ ಪಾತ್ರೆಯನ್ನಾಗಲೀ, ಅತ್ತಿಯ ಮರದಿಂದ ಮಾಡಿದ ಪಾತ್ರೆಯನ್ನಾಗಲೀ, ಯಜ್ಞಕ್ಕೆ ಸಂಬಂಧಿಸಿದ ವೃಕ್ಷಗಳ ಹಸಿಎಲೆಗಳಿಂದ ಮಾಡಿದ ದೊನ್ನೆಯನ್ನಾಗಲೀ ತೆಗೆದುಕೊಂಡು ಮೇಲ್ಭಾಗವನ್ನು ಮುಚ್ಚಿ ಏಕಾಗ್ರಚಿತ್ತನಾಗಿ ಭಿಕ್ಷೆಯನ್ನು ಮಾಡಬೇಕು.

ಬ್ರಾಹ್ಮಣಾನಾಂ ಗೃಹಾಣಾಂ ತು ಸಪ್ತಾನಾಂ ನಾಪರಂ ವ್ರಜೇತ್।
ಗೋದೋಹಮಾತ್ರಂ ತಿಷ್ಠೇತ್ತು ವಾಗ್ಯತಃ ಸಂಯತೇನ್ದ್ರಿಯಃ ॥೯೮೯॥

ಏಳು ಬ್ರಾಹ್ಮಣರ ಮನೆಗಳಲ್ಲಿ ಭಿಕ್ಷೆಮಾಡಬೇಕು. ಎಂಟನೆಯ ಮನೆಗೆ ಹೋಗಬಾರದು. ಮನೆಯ ಬಾಗಿಲಿಗೆ ಹೋಗಿ ಇಂದ್ರಿಯಗಳನ್ನು ಸ್ವಾಧೀನದಲ್ಲಿಟ್ಟುಕೊಂಡು ಮೌನಿಯಾಗಿ ನಿಂತಿರಬೇಕು. ಹಸುವನ್ನು ಕರೆಯುವಷ್ಟು ಹೊತ್ತು ಮಾತ್ರ ಒಂದು ಮನೆಯ ಬಾಗಿಲಿನಲ್ಲಿ ನಿಲ್ಲಬೇಕು. (ಆ ವೇಳೆಯೊಳಗೆ ಭಿಕ್ಷೆಯನ್ನು ಹಾಕದಿದ್ದರೆ ಅಲ್ಲಿಂದ ಹೊರಡಬೇಕು.)

ನ ಹಸೇನ್ನ ಚ ವೀಕ್ಷೇತ ನಾಭಿಭಾಷೇತ ವಾ ಸ್ತ್ರಿಯಮ್ ॥೯೯೦॥

ಭಿಕ್ಷೆಗೆ ಹೋದ ಪುರುಷನು ನಗಕೂಡದು. ಅತ್ತಲಿತ್ತ ನೋಡಬಾರದು ಮತ್ತು ಯಾವ ಸ್ತ್ರೀಯೊಡನೆಯೂ ಮಾತನಾಡಬಾರದು.

ದೃಷ್ಟ್ವಾ ಮೂತ್ರಂ ಪುರೀಷಂ ವಾ ಚಾಣ್ಡಾಲಂ ವಾ ರಜಸ್ವಲಾಮ್।
ಪತಿತಂ ಚ ತಥಾ ಶ್ವಾನಮಾದಿತ್ಯಮವಲೋಕಯೇತ್ ॥೯೧॥

ಮೂತ್ರವನ್ನಾಗಲೀ, ಮಲವನ್ನಾಗಲೀ, ಚಂಡಾಲನನ್ನಾಗಲೀ, ರಜಸ್ವಲೆಯನ್ನಾಗಲೀ, ಪತಿತನನ್ನಾಗಲೀ, ನಾಯಿಯನ್ನಾಗಲೀ ನೋಡಿದಲ್ಲಿ ಒಡನೆಯೇ ದೋಷಪರಿಹಾರಕ್ಕಾಗಿ ಸೂರ್ಯನನ್ನು ನೋಡಬೇಕು.

ತತಸ್ತ್ವಾವಸಥಂ ಪ್ರಾಪ್ತೋ ಭಿಕ್ಷಾಂ ನಿಕ್ಷಿಪ್ಯ ಭೂತಲೇ।
ಪ್ರಕ್ಷಾಲ್ಯ ಪಾದಾವಾಜಾನ್ವೋರ್ಹಸ್ತಾವಾಕೂರ್ಪರಂ ಪುನಃ।
ಆಚಮ್ಯ ವಾರಿಣಾ ತೇನ ವಹ್ನಿಂ ವಿಪ್ರಾಂಶ್ಚ ಪೂಜಯೇತ್ ॥೯೨॥

ಹೀಗೆ ಏಳು ಮನೆಗಳಲ್ಲಿ ಭಿಕ್ಷಾಟನೆಮಾಡಿಕೊಂಡು ಮನೆಗೆ ಹೋಗಿ ಭೂಮಿಯ ಮೇಲೆ ಭಿಕ್ಷೆಯನ್ನಿಟ್ಟು, ಮೊಣಕಾಲಿನವರೆಗೆ ಕಾಲುಗಳನ್ನೂ ಮೊಣಕೈಯಿನವರೆಗೆ ಕೈಗಳನ್ನೂ ತೊಳೆದುಕೊಂಡು, ಪುನಃ ಆಚಮನಮಾಡಿ ಅಗ್ನಿಯನ್ನೂ ಬ್ರಾಹ್ಮಣರನ್ನೂ ಪೂಜಿಸಬೇಕು.

ಪಞ್ಚಸಪ್ತಾಥವಾ ಕುರ್ಯಾದ್ಭಾಗಾನ್ಭೈಕ್ಷಸ್ಯ ತಸ್ಯ ವೈ।
ತೇಷಾಮನ್ಯತಮಂ ಪಿಣ್ಡಮಾದಿತ್ಯಾಯ ನಿವೇದಯೇತ್ ॥೯೩॥

ತಂದ ಆ ಭಿಕ್ಷೆಯನ್ನು ಐದು ಅಥವಾ ಏಳು ಭಾಗಗಳನ್ನಾಗಿ ವಿಭಾಗಿಸಬೇಕು. ಅವುಗಳಲ್ಲಿ ಒಂದನ್ನು ಸೂರ್ಯನಿಗೆ ನಿವೇದನಮಾಡಬೇಕು.

ಬ್ರಹ್ಮಣೇ ಚಾಗ್ನಯೇ ಚೈವ ಸೋಮಾಯ ವರುಣಾಯ ಚ ।
ವಿಶ್ವೇಭ್ಯಶ್ಚೈವ ದೇವೇಭ್ಯೋ ದದ್ಯಾದನ್ನಂ ಯಥಾಕ್ರಮಮ್ ॥೯೪॥

ಅನುಕ್ರಮವಾಗಿ ಬ್ರಹ್ಮ-ಅಗ್ನಿ-ಸೋಮ-ವರುಣರಿಗೂ, ವಿಶ್ವೇದೇವತೆಗಳಿಗೂ ಒಂದೊಂದು ಭಾಗವನ್ನು ನಿವೇದನಮಾಡಬೇಕು.

ಅವಶಿಷ್ಟಮಥೈಕಂ ತು ವಕ್ತ್ರಮಾತ್ರಂ ಪ್ರಕಲ್ಪಯೇತ್ ॥೯೫॥

ಉಳಿದ ಕಡೆಯ ಗ್ರಾಸವು ಬಾಯೊಳಗೆ ಸುಲಭವಾಗಿ ಹೋಗುವಷ್ಟು ಗಾತ್ರದಲ್ಲಿರಬೇಕು.

ಅಙ್ಗುಲ್ಯಗ್ರೇ ಸ್ಥಿತಂ ಪಿಣ್ಡಂ ಗಾಯತ್ರ್ಯಾ ಚಾಭಿಮನ್ತ್ರಯೇತ್।
ಅಙ್ಗುಲೀಭಿಸ್ತ್ರಿಭಿಃ ಪಿಣ್ಡಂ ಪ್ರಾಶ್ನೀಯಾತ್ಪ್ರಾಙ್ಮುಖಃ ಶುಚಿಃ ॥೯೬॥

ಬಳಿಕ ಪವಿತ್ರವಾದ ಭಾವದಿಂದ ಪೂರ್ವಾಭಿಮುಖವಾಗಿ ಕುಳಿತು, ಮೂರು ಬೆರಳುಗಳ ಅಗ್ರಭಾಗದಲ್ಲಿ ಆ ಒಂದು ಗ್ರಾಸವನ್ನು ಇಟ್ಟುಕೊಂಡು ಗಾಯತ್ರೀಮಂತ್ರದಿಂದ ಅದನ್ನು ಅಭಿಮಂತ್ರಿಸಬೇಕು. ಅನಂತರ ಮೂರು ಬೆರಳುಗಳ (ಅಂಗುಷ್ಠಸಹಿತವಾದ ಮಧ್ಯದ ಎರಡು ಬೆರಳುಗಳ) ಮೂಲಕವೇ ಆ ತುತ್ತನ್ನು ಭಕ್ಷಿಸಬೇಕು.

ಯಥಾ ಚ ವರ್ಧತೇ ಸೋಮೋ ಹ್ರಸತೇ ಚ ಯಥಾ ಪುನಃ।
ತಥಾ ಪಿಣ್ಡಾಶ್ಚ ವರ್ಧನ್ತೇ ಹ್ರಸನ್ತೇ ಚ ದಿನೇ ದಿನೇ ॥೯೭॥

ಆ ಗ್ರಾಸವು ಚಂದ್ರನು ಶುಕ್ಲಪಕ್ಷದಲ್ಲಿ ವರ್ಧಿಸುವಂತೆ ಹೆಚ್ಚುತ್ತಾ ಹೋಗಬೇಕು. ಕೃಷ್ಣಪಕ್ಷದಲ್ಲಿ ಕ್ಷೀಣಿಸುವಂತೆ ಕಮ್ಮಿಯಾಗುತ್ತಾ ಹೋಗಬೇಕು.*

ತ್ರಿಕಾಲಂ ಸ್ನಾನಮಸ್ಯೋಕ್ತಂ ದ್ವಿಕಾಲಮಥವಾ ಸಕೃತ್।
ಬ್ರಹ್ಮಚಾರೀ ಸದಾ ವಾಪಿ ನ ಚ ವಸ್ತ್ರಂ ಪ್ರಪೀಡಯೇತ್ ॥೯೮॥

ಚಾಂದ್ರಾಯಣವ್ರತವನ್ನು ಆಚರಿಸುವಾಗ ಮೂರು ಕಾಲಗಳಲ್ಲಿಯೂ ಸ್ನಾನಮಾಡಬೇಕೆನ್ನುವ ನಿಯಮವಿದೆ. ಸಾಧ್ಯವಾಗದಿದ್ದಲ್ಲಿ ಎರಡು ಹೊತ್ತು ಮಾಡಬಹುದು. ಅದೂ ಸಾಧ್ಯವಾಗದಿದ್ದಲ್ಲಿ ಒಂದೇ ಹೊತ್ತು ಸ್ನಾನಮಾಡಬಹುದು. ವ್ರತವು ಪೂರ್ತಿಯಾಗುವವರೆಗೂ ಬ್ರಹ್ಮಚರ್ಯವ್ರತದಲ್ಲಿಯೇ ಇರಬೇಕು. ವಸ್ತ್ರವನ್ನು ಹಿಂಡಬಾರದು.

ಸ್ಥಾನೇ ನ ದಿವಸಂ ತಿಷ್ಠೇದ್ರಾತ್ರೌ ವೀರಾಸನಂ ವ್ರಜೇತ್।
ಭವೇತ್ಸ್ಥಣ್ಡಿಲಶಾಯೀ ವಾಪ್ಯಥವಾ ವೃಕ್ಷಮೂಲಕಃ ॥೯೯॥

ಹಗಲಿನಲ್ಲಿ ಒಂದೇ ಸ್ಥಳದಲ್ಲಿರಬಾರದು. ರಾತ್ರಿಯಲ್ಲಿ ವೀರಾಸನದಲ್ಲಿ ಕುಳಿತುಕೊಳ್ಳಬೇಕು. ಬರೀ ನೆಲದ ಮೇಲೆ ಮಲಗಬೇಕು ಅಥವಾ ಮರದ ಬುಡದಲ್ಲಾದರೂ ಮಲಗಬಹುದು.

---

*ಶುಕ್ಲಪಕ್ಷದ ಪ್ರಥಮೆಯಂದು ಒಂದು ತುತ್ತಾದರೆ ದ್ವಿತೀಯೆಯಂದು ಎರಡು ತುತ್ತುಗಳು. ಹುಣ್ಣಿಮೆಯಂದು ಹದಿನೈದು ತುತ್ತುಗಳು. ಪುನಃ ಕೃಷ್ಣಪಕ್ಷದ ಪ್ರಥಮೆಯಿಂದ ಒಂದೊಂದು ತುತ್ತು ಕಡಿಮೆಯಾಗುತ್ತಾ ಹೋಗುತ್ತದೆ. ಪ್ರಥಮೆಯ ದಿನ ಹದಿನಾಲ್ಕು ತುತ್ತುಗಳಾದರೆ ಚತುರ್ದಶಿಯ ದಿವಸಕ್ಕೆ ಒಂದು ತುತ್ತಾಗುತ್ತದೆ. ಅಮಾವಾಸ್ಯೆಯಂದು ಉಪವಾಸವಿದ್ದು ಈ ವ್ರತವನ್ನು ಮುಗಿಸಬೇಕು.

ವಲ್ಕಲಂ ಯದಿ ವಾ ಕ್ಷೌಮಂ ಶಾಣಂ ಕಾರ್ಪಾಸಕಂ ತಥಾ।
ಆಚ್ಛಾದನಂ ಭವೇತ್ತಸ್ಯ ವಸ್ತ್ರಾರ್ಥಂ ಪಾಣ್ಡುನನ್ದನ ॥೧೦೦೦॥

ಪಾಂಡುಪುತ್ರನೇ! ಆ ಸಮಯದಲ್ಲಿ ಅವನು ನಾರುಮಡಿ, ರೇಷ್ಮೆ ಸೆಣಬು, ಹತ್ತಿ ಇವುಗಳಿಂದ ಮಾಡಿದ ವಸ್ತ್ರಗಳನ್ನು ಧರಿಸಬಹುದು.

ಏವಂ ಚಾನ್ದ್ರಾಯಣೇ ಪೂರ್ಣೇ ಮಾಸಸ್ಯಾನ್ತೇ ಪ್ರಯತ್ನವಾನ್।
ಬ್ರಾಹ್ಮಣಾನ್ಭೋಜಯೇದ್ಭಕ್ತ್ಯಾ ದದ್ಯಾಚ್ಚೈವ ಚ ದಕ್ಷಿಣಾಮ್ ॥೧೦೦೧॥

ಹೀಗೆ ಮಾಸದ ಕಡೆಯಲ್ಲಿ ಚಾಂದ್ರಾಯಣವ್ರತವು ಪೂರ್ಣವಾದನಂತರ ಬ್ರಾಹ್ಮಣರಿಗೆ ಭಕ್ತಿಯಿಂದ ಪ್ರಯತ್ನಪೂರ್ವಕವಾಗಿ ಭೋಜನವನ್ನು ಮಾಡಿಸಬೇಕು ಮತ್ತು ದಕ್ಷಿಣೆಯನ್ನು ಕೊಡಬೇಕು.

ಚಾನ್ದ್ರಾಯಣೇನ ಚೀರ್ಣೇನ ಯತ್ಕೃತಂ ತೇನ ದುಷ್ಕೃತಮ್ ॥
ತತ್ಸರ್ವಂ ತತ್ಕ್ಷಣಾದೇವ ಭಸ್ಮೀಭವತಿ ಕಾಷ್ಠವತ್ ॥೧೦೦೨॥

ಚಾಂದ್ರಾಯಣವ್ರತಾಚರಣೆಯಿಂದ ಮನುಷ್ಯನು ಮಾಡಿದ ಪಾಪಗಳೆಲ್ಲವೂ–ಒಣಗಿದ ಕಟ್ಟಿಗೆಯು ಕ್ಷಣಮಾತ್ರದಲ್ಲಿ ಭಸ್ಮವಾಗುವಂತೆ–ಆ ಕ್ಷಣದಲ್ಲಿಯೇ ಭಸ್ಮವಾಗಿಬಿಡುತ್ತವೆ.

ಬ್ರಹ್ಮಹತ್ಯಾ ಚ ಗೋಹತ್ಯಾ ಸುವರ್ಣಸ್ತೈನ್ಯಮೇವ ಚ ।
ಭ್ರೂಣಹತ್ಯಾ ಸುರಾಪಾನಂ ಗುರೋರ್ದಾರವ್ಯತಿಕ್ರಮಃ ॥೧೦೦೩॥
ಏವಮನ್ಯಾನಿ ಪಾಪಾನಿ ಪಾತಕೀಯಾನಿ ಯಾನಿ ಚ ।
ಚಾನ್ದ್ರಾಯಣೇನ ನಶ್ಯನ್ತಿ ವಾಯುನಾ ಪಾಂಸವೋ ಯಥಾ ॥೧೦೦೪॥

ಬ್ರಹ್ಮಹತ್ಯೆ, ಗೋಹತ್ಯೆ, ಸ್ವರ್ಣಸ್ತೇಯ, ಭ್ರೂಣಹತ್ಯೆ, ಸುರಾಪಾನ, ಗುರುತಲ್ಪಗಮನ–ಇವೇ ಮುಂತಾದ ಇನ್ನೂ ಅನೇಕಮಹಾಪಾಪಗಳು–ವಾಯುವಿನ ವೇಗದಿಂದ ಧೂಳು ಹಾರಿಹೋಗುವಂತೆ–ಚಾಂದ್ರಾಯಣ ವ್ರತದ ಆಚರಣೆಯಿಂದ ನಷ್ಟವಾಗಿ ಹೋಗುತ್ತವೆ.

ಅನಿರ್ದಶಾಯಾ ಗೋಃ ಕ್ಷೀರಮೌಷ್ಟ್ರಮಾವಿಕಮೇವ ಚ ।
ಮೃತಸೂತಕಯೋಶ್ಚಾನ್ನಂ ಭುಕ್ತ್ವಾ ಚಾನ್ದ್ರಾಯಣಂ ಚರೇತ್ ॥

ಯಾವ ಹಸುವು ಈಯ್ದು ಹತ್ತು ದಿವಸಗಳೂ ಆಗಿರುವುದಿಲ್ಲವೋ ಅಂತಹ ಹಸುವಿನ, ಒಂಟೆಯ ಮತ್ತು ಕುರಿಯ ಹಾಲನ್ನು ಕುಡಿದವನು,

ಮರಣಾಶೌಚ-ಜಾತಾಶೌಚಗಳಿರುವ ಮನೆಗಳಲ್ಲಿ ಊಟಮಾಡಿದವನು ಪಾಪಪರಿಹಾರಕ್ಕಾಗಿ ಚಾಂದ್ರಾಯಣವ್ರತವನ್ನು ಆಚರಿಸಬೇಕು.

ಉಪಪಾತಕಿನಶ್ಚಾನ್ನಂ ಪತಿತಾನ್ನಂ ತಥೈವ ಚ ।
ಶೂದ್ರಸ್ಯೋಚ್ಛೇಷಣಂ ಚೈವ ಭುಕ್ತ್ವಾ ಚಾನ್ದ್ರಾಯಣಂ ಚರೇತ್ ॥

ಉಪಪಾತಕಗಳನ್ನು ಮಾಡಿದವನ ಅನ್ನವನ್ನೂ, ಪತಿತನ ಅನ್ನವನ್ನೂ, ಶೂದ್ರನ ಉಚ್ಛಿಷ್ಟವನ್ನೂ ಊಟಮಾಡಿದವನು ಚಾಂದ್ರಾಯಣವ್ರತವನ್ನು ಆಚರಿಸಬೇಕು.

ಆಕಾಶಸ್ಥಂ ತು ಹಸ್ತಸ್ಥಮಧಃಸ್ರುಸ್ತಂ ತಥೈವ ಚ ।
ಪರಹಸ್ತಸ್ಥಿತಂ ಚೈವ ಭುಕ್ತ್ವಾ ಚಾನ್ದ್ರಾಯಣಂ ಚರೇತ್ ॥೧೦೦೭॥

ಆಕಾಶದಲ್ಲಿರುವ, ಕೈಯಲ್ಲಿರುವ, ಕೈಯಿಂದ ಜಾರಿರುವ, ಇತರರ ಕೈಯಲ್ಲಿರುವ ಪದಾರ್ಥಗಳನ್ನು ಭಕ್ಷಿಸಿದರೆ–ಚಾಂದ್ರಾಯಣವ್ರತವನ್ನು ಮಾಡಬೇಕು. (ಬೆಳೆದುಬಂದಿರುವ ಸಂಪ್ರದಾಯದಂತೆ ಇದರ ಅರ್ಥವನ್ನು ಹೀಗೆ ವಿವರಿಸಬಹುದಾಗಿದೆ. ಎತ್ತರದಿಂದ ಬಾಯಿಗೆ ತುತ್ತನ್ನು ಹಾಕಿಕೊಳ್ಳಬಾರದು. ಕೈಯಲ್ಲಿರುವ ತುತ್ತನ್ನು ತೂಗಾಡಿಸುತ್ತಾ ತಿನ್ನಬಾರದು. ಕೆಳಕ್ಕೆ ಬಿದ್ದುದನ್ನು ತಿನ್ನಬಾರದು. ಇತರರು ತಿನ್ನಲು ಕೈಯಲ್ಲಿ ಇಟ್ಟುಕೊಂಡಿರುವ ಆಹಾರಪದಾರ್ಥವನ್ನು ತಿನ್ನಬಾರದು.)

ಅಥಾಗ್ರೇದಿಧಿಷೋರನ್ನಂ ದಿಧಿಷೂಪಪತೇಸ್ತಥಾ ।
ಪರಿವೇತ್ತುಸ್ತಥಾ ಚಾನ್ನಂ ಪರಿವಿತ್ತಾನ್ನಮೇವ ಚ ॥೧೦೦೮॥

ಕುಣ್ಡಾನ್ನಂ ಗೋಲಕಾನ್ನಂ ಚ ದೇವಲಾನ್ನಂ ತಥೈವ ಚ ।
ತಥಾ ಪುರೋಹಿತಸ್ಯಾನ್ನಂ ಭುಕ್ತ್ವಾ ಚಾನ್ದ್ರಾಯಣಂ ಚರೇತ್ ॥

ಅಕ್ಕನಿಗೆ ಮದುವೆಯಾಗುವ ಮೊದಲು ಮದುವೆಯಾದ ತಂಗಿಯ, ಸೋದರನು ಮೃತನಾದನಂತರ ಅವನ ಹೆಂಡತಿಯನ್ನು ಮದುವೆಯಾದವನ, ಅಣ್ಣನಿಗೆ ಮದುವೆಯಾಗುವ ಮೊದಲು ಮದುವೆಯಾದ ತಮ್ಮನ, ತಮ್ಮನಿಗೆ ಮದುವೆಯಾದರೂ ಮದುವೆಯಾಗದ ಅಣ್ಣನ, ಪತಿಯು ಜೀವಿಸಿರುವಾಗ ಪರಪುರುಷನಿಂದ ಹುಟ್ಟಿದವನ, ವಿಧವೆಯಲ್ಲಿ ಜಾರ

ಪುರುಷನಿಂದ ಹುಟ್ಟಿದವನ, ವೇತನಕ್ಕಾಗಿ ದೇವರ ಪೂಜೆಯನ್ನು ಮಾಡುವವನ ಮತ್ತು ಪುರೋಹಿತನ ಅನ್ನವನ್ನು ಊಟಮಾಡಿದರೆ ಚಾಂದ್ರಾಯಣವ್ರತವನ್ನು ಆಚರಿಸಬೇಕು.

ಸುರಾಸವಂ ವಿಷಂ ಸರ್ಪಿರ್ಲಾಕ್ಷಾ ಲವಣಮೇವ ಚ।
ತೈಲಂ ಚಾಪಿ ಚ ವಿಕ್ರೀಣನ್ದ್ವಿಜಶ್ಚಾನ್ದ್ರಾಯಣಂ ಚರೇತ್ ॥೧೧೧೦॥

ಮದಿರೆ, ಆಸವ, ವಿಷ, ತುಪ್ಪ, ಅರಗು, ಉಪ್ಪು, ಎಣ್ಣೆ-ಇವುಗಳನ್ನು ಮಾರುವ ಬ್ರಾಹ್ಮಣನು ಚಾಂದ್ರಾಯಣವ್ರತವನ್ನು ಆಚರಿಸಬೇಕು.

ಏಕೋದ್ದಿಷ್ಟಂ ತು ಯೋ ಭುಙ್ಕ್ತೇ ಜನಮಧ್ಯಗತೋಽಪಿ ಯಃ।
ಭಿನ್ನಭಾಣ್ಡೇಷು ಯೋ ಭುಙ್ಕ್ತೇ ದ್ವಿಜಶ್ಚಾನ್ದ್ರಾಯಣಂ ಚರೇತ್॥೧೧೧೨॥

ಏಕೋದ್ದಿಷ್ಟಶ್ರಾದ್ಧದಲ್ಲಿ (ಮೃತರಿಗೆ ಸತ್ತ ಹನ್ನೊಂದನೆಯ ದಿನ ಮಾಡುವ ಶ್ರಾದ್ಧ) ಊಟಮಾಡಿದ, ಜನಸಮೂಹದ ಮಧ್ಯದಲ್ಲಿ ಊಟಮಾಡಿದ, ಒಡೆದ ಪಾತ್ರೆಯಲ್ಲಿ ಊಟಮಾಡಿದ ಬ್ರಾಹ್ಮಣನು ಚಾಂದ್ರಾಯಣವ್ರತವನ್ನು ಆಚರಿಸಬೇಕು.

ಯೋ ಭುಙ್ಕ್ತೇಽನುಪನೀತೇನ ಯೋ ಭುಙ್ಕ್ತೇ ಚ ಸ್ತ್ರಿಯಾ ಸಹ ।
ಕನ್ಯಯಾ ಸಹ ಯೋ ಭುಙ್ಕ್ತೇ ದ್ವಿಜಶ್ಚಾನ್ದ್ರಾಯಣಂ ಚರೇತ್ ॥

ಉಪನಯನವಾಗದವನ ಜೊತೆಯಲ್ಲಿ, ಕನ್ಯೆಯ ಮತ್ತು ಹೆಂಗಸಿನ ಜೊತೆಯಲ್ಲಿ (ಒಂದೇ ಪಾತ್ರೆಯಲ್ಲಿ) ಊಟಮಾಡಿದ ಬ್ರಾಹ್ಮಣನು ಚಾಂದ್ರಾಯಣವ್ರತವನ್ನು ಆಚರಿಸಬೇಕು.

ಉಚ್ಛಿಷ್ಟಂ ಸ್ಥಾಪಯೇದ್ವಿಪ್ರೋ ಯೋ ಮೋಹಾದ್ಭೋಜನಾನ್ತರೇ ।
ದದ್ಯಾದ್ವಾ ಯದಿ ವಾ ಮೋಹದ್ದ್ವಿಜಶ್ಚಾನ್ದ್ರಾಯಣಂ ಚರೇತ್ ॥

ಯಾವನು ಮೋಹವಶನಾಗಿ ತಾನು ಊಟಮಾಡಿದನಂತರ ಉಳಿದ ಅನ್ನವನ್ನು ಬೇರೆಯವರ ತಟ್ಟೆಗೆ ಹಾಕುವನೋ ಅಥವಾ ಬೇರೆಯವರಿಗೆ ತಿನ್ನಲು ಕೊಡುವನೋ–ಅಂತಹ ಬ್ರಾಹ್ಮಣನು ಚಾಂದ್ರಾಯಣವ್ರತವನ್ನು ಆಚರಿಸಬೇಕು.

ತುಮ್ಬಕೋಶಾತಕಂ ಚೈವ ಪಲಾಣ್ಡುಂ ಗೃಞ್ಜನಂ ತಥಾ।
ಛತ್ರಾಕಂ ಲಶುನಂ ಚೈವ ಭುಕ್ತ್ವಾ ಚಾನ್ದ್ರಾಯಣಂ ಚರೇತ್ ॥

ಯಾವ ಬ್ರಾಹ್ಮಣನು ಹಾಲುಸೋರೆಕಾಯಿಯನ್ನೂ, ಪಡವಲಕಾಯಿಯನ್ನೂ, ಈರುಳ್ಳಿಯನ್ನೂ, ಪಶುವಿನ ಮಾಂಸವನ್ನೂ, ನಾಯಿಕೊಡೆಯನ್ನೂ, ಬೆಳ್ಳುಳ್ಳಿಯನ್ನೂ ತಿನ್ನುವನೋ ಅಂತಹವನು ಚಾಂದ್ರಾಯಣವ್ರತವನ್ನು ಆಚರಿಸಬೇಕು.

ಉದಕ್ಯಯಾ ಶುನಾ ವಾಪಿ ಚಾಣ್ಡಾಲೈರ್ವಾ ದ್ವಿಜೋತ್ತಮಃ ।
ದೃಷ್ಟಮನ್ನಂ ತು ಭುಞ್ಜಾನೋ ದ್ವಿಜಶ್ಚಾನ್ದ್ರಾಯಣಂ ಚರೇತ್ ॥

ರಜಸ್ವಲೆಯಾದ ಹೆಂಗಸು, ನಾಯಿ ಮತ್ತು ಚಾಂಡಾಲರು ನೋಡಿದ ಅನ್ನವನ್ನು ತಿನ್ನುವ ಬ್ರಾಹ್ಮಣನು ಚಾಂದ್ರಾಯಣವ್ರತವನ್ನು ಆಚರಿಸಬೇಕು.

ಯುಧಿಷ್ಠಿರ! ಪೂರ್ವಕಾಲದಲ್ಲಿ ಋಷಿಗಳು ಆತ್ಮಶುದ್ಧಿಗಾಗಿ ಈ ವ್ರತವನ್ನು ಆಚರಿಸುತ್ತಿದ್ದರು. ಇದು ಎಲ್ಲ ಪ್ರಾಣಿಗಳನ್ನೂ ಪರಿಶುದ್ಧಗೊಳಿಸುವುದಾಗಿದೆ ಮತ್ತು ಪುಣ್ಯಪ್ರಾಪಕವಾಗಿದೆ. ಯಾವ ಬ್ರಾಹ್ಮಣನು ಪಾಪಪ್ರಣಾಶಕವಾದ ಈ ವ್ರತವನ್ನು ಇಲ್ಲಿ ಹೇಳಿರುವ ರೀತಿಯಲ್ಲಿ ಆಚರಿಸುವನೋ–ಅಂತಹವನು ಪೂತಾತ್ಮನಾಗಿ ನಿರ್ಮಲಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸನ್ನು ಹೊಂದಿ ಸ್ವರ್ಗಕ್ಕೆ ಹೋಗುತ್ತಾನೆ.”

ವೈಷ್ಣವಧರ್ಮ - ೧೮

ಸರ್ವಹಿತಕಾರಿಯಾದ ಧರ್ಮದ ವರ್ಣನೆ: ದ್ವಾದಶೀವ್ರತದ ಮಹಿಮೆ: ಯುಧಿಷ್ಠಿರನಿಂದ ಶ್ರೀಕೃಷ್ಣನ ಸ್ತುತಿ

ಯುಧಿಷ್ಠಿರನು ಹೇಳುತ್ತಾನೆ:

“ಸರ್ವಭೂತಪತಿಯೇ! ಸರ್ವಪ್ರಾಣಿಗಳಿಂದಲೂ ನಮಸ್ಕೃತನಾದವನೇ! ಶ್ರೀಮಂತನೇ! ಸರ್ವಜ್ಞನೇ! ಸರ್ವಪ್ರಾಣಿಗಳಿಗೂ ಹಿತಕರವಾದ ಧರ್ಮವನ್ನು ಹೇಳು.”

ಶ್ರೀಕೃಷ್ಣನು ಹೇಳುತ್ತಾನೆ:

“ಯುಧಿಷ್ಠಿರ! ಯಾವ ಧರ್ಮವು ದರಿದ್ರಜನರಿಗೂ ಸ್ವರ್ಗಪ್ರಾಪಕವೂ ಸುಖಕರವೂ ಆಗಿರುವುದೋ, ಸರ್ವಪಾಪಗಳನ್ನೂ ವಿನಾಶಗೊಳಿಸುವುದೋ–ಅಂತಹ ಧರ್ಮವನ್ನು ಹೇಳುವೆನು; ಕೇಳು:

ಯಾವ ಮನುಷ್ಯನು ಒಂದು ವರ್ಷದವರೆಗೆ ಪ್ರತಿನಿತ್ಯವೂ ಒಂದೇ ಹೊತ್ತುಊಟಮಾಡುತ್ತಾ ಬ್ರಹ್ಮಚರ್ಯವ್ರತನಿಷ್ಠನಾಗಿರುವನೋ, ಕ್ರೋಧವನ್ನು ಜಯಿಸಿರುವನೋ, ನೆಲದ ಮೇಲೆ ಮಲಗುವನೋ, ಜಿತೇಂದ್ರಿಯನಾಗಿರುವನೋ, ಸ್ನಾನಮಾಡಿ ಪವಿತ್ರವಾಗಿರುವನೋ, ಏಕಾಗ್ರಚಿತ್ತನಾಗಿರುವನೋ, ಸತ್ಯನಿಷ್ಠನಾಗಿರುವನೋ, ಇತರರಲ್ಲಿ ದೋಷವನ್ನೆಣಿಸುವುದಿಲ್ಲವೋ, ನನ್ನಲ್ಲಿಯೇ ನೆಟ್ಟಮನಸ್ಸುಳ್ಳವನಾಗಿರುವನೋ, ನನ್ನನ್ನೇ ಪ್ರತಿನಿತ್ಯವೂ ಅರ್ಚಿಸುತ್ತಿರುವನೋ, ಎರಡು ಸಂಧ್ಯಾಕಾಲಗಳಲ್ಲಿಯೂ ಏಕಾಗ್ರಚಿತ್ತನಾಗಿ ನನ್ನ ಸಂಬಂಧವಾದ ಗಾಯತ್ರಿಯನ್ನು ಜಪಿಸುವನೋ, **ನಮೋ ಬ್ರಹ್ಮಣ್ಯ ದೇವಾಯ ಗೋಬ್ರಾಹ್ಮಣಹಿತಾಯ ಚ । ಜಗದ್ಧಿತಾಯ ಕೃಷ್ಣಾಯ ಗೋವಿನ್ದಾಯ ನಮೋ ನಮಃ ॥** ಎಂಬ ಮಂತ್ರವನ್ನು ಹೇಳಿಕೊಂಡು ನನ್ನನ್ನು ಬಾರಿಬಾರಿಗೂ ನಮಸ್ಕರಿಸುವನೋ, ಮೊದಲು ಬ್ರಾಹ್ಮಣನನ್ನು ಅಗ್ರಾಸನದಲ್ಲಿ ಕುಳ್ಳಿರಿಸಿ ಭೋಜನವನ್ನು ಮಾಡಿಸಿ ಅನಂತರ ತಾನು ಮೌನಿಯಾಗಿ ಕುಳಿತು ಯಾವಕವನ್ನೋ (ಗಂಜಿಯನ್ನೋ) ಅಥವಾ ಭಿಕ್ಷಾನ್ನವನ್ನೋ ಭೋಜನಮಾಡುವನೋ, '**ನಮೋಽಸ್ತು ವಾಸುದೇವಾಯ**'-ಎಂದು ಹೇಳಿಕೊಂಡು ಬ್ರಾಹ್ಮಣರ ಕಾಲುಗಳನ್ನು ಮುಟ್ಟಿ ನಮಸ್ಕರಿಸುವನೋ, ಒಂದೊಂದು ಮಾಸವು ಮುಗಿದನಂತರವೂ (ಮಾಸಸಂಕ್ರಮಣಕಾಲದಲ್ಲಿ) ಪರಿಶುದ್ಧರಾದ ಬ್ರಾಹ್ಮಣರಿಗೆ ಭೋಜನಮಾಡಿಸುವನೋ, ವರ್ಷವು ಮುಗಿದನಂತರ ವ್ರತದ ದಕ್ಷಿಣಾರೂಪವಾಗಿ ಬ್ರಾಹ್ಮಣರಿಗೆ ಬೆಣ್ಣೆಯಿಂದ ಮಾಡಿದ ಗೋವನ್ನಾಗಲೀ ಎಳ್ಳಿನಿಂದ ಮಾಡಿದ ಧೇನುವನ್ನಾಗಲೀ ದಾನಮಾಡುವನೋ, ಬ್ರಾಹ್ಮಣರ ಕೈಯಿಂದ ಬೀಳುವ ಸುವರ್ಣ ಸಹಿತವಾದ ನೀರನ್ನು ಪ್ರೋಕ್ಷಣೆಮಾಡಿಕೊಳ್ಳುವನೋ-ಅಂತಹವನಿಗೆ ಪ್ರಾಪ್ತವಾಗುವ ಪುಣ್ಯಫಲವನ್ನು ಕೇಳು.

ತಿಳಿಯದೇ ಅಥವಾ ತಿಳಿದೂ ಮಾಡಿದ ಹತ್ತು ಜನ್ಮಗಳ ಪಾಪವು ಈ ವ್ರತಾನುಷ್ಠಾನದಿಂದ ಬಹಳ ಬೇಗ ಪರಿಹಾರವಾಗುತ್ತದೆ. ಈ ವಿಷಯದಲ್ಲಿ ಪುನಃ ವಿಚಾರಿಸಬೇಕಾದ ಪ್ರಮೇಯವೇ ಇಲ್ಲ."

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

“ಮಾಧವನೇ! ಎಲ್ಲ ಉಪವಾಸಗಳಿಗಿಂತಲೂ ಅತ್ಯಂತ ಶ್ರೇಯಸ್ಕರವಾದುದೂ, ಮಹಾಫಲದಾಯಕವಾದುದೂ, ಕಲ್ಯಾಣಕ್ಕೆ (ಮೋಕ್ಷಕ್ಕೆ) ಸರ್ವೋತ್ತಮವಾದ ಸಾಧನವೂ ಆಗಿರುವ ಉಪವಾಸವು ಯಾವುದೆಂಬುದನ್ನು ಹೇಳುವ ಕೃಪೆಮಾಡು.”

ಶ್ರೀಕೃಷ್ಣನು ಹೇಳುತ್ತಾನೆ:

“ಹಿಂದೆ ನಾನು ನಾರದರಿಗೆ ಇದೇ ವಿಷಯವನ್ನೇ ಹೇಳಿದ್ದೆನು. ಈಗ ನನ್ನ ಭಕ್ತನಾಗಿರುವ ನಿನಗೂ ಹೇಳುವೆನು; ಏಕಾಗ್ರಚಿತ್ತನಾಗಿ ಕೇಳು. ಯಾವನು ಪರಿಶುದ್ಧನಾಗಿ ನನ್ನ ಪಂಚಮಿಯೆಂದು ಪ್ರಸಿದ್ಧವಾದ ದಿವಸಗಳಲ್ಲಿ ನನ್ನನ್ನು ಮೂರುಕಾಲಗಳಲ್ಲಿಯೂ ಪೂಜೆಮಾಡುತ್ತಾ ಉಪವಾಸ ವಿರುವನೋ–ಅವನು ಸಮಸ್ತಯಜ್ಞಗಳನ್ನೂ ಮಾಡಿದ ಫಲವನ್ನು ಪಡೆದು ನನ್ನ ಲೋಕದಲ್ಲಿ ಶ್ರೇಷ್ಠತ್ವವನ್ನು ಹೊಂದುತ್ತಾನೆ.

ಪರ್ವದ್ವಯಂ ಚ ದ್ವಾದಶ್ಯೌ ಶ್ರವಣಂ ಚ ನರಾಧಿಪ ।
ಮತ್ಪಞ್ಚಮೀತಿ ವಿಖ್ಯಾತಾ ಮತ್ಪ್ರಿಯಾ ಚ ವಿಶೇಷತಃ ॥೧೦೩೦॥

ಅಮಾವಾಸ್ಯೆ ಮತ್ತು ಹುಣ್ಣಿಮೆಗಳು, ಶುಕ್ಲ-ಕೃಷ್ಣದ್ವಾದಶಿಗಳು, ಶ್ರವಣನಕ್ಷತ್ರವಿರುವ ತಿಥಿ–ಈ ಐದಕ್ಕೆ ನನ್ನ ಐದು ತಿಥಿಗಳೆಂದು ಹೇಳುತ್ತಾರೆ. ಈ ತಿಥಿಗಳು ನನಗೆ ಬಹಳ ಪ್ರಿಯವಾದುವುಗಳು.

ಆದುದರಿಂದ ಬ್ರಾಹ್ಮಣಶ್ರೇಷ್ಠರು ನನ್ನಲ್ಲಿಯೇ ನೆಟ್ಟಮನಸ್ಸುಳ್ಳವರಾಗಿ ನನ್ನ ಪ್ರಸನ್ನತೆಗಾಗಿ ಈ ಐದು ತಿಥಿಗಳಲ್ಲಿ ಉಪವಾಸವನ್ನು ಮಾಡಬೇಕು.

ನನ್ನ ಭಕ್ತರಿಗೆ ಈ ಐದು ತಿಥಿಗಳಲ್ಲಿ ಉಪವಾಸಮಾಡಲು ಸಾಧ್ಯವಾಗದಿದ್ದರೆ ದ್ವಾದಶಿಯಂದಾದರೂ ಮಾಡಬೇಕು. ಇದರಿಂದ ನಾನು ಬಹಳ ಪ್ರಸನ್ನನಾಗುತ್ತೇನೆ. ಮಾರ್ಗಶೀರ್ಷಮಾಸದ ದ್ವಾದಶಿಯ ದಿನ ಹಗಲು-ರಾತ್ರಿ ಉಪವಾಸವಿದ್ದು ಕೇಶವನೆಂಬ ಹೆಸರಿನಿಂದ ನನ್ನನ್ನು ಪೂಜಿಸಿದರೆ ಅಶ್ವಮೇಧಯಜ್ಞವನ್ನು ಮಾಡಿದ ಫಲವು ಪ್ರಾಪ್ತವಾಗುತ್ತದೆ. ಪುಷ್ಯಮಾಸದ ದ್ವಾದಶಿಯಲ್ಲಿ ನಾರಾಯಣನೆಂಬ ಹೆಸರಿನಿಂದ ನನ್ನನ್ನು

ಪೂಜಿಸಿದರೆ ವಾಜಿಮೇಧಯಜ್ಞಮಾಡಿದ ಫಲವು ಲಭಿಸುತ್ತದೆ. ಮಾಘಮಾಸದ ದ್ವಾದಶಿಯಲ್ಲಿ ಹಗಲು-ರಾತ್ರಿ ಉಪವಾಸವಿದ್ದು ಮಾಧವ ನೆಂಬ ಹೆಸರಿನಿಂದ ನನ್ನನ್ನು ಪೂಜಿಸಿದರೆ ರಾಜಸೂಯಯಾಗಮಾಡಿದ ಫಲವು ಲಭಿಸುತ್ತದೆ. ಫಾಲ್ಗುಣಮಾಸದ ದ್ವಾದಶಿಯಲ್ಲಿ ಹಗಲು-ರಾತ್ರಿ ಉಪವಾಸವಿದ್ದು ಗೋವಿಂದನೆಂಬ ಹೆಸರಿನಿಂದ ನನ್ನನ್ನು ಪೂಜಿಸಿದರೆ ಅತಿರಾತ್ರಯಾಗವನ್ನು ಮಾಡಿದ ಫಲವು ಲಭಿಸುತ್ತದೆ. ಚೈತ್ರಮಾಸದ ದ್ವಾದಶಿಯಲ್ಲಿ ಹಗಲು-ರಾತ್ರಿ ಉಪವಾಸವಿದ್ದು ವಿಷ್ಣುವೆಂಬ ಹೆಸರಿನಿಂದ ನನ್ನನ್ನು ಪೂಜಿಸಿದರೆ ಪೌಂಡರೀಕಯಾಗಮಾಡಿದ ಫಲವು ಲಭಿಸುತ್ತದೆ. ವೈಶಾಖಮಾಸದ ದ್ವಾದಶಿಯಲ್ಲಿ ಹಗಲು-ರಾತ್ರಿ ಉಪವಾಸವಿದ್ದು ಮಧುಸೂದನನೆಂಬ ಹೆಸರಿನಿಂದ ನನ್ನನ್ನು ಪೂಜಿಸಿದರೆ ಅಗ್ನಿಷ್ಟೋಮಯಾಗ ವನ್ನು ಮಾಡಿದ ಫಲವು ಪ್ರಾಪ್ತವಾಗುತ್ತದೆ. ಜ್ಯೇಷ್ಠಮಾಸದ ದ್ವಾದಶಿಯಲ್ಲಿ ಹಗಲು-ರಾತ್ರಿ ಉಪವಾಸವಿದ್ದು ತ್ರಿವಿಕ್ರಮನೆಂಬ ಹೆಸರಿನಿಂದ ನನ್ನನ್ನು ಪೂಜಿಸಿದರೆ ಗೋಮೇಧಯಜ್ಞವನ್ನು ಮಾಡಿದ ಫಲವು ಲಭಿಸುತ್ತದೆ. ಆಷಾಢಮಾಸದ ದ್ವಾದಶಿಯಲ್ಲಿ ಹಗಲು-ರಾತ್ರಿ ಉಪವಾಸವಿದ್ದು ವಾಮನ ನೆಂಬ ಹೆಸರಿನಿಂದ ನನ್ನನ್ನು ಪೂಜಿಸಿದರೆ ನರಮೇಧಯಾಗಮಾಡಿದ ಫಲವು ಪ್ರಾಪ್ತವಾಗುತ್ತದೆ. ಶ್ರಾವಣಮಾಸದ ದ್ವಾದಶಿಯಲ್ಲಿ ಹಗಲು-ರಾತ್ರಿ ಉಪವಾಸವಿದ್ದು ಶ್ರೀಧರನೆಂಬ ಹೆಸರಿನಿಂದ ನನ್ನನ್ನು ಪೂಜಿಸಿದರೆ ಪಂಚಮಹಾಯಜ್ಞಗಳನ್ನು ಮಾಡಿದ ಫಲವು ಲಭಿಸುತ್ತದೆ. ಭಾದ್ರಪದ ಮಾಸದ ದ್ವಾದಶಿಯಲ್ಲಿ ಹಗಲು-ರಾತ್ರಿ ಉಪವಾಸವಿದ್ದು ಹೃಷೀಕೇಶನೆಂಬ ಹೆಸರಿನಿಂದ ನನ್ನನ್ನು ಪೂಜಿಸಿದರೆ ಸೌತ್ರಾಮಣಿಯಜ್ಞವನ್ನು ಮಾಡಿದ ಫಲವು ಲಭಿಸುತ್ತದೆ. ಆಶ್ವಯುಜಮಾಸದ ದ್ವಾದಶಿಯಲ್ಲಿ ಹಗಲು-ರಾತ್ರಿ ಉಪವಾಸ ವಿದ್ದು ಪದ್ಮನಾಭನೆಂಬ ಹೆಸರಿನಿಂದ ನನ್ನನ್ನು ಪೂಜಿಸಿದರೆ ಸಾವಿರ ಗೋವು ಗಳನ್ನು ದಾನಮಾಡಿದ ಫಲವು ಲಭಿಸುತ್ತದೆ. ಕಾರ್ತಿಕಮಾಸದ ದ್ವಾದಶಿಯಲ್ಲಿ ಹಗಲು-ರಾತ್ರಿ ಉಪವಾಸವಿದ್ದು ದಾಮೋದರನೆಂಬ ಹೆಸರಿನಿಂದ ನನ್ನನ್ನು ಪೂಜಿಸಿದರೆ ಸರ್ವಕ್ರತುಗಳನ್ನೂ ಮಾಡಿದ ಫಲವು ಲಭಿಸುತ್ತದೆ.

ಯಾವನು ದ್ವಾದಶಿಯಂದು ಉಪವಾಸವನ್ನು ಮಾತ್ರ ಮಾಡುವನೋ ಅವನು ಕೂಡ ಹಿಂದೆ ಹೇಳಿದ ಫಲಗಳಲ್ಲಿ ಅರ್ಧಭಾಗಫಲವನ್ನು ಹೊಂದುತ್ತಾನೆ.

ಶ್ರವಣನಕ್ಷತ್ರವಿರುವ ತಿಥಿಯಲ್ಲಿಯೂ ಹೀಗೆಯೇ ಉಪವಾಸಮಾಡಿ ನನ್ನನ್ನು ಪೂಜಿಸುವ ಭಕ್ತನು ನನ್ನ ಸಾಲೋಕ್ಯವನ್ನು ಪಡೆಯುತ್ತಾನೆ. ಈ ವಿಷಯವನ್ನು ಪುನಃ ವಿಚಾರಮಾಡುವ ಅವಶ್ಯಕತೆಯೇ ಇಲ್ಲ. ಅಲಸಿಕೆಯಿಲ್ಲದೆ ಮೇಲೆ ಹೇಳಿರುವ ರೀತಿಯಲ್ಲಿ ಪ್ರತಿಯೊಂದು ಮಾಸದಲ್ಲಿಯೂ ನನ್ನನ್ನು ಅನುಕ್ರಮವಾಗಿ ಒಂದು ವರ್ಷದವರೆಗೂ ಪೂಜಿಸಬೇಕು. ಒಂದು ವರ್ಷವು ಪೂರ್ಣವಾದನಂತರ ಪುನಃ ಮುಂದಿನ ವರ್ಷ ಪ್ರತಿಮಾಸವೂ ದ್ವಾದಶಿಯಲ್ಲಿ ಉಪವಾಸವಿದ್ದು ಪೂಜೆಮಾಡಬೇಕು. ಹೀಗೆ ಹನ್ನೆರಡುವರ್ಷಗಳವರೆಗೆ ವಿಚ್ಛಿತ್ತಿಯಿಲ್ಲದೇ ನನ್ನನ್ನೇ ಆಶ್ರಯಿಸಿರುವ ನನ್ನ ಭಕ್ತನು ಉಪವಾಸವಿದ್ದು ಪೂಜಿಸಿದ್ದೇ ಆದರೆ ನನ್ನ ಸಾಯುಜ್ಯವನ್ನೇ ಹೊಂದುತ್ತಾನೆ. ಯಾವ ಮನುಷ್ಯನು ದ್ವಾದಶಿಯಂದು ಪ್ರೇಮಪೂರ್ವಕವಾಗಿ ನನ್ನನ್ನೂ ಮತ್ತು ವೇದಸಂಹಿತೆಯನ್ನೂ ಪೂಜಿಸುವನೋ–ಅವನು ಹಿಂದೆ ಹೇಳಿದ ಫಲವನ್ನೇ ಹೊಂದುತ್ತಾನೆ. ಇದರಲ್ಲಿ ಸಂಶಯವಿಲ್ಲ. ಯಾರು ದ್ವಾದಶಿಯ ದಿವಸ ಭಕ್ತಿಪೂರ್ವಕವಾಗಿ ಗಂಧವನ್ನಾಗಲೀ, ಪುಷ್ಪವನ್ನಾಗಲೀ, ಫಲವನ್ನಾಗಲೀ ನನಗೆ ಅರ್ಪಿಸುವನೋ–ಅಂತಹವನಿಗೆ ಸಮಾನನಾದ ಪ್ರಿಯಭಕ್ತನು ನನಗೆ ಬೇರೆ ಯಾರೂ ಇರುವುದಿಲ್ಲ. ನನ್ನ ಭಕ್ತರಾದ ಇಂದ್ರಪ್ರಮುಖರಾದ ಎಲ್ಲ ದೇವತೆಗಳೂ ಈ ವಿಧಿಯಿಂದಲೇ ನನ್ನನ್ನು ಪೂಜಿಸಿ ಸ್ವರ್ಗಸುಖವನ್ನು ಅನುಭವಿಸುತ್ತಿದ್ದಾರೆ.”

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ದೇವೇಶನಾದ ಕೇಶವನು ಹೀಗೆ ಹೇಳುತ್ತಿರಲಾಗಿ ಧರ್ಮಾತ್ಮಜನಾದ ಯುಧಿಷ್ಠಿರನು ಕೈಮುಗಿದುಕೊಂಡು ಸ್ತೋತ್ರ ಮಾಡತೊಡಗಿದನು:

ಸರ್ವಲೋಕೇಶ ದೇವೇಶ ಹೃಷಿಕೇಶ ನಮೋಽಸ್ತು ತೇ ।
ಸಹಸ್ರಶಿರಸೇ ನಿತ್ಯಂ ಸಹಸ್ರಾಕ್ಷ ನಮೊಽಸ್ತುತೇ ॥೧೦೫೩॥

ತ್ರಯೀಮಯ ತ್ರಯೀನಾಥ ತ್ರಯೀಸ್ತುತ ನಮೋ ನಮಃ।
ಯಜ್ಞಾತ್ಮನ್ಯಜ್ಞಸಮ್ಭೂತ ಯಜ್ಞನಾಥ ನಮೋ ನಮಃ ॥೧೦೫೪॥

ಚತುರ್ಮೂರ್ತೇ ಚತುರ್ಬಾಹೋ ಚತುರ್ವ್ಯೂಹ ನಮೋ ನಮಃ।
ಲೋಕಾತ್ಮಲ್ಲೋಕಕೃನ್ನಾಥ ಲೋಕಾವಾಸ ನಮೋ ನಮಃ ॥೧೦೫೫॥
ಸೃಷ್ಟಿಸಂಹಾರಕರ್ತ್ರೇ ತೇ ನರಸಿಂಹ ನಮೋ ನಮಃ।
ಭಕ್ತಪ್ರಿಯ ನಮಸ್ತೇಽಸ್ತು ಕೃಷ್ಣ ನಾಥ ನಮೋ ನಮಃ ॥೧೦೫೬॥
ಲೋಕಪ್ರಿಯ ನಮಸ್ತೇಽಸ್ತು ಭಕ್ತವತ್ಸಲ ತೇ ನಮಃ।
ಬ್ರಹ್ಮಾವಾಸ ನಮಸ್ತೇಽಸ್ತು ಬ್ರಹ್ಮನಾಥ ನಮೋ ನಮಃ ॥೧೦೫೭॥
ರುದ್ರರೂಪ ನಮಸ್ತೇಽಸ್ತು ರುದ್ರಕರ್ಮರತಾಯ ತೇ।
ಪಞ್ಚಯಜ್ಞ ನಮಸ್ತೇಽಸ್ತು ಸರ್ವಯಜ್ಞ ನಮೋ ನಮಃ ॥೧೦೫೮॥
ಕೃಷ್ಣಪ್ರಿಯ ನಮಸ್ತೇಽಸ್ತು ಕೃಷ್ಣನಾಥ ನಮೋ ನಮಃ।
ಯೋಗಿಪ್ರಿಯ ನಮಸ್ತೇಽಸ್ತು ಯೋಗಿನಾಥ ನಮೋ ನಮಃ ॥೧೦೫೯॥
ಹಯವಕ್ತ್ರ ನಮಸ್ತೇಽಸ್ತು ಚಕ್ರಪಾಣೇ ನಮೋ ನಮಃ।
ಪಞ್ಚಭೂತ ನಮಸ್ತೇಽಸ್ತು ಪಞ್ಚಾಯುಧ ನಮೋ ನಮಃ ॥೧೦೬೦॥

"ಸರ್ವಲೋಕಗಳಿಗೂ ಈಶನೇ! ದೇವತೆಗಳಿಗೂ ಈಶನೇ! ಇಂದ್ರಿಯಗಳಿಗೂ ಈಶನೇ! ನಿನಗೆ ನಮಸ್ಕಾರಮಾಡುತ್ತೇನೆ. ಸಾವಿರ ತಲೆಗಳುಳ್ಳವನೇ! ಸಾವಿರ ಕಣ್ಣುಗಳುಳ್ಳವನೇ! ನಿನಗೆ ನಿತ್ಯವೂ ನಮಸ್ಕಾರ ಮಾಡುತ್ತೇನೆ. ವೇದಸ್ವರೂಪನೇ! ವೇದಗಳ ಒಡೆಯನೇ! ವೇದಗಳಿಂದ ಸ್ತುತಿಸಲ್ಪಡುವವನೇ! ನಿನಗೆ ನಮಸ್ಕಾರಮಾಡುತ್ತೇನೆ. ಯಜ್ಞಸ್ವರೂಪನೇ! ಯಜ್ಞದಿಂದಲೇ ಹುಟ್ಟಿದವನೇ! ಯಜ್ಞಗಳಿಗೆ ನಾಥನೇ! ನಿನಗೆ ನಮಸ್ಕಾರ ಮಾಡುತ್ತೇನೆ. ವೈಶ್ವ-ತೈಜಸ-ಪ್ರಾಜ್ಞ-ತುರೀಯಗಳೆಂಬ ಚತುರ್ಜ್ಯೋತಿಗಳ ಸ್ವರೂಪನೇ! ನಾಲ್ಕು ತೋಳುಗಳುಳ್ಳವನೇ! ವಾಸುದೇವ-ಸಂಕರ್ಷಣ-ಪ್ರದ್ಯುಮ್ನ-ಅನಿರುದ್ಧವೆಂಬ ಚತುರ್ವ್ಯೂಹಸ್ವರೂಪನೇ! ನಿನಗೆ ನಮಸ್ಕರಿಸುತ್ತೇನೆ. ಲೋಕಕ್ಕೇ ಆತ್ಮನಾಗಿರುವವನೇ! ಲೋಕಗಳನ್ನು ಸೃಷ್ಟಿಸಿದವನೇ! ನಾಥನೇ! ಲೋಕದಲ್ಲಿ ವಾಸಮಾಡುವವನೇ! ನರಸಿಂಹನೇ! ನಿನಗೆ ನಮಸ್ಕರಿಸುತ್ತೇನೆ. ಭಕ್ತಪ್ರಿಯನೇ! ನಿನಗೆ ನಮಸ್ಕಾರವು. ಕೃಷ್ಣನೇ! ನಾಥನೇ! ನಿನಗೆ ನಮಸ್ಕಾರವು. ಲೋಕಪ್ರಿಯನೇ! ನಿನಗೆ ನಮಸ್ಕಾರ

ಮಾಡುತ್ತೇನೆ. ಭಕ್ತವತ್ಸಲನೇ! ನಿನಗೆ ನಮಸ್ಕಾರವು. ಬ್ರಹ್ಮನಿಗೆ ನಿವಾಸಸ್ಥಾನನೇ! ಬ್ರಹ್ಮನಿಗೂ ಒಡೆಯನೇ! ನಿನಗೆ ನಮಸ್ಕಾರವು. ರುದ್ರರೂಪನೇ! ಭಯಂಕರಕರ್ಮದಲ್ಲಿ ಆಸಕ್ತನಾದವನೇ! ನಿನಗೆ ನಮಸ್ಕಾರವು. ಪಂಚಯಜ್ಞಪ್ರಿಯನೇ! ನಿನಗೆ ನಮಸ್ಕಾರಮಾಡುತ್ತೇನೆ. ಪಾರ್ಥಪ್ರಿಯನಾದ ಕೃಷ್ಣನೇ! ನಾಥನಾದ ಕೃಷ್ಣನೇ! ಯೋಗಿಪ್ರಿಯನೇ! ಯೋಗಿಗಳ ಒಡೆಯನೇ! ನಿನಗೆ ನಮಸ್ಕಾರವು. ಹಯವದನನೇ! ಚಕ್ರಪಾಣಿಯೇ! ಪಂಚಭೂತಸ್ವರೂಪನೇ! ಪಂಚಾಯುಧಧರನೇ! ನಿನಗೆ ನಮಸ್ಕಾರಮಾಡುತ್ತೇನೆ."

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಯುಧಿಷ್ಠಿರನು ಪರಮಭಕ್ತಿಯಿಂದ ಉಂಟಾದ ಗದ್ಗದಧ್ವನಿಯಿಂದ ಹೀಗೆ ಸ್ತೋತ್ರಮಾಡುತ್ತಿರಲಾಗಿ, ಪ್ರೀತಾತ್ಮನಾದ ಶ್ರೀಕೃಷ್ಣನು ಧರ್ಮರಾಜನ ಕೈಹಿಡಿದು ಅವನು ಸ್ತೋತ್ರವನ್ನು ಮುಂದುವರಿಸದಂತೆ ತಡೆಹಿಡಿದನು. ಬಳಿಕ ಮಾತಿನಿಂದಲೂ ತಡೆದು ಶ್ರೀಕೃಷ್ಣನು ಭಕ್ತಿನಮ್ರನಾಗಿದ್ದ ಯುಧಿಷ್ಠಿರನಿಗೆ ಹೇಳಿದನು:

"ಯುಧಿಷ್ಠಿರ! ಬೇರೆಯವರು ಸ್ತೋತ್ರಮಾಡುವಂತೆ ನೀನೂ ನನ್ನ ಸ್ತೋತ್ರವನ್ನೇಕೆ ಮಾಡುತ್ತಿರುವೆ? ನಿಲ್ಲಿಸು. ಹಿಂದಿನಂತೆಯೇ ಧರ್ಮಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳು."

ಯುಧಿಷ್ಠಿರನು ಹೇಳುತ್ತಾನೆ:

"ಮಾಧವನೇ! ಕೃಷ್ಣಪಕ್ಷದ ದ್ವಾದಶಿಯಲ್ಲಿ ನಿನ್ನ ಪೂಜೆಯನ್ನು ಹೇಗೆ ಮಾಡಬೇಕು? ಧರ್ಮಯುಕ್ತವಾದ ಈ ವಿಷಯವನ್ನು ಹೇಳು."

ಶ್ರೀಕೃಷ್ಣನು ಹೇಳುತ್ತಾನೆ:

"ಯುಧಿಷ್ಠಿರ! ಕೇಳು. ಹಿಂದಿನಂತೆಯೇ ನಾನು ನಿನ್ನ ಎಲ್ಲ ಪ್ರಶ್ನೆಗಳಿಗೂ ಯಥಾವತ್ತಾದ ಉತ್ತರವನ್ನು ಹೇಳುತ್ತೇನೆ. ಕೃಷ್ಣಪಕ್ಷದ ದ್ವಾದಶಿಯಲ್ಲಿ ನನ್ನನ್ನು ಪೂಜೆಮಾಡುವುದರಿಂದ ಮಹಾಫಲವು ಲಭಿಸುತ್ತದೆ. ಏಕಾದಶಿಯ ದಿನ ಉಪವಾಸಮಾಡಿ ದ್ವಾದಶಿಯ ದಿನ ನನ್ನನ್ನು ಪೂಜಿಸಬೇಕು. ಆ ದಿನ ಭಕ್ತನಾದವನು ಯಥಾಶಕ್ತಿ ಬ್ರಾಹ್ಮಣರನ್ನೂ ಸತ್ಕರಿಸಬೇಕು.

ಹಾಗೆ ಪೂಜಿಸಿದಲ್ಲಿ ಆ ಮನುಷ್ಯನು ದಕ್ಷಿಣಾಮೂರ್ತಿಯನ್ನಾಗಲೀ ಅಥವಾ ನನ್ನನ್ನಾಗಲೀ ಹೊಂದುತ್ತಾನೆ. ಇದರಲ್ಲಿ ಸಂದೇಹವೇ ಇಲ್ಲ. ಅಥವಾ ನನ್ನ ಆ ಭಕ್ತನು ಗ್ರಹ-ನಕ್ಷತ್ರಗಳಿಂದ ಪೂಜಿಸಲ್ಪಟ್ಟವನಾಗಿ ಚಂದ್ರಲೋಕಕ್ಕಾದರೂ ಹೋಗಬಹುದು."

ವೈಷ್ಣವಧರ್ಮ - ೧೯

ವಿಷುವಯೋಗವಿರುವ ಮತ್ತು ಗ್ರಹಣಗಳ ದಿವಸಗಳಲ್ಲಿ ದಾನದ ಮಹಿಮೆ: ಅಶ್ವತ್ಥವೃಕ್ಷದ ಮಹತ್ತ್ವ: ತೀರ್ಥಭೂತ ವಾದ ಗುಣಗಳ ಪ್ರಶಂಸೆ: ಉತ್ತಮವಾದ ಪ್ರಾಯಶ್ಚಿತ್ತ

ಯುಧಿಷ್ಠಿರನು ಹೇಳುತ್ತಾನೆ:

"ದೇವೇಶ್ವರನೇ! ವಿಷುವಯೋಗದಲ್ಲಿ (ಮೇಷ-ತುಲಾಸಂಕ್ರಮಣ ಗಳಲ್ಲಿ) ಚಂದ್ರ-ಸೂರ್ಯರ ಗ್ರಹಣಕಾಲದಲ್ಲಿ ದಾನಕೊಡುವುದರಿಂದ ಯಾವ ಫಲವು ಲಭಿಸುತ್ತದೆ? ಇದನ್ನು ಹೇಳುವ ಕೃಪೆಮಾಡು."

ಶ್ರೀಕೃಷ್ಣನು ಹೇಳುತ್ತಾನೆ:

"ಯುಧಿಷ್ಠಿರ! ವಿಷುವಯೋಗದಲ್ಲಿಯೂ, ಚಂದ್ರ-ಸೂರ್ಯರ ಗ್ರಹಣಗಳಲ್ಲಿಯೂ, ವ್ಯತೀಪಾತಯೋಗದಲ್ಲಿಯೂ, ದಕ್ಷಿಣಾಯನ-ಉತ್ತ ರಾಯಣಗಳ ಪ್ರಾರಂಭದಲ್ಲಿಯೂ ಕೊಡುವ ದಾನವು ಅಕ್ಷಯವಾದ ಫಲವನ್ನು ಕೊಡುತ್ತದೆ.

ದಕ್ಷಿಣಾಯನ ಮತ್ತು ಉತ್ತರಾಯಣಪುಣ್ಯಕಾಲಗಳ ಮಧ್ಯದಲ್ಲಿ ಯಾವ ದಿನ ರಾತ್ರಿ ಮತ್ತು ಹಗಲುಗಳು ಒಂದೇ ಪ್ರಮಾಣದಲ್ಲಿರು ವುವೋ–ಅದಕ್ಕೆ ವಿಷುವಯೋಗವೆಂದು ಹೆಸರು. ವಿಷುವಯೋಗವಿರುವ ದಿನ ಸಂಧ್ಯಾಸಮಯದಲ್ಲಿ ನಾನು ಮತ್ತು ಬ್ರಹ್ಮ-ಮಹೇಶ್ವರರೂ ಕ್ರಿಯಾ, ಕರಣ ಮತ್ತು ಕಾರ್ಯಗಳ ಏಕತೆಯ ವಿಷಯವಾಗಿ ವಿಚಾರಮಾಡುವ ಸಲುವಾಗಿ ಒಮ್ಮೆ ಒಂದೆಡೆಯಲ್ಲಿ ಸೇರುತ್ತೇವೆ. ಯಾವ ಮುಹೂರ್ತದಲ್ಲಿ ನಾವು ಮೂವರೂ ಒಟ್ಟಾಗಿ ಸೇರುವೆವೋ–ಅದೇ ಕಲಾರಹಿತವಾದ ಪರಮಪದವೆನಿಸಿಕೊಳ್ಳುತ್ತದೆ. ವಿಷುವ ಎಂಬ ಹೆಸರಿನ ಆ ಮುಹೂರ್ತವು ಪರಮಪವಿತ್ರವಾದುದು. ಅದನ್ನೇ ಅಕ್ಷರವೆಂದೂ, ಬ್ರಹ್ಮವೆಂದೂ, ಪರ ಬ್ರಹ್ಮವೆಂದೂ ಕರೆಯುತ್ತಾರೆ. ಪರಮಪವಿತ್ರವಾದ ಆ ವಿಷುವಮುಹೂರ್ತ

ದಲ್ಲಿಯೇ ಎಲ್ಲರೂ ಪರಮಪದವನ್ನು ಕುರಿತು ಚಿಂತಿಸುತ್ತಾರೆ. ದೇವತೆಗಳು, ವಸುಗಳು, ರುದ್ರರು, ಪಿತೃಗಳು, ಅಶ್ವಿನೀದೇವತೆಗಳು, ಸಾಧ್ಯರು, ವಿಶ್ವೇದೇವತೆಗಳು, ಗಂಧರ್ವರು, ಸಿದ್ಧರು, ಬ್ರಹ್ಮರ್ಷಿಗಳು, ಸೋಮನೇ ಮೊದಲಾದ ಗ್ರಹಗಳು, ನದಿಗಳು, ಸಮುದ್ರಗಳು, ಮರುತ್ತುಗಳು, ಅಪ್ಸರೆಯರು, ನಾಗರು, ಯಕ್ಷರು, ರಾಕ್ಷಸರು, ಗುಹ್ಯಕರು, ಇವರೇ ಅಲ್ಲದೇ ಇನ್ನೂ ಇತರದೇವತೆಗಳೂ ವಿಷುವಮುಹೂರ್ತದಲ್ಲಿ ಜಿತೇಂದ್ರಿಯರಾಗಿ ಉಪವಾಸದಿಂದಿದ್ದು ಪ್ರಯತ್ನಪೂರ್ವಕವಾಗಿ ಪರಮಾತ್ಮನ ಧ್ಯಾನದಲ್ಲಿ ತತ್ಪರರಾಗುತ್ತಾರೆ. ಆದುದರಿಂದ, ಯುಧಿಷ್ಠಿರ! ನೀನೂ ಕೂಡ ಪರಮಪವಿತ್ರ ವಾದ ಆ ವಿಷುವಮುಹೂರ್ತದಲ್ಲಿ ಅನ್ನ, ಗೋವುಗಳು, ಎಳ್ಳು, ಭೂಮಿ, ಕನ್ಯೆಯರು, ಮನೆ, ವಿಶ್ರಾಮಧಾಮಗಳು, ಧಾನ್ಯಗಳು, ವಾಹನಗಳು, ಹಾಸಿಗೆ, ಅಲ್ಲದೇ ನಾನು ಹೇಳಿರುವ ಇನ್ನೂ ಅನೇಕ ವಸ್ತುಗಳನ್ನೂ ದಾನಮಾಡು. ವಿಷುವಮುಹೂರ್ತದಲ್ಲಿ ಇವುಗಳನ್ನು ದಾನಮಾಡಿದರೆ ಅದರಲ್ಲಿಯೂ ವಿಶೇಷವಾಗಿ ಶ್ರೋತ್ರಿಯರಿಗೆ ದಾನಮಾಡಿದರೆ–ಆ ದಾನದ ಫಲವು ನಾಶಹೊಂದುವುದೇ ಇಲ್ಲ. ಆ ದಾನದ ಪುಣ್ಯವು ಪ್ರತಿನಿತ್ಯವೂ ಕೋಟಿ-ಕೋಟಿ ಪಟ್ಟು ಹೆಚ್ಚಾಗುತ್ತಲೇ ಇರುತ್ತದೆ. ಆಕಾಶದಲ್ಲಿ ಚಂದ್ರನ ಅಥವಾ ಸೂರ್ಯನ ಗ್ರಹಣವಿದ್ದಾಗ ನನ್ನ ಅಥವಾ ಶಂಕರನ ಪೂಜೆಯನ್ನು ಮಾಡಿ ನನ್ನ ಅಥವಾ ಶಂಕರನ ಗಾಯತ್ರಿಯನ್ನು ಜಪಿಸಿ ಶಂಖ-ತೂರ್ಯ ಗಳಿಂದಲೂ, ತಾಳ-ಗಂಟೆಗಳಿಂದಲೂ ಭಕ್ತಿಪೂರ್ವಕವಾಗಿ ಗಟ್ಟಿಯಾಗಿ ಶಬ್ದಮಾಡಬೇಕು. ಹಾಗೆ ಮಾಡಿದರೆ ಅದರಿಂದ ಪ್ರಾಪ್ತವಾಗುವ ಪುಣ್ಯಫಲ ವನ್ನು ಹೇಳುವೆನು; ಕೇಳು. ನನ್ನ ಸ್ತೋತ್ರಗಳನ್ನು ಕೀರ್ತನಮಾಡುವುದ ರಿಂದಲೂ, ಹೋಮಮಾಡುವುದರಿಂದಲೂ, ನನ್ನ ಗಾಯತ್ರಿಯನ್ನು ಜಪಿಸು ವುದರಿಂದಲೂ, ನನ್ನ ಶ್ರೇಷ್ಠವಾದ ನಾಮಗಳನ್ನು ಜಪಿಸುವುದರಿಂದಲೂ ರಾಹುವು ದುರ್ಬಲನಾಗುತ್ತಾನೆ. ಚಂದ್ರನು ಬಲಿಷ್ಠನಾಗುತ್ತಾನೆ.

ಸೂರ್ಯ-ಚಂದ್ರರ ಗ್ರಹಣಕಾಲದಲ್ಲಿ ಶ್ರೋತ್ರಿಯರಿಗೆ ಕೊಡುವ ದಾನದ ಫಲವು ಸಾಮಾನ್ಯದಿವಸಗಳಲ್ಲಿ ಕೊಡುವ ದಾನದಿಂದ ಪ್ರಾಪ್ತ ವಾಗುವ ಫಲಕ್ಕಿಂತಲೂ ಸಾವಿರಪಟ್ಟು ಹೆಚ್ಚು ಫಲವು ದಾನಕೊಟ್ಟವನಿಗೆ ಸೇರುತ್ತದೆ. ಯದ್ಯಪಿ ಒಬ್ಬ ಮನುಷ್ಯನು ಮಹಾಪಾಪದಿಂದ ಯುಕ್ತನಾಗಿದ್ದರೂ ಗ್ರಹಣಕಾಲದಲ್ಲಿ ಕೊಡುವ ದಾನದಿಂದ ಆ ಕ್ಷಣದಲ್ಲಿಯೇ

ಪಾಪದಿಂದ ಬಿಡುಗಡೆಯನ್ನು ಹೊಂದಿ ಪುರುಷಶ್ರೇಷ್ಠನಾಗುತ್ತಾನೆ. ಅವನು ಅವಸಾನಾನಂತರ ಚಂದ್ರನ ಮತ್ತು ಸೂರ್ಯನ ಪ್ರಕಾಶದಿಂದ ಕೂಡಿರುವ ಸುಂದರವಾದ ಯಾನದಲ್ಲಿ ಕುಳಿತು ಅಪ್ಸರೆಯರಿಂದ ಸೇವಿಸಲ್ಪಡುತ್ತಾ ರಮ್ಯವಾದ ಚಂದ್ರಲೋಕಕ್ಕೆ ಹೋಗುತ್ತಾನೆ. ಆಕಾಶದಲ್ಲಿ ಎಂದಿನವರೆಗೆ ಚಂದ್ರನೊಡನೆ ನಕ್ಷತ್ರಗಳಿರುತ್ತವೆಯೋ ಅಲ್ಲಿಯವರೆಗೂ ಅವನು ಚಂದ್ರ ಲೋಕದಲ್ಲಿ ಸಮ್ಮಾನಿಸಲ್ಪಡುತ್ತಿರುತ್ತಾನೆ. ಕಾಲಾನಂತರದಲ್ಲಿ ಸ್ವರ್ಗದಿಂದ ಜಾರಿದರೂ ವೇದ-ವೇದಾಂಗಪಾರಂಗತನಾದ ಬ್ರಾಹ್ಮಣನಾಗಿ ಹುಟ್ಟಿ ಕೋಟ್ಯಧಿಪತಿಯಾಗುತ್ತಾನೆ."

ಯುಧಿಷ್ಠಿರನು ಹೇಳುತ್ತಾನೆ:

"ವಿಭುವೇ! ನಿನ್ನ ಗಾಯತ್ರಿಯನ್ನು ಹೇಗೆ ಜಪಿಸುವುದು? ಸುರೇಶ್ವರನೇ! ಅದರಿಂದ ಯಾವ ಫಲವು ಸಿಕ್ಕುತ್ತದೆ? ಈ ವಿಷಯವನ್ನು ಹೇಳುವ ಕೃಪೆಮಾಡು."

ಶ್ರೀಕೃಷ್ಣನು ಹೇಳುತ್ತಾನೆ:

"ಯುಧಿಷ್ಠಿರ! ದ್ವಾದಶಿಯಲ್ಲಿಯೂ, ವಿಷುವಯೋಗದಲ್ಲಿಯೂ, ಸೂರ್ಯ-ಚಂದ್ರರ ಗ್ರಹಣಗಳ ಸಮಯದಲ್ಲಿಯೂ, ದಕ್ಷಿಣಾಯನ-ಉತ್ತರಾಯಣಸಂಕ್ರಮಣಕಾಲಗಳಲ್ಲಿಯೂ, ಶ್ರವಣನಕ್ಷತ್ರವಿರುವ ದಿನ ದಲ್ಲಿಯೂ, ವ್ಯತೀಪಾತಯೋಗದಲ್ಲಿಯೂ–ಅಶ್ವತ್ಥವೃಕ್ಷವನ್ನು ಅಥವಾ ನನ್ನನ್ನು ನೋಡಿದಲ್ಲಿ ನನ್ನ ಸಂಬಂಧವಾದ ಗಾಯತ್ರಿಯನ್ನಾಗಲೀ, ಪ್ರಣವಸಹಿತವಾದ **ನಮೋ ನಾರಾಯಣಾಯ**–ಎಂಬ ಶ್ರೀಮದಷ್ಟಾಕ್ಷರಮಂತ್ರವನ್ನಾಗಲೀ ಜಪಿಸಬೇಕು. ಈ ಮಹಾಮಂತ್ರವನ್ನು ಜಪಿಸುವುದರಿಂದ ಹಿಂದಿನ ಜನ್ಮದಲ್ಲಿ ಮಾಡಿದ ಎಲ್ಲ ಪಾಪಗಳೂ ಪರಿಹಾರವಾಗುತ್ತವೆ."

ಯುಧಿಷ್ಠಿರನು ಪ್ರಶ್ನಿಸುತ್ತಾನೆ!

"ದೇವೇಶನೇ! ಅಶ್ವತ್ಥವೃಕ್ಷದ ದರ್ಶನವು ನಿನ್ನ ದರ್ಶನಕ್ಕೆ ಸಮಾನವೆಂದು ಹೇಳಿದಂತಾಯಿತು. ಇದು ಹೇಗೆ? ಈ ವಿಷಯವನ್ನು ಕೇಳಿ ತಿಳಿಯಲು ನನಗೆ ಕುತೂಹಲವುಂಟಾಗಿದೆ."

ಶ್ರೀಕೃಷ್ಣನು ಹೇಳುತ್ತಾನೆ:

ಅಹಮಶ್ವತ್ಥರೂಪೇಣ ಪಾಲಯಾಮಿ ಜಗತ್ತ್ರಯಮ್।
ಅಶ್ವತ್ಥೋ ನ ಸ್ಥಿತೋ ಯತ್ರ ನಾಹಂ ತತ್ರ ಪ್ರತಿಷ್ಠಿತಃ ॥೧೯೧॥

"ಯುಧಿಷ್ಠಿರ! ನಾನು ಅಶ್ವತ್ಥರೂಪದಲ್ಲಿದ್ದು ಈ ಮೂರು ಲೋಕಗಳನ್ನೂ ರಕ್ಷಿಸುತ್ತಿರುವೆನು. ಅಶ್ವತ್ಥವು ಇಲ್ಲದಿರುವ ಸ್ಥಳದಲ್ಲಿ ನಾನು ಇರುವುದಿಲ್ಲ.

ಯತ್ರಾಹಂ ಸಂಸ್ಥಿತೋ ರಾಜನ್ನಶ್ವತ್ಥಶ್ಚಾಪಿ ತಿಷ್ಠತಿ।
ಯಸ್ತ್ವೇನಮರ್ಚಯೇದ್ಭಕ್ತ್ಯಾ ಸ ಮಾಂ ಸಾಕ್ಷಾತ್ಸಮರ್ಚತಿ ॥೧೯೨॥

ನಾನು ಎಲ್ಲಿರುವೆನೋ ಅಲ್ಲಿ ಅಶ್ವತ್ಥವೂ ಇರುತ್ತದೆ. ಯಾವನು ಅಶ್ವತ್ಥವನ್ನು ಪೂಜಿಸುವನೋ–ಅವನು ನನ್ನನ್ನೇ ಸಾಕ್ಷಾತ್ತಾಗಿ ಪೂಜಿಸಿದಂತಾಗುತ್ತದೆ.

ಯಸ್ತ್ವೇನಂ ಪ್ರಹರೇತ್ಕೋಪಾನ್ಮಾಮೇವ ಪ್ರಹರೇತ್ತು ಸಃ।
ತಸ್ಮಾತ್ಪ್ರದಕ್ಷಿಣಂ ಕುರ್ಯಾನ್ನ ಛಿನ್ದ್ಯಾದೇನಮನ್ವಹಮ್ ॥೧೯೪೩॥

ಯಾವನು ಕೋಪಾವಿಷ್ಟನಾಗಿ ಅಶ್ವತ್ಥವೃಕ್ಷವನ್ನು ಕಡಿಯಲು ಹೋಗುವನೋ–ಅವನು ನನ್ನನ್ನೇ ಪ್ರಹರಿಸಿದಂತಾಗುತ್ತದೆ. ಆದುದರಿಂದ ಅಶ್ವತ್ಥವೃಕ್ಷಕ್ಕೆ ಪ್ರತಿದಿನವೂ ಪ್ರದಕ್ಷಿಣೆಮಾಡಬೇಕು. ಯಾವುದೇ ಕಾರಣದಿಂದಲೂ ಆ ವೃಕ್ಷವನ್ನು ಕಡಿಯಬಾರದು.

ವ್ರತಸ್ಯ ಪಾರಣಂ ತೀರ್ಥಮಾರ್ಜವಂ ತೀರ್ಥಮುಚ್ಯತೇ।
ದೇವಶುಶ್ರೂಷಣಂ ತೀರ್ಥಂ ಗುರುಶುಶ್ರೂಷಣಂ ತಥಾ ॥೧೯೪॥

ಪಿತೃಶುಶ್ರೂಷಣಂ ತೀರ್ಥಂ ಮಾತೃಶುಶ್ರೂಷಣಂ ತಥಾ।
ದಾರಾಣಾಂ ತೋಷಣಂ ತೀರ್ಥಂ ಗಾರ್ಹಸ್ಥ್ಯಂ ತೀರ್ಥಮುಚ್ಯತೇ ॥

ಅತಿಥೇಯಃ ಪರಂ ತೀರ್ಥಂ ಬ್ರಹ್ಮತೀರ್ಥಂ ಸನಾತನಮ್।
ಬ್ರಹ್ಮಚರ್ಯಂ ಪರಂ ತೀರ್ಥಂ ತ್ರೇತಾಗ್ನಿಸ್ತೀರ್ಥಮುಚ್ಯತೇ ॥೧೯೪೬॥

ಮೂಲಂ ಧರ್ಮಂ ತು ವಿಜ್ಞಾಯ ಮನಸ್ತತ್ರಾವಧಾರ್ಯತಾಮ್।
ಗಚ್ಛ ತೀರ್ಥಾನಿ ಕೌನ್ತೇಯ ಧರ್ಮೋ ಧರ್ಮೇಣ ವರ್ಧತೇ ॥

ವ್ರತದ ಪಾರಣೆ, ಸರಳತೆ, ದೇವರಸೇವೆ, ಗುರುಶುಶ್ರೂಷೆ, ಪಿತೃಶುಶ್ರೂಷೆ, ಮಾತೃಶುಶ್ರೂಷೆ, ಪತ್ನಿಯರ ಪೋಷಣೆ, ಗೃಹಸ್ಥಧರ್ಮದ ಪಾಲನೆ-ಇವೆಲ್ಲವೂ ತೀರ್ಥಗಳೆಂದು ಹೇಳಲ್ಪಟ್ಟಿವೆ. ಅತಿಥಿಸೇವೆಯಲ್ಲಿ ತೊಡಗಿರುವಿಕೆಯೇ ಶ್ರೇಷ್ಠವಾದ ತೀರ್ಥವೆಂದು ಹೇಳಿದ್ದಾರೆ. ವೇದಗಳ ಅಧ್ಯಯನ ಮಾಡುವುದು ಸನಾತನತೀರ್ಥವಾಗಿದೆ. ಬ್ರಹ್ಮಚರ್ಯವ್ರತವನ್ನು ಪರಿಪಾಲಿಸುವುದು ಶ್ರೇಷ್ಠವಾದ ತೀರ್ಥವಾಗಿದೆ. ಆಹವನೀಯಾದಿ ಅಗ್ನಿಗಳನ್ನು ತೀರ್ಥಗಳೆಂದು ಹೇಳುತ್ತಾರೆ. ಈ ಎಲ್ಲಕ್ಕೂ ಧರ್ಮವೇ ಮೂಲವೆಂದು ತಿಳಿದು ಮನಸ್ಸನ್ನು ಅಲ್ಲಿಯೇ ಇಡು. ತೀರ್ಥಯಾತ್ರೆಯನ್ನು ಮಾಡು. ಧರ್ಮಕಾರ್ಯಗಳನ್ನು ಮಾಡುವುದರಿಂದಲೇ ಧರ್ಮವು ವೃದ್ಧಿಸುತ್ತದೆ. ಸ್ಥಾವರ-ಜಂಗಮಗಳೆಂಬ ಎರಡು ವಿಧವಾದ ತೀರ್ಥಗಳಿವೆ. ಸ್ಥಾವರತೀರ್ಥಗಳಿಗಿಂತಲೂ ಜಂಗಮತೀರ್ಥಗಳೇ ಶ್ರೇಷ್ಠವಾದುವು. ಏಕೆಂದರೆ: ಜಂಗಮತೀರ್ಥಗಳಿಂದ ಜ್ಞಾನವು ಲಭಿಸುತ್ತದೆ. ಈ ಲೋಕದಲ್ಲಿ ಪುಣ್ಯಕರ್ಮಗಳಿಂದ ಪರಿಶುದ್ಧನಾಗಿರುವ ಪುರುಷನ ಹೃದಯದಲ್ಲಿಯೇ ಎಲ್ಲ ತೀರ್ಥಗಳೂ ಇವೆಯೆಂದೂ ಅವನೇ ತೀರ್ಥಸ್ವರೂಪನೆಂದೂ ಹೇಳುತ್ತಾರೆ. ಗುರುರೂಪದ ತೀರ್ಥದ ಸೇವನೆಯಿಂದ ಪರಮಾತ್ಮನ ಜ್ಞಾನವಾಗುತ್ತದೆ. ಆದುದರಿಂದ ಗುರುತೀರ್ಥಕ್ಕಿಂತಲೂ ಶ್ರೇಷ್ಠವಾದ ತೀರ್ಥವೂ ಮತ್ತೊಂದಿಲ್ಲ. ಜ್ಞಾನತೀರ್ಥವೂ ಸರ್ವಶ್ರೇಷ್ಠವಾದ ತೀರ್ಥವಾಗಿದೆ. ಬ್ರಹ್ಮತೀರ್ಥವು ಸನಾತನವಾದುದು. ಎಲ್ಲ ತೀರ್ಥಗಳಲ್ಲಿಯೂ ಕ್ಷಮೆಯೇ ಪರಮಶ್ರೇಷ್ಠವಾದುದು. ಕ್ಷಮಾಶೀಲರಾದವರಿಗೆ ಈ ಲೋಕದಲ್ಲಿಯೂ ಸುಖವಿದೆ, ಪರಲೋಕದಲ್ಲಿಯೂ ಸುಖವಿದೆ.

ಮಾನಿತೋಽಮಾನಿತೋ ವಾಪಿ ಪೂಜಿತೋಽಪೂಜಿತೋಽಪಿ ವಾ।
ಆಕ್ರುಷ್ಟಸ್ತರ್ಜಿತೋ ವಾಪಿ ಕ್ಷಮಾವಾಂಸ್ತೀರ್ಥಮುಚ್ಯತೇ ॥೧೪೮॥

ಮಾನಿತನಾಗಲೀ, ಅವಮಾನಿತನಾಗಲೀ, ಪೂಜಿತನಾಗಲೀ, ತಿರಸ್ಕೃತನಾಗಲೀ, ನಿಂದಿಸಲ್ಪಡಲಿ, ಭಯಗೊಳಿಸಲ್ಪಡಲಿ–ಯಾವನು ಕ್ಷಮಾಶೀಲನಾಗಿರುವನೋ–ಅವನನ್ನೇ ತೀರ್ಥವೆಂದು ಹೇಳುತ್ತಾರೆ.

ಕ್ಷಮಾ ಯಶಃ ಕ್ಷಮಾ ದಾನಂ ಕ್ಷಮಾ ಯಜ್ಞಃ ಕ್ಷಮಾ ದಮಃ।
ಕ್ಷಮಾಹಿಂಸಾ ಕ್ಷಮಾ ಧರ್ಮಃ ಕ್ಷಮಾ ಚೇನ್ದ್ರಿಯನಿಗ್ರಹಃ ॥೧೪೯॥

ಕ್ಷಮಾ ದಯಾ ಕ್ಷಮಾ ಯಜ್ಞಃ ಕ್ಷಮಯೈವ ಧೃತಂ ಜಗತ್।
ಕ್ಷಮಾವಾನ್ಬ್ರಾಹ್ಮಣೋ ದೇವಃ ಕ್ಷಮಾವಾನ್ಬ್ರಾಹ್ಮಣೋ ವರಃ ॥
ಕ್ಷಮಾವಾನ್ಪ್ರಾಪ್ನುಯಾತ್ಸ್ವರ್ಗಂ ಕ್ಷಮಾವಾನಾಪ್ನುಯಾದ್ಯಶಃ।
ಕ್ಷಮಾವಾನ್ಪ್ರಾಪ್ನುಯಾನ್ಮೋಕ್ಷಂ ತಸ್ಮಾತ್ಸಾಧುಃ ಸ ಉಚ್ಯತೇ ॥೧೧೦೫॥

ಕ್ಷಮೆಯೇ ಯಶಸ್ಸು, ದಾನ, ಯಜ್ಞ, ಮನೋನಿಗ್ರಹ, ಅಹಿಂಸೆ, ಧರ್ಮ, ಇಂದ್ರಿಯನಿಗ್ರಹ ಎಲ್ಲವೂ ಆಗಿದೆ. ಕ್ಷಮೆಯೇ ದಯೆ ಮತ್ತು ಯಜ್ಞವಾಗಿದೆ. ಕ್ಷಮೆಯೇ ಈ ಜಗತ್ತನ್ನು ಧರಿಸಿದೆ. ಕ್ಷಮಾವಂತನಾದ ಬ್ರಾಹ್ಮಣನು ದೇವತೆಯೇ ಸರಿ. ಅವನು ಎಲ್ಲರಿಗಿಂತಲೂ ಶ್ರೇಷ್ಠನಾದವನು. ಕ್ಷಮಾವಂತನು ಸ್ವರ್ಗವನ್ನೂ, ಯಶಸ್ಸನ್ನೂ, ಮೋಕ್ಷವನ್ನೂ ಪಡೆದು ಕೊಳ್ಳುತ್ತಾನೆ. ಆದುದರಿಂದ ಕ್ಷಮಾವಂತನನ್ನೇ ಸತ್ಪುರುಷನೆಂದು ಹೇಳುತ್ತಾರೆ.

ಆತ್ಮಾ ನದೀ ಭಾರತ ಪುಣ್ಯತೀರ್ಥ
ಮಾತ್ಮತೀರ್ಥಂ ಸರ್ವತೀರ್ಥಪ್ರಧಾನಮ್।
ಆತ್ಮಾ ಯಜ್ಞಃ ಸತತಂ ಮನ್ಯತೇ ವೈ
ಸ್ವರ್ಗೋ ಮೋಕ್ಷಃ ಸರ್ವಮಾತ್ಮನ್ಯಧೀನಮ್॥೧೧೦೬॥

ಆತ್ಮರೂಪವಾದ ನದಿಯೇ ಪರಮಪಾವನವಾದ ತೀರ್ಥವಾಗಿದೆ. ಆತ್ಮವೇ ಎಲ್ಲ ತೀರ್ಥಗಳಿಗೂ ಪ್ರಧಾನವಾದ ತೀರ್ಥವಾಗಿದೆ. ಆತ್ಮನನ್ನೇ ಸದಾ ಯಜ್ಞಸ್ವರೂಪನೆಂದು ಯೋಗಿಗಳು ತಿಳಿಯುತ್ತಾರೆ. ಸ್ವರ್ಗ-ಮೋಕ್ಷಗಳೆಲ್ಲವೂ ಆತ್ಮನಿಗೇ ಅಧೀನವಾಗಿವೆ.

ಆಚಾರನೈರ್ಮಲ್ಯಮುಪಾಗತೇನ
ಸತ್ಯಕ್ಷಮಾನಿಸ್ತುಲಶೀತಲೇನ ।
ಜ್ಞಾನಾಮ್ಬುನಾ ಸ್ನಾತಿ ಹಿ ನಿತ್ಯಮೇವಂ
ಕಿಂ ತಸ್ಯ ಭೂಯಃ ಸಲಿಲೇನ ತೀರ್ಥಮ್ ॥೧೧೦೭॥

ಯಾವನು ಸದಾಚಾರಗಳ ಪಾಲನೆಯಿಂದ ಅತ್ಯಂತನಿರ್ಮಲ ನಾಗಿರುವನೋ, ಸತ್ಯ ಮತ್ತು ಕ್ಷಮೆಗಳೆಂಬ ಅಪಾರವಾದ ಶೀತಲತೆಯಿಂದ ಕೂಡಿರುವ ಜ್ಞಾನವೆಂಬ ನೀರಿನಲ್ಲಿ ಯಾವನು ನಿತ್ಯವೂ ಸ್ನಾನಮಾಡು

ವನೋ ಅಂತಹವನಿಗೆ ಪುನಃ ಜಲರೂಪವಾದ ತೀರ್ಥಗಳಲ್ಲಿ ಸ್ನಾನಮಾಡುವ ಅಗತ್ಯವಾದರೂ ಏನಿದೆ?"

ಯುಧಿಷ್ಠಿರನು ಹೇಳುತ್ತಾನೆ:

"ಸುರಶ್ರೇಷ್ಠನೇ! ಪೂಜ್ಯನೇ! ನಿನ್ನ ಭಕ್ತನಾದ ನನಗೆ ಸರ್ವಪಾಪಗಳನ್ನೂ ಹೋಗಲಾಡಿಸುವ, ಸುಲಭವಾಗಿ ಮಾಡಿಕೊಳ್ಳಬಹುದಾದ ಪ್ರಾಯಶ್ಚಿತ್ತವು ಯಾವುದೆಂಬುದನ್ನು ಹೇಳುವ ಕೃಪೆಮಾಡು."

ಶ್ರೀಕೃಷ್ಣನು ಹೇಳುತ್ತಾನೆ:

"ಯುಧಿಷ್ಠಿರ! ನಾನು ನಿನಗೆ ಅತ್ಯಂತಗೋಪನೀಯವಾದ ಅತ್ಯಂತ ಸುಲಭವಾದ ಪ್ರಾಯಶ್ಚಿತ್ತವನ್ನು ಹೇಳುತ್ತೇನೆ. ಈ ರಹಸ್ಯವಿಷಯವನ್ನು ಪಾಪಕರ್ಮಿಗಳಿಗಾಗಲೀ ಅಧಾರ್ಮಿಕರಿಗಾಗಲೀ ಹೇಳಬಾರದು.

ಪಾವನಂ ಬ್ರಾಹ್ಮಣಂ ದೃಷ್ಟ್ವಾ ಮದ್ಗತೇನಾನ್ತರಾತ್ಮನಾ।
ನಮೋ ಬ್ರಹ್ಮಣ್ಯದೇವಾಯೇತ್ಯಭಿವಾದನಮಾಚರೇತ್ ॥೧೧೧೦॥

ಪವಿತ್ರನಾದ ಬ್ರಾಹ್ಮಣನನ್ನು ನೋಡಿದೊಡನೆಯೇ ನನ್ನನ್ನು ಸ್ಮರಿಸಿಕೊಂಡು-'ನಮೋ ಬ್ರಹ್ಮಣ್ಯದೇವಾಯ'-ಎಂದು ಹೇಳಿಕೊಂಡು ಭಗವದ್ಬುದ್ಧಿಯಿಂದ ಆ ಬ್ರಾಹ್ಮಣನಿಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸಬೇಕು.

ಪ್ರದಕ್ಷಿಣಂ ಚ ಯಃ ಕುರ್ಯಾತ್ಪುನರಷ್ಟಾಕ್ಷರೇಣ ತು ।
ತೇನ ತುಷ್ಟೇನ ವಿಪ್ರೇಣ ತತ್ಪಾಪಂ ಕ್ಷಪಯಾಮ್ಯಹಮ್ ॥೧೧೧೧॥

ಬಳಿಕ ಶ್ರೀಮದಷ್ಟಾಕ್ಷರಮಂತ್ರವನ್ನು-ಪ್ರಣವಸಹಿತವಾಗಿ (ಓಂ ನಮೋ ನಾರಾಯಣಾಯ)-ಎಂದು ಹೇಳಿಕೊಂಡು ಬ್ರಾಹ್ಮಣನನ್ನು ಪ್ರದಕ್ಷಿಣೆ ಮಾಡಬೇಕು. ಹೀಗೆ ಮಾಡುವುದರಿಂದ ಬ್ರಾಹ್ಮಣನು ತುಷ್ಟನಾಗುತ್ತಾನೆ. ಅದರಿಂದ ನಾನು ತುಷ್ಟನಾಗಿ ಹಾಗೆ ಪ್ರದಕ್ಷಿಣೆಮಾಡಿರುವವನ ಪಾಪವನ್ನು ಹೋಗಲಾಡಿಸುತ್ತೇನೆ.

ಯತ್ರ ಕೃಷ್ಟಾಂ ವರಾಹಸ್ಯ ಮೃತ್ತಿಕಾಂ ಶಿರಸಾ ವಹನ್।
ಪ್ರಾಣಾಯಾಮಶತಂ ಕೃತ್ವಾ ನರಃ ಪಾಪೈಃ ಪ್ರಮುಚ್ಯತೇ ॥೧೧೧೨॥

ವರಾಹವು (ಕಾಡುಹಂದಿ) ಬಗೆದಿರುವ ಮೃತ್ತಿಕೆಯನ್ನು ತಲೆಯಮೇಲಿಟ್ಟುಕೊಂಡು ನೂರು ಪ್ರಾಣಾಯಾಮಗಳನ್ನು ಮಾಡುವ ಮನುಷ್ಯನು ಸಮಸ್ತಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ.

ದಕ್ಷಿಣಾವರ್ತಶಙ್ಖಾದ್ವಾ ಕಪಿಲಾಶೃಙ್ಗತೋಽಪಿ ವಾ।
ಪ್ರಾಕ್ಸ್ರೋತಸಂ ನದೀಂ ಗತ್ವಾ ಮಮಾಯತನಸಂನಿಧೌ ॥೧೧೧೫॥
ಸಲಿಲೇನ ತು ಯಃ ಸ್ನಾಯಾತ್ಸಕೃದೇವ ರವಿಗ್ರಹೇ।
ತಸ್ಯ ಯತ್ಸಂಚಿತಂ ಪಾಪಂ ತತ್ಕ್ಷಣಾದೇವ ನಶ್ಯತಿ ॥೧೧೧೪॥

ಸೂರ್ಯಗ್ರಹಣದ ಸಮಯದಲ್ಲಿ ಪೂರ್ವಕ್ಕೆ ಹರಿಯುವ ನದಿಯ ಬಳಿಗೆ ಹೋಗಿ ನನ್ನ ಮಂದಿರದ ಬಳಿಯಲ್ಲಿ (ದೇವಸ್ಥಾನದ ಬಳಿಯಲ್ಲಿ) ಬಲಮುರೀಶಂಖದಲ್ಲಾಗಲೀ ಕಪಿಲಾಧೇನುವಿನ ಕೊಂಬಿನಲ್ಲಾಗಲೀ ನದಿಯ ನೀರನ್ನು ತುಂಬಿಕೊಂಡು ಒಮ್ಮೆ ಸ್ನಾನಮಾಡಿದರೂ ಅಂತಹವನ ಅನೇಕ ಜನ್ಮಗಳಿಂದ ಸಂಚಿತವಾದ ಪಾಪಗಳು ಆ ಕ್ಷಣದಲ್ಲಿಯೇ ಹೋಗಿಬಿಡುತ್ತವೆ.

ಪಿಬೇತ್ತು ಪಞ್ಚಗವ್ಯಂ ಯಃ ಪೌರ್ಣಮಾಸ್ಯಾಮುಪೋಷ್ಯ ತು।
ತಸ್ಯ ನಶ್ಯತಿ ತತ್ಪಾಪಂ ಯತ್ಪಾಪಂ ಪೂರ್ವಸಂಚಿತಮ್ ॥೧೧೧೫॥

ಯಾವನು ಹುಣ್ಣಿಮೆಯ ದಿನ ಉಪವಾಸವಿದ್ದು ಪಂಚಗವ್ಯವನ್ನು ಪ್ರಾಶನಮಾಡುವನೋ–ಅವನ ಪೂರ್ವಸಂಚಿತಪಾಪಗಳೆಲ್ಲವೂ ಒಡನೆಯೇ ನಾಶಹೊಂದುತ್ತವೆ.

ತಥೈವ ಬ್ರಹ್ಮಕೂರ್ಚಂ ತು ಸಮನ್ತ್ರಂ ತು ಪೃಥಕ್ಪೃಥಕ್।
ಮಾಸಿ ಮಾಸಿ ಪಿಬೇದ್ಯಸ್ತು ತಸ್ಯ ಪಾಪಂ ಪ್ರಣಶ್ಯತಿ ॥೧೧೧೬॥

ಅದೇ ರೀತಿಯಲ್ಲಿ ಯಾವನು ಪ್ರತಿಮಾಸವೂ ಪ್ರತ್ಯೇಕ-ಪ್ರತ್ಯೇಕವಾಗಿ ಮಂತ್ರವನ್ನು ಜಪಿಸುತ್ತಾ ಬ್ರಹ್ಮಕೂರ್ಚವನ್ನು *(ಪಂಚಗವ್ಯವನ್ನು) ಪ್ರಾಶನಮಾಡುವನೋ–ಅವನ ಪಾಪವೂ ನಾಶವಾಗುತ್ತದೆ.

---

*ಬ್ರಹ್ಮಕೂರ್ಚ-ಒಂದುದಿನ ಪೂರ್ತಿ ಉಪವಾಸಮಾಡಿ ಮರುದಿನ ಪ್ರಾತಃಕಾಲದಲ್ಲಿ ಮಾಡುವ ಪಂಚಗವ್ಯಪ್ರಾಶನವು ಬ್ರಹ್ಮಕೂರ್ಚವೆನಿಸುವುದು. **ಅಹೋರಾತ್ರೋಷಿತೋ ಭೂತ್ವಾ ಪೌರ್ಣಮಾಸ್ಯಾಂ ವಿಶೇಷತಃ । ಪಞ್ಚಗವ್ಯಂ ಪಿಬೇತ್ಪ್ರಾತಃ ಬ್ರಹ್ಮಕೂರ್ಚವಿಧಿಃ ಸ್ಮೃತಃ ॥**

ಭಾರತನೇ! ಈಗ ನಾನು ಬ್ರಹ್ಮಕೂರ್ಚದ ವಿಷಯವಾಗಿಯೂ ಮತ್ತು ಅದನ್ನಿಡುವ ಪಾತ್ರೆಯ ವಿಷಯವಾಗಿಯೂ ಹೇಳುತ್ತೇನೆ.

ಪಲಾಶಂ ಪದ್ಮಪತ್ರಂ ಚ ತಾಮ್ರಂ ವಾಥ ಹಿರಣ್ಮಯಮ್।
ಸಾದಯಿತ್ವಾ ತು ಗೃಹ್ಣೀಯಾತ್ತತ್ತು ಪಾತ್ರಮುದಾಹೃತಮ್ ॥೧೧೧೭॥

ಮುತ್ತುಗದೆಲೆ-ಕಮಲದೆಲೆಗಳಲ್ಲಾಗಲೀ, ತಾಮ್ರ ಅಥವಾ ಚಿನ್ನದ ಪಾತ್ರೆಗಳಲ್ಲಾಗಲೀ ಬ್ರಹ್ಮಕೂರ್ಚವನ್ನಿಟ್ಟು (ಪಂಚಗವ್ಯವನ್ನಿಟ್ಟು) ಪ್ರಾಶನಮಾಡಬೇಕು. ಬ್ರಹ್ಮಕೂರ್ಚವನ್ನಿಡಲು ಇವೇ ಶ್ರೇಷ್ಠವಾದ ಪಾತ್ರೆಗಳಾಗಿವೆ.

ಗಾಯತ್ರ್ಯಾ ಗೃಹ್ಣತೇ ಮೂತ್ರಂ ಗನ್ಧದ್ವಾರೇತಿ ಗೋಮಯಮ್।
ಆಪ್ಯಾಯಸ್ವೇತಿ ಚ ಕ್ಷೀರಂ ದಧಿಕ್ರಾವ್ಣೇತಿ ವೈ ದಧಿ ॥೧೧೧೮॥
ತೇಜೋಽಸಿ ಶುಕ್ರಮಿತ್ಯಾಜ್ಯಂ ದೇವಸ್ಯ ತ್ವಾ ಕುಶೋದಕಮ್।
ಆಪೋ ಹಿಷ್ಠೇತ್ಯೃಚಾ ಗೃಹ್ಯ ಯವಚೂರ್ಣಂ ಯಥಾವಿಧಿ ॥೧೧೧೯॥
ಬ್ರಹ್ಮಣೇ ಚ ಯಥಾ ಹುತ್ವಾ ಸಮಿದ್ಧೇ ಚ ಹುತಾಶನೇ।
ಅಲೋಡ್ಯ ಪ್ರಣವೇನೈವ ನಿರ್ಮಥ್ಯ ಪ್ರಣವೇನ ತು ॥೧೧೨೦॥

ಬ್ರಹ್ಮಕೂರ್ಚವನ್ನು ಸಿದ್ಧಪಡಿಸುವ ವಿಧಿಯು ಹೀಗಿದೆ: ಗಾಯತ್ರೀ[೧] ಮಂತ್ರವನ್ನು ಹೇಳಿಕೊಂಡು ಗೋಮೂತ್ರವನ್ನು ತೆಗೆದುಕೊಳ್ಳಬೇಕು. **'ಗಂಧದ್ವಾರಾಂ'**[೨] ಎಂಬ ಮಂತ್ರವನ್ನು ಹೇಳಿಕೊಂಡು ಗೋವಿನ ಸಗಣಿಯನ್ನು ತೆಗೆದುಕೊಳ್ಳಬೇಕು. 'ಆಪ್ಯಾಯಸ್ವ'[೩] ಎಂಬ ಮಂತ್ರವನ್ನು ಹೇಳಿಕೊಂಡು ಹಸುವಿನ ಹಾಲನ್ನು ತೆಗೆದುಕೊಳ್ಳಬೇಕು. [೪]'ದಧಿಕ್ರಾವಣ್ಣೋ

---

೧. ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ । ಧಿಯೋ ಯೋ ನಃ ಪ್ರಚೋದಯಾತ್ ॥

೨. ಗನ್ಧದ್ವಾರಾಂ ದುರಾಧರ್ಷಾಂ ನಿತ್ಯಪುಷ್ಟಾಂ ಕರೀಷಿಣೀಮ್ । ಈಶ್ವರೀಗ್‌ಂ ಸರ್ವಭೂತಾನಾಂ ತಾಮಿಹೋಪಹ್ವಯೇ ಶ್ರಿಯಮ್ ॥

೩. ಆಪ್ಯಾಯಸ್ವ ಸಮೇತು ತೇ ವಿಶ್ವತಃ ಸೋಮವೃಷ್ಣಿಯಂ । ಭವಾವಾಜಸ್ಯ ಸಂಗಥೇ॥

೪. ದಧಿಕ್ರಾವಣ್ಣೋ ಅಕಾರಿಷಂ ಜಿಷ್ಣೋರಶ್ವಸ್ಯ ವಾಜಿನಃ । ಸುರಭಿನೋ ಮುಖಾಕರತ್ಪ್ರಣ ಆಯೂಗ್‌ಂಷಿ ತಾರಿಷತ್ ॥

ಆಕಾರಿಷಂ’-ಎಂಬ ಮಂತ್ರವನ್ನು ಹೇಳಿಕೊಂಡು ಹಸುವಿನ ಮೊಸರನ್ನು ತೆಗೆದುಕೊಳ್ಳಬೇಕು. ‘ತೇಜೋಽಸಿ ಶುಕ್ರಂ’ ಅಥವಾ ‘ಶುಕ್ರಮಸಿ’[೫] ಎಂಬ ಮಂತ್ರವನ್ನು ಹೇಳಿಕೊಂಡು ಹಸುವಿನ ತುಪ್ಪವನ್ನು ತೆಗೆದುಕೊಳ್ಳಬೇಕು. ‘ದೇವಸ್ಯ ತ್ವಾ ಸವಿತುಃ’[೬] ಎಂಬ ಮಂತ್ರವನ್ನು ಹೇಳಿಕೊಂಡು ಕುಶೋದಕವನ್ನು ತೆಗೆದುಕೊಳ್ಳಬೇಕು. ‘ಆಪೋಹಿಷ್ಠಾ’[೭]-ಎಂಬ ಮಂತ್ರ ವನ್ನು ಹೇಳಿಕೊಂಡು ಯವಚೂರ್ಣವನ್ನು (ಗೋಧಿಹಿಟ್ಟನ್ನು) ತೆಗೆದುಕೊಳ್ಳ ಬೇಕು. ಎಲ್ಲವನ್ನೂ ಒಟ್ಟಿಗೆ ಸೇರಿಸಿ, ಅಗ್ನಿಯನ್ನು ಪ್ರತಿಷ್ಠಾಪಿಸಿ, ಪ್ರಜ್ವಲಿಸುವ ಅಗ್ನಿಯಲ್ಲಿ ಬ್ರಹ್ಮನಿಗೆ ಆಹುತಿಯನ್ನು ಕೊಡಬೇಕು. ಪ್ರಣವವನ್ನು ಹೇಳಿ ಕೊಂಡು ಎಲ್ಲವನ್ನೂ ಕಲಕಬೇಕು ಮತ್ತು ಪ್ರಣವದಿಂದಲೇ ಕಡೆಯಬೇಕು.

ಉದ್ಧೃತ್ಯ ಪ್ರಣವೇನೈವ ಪಿಬೇತ್ತು ಪ್ರಣವೇನ ತು।
ಮಹತಾಪಿ ಸ ಪಾಪೇನ ತ್ವಚೇವಾಹಿರ್ವಿಮುಚ್ಯತೇ ॥೧೧೨೧॥

ಪ್ರಣವವನ್ನು ಹೇಳಿಕೊಂಡೇ ಪಂಚಗವ್ಯವಿರುವ ಪಾತ್ರೆಯನ್ನು ಮೇಲಕ್ಕೆತ್ತಬೇಕು ಮತ್ತು ಪ್ರಣವೋಚ್ಚಾರಣಪೂರ್ವಕವಾಗಿಯೇ ಪ್ರಾಶನ ಮಾಡಬೇಕು. ಹೀಗೆ ಬ್ರಹ್ಮಕೂರ್ಚದ ಪ್ರಾಶನದಿಂದ–ಹಾವು ಪೊರೆಯಿಂದ ಮುಕ್ತವಾಗುವಂತೆ–ಮನುಷ್ಯನು ಮಹಾಪಾಪಗಳಿಂದಲೂ ಮುಕ್ತನಾಗುತ್ತಾನೆ.

ಭದ್ರಂ ನ ಇತಿ ಯಃ ಪಾದಂ ಪಠನ್ನೃಕ್ಸಂಹಿತಾಂ ತದಾ।
ಅನ್ತರ್ಜಲೇ ವಾಭ್ಯಾದಿತ್ಯೇ ತಸ್ಯ ಪಾಪಂ ಪ್ರಣಶ್ಯತಿ ॥೧೧೨೨॥

ಯಾವ ಮನುಷ್ಯನು ನೀರಿನಲ್ಲಿ ನಿಂತು ಅಥವಾ ಸೂರ್ಯನಿಗೆ

---

೫. ಶುಕ್ರಮಸಿ ಜ್ಯೋತಿರಸಿ ತೇಜೋಽಸಿ ದೇವೋ ವಃ ಸವಿತೋತ್ಪುನಾತ್ವಚ್ಛಿದ್ರೇಣ ಪವಿತ್ರೇಣ ವಸೋಃ ಸೂರ್ಯಸ್ಯ ರಶ್ಮಿಭಿಃ ।ಅಥವಾ-ತೇಜೋಽಸಿ ಶುಕ್ರಮಸ್ಯಮೃತಮಸಿ। ಧಾಮನಾಮಾಸಿ ಪ್ರಿಯಂ ದೇವಾನಾಮನಾಧೃಷ್ಟಂ। ದೇವಯಜನಮಸಿ ॥

೬. ದೇವಸ್ಯ ತ್ವಾ ಸವಿತುಃ ಪ್ರಸವೇಶ್ವಿನೋರ್ಬಾಹುಭ್ಯಾಂ ಪೂಷ್ಣೋಹಸ್ತಾಭ್ಯಾಮಾದದೇ ।

೭. ಆಪೋಹಿಷ್ಠಾ ಮಯೋ ಭುವಸ್ತಾನಊರ್ಜೇ ದಧಾತನ ।ಮಹೇರಣಾಯ ಚಕ್ಷಸೇ ಯೋ ವಃ ಶಿವತಮೋ ರಸಸ್ತಸ್ಯ ಭಾಜಯತೇ ಹ ನಃ ।ಉಶತೀರಿವ ಮಾತರಃ। ತಸ್ಮಾ ಅರಂಗಮಾಮವೋ ಯಸ್ಯ ಕ್ಷಯಾಯ ಜಿನ್ವಥ । ಆಪೋ ಜನಯಥಾ ಚ ನಃ॥

ಅಭಿಮುಖವಾಗಿ ನಿಂತು ಭದ್ರಂ ನಃ[೮] ಎಂಬ ಋಕ್ಕಿನ ಒಂದು ಪಾದವನ್ನಾಗಲೀ ಋಕ್ಸಂಹಿತೆಯನ್ನಾಗಲೀ ಜಪಿಸುವನೋ–ಅವನ ಪಾಪವೂ ನಾಶಹೊಂದುತ್ತದೆ.

ಮಮ ಸೂಕ್ತಂ ಪಠೇದ್ಯಸ್ತು ನಿತ್ಯಂ ಮದ್ಗತಮಾನಸಃ।
ನ ಪಾಪೇನ ಸ ಲಿಪ್ಯೇತ ಪದ್ಮಪತ್ರಮಿವಾಮ್ಭಸಾ ॥೧೧೨೩॥

ನನ್ನಲ್ಲಿಯೇ ನೆಟ್ಟ ಮನಸ್ಸುಳ್ಳವನಾಗಿ ಯಾವನು ನನ್ನ ಸೂಕ್ತವನ್ನು (ಪುರುಷಸೂಕ್ತವನ್ನು) ಪಠಿಸುವನೋ–ಅವನು ತಾವರೆಯ ಎಲೆಯು ನೀರಿನಿಂದ ಲಿಪ್ತವಾಗದಂತೆ ಪಾಪದಿಂದ ಲಿಪ್ತನಾಗುವುದಿಲ್ಲ.”

ವೈಷ್ಣವಧರ್ಮ-೨೦

ಉತ್ತಮ ಮತ್ತು ಅಧಮಬ್ರಾಹ್ಮಣರ ಲಕ್ಷಣಃ ಭಕ್ತ, ಗೋವು ಮತ್ತು ಅಶ್ವತ್ಥವೃಕ್ಷಗಳ ಮಹಿಮೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಕೀದೃಶಾ ಬ್ರಾಹ್ಮಣಾಃ ಪುಣ್ಯಾ ಭಾವಶುದ್ಧಾಃ ಸುರೇಶ್ವರ ।
ಯತ್ಕರ್ಮ ಸಫಲಂ ನೇತಿ ಕಥಯಸ್ವ ಮಮಾನಘ ॥೧೧೨೪॥

“ಅನಘನೇ! ಸುರೇಶ್ವರನೇ! ಭಾವದಿಂದ ಶುದ್ಧರಾದ ಪುಣ್ಯಾತ್ಮರಾದ ಬ್ರಾಹ್ಮಣರು ಹೇಗಿರುತ್ತಾರೆ? ಅವರು ಮಾಡಿದ ಕಾರ್ಯವು ಕೆಲವು ಸಮಯಗಳಲ್ಲಿ ಸಫಲವಾಗದಿರಲು ಕಾರಣವೇನು? ಈ ವಿಷಯಗಳನ್ನು ಹೇಳುವ ಕೃಪೆಮಾಡು.”

ಶ್ರೀಕೃಷ್ಣನು ಹೇಳುತ್ತಾನೆ:

“ಯುಧಿಷ್ಠಿರ! ಬ್ರಾಹ್ಮಣರು ಮಾಡುವ ಕಾರ್ಯವು ಸಫಲವಾಗುವುದಕ್ಕೂ-ನಿಷ್ಫಲವಾಗುವುದಕ್ಕೂ ಕಾರಣಗಳನ್ನು ಕ್ರಮವಾಗಿ ಹೇಳುವೆನು, ಕೇಳು.

ತ್ರಿದಣ್ಡಧಾರಣಂ ಮೌನಂ ಜಟಾಧಾರಣಮುಣ್ಡನಮ್।
ವಲ್ಕಲಾಜಿನಸಂವಾಸೋ ಬ್ರಹ್ಮಚರ್ಯಾಭಿಷೇಚನಮ್ ॥೧೧೨೫॥

---

[೮]ಭದ್ರಂ ನೋ ಅಪಿ ವಾತಯ ಮನೋ ದಕ್ಷಮುತ ಕ್ರತುಮ್ । ಅಥ ತೇ ಸಖ್ಯೇ ಅನ್ಧಸೋ ವಿವೋ ಮದೇ ರಣಾನ್ಗಾವೋ ನ ಯವಸೇ ವಿವಕ್ಷಸೇ ॥

ಅಗ್ನಿಹೋತ್ರಂ ಗೃಹೇ ವಾಸಃ ಸ್ವಾಧ್ಯಾಯಂ ದಾರಸತ್ಕ್ರಿಯಾ।
ಸರ್ವಾಣ್ಯೇತಾನಿ ವೈ ಮಿಥ್ಯಾ ಯದಿ ಭಾವೋ ನ ನಿರ್ಮಲಃ ॥

ಮನಸ್ಸಿನ ಭಾವನೆಯು ನಿರ್ಮಲವಾಗಿಲ್ಲದಿದ್ದರೆ-ತ್ರಿದಂಡಧಾರಣೆ, ಮೌನವ್ರತ, ಜಟಾಧಾರಣೆ, ಮುಂಡನ, ನಾರುಮಡಿ, ಮೃಗಚರ್ಮಧಾರಣೆ, ಬ್ರಹ್ಮಚರ್ಯೆ, ಸ್ನಾನವ್ರತ, ಅಗ್ನಿಹೋತ್ರ, ಗೃಹಸ್ಥಧರ್ಮಪಾಲನೆ, ವೇದಾಧ್ಯಯನ, ಪತ್ನಿಯನ್ನು ಸತ್ಕರಿಸುವುದು–ಈ ಎಲ್ಲ ಕರ್ಮಗಳೂ ವ್ಯರ್ಥವೇ ಸರಿ.

ಕ್ಷಾನ್ತಂ ದಾನ್ತಂ ಜಿತಕ್ರೋಧಂ ಜಿತಾತ್ಮನಂ ಜಿತೇನ್ದ್ರಿಯಮ್।
ತಮಗ್ರ್ಯಂ ಬ್ರಾಹ್ಮಣಂ ಮನ್ಯೇ ಶೇಷಾಃ ಶೂದ್ರಾ ಇತಿ ಸ್ಮೃತಾಃ ॥

ಕ್ಷಮಾಶೀಲನಾದ, ಇಂದ್ರಿಯಗಳನ್ನು ದಮನಮಾಡಿರುವ, ಕೋಪವನ್ನು ಜಯಿಸಿರುವ, ಮನಸ್ಸನ್ನು ಜಯಿಸಿರುವ, ಇಂದ್ರಿಯಗಳನ್ನು ಜಯಿಸಿರುವ ಬ್ರಾಹ್ಮಣನನ್ನೇ ನಾನು ಶ್ರೇಷ್ಠನಾದ ಬ್ರಾಹ್ಮಣನೆಂದು ಭಾವಿಸುತ್ತೇನೆ. ಇದಕ್ಕೆ ವ್ಯತಿರಿಕ್ತರಾಗಿರುವ ಉಳಿದವರೆಲ್ಲರನ್ನೂ ಶೂದ್ರರೆಂದೇ ಭಾವಿಸಬೇಕು.

ಅಗ್ನಿಹೋತ್ರವ್ರತಪರಾನ್ಸ್ವಾಧ್ಯಾಯನಿರತಾಞ್ಛುಚೀನ್।
ಉಪವಾಸರತಾನ್ದಾನ್ತಾಂಸ್ತಾನ್ದೇವಾ ಬ್ರಾಹ್ಮಣಾನ್ವಿದುಃ।
ನ ಜಾತ್ಯಾ ಪೂಜಿತೋ ರಾಜನ್ಗುಣಾಃ ಕಲ್ಯಾಣಕಾರಣಾಃ ॥೧೧೨೯॥

ಯಾರು ಅಗ್ನಿಹೋತ್ರಿಗಳೋ, ವ್ರತನಿಷ್ಠರೋ, ಸ್ವಾಧ್ಯಾಯ ಪರಾಯಣರೋ, ಪವಿತ್ರರೋ, ನಿಯತವಾದ ಕಾಲಗಳಲ್ಲಿ ಉಪವಾಸ ಮಾಡುವರೋ, ಜಿತೇಂದ್ರಿಯರೋ–ಅಂತಹವರನ್ನು ದೇವತೆಗಳು ಬ್ರಾಹ್ಮಣರೆಂದು ತಿಳಿಯುತ್ತಾರೆ. ಕೇವಲ ಜಾತಿಯಿಂದ ಯಾವನೂ ಪೂಜಿತನಾಗುವುದಿಲ್ಲ. ಉತ್ತಮಗುಣಗಳು ಮಾತ್ರವೇ ಕಲ್ಯಾಣವನ್ನು ಉಂಟುಮಾಡತಕ್ಕುವುಗಳಾಗಿವೆ.

ಮನಃಶೌಚಂ ಕರ್ಮಶೌಚಂ ಕುಲಶೌಚಂ ಚ ಭಾರತ ।
ಶರೀರಶೌಚಂ ವಾಕ್ಶೌಚಂ ಶೌಚಂ ಪಞ್ಚವಿಧಂ ಸ್ಮೃತಮ್ ॥೧೧೨೮॥

ಮನಃಶುದ್ಧಿ, ಕ್ರಿಯಾಶುದ್ಧಿ, ಕುಲಶುದ್ಧಿ, ಶರೀರಶುದ್ಧಿ ಮತ್ತು ವಾಕ್ಶುದ್ಧಿ-ಹೀಗೆ ಐದು ವಿಧವಾದ ಶುದ್ಧಿಗಳಿವೆಯೆಂದು ಹೇಳುತ್ತಾರೆ.

ಪಞ್ಚಸ್ವೇತೇಷು ಶೌಚೇಷು ಹೃದಿ ಶೌಚಂ ವಿಶಿಷ್ಯತೇ।
ಹೃದಯಸ್ಯ ಚ ಶೌಚೇನ ಸ್ವರ್ಗಂ ಗಚ್ಛನ್ತಿ ಮಾನವಾಃ ॥೧೧೩೧॥

ಈ ಐದು ಶುದ್ಧಿಗಳಲ್ಲಿ ಹೃದಯಶುದ್ಧಿ ಅಥವಾ ಮನಶ್ಶುದ್ಧಿಯೇ ಎಲ್ಲಕ್ಕಿಂತಲೂ ಶ್ರೇಷ್ಠವಾದುದು. ಹೃದಯಶುದ್ಧಿಯಿದ್ದ ಮನುಷ್ಯರು ಸ್ವರ್ಗಕ್ಕೆ ಹೋಗುತ್ತಾರೆ.

ಅಗ್ನಿಹೋತ್ರಪರಿಭ್ರಷ್ಟಃ ಪ್ರಸಕ್ತಃ ಕ್ರಯವಿಕ್ರಯೈಃ ।
ವರ್ಣಸಂಕರಕರ್ತಾ ಚ ಬ್ರಾಹ್ಮಣೋ ವೃಷಲೈಃ ಸಮಃ ॥೧೧೩೨॥

ಅಗ್ನಿಹೋತ್ರವನ್ನು ಬಿಟ್ಟಿರುವ, ಕ್ರಯ-ವಿಕ್ರಯಾದಿಗಳಲ್ಲಿ ಆಸಕ್ತನಾಗಿರುವ, ವರ್ಣಸಂಕರವನ್ನು ಪ್ರಚಾರಮಾಡುವ ಬ್ರಾಹ್ಮಣನು ಶೂದ್ರರಿಗೆ ಸಮಾನನು.

ಯಸ್ಯ ವೇದಶ್ರುತಿರ್ನಷ್ಟಾ ಕರ್ಷಕಶ್ಚಾಪಿ ಯೋ ದ್ವಿಜಃ।
ವಿಕರ್ಮಸೇವೀ ಕೌನ್ತೇಯ ಸ ವೈ ವೃಷಲ ಉಚ್ಯತೇ ॥೧೧೩೩॥

ಯಾವನಲ್ಲಿ ವೈದಿಕಶ್ರುತಿಗಳು ನಷ್ಟವಾಗಿ ಹೋಗಿವೆಯೋ (ವೇದಾಧ್ಯಯನವೇ ಇಲ್ಲವೋ), ಭೂಮಿಯನ್ನುಳುವನೋ, ತನ್ನ ವರ್ಣಧರ್ಮಕ್ಕೆ ವಿರುದ್ಧವಾದ ಕರ್ಮವನ್ನು ಮಾಡುವನೋ–ಅಂತಹ ಬ್ರಾಹ್ಮಣನನ್ನು ವೃಷಲನೆಂದು ಕರೆಯುತ್ತಾರೆ.

ವೃಷೋ ಹಿ ಧರ್ಮೋ ವಿಜ್ಞೇಯಸ್ತಸ್ಯ ಯಃ ಕುರುತೇ ಲಯಮ್।
ವೃಷಲಂ ತಂ ವಿದುರ್ದೇವಾ ನಿಕೃಷ್ಟಂ ಶ್ವಪಚಾದಪಿ ॥೧೧೩೪॥

'ವೃಷ'-ಎಂಬ ಶಬ್ದದ ಅರ್ಥವು 'ಧರ್ಮ' ಎಂದಾಗುತ್ತದೆ. ಅಂತಹ ಧರ್ಮವನ್ನು ಯಾವನು ಲಯಗೊಳಿಸುವನೋ–ಅವನನ್ನೇ ವೃಷಲನೆಂದು ದೇವತೆಗಳು ತಿಳಿಯುತ್ತಾರೆ. ಧರ್ಮವನ್ನು ಲಯಗೊಳಿಸುವ ವೃಷಲನು ಶ್ವಪಚನಿಗಿಂತಲೂ (ಚಾಂಡಾಲನಿಗಿಂತಲೂ) ನಿಕೃಷ್ಟನಾದವನೇ ಸರಿ.

ಸ್ತುತಿಭಿರ್ಬ್ರಹ್ಮಗೀತಾಭಿರ್ಯಃ ಶೂದ್ರಂ ಸ್ತೌತಿ ಮಾನವಃ।
ನ ತು ಮಾಂ ಸ್ತೌತಿ ಪಾಪಾತ್ಮಾ ಸ ತು ಚಣ್ಡಾಲತಃ ಸಮಃ ॥೧೧೩೫॥

ಯಾವ ಪಾಪಾತ್ಮನು ಬ್ರಹ್ಮಗೀತೆಯೇ ಮೊದಲಾದುವುಗಳಿಂದ

ನನ್ನನ್ನು ಸ್ತುತಿಸದೇ ಶೂದ್ರನನ್ನು ಸ್ತುತಿಸುವನೋ (ವೇದಮಂತ್ರಗಳಿಂದ-ಹಣದಾಸೆಗಾಗಿ ಅಪಾತ್ರರನ್ನು ಸ್ತುತಿಸಿ-ಆಶೀರ್ವದಿಸುವನೋ)–ಅವನು ಚಾಂಡಾಲನಿಗೆ ಸಮಾನನು.

ಶ್ವದೃತೌ ತು ಯಥಾ ಕ್ಷೀರಂ ಬ್ರಹ್ಮ ವೈ ವೃಷಲೇ ತಥಾ।
ದುಷ್ಟತಾಮೇತಿ ತತ್ಸರ್ವಂ ಶುನಾ ಲೀಢಂ ಹವಿರ್ಯಥಾ ॥೧೧೩೬॥

ನಾಯಿಯ ಚರ್ಮದ ಚೀಲದಲ್ಲಿರುವ ಹಾಲು ಮತ್ತು ನಾಯಿ ನೆಕ್ಕಿದ ಹವಿಸ್ಸುಗಳು ಹೇಗೆ ಅಪರಿಶುದ್ಧವೋ–ಹಾಗೆಯೇ ವೃಷಲನಲ್ಲಿರುವ ವೇದವೂ ದೂಷಿತವೇ ಸರಿ.

ಅಙ್ಗಾನಿ ವೇದಾಶ್ಚತ್ವಾರೋ ಮೀಮಾಂಸಾ ನ್ಯಾಯವಿಸ್ತರಃ।
ಧರ್ಮಶಾಸ್ತ್ರಂ ಪುರಾಣಂ ಚ ವಿದ್ಯಾ ಹ್ಯೇತಾಶ್ಚತುರ್ದಶ ॥೧೧೩೭॥

ಋಗ್ಯಜುಸ್ಸಾಮಾಥರ್ವಣಗಳೆಂಬ ನಾಲ್ಕು ವೇದಗಳು, ಶಿಕ್ಷಾ-ವ್ಯಾಕರಣ-ಛಂದಸ್ಸು-ನಿರುಕ್ತ-ಜ್ಯೋತಿಷ-ಕಲ್ಪಗಳೆಂಬ ಆರು ವೇದಾಂಗಗಳು, ಮೀಮಾಂಸಾ, ನ್ಯಾಯ(ತರ್ಕ), ಧರ್ಮಶಾಸ್ತ್ರ ಮತ್ತು ಪುರಾಣ-ಇವೇ ಹದಿನಾಲ್ಕು ವಿದ್ಯೆಗಳು.

ಭಾರತನೇ! ನಾನು ಯಾವ ಹದಿನಾಲ್ಕು ವಿದ್ಯಾಸ್ಥಾನಗಳನ್ನು (ವಿದ್ಯೆಗಳನ್ನು) ಹೇಳಿರುವೆನೋ–ಆ ಹದಿನಾಲ್ಕು ವಿದ್ಯೆಗಳೂ ಲೋಕಕಲ್ಯಾಣಾರ್ಥವಾಗಿ ಪ್ರಕಟವಾದುವುಗಳು ಮತ್ತು ಪರಮಪವಿತ್ರವಾದುವುಗಳು. ಆದುದರಿಂದ ಇವುಗಳನ್ನು ವೃಷಲನು ಸ್ಪರ್ಶಿಸಬಾರದು. ಈ ವಿದ್ಯೆಗಳು ವೃಷಲಸ್ಪರ್ಶದಿಂದ ಅಪವಿತ್ರಗಳಾಗುವುವೆಂಬುದರಲ್ಲಿ ಸಂಶಯವೇ ಇಲ್ಲ.

ಲೋಕೇ ತ್ರೀಣ್ಯಪವಿತ್ರಾಣಿ ಪಞ್ಚಾಮೇಧ್ಯಾನಿ ಭಾರತ।
ಶ್ವಾ ಚ ಶೂದ್ರಃ ಶ್ವಪಾಕಶ್ಚ ಅಪವಿತ್ರಾಣಿ ಪಾಣ್ಡವ ॥೧೧೪೦॥
ಗಾಯಕಃ ಕುಕ್ಕುಟೋ ಯೂಪೋ ಹ್ಯುದಕ್ಯಾ ವೃಷಲೀಪತಿಃ।
ಪಞ್ಚೈತೇ ಸ್ಯುರಮೇಧ್ಯಾಶ್ಚ ಸ್ಪ್ರಷ್ಟವ್ಯಾ ನ ಕದಾಚನ।
ಸ್ಪೃಷ್ಟ್ವೈತಾನಷ್ಟ ವೈ ವಿಪ್ರಃ ಸಚೈಲೋ ಜಲಮಾವಿಶೇತ್ ॥೧೧೪೧॥

ಲೋಕದಲ್ಲಿ ಮೂರು ಅಪವಿತ್ರವಾದುವುಗಳೂ ಮತ್ತು ಐದು

ಅಶುದ್ಧವಾದುವುಗಳೂ ಇವೆ. ನಾಯಿ, ವೃಷಲ, ಶ್ವಪಾಕ (ಚಾಂಡಾಲ)–ಈ ಮೂವರು ಅಪವಿತ್ರರು. ಅಶ್ಲೀಲಗಾಯಕ, ಕೋಳಿ, ಕಡಿಯಲು ಪಶುಗಳನ್ನು ಕಟ್ಟಿರುವ ಸ್ತಂಭ, ರಜಸ್ವಲೆಯಾದ ಸ್ತ್ರೀ, ವೃಷಲಜಾತಿಯ ಸ್ತ್ರೀಯನ್ನು ಮದುವೆಮಾಡಿಕೊಂಡಿರುವ ಬ್ರಾಹ್ಮಣ–ಈ ಐವರು ಅಪರಿಶುದ್ಧರು. ಈ ಎಂಟರಲ್ಲಿ ಯಾವುದನ್ನು ಅಥವಾ ಯಾರನ್ನು ಮುಟ್ಟಿದರೂ ಬ್ರಾಹ್ಮಣನು ಉಟ್ಟಿರುವ ಬಟ್ಟೆಯಲ್ಲಿಯೇ ನೀರಿನಲ್ಲಿಳಿದು ಸ್ನಾನಮಾಡಬೇಕು.

ಮದ್ಭಕ್ತಾಞ್ಶೂದ್ರಸಾಮಾನ್ಯಾದವಮನ್ಯನ್ತಿ ಯೇ ನರಾಃ।
ನರಕೇಷ್ವೇವ ತಿಷ್ಠನ್ತಿ ವರ್ಷಕೋಟಿಂ ನರಾಧಮಾಃ ॥೧೧೪೨॥

ಆದರೆ-ನನ್ನ ಭಕ್ತರು ಶೂದ್ರಜಾತಿಯಲ್ಲಿ ಹುಟ್ಟಿರುವರೆಂಬ ಕಾರಣದಿಂದ ಯಾರಾದರೂ ಅವರನ್ನು ಅವಮಾನಗೊಳಿಸಿದ್ದೇ ಆದರೆ–ಅಂತಹವರು ನರಾಧಮರಾಗುತ್ತಾರೆ. ಅಲ್ಲದೇ ಕೋಟಿವರ್ಷಗಳವರೆಗೆ ನರಕದಲ್ಲಿಯೇ ಬೀಳುತ್ತಾರೆ.

ಚಣ್ಡಾಲಮಪಿ ಮದ್ಭಕ್ತಂ ನಾವಮನ್ಯೇತ ಬುದ್ಧಿಮಾನ್।
ಅವಮಾನಾತ್ಪತನ್ತ್ಯೇವ ನರಕೇ ರೌರವೇ ನರಾಃ ॥೧೧೪೩॥

ನನ್ನ ಭಕ್ತನು ಚಂಡಾಲನೇ ಆಗಿದ್ದರೂ ಅವನನ್ನು ಬುದ್ಧಿವಂತನಾದ ಮನುಷ್ಯನು ಅವಮಾನಿಸಬಾರದು. ಒಂದು ವೇಳೆ ಅವಮಾನಿಸಿದ್ದೇ ಆದರೆ ಅಂತಹವರು ರೌರವನರಕದಲ್ಲಿ ಬೀಳುತ್ತಾರೆ.

ಮಮ ಭಕ್ತಸ್ಯ ಭಕ್ತೇಷು ಪ್ರೀತಿರಭ್ಯಧಿಕಾ ಮಮ ।
ತಸ್ಮಾನ್ಮದ್ಭಕ್ತಭಕ್ತಾಶ್ಚ ಪೂಜನೀಯಾ ವಿಶೇಷತಃ ॥೧೧೪೪॥

ನನ್ನ ಭಕ್ತರಿಗೆ ಯಾರು ಭಕ್ತರೋ ಅವರಲ್ಲಿ ನನಗೆ ಹೆಚ್ಚಿನ ಪ್ರೀತಿ. ಆದುದರಿಂದ ನನ್ನ ಭಕ್ತರ ಭಕ್ತರನ್ನೂ ವಿಶೇಷವಾಗಿ ಸತ್ಕರಿಸಬೇಕು.

ಕೀಟಪಕ್ಷಿಮೃಗಾಣಾಂ ಚ ಮಯಿ ಸಂನ್ಯಸ್ತಚೇತಸಾಮ್।
ಊರ್ಧ್ವಾಮೇವ ಗತಿಂ ವಿದ್ಧಿ ಕಿಂ ಪುನರ್ಜ್ಞಾನಿನಾಂ ನೃಣಾಮ್ ॥

ನನ್ನಲ್ಲಿಯೇ ಮನಸ್ಸನ್ನಿಟ್ಟು ನನ್ನನ್ನೇ ಧ್ಯಾನಿಸುವ ಕೀಟ-ಪಕ್ಷಿ-ಮೃಗಗಳಿಗೂ ಊರ್ಧ್ವಗತಿಯ ಪ್ರಾಪ್ತಿಯುಂಟು. ಹೀಗಿರುವಾಗ ಜ್ಞಾನಿಗಳ ವಿಷಯದಲ್ಲಿ ಹೇಳುವುದೇನಿದೆ?

ಪತ್ರಂ ವಾಪ್ಯಥವಾ ಪುಷ್ಪಂ ಫಲಂ ವಾಪ್ಯಪ ಏವ ವಾ।
ದದಾತಿ ಮಮ ಶೂದ್ರೋ ಯಚ್ಛಿರಸಾ ಧಾರಯಾಮಿ ತತ್॥

ನನ್ನ ಭಕ್ತನಾದ ಶೂದ್ರನು, ಪತ್ರ-ಪುಷ್ಪ-ಫಲ-ಜಲ ಇವುಗಳಲ್ಲಿ ಯಾವುದನ್ನೇ ಭಕ್ತಿಯಿಂದ ಅರ್ಪಿಸಿದರೂ ಅದನ್ನು ನಾನು ತಲೆಯಲ್ಲಿ ಪ್ರೀತಿಯಿಂದ ಧರಿಸಿಕೊಳ್ಳುತ್ತೇನೆ.

ವೇದೋಕ್ತೇನೈವ ಮಾರ್ಗೇಣ ಸರ್ವಭೂತಹೃದಿ ಸ್ಥಿತಮ್।
ಮಾಮರ್ಚಯನ್ತಿ ಯೇ ವಿಪ್ರಾ ಮತ್ಸಾಯುಜ್ಯಂ ವ್ರಜನ್ತಿ ತೇ॥

ಯಾವ ಬ್ರಾಹ್ಮಣರು ಸರ್ವಪ್ರಾಣಿಗಳ ಹೃದಯಗಳಲ್ಲಿಯೂ ವಿರಾಜಮಾನನಾಗಿರುವ ನನ್ನನ್ನು ವೇದೋಕ್ತವಾದ ರೀತಿಯಿಂದ ಅರ್ಚಿಸುವರೋ ಅವರು ನನ್ನ ಸಾಯುಜ್ಯವನ್ನು ಹೊಂದುತ್ತಾರೆ.

ಮದ್ಭಕ್ತಾನಾಂ ಹಿತಾರ್ಥ್ಯೈವ ಪ್ರಾದುರ್ಭಾವಃ ಕೃತೋ ಮಯಾ।
ಪ್ರಾದುರ್ಭಾವಕೃತಾ ಕಾಚಿದರ್ಚನೀಯಾ ಯುಧಿಷ್ಠಿರ ॥೧೧೪೬॥

ನನ್ನ ಭಕ್ತರ ಹಿತಕ್ಕಾಗಿಯೇ ನಾನು ಅವತರಿಸುತ್ತೇನೆ. ಆದುದರಿಂದ ನನ್ನ ಅವತಾರಗಳ ಮೂರ್ತಿಗಳಲ್ಲಿ ಯಾವುದಾದರೂ ಮೂರ್ತಿಯನ್ನು ನನ್ನ ಭಕ್ತರು ಪೂಜಿಸಬೇಕು.

ಅಸಾಮಾನ್ಯತಮಾಂ ಮೂರ್ತಿಂ ಯೋ ಮದ್ಭಕ್ತ್ಯಾ ಸಮರ್ಚತಿ।
ತೇನೈವ ಪರಿತುಷ್ಟೋಽಹಂ ಭವಿಷ್ಯಾಮಿ ನ ಸಂಶಯಃ ॥೧೧೪೭॥

ಯಾವ ಮನುಷ್ಯನು ನನ್ನ ಅವತಾರಮೂರ್ತಿಗಳಲ್ಲಿ ಯಾವುದಾದರೂ ಒಂದನ್ನು ಭಕ್ತಿಭಾವದಿಂದ ಅರ್ಚಿಸುವನೋ–ಅವನ ಆ ಪೂಜೆಯಿಂದಲೇ ನಾನು ಸಂತುಷ್ಟನಾಗುತ್ತೇನೆ. ಇದರಲ್ಲಿ ಸಂಶಯವೇ ಇಲ್ಲ.

ಮೃದಾ ಚ ಮಣಿರತ್ನೈಶ್ಚ ತಾಮ್ರೇಣ ರಜತೇನ ಚ।
ಕೃತ್ವಾ ಪ್ರತಿಕೃತಿಂ ಕುರ್ಯಾದರ್ಚನಾಂ ಕಾಞ್ಚನೇನ ವಾ।
ಪುಣ್ಯಂ ದಶಗುಣಂ ವಿದ್ಯಾದೇತೇಷಾಮುತ್ತರೋತ್ತರಮ್ ॥೧೧೫೦॥

ಮಣ್ಣು, ಮಣಿಗಳು, ರತ್ನಗಳು, ತಾಮ್ರ, ಬೆಳ್ಳಿ ಮತ್ತು ಚಿನ್ನ-ಇವುಗಳಿಂದ ನನ್ನ ಪ್ರತಿಮೆಯನ್ನು ಮಾಡಿ ಪೂಜಿಸಬೇಕು. ಇವುಗಳಲ್ಲಿ

ಮುಂದು-ಮುಂದಿನ ಪದಾರ್ಥಗಳಲ್ಲಿ ಮೂರ್ತಿಗಳನ್ನು ಮಾಡಿಸಿ ಪೂಜೆ ಮಾಡಿದರೆ ಅನುಕ್ರಮವಾಗಿ ಹತ್ತುಪಟ್ಟು ಪುಣ್ಯವು ಹೆಚ್ಚು ಲಭಿಸುತ್ತದೆ. (ಮಣ್ಣಿನ ಮೂರ್ತಿಗೆ ಬದಲಾಗಿ ತಾಮ್ರದಿಂದ ಮೂರ್ತಿಯನ್ನು ಮಾಡಿಸಿದರೆ ಮಣ್ಣಿನ ಮೂರ್ತಿಯ ಪೂಜೆಗಿಂತಲೂ ಹತ್ತು ಪಟ್ಟು ಪುಣ್ಯವು ಹೆಚ್ಚಾಗಿ ಲಭಿಸುತ್ತದೆ. ಹೀಗೆಯೇ ಮುಂದಿನವುಗಳನ್ನು ಭಾವಿಸಿಕೊಳ್ಳಬೇಕು.)

ಜಯಕಾಮೋ ಭವೇದ್ರಾಜಾ ವಿದ್ಯಾಕಾಮೋ ದ್ವಿಜೋತ್ತಮಃ।
ವೈಶ್ಯೋ ವಾ ಧನಕಾಮಸ್ತು ಶೂದ್ರಃ ಸುಖಫಲಪ್ರಿಯಃ।
ಸರ್ವಕಾಮಾಃ ಸ್ತ್ರಿಯೋ ವಾಪಿ ಸರ್ವಾನ್ಕಾಮಾನವಾಪ್ನುಯುಃ॥

ವಿಜಯಾಕಾಂಕ್ಷಿಯಾದ ರಾಜನೂ, ವಿದ್ಯಾಕಾಂಕ್ಷಿಯಾದ ಬ್ರಾಹ್ಮಣನೂ, ಧನಾಕಾಂಕ್ಷಿಯಾದ ವೈಶ್ಯನೂ, ಸುಖಾಪೇಕ್ಷಿಯಾದ ಶೂದ್ರನೂ, ಎಲ್ಲ ಕಾಮನೆಗಳನ್ನೂ ಬಯಸುವ ಸ್ತ್ರೀಯರೂ–ನನ್ನ ಆರಾಧನೆಯಿಂದ ತಮ್ಮ ಎಲ್ಲ ಇಷ್ಟಾರ್ಥಗಳನ್ನೂ ಹೊಂದುತ್ತಾರೆ.”

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಕೀದೃಶಾನಾಂ ತು ಶೂದ್ರಾಣಾಂ ನಾನುಗೃಹ್ಣಾತಿ ಚಾರ್ಚನಾಮ್।
ಉದ್ವೇಗಸ್ತವ ಕಸ್ಮಾದ್ಧಿ ತನ್ಮೇ ಬ್ರೂಹಿ ಸುರೇಶ್ವರ ॥೧೧೫೨॥

“ಸುರೇಶ್ವರನೇ! ನೀನು ಎಂತಹ ಶೂದ್ರನ ಪೂಜೆಯನ್ನು ಸ್ವೀಕರಿಸುವುದಿಲ್ಲ? ಯಾವ ಕಾರ್ಯವು ನಿನಗೆ ಉದ್ವೇಗವನ್ನುಂಟು ಮಾಡುತ್ತದೆ? ಈ ವಿಷಯವನ್ನು ಹೇಳು.”

ಶ್ರೀಕೃಷ್ಣನು ಹೇಳುತ್ತಾನೆ:

ಅವ್ರತೇನಾಪ್ಯಭಕ್ತೇನ ಸ್ಪೃಷ್ಟಾಂ ಶೂದ್ರೇಣ ಚಾರ್ಚನಾಮ್।
ತಾಂ ವರ್ಜಯಾಮಿ ರಾಜೇನ್ದ್ರ ಶ್ವಪಾಕವಿಹಿತಾಮಿವ ॥೧೧೫೩॥

“ರಾಜೇನ್ದ್ರ! ವ್ರತಗಳನ್ನು ಪರಿಪಾಲಿಸದ ಮತ್ತು ನನ್ನ ಭಕ್ತನಲ್ಲದ ಶೂದ್ರನು ಮುಟ್ಟಿದ ಪೂಜೆಯನ್ನು ನಾನು ಚಾಂಡಾಲನು ಮಾಡಿದ ಪೂಜೆಯಂತೆ ತಿರಸ್ಕರಿಸುತ್ತೇನೆ.

ನನ್ವಹಂ ಶಙ್ಕರಶ್ಚಾಪಿ ಗಾವೋ ವಿಪ್ರಾಸ್ತಥೈವ ಚ ।
ಅಶ್ವತ್ಥೋಽಮರರೂಪಂ ಹಿ ತ್ರಯಮೇತದ್ಯುಧಿಷ್ಠಿರ ।
ಏತತ್ತ್ರಯಂ ಹಿ ಮದ್ಭಕ್ತೋ ನಾವಮನ್ಯೇತ ಕರ್ಹಿಚಿತ್ ॥೧೧೫॥

ಗೋವುಗಳು, ಬ್ರಾಹ್ಮಣರು ಮತ್ತು ಅಶ್ವತ್ಥವೃಕ್ಷ–ಇವು ಮೂರೂ ದೇವತಾಸ್ವರೂಪಗಳೇ ಆಗಿವೆ. ಈ ಮೂರರಲ್ಲಿ ನಾನೂ ಮತ್ತು ಶಂಕರನೂ ಇದ್ದೇವೆ. ಆದುದರಿಂದ ಈ ಮೂವರನ್ನು ನನ್ನ ಭಕ್ತನು ಯಾವುದೇ ಕಾರಣದಿಂದಲೂ ಅವಮಾನಿಸಬಾರದು. (ಹಾಗೇನಾದರೂ ಅಜ್ಞಾನದಿಂದ ಅವಮಾನಿಸಿದರೆ ನಾನು ಉದ್ವಿಗ್ನನಾಗುತ್ತೇನೆ.)

ಅಶ್ವತ್ಥೋ ಬ್ರಾಹ್ಮಣಾ ಗಾವೋ ಮನ್ಮಯಾಸ್ತಾರಯನ್ತಿ ಹಿ।
ತಸ್ಮಾದೇತತ್ಪ್ರಯತ್ನೇನ ತ್ರಯಂ ಪೂಜಯ ಪಾಣ್ಡವ ॥೧೧೬॥

ನನ್ನ ಸ್ವರೂಪಗಳೇ ಆಗಿರುವ ಅಶ್ವತ್ಥ, ಬ್ರಾಹ್ಮಣರು ಮತ್ತು ಗೋವುಗಳು-ತಮ್ಮನ್ನಾಶ್ರಯಿಸಿದವರನ್ನು ಉದ್ಧರಿಸುತ್ತಾರೆ. ಆದುದರಿಂದ, ಯುಧಿಷ್ಠಿರ! ನೀನೂ ಕೂಡ ಪ್ರಯತ್ನಪೂರ್ವಕವಾಗಿ ಈ ಮೂವರನ್ನೂ ಆರಾಧಿಸು."

ವೈಷ್ಣವಧರ್ಮ–೨೧

ಶ್ರೀಕೃಷ್ಣನ ಉಪದೇಶದ ಉಪಸಂಹಾರ: ದ್ವಾರಕೆಗೆ ಪ್ರಯಾಣ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

"ಕೃಷ್ಣ! ಪರದೇಶಕ್ಕೆ ಹೋಗಿರುವ ಬ್ರಾಹ್ಮಣನು ಕಾಲಕರ್ಮ ಸಂಯೋಗದಿಂದ ಅಲ್ಲಿಯೇ ಮೃತನಾದರೆ ಅವನಿಗೆ ಪ್ರೇತಸಂಸ್ಕಾರವನ್ನು (ಅಂತ್ಯೇಷ್ಟಿಯನ್ನು) ಹೇಗೆ ಮಾಡಬೇಕು?"

ಶ್ರೀಕೃಷ್ಣನು ಹೇಳುತ್ತಾನೆ:

"ಯುಧಿಷ್ಠಿರ! ಅಗ್ನಿಹೋತ್ರಿಯಾದ ಬ್ರಾಹ್ಮಣನು ಹೀಗೆ ದೇಶಾಂತರ ದಲ್ಲಿ ಮರಣಹೊಂದಿ ಅವನ ದೇಹವು ಅಲ್ಲಿಯೇ ನಷ್ಟವಾಗಿ ಹೋದರೆ ಪ್ರೇತಸಂಸ್ಕಾರಕಲ್ಪದ ಅನುಸಾರವಾಗಿ ಮುತ್ತುಗದ ಕಡ್ಡಿಗಳಿಂದ ಅವನ

ಪ್ರತಿಕೃತಿಯನ್ನು ಕಲ್ಪಿಸಬೇಕು. ಮನುಷ್ಯನ ಶರೀರದಲ್ಲಿ ಮುನ್ನೂರ ಅರವತ್ತು ಅಸ್ಥಿಗಳು* (ಮೂಳೆಗಳು) ಇವೆಯೆಂದು ವಿದ್ವಾಂಸರು ಹೇಳುತ್ತಾರೆ. ಈ ಎಲ್ಲವನ್ನೂ ಶಾಸ್ತ್ರೋಕ್ತರೀತಿಯಲ್ಲಿ ಕಲ್ಪಿಸಿಕೊಂಡು ಮುತ್ತುಗದ ಕಡ್ಡಿಗಳಿಂದ ಕಲ್ಪಿತವಾದ ಆ ಬ್ರಾಹ್ಮಣನ ಪ್ರತಿಕೃತಿಯನ್ನು ದಹನಮಾಡಬೇಕು."

ಯುಧಿಷ್ಠಿರನು ಹೇಳುತ್ತಾನೆ:

"ಕೃಷ್ಣ! ತೀರ್ಥಯಾತ್ರೆಮಾಡಲು ಅಶಕ್ತರಾದ ಭಕ್ತರನ್ನು ಉದ್ಧರಿಸುವ ಸಲುವಾಗಿ ಧರ್ಮಾನುಸಾರವಾಗಿ ವಿಶೇಷವಾದ ತೀರ್ಥಗಳನ್ನು ವಿವರಿಸಿ ಹೇಳು."

ಶ್ರೀಕೃಷ್ಣನು ಹೇಳುತ್ತಾನೆ:

ಪಾವನಂ ಸರ್ವತೀರ್ಥಾನಾಂ ಸತ್ಯಂ ಗಾಯನ್ತಿ ಸಾಮಗಾಃ।
ಸತ್ಯಸ್ಯ ವಚನಂ ತೀರ್ಥಮಹಿಂಸಾ ತೀರ್ಥಮುಚ್ಯತೇ ॥೧೧೬೦॥

"ಸಾಮವೇದವನ್ನು ಗಾಯನಮಾಡುವವರು–ಸರ್ವತೀರ್ಥಗಳಲ್ಲಿಯೂ ಸತ್ಯವೇ ಎಲ್ಲರನ್ನೂ ಪಾವನಗೊಳಿಸುವ ಶ್ರೇಷ್ಠವಾದ ತೀರ್ಥವೆಂದು ಗಾನಮಾಡುತ್ತಾರೆ. ಆದುದರಿಂದ ಸತ್ಯಭಾಷಣವೇ ತೀರ್ಥವು. ಅಹಿಂಸೆಯೂ ತೀರ್ಥವೆಂದು ಹೇಳಲ್ಪಟ್ಟಿದೆ.

---

*ಮನುಷ್ಯನಲ್ಲಿ ೩೬೦ ಎಲುಬುಗಳ ವಿವರಣೆ. ಹಲ್ಲುಗಳು ೩೨, ಹಲ್ಲುಗಳ ಗುಣಿಗಳು ೩೨, ಉಗುರುಗಳು ೨೦, ಕೈ-ಕಾಲುಗಳ ಬೆರಳುಗಳ ಎಲುಬುಗಳು ೬೦, ಅಂಗೈ ಮತ್ತು ಅಂಗಾಲು ಎಲುಬುಗಳು ೨೦, ಹೆಜ್ಜೆಯ ಕೀಲುಗಳು ೪, ಮೊಣಕೈ ಎಲುಬುಗಳು ೪, ಹಿಮ್ಮಡಿಯ ಮೂಳೆಗಳು ೨, ಕಾಲುಗಳ ಪಕ್ಕದ ಗಂಟುಗಳು ೪, ಮಣಿಕಟ್ಟುಗಳ ಎಲುಬುಗಳು ೨, ಕಣಕಾಲುಎಲುಬುಗಳು ೪, ಮಂಡಿಚಿಪ್ಪುಗಳು ೪, ತೊಡೆಯ ಎಲುಬುಗಳು ೨, ತೋಳು ಎಲುಬುಗಳು ೨, ಹೆಗಲು ಎಲುಬುಗಳು ೨, ಹೆಗಲಿನ ಮೇಲುಭಾಗದ ಎಲುಬುಗಳು ೨, ಕಣ್ಣು ಮತ್ತು ಕಿವಿಗಳ ಮಧ್ಯದ ಎಲುಬುಗಳು ೨, ಭುಜ ಮತ್ತು ಎದೆಮಧ್ಯದ ಎಲುಬು ೧, ದವಡೆ ಎಲುಬುಗಳು ೨, ಸೊಂಟದ ಎಲುಬುಗಳು ೨, ಗುಹ್ಯಪ್ರದೇಶದ ಎಲುಬು ೧, ಬೆನ್ನಿನ ಎಲುಬುಗಳು ೪೫, ಕುತ್ತಿಗೆ ಎಲುಬುಗಳು ೧೫, ಎದೆ ಎಲುಬುಗಳು ೧೪, ಪಕ್ಕೆಗಳ ಎಲುಬುಗಳು ೨೪, ಸ್ಥಾಲಕಗಳು ೨೪, ಸ್ಥಾಲಕಾರ್ಬುದಗಳು ೨೪, ಕೆನ್ನೆಗಳ ಮೇಲು ಭಾಗದ ಎಲುಬು ೧, ಕೆನ್ನೆಗಳ ಕೆಳಭಾಗದ ಎಲುಬುಗಳು ೨, ಮೂಗು-ಕೆನ್ನೆ ಮತ್ತು ಹಣೆ ಎಲುಬು ೧, ತಲೆಯಚಿಪ್ಪುಗಳು ೪, ಹುಬ್ಬು ಮತ್ತು ಕಿವಿಗಳ ಮಧ್ಯದ ಎಲುಬುಗಳು ೨.

ತಪಸ್ತೀರ್ಥಂ ದಯಾ ತೀರ್ಥಂ ಶೀಲಂ ತೀರ್ಥಂ ಯುಧಿಷ್ಠಿರ ।
ಅಲ್ಪಸಂತೋಷಕಂ ತೀರ್ಥಂ ನಾರೀ ತೀರ್ಥಂ ಪತಿವ್ರತಾ ॥೧೧೬೧॥

ತಪಸ್ಸು, ದಯೆ, ಶೀಲ ಮತ್ತು ಅಲ್ಪತೃಪ್ತಿ-ಈ ಸದ್ಗುಣಗಳೆಲ್ಲವೂ ತೀರ್ಥಗಳೇ ಆಗಿವೆ. ಪತಿವ್ರತೆಯಾದ ಸ್ತ್ರೀಯೂ ತೀರ್ಥಸ್ವರೂಪಳು.

ಸಂತುಷ್ಟೋ ಬ್ರಾಹ್ಮಣಸ್ತೀರ್ಥಂ ಜ್ಞಾನಂ ವಾ ತೀರ್ಥಮುಚ್ಯತೇ।
ಮದ್ಭಕ್ತಾಃ ಸತತಂ ತೀರ್ಥಂ ಶಙ್ಕರಸ್ಯ ವಿಶೇಷತಃ ॥೧೧೬೨॥

ಸಂತುಷ್ಟನಾದ ಬ್ರಾಹ್ಮಣನು ತೀರ್ಥಸ್ವರೂಪನು. ಜ್ಞಾನವನ್ನು ತೀರ್ಥವೆನ್ನುತ್ತಾರೆ. ನನ್ನ ಭಕ್ತರೆಲ್ಲರೂ (ಎಲ್ಲ ಸ್ಥಿತಿಯಲ್ಲಿಯೂ) ತೀರ್ಥಸ್ವರೂಪರೇ. ಅದರಲ್ಲಿಯೂ ವಿಶೇಷವಾಗಿ ಶಂಕರನ ಭಕ್ತರು ವಿಶೇಷರೀತಿಯಿಂದ ತೀರ್ಥರು.

ಯತಯಸ್ತೀರ್ಥಮಿತ್ಯೇವಂ ವಿದ್ವಾಂಸಸ್ತೀರ್ಥಮುಚ್ಯತೇ।
ಶರಣ್ಯಪುರುಷಸ್ತೀರ್ಥಮಭಯಂ ತೀರ್ಥಮುಚ್ಯತೇ ॥೧೧೬೩॥

ಸಂನ್ಯಾಸಿಗಳೂ ಮತ್ತು ವಿದ್ವಾಂಸರೂ ತೀರ್ಥಸ್ವರೂಪರು. ಇತರರಿಗೆ ಆಶ್ರಯವನ್ನು ಕೊಡುವವನು ತೀರ್ಥನು. ಜೀವಕ್ಕೆ ಅಭಯವನ್ನು ಕೊಡುವವನನ್ನು ತೀರ್ಥನೆಂದು ಹೇಳುತ್ತಾರೆ.

ತ್ರೈಲೋಕೇಽಸ್ಮಿನ್ನಿರುದ್ವಿಗ್ನೋ ನ ಬಿಭೇಮಿ ಕುತಶ್ಚನ ।
ನ ದಿವಾ ಯದಿ ವಾ ರಾತ್ರಾವುದ್ವೇಗಃ ಶೂದ್ರಲಙ್ಘನಾತ್ ॥೧೧೬೪॥

ಮೂರು ಲೋಕಗಳಲ್ಲಿಯೂ ನಾನು ನಿರುದ್ವಿಗ್ನನಾಗಿಯೇ ಇರುವೆನು. ಹಗಲಿನಲ್ಲಾಗಲೀ ರಾತ್ರಿಯಲ್ಲಾಗಲೀ ನನಗೆ ಯಾರಿಂದಲೂ ಭಯವೆಂಬುದೇ ಇಲ್ಲ. ಆದರೆ ಶೂದ್ರನು ಮರ್ಯಾದೆಯನ್ನು ಮೀರಿ ನಡೆದುಕೊಂಡಾಗ ಮಾತ್ರ ನಾನು ಉದ್ವಿಗ್ನನಾಗುತ್ತೇನೆ.

ನ ಭಯಂ ದೇವದೈತ್ಯೇಭ್ಯೋ ರಕ್ಷೋಭ್ಯಶ್ಚೈವ ಮೇ ನೃಪ ।
ಶೂದ್ರವಕ್ತ್ರಾಚ್ಚ್ಯುತಂ ಬ್ರಹ್ಮ ಭಯಂ ತು ಮಮ ಸರ್ವದಾ ॥೧೧೬೫॥

ಯುಧಿಷ್ಠಿರ! ನನಗೆ ದೇವತೆಗಳಿಂದಾಗಲೀ ದೈತ್ಯರಿಂದಾಗಲೀ ಭಯವಿಲ್ಲ. ರಾಕ್ಷಸರಿಂದಲೂ ಭಯವಿಲ್ಲ. ಆದರೆ ಶೂದ್ರರ ಬಾಯಿಂದ ವೇದಮಂತ್ರವು ಹೊರಟಿತೆಂದರೆ ನಾನು ಬಹಳ ಭಯಪಡುತ್ತೇನೆ.

ತಸ್ಮಾತ್ಸಪ್ರಣವಂ ಶೂದ್ರೋ ಮನ್ನಾಮಾಪಿ ನ ಕೀರ್ತಯೇತ್।
ಪ್ರಣವಂ ಹಿ ಪರಂ ಲೋಕೇ ಬ್ರಹ್ಮ ಬ್ರಹ್ಮವಿದೋ ವಿದುಃ ॥

ಆದುದರಿಂದ ಶೂದ್ರನು ನನ್ನ ನಾಮವನ್ನು ಕೂಡ ಪ್ರಣವದೊಡನೆ ಉಚ್ಚರಿಸಬಾರದು. ವೇದವಿದರಾದ ವಿದ್ವಾಂಸರು ಪ್ರಣವವನ್ನೇ ಶ್ರೇಷ್ಠವಾದ ವೇದಮಂತ್ರವೆಂದು ಹೇಳುತ್ತಾರೆ.

ದ್ವಿಜಶುಶ್ರೂಷಣಂ ಧರ್ಮಃ ಶೂದ್ರಾಣಾಂ ಭಕ್ತಿತೋ ಮಯಿ॥

ಶೂದ್ರರಿಗೆ ನನ್ನಲ್ಲಿ ಭಕ್ತಿಯಿರುವುದಕ್ಕಿಂತಲೂ ಹೆಚ್ಚಾಗಿ ದ್ವಿಜರ ಶುಶ್ರೂಷೆಯೇ ಮುಖ್ಯಧರ್ಮವಾಗಿದೆ.

ದ್ವಿಜಶುಶ್ರೂಷಯಾ ಶೂದ್ರಃ ಪರಂ ಶ್ರೇಯೋಽಧಿಗಚ್ಛತಿ।
ದ್ವಿಜಶುಶ್ರೂಷಣಾದನ್ಯನ್ನಾಸ್ತಿ ಶೂದ್ರಸ್ಯ ನಿಷ್ಕೃತಿಃ ॥೧೧೬೮॥

ದ್ವಿಜರ ಶುಶ್ರೂಷೆಯಿಂದಲೇ ಶೂದ್ರನು ಶ್ರೇಯಸ್ಸನ್ನು ಹೊಂದುತ್ತಾನೆ. ಇದು ಹೊರತಾಗಿ ಅವನ ಉದ್ಧಾರಕ್ಕೆ ಬೇರೆಯ ಮಾರ್ಗವೇ ಇಲ್ಲ.

ಬ್ರಹ್ಮನು ತಮೋಗುಣಗಳಿಂದ ಕೂಡಿರುವ ಶೂದ್ರರನ್ನು ಸೃಷ್ಟಿಸಿ ಬ್ರಾಹ್ಮಣರ ಸೇವಾರೂಪವಾದ ಧರ್ಮವನ್ನು ಅವರಿಗೆ ಕಲ್ಪಿಸಿದನು. ದ್ವಿಜರನ್ನು ಭಕ್ತಿಪೂರ್ವಕವಾಗಿ ಶುಶ್ರೂಷೆಮಾಡುವುದರಿಂದ ಶೂದ್ರನಲ್ಲಿರುವ ತಾಮಸಭಾವಗಳೆಲ್ಲವೂ ನಾಶವಾಗುತ್ತವೆ.

ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ।
ತದಹಂ ಭಕ್ತ್ಯುಪಹೃತಂ ಮೂರ್ಧ್ನಾ ಗೃಹ್ಣಾಮಿ ಶೂದ್ರತಃ ॥೧೧೬೯॥

ಶೂದ್ರನಾಗಿದ್ದರೂ ಭಕ್ತಿಪೂರ್ವಕವಾಗಿ ಪತ್ರ-ಪುಷ್ಪ-ಫಲ-ಜಲ ಇವುಗಳಲ್ಲಿ ಯಾವುದನ್ನಾದರೂ ಅರ್ಪಿಸಿದರೆ ಭಕ್ತಿಯಿಂದ ಅರ್ಪಿಸಿದ ಆ ಪದಾರ್ಥವನ್ನು ನಾನು ಶಿರಸಾ ಪ್ರತಿಗ್ರಹಿಸುತ್ತೇನೆ.

ಅಗ್ರಜೋ ವಾಪಿ ಯಃ ಕಶ್ಚಿತ್ಸರ್ವಪಾಪಸಮನ್ವಿತಃ।
ಯದಿ ಮಾಂ ಸತತಂ ಧ್ಯಾಯೇತ್ಸರ್ವಪಾಪೈಃ ಪ್ರಮುಚ್ಯತೇ ॥

ಸರ್ವಪಾಪಗಳಿಂದಲೂ ಯುಕ್ತನಾಗಿದ್ದರೂ ಬ್ರಾಹ್ಮಣನು (ಪಶ್ಚಾತ್ತಾಪ ಪೂರ್ವಕವಾಗಿ)ನನ್ನನ್ನು ಸತತವಾಗಿ ಧ್ಯಾನಮಾಡುತ್ತಿದ್ದರೆ ಅವನೂ ಸಮಸ್ತಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ.

ವಿದ್ಯಾವಿನಯಸಮ್ಪನ್ನಾ ಬ್ರಾಹ್ಮಣಾ ವೇದಪಾರಗಾಃ।
ಮಯಿ ಭಕ್ತಿಂ ನ ಕುರ್ವನ್ತಿ ಚಾಣ್ಡಾಲಸದೃಶಾ ಹಿ ತೇ ॥೧೧೭೨॥

ವಿದ್ಯಾವಿನಯಸಂಪನ್ನರಾಗಿದ್ದರೂ, ವೇದ-ವೇದಾಂಗಪಾರಂಗತರಾಗಿದ್ದರೂ-ಬ್ರಾಹ್ಮಣರು ನನ್ನಲ್ಲಿ ಭಕ್ತಿಯಿಲ್ಲದವರಾಗಿದ್ದರೆ ಚಾಂಡಾಲರಿಗೆ ಸಮಾನರು.

ವೃಥಾ ದಾನಂ ವೃಥಾ ತಪ್ತಂ ವೃಥಾ ಚೇಷ್ಟಂ ವೃಥಾ ಹುತಮ್।
ವೃಥಾತಿಥ್ಯಂ ಚ ತತ್ತಸ್ಯ ಯೋ ನ ಭಕ್ತೋ ಮಮ ದ್ವಿಜಃ ॥೧೧೭೩॥

ದ್ವಿಜನು ನನ್ನ ಭಕ್ತನಾಗಿರದಿದ್ದರೆ-ಅವನು ಮಾಡುವ ದಾನ, ತಪಸ್ಸು, ಯಜ್ಞ, ಹೋಮ, ಅತಿಥಿಸತ್ಕಾರ-ಇವೆಲ್ಲವೂ ವ್ಯರ್ಥವಾಗುತ್ತವೆ. (ಭಗವತ್ಪ್ರೀತ್ಯರ್ಥವಾಗಿ ಇವುಗಳನ್ನು ಆಚರಿಸಿದರೆ ಫಲಪ್ರದವಾಗುತ್ತವೆ.)

ಸ್ಥಾವರೇ ಜಙ್ಗಮೇ ವಾಪಿ ಸರ್ವಭೂತೇಷು ಪಾಣ್ಡವ।
ಸಮತ್ವೇನ ಯದಾ ಕುರ್ಯಾನ್ಮದ್ಭಕ್ತೋ ಮಿತ್ರಶತ್ರುಷು ॥೧೧೭೪॥

ಮನುಷ್ಯನು ಸಮಸ್ತಸ್ಥಾವರ-ಜಂಗಮಪ್ರಾಣಿಗಳನ್ನೂ, ಮಿತ್ರರನ್ನೂ, ಶತ್ರುಗಳನ್ನೂ ಸಮಾನವಾಗಿ ಯಾವಾಗ ಕಾಣುವನೋ (ಎಲ್ಲರಲ್ಲಿಯೂ ನನ್ನನ್ನೇ ಕಾಣುವನೋ) ಆಗಲೇ ಅವನು ನನ್ನ ನಿಜವಾದ ಭಕ್ತನಾಗುವನು.

ಆನೃಶಂಸ್ಯಮಹಿಂಸಾ ಚ ಯಥಾ ಸತ್ಯಂ ತಥಾರ್ಜವಮ್।
ಅದ್ರೋಹಶ್ಚೈವ ಭೂತಾನಾಂ ಮದ್ಗತಾನಾಂ ವ್ರತಂ ನೃಪ ॥೧೧೭೫॥

ಕರುಣೆ, ಅಹಿಂಸೆ, ಸತ್ಯ, ಸರಳತೆ, ಯಾರಿಗೇ ಆಗಲೀ ದ್ರೋಹವನ್ನೆಸಗದೇ ಇರುವುದು–ಇವು ನನ್ನ ಭಕ್ತರ ವ್ರತಗಳಾಗಿರುತ್ತವೆ. (ನನ್ನ ಭಕ್ತರು ಈ ವ್ರತಗಳನ್ನು ಪರಿಪಾಲಿಸಬೇಕು.)

ನಮ ಇತ್ಯೇವ ಯೋ ಬ್ರೂಯಾನ್ಮದ್ಭಕ್ತಂ ಶ್ರದ್ಧಯಾನ್ವಿತಃ।
ತಸ್ಯಾಕ್ಷಯಾಽಭವಲ್ಲೋಕಾಃ ಶ್ವಪಾಕಸ್ಯಾಪಿ ಪಾರ್ಥಿವ ॥೧೧೭೬॥

ಯಾವ ಮನುಷ್ಯನು ನನ್ನ ಭಕ್ತನಿಗೆ ಶ್ರದ್ಧಾಪೂರ್ವಕವಾಗಿ– 'ನಮಃ ನಮಸ್ಕಾರ'-ಎಂದು ಹೇಳುವನೋ, ಹಾಗೆ ಹೇಳಿದವನು ಚಾಂಡಾಲನೇ ಆಗಿದ್ದರೂ–ಅವನಿಗೆ ಅಕ್ಷಯವಾದ ಪುಣ್ಯಲೋಕಗಳು ಲಭಿಸುತ್ತವೆ.

ಕಿಂ ಪುನರ್ಯೇ ಯಜನ್ತೇ ಮಾಂ ಸದಾರಂ ವಿಧಿಪೂರ್ವಕಮ್।
ಮದ್ಭಕ್ತಾ ಮದ್ಗತಪ್ರಾಣಾಃ ಕಥಯನ್ತಶ್ಚ ಮಾಂ ಸದಾ ॥೧೧೭೭॥

ಹೀಗಿರುವಾಗ ನನ್ನ ಭಕ್ತರೇ ಆಗಿರುವವರಿಗೆ, ನನ್ನಲ್ಲಿಯೇ ಪ್ರಾಣಗಳನ್ನು ಇಟ್ಟುಕೊಂಡಿರುವವರಿಗೆ, ನನ್ನ ಗುಣಗಳನ್ನೇ ಯಾವಾಗಲೂ ಸಂಕೀರ್ತನಮಾಡುವವರಿಗೆ, ಪತ್ನೀಸಮೇತನಾದ (ಲಕ್ಷ್ಮೀಸಮೇತನಾದ) ನನ್ನನ್ನು ವಿಧಿಪೂರ್ವಕವಾಗಿ ಪೂಜಿಸುವವರಿಗೆ ಮಹಾಪುಣ್ಯಲೋಕಗಳು ಲಭಿಸುತ್ತವೆಯೆಂಬುದನ್ನು ಹೇಳಬೇಕಾಗಿಯೇ ಇಲ್ಲ.

ಬಹುವರ್ಷಸಹಸ್ರಾಣಿ ತಪಸ್ತಪತಿ ಯೋ ನರಃ।
ನಾಸೌ ಪದಮವಾಪ್ನೋತಿ ಮದ್ಭಕ್ತೈರ್ಯದವಾಪ್ಯತೇ ॥೧೧೭೮॥

ಅನೇಕ ಸಹಸ್ರವರ್ಷಗಳು ತಪಸ್ಸುಮಾಡಿದವನು ಕೂಡ ನನ್ನ ಭಕ್ತರು ಹೊಂದುವ ಪುಣ್ಯಲೋಕಗಳನ್ನು ಹೊಂದಲಾರನು.

ಮಾಮೇವ ತಸ್ಮಾದ್ರಾಜೇನ್ದ್ರ ಧ್ಯಾಯನ್ನಿತ್ಯಮತನ್ದ್ರಿತಃ।
ಅವಾಪ್ಸ್ಯಸಿ ತತಃ ಸಿದ್ಧಿಂ ದ್ರಕ್ಷ್ಯಸ್ಯೇವ ಪರಂ ಪದಮ್ ॥೧೧೭೯॥

ಯುಧಿಷ್ಠಿರ! ಆದುದರಿಂದ ನೀನು ಸದಾ ಜಾಗರೂಕನಾಗಿರುತ್ತಾ ನಿರಂತರವಾಗಿ ನನ್ನನ್ನೇ ಧ್ಯಾನಮಾಡುತ್ತಿದ್ದರೆ ಸಿದ್ಧಿಯನ್ನು ಹೊಂದುವೆ. ನಿನಗೆ ಪರಮಪದದ ಸಾಕ್ಷಾತ್ಕಾರವೂ ಆಗುವುದು.

ಋಗ್ವೇದೇನೈವ ಹೋತಾ ಚ ಯಜುಷಾಧ್ವರ್ಯುರೇವ ಚ।
ಸಾಮವೇದೇನ ಚೋದ್ಗಾತಾ ಪುಣ್ಯೇನಾಭಿಷ್ಟುವನ್ತಿ ಮಾಮ್ ॥೧೧೮೦॥

ಅಥರ್ವಶಿರಸಾ ಚೈವ ನಿತ್ಯಮಾಥರ್ವಣಾ ದ್ವಿಜಾಃ।
ಸ್ತುವನ್ತಿ ಸತತಂ ಯೇ ಮಾಂ ತೇ ವೈ ಭಾಗವತಾಃ ಸ್ಮೃತಾಃ॥೧೧೮೧॥

ಯಾರು ಯಜ್ಞದಲ್ಲಿ ಹೋತೃಗಳಾಗಿ ಋಗ್ವೇದದ ಮೂಲಕವಾಗಿ ನನ್ನನ್ನು ಸ್ತೋತ್ರಮಾಡುವರೋ, ಅಧ್ವರ್ಯುಗಳಾಗಿ ಯಜುರ್ವೇದದ ಮೂಲಕವಾಗಿ ನನ್ನನ್ನು ಸ್ತೋತ್ರಮಾಡುವರೋ, ಉದ್ಗಾತೃಗಳಾಗಿ ಸಾಮವೇದದ ಮೂಲಕವಾಗಿ ನನ್ನನ್ನು ಸ್ತೋತ್ರಮಾಡುವರೋ, ಅಥರ್ವಶಾಖೆಯ ಬ್ರಾಹ್ಮಣರು ಅಥರ್ವಶಿರಸ್ಸಿನ ಮೂಲಕವಾಗಿ ನನ್ನನ್ನು

ಸ್ತೋತ್ರಮಾಡುವವರೋ-ಅವರೆಲ್ಲರೂ ಭಾಗವತರೆಂದು (ಭಗವದ್ಭಕ್ತರೆಂದು) ಕರೆಯಲ್ಪಡುತ್ತಾರೆ.

ವೇದಾಧೀನಾಃ ಸದಾ ಯಜ್ಞಾ ಯಜ್ಞಾಧೀನಾಸ್ತು ದೇವತಾಃ।
ದೇವತಾ ಬ್ರಾಹ್ಮಣಾಧೀನಾಸ್ತಸ್ಮಾದ್ವಿಪ್ರಾಸ್ತು ದೇವತಾಃ ॥೧೧೮೨॥

ಯಜ್ಞಗಳು ವೇದಕ್ಕೆ ಅಧೀನಗಳು. (ಯಜ್ಞಕ್ರಿಯೆಗಳಿಗೆ ವೇದವೇ ಮೂಲ.) ದೇವತೆಗಳು ಯಜ್ಞಗಳಿಗೆ ಅಧೀನರು. ಹಾಗೆಯೇ ಯಜ್ಞವನ್ನು ನಡೆಸುವ ಬ್ರಾಹ್ಮಣರಿಗೂ ಅಧೀನರು. ಆದುದರಿಂದ ಬ್ರಾಹ್ಮಣರು ದೇವತೆಗಳೇ ಆಗಿದ್ದಾರೆ.

ಅನಾಶ್ರಿತ್ಯೋಚ್ಛ್ರಯಂ ನಾಸ್ತಿ ಮುಖ್ಯಮಾಶ್ರಯಮಾಶ್ರಯೇತ್।
ರುದ್ರಂ ಸಮಾಶ್ರಿತಾ ದೇವಾ ರುದ್ರೋ ಬ್ರಹ್ಮಾಣಮಾಶ್ರಿತಃ ॥

ಬ್ರಹ್ಮಾ ಮಾಮಾಶ್ರಿತೋ ರಾಜನ್ನಾಹಂ ಕಂಚಿದುಪಾಶ್ರಿತಃ।
ಮಮಾಶ್ರಯೋ ನ ಕಶ್ಚಿತ್ತು ಸರ್ವೇಷಾಮಾಶ್ರಯೋ ಹ್ಯಹಮ್ ॥

ಯಾರನ್ನೂ ಆಶ್ರಯಿಸದಿದ್ದರೆ ಉನ್ನತಸ್ಥಿತಿಯು ಬರುವುದಿಲ್ಲ. ಯಾರೇ ಆದರೂ ಪ್ರಧಾನನೊಬ್ಬನನ್ನು ಆಶ್ರಯನನ್ನಾಗಿ ಪಡೆದುಕೊಳ್ಳಲೇಬೇಕು. ಈ ಕಾರಣದಿಂದಲೇ ಸಮಸ್ತ ದೇವತೆಗಳೂ ರುದ್ರನನ್ನು ಆಶ್ರಯಿಸಿರುವರು. ರುದ್ರನು ಬ್ರಹ್ಮನನ್ನು ಆಶ್ರಯಿಸಿರುವನು. ಬ್ರಹ್ಮನು ನನ್ನನ್ನು ಆಶ್ರಯಿಸಿರುವನು. ಆದರೆ ನಾನು ಮಾತ್ರ ಯಾರನ್ನೂ ಆಶ್ರಯಿಸಿಲ್ಲ. ನನಗೆ ಆಶ್ರಯರಾಗಿರತಕ್ಕವರು ಯಾರೂ ಇಲ್ಲ. ಆದರೆ ನಾನು ಮಾತ್ರ ಎಲ್ಲರಿಗೂ ಆಶ್ರಯನಾಗಿದ್ದೇನೆ.

ಯುಧಿಷ್ಠಿರ! ಧರ್ಮಪ್ರಿಯನಾದ ನಿನಗೆ ಉತ್ತಮೋತ್ತಮವಾದ ಈ ವಿಷ್ಣುರಹಸ್ಯವನ್ನು ಹೇಳಿರುತ್ತೇನೆ. ನಾನು ಹೇಳಿರುವಂತೆ ನಿತ್ಯವೂ ನೀನು ಆಚರಿಸು. ಇದು ಪವಿತ್ರವಾದ ಆಖ್ಯಾನವಾಗಿದೆ. ವೇದಕ್ಕೆ ಸಮಾನವಾಗಿದೆ. ನನ್ನ ಸಂಬಂಧವಾದ ಈ ವೈಷ್ಣವಧರ್ಮವನ್ನು ಅನುದಿನವೂ ಯಾವನು ಪಠಿಸುವನೋ–ಅವನ ಧರ್ಮವೂ ವರ್ಧಿಸುತ್ತದೆ. ಬುದ್ಧಿಯೂ ಪ್ರಸನ್ನ ವಾಗುತ್ತದೆ. ಪಾಪಗಳೆಲ್ಲವೂ ನಶಿಸಿಹೋಗುತ್ತವೆ. ಕಲ್ಯಾಣವೂ ವರ್ಧಿಸು ತ್ತದೆ. ಪುಣ್ಯವೂ, ಪವಿತ್ರವೂ, ಪಾಪನಾಶಕವೂ ಉತ್ಕೃಷ್ಟವೂ ಆದ ಈ

ವಿಷ್ಣುಧರ್ಮವನ್ನು ಎಲ್ಲರೂ ಕೇಳಬೇಕು. ಅದರಲ್ಲಿಯೂ ವಿಶೇಷವಾಗಿ ಶ್ರದ್ಧಾಯುಕ್ತರಾದ ಶ್ರೋತ್ರಿಯರು ಕೇಳಬೇಕು. ಯಾವ ಮನುಷ್ಯನು ಇದನ್ನು ಭಕ್ತಿಪೂರ್ವಕವಾಗಿ ಮತ್ತೊಬ್ಬರಿಗೆ ಹೇಳುವನೋ, ಪವಿತ್ರಚಿತ್ತನಾಗಿ ಮತ್ತೊಬ್ಬರಿಂದ ಕೇಳುವನೋ–ಅವನು ನನ್ನ ಸಾಯುಜ್ಯವನ್ನೇ ಹೊಂದುವನು. ಈ ವಿಷಯದಲ್ಲಿ ವಿಚಾರಮಾಡಬೇಕಾಗಿಲ್ಲ. ನನ್ನನ್ನೇ ಆಶ್ರಯನನ್ನಾಗಿ ಹೊಂದಿರುವ ಯಾವ ನನ್ನ ಭಕ್ತನು ಈ ವಿಷ್ಣುಧರ್ಮದ ಆಖ್ಯಾನವನ್ನು ಶ್ರಾದ್ಧಕಾಲಗಳಲ್ಲಿ ಬ್ರಾಹ್ಮಣರಿಗೆ ಶ್ರವಣಮಾಡಿಸುವನೋ–ಅವನ ಪಿತೃಗಳು ಪ್ರಳಯಕಾಲದವರೆಗೂ ತೃಪ್ತರಾಗಿರುತ್ತಾರೆ.”

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಸಾಕ್ಷಾತ್ ವಿಷ್ಣುವೇ ಆದ, ಜಗದ್ಗುರುವಾದ ಶ್ರೀಕೃಷ್ಣನಿಂದಲೇ ಭಾಗವತಧರ್ಮವನ್ನು ಕೇಳಿದ ಋಷಿಗಳೂ ಮತ್ತು ಪಾಂಡವರೂ ಪ್ರಹೃಷ್ಟವಾದ ಮನಸ್ಸಿನಿಂದ ಕೂಡಿದವರಾಗಿ ಅದ್ಭುತವಾದ ಕಥಾಪ್ರಸಂಗಗಳನ್ನು ಮನಸ್ಸಿನಲ್ಲಿಯೇ ಬಾರಿ-ಬಾರಿಗೂ ಸ್ಮರಿಸಿಕೊಳ್ಳುತ್ತಾ ಜನಾರ್ದನನಿಗೆ ಸಾಷ್ಟಾಂಗಪೂರ್ವಕವಾಗಿ ನಮಸ್ಕರಿಸಿದರು. ಧರ್ಮಪುತ್ರನಾದ ಯುಧಿಷ್ಠಿರನು ಗೋವಿಂದನನ್ನು ಪುನಃ ಪುನಃ ಪೂಜಿಸಿ, ಸತ್ಕರಿಸಿದನು. ದೇವತೆಗಳು, ಬ್ರಹ್ಮರ್ಷಿಗಳು, ಸಿದ್ಧರು, ಗಂಧರ್ವರು, ಅಪ್ಸರೆಯರು, ಮಹಾತ್ಮರಾದ ಋಷಿಗಳು, ಗುಹ್ಯಕರು, ಸರ್ಪಗಳು, ಮಹಾತ್ಮರಾದ ವಾಲಖಿಲ್ಯರು, ತತ್ತ್ವದರ್ಶಿಗಳಾದ ಯೋಗಿಗಳು, ಐದು ಕಾಲಗಳಲ್ಲಿಯೂ ಉಪಾಸನೆಮಾಡುವ ಭಗವದ್ಭಕ್ತರು (ಪಾಂಚರಾತ್ರರು)– ಇವರೆಲ್ಲರೂ ಕುತೂಹಲಾವಿಷ್ಟರಾಗಿ ಅಲ್ಲಿಗೆ ಆಗಮಿಸಿದ್ದರು. ಅವರೆಲ್ಲರೂ ಶ್ರೀಕೃಷ್ಣನೇ ಸಾಕ್ಷಾತ್ತಾಗಿ ಹೇಳಿದ ಪರಮಪುಣ್ಯವೂ, ಭಗವದ್ಭಕ್ತಿಯಿಂದ ಕೂಡಿದುದೂ, ಧರ್ಮಶಾಸನವೂ ಆಗಿರುವ ವೈಷ್ಣವಧರ್ಮವನ್ನು ಕೇಳಿ ಆ ಕ್ಷಣದಲ್ಲಿಯೇ ಪಾಪಗಳಿಂದ ವಿಮುಕ್ತರಾಗಿ ಪವಿತ್ರಾತ್ಮರಾದರು. ಅವರೆಲ್ಲರೂ ಶ್ರೀಕೃಷ್ಣನಿಗೆ ತಲೆಬಾಗಿ ನಮಸ್ಕರಿಸಿ ಅವನು ಹೇಳಿದ ವೈಷ್ಣವಧರ್ಮವನ್ನು ಬಹಳವಾಗಿ ಪ್ರಶಂಸಿಸಿದರು.

'ನಾವು ಮುಂದೆ ಜಗದ್ಗುರುವಾದ ಶ್ರೀಕೃಷ್ಣನನ್ನು ದ್ವಾರಕೆಯಲ್ಲಿ ಸಂದರ್ಶಿಸೋಣ'–ಎಂದು ಹೇಳುತ್ತಾ ಎಲ್ಲ ಮಹರ್ಷಿಗಳೂ ಪ್ರಸನ್ನಚಿತ್ತರಾಗಿ ದೇವತೆಗಳೊಡನೆ ತಮ್ಮ ತಮ್ಮ ವಾಸಸ್ಥಾನಗಳಿಗೆ ತೆರಳಿದರು. ಅವರೆಲ್ಲರೂ ಹೊರಟುಹೋದನಂತರ ಕೇಶಿಹಂತಕನಾದ ಶ್ರೀಹರಿಯಾದ ಕೇಶವನು ಸಾರಥಿಯಾದ ದಾರುಕನನ್ನು ಸ್ಮರಿಸಿಕೊಂಡನು. ಒಡನೆಯೇ ದಾರುಕನು ಸಾತ್ಯಕಿಯೊಡನೆ ಕೃಷ್ಣನ ಬಳಿಗೆ ಬಂದು "ಯಾಹಿ ದೇವ!' ದೇವನೇ! ಹೊರಡೋಣವಾಗಲಿ"–ಎಂದು ವಿಜ್ಞಾಪಿಸಿಕೊಂಡನು. ಶ್ರೀಕೃಷ್ಣನು ದ್ವಾರಕೆಗೆ ಪ್ರಯಾಣಹೊರಟಿರುವನೆಂಬ ವಾರ್ತೆಯನ್ನು ಕೇಳಿದೊಡನೆಯೇ ಪಾಂಡವರೆಲ್ಲರೂ ಬಾಡಿದ ಮುಖವುಳ್ಳವರಾದರು. ಎರಡು ಕೈಗಳನ್ನೂ ಜೋಡಿಸಿ ತಲೆಯ ಮೇಲಿಟ್ಟುಕೊಂಡು ಕಂಬನಿದುಂಬಿದ ಕಣ್ಣುಗಳ ಮೂಲಕವಾಗಿಯೇ ಶ್ರೀಕೃಷ್ಣನನ್ನು ಕುಡಿದುಬಿಡುವರೋ ಎಂಬಂತೆ ಎವೆಯಿಕ್ಕದೇ ನೋಡುತ್ತಿದ್ದರು. ಆದರೆ ದುಃಖಪೀಡಿತರಾಗಿದ್ದ ಅವರಿಗೆ ಯಾವ ಮಾತನ್ನೂ ಆಡಲಾಗಲಿಲ್ಲ. ಶ್ರೀಕೃಷ್ಣನೂ ಅವರ ಸ್ಥಿತಿಯನ್ನು ಕಂಡು ದುಃಖಿತನಾದನು. ಆದರೂ ಪ್ರಯಾಣವು ಅನಿವಾರ್ಯವಾಗಿತ್ತು. ಕುಂತೀ, ಧೃತರಾಷ್ಟ್ರ, ಗಾಂಧಾರೀ, ವಿದುರ, ದ್ರೌಪದೀ, ಕೃಷ್ಣದ್ವೈಪಾಯನವ್ಯಾಸರು, ಋಷಿಗಳು, ಅಮಾತ್ಯರು–ಇವರೆಲ್ಲರ ಅನುಮತಿಯನ್ನೂ ಪಡೆದು, ಸುಭದ್ರೆಯನ್ನೂ ಮತ್ತು ಮಗನೊಡನಿದ್ದ ಉತ್ತರೆಯನ್ನೂ ಕೈಯಿಂದ ಮುಟ್ಟಿ (ಮೈದಡವಿ) ಆಶೀರ್ವದಿಸಿ, ರಾಜಭವನದಿಂದ ಹೊರಹೊರಟು ಶ್ರೀಹರಿಯು ದಾರುಕನು ನಿಲ್ಲಿಸಿದ್ದ ರಥದಲ್ಲಿ ಕುಳಿತನು. ಆ ರಥವು ಶೈಬ್ಯ, ಸುಗ್ರೀವ, ಮೇಘಪುಷ್ಪ ಮತ್ತು ಬಲಾಹಕಗಳೆಂಬ ಕುದುರೆಗಳಿಂದ ಯುಕ್ತವಾಗಿದ್ದಿತು. ಧೀಮಂತನಾದ ಗರುಡನು ಧ್ವಜದಲ್ಲಿ ವಿರಾಜಿಸುತ್ತಿದ್ದನು. ಆ ಸಮಯದಲ್ಲಿ ಕುರುಪತಿಯಾದ ಯುಧಿಷ್ಠಿರನು ಪ್ರೀತಿಯಿಂದ ಶ್ರೀಕೃಷ್ಣನನ್ನು ಅನುಸರಿಸಿ, ತಾನೂ ರಥವನ್ನೇರಿದನು. ಶ್ರೀಕೃಷ್ಣನು ಸೂತಶ್ರೇಷ್ಠನಾದ ದಾರುಕನಿಂದ ಕುದುರೆಗಳ ಕಡಿವಾಣಗಳನ್ನು ತನ್ನ ಕೈಗೆ ತೆಗೆದುಕೊಂಡನು. ಅರ್ಜುನನು ಕೂಡ ರಥವನ್ನೇರಿ ಸುವರ್ಣದ ಹಿಡಿಯಿಂದ ಕೂಡಿದ್ದ ದೊಡ್ಡದಾದ ಚಾಮರ-ವ್ಯಜನಗಳನ್ನು ಕೈಗಳಲ್ಲಿ ಹಿಡಿದು ದಕ್ಷಿಣದ ಕಡೆಯಿಂದ ಶ್ರೀಕೃಷ್ಣನ ತಲೆಯ ಮೇಲೆ ಗಾಳಿಯನ್ನು ಬೀಸತೊಡಗಿದನು.

ಅದೇ ರೀತಿಯಲ್ಲಿ ವೀರನಾದ ಭೀಮಸೇನನು ರಥವನ್ನು ಹತ್ತಿ

ದಿವ್ಯಮಾಲೆಗಳಿಂದ ಸುಶೋಭಿತವಾಗಿದ್ದ, ನೂರು ಕಡ್ಡಿಗಳಿಂದ ಕೂಡಿದ್ದ ಶ್ವೇತಚ್ಛತ್ರವನ್ನು ಶ್ರೀಕೃಷ್ಣನ ತಲೆಯಮೇಲೆ ಹಿಡಿದನು. ಆ ಛತ್ರದ ದಂಡವು ವೈಡೂರ್ಯಮಣಿಗಳಿಂದ ನಿರ್ಮಿತವಾಗಿದ್ದಿತು. ಅದರ ಬಟ್ಟೆಯು ಸುವರ್ಣದ ತಂತುಗಳಿಂದ ವಿಭೂಷಿತವಾಗಿದ್ದಿತು.



ಶಾರ್ಙ್ಗಧನುರ್ಧರನಾದ ಶ್ರೀಕೃಷ್ಣನ ಅಂತಹ ಸುಂದರವಾದ ಛತ್ರವನ್ನು ಭೀಮಸೇನನು ಒಡನೆಯೇ ಹಿಡಿದು ನಿಂತನು. ಭೀಮಸೇನನನ್ನು ಅನುಸರಿಸಿ ನಕುಲ-ಸಹದೇವರೂ ರಥವನ್ನು ಹತ್ತಿ ಬಿಳುಪಾಗಿದ್ದ ಚಾಮರ-ವ್ಯಜನಗಳಿಂದ ಶ್ರೀಕೃಷ್ಣನಿಗೆ ಗಾಳಿಯನ್ನು ಬೀಸತೊಡಗಿದರು.

ಈ ಪ್ರಕಾರವಾಗಿ ಯುಧಿಷ್ಠಿರ-ಭೀಮಾರ್ಜುನ-ನಕುಲ-ಸಹದೇವರು ಹರ್ಷಪೂರ್ವಕವಾಗಿ ಶ್ರೀಕೃಷ್ಣನನ್ನು ಅನುಸರಿಸಿ ಹೋದರು ಮತ್ತು ಶ್ರೀಕೃಷ್ಣನಿಗೆ–'ಪ್ರಯಾಣಮಾಡುವುದು ಬೇಡ'–ಎಂದು ಹೇಳತೊಡಗಿದರು. ಮೂರು ಯೋಜನೆಗಳಷ್ಟು ದೂರ ರಥವು ಹೋದನಂತರ ಶ್ರೀಕೃಷ್ಣನು ಚರಣಕಮಲಗಳಿಗೆ ನಮಸ್ಕರಿಸಿದ ಪಾಂಡವರನ್ನು ಒಬ್ಬೊಬ್ಬರನ್ನಾಗಿ ಆಲಿಂಗಿಸಿಕೊಂಡು ಸಮಾಧಾನಗೊಳಿಸಿ ಅವರೆಲ್ಲರನ್ನೂ ಹಿಂದಕ್ಕೆ ಕಳುಹಿಸಿ ದ್ವಾರಕೆಗೆ ಪ್ರಯಾಣಮಾಡಿದನು.

ಹೀಗೆ ಧರ್ಮಪರಾಯಣರಾದ ಪಾಂಡವರು ಶ್ರೀಕೃಷ್ಣನಿಗೆ ನಮಸ್ಕರಿಸಿ ಹಸ್ತಿನಾಪುರಕ್ಕೆ ಹಿಂದಿರುಗಿ ಬಂದನಂತರ, ಶ್ರೀಕೃಷ್ಣನ ಉಪದೇಶದಂತೆ ಅಂದುಮೊದಲ್ಗೊಂಡು ಕಪಿಲಾಧೇನುವೇ ಮುಂತಾದುವುಗಳನ್ನು ದಾನಮಾಡತೊಡಗಿದರು. ಪಾಂಡವರು ಮಧುಸೂದನನ ಮಾತುಗಳನ್ನು ಪುನಃ ಪುನಃ ಸ್ಮರಿಸಿಕೊಳ್ಳುತ್ತಾ, ಅವನ್ನು ಹೃದ್ಗತಮಾಡಿಕೊಂಡು ಮನಃಪೂರ್ವಕವಾಗಿ ಆ ವಾಕ್ಯಗಳನ್ನು ಪ್ರಶಂಸಿಸುತ್ತಿದ್ದರು. ಧರ್ಮಾತ್ಮನಾದ ಯುಧಿಷ್ಠಿರನಾದರೋ ಜನಾರ್ದನನ ದಿವ್ಯಸ್ವರೂಪವನ್ನೇ ಧ್ಯಾನದ ಮೂಲಕವಾಗಿ ಹೃದಯದಲ್ಲಿ ಧಾರಣೆಮಾಡಿಕೊಂಡು ಯೋಗಯುಕ್ತನಾಗಿ ಅವನಲ್ಲಿಯೇ ನೆಟ್ಟಮನಸ್ಸುಳ್ಳವನೂ, ಅವನ ಪರಮಭಕ್ತನೂ, ಅವನನ್ನೇ ಕುರಿತು ಯಾಗಮಾಡುವವನೂ, ಅವನ ಧ್ಯಾನಾನುಸಂಧಾನಗಳಲ್ಲಿಯೇ ತತ್ಪರನೂ ಆದನು."

೯೨ನೆಯ ಅಧ್ಯಾಯವು ಮುಗಿಯಿತು.

ಆಶ್ವಮೇಧಿಕಪರ್ವವು ಮುಗಿಯಿತು.

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯನ್ತಾಂ
ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ।
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
ಲೋಕಾಃ ಸಮಸ್ತಾಃ ಸುಖಿನೋ ಭವನ್ತು॥
ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ ।
ದೇಶೋಽಯಂ ಕ್ಷೋಭರಹಿತೋ ಬ್ರಾಹ್ಮಣಾಃ ಸನ್ತು ನಿರ್ಭಯಾಃ॥
ಅಪುತ್ರಾಃ ಪುತ್ರಿಣಃ ಸನ್ತು ಪುತ್ರಿಣಃ ಸನ್ತು ಪೌತ್ರಿಣಃ।
ಅಧನಾಃ ಸಧನಾಃ ಸನ್ತು ಜೀವನ್ತು ಶರದಾಂ ಶತಮ್ ॥
ಕಾಯೇನ ವಾಚಾ ಮನಸೇನ್ದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್।
ಕರೋಮಿ ಯದ್ಯತ್ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ॥
ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತು ತೇ ॥
ಹರಿಃ ಓಂ ಶ್ರೀಕೃಷ್ಣಾರ್ಪಣಮಸ್ತು ಶ್ರೀ ಸದ್ಗುರುಚರಣಾರವಿನ್ದಾರ್ಪಣಮಸ್ತು
ಓಂ ತತ್ಸತ್

ಆಶ್ವಮೇಧಿಕಪರ್ವದ ಸಂಗ್ರಹ

ತತೋಽಶ್ವಮೇಧಿಕಂ ನಾಮ ಪರ್ವ ಪ್ರೋಕ್ತಂ ಚತುರ್ದಶಮ್।
ತತ್ಸಂವರ್ತಮರುತ್ತೀಯಂ ಯತ್ರಾಖ್ಯಾನಮನುತ್ತಮಮ್।
ಸುವರ್ಣಕೋಷಸಮ್ಪ್ರಾಪ್ತಿರ್ಜನ್ಮ ಚೋಕ್ತಂ ಪರೀಕ್ಷಿತಃ ||೩೭೯||

ದಗ್ಧಸ್ಯಾಸ್ತ್ರಾಗ್ನಿನಾ ಪೂರ್ವಂ ಕೃಷ್ಣಾತ್ಸಂಜೀವನಂ ಪುನಃ।
ಚರ್ಯಾಯಾಂ ಹಯಮುತ್ಸೃಷ್ಟಂ ಪಾಣ್ಡವಸ್ಯಾನುಗಚ್ಛತಃ ||

ತತ್ರ ತತ್ರ ಚ ಯುದ್ಧಾನಿ ರಾಜಪುತ್ರೈರಮರ್ಷಣೈಃ।
ಚಿತ್ರಾಙ್ಗದಾಯಾಃ ಪುತ್ರೇಣ ಪುತ್ರಿಕಾಯಾ ಧನಂಜಯಃ ||೩೮೧||

ಸಂಗ್ರಾಮೇ ಬಭ್ರುವಾಹೇಣ ಸಂಶಯಂ ಚಾತ್ರ ದರ್ಶಿತಃ।
ಅಶ್ವಮೇಧೇ ಮಹಾಯಜ್ಞೇ ನಕುಲಾಖ್ಯಾನಮೇವ ಚ ||೩೮೨||

ಇತ್ಯಾಶ್ವಮೇಧಿಕಂ ಪರ್ವ ಪ್ರೋಕ್ತಮೇತನ್ಮಹಾದ್ಭುತಮ್।
ಅಧ್ಯಾಯಾನಾಂ ಶತಂ ಚೈವ ತ್ರಯೋಧ್ಯಾಯಾಶ್ಚ ಕೀರ್ತಿತಾಃ ||

ತ್ರೀಣಿ ಶ್ಲೋಕಸಹಸ್ರಾಣಿ ತಾವನ್ತ್ಯೇವ ಶತಾನಿ ಚ ।
ವಿಂಶತಿಶ್ಚ ತಥಾ ಶ್ಲೋಕಾಃ ಸಂಖ್ಯಾತಾಸ್ತತ್ತ್ವದರ್ಶಿನಾ ||೩೮೪||

(ಆದಿಪರ್ವ, ಅಧ್ಯಾಯ-೨)

ಇಲ್ಲಿ ಹೇಳಿರುವಂತೆ ಆಶ್ವಮೇಧಿಕಪರ್ವದಲ್ಲಿರುವ ಅಧ್ಯಾಯಗಳು ೧೦೩, ಶ್ಲೋಕಗಳು ೩,೩೨೦. ನಾವು ಅನುವಾದಿಸಿರುವ ಪುಸ್ತಕದ ಪ್ರಕಾರ ಅಧ್ಯಾಯಗಳು ೯೨, ಶ್ಲೋಕಗಳು ೨,೯೧೫ (ವಿಷ್ಣುಧರ್ಮವನ್ನು ಬಿಟ್ಟು). ಭಂಡಾರ್ಕರ್ ರಿಸರ್ಚ ಇನ್ಸಟ್ಯೂಟಿನವರು ಪ್ರಕಟಿಸಿರುವ ಪುಸ್ತಕದ ಪ್ರಕಾರ ಅಧ್ಯಾಯಗಳು ೯೬, ಶ್ಲೋಕಗಳು ೨,೭೪೩.

ಶ್ರೀಗಣೇಶಾಯ ನಮಃ ಶ್ರೀ ಮಹಾಸರಸ್ವತ್ಯೈ ನಮಃ ಶ್ರೀಸದ್ಗುರವೇ ನಮಃ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥

ಆಶ್ರಮವಾಸಿಕಪರ್ವ

೧ನೆಯ ಅಧ್ಯಾಯ ಆಶ್ರಮವಾಸಪರ್ವ

ಸಹೋದರರಿಂದ ಕೂಡಿದ ಯುಧಿಷ್ಠಿರನು ಕುಂತಿಯೇ ಮೊದಲಾದವರೊಡನೆ ಧೃತರಾಷ್ಟ್ರ-ಗಾಂಧಾರಿಯರ ಶುಶ್ರೂಷೆಯಲ್ಲಿ ನಿರತನಾದುದು

ಜನಮೇಜಯನು ಪ್ರಶ್ನಿಸುತ್ತಾನೆ:

ಪ್ರಾಪ್ಯ ರಾಜ್ಯಂ ಮಹಾತ್ಮಾನಃ ಪಾಣ್ಡವಾ ಮೇ ಪಿತಾಮಹಾಃ।
ಕಥಮಾಸನ್ಮಹಾರಾಜ್ಞಿ ಧೃತರಾಷ್ಟ್ರೇ ಮಹಾತ್ಮನಿ ॥೧॥

“ವೈಶಂಪಾಯನರೇ! ಮಹಾತ್ಮರಾದ, ನನ್ನ ಪಿತಾಮಹರಾದ ಪಾಂಡವರು ರಾಜ್ಯಾಧಿಕಾರವನ್ನು ವಹಿಸಿಕೊಂಡಮೇಲೆ ಮಹಾತ್ಮನಾದ ಧೃತರಾಷ್ಟ್ರಮಹಾರಾಜನ ವಿಷಯದಲ್ಲಿ ಹೇಗೆ ನಡೆದುಕೊಳ್ಳುತ್ತಿದ್ದರು?

ಧೃತರಾಷ್ಟ್ರರಾಜನಾದರೋ ಆ ಸಮಯದಲ್ಲಿ ತನ್ನ ಮಂತ್ರಿಗಳನ್ನೂ ಪುತ್ರರನ್ನೂ ಕಳೆದುಕೊಂಡು ಆಶ್ರಯಹೀನನಾಗಿದ್ದನು. ಐಶ್ವರ್ಯವೆಲ್ಲವನ್ನೂ ಕಳೆದುಕೊಂಡಿದ್ದ ಧೃತರಾಷ್ಟ್ರನೂ ಮತ್ತು ಯಶಸ್ವಿನಿಯಾದ ಗಾಂಧಾರಿಯೂ ಹೇಗೆ ಜೀವನವನ್ನು ನಿರ್ವಹಿಸುತ್ತಿದ್ದರು? ಮಹಾತ್ಮರಾದ ನನ್ನ ಪೂರ್ವಪಿತಾಮಹರು ಎಷ್ಟು ವರ್ಷಗಳ ಕಾಲ ರಾಜ್ಯವನ್ನಾಳುತ್ತಿದ್ದರು? ಈ ವಿಷಯವನ್ನು ನನಗೆ ವಿಸ್ತಾರವಾಗಿ ಹೇಳುವ ಕೃಪೆಮಾಡಿರಿ.”

ವೈಶಂಪಾಯನರು ಹೇಳುತ್ತಾರೆ:

“ಜನಮೇಜಯ! ಶತ್ರುಗಳನ್ನು ಸಂಹರಿಸಿದ ಮಹಾತ್ಮರಾದ

ಪಾಂಡವರು ರಾಜ್ಯವನ್ನು ಪಡೆದುಕೊಂಡ ಬಳಿಕ ಧೃತರಾಷ್ಟ್ರನನ್ನೇ ಮುಂದೆ ಮಾಡಿಕೊಂಡು ರಾಜ್ಯಭಾರಮಾಡುತ್ತಿದ್ದರು. ಕುರುಶ್ರೇಷ್ಠನೇ! ವಿದುರ, ಸಂಜಯ ಮತ್ತು ವೈಶ್ಯಾಪುತ್ರನಾದ, ಮೇಧಾವಿಯಾದ ಯುಯುತ್ಸು–ಈ ಮೂವರೂ ಸದಾ ಧೃತರಾಷ್ಟ್ರನ ಸೇವೆಯಲ್ಲಿಯೇ ನಿರತರಾಗಿರುತ್ತಿದ್ದರು. ಪಾಂಡವರು ಯಾವುದೇ ಕಾರ್ಯವನ್ನು ಮಾಡಬೇಕಾದರೂ ಮೊದಲು ಧೃತರಾಷ್ಟ್ರನ ಸಲಹೆಯನ್ನು ಕೇಳುತ್ತಿದ್ದರು. ಅವನ ಅನುಜ್ಞೆಯನ್ನು ಪಡೆದು ಕೊಂಡನಂತರವೇ ಅವರು ರಾಜಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಹೀಗೆ ಅವರು ಹದಿನೈದು ವರ್ಷಗಳವರೆಗೆ ರಾಜ್ಯಭಾರಮಾಡಿದರು. ಧರ್ಮ ರಾಜನ ಅಭಿಪ್ರಾಯದಂತೆ ಸದಾ ನಡೆಯುತ್ತಿದ್ದ ಪಾಂಡವವೀರರು–ಧೃತ ರಾಷ್ಟ್ರನ ಬಳಿಗೆ ಹೋಗಿ ಅವನ ಪಾದಗಳಿಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಅವನನ್ನು ಸೇವಿಸುತ್ತಿದ್ದರು. ಧೃತರಾಷ್ಟ್ರನೂ ಆದರಪೂರ್ವಕ ವಾಗಿ ಅವರನ್ನು ಹಿಡಿದೆತ್ತಿ ನೆತ್ತಿಯನ್ನು ಆಘ್ರಾಣಿಸುತ್ತಿದ್ದನು. ಅವನ ಅನುಮತಿಯನ್ನು ಪಡೆದೇ ಪಾಂಡವರು ರಾಜ್ಯಕ್ಕೆ ಸಂಬಂಧಿಸಿದಂತೆ ಎಲ್ಲ ಕಾರ್ಯಗಳನ್ನೂ ಮಾಡುತ್ತಿದ್ದರು. ಕುಂತಿಭೋಜನ ಮಗಳಾದ ಕುಂತಿಯೂ ಗಾಂಧಾರಿಯ ಸೇವೆಯಲ್ಲಿಯೇ ನಿರತಳಾಗಿರುತ್ತಿದ್ದಳು. ದ್ರೌಪದೀ, ಸುಭದ್ರೆ ಮತ್ತು ಇತರ ಪಾಂಡವಸ್ತ್ರೀಯರು ಗಾಂಧಾರೀ ಮತ್ತು ಕುಂತಿಯರನ್ನು ಸಮಾನಭಾವದಿಂದ ಕಾಣುತ್ತಾ ವಿಧಿವತ್ತಾಗಿ ಅವರ ಸೇವೆ ಯನ್ನು ಮಾಡುತ್ತಿದ್ದರು. ಯುಧಿಷ್ಠಿರಮಹಾರಾಜನು ಧೃತರಾಷ್ಟ್ರನಿಗೆ ಬಹು ಮೂಲ್ಯವಾದ ಹಾಸಿಗೆಗಳನ್ನೂ, ವಸ್ತ್ರಗಳನ್ನೂ, ಆಭರಣಗಳನ್ನೂ, ರಾಜ ಯೋಗ್ಯವಾದ ಸಮಸ್ತವಾದ ಪದಾರ್ಥಗಳನ್ನೂ, ಭಕ್ಷ್ಯ-ಭೋಜ್ಯಗಳನ್ನೂ ಅರ್ಪಿಸುತ್ತಿದ್ದನು. ಅದೇ ರೀತಿಯಲ್ಲಿ ಕುಂತೀದೇವಿಯೂ ಗಾಂಧಾರಿಯಲ್ಲಿ ಗೌರವಭಾವವನ್ನಿಟ್ಟುಕೊಂಡು ಅವಳ ಸೇವೆಯಲ್ಲಿ ನಿರತಳಾಗಿದ್ದಳು. ಹಿಂದೆ ಹೇಳಿದಂತೆ ಮಕ್ಕಳನ್ನು ಕಳೆದುಕೊಂಡಿದ್ದ ವೃದ್ಧನಾಗಿದ್ದ ಧೃತರಾಷ್ಟ್ರಮಹಾ ರಾಜನನ್ನು ವಿದುರನೂ, ಸಂಜಯನೂ ಮತ್ತು ಯುಯುತ್ಸುವೂ ಅನವರತವಾಗಿ ಉಪಚರಿಸುತ್ತಿದ್ದರು. ಮಹಾಧನುರ್ಧರನಾದ, ಬ್ರಾಹ್ಮಣ ಶ್ರೇಷ್ಠನಾದ, ದ್ರೋಣರಿಗೆ ಅತ್ಯಂತಪ್ರಿಯನೂ ಭಾವಮೈದುನನೂ ಆದ

ಕೃಪನು ಆ ದಿವಸಗಳಲ್ಲಿ ಯಾವಾಗಲೂ ಧೃತರಾಷ್ಟ್ರನ ಬಳಿಯಲ್ಲಿಯೇ ಇರುತ್ತಿದ್ದನು. ಪುರಾಣರ್ಷಿಗಳಾದ ಪೂಜ್ಯರಾದ ವ್ಯಾಸರು ಪ್ರತಿನಿತ್ಯವೂ ಧೃತರಾಷ್ಟ್ರನ ಬಳಿಗೆ ಬಂದು ದೇವರ್ಷಿಗಳ, ಪಿತೃಗಳ ಮತ್ತು ರಾಕ್ಷಸರ ನಾನಾಪ್ರಕಾರವಾದ ಕಥೆಗಳನ್ನು ಅವನಿಗೆ ಹೇಳುತ್ತಿದ್ದರು. ಧೃತರಾಷ್ಟ್ರನ ಆಜ್ಞಾನುಸಾರ ವಿದುರನು ರಾಜನಿಗೆ ಸಂಬಂಧಿಸಿದ ಧಾರ್ಮಿಕವಾದ ಮತ್ತು ವ್ಯಾವಹಾರಿಕವಾದ ಕಾರ್ಯಗಳೆಲ್ಲವನ್ನೂ ಮಾಡುತ್ತಿದ್ದನು ಹಾಗೂ ಮಾಡಿಸುತ್ತಿದ್ದನು. ವಿದುರನ ಒಳ್ಳೆಯ ನೀತಿಯ ಪರಿಣಾಮವಾಗಿ ಸಾಮಂತರಾಜರು ಧೃತರಾಷ್ಟ್ರನಿಗೆ ಪ್ರಿಯವಾದ ಅನೇಕಕಾರ್ಯಗಳನ್ನು ಸ್ವಲ್ಪವೇ ವೆಚ್ಚದಿಂದ ಮಾಡಿಮುಗಿಸಿಬಿಡುತ್ತಿದ್ದರು. ಧೃತರಾಷ್ಟ್ರಮಹಾರಾಜನು ಹಲವು ಬಾರಿ ಬಂದಿಗಳ ಬಿಡುಗಡೆಗೆ ಆಜ್ಞೆಮಾಡುತ್ತಿದ್ದನು. ಮರಣದಂಡನೆಗೆ ಗುರಿಯಾದವರಿಗೆ ಪ್ರಾಣದಾನಮಾಡುತ್ತಿದ್ದನು. ಯುಧಿಷ್ಠಿರನು ಕೂಡ ಆ ವಿಷಯಗಳಲ್ಲಿ ಯಾವಾಗಲೂ ಏನನ್ನೂ ಹೇಳುತ್ತಿರಲಿಲ್ಲ.

ಮಹಾತೇಜಸ್ವಿಯಾದ, ಕುರುರಾಜನಾದ ಯುಧಿಷ್ಠಿರನು–ಧೃತರಾಷ್ಟ್ರನು ವಿಹಾರಕ್ಕಾಗಲೀ ಯಾತ್ರೆಗಾಗಲೀ ಹೊರಟಾಗ ಅವನು ಅಪೇಕ್ಷಿಸಿದ ಸರ್ವಕಾಮನಾವಸ್ತುಗಳನ್ನೂ ಒದಗಿಸಿಕೊಡುತ್ತಿದ್ದನು. ಹಿಂದಿದ್ದಂತೆಯೇ ಆಗಲೂ ರಾಜಯೋಗ್ಯವಾದ ಆಹಾರಗಳನ್ನು ಸಿದ್ಧಪಡಿಸುವ ಅರಾಲಿಕರೂ* ಸೂಪಕಾರರೂ[1] ಮತ್ತು ರಾಗಖಾಂಡವಿಕರೂ[2] ಸದಾ ಅವನ ಜೊತೆಯಲ್ಲಿಯೇ ಇರುತ್ತಿದ್ದರು. ಪಾಂಡವರು ಧೃತರಾಷ್ಟ್ರನಿಗೆ ನ್ಯಾಯೋಚಿತವಾದ ರೀತಿಯಲ್ಲಿ ಬಹುಮೂಲ್ಯವಾದ ವಸ್ತ್ರಗಳನ್ನೂ ವಿಧ-ವಿಧವಾದ ಮಾಲೆಗಳನ್ನೂ ತಂದುಕೊಡುತ್ತಿದ್ದರು. ಹಿಂದಿನಂತೆಯೇ ಪಾಂಡವರು ಧೃತರಾಷ್ಟ್ರನಿಗೆ ರುಚಿಕರವಾದ ನಾನಾ ಬಗೆಯ ಮಾಂಸಗಳನ್ನೂ, ಮೈರೇಯಗಳನ್ನೂ (ಕಬ್ಬಿನರಸ, ಪುಷ್ಪರಸ ಇತ್ಯಾದಿಗಳಿಂದ ತಯಾರಿಸಿದ ಮದ್ಯವಿಶೇಷ), ಲಘುವಾದ ಪಾನಕಗಳನ್ನೂ, ವಿಚಿತ್ರವಾದ

---

*ಅರಾಲಿಕಾಃ= ಅಡಿಗೆಯವರು; ಅರಾ ಎಂಬ ಶಸ್ತ್ರದಿಂದ ಕಾಯಿ-ಪಲ್ಯಗಳನ್ನು ಕತ್ತರಿಸುವವರು (ತರಕಾರಿಗಳನ್ನು ಹೆಚ್ಚುವವರು) [1]ಸೂಪಕಾರಾಃ=ಸಾರು-ತೊವ್ವೆ ಮುಂತಾದುವನ್ನು ಮಾಡುವವರು. [2]ರಾಗಖಂಡವಿಕಾಃ=ರಾಗಖಂಡವೆಂಬ ಭಕ್ಷ್ಯ ಅಥವಾ ಭಕ್ಷ್ಯಗಳನ್ನು ತಯಾರಿಸುವವರು.

ಭಕ್ಷ್ಯಗಳನ್ನೂ ಕಾಲಕಾಲಕ್ಕೆ ಒದಗಿಸಿಕೊಡುತ್ತಿದ್ದರು. ಆಗಿಂದಾಗ್ಗೆ ಹಸ್ತಿನಾಪಟ್ಟಣಕ್ಕೆ ಆಗಮಿಸುತ್ತಿದ್ದ ಸಾಮಂತರಾಜರು ಹಿಂದಿನಂತೆಯೇ ಧೃತರಾಷ್ಟ್ರನಿಗೆ ಗೌರವವನ್ನು ಸಲ್ಲಿಸುತ್ತಿದ್ದರು. ಕುಂತೀ, ದ್ರೌಪದೀ, ಯಶೋವತಿಯಾದ ಸುಭದ್ರೆ, ನಾಗಕನ್ಯೆಯಾದ ಉಲೂಪೀ, ದೇವೀ ಚಿತ್ರಾಂಗದೆ, ಧೃಷ್ಟಕೇತುವಿನ ತಂಗಿ, ಜರಾಸಂಧನ ಪುತ್ರೀ–ಇವರು ಮತ್ತು ಇನ್ನೂ ಅಂತಃಪುರದ ಅನೇಕಸ್ತ್ರೀಯರು ಸೇವಕಿಯರಂತೆಯೇ ಗಾಂಧಾರಿಯ ಸೇವೆಯಲ್ಲಿ ನಿರತರಾಗಿರುತ್ತಿದ್ದರು.

"ಪುತ್ರರಿಂದ ವಿಹೀನನಾಗಿರುವ ನಮ್ಮ ರಾಜನಿಗೆ ಸ್ವಲ್ಪವೂ ದುಃಖವಾಗದ ರೀತಿಯಲ್ಲಿ ನಾವು ನಡೆದುಕೊಳ್ಳಬೇಕು"–ಎಂಬುದಾಗಿ ಯುಧಿಷ್ಠಿರನು ಅನುದಿನವೂ ತನ್ನ ಸಹೋದರರಿಗೆ ಆಜ್ಞೆಮಾಡುತ್ತಿದ್ದನು. ಧರ್ಮರಾಜನ ಅರ್ಥವತ್ತಾದ ಆ ಮಾತನ್ನು ಕೇಳಿ ಅರ್ಜುನ-ನಕುಲ-ಸಹದೇವರು ವಿಶೇಷವಾದ ರೀತಿಯಲ್ಲಿಯೇ ಧೃತರಾಷ್ಟ್ರನನ್ನು ಆದರಿಸಿ ಸತ್ಕರಿಸುತ್ತಿದ್ದರು. ಭೀಮಸೇನನು ಮಾತ್ರ ಅದಕ್ಕೆ ಹೊರತಾಗಿದ್ದನು. ಧೃತರಾಷ್ಟ್ರನ ದುರ್ಬುದ್ಧಿಯ ಪರಿಣಾಮವಾಗಿ ದ್ಯೂತದಿಂದ ಉಂಟಾದ ಅನರ್ಥವನ್ನು ಮರೆಯಲು ಭೀಮಸೇನನಿಗೆ ಸಾಧ್ಯವಾಗಲೇ ಇಲ್ಲ. ಆ ಅನರ್ಥ ಪರಂಪರೆಯು ವೀರನಾದ ಭೀಮನ ಹೃದಯದಿಂದ ಅಳಿದುಹೋಗಲೇ ಇಲ್ಲ.

೧ನೆಯ ಅಧ್ಯಾಯವು ಮುಗಿಯಿತು.

೨ನೆಯ ಅಧ್ಯಾಯ ಆಶ್ರಮವಾಸಪರ್ವ (ಮುಂದುವರಿದಿದೆ.)

ಪಾಂಡವರು ಧೃತರಾಷ್ಟ್ರ-ಗಾಂಧಾರಿಯರ ವಿಷಯದಲ್ಲಿ ಅನುಕೂಲವಾಗಿ ವ್ಯವಹರಿಸುತ್ತಿದ್ದುದು

ವೈಶಂಪಾಯನರು ಹೇಳುತ್ತಾರೆ:

ಏವಂ ಸಮ್ಪೂಜಿತೋ ರಾಜಾ ಪಾಣ್ಡವೈರಮ್ಬಿಕಾಸುತಃ।
ವಿಜಹಾರ ಯಥಾಪೂರ್ವಮೃಷಿಭಿಃ ಪರ್ಯುಪಾಸಿತಃ ॥೧॥

ಹೀಗೆ ಪಾಂಡವರಿಂದ ಸತ್ಕೃತನಾಗುತ್ತಿದ್ದ ಅಂಬಿಕೆಯ ಮಗನಾದ ಧೃತರಾಷ್ಟ್ರನು ಹಿಂದಿನಂತೆಯೇ ಋಷಿಗಳ ಮಧ್ಯದಲ್ಲಿ ಧರ್ಮಾನುಕಥನಗಳನ್ನು ಮಾಡುತ್ತಾ ಆನಂದದಿಂದ ಕಾಲಕಳೆಯುತ್ತಿದ್ದನು. ಕುರುಶ್ರೇಷ್ಠನಾದ

ಧೃತರಾಷ್ಟ್ರನು ಬ್ರಾಹ್ಮಣರಿಗೆ ವಾಸಮಾಡಲು ಯೋಗ್ಯವಾಗಿದ್ದ ಅಗ್ರಹಾರ ಗಳನ್ನು ದಾನವಾಗಿ ಕೊಡುತ್ತಿದ್ದನು. ಆ ಎಲ್ಲ ಧರ್ಮಕಾರ್ಯಗಳಲ್ಲಿಯೂ ಯುಧಿಷ್ಠಿರನು ಧೃತರಾಷ್ಟ್ರನಿಗೆ ಸಂಪೂರ್ಣವಾದ ಸಹಕಾರವನ್ನು ನೀಡುತ್ತಿದ್ದನು. ದಯಾಮಯನಾದ ಯುಧಿಷ್ಠಿರಮಹಾರಾಜನು ಪ್ರಸನ್ನಚಿತ್ತ ನಾಗಿ ತನ್ನ ಸಹೋದರರರನ್ನೂ ಮತ್ತು ಅಮಾತ್ಯರನ್ನೂ ಕುರಿತು ಪದೇ ಪದೇ ಹೇಳುತ್ತಲೇ ಇದ್ದನು:

ಮಯಾ ಚೈವ ಭವದ್ಭಿಶ್ಚ ಮಾನ್ಯ ಏಷ ನರಾಧಿಪಃ।
ನಿದೇಶೇ ಧೃತರಾಷ್ಟ್ರಸ್ಯ ಯಸ್ತಿಷ್ಠತಿ ಸ ಮೇ ಸುಹೃತ್।
ವಿಪರೀತಶ್ಚ ಮೇ ಶತ್ರುರ್ನಿಯಮ್ಯಶ್ಚ ಭವೇನ್ನರಃ ॥೪॥

"ನನ್ನಿಂದಲೂ ಮತ್ತು ನಿಮ್ಮಿಂದಲೂ ಧೃತರಾಷ್ಟ್ರಮಹಾರಾಜನು ಗೌರವಿಸಲ್ಪಡತಕ್ಕವನಾಗಿದ್ದಾನೆ. (ನಮ್ಮೆಲ್ಲರಿಗೂ ಮಾನ್ಯನು.) ಧೃತರಾಷ್ಟ್ರನ ಆಜ್ಞಾನುಸಾರವಾಗಿ ಯಾರು ನಡೆದುಕೊಳ್ಳುವನೋ ಅವನೇ ನನ್ನ ಮಿತ್ರನು. ಇದಕ್ಕೆ ವಿಪರೀತವಾಗಿ ಧೃತರಾಷ್ಟ್ರನ ಆಜ್ಞೆಯನ್ನು ಉಲ್ಲಂಘಿಸುವವನು ಅಥವಾ ಅವನನ್ನು ತಿರಸ್ಕಾರಭಾವದಿಂದ ಕಾಣುವವನು ನನ್ನ ಶತ್ರುವೇ ಸರಿ. ಅವನು ಶಿಕ್ಷಾರ್ಹನೂ ಆಗುವನು.

ಪಿತೃವೃತ್ತೇಷು ಚಾಹಃಸು ಪುತ್ರಾಣಾಂ ಶ್ರಾದ್ಧಕರ್ಮಣಿ ।
ಸುಹೃದಾಂ ಚೈವ ಸರ್ವೇಷಾಂ ಯಾವದಸ್ಯ ಚಿಕೀರ್ಷಿತಮ್ ॥೫॥

ಧೃತರಾಷ್ಟ್ರಮಹಾರಾಜನು–ತಂದೆಯೇ ಮೊದಲಾದವರು ಮೃತರಾದ ತಿಥಿಗಳಲ್ಲಿಯೂ ಮಕ್ಕಳ ಮತ್ತು ಸುಹೃದರ ಶ್ರಾದ್ಧಕರ್ಮಗಳಲ್ಲಿಯೂ ಯಾವ ರೀತಿಯಲ್ಲಿ ಮಾಡಲು ಅಪೇಕ್ಷಿಸುವನೋ ಅದರಂತೆಯೇ ಎಲ್ಲವನ್ನೂ ಅವನಿಗೆ ಒದಗಿಸಿಕೊಡಬೇಕು."

ಯುಧಿಷ್ಠಿರನ ಆ ಮಾತಿಗೆ ಎಲ್ಲರೂ ಸಮ್ಮತಿಯನ್ನಿತ್ತರು. ಮಹಾತ್ಮನಾದ ಧೃತರಾಷ್ಟ್ರನು ಸಮಯಗಳಲ್ಲಿ ಯೋಗ್ಯರಾದ ಬ್ರಾಹ್ಮಣರಿಗೆ ನಾನಾ ಪ್ರಕಾರವಾದ ಐಶ್ವರ್ಯಗಳನ್ನು ದಾನಮಾಡುತ್ತಿದ್ದನು. ಧೃತರಾಷ್ಟ್ರನಿಗೆ ಪ್ರಿಯ ವನ್ನುಂಟುಮಾಡುವ ಇಚ್ಛೆಯಿಂದ ಯುಧಿಷ್ಠಿರ-ಭೀಮಾರ್ಜುನ- ನಕುಲ-ಸಹ ದೇವರು ಆ ಎಲ್ಲ ಧರ್ಮಕಾರ್ಯಗಳಲ್ಲಿಯೂ ಅವನೊಂದಿಗೆ ಇರುತ್ತಿದ್ದರು.

'ಮಕ್ಕಳ ಮತ್ತು ಮೊಮ್ಮಕ್ಕಳ ವಧೆಯಿಂದಾಗಿ ದುಃಖಪೀಡಿತನಾಗಿರುವ, ಮೇಲಾಗಿ ನಮ್ಮಿಂದಲೇ ಇಂತಹ ಶೋಕಕ್ಕೆ ಗುರಿಯಾಗಿರುವ ವೃದ್ಧನಾದ ಧೃತರಾಷ್ಟ್ರನು ಪ್ರಾಣತ್ಯಾಗಮಾಡದೇ ಇನ್ನೂ ಜೀವಿಸಿರಲು ಹೇಗೆ ಸಾಧ್ಯವಾಗಿದೆ? ಮಕ್ಕಳು ಜೀವಿಸಿರುವಾಗ ಕುರುವೀರನಾದ ಧೃತರಾಷ್ಟ್ರನು ಯಾವ ವಿಧವಾದ ಸುಖೋಪಭೋಗಗಳನ್ನು ಅನುಭವಿಸುತ್ತಿದ್ದನೋ-ಅದೇ ಸುಖೋಪಭೋಗಗಳನ್ನೇ ಈಗಲೂ ಅವನು ಪಡೆದುಕೊಳ್ಳಲಿ. 'ಈಗ ನನ್ನ ಮಕ್ಕಳಿಲ್ಲ; ಆದುದರಿಂದ ನನಗೆ ಈ ದುರವಸ್ಥೆಯುಂಟಾಗಿದೆ–ಹೀಗೆ ಅವನು ಒಮ್ಮೆಯಾದರೂ ಭಾವಿಸಬಾರದು.'–ಹೀಗೆ ಪಾಂಡವರು ಸಮಾಲೋಚಿಸಿ ಅವನು ಸುಖವಾಗಿರಲು ಎಲ್ಲ ವಿಧವಾದ ವ್ಯವಸ್ಥೆಗಳನ್ನೂ ಮಾಡುತ್ತಿದ್ದರು.

ಸೌಶೀಲ್ಯದಿಂದಲೂ ಸದ್ವ್ಯವಹಾರಗಳಿಂದಲೂ ಯುಕ್ತರಾಗಿದ್ದ ಐವರು ಪಾಂಡವರು ಧೃತರಾಷ್ಟ್ರನ ಆಜ್ಞಾಪಾಲಕರಾಗಿದ್ದರು. ಧೃತರಾಷ್ಟ್ರನು ಕೂಡ ಪಾಂಡವರು ತನ್ನ ವಿಷಯದಲ್ಲಿ ವಿನಯಶೀಲರಾಗಿರುವರೆಂಬುದನ್ನೂ, ಆಜ್ಞಾನುಸಾರವಾಗಿ ನಡೆದುಕೊಳ್ಳುತ್ತಿರುವರೆಂಬುದನ್ನೂ, ಶಿಷ್ಯಭಾವವನ್ನು ಹೊಂದಿ ತನ್ನ ಸೇವೆಯಲ್ಲಿಯೇ ನಿರತರಾಗಿರುವರೆಂಬುದನ್ನೂ ತಿಳಿದು ಅವರೊಡನೆ ತಂದೆಯಂತೆಯೇ ಪ್ರೀತಿಯಿಂದ ವ್ಯವಹರಿಸುತ್ತಿದ್ದನು. ಗಾಂಧಾರೀದೇವಿಯೂ ತನ್ನ ಮಕ್ಕಳ ಸಲುವಾಗಿ ವಿಧ-ವಿಧವಾದ ಶ್ರಾದ್ಧಗಳ ಮೂಲಕವಾಗಿ ಬ್ರಾಹ್ಮಣರು ಅಪೇಕ್ಷಿಸಿದ ದಾನಗಳನ್ನು ಕೊಟ್ಟು ಪುತ್ರಋಣದಿಂದ ಮುಕ್ತಳಾದಳು.

ಹೀಗೆ ಧರ್ಮಾತ್ಮರಲ್ಲಿ ಶ್ರೇಷ್ಠನಾದ ಧೀಮಂತನಾದ ಯುಧಿಷ್ಠಿರನು ಸಹೋದರರೊಡನೆ ಧೃತರಾಷ್ಟ್ರನನ್ನು ಆದರಪೂರ್ವಕವಾಗಿ ಸತ್ಕರಿಸುತ್ತಿದ್ದನು. ಕುರುಕುಲಾವತಂಸನಾದ, ಮಹಾತೇಜಸ್ವಿಯಾದ, ವೃದ್ಧನಾದ ಧೃತರಾಷ್ಟ್ರರಾಜನು ಯುಧಿಷ್ಠಿರನಲ್ಲಿ ತನಗೆ ಅಪ್ರಿಯವಾಗುವ ಯಾವುದೇ ವ್ಯವಹಾರವನ್ನೂ ಕಾಣಲಿಲ್ಲ. ಮಹಾತ್ಮರಾದ ಪಾಂಡವರು ಹೀಗೆ ಧೃತರಾಷ್ಟ್ರನೊಡನೆ ಸದ್ವ್ಯವಹಾರದಿಂದಲೇ ಇರುತ್ತಿರಲು ಅಂಬಿಕಾಪುತ್ರ

ನಾದ ರಾಜನೂ ಸುಪ್ರೀತನಾಗಿದ್ದನು. ಸುಬಲನ ಮಗಳಾದ ಗಾಂಧಾರಿಯೂ ಶೋಕಿಸುವುದನ್ನು ಪರಿತ್ಯಜಿಸಿ ಪಾಂಡವರನ್ನು ಯಾವಾಗಲೂ ತನ್ನ ಸ್ವಂತಮಕ್ಕಳಂತೆಯೇ ಪ್ರೀತಿಸುತ್ತಿದ್ದಳು. ಕುರುಶ್ರೇಷ್ಠನಾದ ಯುಧಿಷ್ಠಿರನು ಧೃತರಾಷ್ಟ್ರನಿಗೆ ಯಾವಾಗಲೂ ಪ್ರಿಯವಾದ ಕಾರ್ಯಗಳನ್ನೇ ಮಾಡುತ್ತಿದ್ದನು. ಅವನಿಗೆ ಅಪ್ರಿಯವಾಗುವಂತಹ ಯಾವ ಕಾರ್ಯವನ್ನೂ ಮಾಡುತ್ತಿರಲಿಲ್ಲ. ಜನಾಧಿಪನಾದ ಧೃತರಾಷ್ಟ್ರನೂ ಮತ್ತು ತಪಸ್ವಿನಿಯಾದ ಗಾಂಧಾರಿಯೂ ಯಾವ ಚಿಕ್ಕ ಕಾರ್ಯವನ್ನೇ ಹೇಳಲಿ, ದೊಡ್ಡ ಕಾರ್ಯವನ್ನೇ ಹೇಳಲಿ–ಪಾಂಡವಧುರಂಧರನಾದ ಯುಧಿಷ್ಠಿರನು ಅವರ ಮಾತನ್ನು ಗೌರವಿಸಿ ಒಡನೆಯೇ ಅವರು ಹೇಳಿದ ಕಾರ್ಯವನ್ನು ಮಾಡಿಕೊಡುತ್ತಿದ್ದನು. ಈ ವಿಧವಾದ ಯುಧಿಷ್ಠಿರನ ಸದ್ವ್ಯವಹಾರದಿಂದ ಧೃತರಾಷ್ಟ್ರನು ಸುಪ್ರೀತನಾಗಿದ್ದನು. ಮಂದಬುದ್ಧಿಯವನಾದ ತನ್ನ ಮಗನನ್ನು ಸ್ಮರಿಸಿಕೊಂಡು ಪಶ್ಚಾತ್ತಾಪಪಡುತ್ತಿದ್ದನು. ಧೃತರಾಷ್ಟ್ರನು ಪ್ರತಿನಿತ್ಯವೂ ಪ್ರಾತಃಕಾಲದಲ್ಲೆದ್ದು ಶೌಚ-ಮುಖಮಾರ್ಜನ-ಸ್ನಾನಗಳನ್ನು ಮಾಡಿ, ಸಂಧ್ಯಾವಂದನೆಯನ್ನೂ-ಗಾಯತ್ರೀಜಪವನ್ನೂ ಮಾಡಿ ಪವಿತ್ರನಾಗಿ, ಯುದ್ಧದಲ್ಲಿ ಪಾಂಡುನಂದನರು ವಿಜಯಿಗಳಾಗುವಂತೆ ಆಶೀರ್ವದಿಸುತ್ತಿದ್ದನು. ಬ್ರಾಹ್ಮಣರಿಂದ ಸ್ವಸ್ತಿವಾಚನ ಮಾಡಿಸಿ, ಅಗ್ನಿಯಲ್ಲಿ ಹೋಮಮಾಡಿ ಪಾಂಡವರು ದೀರ್ಘಾಯುಗಳಾಗಲೆಂದು ಪ್ರಾರ್ಥಿಸುತ್ತಿದ್ದನು. ಪಾಂಡವರ ಸದ್ವ್ಯವಹಾರದಿಂದ ಉಂಟಾದ ಸಂತೋಷವನ್ನು ಹಿಂದೆ ತನ್ನ ಮಕ್ಕಳಿಂದಲೂ ಪಡೆದಿರಲಿಲ್ಲ. ಧರ್ಮಾತ್ಮನಾದ ಯುಧಿಷ್ಠಿರನು ಬ್ರಾಹ್ಮಣರಲ್ಲಿ ಮತ್ತು ಕ್ಷತ್ರಿಯರಲ್ಲಿ ಯಾವ ವಿಧವಾದ ಸದ್ವ್ಯವಹಾರವನ್ನು ಇಟ್ಟುಕೊಂಡಿದ್ದನೋ–ಅದೇ ರೀತಿಯಲ್ಲಿ ವೈಶ್ಯ-ಶೂದ್ರರ ವಿಷಯದಲ್ಲಿಯೂ ಸದ್ವ್ಯವಹಾರವನ್ನೇ ಇಟ್ಟುಕೊಂಡಿದ್ದನು. ಆದುದರಿಂದ ಅವನು ಎಲ್ಲರ ಪ್ರೀತಿಗೂ ಪಾತ್ರನಾಗಿದ್ದನು. ಧೃತರಾಷ್ಟ್ರನ ಮಕ್ಕಳು ಮಾಡಿದ ಅಕಾರ್ಯಗಳೊಂದನ್ನೂ ಯುಧಿಷ್ಠಿರನು ಮನಸ್ಸಿನಲ್ಲಿ ಇಟ್ಟುಕೊಳ್ಳದೇ ಧೃತರಾಷ್ಟ್ರನ ಸೇವೆಯನ್ನು ನಿಷ್ಕಲ್ಮಷವಾದ ಮನಸ್ಸಿನಿಂದ ಮಾಡುತ್ತಿದ್ದನು. ಅಂಬಿಕೆಯ ಮಗನಾದ ಧೃತರಾಷ್ಟ್ರನ ವಿಷಯದಲ್ಲಿ ಯಾವನಾದರೂ ಸ್ವಲ್ಪವಾದರೂ ಅಪ್ರಿಯವಾಗಿ ನಡೆದುಕೊಂಡುದೇ ಆದರೆ ಅಂತಹವನು

ಧೀಮಂತನಾದ ಯುಧಿಷ್ಠಿರನ ಕೋಪಕ್ಕೆ ಪಾತ್ರನಾಗುತ್ತಿದ್ದನು. ಯುಧಿಷ್ಠಿರನ ಭಯದಿಂದಾಗಿ ಅವನ ರಾಜ್ಯದಲ್ಲಿ ಯಾರೂ ಧೃತರಾಷ್ಟ್ರನ ಮತ್ತು ದುರ್ಯೋಧನನ ದುಷ್ಕೃತ್ಯಗಳನ್ನು ಹೇಳುತ್ತಲೇ ಇರಲಿಲ್ಲ. ಅಜಾತಶತ್ರುವಿನ ಧೈರ್ಯ ಮತ್ತು ಶುದ್ಧವಾದ ವ್ಯವಹಾರಗಳಿಂದ ಧೃತರಾಷ್ಟ್ರ-ಗಾಂಧಾರೀ-ವಿದುರರು ಸಂತುಷ್ಟರಾಗಿದ್ದರು. ಆದರೆ ಭೀಮಸೇನನ ವ್ಯವಹಾರವು ಅವರಿಗೆ ಹಿಡಿಸುತ್ತಿರಲಿಲ್ಲ. ಭೀಮಸೇನನೂ ದೃಢನಿಶ್ಚಯದಿಂದಲೇ ಯುಧಿಷ್ಠಿರನ ಮಾರ್ಗವನ್ನೇ ಅನುಸರಿಸಿ ಹೋಗುತ್ತಿದ್ದನು. ಆದರೆ ಧೃತರಾಷ್ಟ್ರನನ್ನು ಕಂಡೊಡನೆಯೇ ಅವನ ಮನಸ್ಸಿನಲ್ಲಿ ದುರ್ಭಾವನೆಯುಂಟಾಗುತ್ತಿದ್ದಿತು. ಶತ್ರುಸೂದನನಾದ ಭೀಮಸೇನನು ಧೃತರಾಷ್ಟ್ರನ ಸೇವೆಯಲ್ಲಿ ತೊಡಗಿದ್ದ ಯುಧಿಷ್ಠಿರನನ್ನೇ ಅನುಸರಿಸಿ ಇರುತ್ತಿದ್ದನು. ಬಹಿರಂಗದಲ್ಲಿ ಅಣ್ಣನಂತೆ ತಾನೂ ಧೃತರಾಷ್ಟ್ರನ ಸೇವೆಯನ್ನೇನೋ ಮಾಡುತ್ತಿದ್ದನು. ಆದರೆ ಅವನ ಮನಸ್ಸು ಮಾತ್ರ ವಿಮುಖವಾಗಿರುತ್ತಿದ್ದಿತು. ಮನಃಪೂರ್ವಕವಾಗಿ ಭೀಮಸೇನನು ಧೃತರಾಷ್ಟ್ರನ ಸೇವೆಯನ್ನು ಮಾಡುತ್ತಿರಲಿಲ್ಲ.

೨ನೆಯ ಅಧ್ಯಾಯವು ಮುಗಿಯಿತು.

೩ನೆಯ ಅಧ್ಯಾಯ ಆಶ್ರಮವಾಸಪರ್ವ (ಮುಂದುವರಿದಿದೆ)

ಗಾಂಧಾರಿಯೊಡನೆ ಅರಣ್ಯಕ್ಕೆ ಹೋಗಲು ಧೃತರಾಷ್ಟ್ರನ ನಿಶ್ಚಯ: ಕುಂತೀ-ಯುಧಿಷ್ಠಿರರ ದುಃಖ

ವೈಶಂಪಾಯನರು ಹೇಳುತ್ತಾರೆ:

ಯುಧಿಷ್ಠಿರಸ್ಯ ನೃಪತೇರ್ದುರ್ಯೋಧನಪಿತುಸ್ತದಾ।
ನಾನ್ತರಂ ದದೃಶೂ ರಾಜ್ಯೇ ಪುರುಷಾಃ ಪ್ರಣಯಂ ಪ್ರತಿ ॥೧॥

ಜನಮೇಜಯ! ಆ ಸಮಯದಲ್ಲಿ ಯುಧಿಷ್ಠಿರನಿಗೂ ಮತ್ತು ದುರ್ಯೋಧನನ ತಂದೆಯಾದ ಧೃತರಾಷ್ಟ್ರನಿಗೂ ಗಾಢವಾಗಿದ್ದ ಪ್ರೀತಿಯ ವಿಷಯದಲ್ಲಿ ಪ್ರಜೆಗಳು ಯಾವ ಒಡಕನ್ನೂ ಕಾಣಲಿಲ್ಲ. ಅವರ ಪ್ರೀತಿಯು ಅವಿಚ್ಛಿನ್ನವಾಗಿದ್ದಿತು.

ಧೃತರಾಷ್ಟ್ರನು ಯಾವಾಗ ದುರ್ಮತಿಯಾದ ತನ್ನ ಮಗನನ್ನು ಸ್ಮರಿಸಿಕೊಳ್ಳುತ್ತಿದ್ದನೋ–ಆಗ ಅವನು ಭೀಮಸೇನನ ವಿಷಯದಲ್ಲಿ ಅನಿಷ್ಟ

ವನ್ನು ಚಿಂತಿಸುತ್ತಿದ್ದನು. ಅದೇ ರೀತಿಯಲ್ಲಿ ಭೀಮಸೇನನೂ ಧೃತರಾಷ್ಟ್ರನ ವಿಷಯದಲ್ಲಿ ದುರ್ಭಾವನೆಯನ್ನೇ ಹೊಂದಿದ್ದನು. ಅವನ ವಿಷಯದಲ್ಲಿ ಭೀಮಸೇನನಿಗೆ ಯಾವಾಗಲೂ ಸಹನೆಯಿರಲಿಲ್ಲ. ಭೀಮಸೇನನು ಗುಪ್ತವಾದ ರೀತಿಯಲ್ಲಿಯೇ ಧೃತರಾಷ್ಟ್ರನಿಗೆ ಅಪ್ರಿಯವಾದ ಕಾರ್ಯಗಳನ್ನು ಮಾಡುತ್ತಿದ್ದನು. ತಾನೇ ನಿಯಮಿಸಿದ ಕೃತಜ್ಞರಾದ ಪುರುಷರ ಮೂಲಕವಾಗಿ ಧೃತರಾಷ್ಟ್ರನ ಆಜ್ಞೆಗಳನ್ನು ಭಗ್ನಗೊಳಿಸುತ್ತಿದ್ದನು. ಧೃತರಾಷ್ಟ್ರನು ಹಿಂದೆ ತಮ್ಮ ವಿಷಯದಲ್ಲಿ ಮಾಡಿದ ದುಷ್ಟಯೋಜನೆಗಳನ್ನೂ ಮತ್ತು ಹಲವಾರು ದುಷ್ಕಾರ್ಯಗಳನ್ನೂ ಸದಾ ಸ್ಮರಿಸುತ್ತಲೇ ಇದ್ದನು. ಒಮ್ಮೆ ಅಸಹನಶೀಲನಾದ ಭೀಮಸೇನನು ತನ್ನ ಸ್ನೇಹಿತರ ಮಧ್ಯದಲ್ಲಿದ್ದಾಗ ಶತ್ರುವಾದ ದುರ್ಯೋಧನನನ್ನೂ ಕರ್ಣ-ದುಃಶಾಸನರನ್ನೂ ಸ್ಮರಿಸಿಕೊಂಡು, ಕೋಪಾವಿಷ್ಟನಾಗಿ ತನ್ನ ಎರಡು ಭುಜಗಳನ್ನೂ ಗಟ್ಟಿಯಾಗಿ ತಟ್ಟಿಕೊಳ್ಳುತ್ತಾ ಧೃತರಾಷ್ಟ್ರನಿಗೂ ಗಾಂಧಾರಿಗೂ ಕೇಳಿಸುವಂತೆಯೇ ಕಠೋರವಾದ ಈ ಮಾತನ್ನು ಹೇಳಿದನು:

ಅನ್ಧಸ್ಯ ನೃಪತೇಃ ಪುತ್ರಾ ಮಯಾ ಪರಿಘಬಾಹುನಾ।
ನೀತಾ ಲೋಕಮಮುಂ ಸರ್ವೇ ನಾನಾಶಸ್ತ್ರಾಸ್ತ್ರಯೋಧಿನಃ ॥೭॥

"ಮಿತ್ರರೇ! ಪರಿಘಾಯುಧಕ್ಕೆ ಸಮಾನವಾದ ಈ ತೋಳುಗಳನ್ನು ಹೊಂದಿರುವ ನಾನು ನಾನಾಪ್ರಕಾರವಾದ ಶಸ್ತ್ರಾಸ್ತ್ರಗಳನ್ನಿಟ್ಟುಕೊಂಡು ಯುದ್ಧಮಾಡುತ್ತಿದ್ದ ಈ ಕುರುಡದೊರೆಯ ಮಕ್ಕಳನ್ನು ಯಮನ ಲೋಕಕ್ಕೆ ಕಳುಹಿಸಿಬಿಟ್ಟೆನು.

ಇಮೌ ತೌ ಪರಿಘಪ್ರಖ್ಯೌ ಭುಜೌ ಮಮ ದುರಾಸದೌ।
ಯಯೋರನ್ತರಮಾಸಾದ್ಯ ಧಾರ್ತರಾಷ್ಟ್ರಾಃ ಕ್ಷಯಂ ಗತಾಃ ॥೮॥

ಇದೋ ನೋಡಿರಿ! ಈ ನನ್ನ ತೋಳುಗಳು ಪರಿಘಾಯುಧದಂತೆ ಸುದೃಢವಾಗಿವೆ. ಈ ತೋಳುಗಳ ಹತ್ತಿರಕ್ಕೆ ಯಾರೂ ಬರಲಾರರು. ಇವನ್ನು ಸಹಿಸಿಕೊಳ್ಳಲು ಅಸಾಧ್ಯ. ಇಂತಹ ಈ ನನ್ನ ತೋಳುಗಳ ಮಧ್ಯದಲ್ಲಿ ಸಿಕ್ಕಿಕೊಂಡು ಧೃತರಾಷ್ಟ್ರನ ಮಕ್ಕಳೆಲ್ಲರೂ ನಾಶವಾದರು.

ತಾವಿಮೌ ಚನ್ದನೇನಾಕ್ತೌ ಚನ್ದನಾರ್ಹೌ ಚ ಮೇ ಭುಜೌ ।
ಯಾಭ್ಯಾಂ ದುರ್ಯೋಧನೋ ನೀತಃ ಕ್ಷಯಂ ಸಸುತಬಾನ್ಧವಃ ॥೯॥

ಸುಹೃದರೇ! ಚಂದನದ ಲೇಪನಕ್ಕೆ ಯೋಗ್ಯವಾಗಿರುವ ಈ ನನ್ನ ತೋಳುಗಳು ಚಂದನಲೇಪನದಿಂದ ಸಮಲಂಕೃತವಾಗಿವೆ. ಈ ನನ್ನ ತೋಳುಗಳಿಂದಲೇ ನಾನು ದುರ್ಯೋಧನನನ್ನು ಆತನ ಮಕ್ಕಳು, ಸಹೋದರರು ಮತ್ತು ಬಂಧುಗಳೊಡನೆ ವಿನಾಶಗೊಳಿಸಿದೆನು."

ಜನಮೇಜಯ! ಇವೇ ಮುಂತಾದ ಕರ್ಣಕಠೋರವಾದ ಬಗೆಬಗೆಯಾದ ಮುಳ್ಳಿನಂತಹ ಭೀಮಸೇನನ ಮಾತುಗಳನ್ನು ಕೇಳಿ ಧೃತರಾಷ್ಟ್ರನಿಗೆ ಬಹಳ ಖೇದವುಂಟಾಯಿತು. ಬುದ್ಧಿಮತಿಯಾದ, ಕಾಲದ ವೈಪರೀತ್ಯಗಳನ್ನು ತಿಳಿದಿದ್ದ, ಸರ್ವಧರ್ಮಗಳನ್ನೂ ಬಲ್ಲವಳಾಗಿದ್ದ ಗಾಂಧಾರಿಯೂ ಮನಸ್ಸಿಗೆ ಯಾತನೆಯನ್ನುಂಟುಮಾಡುವ ಭೀಮಸೇನನ ಮಾತುಗಳನ್ನು ಕೇಳಿದಳು.

ಆ ವೇಳೆಗೆ ಧೃತರಾಷ್ಟ್ರನು ಯುಧಿಷ್ಠಿರನ ಆಶ್ರಯದಲ್ಲಿ ಹದಿನೈದು ವರ್ಷಗಳನ್ನು ಕಳೆದಿದ್ದನು. ಅವನಿಗೆ ಬೇರೆ ಯಾವ ಕಷ್ಟವೂ ಇಲ್ಲದಿದ್ದರೂ ಭೀಮಸೇನನ ಬಾಣರೂಪವಾದ ಮಾತುಗಳಿಂದ ಪೀಡಿತನಾಗಿ ಅತ್ಯಂತಖೇದವನ್ನು ಹೊಂದಿದನು.

ಕುಂತಿಯ ಮಗನಾದ ಯುಧಿಷ್ಠಿರನಿಗಾಗಲೀ, ಕುಂತಿಗಾಗಲೀ, ಯಶಸ್ವಿನಿಯಾದ ದ್ರೌಪದಿಗಾಗಲೀ, ಅರ್ಜುನನಿಗಾಗಲೀ–ಈ ವಿಷಯವೇ ತಿಳಿದಿರಲಿಲ್ಲ. ಧರ್ಮಜ್ಞರಾದ ಮಾದ್ರಿಯ ಮಕ್ಕಳು ಧೃತರಾಷ್ಟ್ರನ ಮನಸ್ಸಿಗೆ ಅನುಕೂಲರಾಗಿಯೇ ಇದ್ದರು. ಧೃತರಾಷ್ಟ್ರನ ಮನಸ್ಸು ಖೇದಗೊಳ್ಳದಂತೆ ಸಂರಕ್ಷಿಸುತ್ತಾ ಇದ್ದ ಅವರು ಧೃತರಾಷ್ಟ್ರನಿಗೆ ಪ್ರಿಯವಲ್ಲದ ಯಾವುದೇ ಮಾತನ್ನೂ ಆಡುತ್ತಿರಲಿಲ್ಲ.

ಹೀಗೆಯೇ ಇರುತ್ತಿರಲಾಗಿ ಒಮ್ಮೆ ಧೃತರಾಷ್ಟ್ರನು ತನ್ನ ಸ್ನೇಹಿತರೆಲ್ಲರನ್ನೂ ಕರೆಯಿಸಿ ಕಂಬನಿದುಂಬಿದ ಕಣ್ಣುಗಳಿಂದ ಕೂಡಿ ಗದ್ಗದಧ್ವನಿಯಿಂದ ಅವರೊಡನೆ ಹೀಗೇ ಹೇಳಿದನು:

"ಸುಹೃದರೇ! ಕುರುವಂಶದ ವಿನಾಶವು ಹೇಗಾಯಿತೆಂಬುದನ್ನು ನೀವೆಲ್ಲರೂ ತಿಳಿದೇ ಇರುವಿರಿ. ನನ್ನ ಅಪರಾಧದಿಂದಲೇ ಈ ಅನರ್ಥವು ಸಂಭವಿಸಿತೆಂಬುದು ಎಲ್ಲ ಕೌರವರಿಗೂ ತಿಳಿದ ವಿಷಯವೇ ಆಗಿದೆ. ಜ್ಞಾತಿಗಳ ಭಯವನ್ನು ತನ್ನ ಕ್ರೂರಕರ್ಮಗಳಿಂದ ಹೆಚ್ಚಿಸುತ್ತಿದ್ದ ದುಷ್ಟಬುದ್ಧಿ

ಯವನಾದ ಮೂಢನಾದ ದುರ್ಯೋಧನನನ್ನು ಕುರುರಾಜ್ಯಕ್ಕೆ ಅಧಿಪತಿಯನ್ನಾಗಿ ಮಾಡಿದೆನು. ವಾಸುದೇವನ ಅರ್ಥವತ್ತಾದ ಉಪದೇಶವನ್ನು ನಾನು ಕೇಳಲಿಲ್ಲ. "ದುರ್ಮತಿಯಾದ ಈ ದುರ್ಯೋಧನನು ಅಮಾತ್ಯರೊಡನೆ ವಧಿಸಲ್ಪಡಲಿ. ಇದರಿಂದ ವಂಶದ ವಿನಾಶವು ತಪ್ಪುತ್ತದೆ'–ಎಂಬ ವಿದ್ವಾಂಸರ ಹಿತೋಕ್ತಿಗಳನ್ನೂ ಪುತ್ರಪ್ರೇಮದಿಂದ ಆವೃತನಾಗಿದ್ದ ನಾನು ಕೇಳಲಿಲ್ಲ. ವಿದುರ, ಭೀಷ್ಮ, ದ್ರೋಣರು, ಕೃಪರು, ಪೂಜ್ಯರಾದ ವ್ಯಾಸರು, ಸಂಜಯ, ಗಾಂಧಾರೀ–ಇವರೆಲ್ಲರೂ ನನಗೆ ಪದೇ ಪದೇ ಸರ್ವರಿಗೂ ಹಿತಕರವಾದ ಮಾತುಗಳನ್ನು ಹೇಳುತ್ತಲೇ ಇದ್ದರು. ಆದರೆ ನಾನು ಮಾತ್ರ ಪುತ್ರಪ್ರೇಮದಿಂದಾಗಿ ಅವರ ಮಾತುಗಳನ್ನು ಗೌರವಿಸಲಿಲ್ಲ. ಅದು ನನಗೆ ಈಗ ಸಂತಾಪವನ್ನು ಉಂಟುಮಾಡುತ್ತಿದೆ. ಗುಣವಂತರಾದ ಮಹಾತ್ಮರಾದ ಪಾಂಡವರಿಗೆ ಪಿತೃ-ಪಿತಾಮಹರ ಉಜ್ಜ್ವಲವಾದ ಸಂಪತ್ತನ್ನೂ (ಅವರ ರಾಜ್ಯವನ್ನು) ಕೊಡಲಿಲ್ಲ. ಎಲ್ಲ ರಾಜರಿಗೂ ವಿನಾಶವು ಸನ್ನಿಹಿತವಾಗಿರುವುದೆಂಬುದನ್ನು ತಿಳಿದಿದ್ದ ಗದಾಗ್ರಜನಾದ ಜನಾರ್ದನನು ಪಾಂಡವರಿಗೆ ಅವರ ರಾಜ್ಯವನ್ನು ಹಿಂದಿರುಗಿಸುವುದು ಪರಮಶ್ರೇಯಸ್ಕರವೆಂದು ಭಾವಿಸಿದ್ದನು. ಆದರೆ ಸರ್ವರಿಗೂ ಶ್ರೇಯಸ್ಕರವಾಗಿದ್ದ ಆ ಕಾರ್ಯವನ್ನು ನಾನು ಮಾಡಲಿಲ್ಲ. ಹೀಗೆ ಆಗ ನನ್ನಿಂದ ಮಾಡಲ್ಪಟ್ಟ ಶಲ್ಯರೂಪವಾದ ಸಾವಿರಾರು ಅಪರಾಧಗಳನ್ನು ನನ್ನ ಹೃದಯದಲ್ಲಿ ಧರಿಸಿಕೊಂಡಿದ್ದೇನೆ. ಅತ್ಯಂತದುರ್ಮತಿಯಾದ ನಾನು ವಿಶೇಷವಾಗಿ ಈ ಹದಿನೈದನೆಯ ವರ್ಷ ನನ್ನ ಅಪರಾಧಗಳನ್ನು ಕಂಡುಕೊಳ್ಳುತ್ತಿದ್ದೇನೆ. ಈ ಪಾಪಗಳಿಂದ ಬಿಡುಗಡೆಹೊಂದುವ ಸಲುವಾಗಿಯೇ ನಾನೀಗ ಕೆಲವು ನಿಯಮಗಳನ್ನು ಪಾಲಿಸುತ್ತಿದ್ದೇನೆ. ನಾಲ್ಕನೆಯ ಹೊತ್ತು (ಎರಡು ದಿವಸಗಳಿಗೊಮ್ಮೆ) ಕೆಲವು ವೇಳೆ ಎಂಟನೆಯ ಹೊತ್ತು (ನಾಲ್ಕು ದಿವಸಗಳಿಗೊಮ್ಮೆ) ಹಸಿವಿನ ಸಂಕಟದಿಂದ ತಪ್ಪಿಸಿಕೊಳ್ಳಲು ಅಲ್ಪಾಹಾರವನ್ನು ತೆಗೆದುಕೊಳ್ಳುತ್ತಿದ್ದೇನೆ. ಈ ವಿಷಯವನ್ನು ಗಾಂಧಾರಿಯೊಬ್ಬಳು ಮಾತ್ರವೇ ತಿಳಿದಿರುವಳು. ಆದರೆ ಪರಿಜನರೆಲ್ಲರೂ ನಾನು ಪ್ರತಿನಿತ್ಯವೂ ಆಹಾರವನ್ನು ತೆಗೆದುಕೊಳ್ಳುತ್ತಿರುವೆನೆಂದೇ ಭಾವಿಸಿರುವರು. ಯುಧಿಷ್ಠಿರನ ಭಯದಿಂದಾಗಿ

ಈ ಪರಿಜನರೆಲ್ಲರೂ ನನ್ನ ಬಳಿಗೆ ಬರುತ್ತಾರೆ. ಪರಿಜನರು ನನ್ನನ್ನು ಅನಾದರಣೆಮಾಡುತ್ತಿರುವರೆಂಬುದನ್ನು ತಿಳಿದರೆ ಯುಧಿಷ್ಠಿರನು ಬಹಳವಾಗಿ ಪರಿತಪಿಸುತ್ತಾನೆ. ನಾನೂ ಮತ್ತು ಯಶಸ್ವಿನಿಯಾದ ಗಾಂಧಾರಿಯೂ ಕೂಡ ನಿಯಮವನ್ನು ಪರಿಪಾಲಿಸಬೇಕೆಂಬ ನೆಪದಿಂದ ಮೃಗಚರ್ಮವನ್ನು ಹೊದೆದುಕೊಂಡು ದರ್ಭಾಸನದಲ್ಲಿ ಕುಳಿತು ಮಂತ್ರಜಪಮಾಡುತ್ತೇವೆ. ನೆಲದ ಮೇಲೆ ಮಲಗುತ್ತೇವೆ. ಯುದ್ಧದಲ್ಲಿ ಹಿಮ್ಮೆಟ್ಟದಿರುವ ನಮ್ಮ ನೂರು ಮಕ್ಕಳೂ ಯುದ್ಧದಲ್ಲಿ ಮಡಿದರು. ಅದಕ್ಕಾಗಿ ನಾನು ದುಃಖಿಸುವುದಿಲ್ಲ. ಏಕೆಂದರೆ: ಅವರೆಲ್ಲರೂ ಕ್ಷತ್ರಿಯಯುದ್ಧಧರ್ಮವನ್ನು ತಿಳಿದವರಾಗಿದ್ದರು. ಈ ಕಾರಣದಿಂದಲೇ ಅವರು ಯುದ್ಧಮಾಡುತ್ತಾ ಪ್ರಾಣತ್ಯಾಗಮಾಡಿ ವೀರೋಚಿತವಾದ ಸ್ವರ್ಗವನ್ನು ಪಡೆದರು.” ಧೃತರಾಷ್ಟ್ರನು ಹೀಗೆ ತನ್ನ ಸುಹೃದರಿಗೆ ಹೇಳಿ ಬಳಿಕ ಯುಧಿಷ್ಠಿರನ ಕಡೆಗೆ ತಿರುಗಿ ಹೇಳಿದನು:

“ಕುಂತೀನಂದನನೇ! ಯುಧಿಷ್ಠಿರ! ನಿನಗೆ ಮಂಗಳವಾಗಲಿ. ನಾನೀಗ ಹೇಳಲಿರುವ ಮಾತುಗಳನ್ನು ಕೇಳು. ನಿನ್ನಿಂದ ಸುರಕ್ಷಿತನಾಗಿರುವ ನಾನು ಇಲ್ಲಿ ಅತ್ಯಂತಸುಖದಿಂದಲೇ ಇದ್ದೇನೆ. ಮಹಾದಾನಗಳನ್ನೂ ಕೊಟ್ಟಿದ್ದೇನೆ. ಪದೇ ಪದೇ ಶ್ರಾದ್ಧಗಳನ್ನೂ ಮಾಡಿದ್ದೇನೆ. ಯಾವಳು ತನ್ನ ಶಕ್ತಿಗೆ ಅನುಸಾರವಾಗಿ ಪ್ರಕೃಷ್ಟವಾದ ಪುಣ್ಯಕಾರ್ಯಗಳನ್ನು ಮಾಡಿರುವಳೋ ಮತ್ತು ತನ್ನ ನೂರು ಮಂದಿ ಮಕ್ಕಳನ್ನೂ ಕಳೆದುಕೊಂಡಿರುವಳೋ ಅಂತಹ ಈ ಗಾಂಧಾರಿಯು ಧೈರ್ಯದಿಂದ ನನ್ನ ಯೋಗ-ಕ್ಷೇಮಗಳನ್ನು ನೋಡಿಕೊಳ್ಳುತ್ತಿದ್ದಾಳೆ. ದ್ರೌಪದಿಗೆ ಅಪಕಾರವನ್ನೆಸಗಿದ ಮತ್ತು ನಿನ್ನ ಐಶ್ವರ್ಯವನ್ನು ಅಪಹರಿಸಿದ ಕ್ರೂರಿಗಳಾದ ನನ್ನ ಮಕ್ಕಳು ಕ್ಷತ್ರಧರ್ಮೋಚಿತವಾದ ರೀತಿಯಲ್ಲಿ ಯುದ್ಧ ಮಾಡುತ್ತಾ ಪರಲೋಕಕ್ಕೆ ಹೊರಟುಹೋಗಿದ್ದಾರೆ. ಮರಣಹೊಂದಿರುವವರ ವಿಷಯದಲ್ಲಿ ಅವರ ಪಾಪಕ್ಕೆ ಏನನ್ನಾದರೂ ಮಾಡುವ ಅವಶ್ಯಕತೆಯನ್ನೇನೂ ನಾನು ಕಾಣುತ್ತಿಲ್ಲ. ಅವರೆಲ್ಲರೂ ಯುದ್ಧಾಭಿಮುಖರಾಗಿಯೇ ಅಸು ನೀಗಿದರು. ಆದುದರಿಂದ ಶಸ್ತ್ರಧಾರಿಗಳಾದವರು ಪಡೆದುಕೊಳ್ಳುವ ಪುಣ್ಯ ಲೋಕಗಳಿಗೇ ಅವರು ಹೋಗಿದ್ದಾರೆ. ಈಗ ನನ್ನ ಮತ್ತು ಗಾಂಧಾರಿಯ ಹಿತಕ್ಕಾಗಿ (ನಮ್ಮ ಪಾಪದ ಪರಿಹಾರಕ್ಕಾಗಿ) ಪವಿತ್ರವಾದ ತಪಸ್ಸನ್ನು

ಆಚರಿಸುವುದು ಕರ್ತವ್ಯವಾಗಿದೆ. ಇದಕ್ಕೆ ನೀನು ಅನುಮತಿಸಬೇಕು. ನೀನಾದರೋ ಶಸ್ತ್ರಧಾರಿಗಳಲ್ಲಿಯೇ ಶ್ರೇಷ್ಠನಾದವನು. ಧರ್ಮದ ವಿಷಯದಲ್ಲಿ ವಿಶೇಷವಾದ ಅನುರಾಗವುಳ್ಳವನು. ಎಲ್ಲ ಪ್ರಾಣಿಗಳಿಗೂ ರಾಜನೇ ಗುರುವಾಗಿರುತ್ತಾನೆ. ಆದುದರಿಂದ ಈ ವಿಷಯವನ್ನು ನಿನಗೆ ಹೇಳುತ್ತಿದ್ದೇನೆ. ನಿನ್ನ ಅನುಮತಿಯನ್ನು ಪಡೆದು ನಾನು ಗಾಂಧಾರಿಯೊಡನೆ ಅರಣ್ಯಕ್ಕೆ ಹೋಗುತ್ತೇನೆ. ಅಲ್ಲಿ ನಾರುಮಡಿಯನ್ನು ಉಟ್ಟುಕೊಂಡು ಗಾಂಧಾರಿಯೊಡನೆ ವನಚರನಾಗಿರುತ್ತೇನೆ ಮತ್ತು ಸರ್ವದಾ ನಿಮ್ಮನ್ನು ಆಶೀರ್ವದಿಸುತ್ತಿರುತ್ತೇನೆ. ನರೇಶ್ವರನೇ! ನಮ್ಮ ಕುಲದಲ್ಲಿ ಎಲ್ಲ ರಾಜರೂ ಕಡೆಗಾಲದಲ್ಲಿ ಮಕ್ಕಳಿಗೆ ಐಶ್ವರ್ಯವನ್ನೂ ರಾಜ್ಯವನ್ನೂ ವಹಿಸಿಕೊಟ್ಟು ಅರಣ್ಯಕ್ಕೆ ಹೋಗುವುದು ಸಂಪ್ರದಾಯವಾಗಿದೆ. ಅಲ್ಲಿ ನಾನು ನನ್ನ ಪತ್ನಿಯೊಡನೆ ವಾಯುಭಕ್ಷನಾಗಿಯೋ ನಿರಾಹಾರನಾಗಿಯೋ ಇದ್ದುಕೊಂಡು ಶ್ರೇಷ್ಠವಾದ ತಪಸ್ಸನ್ನು ಮಾಡುತ್ತೇನೆ. ನೀನು ರಾಜನಾಗಿರುವುದರಿಂದ ನಾವು ಮಾಡುವ ತಪಸ್ಸಿನ ಫಲವನ್ನು ನೀನೂ ಪಡೆದುಕೊಳ್ಳುವೆ. 'ಫಲಭಾಜೋ ಹಿ ರಾಜಾನಃ ಕಲ್ಯಾಣಸ್ಯೇತರಸ್ಯ ವಾ' ದೇಶದಲ್ಲಿ ಒಳ್ಳೆಯ ಕರ್ಮಗಳು ನಡೆದರೂ ಕೆಟ್ಟ ಕರ್ಮಗಳು ನಡೆದರೂ ಅದರ ಫಲವನ್ನು ರಾಜರು ಉಪಭೋಗಿಸುತ್ತಾರೆ."

ಯುಧಿಷ್ಠಿರನು ಹೇಳುತ್ತಾನೆ:

"ಮಹಾರಾಜ! ನೀನು ಹೀಗೆ ದುಃಖಿತನಾಗಿರುವಾಗ ಈ ರಾಜ್ಯಾಧಿ ಕಾರದಿಂದ ನನಗೆ ಯಾವ ಸಂತೋಷವೂ ಇಲ್ಲ. ಅತ್ಯಂತದುರ್ಬುದ್ಧಿ ಯವನಾದ, ಪ್ರಮತ್ತನಾದ ಮತ್ತು ರಾಜ್ಯದಲ್ಲಿಯೇ ಆಸಕ್ತನಾಗಿರುವ ನನಗೆ ಧಿಕ್ಕಾರವಿರಲಿ! ನೀನು ದುಃಖಪೀಡಿತನಾಗಿರುವುದಾಗಲೀ, ಉಪವಾಸದಿಂದ ಕೃಶನಾಗಿರುವುದಾಗಲೀ, ಆಹಾರದ ವಿಷಯದಲ್ಲಿ ಸಂಯಮವನ್ನು ಹೊಂದಿ ರುವುದಾಗಲೀ, ನೆಲದ ಮೇಲೆ ಮಲಗುತ್ತಿರುವುದಾಗಲೀ–ನನಗಾಗಲೀ ನನ್ನ ಸಹೋದರರಿಗಾಗಲೀ ತಿಳಿದೇ ಇರಲಿಲ್ಲ. ವಿಷಯಗಳೆಲ್ಲವನ್ನೂ ರಹಸ್ಯ ವಾಗಿಡಬೇಕೆನ್ನುವ ಬುದ್ಧಿಯಿಂದ ಕೂಡಿರುವ ನೀನು ಮೂಢನಾದ ನನ್ನನ್ನು ವಂಚಿಸಿದೆ. ಮೊದಲು ನನ್ನಲ್ಲಿ ವಿಶ್ವಾಸವನ್ನು ಹುಟ್ಟಿಸಿ (ಈ ನನ್ನ ರಾಜ್ಯದಲ್ಲಿ ಪರಮಸುಖದಿಂದಿರುವೆನೆಂಬ ಭಾವನೆಯುಂಟಾಗುವಂತೆ ಮಾಡಿ) ಈಗ

ನೀನು ಅತಿಯಾದ ಕಷ್ಟವನ್ನೇ ಅನುಭವಿಸುತ್ತಿರುವೆ. ಮಹೀಪಾಲನೇ! ನೀನೇ ಇಷ್ಟೊಂದು ಕಷ್ಟಗಳನ್ನು ಉದ್ದೇಶಪೂರ್ವಕವಾಗಿಯೇ ಅನುಭವಿಸುತ್ತಿರುವಾಗ ನನಗೆ ಈ ರಾಜ್ಯದಿಂದಾಗಲೀ, ಭೋಗಗಳಿಂದಾಗಲೀ, ಯಜ್ಞಗಳಿಂದಾಗಲೀ, ಸುಖದಿಂದಾಗಲೀ- ಏನಾಗಬೇಕಾಗಿದೆ? ಜನೇಶ್ವರನೇ! ದುಃಖಿತನಾದ ನೀನು ಈ ಮಾತನ್ನು ಹೇಳಿದ್ದರಿಂದ ಈ ನನ್ನ ರಾಜ್ಯವೇ ದುಃಖದಿಂದ ಪೀಡಿತವಾಗಿರುವುದೆಂದು ನಾನು ಭಾವಿಸುತ್ತೇನೆ. ನಾನೂ ಕೂಡ ಪರಮದುಃಖಿತನಾಗಿದ್ದೇನೆ. ನೀನೇ ನಮ್ಮ ತಂದೆ; ನೀನೇ ನಮ್ಮ ಮಾತೃಸ್ವರೂಪನು; ನೀನೇ ನಮ್ಮ ಗುರುವೂ ಆಗಿರುವೆ. ನಿನ್ನನ್ನಗಲಿದ ನಾವು ಎಲ್ಲಿ ಹೋಗಿನಿಲ್ಲೋಣ? ನೀನು ಹೊರಟುಹೋದನಂತರ ಮುಂದಿನ ನಮ್ಮ ಸ್ಥಿತಿಗತಿಗಳೇನು? ನೃಪಶ್ರೇಷ್ಠನೇ! ನಿನ್ನ ಔರಸಪುತ್ರನಾದ ಯುಯುತ್ಸುವು ರಾಜನಾಗಲಿ ಅಥವಾ ನೀನು ಅಪೇಕ್ಷಿಸುವ ಯಾವನಾದರೂ ರಾಜನಾಗಲಿ. ನಾನು ಅರಣ್ಯಕ್ಕೆ ಹೋಗುತ್ತೇನೆ. ನೀನು ರಾಜ್ಯವನ್ನು ಆಳಿಕೊಂಡಿರು. ಅಪಯಶಸ್ಸಿನಿಂದ ಮೊದಲೇ ಬೆಂದುಹೋಗಿರುವ ನನ್ನನ್ನು ಪುನಃ ಬೇಯಿಸುವುದು ನಿನಗೆ ಉಚಿತವಲ್ಲ. ನಾನು ಖಂಡಿತವಾಗಿಯೂ ಈ ರಾಜ್ಯಕ್ಕೆ ರಾಜನಲ್ಲ. ನೀನೇ ರಾಜನಾಗಿರುವೆ. ನಾನು ನಿನ್ನ ಆಜ್ಞಾಧಾರಕನಾದ ಸೇವಕನಾಗಿದ್ದೇನೆ. ರಾಜನೂ, ಗುರುವೂ, ಧರ್ಮಜ್ಞನೂ ಆಗಿರುವ ನಿನಗೆ ನಾನು ಹೇಗೆ ತಾನೇ ಅರಣ್ಯಕ್ಕೆ ಹೋಗಲು ಅನುಮತಿಸಲಿ? ಅನಘನೇ! ದುರ್ಯೋಧನನ ವಿಷಯದಲ್ಲಿ ನಮ್ಮ ಮನಸ್ಸಿನಲ್ಲಿ ಸ್ವಲ್ಪವಾದರೂ ಕೋಪವು ಉಳಿದಿಲ್ಲ. ಹೇಗೆ ಆಗಬೇಕಾಗಿದ್ದಿತೋ ಅದು ಹಾಗೆಯೇ ನಡೆದು ಹೋಯಿತು. ಆ ಸಮಯದಲ್ಲಿ ನಾವೂ ವಿಮೋಹಗೊಂಡೆವು. ಇತರರೂ ವಿಮೋಹಗೊಂಡಿದ್ದರು. ದುರ್ಯೋಧನಾದಿಗಳಂತೆ ನಾವೂ ನಿನ್ನ ಮಕ್ಕಳೇ ಆಗಿದ್ದೇವೆ. ಗಾಂಧಾರಿಗೂ ಮತ್ತು ಕುಂತಿಗೂ ಯಾವ ವ್ಯತ್ಯಾಸವೂ ಇಲ್ಲವೆಂಬುದು ನನ್ನ ಭಾವನೆಯಾಗಿದೆ. ಒಂದು ವೇಳೆ ನೀನೇನಾದರೂ ನನ್ನನ್ನು ಪರಿತ್ಯಜಿಸಿ ಅರಣ್ಯಕ್ಕೆ ಹೊರಡುವುದಾದರೆ ನಾನೂ ನಿನ್ನ ಹಿಂದೆಯೇ ಬಂದುಬಿಡುವೆನು. ಈ ಮಾತನ್ನು ನಾನು ಹೃದಯವನ್ನು ಮುಟ್ಟಿಕೊಂಡು ಸತ್ಯವಾಗಿ ಹೇಳುತ್ತಿದ್ದೇನೆ. ನಿನ್ನನ್ನು ಅಗಲಿದನಂತರ ಸಮುದ್ರವನ್ನೇ ಮೇಖಲೆಯನ್ನಾಗಿ (ಸೊಂಟಪಟ್ಟಿಯನ್ನಾಗಿ) ಹೊಂದಿರುವ, ಐಶ್ವರ್ಯದಿಂದ

ಪರಿಪೂರ್ಣವಾಗಿರುವ ಈ ಪೃಥ್ವಿಯೂ ನನಗೆ ಸಂತೋಷವನ್ನುಂಟು ಮಾಡುವುದಿಲ್ಲ. ರಾಜೇಂದ್ರನೇ! ತಲೆಬಾಗಿ ನಮಸ್ಕರಿಸಿ ನಿನ್ನನ್ನು ಪ್ರಾರ್ಥಿಸುತ್ತೇನೆ. ಈ ಎಲ್ಲವೂ ನಿನ್ನದೇ ಆಗಿವೆ. ನಾವೆಲ್ಲರೂ ನಿನ್ನ ಅಧೀನರಾಗಿದ್ದೇವೆ. ನಿನ್ನ ಮಾನಸಿಕಚಿಂತೆಯು ದೂರವಾಗಲಿ. ವಸುಧಾಧಿಪನೇ! ನೀನು ಹೊಂದಬೇಕಾದುದನ್ನು ಹೊಂದಿರುವೆಯೆಂದು ನಾನು ಭಾವಿಸುತ್ತೇನೆ. ಅದೃಷ್ಟವಶದಿಂದ ಪುನಃ ನಿನ್ನನ್ನು ಶುಶ್ರೂಷೆಮಾಡುವ ಅವಕಾಶವು ಸಿಕ್ಕಿದರೆ ನಿನ್ನ ಮನಸ್ಸಿನ ಚಿಂತೆಯನ್ನು ನಾನು ಖಂಡಿತವಾಗಿಯೂ ದೂರಮಾಡುತ್ತೇನೆ.”

ಧೃತರಾಷ್ಟ್ರನು ಹೇಳುತ್ತಾನೆ:

“ಮಗು! ಕುರುನಂದನನೇ! ನನ್ನ ಮನಸ್ಸು ತಪಸ್ಸಿನಲ್ಲಿಯೇ ಸಂಲಗ್ನವಾಗಿದೆ. ಜೀವನದ ಅಂತಿಮಕಾಲದಲ್ಲಿ ಅರಣ್ಯಕ್ಕೆ ಹೋಗುವುದು ನಮ್ಮ ಕುಲದಲ್ಲಿ ನಡೆದುಬಂದಿದೆ ಮತ್ತು ಅದು ಉಚಿತವೂ ಆಗಿದೆ. ನಾವು ಬಹಳ ಕಾಲದಿಂದ ಇಲ್ಲಿಯೇ ವಾಸವಾಗಿದ್ದೇವೆ. ಬಹಳ ಕಾಲದವರೆಗೂ ನೀನು ನಮ್ಮ ಶುಶ್ರೂಷೆಯನ್ನು ಮಾಡಿರುವೆ. ವೃದ್ಧನಾಗಿರುವ ನನಗೆ ಅರಣ್ಯಕ್ಕೆ ಹೋಗಲು ಅನುಮತಿಸುವುದು ನಿನಗೆ ಯೋಗ್ಯವಾಗಿದೆ.”

ಜನಮೇಜಯ! ಧೃತರಾಷ್ಟ್ರನ ಆ ಮಾತನ್ನು ಕೇಳಿ ಯುಧಿಷ್ಠಿರನು ಕೈಜೋಡಿಸಿಕೊಂಡು ನಡುಗುತ್ತಾ ನಿಂತುಬಿಟ್ಟನು. ಮುಂದೆ ಯಾವ ಮಾತನ್ನೂ ಆಡಲಿಲ್ಲ.

ಅನಂತರ ಅಂಬಿಕೆಯ ಮಗನಾದ ಧೃತರಾಷ್ಟ್ರರಾಜನು ಮಹಾತ್ಮನಾದ ಸಂಜಯನನ್ನೂ ಮಹಾರಥರಾದ ಕೃಪರನ್ನೂ ಕುರಿತು ಹೇಳಿದನು:

“ನೀವಾದರೂ ವಸುಧಾಧಿಪನಾದ ಈ ಯುಧಿಷ್ಠಿರನನ್ನು ಸಮಾಧಾನಗೊಳಿಸಿರಿ. ನನ್ನ ವೃದ್ಧಾವಸ್ಥೆಯ ಕಾರಣದಿಂದಲೂ ಮಾತನಾಡಿದ ಆಯಾಸದಿಂದಲೂ ನನ್ನ ಮನಸ್ಸು ದುರ್ಬಲವಾಗುತ್ತಿದೆ. ಮುಖವು ಒಣಗಿಹೋಗುತ್ತಿದೆ.” ಹೀಗೆ ಹೇಳುತ್ತಲೇ ವೃದ್ಧನಾದ, ಧರ್ಮಾತ್ಮನಾದ, ಕುರುಶ್ರೇಷ್ಠನಾದ, ಬುದ್ಧಿವಂತನಾದ ಧೃತರಾಷ್ಟ್ರನು ಮರಣಹೊಂದಿದವನಂತೆ ಗಾಂಧಾರಿಯನ್ನೊರಗಿಕೊಂಡು ಕುಳಿತನು. ಮೂರ್ಛೆಹೋದವನಂತೆಯೇ ಕುಳಿತಿದ್ದ ಧೃತರಾಷ್ಟ್ರನನ್ನು ನೋಡಿ ಶತ್ರುಹಂತಕನಾದ ಯುಧಿಷ್ಠಿರನಿಗೆ ತೀವ್ರವಾದ ಸಂಕಟವುಂಟಾಯಿತು.

“ಅಯ್ಯೋ! ಒಂದು ಲಕ್ಷ ಆನೆಗಳ ಬಲವು ಯಾವನಿಗಿರುವುದೋ ಅಂತಹ ರಾಜನಿಂದು ಮರಣಹೊಂದಿದವನಂತೆ ಸ್ತ್ರೀಯನ್ನು ಆಶ್ರಯಿಸಿ ಕುಳಿತಿದ್ದಾನೆ. ಯಾವ ಮಹಾಬಲಿಷ್ಠನಾದ ಧೃತರಾಷ್ಟ್ರರಾಜನು ಹಿಂದೆ ಲೋಹಮಯವಾದ ಭೀಮನ ಪ್ರತಿಮೆಯನ್ನು ತಬ್ಬಿಕೊಂಡು ನುಚ್ಚು-ನೂರುಮಾಡಿಬಿಟ್ಟನೋ–ಅಂತಹ ರಾಜನಿಂದು ಅಬಲೆಯಾದ ಸ್ತ್ರೀಯನ್ನು ಆಶ್ರಯಿಸಿ ಕುಳಿತಿದ್ದಾನೆ.



ಇಂತಹ ಅವಸ್ಥೆಗೆ ಯೋಗ್ಯನಲ್ಲದ ಮಹೀಪಾಲನು ಯಾವನ ಕಾರಣದಿಂದ ಈ ಅವಸ್ಥೆಗೆ ಈಡಾಗಿರುವನೋ ಅಂತಹ ಧರ್ಮವನ್ನೇ ತಿಳಿಯದಿರುವ ನನಗೆ ಧಿಕ್ಕಾರವಿರಲಿ! ನನ್ನ ಬುದ್ಧಿಗೆ ಧಿಕ್ಕಾರವಿರಲಿ! ನನ್ನ

ಶಾಸ್ತ್ರಜ್ಞಾನಕ್ಕೆ ಧಿಕ್ಕಾರವಿರಲಿ! ನನ್ನ ಗುರುವಾದ ಈ ರಾಜನೂ ಮತ್ತು ಯಶೋವತಿಯಾದ ಈ ಗಾಂಧಾರಿಯೂ ಊಟಮಾಡದಿದ್ದರೆ ನಾನೂ ಊಟಮಾಡುವುದಿಲ್ಲ. ಉಪವಾಸವಿರುತ್ತೇನೆ."

ವೈಶಂಪಾಯನರು ಹೇಳುತ್ತಾರೆ:

ಪಾರಿಕ್ಷಿತ! ಹೀಗೆ ಹೇಳಿದನಂತರ ಧರ್ಮವಿದನಾದ ಧರ್ಮರಾಜನು ಶೀತಲವಾದ ನೀರಿನಿಂದ ಕೈಯನ್ನು ಒದ್ದೆಮಾಡಿಕೊಂಡು ಧೃತರಾಷ್ಟ್ರನ ಎದೆಯನ್ನೂ ಮುಖವನ್ನೂ ಮೆಲ್ಲಮೆಲ್ಲಗೆ ಸವರಿದನು. ರತ್ನೌಷಧಿಗಳಿಂದ ಸಂಪನ್ನವಾಗಿದ್ದ, ಪವಿತ್ರವಾಗಿದ್ದ, ಸುಗಂಧಯುಕ್ತವಾಗಿದ್ದ ಕೈಯಿಂದ ಯುಧಿಷ್ಠಿರನು ಮುಟ್ಟಿದೊಡನೆಯೇ ಧೃತರಾಷ್ಟ್ರರಾಜನು ಎಚ್ಚರಗೊಂಡನು. (ತವಕದಿಂದ ಹೇಳಿದನು.)

ಸ್ಪೃಶ ಮಾಂ ಪಾಣಿನಾ ಭೂಯಃ ಪರಿಷ್ವಜ ಚ ಪಾಣ್ಡವ ।
ಜೀವಾಮೀವಾತಿಸಂಸ್ಪರ್ಶಾತ್ತವ ರಾಜೀವಲೋಚನ ॥೧೯॥

"ಕಮಲನಯನನೇ! ಯುಧಿಷ್ಠಿರ! ನಿನ್ನ ಕೈಯಿಂದ ನನ್ನನ್ನು ಪುನಃ ಮುಟ್ಟು. ಪುನಃ ಪುನಃ ಸ್ಪರ್ಶಿಸುತ್ತಲೇ ಇರು. ನನ್ನನ್ನು ತಬ್ಬಿಕೋ. ನಿನ್ನ ಸುಖದಾಯಕವಾದ ಸ್ಪರ್ಶದಿಂದ ನಾನು ಪುನಃ ಜೀವಂತನಾಗಿದ್ದೇನೆ.

ಮೂರ್ಧಾನಂ ಚ ತವಾಘ್ರಾತುಮಿಚ್ಛಾಮಿ ಮನುಜಾಧಿಪ ।
ಪಾಣಿಭ್ಯಾಂ ಹಿ ಪರಿಸ್ಪ್ರಷ್ಟುಂ ಪ್ರೀಣನಂ ಹಿ ಮಹನ್ಮಮ ॥೨೦॥

ಮನುಜೇಶ್ವರನೇ! ನಿನ್ನ ನೆತ್ತಿಯನ್ನು ಆಘ್ರಾಣಿಸಲು ಬಯಸುತ್ತೇನೆ. ಎರಡು ಕೈಗಳಿಂದಲೂ ನಿನ್ನನ್ನು ಮುಟ್ಟಲು ಬಯಸುತ್ತೇನೆ. ನಿನ್ನನ್ನು ಮುಟ್ಟುವುದರಿಂದ ನನಗೆ ಅತೀವತೃಪ್ತಿಯುಂಟಾಗುತ್ತದೆ.

ಕುರುಶ್ರೇಷ್ಠನೇ! ನಾನು ಹಿಂದೆ ಊಟಮಾಡಿದನಂತರ ಇದು ಎಂಟನೆಯ ಕಾಲವಾಗಿದೆ. (ನಾಲ್ಕು ದಿವಸಗಳಿಂದಲೂ ನಾನು ಊಟ ಮಾಡಿಲ್ಲ.) ಈ ಕಾರಣದಿಂದ ಅಳ್ಳಾಡಲೂ ನನಗೆ ಸಾಧ್ಯವಾಗುತ್ತಿಲ್ಲ. ಮಾತನಾಡಲು ಕೂಡ ಸಾಧ್ಯವಿಲ್ಲವಾಗಿದೆ. ಅರಣ್ಯಕ್ಕೆ ಹೋಗಲು ನಿನ್ನ ಅನುಮತಿಯನ್ನು ಪಡೆಯುವ ಸಲುವಾಗಿ ನಾನು ನಿನ್ನೊಡನೆ ಬಹಳವಾಗಿ ಮಾತನಾಡಿಬಿಟ್ಟೆನು. ಇದರಿಂದಲೇ ನನಗೆ ಬಹಳ ಆಯಾಸವಾಗಿದೆ. ಈ ಕಾರಣದಿಂದಲೇ ನನ್ನ ಮನಸ್ಸು ದುರ್ಬಲವಾಯಿತು. ಎಚ್ಚರದಪ್ಪಿದವನಂತಾದೆನು.

ತವಾಮೃತರಸಪ್ರಖ್ಯಂ ಹಸ್ತಸ್ಪರ್ಶಮಿಮಂ ಪ್ರಭೋ।
ಲಬ್ಧ್ವಾ ಸಂಜೀವಿತೋಽಸ್ಮೀತಿ ಮನ್ಯೇ ಕುರುಕುಲೋದ್ವಹ ॥೭೩॥

ಕುರುಕುಲಶಿರೋಮಣಿಯೇ! ಅಮೃತರಸಕ್ಕೆ ಸಮಾನವಾದ ಈ ನಿನ್ನ ಕೈಗಳ ಸ್ಪರ್ಶವನ್ನು ಹೊಂದಿ ನಾನು ನೂತನಚೇತನವನ್ನು ಪಡೆದುಕೊಂಡೆನೆಂದು ಭಾವಿಸುತ್ತೇನೆ.”

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ದೊಡ್ಡಪ್ಪನು ಹೀಗೆ ಹೇಳಲು ಯುಧಿಷ್ಠಿರನು ಸ್ನೇಹಭಾವದಿಂದ ಧೃತರಾಷ್ಟ್ರನ ಎಲ್ಲ ಅಂಗಗಳನ್ನೂ ಮೆಲ್ಲ-ಮೆಲ್ಲಗೆ ಸ್ಪರ್ಶಿಸಿದನು. ಆ ದಿವ್ಯಸ್ಪರ್ಶದಿಂದ ನಿಜವಾಗಿಯೂ ಮಹೀಪತಿಯಾದ ಧೃತರಾಷ್ಟ್ರನು ಪುನಃ ಪ್ರಾಣಗಳನ್ನೇ ಪಡೆದುಕೊಂಡನು. ಯುಧಿಷ್ಠಿರನನ್ನು ಎರಡು ತೋಳುಗಳಿಂದಲೂ ತಬ್ಬಿಕೊಂಡು ಅವನ ನೆತ್ತಿಯನ್ನು ಆಘ್ರಾಣಿಸಿದನು. ಕರುಣಾಜನಕವಾದ ಆ ದೃಶ್ಯವನ್ನು ನೋಡಿ ವಿದುರನೇ ಮೊದಲಾದವರು ದುಃಖದಿಂದ ಅಳತೊಡಗಿದರು. ಅತಿಯಾದ ದುಃಖದ ಕಾರಣದಿಂದಾಗಿ ಅವರು ಯುಧಿಷ್ಠಿರನೊಡನೆ ಯಾವ ಮಾತನ್ನೂ ಆಡಲಾಗಲಿಲ್ಲ.

ಧರ್ಮಜ್ಞಳಾದ ಗಾಂಧಾರೀದೇವಿಯು ಮನಸ್ಸಿನಲ್ಲಿ ಮಹಾದುಃಖವನ್ನೇ ಧರಿಸಿದ್ದರೂ ತಡೆದುಕೊಂಡು, ಅಳುತ್ತಿದ್ದ ಪರಿಜನರನ್ನು ‘ಮೈವಂ’-‘ಹೀಗೆ ಅಳಬೇಡಿರಿ’-ಎಂದು ಹೇಳಿದಳು. ಅಂತಃಪುರದ ಇತರಸ್ತ್ರೀಯರೂ ಅತ್ಯಂತದುಃಖಿತರಾಗಿ ಕುಂತಿಯೊಡನೆ ಕಣ್ಣೀರಿಡುತ್ತಾ ಗಾಂಧಾರಿಯನ್ನೂ ಧೃತರಾಷ್ಟ್ರನನ್ನೂ ಸುತ್ತುವರಿದು ನಿಂತಿದ್ದರು. ಪುನಃ ಧೃತರಾಷ್ಟ್ರನು ಯುಧಿಷ್ಠಿರನಿಗೆ ಹೇಳಿದನು:

ಅನುಜಾನೀಹಿ ಮಾಂ ರಾಜಂಸ್ತಾಪಸ್ಯೇ ಭರತರ್ಷಭ ॥೭೯॥

“ಭರತಶ್ರೇಷ್ಠನೇ! ನನಗೆ ತಪಸ್ಸನ್ನು ಮಾಡಲು ಅನುಮತಿಯನ್ನು ಕೊಡು.

ಗ್ಲಾಯತೇ ಮೇ ಮನಸ್ತಾತ ಭೂಯೋ ಭೂಯಃ ಪ್ರಜಲ್ಪತಃ।
ನ ಮಾಮತಃ ಪರಂ ಪುತ್ರ ಪರಿಕ್ಲೇಷ್ಟುಮಿಹಾರ್ಹಸಿ ॥೮೦॥

ಮಗು! ಪುನಃ ಪುನಃ ನಾನು ಮಾತನಾಡುತ್ತಿರುವುದರಿಂದ ನನ್ನ ಮನಸ್ಸು ಅಡಿಗಡಿಗೂ ದುರ್ಬಲವಾಗುತ್ತಲೇ ಇದೆ. ಆದುದರಿಂದ ನನ್ನನ್ನು ಇನ್ನೂ ಹೆಚ್ಚಿನ ಕ್ಲೇಶಕ್ಕೆ ಗುರಿಮಾಡುವುದು ನಿನಗೆ ಯೋಗ್ಯವಲ್ಲ."

ಜನಮೇಜಯ! ಕೌರವೇಂದ್ರನಾದ ಧೃತರಾಷ್ಟ್ರನು ಯುಧಿಷ್ಠಿರನಿಗೆ ಹೀಗೆ ಹೇಳುತ್ತಿರುವಾಗ ಅಲ್ಲಿದ್ದ ಯೋಧರ ಮಧ್ಯದಲ್ಲಿ ಆರ್ತನಾದವುಂಟಾಯಿತು. ಎಲ್ಲರೂ ಹಾಹಾಕಾರಮಾಡತೊಡಗಿದರು. ಕೃಶನಾಗಿದ್ದ, ಕಾಂತಿಹೀನನಾಗಿದ್ದ, ಉಪವಾಸದಿಂದ ಬಹಳವಾಗಿ ಆಯಾಸಗೊಂಡಿದ್ದ, ಮೂಳೆ-ಚರ್ಮಗಳು ಮಾತ್ರವೇ ಉಳ್ಳವನಾಗಿದ್ದ, ಅಂತಹ ದುರವಸ್ಥೆಯಲ್ಲಿರಲು ಅನರ್ಹನಾಗಿದ್ದ, ಮಹಾಪ್ರಭಾವಶಾಲಿಯಾದ ತನ್ನ ದೊಡ್ಡಪ್ಪನನ್ನು ಯುಧಿಷ್ಠಿರನು ತಬ್ಬಿಕೊಂಡು ಶೋಕದಿಂದ ಉಂಟಾದ ಕಣ್ಣೀರನ್ನು ಸುರಿಸುತ್ತಾ ಹೇಳಿದನು:

ನ ಕಾಮಯೇ ನರಶ್ರೇಷ್ಠ ಜೀವಿತಂ ಪೃಥಿವೀಂ ತಥಾ।
ಯಥಾ ತವ ಪ್ರಿಯಂ ರಾಜಂಶ್ಚಿಕೀರ್ಷಾಮಿ ಪರಂತಪ ॥೮೪॥

"ಪರಂತಪನೇ! ನಿನಗೆ ಪ್ರಿಯವನ್ನುಂಟುಮಾಡಲು ಹೇಗೆ ಬಯಸುತ್ತೇನೆಯೋ ಹಾಗೆ ಜೀವಿತವನ್ನಾಗಲೀ ರಾಜ್ಯವನ್ನಾಗಲೀ ಬಯಸುತ್ತಿಲ್ಲ. (ಎಲ್ಲಕ್ಕಿಂತಲೂ ನಿನಗೆ ಪ್ರಿಯವನ್ನುಂಟುಮಾಡಬೇಕೆಂಬುದೇ ನನ್ನ ಮಹತ್ತರವಾದ ಬಯಕೆಯಾಗಿದೆ.)

ನಾನು ನಿನ್ನ ಅನುಗ್ರಹಕ್ಕೆ ಯೋಗ್ಯನಾಗಿದ್ದರೆ ನಿನ್ನ ಪ್ರೀತಿಗೆ ಪಾತ್ರನಾಗಿದ್ದರೆ ನನ್ನ ಪ್ರಾರ್ಥನೆಯನ್ನು ಮನ್ನಿಸಿ ಈಗಲೇ ಭೋಜನಮಾಡು. ಮುಂದಿನ ವಿಷಯವನ್ನು ಯೋಚಿಸುತ್ತೇನೆ."

ಜನಮೇಜಯ! ಯುಧಿಷ್ಠಿರನ ಆ ಮಾತನ್ನು ಕೇಳಿ ಧೃತರಾಷ್ಟ್ರನು ಹೇಳಿದನು:

ಅನುಜ್ಞಾತಸ್ತ್ವಯಾ ಪುತ್ರ ಭುಂಜೀಯಾಮಿತಿ ಕಾಮಯೇ ॥೮೬॥

"ಅರಣ್ಯಕ್ಕೆ ಹೋಗಲು ನೀನು ಅನುಜ್ಞೆಯನ್ನಿತ್ತರೆ ನಾನು ಭೋಜನಮಾಡುತ್ತೇನೆ. ಇದು ನನ್ನ ಅಪೇಕ್ಷೆಯಾಗಿದೆ."

ಧೃತರಾಷ್ಟ್ರನು ಯುಧಿಷ್ಠಿರನಿಗೆ ಹೀಗೆ ಹೇಳುತ್ತಿರುವಾಗ ಸತ್ಯವತಿಯ

ಮಕ್ಕಳಾದ ವ್ಯಾಸರು ಅಲ್ಲಿಗೆ ಆಗಮಿಸಿ ಯುಧಿಷ್ಠಿರನೊಡನೆ ಹೇಳ ತೊಡಗಿದರು.

ಇನೆಯ ಅಧ್ಯಾಯವು ಮುಗಿಯಿತು.

ವ್ಯಾಸರು ಸಮಾಧಾನಹೇಳಿದನಂತರ ಯುಧಿಷ್ಠಿರನು ಅರಣ್ಯಕ್ಕೆ ಹೋಗಲು ಧೃತರಾಷ್ಟ್ರನಿಗೆ ಅನುಮತಿಯನ್ನಿತ್ತುದು

ವ್ಯಾಸರು ಹೇಳುತ್ತಾರೆ:

ಯುಧಿಷ್ಠಿರ ಮಹಾಬಾಹೋ ಯಥಾಹ ಕುರುನನ್ದನಃ ।
ಧೃತರಾಷ್ಟ್ರೋ ಮಹಾತೇಜಾಸ್ತತ್ಕುರುಷ್ವಾವಿಚಾರಯನ್ ॥೧॥

"ಮಹಾಬಾಹುವೇ! ಯುಧಿಷ್ಠಿರ! ಕುರುನಂದನನಾದ ಮಹಾತೇಜಸ್ವಿಯಾದ ಧೃತರಾಷ್ಟ್ರನು ಏನು ಹೇಳುವನೋ ಅದನ್ನು ವಿಚಾರಮಾಡದೆಯೇ ನಡೆಸಿಕೊಡು.

ಈ ರಾಜನು ವೃದ್ಧನಾಗಿದ್ದಾನೆ. ಮೇಲಾಗಿ ತನ್ನ ಎಲ್ಲ ಮಕ್ಕಳನ್ನೂ ಕಳೆದುಕೊಂಡಿದ್ದಾನೆ. ಈ ಕಷ್ಟವನ್ನು (ಪುತ್ರಶೋಕವನ್ನು) ಹೆಚ್ಚುಕಾಲ ಸಹಿಸಿಕೊಂಡು ಇರಲಾರನೆಂಬುದು ನನ್ನ ಅಭಿಪ್ರಾಯವಾಗಿದೆ. ಮಹಾಭಾಗ್ಯಶಾಲಿನಿಯಾದ ಈ ಗಾಂಧಾರಿಯಾದರೋ ಪ್ರಾಜ್ಞಳು. ಇಷ್ಟವಸ್ತುವಿನ ನಾಶ ಅನಿಷ್ಟಪ್ರಾಪ್ತಿ–ಇವುಗಳ ರಹಸ್ಯವನ್ನು ತಿಳಿದವಳಾಗಿದ್ದಾಳೆ. ಆದುದರಿಂದ ಇವಳು ಪುತ್ರಶೋಕದ ದುಃಖವನ್ನು ಧೈರ್ಯದಿಂದ ತಡೆದುಕೊಳ್ಳಬಲ್ಲಳು. ನಾನೂ ಕೂಡ ನಿನಗೆ ಇದನ್ನೇ ಹೇಳುತ್ತಿದ್ದೇನೆ. ನನ್ನ ಮಾತನ್ನು ಕೇಳು. ರಾಜನಿಗೆ ಕಾಡಿಗೆ ಹೋಗಲು ಅನುಮತಿಯನ್ನು ಕೊಡು. ಅವನು ವೃಥಾ ಇಲ್ಲಿಯೇ ಸಾಯದಿರಲಿ. ಹಿಂದಿನ ರಾಜರ್ಷಿಗಳ ಮಾರ್ಗವನ್ನೇ ಈ ಧೃತರಾಷ್ಟ್ರರಾಜನೂ ಅನುಸರಿಸಲಿ. ಎಲ್ಲ ರಾಜರ್ಷಿಗಳಿಗೂ ಕಡೆಯಲ್ಲಿ ಅರಣ್ಯವೇ ಆಶ್ರಯಸ್ಥಾನವಾಗಿದೆ."

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಅದ್ಭುತಕರ್ಮರಾದ ವ್ಯಾಸರು ಹೀಗೆ ಹೇಳಲು ಮಹಾತೇಜಸ್ವಿಯಾದ ಧರ್ಮರಾಜನು ಮಹಾಮುನಿಯನ್ನು ಕುರಿತು ಹೇಳಿದನು:



ಭಗವಾನೇವ ನೋ ಮಾನ್ಯೋ ಭಗವಾನೇವ ನೋ ಗುರುಃ।
ಭಗವಾನಸ್ಯ ರಾಜ್ಯಸ್ಯ ಕುಲಸ್ಯ ಚ ಪರಾಯಣಮ್ ॥೭॥

"ಪೂಜ್ಯರೇ! ತಾವೇ ನಮಗೆ ಮಾನ್ಯರಾಗಿರುವಿರಿ; ಗುರುಗಳಾಗಿರುವಿರಿ; ಈ ರಾಜ್ಯಕ್ಕೂ ಮತ್ತು ನಮ್ಮ ಕುಲಕ್ಕೂ ತಾವೇ ಆಶ್ರಯಭೂತರಾಗಿರುವಿರಿ.

ಅಹಂ ತು ಪುತ್ರೋ ಭಗವನ್ಪಿತಾ ರಾಜಾ ಗುರುಶ್ಚ ಮೇ।
ನಿದೇಶವರ್ತೀ ಚ ಪಿತುಃ ಪುತ್ರೋ ಭವತಿ ಧರ್ಮತಃ ॥೮॥

ಪೂಜ್ಯರೇ! ತಮಗೆ ತಿಳಿದಿರುವಂತೆ ಧೃತರಾಷ್ಟ್ರರಾಜನು ನಮಗೆ ತಂದೆಯೂ ಆಗಿದ್ದಾನೆ; ಗುರುವೂ ಆಗಿದ್ದಾನೆ. ಧರ್ಮದ ರೀತಿಯಲ್ಲಿ ಮಗನು ತಂದೆಯ ಆಜ್ಞೆಗೆ ಅಧೀನನಾಗಿರುತ್ತಾನೆ. (ಹೀಗಿರುವಾಗ ನಾನು ತಂದೆಗೆ ಹೇಗೆ ತಾನೇ ನಿರ್ದೇಶಿಸಲಿ?)"

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಯುಧಿಷ್ಠಿರನು ಹೀಗೆ ಹೇಳಲು ಮಹಾತೇಜಸ್ವಿಗಳಾದ, ಮಹಾವಿದ್ವಾಂಸರಾದ, ವೇದವಿದರಲ್ಲಿ ಶ್ರೇಷ್ಠರಾದ ವ್ಯಾಸರು ಯುಧಿಷ್ಠಿರನಿಗೆ ಹೇಳಿದರು:

"ಮಹಾಬಾಹುವೇ! ನೀನು ಏನು ಹೇಳಿದೆಯೋ ಅದು ಹಾಗೆಯೇ ಸರಿ. ಆದರೆ ರಾಜನೀಗ ಮುದುಕನಾಗಿದ್ದಾನೆ. ಅಂತಿಮಾವಸ್ಥೆಯಲ್ಲಿದ್ದಾನೆ. ಇವನು ನನ್ನಿಂದಲೂ ಮತ್ತು ನಿನ್ನಿಂದಲೂ ಅನುಮತಿಯನ್ನು ಪಡೆದು ತನ್ನ ಇಷ್ಟದಂತೆ ನಡೆದುಕೊಳ್ಳಲಿ. ಇವನ ಕಾರ್ಯಕ್ಕೆ ವಿಘ್ನವನ್ನುಂಟುಮಾಡಬೇಡ. ಯುಧಿಷ್ಠಿರ! ರಾಜರ್ಷಿಗಳಿಗೆ ಇದೇ ಪರಮಧರ್ಮವಾಗಿದೆ.

ಸಮರೇ ವಾ ಭವೇನ್ಮೃತ್ಯುರ್ವನೇ ವಾ ವಿಧಿಪೂರ್ವಕಮ್ ॥೧೨॥

ಯುದ್ಧದಲ್ಲಿ ಶಸ್ತ್ರದಿಂದಾಗಲೀ, ಅರಣ್ಯದಲ್ಲಿ ವಿಧಿಪೂರ್ವಕವಾದ ಕರ್ಮಗಳಿಂದಾಗಲೀ ಕ್ಷತ್ರಿಯನು ಮರಣಹೊಂದಬೇಕು.

ನಿನ್ನ ತಂದೆಯಾದ ಪಾಂಡುರಾಜನು ಕೂಡ ಧೃತರಾಷ್ಟ್ರನನ್ನು ಗುರುವೆಂದೇ ಭಾವಿಸಿ ಶಿಷ್ಯಭಾವದಿಂದ ಇವನ ಸೇವೆಯನ್ನು ಮಾಡುತ್ತಿದ್ದನು. ಈ ಧೃತರಾಷ್ಟ್ರನು ರತ್ನಮಯಪರ್ವತಗಳಿಂದ (ರತ್ನರಾಶಿಗಳಿಂದ) ಸುಶೋಭಿತವಾದ, ಹೆಚ್ಚು ದಕ್ಷಿಣೆಗಳುಳ್ಳ ದೊಡ್ಡ-ದೊಡ್ಡ ಯಜ್ಞಗಳನ್ನು ಮಾಡಿ ಈ ರಾಜ್ಯವನ್ನು ಉಪಭೋಗಿಸಿದನು ಹಾಗೂ ಪ್ರಜೆಗಳನ್ನೂ ಧರ್ಮದಿಂದ ಪರಿಪಾಲಿಸಿದನು. ನೀನು ಅರಣ್ಯದಲ್ಲಿದ್ದಾಗ ಹದಿಮೂರು ವರ್ಷಗಳ ಕಾಲ ಪುತ್ರನ ಅಧೀನದಲ್ಲಿದ್ದ ವಿಶಾಲವಾದ ರಾಜ್ಯವನ್ನು ಇವನು ಉಪಭೋಗಿ

ಸಿದನು ಮತ್ತು ನಾನಾಪ್ರಕಾರವಾದ ಐಶ್ವರ್ಯಗಳನ್ನು ದಾನಮಾಡಿದನು. ನೀನೂ ಕೂಡ ಸೇವಕರೊಡನೆ ಈ ಧೃತರಾಷ್ಟ್ರನನ್ನೂ ಮತ್ತು ಯಶಸ್ವಿನಿಯಾದ ಗಾಂಧಾರಿಯನ್ನೂ ಗುರುಭಾವದಿಂದ ಶುಶ್ರೂಷೆಮಾಡಿರುವೆ. ಈಗ ಇವನ ತಪಸ್ಸಿಗೆ ಇದು ಸರಿಯಾದ ಕಾಲವಾಗಿದೆ. ಆದುದರಿಂದ ನಿನ್ನ ತಂದೆಗೆ ಅರಣ್ಯಕ್ಕೆ ಹೋಗಲು ಅನುಮತಿಸು. ಇವನ ಮನಸ್ಸಿನಲ್ಲಿ ನಿನ್ನ ಮೇಲೆ ಅಣುಮಾತ್ರವಾದರೂ ಕೋಪವಿರುವುದಿಲ್ಲ."

ವ್ಯಾಸರು ಹೀಗೆ ಹೇಳಿ ಯುಧಿಷ್ಠಿರನನ್ನು ಒಪ್ಪಿಸಿದರು. ಯುಧಿಷ್ಠಿರನು 'ಹಾಗೆಯೇ ಆಗಲಿ' ಎಂದು ಪ್ರತ್ಯುತ್ತರವನ್ನಿತ್ತನು. ಒಡನೆಯೇ ವ್ಯಾಸರು ಅರಣ್ಯಕ್ಕೆ ತೆರಳಿದರು.

ವ್ಯಾಸರು ಹೊರಟುಹೋದನಂತರ ಪಾಂಡುವಿನ ಮಗನಾದ ಧರ್ಮರಾಜನು ತಂದೆಯಾದ ವೃದ್ಧನಾದ ಧೃತರಾಷ್ಟ್ರನಿಗೆ ವಿನಯಪೂರ್ವಕವಾಗಿ ಮೆಲ್ಲ-ಮೆಲ್ಲನೆ ಈ ಮಾತುಗಳನ್ನು ಹೇಳಿದನು:

"ತಂದೆಯೇ! ಪೂಜ್ಯರಾದ ವ್ಯಾಸರು ಏನು ಹೇಳಿರುವರೋ-ನಿನ್ನ ಅಭಿಮತವೂ ಯಾವುದಾಗಿರುವುದೋ-ಮಹಾಧನುಷ್ಮಂತರಾದ ಕೃಪ, ವಿದುರ, ಯುಯುತ್ಸು, ಸಂಜಯ-ಇವರು ಏನು ಹೇಳುವರೋ ಅದರಂತೆಯೇ ನಾನು ನಡೆದುಕೊಳ್ಳುತ್ತೇನೆ. ಇವರೆಲ್ಲರೂ ನನಗೆ ಮಾನ್ಯರಾಗಿರುವರು ಮತ್ತು ನಮ್ಮ ಕುಲದ ಹಿತೈಷಿಗಳೂ ಆಗಿರುವರು.

ಮಹಾರಾಜ! ನಾನು ಇದೊಂದನ್ನು ತಲೆಬಾಗಿ ನಮಸ್ಕರಿಸುತ್ತಾ ನಿನ್ನನ್ನು ಬೇಡಿಕೊಳ್ಳುತ್ತೇನೆ.

ಕ್ರಿಯತಾಂ ತಾವದಾಹಾರಸ್ತತೋ ಗಚ್ಛಾಶ್ರಮಂ ಪ್ರತಿ ॥೨೨॥

ನೀನು ಮೊದಲು ಊಟಮಾಡು. ಬಳಿಕ ಆಶ್ರಮಕ್ಕೆ ಪ್ರಯಾಣಮಾಡಬಹುದಾಗಿದೆ."

ಳನೆಯ ಅಧ್ಯಾಯವು ಮುಗಿಯಿತು.

ಧೃತರಾಷ್ಟ್ರನಿಂದ ಯುಧಿಷ್ಠಿರನಿಗೆ ರಾಜನೀತಿಯ ಉಪದೇಶ

ವೈಶಂಪಾಯನರು ಹೇಳುತ್ತಾರೆ:

ತತೋ ರಾಜ್ಞಾಭ್ಯನುಜ್ಞಾತೋ ಧೃತರಾಷ್ಟ್ರಃ ಪ್ರತಾಪವಾನ್।
ಯಯೌ ಸ್ವಭವನಂ ರಾಜಾ ಗಾನ್ಧಾರ್ಯಾನುಗತಸ್ತದಾ ॥೧॥

ಜನಮೇಜಯ! ಪ್ರತಾಪವಂತನಾದ ಧೃತರಾಷ್ಟ್ರನು ಹೀಗೆ ಯುಧಿಷ್ಠಿರನಿಂದ ಅರಣ್ಯಕ್ಕೆ ಹೋಗಲು ಅನುಮತಿಯನ್ನು ಪಡೆದು ಗಾಂಧಾರಿಯೊಡನೆ ತನ್ನ ಅರಮನೆಗೆ ತೆರಳಿದನು. ಆ ಸಮಯದಲ್ಲಿ ಬಹಳವಾಗಿ ಶಕ್ತಿಗುಂದಿದ್ದ ಧೃತರಾಷ್ಟ್ರರಾಜನು ಮೆಲ್ಲ-ಮೆಲ್ಲನೆ ಹೆಜ್ಜೆಗಳನ್ನಿಡುತ್ತಿದ್ದನು. ಮುದಿಯಾದ ಸಲಗದಂತೆ ಕಾಲ್ನಡಿಗೆಯಲ್ಲಿಯೇ ಹೋಗುತ್ತಿದ್ದ ಆ ಮಹೀಪಾಲನು ಬಹಳ ಕಷ್ಟದಿಂದ ಒಂದೊಂದು ಹೆಜ್ಜೆಯನ್ನೂ ಮೇಲೆತ್ತಿ ಕೆಳಗಿಡುತ್ತಿದ್ದನು. ವಿದ್ವಾಂಸನಾದ ವಿದುರನೂ, ಸೂತನಾದ ಸಂಜಯನೂ, ಶರದ್ವಂತರ ಮಕ್ಕಳಾದ ಮಹಾಧನುಷ್ಮಂತರಾದ ಕೃಪರೂ ಧೃತರಾಷ್ಟ್ರನನ್ನು ಅನುಸರಿಸಿ ಹೋದರು. ರಾಜನು ತನ್ನ ಅರಮನೆಯನ್ನು ಪ್ರವೇಶಿಸಿ ಪೂರ್ವಾಹ್ಣದಲ್ಲಿ ಮಾಡಬೇಕಾಗಿದ್ದ ಧಾರ್ಮಿಕಕ್ರಿಯೆಗಳೆಲ್ಲವನ್ನೂ ಮುಗಿಸಿ, ಅನ್ನ-ಪಾನಾದಿಗಳಿಂದ ಬ್ರಾಹ್ಮಣರನ್ನು ತೃಪ್ತಿಗೊಳಿಸಿ ತಾನೂ ಭೋಜನಮಾಡಿದನು. ಧರ್ಮಜ್ಞಳಾದ ಮನಸ್ವಿನಿಯಾದ ಗಾಂಧಾರಿಯೂ ಸೊಸೆಯರಿಂದ ಉಪಚರಿಸಲ್ಪಟ್ಟು ಪೂಜಿಸಲ್ಪಟ್ಟವಳಾಗಿ ಕುಂತಿಯೊಡನೆ ಊಟಮಾಡಿದಳು. ಕುರುಶ್ರೇಷ್ಠನಾದ ಧೃತರಾಷ್ಟ್ರನು ಊಟಮಾಡಿದನಂತರ ಪಾಂಡವ-ವಿದುರರೇ ಮೊದಲಾದ ಎಲ್ಲರೂ ಊಟಮಾಡಿ ಧೃತರಾಷ್ಟ್ರನ ಬಳಿಯಲ್ಲಿ ಕುಳಿತುಕೊಂಡರು. ಬಳಿಕ ಧೃತರಾಷ್ಟ್ರನು ತನ್ನ ಸಮೀಪದಲ್ಲಿಯೇ ಕುಳಿತಿದ್ದ ಯುಧಿಷ್ಠಿರನ ಬೆನ್ನನ್ನು ಕೈಯಿಂದ ಸವರುತ್ತಾ ಹೇಳಿದನು:

“ಕುರುನಂದನನೇ! ಅಷ್ಟಾಂಗಯುಕ್ತವಾದ* ಧರ್ಮಪುರಸ್ಕೃತವಾದ

---

*ಅಷ್ಟಾಂಗಗಳು: ಅರಸು, ಮಂತ್ರಿ, ಸ್ನೇಹಿತ, ಬೊಕ್ಕಸ, ನಾಡು, ದುರ್ಗ, ಸೇನೆ ಮತ್ತು ಪ್ರಜೆಗಳು.

ರಾಜ್ಯದಲ್ಲಿ ನೀನು ಯಾವಾಗಲೂ ಜಾಗರೂಕನಾಗಿರಬೇಕು. ಜಾಗರೂಕ ನಾಗಿದ್ದರೆ ಮಾತ್ರ ರಾಜ್ಯವನ್ನು ಧರ್ಮದಿಂದ ರಕ್ಷಿಸಲು ಸಾಧ್ಯವಾಗುತ್ತದೆ. ನಿನಗೂ ಈ ವಿಷಯವು ತಿಳಿದೇ ಇದೆ. ಆದರೂ ನಾನು ಹೇಳಲಿರುವ ಈ ಮಾತುಗಳನ್ನು ಕೇಳು.

ವಿದ್ಯಾವೃದ್ಧಾನ್ಸದೈವ ತ್ವಮುಪಾಸೀಥಾ ಯುಧಿಷ್ಠಿರ ।
ಶೃಣುಯಾಸ್ತೇ ಚ ಯದ್ಬ್ರೂಯುಃ ಕುರ್ಯಾಶ್ಚೈವಾವಿಚಾರಯನ್ ॥

ವಿದ್ಯೆಯಿಂದ ವೃದ್ಧರಾದವರನ್ನು (ದೊಡ್ಡ-ದೊಡ್ಡ ವಿದ್ವಾಂಸರನ್ನು) ನೀನು ಯಾವಾಗಲೂ ಉಪಾಸಿಸುತ್ತಿರಬೇಕು. ಅವರು ಹೇಳುವುದನ್ನು ಕೇಳಬೇಕು. ಪುನಃ ವಿಚಾರಮಾಡದೇ ಅವರು ಹೇಳಿದಂತೆ ಮಾಡಬೇಕು.

ಪ್ರಾತಃಕಾಲದಲ್ಲೆದ್ದು ನಿತ್ಯಕರ್ಮಗಳನ್ನು ಮುಗಿಸಿಕೊಂಡು ಅಂತಹ ವಿದ್ವಾಂಸರನ್ನು ಯಥೋಚಿತವಾಗಿ ಸತ್ಕರಿಸಬೇಕು. ಯಾವುದಾದರೂ ರಾಜ ಕಾರ್ಯವನ್ನು ಮಾಡಬೇಕಾಗಿ ಬಂದಾಗ ಆ ಸಮಯದಲ್ಲಿ ನಿನ್ನ ಕರ್ತವ್ಯ ವೇನೆಂಬುದರ ಬಗೆಗೆ ಅವರನ್ನು ಪ್ರಶ್ನಿಸಬೇಕು. ನಿನ್ನ ಕಾರ್ಯದ ಹಿತವನ್ನು ಬಯಸಿ ನಿನ್ನಿಂದ ಸಮ್ಮಾನಿಸಲ್ಪಡುವ ಆ ವಿದ್ವಾಂಸರು ಸರ್ವಥಾ ನಿನಗೆ ಹಿತವಾಗುವುದನ್ನೇ ಹೇಳುತ್ತಾರೆ. ಸಾರಥಿಯು ಕುದುರೆಗಳನ್ನು ಕಡಿವಾಣಗಳ ಮೂಲಕವಾಗಿ ಹತೋಟಿಯಲ್ಲಿಟ್ಟುಕೊಳ್ಳುವಂತೆ–ನೀನು ನಿನ್ನ ಎಲ್ಲ ಇಂದ್ರಿಯಗಳನ್ನೂ ಮನಸ್ಸಿನ ಮೂಲಕವಾಗಿ ಹತೋಟಿಯಲ್ಲಿಟ್ಟುಕೊಂಡು ಅವುಗಳನ್ನು ಸಂರಕ್ಷಿಸು. ಹೀಗೆ ಮಾಡಿದರೆ ರಕ್ಷಿಸಲ್ಪಟ್ಟ ಧನವು ಸಮಯಗಳಲ್ಲಿ ಉಪಯೋಗಕ್ಕೆ ಬರುವಂತೆ–ಇಂದ್ರಿಯಗಳು ಕೂಡ ನಿನಗೆ ಹಿತಕಾರಿಗಳೇ ಆಗುತ್ತವೆ. ವಂಚನೆಯಿಲ್ಲದೇ ಕೆಲಸಮಾಡುವ, ಪಿತೃ-ಪಿತಾಮಹರ ಕಾಲ ದಿಂದಲೂ ವಂಶಪಾರಂಪರ್ಯವಾಗಿ ಕೆಲಸಮಾಡುತ್ತಿರುವ, ಶುದ್ಧಾಂತಃ ಕರಣರಾದ, ಜಿತೇಂದ್ರಿಯರಾದ, ಪವಿತ್ರಕರ್ಮರಾದ, ಪುಣ್ಯಾತ್ಮರಾದ ಮಂತ್ರಿಗಳನ್ನು ಎಲ್ಲ ಕಾರ್ಯಗಳಲ್ಲಿಯೂ ನಿಯಮಿಸು. ಚೆನ್ನಾಗಿ ಪರೀಕ್ಷಿಸಲ್ಪಟ್ಟು, ತಮ್ಮ ರಾಷ್ಟ್ರದಲ್ಲಿಯೇ ವಾಸವಾಗಿರುವ ಅನೇಕ ಗೂಢಚಾರರ ಮೂಲಕವಾಗಿ ಯಾವಾಗಲೂ ಶತ್ರುಗಳ ಚಲನ-ವಲನ

ಗಳನ್ನು ತಿಳಿದುಕೊಳ್ಳುತ್ತಲೇ ಇರಬೇಕು. ಆದರೆ ನಿನ್ನ ವಿಷಯಗಳು ಮಾತ್ರ ಶತ್ರುಗಳಿಗೆ ತಿಳಿಯಬಾರದು. ನಿನ್ನ ನಗರವನ್ನು ಚೆನ್ನಾಗಿ ರಕ್ಷಿಸಿಕೊಳ್ಳಬೇಕು. ಪ್ರಾಕಾರಗಳೂ ಮತ್ತು ಮುಖ್ಯದ್ವಾರಗಳೂ ಸುದೃಢವಾಗಿರಬೇಕು. ಉಪ್ಪರಿಗೆ ಗಳಿಂದ ಕೂಡಿರುವ ಆರು ವಿಧವಾದ ದುರ್ಗಗಳು ಎಲ್ಲ ದಿಕ್ಕುಗಳಲ್ಲಿಯೂ ಇರಬೇಕು. ನಗರದ ದ್ವಾರಗಳು ಸಾಕಷ್ಟು ವಿಶಾಲವಾಗಿಯೂ ದೊಡ್ಡದಾಗಿಯೂ ಇರಬೇಕು. ಆ ಬಾಗಿಲುಗಳನ್ನು ಎಲ್ಲ ಕಡೆಗಳಿಂದಲೂ ಅಳತೆಮಾಡಿಸಿ ಪ್ರಮಾಣಬದ್ಧವಾಗಿ ಸುಂದರವಾಗಿ ನಿರ್ಮಿಸಬೇಕು. ಶತಘ್ನಿಯೇ ಮೊದಲಾದ ಯಂತ್ರಗಳನ್ನು ಅವುಗಳ ಬಳಿಯಲ್ಲಿಟ್ಟು ಸದಾ ರಕ್ಷಿಸುತ್ತಿರಬೇಕು. ಯಾರ ಕುಲಶೀಲಗಳು ನಿನಗೆ ಚೆನ್ನಾಗಿ ತಿಳಿದಿವೆಯೋ ಅಂತಹವರನ್ನೇ ನೀನು ಕೆಲಸಕ್ಕೆ ನಿಯಮಿಸಿಕೊಂಡು ಅವರಿಂದ ನಿನ್ನ ಕಾರ್ಯಗಳನ್ನು ಮಾಡಿಸಿಕೊಳ್ಳಬೇಕು. ಭೋಜನಾದಿಗಳ ಸಮಯದಲ್ಲಿ ಸತತವಾಗಿ ಆತ್ಮರಕ್ಷಣೆಯನ್ನು ಮಾಡಿಕೊಳ್ಳಬೇಕು. ಆಹಾರ-ವಿಹಾರಗಳ ಕಾಲಗಳಲ್ಲಿಯೂ, ಮಾಲೆಗಳನ್ನು ಧರಿಸುವಾಗಲೂ, ಮಲಗುವಾಗಲೂ, ಕುಳಿತುಕೊಳ್ಳುವಾಗಲೂ ನೀನು ಜಾಗರೂಕನಾಗಿದ್ದು ನಿನ್ನ ರಕ್ಷಣೆಯನ್ನು ಮಾಡಿಕೊಳ್ಳಬೇಕು. ಕುಲೀನರೂ, ಶೀಲವಂತರೂ, ವಿದ್ವಾಂಸರೂ, ವಿಶ್ವಾಸ ಪಾತ್ರರೂ, ವೃದ್ಧರೂ ಆಗಿರುವವರ ಮೇಲ್ವಿಚಾರಣೆಯಲ್ಲಿ ಅಂತಃಪುರದ ಸ್ತ್ರೀಯರನ್ನು ಎಚ್ಚರಿಕೆಯಿಂದ ರಕ್ಷಿಸಬೇಕು. ವಿದ್ಯಾವಿಶಾರದರಾದ, ವಿನೀತ ರಾದ, ಕುಲೀನರಾದ, ಧರ್ಮಾರ್ಥಕುಶಲರಾದ, ಸರಳಸ್ವಭಾವದ ಬ್ರಾಹ್ಮಣ ರನ್ನು ಮಂತ್ರಿಗಳನ್ನಾಗಿ ಮಾಡಿಕೊಳ್ಳಬೇಕು. ಅವರೊಡನೆ ನೀನು ಮಂತ್ರಾ ಲೋಚನೆಮಾಡುತ್ತಿರಬೇಕು. ಆದರೆ ಹೆಚ್ಚು ಜನರೊಡನೆ ಮಂತ್ರಾಲೋಚನೆ ಮಾಡಬಾರದು. ಬಹಳ ದೀರ್ಘವಾಗಿಯೂ ಸಮಾಲೋಚಿಸಬಾರದು. ಎಲ್ಲ ಕಡೆಗಳಿಂದಲೂ ಆವರಣವಿರುವ ಮಂತ್ರಾಲೋಚನಾಗೃಹದಲ್ಲಾಗಲೀ, ವಿಶಾಲವಾದ ಬಯಲಿನಲ್ಲಾಗಲೀ ಎಲ್ಲ ಮಂತ್ರಿಗಳೊಡನೆ ಅಥವಾ ಒಬ್ಬಿಬ್ಬರು ಮಂತ್ರಿಗಳೊಡನೆ ಮಂತ್ರಾಲೋಚನೆಯನ್ನು ಮಾಡಬೇಕು. ಹುಲ್ಲು-ಮುಳ್ಳುಗಳಿಲ್ಲದ ಅರಣ್ಯದಲ್ಲಿಯೂ ಮಂತ್ರಾಲೋಚನೆ ಮಾಡಬಹುದು. ಆದರೆ ಅಂತಹ ಸ್ಥಳಗಳಲ್ಲಿ ರಾತ್ರಿಯ ವೇಳೆಯಲ್ಲಿ

ಯಾವುದೇ ರೀತಿಯ ಗುಪ್ತಾಲೋಚನೆಗಳನ್ನೂ ಮಾಡಬಾರದು. ಮನುಷ್ಯರೊಡನೆ ಕಪಿಗಳನ್ನಾಗಲೀ, ಪಕ್ಷಿಗಳನ್ನಾಗಲೀ, ಮೂರ್ಖರನ್ನಾಗಲೀ, ಹೆಳವರನ್ನಾಗಲೀ ಮಂತ್ರಾಲೋಚನೆಯ ಸ್ಥಳಕ್ಕೆ ಕರೆತರಬಾರದು. ರಾಜರ ಮಂತ್ರಭೇದದಿಂದ (ಗುಪ್ತ ವಿಷಯಗಳು ಇತರರಿಗೆ ತಿಳಿಯುವುದರಿಂದ) ಉಂಟಾಗುವ ದೋಷಗಳನ್ನು (ಅನರ್ಥಗಳನ್ನು) ಸರಿಪಡಿಸಲು ಸಾಧ್ಯವೇ ಆಗುವುದಿಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ. ಆದುದರಿಂದ ನೀನು ಮಂತ್ರಿಮಂಡಲದಲ್ಲಿ ಮಂತ್ರಭೇದದಿಂದ ಆಗುವ ಅನರ್ಥಗಳನ್ನೂ–ಮಂತ್ರ ಗೋಪನದಿಂದ ಆಗುವ ಲಾಭವನ್ನೂ ಪುನಃ ಪುನಃ ವಿವರಿಸಿ ಹೇಳಬೇಕು. ಪಟ್ಟಣಿಗರಿಗೂ ಮತ್ತು ಹಳ್ಳಿಗರಿಗೂ ನಿನ್ನ ವಿಷಯದಲ್ಲಿ ಒಳ್ಳೆಯಭಾವನೆಯಿರುವುದೇ ಅಥವಾ ಕೆಟ್ಟ ಭಾವನೆಯಿರುವುದೇ?–ಎಂಬುದನ್ನು ತಿಳಿದುಕೊಳ್ಳಲು ತಕ್ಕ ವ್ಯವಸ್ಥೆಮಾಡಬೇಕು. ನಿನ್ನ ರಾಜ್ಯದ ವ್ಯವಹಾರಗಳನ್ನು ಆಪ್ತರಾದವರಿಗೂ, ಸಂತುಷ್ಟರಾದವರಿಗೂ ಮತ್ತು ಹಿತೈಷಿಗಳಾಗಿರುವವರಿಗೂ ವಹಿಸಿಕೊಡಬೇಕು. ಗೂಢಚಾರರ ಮೂಲಕವಾಗಿ ಅವರು ಮಾಡುತ್ತಿರುವ ಕಾರ್ಯವನ್ನು ಪರಿಶೀಲಿಸುತ್ತಲೇ ಇರಬೇಕು.

ನಿನ್ನಿಂದ ನಿಯುಕ್ತರಾದ ನ್ಯಾಯಾಧಿಕಾರಿಗಳು ನ್ಯಾಯಾನುಸಾರವಾಗಿ ಅಪರಾಧದ ಪರಿಮಾಣವನ್ನು ಚೆನ್ನಾಗಿ ಪರಿಶೀಲಿಸಿ ದಂಡಾರ್ಹರಿಗೆ ಯಥಾಯೋಗ್ಯವಾದ ಶಿಕ್ಷೆಯನ್ನು ವಿಧಿಸಬೇಕು. ಯಾವ ಅಧಿಕಾರಿಗಳು ಲಂಚವನ್ನು ತೆಗೆದುಕೊಳ್ಳುವುದರಲ್ಲಿ ಅಭಿರುಚಿಯುಳ್ಳವರಾಗಿರುವರೋ, ಪರಸ್ತ್ರೀಯರೊಡನೆ ಸಂಪರ್ಕವನ್ನಿಟ್ಟುಕೊಂಡಿರುವರೋ, ಉಗ್ರಶಿಕ್ಷೆಯನ್ನು ಕೊಡುವ ಸ್ವಭಾವವುಳ್ಳವರಾಗಿರುವರೋ, ಸುಳ್ಳುತೀರ್ಪನ್ನು ಕೊಡುವರೋ, ಸಾಹಸಕಾರ್ಯಗಳಲ್ಲಿ ಅಭಿರುಚಿಯುಳ್ಳವರೋ, ಸಭಾಮಂದಿರಗಳನ್ನೂ ವಿಹಾರಸ್ಥಾನಗಳನ್ನೂ ನಾಶಗೊಳಿಸುವರೋ, ವರ್ಣಾಶ್ರಮಧರ್ಮಗಳನ್ನು ದೂಷಿಸುವರೋ–ಅಂತಹವರನ್ನು ದೇಶ-ಕಾಲಗಳನ್ನನುಸರಿಸಿ ಸುವರ್ಣ ದಂಡದ ಮೂಲಕವಾಗಲೀ ಪ್ರಾಣದಂಡದ ಮೂಲಕವಾಗಲೀ ಶಿಕ್ಷಿಸಬೇಕು. ನೀನು ಬೆಳಗಾಗಿ ಎದ್ದೊಡನೆಯೇ ನಿತ್ಯಕರ್ಮಗಳನ್ನು ಮುಗಿಸಿಕೊಂಡು ಮೊದಲು ಆದಾಯ-ವೆಚ್ಚಗಳ ಅಧಿಕಾರಿಗಳನ್ನು ನೋಡಬೇಕು. (ಅನುದಿನವೂ ರಾಜ್ಯದ ಆದಾಯ-ವೆಚ್ಚಗಳನ್ನು ಪರಿಶೀಲಿಸುತ್ತಲೇ

ಇರಬೇಕು.) ಅಧಿಕಾರಿಗಳಿಂದ ವಿಷಯವನ್ನು ಸಂಗ್ರಹಿಸಿದನಂತರ ಅವರಿಗೆ ಯೋಗ್ಯವಾದ ಸಲಹೆಗಳನ್ನಿತ್ತು ಬಳಿಕ ಅಲಂಕಾರಮಾಡಿಕೊಳ್ಳುವ ಅಥವಾ ಭೋಜನಮಾಡುವ ಕಡೆಗೆ ಗಮನಕೊಡಬೇಕು. ಬಳಿಕ ಯೋಧಪ್ರಮುಖರನ್ನು ಕಾಣಬೇಕು. ಅವರನ್ನು ಯಾವಾಗಲೂ ಸಂತೋಷಗೊಳಿಸುತ್ತಲೇ ಇರಬೇಕು. ದೂತರನ್ನೂ ಮತ್ತು ಗೂಢಚಾರರನ್ನೂ ಕಾಣಲು ಪ್ರದೋಷ ಸಮಯವು (ಸಾಯಂಕಾಲವು) ಪ್ರಶಸ್ತವಾದುದು. ರಾತ್ರಿಯ ಕಡೆಯ ಭಾಗದಲ್ಲಿ ಅಥವಾ ಬೆಳಗಿನ ಜಾವದಲ್ಲಿ ಮರುದಿನದ ಕಾರ್ಯಕ್ರಮಗಳನ್ನು ನಿಶ್ಚಯಿಸಬೇಕು. ಮಧ್ಯರಾತ್ರಿಯಲ್ಲಾಗಲೀ ಮಧ್ಯಾಹ್ನದಲ್ಲಾಗಲೀ ವಿಹಾರ ಮಾಡುತ್ತಾ ಪ್ರಜೆಗಳ ಕಷ್ಟ-ಸುಖಗಳನ್ನು ತಿಳಿಯಬೇಕು. ಕಾರ್ಯಮಾಡಲು ಎಲ್ಲ ಸಮಯಗಳೂ ಉಪಯುಕ್ತವಾಗಿಯೇ ಇರುತ್ತವೆ. ಆದುದರಿಂದ ನೀನು ಆಯಾ ಕಾಲಗಳಲ್ಲಿ ವಸ್ತ್ರಾಭರಣಗಳಿಂದ ವಿಭೂಷಿತನಾಗಿ ಕಾರ್ಯಗಳನ್ನು ಆರಂಭಿಸಲು ಸಿದ್ಧನಾಗಿರಬೇಕು. ಚಕ್ರದೋಪಾದಿಯಲ್ಲಿ ಕಾರ್ಯಗಳು ಒಂದಾದರ ಮೇಲೊಂದರಂತೆ ನಿರಂತರವಾಗಿ ನಡೆಯುತ್ತಲೇ ಇರುತ್ತವೆ. ನ್ಯಾಯವಾದ ರೀತಿಯಲ್ಲಿ ನಾನಾಪ್ರಕಾರವಾದ ಧನ-ಕನಕ-ವಸ್ತುಗಳನ್ನು ಸಂಗ್ರಹಿಸಲು ಸದಾ ಪ್ರಯತ್ನಿಸುತ್ತಲೇ ಇರು. ಆದರೆ ಅನ್ಯಾಯವಾದ ಮಾರ್ಗದಿಂದ ಐಶ್ವರ್ಯವನ್ನು ಸಂಗ್ರಹಿಸುವುದನ್ನು ಪರಿತ್ಯಜಿಸು.

ರಾಜರಲ್ಲಿ ಪರಸ್ಪರವಾಗಿ ಛಿದ್ರವನ್ನುಂಟುಮಾಡುವ ವಿದ್ರೋಹಿಗಳು ಯಾರೆಂಬುದನ್ನು ಗೂಢಚಾರರ ಮೂಲಕವಾಗಿ ತಿಳಿದು ಅಂತಹವರನ್ನು ಆಪ್ತಪುರುಷರ ಮೂಲಕವಾಗಿ ದೂರದಿಂದಲೇ ನಿಗ್ರಹಿಸು. ಮೊದಲು ಭೃತ್ಯರ ಕಾರ್ಯಗಳನ್ನು ಚೆನ್ನಾಗಿ ಪರಿಶೀಲಿಸಿ ಸೇವಕರನ್ನು ನಿಯಮಿಸಿಕೊಳ್ಳಬೇಕು. ಕಾರ್ಯಕ್ಕೆ ನಿಯಮಿಸಿಕೊಂಡನಂತರ ಅವರು ಯೋಗ್ಯರೇ ಆಗಿರಲೀ, ಅಯೋಗ್ಯರೇ ಆಗಿರಲೀ–ಅವರಿಂದ ಕಾರ್ಯಗಳನ್ನು ಮಾಡಿಸಿಕೊಳ್ಳಬೇಕು. ನಿನ್ನ ಸೇನಾಪತಿಯು ಯಾವಾಗಲೂ ದೃಢಪ್ರತಿಜ್ಞನಾಗಿರಬೇಕು. ಶೂರನಾಗಿರಬೇಕು. ಕ್ಲೇಶಗಳನ್ನು ಸಹಿಸಿಕೊಳ್ಳುವವನಾಗಿರಬೇಕು. ಹಿತೈಷಿಯಾಗಿರಬೇಕು ಮತ್ತು ಸ್ವಾಮಿಭಕ್ತನೂ ಆಗಿರಬೇಕು. ಇಂತಹವನನ್ನೇ ನೀನು ಸೇನಾಪತಿಯನ್ನಾಗಿ ನಿಯಮಿಸಿಕೊಳ್ಳಬೇಕು. ಎತ್ತುಗಳಿಂದಲೂ ಕತ್ತೆಗಳಿಂದಲೂ ಕೆಲಸಗಳನ್ನು ಮಾಡಿಸಿಕೊಳ್ಳುವವನು ಅವುಗಳ ಭರಣ-ಪೋಷಣೆಗಳನ್ನು ಮಾಡುವಂತೆ–ರಾಜ್ಯದಲ್ಲಿ ನಿನ್ನ ಸಲುವಾಗಿ ಕೆಲಸಮಾಡುವ ಎಲ್ಲ ಕರ್ಮಚಾರಿಗಳ

ಭರಣ-ಪೋಷಣೆಗಳನ್ನು ನೀನು ನೋಡಿಕೊಳ್ಳಬೇಕು. ಯುಧಿಷ್ಠಿರ! ನೀನು ಯಾವಾಗಲೂ ನಿನ್ನಲ್ಲಿರುವ ದೋಷಗಳನ್ನೂ ನಿನ್ನ ಶತ್ರುಗಳಲ್ಲಿರುವ ದೋಷಗಳನ್ನೂ ತಿಳಿದುಕೊಳ್ಳುತ್ತಲೇ ಇರಬೇಕು. ನಿನ್ನ ದೇಶದಲ್ಲಿ ಹುಟ್ಟಿರುವ, ತಮ್ಮ-ತಮ್ಮ ಕರ್ಮಗಳಲ್ಲಿ ಕುಶಲರಾದ, ನಿನಗೆ ಹಿತರಾದ ಪುರುಷರನ್ನು ಅವರಿಗೆ ಅನುರೂಪವಾದ ಜೀವಿಕೆಗಳನ್ನು ಕಲ್ಪಿಸಿಕೊಟ್ಟು ಅನುಗ್ರಹಿಸಬೇಕು. ವಿದ್ವಾಂಸನಾದ ರಾಜನು ಉತ್ಕರ್ಷವನ್ನು ಬಯಸಿಬರುವ ವಿದ್ವಾಂಸರಿಗೆ ಪ್ರೋತ್ಸಾಹವನ್ನು ಕೊಡಬೇಕು. ಅಂತಹವರ ವಿಷಯದಲ್ಲಿ ಪುನಃ ವಿಚಾರಮಾಡಬೇಕಾಗಿಯೇ ಇಲ್ಲ. ಅವರು ಯಾವಾಗಲೂ ಪರ್ವತದಂತೆ ರಾಜನ ಹಿತದಲ್ಲಿಯೇ ಸ್ಥಿರಬುದ್ಧಿಯುಳ್ಳವರಾಗಿರುತ್ತಾರೆ.”

೫ನೆಯ ಅಧ್ಯಾಯವು ಮುಗಿಯಿತು.

೬ನೆಯ ಅಧ್ಯಾಯ

ಆಶ್ರಮವಾಸಪರ್ವ (ಮುಂದುವರಿದಿದೆ.)

ಧೃತರಾಷ್ಟ್ರನಿಂದ ರಾಜನೀತಿಯ ಉಪದೇಶ (೨)

ಧೃತರಾಷ್ಟ್ರನು ಹೇಳುತ್ತಾನೆ:

ಮಣ್ಡಲಾನಿ ಚ ಬುಧ್ಯೇಥಾಃ ಪರೇಷಾಮಾತ್ಮನಸ್ತಥಾ।
ಉದಾಸೀನಗಣಾನಾಂ ಚ ಮಧ್ಯಸ್ಥಾನಾಂ ಚ ಭಾರತ ॥೧॥

“ಭರತನಂದನನೇ! ನೀನು ನಿನ್ನ ವಿಷಯದಲ್ಲಿ ಮತ್ತು ನಿನ್ನ ಶತ್ರುಗಳ ವಿಷಯದಲ್ಲಿ (ಮಿತ್ರಶತ್ರುಗಳನ್ನು) ಉದಾಸೀನರಾಗಿರುವ ಅಥವಾ ಮಧ್ಯಸ್ಥರಾಗಿರುವ ರಾಜರ ಸಮೂಹಗಳನ್ನು ಗುರುತಿಸಿಕೊಳ್ಳಬೇಕು.

ಶತ್ರುಗಳಿಂದ ಉಂಟಾಗುವ ನಾಲ್ಕು ವಿಧವಾದ ಅಪಾಯಗಳನ್ನೂ ಆರು ಬಗೆಯ ಆತತಾಯಿಗಳಿಂದ* ಉಂಟಾಗುವ ಅಪಾಯಗಳನ್ನೂ ಮುಂದಾಗಿ ತಿಳಿದುಕೊಳ್ಳಬೇಕು. ಮಿತ್ರನು ಯಾರೆಂಬುದನ್ನೂ-ಶತ್ರುವಿನ ಮಿತ್ರನು ಯಾರೆಂಬುದನ್ನೂ ತಿಳಿದುಕೊಳ್ಳಬೇಕು. ಕುರುಶ್ರೇಷ್ಠನೇ! ಅಮಾತ್ಯರು, ಪ್ರಾಂತಗಳು, ವಿಧ-ವಿಧವಾದ ದುರ್ಗಗಳು ಮತ್ತು

---

*ಆತತಾಯೀ-ಕೊಂದುಹಾಕುವ ಪ್ರಯತ್ನದಲ್ಲಿರುವವನು- ಅಗ್ನಿದೋ ಗರದಶ್ಚೈವ ಶಸ್ತ್ರೋನ್ಮತ್ತೋ ಧನಾಪಹಃ। ಕ್ಷೇತ್ರದಾರಹರಶ್ಚೈತಾನ್ ಷಡ್ವಿದ್ಯಾದಾತತಾಯಿನಃ॥ ಬೆಂಕಿ-ವಿಷ-ಶಸ್ತ್ರಗಳಿಂದ ಕೊಲ್ಲುವವರು, ಭೂಮಿಯನ್ನೂ, ಹಣವನ್ನು, ಹೆಂಡತಿಯನ್ನೂ ಅಪಹರಿಸುವವರು–ಇವರಿಗೆ ಆತತಾಯಿಗಳೆಂದು ಹೆಸರು.

ಸೈನ್ಯ-ಇವುಗಳ ಮೇಲೆ ಶತ್ರುಗಳ ಲಕ್ಷ್ಯವು ಯಥೇಚ್ಛವಾಗಿರುತ್ತದೆ. ಆದುದರಿಂದ ಇವುಗಳ ರಕ್ಷಣೆಯಲ್ಲಿ ರಾಜನು ಸದಾ ಜಾಗರೂಕನಾಗಿರಬೇಕು. ಮೇಲ್ಕಂಡ ಹನ್ನೆರಡೂ ರಾಜರ ವಿಷಯಗಳಾಗುತ್ತವೆ.



ಮಂತ್ರಿಪ್ರಧಾನರು ಅರುವತ್ತು ಮತ್ತು ಮೇಲೆ ಹೇಳಿದ ಹನ್ನೆರಡು

ರಾಜಕಗಳು-ಇವುಗಳನ್ನು ಮಂಡಲಗಳೆಂದು[1] ನೀತಿಶಾಸ್ತ್ರಜ್ಞರು ಹೇಳುತ್ತಾರೆ. ಸಂಧಿ-ವಿಗ್ರಹಾದಿ ಆರು ಉಪಾಯಗಳ ಪ್ರಯೋಗವು ಈ ಮಂಡಲದ ಅಧೀನದಲ್ಲಿರುತ್ತದೆ. ರಾಜನು ಯಾವಾಗಲೂ ತನ್ನ ವೃದ್ಧಿ-ಕ್ಷಯಗಳನ್ನೂ ಮತ್ತು ಸ್ಥಿತಿಯನ್ನೂ ಶತ್ರುವಿನ ವೃದ್ಧಿ-ಕ್ಷಯಗಳನ್ನೂ ಮತ್ತು ಅದರ ಕಾರಣವನ್ನೂ ಯಾವಾಗಲೂ ತಿಳಿದುಕೊಳ್ಳುತ್ತಿರಬೇಕು. ಮೊದಲು ರಾಜಪ್ರಧಾನವಾದ ಹನ್ನೆರಡು, ಮಂತ್ರಿಪ್ರಧಾನವಾದ ಅರುವತ್ತು-ಈ ಎಪ್ಪತ್ತೆರಡನ್ನು[2] ತಿಳಿದುಕೊಳ್ಳಬೇಕು. ಬಳಿಕ ಸಂಧಿ, ವಿಗ್ರಹ, ಯಾನ, ಆಸನ, ದ್ವೈಧೀಭಾವ ಮತ್ತು ಸಮಾಶ್ರಯಗಳೆಂಬ ಆರು ಗುಣಗಳನ್ನು ಕಾಲೋಚಿತವಾಗಿ ಪ್ರಯೋಗಿಸಬೇಕು. ಯಾವಾಗ ಸ್ವಪಕ್ಷವು ಬಲವಾಗಿರುವುದೋ ಹಾಗೆಯೇ ಶತ್ರುಪಕ್ಷವು ದುರ್ಬಲವಾಗಿರುವುದೋ–ಆ ಸಮಯದಲ್ಲಿ ಶತ್ರುರಾಜನೊಂದಿಗೆ ಪ್ರಯತ್ನಪೂರ್ವಕವಾಗಿ ಯುದ್ಧಮಾಡಿ ಅವನನ್ನು ಜಯಿಸಬೇಕು. ಯಾವಾಗ ಶತ್ರುವಿನ ಪಕ್ಷವು ಬಲಿಷ್ಠವಾಗಿರುವುದೋ ಮತ್ತು ತನ್ನ ಪಕ್ಷವು ದುರ್ಬಲವಾಗಿರುವುದೋ–ಆಗ ಕ್ಷೀಣಬಲವುಳ್ಳ ವಿದ್ವಾಂಸನು ಅಧಿಕಬಲಶಾಲಿಯಾದ ಶತ್ರುವಿನೊಡನೆ ಸಂಧಿಯನ್ನು ಮಾಡಿಕೊಳ್ಳಬೇಕು. ರಾಜನಾದವನು ಯಾವಾಗಲೂ ಅಪಾರವಾದ ದ್ರವ್ಯವನ್ನು ಸಂಗ್ರಹಿಸುತ್ತಲೇ ಇರಬೇಕು. ಯಾವಾಗ ರಾಜನು ಶತ್ರುವನ್ನು ಆಕ್ರಮಿಸಲು ಸಮರ್ಥನಾಗುವನೋ–ಆಗಲೇ ಅವನು ಸಾವಕಾಶಮಾಡದೇ ಆಕ್ರಮಣಮಾಡಬೇಕು. ಆ ಸಮಯದಲ್ಲಿ ಎಲ್ಲರೂ ವಿಧೇಯರಾಗಿರುವಂತೆ

---

[1]ನಾಲ್ಕು ಮೂಲಪ್ರಕೃತಿಗಳೇ ಮಂಡಲವೆಂದು ಮಯನ ಮತ. ವಿಜಿಗೀಷು, ಅರಿ, ಮಿತ್ರ, ಪಾರ್ಷ್ಣಿಗ್ರಾಹ, ಮಧ್ಯಮ, ಉದಾಸೀನ-ಇವರು ಆರು ಮಂಡಲ ಎನಿಸುತ್ತಾರೆ ಎಂಬುದು ಪುಲೋಮ ಮತ್ತು ಇಂದ್ರರ ಮತ. ಹನ್ನೆರಡು ಸೇರಿ ಮಂಡಲ ಎನ್ನುವುದು ಶುಕ್ರರ ಮತ. ವಿಜಿಗೀಷು, ಮಿತ್ರ, ಮಿತ್ರನಮಿತ್ರ ಎಂಬ ಮೂರರಲ್ಲಿ ಒಂದೊಂದೂ ಅಮಾತ್ಯ, ಜನಪದ, ದುರ್ಗ, ಕೋಶ, ದಂಡ, ಪ್ರಕೃತಿ-ಎಂಬುದರೊಡನೆ ಸೇರಿ ಒಟ್ಟು ಅಷ್ಟಾದಶಮಂಡಲ-ಎಂದು ಕೌಟಿಲ್ಯರು ಹೇಳುತ್ತಾರೆ.

[2]ಎಪ್ಪತ್ತೆರಡನ್ನು ವ್ಯಾಖ್ಯಾನಕಾರರು ಹೀಗೆ ವಿವರಿಸಿದ್ದಾರೆ. ಶತ್ರುಜಾತಗಳು ೪; ಆತತಾಯಿಗಳು ೬; ಮಿತ್ರ-ಅಮಿತ್ರಮಿತ್ರರು ೨; ಕೃಷ್ಯಾದಿಗಳು ೮; ಬಾಲಾದಿ ಅಸಂಧೇಯ ಕರ್ಮಗಳು ೨೦; ನಾಸ್ತಿಕ್ಯಾದಿ ದೋಷಗಳು ೧೪; ಮಂತ್ರವೇ ಮೊದಲಾದ ತೀರ್ಥಗಳು ೧೮.

ನೋಡಿಕೊಳ್ಳಬೇಕು ಮತ್ತು ಸೇನಾನಾಯಕರ ಸ್ಥಾನಗಳನ್ನು ವಿಭಾಗಿಸಬಾರದು. ಒಂದು ವೇಳೆ ಸೋತುಬಿಟ್ಟರೆ ಅಲ್ಪಫಲಕೊಡುವ ಭೂಮಿಯನ್ನೂ, ಹಿತ್ತಾಳೆ-ತಾಮ್ರಲೋಹಗಳನ್ನು ಬೆರೆಸಿದ ಚಿನ್ನವನ್ನೂ, ಕ್ಷೀಣನಾದ ಮಿತ್ರನನ್ನೂ ಮತ್ತು ಸೈನ್ಯವನ್ನೂ ಕೊಟ್ಟು ಶತ್ರುವಿನೊಡನೆ ಸಂಧಿಯನ್ನು ಮಾಡಿಕೊಳ್ಳಬೇಕು.

ಶತ್ರುವಿಗೇನಾದರೂ ವೈಪರೀತ್ಯವುಂಟಾಗಿ (ಪರಾಜಯವುಂಟಾಗಿ) ಸಂಧಿಗೆ ಅಪೇಕ್ಷಿಸಿದರೆ ಸಂಧಿವಿಶಾರದನಾದ ಪುರುಷನು ಸಂಧಿಯ ಸಲುವಾಗಿ ಧನ-ಕನಕ-ಸೈನ್ಯಗಳ ಜೊತೆಯಲ್ಲಿ ರಾಜಪುತ್ರನನ್ನೇ ಒತ್ತೆಇಡುವಂತೆ ಕೇಳಬೇಕು. ಅಂತಹ ಸಂದರ್ಭದಲ್ಲಿ ಇದಕ್ಕೆ ವಿಪರೀತವಾಗಿ ಮೃದುತ್ವದಿಂದ ವರ್ತಿಸುವುದು ಶ್ರೇಯಸ್ಕರವಲ್ಲ. ಯಾವುದಾದರೂ ಆಪತ್ತು ಸಂಭವಿಸಿದಲ್ಲಿ ಉಪಾಯಮಂತ್ರಣಗಳನ್ನು ತಿಳಿದವನು ಆ ರಾಜಕುಮಾರನನ್ನು ವಿನಾಶಗೊಳಿಸಲೂ ಪ್ರಯತ್ನಿಸಬೇಕು. ಶತ್ರುಪಕ್ಷದ ಪ್ರಕೃತಿಗಳಾದ ಸ್ವಾಮಿ, ಅಮಾತ್ಯ, ಸುಹೃತ್, ಕೋಶ, ರಾಷ್ಟ್ರ, ದುರ್ಗ, ಸೈನ್ಯ ಮತ್ತು ಪೌರರು-ಇವುಗಳ ಶಕ್ತಿಯು ಕುಂದಿದೆಯೇ ಎಂಬುದನ್ನು ತಿಳಿದುಕೊಳ್ಳಬೇಕು. ಹಾಗೆ ತಿಳಿದುಕೊಂಡನಂತರ ಮಹಾಬಲಿಷ್ಠನಾದ ರಾಜನು ಶತ್ರುವಿನ ನಿರ್ಮೂಲನಕ್ಕಾಗಿ ಅನುಕ್ರಮವಾಗಿ ಅಥವಾ ಒಂದೇ ಬಾರಿಗೆ ಎಲ್ಲ ಕಾರ್ಯಗಳನ್ನೂ ಪ್ರಾರಂಭಿಸಬೇಕು. ಶತ್ರುವಿಗೆ ನಾನಾಪ್ರಕಾರವಾದ ಕಷ್ಟಗಳನ್ನು ಕೊಡಬೇಕು. ಅವನ ಗತಿಯನ್ನು ನಿರೋಧಿಸಬೇಕು. ಭಂಡಾರವನ್ನು ಧ್ವಂಸಗೊಳಿಸಬೇಕು. ತನ್ನ ರಾಜ್ಯವನ್ನು ರಕ್ಷಿಸಿಕೊಳ್ಳಲು ಬಯಸುವ ರಾಜನು ಶತ್ರುಗಳ ವಿನಾಶವನ್ನು ಪ್ರಯತ್ನಪೂರ್ವಕವಾಗಿ ಮಾಡಬೇಕು. ಆದರೆ ತನ್ನ ವೃದ್ಧಿಯನ್ನು ಬಯಸುವ ರಾಜನು, ಶರಣಾಗತನಾಗಿ ಬಂದ ಸಾಮಂತರಾಜನನ್ನು ಯಾವುದೇ ಕಾರಣದಿಂದಲೂ ಹಿಂಸಿಸಬಾರದು.

ವಿಶ್ವವನ್ನು ಜಯಿಸಲು ಬಯಸಿರುವ ರಾಜನು ಸಾಮಂತರಾಜನನ್ನು ಹಿಂಸಿಸಬಾರದು. ಮಂತ್ರಿಗಳೊಡನೆ ಸಮಾಲೋಚಿಸಿ ಬಲಿಷ್ಠನಾದ ಶತ್ರುವಿನ ಸೈನಿಕರಲ್ಲಿ ಭೇದಭಾವವನ್ನುಂಟುಮಾಡಲು ಉಪಾಯ ವನ್ನು ಕಲ್ಪಿಸಬೇಕು. ಸತ್ಪುರುಷರನ್ನು ಸಂಗ್ರಹಿಸಿಕೊಳ್ಳುತ್ತಲೇ ಇರಬೇಕು.

ಪಾಪಿಷ್ಠರನ್ನು ನಿಗ್ರಹಿಸುತ್ತಲೇ ಇರಬೇಕು. ಬಲಿಷ್ಠನಾದ ರಾಜನು ಯಾವಾಗಲೂ ದುರ್ಬಲರಾದ ರಾಜರನ್ನು ಬೆನ್ನಟ್ಟಿಹೋಗಬಾರದು. ಬಲಿಷ್ಠನಾದ ರಾಜನೇನಾದರೂ ದುರ್ಬಲನಾದ ರಾಜನನ್ನು ಆಕ್ರಮಿಸಲು ಬಂದರೆ ದುರ್ಬಲನಾದ ರಾಜನು ವೈತಸೀ ವೃತ್ತಿಯನ್ನು* ಆಶ್ರಯಿಸಬೇಕು. (ವಿನಮ್ರನಾಗಿರಬೇಕು.) ಸಾಮ-ದಾನಗಳೇ ಮುಂತಾದ ಉಪಾಯಗಳಿಂದ ಅವನನ್ನು ಹಿಂದಿರುಗಿ ಹೋಗುವಂತೆ ಮಾಡಬೇಕು. ಹಾಗೇನಾದರೂ ಸಾಮ-ದಾನಾದ್ಯುಪಾಯಗಳಿಂದ ಶತ್ರುವನ್ನು ಹಿಂದಿರುಗಿಸಲು ಸಾಧ್ಯವಾಗ ದಿದ್ದರೆ–ಮಂತ್ರಿಗಳು, ಕೋಶ, ಪೌರರು, ದಂಡ, ಪ್ರಿಯವನ್ನುಂಟು ಮಾಡುವವರು-ಇವರೊಡನೆ ಸೇರಿಕೊಂಡು ಶತ್ರುವಿನೊಡನೆ ಯುದ್ಧವನ್ನು ಮಾಡಬೇಕು. ಮುಖ್ಯರೊಡನೆ (ಬಲಿಷ್ಠನಾದ ರಾಜನೊಡನೆ) ಯುದ್ಧಕ್ಕೆ ತೊಡಗಿದಾಗ ಶತ್ರುರಾಜನನ್ನು ಹಿಂದಕ್ಕಟ್ಟುವುದಾಗಲೀ ಪರಾಜಯ ಗೊಳಿಸುವುದಾಗಲೀ ಅಸಂಭವವಾದರೆ ಯುದ್ಧಮಾಡುತ್ತಾ ಶರೀರತ್ಯಾಗ ಮಾಡುವುದರಿಂದ ಮುಕ್ತಿಯಾದರೂ ಲಭಿಸುತ್ತದೆ."

೬ನೆಯ ಅಧ್ಯಾಯವು ಮುಗಿಯಿತು.

೭ನೆಯ ಅಧ್ಯಾಯ ಆಶ್ರಮವಾಸಪರ್ವ (ಮುಂದುವರಿದಿದೆ.)

ಧೃತರಾಷ್ಟ್ರನಿಂದ ರಾಜನೀತಿಯ ಉಪದೇಶ (೩)

ಧೃತರಾಷ್ಟ್ರನು ಮುಂದುವರಿದು ಹೇಳುತ್ತಾನೆ:

ಸಂಧಿವಿಗ್ರಹಮಪ್ಯತ್ರ ಪಶ್ಯೇಥಾ ರಾಜಸತ್ತಮ ।
ದ್ವಿಯೋನಿಂ ವಿವಿಧೋಪಾಯಂ ಬಹುಕಲ್ಪಂ ಯುಧಿಷ್ಠಿರ ॥೧॥

"ರಾಜಶ್ರೇಷ್ಠನೇ! ಸಂಧಿ ಮತ್ತು ವಿಗ್ರಹಗಳ ವಿಷಯದಲ್ಲಿಯೂ ನೀನು ಚೆನ್ನಾಗಿ ಪರಿಶೀಲಿಸಿ ಕಾರ್ಯಮಾಡಬೇಕು. ಶತ್ರುವು ಪ್ರಬಲನಾಗಿ ಕಂಡರೆ

---

*ವೇತಸಃ=ಜೊಂಡುಹುಲ್ಲು; (ಹಬ್ಬೇಗಿಡ) ವೇತಸೋ ವಿದುಳೋ ನಮ್ರಃ (ಅಭಿ) ನದಿಯ ದಂಡೆಯಲ್ಲಿ ಬೆಳೆಯುವ ಈ ಹುಲ್ಲು ಪ್ರವಾಹವು ಬಂದ ಕಾಲದಲ್ಲಿ ಬಗ್ಗಿಕೊಳ್ಳುತ್ತದೆ. ಸೆಟೆದು ನಿಂತಿರುವುದಿಲ್ಲ. ಆದುದರಿಂದ ಅದು ಪ್ರವಾಹದಲ್ಲಿ ಕೊಚ್ಚಿ ಹೋಗುವುದಿಲ್ಲ. ಪ್ರವಾಹವು ಕಡಿಮೆಯಾದನಂತರ ಸೆಟೆದು ನಿಲ್ಲುತ್ತದೆ. ಹಾಗೆಯೇ ದುರ್ಬಲನಾದವನು ಪ್ರಬಲನು ಆಕ್ರಮಿಸಲು ಬಂದಾಗ ವಿನಮ್ರನಾಗಿರಬೇಕು. ಇದಕ್ಕೆ ವೈತಸೀವೃತ್ತಿಯೆಂದು ಹೆಸರು.

ಅವನೊಡನೆ ಸಂಧಿಯನ್ನು ಮಾಡಿಕೊಳ್ಳಬೇಕು. ದುರ್ಬಲನಾಗಿ ಕಂಡರೆ ಯುದ್ಧವನ್ನು ಮಾಡಬೇಕು. ಸಂಧಿ-ವಿಗ್ರಹಗಳು ಎರಡು ಕಾರಣವುಳ್ಳದ್ದಾಗಿವೆ. ವಿಧ-ವಿಧವಾದ ಉಪಾಯಗಳಿಂದ ಕೂಡಿವೆ. ಬಹುಪ್ರಕಾರವಾಗಿವೆ. ನಿನ್ನಲ್ಲಿರುವ ದ್ವೈವಿಧ್ಯವನ್ನು (ಬಲಾಬಲಗಳನ್ನು) ತಿಳಿದುಕೊಂಡು ಅವನು ನಿನಗಿಂತಲೂ ಬಲಿಷ್ಠನಾಗಿದ್ದರೆ ಅವನನ್ನು ಗೌರವಿಸಬೇಕು. ತುಷ್ಟ-ಪುಷ್ಟವಾದ ಸೈನ್ಯವನ್ನು ಹೊಂದಿರುವ ಶತ್ರುವು ಬಲಶಾಲಿಯೆಂದು ಭಾವಿಸಿಕೊಳ್ಳಬೇಕು. ನೀನು ಶತ್ರುವನ್ನು ಗೌರವಿಸಲು ಹೋದಾಗ ವಿಪರೀತವಾದ ನಿಬಂಧನೆಗಳನ್ನೇ ಅವನು ನಿನ್ನ ಮೇಲೆ ವಿಧಿಸುತ್ತಾನೆ. ಅನಿವಾರ್ಯವಾಗಿ ಯುದ್ಧಮಾಡಬೇಕಾಗಿ ಬಂದಾಗ ಪಲಾಯನಮಾಡುವುದೇ ಸೂಕ್ತವಾಗುವುದು. ಬುದ್ಧಿವಂತನಾದ ರಾಜನು ಶತ್ರುವಿನಿಂದ ದೂರವಾಗಿಯೇ ಇದ್ದುಕೊಂಡು ಅವನಿಗೆ ನಾನಾರೀತಿಗಳಿಂದ ವ್ಯಸನವನ್ನುಂಟುಮಾಡಬೇಕು. (ಬೇಟೆಯಾಡುವುದು, ಜೂಜಾಡುವುದು, ಸ್ತ್ರೀಲಂಪಟತ್ವ–ಇತ್ಯಾದಿ ವ್ಯಸನಗಳಲ್ಲಿ ತೊಡಗುವಂತೆ ಮಾಡಬೇಕು.) ಅವನ ಪ್ರಕೃತಿಗಳಲ್ಲಿ ಭೇದಭಾವವುಂಟಾಗುವಂತೆ ಮಾಡಬೇಕು. ಅವನ ಮಿತ್ರರಿಗೂ ಅವನಿಗೂ ಭೇದವನ್ನು ಕಲ್ಪಿಸಬೇಕು. ನಾನಾರೀತಿಗಳಲ್ಲಿ ಅವನನ್ನು ಪೀಡಿಸಬೇಕು. ಭಯವನ್ನುಂಟುಮಾಡಬೇಕು. ಅವನು ಬೇರೆಯವರೊಡನೆ ಮಾಡುವ ಯುದ್ಧದಲ್ಲಿ ಸೈನ್ಯವೆಲ್ಲವೂ ಕ್ಷೀಣಿಸುವಂತೆ ಮಾಡಬೇಕು. ಶಾಸ್ತ್ರವಿಶಾರದನಾದ ರಾಜನು ಶತ್ರುಗಳು ಮೇಲೆ ಆಕ್ರಮಣಕ್ಕೆ ಹೊರಡುವ ಮೊದಲು ತನ್ನ ಮತ್ತು ಶತ್ರುವಿನ ಮೂರು ವಿಧವಾದ ಶಕ್ತಿಗಳ ಬಗೆಗೆ ಪರ್ಯಾಲೋಚಿಸಬೇಕು. ಉತ್ಸಾಹಶಕ್ತಿ, ಪ್ರಭುಶಕ್ತಿ ಮತ್ತು ಮಂತ್ರಶಕ್ತಿ-ಈ ಮೂರು ಶಕ್ತಿಗಳಿಂದ ಸಂಪನ್ನನಾಗಿದ್ದರೆ ರಾಜನು ಶತ್ರುವಿನ ಮೇಲೆ ಆಕ್ರಮಣನಡೆಸಲು ಪ್ರಯಾಣಮಾಡಬಹುದು. ಈ ಮೂರು ಶಕ್ತಿಗಳೂ ಇಲ್ಲದಿದ್ದರೆ ಆಕ್ರಮಿಸಲು ಹೋಗಬಾರದು.

ಆದದೀತ ಬಲಂ ರಾಜಾ ಮೌಲಂ ಮಿತ್ರಬಲಂ ತಥಾ।
ಅಟವೀಬಲಂ ಭೃತಂ ಚೈವ ತಥಾ ಶ್ರೇಣೀಬಲಂ ಪ್ರಭೋ ॥೭॥

ವಿಜಯವನ್ನು ಅಪೇಕ್ಷಿಸುವ ರಾಜನು–ಸೈನ್ಯಬಲ, ಧನಬಲ, ಮಿತ್ರಬಲ, ಅರಣ್ಯದ ಬಲ, ಸೇವಕರ ಬಲ ಮತ್ತು ಶಿಲ್ಪಿಗಳ ಬಲ–ಇವುಗಳನ್ನು ಸಂಗ್ರಹಿಸಬೇಕು.

ತತ್ರ ಮಿತ್ರಬಲಂ ರಾಜನ್ಮೌಲಂ ಚೈವ ವಿಶಿಷ್ಯತೇ।
ಶ್ರೇಣೀಬಲಂ ಭೃತಂ ಚೈವ ತುಲ್ಯೇ ಏವೇತಿ ಮೇ ಮತಿಃ ॥೮॥

ಇವುಗಳಲ್ಲಿ ಮಿತ್ರಬಲ ಮತ್ತು ಧನಬಲಗಳು ವಿಶಿಷ್ಟವಾದುವುಗಳು. ಶಿಲ್ಪಿಬಲ ಮತ್ತು ವೇತನವನ್ನು ಕೊಟ್ಟು ಇಟ್ಟುಕೊಂಡಿರುವ ಸೈನ್ಯಗಳು ಸಮಾನವೆಂದೇ ನನ್ನ ಭಾವನೆಯಾಗಿದೆ.

ತಥಾ ಚಾರಬಲಂ ಚೈವ ಪರಸ್ಪರಸಮಂ ನೃಪ।
ವಿಜ್ಞೇಯಂ ಬಹುಕಾಲೇಷು ರಾಜ್ಞಾ ಕಾಲ ಉಪಸ್ಥಿತೇ ॥೯॥

ಚಾರಬಲ ಮತ್ತು ಭೃತ್ಯಬಲಗಳು ಪರಸ್ಪರವಾಗಿ ಸಮಾನವಾಗಿಯೇ ಇರುತ್ತವೆ. ಅನೇಕ ವರ್ಷಗಳಿಗೊಮ್ಮೆ ಯುದ್ಧಕಾಲವು ಸನ್ನಿಹಿತವಾಗುವುದರಿಂದ ರಾಜನು ಈ ಎಲ್ಲ ವಿಷಯಗಳನ್ನೂ ತಿಳಿದುಕೊಂಡಿರಬೇಕು. ರಾಜನಾದವನಿಗೆ ಅನೇಕವಿಧವಾದ ಆಪತ್ತುಗಳು ಒದಗಿಬರುತ್ತವೆ. ಅವೆಲ್ಲವನ್ನೂ ತಿಳಿದುಕೊಂಡಿರಬೇಕು. ಅವುಗಳನ್ನು ಪ್ರತ್ಯೇಕ-ಪ್ರತ್ಯೇಕವಾಗಿಯೇ ಹೇಳುವೆನು, ಕೇಳು. ಆಪತ್ತುಗಳ ದೋಷಗಳು ಬಹಳವಾಗಿವೆ. ಸಾಮ-ದಾನಾದಿ ಉಪಾಯಗಳಿಂದ ಅವನ್ನು ಉಪಶಮನಗೊಳಿಸಬೇಕು. ದೇಶ-ಕಾಲಗಳ ಅನುಕೂಲತೆಗಳನ್ನು ವಿವೇಚಿಸಿ, ಸೈನಿಕ ಬಲ ಮತ್ತು ರಾಜೋಚಿತವಾದ ಗುಣಗಳಿಂದ ಕೂಡಿರುವ ರಾಜನು ನುರಿತ ಸೇನೆಯೊಡನೆ ವಿಜಯಯಾತ್ರೆಗೆ ಹೋಗಬಹುದು. ತನ್ನ ಅಭ್ಯುದಯದಲ್ಲಿಯೇ ನಿರತನಾದ ರಾಜನು ದುರ್ಬಲನಾಗಿರದಿದ್ದರೆ, ಹೃಷ್ಟವಾದ ಮತ್ತು ಪುಷ್ಟವಾದ ಸೈನ್ಯವನ್ನು ಹೊಂದಿದ್ದರೆ–ಯುದ್ಧಕ್ಕೆ ಯೋಗ್ಯವಲ್ಲದ ಋತುವಿನಲ್ಲಾದರೂ ಶತ್ರುವಿನೊಡನೆ ಯುದ್ಧಮಾಡಲು ಹೋಗಬಹುದು.

ತೂಣಾಶ್ಮಾನಂ ವಾಜಿರಥಪ್ರವಾಹಾಂ
ಧ್ವಜದ್ರುಮೈಃ ಸಂವೃತಕೂಲರೋಧಸಮ್।
ಪದಾತಿನಾಗೈರ್ಬಹುಕರ್ದಮಾಂ ನದೀಂ
ಸಪತ್ನನಾಶೇ ನೃಪತಿಃ ಪ್ರಯೋಜಯೇತ್ ॥೧೪॥

ರಾಜನಾದವನು ಶತ್ರುವಿನ ವಿನಾಶಕ್ಕಾಗಿ ಬತ್ತಳಿಕೆಗಳೇ ಬಂಡೆಗಳ

ರೂಪದಲ್ಲಿರುವ, ಕುದುರೆ ಮತ್ತು ರಥಗಳೇ ಪ್ರವಾಹರೂಪದಲ್ಲಿರುವ, ಧ್ವಜಗಳೆಂಬ ವೃಕ್ಷಗಳಿಂದ ಸಮಾಕುಲವಾದ ತೀರಪ್ರದೇಶಗಳಿಂದ ಕೂಡಿರುವ, ಪದಾತಿ ಮತ್ತು ಗಜಸೈನ್ಯಗಳೇ ಕೆಸರಿನ ರೂಪದಲ್ಲಿರುವ ನದಿಯನ್ನು ಹರಿಯಬಿಡಬೇಕು.

ಯುದ್ಧಸಮಯದಲ್ಲಿ ಯುಕ್ತಿಯನ್ನು ಉಪಯೋಗಿಸಿ ಶಕಟವ್ಯೂಹವನ್ನಾಗಲೀ, ಪದ್ಮವ್ಯೂಹವನ್ನಾಗಲೀ, ವಜ್ರವ್ಯೂಹವನ್ನಾಗಲೀ ರಚಿಸಬೇಕು. ಶುಕ್ರಾಚಾರ್ಯರು ರಚಿಸಿರುವ ನೀತಿಶಾಸ್ತ್ರದಲ್ಲಿ ಇದರ ವಿಧಾನವು ಹೇಳಲ್ಪಟ್ಟಿದೆ. ಗುಪ್ತಚಾರರ ಮೂಲಕವಾಗಿ ಶತ್ರುಸೈನ್ಯದ ಬಲಾಬಲಗಳನ್ನು ತಿಳಿದುಕೊಂಡು, ತನ್ನ ಸೈನ್ಯದ ಬಲವನ್ನೂ ಪರೀಕ್ಷಿಸಿ, ತನ್ನ ಭೂಮಿಯಲ್ಲಾಗಲೀ ಶತ್ರುವಿನ ಭೂಮಿಯಲ್ಲಾಗಲೀ ಯುದ್ಧವನ್ನು ಆರಂಭಿಸಬೇಕು. ರಾಜನು ಪಾರಿತೋಷಿಕಗಳ ಮೂಲಕವಾಗಿ ಸೈನಿಕರನ್ನು ಸಂತುಷ್ಟಗೊಳಿಸಬೇಕು. ಸೈನ್ಯಕ್ಕೆ ಬಲಿಷ್ಠರಾದವರನ್ನು ಸೇರಿಸಿಕೊಳ್ಳಬೇಕು. ತನ್ನ ಬಲಾಬಲಗಳನ್ನು ಚೆನ್ನಾಗಿ ಪರೀಕ್ಷಿಸಿಕೊಂಡನಂತರ ಶತ್ರುವಿನೊಡನೆ ಸಾಮ-ದಾನಾದಿ ಉಪಾಯಗಳಿಂದ ಸಂಧಿಯನ್ನಾದರೂ ಮಾಡಿಕೊಳ್ಳಬಹುದು. ಯುದ್ಧವನ್ನಾದರೂ ಮಾಡಬಹುದು. ರಾಜನಾದವನು ಸರ್ವಪ್ರಕಾರಗಳಿಂದಲೂ ಶರೀರವನ್ನು ರಕ್ಷಿಸಿಕೊಳ್ಳಬೇಕು. ಈ ಶರೀರದ ಮೂಲಕವಾಗಿಯೇ ಇಹಲೋಕ-ಪರಲೋಕಗಳೆರಡರಲ್ಲಿಯೂ ಉತ್ತಮವಾದ ಶ್ರೇಯಸ್ಸನ್ನು ಸಾಧಿಸಿಕೊಳ್ಳುವುದು ರಾಜನ ಕರ್ತವ್ಯವಾಗಿದೆ. ಯಾವ ರಾಜನು ಈ ವಿಷಯಗಳೆಲ್ಲವನ್ನೂ ಚೆನ್ನಾಗಿ ಮನನಮಾಡಿಕೊಂಡು ಅದರಂತೆ ನಡೆಯುವನೋ ಮತ್ತು ಪ್ರಜೆಗಳನ್ನು ಧರ್ಮದಿಂದ ಪರಿಪಾಲಿಸುವನೋ–ಅವನು ಮೃತನಾದ ಬಳಿಕ ಸ್ವರ್ಗಕ್ಕೆ ಹೋಗುತ್ತಾನೆ. ಇಹ-ಪರಗಳೆರಡರಲ್ಲಿಯೂ ಸುಖವನ್ನು ಹೊಂದಲು ನೀನು ಯಾವಾಗಲೂ ಪ್ರಜೆಗಳ ಹಿತದಲ್ಲಿಯೇ ಆಸಕ್ತನಾಗಿರಬೇಕು. ಭೀಷ್ಮ-ಕೃಷ್ಣ-ವಿದುರರು ನಿನಗೆ ಎಲ್ಲವನ್ನೂ ಹೇಳಿದ್ದಾರೆ. ನಿನ್ನ ಮೇಲಿನ ಪ್ರೀತಿಯಿಂದಾಗಿ ನಾನೂ ಕೆಲವು ವಿಷಯಗಳನ್ನು ಹೇಳುವುದು ಅವಶ್ಯವೆಂದು ಭಾವಿಸಿ ಹೇಳಿದ್ದೇನೆ. ಯಜ್ಞಗಳಲ್ಲಿ ಅಪಾರ

ವಾದ ದಕ್ಷಿಣೆಗಳನ್ನು ಕೊಡುವವನೇ! ನಾನು ಹೇಳಿರುವುದೆಲ್ಲವನ್ನೂ ಯಥೋಚಿತವಾಗಿ ಪಾಲಿಸು. ಇದರಿಂದ ನೀನು ಪ್ರಜೆಗಳಿಗೂ ಪ್ರಿಯನಾಗುವೆ. ಸ್ವರ್ಗದಲ್ಲಿಯೂ ಸುಖವನ್ನು ಹೊಂದುವೆ.

ಸಾವಿರ ಅಶ್ವಮೇಧಗಳನ್ನು ಮಾಡುವ ರಾಜನಿಗೆ ಲಭಿಸುವ ಫಲವೂ, ಧರ್ಮದಿಂದ ಪ್ರಜೆಗಳನ್ನು ರಕ್ಷಿಸುವವನಿಗೆ ಲಭಿಸುವ ಫಲವೂ ಒಂದೇ ಆಗಿರುತ್ತದೆ."

ಽನೆಯ ಅಧ್ಯಾಯವು ಮುಗಿಯಿತು.

ಽನೆಯ ಅಧ್ಯಾಯ — ಆಶ್ರಮವಾಸಪರ್ವ (ಮುಂದುವರಿದಿದೆ.)

ಧೃತರಾಷ್ಟ್ರನು ಅರಣ್ಯವಾಸಕ್ಕೆ ಹೊರಡಲು ಕುರುಜಾಂಗಲದೇಶದ ಪ್ರಜೆಗಳ ಅನುಮತಿಯನ್ನು ಕೇಳಿದುದು.

ಯುಧಿಷ್ಠಿರನು ಹೇಳುತ್ತಾನೆ:

ಏವಮೇತತ್ಕರಿಷ್ಯಾಮಿ ಯಥಾತ್ಥ ಪೃಥಿವೀಪತೇ।
ಭೂಯಶ್ಚೈವಾನುಶಾಸ್ಯೋಽಹಂ ಭವತಾ ಪಾರ್ಥಿವರ್ಷಭ ॥೧॥

"ಪೃಥಿವೀಪತಿಯೇ! ರಾಜಶ್ರೇಷ್ಠನೇ! ನೀನು ಹೇಳಿದಂತೆಯೇ ಮಾಡುತ್ತೇನೆ. ಇನ್ನೂ ಹೆಚ್ಚಿನ ಉಪದೇಶವನ್ನು ನಾನು ಬಯಸುತ್ತೇನೆ.

ಭೀಷ್ಮನು ಸ್ವರ್ಗಕ್ಕೆ ಹೊರಟುಹೋದನು. ಮಧುಸೂದನನು ದ್ವಾರಕೆಗೆ ತೆರಳಿದನು. ವಿದುರ-ಸಂಜಯರಿಬ್ಬರೂ ನಿನ್ನ ಜೊತೆಯಲ್ಲಿಯೇ ಇರುವರು. ಈ ಸಮಯದಲ್ಲಿ ನೀನಲ್ಲದೇ ಧಾರ್ಮಿಕವಿಷಯಗಳನ್ನು ಹೇಳಲು ಯೋಗ್ಯರಾದವರು ಬೇರೆ ಯಾರಿದ್ದಾರೆ? ನೀನು ನನ್ನ ಹಿತದಲ್ಲಿಯೇ ಆಸಕ್ತನಾಗಿ ಈಗ ಯಾವುದನ್ನು ಉಪದೇಶಿಸುವೆಯೋ ಅದನ್ನು ನಾನು ಪರಿಪಾಲಿಸುತ್ತೇನೆ. ಸಮಾಧಾನದಿಂದಿರು."

ಜನಮೇಜಯ! ಧೀಮಂತನಾದ ಯುಧಿಷ್ಠಿರನು ರಾಜರ್ಷಿಯಾದ ಧೃತರಾಷ್ಟ್ರನಿಗೆ ಹೀಗೆ ಹೇಳಲು, ಧೃತರಾಷ್ಟ್ರನು ಯುಧಿಷ್ಠಿರನಿಗೆ ಹೊರಡಲು ಅನುಮತಿಯನ್ನು ಸೂಚಿಸುವ ಸಲುವಾಗಿ–"ಯುಧಿಷ್ಠಿರ! ಶಾಂತನಾಗು. (ನನ್ನಿಂದ ಇನ್ನೂ ಹೆಚ್ಚು ವಿಷಯಗಳನ್ನು ಕೇಳಲು ತವಕಪಡಬೇಡ.) ನನಗೂ ಕೂಡ ಮಾತನಾಡಿ ಬಹಳ ಆಯಾಸವಾಗಿದೆ"–ಎಂದು ಹೇಳುತ್ತಾ

ಗಾಂಧಾರಿಯ ಮನೆಗೆ ಪ್ರವೇಶಿಸಿದನು. ಪ್ರಜಾಪತಿಸದೃಶನಾದ ಧೃತರಾಷ್ಟ್ರನು ಮನೆಯೊಳಗೆ ಬಂದು ಆಸನದಲ್ಲಿ ಕುಳಿತನಂತರ ಧರ್ಮಚಾರಿಣಿಯಾದ ಕಾಲಜ್ಞಳಾದ ಗಾಂಧಾರೀದೇವಿಯು ಪತಿಗೆ ತತ್ಕಾಲೋಚಿತವಾದ ಈ ಮಾತನ್ನು ಹೇಳಿದಳು:

"ಪತಿದೇವನೇ! ಮಹರ್ಷಿಗಳಾದ ವ್ಯಾಸರೇ ಅರಣ್ಯಕ್ಕೆ ಹೋಗಲು ಸ್ವತಃ ನಿನಗೆ ಅನುಮತಿಯನ್ನಿತ್ತಿದ್ದಾರೆ. ಯುಧಿಷ್ಠಿರನೂ ಅನುಮತಿಸಿದ್ದಾನೆ. ಯಾವಾಗ ಅರಣ್ಯಕ್ಕೆ ಹೊರಡುವೆ?"

ಧೃತರಾಷ್ಟ್ರನು ಹೇಳುತ್ತಾನೆ:

"ದೇವಿ ಗಾಂಧಾರಿ! ನೀನು ಹೇಳಿದಂತೆ ಮಹಾತ್ಮರಾದ, ನನ್ನ ತಂದೆ ಯವರಾದ ವ್ಯಾಸರೇ ಅರಣ್ಯಕ್ಕೆ ಹೋಗಲು ನನಗೆ ಅನುಮತಿಯನ್ನಿತ್ತಿದ್ದಾರೆ. ಯುಧಿಷ್ಠಿರನೂ ಅನುಮತಿಸಿದ್ದಾನೆ. ಅತ್ಯಲ್ಪಕಾಲದಲ್ಲಿಯೇ ಅರಣ್ಯಕ್ಕೆ ಹೋಗುವವನಿದ್ದೇನೆ. ಆದರೆ ನಾನು ಅರಣ್ಯಕ್ಕೆ ಹೊರಡುವ ಮೊದಲು ಎಲ್ಲ ಪ್ರಜೆಗಳನ್ನೂ ನನ್ನ ಅರಮನೆಗೆ ಕರೆಸಿಕೊಂಡು ಜೂಜುಕೋರರಾದ ನನ್ನ ಮಕ್ಕಳ ಪರಲೋಕಪ್ರಾಪ್ತಿಗಾಗಿ ಧನವನ್ನು ದಾನಮಾಡಲು ಉದ್ದೇಶಿಸಿದ್ದೇನೆ."

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಧೃತರಾಷ್ಟ್ರನು ಗಾಂಧಾರಿಗೆ ಹೀಗೆ ಹೇಳಿ ಧರ್ಮರಾಜನಿಗೆ ಆ ವಿಷಯವನ್ನು ತಿಳಿಯಪಡಿಸಲು ದೂತರನ್ನು ಕಳುಹಿಸಿದನು. ಧೃತರಾಷ್ಟ್ರನ ಮಾತಿನಂತೆ ಯುಧಿಷ್ಠಿರನು ಎಲ್ಲ ಪ್ರಜೆಗಳನ್ನೂ ಕರೆಯಿಸಿದನು. ರಾಜನ ಸಂದೇಶದಿಂದ ಹರ್ಷಿತರಾದ ಕುರುಜಾಂಗಲದೇಶದ ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ ಮತ್ತು ಶೂದ್ರರೂ ಅಲ್ಲಿಗೆ ಆಗಮಿಸಿದರು. ಬಳಿಕ ಧೃತರಾಷ್ಟ್ರನು ಅಂತಃಪುರದಿಂದ ಹೊರಬಂದು ತನ್ನ ರಾಜ್ಯದ ಸಕಲಪ್ರಜೆಗಳನ್ನೂ ಸಂದರ್ಶಿಸಿದನು. ಅಲ್ಲಿಗೆ ಆಗಮಿಸಿದ್ದ ನಗರವಾಸಿಗಳನ್ನೂ, ಹಳ್ಳಿಯ ಜನರನ್ನೂ, ಸುಹೃದರನ್ನೂ, ನಾನಾದೇಶಗಳಿಂದ ಆಗಮಿಸಿದ್ದ ಬ್ರಾಹ್ಮಣರನ್ನೂ ಕುರಿತು ಹೇಳಿದನು:

"ಪ್ರಜೆಗಳೇ! ನೀವೂ ಮತ್ತು ಕುರುವಂಶದರಸರೂ ಬಹಳ ಕಾಲದಿಂದಲೂ ಜೊತೆಯಲ್ಲಿಯೇ ಇರುವಿರಿ. ನೀವು ಒಬ್ಬರಿಗೊಬ್ಬರು ಸೌಹಾರ್ದದಿಂದಿರುವಿರಿ ಮತ್ತು ಒಬ್ಬರು ಮತ್ತೊಬ್ಬರ ಹಿತದಲ್ಲಿಯೇ

ಆಸಕ್ತರಾಗಿರುವಿರಿ. ನಮ್ಮ ಮತ್ತು ನಿಮ್ಮ ವಿಯೋಗಕಾಲವು ಸನ್ನಿಹಿತವಾಗಿರುವ ಈ ಸಮಯದಲ್ಲಿ ನಾನು ಏನನ್ನು ಹೇಳುವೆನೋ ಅದನ್ನು ನೀವು ವಿಚಾರಮಾಡಹೋಗದೇ ಪರಿಪಾಲಿಸುವುದು ನಿಮ್ಮ ಕರ್ತವ್ಯವಾಗಿರುತ್ತದೆ.

ನನಗೆ ಗಾಂಧಾರಿಯೊಡನೆ ಅರಣ್ಯಕ್ಕೆ ಹೋಗಬೇಕೆಂಬ ಮನಸ್ಸುಂಟಾಗಿದೆ. ಪೂಜ್ಯರಾದ ವ್ಯಾಸರ ಮತ್ತು ಕುಂತೀಪುತ್ರನಾದ ಯುಧಿಷ್ಠಿರನ ಅನುಮತಿಯೂ ಸಿಕ್ಕಿದೆ. ನೀವೆಲ್ಲರೂ ನನ್ನ ಪ್ರಯಾಣಕ್ಕೆ ಅನುಮತಿಸಬೇಕು. ಈ ವಿಷಯದಲ್ಲಿ ನೀವು ಪ್ರಕಾರಾಂತರ ವಿಚಾರಿಸಲೇಬಾರದು. ನಿಮಗೂ ಮತ್ತು ನಮಗೂ ಶಾಶ್ವತವಾದ ಪ್ರೇಮಸಂಬಂಧವಿದೆ. ಅನ್ಯದೇಶಗಳಲ್ಲಿ ಪ್ರಜೆಗಳಿಗೂ ಮತ್ತು ರಾಜರಿಗೂ ಈ ವಿಧವಾದ ಪ್ರೇಮಸಂಬಂಧವಿಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ. ಈ ಮುದಿವಯಸ್ಸಿನಲ್ಲಿರುವ ನಾನು ಶಾಂತನಾಗಿದ್ದೇನೆ. ಮಕ್ಕಳನ್ನೆಲ್ಲಾ ಕಳೆದುಕೊಂಡಿರುವ ನನಗೆ ದುಃಖವೂ ಇದೆ. ಗಾಂಧಾರಿಯೊಡನೆ ಉಪವಾಸವ್ರತವನ್ನು ಮಾಡಿ ಕೃಶನೂ ಆಗಿದ್ದೇನೆ. ಯುಧಿಷ್ಠಿರನ ಈ ರಾಜ್ಯದಲ್ಲಿ ನಾನು ಅತ್ಯಂತಸುಖಿಯಾಗಿದ್ದೇನೆ. ದುರ್ಯೋಧನನು ಐಶ್ವರ್ಯಸಂಪನ್ನನಾಗಿದ್ದಾಗ ನಾನು ಸುಖವಾಗಿದ್ದುದಕ್ಕಿಂತಲೂ ಈಗ ಧರ್ಮರಾಜನ ರಾಜ್ಯದಲ್ಲಿ ಹೆಚ್ಚು ಸುಖವಾಗಿದ್ದೇನೆ–ಎಂಬುದು ನನ್ನ ಅಭಿಪ್ರಾಯವಾಗಿದೆ. ಮಹಾಭಾಗರೇ! ಅಂಧನೂ, ವೃದ್ಧನೂ, ಪುತ್ರರಿಂದ ರಹಿತನೂ ಆಗಿರುವ ನನಗೆ ಅರಣ್ಯವಲ್ಲದೇ ಬೇರೆ ಯಾವ ಆಶ್ರಯವಿದೆ? ಆದುದರಿಂದ ನೀವೆಲ್ಲರೂ ನಾನು ಅರಣ್ಯಕ್ಕೆ ಹೋಗಲು ಅನುಮತಿಸಿರಿ.”

ಜನಮೇಜಯ! ರಾಜನ ಆ ಮಾತನ್ನು ಕೇಳಿ ಎಲ್ಲ ಕುರುಜಾಂಗಲ ದೇಶದ ಪ್ರಜೆಗಳೂ ಕಣ್ಣೀರಿನಿಂದಲೂ ಗದ್ಗದಧ್ವನಿಯಿಂದಲೂ ಕೂಡಿದವರಾಗಿ ಗಳಗಳನೆ ಅಳತೊಡಗಿದರು. ಏನೊಂದನ್ನೂ ಹೇಳದೇ ಶೋಕಪರಾಯಣರಾಗಿ ರೋದಿಸುತ್ತಿದ್ದ ಪ್ರಜೆಗಳನ್ನು ಕುರಿತು ಮಹಾತೇಜಸ್ವಿಯಾದ ಧೃತರಾಷ್ಟ್ರನೇ ಪುನಃ ಹೇಳತೊಡಗಿದನು.

ಲನೆಯ ಅಧ್ಯಾಯವು ಮುಗಿಯಿತು.

೯ನೆಯ ಅಧ್ಯಾಯ ಆಶ್ರಮವಾಸಪರ್ವ (ಮುಂದುವರಿದಿದೆ.)

ಪ್ರಜಾಜನರಲ್ಲಿ ಧೃತರಾಷ್ಟ್ರನ ಕ್ಷಮಾಯಾಚನೆ

ಧೃತರಾಷ್ಟ್ರನು ಹೇಳುತ್ತಾನೆ:

ಶಾನ್ತನುಃ ಪಾಲಯಾಮಾಸ ಯಥಾವದ್ವಸುಧಾಮಿಮಾಮ್ ।
ತಥಾ ವಿಚಿತ್ರವೀರ್ಯಶ್ಚ ಭೀಷ್ಮೇಣ ಪರಿಪಾಲಿತಃ ।
ಪಾಲಯಾಮಾಸ ನಸ್ತಾತೋ ವಿದಿತಾರ್ಥೋ ನ ಸಂಶಯಃ ॥೧॥

"ಪ್ರಿಯಪ್ರಜೆಗಳೇ! ಶಾಂತನುವು ಈ ರಾಜ್ಯವನ್ನು ಯಥಾವತ್ತಾಗಿ (ಹಿಂದಿನವರು ಆಳಿಕೊಂಡು ಬಂದಿದ್ದಂತೆ) ಆಳಿದನು. ಅನಂತರ ಭೀಷ್ಮನಿಂದ ರಕ್ಷಿಸಲ್ಪಡುತ್ತಿದ್ದ ನನ್ನ ತಂದೆ ವಿಚಿತ್ರವೀರ್ಯನು ಈ ರಾಜ್ಯವನ್ನು ಆಳಿದನು. ನಮ್ಮ ತಂದೆಯು ತತ್ತ್ವಜ್ಞನೂ ಆಗಿದ್ದನೆಂಬುದರಲ್ಲಿ ಸಂದೇಹವೇ ಇಲ್ಲ. ಅನಂತರ ನನಗೂ ಮತ್ತು ನಿಮ್ಮೆಲ್ಲರಿಗೂ ಪ್ರೀತಿಪಾತ್ರನಾಗಿದ್ದ ನನ್ನ ಸಹೋದರನಾದ ಪಾಂಡುವು ಹಿಂದಿನವರಂತೆಯೇ ರಾಜ್ಯವನ್ನು ಯಥಾವತ್ತಾಗಿ ಆಳಿದನು. ಈ ವಿಷಯವು ನಿಮ್ಮೆಲ್ಲರಿಗೂ ತಿಳಿದೇ ಇದೆ. ಪಾಂಡುವಿನ ಅನಂತರ ನಾನೂ ಕೂಡ ನಿಮ್ಮ ಸೇವೆಯನ್ನು ಚೆನ್ನಾಗಿಯೇ ಮಾಡಿದ್ದೇನೆ. ಮಹಾಭಾಗ್ಯಶಾಲಿಗಳೇ! ಒಂದು ವೇಳೆ ನಾನೇನಾದರೂ ನಿಮಗೆ ಕೇಡನ್ನುಂಟುಮಾಡಿದ್ದಲ್ಲಿ ಆಲಸ್ಯರಹಿತರಾದ ನೀವು ನನ್ನನ್ನು ಕ್ಷಮಿಸಿಬಿಡಿರಿ. ನಿಷ್ಕಂಟಕವಾದ ಈ ರಾಜ್ಯವನ್ನು ದುರ್ಯೋಧನನು ಉಪಭೋಗಿಸುತ್ತಿದ್ದಾಗ ಅವನು ದುರ್ಬುದ್ಧಿಯವನೇ ಆಗಿದ್ದರೂ, ಮೂರ್ಖನೇ ಆಗಿದ್ದರೂ–ನಿಮ್ಮ ವಿಷಯದಲ್ಲಿ ಅವನು ಯಾವ ಅಪರಾಧವನ್ನೂ ಮಾಡಿರುವುದಿಲ್ಲ. ದುರ್ಬುದ್ಧಿಯವನಾದ ಮತ್ತು ದುರಭಿಮಾನಿಯಾದ ಅವನು ಮಾಡಿದ ಅಪರಾಧದಿಂದಲೂ ಆ ಸಮಯದಲ್ಲಿ ನಾನು ಮಾಡಿದ ಅನ್ಯಾಯದಿಂದಲೂ ಅಸಂಖ್ಯಾತರಾಜರ ಸಂಹಾರವಾಯಿತು. ಆ ಸಮಯದಲ್ಲಿ ನಾನು ಒಳ್ಳೆಯದನ್ನಾದರೂ ಮಾಡಿರಬಹುದು; ಕೆಟ್ಟುದನ್ನಾದರೂ ಮಾಡಿರಬಹುದು. ನಾನೀಗ ಕೈಜೋಡಿಸಿ ಬೇಡಿಕೊಳ್ಳುತ್ತಿದ್ದೇನೆ. ಹಿಂದಿನದೆಲ್ಲವನ್ನೂ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಡಿರಿ. ಮರೆತುಬಿಡಿರಿ.

‘ಇವನು ವೃದ್ಧನಾಗಿದ್ದಾನೆ. ಎಲ್ಲ ಮಕ್ಕಳನ್ನೂ ಕಳೆದುಕೊಂಡಿದ್ದಾನೆ; ಅತಿದುಃಖಿಯಾಗಿದ್ದಾನೆ; ಪ್ರಸಿದ್ಧರಾದ ಕುರುವಂಶದ ರಾಜರ ಮಗನಾಗಿದ್ದಾನೆ. ಆದುದರಿಂದ ದಯನೀಯನಾಗಿದ್ದಾನೆ’–ಹೀಗಾದರೂ ಭಾವಿಸಿಕೊಂಡು ನನ್ನನ್ನು ಕ್ಷಮಿಸಿ ನಾನು ಅರಣ್ಯಕ್ಕೆ ಹೋಗಲು ಅನುಮತಿಯನ್ನು ದಯಪಾಲಿಸಿರಿ.

ಗಾಂಧಾರಿಯೂ ದೀನಳಾಗಿದ್ದಾಳೆ; ವೃದ್ಧೆಯಾಗಿದ್ದಾಳೆ; ಎಲ್ಲ ಮಕ್ಕಳನ್ನೂ ಕಳೆದುಕೊಂಡಿದ್ದಾಳೆ; ಪುತ್ರಶೋಕದಿಂದ ಪೀಡಿತಳಾಗಿದ್ದಾಳೆ. ತಪಸ್ವಿನಿಯಾದ ಇವಳು ಕೂಡ ನನ್ನೊಡನೆ ಕಾಡಿಗೆ ಹೋಗಲು ನಿಮ್ಮ ಅನುಜ್ಞೆಯನ್ನು ಬೇಡುತ್ತಿದ್ದಾಳೆ. ಈ ಮುದುಕ-ಮುದುಕಿಯರು ಮಕ್ಕಳನ್ನು ಕಳೆದುಕೊಂಡಿರುವರೆಂದೂ, ಅತಿದುಃಖಿತರಾಗಿರುವರೆಂದೂ ಭಾವಿಸಿ ನಮಗೆ ಕಾಡಿಗೆ ಹೋಗಲು ಅನುಮತಿಯನ್ನು ದಯಪಾಲಿಸಿರಿ. ನಿಮಗೆ ಮಂಗಳ ವಾಗಲಿ. ನಾವು ನಿಮಗೆ ಶರಣಾಗತರಾಗಿದ್ದೇವೆ. ಕುಂತಿಯ ಮಗನಾದ ಕುರುಕುಲಾವತಂಸನಾದ ಯುಧಿಷ್ಠಿರನು ಈಗ ನಿಮ್ಮೆಲ್ಲರಿಗೂ ರಾಜನಾಗಿ ದ್ದಾನೆ. ಒಳ್ಳೆಯ ಸಮಯದಲ್ಲಾಗಲೀ-ಕೆಟ್ಟ ಸಮಯದಲ್ಲಾಗಲೀ (ಸುಖ ದಲ್ಲಾಗಲೀ-ಕಷ್ಟದಲ್ಲಾಗಲೀ) ನೀವು ಇವನ ವಿಷಯದಲ್ಲಿ ಕೃಪಾದೃಷ್ಟಿ ಯುಳ್ಳವರಾಗಿರಬೇಕು.

ಯುಧಿಷ್ಠಿರನು ಯಾವಾಗಲೂ ವಿಷಮಸ್ಥಿತಿಯನ್ನು ಹೊಂದುವುದಿಲ್ಲ. ಲೋಕಪಾಲಸದೃಶರಾದ, ಸರ್ವಧರ್ಮಾರ್ಥಗಳನ್ನೂ ತಿಳಿದಿರುವ, ಮಹಾಬಲಿಶಾಲಿಗಳಾದ, ಭೀಮಾರ್ಜುನ-ನಕುಲ-ಸಹದೇವರೆಂಬ ನಾಲ್ವರು ಸಹೋದರರೇ ಇವನ ನಾಲ್ವರು ಸಚಿವರಾಗಿದ್ದಾರೆ. ಸರ್ವಪ್ರಾಣಿಗಳಿಗೂ ಮತ್ತು ಸಕಲಜಗತ್ತಿಗೂ ಪತಿಯಾದ, ಪೂಜ್ಯನಾದ ಬ್ರಹ್ಮನಂತೆಯೇ ಮಹಾತಪಸ್ವಿಯಾದ ಇವನು ನಿಮ್ಮನ್ನು ಪರಿಪಾಲಿಸುತ್ತಾನೆ. ನಾನು ಈ ಮಾತನ್ನು ಅವಶ್ಯವಾಗಿ ಹೇಳಬೇಕೆಂದು ಉದ್ದೇಶಿಸಿ ಹೇಳುತ್ತಿದ್ದೇನೆ.

ಏಷ ನ್ಯಾಸೋ ಮಯಾ ದತ್ತಃ ಸರ್ವೇಷಾಂ ವೋ ಯುಧಿಷ್ಠಿರಃ।
ಭವನ್ತೋಽಸ್ಯ ಚ ವೀರಸ್ಯ ನ್ಯಾಸಭೂತಾಃ ಕೃತಾ ಮಯಾ ॥೧೫॥

ನಿಮ್ಮೆಲ್ಲರಿಗೂ ಯುಧಿಷ್ಠಿರನನ್ನು ನಿಕ್ಷೇಪರೂಪದಲ್ಲಿ ನಾನು ವಹಿಸಿಕೊಟ್ಟಿದ್ದೇನೆ. (ನೀವೆಲ್ಲರೂ ಇವನನ್ನು ಸಂರಕ್ಷಿಸಬೇಕು.) ಅಂತೆಯೇ

ನಿಮ್ಮೆಲ್ಲರನ್ನೂ ಯುಧಿಷ್ಠಿರನಲ್ಲಿ ನ್ಯಾಸರೂಪದಲ್ಲಿ ಇಟ್ಟಿದ್ದೇನೆ. ಅವನು ನಿಮ್ಮನ್ನು ಸಂರಕ್ಷಿಸಬೇಕಾಗಿದೆ. ನಿಮಗೆ ನನ್ನ ಮಕ್ಕಳಿಂದಾಗಲೀ, ನನ್ನ ಸಂಬಂಧಿಗಳಾದ ಯಾರಿಂದಲೇ ಆಗಲೀ ಯಾವುದೇ ಅಪರಾಧವು ನಡೆದಿದ್ದರೂ ಅದನ್ನು ಕ್ಷಮಿಸಿಬಿಡಿರಿ. ಅರಣ್ಯಕ್ಕೆ ಪ್ರಯಾಣಮಾಡಲು ನನಗೆ ಅನುಮತಿಯನ್ನು ನೀಡಿರಿ. ಈ ಹಿಂದೆಯೂ ನೀವು ಯಾವುದೇ ಕಾರಣ ದಿಂದಲೂ ನನ್ನ ಮೇಲೆ ಕೋಪಗೊಂಡಿರುವುದಿಲ್ಲ. ನೀವೆಲ್ಲರೂ ಅತಿಶಯ ವಾದ ಗುರು (ರಾಜ) ಭಕ್ತಿಯುಳ್ಳವರಾಗಿರುವಿರಿ. ನಿಮ್ಮೆಲ್ಲರಿಗೂ ಕೈಜೋಡಿಸಿ ಪ್ರಣಾಮಮಾಡುತ್ತಿದ್ದೇನೆ. ಚಂಚಲಬುದ್ಧಿಯವರಾದ, ಲೋಭಿಗಳಾದ, ಸ್ವೇಚ್ಛಾಚಾರಿಗಳಾದ ನನ್ನ ಮಕ್ಕಳ ಸಲುವಾಗಿಯೂ ನಾನು ಗಾಂಧಾರಿಯ ಸಮೇತನಾಗಿ ಕ್ಷಮೆಯನ್ನು ಯಾಚಿಸುತ್ತಿದ್ದೇನೆ."

ಜನಮೇಜಯ! ಧೃತರಾಷ್ಟ್ರನು ಹೀಗೆ ಹೇಳುತ್ತಿರುವಾಗ ಕುರುಜಾಂಗಲದ ಪ್ರಜೆಗಳೆಲ್ಲರೂ ಕಂಬನಿದುಂಬಿದ ಕಣ್ಣುಗಳುಳ್ಳವರಾಗಿ ಏನನ್ನೂ ಹೇಳಲಾರದೇ ಒಬ್ಬರನ್ನೊಬ್ಬರು ನೋಡುತ್ತಿದ್ದರು.

೯ನೆಯ ಅಧ್ಯಾಯವು ಮುಗಿಯಿತು.

೧೦ನೆಯ ಅಧ್ಯಾಯ ಆಶ್ರಮವಾಸಪರ್ವ (ಮುಂದುವರಿದಿದೆ.)

ಸಾಂಬನೆಂಬ ಬ್ರಾಹ್ಮಣನು ಧೃತರಾಷ್ಟ್ರನನ್ನು ಸಂತೈಸಿದುದು

ವೈಶಂಪಾಯನರು ಹೇಳುತ್ತಾರೆ:

ಏವಮುಕ್ತಾಸ್ತು ತೇ ತೇನ ಪೌರಜಾನಪದಾ ಜನಾಃ।
ವೃದ್ಧೇನ ರಾಜ್ಞಾ ಕೌರವ್ಯ ನಷ್ಟಸಂಜ್ಞಾ ಇವಾಭವನ್ ॥೧॥

ಜನಮೇಜಯ! ವೃದ್ಧನಾದ ಧೃತರಾಷ್ಟ್ರರಾಜನು ಹೀಗೆ ಹೇಳಲಾಗಿ ಪಟ್ಟಣಿಗರೂ ಮತ್ತು ದೇಶೀಯಜನರೂ ಮೂರ್ಛೆಗೊಂಡವರಂತೆ ಸ್ತಬ್ಧರಾದರು.

ಬಾಷ್ಪಗದ್ಗದಕಂಠದಿಂದ ಕೂಡಿ ಏನನ್ನೂ ಮಾತನಾಡದೇ ಮೌನಿ ಗಳಾಗಿದ್ದ ಪ್ರಜೆಗಳನ್ನು ಕುರಿತು ಮಹೀಪತಿಯಾದ ಧೃತರಾಷ್ಟ್ರನೇ ಪುನಃ ಹೇಳಿದನು:

"ಸಜ್ಜನರೇ! ವೃದ್ಧನಾಗಿರುವ, ಪುತ್ರರನ್ನು ಕಳೆದುಕೊಂಡಿರುವ, ಈ ನನ್ನ ಧರ್ಮಪತ್ನಿಯ ಜೊತೆಯಲ್ಲಿ ಅಳುತ್ತಿರುವ, ಬಹುವಿಧವಾದ ದೈನ್ಯದಿಂದ

ಪ್ರಾರ್ಥಿಸಿಕೊಳ್ಳುತ್ತಿರುವ, ಧರ್ಮಜ್ಞರಾದ ನನ್ನ ತಂದೆಯವರಾದ ಕೃಷ್ಣದ್ವೈಪಾಯನರಿಂದಲೂ ಮತ್ತು ಧರ್ಮಜ್ಞನಾದ ಧರ್ಮರಾಜನಿಂದಲೂ ಅರಣ್ಯಕ್ಕೆ ಹೋಗಲು ಅನುಮತಿಯನ್ನು ಪಡೆದಿರುವ, ಗಾಂಧಾರೀ ಸಹಿತನಾಗಿರುವ ನನಗೆ ಅರಣ್ಯಕ್ಕೆ ಹೋಗಲು ಅನುಮತಿಯನ್ನು ನೀಡುವುದು ಯೋಗ್ಯವಾಗಿದೆ. ಪುನಃ-ಪುನಃ ನಿಮ್ಮನ್ನು ತಲೆಬಾಗಿ ನಮಸ್ಕರಿಸಿ ಬೇಡಿಕೋಳ್ಳುತ್ತೇನೆ."

ಜನಮೇಜಯ! ಕುರುರಾಜನಾದ ಧೃತರಾಷ್ಟ್ರನ ಕರುಣಾಜನಕವಾದ ಮಾತುಗಳನ್ನು ಕೇಳಿ ಕುರುಜಾಂಗಲದೇಶದ ಪ್ರಜೆಗಳು ಎಲ್ಲ ಕಡೆಗಳಲ್ಲಿಯೂ ಅಳತೊಡಗಿದರು. ಉತ್ತರೀಯಗಳಿಂದಲೂ, ಕೈಗಳಿಂದಲೂ ಮುಖಗಳನ್ನು ಮುಚ್ಚಿಕೊಂಡು–ಕಾಡಿಗೆ ಹೊರಟು ಮಗನನ್ನು ಬೀಳ್ಕೊಡುವ ತಂದೆ-ತಾಯಿಗಳು ಗೋಳಿಡುವಂತೆ–ಶೋಕಸಂತಪ್ತರಾದ ಪ್ರಜೆಗಳು ಮುಹೂರ್ತಕಾಲ ರೋದನಮಾಡುತ್ತಿದ್ದರು. ಧೃತರಾಷ್ಟ್ರನ ವನಪ್ರವಾಸದಿಂದ ಉಂಟಾದ ದುಃಖವನ್ನು ತುಂಬಿಕೊಂಡಿದ್ದ ಅವರೆಲ್ಲರೂ ಹೃದಯಶೂನ್ಯರಾಗಿ ಮೂರ್ಛಿತರಾಗಿರುವರೋ ಎಂಬಂತೆ ಕಾಣುತ್ತಿದ್ದರು. ಸ್ವಲ್ಪ ಹೊತ್ತು ಕಳೆದನಂತರ ಧೃತರಾಷ್ಟ್ರನ ವಿಯೋಗವುಂಟಾಗುವುದೆಂಬುದನ್ನು ತಿಳಿದು ಉಂಟಾಗಿದ್ದ ಸಂಕಟವನ್ನು ಮೆಲ್ಲ-ಮೆಲ್ಲನೆ ದೂರೀಕರಿಸಿ ಪರಸ್ಪರವಾಗಿ ಮಾತನಾಡಿಕೊಂಡು ತಮ್ಮ ಸಮ್ಮತಿಯನ್ನು ವ್ಯಕ್ತಪಡಿಸಿದರು. ಅನಂತರ ಅವರೆಲ್ಲರೂ ಒಟ್ಟಾಗಿ ಸೇರಿ ಒಂದು ನಿರ್ಧಾರಕ್ಕೆ ಬಂದವರಾಗಿ, ಅದನ್ನು ತಿಳಿಸಲು ಒಬ್ಬ ಬ್ರಾಹ್ಮಣನನ್ನು ಪ್ರತಿನಿಧಿಯಾಗಿ ಆರಿಸಿ ಅವನ ಮೂಲಕವಾಗಿ ತಮ್ಮ ಅಭಿಪ್ರಾಯವನ್ನು ರಾಜನಿಗೆ ತಿಳಿಸಿದರು. ಸಾಂಬನೆಂಬ ಹೆಸರಿನ ಆ ಬ್ರಾಹ್ಮಣನು ಸದಾಚಾರನಾಗಿದ್ದನು; ಮಾನನೀಯನಾಗಿದ್ದನು; ಅರ್ಥಜ್ಞಾನದಲ್ಲಿ ನಿಪುಣನಾಗಿದ್ದನು; ಋಗ್ವೇದವಿದ್ವಾಂಸನಾಗಿದ್ದನು; ವಾಗ್ಮಿಯಾಗಿದ್ದನು; ಮೇಧಾವಿಯಾಗಿದ್ದನು. ಅವನು ರಾಜನನ್ನು ವಿನಯಪೂರ್ವಕವಾಗಿ ಗೌರವಿಸುತ್ತಾ, ಸಭಿಕರನ್ನು ಪ್ರಸನ್ನಗೊಳಿಸುತ್ತಾ, ಧೃತರಾಷ್ಟ್ರರಾಜನಿಗೆ ಹೇಳಿದನು:

"ಮಹಾರಾಜ! ಇಲ್ಲಿ ನೆರೆದಿರುವ ಜನರೆಲ್ಲರೂ ತಮ್ಮ ಏಕಾಭಿಪ್ರಾಯವನ್ನು ನಿನಗೆ ತಿಳಿಯಹೇಳುವ ಭಾರವನ್ನು ನನಗೆ ವಹಿಸಿಕೊಟ್ಟಿರುವರು. ಅದನ್ನೇ ನಾನು ನಿನಗೆ ಹೇಳುತ್ತೇನೆ. ದಯಮಾಡಿ ಅವಧರಿಸು.

ರಾಜೇಂದ್ರನೇ! ನೀನು ಏನು ಹೇಳಿರುವೆಯೋ ಅದು ಹಾಗೆಯೇ ಸರಿ. ಅದರಲ್ಲಿ ಅಸತ್ಯಲೇಶವೂ ಇರುವುದಿಲ್ಲ. ವಾಸ್ತವವಾಗಿ ಕುರುರಾಜವಂಶಕ್ಕೂ ಕುರುಜಾಂಗಲದೇಶದ ಪ್ರಜೆಗಳಾದ ನಮಗೂ ಪರಸ್ಪರವಾಗಿ ದೃಢವಾದ ಸೌಹಾರ್ದವಿದೆ. ಈ ವಂಶದ ರಾಜರಲ್ಲಿ ಯಾವಾಗಲೂ ಯಾವನೇ ಒಬ್ಬ ಪ್ರಜಾಪಾಲಕನೂ ಪ್ರಜೆಗಳಿಗೆ ಅಪ್ರಿಯನಾಗಿರಲಿಲ್ಲ. ನೀವು ನಮ್ಮನ್ನು ತಂದೆಯಂತೆ ಅಥವಾ ಅಣ್ಣನಂತೆ ಕಾಪಾಡಿಕೊಂಡುಬಂದಿರುವಿರಿ. ದುರ್ಯೋಧನನು ಕೂಡ ನಮ್ಮ ವಿಷಯದಲ್ಲಿ ಯಾವ ಅಯುಕ್ತವಾದ ಕಾರ್ಯವನ್ನೂ ಮಾಡಿರುವುದಿಲ್ಲ. ಸತ್ಯವತಿಯ ಮಕ್ಕಳಾದ, ಧರ್ಮಾತ್ಮರಾದ ವ್ಯಾಸಮುನಿಗಳು ಹೇಗೆ ಹೇಳಿರುವರೋ–ಹಾಗೆಯೇ ನೀನು ವರ್ತಿಸಬಹುದಾಗಿದೆ. ಏಕೆಂದರೆ: ನಮ್ಮೆಲ್ಲರಿಗೂ ಅವರೇ ಶ್ರೇಷ್ಠರಾದ ಗುರುಗಳಾಗಿದ್ದಾರೆ. ನಿನ್ನಿಂದ ಪರಿತ್ಯಜಿಸಲ್ಪಡುವ ನಾವು ಮುಂದೆ ಬಹಳ ಕಾಲದವರೆಗೂ ದುಃಖ-ಶೋಕಗಳಲ್ಲಿಯೇ ಮುಳುಗಿರುತ್ತೇವೆ. ನಿನ್ನ ನೂರಾರು ಗುಣಗಳನ್ನು ಸ್ಮರಿಸುತ್ತಲೇ ಇರುತ್ತೇವೆ. ಶಾಂತನುಮಹಾರಾಜನೂ ಮತ್ತು ಚಿತ್ರಾಂಗದನೂ ನಮ್ಮನ್ನು ಹೇಗೆ ರಕ್ಷಿಸಿದರೋ, ಭೀಷ್ಮನ ಪರಾಕ್ರಮದಿಂದ ಸುರಕ್ಷಿತನಾಗಿದ್ದ ನಿನ್ನ ತಂದೆಯಾದ ವಿಚಿತ್ರವೀರ್ಯನು ನಮ್ಮನ್ನು ಹೇಗೆ ರಕ್ಷಿಸಿದನೋ, ನಿನ್ನ ಮೇಲ್ವಿಚಾರಣೆಯಲ್ಲಿ ಪಾಂಡುರಾಜನು ನಮ್ಮನ್ನು ಹೇಗೆ ಸಂರಕ್ಷಿಸಿದನೋ ಅದೇರೀತಿಯಲ್ಲಿ ದುರ್ಯೋಧನನೂ ನಮ್ಮನ್ನು ಚೆನ್ನಾಗಿ ಪರಿಪಾಲಿಸುತ್ತಿದ್ದನು. ಪ್ರಜೆಗಳಾದ ನಮ್ಮ ವಿಷಯದಲ್ಲಿ ನಿನ್ನ ಮಗನು ಸ್ವಲ್ಪವಾದರೂ ಅನ್ಯಾಯವನ್ನು ಮಾಡಲಿಲ್ಲ. ಅವನ ವಿಷಯದಲ್ಲಿ ನಾವೂ ಕೂಡ–ಮಗನಾದವನು ತಂದೆ ಯಲ್ಲಿಡುವಂತೆಯೇ ವಿಶ್ವಾಸವನ್ನಿಟ್ಟಿದ್ದೆವು. ಅವನು ರಾಜ್ಯಭಾರಮಾಡುತ್ತಿ ದ್ದಾಗ ನಾವು ಸುಖವಾಗಿಯೇ ಜೀವನವನ್ನು ಕಳೆದೆವು. ಈ ಎಲ್ಲ ವಿಷಯ ಗಳೂ ನಿನಗೂ ತಿಳಿದೇ ಇವೆ. ಹಾಗೆಯೇ ಧೀಮಂತನಾದ, ಧೈರ್ಯಶಾಲಿ ಯಾದ ಕುಂತಿಯ ಮಗನಾದ ಯುಧಿಷ್ಠಿರನೂ ನಮ್ಮನ್ನು ಸಾವಿರ ವರ್ಷಗಳ ವರೆಗೆ ಧರ್ಮದಿಂದ ಪರಿಪಾಲಿಸುತ್ತಿರಬೇಕೆಂದೂ-ನಾವೆಲ್ಲರೂ ಅವನ ಆಶ್ರಯ ದಲ್ಲಿ ಸುಖವನ್ನು ಹೊಂದಬೇಕೆಂದೂ ಬಯಸಿದ್ದೇವೆ. ಭೂರಿದಕ್ಷಿಣನಾದ,

ಧರ್ಮಾತ್ಮನಾದ ಯುಧಿಷ್ಠಿರನೂ–ಪ್ರಾಚೀನರಾದ, ಪುಣ್ಯಕರ್ಮಿಗಳಾದ, ರಾಜರ್ಷಿಗಳಾದ ಕುರು-ಸಂವರಣ ಮೊದಲಾದವರ, ಧೀಮಂತನಾದ ಭರತನ ಸದ್ವೃತ್ತಿ-ಸದಾಚಾರಗಳನ್ನೂ ಅನುಸರಿಸಿ ನಡೆಯುವವನಾಗಿದ್ದಾನೆ. ಇವನ ರಾಜ್ಯಪರಿಪಾಲನೆಯ ವಿಷಯದಲ್ಲಿ ನಾವು ಹೇಳಬಹುದಾದ ದೋಷವು ಸ್ವಲ್ಪವಾದರೂ ಇರುವುದಿಲ್ಲ. ನೀನು ಆಳುತ್ತಿದ್ದಾಗ ಸುಖ ವಾಗಿಯೇ ಇದ್ದೆವು. ಪುತ್ರಸಹಿತನಾದ ನಿನ್ನಲ್ಲಿ ಸೂಕ್ಷ್ಮವಾದ ಅಪರಾಧವೂ ಇರುವುದಿಲ್ಲ. ಜ್ಞಾತಿಗಳ ಸಂಹಾರದ ವಿಷಯದಲ್ಲಿ ದುರ್ಯೋಧನನನ್ನು ಕುರಿತು ಯಾವ ಮಾತನ್ನು ಹೇಳಿದೆಯೋ ಅದರ ವಿಷಯವಾಗಿಯೂ ನಿನಗೆ ಸಮಾಧಾನಕರವಾದ ಕೆಲವು ಮಾತುಗಳನ್ನು ಹೇಳುತ್ತೇನೆ.

ನ ತದ್ದುರ್ಯೋಧನಕೃತಂ ನ ಚ ತದ್ಭವತಾ ಕೃತಮ್।
ನ ಕರ್ಣಸೌಬಲಾಭ್ಯಾಂ ಚ ಕುರವೋ ಯತ್ಕ್ಷಯಂ ಗತಾಃ ॥೨೭॥

ಕುರುವೀರರು ವಿನಾಶವಾದುದಕ್ಕೆ ದುರ್ಯೋಧನನ ಕಾರ್ಯಗಳು ಕಾರಣವಲ್ಲ; ನೀನು ಮಾಡಿದ ಕಾರ್ಯವೂ ಕಾರಣವಲ್ಲ; ಕರ್ಣ-ಶಕುನಿಗಳು ಮಾಡಿದ ಕಾರ್ಯವೂ ಕಾರಣವಲ್ಲ.

ದೈವಂ ತು ತದ್ವಿಜಾನೀಮೋ ಯನ್ನ ಶಕ್ಯಂ ಪ್ರಬಾಧಿತುಮ್।
ದೈವಂ ಪುರುಷಾಕಾರೇಣ ನ ಶಕ್ಯಮಪಿ ಬಾಧಿತುಮ್ ॥೨೮॥

ಕುರುಗಳ ಈ ವಿನಾಶವು ದೈವಕೃತವಾದುದು. ಇದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ದೈವದ ನಿಶ್ಚಯವನ್ನು ಪುರುಷಪ್ರಯತ್ನದಿಂದ ತಡೆಹಿಡಿಯಲು ಖಂಡಿತವಾಗಿಯೂ ಸಾಧ್ಯವಿಲ್ಲ.

ಈ ಯುದ್ಧದಲ್ಲಿ ಹದಿನೆಂಟು ಅಕ್ಷೌಹಿಣೀಸೈನಿಕರು ಒಂದೆಡೆಯಲ್ಲಿ ಯುದ್ಧಕ್ಕಾಗಿ ಆಗಮಿಸಿದ್ದರು. ಕೌರವಪಕ್ಷದ ಯೋಧಶ್ರೇಷ್ಠರಾದ ಭೀಷ್ಮ- ದ್ರೋಣರು, ಕೃಪರು, ಮಹಾತ್ಮನಾದ ಕರ್ಣ, ಪಾಂಡವಪಕ್ಷದ ಯೋಧಶ್ರೇಷ್ಠರಾದ ಸಾತ್ಯಕಿ, ವೀರನಾದ ಧೃಷ್ಟದ್ಯುಮ್ನ, ಭೀಮಾ ರ್ಜುನ-ನಕುಲ- ಸಹದೇವರು ಇವರೇ ಮುಂತಾದವರಿಂದ ಕೂಡಿ ಆಗಮಿ

ಸಿದ್ದ ಸೈನಿಕರೆಲ್ಲರೂ ಹದಿನೆಂಟು ದಿವಸಗಳಲ್ಲಿ ಹತರಾಗಿ ಹೋದರು. ಇಂತಹ ಅದ್ಭುತವಾದ ಸಂಹಾರಕಾರ್ಯವು ದೈವದಿಂದಲ್ಲದೆ ಬೇರೆ ಯಾವುದರಿಂದಲೂ ಸಾಧ್ಯವಾಗುತ್ತಿರಲಿಲ್ಲ. ಮೇಲಾಗಿ ಮನುಷ್ಯನು ಅದರ ಲ್ಲಿಯೂ ವಿಶೇಷವಾಗಿ ಕ್ಷತ್ರಿಯನು ಅವಶ್ಯವಾಗಿ ಯುದ್ಧದಲ್ಲಿ ಶತ್ರುಗಳನ್ನೂ ಸಂಹರಿಸಬೇಕು ತಾನೂ ಪ್ರಾಣಪರಿತ್ಯಾಗ ಮಾಡಬೇಕು. ಪುರುಷಸಿಂಹರಾದ, ವಿದ್ಯಾವಂತರಾದ, ಬಾಹುಬಲಯುಕ್ತರಾದ ಯೋಧರು ಅಶ್ವ-ಗಜ-ರಥಸೈನ್ಯಗಳ ಸಹಿತವಾಗಿ ಈ ಭೂಮಂಡಲವನ್ನು ವಿನಾಶಗೊಳಿಸಿದರು. ಆದುದರಿಂದ ಮಹಾತ್ಮರಾದ ರಾಜರ ವಿನಾಶಕ್ಕೆ ನಿನ್ನ ಮಗನಾಗಲೀ, ನೀನಾಗಲೀ, ನಿನ್ನ ಅನುಯಾಯಿಗಳಾಗಲೀ, ಕರ್ಣ-ಸೌಬಲರಾಗಲೀ ಕಾರಣರಲ್ಲ. ಈ ಮಹಾಯುದ್ಧದಲ್ಲಿ ಸಾವಿರಾರು ರಾಜರು ಶಸ್ತ್ರಾಸ್ತ್ರಗಳಿಂದ ಕೊಲ್ಲಲ್ಪಟ್ಟುದು ದೈವಕೃತವೆಂದೇ ತಿಳಿ. ಈ ವಿಷಯದಲ್ಲಿ ಯಾರು ತಾನೇ ಬೇರೆ ಏನು ಹೇಳಲು ಸಾಧ್ಯವಾಗುತ್ತದೆ?

ನೀನು ಈ ಅಖಂಡಜಗತ್ತಿಗೂ ಸ್ವಾಮಿಯಾಗಿರುವೆ. ಈ ಕುರುಜನಪದದ ಗುರುವಾಗಿರುವೆ. ಆದುದರಿಂದ ಧರ್ಮಾತ್ಮನಾದ ನಿನ್ನ ಮಗನನ್ನು ಕುರಿತು ಈ ಮಾತುಗಳನ್ನು ಹೇಳುತ್ತೇವೆ:

ಲಭತಾಂ ವೀರಲೋಕಂ ಸ ಸಸಹಾಯೋ ನರಾಧಿಪಃ।
ದ್ವಿಜಾಗ್ರ್ಯೈಃ ಸಮನುಜ್ಞಾತಸ್ತ್ರಿದಿವೇ ಮೋದತಾಂ ಸುಖಮ್ ॥

ತನ್ನ ಸಹಾಯಕರೊಡನೆ ದುರ್ಯೋಧನನು-ದ್ವಿಜಶ್ರೇಷ್ಠರ ಆಶೀರ್ವಾದಬಲದಿಂದ–ವೀರರು ಹೋಗಲು ಯೋಗ್ಯವಾದ ಲೋಕಕ್ಕೆ ಹೋಗಲಿ. ಸ್ವರ್ಗದಲ್ಲಿ ಸುಖವನ್ನೂ ಆನಂದವನ್ನೂ ಪಡೆಯಲಿ. ನೀನೂ ಕೂಡ ಪುಣ್ಯವನ್ನೂ ಧರ್ಮದಲ್ಲಿ ಉನ್ನತಸ್ಥಿತಿಯನ್ನೂ ಪಡೆಯುವೆ. ನೀನು ಧರ್ಮಗಳನ್ನು ಸಮಗ್ರವಾಗಿ ತಿಳಿದಿರುವೆ. ಆದುದರಿಂದ ನೀನೀಗ ಉತ್ತಮ ವ್ರತಗಳ ಅನುಷ್ಠಾನವನ್ನು ಮಾಡು. 'ನಿಮ್ಮನ್ನು ನೋಡಿಕೊಳ್ಳುವ ಸಲುವಾಗಿ ಯುಧಿಷ್ಠಿರನಲ್ಲಿ ನಿಮ್ಮನ್ನು ನ್ಯಾಸಭೂತವಾಗಿ ಇಟ್ಟಿದ್ದೇನೆ ಮತ್ತು ಸುಖ-ಕಷ್ಟಗಳಲ್ಲಿ ನೀವು ಅವನ ವಿಷಯದಲ್ಲಿ ಕೃಪಾದೃಷ್ಟಿಯುಳ್ಳವರಾಗಿರಬೇಕು'–

ಎಂಬ ಭಾವನೆಯ ನಿನ್ನ ಮಾತುಗಳು ವ್ಯರ್ಥವೇ ಸರಿ. ಪಾಂಡವರು ಸ್ವರ್ಗವನ್ನೇ ಆಳಲು ಸಮರ್ಥರಾಗಿರುವಾಗ ನಮ್ಮ ಪಾಲನೆಯ ವಿಷಯವಾಗಿ ಇವರಿಗೆ ಹೇಳುವುದೇನಿದೆ? ಕುರುಕುಲಶ್ರೇಷ್ಠನೇ! ಶೀಲವೇ ಭೂಷಣವಾಗಿ ಉಳ್ಳ ಪಾಂಡವರನ್ನು ಸಮಸ್ತಪ್ರಜೆಗಳೂ ಸುಖ-ಕಷ್ಟಗಳ ಸಮಯದಲ್ಲಿ ಅನುಸರಿಸಿ ಹೋಗುತ್ತಾರೆ. ಪೃಥ್ವೀನಾಥನಾದ, ಪಾಂಡುಪುತ್ರನಾದ ಯುಧಿಷ್ಠಿರನು ಹಿಂದಿನ ರಾಜರಿಂದ ಬ್ರಾಹ್ಮಣರಿಗೆ ದಾನರೂಪವಾಗಿ ಮತ್ತು ಪುರಸ್ಕಾರರೂಪವಾಗಿ ಅರ್ಪಿಸಲ್ಪಟ್ಟಿರುವ ಅಗ್ರಹಾರಗಳನ್ನೂ ಮತ್ತು ಗ್ರಾಮಗಳನ್ನೂ ರಕ್ಷಿಸಿಕೊಂಡು ಬರುತ್ತಿದ್ದಾನೆ. ಇವನು ಕುಬೇರನಂತೆ ದೀರ್ಘದರ್ಶಿಯೂ, ಮೃದುಸ್ವಭಾವದವನೂ, ಜಿತೇಂದ್ರಿಯನೂ, ವಿಶಾಲ ಹೃದಯನೂ ಆಗಿದ್ದಾನೆ. ಇವನ ಸಚಿವರೂ ಕೂಡ ಯೋಗ್ಯರಾದವರು. ಭರತಶ್ರೇಷ್ಠನಾದ ಯುಧಿಷ್ಠಿರನು ಶತ್ರುಗಳ ವಿಷಯದಲ್ಲಿಯೂ ದಯಾಪರನಾಗಿರತಕ್ಕವನು. ಪವಿತ್ರನಾಗಿರತಕ್ಕವನು. ಮೇಧಾವಿಯಾದ ಇವನು ಎಲ್ಲರನ್ನೂ ಸರಳತೆಯಿಂದ ಕಾಣುತ್ತಾನೆ. ನಮ್ಮನ್ನಂತೂ ಮಕ್ಕಳಂತೆಯೇ ಸಂರಕ್ಷಿಸುತ್ತಿದ್ದಾನೆ. ಧರ್ಮಪುತ್ರನಾದ ಯುಧಿಷ್ಠಿರನ ಸಂಬಂಧದಿಂದಾಗಿ (ಸಹವಾಸದಿಂದಾಗಿ) ಭೀಮಾರ್ಜುನರೇ ಮೊದಲಾದವರು ಕೂಡ ಈ ಪ್ರಜಾವರ್ಗಕ್ಕೆ ಯಾವುದೇ ಅಪ್ರಿಯವಾಗುವಂತಹ ಕಾರ್ಯವನ್ನೂ ಮಾಡುವುದಿಲ್ಲ. ಈ ಐವರು ಪಾಂಡವರೂ ಮಹಾಪರಾಕ್ರಮಿಗಳೂ, ಮಹಾತ್ಮರೂ, ಪ್ರಜೆಗಳ ಹಿತದಲ್ಲಿಯೇ ನಿರತರೂ ಆಗಿರುತ್ತಾರೆ. ಮೃದುಸ್ವಭಾವದ ಜನರ ವಿಷಯದಲ್ಲಿ ಮಾರ್ದವದಿಂದಲೇ ವ್ಯವಹರಿಸುತ್ತಾರೆ. ಕ್ರೂರಿಗಳ ವಿಷಯದಲ್ಲಿ ವಿಷಸರ್ಪಗಳಂತೆಯೇ ವ್ಯವಹರಿಸುತ್ತಾರೆ. ಕುಂತಿಯಾಗಲೀ, ದ್ರೌಪದಿಯಾಗಲೀ, ಉಲೂಪಿಯಾಗಲೀ, ಸುಭದ್ರೆಯಾಗಲೀ– ಪ್ರಜೆಗಳಿಗೆ ಪ್ರತಿಕೂಲವಾಗಿ ಯಾವಾಗಲೂ ವ್ಯವಹರಿಸುವುದಿಲ್ಲ. ನೀನು ಹುಟ್ಟುಹಾಕಿದ ಪ್ರಜಾ-ರಾಜರ ಸ್ನೇಹವನ್ನು ಯುಧಿಷ್ಠಿರನು ಬಹಳವಾಗಿ ವೃದ್ಧಿಪಡಿಸಿದ್ದಾನೆ. ಪಟ್ಟಣಿಗರಾಗಲೀ ದೇಶದ ಜನರಾಗಲೀ ರಾಜರ ಸ್ನೇಹಹಸ್ತವನ್ನು ಯಾವುದೇ ಕಾರಣದಿಂದಲೂ ತಿರಸ್ಕರಿಸುವುದಿಲ್ಲ. ಮಹಾರಥರಾದ, ಮಾನವಂತರಾದ ಕುಂತಿಯ ಮಕ್ಕಳು ಧರ್ಮಪರಾಯಣರಾಗಿ

ರುತ್ತಾ ಅಧರ್ಮಿಷ್ಠರಾದ ಮನುಷ್ಯರನ್ನೂ ಪರಿಪಾಲಿಸುತ್ತಾರೆ. ಆದುದರಿಂದ ಯುಧಿಷ್ಠಿರನ ದೆಸೆಯಿಂದ ನಿನ್ನ ಮನಸ್ಸಿನಲ್ಲುಂಟಾಗಿರುವ ದುಃಖವನ್ನು ದೂರಮಾಡಿ ಧರ್ಮಕಾರ್ಯಗಳನ್ನು ಮಾಡು. ಸಮಸ್ತಪ್ರಜೆಗಳ ಪರವಾಗಿ ನಿನಗೆ ವಂದನೆಗಳು."

ಜನಮೇಜಯ! ಸಾಂಬನ ಧರ್ಮಾನುಕೂಲವಾದ ಮತ್ತು ಉತ್ತಮಗುಣಗಳಿಂದ ಯುಕ್ತವಾದ ಮಾತುಗಳನ್ನು ಕೇಳಿ ಸಮಸ್ತಜನರೂ 'ಸಾಧು! ಸಾಧು!'–ಎಂದು ಘೋಷಿಸುತ್ತಾ ಅದನ್ನು ಅನುಮೋದಿಸಿದರು. ಧೃತರಾಷ್ಟ್ರನೂ ಸಾಂಬನ ಮಾತನ್ನು ಬಹಳವಾಗಿ ಶ್ಲಾಘಿಸಿದನು. ಆಗಮಿಸಿದ್ದ ಎಲ್ಲ ಪ್ರಜೆಗಳನ್ನೂ ಯಥೋಕ್ತವಾಗಿ ಗೌರವಿಸಿ ಒಬ್ಬೊಬ್ಬರನ್ನಾಗಿ ಕಳುಹಿಸಿಕೊಟ್ಟನು. ಆ ಸಮಯದಲ್ಲಿ ಎಲ್ಲ ಪ್ರಜೆಗಳೂ ಅವನನ್ನು ಶುಭದೃಷ್ಟಿಯಿಂದ ನೋಡಿದರು. (ಅವನ ವಿಷಯದಲ್ಲಿ ಒಳ್ಳೆಯ ಭಾವನೆಯುಳ್ಳವರಾಗಿದ್ದರು.) ಧೃತರಾಷ್ಟ್ರನು ಕೈಜೋಡಿಸಿಕೊಂಡು ನೆರೆದಿದ್ದ ಎಲ್ಲ ಪ್ರಜೆಗಳನ್ನೂ ಗೌರವಿಸಿದನು. ಬಳಿಕ ಗಾಂಧಾರಿಯೊಡನೆ ತನ್ನ ಅರಮನೆಯನ್ನು ಪ್ರವೇಶಿಸಿದನು. ರಾತ್ರಿಯು ಕಳೆದೊಡನೆಯೇ ಧೃತರಾಷ್ಟ್ರನು ಏನು ಮಾಡಿದನೆಂಬುದನ್ನು ಹೇಳುವೆನು; ಕೇಳು.

೧೦ನೆಯ ಅಧ್ಯಾಯವು ಮುಗಿಯಿತು.

೧೧ನೆಯ ಅಧ್ಯಾಯ ಆಶ್ರಮವಾಸಪರ್ವ(ಮುಂದುವರಿದಿದೆ.)

ಧೃತರಾಷ್ಟ್ರನು ವಿದುರನ ಮೂಲಕ ಶ್ರಾದ್ಧಕ್ರಿಯೆಗಾಗಿ ಯುಧಿಷ್ಠಿರನಿಂದ ಧನವನ್ನು ಅಪೇಕ್ಷಿಸಿದುದು: ಧನಕೊಡಲು ಅರ್ಜುನನ ಸಮ್ಮತಿ: ಭೀಮಸೇನನ ವಿರೋಧ

ವೈಶಂಪಾಯನರು ಹೇಳುತ್ತಾರೆ:

ತತೋ ರಜನ್ಯಾಂ ವ್ಯುಷ್ಟಾಯಾಂ ಧೃತರಾಷ್ಟ್ರೋಽಮ್ಬಿಕಾಸುತಃ।
ವಿದುರಂ ಪ್ರೇಷಯಾಮಾಸ ಯುಧಿಷ್ಠಿರನಿವೇಶನಮ್ ॥೧॥

ಜನಮೇಜಯ! ರಾತ್ರಿಯು ಕಳೆದು ಬೆಳಗಾದೊಡನೆಯೇ ಅಂಬಿಕೆಯ ಮಗನಾದ ಧೃತರಾಷ್ಟ್ರನು ವಿದುರನನ್ನು ಯುಧಿಷ್ಠಿರನ ಅರಮನೆಗೆ ಕಳುಹಿಸಿದನು.

ಎಲ್ಲ ಬುದ್ಧಿವಂತರಲ್ಲಿಯೂ ಶ್ರೇಷ್ಠನಾದ, ಪರಮಬುದ್ಧಿಶಾಲಿಯಾದ, ಮಹಾತೇಜಸ್ವಿಯಾದ ವಿದುರನು ಧೃತರಾಷ್ಟ್ರನ ಮಾತಿನಂತೆ ಧರ್ಮದಿಂದ ಯಾವಾಗಲೂ ವಿಚಲಿತನಾಗದ ಯುಧಿಷ್ಠಿರರಾಜನನ್ನು ಸಂಧಿಸಿ ಹೇಳಿದನು:



“ಯುಧಿಷ್ಠಿರ! ಅರಣ್ಯಕ್ಕೆ ಹೋಗಬೇಕೆಂದು ದೀಕ್ಷಿತನಾಗಿರುವ ಮಹಾತೇಜಸ್ವಿಯಾದ ಧೃತರಾಷ್ಟ್ರನು ಮುಂದೆ ಬರುವ ಕಾರ್ತಿಕಮಾಸದ ಹುಣ್ಣಿಮೆಯಂದು ಅರಣ್ಯಕ್ಕೆ ಹೋಗುವವನಿದ್ದಾನೆ. ಅವನು ನಿನ್ನಿಂದ ಸ್ವಲ್ಪ ಧನವನ್ನು ಅಪೇಕ್ಷಿಸುತ್ತಿದ್ದಾನೆ. ಮಹಾತ್ಮನಾದ, ಗಂಗಾಪುತ್ರನಾದ ಭೀಷ್ಮನಿಗೂ, ದ್ರೋಣರಿಗೂ, ಸೋಮದತ್ತನಿಗೂ, ಧೀಮಂತನಾದ ಬಾಹ್ಲೀಕನಿಗೂ, ಸುಹೃದರಿಗೂ ಮತ್ತು ತನ್ನ ಎಲ್ಲ ಮಕ್ಕಳಿಗೂ ಶ್ರಾದ್ಧವನ್ನು

ಮಾಡಲು ಅವನು ಉದ್ದೇಶಿಸಿದ್ದಾನೆ. ನೀನು ಸಮ್ಮತಿಸುವೆಯಾದರೆ ನೀಚನಾದ ಸೈಂಧವನಿಗೂ ಶ್ರಾದ್ಧಮಾಡುವ ಅಪೇಕ್ಷೆಯು ರಾಜನಿಗಿದೆ.”

ಜನಮೇಜಯ! ವಿದುರನ ಆ ಮಾತನ್ನು ಕೇಳಿ ಯುಧಿಷ್ಠಿರನೂ ಮತ್ತು ಅರ್ಜುನನೂ ಪರಮಹೃಷ್ಟರಾದರು. ವಿದುರನನ್ನು ಆದರಿಸಿ ಗೌರವಿಸಿದರು. ಆದರೆ ಮಹಾತೇಜಸ್ವಿಯಾದ, ದೃಢಕ್ರೋಧನಾದ ಭೀಮಸೇನನು ಮಾತ್ರ ದುರ್ಯೋಧನನ ದುಷ್ಕೃತ್ಯಗಳನ್ನು ಸ್ಮರಿಸುತ್ತಾ ವಿದುರನ ಮಾತುಗಳನ್ನು ಅರ್ಜುನ-ಯುಧಿಷ್ಠಿರರಂತೆ ಸಂತೋಷದಿಂದ ಪುರಸ್ಕರಿಸಲಿಲ್ಲ. ಆ ಸಮಯದಲ್ಲಿ ಕಿರೀಟಧರನಾದ ಅರ್ಜುನನು ಭೀಮಸೇನನ ಅಭಿಪ್ರಾಯವನ್ನು ತಿಳಿದು ಅವನ ಕಡೆಗೆ ಸ್ವಲ್ಪಬಾಗಿಕೊಂಡು ನರಶ್ರೇಷ್ಠನಾದ ಭೀಮಸೇನನಿಗೆ ಹೇಳಿದನು:

“ಭೀಮಸೇನ! ಧೃತರಾಷ್ಟ್ರರಾಜನು ನಮ್ಮೆಲ್ಲರಿಗೂ ತಂದೆಯಾಗಿದ್ದಾನೆ. ವೃದ್ಧನಾಗಿದ್ದಾನೆ. ವನವಾಸಕ್ಕೆ ಹೊರಡಲು ದೀಕ್ಷಾಬದ್ಧನಾಗಿದ್ದಾನೆ. ಹೊರಡುವ ಮೊದಲು ಭೀಷ್ಮನೇ ಮೊದಲಾದ ಸಮಸ್ತಬಂಧುಗಳಿಗೂ ಮತ್ತು ಸುಹೃದರಿಗೂ ಔರ್ಧ್ವದೈಹಿಕಶ್ರಾದ್ಧಗಳನ್ನು ಮಾಡಲು ಬಯಸಿದ್ದಾನೆ. ನೀನು ಸಂಪಾದಿಸಿದ ಧನವನ್ನು ಭೀಷ್ಮಾದಿಗಳ ಪರಲೋಕಪ್ರಾಪ್ತಿಗಾಗಿ ದಾನ ಮಾಡಲು ಧೃತರಾಷ್ಟ್ರನು ಇಚ್ಛಿಸಿದ್ದಾನೆ. ಇದಕ್ಕೆ ನೀನು ಅನುಮತಿಸುವುದು ಯೋಗ್ಯವಾಗಿದೆ.

ದಿಷ್ಟ್ಯಾ ತ್ವದ್ಯ ಮಹಾಬಾಹೋ ಧೃತರಾಷ್ಟ್ರಃ ಪ್ರಯಾಚತೇ।
ಯಾಚಿತೋ ಯಃ ಪುರಾಸ್ಮಾಭಿಃ ಪಶ್ಯ ಕಾಲಸ್ಯ ಪರ್ಯಯಮ್ ॥

ಮಹಾಬಾಹುವೇ! ಭೀಮಸೇನ! ನಾವು ಯಾವ ಧೃತರಾಷ್ಟ್ರನನ್ನು ಈ ಹಿಂದೆ ರಾಜ್ಯಕ್ಕಾಗಿ ಯಾಚಿಸಿದ್ದೆವೋ–ಆ ಧೃತರಾಷ್ಟ್ರನೇ ಇಂದು ನಮ್ಮ ಸೌಭಾಗ್ಯವಶದಿಂದ ನಮ್ಮನ್ನು ಯಾಚಿಸುತ್ತಿದ್ದಾನೆ. ಕಾಲದ ವೈಪರೀತ್ಯವನ್ನಾದರೂ ನೋಡಣ್ಣ!

ಯೋಽಸೌ ಪೃಥಿವ್ಯಾಃ ಕೃತ್ಸ್ನಾಯಾ ಭರ್ತಾ ಭೂತ್ವಾ ನರಾಧಿಪಃ।
ಪರೈರ್ವಿನಿಹತಾಮಾತ್ಯೋ ವನಂ ಗನ್ತುಮಭೀಪ್ಸತಿ ॥೧೧॥

ಯಾವನು ಸಮಗ್ರಭೂಮಂಡಲಕ್ಕೂ ಒಡೆಯನಾಗಿದ್ದನೋ–ಅಂತಹ ಧೃತರಾಷ್ಟ್ರನಿಂದು ಶತ್ರುಗಳ ಮೂಲಕ ಅಮಾತ್ಯರನ್ನೂ ಮಕ್ಕಳನ್ನೂ

ಬಂಧುಗಳನ್ನೂ ಕಳೆದುಕೊಂಡು ತಬ್ಬಲಿಯಾಗಿ ಅರಣ್ಯಕ್ಕೆ ಹೋಗಲು ಬಯಸಿದ್ದಾನೆ.

ಮಾ ತೇಽನ್ಯತ್ಪುರುಷವ್ಯಾಘ್ರ ದಾನಾದ್ಭವತು ದರ್ಶನಮ್।
ಅಯಶಸ್ಯಮತೋಽನ್ಯತ್ಸ್ಯಾದಧರ್ಮಶ್ಚ ಮಹಾಭುಜ ॥೧೩॥

ಪುರುಷವ್ಯಾಘ್ರನೇ! ಈ ಸಮಯದಲ್ಲಿ ನಿನಗೆ ದಾನಕೊಡುವುದರ ಹೊರತಾಗಿ ಬೇರೆ ಯಾವ ದೃಷ್ಟಿಯೂ ಇಲ್ಲದಿರಲಿ. ಧೃತರಾಷ್ಟ್ರನ ಕೋರಿಕೆಯನ್ನು ನಿರಾಕರಿಸುವುದಕ್ಕಿಂತಲೂ ಅಯಶಸ್ಕರವಾದುದು ಬೇರೆ ಯಾವುದೂ ಇಲ್ಲ. ಇದರಿಂದ ನಾವು ಅಧರ್ಮಕ್ಕೂ ಭಾಗಿಗಳಾಗುತ್ತೇವೆ.

ರಾಜಾನಮುಪಶಿಕ್ಷಸ್ವ ಜ್ಯೇಷ್ಠಂ ಭ್ರಾತರಮೀಶ್ವರಮ್।
ಅರ್ಹಸ್ತ್ವಮಪಿ ದಾತುಂ ವೈ ನಾದಾತುಂ ಭರತರ್ಷಭ ॥೧೪॥

ಹಿರಿಯಣ್ಣನೂ ನಮ್ಮೆಲ್ಲರಿಗೂ ಒಡೆಯನೂ ಆಗಿರುವ ಯುಧಿಷ್ಠಿರರಾಜನಿಂದ ಶಿಕ್ಷಣವನ್ನು ಪಡೆದುಕೋ. ನೀನೂ ಕೂಡ ನಿನ್ನಲ್ಲಿರುವ ಐಶ್ವರ್ಯವನ್ನು ದಾನಮಾಡುವುದು ಯೋಗ್ಯವಾಗಿದೆ. ಆದರೆ ಬೇರೆಯವರಿಂದ ದಾನವನ್ನು ತೆಗೆದುಕೊಳ್ಳುವುದು ನಿನಗೆ ಯೋಗ್ಯವಲ್ಲ.”

ಜನಮೇಜಯ! ಅರ್ಜುನನು ಹೇಳಿದ ಆ ಮಾತುಗಳನ್ನು ಧರ್ಮರಾಜನು ಶ್ಲಾಘಿಸಿದನು. ಆದರೆ ಭೀಮಸೇನನು ಕ್ರೋಧದಿಂದಲೇ ಹೇಳಿದನು:

ವಯಂ ಭೀಷ್ಮಸ್ಯ ದಾಸ್ಯಾಮಃ ಪ್ರೇತಕಾರ್ಯಂ ತು ಫಾಲ್ಗುನ ।
ಸೋಮದತ್ತಸ್ಯ ನೃಪತೇರ್ಭೂರಿಶ್ರವಸ ಏವ ಚ ॥೧೬॥

ಬಾಹ್ಲೀಕಸ್ಯ ಚ ರಾಜರ್ಷೇರ್ದ್ರೋಣಸ್ಯ ಚ ಮಹಾತ್ಮನಃ।
ಅನ್ಯೇಷಾಂ ಚೈವ ಸರ್ವೇಷಾಂ ಕುನ್ತೀ ಕರ್ಣಾಯ ದಾಸ್ಯತಿ ॥೧೭॥

“ಅರ್ಜುನ! ಭೀಷ್ಮನಿಗೂ, ಸೋಮದತ್ತನಿಗೂ, ಭೂರಿಶ್ರವಸನಿಗೂ, ರಾಜರ್ಷಿಯಾದ ಬಾಹ್ಲೀಕನಿಗೂ, ಮಹಾತ್ಮರಾದ ದ್ರೋಣರಿಗೂ, ಇತರ ಎಲ್ಲ ಬಂಧುಗಳಿಗೂ, ಸುಹೃದರಿಗೂ ನಾವೇ ಶ್ರಾದ್ಧ-ದಾನಾದಿಗಳನ್ನು ಮಾಡೋಣ. ನಮ್ಮ ತಾಯಿಯಾದ ಕುಂತಿಯು ಕರ್ಣನ ಸಲುವಾಗಿ ಪಿಂಡಪ್ರದಾನಮಾಡುತ್ತಾಳೆ.

ಶ್ರಾದ್ಧಾನಿ ಪುರುಷವ್ಯಾಘ್ರ ಮಾ ಪ್ರಾದಾತ್ಕೌರವೋ ನೃಪಃ।
ಇತಿ ಮೇ ವರ್ತತೇ ಬುದ್ಧಿರ್ಮಾ ನೋ ನಿನ್ದನ್ತು ಶತ್ರವಃ ॥೧೮॥

ಇವರೆಲ್ಲರಿಗೂ ಶ್ರಾದ್ಧಕರ್ಮಗಳನ್ನು ಧೃತರಾಷ್ಟ್ರನು ಮಾಡಕೂಡದೆಂಬುದೇ ನನ್ನ ಅಭಿಮತವಾಗಿದೆ. 'ಭೀಷ್ಮಾದಿಗಳಿಗೆ ಪಾಂಡವರು ಶ್ರಾದ್ಧವನ್ನೇ ಮಾಡಲಿಲ್ಲ. ಅಂತಹ ಕಷ್ಟದೆಸೆಯಲ್ಲಿಯೂ ಧೃತರಾಷ್ಟ್ರನೇ ಮಾಡಿದನು'– ಎಂದು ನಮ್ಮ ಶತ್ರುಗಳು ನಮ್ಮನ್ನು ನಿಂದಿಸದಿರಲಿ.

ದುರ್ಯೋಧನಾದಿಗಳ ವಿಷಯದಲ್ಲಿ ಹೇಳುವುದಾದರೆ-ಅವರಿಗೆ ಔರ್ಧ್ವದೈಹಿಕಕ್ರಿಯೆಗಳೇ ನಡೆಯುವುದು ಬೇಡ. ಇದರಿಂದಾಗಿ ಅವರು-

ಕಷ್ಟಾತ್ಕಷ್ಟತರಂ ಯಾನ್ತು ಸರ್ವೇ ದುರ್ಯೋಧನಾದಯಃ ।
ಯೈರಿಯಂ ಪೃಥಿವೀ ಕೃತ್ಸ್ನಾ ಘಾತಿತಾ ಕುಲಪಾಂಸನೈಃ ॥೧೯॥

ಯಾರಿಂದ ಈ ಸಮಗ್ರವಾದ ಭೂಮಂಡಲವೂ ವಿನಾಶಕ್ಕೆ ಗುರಿಯಾಯಿತೋ–ಕುಲಕಳಂಕರಾದ ಆ ದುರ್ಯೋಧನಾದಿಗಳು ಕಷ್ಟದಿಂದ ಇನ್ನೂ ಹೆಚ್ಚಿನ ಕಷ್ಟವನ್ನು ಅನುಭವಿಸಲು ನರಕದಿಂದ ನರಕಕ್ಕೆ ಹೋಗುತ್ತಲೇ ಇರಲಿ. (ಅವರು ಅಂತಹ ರೌರವನರಕಗಳಿಂದ ಮುಕ್ತಿಯನ್ನು ಹೊಂದಲೇಬಾರದು.)

ಕುತಸ್ತ್ವಮಸಿ ವಿಸ್ಮೃತ್ಯ ವೈರಂ ದ್ವಾದಶವಾರ್ಷಿಕಮ್।
ಅಜ್ಞಾತವಾಸಂ ಗಹನಂ ದ್ರೌಪದೀಶೋಕವರ್ಧನಮ್ ॥೨೦॥

ಹನ್ನೆರಡು ವರ್ಷಗಳ ವೈರವನ್ನೂ ದ್ರೌಪದಿಯ ಶೋಕವನ್ನು ಹೆಚ್ಚಿಸಿದ ಗಹನವಾದ ಅಜ್ಞಾತವಾಸವನ್ನೂ ನೀನೇಕೆ ಇಷ್ಟು ಬೇಗ ಮರೆತುಬಿಟ್ಟಿರುವೆ?

ಕ್ವ ತದಾ ಧೃತರಾಷ್ಟ್ರಸ್ಯ ಸ್ನೇಹೋಽಸ್ಮದ್ಗೋಚರೋ ಗತಃ।
ಕೃಷ್ಣಾಜಿನೋಪಸಂವೀತೋ ಹೃತಾಭರಣಭೂಷಣಃ ॥೨೧॥
ಸಾರ್ಧಂ ಪಾಞ್ಚಾಲಪುತ್ರ್ಯಾ ತ್ವಂ ರಾಜಾನಮುಪಜಗ್ಮಿವಾನ್।
ಕ್ವ ತದಾ ದ್ರೋಣಭೀಷ್ಮೌ ತೌ ಸೋಮದತ್ತೋಽಪಿ ವಾಭವತ್ ॥೨೨॥

(ನೀನು ಮರೆತಿದ್ದರೆ ನಾನಾದರೂ ಜ್ಞಾಪಿಸುತ್ತೇನೆ.) ನಿನ್ನಲ್ಲಿದ್ದ ಕೇಯೂರಾಂಗದಗಳೇ ಮುಂತಾದ ಆಭರಣಗಳನ್ನೆಲ್ಲವನ್ನೂ ಶತ್ರುಗಳು ಅಪಹರಿಸಿದ್ದರು. ಕೃಷ್ಣಾಜಿನವನ್ನು ಹೊದ್ದುಕೊಂಡು ಮತ್ತು ನಾರು ಮಡಿಯನ್ನುಟ್ಟುಕೊಂಡು ನೀನು ದ್ರುಪದನ ಪುತ್ರಿಯಾದ ದ್ರೌಪದಿಯೊಡನೆ

ಯುಧಿಷ್ಠಿರರಾಜನನ್ನು ಅನುಸರಿಸಿ ಕಾಡಿಗೆ ಹೋಗುತ್ತಿದ್ದೆ. ಆ ಸಮಯದಲ್ಲಿ ಧೃತರಾಷ್ಟ್ರನಿಗೆ ನಮ್ಮ ಮೇಲಿದ್ದ ಪ್ರೀತಿಯು ಎಲ್ಲಿ ಹೋಗಿದ್ದಿತು? ದ್ರೋಣ-ಭೀಷ್ಮ-ಸೋಮದತ್ತರಿಗಾದರೂ ನಮ್ಮ ಮೇಲಿದ್ದ ಪ್ರೀತಿಯು ಎಲ್ಲಿ ಹೋಗಿದ್ದಿತು?

ಯತ್ರತ್ರಯೋದಶಸಮಾ ವನೇ ವನ್ಯೇವ ಜೀವಥ ।
ನ ತದಾ ತ್ವಾಂ ಪಿತಾ ಜ್ಯೇಷ್ಠಃ ಪಿತೃತ್ವೇನಾಭಿವೀಕ್ಷತೇ ॥೨೩॥

ನೀವು ಹದಿಮೂರು ವರ್ಷಗಳು ಅರಣ್ಯದಲ್ಲಿ ಸಿಕ್ಕುವ ಗೆಡ್ಡೆ-ಗೆಣಸುಗಳನ್ನು ತಿಂದು ಜೀವಿಸುತ್ತಿದ್ದಾಗ-ನಿಮ್ಮ ದೊಡ್ಡಪ್ಪನಿಗೆ ನಿಮ್ಮ ವಿಷಯದಲ್ಲಿ ಮಕ್ಕಳೆಂಬ ಭಾವನೆಯೇನೂ ಉಂಟಾಗಿರಲಿಲ್ಲ. ತಂದೆಯಂತೆ ನಿಮ್ಮನ್ನು ಕಂಡುಕೊಳ್ಳಲಿಲ್ಲ.

ಕಿಂ ತೇ ತದ್ವಿಸ್ಮೃತಂ ಪಾರ್ಥ ಯದೇಷ ಕುಲಪಾಂಸನಃ।
ದುರ್ಬುದ್ಧಿರ್ವಿದುರಂ ಪ್ರಾಹ ದ್ಯೂತೇ ಕಿಂ ಜಿತಮಿತ್ಯುತ ॥೨೪॥

ಅರ್ಜುನ! ಕೌರವಕುಲಕಳಂಕನಾದ, ದುರ್ಬುದ್ಧಿಯವನಾದ ಈ ಧೃತರಾಷ್ಟ್ರನು ದ್ಯೂತದ ಸಮಯದಲ್ಲಿ ಕ್ಷಣ-ಕ್ಷಣಕ್ಕೂ 'ಕಿಂ ಜಿತಂ–ಕಿಂ ಜಿತಂ' ಎಂದು ವಿದುರನಿಗೆ ಅಟ್ಟಹಾಸದಿಂದ ಹೇಳುತ್ತಿದ್ದುದು ನಿನಗೆ ಇಷ್ಟುಬೇಗ ಮರೆತುಹೋಯಿತೇ?"

ಹೀಗೆ ಹೇಳುತ್ತಿದ್ದ ಭೀಮಸೇನನನ್ನು ಧೀಮಂತನಾದ ಯುಧಿಷ್ಠಿರನು ಗದರಿಸುತ್ತಾ 'ಸಾಕು, ಸುಮ್ಮನಿರು'–ಎಂದು ಹೇಳಿದನು.

೧೧ನೆಯ ಅಧ್ಯಾಯವು ಮುಗಿಯಿತು.

೧೨ನೆಯ ಅಧ್ಯಾಯ ಆಶ್ರಮವಾಸಪರ್ವ (ಮುಂದುವರಿದಿದೆ.)

ಅರ್ಜುನನಿಂದ ಭೀಮನ ಸಮಾಧಾನ: ಧೃತರಾಷ್ಟ್ರನಿಗೆ ಯಥೇಷ್ಟವಾದ ಹಣಕೊಡಲು ಯುಧಿಷ್ಠಿರನ ಒಪ್ಪಿಗೆ

ಜನಮೇಜಯ! ಅರ್ಜುನನು ಹೇಳುತ್ತಾನೆ:

ಭೀಮ ಜ್ಯೇಷ್ಠೋ ಗುರುರ್ಮೇ ತ್ವಂ ನಾತೋಽನ್ಯದ್ವಕ್ತುಮುತ್ಸಹೇ।
ಧೃತರಾಷ್ಟ್ರಸ್ತು ರಾಜರ್ಷಿಃ ಸರ್ವಥಾ ಮಾನಮರ್ಹತಿ ॥೧॥

"ಭೀಮಸೇನ! ನೀನು ನನಗಿಂತಲೂ ಹಿರಿಯವನಾಗಿರುವೆ. ಆದುದರಿಂದ ನೀನು ನನಗೆ ಗುರುವು. ನಾನು ನಿನ್ನ ಮುಂದೆ ಹೆಚ್ಚು ಮಾತನಾಡಲು ಇಷ್ಟಪಡುವುದಿಲ್ಲ. ರಾಜರ್ಷಿಯಾದ ಧೃತರಾಷ್ಟ್ರನು ಸರ್ವಥಾ ಸಮ್ಮಾನಕ್ಕೆ ಯೋಗ್ಯನಾಗಿದ್ದಾನೆ. ಇಷ್ಟುಮಾತ್ರ ನಾನು ಹೇಳಬಯಸುತ್ತೇನೆ.

ನ ಸ್ಮರನ್ತ್ಯಪರಾದ್ಧಾನಿ ಸ್ಮರನ್ತಿ ಸುಕೃತಾನ್ಯಪಿ ।
ಅಸಮ್ಭಿನ್ನಾರ್ಯಮರ್ಯಾದಾಃ ಸಾಧವಃ ಪುರುಷೋತ್ತಮಾಃ ॥೭॥

ಆರ್ಯಮರ್ಯಾದೆಯನ್ನು ಮೀರದೇ ಇರುವ ಪುರುಷಶ್ರೇಷ್ಠರಾದ ಸತ್ಪುರುಷರು ಇತರರಿಂದಾದ ಅಪರಾಧಗಳನ್ನು ಎಂದಿಗೂ ಸ್ಮರಿಸುವುದಿಲ್ಲ. ಉಪಕಾರವನ್ನು ಮಾತ್ರ ಸ್ಮರಿಸುತ್ತಾರೆ."

ಜನಮೇಜಯ! ಮಹಾತ್ಮನಾದ ಫಾಲ್ಗುನನ ಆ ಮಾತನ್ನು ಕೇಳಿ ಕುಂತಿಯ ಮಗನಾದ ಧರ್ಮಾತ್ಮನಾದ ಯುಧಿಷ್ಠಿರನು ವಿದುರನಿಗೆ ಹೇಳಿದನು:

"ಕ್ಷತ್ತನೇ! ನನ್ನ ಮಾತಿನಂತೆ ನೀನು ರಾಜನ ಬಳಿಗೆ ಹೋಗಿ ಅವನೊಡನೆ ಹೇಳು. ಅವನ ಮಕ್ಕಳ ಶ್ರಾದ್ಧಕರ್ಮಕ್ಕಾಗಿ ಎಷ್ಟು ಧನವನ್ನು ಅಪೇಕ್ಷಿಸುವನೋ ಅಷ್ಟನ್ನೂ ನಾನು ಕೊಡುತ್ತೇನೆ. ಭೀಷ್ಮನೇ ಮೊದಲಾದ ಎಲ್ಲ ಉಪಕಾರಿಗಳಿಗೂ ಸುಹೃದರಿಗೂ ಶ್ರಾದ್ಧವನ್ನು ಮಾಡಲು ನನ್ನ ಸ್ವಂತ ಭಂಡಾರದಿಂದ ಹಣವನ್ನು ಕೊಡುತ್ತೇನೆ. ಇದಕ್ಕಾಗಿ ಭೀಮನು ಮನಸ್ಸನ್ನು ಕೆಡಿಸಿಕೊಳ್ಳುವುದು ಬೇಡ."

ಹೀಗೆ ಹೇಳಿ ಧರ್ಮರಾಜನು ಅರ್ಜುನನ ನಿಲುವನ್ನು ಶ್ಲಾಘಿಸಿದನು. ಆ ಸಮಯದಲ್ಲಿ ಭೀಮಸೇನನು ಅರ್ಜುನನನ್ನು ಓರೆಗಣ್ಣಿನಿಂದ ನೋಡುತ್ತಿದ್ದನು. ಬಳಿಕ ಯುಧಿಷ್ಠಿರನು ಧೀಮಂತನಾದ ವಿದುರನಿಗೆ ಈ ಮಾತನ್ನು ಹೇಳಿದನು:

ಭೀಮಸೇನೇ ನ ಕೋಪಂ ಸ ನೃಪತಿಃ ಕರ್ತುಮರ್ಹತಿ ॥೮॥

"ಧೃತರಾಷ್ಟ್ರರಾಜನು ಭೀಮಸೇನನ ವಿಷಯದಲ್ಲಿ ಕೋಪಗೊಳ್ಳ ಬಾರದು.

ಪರಿಕ್ಲಿಷ್ಟೋ ಹಿ ಭೀಮೋಽಪಿ ಹಿಮವೃಷ್ಟ್ಯಾತಪಾದಿಭಿಃ।
ದುಃಖೈರ್ಬಹುವಿಧೈರ್ಧೀಮಾನರಣ್ಯೇ ವಿದಿತಂ ತವ ॥೯॥

ಧೀಮಂತನಾದ ಭೀಮಸೇನನು ಅರಣ್ಯದಲ್ಲಿ ಮಂಜು, ಮಳೆ, ಬಿಸಿಲು-ಮುಂತಾದ ಬಹುವಿಧವಾದ ದುಃಖಗಳಿಂದ ಹೆಚ್ಚು ತೊಂದರೆಯನ್ನು ಅನುಭವಿಸಿದ್ದಾನೆ. ವಿದುರ! ಈ ವಿಷಯವು ನಿನಗೂ ತಿಳಿದೇ ಇದೆ. **ಯದ್ಯದಿಚ್ಛಸಿ ಯಾವಚ್ಚ ಗೃಹ್ಯತಾಂ ಮದ್ಗೃಹಾದಿತಿ ।** ಯಾವ-ಯಾವ ಪದಾರ್ಥಗಳು ಎಷ್ಟೆಷ್ಟು ಬೇಕೋ ಅಷ್ಟನ್ನೂ ಅವನು ನನ್ನ ಅರಮನೆಯ ಬೊಕ್ಕಸದಿಂದ ತೆಗೆದುಕೊಳ್ಳಲಿ.

ಯನ್ಮಾತ್ಸರ್ಯಮಯಂ ಭೀಮಃ ಕರೋತಿ ಭೃಶದುಃಖಿತಃ।
ನ ತನ್ಮನಸಿ ಕರ್ತವ್ಯಮಿತಿ ವಾಚ್ಯಃ ಸ ಪಾರ್ಥಿವಃ ॥೧೦॥

ಹಿಂದಿನ ಕಷ್ಟಗಳನ್ನು ಸ್ಮರಿಸಿ ಅತ್ಯಂತದುಃಖಿತನಾಗಿರುವ ಭೀಮಸೇನನು ತೋರಿರುವ ಅಸೂಯೆಯನ್ನು ಧೃತರಾಷ್ಟ್ರನು ಮನಸ್ಸಿನಲ್ಲಿ ಇಟ್ಟುಕೊಳ್ಳಬಾರದು. ವಿದುರ! ಹೀಗೆ ನೀನು ರಾಜನಿಗೆ ಹೇಳಬೇಕು.

ಯನ್ಮಮಾಸ್ತಿ ಧನಂ ಕಿಂಚಿದರ್ಜುನಸ್ಯ ಚ ವೇಶ್ಮನಿ।
ತಸ್ಯ ಸ್ವಾಮೀ ಮಹಾರಾಜ ಇತಿ ವಾಚ್ಯಃ ಸ ಪಾರ್ಥಿವಃ ॥೧೧॥

ನನ್ನ ಮನೆಯಲ್ಲಿ ಮತ್ತು ಅರ್ಜುನನ ಮನೆಯಲ್ಲಿ ಯಾವ ಅಲ್ಪ-ಸ್ವಲ್ಪ ದ್ರವ್ಯವಿರುವುದೋ ಅವೆಲ್ಲಕ್ಕೂ ಧೃತರಾಷ್ಟ್ರಮಹಾರಾಜನೇ ಸ್ವಾಮಿಯಾಗಿದ್ದಾನೆ–ಎಂಬ ಈ ವಿಷಯವನ್ನೂ ನೀನು ರಾಜನಿಗೆ ಹೇಳಬೇಕು.

ದದಾತು ರಾಜಾ ವಿಪ್ರೇಭ್ಯೋ ಯಥೇಷ್ಟಂ ಕ್ರಿಯತಾಂ ವ್ಯಯಃ।
ಪುತ್ರಾಣಾಂ ಸುಹೃದಾಂ ಚೈವ ಗಚ್ಛತ್ವಾನೃಣ್ಯಮದ್ಯ ಸಃ ॥೧೨॥

ಧೃತರಾಷ್ಟ್ರರಾಜನು ಬ್ರಾಹ್ಮಣರಿಗೆ ಯಥೇಷ್ಟವಾಗಿ ಧನವನ್ನು ದಾನಮಾಡಲಿ. ಶ್ರಾದ್ಧಕರ್ಮಗಳಿಗೆ ಯಥೇಚ್ಛವಾಗಿ ವೆಚ್ಚಮಾಡಲಿ. ರಾಜನು ಪುತ್ರರ ಮತ್ತು ಸುಹೃದರ ಋಣದಿಂದ ಮುಕ್ತನಾಗಲಿ.

ಇದಂ ಚಾಪಿ ಶರೀರಂ ಮೇ ತವಾಯತ್ತಂ ಜನಾಧಿಪ ।
ಧನಾನಿ ಚೇತಿ ವಿದ್ಧಿ ತ್ವಂ ನ ಮೇ ತತ್ರಾಸ್ತಿ ಸಂಶಯಃ ॥೧೩॥

ವಿದುರ! ನೀನು ಈ ಮಾತನ್ನು ರಾಜನಿಗೆ ಯಥಾವತ್ತಾಗಿ ಹೇಳ

ಬೇಕು-‘ನನ್ನ ಶರೀರವೂ ಮತ್ತು ಸಮಗ್ರವಾದ ಐಶ್ವರ್ಯವೂ ನಿನ್ನ ಅಧೀನದಲ್ಲಿದೆ –ಎಂಬುದನ್ನು ನೀನು ಚೆನ್ನಾಗಿ ತಿಳಿದುಕೊ.’ ಈ ವಿಷಯದಲ್ಲಿ ನನ್ನ ಮನಸ್ಸಿನಲ್ಲಿ ಯಾವ ವಿಧವಾದ ಸಂಶಯವೂ ಇಲ್ಲ.”

೧೨ನೆಯ ಅಧ್ಯಾಯವು ಮುಗಿಯಿತು.

ವಿದುರನು ಧೃತರಾಷ್ಟ್ರನಿಗೆ ಯುಧಿಷ್ಠಿರನ ಉದಾರತೆಯ ಉತ್ತರವನ್ನು ತಿಳಿಸಿದುದು

ವೈಶಂಪಾಯನರು ಹೇಳುತ್ತಾರೆ:

ಏವಮುಕ್ತಸ್ತು ರಾಜ್ಞಾ ಸ ವಿದುರೋ ಬುದ್ಧಿಸತ್ತಮಃ।
ಧೃತರಾಷ್ಟ್ರಮುಪೇತ್ಯೈವಂ ವಾಕ್ಯಮಾಹ ಮಹಾರ್ಥವತ್ ॥೧॥

ಜನಮೇಜಯ! ಯುಧಿಷ್ಠಿರರಾಜನು ಹೀಗೆ ಹೇಳಿದನಂತರ ಬುದ್ಧಿವಂತರಲ್ಲಿ ಶ್ರೇಷ್ಠನಾದ ವಿದುರನು ಧೃತರಾಷ್ಟ್ರನ ಬಳಿಗೆ ಹೋಗಿ ಅರ್ಥವತ್ತಾದ ಈ ಮಾತನ್ನು ಹೇಳಿದನು:

“ಧೃತರಾಷ್ಟ್ರಮಹಾರಾಜ! ನಾನು ನಿನ್ನ ಆಜ್ಞೆಯಂತೆ ಯುಧಿಷ್ಠಿರನ ಬಳಿಗೆ ಹೋಗಿ ನೀನು ಹೇಳಿದುದನ್ನು ಮೊದಲಿನಿಂದ ಕಡೆಯವರೆಗೂ ವಿವರಿಸಿ ಹೇಳಿದೆನು. ಮಹಾದ್ಯುತಿಯಾದ ಅವನು ನನ್ನ ಮಾತನ್ನು ಕೇಳಿ ನಿನ್ನನ್ನು ಬಹಳವಾಗಿ ಪ್ರಶಂಸಿಸಿದನು. ಮಹಾತೇಜಸ್ವಿಯಾದ ಅರ್ಜುನನೂ ತನ್ನ ಅರಮನೆಯನ್ನೂ, ಐಶ್ವರ್ಯವನ್ನೂ, ತನ್ನ ಪ್ರಾಣಗಳನ್ನೂ ನಿನ್ನ ಸೇವೆಗಾಗಿ ಸಮರ್ಪಿಸಿದ್ದಾನೆ. ರಾಜರ್ಷಿಯೇ! ನಿನ್ನ ಮಗನಾದ ಧರ್ಮರಾಜನು ರಾಜ್ಯವನ್ನೂ, ಪ್ರಾಣಗಳನ್ನೂ, ಐಶ್ವರ್ಯಗಳನ್ನೂ ಮತ್ತು ತನ್ನಲ್ಲಿರುವ ಯಾವುದೇ ವಸ್ತುವನ್ನೂ ನಿನಗೆ ಒಪ್ಪಿಸಿದ್ದಾನೆ. ಅದನ್ನು ನೀನು ಹೇಗೆ ಬೇಕಾದರೂ ಉಪಯೋಗಿಸಿಕೊಳ್ಳಲು ಅನುಮತಿಸಿದ್ದಾನೆ. ಆದರೆ ಮಹಾಬಾಹುವಾದ ಭೀಮಸೇನನು ಮಾತ್ರ ಹಿಂದಿನ ಅಗಣಿತವಾದ ದುಃಖಗಳನ್ನು ಸ್ಮರಿಸಿಕೊಂಡು ನಿಟ್ಟುಸಿರುಬಿಡುತ್ತಾ ಬಹಳ ಕಷ್ಟದಿಂದ ರಾಜನ ನಿರ್ಧಾರವನ್ನು ಅನುಮೋದಿಸಿದನು. ಧರ್ಮಶೀಲನಾದ ಯುಧಿಷ್ಠಿರನೂ

ಮತ್ತು ಅರ್ಜುನನೂ ಮಹಾಬಾಹುವಾದ ಭೀಮಸೇನನನ್ನು ಸಮಾಧಾನಗೊಳಿಸಿ ನಿನ್ನ ವಿಷಯದಲ್ಲಿ ಅವನಿಗೂ ಸೌಹಾರ್ದವುಂಟಾಗುವಂತೆ ಮಾಡಿರುತ್ತಾರೆ. 'ಭೀಮಸೇನನು ಹಿಂದಿನ ವೈರವನ್ನು ಸ್ಮರಿಸಿ ನ್ಯಾಯವಲ್ಲದ ರೀತಿಯಲ್ಲಿ ನಿನ್ನೊಡನೆ ವ್ಯವಹರಿಸಿರುತ್ತಾನೆ. ಇದಕ್ಕಾಗಿ ನೀನು ಕೋಪಿಸಿಕೊಳ್ಳಬಾರದು'–ಎಂಬ ಮಾತನ್ನೂ ಯುಧಿಷ್ಠಿರನು ನಿನಗೆ ಹೇಳಿಕಳುಹಿಸಿದ್ದಾನೆ.

'ನರೇಶ್ವರನೇ! ಕ್ಷತ್ರಿಯರ ಧರ್ಮವು ಹೀಗೆಯೇ ಇದ್ದಿರಬಹುದು. ಏಕೆಂದರೆ: ಈ ಭೀಮಸೇನನು ಯುದ್ಧದಲ್ಲಿಯೂ ಮತ್ತು ಕ್ಷತ್ರಿಯಧರ್ಮದಲ್ಲಿಯೂ ಯಾವಾಗಲೂ ನಿರತನಾಗಿರತಕ್ಕವನು. ಭೀಮಸೇನನ ಸಲುವಾಗಿ ನಾನೂ ಮತ್ತು ಅರ್ಜುನನೂ ನಿನ್ನನ್ನು ಪುನಃ ಪುನಃ ಬೇಡಿಕೊಳ್ಳುತ್ತೇವೆ. ಅವನನ್ನು ನಮ್ಮ ಪರವಾಗಿ ಕ್ಷಮಿಸಿಬಿಡು. ನಮ್ಮ ಬಳಿಯಲ್ಲಿ ಏನಿರುವುದೋ ಅವೆಲ್ಲಕ್ಕೂ ನೀನೇ ಸ್ವಾಮಿಯು. ನೀನು ಎಷ್ಟು ಧನವನ್ನು ದಾನಮಾಡಬೇಕೆಂದು ಬಯಸುವೆಯೋ ಅಷ್ಟನ್ನೂ ಕೊಡು. ನೀನು ಈ ರಾಜ್ಯಕ್ಕೂ ಮತ್ತು ನನ್ನ ಪ್ರಾಣಗಳಿಗೂ ಒಡೆಯನಾಗಿರುವೆ'-ಎಂದೂ ನಿನಗೆ ಹೇಳಿಕಳುಹಿಸಿದ್ದಾನೆ. ಯುಧಿಷ್ಠಿರನು ನಿನ್ನೊಡನೆ ಹೀಗೂ ಹೇಳಿದ್ದಾನೆ. 'ಧೃತರಾಷ್ಟ್ರನು ಮಕ್ಕಳಿಗೆ ಶ್ರಾದ್ಧಕ್ರಿಯೆಗಳನ್ನು ಮಾಡಲಿ. ಅದರ ಸಂಬಂಧವಾಗಿ ಬ್ರಾಹ್ಮಣರಿಗೆ ಗ್ರಾಮಗಳನ್ನು ಉಂಬಳಿಯಾಗಿ ಕೊಡಲಿ. ನನ್ನ ಅರಮನೆಯಿಂದ ರತ್ನಗಳನ್ನೂ, ಗೋವುಗಳನ್ನೂ, ದಾಸ-ದಾಸಿಯರನ್ನೂ, ಆಡು-ಕುರಿಗಳನ್ನೂ ತರಿಸಿಕೊಂಡು ಬ್ರಾಹ್ಮಣರಿಗೆ ದಾನಮಾಡಲಿ.'

ವಿದುರ! ನೀನು ರಾಜನ ಆಜ್ಞೆಯಂತೆಯೇ ದೀನರಿಗೂ, ಕುರುಡರಿಗೂ ಮತ್ತು ದರಿದ್ರರಿಗೂ ಅನುಕೂಲವಾಗುವಂತೆ ದೇಶದ ನಾನಾಭಾಗಗಳಲ್ಲಿ ಅನ್ನ-ರಸ-ಪಾನೀಯಗಳಿಂದ ಸಮೃದ್ಧವಾದ ಧರ್ಮಛತ್ರಗಳನ್ನು ನಿರ್ಮಿಸು. ಹಸುಗಳು ನೀರು ಕುಡಿಯಲು ನೀರಿನ ತೊಟ್ಟಿಗಳನ್ನು ನಿರ್ಮಿಸು. ಇವೇ ಅಲ್ಲದೇ ಇನ್ನೂ ನಾನಾವಿಧವಾದ ಪುಣ್ಯಕಾರ್ಯಗಳನ್ನೂ ಮಾಡು.'

ಮಹಾರಾಜ! ಹೀಗೆ ಯುಧಿಷ್ಠಿರ-ಧನಂಜಯರು ನನಗೆ ಹೇಳಿದರು.

ಮುಂದೆ ಯಾವ ಕಾರ್ಯವನ್ನು ಮಾಡಬೇಕಾಗಿರುವುದೋ ಅದನ್ನು ಹೇಳುವ ಕೃಪೆಮಾಡು."

ಜನಮೇಜಯ! ವಿದುರನು ಹೀಗೆ ಹೇಳಲು ಧೃತರಾಷ್ಟ್ರನು ಪಾಂಡವರನ್ನು ಬಹಳವಾಗಿ ಪ್ರಶಂಸಿಸಿದನು. ಕಾರ್ತಿಕಮಾಸದಲ್ಲಿ ತನ್ನ ಮಕ್ಕಳ ಸಲುವಾಗಿ ಮಹಾದಾನಗಳನ್ನು ಮಾಡಲು ನಿಶ್ಚಯಿಸಿದನು.

೧೩ನೆಯ ಅಧ್ಯಾಯವು ಮುಗಿಯಿತು.

ಧೃತರಾಷ್ಟ್ರನು ಮೃತರಿಗೆ ಶ್ರಾದ್ಧಾದಿಗಳನ್ನೂ-ಮಹಾದಾನಗಳನ್ನೂ ಮಾಡಿದುದು

ವೈಶಂಪಾಯನರು ಹೇಳುತ್ತಾರೆ:

ವಿದುರೇಣೈವಮುಕ್ತಸ್ತು ಧೃತರಾಷ್ಟ್ರೋ ಜನಾಧಿಪಃ।
ಪ್ರೀತಿಮಾನಭವದ್ರಾಜನ್ರಾಜ್ಞೋ ಜಿಷ್ಣೋಶ್ಚ ಕರ್ಮಣಿ ॥೧॥

ವಿದುರನು ಹೀಗೆ ಹೇಳಲು ಜನಾಧಿಪನಾದ ಧೃತರಾಷ್ಟ್ರನು ತನ್ನ ಪ್ರಾರ್ಥನೆಗೆ ಯುಧಿಷ್ಠಿರನೂ ಮತ್ತು ಅರ್ಜುನನೂ ತೋರಿದ ಸೌಜನ್ಯಪೂರ್ವಕವಾದ ಪ್ರತಿಕ್ರಿಯೆಯಿಂದ ಅತ್ಯಂತಪ್ರಸನ್ನನಾದನು.

ಬಳಿಕ ಅವನು ಭೀಷ್ಮನ ಮತ್ತು ತನ್ನ ಮಕ್ಕಳ ಶ್ರಾದ್ಧದ ಸಲುವಾಗಿ ಸುಯೋಗ್ಯರಾದ ಮತ್ತು ಶ್ರೇಷ್ಠರಾದ ಬ್ರಹ್ಮರ್ಷಿಗಳನ್ನೂ ಸಾವಿರಾರು ಸುಹೃದರನ್ನೂ ಆಮಂತ್ರಿಸಿದನು. ಬಳಿಕ ಅನ್ನ-ಪಾನಾದಿಗಳು, ಯಾನಗಳು, ಹೊದ್ದಿಕೆಗಳು, ಸುವರ್ಣ-ಮಣಿ-ರತ್ನಗಳು, ದಾಸ-ದಾಸಿಯರು, ಆಡು-ಕುರಿಗಳು, ಕಂಬಳಿಗಳು, ಶ್ರೇಷ್ಠವಾದ ರತ್ನಗಳು, ಗ್ರಾಮಗಳು, ಕ್ಷೇತ್ರಗಳು, ಧನ-ಆಭರಣಗಳಿಂದ ಸಮಲಂಕೃತವಾದ ಆನೆ-ಕುದುರೆಗಳು, ಸುಂದರಿಯರಾದ ರಾಜಕನ್ಯೆಯರು–ಎಲ್ಲವನ್ನೂ ಒಂದೆಡೆಯಲ್ಲಿ ಸಂಗ್ರಹಿಸಿದನು. ಅನಂತರ ದ್ರೋಣ, ಭೀಷ್ಮ, ಸೋಮದತ್ತ, ಬಾಹ್ಲೀಕ, ದುರ್ಯೋಧನ ಮತ್ತು ಅವನ ಅನುಜರು, ಜಯದ್ರಥನೇ ಮೊದಲಾದ ಬಂಧುಗಳು, ಸುಹೃದರು-ಇವರೆಲ್ಲರನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ಉದ್ದೇಶಿಸಿ, ಅವರ

ಹೆಸರುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಹೇಳಿ ಒಬ್ಬೊಬ್ಬ ಬ್ರಾಹ್ಮಣನಿಗೂ ಅಲ್ಲಿ ಸಂಗ್ರಹಿಸಿದ್ದ ವಸ್ತುಗಳನ್ನು ದಾನವಾಗಿ ಕೊಟ್ಟನು.

ಯುಧಿಷ್ಠಿರನ ಅಭಿಪ್ರಾಯದಂತೆ ಆ ಶ್ರಾದ್ಧಯಜ್ಞವು ಪ್ರಚುರವಾದ ಧನರೂಪವಾದ ದಕ್ಷಿಣೆಗಳಿಂದ ಸುಶೋಭಿಸುತ್ತಿದ್ದಿತು. ಅನೇಕ ಧನ-ಕನಕ-ರತ್ನರಾಶಿಗಳು ಆ ಶ್ರಾದ್ಧಯಜ್ಞಕ್ಕಾಗಿ ವ್ಯಯವಾದುವು. ಯುಧಿಷ್ಠಿರನ ಆಜ್ಞಾನುಸಾರವಾಗಿ ಅನೇಕಗಣಕರೂ ಮತ್ತು ಲೇಖಕರೂ (ಬೊಕ್ಕಸದ ಆಯ-ವ್ಯಯಗಳನ್ನು ನೋಡಿಕೊಳ್ಳುವವರು) ನಿರಂತರವಾಗಿ ಧೃತರಾಷ್ಟ್ರನ ಸಮೀಪದಲ್ಲಿಯೇ ಇರುತ್ತಿದ್ದು ಅವನನ್ನು ಕುರಿತು ಬಾರಿ-ಬಾರಿಗೂ ಹೀಗೆ ಕೇಳುತ್ತಿದ್ದರು:

'ಆಜ್ಞಾಪಯ ಕಿಮೇತೇಭ್ಯಃ ಪ್ರದಾಯಂ ದೀಯತಾಂ-ಇವರಿಗೆ ಯಾವ ವಸ್ತುವನ್ನು ದಾನವಾಗಿ ಕೊಡಬೇಕು? ತದುಪಸ್ಥಿತಮೇವಾತ್ರ-ಯಾವುದೇ ವಸ್ತುವಾದರೂ ಇಲ್ಲಿಯೇ ಸಿದ್ಧವಾಗಿದೆ. ಯಾವುದನ್ನು ಬೇಕಾದರೂ ಕೊಡಬಹುದು'–ಎಂದು ಹೇಳುತ್ತಿದ್ದರು. ಧೃತರಾಷ್ಟ್ರನು ಹೇಳಿದಷ್ಟು ಧನವನ್ನು ಗಣಕರು ಯಾಚಕರಿಗೆ ಒಡನೆಯೇ ಕೊಟ್ಟುಬಿಡುತ್ತಿದ್ದರು. ಬುದ್ಧಿವಂತನಾದ ಕೌಂತೇಯನ ಆದೇಶದಂತೆ ಧೃತರಾಷ್ಟ್ರನು ನೂರು ನಾಣ್ಯಗಳನ್ನು ಕೊಡಲು ಆಜ್ಞಾಪಿಸಿದರೆ ಗಣಕರು ಸಾವಿರ ನಾಣ್ಯಗಳನ್ನು ಕೊಡುತ್ತಿದ್ದರು. ಸಾವಿರ ಸುವರ್ಣನಾಣ್ಯಗಳನ್ನು ಕೊಡಲು ಆಜ್ಞಾಪಿಸಿದರೆ-ಹತ್ತುಸಾವಿರ ಸುವರ್ಣನಾಣ್ಯಗಳನ್ನು ದಾನವಾಗಿ ಕೊಡುತ್ತಿದ್ದರು. ಮೇಘವು ಮಳೆಗರೆದು ಭೂಮಿಯಲ್ಲಿನ ಸಸ್ಯವನ್ನು ಹುಲುಸುಮಾಡುವಂತೆ–ಧೃತರಾಷ್ಟ್ರ ರೂಪವಾದ ಮೇಘವು ಧನರೂಪವಾದ ಮಳೆಯನ್ನು ಸುರಿಸಿ ಬ್ರಾಹ್ಮಣರೂಪವಾದ ಕ್ಷೇತ್ರಗಳನ್ನು ಉಲ್ಲಾಸಗೊಳಿಸಿತು. ಬಳಿಕ ರಾಜನು ಸಮಸ್ತವರ್ಣಗಳ ಜನರನ್ನೂ ಅನ್ನ-ರಸ-ಪಾನೀಯಗಳ ಪ್ರವಾಹಗಳಿಂದ ತೇಲಿಸಿಬಿಟ್ಟನು. ಧೃತರಾಷ್ಟ್ರನು ಮಾಡಿದ ದಾನಯಜ್ಞವು ಉಕ್ಕಿಬರುತ್ತಿರುವ ಸಮುದ್ರ ದೋಪಾದಿಯಲ್ಲಿದ್ದಿತು. ವಸ್ತ್ರ-ಧನ-ರತ್ನರಾಶಿಗಳು ಸಮುದ್ರದ ಅಲೆಗಳ ರೂಪದಲ್ಲಿದ್ದುವು. ಮೃದಂಗನಿನಾದವೇ ಸಮುದ್ರದ ಗರ್ಜನೆಯಂತಿದ್ದಿತು. (ಒಂದೊಂದು ದಾನವಾಗುತ್ತಲೂ ಭೇರೀ-ಮೃದಂಗಗಳ ಘೋಷವಾಗುತ್ತಿತ್ತು.) ಗೋವುಗಳು ಮತ್ತು ಕುದುರೆಗಳು ಸಮುದ್ರದಲ್ಲಿರುವ ಮೊಸಳೆಗಳಂತೆಯೂ ಮತ್ತು ಸುಳಿಗಳಂತೆಯೂ ಕಾಣುತ್ತಿದ್ದುವು.

ಹಲವಾರು ಬಗೆಯ ರತ್ನಗಳಿಗೆ ಅದು ಆಕರವಾಗಿದ್ದಿತು. ಉಂಬಳಿಯಾಗಿ ಕೊಡಲು ಸಿದ್ಧವಾಗಿದ್ದ ಗ್ರಾಮ ಮತ್ತು ಅಗ್ರಹಾರಗಳೇ ಸಮುದ್ರದ ದ್ವೀಪಗಳಂತಿದ್ದುವು. ಮಣಿ ಮತ್ತು ಸುವರ್ಣಗಳೆಂಬ ನೀರಿನಿಂದ ಆ ಸಮುದ್ರವು ತುಂಬಿದ್ದಿತು. ಧೃತರಾಷ್ಟ್ರರೂಪಿಯಾದ ಚಂದ್ರನ ಉದಯ ವಾದೊಡನೆಯೇ ದಾನಯಜ್ಞರೂಪವಾದ ಆ ಸಮುದ್ರವು ಉಕ್ಕಿಹರಿದು ಜಗತ್ತನ್ನೇ ಮುಳುಗಿಸಿತು.

ಹೀಗೆ ಧೃತರಾಷ್ಟ್ರರಾಜನು ಪುತ್ರ-ಪೌತ್ರರಿಗೂ, ಪಿತೃಗಳಿಗೂ ಶ್ರಾದ್ಧವನ್ನು ಮಾಡಿದನಲ್ಲದೇ ತನ್ನ ಮತ್ತು ಗಾಂಧಾರಿಯ ಪರಲೋಕಪ್ರಾಪ್ತಿಗಾಗಿಯೂ ಅನೇಕವಿಧವಾದ ದಾನಗಳನ್ನು ಕೊಟ್ಟನು. ಹೀಗೆ ಅನೇಕಪ್ರಕಾರವಾಗಿ ದಾನಗಳನ್ನು ಕೊಟ್ಟು-ಕೊಟ್ಟು ಆಯಾಸಗೊಂಡವನಾಗಿ ದಾನಯಜ್ಞವನ್ನು ಮುಗಿಸಿದನು. ಹೀಗೆ ಧೃತರಾಷ್ಟ್ರರಾಜನು ಬಹುವಿಧವಾದ ಅನ್ನಗಳಿಂದಲೂ-ರಸಗಳಿಂದಲೂ-ದಕ್ಷಿಣೆಗಳಿಂದಲೂ ಯುಕ್ತವಾದ, ನಟ-ನರ್ತಕರ ನಾಟ್ಯ-ನೃತ್ಯ-ನರ್ತನಗಳಿಂದಲೂ ಕೂಡಿದ್ದ ದಾನಮಹಾಯಜ್ಞವನ್ನು ಮಾಡಿದನು. ಹತ್ತು ದಿವಸಗಳ ಕಾಲ ನಾನಾಪ್ರಕಾರವಾದ ದಾನಗಳನ್ನು ಕೊಟ್ಟ ಧೃತರಾಷ್ಟ್ರನು ಮಕ್ಕಳು-ಮೊಮ್ಮಕ್ಕಳ ಋಣದಿಂದ ಮುಕ್ತನಾದನು.

ಗ೪ನೆಯ ಅಧ್ಯಾಯವು ಮುಗಿಯಿತು.

ಗ೫ನೆಯ ಅಧ್ಯಾಯ ಆಶ್ರಮವಾಸಪರ್ವ (ಮುಂದುವರಿದಿದೆ.)

ಗಾಂಧಾರಿಯೊಡನೆ ಧೃತರಾಷ್ಟ್ರನ ವನಪ್ರಸ್ಥಾನ

ವೈಶಂಪಾಯನರು ಹೇಳುತ್ತಾರೆ:

ತತಃ ಪ್ರಭಾತೇ ರಾಜಾ ಸ ಧೃತರಾಷ್ಟ್ರೋಽಮ್ಬಿಕಾಸುತಃ ।
ಆಹೂಯ ಪಾಣ್ಡವಾನ್ವೀರಾನ್ವನವಾಸೇ ಕೃತಕ್ಷಣಃ ।
ಗಾನ್ಧಾರೀಸಹಿತೋ ಧೀಮಾನಭ್ಯನನ್ದದ್ಯಥಾವಿಧಿ ॥೧॥

ಜನಮೇಜಯ! ಬಳಿಕ ಹನ್ನೊಂದನೆಯ ದಿವಸ ಪ್ರಾತಃಕಾಲದಲ್ಲಿ ಗಾಂಧಾರೀಸಮೇತನಾದ, ಧೀಮಂತನಾದ, ಅಂಬಿಕೆಯ ಮಗನಾದ ಧೃತರಾಷ್ಟ್ರನು ಅರಣ್ಯಕ್ಕೆ ಹೊರಡಲು ಸಿದ್ಧನಾಗಿ ವೀರರಾದ ಪಾಂಡವರನ್ನು ಕರೆಯಿಸಿ ಅವರನ್ನು ಯಥಾವಿಧಿಯಾಗಿ ಅಭಿನಂದಿಸಿದನು.

ಕಾರ್ತಿಕಮಾಸದ ಹುಣ್ಣಿಮೆಯ ದಿನದಂದು ವೇದಪಾರಂಗತರಾದ ಬ್ರಾಹ್ಮಣರಿಂದ ಯಾತ್ರಾಕಾಲೋಚಿತವಾದ ಇಷ್ಟಿಯನ್ನು ಮಾಡಿಸಿ, ನಾರುಮಡಿಯನ್ನೂ ಕೃಷ್ಣಾಜಿನವನ್ನೂ ಧರಿಸಿದವನಾಗಿ, ಅಗ್ನಿಹೋತ್ರಾಗ್ನಿ ಯನ್ನು ಮುಂದೆಮಾಡಿಕೊಂಡು ವಧೂಜನರಿಂದ ಪರಿವೃತನಾಗಿ ಅರಮನೆಯಿಂದ ಹೊರಟನು.



ವಿಚಿತ್ರವೀರ್ಯನ ಮಗನಾದ ಧೃತರಾಷ್ಟ್ರರಾಜನು ವನವಾಸಕ್ಕೆ ಪ್ರಯಾಣಹೊರಟ ಆ ಸಮಯದಲ್ಲಿ ಪಾಂಡವಸ್ತ್ರೀಯರ ಮತ್ತು ಕೌರವ ರಾಜವಂಶದ ಸ್ತ್ರೀಯರ ಆರ್ತನಾದಗಳು ಎಲ್ಲ ಕಡೆಗಳಿಂದಲೂ ಕೇಳಿಬರು ತ್ತಿದ್ದುವು. ಗಾಂಧಾರಿಯೊಡನೆ ಅರಮನೆಯಿಂದ ಹೊರಟ ರಾಜನು ಭತ್ತದ

ಅರಳಿನಿಂದಲೂ ವಿಚಿತ್ರವಾದ ಹೂವುಗಳಿಂದಲೂ ತಾನು ವಾಸಿಸುತ್ತಿದ್ದ ಆ ಅರಮನೆಯನ್ನು ಪೂಜಿಸಿ, ಧನ-ಕನಕಾದಿಗಳ ಪ್ರದಾನದಿಂದ ಸೇವಕವರ್ಗವನ್ನು ಸತ್ಕರಿಸಿ ಎಲ್ಲರನ್ನೂ ಬಿಟ್ಟು ಅರಣ್ಯಕ್ಕೆ ಹೊರಟನು.

ಆ ಸಮಯದಲ್ಲಿ ಯುಧಿಷ್ಠಿರನು ಕೈಜೋಡಿಸಿಕೊಂಡು ತರ-ತರನೆ ನಡುಗುತ್ತಾ ಬಾಷ್ಪಗದ್ಗದಕಂಠನಾಗಿ-'ಸಾಧೋ! ಕ್ವ ಯಾಸ್ಯಸಿ? ಸತ್ಪುರುಷನೇ! ನಮ್ಮನ್ನು ಬಿಟ್ಟು ಎಲ್ಲಿಗೆ ಹೋಗುವೆ?'–ಎಂದು ಗಟ್ಟಿಯಾಗಿ ಕೂಗಿಕೊಳ್ಳುತ್ತಾ ಕೆಳಕ್ಕೆ ಬಿದ್ದುಬಿಟ್ಟನು. ಹಾಗೆಯೇ ತೀವ್ರವಾದ ದುಃಖದಿಂದ ಪರಿತಪಿಸುತ್ತಿದ್ದ, ಭರತಕುಲಶ್ರೇಷ್ಠನಾದ ಅರ್ಜುನನು ಬಾರಿಬಾರಿಗೂ ನಿಟ್ಟುಸಿರುಬಿಡುತ್ತಾ –ಯುಧಿಷ್ಠಿರನು ಕೂಗಿಕೊಳ್ಳುತ್ತಾ ಬಿದ್ದುದನ್ನು ನೋಡಿ ಧಾವಿಸಿ ಮುಂದೆ ಹೋಗಿ -'ಅಣ್ಣಾ! ನೀನು ಇಷ್ಟು ಅಧೀರನಾಗಬಾರದು'–ಎಂದು ಹೇಳುತ್ತಾ ಯುಧಿಷ್ಠಿರನನ್ನು ಹಿಡಿದೆತ್ತಿ ತಾನೂ ದೀನನಂತೆ ಎದೆಗುಂದಿದನು. ಅನಂತರ ಭೀಮಸೇನ, ಅರ್ಜುನ, ಮಾದ್ರಿಯ ಮಕ್ಕಳಾದ ನಕುಲ-ಸಹದೇವರು, ವಿದುರ, ಸಂಜಯ, ವೈಶ್ಯಾಪುತ್ರನಾದ ಯುಯುತ್ಸು, ಕೃಪಾಚಾರ್ಯರು, ಧೌಮ್ಯರು ಮತ್ತು ಇತರ ಅನೇಕ ಬ್ರಾಹ್ಮಣರು-ಇವರೆಲ್ಲರೂ ಬಾಷ್ಪಗದ್ಗದಕಂಠಗಳಿಂದ ಕೂಡಿದವರಾಗಿ ರಾಜನನ್ನು ಅನುಸರಿಸಿ ಹೋಗುತ್ತಿದ್ದರು. ಕುಂತಿಯು, ಕಣ್ಣುಗಳಿಗೆ ಬಟ್ಟೆಯನ್ನು ಕಟ್ಟಿಕೊಂಡಿದ್ದ ಗಾಂಧಾರಿಯ ಎಡತೋಳನ್ನು ತನ್ನ ಹೆಗಲಮೇಲಿಟ್ಟುಕೊಂಡು ಹೋಗುತ್ತಿದ್ದಳು. ಧೃತರಾಷ್ಟ್ರನು ಗಾಂಧಾರಿಯ ಹೆಗಲಿನ ಮೇಲೆ ಕೈಯನ್ನಿಟ್ಟುಕೊಂಡು ನಿಶ್ಚಿಂತನಾಗಿ ಹೋಗುತ್ತಿದ್ದನು. ದ್ರುಪದನ ಮಗಳಾದ ಕೃಷ್ಣೆ, ಸುಭದ್ರೆ, ಮಗುವನ್ನೆತ್ತಿಕೊಂಡಿದ್ದ ಉತ್ತರೆ, ಕೌರವ್ಯನಾಗನ ಮಗಳಾದ ಉಲೂಪೀ, ಬಭ್ರುವಾಹನನ ತಾಯಿಯಾದ ಚಿತ್ರಾಂಗದೆ ಮತ್ತು ಅಲ್ಲಿದ್ದ ಇತರ ಸ್ತ್ರೀಯರು-ಇವರೆಲ್ಲರೂ ತಮ್ಮ ತಮ್ಮ ಸೊಸೆಯರೊಂದಿಗೆ ಧೃತರಾಷ್ಟ್ರ ರಾಜನೊಡನೆ ಹೋಗುತ್ತಿದ್ದರು. ಆ ಸಮಯದಲ್ಲಿ ಎಲ್ಲ ಸ್ತ್ರೀಯರೂ ವ್ಯಾಕುಲಗೊಂಡವರಾಗಿ ಹೆಣ್ಣುಕುರರಪಕ್ಷಿಗಳಂತೆ (ಕಡಲಹದ್ದುಗಳಂತೆ) ಗಟ್ಟಿಯಾಗಿ ರೋದನಮಾಡುತ್ತಿದ್ದರು. ಆ ರೋದನಶಬ್ದವನ್ನು ಕೇಳಿ ಹಸ್ತಿನಾಪಟ್ಟಣದಲ್ಲಿದ್ದ ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರವರ್ಣಗಳ ಸ್ತ್ರೀಯರೆಲ್ಲರೂ ಎಲ್ಲ ಕಡೆಗಳಿಂದಲೂ ಅಲ್ಲಿಗೆ ಧಾವಿಸಿ ಬಂದರು. ಹಿಂದೆ ದ್ಯೂತದ ಸಮಯದಲ್ಲಿ ಕೌರವಸಭೆಯಿಂದ ವನವಾಸಕ್ಕಾಗಿ ಪಾಂಡವರು ಹೊರಟಾಗ ಹಸ್ತಿನಾಪಟ್ಟಣದ ನಾಗರಿಕರು ಎಷ್ಟು ದುಃಖಿತರಾಗಿದ್ದರೋ–ಧೃತರಾಷ್ಟ್ರನು

ಕಾಡಿಗೆ ಹೊರಟ ಆ ಸಮಯದಲ್ಲಿಯೂ ಅವರು ಅಷ್ಟೇ ದುಃಖಿತರಾಗಿದ್ದರು. ರಾಣಿವಾಸದ ಯಾವ ರಮಣಿಯರು ಹೊರಗೆ ಬಂದು ಸೂರ್ಯನನ್ನಾಗಲೀ ಚಂದ್ರನನ್ನಾಗಲೀ ನೋಡಿಯೇ ಇರಲಿಲ್ಲವೋ–ಅಂತಹವರೆಲ್ಲರೂ ಕೌರವೇಂದ್ರನಾದ ಧೃತರಾಷ್ಟ್ರನು ಮಹಾರಣ್ಯಕ್ಕೆ ಹೊರಟ ಸಮಯದಲ್ಲಿ ಶೋಕಪೀಡಿತರಾಗಿ ರಾಜಬೀದಿಗೆ ಬಂದರು.”

ರ್೧೪ನೆಯ ಅಧ್ಯಾಯವು ಮುಗಿಯಿತು.

೧೫ನೆಯ ಅಧ್ಯಾಯ ಆಶ್ರಮವಾಸಪರ್ವ (ಮುಂದುವರಿದಿದೆ.)

ಧೃತರಾಷ್ಟ್ರನು ಪುರವಾಸಿಗಳನ್ನು ಹಿಂದಕ್ಕೆ ಕಳುಹಿಸಿದುದು: ಪಾಂಡವರು ತಡೆದರೂ ಕುಂತಿಯೂ ಅರಣ್ಯಕ್ಕೆ ಹೊರಟುದು

ವೈಶಂಪಾಯನರು ಹೇಳುತ್ತಾರೆ:

ತತಃ ಪ್ರಾಸಾದಹರ್ಮ್ಯೇಷು ವಸುಧಾನಾಂ ಚ ಪಾರ್ಥಿವ ।
ನಾರೀಣಾಂ ಚ ನರಾಣಾಂ ಚ ನಿಃಸ್ವನಃ ಸುಮಹಾನಭೂತ್ ॥೧॥

ಜನಮೇಜಯ! ಆ ಸಮಯದಲ್ಲಿ ಪ್ರಾಸಾದಗಳಲ್ಲಿಯೂ, ಉಪ್ಪರಿಗೆಗಳಲ್ಲಿಯೂ ಮತ್ತು ಬೀದಿಗಳಲ್ಲಿಯೂ ನರ-ನಾರಿಯರ ಗಟ್ಟಿಯಾದ ರೋದನಶಬ್ದವು ಕೇಳಿಬರುತ್ತಿದ್ದಿತು.

ಧೀಮಂತನಾದ ಧೃತರಾಷ್ಟ್ರನು ನರ-ನಾರಿಯರಿಂದ ತುಂಬಿಹೋಗಿದ್ದ ರಾಜಮಾರ್ಗದ ಮೂಲಕವಾಗಿ ಕೈಗಳನ್ನು ಜೋಡಿಸಿಕೊಂಡು ನಡುಗುತ್ತಾ ಬಹಳ ಕಷ್ಟದಿಂದ ಮುಂದೆ-ಮುಂದೆ ಹೋಗುತ್ತಿದ್ದನು. ವರ್ಧಮಾನವೆಂಬ ಮಹಾದ್ವಾರದ ಮೂಲಕವಾಗಿ ಧೃತರಾಷ್ಟ್ರನು ಹಸ್ತಿನಾಪಟ್ಟಣದಿಂದ ಹೊರಬಂದನು. ತನ್ನನ್ನನುಸರಿಸಿ ಬರುತ್ತಿದ್ದ ಜನಸಮೂಹವನ್ನು ಮುಂದೆ ಬರದಂತೆ ಬಾರಿ-ಬಾರಿಗೂ ತಡೆಯುತ್ತಿದ್ದನು. ವಿದುರನೂ, ಗವಲ್ಗಣನ ಮಗನಾದ ಮಹಾಮಾತ್ಯನಾದ ಸೂತಸಂಜಯನೂ ರಾಜನ ಜೊತೆಯಲ್ಲಿ ಅರಣ್ಯಕ್ಕೆ ಹೋಗಲು ನಿಶ್ಚಯಿಸಿದರು. ಧೃತರಾಷ್ಟ್ರನು ವಿದುರ-ಸಂಜಯ ರಂತೆಯೇ ತನ್ನ ಹಿಂದೆ ಬರುತ್ತಿದ್ದ ಕೃಪರನ್ನೂ ಮತ್ತು ಯುಯುತ್ಸುವನ್ನೂ ಹಿಂದಿರುಗುವಂತೆ ಹೇಳಿ, ಅವರಿಬ್ಬರನ್ನೂ ಯುಧಿಷ್ಠಿರನಿಗೆ ಒಪ್ಪಿಸಿದನು.

ಪಟ್ಟಣಿಗರೆಲ್ಲರೂ ಹಿಂದಿರುಗಿದನಂತರ ಅಂತಃಪುರದ ಸ್ತ್ರೀಯರೊಡನೆ ಯುಧಿಷ್ಠಿರನು ಧೃತರಾಷ್ಟ್ರನ ಅನುಮತಿಯನ್ನು ಪಡೆದು ಹಿಂದಿರುಗಲು ಅನುವಾದನು. ಆದರೆ ಕುಂತಿಯು ಯುಧಿಷ್ಠಿರನ ಜೊತೆಯಲ್ಲಿ ನಗರಕ್ಕೆ ಹಿಂದಿರುಗಲಿಲ್ಲ. ಧೃತರಾಷ್ಟ್ರನ ಜೊತೆಯಲ್ಲಿಯೇ ಹೋಗುವುದಾಗಿ ಹೇಳಿದಳು. ಆಗ ಯುಧಿಷ್ಠಿರನು ತಾಯಿಗೆ ಹೇಳಿದನು:

ಅಹಂ ರಾಜಾನಮನ್ವಿಷ್ಯೇ ಭವತೀ ವಿನಿವರ್ತತಾಮ್।
ವಧೂಪರಿವೃತಾ ರಾಜ್ಞಿ ನಗರಂ ಗನ್ತುಮರ್ಹಸಿ।
ರಾಜಾ ಯಾತ್ವೇಷ ಧರ್ಮಾತ್ಮಾ ತಾಪಸ್ಯೇ ಕೃತನಿಶ್ಚಯಃ ॥೮॥

"ತಾಯೇ! ನಾನು ರಾಜನನ್ನು ಅನುಸರಿಸಿ ಸ್ವಲ್ಪದೂರ ಹೋಗುತ್ತೇನೆ. ನೀನು ನಿನ್ನ ಸೊಸೆಯರೊಡನೆ ಹಸ್ತಿನಾಪಟ್ಟಣಕ್ಕೆ ಹೋಗು. ಧೃತರಾಷ್ಟ್ರರಾಜನು ಅರಣ್ಯಕ್ಕೆ ಹೋಗಿ ಅಲ್ಲಿ ತಪಸ್ಸುಮಾಡಿಕೊಂಡಿರಲು ನಿಶ್ಚಯಿಸಿದ್ದಾನೆ."

ಯುಧಿಷ್ಠಿರನು ಹೀಗೆ ಹೇಳಲು ಕುಂತಿಯು ಕಂಬನಿದುಂಬಿದ ಕಣ್ಣುಗಳಿಂದ ಕೂಡಿದವಳಾಗಿ ಗಾಂಧಾರಿಯನ್ನು ಹಿಡಿದುಕೊಂಡು ಮುನ್ನಡೆಯುತ್ತಲೇ ಇದ್ದಳು. ಹೋಗುತ್ತಿರುವಾಗಲೇ ಯುಧಿಷ್ಠಿರನಿಗೆ ಈ ಮಾತನ್ನು ಹೇಳಿದಳು:

ಸಹದೇವೇ ಮಹಾರಾಜ ಮಾಪ್ರಸಾದಂ ಕೃಥಾಃ ಕ್ವಚಿತ್ ।
ಏಷ ಮಾಮನುರಕ್ತೋ ಹಿ ರಾಜಂಸ್ತ್ವಾಂ ಚೈವ ಸರ್ವದಾ ॥೧೦॥

"ಯುಧಿಷ್ಠಿರ! ಸಹದೇವನ ವಿಷಯದಲ್ಲಿ ನೀನು ಯಾವಾಗಲೂ ಅಪ್ರಸನ್ನನಾಗಿರಬೇಡ. ಅವನು ನನ್ನಲ್ಲಿಯೂ ಮತ್ತು ನಿನ್ನಲ್ಲಿಯೂ ವಿಶೇಷವಾದ ಪ್ರೀತಿಯುಳ್ಳವನು.

ಕರ್ಣಂ ಸ್ಮರೇಥಾಃ ಸತತಂ ಸಂಗ್ರಾಮೇಷ್ವಪಲಾಯಿನಮ್।
ಅವಕೀರ್ಣೋ ಹಿ ಸಮರೇ ವೀರೋ ದುಷ್ಪ್ರಜ್ಞಯಾ ತದಾ ॥೧೧॥

ಯುದ್ಧದಿಂದ ಯಾವಾಗಲೂ ಪಲಾಯನಮಾಡದೇ ಇದ್ದ ಕರ್ಣನನ್ನು ಯಾವಾಗಲೂ ಜ್ಞಾಪಿಸಿಕೊಳ್ಳುತ್ತಿರು. ನನ್ನ ದುರ್ಬುದ್ಧಿಯ ಕಾರಣ ದಿಂದಾಗಿಯೇ ವೀರನಾದ ಅವನು ಯುದ್ಧದಲ್ಲಿ ಹತನಾದನು.

ಆಯಸಂ ಹೃದಯಂ ನೂನಂ ಮನ್ದಾಯಾ ಮಮ ಪುತ್ರಕ ।
ಯತ್ಸೂರ್ಯಜಮಪಶ್ಯನ್ತ್ಯಾಃ ಶತಧಾ ನ ವಿದೀರ್ಯತೇ ॥೧೨॥

ಮಗು! ನಿಶ್ಚಯವಾಗಿಯೂ ಅಭಾಗಿನಿಯಾದ ನನ್ನ ಈ ಹೃದಯವು ಲೋಹಮಯವೇ ಆಗಿದೆ. ಏಕೆಂದರೆ: ಸೂರ್ಯಪುತ್ರನಾದ ಕರ್ಣನನ್ನು ನೋಡದಿದ್ದರೂ (ಕಳೆದುಕೊಂಡಿದ್ದರೂ) ಈ ನನ್ನ ಹೃದಯವು ನೂರಾರು ಚೂರುಗಳಾಗಿ ಒಡೆದುಹೋಗಿಲ್ಲವಲ್ಲವೇ?

ಏವಂ ಗತೇ ತು ಕಿಂ ಶಕ್ಯಂ ಮಯಾ ಕರ್ತುಮರಿಂದಮ ।
ಮಮ ದೋಷೋಽಯಮತ್ಯರ್ಥಂ ಖ್ಯಾಪಿತೋ ಯನ್ನಸೂರ್ಯಜಃ ॥

ಅರಿಂದಮನೇ! ಎಲ್ಲವೂ ಹೀಗೆಯೇ ಆಗಬೇಕಾಗಿರುವಾಗ ನಾನೇನು ಮಾಡಲು ಶಕ್ಯವಿದೆ? ಸೂರ್ಯನ ಮಗನಾದ ಕರ್ಣನನ್ನು ನಿಮ್ಮೆಲ್ಲರಿಗೂ ಮೊದಲೇ ಪರಿಚಯಮಾಡಿಸಿಕೊಡದೇ ಇದ್ದುದು ನನ್ನ ಮಹತ್ತರವಾದ ಅಪರಾಧವೇ ಆಗಿದೆ.

ಮಹಾಬಾಹುವೇ! ಅರಿಂದಮನೇ! ನೀನು ಅನುಜರೊಡನೆ ಸೂರ್ಯಪುತ್ರನಾದ ಕರ್ಣನ ಸಲುವಾಗಿ ಉತ್ತಮದಾನಗಳನ್ನು ಯಾವಾಗಲೂ ಕೊಡುತ್ತಲೇ ಇರಬೇಕು. ದ್ರೌಪದಿಗೂ ಪ್ರಿಯವಾಗುವ ರೀತಿಯಲ್ಲಿ ಯಾವಾಗಲೂ ನಡೆದುಕೊಳ್ಳಬೇಕು. ಭೀಮಾರ್ಜುನ-ನಕುಲರನ್ನೂ ಚೆನ್ನಾಗಿ ಇಟ್ಟುಕೊಳ್ಳಬೇಕು. ಇಂದಿನಿಂದ ಕುರುವಂಶದ ಪಾಲನೆಯ ಭಾರವು ಸಂಪೂರ್ಣವಾಗಿ ನಿನ್ನ ಮೇಲೆಯೇ ಬಿದ್ದಿದೆ. ನಾನು ಇನ್ನು ಮುಂದೆ ಅತ್ತೆ-ಮಾವಂದಿರ ಪಾದಸೇವೆಯನ್ನು ಮಾಡುತ್ತಾ ಗಾಂಧಾರಿಯೊಡನೆ ಮಲಪಂಕದಿಗ್ಧೆಯಾಗಿ ತಾಪಸಿಯಾಗಿ ಅರಣ್ಯದಲ್ಲಿ ಇದ್ದುಬಿಡುತ್ತೇನೆ.”

ಜನಮೇಜಯ! ಕುಂತೀದೇವಿಯು ಹೀಗೆ ಹೇಳಿದೊಡನೆಯೇ ಧೀಮಂತನಾದ, ಜಿತೇಂದ್ರಿಯನಾದ ಯುಧಿಷ್ಠಿರನು ತನ್ನ ತಮ್ಮಂದಿರೊಡನೆ ಅತ್ಯಂತದುಃಖಿಯಾದನು. ಸ್ವಲ್ಪಹೊತ್ತು ಅವನ ಬಾಯಿಂದ ಮಾತುಗಳೇ ಹೊರಡಲಿಲ್ಲ. ಚಿಂತಾಶೋಕಪರಾಯಣನಾಗಿದ್ದ, ಅತ್ಯಂತ ದೀನನಾಗಿದ್ದ ಯುಧಿಷ್ಠಿರನು ಸ್ವಲ್ಪಹೊತ್ತು ಯೋಚಿಸುತ್ತಿದ್ದು ಅನಂತರ ತಾಯಿಯನ್ನು ಕುರಿತು ಹೇಳಿದನು:

ಕಿಮಿದಂ ತೇ ವ್ಯವಸಿತಂ ನೈವಂ ತ್ವಂ ವಕ್ತುಮರ್ಹಸಿ।
ನ ತ್ವಾಮಭ್ಯನುಜಾನಾಮಿ ಪ್ರಸಾದಂ ಕರ್ತುಮರ್ಹಸಿ ॥೧೯॥

"ಅಮ್ಮ! ನೀನೇಕೆ ಹೀಗೆ ನಿಶ್ಚಯಿಸಿದೆ? ಹೀಗೆ ಮಾತನಾಡುವುದು ನಿನಗೆ ಖಂಡಿತವಾಗಿಯೂ ಉಚಿತವಲ್ಲ. ನೀನು ಕಾಡಿಗೆ ಹೋಗುವುದನ್ನು ನಾನು ಅನುಮತಿಸುವುದಿಲ್ಲ. ದಯಮಾಡಿ ಪ್ರಸನ್ನಳಾಗು.

ಪುರೋದ್ಯತಾನ್ಪುರಾ ಹ್ಯಸ್ಮಾನುತ್ಸಾಹ್ಯ ಪ್ರಿಯದರ್ಶನೇ।
ವಿದುಲಾಯಾ ವಚೋಭಿಸ್ತ್ವಂ ನಾಸ್ಮಾನ್ಸಂತ್ಯಕ್ತುಮರ್ಹಸಿ ॥೨೦॥

ಪ್ರಿಯದರ್ಶನಳೇ! ಹಿಂದೆ ನಾವು ರಾಜ್ಯದಿಂದ ಹೊರಟುಹೋಗಲು ಉದ್ಯತರಾಗಿದ್ದಾಗ ನೀನು ವಿದುಲೆಯ ಮಾತುಗಳನ್ನು ಉದಾಹರಿಸಿ ಕ್ಷತ್ರಧರ್ಮವನ್ನೇ ಪರಿಪಾಲಿಸಲು ಪ್ರೋತ್ಸಾಹಿಸಿದೆ. ಅಂತಹ ನೀನು ಈಗ ನಮ್ಮನ್ನು ಪರಿತ್ಯಜಿಸಿ ಹೋಗುವುದು ಖಂಡಿತವಾಗಿಯೂ ಉಚಿತವಲ್ಲ.

ನಿಹತ್ಯ ಪೃಥಿವೀಪಾಲಾನ್ರಾಜ್ಯಂ ಪ್ರಾಪ್ತಮಿದಂ ಮಯಾ।
ತವ ಪ್ರಜ್ಞಾಮುಪಶ್ರುತ್ಯ ವಾಸುದೇವಾನ್ನರರ್ಷಭಾತ್ ॥೨೧॥

ಪುರುಷಶ್ರೇಷ್ಠನಾದ ವಾಸುದೇವನ ಮೂಲಕ ನೀನು ಹೇಳಿಕಳುಹಿಸಿದ್ದಂತೆ ನಿನ್ನ ಬುದ್ಧಿಯನ್ನೇ ಆಶ್ರಯಿಸಿ (ನಿನ್ನ ಉಪದೇಶಾನುಸಾರವಾಗಿ) ಎಲ್ಲ ರಾಜರನ್ನೂ ಸಂಹರಿಸಿ ಈ ರಾಜ್ಯವನ್ನು ಪಡೆದುಕೊಂಡಿರುತ್ತೇನೆ.

ಕ್ವ ಸಾ ಬುದ್ಧಿರಿಯಂ ಚಾದ್ಯ ಭವತ್ಯಾ ಯಚ್ಛ್ರುತಂ ಮಯಾ।
ಕ್ಷತ್ರಧರ್ಮೇ ಸ್ಥಿತಿಂ ಭೋಕ್ತ್ವಾ ತಸ್ಮಾಚ್ಚಲಿತುಮಿಚ್ಛಸಿ ॥೨೨॥

ನಿನ್ನ ಅಂದಿನ ಬುದ್ಧಿಯೂ ಮತ್ತು ನೀನು ಅಂದು ಹೇಳಿದ ಮಾತೂ ಈಗೆಲ್ಲಿಗೆ ಹೋದುವು? ಕ್ಷತ್ರಧರ್ಮದಲ್ಲಿಯೇ ಇರುವಂತೆ ನಮಗೆ ಉಪದೇಶವನ್ನಿತ್ತು ನೀನೀಗ ಆ ಕ್ಷತ್ರಧರ್ಮದಿಂದ ಜಾರಿಕೊಳ್ಳಲು ಬಯಸುತ್ತಿರುವೆ.

ಅಸ್ಮಾನುತ್ಸೃಜ್ಯ ರಾಜ್ಯಂ ಚ ಸ್ನುಷಾಂ ಚೇಮಾಂ ಯಶಸ್ವಿನೀಮ್।
ಕಥಂ ವತ್ಸ್ಯಸಿ ದುರ್ಗೇಷು ವನೇಷ್ವದ್ಯ ಪ್ರಸೀದ ಮೇ ॥೨೩॥

ಅಮ್ಮ! ನೀನು ರಾಜ್ಯವನ್ನೂ, ನಮ್ಮನ್ನೂ ಮತ್ತು ಯಶಸ್ವಿನಿಯಾದ ಈ ನಿನ್ನ ಸೊಸೆಯಾದ ದ್ರೌಪದಿಯನ್ನೂ ಬಿಟ್ಟು ದುರ್ಗಮವಾದ ಅರಣ್ಯ

ದಲ್ಲಿ ಹೇಗೆ ವಾಸಮಾಡುವೆ? ಬೇಡಮ್ಮ! ಕಾಡಿಗೆ ಹೋಗಬೇಡ; ಪ್ರಸನ್ನಳಾಗು. ನಮ್ಮೊಡನೆಯೇ ಇರು.”

ಮಗನ ಬಾಷ್ಪಗದ್ಗದವಾದ ಆ ಮಾತುಗಳನ್ನು ಕುಂತಿಯು ಕೇಳುತ್ತಿದ್ದಾಗ ಅವಳ ಕಣ್ಣುಗಳಲ್ಲಿಯೂ ನೀರು ತುಂಬಿಕೊಂಡಿತು. ಆಗ ಭೀಮನು ಕುಂತಿಗೆ ಹೇಳಿದನು:

ಯದಾ ರಾಜ್ಯಮಿದಂ ಕುನ್ತಿ ಭೋಕ್ತವ್ಯಂ ಪುತ್ರನಿರ್ಜಿತಮ್।
ಪ್ರಾಪ್ತವ್ಯಾ ರಾಜಧರ್ಮಾಶ್ಚ ತದೇಯಂ ತೇ ಕುತೋ ಮತಿಃ ॥೨೫॥

“ಅಮ್ಮ! ಮಕ್ಕಳಿಂದ ಜಯಿಸಲ್ಪಟ್ಟಿರುವ ಈ ರಾಜ್ಯವನ್ನು ಉಪಭೋಗಿಸುವ ಕಾಲವು ಒದಗಿಬಂದಿರುವಾಗ, ರಾಜಧರ್ಮಗಳನ್ನು ಪಾಲಿಸುವ ಕಾಲವು ಸನ್ನಿಹಿತವಾಗಿರುವಾಗ ನಿನಗೆ ಇಂತಹ ಬುದ್ಧಿಯು ಹೇಗೆ ಬಂದಿತು?

ಕಿಂ ವಯಂ ಕಾರಿತಾಃ ಪೂರ್ವಂ ಭವತ್ಯಾ ಪೃಥಿವೀಕ್ಷಯಮ್।
ಕಸ್ಯ ಹೇತೋಃ ಪರಿತ್ಯಜ್ಯ ವನಂ ಗನ್ತುಮಭೀಪ್ಸಸಿ ॥೨೬॥

ನೀನು ಹೀಗೆ ನಮ್ಮೆಲ್ಲರನ್ನೂ ಪರಿತ್ಯಜಿಸಿ ಅರಣ್ಯಕ್ಕೆ ಹೋಗುವುದಾಗಿದ್ದರೆ ಈ ಭೂಮಂಡಲದ ವಿನಾಶವನ್ನು ನಮ್ಮಿಂದೇಕೆ ಮಾಡಿಸಿದೆ? ಯುದ್ಧಮಾಡಲು ನಮ್ಮನ್ನೇಕೆ ಹುರಿದುಂಬಿಸಿದೆ? ಯಾವ ಕಾರಣದಿಂದಾಗಿ ನೀನೀಗ ಅರಣ್ಯಕ್ಕೆ ಹೋಗಲು ಬಯಸಿರುವೆ?

ವನಾಚ್ಚಾಪಿ ಕಿಮಾನೀತಾ ಭವತ್ಯಾ ಬಾಲಕಾ ವಯಮ್।
ದುಃಖಶೋಕಸಮಾವಿಷ್ಟೌ ಮಾದ್ರೀಪುತ್ರಾವಿಮೌ ತಥಾ ॥೨೭॥

ವನವಾಸವೇ ನಿನಗೆ ಇಷ್ಟವಾಗಿದ್ದರೆ ದುಃಖ-ಶೋಕಸಮಾವಿಷ್ಟರಾಗಿದ್ದ ಮಾದ್ರಿಯ ಮಕ್ಕಳಾದ ಈ ನಕುಲ-ಸಹದೇವರನ್ನೂ ಮತ್ತು ಬಾಲಕರಾಗಿದ್ದ ನಮ್ಮನ್ನೂ ಅರಣ್ಯದಿಂದ ಪಟ್ಟಣಕ್ಕೆ ಕರೆತಂದುದೇಕೆ?

ಪ್ರಸೀದ ಮಾತರ್ಮಾ ಗಾಸ್ತ್ವಂ ವನಮದ್ಯ ಯಶಸ್ವಿನಿ।
ಶ್ರಿಯಂ ಯೌಧಿಷ್ಠಿರೀಂ ಮಾತುರ್ಭುಂಕ್ಷ್ವ ತಾವದ್ಬಲಾರ್ಜಿತಾಮ್ ॥೨೮॥

ಅಮ್ಮ! ಯಶಸ್ವಿನಿಯೇ! ಪ್ರಸನ್ನಳಾಗು. ಅರಣ್ಯಕ್ಕೆ ಹೋಗಬೇಡ.

ಬಲಪೂರ್ವಕವಾಗಿ ಸಂಪಾದಿಸಲ್ಪಟ್ಟಿರುವ ಯುಧಿಷ್ಠಿರನ ರಾಜ್ಯಸಂಪತ್ತನ್ನು ಅನುಭವಿಸು.”

ಜನಮೇಜಯ! ಆದರೆ ಗುಣವತಿಯಾದ ಕುಂತೀದೇವಿಯು ಧೃತರಾಷ್ಟ್ರ-ಗಾಂಧಾರಿಯರೊಡನೆ ಅರಣ್ಯಕ್ಕೆ ಹೋಗಲು ದೃಢವಾಗಿ ನಿಶ್ಚಯಿಸಿಬಿಟ್ಟಿದ್ದಳು. ಆದುದರಿಂದಲೇ ಅವಳು–ತನ್ನ ಮಕ್ಕಳು ನಾನಾಪ್ರಕಾರವಾಗಿ ಬೇಡಿಕೊಂಡರೂ ಅವರ ಮಾತನ್ನು ನಡೆಸಿಕೊಡಲಿಲ್ಲ. ಅತ್ತೆಯೂ ಗಾಂಧಾರಿಯೊಡನೆ ಅರಣ್ಯಕ್ಕೆ ಹೋಗುತ್ತಿರುವುದನ್ನು ನೋಡಿ ಕುಂದಿದ ಮುಖದಿಂದ ಕೂಡಿದ ದ್ರೌಪದಿಯೂ ಸುಭದ್ರೆಯೊಡನೆ ಕುಂತಿಯ ಹಿಂದೆ-ಹಿಂದೆಯೇ ಹೋದಳು.

ಮಹಾಪ್ರಾಜ್ಞಳಾದ ಕುಂತಿಯು ಅತ್ತುಕೊಂಡು ತನ್ನ ಹಿಂದೆಯೇ ಬರುತ್ತಿದ್ದ ಮಕ್ಕಳನ್ನೂ ಮತ್ತು ಸೊಸೆಯನ್ನೂ ಬಾರಿ-ಬಾರಿಗೂ ನೋಡುತ್ತಿದ್ದರೂ ಅರಣ್ಯಕ್ಕೆ ಹೋಗಲೇಬೇಕೆಂದು ದೃಢವಾಗಿ ನಿಶ್ಚಯಿಸಿದ್ದ ಕಾರಣ ಧೃತರಾಷ್ಟ್ರ-ಗಾಂಧಾರಿಯರ ಜೊತೆಯಲ್ಲಿ ಅರಣ್ಯಾಭಿಮುಖವಾಗಿ ಹೋಗುತ್ತಲೇ ಇದ್ದಳು. ಪಾಂಡವರೂ ಅವಳನ್ನು ಬಿಟ್ಟು ಹಿಂದಿರುಗಲೇ ಇಲ್ಲ. ಅಂತಃಪುರದ ಸ್ತ್ರೀಯರೊಡನೆಯೂ ಸೇವಕರೊಡನೆಯೂ ಕೂಡಿಕೊಂಡು ಕುಂತಿಯ ಹಿಂದೆ ಹೋಗುತ್ತಲೇ ಇದ್ದರು. ಬಳಿಕ ಕುಂತಿಯು ಕಣ್ಣೀರೊರೆಸಿಕೊಳ್ಳುತ್ತಾ ಮಕ್ಕಳಿಗೆ ಹೇಳತೊಡಗಿದಳು.

೧೬ನೆಯ ಅಧ್ಯಾಯವು ಮುಗಿಯಿತು.

೧೭ನೆಯ ಅಧ್ಯಾಯ ಆಶ್ರಮವಾಸಪರ್ವ (ಮುಂದುವರಿದಿದೆ.)

ಪಾಂಡವರ ಪ್ರಶ್ನೆಗೆ ಕುಂತಿಯ ಉತ್ತರ

ಜನಮೇಜಯ! ಕುಂತಿಯು ಹೇಳುತ್ತಾಳೆ:

ಏವಮೇತನ್ಮಹಾಬಾಹೋ ಯಥಾ ವದಸಿ ಪಾಣ್ಡವ।
ಕೃತಮುದ್ಧರ್ಷಣಂ ಪೂರ್ವಂ ಮಯಾ ವಃ ಸೀದತಾಂ ನೃಪಾಃ ॥೧॥

“ಯುಧಿಷ್ಠಿರ! ನೀನು ಏನು ಹೇಳಿದೆಯೋ ಅದು ಹಾಗೆಯೇ ಸರಿ.

(ನೀನು ಹೇಳಿದುದು ನಿಜ.) ಹಿಂದೆ ನೀವು ಎದೆಗುಂದಿ ಸಂಪೂರ್ಣವಾಗಿ ವಿನಾಶವಾಗಲಿದ್ದಾಗ ನಿಮ್ಮನ್ನು ಕ್ಷತ್ರಧರ್ಮದ ಉಪದೇಶದಿಂದ ಯುದ್ಧಕ್ಕೆ ಪ್ರೋತ್ಸಾಹಿಸಿದೆನು.

ದ್ಯೂತಾಪಹೃತರಾಜ್ಯಾನಾಂ ಪತಿತಾನಾಂ ಸುಖಾದಪಿ।
ಜ್ಞಾತಿಭಿಃ ಪರಿಭೂತಾನಾಂ ಕೃತಮುದ್ಧರ್ಷಣಂ ಮಯಾ ॥೨॥

ಆ ಸಮಯದಲ್ಲಿ ನೀವು ದ್ಯೂತದಲ್ಲಿ ರಾಜ್ಯವನ್ನು ಕಳೆದುಕೊಂಡಿದ್ದಿರಿ. ರಾಜ್ಯಸುಖದಿಂದಲೂ ವಂಚಿತರಾಗಿದ್ದಿರಿ. (ಹೆಚ್ಚು ಕಷ್ಟದಲ್ಲಿದ್ದಿರಿ.) ಜ್ಞಾತಿ-ಬಂಧುಗಳಿಂದಲೂ ತಿರಸ್ಕೃತರಾಗಿದ್ದಿರಿ. ಆ ಸಮಯದಲ್ಲಿ ನಾನು ನಿಮ್ಮನ್ನು ವೀರೋಚಿತವಾದ ಉಪದೇಶಗಳಿಂದ ಯುದ್ಧಕ್ಕೆ ಪ್ರೋತ್ಸಾಹಿಸಿದೆನು.

ಕಥಂ ಪಾಣ್ಡೋರ್ನ ನಶ್ಯೇತ ಸಂತತಿಃ ಪುರುಷರ್ಷಭಾಃ।
ಯಶಶ್ಚ ವೋ ನ ನಶ್ಯೇತ ಇತಿ ಚೋದ್ಧರ್ಷಣಂ ಕೃತಮ್ ॥೩॥

ಪುರುಷಶ್ರೇಷ್ಠರೇ! ಪಾಂಡುವಿನ ಸಂತತಿಯು ನಾಶವಾಗದೇ ಉಳಿಯುವುದು ಹೇಗೆ? ನಿಮ್ಮ ಯಶಸ್ಸಾದರೂ ನಶಿಸದೇ ಇರುವುದೆಂತು?- ಈ ಎರಡರ ಸಾಧನೆಗಾಗಿ ನಾನು ನಿಮ್ಮನ್ನು ಯುದ್ಧಕ್ಕೆ ಪ್ರೋತ್ಸಾಹಿಸಿದೆನು.

ಯೂಯಮಿನ್ದ್ರಸಮಾಃ ಸರ್ವೇ ದೇವತುಲ್ಯಪರಾಕ್ರಮಾಃ।
ಮಾ ಪರೇಷಾಂ ಮುಖಪ್ರೇಕ್ಷಾಃ ಸ್ಥೇತ್ಯೇವಂ ತತ್ಕೃತಂ ಮಯಾ ॥೪॥

ನೀವೆಲ್ಲರೂ ಇಂದ್ರನಿಗೆ ಸಮಾನರಾದವರು; ದೇವತೆಗಳ ಪರಾಕ್ರಮಕ್ಕೆ ಅನುರೂಪವಾದ ಪರಾಕ್ರಮವುಳ್ಳವರು; ಇಂತಹವರು ಜೀವಿಕೆಗಾಗಿ ಇತರರ ಮುಖವನ್ನು ನೋಡಬಾರದು–ಎಂದು ಬಯಸಿ ನಿಮ್ಮನ್ನು ಯುದ್ಧಕ್ಕೆ ಪ್ರೋತ್ಸಾಹಿಸಿದೆನು.

ಕಥಂ ಧರ್ಮಭೃತಾಂ ಶ್ರೇಷ್ಠೋ ರಾಜಾ ತ್ವಂ ವಾಸವೋಪಮಃ।
ಪುನರ್ವನೇ ನ ದುಃಖೀ ಸ್ಯಾದಿತಿ ಚೋದ್ಧರ್ಷಣಂ ಕೃತಮ್ ॥೫॥

ಧರ್ಮಾತ್ಮರಲ್ಲಿ ಶ್ರೇಷ್ಠನಾದ, ಇಂದ್ರನಿಗೆ ಸಮಾನನಾದ ನೀನು ಪುನಃ ಅರಣ್ಯಕ್ಕೆ ಹೋಗಿ ದುಃಖಕ್ಕೆ ಭಾಗಿಯಾಗಬಾರದೆಂಬ ಉದ್ದೇಶದಿಂದ ನಿಮ್ಮನ್ನು ಯುದ್ಧಕ್ಕೆ ಪ್ರೋತ್ಸಾಹಿಸಿದೆನು.

ನಾಗಾಯುತಸಮಪ್ರಾಣಃ ಖ್ಯಾತವಿಕ್ರಮಪೌರುಷಃ।
ನಾಯಂ ಭೀಮೋಽತ್ಯಯಂ ಗಚ್ಛೇದಿತಿ ಚೋದ್ದರ್ಷಣಂ ಕೃತಮ್ ॥೬॥

ಹತ್ತುಸಾವಿರ ಆನೆಗಳ ಬಲಕ್ಕೆ ಸಮಾನವಾದ ಬಲವನ್ನು ಹೊಂದಿರುವ, ವಿಖ್ಯಾತವಾದ ಬಲ-ಪರಾಕ್ರಮಗಳುಳ್ಳ ಈ ಭೀಮಸೇನನು ವಿನಾಶಹೊಂದಬಾರದೆಂದು ನಾನು ನಿಮ್ಮನ್ನು ಯುದ್ಧಕ್ಕೆ ಪ್ರೋತ್ಸಾಹಿಸಿದೆನು.

ಭೀಮಸೇನಾದವರಜಸ್ತಥಾಯಂ ವಾಸವೋಪಮಃ।
ವಿಜಯೋ ನಾವಸೀದೇತ ಇತಿ ಚೋದ್ದರ್ಷಣಂ ಕೃತಮ್ ॥೭॥

ಭೀಮಸೇನನ ತಮ್ಮನಾದ ಇಂದ್ರೋಪಮನಾದ ಈ ವಿಜಯನೂ ವಿನಾಶವಾಗಬಾರದೆಂದು ಆಶಿಸಿ ನಿಮ್ಮನ್ನು ಯುದ್ಧಕ್ಕೆ ಹುರಿದುಂಬಿಸಿದೆನು.

ನಕುಲಃ ಸಹದೇವಶ್ಚ ತಥೇಮೌ ಗುರುವರ್ತಿನೌ।
ಕ್ಷುಧಾ ಕಥಂ ನ ಸೀದೇತಾಮಿತಿ ಚೋದ್ದರ್ಷಣಂ ಕೃತಮ್ ॥೮॥

ಗುರುಜನರ ಆಜ್ಞಾಧಾರಕರಾದ ಈ ನಕುಲ-ಸಹದೇವರು ಹಸಿವಿನಿಂದ ವಿನಾಶರಾಗಬಾರದೆಂದು ನಿಮ್ಮನ್ನು ಯುದ್ಧಕ್ಕಾಗಿ ಉತ್ತೇಜಿಸಿದೆನು.

ಇಯಂ ಚ ಬೃಹತೀ ಶ್ಯಾಮಾ ತಥಾತ್ಯಾಯತಲೋಚನಾ।
ವೃಥಾ ಸಭಾತಲೇ ಕ್ಲಿಷ್ಟಾ ಮಾ ಭೂದಿತಿ ಚ ತತ್ಕೃತಮ್ ॥೯॥

ಎತ್ತರವಾದ ಆಕೃತಿಯುಳ್ಳ, ಶ್ಯಾಮಲವರ್ಣಳಾದ, ವಿಶಾಲಾಕ್ಷಿಯಾದ ಈ ದ್ರೌಪದಿಯು ಪುನಃ ತುಂಬಿದ ಸಭೆಗೆ ಸೆಳೆಯಲ್ಪಟ್ಟು ಅವಮಾನಿತಳಾಗಬಾರದೆಂದು ನಾನು ಹೀಗೆ ಮಾಡಿದೆನು.

ಪ್ರೇಕ್ಷತಾಮೇವ ವೋ ಭೀಮ ವೇಪನ್ತೀಂ ಕದಲೀಮಿವ।
ಸ್ತ್ರೀಧರ್ಮಿಣೀಮರಿಷ್ಟಾಙ್ಗೀಂ ತಥಾ ದ್ಯೂತಪರಾಜಿತಾಮ್ ॥೧೦॥
ದುಃಶಾಸನೋ ಯದಾ ಮೌರ್ಖ್ಯಾದ್ದಾಸೀವತ್ಪರ್ಯಕರ್ಷತ।
ತದೈವ ವಿದಿತಂ ಮಹ್ಯಂ ಪರಾಭೂತಮಿದಂ ಕುಲಮ್ ॥೧೧॥

ಭೀಮಸೇನ! ನೀವೆಲ್ಲರೂ ನೋಡುತ್ತಿದ್ದಂತೆಯೇ, ಬಾಳೆಯ ಎಲೆಯಂತೆ ತರ-ತರನೆ ನಡುಗುತ್ತಿದ್ದ, ರಜಸ್ವಲೆಯಾಗಿದ್ದ, ಶುಭಲಕ್ಷಣಯುಕ್ತಳಾಗಿದ್ದ, ದ್ಯೂತದಲ್ಲಿ ಪಣವಾಗಿಡಲ್ಪಟ್ಟು ಪರಾಜಿತಳಾಗಿದ್ದ ದ್ರೌಪದಿಯನ್ನು

ಯಾವಾಗ ದುಃಶಾಸನನು ಮೌಢ್ಯದಿಂದ ದಾಸಿಯಂತೆ ತುಂಬಿದ ಸಭೆಗೆ ಸೆಳೆದುತಂದನೋ–ಆಗಲೇ ನನಗೆ ಈ ವಂಶವು ವಿನಾಶವಾಗುವುದೆಂದು ತಿಳಿಯಿತು.

ನಿಷಣ್ಣಾಃ ಕುರುವಶ್ಚೈವ ತದಾ ಮೇ ಶ್ವಶುರಾದಯಃ।
ಸಾ ದೈವಂ ನಾಥಮಿಚ್ಛನ್ತೀ ವ್ಯಲಪತ್ಕುರರೀ ಯಥಾ ॥೧೨॥

ನನ್ನ ಮಾವಂದಿರೇ ಮೊದಲಾದ ಕುರುನಾಯಕರೆಲ್ಲರೂ ಆ ಮಹಾಸಭೆಯಲ್ಲಿಯೇ ಉಪಸ್ಥಿತರಾಗಿದ್ದರು. ಆದರೆ ಆ ಸಮಯದಲ್ಲಿ ಅವರಲ್ಲಿ ಯಾರೂ ಅವಳ ರಕ್ಷಣೆಗೆ ಬರಲಿಲ್ಲ. ಆ ಸಮಯದಲ್ಲವಳು ದೈವವನ್ನೇ ರಕ್ಷಣೆಗಾಗಿ ಪ್ರಾರ್ಥಿಸುತ್ತಾ ಹೆಣ್ಣುಕಡಲುಹದ್ದಿನಂತೆ ಗೋಳಾಡುತ್ತಿದ್ದಳು.

ಕೇಶಪಕ್ಷೇ ಪರಾಮೃಷ್ಟಾ ಪಾಪೇನ ಹತಬುದ್ಧಿನಾ।
ಯದಾ ದುಃಶಾಸನೇನೈಷಾ ತದಾ ಮುಹ್ಯಾಮ್ಯಹಂ ನೃಪಾಃ ॥೧೩॥

ಯುಷ್ಮತ್ತೇಜೋಭಿವೃದ್ಧ್ಯರ್ಥಂ ಮಯಾ ಹ್ಯುದ್ಧರ್ಷಣಂ ಕೃತಮ್।
ತದಾನೀಂ ವಿದುಲಾವಾಕ್ಯೈರಿತಿ ತದ್ವಿತ್ತ ಪುತ್ರಕಾಃ ॥೧೪॥

ಬುದ್ಧಿಗೆಟ್ಟಿದ್ದ ಪಾಪಿಷ್ಠನಾದ ದುಃಶಾಸನನು ಯಾವಾಗ ನನ್ನ ಸೊಸೆಯ ತಲೆಗೂದಲನ್ನು ಹಿಡಿದು ತುಂಬಿದ ಸಭೆಗೆ ಸೆಳೆದುತಂದನೋ–ಆಗ ನಾನು ದುಃಖದಿಂದ ಮೂರ್ಛಿತಳಾದೆನು. ಆದುದರಿಂದಲೇ ನಾನು ವಿದುಲೆಯ ಮಾತುಗಳ ಮೂಲಕ ನಿಮ್ಮ ತೇಜಸ್ಸನ್ನು ವೃದ್ಧಿಗೊಳಿಸಲು ಪ್ರಯತ್ನಿಸಿದೆನು ಮತ್ತು ಯುದ್ಧಮಾಡಲು ನಿಮ್ಮನ್ನು ಪ್ರೋತ್ಸಾಹಿಸಿದೆನು. ಮಕ್ಕಳೇ! ಇದನ್ನು ಸ್ಪಷ್ಟವಾಗಿ ತಿಳಿಯಿರಿ.

ಕಥಂ ನ ರಾಜವಂಶೋಽಯಂ ನಶ್ಯೇತ್ಪ್ರಾಪ್ಯ ಸುತಾನ್ಮಮ ।
ಪಾಣ್ಡೋರಿತಿ ಮಯಾ ಪುತ್ರಾಸ್ತಸ್ಮಾದುದ್ಧರ್ಷಣಂ ಕೃತಮ್ ॥೧೫॥

ನನ್ನ ಮತ್ತು ಪಾಂಡುರಾಜನ ಧೀರಪುತ್ರರಾದ ನಿಮ್ಮನ್ನು ಪಡೆದೂ ಈ ರಾಜವಂಶವು ವಿನಾಶವಾಗಬಾರದೆಂದು ನಿಮ್ಮನ್ನು ಯುದ್ಧಮಾಡಲು ಪ್ರೋತ್ಸಾಹಿಸಿದೆನು.

ನ ತಸ್ಯ ಪುತ್ರಾಃ ಪೌತ್ರಾ ವಾ ಕ್ಷತವಂಶಸ್ಯ ಪಾರ್ಥಿವ ।
ಲಭನ್ತೇ ಸುಕೃತಾಲ್ಲೋಕಾನ್ಯಸ್ಮಾದ್ವಂಶಃ ಪ್ರಣಶ್ಯತಿ ॥೧೬॥

ಯಾವನಿಂದ ವಂಶವು ನಷ್ಟವಾಗಿ ಹೋಗುವುದೋ–ಅಂತಹ ವಂಶನಾಶಕನ ಮಕ್ಕಳಾಗಲೀ ಮೊಮ್ಮಕ್ಕಳಾಗಲೀ ಪುಣ್ಯಲೋಕಗಳನ್ನು ಹೊಂದುವುದಿಲ್ಲ.

ಭುಕ್ತಂ ರಾಜ್ಯಫಲಂ ಪುತ್ರಾ ಭರ್ತುರ್ಮೇ ವಿಪುಲಂ ಪುರಾ।
ಮಹಾದಾನಾನಿ ದತ್ತಾನಿ ಪೀತಃ ಸೋಮೋ ಯಥಾವಿಧಿ ॥೧೭॥

ಮಕ್ಕಳೇ! ನಾನು ಹಿಂದೆ ಪತಿಯೊಡನೆ ವಿಶಾಲವಾದ ರಾಜ್ಯದ ಫಲವನ್ನು ಉಪಭೋಗಿಸಿದ್ದೇನೆ. ಮಹಾದಾನಗಳನ್ನು ಕೊಟ್ಟಿದ್ದೇನೆ. ಯಜ್ಞಗಳಲ್ಲಿ ವಿಧಿಪೂರ್ವಕವಾಗಿ ಸೋಮಪಾನವನ್ನು ಮಾಡಿದ್ದೇನೆ.

ನಾಹಮಾತ್ಮಫಲಾರ್ಥಂ ವೈ ವಾಸುದೇವಮಚೂಚುದಮ್।
ವಿದುಲಾಯಾಃ ಪ್ರಲಾಪೈಸ್ತೈಃ ಪಾಲನಾರ್ಥಂ ಚ ತತ್ಕೃತಮ್ ॥೧೮॥

ಮಕ್ಕಳೇ! ನಾನು ನನ್ನ ಲಾಭಕ್ಕಾಗಿ ವಿದುಲೆಯ ವೀರಪ್ರಚೋದಕವಾದ ಮಾತುಗಳನ್ನು ಶ್ರೀಕೃಷ್ಣನ ಮೂಲಕವಾಗಿ ನಿಮಗೆ ಹೇಳಿಕಳುಹಿಸಿರಲಿಲ್ಲ. ನಿಮ್ಮನ್ನು ರಕ್ಷಿಸುವ ಉದ್ದೇಶದಿಂದಲೇ ವಿದುಲಾಪ್ರಸಂಗವನ್ನು ನಿಮಗೆ ವಿಸ್ತಾರವಾಗಿ ಹೇಳುವಂತೆ ಶ್ರೀಕೃಷ್ಣನನ್ನು ನಾನು ಪ್ರೇರಿಸಿದೆನು.

ನಾಹಂ ರಾಜ್ಯಫಲಂ ಪುತ್ರಾಃ ಕಾಮಯೇ ಪುತ್ರನಿರ್ಜಿತಮ್।
ಪತಿಲೋಕಾನಹಂ ಪುಣ್ಯಾನ್ಕಾಮಯೇ ತಪಸಾ ವಿಭೋ ॥೧೯॥

ಮಕ್ಕಳೇ! ನಾನು ಮಕ್ಕಳು ಜಯಿಸಿದ ರಾಜ್ಯಫಲವನ್ನು ಉಪ ಭೋಗಿಸಲು ಇಷ್ಟಪಡುವುದಿಲ್ಲ. ತಪಸ್ಸಿನ ಮೂಲಕವಾಗಿ ಪುಣ್ಯಮಯವಾದ ಪತಿಯ ಲೋಕಗಳಿಗೆ ಹೋಗಲು ಇಷ್ಟಪಡುತ್ತೇನೆ.

ಶ್ವಶ್ರೂಶ್ವಶುರಯೋಃ ಕೃತ್ವಾ ಶುಶ್ರೂಷಾಂ ವನವಾಸಿನೋಃ।
ತಪಸಾ ಶೋಷಯಿಷ್ಯಾಮಿ ಯುಧಿಷ್ಠಿರ ಕಲೇವರಮ್ ॥೨೦॥

ವನವಾಸಿಗಳಾದ ಅತ್ತೆ-ಮಾವಂದಿರ (ಗುರುಸ್ಥಾನದಲ್ಲಿರುವ ಗಾಂಧಾರೀ-ಧೃತರಾಷ್ಟ್ರರ) ಶುಶ್ರೂಷೆಯನ್ನು ಮಾಡುತ್ತಾ ತಪಸ್ಸಿನ ಮೂಲಕವಾಗಿ ಈ ಶರೀರವನ್ನು ಶೋಷಿಸುತ್ತೇನೆ.

ನಿವರ್ತಸ್ವ ಕುರುಶ್ರೇಷ್ಠ ಭೀಮಸೇನಾದಿಭಿಃ ಸಹ ।
ಧರ್ಮೇ ತೇ ಧೀಯತಾಂ ಬುದ್ಧಿರ್ಮನಸ್ತು ಮಹದಸ್ತು ಚ ॥೨೧॥

ಕುರುಶ್ರೇಷ್ಠನೇ! ಭೀಮಾದಿಗಳೊಡನೆ ಹಸ್ತಿನೆಗೆ ಹಿಂದಿರುಗು. ನಿನ್ನ ಬುದ್ಧಿಯು ಯಾವಾಗಲೂ ಧರ್ಮದಲ್ಲಿಯೇ ಸ್ಥಿರವಾಗಿರಲಿ ಮತ್ತು ನಿನ್ನ ಮನಸ್ಸೂ ವಿಶಾಲವಾಗಿರಲಿ."

೧೭ನೆಯ ಅಧ್ಯಾಯವು ಮುಗಿಯಿತು.

೧೮ನೆಯ ಅಧ್ಯಾಯ ಆಶ್ರಮವಾಸಪರ್ವ (ಮುಂದುವರಿದಿದೆ.)

ಪಾಂಡವರು ನಿರಾಶರಾಗಿ ಹಸ್ತಿನಾಪಟ್ಟಣಕ್ಕೆ ಹಿಂದಿರುಗಿದುದು: ಧೃತರಾಷ್ಟ್ರನು ಪರಿವಾರದೊಡನೆ ಗಂಗಾನದಿಯ ತೀರದಲ್ಲಿ ನಿವಾಸಮಾಡಿದುದು

ವೈಶಂಪಾಯನರು ಹೇಳುತ್ತಾರೆ:

ರಾಜಶ್ರೇಷ್ಠನೇ! ಜನಮೇಜಯ! ಕುಂತೀದೇವಿಯ ಮಾತನ್ನು ಕೇಳಿ ಪಾಪರಹಿತರಾದ ಪಾಂಡವರು ನಾಚಿಕೆಗೊಂಡು ದ್ರೌಪದಿಯೊಡನೆ ಹಸ್ತಿನಾಪಟ್ಟಣಕ್ಕೆ ಹಿಂದಿರುಗಿದರು. ಕುಂತಿಯು ಹೀಗೆ ದೃಢಚಿತ್ತಳಾಗಿ ಅರಣ್ಯಕ್ಕೆ ಹೊರಟಿರುವುದನ್ನು ನೋಡಿ ಅಂತಃಪುರದ ಸ್ತ್ರೀಯರ ಗೋಳಾಟದ ಶಬ್ದವು ದೊಡ್ಡದಾಗಿ ಕೇಳಿಬರುತ್ತಿದ್ದಿತು. ಬಳಿಕ ಪಾಂಡವರು ಧೃತರಾಷ್ಟ್ರರಾಜನಿಗೆ ಅಭಿವಾದನಪೂರ್ವಕವಾಗಿ ಪ್ರದಕ್ಷಿಣ-ನಮಸ್ಕಾರಗಳನ್ನು ಮಾಡಿ ಹಸ್ತಿನೆಗೆ ಹಿಂದಿರುಗಿದರು. ಕುಂತೀದೇವಿಯನ್ನು ಹಿಂದಕ್ಕೆ ಕರೆದುಕೊಂಡು ಹೋಗಲು ಅವರಿಗೆ ಸಾಧ್ಯವಾಗಲೇ ಇಲ್ಲ. ಅನಂತರ ಅಂಬಿಕೆಯ ಮಗನಾದ ಮಹಾತೇಜಸ್ವಿಯಾದ ಧೃತರಾಷ್ಟ್ರನು ಗಾಂಧಾರಿಯನ್ನೂ ವಿದುರನನ್ನೂ ಕೈಗಳಿಂದ ಹಿಡಿದುಕೊಂಡು ಹೇಳಿದನು:

ಯುಧಿಷ್ಠಿರಸ್ಯ ಜನನೀ ದೇವೀ ಸಾಧು ನಿವರ್ತ್ಯತಾಮ್।
ಯಥಾ ಯುಧಿಷ್ಠಿರಃ ಪ್ರಾಹ ತತ್ಸರ್ವಂ ಸತ್ಯಮೇವ ಹಿ ॥೫॥

"ಗಾಂಧಾರೀ-ವಿದುರರೇ! ನೀವಿಬ್ಬರೂ ಸೇರಿ ಯುಧಿಷ್ಠಿರನ ತಾಯಿಯಾದ ಕುಂತಿಗೆ ಸಮಾಧಾನಹೇಳಿ ಅವಳನ್ನು ಹಿಂದಕ್ಕೆ ಕಳುಹಿಸಿರಿ. ಈ ವಿಷಯದಲ್ಲಿ ಯುಧಿಷ್ಠಿರನು ಹೇಳಿರುವ ಎಲ್ಲ ಮಾತುಗಳೂ ಸತ್ಯವಾಗಿಯೇ ಇವೆ.

ಪುತ್ರೈಶ್ವರ್ಯಂ ಮಹದಿದಮಪಾಸ್ಯ ಚ ಮಹಾಫಲಮ್।
ಕಾ ನು ಗಚ್ಛೇದ್ವನಂ ದುರ್ಗಂ ಪುತ್ರಾನುತ್ಸೃಜ್ಯ ಮೂಢವತ್ ॥೬॥

ಮಕ್ಕಳ ಮಹಾಫಲದಾಯಕವಾದ ಈ ಮಹೈಶ್ವರ್ಯವನ್ನೂ ಮತ್ತು ಮಕ್ಕಳನ್ನೂ ಪರಿತ್ಯಜಿಸಿ ಮೂಢರಂತೆ ದುರ್ಗಮವಾದ ಅರಣ್ಯಕ್ಕೆ ಯಾರು ತಾನೇ ಹೋಗುತ್ತಾರೆ?

ರಾಜಸ್ಥಯಾ ತಪಸ್ತಪ್ತುಂ ಕರ್ತುಂ ದಾನವ್ರತಂ ಮಹತ್।
ಅನಯಾ ಶಕ್ಯಮೇವಾದ್ಯ ಶ್ರೂಯತಾಂ ಚ ವಚೋ ಮಮ ॥೭॥

ರಾಜ್ಯದಲ್ಲಿ (ಅರಮನೆಯಲ್ಲಿ) ಇದ್ದುಕೊಂಡೇ ತಪಸ್ಸನ್ನು ಮಾಡುವುದಕ್ಕೂ, ಮಹಾದಾನಗಳನ್ನು ಮಾಡುವುದಕ್ಕೂ, ವ್ರತಾನುಷ್ಠಾನಕ್ಕೂ ಇವಳಿಗೆ ಶಕ್ಯವಿದೆ. ಆದುದರಿಂದ ಈ ಸಮಯದಲ್ಲಿ ನನ್ನ ಮಾತನ್ನು ಕೇಳಿರಿ.

ಧರ್ಮಜ್ಞಳೇ! ಗಾಂಧಾರೀ! ಸೊಸೆಯ (ಕುಂತಿಯ) ಶುಶ್ರೂಷೆಯಿಂದ ಸಂತುಷ್ಟನಾಗಿದ್ದೇನೆ. ಆದುದರಿಂದ ನೀನು ಇವಳಿಗೆ ಹಸ್ತಿನಾಪಟ್ಟಣಕ್ಕೆ ಹಿಂದಿರುಗಲು ಅನುಮತಿಯನ್ನು ನೀಡುವುದು ಯೋಗ್ಯವಾಗಿದೆ."

ಧೃತರಾಷ್ಟ್ರನು ಹೀಗೆ ಹೇಳಿದನಂತರ ಗಾಂಧಾರಿಯು ಕುಂತಿಗೆ ರಾಜನ ಮಾತನ್ನು ಹೇಳಿದಳಲ್ಲದೇ ಕೂಡಲೇ ಹಿಂದಿರುಗುವಂತೆ ತಾನೂ ತೀವ್ರವಾಗಿ ಒತ್ತಾಯಿಸಿದಳು. ಆದರೆ ಧರ್ಮಪರಾಯಣೆಯಾಗಿದ್ದ, ಸಾಧ್ವಿಯಾದ, ಅರಣ್ಯದಲ್ಲಿಯೇ ವಾಸಮಾಡಲು ದೃಢನಿಶ್ಚಯವುಳ್ಳವಳಾಗಿದ್ದ ಕುಂತಿಯನ್ನು ಹಿಂದಕ್ಕೆ ಕಳುಹಿಸಲು ಗಾಂಧಾರಿಗೂ ಸಾಧ್ಯವಾಗಲಿಲ್ಲ. ಕುಂತಿಯ ಆಗಿನ ಸ್ಥಿತಿಯನ್ನೂ ಅರಣ್ಯಕ್ಕೆ ಹೋಗುವುದರಲ್ಲಿಯೇ ಅವಳ ದೃಢನಿಶ್ಚಯವನ್ನೂ ತಿಳಿದು, ಯುಧಿಷ್ಠಿರನೇ ಮೊದಲಾದ ಕುರುರಾಜಕುಮಾರರು ನಿರಾಶರಾಗಿ ಹಿಂದಿರುಗಿದುದನ್ನೂ ನೋಡಿ, ಅಂತಃಪುರದ ಸ್ತ್ರೀಯರು ಗಟ್ಟಿಯಾಗಿ ಅತ್ತುಕೊಂಡೇ ಹಸ್ತಿನಾಪಟ್ಟಣಕ್ಕೆ ಹಿಂದಿರುಗಿದರು. ಕುಂತಿಯ ಎಲ್ಲ ಮಕ್ಕಳೂ ಮತ್ತು ವಧುಗಳೂ ಹಿಂದಿರುಗಿದನಂತರ ಮಹಾಪ್ರಾಜ್ಞನಾದ ಧೃತರಾಷ್ಟ್ರನು ಅರಣ್ಯಕ್ಕೆ ಪ್ರಯಾಣಮಾಡಿದನು. ಅತಿದೀನರಾಗಿದ್ದ ದುಃಖ-ಶೋಕಪರಾಯಣರಾಗಿದ್ದ ಪಾಂಡವರು ಸ್ತ್ರೀಯರೊಡನೆ ಯಾನಗಳಲ್ಲಿ ಕುಳಿತು ಹಸ್ತಿನಾಪಟ್ಟಣವನ್ನು ಪ್ರವೇಶಿಸಿದರು. ಬಾಲಕರಿಂದಲೂ, ವೃದ್ಧರಿಂದಲೂ, ಸ್ತ್ರೀಯರಿಂದಲೂ ಸಮಾಕುಲವಾಗಿದ್ದ ಇಡೀ ಹಸ್ತಿನಾ

ಪಟ್ಟಣವೇ ಆ ದಿನ ಆನಂದದಿಂದ ರಹಿತವಾಗಿರುವಂತೆಯೂ ಉತ್ಸವಾದಿಗಳಿಂದ ಶೂನ್ಯವಾಗಿರುವಂತೆಯೂ ಕಾಣುತ್ತಿದ್ದಿತು. ಎಲ್ಲ ಪ್ರಜೆಗಳೂ ಉತ್ಸಾಹಶೂನ್ಯರಾಗಿದ್ದರು. ಪಾಂಡವರು ಅತ್ಯಂತದೀನರಾಗಿದ್ದರು. ಹಸುವಿನಿಂದ ಬಿಡಲ್ಪಟ್ಟ ಕರುಗಳಂತೆ ಕುಂತೀದೇವಿಯಿಂದ ಬಿಡಲ್ಪಟ್ಟವರಾಗಿ ದುಃಖಪೀಡಿತರಾಗಿದ್ದರು.



ಸಪರಿವಾರನಾದ ಧೃತರಾಷ್ಟ್ರನು ಹಗಲಿನಲ್ಲಿ ಬಹಳ ದೂರ ಪ್ರಯಾಣ ಮಾಡಿ ಸಂಧ್ಯಾಕಾಲದಲ್ಲಿ ಗಂಗಾನದಿಯ ತೀರವನ್ನು ಸೇರಿ ಅಲ್ಲಿಯೇ ಬಿಡಾರಮಾಡಿದನು. ಅಲ್ಲಲ್ಲಿದ್ದ ತಪೋವನಗಳಲ್ಲಿ ವೇದಪಾರಂಗತರಾದ

ಬ್ರಾಹ್ಮಣರು ವಿಧಿಪೂರ್ವಕವಾಗಿ ಪ್ರತಿಷ್ಠಾಪಿಸಿದ್ದ ಅಗ್ನಿಗಳು ಪ್ರಕಾಶಮಾನವಾಗಿ ಕಾಣುತ್ತಿದ್ದುವು. ವೃದ್ಧನಾದ ಧೃತರಾಷ್ಟ್ರನೂ ಅಲ್ಲಿಯೇ ಅಗ್ನಿಗಳನ್ನು ಪ್ರತಿಷ್ಠಾಪಿಸಿದನು. ಮೂರು ಪ್ರಕಾರವಾದ ಅಗ್ನಿಗಳಲ್ಲಿಯೂ ಯಥಾವಿಧಿಯಾಗಿ ಆಹುತಿಗಳನ್ನು ಸಮರ್ಪಿಸಿ ಉಪಾಸನೆಮಾಡಿದನು. ಬಳಿಕ ರಾಜನು ಸಂಧ್ಯಾಗತನಾಗಿದ್ದ ಸಾವಿರ ಕಿರಣನಾದ ಸೂರ್ಯನ ಉಪಸ್ಥಾನವನ್ನೂ ಮಾಡಿದನು. ವಿದುರ-ಸಂಜಯರು ರಾಜನಿಗೆ ದರ್ಭೆಗಳಿಂದಲೇ ಹಾಸಿಗೆಯನ್ನು ಮಾಡಿಕೊಟ್ಟರು. ಹಾಗೆಯೇ ಗಾಂಧಾರಿಗೂ ಧೃತರಾಷ್ಟ್ರನ ಸಮೀಪದಲ್ಲಿಯೇ ದರ್ಭೆಗಳಿಂದ ಮತ್ತೊಂದು ಹಾಸಿಗೆಯನ್ನೂ ಸಿದ್ಧಗೊಳಿಸಿದರು. ಯುಧಿಷ್ಠಿರನ ತಾಯಿಯಾದ ಉತ್ತಮವ್ರತನಿಷ್ಠಳಾದ ಕುಂತೀದೇವಿಯು ಗಾಂಧಾರಿಯ ಸಮೀಪದಲ್ಲಿದ್ದ ಕುಶಾಸನದಲ್ಲಿ (ಕುಶಾಸ್ತರಣದಲ್ಲಿ) ಸುಖವಾಗಿ ಕುಳಿತುಕೊಂಡಳು (ಮಲಗಿದಳು.) ಅವರ ಮಾತು ಕೇಳಿಸುವಷ್ಟು ದೂರದಲ್ಲಿ ವಿದುರಾದಿಗಳು ಮಲಗಿದರು. ಯಾಜಕಬ್ರಾಹ್ಮಣರೂ ಮತ್ತು ರಾಜನನ್ನು ಅನುಸರಿಸಿ ಬಂದಿದ್ದ ಇತರ ದ್ವಿಜರೂ ಯಥಾಯೋಗ್ಯವಾದ ಸ್ಥಳಗಳಲ್ಲಿ ಮಲಗಿಕೊಂಡರು. ಆ ರಾತ್ರಿಯಲ್ಲಿ ಮುಖ್ಯ-ಮುಖ್ಯರಾದ ಬ್ರಾಹ್ಮಣರು ಸ್ವಾಧ್ಯಾಯನಿರತರಾಗಿದ್ದರು. ಅಗ್ನಿಹೋತ್ರಾಗ್ನಿಗಳು ಅಲ್ಲಲ್ಲಿ ಪ್ರಜ್ವಲಿಸುತ್ತಿದ್ದುವು. ಹೀಗಿದ್ದ ಆ ರಾತ್ರಿಯು ಬ್ರಹ್ಮನ ರಾತ್ರಿಯಂತೆ ಅಲ್ಲಿದ್ದವರಿಗೆ ಸಂತೋಷವನ್ನು ಹೆಚ್ಚಿಸುವುದಾಗಿದ್ದಿತು. ರಾತ್ರಿಯು ಕಳೆದನಂತರ ಅವರೆಲ್ಲರೂ ಪ್ರಾತಃಕಾಲದಲ್ಲಿ ಮಾಡಬೇಕಾದ ಅಹ್ನಿಕಗಳನ್ನು ಮುಗಿಸಿ ವಿಧಿವತ್ತಾಗಿ ಅಗ್ನಿಗಳಲ್ಲಿ ಹೋಮಮಾಡಿ ಮುಂದೆ ಪ್ರಯಾಣಹೊರಟರು. ಉಪವಾಸವ್ರತನಿಷ್ಠರಾಗಿದ್ದ ಅವರೆಲ್ಲರೂ ಉತ್ತರದಿಕ್ಕನ್ನೇ ನಿರೀಕ್ಷಿಸುತ್ತಾ ಉತ್ತರಾಭಿಮುಖವಾಗಿ ಪ್ರಯಾಣ ಮಾಡುತ್ತಿದ್ದರು. ಶೋಕಪಡುತ್ತಿದ್ದ ಪಟ್ಟಣಿಗರಿಂದಲೂ ಮತ್ತು ದೇಶೀಯಜನರಿಂದಲೂ ಶೋಕಿಸಲ್ಪಡುತ್ತಿದ್ದ ಧೃತರಾಷ್ಟ್ರಾದಿಗಳಿಗೂ ಆ ಮೊದಲನೆಯ ದಿನದ ನಿವಾಸವು ಅತಿದುಃಖಕರವಾಗಿ ಪರಿಣಮಿಸಿತು."

೧೮ನೆಯ ಅಧ್ಯಾಯವು ಮುಗಿಯಿತು.

೧೯ನೆಯ ಅಧ್ಯಾಯ ಆಶ್ರಮವಾಸಪರ್ವ (ಮುಂದುವರಿದಿದೆ.)

ಧೃತರಾಷ್ಟ್ರಾದಿಗಳು ಗಂಗಾತೀರದಲ್ಲಿ ಸ್ವಲ್ಪ ದಿವಸಗಳಿದ್ದು ಕುರುಕ್ಷೇತ್ರಕ್ಕೆ ಹೋಗಿ ಶತಯೂಪರಾಜರ್ಷಿಯ ಆಶ್ರಮದಲ್ಲಿ ನಿವಾಸಮಾಡಿದುದು

ವೈಶಂಪಾಯನರು ಹೇಳುತ್ತಾರೆ:

ತತೋ ಭಾಗೀರಥೀತೀರೇ ಮೇಧ್ಯೇ ಪುಣ್ಯಜನೋಚಿತೇ ।
ನಿವಾಸಮಕರೋದ್ರಾಜಾ ವಿದುರಸ್ಯ ಮತೇ ಸ್ಥಿತಃ ॥೧॥

ಜನಮೇಜಯ! ಬಳಿಕ ಧೃತರಾಷ್ಟ್ರನು ವಿದುರನ ಅಭಿಪ್ರಾಯದಂತೆ ಪುಣ್ಯಾತ್ಮರ ನಿವಾಸಕ್ಕೆ ಯೋಗ್ಯವಾದ ಪರಮಪಾವನವಾದ ಭಾಗೀರಥೀ ನದಿಯ ತೀರದಲ್ಲಿ ಬಿಡಾರವನ್ನು ಮಾಡಿದನು.

ಅಲ್ಲಿ ವನವಾಸಿಗಳಾದ ಹಲವಾರು ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರು ಗುಂಪು-ಗುಂಪಾಗಿ ಧೃತರಾಷ್ಟ್ರರಾಜನ ಬಳಿಗೆ ಬಂದು ಸೇರಿದರು. ಅವರೆಲ್ಲರಿಂದಲೂ ಪರಿವೃತನಾಗಿದ್ದ ರಾಜನು ಸಮಯೋಚಿತವಾದ ಮಾತು-ಕಥೆಗಳಿಂದ ಅವರನ್ನು ಸಂತೋಷಗೊಳಿಸಿದನು. ಶಿಷ್ಯಸಮೇತರಾದ ಬ್ರಾಹ್ಮಣರನ್ನು ವಿಧಿವತ್ತಾಗಿ ಸತ್ಕರಿಸಿ ಅವರೆಲ್ಲರೂ ಆಶ್ರಮಗಳಿಗೆ ಹಿಂದಿರುಗಲು ಅನುಮತಿಸಿದನು.

ಧೃತರಾಷ್ಟ್ರನೂ ಮತ್ತು ಯಶಸ್ವಿನಿಯಾದ ಗಾಂಧಾರಿಯೂ ಸಾಯಂಕಾಲವಾಗುತ್ತಲೇ ಗಂಗಾನದಿಗೆ ಹೋಗಿ ವಿಧಿವತ್ತಾಗಿ ಸ್ನಾನಾದಿಗಳನ್ನು ಮಾಡಿದರು. ಅವರೂ ಮತ್ತು ವಿದುರನೇ ಮೊದಲಾದ ಪುರುಷರೂ ಪ್ರತ್ಯೇಕ-ಪ್ರತ್ಯೇಕವಾದ ಗಂಗೆಯ ತೀರ್ಥಗಳಲ್ಲಿ (ಘಟ್ಟಗಳಲ್ಲಿ) ಮುಳುಗಿ ಸ್ನಾನಮಾಡಿ, ಸಂಧ್ಯೋಪಾಸನಾದಿ ಶುಭಕಾರ್ಯಗಳನ್ನು ಮಾಡಿದರು. ಧೃತರಾಷ್ಟ್ರ-ಗಾಂಧಾರಿಯರೂ ಸ್ನಾನಮಾಡಿ ಸಂಧ್ಯೋಪಾಸನಾದಿಗಳನ್ನು ಮುಗಿಸಿದನಂತರ ಕುಂತಿಭೋಜನ ಮಗಳಾದ ಕುಂತಿಯು ವೃದ್ಧನಾದ ಮಾವನನ್ನೂ ಮತ್ತು ಗಾಂಧಾರಿಯನ್ನೂ ಗಂಗಾನದಿಯ ತೀರಪ್ರದೇಶದಲ್ಲಿದ್ದ ಆಶ್ರಮಕ್ಕೆ ಕರೆದೊಯ್ದಳು. ಅಲ್ಲಿ ಯಾಜಕರಾದ ಬ್ರಾಹ್ಮಣರು ರಾಜನ ಸಲುವಾಗಿ ಒಂದು ವೇದಿಯನ್ನು ನಿರ್ಮಿಸಿದರು. ಸತ್ಯನಿಷ್ಠನಾದ ರಾಜನು ವೇದಿಕೆಯಲ್ಲಿ ಪ್ರತಿಷ್ಠಿತವಾಗಿದ್ದ ಅಗ್ನಿಯಲ್ಲಿ ಯಥಾವಿಧಿಯಾಗಿ ಹೋಮ

ಮಾಡಿದನು. ಹೀಗೆ ನಿತ್ಯಕರ್ಮಗಳನ್ನು ಮುಗಿಸಿ ವೃದ್ಧನಾದ, ನಿಯಮ ಪರಾಯಣನಾದ, ಜಿತೇಂದ್ರಿಯನಾದ ಧೃತರಾಷ್ಟ್ರನು ತನ್ನ ಅನುಯಾಯಿಗಳೊಡನೆ ಕುರುಕ್ಷೇತ್ರಕ್ಕೆ ಪ್ರಯಾಣಮಾಡಿದನು. ಬಳಿಕ ಬುದ್ಧಿವಂತನಾದ ಆ ರಾಜನು ಅಲ್ಲಿದ್ದ ಒಂದು ಆಶ್ರಮದ ಬಳಿಗೆ ಹೋಗಿ ವಿದ್ವಾಂಸನಾದ ಶತಯೂಪನೆಂಬ ರಾಜರ್ಷಿಯನ್ನು ಸಂಧಿಸಿದನು. ಪರಂತಪನಾದ ಶತಯೂಪನು ಕೇಕಯದೇಶಗಳಿಗೆ ರಾಜನಾಗಿದ್ದನು. ಶತಯೂಪನು–ಮಗನು ಪ್ರಾಪ್ತವಯಸ್ಕನಾದನಂತರ ಅವನಿಗೆ ರಾಜ್ಯಭಾರವನ್ನು ವಹಿಸಿಕೊಟ್ಟು ಅರಣ್ಯಕ್ಕೆ ಬಂದಿದ್ದನು. ರಾಜರ್ಷಿಯಾದ ಶತಯೂಪನೊಡನೆ ಧೃತರಾಷ್ಟ್ರನು ಪೂಜ್ಯರಾದ ವ್ಯಾಸರ ಆಶ್ರಮಕ್ಕೆ ಹೋದನು. ಧೃತರಾಷ್ಟ್ರರಾಜನು ಪೂಜ್ಯರಾದ ವ್ಯಾಸಮಹರ್ಷಿಗಳನ್ನು ವಿಧಿವತ್ತಾಗಿ ಸತ್ಕರಿಸಿದನು. ಅಲ್ಲಿ ಅವನು ಕೃಷ್ಣದ್ವೈಪಾಯನವ್ಯಾಸರಿಂದ ಅರಣ್ಯವಾಸದ ದೀಕ್ಷೆಯನ್ನು ಪಡೆದು ರಾಜರ್ಷಿಯಾದ ಶತಯೂಪನ ಆಶ್ರಮದಲ್ಲಿಯೇ ವಾಸಮಾಡ ತೊಡಗಿದನು. ವ್ಯಾಸರ ಆಜ್ಞೆಯಂತೆ ಮಹಾಮತಿಯಾದ ಶತಯೂಪನು ಧೃತರಾಷ್ಟ್ರನಿಗೆ ಅರಣ್ಯವಾಸದ ನಿಯಮಗಳೆಲ್ಲವನ್ನೂ ತಿಳಿಸಿದನು. ಹೀಗೆ ಮಹಾತ್ಮನಾದ ಧೃತರಾಷ್ಟ್ರನು ತಾನೂ ತಪಸ್ಸಿನಲ್ಲಿ ತೊಡಗಿದನು; ತನ್ನ ಅನುಯಾಯಿಗಳನ್ನೂ ತಪಸ್ಸಿನಲ್ಲಿ ತೊಡಗಿಸಿದನು. ಹಾಗೆಯೇ ನಾರುಮಡಿ-ಕೃಷ್ಣಾಜಿನಗಳನ್ನು ಧರಿಸಿದ್ದ ಗಾಂಧಾರಿಯೂ ಕುಂತಿಯೊಡನೆ ತಪಸ್ಸಿನಲ್ಲಿ ತೊಡಗಿದಳು. ಗಾಂಧಾರೀ-ಕುಂತಿಯರು ಸಮಾನವಾದ ವ್ರತಾನುಷ್ಠಾನವುಳ್ಳವರಾಗಿದ್ದರು.

ಕರ್ಮಣಾ ಮನಸಾ ವಾಚಾ ಚಕ್ಷುಷಾ ಚೈವ ತೇ ನೃಪ ।
ಸಂನಿಯಮ್ಯೇನ್ದ್ರಿಯಗ್ರಾಮಮಾಸ್ಥಿತೇ ಪರಮಂ ತಪಃ ॥೧೬॥

ಕರ್ಮದಿಂದಲೂ, ಮನಸ್ಸಿನಿಂದಲೂ, ಮಾತಿನಿಂದಲೂ, ಕಣ್ಣಿನಿಂದಲೂ ಇಂದ್ರಿಯಸಮೂಹವನ್ನು ಹತೋಟಿಯಲ್ಲಿಟ್ಟುಕೊಂಡು ಕುಂತೀ-ಗಾಂಧಾರಿಯರು ಪರಮಶ್ರೇಷ್ಠವಾದ ತಪಸ್ಸಿನಲ್ಲಿ ಸಂಲಗ್ನರಾದರು.

ತ್ವಗಸ್ಥಿಭೂತಃ ಪರಿಶುಷ್ಕಮಾಂಸೋ
ಜಟಾಜಿನೀ ವಲ್ಕಲಸಂವೃತಾಙ್ಗಃ।
ಸ ಪಾರ್ಥಿವಸ್ತತ್ರ ತಪಶ್ಚಚಾರ
ಮಹರ್ಷಿವತ್ತೀವ್ರಮಪೇತಮೋಹಃ ॥೧೭॥

ಧೃತರಾಷ್ಟ್ರನ ಶರೀರದಲ್ಲಿ ಮಾಂಸವೆಲ್ಲವೂ ಬತ್ತಿಹೋಗಿದ್ದಿತು. ಮೂಳೆ-ಚರ್ಮಗಳು ಮಾತ್ರವೇ ಉಳಿದಿದ್ದುವು. ಜಟೆಯನ್ನು ಬಿಟ್ಟಿದ್ದನು. ಕೃಷ್ಣಾಜಿನದಿಂದಲೂ ನಾರುಮಡಿಯಿಂದಲೂ ಶರೀರವನ್ನು ಮುಚ್ಚಿ ಕೊಂಡಿದ್ದನು. ವ್ಯಾಮೋಹಗಳೆಲ್ಲವನ್ನೂ ಸಂಪೂರ್ಣವಾಗಿ ಕಳೆದುಕೊಂಡು ಮಹರ್ಷಿಗಳಂತೆಯೇ ಕುರುರಾಜನು ತೀವ್ರವಾದ ತಪಸ್ಸನ್ನು ಮಾಡುತ್ತಿದ್ದನು.



ಕ್ಷತ್ತಾ ಚ ಧರ್ಮಾರ್ಥವಿದಗ್ರ್ಯಬುದ್ಧಿಃ
ಸಸಂಜಯಸ್ತಂ ನೃಪತಿಂ ಸದಾರಮ್।

ಉಪಾಚರದ್ಘೋರತಪೋ ಜಿತಾತ್ಮಾ
ತದಾ ಕೃಶೋ ವಲ್ಕಲಚೀರವಾಸಾಃ ||೧೮||

ಧರ್ಮಾರ್ಥಗಳನ್ನು ತಿಳಿದವನೂ ಮಹಾಮತಿಯೂ ಆಗಿದ್ದ, ಕೃಶನಾಗಿದ್ದ, ನಾರುಮಡಿಗಳನ್ನುಟ್ಟಿದ್ದ, ಜಿತಮನಸ್ಕನಾಗಿದ್ದ, ಘೋರ ತಪಸ್ಸಿನಲ್ಲಿ ನಿರತನಾಗಿದ್ದ ವಿದುರನು ಸಂಜಯನೊಡನೆ ಪತ್ನೀಸಹಿತನಾಗಿದ್ದ ರಾಜನನ್ನು ಸದಾ ಉಪಚರಿಸುತ್ತಿದ್ದನು.

೧೯ನೆಯ ಅಧ್ಯಾಯವು ಮುಗಿಯಿತು.

೨೦ನೆಯ ಅಧ್ಯಾಯ ಆಶ್ರಮವಾಸಪರ್ವ (ಮುಂದುವರಿದಿದೆ.)

ನಾರದರು ಧೃತರಾಷ್ಟ್ರನಿಗೆ ಪ್ರಾಚೀನರಾಜರ ತಪಸ್ಸಿದ್ಧಿಯ ದೃಷ್ಟಾಂತಗಳನ್ನು ಹೇಳಿ ಅವನಿಗೆ ತಪಸ್ಸಿನಲ್ಲಿ ಶ್ರದ್ಧೆಯನ್ನು ಹೆಚ್ಚಿಸಿದುದು: ಶತಯೂಪನ ಪ್ರಶ್ನೆಗೆ ಉತ್ತರವಾಗಿ ಧೃತರಾಷ್ಟ್ರನಿಗೆ ಪ್ರಾಪ್ತವಾಗುವ ಗತಿಯನ್ನು ಹೇಳಿದುದು

ವೈಶಂಪಾಯನರು ಹೇಳುತ್ತಾರೆ:

ತತಸ್ತತ್ರ ಮುನಿಶ್ರೇಷ್ಠಾ ರಾಜಾನಂ ದ್ರಷ್ಟುಮಭ್ಯಯುಃ|
ನಾರದಃ ಪರ್ವತಶ್ಚೈವ ದೇವಲಶ್ಚ ಮಹಾತಪಾಃ ||೧||

ದ್ವೈಪಾಯನಃ ಸಶಿಷ್ಯಶ್ಚ ಸಿದ್ಧಾಶ್ಚಾನ್ಯೇ ಮನೀಷಿಣಃ|
ಶತಯೂಪಶ್ಚ ರಾಜರ್ಷಿರ್ವೃದ್ಧಃ ಪರಮಧಾರ್ಮಿಕಃ ||೨||

ಜನಮೇಜಯ! ಸ್ವಲ್ಪಕಾಲಾನಂತರ ಧೃತರಾಷ್ಟ್ರರಾಜನನ್ನು ನೋಡುವ ಸಲುವಾಗಿ ನಾರದರೂ, ಪರ್ವತರೂ, ಮಹಾತಪಸ್ವಿಯಾದ ದೇವಲನೂ, ಶಿಷ್ಯಸಹಿತರಾದ ಮಹರ್ಷಿ ವ್ಯಾಸರೂ, ಮನನಶೀಲರಾದ ಇತರ ಸಿದ್ಧರೂ ಮತ್ತು ಪರಮಧಾರ್ಮಿಕನಾದ ವೃದ್ಧನಾದ ರಾಜರ್ಷಿಯಾದ ಶತಯೂಪನೂ ಅಲ್ಲಿಗೆ ಆಗಮಿಸಿದನು.

ಅವರೆಲ್ಲರನ್ನೂ ಕುಂತೀದೇವಿಯು ಯಥಾವಿಧಿಯಾಗಿ ಸತ್ಕರಿಸಿದಳು. ಅವಳ ಶುಶ್ರೂಷೆಯಿಂದಲೂ ಮತ್ತು ತಪಸ್ಸಿನಿಂದಲೂ ಅಲ್ಲಿ ನೆರೆದಿದ್ದ ಋಷಿಗಳೆಲ್ಲರೂ ಸಂತೋಷಗೊಂಡರು. ಶ್ರೇಷ್ಠರಾದ ಆ ಮಹರ್ಷಿಗಳು ಮಹಾತ್ಮನಾದ ಜನಾಧಿಪನಾದ ಧೃತರಾಷ್ಟ್ರನ ಮನಸ್ಸನ್ನು ರಂಜಿಸಲು

ಧರ್ಮಕ್ಕೆ ಸಂಬಂಧಿಸಿದಂತೆ ಅನೇಕಕಥೆಗಳನ್ನು ಹೇಳುತ್ತಿದ್ದರು. ಹಾಗೆ ಹೇಳುತ್ತಿದ್ದ ಕಥಾಪ್ರಸಂಗದಲ್ಲಿ ಎಲ್ಲದರ ಪ್ರತ್ಯಕ್ಷದರ್ಶಿಗಳಾದ, ದೇವರ್ಷಿಗಳಾದ ನಾರದರು ಈ ಕಥೆಯನ್ನು ಹೇಳಲು ಉಪಕ್ರಮಿಸಿದರು:

"ಕೇಕಯರಿಗೆ ಅಧಿಪತಿಯಾದ, ಶ್ರೀಮಂತನಾದ, ಭಯವೆಂಬುದನ್ನೇ ಕಾಣದಿದ್ದ ಸಹಸ್ರಚಿತ್ಯನೆಂಬ ರಾಜನೊಬ್ಬನಿದ್ದನು. ಅವನು ಇಲ್ಲಿ ವಾಸಮಾಡುತ್ತಿರುವ ರಾಜರ್ಷಿಯಾದ ಶತಯೂಪನ ಪಿತಾಮಹನು. ಧರ್ಮಾತ್ಮನಾದ ಸಹಸ್ರಚಿತ್ಯನು ಪರಮಧಾರ್ಮಿಕನಾಗಿದ್ದ ತನ್ನ ಹಿರಿಯ ಮಗನಿಗೆ ರಾಜ್ಯಭಾರವನ್ನು ವಹಿಸಿಕೊಟ್ಟು ಅರಣ್ಯವನ್ನು ಪ್ರವೇಶಿಸಿದನು. ಮಹಾದ್ಯುತಿಮಂತನಾದ ಆ ಭೂಪಾಲನು ತನ್ನ ಪ್ರದೀಪ್ತವಾದ ತಪಸ್ಸನ್ನು ಮುಗಿಸಿ ಇಂದ್ರಲೋಕಕ್ಕೆ ಹೋದನು. ತಪಸ್ಸಿನಿಂದ ತನ್ನ ಪಾಪಗಳೆಲ್ಲವನ್ನೂ ಸಂಪೂರ್ಣವಾಗಿ ಕಳೆದುಕೊಂಡಿದ್ದ ಆ ಸಹಸ್ರಚಿತ್ಯನನ್ನು ನಾನು ಸ್ವರ್ಗಕ್ಕೆ ಹೋದ ಸಮಯಗಳಲ್ಲಿ ಮಹೇಂದ್ರನ ಅರಮನೆಯಲ್ಲಿ ಹಲವಾರು ಬಾರಿ ನೋಡಿದ್ದೇನೆ. ಅದೇ ರೀತಿಯಲ್ಲಿ ಭಗದತ್ತನ ತಂದೆಯಾದ ಶೈಲಾಲಯನೆಂಬ ರಾಜನೂ ಪರಾಕ್ರಮದಲ್ಲಿ ಇಂದ್ರನಿಗೆ ಸಮಾನನಾಗಿದ್ದನು. ಅವನು ಕೂಡ ತಪಃಪ್ರಭಾವದಿಂದಲೇ ಈ ಲೋಕದಿಂದ ಸ್ವರ್ಗಲೋಕಕ್ಕೆ ಹೋಗಿರುವನು. ಮಾಂಧಾತೃವಿನ ಮಗನಾದ ಪುರುಕುತ್ಸರಾಜನು ಈ ಅರಣ್ಯದಲ್ಲಿಯೇ ತಪಸ್ಸಿದ್ಧಿಯನ್ನು ಪಡೆದನು. ನದಿಗಳಲ್ಲಿ ಶ್ರೇಷ್ಠಳಾದ ನರ್ಮದೆಯೇ ಅವನ ಭಾರ್ಯೆಯಾಗಿದ್ದಳು. ಅವನು ಈ ಅರಣ್ಯದಲ್ಲಿ ತಪಸ್ಸನ್ನು ಮಾಡಿ ಸಿದ್ಧಿಯನ್ನು ಪಡೆದು ಸ್ವರ್ಗಕ್ಕೆ ಹೋದನು.

ಪರಮಧಾರ್ಮಿಕನಾದ ಶಶಲೋಮನೆಂಬ ಹೆಸರಿನ ರಾಜನೊಬ್ಬನಿದ್ದನು. ಅವನು ಕೂಡ ಈ ಅರಣ್ಯದಲ್ಲಿಯೇ ತಪಸ್ಸನ್ನು ಮಾಡಿ ಅವಸಾನಾನಂತರ ಸ್ವರ್ಗಕ್ಕೆ ಹೋಗಿರುವನು. ಧೃತರಾಷ್ಟ್ರ! ದ್ವೈಪಾಯನ ವ್ಯಾಸರ ಅನುಗ್ರಹದಿಂದ ನೀನೂ ಈ ಅರಣ್ಯಕ್ಕೆ ಬಂದಿರುವೆ. ಹಿಂದಿನ ರಾಜರ್ಷಿಗಳಂತೆ ನೀನೂ ತಪಸ್ಸಿದ್ಧಿಯನ್ನು ಪಡೆದು ಕಷ್ಟಸಾಧ್ಯವಾದ ಶ್ರೇಷ್ಠವಾದ ಗತಿಯನ್ನು ಪಡೆಯುವೆ. ರಾಜಸಿಂಹನೇ! ನೀನೂ ಕೂಡ ತಪಸ್ಸು ಪೂರ್ಣವಾದನಂತರ ತೇಜಸ್ಸಿನಿಂದ ಯುಕ್ತನಾಗಿ ಗಾಂಧಾರಿಯೊಡನೆ ಹಿಂದಿನ ಮಹಾತ್ಮರು ಸೇರಿರುವ ಸದ್ಗತಿಯನ್ನೇ ಸೇರುವೆ.

ಇಂದ್ರನ ಸಮೀಪದಲ್ಲಿರುವ ನಿನ್ನ ತಮ್ಮನಾದ ಪಾಂಡುವು ನಿನ್ನನ್ನು ಯಾವಾಗಲೂ ಸ್ಮರಿಸಿಕೊಳ್ಳುತ್ತಲೇ ಇರುವನು. ನಿಶ್ಚಯವಾಗಿಯೂ ಅವನು ನಿನಗೆ ಶ್ರೇಯಸ್ಸುಂಟಾಗುವಂತೆ ಮಾಡುತ್ತಾನೆ. ಯುಧಿಷ್ಠಿರನ ತಾಯಿಯಾದ, ಯಶಸ್ವಿನಿಯಾದ, ನಿನ್ನ ಸೊಸೆಯಾದ ಈ ಕುಂತೀದೇವಿಯು ನಿನ್ನ ಮತ್ತು ಗಾಂಧಾರಿಯ ಶುಶ್ರೂಷೆಯಿಂದ ತನ್ನ ಪತಿಯಿರುವ ಲೋಕಕ್ಕೆ ಹೋಗುತ್ತಾಳೆ. ಅತ್ತೆ-ಮಾವಂದಿರ ಶುಶ್ರೂಷೆಮಾಡಿ ಪರಲೋಕಕ್ಕೆ ಹೋಗುವುದು ಧರ್ಮವಾಗಿದೆ.

ವಯಮೇತತ್ಪ್ರಪಶ್ಯಾಮೋ ನೃಪತೇ ದಿವ್ಯಚಕ್ಷುಷಾ।
ಪ್ರವೇಕ್ಷ್ಯತಿ ಮಹಾತ್ಮಾನಂ ವಿದುರಶ್ಚ ಯುಧಿಷ್ಠಿರಮ್।
ಸಂಜಯಸ್ತದನುಧ್ಯಾನಾದಿತಃ ಸ್ವರ್ಗಮವಾಪ್ಸ್ಯತಿ ॥೨೦॥

ನರೇಶ್ವರನೇ! ದಿವ್ಯದೃಷ್ಟಿಯಿಂದ ನಾವು ಈಗಲೇ ಕಾಣುತ್ತಿದ್ದೇವೆ. ಮುಂದೆ ಈ ಮಹಾತ್ಮನಾದ ವಿದುರನು ಯುಧಿಷ್ಠಿರನ ಶರೀರವನ್ನು ಪ್ರವೇಶಿಸುವ ಸುಂದರ ದೃಶ್ಯವು ಕಾಣುತ್ತಿದೆ. ಸಂಜಯನು ಧ್ಯಾನಿಸುತ್ತಿದ್ದು ಸ್ವರ್ಗಲೋಕಕ್ಕೆ ಹೋಗುತ್ತಾನೆ."

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಮಹಾತ್ಮನಾದ ಕೌರವೇಂದ್ರನು ನಾರದರ ಮಾತನ್ನು ಕೇಳಿ ಪತ್ನಿಯೊಡನೆ ಸುಪ್ರೀತನಾದನು. ವಿದ್ಯಾವಂತನಾದ ರಾಜನು ನಾರದರ ಮಾತುಗಳನ್ನು ಶ್ಲಾಘಿಸಿ ಅವರಿಗೆ ಅನುಪಮವಾದ ಸತ್ಕಾರವನ್ನು ಮಾಡಿದನು. ಬಳಿಕ ಬ್ರಾಹ್ಮಣರೆಲ್ಲರೂ ನಾರದರನ್ನು ವಿಶೇಷವಾಗಿ ಸತ್ಕರಿಸಿದರು. ಆ ಸಮಯದಲ್ಲಿ ಧೃತರಾಷ್ಟ್ರರಾಜನು ಬಹಳವಾಗಿ ಪ್ರಸನ್ನನಾಗಿದ್ದುದರಿಂದ ಅಲ್ಲಿ ನೆರೆದಿದ್ದವರೆಲ್ಲರೂ ಅತ್ಯಂತಸಂತುಷ್ಟರಾಗಿದ್ದರು. ಬ್ರಾಹ್ಮಣರು ಕೂಡ ನಾರದರು ಹೇಳಿದ ಮಾತುಗಳನ್ನು ಶ್ಲಾಘಿಸಿದರು. ಬಳಿಕ ರಾಜರ್ಷಿಯಾದ ಶತಯೂಪನು ನಾರದರಿಗೆ ಈ ಮಾತನ್ನು ಹೇಳಿದನು:

"ನಾರದರೇ! ಆಶ್ಚರ್ಯ! ಪೂಜ್ಯರಾದ ನೀವು ನಿಮ್ಮ ಪ್ರವಚನದಿಂದ ಧೃತರಾಷ್ಟ್ರನಿಗೆ ತಪಸ್ಸಿನಲ್ಲಿ ಶ್ರದ್ಧೆಯನ್ನು ಹೆಚ್ಚಿಸಿರುವಿರಿ. ಮಹಾದ್ಯುತಿ

ಮಂತರೇ! ನನಗೂ ಮತ್ತು ತಮ್ಮ ಪ್ರವಚನವನ್ನು ಕೇಳಿರುವ ಈ ಜನರಿಗೂ ತಮ್ಮ ಮಾತಿನ ಪ್ರಭಾವದಿಂದ ತಪಸ್ಸಿನಲ್ಲಿ ಶ್ರದ್ಧೆಯು ಅಧಿಕವಾಗಿದೆ. ದೇವರ್ಷಿಗಳೇ! ಲೋಕಪೂಜಿತರೇ! ಧೃತರಾಷ್ಟ್ರನ ವಿಷಯವಾಗಿ ನಾನು ಒಂದು ವಿಷಯವನ್ನು ಕೇಳುವುದಿದೆ. ಅದೇನೆಂಬುದನ್ನು ಹೇಳುವೆನು; ಕೇಳಿರಿ.

ವಿಪ್ರರ್ಷಿಗಳೇ! ಪೂಜ್ಯರೇ! ನೀವು ಸರ್ವವೃತ್ತಾಂತಗಳ ತತ್ತ್ವಗಳನ್ನೂ ಬಲ್ಲವರಾಗಿರುವಿರಿ. ನೀವು ತಮ್ಮ ದಿವ್ಯದೃಷ್ಟಿಯಿಂದ ಜನರಿಗೆ ನಾನಾಪ್ರಕಾರವಾದ ಯಾವ-ಯಾವ ಗತಿಗಳು ಲಭಿಸುವುವೆಂಬುದನ್ನು ಪ್ರತ್ಯಕ್ಷವಾಗಿಯೇ ಕಾಣುವಿರಿ. ಮಹೇಂದ್ರನ ಲೋಕದಲ್ಲಿ ಯಾವ-ಯಾವ ರಾಜರ್ಷಿಗಳು ಇರುವರೆಂಬುದನ್ನೂ ಹೇಳಿದಿರಿ. ಆದರೆ, ಮಹಾಮುನಿಗಳೇ! ನೀವು ಧೃತರಾಷ್ಟ್ರನಿಗೆ ಯಾವ ಪುಣ್ಯಲೋಕಗಳು ಸಿದ್ಧವಾಗಿವೆಯೆಂಬ ವಿಷಯವನ್ನು ಹೇಳಲಿಲ್ಲ. ಈ ರಾಜನಿಗೆ ಯಾವ ಸ್ಥಾನವು ಲಭಿಸುವುದೆಂಬುದನ್ನು ನಿಮ್ಮಿಂದಲೇ ಕೇಳಲು ಬಯಸಿದ್ದೇನೆ. ರಾಜನಿಗೆ ಯಾವ ಲೋಕವು ಸಿಕ್ಕುತ್ತದೆ ಮತ್ತು ಯಾವಾಗ?–ಎಂಬುದನ್ನು ಯಥಾವತ್ತಾಗಿ ಹೇಳಿರಿ."

ಜನಮೇಜಯ! ಶತಯೂಪನು ಹೀಗೆ ಹೇಳಲು ಮಹಾತಪಸ್ವಿಗಳಾದ ದಿವ್ಯದರ್ಶಿಗಳಾದ ನಾರದರು ಆ ಸಭೆಯ ಮಧ್ಯದಲ್ಲಿ ಎಲ್ಲರ ಮನಸ್ಸಿಗೂ ಪ್ರೀತಿಯನ್ನುಂಟುಮಾಡುವ ಆ ಮಾತನ್ನು ಹೇಳಿದರು:

"ರಾಜರ್ಷಿಯೇ! ನಾನು ಸ್ವೇಚ್ಛೆಯಿಂದ ಅಲ್ಲಲ್ಲಿ ಸಂಚರಿಸುತ್ತಿರುವ ಸಮಯದಲ್ಲಿ ಒಮ್ಮೆ ಇಂದ್ರನ ಸಭೆಗೆ ಹೋಗಿದ್ದಾಗ ಅಲ್ಲಿ ಇಂದ್ರನನ್ನೂ ಮತ್ತು ನರಪತಿಯಾದ ಪಾಂಡುವನ್ನೂ ನೋಡಿದೆನು. ಅಲ್ಲಿ ಧೃತರಾಷ್ಟ್ರನ ಸಂಬಂಧವಾದ ಮಾತುಕತೆಗಳೇ ನಡೆಯುತ್ತಿದ್ದುವು. ಇವನು ದುಷ್ಕರವಾದ ತಪಸ್ಸನ್ನು ಮಾಡುತ್ತಿರುವ ವಿಷಯವೂ ಅಲ್ಲಿ ಪ್ರಸ್ತಾಪಿಸಲ್ಪಟ್ಟಿತು. ಈ ಧೃತರಾಷ್ಟ್ರರಾಜನ ಆಯುಷ್ಯವು ಪರಮಾವಧಿಯನ್ನು ಮುಟ್ಟಲು ಮೂರು ವರ್ಷಗಳು ಮಾತ್ರವೇ ಉಳಿದಿವೆಯೆಂಬ ವಿಷಯವನ್ನೂ ನಾನು ಆ

ಸಮಯದಲ್ಲಿ ಸ್ವತಃ ಇಂದ್ರನ ಬಾಯಿಂದಲೇ ಕೇಳಿದೆನು. ಮೂರು ವರ್ಷಗಳನಂತರ ಋಷಿಪುತ್ರನಾದ, ಮಹಾಭಾಗ್ಯಶಾಲಿಯಾದ, ತಪಸ್ಸಿನಿಂದ ಪಾಪಗಳೆಲ್ಲವನ್ನೂ ಸಂಪೂರ್ಣವಾಗಿ ಕಳೆದುಕೊಂಡಿರುವ ಈ ಧೃತರಾಷ್ಟ್ರನು ಇಹಲೋಕವನ್ನು ತ್ಯಜಿಸಿ ಗಾಂಧಾರಿಯೊಡನೆ ಕುಬೇರನ ಅರಮನೆಗೆ ಹೋಗುವನೆಂದೂ-ಅಲ್ಲಿ ಧರ್ಮಾತ್ಮನಾದ ಧೃತರಾಷ್ಟ್ರನು ರಾಜಾಧಿರಾಜನಾದ ಕುಬೇರನಿಂದ ಸತ್ಕೃತನಾಗಿ, ದಿವ್ಯವಾದ ಆಭರಣಗಳನ್ನು ಧರಿಸಿ ಇಚ್ಛೆ ಬಂದೆಡೆಗೆ ಹೋಗುವ ವಿಮಾನದಲ್ಲಿ ಕುಳಿತು, ದೇವ-ಗಂಧರ್ವ-ರಾಕ್ಷಸರ ಲೋಕಗಳಲ್ಲಿ ಸ್ವಚ್ಛಂದದಿಂದ ಸಂಚರಿಸುವನೆಂದೂ ಇಂದ್ರನು ಹೇಳಿದನು. ಶತಯೂಪನೇ! ನೀನು ಕೇಳಿದ ಪ್ರಶ್ನೆಗೆ ಇದು ಉತ್ತರವಾಗಿದೆ. ನೀವೆಲ್ಲರೂ ವೇದಧನರಾಗಿರುವಿರಿ. ತಪಸ್ಸಿನಿಂದ ನಿಮ್ಮ ಪಾಪಗಳೆಲ್ಲವನ್ನೂ ಕಳೆದುಕೊಂಡಿರುವಿರಿ. ಆದುದರಿಂದಲೇ ಈ ದೇವರಹಸ್ಯವನ್ನು ಪ್ರೀತಿಯಿಂದ ನಿಮಗೆ ಹೇಳಿದ್ದೇನೆ."

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ದೇವರ್ಷಿಗಳ ಸುಮಧುರವಾದ ಆ ಮಾತನ್ನು ಕೇಳಿ ಎಲ್ಲರೂ ಪರಮಪ್ರೀತರಾಗಿ ಸುಪ್ರಸನ್ನರಾದರು. ಧೃತರಾಷ್ಟ್ರನೂ ಅತ್ಯಂತ ಹರ್ಷಿತನಾದನು. ಹೀಗೆ ಮನೀಷಿಗಳಾದ ಮಹರ್ಷಿಗಳು ಅನೇಕಪ್ರಕಾರವಾದ ಕಥೆಗಳಿಂದ ಧೃತರಾಷ್ಟ್ರನನ್ನು ಸಂತೋಷಗೊಳಿಸಿ, ಅವನ ಅನುಮತಿಯನ್ನು ಪಡೆದು ಸಿದ್ಧರ ಗತಿಯನ್ನು ಆಶ್ರಯಿಸಿದವರಾಗಿ ಇಚ್ಛೆಬಂದಲ್ಲಿಗೆ ಹೊರಟುಹೋದರು.

ಃ೦ನೆಯ ಅಧ್ಯಾಯವು ಮುಗಿಯಿತು.

ಃ೧ನೆಯ ಅಧ್ಯಾಯ ಆಶ್ರಮವಾಸಪರ್ವ (ಮುಂದುವರಿದಿದೆ.)

ಧೃತರಾಷ್ಟ್ರನ ವಿಷಯವಾಗಿ ಪಾಂಡವರ ಮತ್ತು ಪುರವಾಸಿಗಳ ಚಿಂತೆ

ವೈಶಂಪಾಯನರು ಹೇಳುತ್ತಾರೆ:

ವನಂ ಗತೇ ಕೌರವೇನ್ದ್ರೇ ದುಃಖಶೋಕಸಮನ್ವಿತಾಃ।
ಬಭೂವುಃ ಪಾಣ್ಡವಾ ರಾಜನ್ಮಾತೃಶೋಕೇನ ಚಾನ್ವಿತಾಃ ॥೧॥

ಜನಮೇಜಯ! ಕೌರವೇಂದ್ರನಾದ ಧೃತರಾಷ್ಟ್ರನು ಅರಣ್ಯಕ್ಕೆ ಹೋದುದಕ್ಕಾಗಿ ಪಾಂಡವರು ದುಃಖದಿಂದಲೂ ಶೋಕದಿಂದಲೂ ಪರಿತಪಿಸುತ್ತಿದ್ದರು. ಮಾತೃವಿಯೋಗದುಃಖವೂ ಅವರನ್ನು ಬಹಳವಾಗಿ ಪೀಡಿಸುತ್ತಿದ್ದಿತು.

ಹಾಗೆಯೇ ಎಲ್ಲ ಪಟ್ಟಣಿಗರೂ ಧೃತರಾಷ್ಟ್ರನಿಗಾಗಿ ಶೋಕಪಡುತ್ತಿದ್ದರು. ಬ್ರಾಹ್ಮಣರು ರಾಜನ ವಿಷಯವಾಗಿ ನಾನಾಪ್ರಕಾರವಾದ ಚರ್ಚೆಗಳನ್ನು ಮಾಡುತ್ತಿದ್ದರು.

ಕಥಂ ನು ರಾಜಾ ವೃದ್ಧಃ ಸ ವನೇ ವಸತಿ ನಿರ್ಜನೇ।
ಗಾನ್ಧಾರೀ ಚ ಮಹಾಭಾಗಾ ಸಾ ಚ ಕುನ್ತೀ ಪೃಥಾ ಕಥಮ್ ॥೩॥

"ನಿರ್ಜನವಾದ ಅರಣ್ಯದಲ್ಲಿ ವೃದ್ಧನಾದ ನಮ್ಮ ರಾಜನು ಹೇಗೆ ವಾಸಮಾಡಿಕೊಂಡಿದ್ದಾನೆ? ಮಹಾಭಾಗೆಯಾದ ಗಾಂಧಾರಿಯೂ ಮತ್ತು ಕುಂತಿಯಾದರೂ ಅರಣ್ಯದಲ್ಲಿ ಹೇಗೆ ವಾಸಮಾಡುತ್ತಿದ್ದಾರೆ?

ಸುಖಾರ್ಹಃ ಸ ಹಿ ರಾಜರ್ಷಿರಸುಖೀ ತದ್ವನಂ ಮಹತ್।
ಕಿಮವಸ್ಥಃ ಸಮಾಸಾದ್ಯ ಪ್ರಜ್ಞಾಚಕ್ಷುರ್ಹತಾತ್ಮಜಃ ॥೪॥

ಎಲ್ಲ ಮಕ್ಕಳನ್ನೂ ಕಳೆದುಕೊಂಡಿರುವ, ಪ್ರಜ್ಞಾಚಕ್ಷುವಾದ (ಕಣ್ಣಿಲ್ಲದ), ರಾಜರ್ಷಿಯಾದ ಧೃತರಾಷ್ಟ್ರನು ಈ ಇಳಿವಯಸ್ಸಿನಲ್ಲಿ ಅರಮನೆಯಲ್ಲಿ ಸುಖವಾಗಿರಬೇಕಾಗಿದ್ದಿತು. ಅಂತಹ ಸುಖಾರ್ಹನಾದ ರಾಜನು ಮಹಾರಣ್ಯಕ್ಕೆ ಹೋಗಿ ಅಲ್ಲಿ ಸುಖಶೂನ್ಯನಾಗಿ ಯಾವ ಅವಸ್ಥೆಯಲ್ಲಿರುವನೋ?

ಸುದುಷ್ಕೃತಂ ಕೃತವತೀ ಕುನ್ತೀ ಪುತ್ರಾನಪಶ್ಯತೀ।
ರಾಜ್ಯಶ್ರಿಯಂ ಪರಿತ್ಯಜ್ಯ ವನಂ ಸಾ ಸಮರೋಚಯತ್ ॥೫॥

ಮಕ್ಕಳನ್ನು ನೋಡಿಕೊಂಡಿರದೇ (ಮಕ್ಕಳ ಜೊತೆಯಲ್ಲಿರದೇ), ರಾಜ್ಯಸಂಪತ್ತನ್ನೂ ಪರಿತ್ಯಜಿಸಿ, ಅರಣ್ಯವಾಸವನ್ನೇ ಇಷ್ಟಪಟ್ಟು ಕುಂತೀದೇವಿಯು ನಿಶ್ಚಯವಾಗಿಯೂ ಸಾಮಾನ್ಯರಿಂದ ಮಾಡಲು ದುಸ್ಸಾಧ್ಯವಾದ ಕಾರ್ಯವನ್ನೇ ಮಾಡಿದ್ದಾಳೆ.

ವಿದುರಃ ಕಿಮವಸ್ಥಶ್ಚ ಭ್ರಾತುಃ ಶುಶ್ರೂಷುರಾತ್ಮವಾನ್।
ಸ ಚ ಗಾವಲ್ಗಣಿರ್ಧೀಮಾನ್ಭರ್ತೃಪಿಣ್ಡಾನುಪಾಲಕಃ ॥೬॥

ಜಿತೇಂದ್ರಿಯನಾದ, ಅಣ್ಣನ ಶುಶ್ರೂಷೆಯಲ್ಲಿಯೇ ಅನುರಕ್ತನಾದ ವಿದುರನು ಯಾವ ಅವಸ್ಥೆಯಲ್ಲಿರುವನೋ? ಬುದ್ಧಿವಂತನಾದ, ಗವಲ್ಗಣನ ಮಗನಾದ, ಧೃತರಾಷ್ಟ್ರನ ಅಂಗರಕ್ಷಕನಾದ ಸಂಜಯನು ಯಾವ ಸ್ಥಿತಿಯಲ್ಲಿರುವನೋ?" ಹೀಗೆ ಆ ಹಸ್ತಿನಾಪಟ್ಟಣದಲ್ಲಿ ಮಕ್ಕಳಿಂದ ಹಿಡಿದು ಮುದುಕರವರೆಗಿನ ಎಲ್ಲ ಪಟ್ಟಣಿಗರೂ ಚಿಂತಾ-ಶೋಕಪರಾಯಣರಾಗಿ ಅಲ್ಲಲ್ಲಿ ಗುಂಪುಕಟ್ಟಿಕೊಂಡು ಪರಸ್ಪರವಾಗಿ ಮಾತನಾಡಿಕೊಳ್ಳುತ್ತಿದ್ದರು. ಎಲ್ಲ ಪಾಂಡವರೂ ಅತಿಯಾದ ದುಃಖದಿಂದ ಪೀಡಿತರಾಗಿದ್ದರು. ಯಾವಾಗಲೂ ವೃದ್ಧೆಯಾದ ತಾಯಿಯನ್ನೇ ಕುರಿತು ಶೋಕಪಡುತ್ತಿದ್ದ ಅವರಿಗೆ ಹಸ್ತಿನಾಪಟ್ಟಣದಲ್ಲಿ ಹೆಚ್ಚು ದಿವಸಗಳು ಉಳಿಯಲು ಸಾಧ್ಯವೇ ಆಗಲಿಲ್ಲ. ಹಾಗೆಯೇ ವೃದ್ಧನಾದ, ಎಲ್ಲ ಮಕ್ಕಳನ್ನೂ ಕಳೆದುಕೊಂಡಿದ್ದ, ಜನೇಶ್ವರನಾದ, ದೊಡ್ಡಪ್ಪನಾದ ಧೃತರಾಷ್ಟ್ರನನ್ನೂ, ಮಹಾಭಾಗೆಯಾದ ಗಾಂಧಾರಿಯನ್ನೂ, ಮಹಾಮತಿಯಾದ ವಿದುರನನ್ನೂ ಕುರಿತು ಸದಾಕಾಲದಲ್ಲಿಯೂ ಚಿಂತಿಸುತ್ತಿದ್ದ ಅವರಿಗೆ ರಾಜ್ಯದಲ್ಲಾಗಲೀ, ಸ್ತ್ರೀಯರಲ್ಲಾಗಲೀ, ವೇದಾಧ್ಯಯನದಲ್ಲಾಗಲೀ ಅಭಿರುಚಿಯೇ ಉಂಟಾಗಲಿಲ್ಲ. ನರಾಧಿಪನಾದ ಧೃತರಾಷ್ಟ್ರನ ದುರವಸ್ಥೆಯನ್ನು ಚಿಂತಿಸುತ್ತಾ ಪಾಂಡವರು ಬಹಳ ಖಿನ್ನರಾದರು. ಯುದ್ಧದಲ್ಲಿ ಬಾಲಕನಾದ ಅಭಿಮನ್ಯುವಿನ ಮರಣವನ್ನೂ ಮತ್ತು ಯುದ್ಧದಲ್ಲಿ ಯಾವಾಗಲೂ ಪಲಾಯನಮಾಡದೇ ಇದ್ದ ಕರ್ಣನ ವಧೆಯನ್ನೂ ಜ್ಞಾಪಿಸಿಕೊಂಡು ಪಾಂಡವರು ಬಹಳವಾಗಿ ದುಃಖಿಸುತ್ತಿದ್ದರು. ಅದೇರೀತಿಯಲ್ಲಿ ದ್ರೌಪದಿಯ ಮಕ್ಕಳ ಮತ್ತು ಸುಹೃದರ ವಧೆಯನ್ನೂ ಸ್ಮರಿಸುತ್ತಿದ್ದ ಅವರ ಮನಸ್ಸಿನಲ್ಲಿ ಪ್ರಸನ್ನತೆಯೇ ಉಳಿಯಲಿಲ್ಲ. (ಮನಸ್ಸು ಬಹಳವಾಗಿ ಕಳವಳಗೊಂಡಿತು.) ಸಾವಿರಾರು ವೀರರನ್ನು ಕಳೆದುಕೊಂಡಿದ್ದ ಮತ್ತು ಐಶ್ವರ್ಯದಿಂದಲೂ ಶೂನ್ಯವಾಗಿದ್ದ ಪೃಥ್ವಿಯನ್ನು ಕುರಿತು ನಿರಂತರವಾಗಿ ಚಿಂತಿಸುತ್ತಿದ್ದ ಅವರಿಗೆ ಸುಖವೆಂಬುದೇ ಇಲ್ಲವಾಯಿತು. ಮಕ್ಕಳನ್ನು ಕಳೆದುಕೊಂಡಿದ್ದ ದ್ರೌಪದೀ-ಸುಭದ್ರೆಯರೂ ಅಪ್ರಸನ್ನತೆಯಿಂದ ಹರ್ಷಶೂನ್ಯರಾಗಿದ್ದರು.

ಜನಮೇಜಯ! ಆ ಸಮಯದಲ್ಲಿ ನಿನ್ನ ಹಿಂದಿನ ಪಿತಾಮಹರು-ನಿನ್ನ ತಂದೆಯೂ ವಿರಾಟನ ಪುತ್ರಿಯಾದ ಉತ್ತರೆಯ ಮಗನೂ ಆದ ಪರೀಕ್ಷಿತನನ್ನು ನೋಡಿಕೊಂಡು ತಮ್ಮ ಪ್ರಾಣಗಳನ್ನು ಧಾರಣೆಮಾಡಿಕೊಂಡಿದ್ದರು.

೨೧ನೆಯ ಅಧ್ಯಾಯವು ಮುಗಿಯಿತು.

೨೨ನೆಯ ಅಧ್ಯಾಯ ಆಶ್ರಮವಾಸಪರ್ವ (ಮುಂದುವರಿದಿದೆ.)

ತಾಯಿಯ ವಿಷಯವಾಗಿ ಪಾಂಡವರ ಚಿಂತೆ: ಅರಣ್ಯಕ್ಕೆ ಹೋಗಲು ಯುಧಿಷ್ಠಿರನ ಅಪೇಕ್ಷೆ: ಸೇನಾಸಹಿತನಾಗಿ ಅರಣ್ಯಕ್ಕೆ ಯುಧಿಷ್ಠಿರನ ಪ್ರಯಾಣ

ವೈಶಂಪಾಯನರು ಹೇಳುತ್ತಾರೆ:

ಏವಂ ತೇ ಪುರುಷವ್ಯಾಘ್ರಾಃ ಪಾಣ್ಡವಾ ಮಾತೃನನ್ದನಾಃ।
ಸ್ಮರನ್ತೋ ಮಾತರಂ ವೀರಾ ಬಭೂವುರ್ಭೃಶದುಃಖಿತಾಃ ॥೧॥

ಜನಮೇಜಯ! ಹೀಗೆ ಪುರುಷಸಿಂಹರಾದ, ವೀರರಾದ, ತಾಯಿಗೆ ಆನಂದವನ್ನುಂಟುಮಾಡುವ ಪಾಂಡವರು ತಾಯಿಯನ್ನು ಜ್ಞಾಪಿಸಿಕೊಂಡು ಬಹಳವಾಗಿ ದುಃಖಪಡುತ್ತಿದ್ದರು.

ಹಿಂದೆ ರಾಜಕಾರ್ಯಗಳಲ್ಲಿ ಅನುದಿನವೂ ಹೆಚ್ಚು ಆಸಕ್ತರಾಗಿರುತ್ತಿದ್ದ ಅವರು ಅಂದಿನ ದಿನಗಳಲ್ಲಿ ಇಡೀ ಪಟ್ಟಣದಲ್ಲಿ ನಿರ್ವಹಿಸಬೇಕಾಗಿದ್ದ ಯಾವ ರಾಜಕಾರ್ಯಗಳನ್ನೂ ಮಾಡುತ್ತಿರಲಿಲ್ಲ. ಶೋಕವೆಂಬ ಭೂತವೇ ಅವರೊಳಗೆ ಪ್ರವೇಶಿಸಿರುವುದೋ ಎಂಬಂತೆ ಯಾವ ವಸ್ತುವಿನ ಲಾಭದಿಂದಲೂ ಅವರು ಸಂತುಷ್ಟರಾಗುತ್ತಿರಲಿಲ್ಲ. ಪ್ರಜೆಗಳೊಡನೆ ಅಥವಾ ಅಧಿಕಾರಿಗಳೊಡನೆ ಮಾತನಾಡುತ್ತಿದ್ದರೂ ಅವರನ್ನು ಯಥೋಚಿತವಾಗಿ ಗೌರವಿಸುತ್ತಲೂ ಇರಲಿಲ್ಲ. ಎದುರಿಸಲು ಅಸಾಧ್ಯರೂ ಗಾಂಭೀರ್ಯದಲ್ಲಿ ಸಾಗರೋಪಮರೂ ಆಗಿದ್ದ ಪಾಂಡವರು, ಮಾತೃವಿಯೋಗಶೋಕದಿಂದ ಬುದ್ಧಿಗೆಟ್ಟವರಾಗಿ ಅಚೇತನರೇ ಆಗಿರುವರೋ ಎಂಬಂತೆ ಕಾಣುತ್ತಿದ್ದರು. ಒಂದುದಿನ ಪಾಂಡುಪುತ್ರರು ತಮ್ಮ ತಾಯಿಯನ್ನೇ ಕುರಿತು ಚಿಂತಿಸುತ್ತಿದ್ದರು.

ಕಥಂ ನು ವೃದ್ಧಮಿಥುನಂ ವಹತ್ಯತಿಕೃಶಾ ಪೃಥಾ ॥೫॥
ಕಥಂ ಚ ಸ ಮಹೀಪಾಲೋ ಹತಪುತ್ರೋ ನಿರಾಶ್ರಯಃ।
ಪತ್ನ್ಯಾ ಸಹ ವಸತ್ಯೇಕೋ ವನೇ ಶ್ವಾಪದಸೇವಿತೇ ॥೬॥

"ಅತ್ಯಂತಕೃಶಳಾಗಿರುವ, ನಮ್ಮ ತಾಯಿಯಾದ ಕುಂತಿಯು ವೃದ್ಧದಂಪತಿಗಳ ಸೇವೆಯನ್ನು ಹೇಗೆ ಮಾಡುವಳು? ಮಾಂಸಾಹಾರಿಗಳಾದ ವನ್ಯಮೃಗಗಳಿಂದ ಸೇವಿಸಲ್ಪಡುವ ಮಹಾರಣ್ಯದಲ್ಲಿ ಹತಪುತ್ರನೂ ಆಶ್ರಯಹೀನನೂ ಆಗಿರುವ ಮಹೀಪಾಲನು ಪತ್ನಿಯೊಡನೆ ಏಕಾಕಿಯಾಗಿ ಹೇಗಿದ್ದಾನೆ?

ಸಾ ಚ ದೇವೀ ಮಹಾಭಾಗಾ ಗಾನ್ಧಾರೀ ಹತಬಾನ್ಧವಾ।
ಪತಿಮನ್ಧಂ ಕಥಂ ವೃದ್ಧಮನ್ವೇತಿ ವಿಜನೇ ವನೇ ॥೭॥

ಬಂಧುಗಳನ್ನು ಕಳೆದುಕೊಂಡಿರುವ ಮಹಾಭಾಗಳಾದ ಗಾಂಧಾರೀದೇವಿಯಾದರೂ ನಿರ್ಜನವಾದ ವನಪ್ರದೇಶದಲ್ಲಿ ಕುರುಡನಾದ ಪತಿಯನ್ನು ಹೇಗೆ ಅನುಸರಿಸಿ ಹೋಗುವಳು?"

ಹೀಗೆ ಅವರು ಪರಸ್ಪರವಾಗಿ ಮಾತನಾಡಿಕೊಳ್ಳುತ್ತಿದ್ದಾಗ ಧೃತರಾಷ್ಟ್ರನನ್ನು ನೋಡುವ ಆಸೆಯಿಂದ ಅರಣ್ಯಕ್ಕೆ ಹೊರಡಬೇಕೆಂದು ಅವರಿಗೆ ಔತ್ಸುಕ್ಯವುಂಟಾಯಿತು. ಸಹದೇವನು ರಾಜನಿಗೆ ನಮಸ್ಕರಿಸಿ ಹೀಗೆ ಹೇಳಿದನು:

ಅಹೋ ಮೇ ಭವತೋ ದೃಷ್ಟಂ ಹೃದಯಂ ಗಮನಂ ಪ್ರತಿ ॥೮॥

"ಅಣ್ಣ! ನಿಮ್ಮ ಮನಸ್ಸು ತಪೋವನಕ್ಕೆ ಹೋಗಲು ಉತ್ಸುಕವಾಗಿರುವಂತೆ ಕಂಡುಬಂದಿತು. ಇದು ಸಂತೋಷದ ವಿಷಯ.

ನ ಹಿ ತ್ವಾಂ ಗೌರವೇಣಾಹಮಶಕಂ ವಕ್ತುಮಞ್ಜಸಾ।
ಗಮನಂ ಪ್ರತಿ ರಾಜೇನ್ದ್ರ ತದಿದಂ ಸಮುಪಸ್ಥಿತಮ್ ॥೧೦॥

ನಿನ್ನ ವಿಷಯದಲ್ಲಿ ನಾನು ಇಟ್ಟುಕೊಂಡಿರುವ ಗೌರವಭಾವದಿಂದಾಗಿ ನಾನೇ ಈ ವಿಷಯವನ್ನು ನಿನಗೆ ಒಡನೆಯೇ ಹೇಳಲು ಸಮರ್ಥನಾಗಲಿಲ್ಲ. (ಸಂಕೋಚಪಟ್ಟುಕೊಂಡೆನು.) ಆದರೆ ಅದೃಷ್ಟವಶದಿಂದ ಅರಣ್ಯಪ್ರಯಾಣಪ್ರಸ್ತಾಪವು ನಿನ್ನಿಂದಲೇ ಈಗ ಬಂದಿರುತ್ತದೆ.

ದಿಷ್ಟ್ಯಾ ದ್ರಕ್ಷ್ಯಾಮಿ ತಾಂ ಕುನ್ತೀಂ ವರ್ತಯನ್ತೀಂ ತಪಸ್ವಿನೀಮ್।
ಜಟಿಲಾಂ ತಾಪಸೀಂ ವೃದ್ಧಾಂ ಕುಶಕಾಶಪರಿಕ್ಷತಾಮ್ ॥೧೧॥

ಸೌಭಾಗ್ಯದ ಕಾರಣದಿಂದ ನಾನು ಅರಣ್ಯದಲ್ಲಿರುವ, ತಪಸ್ವಿನಿಯಾದ, ಜಟೆಯನ್ನು ಧರಿಸಿರುವ, ಮುದುಕಿಯಾದ, ಕುಶ-ಕಾಶಗಳ ಆಸ್ತರಣದಲ್ಲಿ ಕುಳಿತು, ಅದೇ ಹಾಸಿಗೆಯಲ್ಲಿ ಮಲಗುವ ಕಾರಣ ಗಾಯಗೊಂಡ ಶರೀರದಿಂದ ಕೂಡಿರುವ ನನ್ನ ತಾಯಿಯನ್ನು ನೋಡುತ್ತೇನೆ.

ಪ್ರಾಸಾದಹರ್ಮ್ಯಸಂವೃದ್ಧಾಮತ್ಯನ್ತಸುಖಭಾಗಿನೀಮ್।
ಕದಾ ತು ಜನನೀಂ ಶ್ರಾನ್ತಾಂ ದ್ರಕ್ಷ್ಯಾಮಿ ಭೃಶದುಃಖಿತಾಮ್ ॥೧೨॥

ಪ್ರಾಸಾದ ಮತ್ತು ಉಪ್ಪರಿಗೆಗಳಲ್ಲಿಯೇ ಹುಟ್ಟಿ ಬೆಳೆದು ಸುಖಭಾಗಿನಿಯಾಗಿ ಈಗ ಅರಣ್ಯವಾಸದಿಂದ ಬಳಲಿ ಅತ್ಯಂತದುಃಖಿತಳಾಗಿರುವ ತಾಯಿಯನ್ನು ನಾನು ಯಾವಾಗ ನೋಡುವೆನು?

ಅನಿತ್ಯಾಃ ಖಲು ಮರ್ತ್ಯಾನಾಂ ಗತಯೋ ಭರತರ್ಷಭ ।
ಕುನ್ತೀ ರಾಜಸುತಾ ಯತ್ರ ವಸತ್ಯಸುಖಿತಾ ವನೇ ॥೧೩॥

ಭರತಶ್ರೇಷ್ಠನೇ! ಮನುಷ್ಯರ ಸ್ಥಿತಿ-ಗತಿಗಳು ನಿಶ್ಚಯವಾಗಿಯೂ ಅನಿತ್ಯವಾದುವುಗಳು. ರಾಜಪುತ್ರಿಯಾದ ಕುಂತಿಯು ಸುಖದಿಂದ ವಂಚಿತಳಾಗಿ ಇಂದು ಅರಣ್ಯದಲ್ಲಿ ವಾಸಮಾಡುತ್ತಿದ್ದಾಳಲ್ಲವೇ?”

ಜನಮೇಜಯ! ಸಹದೇವನ ಮಾತನ್ನು ಕೇಳಿ ನಾರಿಯರಲ್ಲಿ ಶ್ರೇಷ್ಠಳಾದ ದ್ರೌಪದಿಯು ಯುಧಿಷ್ಠಿರನನ್ನು ಸತ್ಕರಿಸಿ, ಶ್ಲಾಘಿಸುತ್ತಾ ಹೇಳಿದಳು:

ಕದಾ ದ್ರಕ್ಷ್ಯಾಮಿ ತಾಂ ದೇವೀಂ ಯದಿ ಜೀವತಿ ಸಾ ಪೃಥಾ।
ಜೀವನ್ತ್ಯಾ ಹ್ಯದ್ಯ ಮೇ ಪ್ರೀತಿರ್ಭವಿಷ್ಯತಿ ಜನಾಧಿಪ ॥೧೪॥

“ನರೇಶ್ವರನೇ! ಅತ್ತೆಯಾದ ಕುಂತಿಯನ್ನು ನಾನು ಯಾವಾಗ ನೋಡುವೆನು? ಆಕೆಯು ಬದುಕಿರುವಳೇ? ಹಾಗೇನಾದರೂ ಬದುಕಿದ್ದರೆ ನನಗೆ ತುಂಬಾ ಸಂತೋಷವಾಗುತ್ತದೆ.

ಏಷಾ ತೇಽಸ್ತು ಮತಿರ್ನಿತ್ಯಂ ಧರ್ಮೇ ತೇ ರಮತಾಂ ಮನಃ।
ಯೋಽದ್ಯ ತ್ವಮಸ್ಮಾನ್ರಾಜೇನ್ದ್ರ ಶ್ರೇಯಸಾ ಯೋಜಯಿಷ್ಯಸಿ ॥೧೫॥

ನಿನ್ನ ಬುದ್ಧಿಯು ಯಾವಾಗಲೂ ಹೀಗೆಯೇ ಇರಲಿ. ಧರ್ಮದಲ್ಲಿಯೇ ರಮಿಸುತ್ತಿರಲಿ. ಏಕೆಂದರೆ: ಈಗ ನೀನು ನಮ್ಮನ್ನು ಅರಣ್ಯಕ್ಕೆ ಕರೆದುಕೊಂಡು ಹೋಗಿ ವೀರಮಾತೆಯ ದರ್ಶನವನ್ನು ಮಾಡಿಸಿ, ಕಲ್ಯಾಣಕ್ಕೆ ಭಾಗಿಗಳನ್ನಾಗಿ ಮಾಡುವೆಯಲ್ಲವೇ!

ಅಗ್ರಪಾದಸ್ಥಿತಂ ಚೇಮಂ ವಿದ್ಧಿ ರಾಜನ್ವಧೂಜನಮ್।
ಕಾಂಕ್ಷನ್ತಂ ದರ್ಶನಂ ಕುನ್ತ್ಯಾ ಗಾನ್ಧಾರ್ಯಾಃ ಶ್ವಶುರಸ್ಯ ಚ ॥೧೮॥

ಕುರುಕುಲಕ್ಕೆ ಸೊಸೆಯರಾಗಿರುವ ನಾವೆಲ್ಲರೂ ಈಗ ಕುಂತೀ-ಗಾಂಧಾರಿಯರನ್ನೂ ಮತ್ತು ಮಾವನವರನ್ನೂ ನೋಡಲು ಅರಣ್ಯಕ್ಕೆ ಹೊರಡಲು ತುದಿಗಾಲಮೇಲೆ ನಿಂತಿರುವೆವೆಂದು ತಿಳಿ."

ಜನಮೇಜಯ! ದ್ರೌಪದಿಯೂ ಹೀಗೆ ಹೇಳಲು ಯುಧಿಷ್ಠಿರನು ಸೇನಾಧ್ಯಕ್ಷರನ್ನು ಒಡನೆಯೇ ಕರೆಯಿಸಿ ಅವರಿಗೆ ಹೇಳಿದನು:

ನಿರ್ಯಾತಯತ ಮೇ ಸೇನಾಂ ಪ್ರಭೂತರಥಕುಞ್ಜರಾಮ್।
ದ್ರಕ್ಷ್ಯಾಮಿ ವನಸಂಸ್ಥಂ ಚ ಧೃತರಾಷ್ಟ್ರಂ ಮಹೀಪತಿಮ್ ॥೧೯॥

"ರಥಗಳಿಂದಲೂ ಆನೆಗಳಿಂದಲೂ ಸಮೃದ್ಧವಾಗಿರುವ ಸೈನ್ಯವನ್ನು ಈಗಲೇ ಪ್ರಯಾಣಕ್ಕೆ ಸಜ್ಜುಗೊಳಿಸಿರಿ. ಅರಣ್ಯದಲ್ಲಿರುವ ಮಹೀಪತಿಯಾದ ಧೃತರಾಷ್ಟ್ರನನ್ನು ನೋಡಲು ಹೊರಟಿದ್ದೇನೆ."

ಸೇನಾಧ್ಯಕ್ಷರಿಗೆ ಹೀಗೆ ಹೇಳಿದನಂತರ ಯುಧಿಷ್ಠಿರನು ವಿಧವಿಧವಾದ ಯಾನಗಳನ್ನೂ ಸಾವಿರಾರು ಪಲ್ಲಕ್ಕಿಗಳನ್ನೂ ಸಿದ್ಧಗೊಳಿಸುವಂತೆ ರಾಣೀ ವಾಸದ ಅಧ್ಯಕ್ಷರಿಗೆ ಆಜ್ಞಾಪಿಸಿದನು. "ವಸ್ತುಗಳಿಂದ ತುಂಬಿದ ಗಾಡಿಗಳು, ಅಂಗಡಿಗಳು, ಭಂಡಾರಗಳು, ಶಿಲ್ಪಿಗಳು, ಕೋಶಪಾಲರು-ಎಲ್ಲರೂ ಕುರುಕ್ಷೇತ್ರದಲ್ಲಿರುವ ಆಶ್ರಮಕ್ಕೆ ಪ್ರಯಾಣಹೊರಡಲಿ. ಪಟ್ಟಣಿಗರಲ್ಲಿ ಯಾರಾದರೂ ಧೃತರಾಷ್ಟ್ರನನ್ನು ನೋಡಲು ಇಚ್ಛಿಸಿದ್ದೇ ಆದರೆ–ಅವರು ಕೂಡ ಯಾವ ಅಡ್ಡಿ-ಆತಂಕಗಳೂ ಇಲ್ಲದೇ ಸುರಕ್ಷಿತವಾಗಿ ಸುಖಪ್ರಯಾಣ ಹೊರಡಲಿ. ಎಲ್ಲ ಅಡಿಗೆಯವರೂ, ಪಾಕಶಾಲೆಯ ಅಧ್ಯಕ್ಷರೂ ಅಡಿಗೆಗೆ ಬೇಕಾದ ವಸ್ತುಗಳನ್ನೂ ವಿಧ-ವಿಧವಾದ ಭಕ್ಷ್ಯಭೋಜ್ಯಗಳನ್ನೂ ಗಾಡಿ

ಯಲ್ಲಿ ತುಂಬಿಕೊಂಡು ಪ್ರಯಾಣಹೊರಡಲಿ. ನಾಳೆ ಬೆಳಿಗ್ಗೆಯೇ ಪ್ರಯಾಣ ಹೊರಡತಕ್ಕುದೆಂದು ಈಗಲೇ ನಗರದಲ್ಲಿ ಡಂಗುರಹೊಡೆಸಿರಿ. ಸಾವಕಾಶಮಾಡಬೇಡಿರಿ. ದಾರಿಯಲ್ಲಿ ತಂಗಲು ನಾನಾವಿಧವಾದ ಗುಡಾರಗಳನ್ನೂ ಈಗಲೇ ಸಿದ್ಧಪಡಿಸಿರಿ."

ಜನಮೇಜಯ! ಯುಧಿಷ್ಠಿರನು ಹೀಗೆ ಆಜ್ಞೆಮಾಡಿ ಬೆಳಗಾಗುತ್ತಲೇ ಅನುಜರೊಡನೆಯೂ, ಸ್ತ್ರೀಯರೊಡನೆಯೂ, ವೃದ್ಧರೊಡನೆಯೂ ನಗರದಿಂದ ಹೊರಟನು. ಪಟ್ಟಣದಿಂದ ಹೊರಕ್ಕೆ ಬಂದನಂತರ ತನ್ನ ಜೊತೆಯಲ್ಲಿ ರಾಜನನ್ನು ಕಾಣಲು ಬರುವ ಪ್ರಜೆಗಳಿಗಾಗಿ ಐದು ದಿವಸಗಳು ಅಲ್ಲಿಯೇ ಕಾಯುತ್ತಿದ್ದು, ಎಲ್ಲರೂ ಬಂದು ಸೇರಿಕೊಂಡನಂತರ ಎಲ್ಲರನ್ನೂ ಕರೆದುಕೊಂಡು ಅರಣ್ಯಕ್ಕೆ ಪ್ರಯಾಣಮಾಡಿದನು.

೨೨ನೆಯ ಅಧ್ಯಾಯವು ಮುಗಿಯಿತು.

೨೩ನೆಯ ಅಧ್ಯಾಯ ಆಶ್ರಮವಾಸಪರ್ವ (ಮುಂದುವರಿದಿದೆ.)

ಪಾಂಡವರು ಸೇನೆಯೊಡನೆ ಯಾತ್ರೆಹೊರಟು ಕುರುಕ್ಷೇತ್ರವನ್ನು ಸೇರಿದುದು

ವೈಶಂಪಾಯನರು ಹೇಳುತ್ತಾರೆ:

ಆಜ್ಞಾಪಯಾಮಾಸ ತತಃ ಸೇನಾಂ ಭರತಸತ್ತಮಃ।
ಅರ್ಜುನಪ್ರಮುಖೈರ್ಗುಪ್ತಾಂ ಲೋಕಪಾಲೋಪಮೈರ್ನರೈಃ ॥೧॥

ಜನಮೇಜಯ! ಭರತಶ್ರೇಷ್ಠನಾದ ಯುಧಿಷ್ಠಿರನು–ಲೋಕಪಾಲಕರಿಗೆ ಸರಿಸಾಟಿಯಾಗಿದ್ದ ಅರ್ಜುನನೇ ಮೊದಲಾದ ಪ್ರಮುಖರಿಂದ ಸಂರಕ್ಷಿತವಾಗಿದ್ದ ಸೈನ್ಯಕ್ಕೆ ಪ್ರಯಾಣಹೊರಡುವಂತೆ ಆಜ್ಞಾಪಿಸಿದನು.

'ಯೋಗಃ ಯೋಗಃ! ಪರಸ್ಪರ ಸಮಾಗಮವಾಗಲಿದೆ! ನಾವೀಗಲೇ ಧೃತರಾಷ್ಟ್ರನನ್ನು ಕಾಣಲಿದ್ದೇವೆ'–ಎಂಬ ಪ್ರೀತಿಕರವಾದ ಮಹಾಶಬ್ದವು ಎಲ್ಲೆಡೆಗಳಿಂದಲೂ ಕೇಳಿಬರುತ್ತಿದ್ದಿತು. ಕುದುರೆಸವಾರರು 'ಯುಜ್ಯತಾಂ ಯುಜ್ಯತಾಂ' 'ರಥಗಳಿಗೆ ಕುದುರೆಗಳನ್ನು ಹೂಡಿರಿ'–ಎಂದು ಗಟ್ಟಿಯಾಗಿ ಕೂಗಿಕೊಳ್ಳುತ್ತಿದ್ದರು. ಕೆಲವರು ಪಲ್ಲಕ್ಕಿಗಳಲ್ಲಿ ಹೊರಟರು. ಕೆಲವರು

ಮಹಾವೇಗಯಕ್ತವಾದ ಕುದುರೆಗಳನ್ನು ಹತ್ತಿ ಪ್ರಯಾಣಮಾಡಿದರು. ಕೆಲವರು ಪ್ರಜ್ವಲಿಸುವ ಅಗ್ನಿಗೆ ಸಮಾನವಾದ ಸುವರ್ಣಮಯವಾದ ರಥಗಳಲ್ಲಿ ಪ್ರಯಾಣಮಾಡಿದರು. ಉಗುರುಗಳ ಮೂಲಕವಾಗಿಯೂ ಪ್ರಾಸಗಳ ಮೂಲಕವಾಗಿಯೂ ಯುದ್ಧಮಾಡುವ ಕಾಲಾಳುಯೋಧರು ಕಾಲ್ನಡಿಗೆಯಲ್ಲಿಯೇ ಪ್ರಯಾಣಮಾಡುತ್ತಿದ್ದರು. ಕುರುರಾಜನಾದ ಧೃತರಾಷ್ಟ್ರನನ್ನು ನೋಡುವ ಇಚ್ಛೆಯಿಂದ ಪೌರರೂ, ದೇಶದಜನರೂ ನಾನಾವಿಧವಾದ ವಾಹನಗಳಲ್ಲಿ ಕುಳಿತು ಪ್ರಯಾಣಮಾಡಿದರು.

ಯುಧಿಷ್ಠಿರರಾಜನ ಆದೇಶದಂತೆ ಸೇನಾಪತಿಗಳಾದ ಕೃಪಾಚಾರ್ಯರೂ ತಮ್ಮ ಸೈನ್ಯವನ್ನು ತೆಗೆದುಕೊಂಡು ಆಶ್ರಮದ ಕಡೆಗೆ ಪ್ರಯಾಣಮಾಡಿದರು. ಅನಂತರ ಬ್ರಾಹ್ಮಣರಿಂದ ಪರಿವೃತನಾಗಿದ್ದ ಯುಧಿಷ್ಠಿರನು, ಸೂತ-ಮಾಗಧ-ವಂದಿಗಳಿಂದ ಅನೇಕಪ್ರಕಾರವಾಗಿ ಸ್ತುತಿಸಲ್ಪಡುತ್ತಾ ಬಿಳಿಯದಾದ ಛತ್ರವನ್ನು ತಲೆಯ ಮೇಲೆ ಧರಿಸಿ ರಥಸೈನ್ಯದೊಡನೆ ಆಶ್ರಮದ ಕಡೆಗೆ ಪ್ರಯಾಣಹೊರಟನು. ಭಯಂಕರಪರಾಕ್ರಮನಾದ, ವಾಯುಪುತ್ರನಾದ ವೃಕೋದರನು ಯಂತ್ರಾಯುಧಗಳಿಂದ ಸಜ್ಜಾಗಿದ್ದ ಪರ್ವತೋಪಮವಾದ ಆನೆಗಳ ಸೈನ್ಯದೊಡನೆ ಪ್ರಯಾಣಹೊರಟನು. ಮಾದ್ರಿಯ ಮಕ್ಕಳಾದ ನಕುಲ-ಸಹದೇವರು ಕವಚಗಳನ್ನು ಧರಿಸಿ, ಧ್ವಜಗಳಿಂದ ಸನ್ನದ್ಧವಾದ ಕುದುರೆಗಳ ಮೇಲೆ ಕುಳಿತು ಅಶ್ವಸೈನಿಕರಿಂದ ಸುತ್ತುವರಿಯಲ್ಪಟ್ಟವರಾಗಿ ಶೀಘ್ರವಾಗಿ ಪ್ರಯಾಣಮಾಡಿದರು. ಮಹಾತೇಜಸ್ವಿಯಾದ ಜಿತೇಂದ್ರಿಯನಾದ ಅರ್ಜುನನು ಬಿಳಿಯ ಕುದುರೆಗಳಿಂದ ಕಟ್ಟಲ್ಪಟ್ಟಿದ್ದ, ಸೂರ್ಯನ ವರ್ಚಸ್ಸಿಗೆ ಸಮಾನವಾದ ವರ್ಚಸ್ಸಿನಿಂದ ಕೂಡಿದ್ದ ದಿವ್ಯವಾದ ರಥದಲ್ಲಿ ಕುಳಿತು ಯುಧಿಷ್ಠಿರನನ್ನು ಅನುಸರಿಸಿ ಪ್ರಯಾಣಮಾಡಿದನು. ದ್ರೌಪದಿಯೇ ಮೊದಲಾದ ಸ್ತ್ರೀಯರು ಪಲ್ಲಕ್ಕಿಗಳಲ್ಲಿ ಕುಳಿತು ದೀನ-ದರಿದ್ರರಿಗೆ ಅಪಾರವಾದ ಧನವನ್ನು ದಾನಮಾಡುತ್ತಾ ರಾಣೀವಾಸದ ಅಧ್ಯಕ್ಷನಿಂದ ರಕ್ಷಿಸಲ್ಪಟ್ಟವರಾಗಿ ಪ್ರಯಾಣಹೊರಟರು.

ಭರತರ್ಷಭನೇ! ಜನಮೇಜಯ! ಆನೆ, ಕುದುರೆ ಮತ್ತು ರಥಗಳಿಂದ ಸಮೃದ್ಧವಾಗಿದ್ದ, ಕೊಳಲುಗಳಿಂದಲೂ, ವೀಣೆಗಳಿಂದಲೂ ನಿನಾದಿತ

ವಾಗಿದ್ದ ಪಾಂಡವರ ಸೈನ್ಯವು ಆ ಸಮಯದಲ್ಲಿ ಬಹಳವಾಗಿ ಶೋಭಿಸುತ್ತಿದ್ದಿತು. ಕುರುಶ್ರೇಷ್ಠರು ರಮ್ಯವಾದ ನದಿಗಳ ತೀರಗಳಲ್ಲಿಯೂ ಸರೋವರಗಳತೀರದಲ್ಲಿಯೂ ಬಿಡಾರಮಾಡುತ್ತಾ ಅನುಕ್ರಮವಾಗಿ ಪ್ರಯಾಣಮಾಡುತ್ತಿದ್ದರು.

ಮಹಾತೇಜಸ್ವಿಯಾದ ಯುಯುತ್ಸುವೂ, ಪುರೋಹಿತರಾದ ಧೌಮ್ಯರೂ ಯುಧಿಷ್ಠಿರನ ಆಜ್ಞೆಯಂತೆ ರಾಜಧಾನಿಯನ್ನು ರಕ್ಷಿಸುತ್ತಿದ್ದರು. ಯುಧಿಷ್ಠಿರರಾಜನು ಮುಂದೆ-ಮುಂದೆ ಪ್ರಯಾಣಮಾಡುತ್ತಾ ಪರಮಪಾವನೆಯಾದ ಯಮುನಾನದಿಯನ್ನು ದಾಟಿ ಕುರುಕ್ಷೇತ್ರವನ್ನು ಸೇರಿದನು. ಬಹಳ ದೂರದಿಂದಲೇ ರಾಜರ್ಷಿಯೂ ಮತ್ತು ಧೀಮಂತನೂ ಆದ ಶತಯೂಪನ ಮತ್ತು ಧೃತರಾಷ್ಟ್ರನ ಆಶ್ರಮವನ್ನು ನೋಡಿದನು. ಧೃತರಾಷ್ಟ್ರನ ಆಶ್ರಮವನ್ನು ಕಾಣುತ್ತಲೇ ಕುರುಜಾಂಗಲದ ಜನರೆಲ್ಲರೂ ಬಹಳ ಹರ್ಷಿತರಾಗಿ ಗಟ್ಟಿಯಾದ ಕೋಲಾಹಲಶಬ್ದಗಳಿಂದ ಅರಣ್ಯವನ್ನೇ ತುಂಬುತ್ತಾ ಆಶ್ರಮವನ್ನು ಪ್ರವೇಶಿಸಿದರು.

೨೩ನೆಯ ಅಧ್ಯಾಯವು ಮುಗಿಯಿತು.

೨೪ನೆಯ ಅಧ್ಯಾಯ ಆಶ್ರಮವಾಸಪರ್ವ (ಮುಂದುವರಿದಿದೆ.)

ಪಾಂಡವರೂ ಮತ್ತು ಕೌರವರೂ

ಕುಂತೀ-ಗಾಂಧಾರೀ-ಧೃತರಾಷ್ಟ್ರರನ್ನು ಸಂದರ್ಶಿಸಿದುದು

ವೈಶಂಪಾಯನರು ಹೇಳುತ್ತಾರೆ:

ತತಸ್ತೇ ಪಾಣ್ಡವಾ ದೂರಾದವತೀರ್ಯ ಪದಾತಯಃ।
ಅಭಿಜಗ್ಮುರ್ನರಪತೇರಾಶ್ರಮಂ ವಿನಯಾನತಾಃ ॥೧॥

ಜನಮೇಜಯ! ಬಳಿಕ ಎಲ್ಲರೂ ಆಶ್ರಮಕ್ಕೆ ಬಹಳ ದೂರದಲ್ಲಿಯೇ ವಾಹನಗಳಿಂದಿಳಿದು ವಿನೀತರಾಗಿ ಕಾಲ್ನಡಿಗೆಯಲ್ಲಿಯೇ ರಾಜನ ಆಶ್ರಮವನ್ನು ಪ್ರವೇಶಿಸಿದರು. ಸೈನಿಕರೂ, ರಾಷ್ಟ್ರವಾಸಿಗಳಾದ ಪ್ರಜೆಗಳೂ, ಕುರುಮುಖ್ಯರ ಅಂತಃಪುರದ ಸ್ತ್ರೀಯರೂ ಕಾಲ್ನಡಿಗೆಯಿಂದಲೇ ಆಶ್ರಮದ ಬಳಿಗೆ

ಆಗಮಿಸಿದರು. ಬಳಿಕ ಪಾಂಡವರು ಜನರಿಂದ ಶೂನ್ಯವಾಗಿದ್ದ, ಮೃಗಗಳ ಸಮೂಹದಿಂದ ವ್ಯಾಪ್ತವಾಗಿದ್ದ, ಬಾಳೆಯ ತೋಟದಿಂದ ಸಮಲಂಕೃತವಾಗಿದ್ದ ಆಶ್ರಮಭೂಮಿಯನ್ನು ಪ್ರವೇಶಿಸಿದರು. ಆ ಆಶ್ರಮಪ್ರದೇಶದಲ್ಲಿ ವಾಸಮಾಡುತ್ತಿದ್ದ ನಿಯಮವ್ರತಾನುಷ್ಠಾನಪರರಾದ ತಪಸ್ವಿಗಳು ಅಲ್ಲಿಗೆ ಆಗಮಿಸಿದ ಪಾಂಡವರನ್ನು ನೋಡುವ ಕುತೂಹಲದಿಂದ ಬಂದರು. ಆಶ್ರಮದಲ್ಲಿ ಧೃತರಾಷ್ಟ್ರನು ಇಲ್ಲದಿರುವುದನ್ನು ನೋಡಿ ತನ್ನನ್ನು ನೋಡಲು ಆಗಮಿಸಿದ್ದ ಋಷಿಜನರನ್ನು ಯುಧಿಷ್ಠಿರನು ಕಂಬನಿದುಂಬಿದ ಕಣ್ಣುಗಳಿಂದ ಕೂಡಿ **'ಕ್ವಾಸೌ ಕೌರವವಂಶಭೃತ್ ಪಿತಾ ಜ್ಯೇಷ್ಠೋ ಗತೋಽಸ್ಮಾಕಂ'**

"ಕುರುವಂಶೋದ್ಧಾರಕನಾದ ನನ್ನ ದೊಡ್ಡಪ್ಪನಾದ ಧೃತರಾಷ್ಟ್ರನೆಲ್ಲಿ ಹೋಗಿದ್ದಾನೆ?"–ಎಂದು ಪ್ರಶ್ನಿಸಿದನು.

ಯುಧಿಷ್ಠಿರನ ಪ್ರಶ್ನೆಗೆ ಉತ್ತರವಾಗಿ-

ಯಮುನಾಮವಗಾಹಿತುಮ್ । ಪುಷ್ಪಾಣಾಮುದಕುಮ್ಭಸ್ಯ
ಚಾರ್ಥೇ ಗತಃ।

"ಸ್ನಾನಮಾಡುವುದಕ್ಕೆ ಯಮುನಾನದಿಗೆ ಹೋಗಿದ್ದಾನೆ. ಹಾಗೆಯೇ ಹೂವುಗಳನ್ನು ತರಲೂ ಮತ್ತು ನೀರು ತುಂಬಿಕೊಂಡು ಬರಲೂ ಹೋಗಿದ್ದಾನೆ"–ಎಂದು ಹೇಳಿದರು.

ಯುಧಿಷ್ಠಿರಾದಿಗಳು ಬಹಳ ಶೀಘ್ರವಾಗಿ ತಾಪಸರು ಹೇಳಿದ ಮಾರ್ಗವನ್ನೇ ಹಿಡಿದು ಹೋದರು. ಸ್ವಲ್ಪದೂರದಲ್ಲಿಯೇ ಅವರೆಲ್ಲರೂ ಧೃತರಾಷ್ಟ್ರಾದಿಗಳು ಕಾಲ್ನಡಿಗೆಯಲ್ಲಿ ಯಮುನಾತೀರದಿಂದ ಬರುತ್ತಿರುವುದನ್ನು ನೋಡಿದರು. ತಂದೆಯಾದ ಧೃತರಾಷ್ಟ್ರನನ್ನು ನೋಡುವ ಆಕಾಂಕ್ಷೆಯಿಂದ ಅವರೆಲ್ಲರೂ ಬಹಳ ಶೀಘ್ರವಾಗಿ ಮುಂದೆಹೋದರು. ಧೀಮಂತನಾದ ಸಹದೇವನು ಕುಂತಿಯಿದ್ದ ಕಡೆಗೆ ವೇಗವಾಗಿ ಓಡಿಹೋಗಿ ತಾಯಿಯ ಕಾಲುಗಳನ್ನು ಹಿಡಿದುಕೊಂಡು ಸುಸ್ವರದಿಂದ ಅಳತೊಡಗಿದನು. ಕಂಬನಿಯಿಂದ ತೋಯ್ದ ಮುಖವುಳ್ಳವಳಾಗಿದ್ದ ಕುಂತೀದೇವಿಯೂ ಅತ್ಯಂತ ಪ್ರೀತಿಪಾತ್ರನಾದ ಮಗನನ್ನು ನೋಡಿದಳು. ಕಾಲುಗಳನ್ನು ಹಿಡಿದುಕೊಂಡು ಗಳ-ಗಳನೆ ಅಳುತ್ತಿದ್ದ ಆ ಮಗನನ್ನು ಮೇಲಕ್ಕೆತ್ತಿ ಎರಡು ತೋಳುಗಳಿಂದಲೂ

ತಬ್ಬಿಕೊಂಡಳು. ಸಹದೇವನು ಬಂದಿರುವುದನ್ನು ಕುಂತಿಯು ಗಾಂಧಾರಿಗೂ ಹೇಳಿದಳು. ಆ ವೇಳೆಗೆ ಧರ್ಮಾದಿಗಳೂ ಅಲ್ಲಿಗೆ ಬಂದರು. ರಾಜನನ್ನೂ, ಭೀಮಸೇನನನ್ನೂ ಮತ್ತು ಅರ್ಜುನನನ್ನೂ ನೋಡಿದನಂತರ ಕುಂತಿಯು ಅನತಿದೂರದಲ್ಲಿದ್ದ ನಕುಲನನ್ನೂ ನೋಡಿ ಅವನ ಕಡೆಗೆ ಅವಸರದಿಂದ ಧಾವಿಸಿದಳು. ಹತಪುತ್ರರಾಗಿದ್ದ ದಂಪತಿಗಳನ್ನು ಎಳೆದುಕೊಂಡು ಮುಂದೆ-ಮುಂದೆ ಧಾವಿಸುತ್ತಿದ್ದಳು. ಆ ವೇಳೆಗೆ ಪಾಂಡವರೆಲ್ಲರೂ ಕುಂತಿಯನ್ನು ನೋಡಿ ಭೂಮಿಯಲ್ಲಿ ಅಡ್ಡಬಿದ್ದರು. ಮಹಾತ್ಮನಾದ ಮೇಧಾವಿಯಾದ ಧೃತರಾಷ್ಟ್ರನು ಕಂಠಧ್ವನಿಯಿಂದಲೂ ಮತ್ತು ಸ್ಪರ್ಶದಿಂದಲೂ ಒಬ್ಬೊಬ್ಬರನ್ನೂ ತಿಳಿದುಕೊಂಡು ಅವರೆಲ್ಲರನ್ನೂ ಸಮಾಧಾನಗೊಳಿಸಿದನು. ಅನಂತರ ಮಹಾತ್ಮರಾದ ಅವರೆಲ್ಲರೂ ಕಣ್ಣೀರಿಡುತ್ತಾ ಗಾಂಧಾರೀಸಹಿತನಾದ ರಾಜನಿಗೂ ಮತ್ತು ತಾಯಿಯಾದ ಕುಂತಿಗೂ ವಿಧಿಪೂರ್ವಕವಾಗಿ ನಮಸ್ಕರಿಸಿದರು. ತಾಯಿಯು ಪುನಃ-ಪುನಃ ಸಮಾಧಾನಹೇಳಿದನಂತರ ಪ್ರಜ್ಞೆಯನ್ನು ಹೊಂದಿದ ಪಾಂಡವರು, ಸಂಜಯಾದಿಗಳು ಹೊತ್ತುಕೊಂಡಿದ್ದ ಉದಕುಂಭಗಳನ್ನು ತಾವೇ ಹೊತ್ತುಕೊಂಡರು. ಬಳಿಕ ನರಶ್ರೇಷ್ಠರಾದ ಪಾಂಡವರ ಪತ್ನಿಯರೂ, ಅಂತಃಪುರದಲ್ಲಿ ವಾಸಮಾಡುವ ಇತರ ಸ್ತ್ರೀಯರೂ, ಪಟ್ಟಣಿಗರೂ ಮತ್ತು ದೇಶೀಯಜನರೂ ಜನಾಧಿಪನಾದ ಧೃತರಾಷ್ಟ್ರನನ್ನು ಸಂದರ್ಶಿಸಿದರು. ಆ ಸಮಯದಲ್ಲಿ ಯುಧಿಷ್ಠಿರನು ಪ್ರತಿಯೊಬ್ಬರ ನಾಮ-ಗೋತ್ರಗಳನ್ನೂ ಹೇಳಿ ಧೃತರಾಷ್ಟ್ರನಿಗೆ ಪರಿಚಯಮಾಡಿಕೊಟ್ಟನು. ಅನಂತರ ಧೃತರಾಷ್ಟ್ರನು ಎಲ್ಲರನ್ನೂ ಅಭಿನಂದಿಸಿದನು. ಪುರಜನರಿಂದ ಪರಿವೃತನಾಗಿದ್ದ ಧೃತರಾಷ್ಟ್ರನು ಆನಂದಬಾಷ್ಪಗಳನ್ನು ಸುರಿಸುತ್ತಾ ಆ ಸಮಯದಲ್ಲಿ ತಾನು ಹಿಂದಿನಂತೆಯೇ ಹಸ್ತಿನಾಪುರದ ರಾಜಭವನದಲ್ಲಿರುವೆನೋ ಎಂಬಂತೆ ಭಾವಿಸಿಕೊಂಡನು. ಅನಂತರ ದ್ರೌಪದಿಯೇ ಮೊದಲಾದ ವಧೂಜನರು ಧೃತರಾಷ್ಟ್ರನನ್ನು ಅಭಿನಂದಿಸಿದರು. ಗಾಂಧಾರಿಯಿಂದಲೂ ಕುಂತಿಯಿಂದಲೂ ಸಹಿತನಾಗಿ ಧೃತರಾಷ್ಟ್ರನು ಅವರೆಲ್ಲರನ್ನೂ ಯಥೋಚಿತವಾಗಿ ಆಶೀರ್ವದಿಸಿ ಸಂತೋಷ

ಗೊಳಿಸಿದನು. ಬಳಿಕ ಅವರೆಲ್ಲರೊಡನೆ ಸಿದ್ಧ-ಚಾರಣರಿಂದ ಸಂಸೇವಿತವಾದ ಆಶ್ರಮಕ್ಕೆ ಹೋದನು. ಆ ಸಮಯದಲ್ಲಿ ಪ್ರೇಕ್ಷಕರಿಂದ ತುಂಬಿಹೋಗಿದ್ದ ಆ ಆಶ್ರಮಪ್ರದೇಶವು ತಾರೆಗಳಿಂದ ವ್ಯಾಪ್ತವಾದ ಆಕಾಶದಂತೆಯೇ ಕಾಣುತ್ತಿದ್ದಿತು.

೨೪ನೆಯ ಅಧ್ಯಾಯವು ಮುಗಿಯಿತು.

ಸಂಜಯನು ಪಾಂಡವರನ್ನೂ ಅವರ ಪತ್ನಿಯರನ್ನೂ ಮತ್ತು ಇತರಸ್ತ್ರೀಯರನ್ನೂ ಅಶ್ರಮವಾಸಿಗಳಾದ ಋಷಿಗಳಿಗೆ ಪರಿಚಯಮಾಡಿಕೊಟ್ಟಿದು

ವೈಶಂಪಾಯನರು ಹೇಳುತ್ತಾರೆ:

ಸ ತೈಃ ಸಹ ನರವ್ಯಾಘ್ರೈರ್ಭ್ರಾತೃಭಿರ್ಭರತರ್ಷಭ ।
ರಾಜಾ ರುಚಿರಪದ್ಮಾಕ್ಷೈರಾಸಾಂಚಕ್ರೇ ತದಾಶ್ರಮೇ ॥೧॥
ತಾಪಸೈಶ್ಚ ಮಹಾಭಾಗೈರ್ನಾನಾದೇಶಸಮಾಗತೈಃ
ದ್ರಷ್ಟುಂ ಕುರುಪತೇಃ ಪುತ್ರಾನ್ಪಾಣ್ಡವಾನ್ಪೃಥುವಕ್ಷಸಃ ॥೨॥

ಜನಮೇಜಯ! ಧೃತರಾಷ್ಟ್ರನು ಸುಂದರವಾದ ಕಮಲದಂತಹ ಕಣ್ಣುಗಳುಳ್ಳ ನರಶ್ರೇಷ್ಠರಾದ ಐವರು ಪಾಂಡವರೊಡನೆ ಆಶ್ರಮದಲ್ಲಿ ಕುಳಿತಿದ್ದಾಗ, ಕುಂತಿಯ ಮಕ್ಕಳಾದ ವಿಶಾಲನೇತ್ರರಾದ ಪಾಂಡವರನ್ನು ನೋಡಲು ಮಹಾಭಾಗ್ಯಶಾಲಿಗಳಾದ ತಪಸ್ವಿಗಳು ನಾನಾದೇಶಗಳಿಂದ ಅಲ್ಲಿಗೆ ಆಗಮಿಸಿದ್ದರು. ಅವರು ಧೃತರಾಷ್ಟ್ರನನ್ನು ಕೇಳಿದರು:

"**ಕತಮೋಽತ್ರ ಯುಧಿಷ್ಠಿರಃ**-ಇಲ್ಲಿ ಕುಳಿತಿರುವವರಲ್ಲಿ ಯುಧಿಷ್ಠಿರನು ಯಾರು? **ಭೀಮಾರ್ಜುನೌ ಯಮೌ ಚೈವ ದ್ರೌಪದೀ ಚ ಯಶಸ್ವಿನೀ॥** ಭೀಮಾರ್ಜುನರು ಯಾರು? ಅವಳೀಮಕ್ಕಳಾದ ನಕುಲ-ಸಹದೇವರು ಯಾರು? ಇಲ್ಲಿರುವ ಸ್ತ್ರೀಯರಲ್ಲಿ ಯಶಸ್ವಿನಿಯಾದ ದ್ರೌಪದಿಯು ಯಾರು?"

ತಪಸ್ವಿಗಳು ಹೀಗೆ ಪ್ರಶ್ನಿಸಲು-ಸೂತನಾದ ಸಂಜಯನು ಅವರೆಲ್ಲರ

ನಾಮಧೇಯಗಳನ್ನೂ ಹೇಳುತ್ತಾ ಪಾಂಡವರನ್ನೂ, ದ್ರೌಪದಿಯನ್ನೂ, ಇತರ ಕುರುಕುಲಸ್ತ್ರೀಯರನ್ನೂ ಅವರಿಗೆ ಪರಿಚಯಮಾಡಿಕೊಡಲು ಪ್ರಾರಂಭಿಸಿದನು.

ಯ ಏಷ ಜಾಮ್ಬೂನದಶುದ್ಧಗೌರ-
ಸ್ತನುರ್ಮಹಾಸಿಂಹ ಇವ ಪ್ರವೃದ್ಧಃ।
ಪ್ರಚಣ್ಡಘೋಣಃ ಪೃಥುದೀರ್ಘನೇತ್ರ-
ಸ್ತಾಮ್ರಾಯತಾಕ್ಷಃ ಕುರುರಾಜ ಏಷಃ ॥೫॥

“ತಾಪಸರೇ! ಶುದ್ಧವಾದ ಸುವರ್ಣದಂತೆ ಗೌರಾಂಗನಾಗಿರುವ, ಮಹಾಸಿಂಹದಂತೆ ವೃದ್ಧಿಹೊಂದಿದ ಶರೀರವುಳ್ಳ, ತೀಕ್ಷ್ಣವಾದ ಮೂಗಿನಿಂದ ಕೂಡಿರುವ, ವಿಶಾಲವಾಗಿಯೂ ನೀಳವಾಗಿಯೂ ಮತ್ತು ಕೆಂಪಾಗಿಯೂ ಇರುವ ಕಣ್ಣುಗಳುಳ್ಳ ಇವನೇ ಕುರುರಾಜನಾದ ಯುಧಿಷ್ಠಿರನು.

ಅಯಂ ಪುನರ್ಮತ್ತಗಜೇನ್ದ್ರಗಾಮೀ
ಪ್ರತಪ್ತಚಾಮೀಕರಶುದ್ಧಗೌರಃ।
ಪೃಥ್ವಾಯತಾಂಸಃ ಪೃಥುದೀರ್ಘಬಾಹು-
ರ್ವೃಕೋದರಃ ಪಶ್ಯತ ಪಶ್ಯತೇಮಮ್ ॥೬॥

ಮದಿಸಿದ ಗಜರಾಜನಂತೆ ಗಮನವುಳ್ಳ, ಪುಟಕ್ಕೆ ಹಾಕಿದ ಚಿನ್ನದಂತೆ ಶುದ್ಧಗೌರವರ್ಣದವನಾದ, ದೊಡ್ಡದಾಗಿಯೂ ಮತ್ತು ವಿಶಾಲವಾಗಿಯೂ ಇರುವ ಹೆಗಲುಗಳನ್ನು ಹೊಂದಿರುವ, ದಪ್ಪವಾಗಿಯೂ ನೀಳವಾಗಿಯೂ ಇರುವ ತೋಳುಗಳುಳ್ಳ ಇವನೇ ವೃಕೋದರನು. ಇವನನ್ನು ಚೆನ್ನಾಗಿ ನೋಡಿರಿ.

ಯಸ್ತ್ವೇಷ ಪಾರ್ಶ್ವೇಽಸ್ಯ ಮಹಾಧನುಷ್ಮಾ-
ನ್ಶ್ಯಾಮೋ ಯುವಾ ವಾರಣಯೂಥಪಾಭಃ।
ಸಿಂಹೋನ್ನತಾಂಸೋ ಗಜಖೇಲಗಾಮೀ
ಪದ್ಮಾಯತಾಕ್ಷೋಽರ್ಜುನ ಏಷ ವೀರಃ ॥೭॥

ಇವನ ಪಕ್ಕದಲ್ಲಿಯೇ ಇರುವ, ಶ್ಯಾಮಲವರ್ಣನಾದ, ಯುವಕನಂತೆಯೇ ಕಾಣುವ, ಆನೆಗಳ ಗುಂಪಿಗೆ ಪತಿಯಾದ ಸಲಗದಂತೆ ಪ್ರಕಾಶಮಾನವಾಗಿರುವ, ಸಿಂಹದ ಹೆಗಲಿನಂತೆ ಎತ್ತರವಾದ ಹೆಗಲಿನಿಂದ ಕೂಡಿರುವ, ಗಜಕ್ರೀಡೆಯಂತೆ ನಡಿಗೆಯುಳ್ಳ (ಗಜಗಮನನಾದ), ಕಮಲ

ದಂತೆ ವಿಶಾಲವಾದ ಕಣ್ಣುಗಳಿಂದ ಕೂಡಿರುವ, ಮಹಾಧನುರ್ಧರನಾದ ಈ ವೀರನೇ ಅರ್ಜುನನು.

ಕುನ್ತೀಸಮೀಪೇ ಪುರುಷೋತ್ತಮೌ ತು
ಯಮಾವಿಮೌ ವಿಷ್ಣುಮಹೇನ್ದ್ರಕಲ್ಪೌ।
ಮನುಷ್ಯಲೋಕೇ ಸಕಲೇ ಸಮೋಽಸ್ತಿ
ಯಯೋರ್ನ ರೂಪೇ ನ ಬಲೇ ನ ಶೀಲೇ ॥೮॥

ಕುಂತಿಯ ಸಮೀಪದಲ್ಲಿ ಕುಳಿತಿರುವ, ವಿಷ್ಣು-ಮಹೇಂದ್ರಸದೃಶರಾದ, ಪುರುಷಶ್ರೇಷ್ಠರಾದ, ಅವಳೀಮಕ್ಕಳಾದ ಇವರೇ ನಕುಲ-ಸಹದೇವರು. ಅಖಂಡವಾದ ಈ ಮನುಷ್ಯಲೋಕದಲ್ಲಿ ರೂಪದಲ್ಲಾಗಲೀ, ಬಲದಲ್ಲಾಗಲೀ, ಶೀಲದಲ್ಲಾಗಲೀ-ಇವರಿಗೆ ಸಮಾನರಾದವರು ಬೇರೆ ಯಾರೂ ಇಲ್ಲ.

ಇಯಂ ಪುನಃ ಪದ್ಮದಳಾಯತಾಕ್ಷೀ
ಮಧ್ಯಂ ವಯಃ ಕಿಂಚಿದಿವ ಸ್ಪೃಶನ್ತೀ।
ನೀಲೋತ್ಪಲಾಭಾ ಸುರದೇವತೇವ
ಕೃಷ್ಣಾ ಸ್ಥಿತಾ ಮೂರ್ತಿಮತೀವ ಲಕ್ಷ್ಮೀಃ ॥೯॥

ಮಧ್ಯವಯಸ್ಸನ್ನು ಸಮೀಪಿಸುತ್ತಿರುವ, ಪದ್ಮದಳದಂತೆ ವಿಶಾಲವಾದ ಕಣ್ಣುಗಳಿಂದ ಕೂಡಿರುವ, ನೀಲಕಮಲದ ಕಾಂತಿಯಂತೆ ಶ್ಯಾಮಲವಾದ ಶರೀರಕಾಂತಿಯುಳ್ಳವಳಾಗಿರುವ, ದೇವತೆಗಳಿಗೂ ದೇವಿಯಂತಿರುವ, ಮೂರ್ತಿಮತ್ತಾಗಿ ಬಂದಿರುವ ಲಕ್ಷ್ಮೀದೇವಿಯಂತೆಯೇ ಕಾಣುತ್ತಿರುವ ಕೃಷ್ಣೆಯು ಇಲ್ಲಿ ಉಪಸ್ಥಿತಳಾಗಿದ್ದಾಳೆ; ನೋಡಿರಿ.

ಅಸ್ಯಾಸ್ತು ಪಾರ್ಶ್ವೇ ಕನಕೋತ್ತಮಾಭಾ
ಯೈಷಾ ಪ್ರಭಾ ಮೂರ್ತಿಮತೀವ ಸೌಮೀ।
ಮಧ್ಯೇ ಸ್ಥಿತಾ ಸಾ ಭಗಿನೀ ದ್ವಿಜಾಗ್ರ್ಯಾ-
ಶ್ಚಕ್ರಾಯುಧಸ್ಯಾಪ್ರತಿಮಸ್ಯ ತಸ್ಯ ॥೧೦॥

ದ್ರೌಪದಿಯ ಪಕ್ಕದಲ್ಲಿ ಕುಳಿತಿರುವ, ಸುವರ್ಣಕ್ಕಿಂತಲೂ ಶ್ರೇಷ್ಠವಾದ ಕಾಂತಿಯಿಂದ ಕೂಡಿರುವ, ಮೂರ್ತಿಮತ್ತಾಗಿ ಬಂದಿರುವ ಚಂದ್ರಪ್ರಭೆ

ಯಂತೆ ಕಾಣುತ್ತಿರುವ, ಸ್ತ್ರೀಯರ ಮಧ್ಯದಲ್ಲಿ ಕುಳಿತಿರುವ ಇವಳೇ ಅಪ್ರತಿಮಪರಾಕ್ರಮನಾದ ಚಕ್ರಾಯುಧಧರನಾದ ಶ್ರೀಕೃಷ್ಣನ ತಂಗಿಯಾದ ಸುಭದ್ರೆಯು.

ಇಯಂ ಚ ಜಾಮ್ಬೂನದಶುದ್ಧಗೌರೀ
ಪಾರ್ಥಸ್ಯ ಭಾರ್ಯಾ ಭುಜಗೇನ್ದ್ರಕನ್ಯಾ।
ಚಿತ್ರಾಙ್ಗದಾ ಚೈವ ನರೇನ್ದ್ರಕನ್ಯಾ
ಯೈಷಾ ಸವರ್ಣಾರ್ದ್ರಮಧೂಕಪುಷ್ಪೈಃ ॥೧೧॥

ವಿಶುದ್ಧವಾದ ಜಾಂಬೂನದವೆಂಬ ಚಿನ್ನದಂತೆ ಗೌರಾಂಗಳಾಗಿರುವ, ಭುಜಗೇಂದ್ರನ ಮಗಳಾದ, ಅರ್ಜುನನ ಭಾರ್ಯೆಯಾದ ಇವಳೇ ಉಲೂಪಿಯು. ಅರಳಿದ ಹಿಪ್ಪೇಹೂವುಗಳ ವರ್ಣಕ್ಕೆ ಸಮಾನವಾದ ವರ್ಣವುಳ್ಳ ರಾಜಕುಮಾರಿಯಾದ ಇವಳೇ ಅರ್ಜುನನ ಮತ್ತೊಬ್ಬ ಭಾರ್ಯೆಯಾದ ಚಿತ್ರಾಂಗದೆಯು.

ಇಯಂ ಸ್ವಸಾ ರಾಜಚಮೂಪತೇಶ್ಚ
ಪ್ರವೃದ್ಧನೀಲೋತ್ಪಲದಾಮವರ್ಣಾ।
ಪಸ್ಪರ್ಧ ಕೃಷ್ಣೇನ ಸದಾ ನೃಪೋ ಯೋ
ವೃಕೋದರಸ್ಯೈಷ ಪರಿಗ್ರಹೋಽಗ್ರ್ಯಃ ॥೧೨॥

ದೊಡ್ಡದಾದ ನೀಲಕಮಲದ ಹಾರದ ಬಣ್ಣದಂತೆ ಶ್ಯಾಮಲವರ್ಣವುಳ್ಳ ಇವಳು –ಶ್ರೀಕೃಷ್ಣನೊಡನೆ ಸಾರಥ್ಯದ ಕೌಶಲ್ಯದಲ್ಲಿ ಸದಾ ಸ್ಪರ್ಧಿಸುತ್ತಿದ್ದ ಮತ್ತು ದುರ್ಯೋಧನನ ಸೇನಾನಾಯಕನಾಗಿದ್ದ ಶಲ್ಯನ ತಂಗಿಯು ಮತ್ತು ಭೀಮಸೇನನ ಶ್ರೇಷ್ಠಳಾದ ಭಾರ್ಯೆಯು.

ಇಯಂ ಚ ರಾಜ್ಞೋ ಮಗಧಾಧಿಪಸ್ಯ
ಸುತಾ ಜರಾಸನ್ಧ ಇತಿ ಶ್ರುತಸ್ಯ।
ಯವೀಯಸೋ ಮಾದ್ರವತೀಸುತಸ್ಯ
ಭಾರ್ಯಾ ಮತಾ ಚಮ್ಪಕದಾಮಗೌರೀ ॥೧೩॥

ಅವಳ ಪಕ್ಕದಲ್ಲಿರುವ, ಸಂಪಿಗೆ ಹೂಗಳ ಮಾಲೆಯಂತೆ ಗೌರವರ್ಣದವಳಾಗಿರುವ ಇವಳು–ಜರಾಸಂಧನೆಂದು ವಿಖ್ಯಾತನಾಗಿದ್ದ ಮಗಧಾಧಿಪ

ನಾದ ರಾಜನ ಮಗಳು ಮತ್ತು ಮಾದ್ರಿಯ ಕಡೆಯ ಮಗನಾದ ಸಹದೇವನ ಭಾರ್ಯೆಯು.

ಇನ್ದೀವರಶ್ಯಾಮತನುಃ ಸ್ಥಿತಾ ತು
ಯೈಷಾ ಪರಾಸನ್ನಮಹೀತಲೇ ಚ।
ಭಾರ್ಯಾ ಮತಾ ಮಾದ್ರವತೀಸುತಸ್ಯ
ಜ್ಯೇಷ್ಠಸ್ಯ ಸೇಯಂ ಕಮಲಾಯತಾಕ್ಷೀ ॥೧೪॥

ಅವಳ ಸಮೀಪದಲ್ಲಿ ನೆಲದ ಮೇಲೆ ಕುಳಿತಿರುವ, ನೀಲಕಮಲದಂತೆ ಶ್ಯಾಮಲವರ್ಣದ ಶರೀರದಿಂದ ಕೂಡಿರುವ, ಕಮಲದಂತೆ ವಿಶಾಲವಾದ ಕಣ್ಣುಗಳುಳ್ಳ ಸ್ತ್ರೀಯು ಮಾದ್ರಿಯ ಜ್ಯೇಷ್ಠಪುತ್ರನಾದ ನಕುಲನ ಭಾರ್ಯೆಯು.

ಇಯಂ ತು ನಿಷ್ಟಪ್ತಸುವರ್ಣಗೌರೀ
ರಾಜ್ಞೋ ವಿರಾಟಸ್ಯ ಸುತಾ ಸಪುತ್ರಾ।
ಭಾರ್ಯಾಭಿಮನ್ಯೋರ್ನಿಹತೋ ರಣೇ ಯೋ
ದ್ರೋಣಾದಿಭಿಸ್ತೈರ್ವಿರಥೋ ರಥಸ್ಥೈಃ ॥೧೫॥

ಪುಟಕ್ಕೆ ಹಾಕಿದ ಚಿನ್ನದಂತೆ ಗೌರಾಂಗಳಾಗಿರುವ, ಮಗನನ್ನೆತ್ತಿಕೊಂಡಿರುವ ಇವಳು-ವಿರಾಟರಾಜನ ಮಗಳಾದ ಉತ್ತರೆಯು. ರಥಹೀನನಾಗಿ ಯುದ್ಧಮಾಡುತ್ತಿದ್ದಾಗ ರಥಸ್ಥರಾಗಿದ್ದ ದ್ರೋಣಾದಿಗಳಿಂದ ಕೊಲ್ಲಲ್ಪಟ್ಟ ವೀರನಾದ ಅಭಿಮನ್ಯುವಿನ ಭಾರ್ಯೆಯು.

ಏತಾಸ್ತು ಸೀಮನ್ತಶಿರೋರುಹಾ ಯಾಃ
ಶುಕ್ಲೋತ್ತರೀಯಾ ನರರಾಜಪತ್ನ್ಯಃ।
ರಾಜ್ಞೋಽಸ್ಯ ವೃದ್ಧಸ್ಯ ಪರಂ ಶತಾಖ್ಯಾಃ
ಸ್ನುಷಾ ನೃವೀರಾಹತಪುತ್ರನಾಥಾಃ ॥೧೬॥

ಬಿಳಿಯ ಉತ್ತರೀಯಗಳನ್ನು ಹೊದೆದಿರುವ, ಬೈತಲೆಗಳಲ್ಲಿ ಕುಂಕುಮವಿಲ್ಲದೇ ಇರುವ ಇವರೆಲ್ಲರೂ ನರರಾಜನಾದ ದುರ್ಯೋಧನನ ಮತ್ತು ಅವನ ತಮ್ಮಂದಿರ ಪತ್ನಿಯರು. ವೃದ್ಧನಾದ ಧೃತರಾಷ್ಟ್ರರಾಜನ ನೂರಕ್ಕೂ ಹೆಚ್ಚಿನ ಈ ಸೊಸೆಯರು, ಯುದ್ಧದಲ್ಲಿ ಶತ್ರುಪಕ್ಷದ ವೀರರ ಮೂಲಕ ತಮ್ಮ ಪತಿ-ಪುತ್ರರೆಲ್ಲರನ್ನೂ ಕಳೆದುಕೊಂಡಿದ್ದಾರೆ.

ಏತಾ ಯಥಾಮುಖ್ಯಮುದಾಹೃತಾ ವೋ
ಬ್ರಾಹ್ಮಣ್ಯಭಾವಾದೃಜುಬುದ್ಧಿಸತ್ತ್ವಾಃ।
ಸರ್ವಾ ಭವದ್ಭಿಃ ಪರಿಪೃಚ್ಛ್ಯಮಾನಾ
ನರೇನ್ದ್ರಪತ್ನ್ಯಃ ಸುವಿಶುದ್ಧಸತ್ತ್ವಾಃ ॥೧೭॥

ಬ್ರಾಹ್ಮಣತ್ವದ ಪ್ರಭಾವದಿಂದ ಸರಳವಾದ ಬುದ್ಧಿಯನ್ನೂ ಮತ್ತು ವಿಶುದ್ಧವಾದ ಅಂತಃಕರಣವನ್ನೂ ಹೊಂದಿರುವ ಮಹರ್ಷಿಗಳೇ! ಇವರೆಲ್ಲರ ಪರಿಚಯವನ್ನೂ ಮಾಡಿಕೊಡಬೇಕೆಂಬ ನಿಮ್ಮ ಅಪೇಕ್ಷೆಯಂತೆ ಇವರಲ್ಲಿ ಮುಖ್ಯ-ಮುಖ್ಯರಾದವರನ್ನು ಅನುಕ್ರಮವಾಗಿ ನಿಮಗೆ ಪರಿಚಯ ಮಾಡಿಕೊಟ್ಟಿರುತ್ತೇನೆ. ಈ ಎಲ್ಲ ರಾಜಮಹಿಳೆಯರೂ ವಿಶುದ್ಧವಾದ ಹೃದಯವುಳ್ಳವರಾಗಿರುವರು."

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಸಂಜಯನು ಹೀಗೆ ಹೇಳಿದನಂತರ ಎಲ್ಲ ತಪಸ್ವಿಗಳೂ ತಮ್ಮ-ತಮ್ಮ ಆಶ್ರಮಗಳಿಗೆ ತೆರಳಿದರು. ಬಳಿಕ ಕುರುಕುಲವೃದ್ಧನಾದ ಮತ್ತು ಕುರುಶ್ರೇಷ್ಠನಾದ ಧೃತರಾಷ್ಟ್ರರಾಜನು ಅಲ್ಲಿಗೆ ಆಗಮಿಸಿದ್ದ ರಾಜಪುತ್ರರಿಂದ ಎಲ್ಲರ ಕುಶಲಸಮಾಚಾರಗಳನ್ನೂ ಕೇಳಿ ತಿಳಿದುಕೊಂಡನು. ಪಾಂಡವರು ಆಶ್ರಮಮಂಡಲದ ಗಡಿಯಲ್ಲಿಯೇ ತಮ್ಮ ಸೈನ್ಯವನ್ನು ನಿಲ್ಲಿಸಿದ್ದರು. ಆ ಸೈನಿಕರೆಲ್ಲರೂ ರಥವೇ ಮೊದಲಾದವುಗಳಿಂದ ಕುದುರೆಯೇ ಮೊದಲಾದ ಪ್ರಾಣಿಗಳನ್ನು ಬಿಚ್ಚಿದರು. ಆಶ್ರಮದ ಗಡಿಪ್ರದೇಶದಲ್ಲಿ ಹಾಕಿದ್ದ ಬಿಡಾರಗಳಲ್ಲಿ ಸ್ತ್ರೀಯರು, ಬಾಲಕರು, ವೃದ್ಧರೆಲ್ಲರೂ ವಿಶ್ರಮಿಸಿಕೊಳ್ಳುತ್ತಿದ್ದರು. ಆ ಸಮಯದಲ್ಲಿ ಧೃತರಾಷ್ಟ್ರನು ಯಥಾಯೋಗ್ಯವಾಗಿ ಪಾಂಡವರ ಕುಶಲಪ್ರಶ್ನೆಗಳನ್ನು ಕೇಳಿದನು."

೨೫ನೆಯ ಅಧ್ಯಾಯವು ಮುಗಿಯಿತು.

೨೬ನೆಯ ಅಧ್ಯಾಯ ಆಶ್ರಮವಾಸಪರ್ವ (ಮುಂದುವರಿದಿದೆ.)

ಧೃತರಾಷ್ಟ್ರ-ಪಾಂಡವರ ಸಂಭಾಷಣೆ: ಯುಧಿಷ್ಠಿರನ ಶರೀರದಲ್ಲಿ ವಿದುರನ ಪ್ರವೇಶ

ಧೃತರಾಷ್ಟ್ರನು ಹೇಳುತ್ತಾನೆ:

ಯುಧಿಷ್ಠಿರ ಮಹಾಬಾಹೋ ಕಚ್ಚಿತ್ತ್ವಂ ಕುಶಲೋ ಹ್ಯಸಿ।
ಸಹಿತೋ ಭ್ರಾತೃಭಿಃ ಸರ್ವೈಃ ಪೌರಜಾನಪದೈಸ್ತಥಾ ॥೧॥

"ಮಹಾಬಾಹುವೇ! ಯುಧಿಷ್ಠಿರ! ನೀನು ನಿನ್ನ ಅನುಜರೊಡನೆಯೂ ಮತ್ತು ನಗರ-ಜನಪದಗಳ ಪ್ರಜೆಗಳೊಡನೆಯೂ ಕುಶಲಿಯಾಗಿರುವೆಯಲ್ಲವೇ? ನಿನ್ನನ್ನು ಆಶ್ರಯಿಸಿ ಜೀವನವನ್ನು ನಿರ್ವಹಿಸುತ್ತಿರುವ ಮಂತ್ರಿಗಳೂ, ಸೇವಕವರ್ಗದವರೂ ಮತ್ತು ಗುರುಜನರೂ ನೀರೋಗದೃಢಕಾಯರಾಗಿ ಕುಶಲಿಗಳಾಗಿರುವರಲ್ಲವೇ? ಇವರೆಲ್ಲರೂ ನಿನ್ನ ರಾಜ್ಯದಲ್ಲಿ ನಿರಾತಂಕವಾಗಿ ವಾಸಮಾಡುತ್ತಿರುವರಲ್ಲವೇ? ರಾಜರ್ಷಿಗಳಿಂದ ಸೇವಿಸಲ್ಪಡುತ್ತಿದ್ದ ಪುರಾತನವಾದ ರೀತಿ-ನೀತಿಗಳನ್ನು ನೀನೂ ಅನುಸರಿಸುತ್ತಿರುವೆಯಲ್ಲವೇ?

ಕಚ್ಚಿನ್ನ್ಯಾಯಾನನುಚ್ಛಿದ್ಯ ಕೋಶಸ್ತೇಽಭಿಪ್ರಪೂರ್ಯತೇ।
ಅರಿಮಧ್ಯಸ್ಥಮಿತ್ರೇಷು ವರ್ತಸೇ ಚಾನುರೂಪತಃ ॥೪॥

ನ್ಯಾಯಮಾರ್ಗವನ್ನು ಉಲ್ಲಂಘಿಸದೇ ನಿನ್ನ ಭಂಡಾರವು ತುಂಬುತ್ತಿರುವುದಲ್ಲವೇ? ಶತ್ರು-ಮಿತ್ರ ಮತ್ತು ಉದಾಸೀನರ ವಿಷಯದಲ್ಲಿ ಯಥಾಯೋಗ್ಯವಾಗಿ ವ್ಯವಹರಿಸುತ್ತಿರುವೆಯಲ್ಲವೇ?

ಬ್ರಾಹ್ಮಣಾನಗ್ರಹಾರೈರ್ವಾ ಯಥಾವದನುಪಶ್ಯಸಿ।
ಕಚ್ಚಿತ್ತೇ ಪರಿತುಷ್ಯನ್ತಿ ಶೀಲೇನ ಭರತರ್ಷಭ ॥೫॥

ಬ್ರಾಹ್ಮಣರನ್ನು ಅಗ್ರಹಾರಾದಿಗಳ ಉಂಬಳಿಯಿಂದ ಯಥೋಚಿತವಾಗಿ ಕಾಣುತ್ತಿರುವೆಯಲ್ಲವೇ? ನಿನ್ನ ಶೀಲ ಮತ್ತು ಸ್ವಭಾವಗಳಿಂದ ಅವರು ಸಂತುಷ್ಟರಾಗಿರುವರೇ?

ಶತ್ರವೋಪಿ ಕುತಃ ಪೌರಾ ಭೃತ್ಯಾ ವಾ ಸ್ವಜನೇಽಪಿ ವಾ।
ಕಚ್ಚಿದ್ಯಜಸಿ ರಾಜೇನ್ದ್ರ ಶ್ರದ್ಧಾವಾನ್ಪಿತೃದೇವತಾಃ ॥೬॥

ಪಟ್ಟಣಿಗರು, ಸೇವಕರು ಮತ್ತು ಸ್ವಜನರು ನಿನ್ನ ವಿಷಯದಲ್ಲಿ ಸಂತುಷ್ಟರಾಗಿರುವರೆಂಬ ವಿಷಯವು ಅತಿಶಯವಲ್ಲ. ಶತ್ರುಗಳು ಕೂಡ ನಿನ್ನ ಶೀಲ-ಸ್ವಭಾವಗಳಿಂದ ಸಂತುಷ್ಟರಾಗಿರುವರೇ? ಶ್ರದ್ಧಾಪೂರ್ವಕವಾಗಿ ದೇವತೆಗಳನ್ನೂ-ಪಿತೃಗಳನ್ನೂ ಆರಾಧಿಸುತ್ತಿರುವೆಯಾ?

ಅತಿಥೀನನ್ನಪಾನೇನ ಕಚ್ಚಿದರ್ಚಸಿ ಭಾರತ ।
ಕಚ್ಚಿನ್ನಯಪಥೇ ವಿಪ್ರಾಃ ಸ್ವಕರ್ಮನಿರತಾಸ್ತವ ।
ಕ್ಷತ್ರಿಯಾ ವೈಶ್ಯವರ್ಗಾ ವಾ ಶೂದ್ರಾ ವಾಪಿ ಕುಟುಮ್ಬಿನಃ ॥೭॥

ನೀನು ಅನ್ನ-ಪಾನಾದಿಗಳ ಮೂಲಕವಾಗಿ ಅತಿಥಿಗಳನ್ನು ಸತ್ಕರಿಸು ತ್ತಿರುವೆಯಲ್ಲವೇ? ನಿನ್ನ ರಾಜ್ಯದಲ್ಲಿ ಕುಟುಂಬಿಗಳಾದ ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರು ಸ್ವಕರ್ಮನಿರತರಾಗಿ ನ್ಯಾಯಮಾರ್ಗದಲ್ಲಿ ನಡೆಯು ತ್ತಿರುವರೇ?

ಕಚ್ಚಿತ್ ಸ್ತ್ರೀಬಾಲವೃದ್ಧಂ ತೇ ನ ಶೋಚತಿ ನ ಯಾಚತೇ।
***ಜಾಮಯಃ ಪೂಜಿತಾಃ ಕಚ್ಚಿತ್ತವ ಗೇಹೇ ನರರ್ಷಭ ॥೮॥**

ನಿನ್ನ ರಾಜ್ಯದಲ್ಲಿ ಬಾಲಕರಾಗಲೀ, ಸ್ತ್ರೀಯರಾಗಲೀ, ವೃದ್ಧರಾಗಲೀ ಯಾವುದೇ ಕಾರಣದಿಂದಲೂ ಶೋಕಪಡುತ್ತಿಲ್ಲ ತಾನೇ? ಜೀವಿಕೆಗಾಗಿ ಯಾರನ್ನೂ ಯಾಚಿಸುತ್ತಿಲ್ಲವಷ್ಟೇ? ನಿನ್ನ ಮನೆಯಲ್ಲಿ ಸೊಸೆ, ಪತ್ನೀ, ತಂಗಿ, ಮಗಳು–ಇವರೆಲ್ಲರೂ ಆದರ-ಸತ್ಕಾರಗಳನ್ನು ಹೊಂದುತ್ತಿರುವರಲ್ಲವೇ?

ಕಚ್ಚಿದ್ರಾಜರ್ಷಿವಂಶೋಽಯಂ ತ್ವಾಮಾಸಾದ್ಯ ಮಹೀಪತಿಮ್।
ಯಥೋಚಿತಂ ಮಹಾರಾಜ ಯಶಸಾ ನಾವಸೀದತಿ ॥೯॥

ರಾಜರ್ಷಿಗಳ ಈ ನಮ್ಮ ವಂಶವು ನಿನ್ನನ್ನು ರಾಜನನ್ನಾಗಿ ಪಡೆದು ಯಥೋಚಿತವಾದ ಪ್ರತಿಷ್ಠೆಯನ್ನು ಗಳಿಸುತ್ತಿದೆಯೇ? ಯಶಸ್ಸಿನಿಂದ ವಂಚಿತವಾಗಿ ಅಪಯಶಸ್ಸಿಗೆ ಭಾಗಿಯಾಗುತ್ತಿಲ್ಲವಲ್ಲವೇ?”

***ಜಾಮಯೋ ಯತ್ರ ಶೋಚನ್ತಿ ವಿನಶ್ಯನ್ತ್ಯಾಶು ತತ್ಕುಲಮ್ । ನ ಶೋಚನ್ತಿ ತು ಯತ್ರೈತಾ ವರ್ಧತೇ ತದ್ಧಿ ಸರ್ವದಾ ॥** (ಮನು-೨-೫೭) **ಜಾಮಯಃ ಭಗಿನೀಪತ್ನೀ ಮಹಿತೃಸ್ನುಷಾದ್ಯಾಃ** =ಅಕ್ಕ, ತಂಗಿ, ಮಗಳು, ಸೊಸೆ, ಭಾರ್ಯೆ-ಇವರು ಯಾರ ಮನೆಯಲ್ಲಿ ದುಃಖಪಡುವರೋ ಆ ಮನೆಯವರ ಕುಲವೇ ನಾಶಹೊಂದುತ್ತದೆ. ಇವರುಗಳು ಎಲ್ಲಿ ದುಃಖಪಡುವುದಿಲ್ಲವೋ ಆ ಮನೆಯು ಅಭಿವೃದ್ಧಿಯನ್ನು ಹೊಂದುತ್ತಿರುತ್ತದೆ.

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಧೃತರಾಷ್ಟ್ರನು ಈ ರೀತಿಯಲ್ಲಿ ಕುಶಲಪ್ರಶ್ನೆಗಳಿಂದ ಯುಕ್ತವಾದ ವ್ಯಾವಹಾರಿಕವಿಷಯಗಳನ್ನು ಪ್ರಶ್ನಿಸಲು, ಮಾತನಾಡುವುದರಲ್ಲಿ ಕುಶಲನಾದ, ನ್ಯಾಯವಿದನಾದ ಯುಧಿಷ್ಠಿರನು ಉತ್ತರಿಸಿದನು:

ಕಚ್ಚಿತ್ತೇ ವರ್ಧತೇ ರಾಜಂಸ್ತಪೋ ದಮಶಮೌ ಚ ತೇ ।
ಅಪಿ ಮೇ ಜನನೀ ಚೇಯಂ ಶುಶ್ರೂಷುರ್ವಿಗತಕ್ಲಮಾ ।
ಅಥಾಸ್ಯಾಃ ಸಫಲೋ ರಾಜನ್ವನವಾಸೋ ಭವಿಷ್ಯತಿ ॥೧೨॥

“ಮಹಾರಾಜ! ನನ್ನ ದೇಶದಲ್ಲಿ ಎಲ್ಲರೂ ಕುಶಲಿಗಳಾಗಿದ್ದಾರೆ. ರಾಜ್ಯಾಡಳಿತವು ಧರ್ಮದ ಹಿನ್ನೆಲೆಯಲ್ಲಿಯೇ ನಡೆಯುತ್ತಿದೆ. ನೀನು ಈ ಅರಣ್ಯಕ್ಕೆ ಬಂದನಂತರ ತಪಸ್ಸು, ಇಂದ್ರಿಯಸಂಯಮ, ಮನೋನಿಗ್ರಹಾದಿ ಸದ್ಗುಣಗಳು ವೃದ್ಧಿಹೊಂದುತ್ತಿರುವುವೇ? ಈ ನನ್ನ ತಾಯಿಯು ಯಾವ ವಿಧವಾದ ಆಯಾಸವೂ ಇಲ್ಲದೇ ನಿಮ್ಮ ಶುಶ್ರೂಷೆಯನ್ನು ಮಾಡುತ್ತಿರುವಳೇ? ಹಾಗಿದ್ದರೆ ಇವಳ ಅರಣ್ಯವಾಸವು ಸಫಲವಾದಂತಾಗುತ್ತದೆ.

ಇಯಂ ಚ ಮಾತಾ ಜ್ಯೇಷ್ಠಾ ಮೇ ಶೀತವಾತಾಧ್ವಕರ್ಶಿತಾ।
ಘೋರೇಣ ತಪಸಾ ಯುಕ್ತಾ ದೇವೀ ಕಚ್ಚಿನ್ನ ಶೋಚತಿ ॥೧೩॥
ಹತಾನ್ಪುತ್ರಾನ್ಮಹಾವೀರ್ಯಾನ್ ಕ್ಷತ್ರಧರ್ಮಪರಾಯಣಾನ್।
ನಾಪಧ್ಯಾಯತಿ ವಾ ಕಚ್ಚಿದಸ್ಮಾನ್ಪಾಪಕೃತಃ ಸದಾ ॥೧೪॥

ಘೋರವಾದ ತಪಸ್ಸಿನಲ್ಲಿ ತೊಡಗಿರುವ ಈ ನನ್ನ ದೊಡ್ಡ ತಾಯಿಯು ಚಳಿ-ಗಾಳಿಗಳಿಂದಲೂ ದಾರಿನಡೆದ ಆಯಾಸದಿಂದಲೂ ಪೀಡಿಸಲ್ಪಟ್ಟವಳಾಗಿ ದುಃಖಿಸುತ್ತಿಲ್ಲ ತಾನೇ? ಮಹಾವೀರರಾದ, ಕ್ಷತ್ರಧರ್ಮಪರಾಯಣರಾದ ಮಕ್ಕಳು ಯುದ್ಧದಲ್ಲಿ ಹತರಾದುದನ್ನು ಸ್ಮರಿಸಿಕೊಂಡು ಅಪರಾಧಿಗಳಾದ ನಮ್ಮ ವಿಷಯದಲ್ಲಿ ಅನಿಷ್ಟವನ್ನು ಚಿಂತಿಸುತ್ತಿಲ್ಲ ತಾನೇ?

ಕ್ವ ಚಾಸೌ ವಿದುರೋ ರಾಜನ್ನೇಮಂ ಪಶ್ಯಾಮಹೇ ವಯಮ್।
ಸಞ್ಜಯಃ ಕುಶಲೀ ಚಾಯಂ ಕಚ್ಚಿನ್ನು ತಪಸಿ ಸ್ಥಿರಃ ॥೧೫॥

ಈ ಸಂಜಯನು ಕುಶಲಿಯಾಗಿ ಸ್ಥಿರಭಾವದಿಂದ ತಪಸ್ಸನ್ನು ಮಾಡು

ತ್ತಿರುವನಲ್ಲವೇ? ವಿದುರನೆಲ್ಲಿಗೆ ಹೋಗಿದ್ದಾನೆ? ಅವನಿಲ್ಲಿ ಕಾಣುತ್ತಿಲ್ಲವಲ್ಲಾ?"

ವೈಶಂಪಾಯನರು ಹೇಳುತ್ತಾರೆ:

ಧರ್ಮರಾಜನು ಹೀಗೆ ಹೇಳಲು ಧೃತರಾಷ್ಟ್ರನು ಯುಧಿಷ್ಠಿರನಿಗೆ ಹೇಳಿದನು.

"ಪುತ್ರಕ! ವಿದುರನು ಕುಶಲಿಯಾಗಿದ್ದಾನೆ. ಘೋರವಾದ ತಪಸ್ಸಿನಲ್ಲಿ ತೊಡಗಿದ್ದಾನೆ.

ವಿದುರನು ನಿರಾಹಾರನಾಗಿ ಗಾಳಿಯನ್ನು ಮಾತ್ರವೇ ಸೇವಿಸುತ್ತಾ ಜೀವನವನ್ನು ಕಳೆಯುತ್ತಿದ್ದಾನೆ. ಅತ್ಯಂತಕೃಶನಾಗಿದ್ದಾನೆ. ಅವನ ಶರೀರದಲ್ಲಿರುವ ನರ-ನಾಡಿಗಳೆಲ್ಲವೂ ಸ್ಪಷ್ಟವಾಗಿ ಕಾಣುತ್ತಿವೆ. ನಿರ್ಜನವಾಗಿರುವ ಈ ಅರಣ್ಯದಲ್ಲಿ ಕೆಲವೊಮ್ಮೆ ಅವನು ಬ್ರಾಹ್ಮಣರಿಗೆ ಕಾಣಿಸಿಕೊಳ್ಳುತ್ತಾನೆ."


ಜನಮೇಜಯ! ಧೃತರಾಷ್ಟ್ರನು ಹೀಗೆ ಹೇಳುತ್ತಿರುವಾಗಲೇ ಜಟಾಧಾರಿಯಾದ, ಸುಕ್ಕಿಹೋದ ಮುಖವುಳ್ಳವನಾಗಿದ್ದ, ಕೃಶನಾಗಿದ್ದ, ದಿಗಂಬರನಾಗಿದ್ದ, ಕೆಸರಿನಿಂದ ವ್ಯಾಪ್ತವಾದ ಅಂಗಗಳಿಂದ ಕೂಡಿದ್ದ, ಅರಣ್ಯದ ಧೂಳಿನಿಂದ ಮುಚ್ಚಿಹೋಗಿದ್ದ ವಿದುರನು ದೂರದಲ್ಲಿ ನಿಂತಿರುವುದನ್ನು ಯುಧಿಷ್ಠಿರನಿಗೆ ತಿಳಿಸಿದರು. ಆದರೆ ವಿದುರನು ಆಶ್ರಮದ ಕಡೆಗೆ ಒಮ್ಮೆ ನೋಡಿ ಒಡನೆಯೇ ಹಿಂದಕ್ಕೆ ಹೊರಟುಬಿಟ್ಟನು.

ಒಡನೆಯೇ ಯುಧಿಷ್ಠಿರನು ಏಕಾಕಿಯಾಗಿ ವಿದುರನನ್ನು ಹಿಂಬಾಲಿಸಿ ಹೋದನು. ಘೋರಾರಣ್ಯದ ಮಧ್ಯದಲ್ಲಿ ನುಗ್ಗಿಹೋಗುತ್ತಿದ್ದ ವಿದುರನು ಒಮ್ಮೆ ಕಾಣುತ್ತಿದ್ದನು; ಮತ್ತೊಮ್ಮೆ ಕಾಣುತ್ತಿರಲಿಲ್ಲ.

ಭೋ ಭೋ ವಿದುರ ರಾಜಾಹಂ ದಯಿತಸ್ತೇ ಯುಧಿಷ್ಠಿರಃ।

"ಎಲೈ ವಿದುರನೇ! ನಾನು ನಿನಗೆ ಪರಮಪ್ರಿಯನಾದ ಯುಧಿಷ್ಠಿರ ರಾಜನಾಗಿದ್ದೇನೆ"–ಎಂದು ಕೂಗಿಹೇಳುತ್ತಾ ಧರ್ಮರಾಜನು ಪ್ರಯತ್ನಪೂರ್ವಕವಾಗಿ ಅವನನ್ನು ಹಿಂಬಾಲಿಸಿ ಹೋಗುತ್ತಿದ್ದನು. ಹೀಗೆಯೇ ಸಿಕ್ಕಿಯೂ ಸಿಕ್ಕದವನಂತೆ ಮುಂದೆ-ಮುಂದೆ ಹೋಗುತ್ತಿದ್ದ ಬುದ್ಧಿವಂತರಲ್ಲಿ ಶ್ರೇಷ್ಠನಾದ ವಿದುರನು ಅರಣ್ಯದ ಮಧ್ಯದಲ್ಲಿ ನಿರ್ಜನವಾದ, ಪವಿತ್ರವಾದ

ಮತ್ತು ಏಕಾಂತವಾದ ಸ್ಥಳದಲ್ಲಿ ಒಂದು ಮರದ ನೆರಳಿನಲ್ಲಿ ನಿಂತುಕೊಂಡನು. ಮಹಾಬುದ್ಧಿಯಾದ ಯುಧಿಷ್ಠಿರನು ಬಹಳವಾಗಿ ಕ್ಷೀಣಿಸಿದ್ದ, ಆಕಾರದಿಂದ ಮಾತ್ರವೇ ವಿದುರನೆಂಬುದನ್ನು ತಿಳಿಯಬಹುದಾಗಿದ್ದ, ಮಹಾಬುದ್ಧಿಶಾಲಿಯಾಗಿದ್ದ ವಿದುರನನ್ನು ಗುರುತಿಸಿದನು. ವಿದುರನಿಗೆ ಕೇಳಿಸುವಷ್ಟು ಹತ್ತಿರದಲ್ಲಿ ನಿಂತ ಯುಧಿಷ್ಠಿರನು ಅವನ ಮುಂದೆ ನಿಂತು '**ಯುಧಿಷ್ಠಿರೋಽಹಮಸ್ಮಿ**' 'ನಾನು ಯುಧಿಷ್ಠಿರನು'-ಎಂಬುದಾಗಿ ಹೇಳಿ ಅವನನ್ನು ಅಭಿನಂದಿಸಿದನು.



ಆ ಸಮಯದಲ್ಲಿ ವಿದುರನು ಎವೆಯಿಕ್ಕದೇ ರಾಜನನ್ನೇ ನೋಡು

ತ್ತಿದ್ದನು. ವಿದುರನು ಏಕಾಗ್ರಚಿತ್ತನಾಗಿ ತನ್ನ ದೃಷ್ಟಿಯನ್ನು ಯುಧಿಷ್ಠಿರನ ದೃಷ್ಟಿಯೊಡನೆ ಸೇರಿಸಿದನು.

ವಿವೇಶ ವಿದುರೋ ಧೀಮಾನ್ಗಾತ್ರೈರ್ಗಾತ್ರಾಣಿ ಚೈವ ಹ ।
ಪ್ರಾಣಾನ್ಪ್ರಾಣೇಷು ಚ ದಧದಿನ್ದ್ರಿಯಾಣೀನ್ದ್ರಿಯೇಷು ಚ ॥೨೮॥

ಧೀಮಂತನಾದ ವಿದುರನು ತನ್ನ ಅಂಗಾಂಗಗಳನ್ನು ಯುಧಿಷ್ಠಿರನ ಅಂಗಾಂಗಗಳಲ್ಲಿಯೂ, ತನ್ನ ಪ್ರಾಣಗಳನ್ನು ಯುಧಿಷ್ಠಿರನ ಪ್ರಾಣಗಳಲ್ಲಿಯೂ, ತನ್ನ ಇಂದ್ರಿಯಗಳನ್ನು ಯುಧಿಷ್ಠಿರನ ಇಂದ್ರಿಯಗಳಲ್ಲಿಯೂ ಲೀನ ಗೊಳಿಸಿದನು. ಆ ಸಮಯದಲ್ಲಿ ವಿದುರನು ತೇಜಸ್ಸಿನಿಂದ ಪ್ರಜ್ವಲಿಸುತ್ತಿರುವನೋ ಎಂಬಂತೆ ಕಾಣುತ್ತಿದ್ದನು. ಯೋಗಬಲವನ್ನು ಆಶ್ರಯಿಸಿ ವಿದುರನು ಧರ್ಮರಾಜನ ಶರೀರವನ್ನು ಪ್ರವೇಶಿಸಿದನು. ವಿದುರನ ಶರೀರವು ಹಿಂದಿಂತೆಯೇ ವೃಕ್ಷದ ಬುಡದಲ್ಲಿ ನಿಂತಿದ್ದಿತು. ಅವನ ಕಣ್ಣುಗಳೂ ಸ್ತಬ್ಧವಾಗಿದ್ದುವು (ನಿಶ್ಚಲವಾಗಿದ್ದುವು). ಆದರೆ ಅವನ ಶರೀರದಲ್ಲಿ ಚೇತನವು ಮಾತ್ರ ಇರಲಿಲ್ಲ. ಗತಚೇತನನಾದ ವಿದುರನನ್ನು ರಾಜನು ನೋಡಿದನು. ಅದಕ್ಕೆ ಪ್ರತಿಯಾಗಿ ತಾನು ಇನ್ನೂ ಹೆಚ್ಚು ಬಲಿಷ್ಠನೂ-ಬಹುಗುಣವಂತನೂ ಆಗಿರುವೆನೆಂಬ ಭಾವನೆಯು ಅವನಿಗುಂಟಾಯಿತು. ಅನಂತರ ಮಹಾತೇಜಸ್ವಿಯಾದ ವಿದ್ಯಾವಂತನಾದ ಧರ್ಮರಾಜನು ತನ್ನ ಸಮಸ್ತವಾದ ಪುರಾತನಸ್ವರೂಪವನ್ನೂ ಸ್ಮರಿಸಿಕೊಂಡನು. (ತಾನೂ ಮತ್ತು ವಿದುರನೂ ಯಮಧರ್ಮನ ಅಂಶದಿಂದ ಹುಟ್ಟಿದವರೆಂಬುದನ್ನು ಯುಧಿಷ್ಠಿರನು ಅರಿತನು.) ಆಗ ಮಹಾತೇಜಸ್ವಿಯಾದ ಪ್ರಜಾನಾಥನಾದ ಯುಧಿಷ್ಠಿರನು ವ್ಯಾಸರು ಹೇಳಿದ್ದ ಯೋಗಧರ್ಮವನ್ನೂ ಸ್ಮರಿಸಿಕೊಂಡನು.

ಬಳಿಕ ವಿದ್ವಾಂಸನಾದ ಯುಧಿಷ್ಠಿರನು ಅಲ್ಲಿಯೇ ವಿದುರನ ದಹನಸಂಸ್ಕಾರವನ್ನು ಮಾಡಲು ವಿಚಾರಮಾಡುತ್ತಿದ್ದನು. ಅಷ್ಟರಲ್ಲಿಯೇ ಅಶರೀರವಾಣಿಯು ಹೀಗೆ ಹೇಳಿತು:

ಭೋ ಭೋ ರಾಜನ್ನ ದಗ್ಧವ್ಯಮೇತದ್ವಿದುರಸಂಜ್ಞಕಮ್।
ಕಲೇವರಮಿಹೈವಂ ತೇ ಧರ್ಮ ಏಷ ಸನಾತನಃ ॥೩೨॥

ಲೋಕಾಃ ಸಾನ್ತಾನಿಕಾ ನಾಮ ಭವಿಷ್ಯನ್ತ್ಯಸ್ಯ ಭಾರತ ।
ಯತಿಧರ್ಮಮವಾಪ್ತೋಽಸೌ ನೈವ ಶೋಚ್ಯಃ ಪರಂತಪ ॥೩೩॥

"ಪರಂತಪನೇ! ಯುಧಿಷ್ಠಿರ! ವಿದುರನೆಂಬ ಹೆಸರಿನ ಈ ಶರೀರವನ್ನು ಇಲ್ಲಿ ದಹನಮಾಡಬಾರದು. ವಿದುರನು ಯತಿಧರ್ಮವನ್ನು ಪಾಲಿಸುತ್ತಿದ್ದನು. ಯತಿಧರ್ಮವನ್ನು ಆಶ್ರಯಿಸಿದವರ ಶರೀರಗಳನ್ನು ದಹನಮಾಡದಿರುವುದು ಬಹಳ ಹಿಂದಿನಿಂದ ನಡೆದುಬಂದ ಪದ್ಧತಿಯೇ ಆಗಿದೆ. ಆದುದರಿಂದ ಇವನಿಗಾಗಿ ಶೋಕಪಡಲೂಬಾರದು. ಇಂದ್ರಿಯಗಳೆಂಬ ಶತ್ರುಗಳನ್ನು ಜಯಿಸಿದ್ದ ಇವನಿಗೆ ಸಾಂತಾನಿಕಗಳೆಂಬ ಲೋಕಗಳು ಪ್ರಾಪ್ತವಾಗುತ್ತವೆ."

ಜನಮೇಜಯ! ಅಶರೀರವಾಣಿಯು ಹೀಗೆ ಹೇಳಲು ಯುಧಿಷ್ಠಿರನು ಅಲ್ಲಿಂದ ಹಿಂದಿರುಗಿ ಆಶ್ರಮಕ್ಕೆ ಬಂದನು. ವಿಚಿತ್ರವೀರ್ಯನ ಮಗನಾದ ಧೃತರಾಷ್ಟ್ರನಿಗೆ ಎಲ್ಲ ವಿಷಯಗಳನ್ನೂ ಹೇಳಿದನು. ಯುಧಿಷ್ಠಿರನು ಹೇಳಿದ ಆ ವಾರ್ತೆಯನ್ನು ಕೇಳಿ ತೇಜಸ್ವಿಯಾದ ಧೃತರಾಷ್ಟ್ರರಾಜನೂ, ಜನರೂ, ಭೀಮಸೇನನೇ ಮೊದಲಾದ ಪಾಂಡವರೂ ಅತ್ಯಂತವಿಸ್ಮಿತರಾದರು. ಪರಮಪ್ರೀತನಾದ ರಾಜನು ಧರ್ಮಜನಿಗೆ ಹೇಳಿದನು:

ಆಪೋ ಮೂಲಂ ಫಲಂ ಚೈವ ಮಮೇದಂ ಪ್ರತಿಗೃಹ್ಯತಾಮ್ ॥

"ಮಗು! ಈಗ ನೀನು ನಾನು ಕೊಡಲಿರುವ ಫಲ-ಮೂಲ-ಜಲಗಳನ್ನು ಪ್ರತಿಗ್ರಹಿಸು.

ಯದರ್ಥೋಹಿ ನರೋ ರಾಜಂಸ್ತದರ್ಥೋಽಸ್ಯಾತಿಥಿಃ ಸ್ಮೃತಃ ॥

ಮನುಷ್ಯನು ಯಾವ ವಸ್ತುಗಳನ್ನು ತಾನು ಉಪಯೋಗಿಸುವನೋ–ಆ ವಸ್ತುಗಳಿಂದಲೇ ಅತಿಥಿಯನ್ನೂ ಸತ್ಕರಿಸಬೇಕು."

ಜನಮೇಜಯ! ರಾಜನು ಹೀಗೆ ಹೇಳಿದುದಕ್ಕೆ ಯುಧಿಷ್ಠಿರನು ಹಾಗೆಯೇ ಆಗಲೆಂದು ಹೇಳಿ ಅವನು ಕೊಟ್ಟ ಫಲ-ಮೂಲಗಳನ್ನು ಅನುಜರೊಡನೆ ಭಕ್ಷಿಸಿದನು. ಫಲ-ಮೂಲಗಳನ್ನು ತಿಂದು ನೀರನ್ನು ಕುಡಿದು ಅವರೆಲ್ಲರೂ ವೃಕ್ಷಗಳ ಬುಡದಲ್ಲಿಯೇ ನಿವಾಸಮಾಡಿ ಆ ರಾತ್ರಿಯನ್ನು ಅಲ್ಲಿಯೇ ಕಳೆದರು.

೨೬ನೆಯ ಅಧ್ಯಾಯವು ಮುಗಿಯಿತು.

೨೭ನೆಯ ಅಧ್ಯಾಯ ಆಶ್ರಮವಾಸಪರ್ವ (ಮುಂದುವರಿದಿದೆ.)

ಯುಧಿಷ್ಠಿರಾದಿಗಳಿಂದ ಋಷಿಗಳ ಆಶ್ರಮಗಳ ದರ್ಶನ: ಕಲಶಗಳೇ ಮೊದಲಾದವುಗಳ ಪ್ರದಾನ: ವ್ಯಾಸರ ಆಗಮನ

ವೈಶಂಪಾಯನರು ಹೇಳುತ್ತಾರೆ:

ತತಸ್ತು ರಾಜನ್ನೇತೇಷಾಮಾಶ್ರಮೇ ಪುಣ್ಯಕರ್ಮಣಾಮ್।
ಶಿವಾ ನಕ್ಷತ್ರಸಮ್ಪನ್ನಾ ಸಾ ವ್ಯತೀಯಾಯ ಶರ್ವರೀ ॥೧॥

ಜನಮೇಜಯ! ಬಳಿಕ ಆಶ್ರಮದಲ್ಲಿ ತಂಗಿದ್ದ ಪುಣ್ಯಕರ್ಮಿಗಳಾದ ಅವರೆಲ್ಲರಿಗೂ ನಕ್ಷತ್ರಗಳಿಂದ ಸುಶೋಭಿತವಾಗಿದ್ದ ಮಂಗಳಮಯವಾದ ಆ ರಾತ್ರಿಯು ಸುಖವಾಗಿ ಕಳೆಯಿತು. ಆ ಸಮಯದಲ್ಲಿ ಅಲ್ಲಿದ್ದವರ ಮಧ್ಯದಲ್ಲಿ ವಿಚಿತ್ರವಾದ ಪದಗಳಿಂದಲೂ-ನಾನಾಪ್ರಕಾರವಾದ ಶ್ರುತಿಗಳಿಂದಲೂ ಯುಕ್ತವಾದ, ಧರ್ಮ ಮತ್ತು ಅರ್ಥಗಳಿಗೆ ಸಂಬಂಧಿಸಿದ ಸಂಭಾಷಣೆಗಳು ನಡೆಯುತ್ತಿದ್ದುವು. ಪಾಂಡವರು ಬಹುಮೂಲ್ಯವಾದ ಹಾಸಿಗೆಗಳೆಲ್ಲವನ್ನೂ ಪರಿತ್ಯಜಿಸಿ ತಾಯಿಯ ಸುತ್ತಲೂ ನೆಲದ ಮೇಲೆಯೇ ಮಲಗಿದ್ದರು. ಮಹಾತ್ಮನಾದ ಧೃತರಾಷ್ಟ್ರರಾಜನು ಯಾವ ಆಹಾರವನ್ನು ಸೇವಿಸಿದನೋ ಅದೇ ಆಹಾರವನ್ನೇ ಪಾಂಡವರೂ ಸೇವಿಸಿ ಆ ರಾತ್ರಿಯನ್ನು ಕಳೆದರು.

ರಾತ್ರಿಯು ಕಳೆಯುತ್ತಲೇ ಧರ್ಮರಾಜನು ಪ್ರಾತಃಕಾಲದಲ್ಲಿ ಮಾಡಬೇಕಾದ ನಿತ್ಯಕರ್ಮಗಳನ್ನು ಮುಗಿಸಿಕೊಂಡು ಧೃತರಾಷ್ಟ್ರನ ಅನುಮತಿಯನ್ನು ಪಡೆದು ಅನುಜರೊಡನೆಯೂ, ಅಂತಃಪುರದ ಪರಿವಾರದೊಡನೆಯೂ, ಸೇವಕರೊಡನೆಯೂ, ಪುರೋಹಿತರೊಡನೆಯೂ ಅನಾಯಾಸವಾಗಿ ಅಲ್ಲಲ್ಲಿದ್ದ ಮಹರ್ಷಿಗಳ ಆಶ್ರಮಗಳನ್ನು ನೋಡಿದನು. ಆ ಆಶ್ರಮಗಳಲ್ಲಿ ಯುಧಿಷ್ಠಿರಾದಿಗಳು ಯಜ್ಞವೇದಿಗಳನ್ನೂ ಪ್ರಜ್ವಲಿಸುತ್ತಿರುವ ಅಗ್ನಿಗಳನ್ನೂ ನೋಡಿದರು. ಮುನಿಗಳು ಸ್ನಾನಮಾಡಿ ವೇದಿಗಳ ಸಮೀಪದಲ್ಲಿ ಕುಳಿತು ಅಗ್ನಿಗಳಿಗೆ ಆಹುತಿಗಳನ್ನು ಕೊಡುತ್ತಿದ್ದುದನ್ನೂ ನೋಡಿದರು. ಅರಣ್ಯದ ಹೂವುಗಳಿಂದಲೂ, ಘೃತಾಹುತಿಗಳಿಂದಲೂ ಮೇಲೇಳುತ್ತಿದ್ದ ಧೂಮದಿಂದಲೂ ಆ ವೇದಿಕೆಗಳು ಶೋಭಾಯಮಾನವಾಗಿ ಕಾಣುತ್ತಿದ್ದುವು.

ಅಲ್ಲಿ ನಿರಂತರವಾಗಿ ವೇದಘೋಷವಾಗುತ್ತಿದ್ದುದರಿಂದ ಆ ವೇದಿಗಳೇ ವೇದಮಯವಾದ ಶರೀರಗಳಿಂದ ಕೂಡಿರುವಂತೆಯೇ ಕಾಣುತ್ತಿದ್ದುವು. ಯಾವಾಗಲೂ ಆ ವೇದಿಗಳು ಮುನಿಗಳ ಸಂಪರ್ಕವನ್ನು ಹೊಂದಿರುತ್ತಿದ್ದುವು. ಅಂತಹ ಅನೇಕ ವೇದಿಗಳನ್ನು ಆಶ್ರಮಮಂಡಲದಲ್ಲಿ ಯುಧಿಷ್ಠಿರಾದಿಗಳು ನೋಡಿದರು.

ಆ ಆಶ್ರಮಮಂಡಲದ ಹಲ-ಕೆಲವು ಭಾಗಗಳಲ್ಲಿ ಮೃಗಗಳ ಸಮೂಹ ಗಳು ಯಾವ ವಿಧವಾದ ಭಯವೂ ಇಲ್ಲದೇ ಶಾಂತವಾಗಿ ಕುಳಿತಿರುತ್ತಿದ್ದುವು. ಪಕ್ಷಿಗಳ ಸಮೂಹಗಳು ಶಂಕೆಯಿಲ್ಲದೇ ಯಾವ ಆತಂಕವೂ ಇಲ್ಲದೇ ಉಚ್ಚಸ್ವರದಿಂದ ಕಲ-ಕಲನಿನಾದಗಳನ್ನು ಮಾಡುತ್ತಿದ್ದುವು. ನವಿಲುಗಳ ಕೇಕಾರವಗಳಿಂದಲೂ, ಚಾತಕಪಕ್ಷಿಗಳ ಅವ್ಯಕ್ತವಾದ ಮಧುರಧ್ವನಿ ಗಳಿಂದಲೂ, ಕೋಗಿಲೆಗಳ ಕಿವಿಗಳಿಗಿಂಪಾದ ಮತ್ತು ಸುಖಕರವಾದ ಕುಹೂ-ಕುಹೂಶಬ್ದಗಳಿಂದಲೂ, ಕೆಲವು ಕಡೆಗಳಲ್ಲಿ ಅಧ್ಯಯನಶೀಲರಾಗಿದ್ದ ಬ್ರಾಹ್ಮಣರ ವೇದಘೋಷಗಳಿಂದಲೂ–ಆಶ್ರಮಮಂಡಲವು ಸಮಲಂಕೃತ ವಾಗಿದ್ದಿತು. ಫಲ-ಮೂಲಗಳನ್ನೇ ಆಹಾರವನ್ನಾಗಿ ಸೇವಿಸುವ ಅನೇಕಮಹಾ ಪುರುಷರಿಂದ ಅದು ಶೋಭಿಸುತ್ತಿದ್ದಿತು. ಇಂತಹ ಆಶ್ರಮಮಂಡಲವನ್ನು ಯುಧಿಷ್ಠಿರಪ್ರಮುಖರಾದ ಪಾಂಡವರು ನೋಡಿದರು.

ಬಳಿಕ ಯುಧಿಷ್ಠಿರನು ತಪಸ್ವಿಗಳ ಉಪಯೋಗಕ್ಕಾಗಿ ಹಸ್ತಿನಾಪುರದಿಂದ ತಂದಿದ್ದ ಸುವರ್ಣಮಯವಾದ ಕಲಶಗಳನ್ನೂ, ತಾಮ್ರದ ಕಲಶಗಳನ್ನೂ, ಮೃಗಚರ್ಮಗಳನ್ನೂ, ಕಂಬಲಗಳನ್ನೂ, ಸ್ರುಕ್-ಸ್ರುವಗಳನ್ನೂ, ಕಮಂಡಲು ಗಳನ್ನೂ, ಸ್ಥಾಲಿಗಳನ್ನೂ, ಮಣ್ಣಿನಪಾತ್ರೆಗಳನ್ನೂ ಮತ್ತು ಋಷಿಗಳು ಯಾವ ಪಾತ್ರೆಗಳನ್ನು ಅಪೇಕ್ಷಿಸುವರೋ ಅಂತಹ ಪಾತ್ರೆಗಳನ್ನೂ ಋಷಿಗಳಿಗೆ ಕೊಟ್ಟನು.

ಹೀಗೆ ಧರ್ಮಾತ್ಮನಾದ ಯುಧಿಷ್ಠಿರನು ಆಶ್ರಮಮಂಡಲದ ಎಲ್ಲ ಕಡೆಗಳಲ್ಲಿಯೂ ಸಂಚರಿಸಿ ಋಷಿಗಳೆಲ್ಲರಿಗೂ ತಾನು ತಂದಿದ್ದ ವಸ್ತುಗಳನ್ನೂ ಧನವನ್ನೂ ಹಂಚಿಕೊಟ್ಟು ಧೃತರಾಷ್ಟ್ರನ ಆಶ್ರಮಕ್ಕೆ ಹಿಂದಿರುಗಿದನು.

ನಿತ್ಯಕರ್ಮಗಳನ್ನು ಮುಗಿಸಿ ಏಕಾಗ್ರಚಿತ್ತನಾಗಿ ಗಾಂಧಾರಿಯೊಡನೆ ಕುಳಿತಿದ್ದ ರಾಜನನ್ನು ಯುಧಿಷ್ಠಿರನು ನೋಡಿದನು. ಅವನಿಗೆ ಸ್ವಲ್ಪದೂರದಲ್ಲಿ

ಶಿಷ್ಟಾಚಾರದ ಪರಿಪಾಲಕಳಾಗಿದ್ದ ತಾಯಿಯಾದ ಕುಂತಿಯು ಶಿಷ್ಯ ಳೋಪಾದಿಯಲ್ಲಿ ವಿನಯಭಾವದಿಂದ ನಿಂತಿರುವುದನ್ನೂ ಧರ್ಮಾತ್ಮನಾದ ಯುಧಿಷ್ಠಿರನು ನೋಡಿದನು. ಯುಧಿಷ್ಠಿರನು ತನ್ನ ನಾಮಧೇಯವನ್ನು ಹೇಳಿಕೊಂಡು ರಾಜನಿಗೆ ನಮಸ್ಕರಿಸಿ ಅವನನ್ನು ಯಥೋಚಿತವಾಗಿ ಪೂಜಿಸಿದನು. ರಾಜನು-'ನಿಷೀದ' 'ಕುಳಿತುಕೋ'-ಎಂದು ಹೇಳಿ ಕುಳಿತುಕೊಳ್ಳಲು ಅನುಜ್ಞೆಯನ್ನಿತ್ತನಂತರ ಯುಧಿಷ್ಠಿರನು ದರ್ಭಾಸನದಲ್ಲಿ ಕುಳಿತುಕೊಂಡನು. ಭೀಮಸೇನನೇ ಮೊದಲಾದ ಉಳಿದ ಪಾಂಡವರು ಧೃತರಾಷ್ಟ್ರನಿಗೆ ಅಭಿವಾದನಪೂರ್ವಕವಾಗಿ ಕಾಲುಗಳನ್ನು ಮುಟ್ಟಿ ನಮಸ್ಕರಿಸಿ ಅವನ ಅನುಜ್ಞೆಯನ್ನು ಪಡೆದು ಕುಳಿತುಕೊಂಡರು. ಅವರೆಲ್ಲರಿಂದಲೂ ಪರಿವೃತನಾಗಿದ್ದ ಧೃತರಾಷ್ಟ್ರನು ಬಹಳವಾಗಿ ಶೋಭಿಸುತ್ತಿದ್ದನು. ದೇವತೆಗಳಿಂದ ಪರಿವೃತನಾದ, ಪ್ರದೀಪ್ತವಾದ ಬ್ರಹ್ಮತೇಜಸ್ಸಿನಿಂದ ಕೂಡಿರುವ ಬೃಹಸ್ಪತಿಯಂತೆ-ಧೃತರಾಷ್ಟ್ರನು ಕಂಗೊಳಿಸುತ್ತಿದ್ದನು.

ಯುಧಿಷ್ಠಿರಾದಿಗಳು ಹಾಗೆ ರಾಜನ ಸುತ್ತಲೂ ಕುಳಿತಿರಲಾಗಿ, ಕುರುಕ್ಷೇತ್ರನಿವಾಸಿಗಳಾದ ಶತಯೂಪನೇ ಮೊದಲಾದ ರಾಜರ್ಷಿಗಳೂ ಮತ್ತು ಮಹರ್ಷಿಗಳೂ ಅಲ್ಲಿಗೆ ಆಗಮಿಸಿದರು. ಪೂಜ್ಯರಾದ, ವಿಪ್ರಶ್ರೇಷ್ಠರಾದ, ದೇವರ್ಷಿಗಳ ಸಮೂಹಗಳಿಂದ ಸೇವಿಸಲ್ಪಡುವ ಮಹಾತೇಜಸ್ವಿಗಳಾದ ಭಗವಂತರಾದ ವ್ಯಾಸರೂ ಶಿಷ್ಯರೊಡನೆ ಅಲ್ಲಿಗೆ ಬಂದು ರಾಜನಿಗೆ ದರ್ಶನವನ್ನಿತ್ತರು. ಆ ಸಮಯದಲ್ಲಿ ಕುರುರಾಜನಾದ ಧೃತರಾಷ್ಟ್ರ, ವೀರ್ಯವಂತನಾದ ಮತ್ತು ಕುಂತಿಯ ಮಗನಾದ ಯುಧಿಷ್ಠಿರ, ಭೀಮಸೇನನೇ ಮೊದಲಾದ ಪಾಂಡವರು–ಇವರೆಲ್ಲರೂ ಮೇಲೆದ್ದು ಆಗಮಿಸಿದ ಮಹರ್ಷಿಗಳಿಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸಿದರು. ಶತಯೂಪಾದಿರಾಜರ್ಷಿಗಳಿಂದ ಸಮಾವೃತರಾಗಿದ್ದ ಆಗ ತಾನೇ ಆಗಮಿಸಿದ ವ್ಯಾಸರು ಮಹೀಪಾಲನಾದ ಧೃತರಾಷ್ಟ್ರನಿಗೆ-'ಆಸ್ಯತಾಂ' 'ಕುಳಿತುಕೋ'-ಎಂದು ಹೇಳಿದರು. ಬಳಿಕ ವ್ಯಾಸರು–ದರ್ಭೆಯನ್ನು ಹಾಸಿ ಕೃಷ್ಣಾಜಿನವನ್ನು ಹೊದಿಸಿ, ತಮಗಾಗಿಯೇ ಸಿದ್ಧಪಡಿಸಲಾಗಿದ್ದ ಶ್ರೇಷ್ಠವಾದ ಕುಶಾಸನದಲ್ಲಿ ವಿರಾಜಮಾನರಾದರು. ವ್ಯಾಸರ ಅನುಮತಿಯನ್ನು ಪಡೆದು ಮಹಾತೇಜಸ್ವಿಗಳಾದ ಬ್ರಾಹ್ಮಣರು ಸುತ್ತಲೂ ಇದ್ದ ಕುಶಾಸನಗಳಲ್ಲಿ ಕುಳಿತುಕೊಂಡರು.

೨೭ನೆಯ ಅಧ್ಯಾಯವು ಮುಗಿಯಿತು.

ವ್ಯಾಸಮಹರ್ಷಿಗಳಿಂದ ಧೃತರಾಷ್ಟ್ರನ ಕುಶಲಪ್ರಶ್ನೆ: ವಿದುರ-ಯುಧಿಷ್ಠಿರರ ಧರ್ಮರೂಪದ ಪ್ರತಿಪಾದನೆ: ಧೃತರಾಷ್ಟ್ರನಿಗೆ ವ್ಯಾಸರಿಂದ ವರಪ್ರದಾನ

ವೈಶಂಪಾಯನರು ಹೇಳುತ್ತಾರೆ:

ತತಃ ಸಮುಪವಿಷ್ಟೇಷು ಪಾಣ್ಡವೇಷು ಮಹಾತ್ಮಸು ।
ವ್ಯಾಸಃ ಸತ್ಯವತೀಪುತ್ರ ಇದಂ ವಚನಮಬ್ರವೀತ್ ॥೧॥

ಜನಮೇಜಯ! ಮಹಾತ್ಮರಾದ ಪಾಂಡವರೆಲ್ಲರೂ ಕುಳಿತುಕೊಂಡ ನಂತರ ಸತ್ಯವತಿಯ ಮಕ್ಕಳಾದ ವ್ಯಾಸರು ಈ ಮಾತನ್ನು ಹೇಳಿದರು:

"ಮಹಾಬಾಹುವೇ! ಧೃತರಾಷ್ಟ್ರ! ನಿನ್ನ ತಪಸ್ಸು ದಿನ-ದಿನಕ್ಕೂ ವರ್ಧಿಸುತ್ತಿರುವುದೇ? ವನವಾಸದಲ್ಲಿ ನಿನ್ನ ಮನಸ್ಸು ಪ್ರಸನ್ನವಾಗಿರುವುದೇ? ಪುತ್ರರ ವಿನಾಶದಿಂದ ಉಂಟಾಗಿದ್ದ ಶೋಕವು ಈಗ ಇಲ್ಲವಲ್ಲವೇ? ನಿನ್ನ ಜ್ಞಾನೇಂದ್ರಿಯಗಳೆಲ್ಲವೂ ನಿರ್ಮಲವಾಗಿರುವುವಲ್ಲವೇ? ದೃಢವಾದ ಬುದ್ಧಿಯಿಂದ ಅರಣ್ಯವಾಸದ ಕಠೋರನಿಯಮಗಳನ್ನು ಪಾಲಿಸುತ್ತಿರುವೆಯಲ್ಲವೇ? ಸೊಸೆಯಾದ ಗಾಂಧಾರಿಯು ಹಿಂದಿನಂತೆ ಈಗಲೂ ಶೋಕದಿಂದ ವ್ಯಾಪ್ತಳಾಗಿಲ್ಲವಲ್ಲವೇ? ಗಾಂಧಾರಿಯು ಮಹಾಪ್ರಾಜ್ಞಳು. ಮಹಾಬುದ್ಧಿಮತಿಯು. ಧರ್ಮಾರ್ಥಗಳನ್ನು ಚೆನ್ನಾಗಿ ತಿಳಿದವಳು. ಹುಟ್ಟು-ಸಾವುಗಳ ತತ್ತ್ವವನ್ನು ತಿಳಿದಿರತಕ್ಕವಳು. ಇವಳೀಗ ದುಃಖಪಡುತ್ತಿಲ್ಲವಲ್ಲವೇ? ತನ್ನ ಮಕ್ಕಳನ್ನೇ ಪರಿತ್ಯಜಿಸಿ ಅರಣ್ಯಕ್ಕೆ ಬಂದು ಗುರುಜನರ ಶುಶ್ರೂಷೆಯಲ್ಲಿ ನಿರತಳಾಗಿರುವ ಕುಂತಿಯು ಅಹಂಕಾರಶೂನ್ಯಳಾಗಿ ನಿನ್ನನ್ನು ಶುಶ್ರೂಷೆಮಾಡುತ್ತಿರುವಳಲ್ಲವೇ? ನೀನು ಧರ್ಮಪುತ್ರನಾದ ಯುಧಿಷ್ಠಿರನನ್ನು ಪ್ರತಿಯಾಗಿ ಅಭಿನಂದಿಸಿದೆಯಾ? ಭೀಮಾರ್ಜುನ-ನಕುಲ-ಸಹದೇವರನ್ನು ಸಂತೈಸಿದೆಯಾ? ಇವರನ್ನು ನೋಡಿದೊಡನೆಯೇ ನೀನು ಸಂತೋಷಿಸಿದೆಯಾ? ನಿನ್ನ ಮನಸ್ಸು ಈಗ ನಿರ್ಮಲವಾಗಿರುವುದೇ? ನೀನು ಜ್ಞಾನವನ್ನು ಪಡೆದುಕೊಂಡನಂತರ ನಿನ್ನ ಮನೋಭಾವವು ಶುದ್ಧವಾಗಿರುವುದೇ?

ಏತದ್ಧಿ ತ್ರಿತಯಂ ಶ್ರೇಷ್ಠಂ ಸರ್ವಭೂತೇಷು ಭಾರತ।
ನಿರ್ವೈರತಾ ಮಹಾರಾಜ ಸತ್ಯಮಕ್ರೋಧ ಏವ ಚ ॥೬॥

ಮಹಾರಾಜ! ಯಾರೊಡನೆಯೂ ದ್ವೇಷವನ್ನು ಕಟ್ಟಿಕೊಳ್ಳದೇ ಇರುವುದು, ಸತ್ಯನಿಷ್ಠೆ ಮತ್ತು ಕೋಪಗೊಳ್ಳದಿರುವುದು–ಇವು ಮೂರು ಎಲ್ಲ ಪ್ರಾಣಿಗಳಲ್ಲಿಯೂ ಇರಬೇಕಾದ ಶ್ರೇಷ್ಠವಾದ ಗುಣಗಳೆಂದು ಹೇಳುತ್ತಾರೆ.

ಭಾರತನೇ! ಅರಣ್ಯದಲ್ಲಿರುವ ಕಂದ-ಮೂಲಗಳು ನಿನ್ನ ವಶದಲ್ಲಿರಲಿ; ಒಂದು ವೇಳೆ ಅವೂ ಸಿಕ್ಕದೇ ಉಪವಾಸಮಾಡಬೇಕಾಗುವ ಸಂದರ್ಭವೇ ಒದಗಿಬರಲಿ–ಅದರಿಂದ ನೀನು ಸ್ವಲ್ಪವಾದರೂ ವಿಮೋಹಿತನಾಗುತ್ತಿಲ್ಲವಲ್ಲವೇ?

ಯಮಧರ್ಮಸ್ವರೂಪನೇ ಆಗಿದ್ದ ಮಹಾತ್ಮನಾದ ವಿದುರನು ಈ ವಿಧಾನದಿಂದಲೇ (ತನ್ನ ಕರಣ-ಕಳೇಬರಗಳೆಲ್ಲವನ್ನೂ ಧರ್ಮರಾಜನಲ್ಲಿ ಯೋಗಶಕ್ತಿಯ ಮೂಲಕವಾಗಿ ನಿಕ್ಷೇಪಿಸಿ) ಪರಲೋಕವನ್ನೈದಿದ ವಿಷಯವು ನಿನಗೂ ತಿಳಿದೇ ಇದೆ. ಮಾಂಡವ್ಯನ ಶಾಪದಿಂದಾಗಿ ಯಮಧರ್ಮನೇ ವಿದುರನಾಗಿ ಅವತರಿಸಿದ್ದನು. ಅವನು ಮಹಾಯೋಗಿಯೂ, ಮಹಾಬುದ್ಧಿಶಾಲಿಯೂ, ಮಹಾತ್ಮನೂ, ವಿಶಾಲಹೃದಯನೂ ಆಗಿದ್ದನು.

ಬೃಹಸ್ಪತಿರ್ವಾ ದೇವೇಷು ಶುಕ್ರೋ ವಾಪ್ಯಸುರೇಷು ಚ ।
ನ ತಥಾ ಬುದ್ಧಿಸಮ್ಪನ್ನೋ ಯಥಾ ಸ ಪುರುಷರ್ಷಭಃ ॥೧೩॥

ದೇವತೆಗಳಲ್ಲಿ ಮಹಾಬುದ್ಧಿವಂತನೆನಿಸಿದ ಬೃಹಸ್ಪತಿಯೇ ಆಗಲೀ ಅಸುರರಲ್ಲಿ ಮಹಾಮೇಧಾವಿಯೆನಿಸಿದ ಶುಕ್ರನೇ ಆಗಲೀ–ವಿದುರನಷ್ಟು ಬುದ್ಧಿವಂತರಾಗಿರಲಿಲ್ಲ. ನಿಶ್ಚಯವಾಗಿಯೂ ಪುರುಷಶ್ರೇಷ್ಠನಾದ ವಿದುರನು ಅಂತಹ ಪ್ರಾಜ್ಞನಾಗಿದ್ದನು. ಮಾಂಡವ್ಯಮಹರ್ಷಿಯು ಬಹಳ ಕಾಲದಿಂದ ಮಾಡಿದ್ದ ತಪಃಫಲವನ್ನೂ ವ್ಯಯಮಾಡಿ ಸನಾತನನಾದ ಧರ್ಮದೇವತೆಯಾದ ಯಮಧರ್ಮನಿಗೆ ಶಾಪವನ್ನಿತ್ತು ಪರಾಭವಗೊಳಿಸಿದ್ದನು. ಹಿಂದೆ ಬ್ರಹ್ಮನ ಆಜ್ಞಾನುಸಾರವಾಗಿ ಮಹಾಮತಿಯಾದ ವಿದುರನು ನನ್ನಿಂದಲೂ ಮತ್ತು ತನ್ನ ಇಚ್ಛಾಶಕ್ತಿಯಿಂದಲೂ ವಿಚಿತ್ರವೀರ್ಯನ ಕ್ಷೇತ್ರದಲ್ಲಿ (ದಾಸಿಯಲ್ಲಿ) ಹುಟ್ಟಿದನು. ನಿನ್ನ ಒಡಹುಟ್ಟಿದವನಾಗಿದ್ದ ಅವನು ನಿಶ್ಚಯವಾಗಿಯೂ ಸನಾತನವಾದ ದೇವದೇವನಾದ ಯಮಧರ್ಮನೇ ಆಗಿದ್ದನು.

ಧಾರಣಾನ್ಮನಸಾ ಧ್ಯಾನಾದ್ಯಂ ಧರ್ಮಂ ಕವಯೋ ವಿದುಃ ॥೧೬॥

ಧರ್ಮವನ್ನು ಧಾರಣೆಮಾಡಿ ಮನಸ್ಸಿನಲ್ಲಿ ಯಾವಾಗಲೂ ಧರ್ಮದ ವಿಷಯವಾಗಿಯೇ ಯೋಚಿಸುತ್ತಿದ್ದ ಆ ವಿದುರನನ್ನು ವಿದ್ವಾಂಸರು ಧರ್ಮನೆಂದೇ ತಿಳಿದಿದ್ದರು.

ಸತ್ಯೇನ ಸಂವರ್ಧಯತಿ ಯೋ ದಮೇನ ಶಮೇನ ಚ ।
ಅಹಿಂಸಯಾ ಚ ದಾನೇನ ತಪ್ಯಮಾನಃ ಸನಾತನಃ ॥೧೭॥

ಯಾವನು ಸತ್ಯದಿಂದಲೂ, ಇಂದ್ರಿಯಸಂಯಮದಿಂದಲೂ, ಮನೋನಿಗ್ರಹದಿಂದಲೂ, ಅಹಿಂಸೆಯಿಂದಲೂ, ದಾನದಿಂದಲೂ ತಪಸ್ಸನ್ನು ಮಾಡುತ್ತಾ ಜಗತ್ಕಲ್ಯಾಣವನ್ನು ವೃದ್ಧಿಪಡಿಸುವನೋ-ಅವನೇ ಸನಾತನ ಧರ್ಮಸ್ವರೂಪನು. ವಿದುರನೂ ಅಂತಹ ಸನಾತನನೇ ಆಗಿದ್ದನು. ಪ್ರಾಜ್ಞನಾದ ಮಹಾಬುದ್ಧಿಶಾಲಿಯಾದ ಯಾವನ ಯೋಗಬಲದಿಂದ ಕುರುರಾಜನಾದ ಈ ಯುಧಿಷ್ಠಿರನು ಹುಟ್ಟಿದನೋ-ಅವನೇ ಧರ್ಮನು. ಅವನೇ ವಿದುರಸ್ವರೂಪನು.

ಯಥಾ ವಹ್ನಿರ್ಯಥಾ ವಾಯುರ್ಯಥಾಪಃ ಪೃಥಿವೀ ಯಥಾ।
ಯಥಾಕಾಶಂ ತಥಾ ಧರ್ಮ ಇಹ ಚಾಮುತ್ರ ಚ ಸ್ಥಿತಃ ॥೧೮॥

ಯಾವ ರೀತಿಯಲ್ಲಿ ಅಗ್ನಿ-ವಾಯು-ಜಲ-ಪೃಥಿವೀ-ಆಕಾಶಗಳು ಇಹ-ಪರಗಳೆರಡರಲ್ಲಿಯೂ ಇವೆಯೋ–ಹಾಗೆಯೇ ಧರ್ಮನೂ ಎರಡು ಲೋಕಗಳಲ್ಲಿಯೂ ವ್ಯಾಪ್ತನಾಗಿದ್ದಾನೆ.

ಸರ್ವಗಶ್ಚೈವ ರಾಜೇನ್ದ್ರ ಸರ್ವಂ ವ್ಯಾಪ್ಯ ಚರಾಚರಮ್।
ದೃಶ್ಯತೇ ದೇವದೇವೈಃ ಸಸಿದ್ಧೈರ್ನಿರ್ಮುಕ್ತಕಲ್ಮಷೈಃ ॥೨೦॥

ಎಲ್ಲ ಕಡೆಗಳಲ್ಲಿಯೂ ಇರುವ ಧರ್ಮನು ಸಮಸ್ತವಾದ ಚರಾಚರಗಳನ್ನೂ ವ್ಯಾಪಿಸಿಕೊಂಡಿರುವನೆಂಬುದನ್ನು ದೇವಾಧಿದೇವತೆಗಳೂ ಪಾಪದಿಂದ ಮುಕ್ತರಾದ ಸಿದ್ಧರೂ ಕಂಡುಕೊಂಡಿದ್ದಾರೆ.

ಯೋ ಹಿ ಧರ್ಮಃ ಸ ವಿದುರೋ ವಿದುರೋ ಯಃ ಸ ಪಾಣ್ಡವಃ ।
ಸ ಏಷ ರಾಜನ್ದೃಶ್ಯಸ್ತೇ ಪಾಣ್ಡವಃ ಪ್ರೇಷ್ಯವತ್ಸ್ಥಿತಃ ॥೨೧॥

ಯಾವನು ಧರ್ಮನೋ ಅವನೇ ವಿದುರನು. ಯಾವನು ವಿದುರನೋ ಅವನೇ ನಿನ್ನ ಮುಂದೆ ಸೇವಕನಂತೆ ನಿಂತಿರುವ ಈ ಯುಧಿಷ್ಠಿರನು.

ಮಹಾಯೋಗಬಲದಿಂದ ಕೂಡಿದ್ದ, ಶ್ರೇಷ್ಠವಾದ ಬುದ್ಧಿ ಯುಳ್ಳವನಾಗಿದ್ದ ನಿನ್ನ ಸಹೋದರನು ಮಹಾತ್ಮನಾದ ಕೌಂತೇಯನನ್ನು ನೋಡಿದೊಡನೆಯೇ ಅವನಲ್ಲಿ ಪ್ರವೇಶಿಸಿಬಿಟ್ಟನು. ನಿನ್ನನ್ನು ಕೂಡ ನಾನು ಅತ್ಯಲ್ಪಕಾಲದಲ್ಲಿಯೇ ಶ್ರೇಯಸ್ಸಿಗೆ ಭಾಗಿಯನ್ನಾಗಿ ಮಾಡುತ್ತೇನೆ. ನಿನ್ನ ಸಂಶಯವನ್ನು ಬಗೆಹರಿಸುವ ಸಲುವಾಗಿಯೇ ನಾನಿಲ್ಲಿಗೆ ಬಂದಿರುವೆನೆಂದು ತಿಳಿ.

ನ ಕೃತಂ ಯೈಃ ಪುರಾ ಕೈಶ್ಚಿತ್ಕರ್ಮ ಲೋಕೇ ಮಹರ್ಷಿಭಿಃ।
ಆಶ್ಚರ್ಯಭೂತಂ ತಪಸಃ ಫಲಂ ತದ್ದರ್ಶಯಾಮಿ ವಃ ॥೨೪॥

ಈ ಹಿಂದೆ ಯಾವ ಮಹರ್ಷಿಗಳೂ ಮಾಡದೇ ಇರುವ ಕಾರ್ಯವನ್ನು ನಾನು ಮಾಡುತ್ತೇನೆ. ಆಶ್ಚರ್ಯಕರವಾದ ತಪಸ್ಸಿನ ಫಲವನ್ನು ನಿಮಗೆ ತೋರಿಸುತ್ತೇನೆ.

ಕಿಮಿಚ್ಛಸಿ ಮಹೀಪಾಲ ಮತ್ತಃ ಪ್ರಾಪ್ತುಮಭೀಪ್ಸಿತಮ್।
ದ್ರಷ್ಟುಂ ಸ್ಪ್ರಷ್ಟುಮಥಶ್ರೋತುಂ ತತ್ಕರ್ತಾಸ್ಮಿ ತವಾನಘ ॥೨೫॥

ಪಾಪರಹಿತನೇ! ಹೇಳು. ನನ್ನಿಂದ ಯಾವ ವಸ್ತುವನ್ನು ಪಡೆಯಲು ಬಯಸಿರುವೆ? ಯಾರನ್ನಾದರೂ ನೋಡಲು, ಯಾವುದನ್ನಾದರೂ ಮುಟ್ಟಲು, ಏನನ್ನಾದರೂ ಕೇಳಲು ಇಚ್ಛಿಸಿರುವೆಯಾ? ನೀನು ಯಾವುದನ್ನೇ ಅಪೇಕ್ಷಿಸಿದರೂ ನಾನು ಅದನ್ನು ಅನುಗ್ರಹಿಸುತ್ತೇನೆ."

೨೮ನೆಯ ಅಧ್ಯಾಯವು ಮುಗಿಯಿತು.

ಮೃತರಾದ ಪುತ್ರ-ಮಿತ್ರ-ಬಂಧುಗಳ ವಿಷಯವಾಗಿ ಧೃತರಾಷ್ಟ್ರನ ಶೋಕ: ತಮ್ಮ ಹತಪುತ್ರರನ್ನು ಕಾಣಲು ಗಾಂಧಾರೀ-ಕುಂತಿಯರ ಅಪೇಕ್ಷೆ: ವ್ಯಾಸರಲ್ಲಿ ಪ್ರಾರ್ಥನೆ

ಜನಮೇಜಯನು ಹೇಳುತ್ತಾನೆ:

ವನವಾಸಂ ಗತೇ ವಿಪ್ರ ಧೃತರಾಷ್ಟ್ರೇ ಮಹೀಪತೌ।
ಸಭಾರ್ಯೇ ನೃಪಶಾರ್ದೂಲೇ ವಧ್ವಾ ಕುನ್ತ್ಯಾ ಸಮನ್ವಿತೇ ॥೧॥
ವಿದುರೇ ಚಾಪಿ ಸಂಸಿದ್ಧೇ ಧರ್ಮರಾಜಂ ವ್ಯಪಾಶ್ರಿತೇ।
ವಸತ್ಸು ಪಾಣ್ಡುಪುತ್ರೇಷು ಸರ್ವೇಷ್ವಾಶ್ರಮಮಣ್ಡಲೇ ॥೨॥
ಯತ್ತದಾಶ್ಚರ್ಯಮಿತಿ ವೈ ಕರಿಷ್ಯಾಮೀತ್ಯುವಾಚ ಹ ।
ವ್ಯಾಸಃ ಪರಮತೇಜಸ್ವೀ ಮಹರ್ಷಿಸ್ತದ್ವದಸ್ವ ಮೇ ॥೩॥

"ವೈಶಂಪಾಯನರೇ! ಮಹೀಪತಿಯಾದ ಧೃತರಾಷ್ಟ್ರನು ಭಾರ್ಯಾಸಮೇತನಾಗಿ ಸೊಸೆಯಾದ ಕುಂತಿಯೊಡನೆ ಅರಣ್ಯಕ್ಕೆ ಹೋದನು. ಅವನೊಡನೆಯೇ ಹೋದ ವಿದುರನು ಸಿದ್ಧಿಯನ್ನು ಪಡೆದು ಧರ್ಮರಾಜನಲ್ಲಿ ಸೇರಿಕೊಂಡನು. ಧೃತರಾಷ್ಟ್ರನೇ ಮೊದಲಾದವರನ್ನು ನೋಡಲು ಹೋದ ಪಾಂಡವರು ಆಶ್ರಮಮಂಡಲದಲ್ಲಿ ವಾಸಮಾಡುತ್ತಿದ್ದಾಗ ಮಹಾತೇಜಸ್ವಿಗಳಾದ ವ್ಯಾಸರು ಅಲ್ಲಿಹೋಗಿ ಧೃತರಾಷ್ಟ್ರನೊಡನೆ-'ಯತ್ತದಾಶ್ಚರ್ಯಮಿತಿ ವೈ ತತ್ಕರಿಷ್ಯಾಮಿ–ಆಶ್ಚರ್ಯಜನಕವಾದ ಘಟನೆಯನ್ನು ಮಾಡಿ ತೋರಿಸುತ್ತೇನೆ'–ಎಂದು ಹೇಳಿದರು. ಇಲ್ಲಿಯವರೆಗೂ ನೀವು ಆಖ್ಯಾನವನ್ನು ಹೇಳಿಕೊಂಡು ಬಂದಿರುವಿರಿ. ಈಗ ನನಗೆ ವ್ಯಾಸರು ತೋರಿಸಿದ ಆಶ್ಚರ್ಯಕರವಾದ ಘಟನೆಯನ್ನೂ ಹೇಳುವ ಕೃಪೆಮಾಡಿರಿ.

ಧರ್ಮದ ಮರ್ಯಾದೆಯನ್ನು ಯಾವಾಗಲೂ ಮೀರದ ನರಪತಿಯಾದ ಯುಧಿಷ್ಠಿರನು ಎಷ್ಟು ಕಾಲದವರೆಗೆ ಪರಿವಾರದೊಡನೆ ಅರಣ್ಯದಲ್ಲಿದ್ದನು? ಮಹಾತ್ಮರಾದ ಆ ಪಾಂಡವರು ಸೈನಿಕರೊಡನೆಯೂ ಅಂತಃಪುರದ ಸ್ತ್ರೀಯರೊಡನೆಯೂ ಯಾವ ವಿಧವಾದ ಆಹಾರವನ್ನು ತಿಂದುಕೊಂಡು ಆ ಅರಣ್ಯದಲ್ಲಿ ವಾಸಮಾಡುತ್ತಿದ್ದರು? ಈ ವಿಷಯವನ್ನೂ ಹೇಳಿರಿ."

ವೈಶಂಪಾಯನರು ಹೇಳುತ್ತಾರೆ:

“ಜನಮೇಜಯ! ಕುರುರಾಜನಾದ ಧೃತರಾಷ್ಟ್ರನು ಪಾಂಡವರಿಗೆ ನಾನಾಪ್ರಕಾರವಾದ ಅನ್ನ-ಪಾನಾದಿಗಳನ್ನು ಉಪಭುಂಜಿಸುವಂತೆ ಆಜ್ಞೆ ಮಾಡಿದ್ದನು. ಅವನ ಆಜ್ಞೆಯಂತೆ ಪಾಂಡವರು ನಾನಾವಿಧವಾದ ಉತ್ತಮ ವಾದ ಆಹಾರವನ್ನು ತೆಗೆದುಕೊಳ್ಳುತ್ತಾ ವಿಶ್ರಾಂತಿಯನ್ನು ಪಡೆದುಕೊಳ್ಳುತ್ತಿದ್ದರು. ಅವರು ಹಾಗೆ ಸೈನ್ಯಸಮೇತರಾಗಿ ಅಂತಃಪುರಸ್ತ್ರೀಯರೊಡನೆ ಒಂದು ಮಾಸವನ್ನು ಅರಣ್ಯದಲ್ಲಿ ಕಳೆದರು. ಆ ವೇಳೆಗೆ ಸರಿಯಾಗಿ ನಾನು ಈ ಹಿಂದೆ ಹೇಳಿದಂತೆ ಪೂಜ್ಯರಾದ ವ್ಯಾಸರು ಅಲ್ಲಿಗೆ ಆಗಮಿಸಿದರು. ಧೃತರಾಷ್ಟ್ರನ ಸಮೀಪದಲ್ಲಿ ವ್ಯಾಸರ ಸುತ್ತಲೂ ಕುಳಿತಿದ್ದ ಎಲ್ಲರೂ ವ್ಯಾಸರು ಹೇಳುತ್ತಿದ್ದ ಕಥೆಗಳಲ್ಲಿ ಉತ್ಸುಕರಾಗಿದ್ದಾಗ ಅಲ್ಲಿಗೆ ನಾರದರು, ಪರ್ವತರು, ಮಹಾತಪಸ್ವಿಗಳಾದ ದೇವಲರು, ವಿಶ್ವಾವಸು, ತುಂಬುರು, ಚಿತ್ರಸೇನ-ಇವರೇ ಮೊದಲಾದ ಋಷಿಗಳೂ ಆಗಮಿಸಿದರು. ಧೃತರಾಷ್ಟ್ರನ ಆಜ್ಞೆಯಂತೆ ಮಹಾತಪಸ್ವಿಯಾದ ಕುರುರಾಜನಾದ ಯುಧಿಷ್ಠಿರನು ಅವರೆಲ್ಲರನ್ನೂ ಯಥಾವಿಧಿಯಾಗಿ ಸತ್ಕರಿಸಿದನು. ಹೀಗೆ ಅವರೆಲ್ಲರೂ ಯುಧಿಷ್ಠಿರನಿಂದ ಸತ್ಕೃತರಾಗಿ ಪವಿತ್ರವಾದ ಮತ್ತು ಶ್ರೇಷ್ಠವಾದ ನವಿಲುಗರಿಗಳಿಂದ ಮಾಡಿದ್ದ ಆಸನಗಳಲ್ಲಿ ಕುಳಿತುಕೊಂಡರು. ಅವರೆಲ್ಲರೂ ಕುಳಿತುಕೊಂಡನಂತರ ಮಹಾಮತಿಯಾದ ಕುರುಶ್ರೇಷ್ಠನಾದ ಧೃತರಾಷ್ಟ್ರನು ಪಾಂಡವರಿಂದ ಪರಿವೃತನಾಗಿ ಕುಳಿತುಕೊಂಡನು. ಹಾಗೆಯೇ ಗಾಂಧಾರೀ, ಕುಂತೀ, ಅಂತಃಪುರದಸ್ತ್ರೀಯರೂ ಪಟ್ಟಣದ ಮತ್ತು ದೇಶದ ಸ್ತ್ರೀಯರೊಡನೆ ಅಲ್ಲಲ್ಲಿ ಕುಳಿತುಕೊಂಡರು. ಅಲ್ಲಿ ಪುರಾಣರ್ಷಿಗಳ ಸಂಬಂಧವಾದ ಕಥೆಗಳು ಹೇಳಲ್ಪಡುತ್ತಿದ್ದುವು. ಆ ಕಥಾಪ್ರಸಂಗಗಳೆಲ್ಲವೂ ಮುಗಿದನಂತರ ಪರಮ ಪ್ರೀತರಾದ, ಮಹಾತೇಜಸ್ವಿಗಳಾದ, ಸರ್ವವೇದವಿದರಲ್ಲಿ ಶ್ರೇಷ್ಠರಾದ, ವಾಗ್ಮಿಗಳಲ್ಲಿ ಶ್ರೇಷ್ಠರಾದ ವ್ಯಾಸರು ಪ್ರಜ್ಞಾಚಕ್ಷುವಾದ ಧೃತರಾಷ್ಟ್ರನಿಗೆ ಪುನಃ ಹಿಂದೆ ಹೇಳಿದಂತೆಯೇ ಹೇಳಿದರು: “ಮಹಾರಾಜ! ಪುತ್ರಸಂಬಂಧ ವಾದ ಶೋಕದಿಂದ ಬೆಂದುಹೋಗುತ್ತಿರುವ ನಿನ್ನ ಮನಸ್ಸಿನಲ್ಲಿ ಯಾವ

ಅಪೇಕ್ಷೆಯಿರುವುದೆಂಬುದು ನನಗೆ ತಿಳಿದಿದೆ. ಗಾಂಧಾರಿಯ ಮನಸ್ಸಿನಲ್ಲಿಯೂ ನಿರಂತರವಾಗಿ ಯಾವ ದುಃಖವಿರುವುದೋ, ಕುಂತೀ ಮತ್ತು ದ್ರೌಪದಿಯರ ಮನಸ್ಸಿನಲ್ಲಿಯೂ ಯಾವ ದುಃಖವಿರುವುದೋ–ಅದೂ ನನಗೆ ಗೊತ್ತಿದೆ. ಪುತ್ರನ ವಿನಾಶದಿಂದಾಗಿ ಶ್ರೀಕೃಷ್ಣನ ತಂಗಿಯಾದ ಸುಭದ್ರೆಯು ಯಾವ ತೀವ್ರತರವಾದ ದುಃಖವನ್ನು ಅನುಭವಿಸುತ್ತಿದ್ದಾಳೆಂಬುದನ್ನೂ ನಾನು ತಿಳಿದಿದ್ದೇನೆ. ವಾಸ್ತವವಾಗಿ ಎಲ್ಲರೂ ಇಲ್ಲಿಗೆ ಆಗಮಿಸಿರುವರೆಂಬ ವಿಷಯವನ್ನು ತಿಳಿದೇ ನಾನು ನಿಮ್ಮ ಮನಸ್ಸಿನಲ್ಲಿರುವ ಎಲ್ಲ ಸಂಶಯಗಳನ್ನೂ ನಿವಾರಿಸುವ ಸಲುವಾಗಿ ಇಲ್ಲಿಗೆ ಆಗಮಿಸಿದ್ದೇನೆ. ನಾನು ಬಹಳ ಕಾಲದಿಂದಲೂ ಸಂಗ್ರಹಿಸಿ ಇಟ್ಟುಕೊಂಡಿರುವ ನನ್ನ ತಪಸ್ಸಿನ ಶಕ್ತಿಯನ್ನು ಇಲ್ಲಿ ನೆರೆದಿರುವ ದೇವ-ಗಂಧರ್ವರೂ ಮತ್ತು ಎಲ್ಲ ಮಹರ್ಷಿಗಳೂ ವೀಕ್ಷಿಸಲಿ.

ಮಹಾರಾಜ! ಈಗ ಹೇಳು. ನಾನು ನಿನ್ನ ಯಾವ ಕಾಮನೆಯನ್ನು ಪೂರೈಸಿಕೊಡಲಿ? ನಾನೀಗ ವರವನ್ನು ಕೊಡಲು ಉತ್ಸುಕನಾಗಿದ್ದೇನೆ. ನನ್ನ ತಪಸ್ಸಿನ ಫಲವ (ಶಕ್ತಿಯ)ನ್ನಾದರೂ ನೋಡು."

ಜನಮೇಜಯ! ಮಹಾಬುದ್ಧಿಶಾಲಿಗಳಾದ ವ್ಯಾಸರು ಹೀಗೆ ಹೇಳಲು ಧೃತರಾಷ್ಟ್ರನು ಮುಹೂರ್ತಕಾಲ ಚಿಂತಿಸುತ್ತಿದ್ದು ಅನಂತರ ಹೇಳಿದನು:

ಧನ್ಯೋಽಸ್ಮ್ಯನುಗೃಹೀತಶ್ಚ ಸಫಲಂ ಜೀವಿತಂ ಚ ಮೇ।
ಯನ್ಮೇ ಸಮಾಗಮೋಽದ್ಯೇಹ ಭವದ್ಭಿಃ ಸಹ ಸಾಧುಭಿಃ ॥೨೭॥

"ಮಹರ್ಷಿಗಳೇ! ನಾನು ಧನ್ಯನಾದೆನು. ನಿಮ್ಮಿಂದ ಅನುಗೃಹೀತನಾದೆನು. ನನ್ನ ಜೀವನವು ಇಂದು ಸಾರ್ಥಕ್ಯವನ್ನು ಹೊಂದಿತು. ಏಕೆಂದರೆ: ತಮ್ಮಂತಹ ಸತ್ಪುರುಷರೊಡನೆ ನನ್ನ ಸಮಾಗಮವಾಯಿತಲ್ಲವೇ?

ಅದ್ಯ ಚಾಪ್ಯವಗಚ್ಛಾಮಿ ಗತಿಮಿಷ್ಟಾಮಿಹಾತ್ಮನಃ।
ಬ್ರಹ್ಮಕಲ್ಪೈರ್ಭವದ್ಭಿರ್ಯತ್ಸಮೇತೋಽಹಂ ತಪೋಧನಾಃ ॥೨೮॥

ತಪೋಧನರೇ! ಬ್ರಹ್ಮಕಲ್ಪರಾದ ತಮ್ಮೊಡನೆ ಸಮಾಗಮವಾಗಿರುವುದರಿಂದಲೇ ನನಗೆ ಅಭೀಷ್ಟವಾದ ಗತಿಯು ಬಂದಿರುವುದಾಗಿ ನಾನು ಭಾವಿಸುತ್ತೇನೆ.

ದರ್ಶನಾದೇವ ಭವತಾಂ ಪೂತೋಽಹಂ ನಾತ್ರ ಸಂಶಯಃ।
ವಿದ್ಯತೇ ನ ಭಯಂ ಚಾಪಿ ಪರಲೋಕಾನ್ಮಮಾನಘಾಃ ॥೨೫॥

ತಮ್ಮ ದರ್ಶನಮಾತ್ರದಿಂದಲೇ ನಾನು ಪಾವನನಾಗಿದ್ದೇನೆ. ಇದರಲ್ಲಿ ಸಂಶಯವೇ ಇಲ್ಲ. ಪುಣ್ಯವಂತರಾದ ಮಹರ್ಷಿಗಳೇ! ಈಗ ನನಗೆ ಪರಲೋಕದ ಸಂಬಂಧವಾದ ಯಾವ ಭಯವೂ ಇಲ್ಲ.

ಆದರೆ ಅತ್ಯಂತದುರ್ಬುದ್ಧಿಯವನಾದ, ಮೂರ್ಖನಾದ ದುರ್ಯೋಧನನ ಅನ್ಯಾಯದಿಂದಾಗಿ ನನ್ನ ಎಲ್ಲ ಮಕ್ಕಳೂ ಹತರಾದರು. ಇದನ್ನೇ ನಿತ್ಯವೂ ಸ್ಮರಿಸುತ್ತಿರುವ ಪುತ್ರಪ್ರೇಮಿಯಾದ ನನ್ನ ಮನಸ್ಸಿಗೆ ದುಃಖವಾಗುತ್ತದೆ. ಪಾಪಬುದ್ಧಿಯವನಾದ ದುರ್ಯೋಧನನು ಪಾಪರಹಿತರಾದ ಈ ಪಾಂಡವರನ್ನು ವಂಚಿಸಿದನು. ಗಜಾಶ್ವ-ಪದಾತಿಗಳಿಂದ ಕೂಡಿದ್ದ ಈ ಭೂಮಂಡಲವೇ ಅವನಿಂದ ವಿನಾಶಗೊಳಿಸಲ್ಪಟ್ಟಿತು. ನಾನಾದೇಶಗಳಿಗೆ ಒಡೆಯರಾದ ಮಹಾತ್ಮರಾದ ರಾಜರು ನನ್ನ ಮಗನ ಸಲುವಾಗಿ ಆಗಮಿಸಿ ಯುದ್ಧದಲ್ಲಿ ಮರಣಹೊಂದಿದರು. ಶೂರ-ವೀರರಾದ ಆ ಭೂಪಾಲರು ತಮ್ಮ ತಂದೆ-ತಾಯಿ-ಪತ್ನೀ-ಮನಸ್ಸಿಗೆ ಪ್ರಿಯವನ್ನುಂಟುಮಾಡುವ ಭೋಗವಸ್ತುಗಳು, ಎಲ್ಲಕ್ಕಿಂತಲೂ ಮಿಗಿಲಾಗಿ ಪ್ರಾಣಗಳು–ಇವೆಲ್ಲವನ್ನೂ ಪರಿತ್ಯಜಿಸಿ ಯಮನಲೋಕಕ್ಕೆ ಹೊರಟುಹೋದರು.

ಬ್ರಾಹ್ಮಣಶ್ರೇಷ್ಠರೇ! ಮಿತ್ರರ ಸಲುವಾಗಿ ಯುದ್ಧದಲ್ಲಿ ಪ್ರಾಣಗಳನ್ನು ತೊರೆದು ಅವರೆಲ್ಲರಿಗೂ ಯಾವ ಗತಿಯು ಪ್ರಾಪ್ತವಾಗುತ್ತದೆ? ಅಂತೆಯೇ ಯುದ್ಧದಲ್ಲಿ ಅಸುನೀಗಿದ ನನ್ನ ಮಕ್ಕಳು-ಮೊಮ್ಮಕ್ಕಳಿಗೂ ಯಾವ ಗತಿಯು ಲಭಿಸುತ್ತದೆ? ಶಾಂತನುವಿನ ಮಗನಾದ ಮಹಾಬಲನಾದ ಭೀಷ್ಮನನ್ನೂ ದ್ವಿಜಶ್ರೇಷ್ಠರಾದ ದ್ರೋಣರನ್ನೂ ಸಾವಿಗೀಡುಮಾಡಿದ ಕಾರಣ ನನ್ನ ಮನಸ್ಸು ಸತತವಾಗಿ ಪರಿತಪಿಸುತ್ತಿದೆ. ಸಮಸ್ತಭೂಮಂಡಲವನ್ನೂ ತನ್ನದನ್ನಾಗಿ ಮಾಡಿಕೊಳ್ಳಲು ಬಯಸಿದ್ದ, ಮೂಢನಾದ, ಪಾಪಿಯಾದ, ಅಪವಿತ್ರವಾದ ಬುದ್ಧಿಯನ್ನು ಹೊಂದಿದ್ದ ನನ್ನ ಮಗನು ಪ್ರದೀಪ್ತವಾದ ನನ್ನ ಕುಲವನ್ನೇ ನಾಶಮಾಡಿಬಿಟ್ಟನು. ತಂದೆಯೇ! ಈ ಎಲ್ಲವನ್ನೂ ಸ್ಮರಿಸಿಕೊಂಡು ಹಗಲು-ರಾತ್ರಿ ಚಿಂತಾಗ್ನಿಯಿಂದ ಬೆಂದುಹೋಗುತ್ತಿರುವ, ದುಃಖ-ಶೋಕಪೀಡಿತನಾಗಿರುವ ನನಗೆ ಶಾಂತಿಯೇ ಇಲ್ಲವಾಗಿದೆ.”

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಧೃತರಾಷ್ಟ್ರನ ಪರಿ-ಪರಿಯಾದ ಆ ಗೋಳಾಟವನ್ನು ಕೇಳಿ ಗಾಂಧಾರಿಯ ಶೋಕವು ನವೀಕೃತವಾಯಿತು. (ಮರೆತುಹೋದುದು ಪುನಃ ಜ್ಞಾಪಕಕ್ಕೆ ಬಂದಿತು.) ಹಾಗೆಯೇ ಕುಂತೀ, ದ್ರೌಪದೀ, ಸುಭದ್ರೆ, ಕೌರವನ (ಧೃತರಾಷ್ಟ್ರನ) ಸುಂದರ ಸೊಸೆಯರು–ಇವರ ಶೋಕವೂ ನವೀಕೃತವಾಯಿತು. ಎಲ್ಲರೂ ತಮ್ಮ-ತಮ್ಮ ಮಕ್ಕಳನ್ನೂ, ಮೊಮ್ಮಕ್ಕಳನ್ನೂ, ಗಂಡಂದಿರನ್ನೂ ಸ್ಮರಿಸಿಕೊಂಡು ಶೋಕಿಸತೊಡಗಿದರು. ಪುತ್ರವಿಯೋಗ ಶೋಕದಿಂದ ಕೂಡಿದ್ದ, ಕಣ್ಣುಗಳಿಗೆ ಬಟ್ಟೆಯ ಪಟ್ಟಿಯನ್ನು ಕಟ್ಟಿಕೊಂಡಿದ್ದ ಗಾಂಧಾರಿಯು ಎದ್ದುನಿಂತು ಕೈಗಳನ್ನು ಜೋಡಿಸಿಕೊಂಡು ವ್ಯಾಸರಿಗೆ ಹೇಳಿದಳು:

"ಪೂಜ್ಯರೇ! ಈ ರಾಜನು ತನ್ನ ಹತರಾದ ಪುತ್ರರಿಗಾಗಿ ಶೋಕಪಡುತ್ತಿರುವಂತೆಯೇ ಹದಿನಾರು ವರ್ಷಗಳು ಕಳೆದುಹೋದುವು. ಆದರೆ ಇದುವರೆಗೂ ಇವನಿಗೆ ಶಾಂತಿಯೇ ಇಲ್ಲವಾಗಿ ದಿನಗಳು ಕಳೆದಂತೆ ಇವನ ಶೋಕವು ಹೆಚ್ಚುತ್ತಿದೆ.

ಮಹಾಮುನಿಗಳೇ! ಪುತ್ರಶೋಕದಿಂದ ಕೂಡಿರುವ ಈ ಭೂಪಾಲನು ನಿಟ್ಟುಸಿರುಬಿಡುತ್ತಾ ಇಡೀ ರಾತ್ರಿ ಕುಳಿತೇ ಇರುತ್ತಾನೆ; ನಿದ್ರೆಯನ್ನೇ ಮಾಡುವುದಿಲ್ಲ. ಮಹಾನುಭಾವರೇ! ನೀವು ನಿಮ್ಮ ತಪಸ್ಸಿನ ಬಲದಿಂದ ಸಮಸ್ತಲೋಕಗಳನ್ನೂ ಸೃಷ್ಟಿಸಲು ಸಮರ್ಥರಾಗಿರುವಿರಿ. ಹೀಗಿರುವಾಗ ಲೋಕಾಂತರಗಳಿಗೆ ಹೋಗಿರುವ ಮಕ್ಕಳನ್ನು ಇವನಿಗೆ ತೋರಿಸುವುದು ಯಾವ ಮಹಾ ದೊಡ್ಡ ವಿಷಯ? ಕುರುವಂಶದ ಸೊಸೆಯರಲ್ಲಿ ಅತ್ಯಂತ ಪ್ರಿಯಳಾಗಿರುವ, ಸಹೋದರರರನ್ನೂ ಮಕ್ಕಳನ್ನೂ ಕಳೆದುಕೊಂಡಿರುವ ಈ ದ್ರೌಪದಿಯು ಅತಿಯಾಗಿ ಶೋಕಪಡುತ್ತಿದ್ದಾಳೆ. ಹಾಗೆಯೇ ಮಂಗಳಕರವಾದ ಮಾತುಗಳನ್ನು ಹೇಳುವ ಶ್ರೀಕೃಷ್ಣನ ತಂಗಿಯಾದ ಸುಭದ್ರೆಯು ಅಭಿಮನ್ಯುವಿನ ವಧೆಯಿಂದ ಸಂತಪ್ತಳಾಗಿ ಶೋಕಪಡುತ್ತಿದ್ದಾಳೆ. ಭೂರಿಶ್ರವನಿಗೆ ಅತ್ಯಂತಪ್ರಿಯಭಾರ್ಯೆಯಾದ ಇವಳು ಪತಿವಿಯೋಗಶೋಕದಿಂದ ಪೀಡಿತಳಾಗಿ ಬಹಳವಾಗಿ ದುಃಖಿಸುತ್ತಿದ್ದಾಳೆ. ಇವಳ ಮಾವನಾದ (ಅಜ್ಜಮಾವನಾದ) ಕುರುಶ್ರೇಷ್ಠನಾದ ಬಾಹ್ಲಿಕನೂ ಯುದ್ಧದಲ್ಲಿ ಹತನಾದನು. ಅವನ ಮಗನಾದ ಸೋಮದತ್ತನೂ ತಂದೆ

ಯೊಡನೆಯೇ ಯುದ್ಧದಲ್ಲಿ ಹತನಾದನು. (ಬಾಹ್ಲಿಕನೂ, ಅವನ ಮಗ-ಮೊಮ್ಮಕ್ಕಳೂ ಈ ಯುದ್ಧದಲ್ಲಿಯೇ ಮಡಿದರು.) ಯುದ್ಧಗಳಲ್ಲಿ ಹಿಂದಿರುಗದ, ಮಹಾಬುದ್ಧಿಶಾಲಿಯಾದ ಶ್ರೀಮಂತನಾದ ನಿನ್ನ ಮಗನ ನೂರು ಮಕ್ಕಳೂ ರಣಾಂಗಣದಲ್ಲಿ ಮಡಿದರು. ದುಃಖ-ಶೋಕಗಳಿಂದ ಪೀಡಿತರಾದ ಆ ನೂರು ಮಕ್ಕಳ ಭಾರ್ಯೆಯರೂ ಇಲ್ಲಿದ್ದಾರೆ. ಇವರೆಲ್ಲರೂ ನನ್ನ ಮತ್ತು ರಾಜನ ದುಃಖವನ್ನು ಹೆಚ್ಚಿಸುತ್ತಿದ್ದಾರೆ. ಇವರೆಲ್ಲರೂ ಶೋಕದ ಆವೇಗದಿಂದ ಕೂಡಿದವರಾಗಿ ನನ್ನನ್ನು ಸುತ್ತುವರಿದು ಕುಳಿತಿದ್ದಾರೆ. ಶೂರರೂ ಮಹಾರಥರೂ ಆಗಿದ್ದ ಸೋಮದತ್ತನೇ ಮೊದಲಾದ ನನ್ನ ಮಾವಂದಿರಿಗೆ ಯಾವ ಗತಿಯು ಪ್ರಾಪ್ತವಾಗಿದೆ? ಪೂಜ್ಯರೇ! ಪರಮಾನುಗ್ರಹದಿಂದ ಈ ಮಹಾರಾಜನೂ ನಾನೂ ಮತ್ತು ತಮ್ಮ ಸೊಸೆಯಾದ ಈ ಕುಂತಿಯೂ ಶೋಕರಹಿತರಾಗುವಂತೆ ಮಾಡಿರಿ."

ಜನಮೇಜಯ! ಗಾಂಧಾರಿಯು ವ್ಯಾಸರೊಡನೆ ಹೀಗೆ ಹೇಳಲು; ತೀವ್ರತರವಾದ ವ್ರತಾನುಷ್ಠಾನಗಳಿಂದ ಕೃಶಳಾಗಿದ್ದ ಕುಂತಿಯು ಗುಟ್ಟಿನಲ್ಲಿ ಹುಟ್ಟಿದ ಆದಿತ್ಯಸದೃಶನಾದ ತನ್ನ ಮಗನನ್ನು (ಕರ್ಣನನ್ನು) ಸ್ಮರಿಸಿಕೊಂಡಳು.

ತಾಮೃಷಿರ್ವರದೋ ವ್ಯಾಸೋ ದೂರಶ್ರವಣದರ್ಶನಃ।
ಅಪಶ್ಯದ್ದುಃಖಿತಾಂ ದೇವೀಂ ಮಾತರಂ ಸವ್ಯಸಾಚಿನಃ ॥೫೦॥

ದೂರದಲ್ಲಿರುವುದನ್ನು ಕೇಳಲೂ ಮತ್ತು ನೋಡಲು ಸಮರ್ಥರಾದ, ವರದರಾದ ವ್ಯಾಸರು ಅರ್ಜುನನ ತಾಯಿಯಾದ ಕುಂತಿಯು ದುಃಖಿತಳಾಗಿರುದನ್ನು ತಿಳಿದುಕೊಂಡರು. ಬಳಿಕ ವ್ಯಾಸರು ಕುಂತಿಯನ್ನು ಪ್ರಶ್ನಿಸಿದರು:

"ಮಹಾಭಾಗಳೇ! ನೀನು ಯಾವುದಾದರೂ ಕಾರ್ಯಕ್ಕಾಗಿ ಏನನ್ನಾದರೂ ಹೇಳಲು ಇಚ್ಛಿಸಿರುವೆಯಾ? ನಿನ್ನ ಮನಸ್ಸಿನಲ್ಲಿರುವ ಆ ವಿಷಯವನ್ನು ಸ್ಪಷ್ಟವಾಗಿ ಹೇಳು."

ಜನಮೇಜಯ! ವ್ಯಾಸರು ಹೀಗೆ ಪ್ರಶ್ನಿಸಲು ಕುಂತಿಯು ಮಾವನವರಿಗೆ ತಲೆಬಾಗಿ ನಮಸ್ಕರಿಸಿ ನಾಚಿಕೆಯಿಂದ ಕೂಡಿದವಳಾಗಿ ಹಿಂದಿನ ರಹಸ್ಯವಿಷಯವನ್ನು ಪ್ರಕಟಪಡಿಸುತ್ತಾ ಹೇಳಲು ಉಪಕ್ರಮಿಸಿದಳು.

೨೯ನೆಯ ಅಧ್ಯಾಯವು ಮುಗಿಯಿತು.

ಕುಂತಿಯಿಂದ ಕರ್ಣನ ಜನ್ಮದ ರಹಸ್ಯ ಕಥನ: ವ್ಯಾಸರಿಂದ ಸಮಾಧಾನ

ಪಾರಿಕ್ಷಿತ! ಕುಂತಿಯು ಹೇಳುತ್ತಾಳೆ:

ಭಗವಞ್ಶ್ವಶುರೋ ಮೇಽಸಿ ದೈವತಸ್ಯಾಪಿ ದೈವತಮ್।
ಸ ಮೇ ದೇವಾತಿದೇವಸ್ತ್ವಂ ಶೃಣು ಸತ್ಯಾಂ ಗಿರಂ ಮಮ ॥೧॥

"ಪೂಜ್ಯರೇ! ನೀವು ನನ್ನ ಮಾವನವರಾಗಿರುವಿರಿ. ದೇವತೆಗೂ ದೇವತೆಯಾಗಿರುವಿರಿ. ನನಗಂತೂ ತಾವು ದೇವತೆಗಳಿಗಿಂತಲೂ ದೊಡ್ಡ ದೇವತೆಯೇ ಆಗಿರುವಿರಿ. ನನ್ನ ಈ ಸತ್ಯವಾದ ಮಾತನ್ನು ಕೇಳಿರಿ. ಹಿಂದೊಮ್ಮೆ ನಾನು ನನ್ನ ತಂದೆಯ ಮನೆಯಲ್ಲಿದ್ದಾಗ ತಪಸ್ವಿಗಳಾದ ಮಹಾಕೋಪಿಷ್ಠರಾದ ದುರ್ವಾಸರೆಂಬ ಹೆಸರಿನ ಬ್ರಾಹ್ಮಣರು ನನ್ನ ತಂದೆಯ ಮನೆಗೆ ಭಿಕ್ಷಾರ್ಥವಾಗಿ ಆಗಮಿಸಿದರು. ಅವರನ್ನು ನಾನು ನನ್ನ ಭಕ್ತಿಪೂರ್ವಕವಾದ ಸೇವೆಯ ಮೂಲಕ ಸಂತೋಷಗೊಳಿಸಿದೆನು.

ಶೌಚೇನ ತ್ವಾಗಸಸ್ತ್ಯಾಗೈಃ ಶುದ್ಧೇನ ಮನಸಾ ತಥಾ।
ಕೋಪಸ್ಥಾನೇಷ್ವಪಿ ಮಹತ್ಸ್ವಕುಪ್ಯನ್ನ ಕದಾಚನ ॥೨॥

ನಾನು ಶೌಚಾಚಾರಗಳನ್ನು ಪಾಲನೆಮಾಡುತ್ತಾ, ಯಾವ ವಿಧವಾದ ಅಪರಾಧಗಳನ್ನೂ ಮಾಡದೇ, ಶುದ್ಧವಾದ ಮನಸ್ಸಿನಿಂದ ಅವರನ್ನು ಉಪಚರಿಸುತ್ತಿದ್ದೆನು. ಕೋಪಗೊಳ್ಳಬೇಕಾದ ಸನ್ನಿವೇಶಗಳು ಬಂದಾಗಲೂ ನಾನು ಮಾತ್ರ ಯಾವಾಗಲೂ ಕೋಪಗೊಳ್ಳುತ್ತಿರಲಿಲ್ಲ. ತಾವು ಬಂದಕಾರ್ಯವು ಪೂರ್ಣವಾದ ಬಳಿಕ ವರದರಾದ ಮಹರ್ಷಿಗಳು ನನ್ನ ವಿಷಯದಲ್ಲಿ ಪರಮಸಂತುಷ್ಟರಾಗಿ 'ಅವಶ್ಯಂ ತೇ ಗೃಹೀತವ್ಯಂ' 'ಅವಶ್ಯವಾಗಿ ನೀನು ನನ್ನಿಂದ ವರವನ್ನು ಪಡೆಯಲೇಬೇಕು'–ಎಂಬ ಈ ಮಾತನ್ನು ನನ್ನೊಡನೆ ಹೇಳಿದರು. ಬಳಿಕ ನಾನು ಮಹರ್ಷಿಗಳು ಶಾಪಕೊಟ್ಟಾರೆಂಬ ಭಯದಿಂದ 'ಏವಮಸ್ತು' 'ಹಾಗೆಯೇ ಆಗಲಿ; ನಾನು ವರವನ್ನು ಪಡೆದುಕೊಳ್ಳುತ್ತೇನೆ'–ಎಂದೆನು. ಈ ನನ್ನ ಮಾತನ್ನು ಕೇಳಿ ಆ ಬ್ರಾಹ್ಮಣರು ಹೇಳಿದರು:

ಧರ್ಮಸ್ಯ ಜನನೀ ಭದ್ರೇ ಭವಿತ್ರೀ ತ್ವಂ ಶುಭಾನನೇ।
ವಶೇ ಸ್ಥಾಸ್ಯನ್ತಿ ತೇ ದೇವಾ ಯಾಂಸ್ತ್ವಮಾವಾಹಯಿಷ್ಯಸಿ ॥೬॥

"ಮಂಗಳಾಂಗಿಯೇ! ನೀನು ಯಮಧರ್ಮನಿಗೆ ತಾಯಿಯಾಗುವೆ. ನೀನು ಯಾವ ದೇವತೆಗಳನ್ನು ಆಹ್ವಾನಿಸುವೆಯೋ ಅವರು ನಿನ್ನ ಅಧೀನರಾಗಿ ಬರುತ್ತಾರೆ."

ಹೀಗೆ ಹೇಳಿ ಆ ಬ್ರಾಹ್ಮಣರು ಮಾಯವಾದರು. ಆಗ ನಾನು ಆಶ್ಚರ್ಯಚಕಿತಳಾದೆನು. ಯಾವುದೇ ಅವಸ್ಥೆಯಲ್ಲಿದ್ದರೂ ಅವರು ಹೇಳಿದ ಮಾತುಗಳು ಮಾತ್ರ ಮರೆತುಹೋಗುತ್ತಿರಲಿಲ್ಲ. ಒಮ್ಮೆ ನಾನು ಮನೆಯ ಉಪ್ಪರಿಗೆಯ ಮೇಲಿದ್ದಾಗ ಉದಯಿಸುತ್ತಿದ್ದ ಸೂರ್ಯನನ್ನೇ ನೋಡುತ್ತಿದ್ದೆನು. ಋಷಿಗಳ ಮಾತನ್ನು ಜ್ಞಾಪಿಸಿಕೊಂಡು ಹಗಲು-ರಾತ್ರಿಗಳಲ್ಲಿಯೂ ಸೂರ್ಯನನ್ನೇ ಪಡೆದುಕೊಳ್ಳಬೇಕೆಂದು ಆಶೆಪಡುತ್ತಿದ್ದೆನು. ಆಗ ನಾನಿನ್ನೂ ಬಾಲಭಾವದಿಂದಲೇ (ಕನ್ಯೆಯಾಗಿಯೇ) ಇದ್ದೆನು. ಸೂರ್ಯನನ್ನು ಕಾಮಿಸುವುದರಿಂದ ಯಾವ ವಿಧವಾದ ದೋಷವು ಉಂಟಾಗುವುದೆಂಬುದನ್ನೂ ತಿಳಿಯದವಳಾಗಿದ್ದೆನು. ಹಾಗೆ ನಾನು ಯಾವಾಗಲೂ ಸೂರ್ಯನನ್ನೇ ಅಭಿಲಾಷಿಸುತ್ತಿರಲಾಗಿ ಸಹಸ್ರಕಿರಣನಾದ ಸೂರ್ಯದೇವನು ನನ್ನ ಬಳಿಗೆ ಬಂದೇ ಬಿಟ್ಟನು.

ದ್ವಿಧಾ ಕೃತ್ವಾತ್ಮನೋ ದೇಹಂ ಭೂಮೌ ಚ ಗಗನೇಽಪಿ ಚ।
ತತಾಪ ಲೋಕಾನೇಕೇನ ದ್ವಿತೀಯೇನಾಗಮತ್ಸ ಮಾಮ್ ॥೧೦॥

ಸೂರ್ಯದೇವನು ತನ್ನ ಶರೀರವನ್ನು ಎರಡು ಭಾಗಗಳನ್ನಾಗಿ ಮಾಡಿಕೊಂಡಿದ್ದನು. ಅವನ ಒಂದು ಶರೀರವು ಆಕಾಶದಲ್ಲಿಯೇ ಇದ್ದಿತು. ಭೂಮಿಯಲ್ಲಿ ಮತ್ತೊಂದು ಶರೀರವಿದ್ದಿತು. ಒಂದು ಶರೀರದಿಂದ ಎಲ್ಲ ಲೋಕಗಳನ್ನೂ ಸಂತಾಪಗೊಳಿಸುತ್ತಿದ್ದನು. ಎರಡನೆಯ ಶರೀರದಿಂದ ನನ್ನ ಸಮೀಪಕ್ಕೆ ಬಂದನು. ಸೂರ್ಯದೇವನು ಬಂದೊಡನೆಯೇ ನಾನು ತರತರನೆ ನಡುಗಿಬಿಟ್ಟೆನು.

ಹಾಗೆ ನಡುಗುತ್ತಿದ್ದ ನನ್ನನ್ನು ಕುರಿತು ಸೂರ್ಯದೇವನು 'ವರಂ

ವೃಣೀಷ್ವ' 'ವರವನ್ನು ಕೇಳು'–ಎಂದನು. ನಾನಾದರೋ ತಲೆಬಾಗಿ ನಮಸ್ಕರಿಸಿ **'ಗಮ್ಯತಾಂ'** 'ಕೃಪೆಯಿಟ್ಟು ಇಲ್ಲಿಂದ ದಯಮಾಡಿಸು'-ಎಂದು ಪ್ರಾರ್ಥಿಸಿದೆನು. ಅದಕ್ಕೆ ಪ್ರತಿಯಾಗಿ ತಿಗ್ಮಾಂಶುವು-**'ವೃಥಾಹ್ವಾನಂ ನ ಮೇ ಕ್ಷಮಮ್। ಧಕ್ಷ್ಯಾಮಿ ತ್ವಾಂ ಚ ವಿಪ್ರಂ ಚ ಯೇನ ದತ್ತೋ ವರಸ್ತವ'** 'ವ್ಯರ್ಥವಾದ ಆಹ್ವಾನವನ್ನು ನಾನು ಸಹಿಸುವುದಿಲ್ಲ. ನೀನು ನನ್ನಿಂದ ವರವನ್ನು ಪಡೆದುಕೊಳ್ಳಲೇಬೇಕು. ಹಾಗೇನಾದರೂ ಅನಾದರಣೆಮಾಡಿದರೆ ನಿನ್ನನ್ನೂ ಸುಟ್ಟುಬಿಡುವೆನು; ನಿನಗೆ ವರವನ್ನು ಕೊಟ್ಟ ಆ ಋಷಿಯನ್ನೂ ಸುಟ್ಟುಬಿಡುವೆನು'–ಎಂದನು. ನಿರಪರಾಧಿಯಾದ ಬ್ರಾಹ್ಮಣನನ್ನು ಸೂರ್ಯನ ಶಾಪದಿಂದ ರಕ್ಷಿಸುವ ಸಲುವಾಗಿ-**'ಪುತ್ರೋ ಮೇ ತ್ವತ್ಸಮೋ ದೇವ ಭವೇತ್'**–'ದೇವನೆ! ನಿನಗೆ ಸಮಾನನಾದ ಪುತ್ರನು ನನಗುಂಟಾಗಲಿ.'–ಎಂದು ಸೂರ್ಯನಿಗೆ ಹೇಳಿದೆನು. ಒಡನೆಯೇ ಸೂರ್ಯದೇವನು ನನ್ನನ್ನು ವಿಮೋಹಗೊಳಿಸಿ ತೇಜಸ್ಸಿನ ಮೂಲಕ ನನ್ನ ಶರೀರವನ್ನು ಪ್ರವೇಶಿಸಿದನು. ಬಳಿಕ ಅವನು-**'ಭವಿತಾ ಪುತ್ರಸ್ತವ'** 'ನಿನಗೊಬ್ಬ ಮಗನು ಹುಟ್ಟುವನು'–ಎಂದು ಹೇಳಿ ಆಕಾಶಕ್ಕೆ ಹೊರಟುಹೋದನು. ನನ್ನ ತಂದೆಗೆ ಈ ವೃತ್ತಾಂತವು ತಿಳಿಯದಿರುವಂತೆ ಮಾಡಲು ನಾನು ಬಹಳ ದಿನಗಳವರೆಗೆ ಅರಮನೆಯ ಒಳಭಾಗದಲ್ಲಿಯೇ ಇದ್ದುಬಿಟ್ಟೆನು. ದಿನತುಂಬಿದನಂತರ ಗುಟ್ಟಿನಲ್ಲಿ ಹುಟ್ಟಿದ ಆ ಬಾಲಕನನ್ನು ನೀರಿನಲ್ಲಿ ಬಿಟ್ಟುಬಿಟ್ಟೆನು. ಅವನೇ ನನ್ನ ಪುತ್ರನಾದ ಕರ್ಣನು. ದುರ್ವಾಸಮುನಿಯು ಹೇಳಿದಂತೆ ನಿಶ್ಚಯವಾಗಿಯೂ ಸೂರ್ಯದೇವನ ಅನುಗ್ರಹದಿಂದಲೇ ನಾನು ಪುನಃ ಕನ್ಯಾಭಾವವನ್ನು ಪಡೆದುಕೊಂಡೆನು. ಮೂರ್ಖಳಾದ ನಾನು ಕರ್ಣನು ನನ್ನ ಮಗನೆಂಬುದನ್ನು ತಿಳಿದಿದ್ದರೂ ಅವನನ್ನು ಉಪೇಕ್ಷಿಸಿಬಿಟ್ಟೆನು. ಆಗ ಮಾಡಿದ ಅಪರಾಧವು ಈಗ ನನ್ನನ್ನು ಸುಟ್ಟುಹಾಕುತ್ತಿದೆ. ಈ ವಿಷಯವು ನಿಮಗೂ ಚೆನ್ನಾಗಿ ತಿಳಿದಿದೆ.

ಯದಿ ಪಾಪಮಪಾಪಂ ವಾ ತವೈತದ್ವಿವೃತಂ ಮಯಾ।
ತನ್ಮೇ ದಹನ್ತಂ ಭಗವನ್ವ್ಯಪನೇತುಂ ತ್ವಮರ್ಹಸಿ ॥೧೮॥

ಪೂಜ್ಯರೇ! ನನ್ನ ಈ ಕಾರ್ಯವು ಪಾಪಕರವೋ-ಪುಣ್ಯಕರವೋ ನಾನಂತೂ ಈ ರಹಸ್ಯವನ್ನು ನಿಮ್ಮೊಡನೆ ಹೇಳಿಬಿಟ್ಟಿರುವೆನು. ನನ್ನನ್ನು ದಹಿಸುತ್ತಿರುವ ಈ ಸಂತಾಪವನ್ನು ಹೋಗಲಾಡಿಸುವ ಕೃಪೆಮಾಡಿರಿ.

ಯಚ್ಚಾಸ್ಯ ರಾಜ್ಞೋ ವಿದಿತಂ ಹೃದಿಸ್ಥಂ ಭವತೋಽನಘ ।
ತಂ ಚಾಯಂ ಲಭತಾಂ ಕಾಮಮದ್ಯೈವ ಮುನಿಸತ್ತಮ ॥೧೯॥

ಮುನಿಪುಂಗವರೇ! ಈ ಧೃತರಾಷ್ಟ್ರರಾಜನ ಹೃದಯದಲ್ಲಿರುವ ಆಶಯವೂ ನಿಮಗೆ ತಿಳಿದಿದೆ. ರಾಜನು ತನ್ನ ಮನೋರಥವನ್ನು ಈಗಲೇ ಪೂರೈಸಿಕೊಳ್ಳುವಂತೆ ಕೃಪೆದೋರಿರಿ."

ಜನಮೇಜಯ! ಕುಂತಿಯೂ ಹೀಗೆ ಹೇಳಿದನಂತರ ವೇದವಿದರಲ್ಲಿ ಶ್ರೇಷ್ಠರಾದ ವ್ಯಾಸರು ಹೇಳಿದರು:

ಸಾಧು ಸರ್ವಮಿದಂ ಭಾವ್ಯಮೇವಮೇತದ್ಯಥಾತ್ಥ ಮಾಮ್ ॥೨೦॥

"ಮಗಳೇ! ನೀನು ಹೇಳಿದುದೆಲ್ಲವೂ ಸರಿಯಾಗಿಯೇ ಇದೆ. ಇದು ಹೀಗೆಯೇ ನಡೆಯಬೇಕಾಗಿದ್ದಿತು.

ಅಪರಾಧಶ್ಚ ತೇ ನಾಸ್ತಿ ಕನ್ಯಾಭಾವಂ ಗತಾ ಹ್ಯಸಿ।
ದೇವಾಶ್ಚೈಶ್ವರ್ಯವನ್ತೋ ವೈ ಶರೀರಾಣ್ಯಾವಿಶನ್ತಿ ವೈ ॥೨೧॥

ಇದರಲ್ಲಿ ನಿನ್ನ ಅಪರಾಧವೇನೂ ಇಲ್ಲ. ಆ ಸಮಯದಲ್ಲಿ ನೀನಿನ್ನೂ ಕನ್ಯೆಯೇ ಆಗಿದ್ದೆ. ದೇವತೆಗಳು ಸಿದ್ಧಿಗಳುಳ್ಳವರು. ಆದುದರಿಂದ ಅವರು ಇತರರ ಶರೀರಗಳನ್ನು ಪ್ರವೇಶಿಸಬಲ್ಲರು.

ಸನ್ತಿ ದೇವನಿಕಾಯಾಶ್ಚ ಸಂಕಲ್ಪಾಜ್ಜನಯನ್ತಿ ಯೇ।
ವಾಚಾ ದೃಷ್ಟ್ಯಾ ತಥಾ ಸ್ಪರ್ಶಾತ್ಸಂಘರ್ಷಣೇತಿ ಪಞ್ಚಧಾ ॥೨೨॥

ಸಂಕಲ್ಪ, ಮಾತು (ಅನುಗ್ರಹ), ದೃಷ್ಟಿ, ಸ್ಪರ್ಶ ಮತ್ತು ಸಮಾಗಮ–ಈ ಐದು ಪ್ರಕಾರಗಳಿಂದಲೂ ಮಕ್ಕಳನ್ನು ಹುಟ್ಟಿಸುವ ಅನೇಕ ದೇವತೆಗಳ ಸಮೂಹಗಳಿವೆ.

ಮನುಷ್ಯಧರ್ಮೋ ದೈವೇನ ಧರ್ಮೇಣ ಹಿ ನ ದುಷ್ಯತಿ।
ಇತಿ ಕುನ್ತಿ ವಿಜಾನೀಹಿ ವ್ಯೇತು ತೇ ಮಾನಸೋ ಜ್ವರಃ ॥೨೩॥

ಕುಂತಿ! ದೇವಧರ್ಮದಿಂದ ಮನುಷ್ಯಧರ್ಮವು ದೂಷಿತವಾಗುವುದಿಲ್ಲ–ಎಂಬುದನ್ನು ತಿಳಿ. ಆದುದರಿಂದ ನಿನ್ನ ಮಾನಸಿಕವಾದ ಚಿಂತೆಯು ದೂರವಾಗಲಿ.

ಸರ್ವಂ ಬಲವತಾಂ ಪಥ್ಯಂ ಸರ್ವಂ ಬಲವತಾಂ ಶುಚಿ ।
ಸರ್ವಂ ಬಲವತಾಂ ಧರ್ಮಃ ಸರ್ವಂ ಬಲವತಾಂ ಸ್ವಕಮ್ ॥೨೪॥

(ಧರ್ಮಾನುಕೂಲರಾದ) ಬಲಿಷ್ಠರ ಎಲ್ಲ ಕಾರ್ಯಗಳೂ ಹಿತವಾಗಿಯೇ ಇರುತ್ತವೆ. ಬಲಿಷ್ಠರ ಸರ್ವಕಾರ್ಯಗಳೂ ಪವಿತ್ರವಾಗಿಯೇ ಇರುತ್ತವೆ. ಬಲಿಷ್ಠರ ಎಲ್ಲ ಕಾರ್ಯಗಳೂ ಧರ್ಮಕಾರ್ಯಗಳೇ ಆಗುತ್ತವೆ. ಸಮಸ್ತವಾದ ವಸ್ತುಗಳೂ ಬಲಿಷ್ಠರದ್ದೇ ಆಗಿವೆ."

�150ನೆಯ ಅಧ್ಯಾಯವು ಮುಗಿಯಿತು.

ಖ೧ನೆಯ ಅಧ್ಯಾಯ ಆಶ್ರಮವಾಸಪರ್ವ (ಮುಂದುವರಿದಿದೆ.)

ವ್ಯಾಸರಿಂದ ಧೃತರಾಷ್ಟ್ರಾದಿಗಳ ಪೂರ್ವಜನ್ಮದ ಪರಿಚಯ: ಅವರ ಮಾತಿನಂತೆ ಗಂಗಾತೀರಕ್ಕೆ ಎಲ್ಲರ ಪ್ರಯಾಣ

ವ್ಯಾಸರು ಮುಂದುವರಿದು ಹೇಳುತ್ತಾರೆ:

ಭದ್ರೇ ದ್ರಕ್ಷ್ಯಸಿ ಗಾನ್ಧಾರಿ ಪುತ್ರಾನ್ಭ್ರಾತೄನ್ಸಖೀಂಸ್ತಥಾ।
ವಧೂಶ್ಚ ಪತಿಭಿಃ ಸಾರ್ಧಂ ನಿಶಿ ಸುಪ್ತೋತ್ಥಿತಾ ಇವ ॥೧॥

"ಮಂಗಳಾಂಗಿಯೇ! ಗಾಂಧಾರಿ! ಇಂದು ರಾತ್ರಿ ನೀನು ನಿನ್ನ ಮಕ್ಕಳನ್ನೂ, ಸಹೋದರರನ್ನೂ ಮತ್ತು ಇತರ ಮಿತ್ರರನ್ನೂ ಕಾಣುವೆ. ನಿನ್ನ ಸೊಸೆಯರು ತಮ್ಮ ಪತಿಗಳೊಡನೆ (ನಿನ್ನ ಮಕ್ಕಳೊಡನೆ) ಮಲಗಿದ್ದು ಎದ್ದು ಬಂದರೋ ಎಂಬಂತೆ ಕಾಣುವೆ.

ಕುಂತಿಯು ಕರ್ಣನನ್ನು ನೋಡುತ್ತಾಳೆ. ಸುಭದ್ರೆಯು ಅಭಿಮನ್ಯುವನ್ನೂ, ದ್ರೌಪದಿಯ ತನ್ನ ಐವರು ಮಕ್ಕಳನ್ನೂ-ತಂದೆ ಮತ್ತು ಸಹೋದರರನ್ನೂ ನೋಡುತ್ತಾಳೆ. ನೀನೂ, ಕುಂತಿಯೂ ಮತ್ತು ಧೃತರಾಷ್ಟ್ರನೂ ಈ ವಿಷಯವನ್ನು ಹೇಳುವ ಮೊದಲೇ ನನ್ನ ಮನಸ್ಸಿನಲ್ಲಿ ಮೃತರಾದ ಜ್ಞಾತಿ-ಬಾಂಧವರನ್ನು ನಿಮಗೆ ತೋರಿಸಬೇಕೆನ್ನುವ ನಿಶ್ಚಯ

ವುಂಟಾಗಿದ್ದಿತು. ನರಶ್ರೇಷ್ಠರಾದ ಎಲ್ಲ ರಾಜಕುಮಾರರೂ ಮಹಾತ್ಮರೂ ಕ್ಷತ್ರಧರ್ಮಪರಾಯಣರೂ ಆಗಿದ್ದು ಅದಕ್ಕೆ ಅನುಸಾರವಾಗಿಯೇ ಯುದ್ಧದಲ್ಲಿ ಮರಣಹೊಂದಿದ್ದಾರೆ. ಆದುದರಿಂದ ಅವರಿಗಾಗಿ ನೀನು ದುಃಖಿಸಬಾರದು. ನಿಷ್ಕಳಂಕಳೇ! ಇದು ದೇವತೆಗಳ ಕಾರ್ಯವಾಗಿತ್ತು. ಹೀಗೆಯೇ ಇದು ನಡೆಯಬೇಕಾಗಿದ್ದಿತು. ಆದುದರಿಂದ ನಡೆದಿದೆ. ಇವರೆಲ್ಲರೂ ದೇವತೆಗಳ ಅಂಶದಿಂದ ಈ ಭೂಮಿಯಲ್ಲಿ ಅವತರಿಸಿದ್ದರು. ಗಂಧರ್ವರು, ಅಪ್ಸರೆಯರು, ಪಿಶಾಚರು, ಗುಹ್ಯಕರು, ರಾಕ್ಷಸರು, ಪುಣ್ಯಜನರು, ಸಿದ್ಧರು, ದೇವರ್ಷಿಗಳು, ದೇವತೆಗಳು, ದಾನವರು, ನಿರ್ಮಲರಾದ ದೇವರ್ಷಿಗಣಗಳು-ಇವರೆಲ್ಲರೂ ಭೂಮಿಯಲ್ಲಿ ಅವತರಿಸಿ ಕುರುಕ್ಷೇತ್ರದಲ್ಲಿ ನಡೆದ ಯುದ್ಧದಲ್ಲಿ ನಿಧನಹೊಂದಿದರು.

ಗನ್ಧರ್ವರಾಜೋ ಯೋ ಧೀಮಾನ್ಧೃತರಾಷ್ಟ್ರ ಇತಿ ಸ್ಮೃತಃ।
ಸ ಏವ ಮಾನುಷೇ ಲೋಕೇ ಧೃತರಾಷ್ಟ್ರಃ ಪತಿಸ್ತವ ॥೮॥

ಗಂಧರ್ವಲೋಕದಲ್ಲಿ ಧೃತರಾಷ್ಟ್ರನೆಂಬ ಹೆಸರಿನ ಯಾವ ಗನ್ಧರ್ವರಾಜನಿರುವನೋ–ಅವನೇ ಭೂಲೋಕದಲ್ಲಿ ನಿನ್ನ ಪತಿಯಾದ ಧೃತರಾಷ್ಟ್ರನಾಗಿದ್ದಾನೆ.

ಪಾಣ್ಡುಂ ಮರುದ್ಗಣಾದ್ವಿದ್ಧಿ ವಿಶಿಷ್ಟತಮಮಚ್ಯುತಮ್।
ಧರ್ಮಸ್ಯಾಂಶೋಽಭವತ್ಕ್ಷತ್ತಾ ರಾಜಾ ಚೈವ ಯುಧಿಷ್ಠಿರಃ ॥೯॥

ತನ್ನ ಮಹಿಮೆಯಿಂದ ಯಾವಾಗಲೂ ಚ್ಯುತನಾಗದ ಪಾಂಡು ಮಹಾರಾಜನನ್ನು ಮರುದ್ಗಣಗಳಿಗಿಂತಲೂ ಶ್ರೇಷ್ಠನಾದ ದೇವತೆಯೆಂದು ತಿಳಿ. ವಿದುರನೂ ಮತ್ತು ಯುಧಿಷ್ಠಿರನೂ ಯಮಧರ್ಮನ ಅಂಶದಿಂದ ಹುಟ್ಟಿದವರು.

ಕಲಿಂ ದುರ್ಯೋಧನಂ ವಿದ್ಧಿ ಶಕುನಿಂ ದ್ವಾಪರಂ ತಥಾ।
ದುಃಶಾಸನಾದೀನ್ವಿದ್ಧಿ ತ್ವಂ ರಾಕ್ಷಸಾಞ್ಛುಭದರ್ಶನೇ ॥೧೦॥

ಶುಭದರ್ಶನಳೇ! ದುರ್ಯೋಧನನನ್ನು ಕಲಿಪುರುಷನೆಂದು ತಿಳಿ. ಶಕುನಿಯೇ ದ್ವಾಪರನು. ದುಃಶಾಸನನೇ ಮೊದಲಾದ ನಿನ್ನ ಮಕ್ಕಳು ರಾಕ್ಷಸರು.

ಮರುದ್ಗಣಾದ್ಭೀಮಸೇನಂ ಬಲವನ್ತಮರಿನ್ದಮಮ್।
ವಿದ್ಧಿ ತ್ವಂ ತು ನರಮೃಷಿಮಿಮಂ ಪಾರ್ಥಂ ಧನಂಜಯಮ್ ॥೧೧॥

ಅರಿಂದಮನಾದ ಬಲಿಷ್ಠನಾದ ಭೀಮಸೇನನು ಮರುದ್ಗಣಗಳ ಅಂಶದಿಂದ ಹುಟ್ಟಿದವನೆಂದು ತಿಳಿ. ಕುಂತೀಪುತ್ರನಾದ ಈ ಧನಂಜಯನನ್ನು ಪುರಾತನಮಹರ್ಷಿಯಾದ ನರನೆಂದು ತಿಳಿ.

ನಾರಾಯಣಂ ಹೃಷೀಕೇಶಮಶ್ವಿನೌ ಯಮಜೌ ತಥಾ।
ಯಃ ಸ ವೈರಾರ್ಥಮುದ್ಭೂತಃ ಸಂಘರ್ಷಜನನಸ್ತಥಾ।
ತಂ ಕರ್ಣಂ ವಿದ್ಧಿ ಕಲ್ಯಾಣಿ ಭಾಸ್ಕರಂ ಶುಭದರ್ಶನೇ ॥೧೨॥
ಯಶ್ಚ ಪಾಣ್ಡವದಾಯಾದೋ ಹತಃ ಷಡ್ಭಿರ್ಮಹಾರಥೈಃ।
ಸ ಸೋಮ ಇಹ ಸೌಭದ್ರೋ ಯೋಗಾದೇವಾಭವದ್ದ್ವಿಧಾ ॥೧೩॥

ಭಗವಾನ್ ಶ್ರೀಕೃಷ್ಣನು ಪುರಾತನಮಹರ್ಷಿಯಾದ ನಾರಾಯಣನೇ ಆಗಿದ್ದಾನೆ. ನಕುಲ-ಸಹದೇವರು ಅಶ್ವಿನೀದೇವತೆಗಳ ಅಂಶದಿಂದ ಹುಟ್ಟಿದವರು. ಕೌರವರಿಗೂ-ಪಾಂಡವರಿಗೂ ಸಂಘರ್ಷವನ್ನುಂಟುಮಾಡುತ್ತಿದ್ದ ಕರ್ಣನನ್ನು ಭಾಸ್ಕರನ ಅಂಶಜನೆಂದು ತಿಳಿ. ಅರ್ಜುನನ ಮಗನಾದ ಯಾವನನ್ನು ಆರು ಮಂದಿ ಮಹಾರಥರು ಒಟ್ಟಾಗಿ ಸೇರಿ ಸಂಹರಿಸಿದರೋ–ಆ ಅಭಿಮನ್ಯುವಿನ ರೂಪದಲ್ಲಿ ಚಂದ್ರನೇ ಅವತರಿಸಿದ್ದನು. ಚಂದ್ರನು ಯೋಗಬಲದಿಂದ ತನ್ನ ಶರೀರವನ್ನು ವಿಭಾಗಮಾಡಿಕೊಂಡು ಚಂದ್ರಲೋಕದಲ್ಲಿಯೂ ಇರುತ್ತಾ ಅಭಿಮನ್ಯುವಾಗಿ ಅವತರಿಸಿದ್ದನು.

ದ್ವಿಧಾ ಕೃತ್ವಾತ್ಮನೋ ದೇಹಮಾದಿತ್ಯಂ ತಪತಾಂ ವರಮ್।
ಲೋಕಾಂಶ್ಚ ತಾಪಯಾನಂ ವೈ ವಿದ್ಧಿ ಕರ್ಣಂ ಚ ಶೋಭನೇ ॥೧೪॥

ಪರಿತಾಪವನ್ನು ಉಂಟುಮಾಡುವವರಲ್ಲಿ ಶ್ರೇಷ್ಠನಾದ ಸೂರ್ಯದೇವನು ತನ್ನ ಶರೀರವನ್ನು ಎರಡು ಭಾಗಗಳನ್ನಾಗಿ ಮಾಡಿಕೊಂಡು ಆಕಾಶಗತವಾಗಿದ್ದ ಒಂದು ಭಾಗದಿಂದ ಎಲ್ಲ ಲೋಕಗಳಿಗೂ ತಾಪವನ್ನುಂಟುಮಾಡುತ್ತಾ ಮತ್ತೊಂದು ಭಾಗದಿಂದ ಕರ್ಣನಾಗಿ ಅವತರಿಸಿದ್ದನು. ಹೀಗೆ ನೀನು ಕರ್ಣನನ್ನು ಸೂರ್ಯನ ಅಂಶದಿಂದ ಹುಟ್ಟಿದವನೆಂದು ತಿಳಿ.

ದ್ರೌಪದ್ಯಾ ಸಹ ಸಮೂದ್ಭೂತಂ ಧೃಷ್ಟದ್ಯುಮ್ನಂ ಚ ಪಾವಕಾತ್।
ಅಗ್ನೇರ್ಭಾಗಂ ಶುಭಂ ವಿದ್ಧಿ ರಾಕ್ಷಸಂ ತು ಶಿಖಣ್ಡಿನಮ್ ॥೧೫॥

ಯಜ್ಞಕುಂಡದಲ್ಲಿ ದ್ರೌಪದಿಯ ಒಡಹುಟ್ಟಿದ ಧೃಷ್ಟದ್ಯುಮ್ನನನ್ನು ಅಗ್ನಿಯ ಅಂಶಜನೆಂದು ತಿಳಿ. ರಾಕ್ಷಸನೊಬ್ಬನು ಶಿಖಂಡಿಯಾಗಿ ಅವತರಿಸಿದ್ದನು. (ಶಿಖಂಡಿಯು ಅಂಬೆಯ ರಾಕ್ಷಸಭಾವದಿಂದ ಅವತರಿಸಿದ್ದನು.)

ದ್ರೋಣಂ ಬೃಹಸ್ಪತೇರ್ಭಾಗಂ ವಿದ್ಧಿ ದ್ರೌಣಿಂ ಚ ರುದ್ರಜಮ್।
ಭೀಷ್ಮಂ ಚ ವಿದ್ಧಿ ಗಾಙ್ಗೇಯಂ ವಸುಂ ಮಾನುಷತಾಂ ಗತಮ್ ॥೧೬॥

ದ್ರೋಣನನ್ನು ಬೃಹಸ್ಪತಿಯ ಅಂಶಜನೆಂದೂ ಅಶ್ವತ್ಥಾಮನನ್ನು ರುದ್ರಾಂಶದಿಂದ ಹುಟ್ಟಿದವನೆಂದೂ ತಿಳಿ. ಗಂಗಾಪುತ್ರನಾದ ಭೀಷ್ಮನನ್ನು ಮನುಷ್ಯನಾಗಿ ಅವತರಿಸಿದ ವಸುದೇವತೆಯೆಂದು ತಿಳಿ.

ಮಹಾಪ್ರಾಜ್ಞಳೇ! ಹೀಗೆ ದೇವತೆಗಳು ಕಾರ್ಯವಶದಿಂದ ಭೂಲೋಕದಲ್ಲಿ ಮಾನವರಾಗಿ ಅವತರಿಸಿ ಕಾರ್ಯವು ಮುಗಿದನಂತರ ಪುನಃ ಸ್ವರ್ಗಕ್ಕೆ ಹೊರಟುಹೋಗಿದ್ದಾರೆ. ನಿಮ್ಮೆಲ್ಲರ ಹೃದಯಗಳಲ್ಲಿಯೂ ಪಾರಲೌಕಿಕವಾದ ಭಯದಿಂದಾಗಿ ಬಹಳ ಕಾಲದಿಂದಲೂ ಯಾವ ದುಃಖವಿದ್ದಿತೋ ಅದನ್ನು ನಾನೀಗ ದೂರೀಕರಿಸುತ್ತೇನೆ. ನೀವೆಲ್ಲರೂ ಈಗಲೇ ಭಾಗೀರಥೀ ನದಿಯ ತೀರಕ್ಕೆ ಹೋಗಿರಿ. ಅಲ್ಲಿ ನೀವೆಲ್ಲರೂ ಯುದ್ಧದಲ್ಲಿ ಹತರಾದವರೆಲ್ಲರನ್ನೂ ಕಾಣುವಿರಿ."

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ವ್ಯಾಸರು ಹೇಳಿದ ಈ ಮಾತುಗಳನ್ನು ಕೇಳುತ್ತಲೇ ಅಲ್ಲಿ ನೆರೆದಿದ್ದವರೆಲ್ಲರೂ ಗಟ್ಟಿಯಾಗಿ ಸಿಂಹನಾದಗಳನ್ನು ಮಾಡುತ್ತಾ ಗಂಗಾತೀರಕ್ಕೆ ಅಭಿಮುಖವಾಗಿ ಪ್ರಯಾಣಮಾಡಿದರು. ಧೃತರಾಷ್ಟ್ರನು-ಅಮಾತ್ಯರೊಡನೆಯೂ, ಪಾಂಡವರೊಡನೆಯೂ, ಅಲ್ಲಿಗೆ ಆಗಮಿಸಿದ್ದ ಶ್ರೇಷ್ಠರಾದ ಋಷಿಗಳೊಡನೆಯೂ ಮತ್ತು ಗಂಧರ್ವರೊಡನೆಯೂ ಗಂಗಾನದಿಯ ತೀರಕ್ಕೆ ಪ್ರಯಾಣಮಾಡಿದನು. ಸಮುದ್ರರೂಪವಾಗಿದ್ದ ಆ ಜನಸಮೂಹವು ಗಂಗಾನದಿಯ ತೀರವನ್ನು ಸೇರಿ ತಮ್ಮ-ತಮ್ಮ ಅಭಿರುಚಿಗೆ

ಅನುಗುಣವಾಗಿ ಸೌಕರ್ಯಕ್ಕೆ ತಕ್ಕಂತೆ ಅಲ್ಲಲ್ಲಿ ಬಿಡಾರಗಳನ್ನು ಮಾಡಿಕೊಂಡರು.

ಧೀಮಂತನಾದ ಧೃತರಾಷ್ಟ್ರರಾಜನು ಸ್ತ್ರೀಯರನ್ನೂ, ವೃದ್ಧರನ್ನೂ ಮುಂದೆ ಮಾಡಿಕೊಂಡು ಪಾಂಡವರೊಡನೆಯೂ ಮತ್ತು ತನ್ನ ಅನುಯಾಯಿ ಗಳೊಡನೆಯೂ ಅಭೀಷ್ಟವಾದ ಸ್ಥಳದಲ್ಲಿ ಬಿಡಾರಮಾಡಿದನು. ಯುದ್ಧದಲ್ಲಿ ಮರಣಹೊಂದಿದವರನ್ನು ನೋಡುವ ಸಲುವಾಗಿ ರಾತ್ರಿಯಾಗುವುದನ್ನೇ ಕಾಯುತ್ತಿದ್ದ ಅವರೆಲ್ಲರೂ ಆ ಹಗಲನ್ನು ನೂರು ವರ್ಷಗಳು ಕಳೆದಂತೆ ಕಳೆದರು. ಬಳಿಕ ಹೊತ್ತುಕಳೆದಂತೆ ಸೂರ್ಯದೇವನು ಪವಿತ್ರವಾದ ಅಸ್ತಾಚಲವನ್ನು ಸೇರಿದನು. ಅನಂತರ ಅವರೆಲ್ಲರೂ ಸ್ನಾನಮಾಡಿ ಸಾಯಂಕಾಲೋಚಿತವಾದ ಸಂಧ್ಯಾವಂದನಾದಿ ಕರ್ಮಗಳನ್ನು ಮಾಡಿದರು.

ಇ೧ನೆಯ ಅಧ್ಯಾಯವು ಮುಗಿಯಿತು.

ಇ೨ನೆಯ ಅಧ್ಯಾಯ ಆಶ್ರಮವಾಸಪರ್ವ (ಮುಂದುವರಿದಿದೆ.)

ಕುರುಕ್ಷೇತ್ರಯುದ್ಧದಲ್ಲಿ ಮರಣಹೊಂದಿದ್ದವರೆಲ್ಲರೂ ವ್ಯಾಸರ ತಪಃಪ್ರಭಾವದಿಂದ ಗಂಗಾನದಿಯ ನೀರಿನಲ್ಲಿ ಕಾಣಿಸಿಕೊಂಡುದು

ವೈಶಂಪಾಯನರು ಹೇಳುತ್ತಾರೆ:

ತತೋ ನಿಶಾಯಾಂ ಪ್ರಾಪ್ತಾಯಾಂ ಕೃತಸಾಯಾಹ್ನಿಕಕ್ರಿಯಾಃ।
ವ್ಯಾಸಮಭ್ಯಗಮನ್ಸರ್ವೇ ಯೇ ತತ್ರಾಸನ್ನಮಾಗತಾಃ ॥೧॥

ಜನಮೇಜಯ! ಸಾಯಂಕಾಲವಾದೊಡನೆಯೇ ಗಂಗಾತೀರಕ್ಕೆ ಆಗಮಿಸಿದ್ದ ಎಲ್ಲರೂ ಸ್ನಾನಮಾಡಿ ಸಂಧ್ಯಾವಂದನೆಗಳನ್ನು ಮುಗಿಸಿ ಪೂಜ್ಯರಾದ ವ್ಯಾಸರ ಬಳಿಗೆ ಹೋದರು.

ಪವಿತ್ರಾತ್ಮನಾಗಿದ್ದ, ಏಕಾಗ್ರಚಿತ್ತನಾಗಿದ್ದ, ಧರ್ಮಾತ್ಮನಾದ ಧೃತ ರಾಷ್ಟ್ರನು-ಪಾಂಡವರೊಡನೆಯೂ ಅಲ್ಲಿಗೆ ಆಗಮಿಸಿದ್ದ ಋಷಿಗಳೊಡನೆಯೂ ಕುಳಿತುಕೊಂಡನು. ಗಾಂಧಾರಿಯೊಡನೆ ಎಲ್ಲ ನಾರಿಯರೂ ಕುಳಿತುಕೊಂಡರು. ಪಟ್ಟಣಿಗರೂ ಮತ್ತು ದೇಶದ ಜನರೂ ವಯೋನು ಗುಣವಾಗಿ ಕುಳಿತುಕೊಂಡರು.

ಅನಂತರ ಮಹಾತೇಜಸ್ವಿಗಳಾದ ವ್ಯಾಸರು ಪವಿತ್ರವಾದ ಭಾಗೀರಥೀ ಜಲದಲ್ಲಿ ಮಿಂದು ಯುದ್ಧದಲ್ಲಿ ಅಸುನೀಗಿದ್ದ ಪಾಂಡವ-ಕೌರವಪಕ್ಷದವರೆಲ್ಲರನ್ನೂ ಆಹ್ವಾನಿಸಿದರು. ಪಾಂಡವರ ಮತ್ತು ಕೌರವರ ಕಡೆಗಳಲ್ಲಿ ಯಾವ ಯೋಧರು ಯುದ್ಧಮಾಡುತ್ತಾ ಮಡಿದಿದ್ದರೋ, ನಾನಾದೇಶಗಳಿಂದ ಆಗಮಿಸಿ ಯುದ್ಧಮಾಡುತ್ತಾ ಅಸುನೀಗಿದ್ದರೋ–ಅಂತಹ ಮಹಾಭಾಗ್ಯಶಾಲಿಗಳಾದ ರಾಜರನ್ನೂ ಮತ್ತು ಯೋಧರನ್ನೂ ವ್ಯಾಸರು ಆಹ್ವಾನಿಸಿದರು.



ಸ್ವಲ್ಪಹೊತ್ತಿನಲ್ಲಿಯೇ ಹಿಂದೆ ಪಾಂಡವರ ಮತ್ತು ಕೌರವರ ಸೈನ್ಯಗಳು

ಒಂದೆಡೆಯಲ್ಲಿ ಸೇರಿದ್ದಾಗ ಯಾವ ಕೋಲಾಹಲಶಬ್ದವಾಗುತ್ತಿದ್ದಿತೋ–ಹಾಗೆಯೇ ಈಗಲೂ ಗಂಗಾನದಿಯ ನೀರಿನ ಮಧ್ಯದಲ್ಲಿ ಭಯಂಕರವಾದ ಕೋಲಾಹಲಶಬ್ದವುಂಟಾಯಿತು.

ಬಳಿಕ ಭೀಷ್ಮ-ದ್ರೋಣಪ್ರಮುಖರಾದ ಎಲ್ಲ ರಾಜರೂ ಸೈನ್ಯಸಮೇತರಾಗಿ ಸಾವಿರಾರು ಸಂಖ್ಯೆಯಲ್ಲಿ ಗಂಗೆಯ ಆ ನೀರಿನಿಂದ ಹೊರಬಂದರು. ಸೈನ್ಯಸಹಿತರಾದ ಮತ್ತು ಪುತ್ರಸಹಿತರಾದ ವಿರಾಟ-ದ್ರುಪದರು, ದ್ರೌಪದಿಯ ಐವರು ಮಕ್ಕಳು, ಅಭಿಮನ್ಯು, ರಾಕ್ಷಸನಾದ ಘಟೋತ್ಕಚ–ಇವರೆಲ್ಲರೂ ನೀರಿನಿಂದ ಮೇಲಕ್ಕೆ ಬಂದರು. ಕರ್ಣ-ದುರ್ಯೋಧನರು, ಮಹಾರಥಿಯಾದ ಶಕುನಿ, ದುಃಶಾಸನನೇ ಮೊದಲಾದ ಧೃತರಾಷ್ಟ್ರನ ಮಹಾಬಲರಾದ ಮಕ್ಕಳು, ಜರಾಸಂಧನ ಮಗನಾದ ಸಹದೇವ, ಭಗದತ್ತ, ಪರಾಕ್ರಮಿಯಾದ ಜಲಸಂಧ, ಭೂರಿಶ್ರವಸ, ಶಲ, ಶಲ್ಯ, ಸಹೋದರರಿಂದ ಕೂಡಿದ ವೃಷಸೇನ, ರಾಜಕುಮಾರನಾದ ಲಕ್ಷ್ಮಣ (ಲಕ್ಷಣ), ಧೃಷ್ಟದ್ಯುಮ್ನನ ಮಕ್ಕಳು, ಶಿಖಂಡಿಯ ಮಕ್ಕಳು, ಅನುಜರೊಡನಿದ್ದ ಧೃಷ್ಟಕೇತು, ಅಚಲ, ವೃಷಕ, ರಾಕ್ಷಸನಾದ ಅಲಾಯುಧ, ಬಾಹ್ಲಿಕ, ಸೋಮದತ್ತ, ಚೇಕಿತಾನ, ಇವರೇ ಅಲ್ಲದೇ ಇನ್ನೂ ಅನೇಕರಾಜರೂ, ಯೋಧರೂ ದೇದೀಪ್ಯಮಾನವಾದ ದೇಹಗಳನ್ನು ಹೊಂದಿದವರಾಗಿ ನೀರಿನಿಂದ ಹೊರಕ್ಕೆ ಬಂದರು. ಅವರ ಸಂಖ್ಯೆಯು ಅಪಾರವಾಗಿದ್ದುದರಿಂದ ಎಲ್ಲರ ನಾಮಧೇಯಗಳನ್ನೂ ಹೇಳಲು ಸಾಧ್ಯವಿಲ್ಲ. ಹಿಂದೆ ಯುದ್ಧಮಾಡುತ್ತಿದ್ದಾಗ ಯಾವ ವೀರನು ಯಾವ ವೇಷ-ಭೂಷಣಗಳಲ್ಲಿದ್ದನೋ-ಅದೇ ವೇಷ-ಭೂಷಣಗಳಿಂದ, ಅದೇ ಧ್ವಜದಿಂದ ಮತ್ತು ಅದೇ ವಾಹನದಿಂದ ಕೂಡಿ ಆ ನರಾಧಿಪರು ಕಾಣಿಸಿಕೊಂಡರು. ಅವರೆಲ್ಲರೂ ದಿವ್ಯವಾದ ವಸ್ತ್ರಗಳನ್ನು ತೊಟ್ಟಿದ್ದರು. ಥಳಥಳಿಸುವ ಕುಂಡಲಗಳನ್ನು ಧರಿಸಿದ್ದರು. ಅಹಂಕಾರರಹಿತರಾಗಿದ್ದರು. ಪರಸ್ಪರ ದ್ವೇಷರಹಿತರಾಗಿದ್ದರು. ಕ್ರೋಧ-ಮಾತ್ಸರ್ಯಗಳಿಲ್ಲದವರಾಗಿದ್ದರು. ಗಂಧರ್ವರು ಅವರ ಗುಣಗಳನ್ನು ಗಾನಮಾಡುತ್ತಿದ್ದರು. ವಂದಿ-ಮಾಗಧರು ಸ್ತೋತ್ರಮಾಡುತ್ತಿದ್ದರು. ದಿವ್ಯವಾದ ಮಾಲೆಗಳನ್ನೂ ವಸ್ತ್ರಗಳನ್ನೂ ಧರಿಸಿದ್ದ ಅವರೆಲ್ಲರೂ ಅಪ್ಸರಸ್ತ್ರೀಯರಿಂದ ಸುತ್ತುವರಿಯಲ್ಪಟ್ಟಿದ್ದರು.

ಧೃತರಾಷ್ಟ್ರಸ್ಯ ಚ ತದಾ ದಿವ್ಯಂ ಚಕ್ಷುರ್ನರಾಧಿಪ ।

ಮುನಿಃ ಸತ್ಯವತೀಪುತ್ರಃ ಪ್ರೀತಃ ಪ್ರಾದಾತ್ತಪೋಬಲಾತ್ ॥೧೭॥

ಆ ಸಮಯದಲ್ಲಿ ಸತ್ಯವತಿಯ ಮಕ್ಕಳಾದ ವ್ಯಾಸರು ಪ್ರಸನ್ನಾತ್ಮರಾಗಿ ತಮ್ಮ ತಪಸ್ಸಿನ ಬಲದಿಂದ ಧೃತರಾಷ್ಟ್ರನಿಗೆ ದಿವ್ಯದೃಷ್ಟಿಯನ್ನು ದಯಪಾಲಿಸಿದರು.

ದಿವ್ಯವಾದ ಜ್ಞಾನಬಲದಿಂದ ಸಂಪನ್ನಳಾಗಿದ್ದ ಯಶಸ್ವಿನಿಯಾದ ಗಾಂಧಾರಿದೇವಿಯು ಯುದ್ಧದಲ್ಲಿ ಮಡಿದ ತನ್ನ ಮಕ್ಕಳನ್ನೂ ಮತ್ತು ಇತರ ಬಂಧುಗಳನ್ನೂ ನೋಡಿದಳು.

ಹಸ್ತಿನಾಪಟ್ಟಣದಿಂದ ಯುಧಿಷ್ಠಿರನ ಜೊತೆಯಲ್ಲಿ ಆಗಮಿಸಿದ್ದ ಸಮಸ್ತ ಜನರೂ ಆಶ್ಚರ್ಯಚಕಿತರಾಗಿ ಪರಮಾದ್ಭುತವೂ, ಅಚಿಂತ್ಯವೂ, ರೋಮಾಂಚಕಾರಿಯೂ ಆಗಿದ್ದ ಆ ದೃಶ್ಯವನ್ನು ಎವೆಯಿಕ್ಕದೇ ನೋಡುತ್ತಿದ್ದರು. ಹರ್ಷೋತ್ಫುಲ್ಲರಾದ ನರ-ನಾರಿಯರಿಂದ ಸಮಾಕುಲವಾಗಿದ್ದ, ಆಶ್ಚರ್ಯಜನಕವಾದ, ಶ್ರೇಷ್ಠತಮವಾದ ಆ ಉತ್ಸವವು ತೆರೆಯ ಮೇಲಿನ (ಬಟ್ಟೆಯ ಮೇಲೆ ಬರೆದ) ಚಿತ್ರದಂತೆಯೇ ಕಾಣಿಸುತ್ತಿದ್ದಿತು. ಧೃತರಾಷ್ಟ್ರ ರಾಜನು ವ್ಯಾಸರ ಅನುಗ್ರಹದಿಂದ ಪಡೆದ ದಿವ್ಯದೃಷ್ಟಿಯಿಂದ ಎಲ್ಲರನ್ನೂ ನೋಡಿ ಬಹಳವಾಗಿ ಸಂತೋಷಪಟ್ಟನು.”

ಖ೨ನೆಯ ಅಧ್ಯಾಯವು ಮುಗಿಯಿತು.

ಖಖನೆಯ ಅಧ್ಯಾಯ ಪುತ್ರದರ್ಶನಪರ್ವ (ಮುಂದುವರಿದಿದೆ.)

ಪರಲೋಕದಿಂದ ಆಗಮಿಸಿದ ವ್ಯಕ್ತಿಗಳು ದ್ವೇಷಾಸೂಯೆಗಳಿಲ್ಲದೇ ಪರಸ್ಪರವಾಗಿ ಸಂಧಿಸಿದುದು: ರಾತ್ರಿಯು ಕಳೆದೊಡನೆಯೇ ಎಲ್ಲರೂ ಅದೃಶ್ಯರಾದುದು: ವ್ಯಾಸಮುನಿಗಳ ಆಜ್ಞೆಯಂತೆ ವಿಧವೆಯರಾದ ರಾಜಕುಮಾರಿಯರು ಗಂಗೆಯಲ್ಲಿ ಮುಳುಗಿ ತಮ್ಮ ಪತಿಗಳ ಲೋಕಗಳನ್ನು ಸೇರಿದುದು: ಈ ಪರ್ವದ ಶ್ರವಣಫಲ

ವೈಶಂಪಾಯನರು ಹೇಳುತ್ತಾರೆ:

ತತಸ್ತೇ ಪುರುಷಶ್ರೇಷ್ಠಾಃ ಸಮಾಜಗ್ಮುಃ ಪರಸ್ಪರಮ್।
ವಿಗತಕ್ರೋಧಮಾತ್ಸರ್ಯಾಃ ಸರ್ವೇ ವಿಗತಕಲ್ಮಷಾಃ ॥೧॥

ವಿಧಿಂ ಪರಮಮಾಸ್ಥಾಯ ಬ್ರಹ್ಮರ್ಷಿವಿಹಿತಂ ಶುಭಮ್।

ಸಂಹೃಷ್ಟಮನಸಃ ಸರ್ವೇ ದೇವಲೋಕ ಇವಾಮರಾಃ ॥೨॥

ಜನಮೇಜಯ! ಕ್ರೋಧ-ಮಾತ್ಸರ್ಯಗಳಿಂದ ರಹಿತರಾದ, ಪಾಪಶೂನ್ಯರಾದ ಆ ಎಲ್ಲ ಪುರುಷಶ್ರೇಷ್ಠರೂ ಬ್ರಹ್ಮರ್ಷಿಗಳಾದ ವ್ಯಾಸರಿಂದ ವಿಹಿತವಾದ ಶುಭಕರವಾದ ಮತ್ತು ಶ್ರೇಷ್ಠವಾದ ಕಟ್ಟಲೆಯಂತೆ–ದೇವಲೋಕದಲ್ಲಿರುವ ದೇವತೆಗಳೋಪಾದಿಯಲ್ಲಿ ಪರಮಪ್ರಿಯವಾದ ಮನಸ್ಸಿನಿಂದ ಕೂಡಿದವರಾಗಿ ಒಬ್ಬರು ಮತ್ತೊಬ್ಬರೊಡನೆ ಪ್ರೇಮಪೂರ್ವಕವಾಗಿ ಕಲೆತರು.

ಪುತ್ರಃ ಪಿತ್ರಾ ಚ ಮಾತ್ರಾ ಚ ಭಾರ್ಯಶ್ಚ ಪತಿಭಿಃ ಸಹ ।
ಭ್ರಾತ್ರಾ ಭ್ರಾತ್ರಾ ಸಖಾ ಚೈವ ಸಖ್ಯಾ ರಾಜನ್ಸಮಾಗತಾಃ ॥೩॥

ಮಗನು ತಾಯಿ ಮತ್ತು ತಂದೆಗಳೊಡನೆಯೂ, ಸ್ತ್ರೀಯರು ಗಂಡಂದಿರೊಡನೆಯೂ, ಒಡಹುಟ್ಟಿದವನು ಒಡಹುಟ್ಟಿದವನೊಡನೆಯೂ, ಮಿತ್ರನು ಮಿತ್ರನೊಡನೆಯೂ ಕಲೆತು ಮಾತನಾಡಿದರು.

ಪಾಣ್ಡವಾಸ್ತು ಮಹೇಷ್ವಾಸಂ ಕರ್ಣಂ ಸೌಭದ್ರಮೇವ ಚ।
ಸಮ್ಪ್ರಹರ್ಷಾತ್ಸಮಾಜಗ್ಮುರ್ದ್ರೌಪದೇಯಾಂಶ್ಚ ಸರ್ವಶಃ ॥೪॥

ಪಾಂಡವರು ಮಹಾಧನುರ್ಧರನಾದ ಕರ್ಣನೊಡನೆಯೂ, ಅಭಿಮನ್ಯುವಿನೊಡನೆಯೂ, ದ್ರೌಪದಿಯ ಐವರು ಮಕ್ಕಳೊಡನೆಯೂ ಅತ್ಯಂತಹರ್ಷಪೂರ್ವಕವಾಗಿ ಕಲೆತು ಮಾತನಾಡಿದರು.

ತತಸ್ತೇ ಪ್ರೀಯಮಾಣಾ ವೈ ಕರ್ಣೇನ ಸಹ ಪಾಣ್ಡವಾಃ।
ಸಮೇತ್ಯ ಪೃಥಿವೀಪಾಲ ಸೌಹೃದ್ಯೇ ಚ ಸ್ಥಿತಾಭವನ್ ॥೫॥

ಬಳಿಕ ಎಲ್ಲ ಪಾಂಡವರೂ ಕರ್ಣನೊಡನೆ ಪ್ರೀತಿಪೂರ್ವಕವಾಗಿ ಸೇರಿ ಅವನೊಡನೆ ಸೌಹಾರ್ದಪೂರ್ವಕವಾಗಿ ವ್ಯವಹರಿಸಿದರು. ವ್ಯಾಸಮುನಿಗಳ ಅನುಗ್ರಹದಿಂದ ಆ ಎಲ್ಲ ಕ್ಷತ್ರಿಯಯೋಧರೂ ಪರಸ್ಪರವಾಗಿ ಕಲೆತು ಕ್ರೋಧ ರಹಿತರಾಗಿ ಶತ್ರುಭಾವವನ್ನು ತ್ಯಜಿಸಿ ಸೌಹಾರ್ದವನ್ನು ಊರ್ಜಿತ ಗೊಳಿಸಿದರು. ಈ ರೀತಿಯಲ್ಲಿ ಅಲ್ಲಿಗೆ ಆಗಮಿಸಿದ ಪುರುಷಶ್ರೇಷ್ಠರಾದ ಕುರು ಗಳೂ ಮತ್ತು ಇತರ ರಾಜರೂ-ಗುರುಜನರೊಡನೆಯೂ ಬಂಧುಗಳೊಡ ನೆಯೂ ಮಕ್ಕಳೊಡನೆಯೂ ಕಲೆತು ಸರಸಸಲ್ಲಾಪಗಳನ್ನಾಡಿದರು.

ಪ್ರೀತಿಯಿಂದ ಯುಕ್ತವಾದ ಮನಸ್ಸಿನಿಂದ ಕೂಡಿದ್ದ ಅವರೆಲ್ಲರೂ ಆ ರಾತ್ರಿ ಪೂರ್ತಿಯಾಗಿ ತಮ್ಮ-ತಮ್ಮ ಒಡನಾಡಿಗಳೊಡನೆ ವಿಹರಿಸುತ್ತಿದ್ದು ಅದರಿಂದ ಉಂಟಾದ ಸಂತೋಷದಿಂದ ತಾವೆಲ್ಲರೂ ಸ್ವರ್ಗದ ಸದಸ್ಯರಾಗಿರುವಂತೆಯೇ ಭಾವಿಸಿಕೊಂಡರು.

ನಾತ್ರ ಶೋಕೋ ಭಯಂ ತ್ರಾಸೋ ನಾರತಿರ್ನಾಯಶೋಽಭವತ್।
ಪರಸ್ಪರಂ ಸಮಾಗಮ್ಯ ಯೋಧಾನಾಂ ಭರತರ್ಷಭ ॥೯॥

ಭರತಶ್ರೇಷ್ಠನೇ! ಪರಸ್ಪರಸಮ್ಮಿಳನದಿಂದ ಆ ಯೋಧರ ಮನಸ್ಸಿನಲ್ಲಿ ಶೋಕವಾಗಲೀ, ಭಯವಾಗಲೀ, ತ್ರಾಸವಾಗಲೀ, ಉದ್ವೇಗವಾಗಲೀ, ಅಪಯಶಸ್ಸಾಗಲೀ ಉಂಟಾಗಲಿಲ್ಲ.

ಸಮಾಗತಾಸ್ತಾಃ ಪಿತೃಭಿರ್ಭ್ರಾತೃಭಿಃ ಪತಿಭಿಃ ಸುತೈಃ।
ಮುದಂ ಪರಮಿಕಾಂ ಪ್ರಾಪ್ಯ ನಾರ್ಯೋ ದುಃಖಮಥತ್ಯಜನ್ ॥೧೦॥

ಅಲ್ಲಿಗೆ ಆಗಮಿಸಿದ್ದ ಸ್ತ್ರೀಯರು–ತಮ್ಮ ಪಿತೃಗಳನ್ನೂ, ಒಡಹುಟ್ಟಿದವರನ್ನೂ, ಗಂಡಂದಿರನ್ನೂ, ಮಕ್ಕಳನ್ನೂ ಸಂಧಿಸಿ ಅನಿರ್ವಚನೀಯವಾದ ಸಂತೋಷವನ್ನು ಹೊಂದಿದರು. ಅವರ ದುಃಖವು ಸಂಪೂರ್ಣವಾಗಿ ದೂರವಾಯಿತು.

ಏಕಾಂ ರಾತ್ರಿಂ ವಿಹೃತ್ಯೈವ ತೇ ವೀರಾಸ್ತಾಶ್ಚ ಯೋಷಿತಃ।
ಆಮನ್ತ್ರ್ಯಾನ್ಯೋನ್ಯಮಾಶ್ಲಿಷ್ಯ ತತೋ ಜಗ್ಮುರ್ಯಥಾಗತಮ್ ॥೧೧॥

ಹೀಗೆ ಆ ವೀರರೂ ಮತ್ತು ಅವರ ಪತ್ನಿಯರೂ ಒಂದು ರಾತ್ರಿ ಪೂರ್ತಿಯಾಗಿ ಜೊತೆಯಲ್ಲಿಯೇ ವಿಹರಿಸುತ್ತಿದ್ದು ಬೆಳಗಾಗುತ್ತಲೇ ಪರಸ್ಪರವಾಗಿ ಅನುಮತಿಯನ್ನು ಪಡೆದು ಗಾಢವಾಗಿ ಆಲಿಂಗಿಸಿಕೊಂಡು ತಾವೆಲ್ಲಿಂದ ಬಂದಿದ್ದರೋ ಅಲ್ಲಿಗೇ ಹೊರಟುಹೋದರು.

ಬಳಿಕ ಮುನಿಶ್ರೇಷ್ಠರಾದ ವ್ಯಾಸರು ತಪೋಬಲದಿಂದ ಸೃಷ್ಟಿಸಿದ್ದ ಲೋಕಗಳನ್ನು (ಜನಗಳನ್ನು) ವಿಸರ್ಜಿಸಿದರು. ಮಹಾತ್ಮರಾದ ಧೃತರಾಷ್ಟ್ರಾದಿಗಳು ನೋಡುತ್ತಿದ್ದಂತೆಯೇ ಕ್ಷಣಮಾತ್ರದಲ್ಲಿ ಅವರೆಲ್ಲರೂ ಮಾಯವಾಗಿ ಹೋದರು. ಹಿಂದೆ ಭಾಗೀರಥೀನದಿಯ ನೀರಿನಿಂದ ಹೊರಬಂದಿದ್ದಂತೆಯೇ ಆ ವೀರಯೋಧರೆಲ್ಲರೂ ರಥ-ಧ್ವಜಗಳೊಡನೆ ಪವಿತ್ರವಾದ ಭಾಗೀರಥಿ

ಯಲ್ಲಿ ಮುಳುಗಿ ತಮ್ಮ ತಮ್ಮ ಲೋಕಗಳಿಗೆ ಹೊರಟುಹೋದರು. ಅದರಲ್ಲಿ ಕೆಲವರು ದೇವಲೋಕಕ್ಕೂ, ಕೆಲವರು ಬ್ರಹ್ಮಲೋಕಕ್ಕೂ, ಕೆಲವರು ವರುಣನ ಲೋಕಕ್ಕೂ, ಕೆಲವರು ಕುಬೇರನ ಲೋಕಕ್ಕೂ ತೆರಳಿದರು. ಕೆಲವು ರಾಜರು ಯಮನ ಲೋಕಕ್ಕೂ ಹೋದರು. ಕೆಲವರು ರಾಕ್ಷಸರ ಲೋಕಕ್ಕೂ ಮತ್ತು ಪಿಶಾಚರ ಲೋಕಕ್ಕೂ ಹೋದರು. ಕೆಲವರು ಉತ್ತರಕುರುಗಳ ಲೋಕಕ್ಕೂ ಹೋದರು. ಹೀಗೆ ಎಲ್ಲರೂ ವಿಚಿತ್ರ-ವಿಚಿತ್ರವಾದ ಗತಿಗಳನ್ನು ಹೊಂದಿದರು. ಆ ಮಹಾತ್ಮರೆಲ್ಲರೂ ಅನುಚರರಿಂದಲೂ ವಾಹನಗಳಿಂದಲೂ ಕೂಡಿದವರಾಗಿ ದೇವತೆಗಳೊಡನೆ ತಮ್ಮ-ತಮ್ಮ ಸ್ಥಳಗಳಿಂದ ಆಗಮಿಸಿದ್ದರು.

ಹೀಗೆ ಅವರೆಲ್ಲರೂ ತಮ್ಮ-ತಮ್ಮ ಸ್ಥಳಗಳಿಗೆ ಹೊರಟುಹೋದನಂತರ ನೀರಿನಲ್ಲಿಯೇ ಇದ್ದ, ಧರ್ಮಶೀಲರಾದ, ಮಹಾತೇಜಸ್ವಿಗಳಾದ, ಕುರುಗಳಿಗೆ ಹಿತಕಾರಿಗಳಾದ ವ್ಯಾಸರು ಪತಿಗಳನ್ನು ಕಳೆದುಕೊಂಡಿದ್ದ ಕ್ಷತ್ರಿಯಸ್ತ್ರೀಯರಿಗೆ ಹೇಳಿದರು:

ಯಾ ಯಾಃ ಪತಿಕೃತಾಲ್ಲೋಕಾನಿಚ್ಛನ್ತಿ ಪರಮಸ್ತ್ರಿಯಃ।
ತಾ ಜಾಹ್ನವೀಜಲಂ ಕ್ಷಿಪ್ರಮವಗಾಹನ್ತ್ವತನ್ದ್ರಿತಾಃ ॥೧೯॥

"ದೇವಿಯರೇ! ಪತಿವ್ರತೆಯರಾದ ನಿಮ್ಮಲ್ಲಿ ಯಾರು-ಯಾರು ನಿಮ್ಮ-ನಿಮ್ಮ ಗಂಡಂದಿರು ಹೋಗಿರುವ ಪುಣ್ಯಲೋಕಗಳಿಗೆ ಹೋಗಲು ಇಚ್ಛಿಸುವಿರೋ–ಅವರೆಲ್ಲರೂ ಆಲಸ್ಯವನ್ನು ಬಿಟ್ಟು ಕ್ಷಿಪ್ರವಾಗಿ ಗಂಗಾನದಿಯಲ್ಲಿ ಮುಳುಗಿರಿ."

ವ್ಯಾಸರ ಮಾತನ್ನು ಕೇಳಿ ಸಾಧ್ವಿಯರಾದ ಆ ಸ್ತ್ರೀಯರು ವ್ಯಾಸರ ಮಾತಿನಲ್ಲಿ ಶ್ರದ್ಧೆಯಿಟ್ಟು, ಮಾವನಾದ ಯುಧಿಷ್ಠಿರನ ಅನುಮತಿಯನ್ನು ಪಡೆದು ಗಂಗಾಜಲದಲ್ಲಿ ಮುಳುಗಿದರು.

ವಿಮುಕ್ತಾ ಮಾನುಷೈರ್ದೇಹೈಸ್ತತಸ್ತಾ ಭರ್ತೃಭಿಃ ಸಹ ।
ಸಮಾಜಗ್ಮುಸ್ತದಾ ಸಾಧ್ವ್ಯಃ ಸರ್ವಾ ಏವ ವಿಶಾಮ್ಪತೇ ॥೨೦॥

ಆಗ ಎಲ್ಲ ಸಾಧ್ವೀಸ್ತ್ರೀಯರೂ ಮನುಷ್ಯಶರೀರವನ್ನು ತ್ಯಜಿಸಿ ದಿವ್ಯಶರೀರವನ್ನು ಹೊಂದಿದವರಾಗಿ ತಮ್ಮ-ತಮ್ಮ ಪತಿಗಳೊಡನೆ ಅವರವರ ಲೋಕಗಳಿಗೆ ತೆರಳಿದರು.

ಹೀಗೆ ಅನುಕ್ರಮವಾಗಿ ಶೀಲವತಿಯರಾದ ಮತ್ತು ಪತಿವ್ರತೆಯರಾದ ಆ ಎಲ್ಲ ಕ್ಷತ್ರಿಯಸ್ತ್ರೀಯರೂ ನದಿಯಲ್ಲಿ ಮುಳುಗಿ, ಶರೀರದಿಂದ ಮುಕ್ತರಾಗಿ ಪತಿಯ ಲೋಕಗಳಿಗೆ ಹೋದರು. ಆ ಸಮಯದಲ್ಲಿ ಅವರು ತಮ್ಮ ಗಂಡಂದಿರಂತೆಯೇ ದಿವ್ಯರೂಪಗಳನ್ನು ಧರಿಸಿದ್ದರು. ದಿವ್ಯಾಭರಣಗಳಿಂದ ಭೂಷಿತರಾಗಿದ್ದರು. ದಿವ್ಯವಾದ ಮಾಲೆಗಳನ್ನೂ ವಸ್ತ್ರಗಳನ್ನೂ ಧರಿಸಿದ್ದರು. ಶೀಲದಿಂದಲೂ ಸದ್ಗುಣಗಳಿಂದಲೂ ಸಂಪನ್ನೆಯರಾದ ಅವರು–ಸಮಸ್ತವಾದ ದಿವ್ಯಗುಣಗಳಿಂದಲೂ ಯುಕ್ತರಾಗಿ ಯಾವ ವಿಧವಾದ ಆಯಾಸವೂ ಇಲ್ಲದೇ ವಿಮಾನದಲ್ಲಿ ಕುಳಿತು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು. ಆ ಕಾಲದಲ್ಲಿ ವರದರಾದ, ಧರ್ಮವತ್ಸಲರಾದ ವ್ಯಾಸರು ಯಾರು ಯಾರಿಗೆ ಯಾವ ಯಾವ ಕಾಮನೆಗಳಿದ್ದುವೋ–ಅವೆಲ್ಲವನ್ನೂ ಪೂರ್ಣಮಾಡಿಕೊಟ್ಟರು. ಯುದ್ಧದಲ್ಲಿ ಮರಣಹೊಂದಿದ್ದವರೆಲ್ಲರೂ ಪುನಃ ಆಗಮಿಸಿದ್ದರೆಂಬ ವಾರ್ತೆಯನ್ನು ಕೇಳಿ ನಾನಾದೇಶಗಳ ಜನರಿಗೆ ಆಶ್ಚರ್ಯವೂ ಆನಂದವೂ ಆಯಿತು.

ಪ್ರಿಯೈಃ ಸಮಾಗಮಂ ತೇಷಾಂ ಯಃ ಸಮ್ಯಕ್ಶೃಣುಯಾನ್ನರಃ।
ಪ್ರಿಯಾಣಿ ಲಭತೇ ನಿತ್ಯಮಿಹ ಚ ಪ್ರೇತ್ಯ ಚೈವ ಸಃ ॥೨೭॥

ಯಾವ ಮನುಷ್ಯನು ಪ್ರಿಯಜನರೊಡನೆ ಕೌರವ-ಪಾಂಡವರ ಸಮಾಗಮದ ಈ ವೃತ್ತಾಂತವನ್ನು ಚೆನ್ನಾಗಿ ಆಸಕ್ತಿಯಿಂದ ಕೇಳುವನೋ–ಅವನು ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ತನಗೆ ಪ್ರಿಯವಾದ ವಸ್ತುಗಳನ್ನು ಪಡೆದುಕೊಳ್ಳುತ್ತಾನೆ.

ಇಷ್ಟಬಾನ್ಧವಸಂಯೋಗಮನಾಯಾಸಮನಾಮಯಮ್।
ಯಶ್ಚೈತಚ್ಛ್ರಾವಯೇದ್ವಿದ್ವಾನ್ವಿದುಷೋ ಧರ್ಮವಿತ್ತಮಃ ।
ಸ ಯಶಃ ಪ್ರಾಪ್ನುಯಾಲ್ಲೋಕೇ ಪರತ್ರ ಚ ಶುಭಾಂ ಗತಿಮ್ ॥೨೮॥

ಅಲ್ಲದೇ ಇಷ್ಟಬಾಂಧವರೊಡನೆ ಅನಾಯಾಸವಾಗಿ ಮಿಲನವುಂಟಾಗುತ್ತದೆ. ರೋಗ-ಪೀಡಾಪರಿಹಾರವುಂಟಾಗುತ್ತದೆ. ಧರ್ಮವಿದನಾದ ಯಾವ ವಿದ್ವಾಂಸನು ಈ ಪ್ರಸಂಗವನ್ನು ಪ್ರವಚನಮಾಡುವನೋ–ಅವನು ಈ ಲೋಕದಲ್ಲಿ ಯಶಸ್ಸನ್ನೂ ಪರಲೋಕದಲ್ಲಿ ಶುಭಗತಿಯನ್ನೂ ಹೊಂದುತ್ತಾನೆ.

ಸ್ವಾಧ್ಯಾಯಯುಕ್ತಾ ಮನುಜಾಸ್ತಪೋಯುಕ್ತಾಶ್ಚ ಭಾರತ ।
ಸಾಧ್ವಾಚಾರಾ ದಮೋಪೇತಾ ದಾನನಿರ್ಧೂತಕಲ್ಮಶಾಃ ।
ಋಜವಃ ಶುಚಯಃ ಶಾನ್ತಾ ಹಿಂಸಾನೃತವಿವರ್ಜಿತಾಃ ॥೩೦॥

ಆಸ್ತಿಕಾಃ ಶ್ರದ್ದಧಾನಾಶ್ಚ ಧೃತಿಮನ್ತಶ್ಚ ಮಾನವಾಃ ।
ಶ್ರುತ್ವಾಶ್ಚರ್ಯಮಿದಂ ಪರ್ವ ಹ್ಯವಾಪ್ಸ್ಯನ್ತಿ ಪರಾಂ ಗತಿಮ್ ॥೩೧॥

ಭಾರತನೇ! ಸ್ವಾಧ್ಯಾಯಪರಾಯಣರಾದ, ತಪಸ್ವಿಗಳಾದ, ಸದಾಚಾರಿಗಳಾದ, ಜಿತೇಂದ್ರಿಯರಾದ, ದಾನಗಳನ್ನು ಕೊಟ್ಟು ಪಾಪಗಳನ್ನು ಕಳೆದುಕೊಂಡಿರುವ, ಸರಳರಾದ, ಶುದ್ಧರಾದ, ಶಾಂತರಾದ, ಹಿಂಸೆ ಮತ್ತು ಅಸತ್ಯಗಳಿಂದ ದೂರವಿರುವ, ಆಸ್ತಿಕರಾದ, ಶ್ರದ್ಧಾಳುಗಳಾದ ಮತ್ತು ಧೈರ್ಯವಂತರಾದ ಪುರುಷರು ಆಶ್ಚರ್ಯಕರವಾದ ಈ ಪರ್ವವನ್ನು ಕೇಳಿ ಉತ್ತಮವಾದ ಗತಿಯನ್ನು ಹೊಂದುತ್ತಾರೆ.”

ಇ೩ನೆಯ ಅಧ್ಯಾಯವು ಮುಗಿಯಿತು.

ಇ೪ನೆಯ ಅಧ್ಯಾಯ ಪುತ್ರದರ್ಶನಪರ್ವ (ಮುಂದುವರಿದಿದೆ.)

ಜನಮೇಜಯನ ಸಂದೇಹಕ್ಕೆ ವೈಶಂಪಾಯನರ ಸಮಾಧಾನ

ಸೌತಿಗಳು ಹೇಳುತ್ತಾರೆ:

ಏತಚ್ಛ್ರುತ್ವಾ ನೃಪೋ ವಿದ್ವಾನ್ ಹೃಷ್ಟೋಽಭೂಜ್ಜನಮೇಜಯಃ।
ಪಿತಮಹಾನಾಂ ಸರ್ವೇಷಾಂ ಪುನಸ್ತದ್ರೂಪದರ್ಶನಮ್ ॥೧॥

ಶೌನಕರೇ! ಹೀಗೆ ತನ್ನ ಪಿತಾಮಹರೆಲ್ಲರೂ ಪರಲೋಕದಿಂದ ಬಂದುಹೋದ ವೃತ್ತಾಂತವನ್ನು ಕೇಳಿ ಜನಮೇಜಯನು ಪರಮಸಂತುಷ್ಟನಾದನು. ಆದರೂ ಸತ್ತವರು ಪುನಃ ಬಂದರೆಂಬ ವಿಷಯದಲ್ಲಿ ಸಂದೇಹಗೊಂಡವನಾಗಿ **‘ಕಥಂ ನು ತ್ಯಕ್ತದೇಹಾನಾಂ ಪುನಸ್ತದ್ರೂಪದರ್ಶನಮ್**-ದೇಹವನ್ನೇ ತ್ಯಜಿಸಿ ಹೊರಟುಹೋಗಿದ್ದವರಿಗೆ ಪುನಃ ಅದೇ ರೂಪದಲ್ಲಿಯೇ ಕಾಣಿಸಿಕೊಳ್ಳಲು ಹೇಗೆ ಸಾಧ್ಯವಾಯಿತು?’–ಎಂದು ವೈಶಂಪಾಯನರನ್ನು ಪ್ರಶ್ನಿಸಿದನು.

ಜನಮೇಜಯನು ಹೀಗೆ ಪ್ರಶ್ನಿಸಲು ಪ್ರವಚನಪಟುಗಳಾದ, ದ್ವಿಜಶ್ರೇಷ್ಠರಾದ, ವ್ಯಾಸರ ಶಿಷ್ಯರಾದ, ವಾಗ್ಮಿಗಳಲ್ಲಿ ಶ್ರೇಷ್ಠರಾದ ವೈಶಂಪಾಯನರು ಜನಮೇಜಯನಿಗೆ ಹೇಳಿದರು:

ಅವಿಪ್ರಣಾಶಃ ಸರ್ವೇಷಾಂ ಕರ್ಮಣಾಮಿತಿ ನಿಶ್ಚಯಃ।
ಕರ್ಮಜಾನಿ ಶರೀರಾಣಿ ತಥೈವಾಕೃತಯೋ ನೃಪ ॥೪॥

"ನರೇಶ್ವರನೇ! ಮಾಡಿದ ಕರ್ಮಗಳ ಸಮಸ್ತಫಲಗಳನ್ನೂ ಅನುಭವಿಸದೇ ಅವು ವಿನಾಶಹೊಂದುವುದಿಲ್ಲವೆಂಬುದು ನಿಶ್ಚಿತವಾಗಿದೆ. ಜೀವಾತ್ಮನಿಗೆ ಶರೀರಗಳೂ ಮತ್ತು ಆಕೃತಿಗಳೂ ಕರ್ಮದಿಂದಲೇ ಪ್ರಾಪ್ತವಾಗುವುವು.

ಮಹಾಭೂತಾನಿ ನಿತ್ಯಾನಿ ಭೂತಾಧಿಪತಿಸಂಶ್ರಯಾತ್।
ತೇಷಾಂ ಚ ನಿತ್ಯಸಂವಾಸೋ ನ ವಿನಾಶೋ ವಿಯುಜ್ಯತಾಮ್ ॥೫॥

ಭೂತನಾಥನಾದ ಭಗವಂತನ ಆಶ್ರಯದಿಂದ ಪಂಚಮಹಾಭೂತಗಳು (ನಮ್ಮ ಶರೀರದ ದೃಷ್ಟಿಯಿಂದ) ನಿತ್ಯವಾಗಿಯೇ ಇವೆ. ಈ ನಿತ್ಯವಾದ ಮಹಾಭೂತಗಳು ಅನಿತ್ಯವಾದ ಶರೀರದೊಡನೆ ಸಂಸಾರದ ದಶೆಯಲ್ಲಿ ನಿತ್ಯಸಂಯೋಗದಿಂದಲೇ ಇರುತ್ತವೆ. ಅನಿತ್ಯವಾದ ಶರೀರವು ನಾಶವಾಗುವುದರಿಂದ ಪಂಚಭೂತಗಳಿಗೆ ಶರೀರದೊಡನೆ ವಿಯೋಗವುಂಟಾಗುವುದೇ ಹೊರತು ನಾಶವುಂಟಾಗುವುದಿಲ್ಲ.

ಅನಾಯಾಸಕೃತಂ ಕರ್ಮ ಸತ್ಯಃ ಶ್ರೇಷ್ಠಃ ಫಲಾಗಮಃ।
ಆತ್ಮಾ ಚೈಭಿಃ ಸಮಾಯುಕ್ತಃ ಸುಖದುಃಖಮುಪಾಶ್ನುತೇ ॥೬॥

ತಾನು ಮಾಡಿದೆನೆಂಬ ಅಭಿಮಾನವಿಲ್ಲದೇ ಅನಾಯಾಸವಾಗಿ ಮಾಡಿದ ಕರ್ಮವು-ಸತ್ಯವಾದ ಮತ್ತ ಶ್ರೇಷ್ಠವಾದ ಮುಕ್ತಿಫಲಗಳನ್ನು ಕೊಡುತ್ತದೆ. ಕರ್ತೃತ್ವದ ಅಭಿಮಾನದಿಂದ ಮತ್ತು ಪರಿಶ್ರಮಪೂರ್ವಕವಾಗಿ ಮಾಡಲ್ಪಡುವ ಕರ್ಮಗಳಿಂದ ಬಂಧಿಸಲ್ಪಡುವ ಜೀವಾತ್ಮನು ಸುಖ-ದುಃಖಗಳನ್ನು ಅನುಭವಿಸುತ್ತಾನೆ.

ಅವಿನಾಶ್ಯಸ್ತಥಾಯುಕ್ತಃ ಕ್ಷೇತ್ರಜ್ಞ ಇತಿ ನಿಶ್ಚಯಃ।
ಭೂತಾನಾಮಾತ್ಮಕೋ ಭಾವೋ ಯಥಾಸೌ ನ ವಿಯುಜ್ಯತೇ ॥೭॥

ಕ್ಷೇತ್ರಜ್ಞನು ಹೀಗೆ ಕರ್ಮಗಳಿಂದ ಕೂಡಿದ್ದರೂ ವಾಸ್ತವವಾಗಿ ಅವನು ಅವಿನಾಶಿಯೇ ಆಗಿದ್ದಾನೆ. ಇದು ನಿಶ್ಚಯ. ಆದರೆ ಜೀವನು ಭೂತಗಳೊಡನೆ ತಾದಾತ್ಮ್ಯವನ್ನು ಬೆಳೆಸಿಕೊಂಡಿರುವುದರಿಂದ ಆತ್ಮಜ್ಞಾನದ ಹೊರತಾಗಿ ಅವುಗಳಿಂದ ಪ್ರತ್ಯೇಕವಾಗಿರಲು ಸಾಧ್ಯವಾಗುವುದಿಲ್ಲ.

ಯಾವನ್ನ ಕ್ಷೀಯತೇ ಕರ್ಮ ತಾವತ್ತಸ್ಯ ಸ್ವರೂಪತಾ।
ಕ್ಷೀಣಕರ್ಮಾ ನರೋ ಲೋಕೇ ರೂಪಾನ್ಯತ್ವಂ ನಿಯಚ್ಛತಿ ॥೮॥

ಎಲ್ಲಿಯವರೆಗೆ ಶರೀರದ ಪ್ರಾರಬ್ಧಕರ್ಮಗಳು ಕ್ಷಯವಾಗುವುದಿಲ್ಲವೋ ಅಲ್ಲಿಯವರೆಗೂ ಜೀವಕ್ಕೆ ಆ ಶರೀರದೊಡನೆ ಏಕರೂಪತೆಯಿರುತ್ತದೆ. ಯಾವಾಗ ಪ್ರಾರಬ್ಧಕರ್ಮಗಳು ಕ್ಷಯವಾಗಿಬಿಡುವುವೋ–ಆಗ ಆ ಜೀವವು ಬೇರೆಯ ಸ್ವರೂಪವನ್ನು ಹೊಂದುತ್ತದೆ.

ನಾನಾಭಾವಾಸ್ತಥೈಕತ್ವಂ ಶರೀರಂ ಪ್ರಾಪ್ಯ ಸಂಹತಾಃ।
ಭವನ್ತಿ ತೇ ತಥಾ ನಿತ್ಯಾಃ ಪೃಥಗ್ಭಾವಂ ವಿಜಾನತಾಮ್ ॥೯॥

ಪಂಚಭೂತಗಳು, ಇಂದ್ರಿಯಗಳು–ಇವೇ ಮೊದಲಾದ ನಾನಾಪ್ರಕಾರ ವಾದ ಪದಾರ್ಥಗಳು ಶರೀರವನ್ನು ಹೊಂದಿ ಏಕತ್ವವನ್ನು ಹೊಂದಿರುತ್ತವೆ. ಯಾರು ದೇಹವನ್ನು ಆತ್ಮದಿಂದ ಪ್ರತ್ಯೇಕವನ್ನಾಗಿ ಭಾವಿಸುವರೋ–ಅಂತಹ ಯೋಗಿಗಳಿಗೆ ಭೂತಾದಿಗಳಾಗಲೀ ಇಂದ್ರಿಯಗಳಾಗಲೀ ನಿತ್ಯವಾದ ಆತ್ಮಸ್ವರೂಪಗಳೇ ಆಗಿಬಿಡುತ್ತವೆ.

ಅಶ್ವಮೇಧೇ ಶ್ರುತಿಶ್ಚೇಯಮಶ್ವಸಂಜ್ಞಪನಂ ಪ್ರತಿ।
ಲೋಕಾನ್ತರಗತಾ ನಿತ್ಯಂ ಪ್ರಾಣಾ ನಿತ್ಯಂ ಶರೀರಿಣಾಮ್ ॥೧೦॥

ಅಶ್ವಮೇಧದಲ್ಲಿ ಅಶ್ವವನ್ನು ವಿಶಸನಮಾಡುವಾಗ–ಸೂರ್ಯಂ ತೇ ಚಕ್ಷುಃ ವಾತಂ ಪ್ರಾಣಃ–ನಿನ್ನ ಕಣ್ಣುಗಳು ಸೂರ್ಯನನ್ನೂ ಪ್ರಾಣಗಳು ವಾಯುವನ್ನೂ ಸೇರಲಿ–ಮುಂತಾದ ಮಂತ್ರಗಳನ್ನು ಹೇಳುತ್ತಾರೆ. ಅದರಿಂದ ದೇಹಧಾರಿಗಳ ಪ್ರಾಣ ಮತ್ತು ಇಂದ್ರಿಯಗಳು ಸರ್ವದಾ ಲೋಕಾಂತರ ದಲ್ಲಿಯೇ ಇರುತ್ತವೆ-ಎಂದು ಸೂಚಿತವಾಗುತ್ತದೆ.

(ಆದುದರಿಂದ ಪರಲೋಕಕ್ಕೆ ಹೋಗಿರುವ ಜೀವವು ತಾನು ಹಿಂದಿದ್ದ ರೂಪದಲ್ಲಿಯೇ ಈ ಲೋಕದಲ್ಲಿ ಪುನಃ ಪ್ರಕಟವಾಗುವುದು ಅಸಂಭವವೇನಲ್ಲ.)

ಅಹಂ ಹಿತಂ ವದಾಮ್ಯೇತತ್ಪ್ರಿಯಂ ಚೇತ್ತವ ಪಾರ್ಥಿವ ।
ದೇವಯಾನಾ ಹಿ ಪನ್ಥಾನಃ ಶ್ರುತಾಸ್ತೇ ಯಜ್ಞಸಂಸ್ತರೇ ॥೧೧॥

ಪ್ರಜಾನಾಥನೇ! ನಿನಗೆ ಪ್ರಿಯವಾಗುವುದಾದರೆ ಈ ಹಿತಕರವಾದ ಮಾತನ್ನು ಹೇಳುತ್ತೇನೆ. ಯಜ್ಞವನ್ನು ಆರಂಭಿಸುವ ಸಮಯದಲ್ಲಿ ನೀನು ದೇವಯಾನಮಾರ್ಗದ ವಿಷಯವಾಗಿ ಕೇಳಿರಬಹುದು. ಆ ಮಾರ್ಗವೇ ನಿನಗೆ ಯೋಗ್ಯವಾಗಿದೆ.

ಆಹೃತೋ ಯತ್ರ ಯಜ್ಞಸ್ತೇ ತತ್ರ ದೇವಾ ಹಿತಾಸ್ತವ ।
ಯದಾ ಸಮನ್ವಿತಾ ದೇವಾಃ ಪಶೂನಾಂ ಗಮನೇಶ್ವರಾಃ ॥೧೨॥

ನೀನು ಯಾವಾಗ ದೇವತೆಗಳ ಪ್ರೀತ್ಯರ್ಥವಾಗಿ ಯಜ್ಞದ ಅನುಷ್ಠಾನವನ್ನು ಆರಂಭಿಸುವೆಯೋ–ಆಗಿನಿಂದಲೂ ದೇವತೆಗಳು ನಿನ್ನ ಹಿತೈಷಿಗಳಾದ ಸುಹೃದರಾಗುತ್ತಾರೆ. ಮಿತ್ರಭಾವದಿಂದ ಆ ದೇವತೆಗಳು ಜೀವಗಳ ಲೋಕಾಂತರಪ್ರಾಪ್ತಿಗೆ ಸಮರ್ಥರಾಗಿರುವುದರಿಂದ ತಮಗೆ ಸುಹೃದರಾದ ಜೀವಗಳ ವಿಷಯದಲ್ಲಿ ಅನುಗ್ರಹವನ್ನು ತೋರಿ ಆ ಜೀವಿಗಳು ಅಭೀಷ್ಟವಾದ ಲೋಕಗಳನ್ನು ಹೊಂದುವಂತೆ ಮಾಡುತ್ತಾರೆ.

ಗತಿಮನ್ತಶ್ಚ ತೇನೇಷ್ಟ್ವಾ ನಾನ್ಯೇ ನಿತ್ಯಾಭವನ್ನ್ಯುತ ।
ನಿತ್ಯೇಽಸ್ಮಿನ್ಪಞ್ಚಕೇ ವರ್ಗೇ ನಿತ್ಯೇ ಚಾತ್ಮನಿ ಪೂರುಷಃ ॥೧೩॥
ಅಸ್ಯ ನಾನಾಸಮಾಯೋಗಂ ಯಃ ಪಶ್ಯತಿ ವೃಥಾಮತಿಃ।
ವಿಯೋಗೇ ಶೋಚತೇಽತ್ಯರ್ಥಂ ಸ ಬಾಲ ಇತಿ ಮೇ ಮತಿಃ ॥೧೪॥

ಆದುದರಿಂದ ನಿತ್ಯನಾದ ಜೀವನು ಯಜ್ಞಗಳ ಮೂಲಕ ದೇವತೆಗಳನ್ನು ಆರಾಧಿಸಿ ಲೋಕಾಂತರಗಳಿಗೆ ಹೋಗುವ ಶಕ್ತಿಯನ್ನು ಪಡೆದುಕೊಳ್ಳುತ್ತಾನೆ. ಯಾರು ಯಜ್ಞಗಳನ್ನು ಮಾಡುವುದಿಲ್ಲವೋ ಅವರು ಹೀಗೆ ಲೋಕಾಂತರ ಗಳನ್ನು ಹೊಂದಲಾರರು. ಪಾಂಚಭೌತಿಕವರ್ಗವೂ ನಿತ್ಯವಾಗಿದೆ ಮತ್ತು ಜೀವನೂ ನಿತ್ಯನೇ ಆಗಿದ್ದಾನೆ. ಹೀಗಿರುವಾಗ ಯಾವನು ಆತ್ಮನಿಗೆ ನಾನಾಪ್ರಕಾರವಾದ ದೇಹಗಳ ಸಂಬಂಧವಿರುವುದೆಂದೂ, ಹಾಗೆಯೇ ಶರೀರದ ಹುಟ್ಟು ಮತ್ತು ಸಾವುಗಳಂತೆ ಆತ್ಮನಿಗೂ ಹುಟ್ಟು ಮತ್ತು ಸಾವುಗಳು ಉಂಟಾಗುವುದೆಂದೂ ಭಾವಿಸುವನೋ–ಅಂತಹವನ ಬುದ್ಧಿಯು ವ್ಯರ್ಥವೇ ಸರಿ. ಹೀಗೆಯೇ ಸಂಬಂಧಿಗಳ ವಿಯೋಗವಾದಾಗ ಯಾವನು ದುಃಖಪಡುವನೋ–ಅವನೂ ಮೂರ್ಖನೆಂದೇ ನನ್ನ ಅಭಿಪ್ರಾಯವಾಗಿದೆ.

ವಿಯೋಗೇ ದೋಷದರ್ಶೀ ಯಃ ಸಂಯೋಗಂ ಸ ವಿಸರ್ಜಯೇತ್ ।
ಅಸಙ್ಗೀ ಸಙ್ಗಮೋ ನಾಸ್ತಿ ದುಃಖಂ ಭುವಿ ವಿಯೋಗಜಮ್ ॥೧೫॥

ವಿಯೋಗದಲ್ಲಿ ಯಾವನು ದೋಷವನ್ನು ಕಾಣುವನೋ–ಅವನು ಸಂಯೋಗವನ್ನೇ ತ್ಯಜಿಸಿಬಿಡಬೇಕು. ಏಕೆಂದರೆ: ಅಸಂಗನಾದ ಆತ್ಮನಿಗೆ ಸಂಗವಾಗಲೀ ಸಂಯೋಗವಾಗಲೀ ಇಲ್ಲ. ಯಾವನು ಆತ್ಮನಿಗೆ ಸಂಯೋಗದ ಆರೋಪವನ್ನು ಹೊರೆಸುವನೋ–ಅವನು ಈ ಪ್ರಪಂಚದಲ್ಲಿ ವಿಯೋಗದ ದುಃಖವನ್ನು ಅನುಭವಿಸಲೇಬೇಕು.

ಪರಾಪರಜ್ಞಸ್ತ್ವಪರೋ ನಾಭಿಮಾನಾದುದೀರಿತಃ।
ಅಪರಜ್ಞಃ ಪರಾಂ ಬುದ್ಧಿಂ ಜ್ಞಾತ್ವಾ ಮೋಹಾದ್ವಿಮುಚ್ಯತೇ ॥೧೬॥

ಪರ ಮತ್ತು ಅಪರಗಳನ್ನು ತಿಳಿದವನೇ ಬೇರೆ. ಅವನು ದೇಹಾಭಿಮಾನವುಳ್ಳವನೆಂದು ಹೇಳಲ್ಪಡುವುದಿಲ್ಲ. ಅಪರವನ್ನು ತಿಳಿದವನೂ (ಅದರಿಂದ ಬೇರೆಯಾದ) ಪರಾಬುದ್ಧಿಯನ್ನು ಪಡೆದು ಮೋಹದಿಂದ ಬಿಡುಗಡೆಯನ್ನು ಹೊಂದುತ್ತಾನೆ.

ಅದರ್ಶನಾದಾಪತಿತಃ ಪುನಶ್ಚಾದರ್ಶನಂ ಗತಃ।
ನಾಹಂ ತಂ ವೇದ್ಮಿ ನಾಸೌ ಮಾಂ ನ ಚ ಮೇಽಸ್ತಿ ವಿರಾಗತಾ ॥೧೭॥

ಈ ಜೀವನು ಎಲ್ಲಿಂದ ಬಂದನು? ಎಂಬುದನ್ನು ಕಾಣೆವು. ಮತ್ತೆ ಇವನು ಎಲ್ಲಿಗೆ ಹೋದನು?–ಎಂಬುದೂ ಕಾಣುವುದಿಲ್ಲ. ನಾನು ಅವನನ್ನು ತಿಳಿದಿಲ್ಲ. ಅವನಿಗೂ ನನ್ನ ವಿಷಯ ತಿಳಿಯುವುದಿಲ್ಲ. ಆದರೂ ನನಗೆ ವೈರಾಗ್ಯವುಂಟಾಗಿಲ್ಲ. (ಆ ಸತ್ತುಹೋದವರ ಬಗೆಗೆ ಅಭಿಮಾನ-ಆಸಕ್ತಿಗಳು ಹೋಗುವುದಿಲ್ಲ.)

ಯೇನ ಯೇನ ಶರೀರೇಣ ಕರೋತ್ಯಯಮನೀಶ್ವರಃ।
ತೇನ ತೇನ ಶರೀರೇಣ ತದವಶ್ಯಮುಪಾಶ್ನುತೇ ।
ಮಾನಸಂ ಮನಸಾಪ್ನೋತಿ ಶರೀರಂ ಚ ಶರೀರವಾನ್ ॥೧೮॥

ಪರಾಧೀನವಾಗಿರುವ ಈ ಜೀವವು ಯಾವ ಯಾವ ಶರೀರದಿಂದ ಕರ್ಮವನ್ನು ಮಾಡುವುದೋ-ಅದೇ ಶರೀರದಿಂದಲೇ ಆ ಕರ್ಮದ ಫಲವನ್ನು ಅವಶ್ಯವಾಗಿ ಅನುಭವಿಸುತ್ತದೆ. ಮಾನಸಿಕಕರ್ಮದ ಫಲವನ್ನು

ಮನಸ್ಸಿನಿಂದಲೂ ಶಾರೀರಿಕಕರ್ಮಗಳ ಫಲವನ್ನು ಶರೀರದ ಮೂಲಕ ವಾಗಿಯೂ ಜೀವನು ಅನುಭವಿಸುತ್ತಾನೆ."

ಇ೪ನೆಯ ಅಧ್ಯಾಯವು ಮುಗಿಯಿತು.

ಇ೫ನೆಯ ಅಧ್ಯಾಯ ಪುತ್ರದರ್ಶನಪರ್ವ (ಮುಂದುವರಿದಿದೆ.)

ವ್ಯಾಸರ ಕೃಪೆಯಿಂದ ಜನಮೇಜಯನಿಗೆ ತಂದೆಯ ದರ್ಶನ

ವೈಶಂಪಾಯನರು ಹೇಳುತ್ತಾರೆ:

ಅದೃಷ್ಟ್ವಾ ತು ನೃಪಃ ಪುತ್ರಾನ್ದರ್ಶನಂ ಪ್ರತಿಲಬ್ಧವಾನ್।
ಋಷೇಃ ಪ್ರಸಾದಾತ್ಪುತ್ರಾಣಾಂ ಸ್ವರೂಪಾಣಾಂ ಕುರೂದ್ವಹ ॥೧॥

"ಜನಮೇಜಯ! ಧೃತರಾಷ್ಟ್ರರಾಜನು ಇದಕ್ಕೆ ಮೊದಲು ಯಾವಾಗಲೂ ತನ್ನ ಸತ್ತುಹೋದ ಮಕ್ಕಳನ್ನೇ ನೋಡಿರಲಿಲ್ಲ. ಆದರೆ ಮಹರ್ಷಿಗಳಾದ ವ್ಯಾಸರ ಅನುಗ್ರಹದಿಂದಾಗಿ ಅವನು ತನ್ನ ಆ ಮಕ್ಕಳ ದರ್ಶನವನ್ನು ಪಡೆದನು. ಅವರ ನಿಜಸ್ವರೂಪಗಳನ್ನೂ ತಿಳಿದನು.

ನರಶ್ರೇಷ್ಠನಾದ ಧೃತರಾಷ್ಟ್ರನು ರಾಜಧರ್ಮಗಳನ್ನೂ, ಬ್ರಹ್ಮವಿದ್ಯೆ ಯನ್ನೂ, ಬುದ್ಧಿನಿಶ್ಚಯವನ್ನೂ (ದೃಢಬುದ್ಧಿಯನ್ನು) ಪಡೆದುಕೊಂಡಿದ್ದನು. ಮಹಾಪ್ರಾಜ್ಞನಾದ ವಿದುರನು ತಪಸ್ಸಿನ ಬಲದಿಂದಲೇ ಸಿದ್ಧಿಯನ್ನು ಪಡೆದನು. ಆದರೆ ಧೃತರಾಷ್ಟ್ರನು ತಪಸ್ವಿಗಳಾದ ವ್ಯಾಸರ ಅನುಗ್ರಹದಿಂದ ಸಿದ್ಧಿಯನ್ನು ಪಡೆದನು."

ಜನಮೇಜಯನು ಹೇಳುತ್ತಾನೆ:

ಮಮಾಪಿ ವರದೋ ವ್ಯಾಸೋ ದರ್ಶಯೇತ್ಪಿತರಂ ಯದಿ।
ತದ್ರೂಪವೇಷವಯಸಂ ಶ್ರದ್ದಧ್ಯಾಂ ಸರ್ವಮೇವ ತೇ ॥೪॥

ಪ್ರಿಯಂ ಮೇ ಸ್ಯಾತ್ಕೃತಾರ್ಥಶ್ಚ ಸ್ಯಾಮಹಂ ಕೃತನಿಶ್ಚಯಃ।
ಪ್ರಸಾದಾದೃಷಿಮುಖ್ಯಸ್ಯ ಮಮ ಕಾಮಃ ಸಮೃಧ್ಯತಾಮ್ ॥೫॥

"ಬ್ರಾಹ್ಮಣೋತ್ತಮರೇ! ಒಂದು ವೇಳೆ ವರದರಾದ ಪೂಜ್ಯರಾದ ವ್ಯಾಸರೂ, ನನಗೂ ನನ್ನ ತಂದೆಯನ್ನೂ ರೂಪ-ವೇಷ-ವಯಸ್ಸುಗಳೊ ಡನೆಯೇ ತೋರಿಸಿದ್ದೇ ಆದರೆ ನೀವು ಹೇಳಿರುವ ಎಲ್ಲ ವಿಷಯಗಳಲ್ಲಿಯೂ

ವಿಶ್ವಾಸವನ್ನಿಡುತ್ತೇನೆ. ಇದರಿಂದ ನನಗೆ ಪ್ರಿಯವೂ ಉಂಟಾಗುತ್ತದೆ. ನಾನು ಕೃತಾರ್ಥನೂ ಆಗುತ್ತೇನೆ. ಈ ವಿಷಯದಲ್ಲಿ ನನಗೆ ದೃಢವಾದ ನಿರ್ಣಯವೂ ಆದಂತಾಗುತ್ತದೆ. ಮುನಿಶ್ರೇಷ್ಠರ ಅನುಗ್ರಹದಿಂದ ನನ್ನ ಕಾಮನೆಯೂ ಪೂರ್ಣವಾಗಲಿ."

ಸೌತಿಗಳು ಹೇಳುತ್ತಾರೆ:

ಶೌನಕರೇ! ಜನಮೇಜಯನು ಹೀಗೆ ಹೇಳುತ್ತಿರುವಾಗಲೇ ಯೋಗ ವಿದ್ಯೆಯಲ್ಲಿ ಮಹಾಪ್ರತಾಪಶಾಲಿಗಳಾದ, ಧೀಮಂತರಾದ ವ್ಯಾಸರು ಜನಮೇಜಯನ ವಿಷಯದಲ್ಲಿ ಪ್ರಸನ್ನರಾದರು. ಅವರು ಪರೀಕ್ಷಿತನನ್ನು ಯಜ್ಞಭೂಮಿಗೆ ಕರೆಸಿದರು. ಅದೇ ರೂಪದಿಂದ, ಅದೇ ವಯಸ್ಸಿನಿಂದ ಕೂಡಿ ಸ್ವರ್ಗದಿಂದ ಆಗಮಿಸಿದ ತೇಜಸ್ವಿಯಾದ ತಂದೆಯನ್ನು ಜನಮೇಜಯನು ನೋಡಿದನು. ಅವನ ಜೊತೆಯಲ್ಲಿಯೇ ಮಹಾತ್ಮನಾದ ಶಮೀಕನೂ, ಅವನ ಮಗನಾದ ಶೃಂಗಿಯೂ ಇದ್ದರು. ಹಿಂದೆ ಪರೀಕ್ಷಿತರಾಜನೊಡನಿದ್ದ ಮಂತ್ರಿಗಳನ್ನೂ ಜನಮೇಜಯನು ನೋಡಿದನು.

ಅನಂತರ ಜನಮೇಜಯರಾಜನು ಅತ್ಯಂತಪ್ರಸನ್ನನಾಗಿ ಯಜ್ಞದ ಅವಭೃಥಸ್ನಾನದ ಸಮಯದಲ್ಲಿ ಮೊದಲು ತಂದೆಗೆ ಸ್ನಾನವನ್ನು ಮಾಡಿಸಿ ಅನಂತರ ತಾನು ಸ್ನಾನಮಾಡಿದನು. ಸ್ನಾನಮಾಡಿದನಂತರ ಜನಮೇಜಯನು ಸರ್ಪಯಾಗವು ನಿಲ್ಲಲು ಕಾರಣನಾದ ಯಾಯಾವರಕುಲದಲ್ಲಿ ಹುಟ್ಟಿದ್ದ, ಜರತ್ಕಾರುವಿನ ಮಗನಾದ ಆಸ್ತೀಕನಿಗೆ ಹೇಳಿದನು:

ಆಸ್ತೀಕ ವಿವಿಧಾಶ್ಚರ್ಯೋ ಯಜ್ಞೋಽಯಮಿತಿ ಮೇ ಮತಿಃ।
ಯದಾದ್ಯಾಯಂ ಪಿತಾ ಪ್ರಾಪ್ತೋ ಮಮ ಶೋಕಪ್ರಣಾಶನಃ ॥೧೧॥

"ಪೂಜ್ಯನಾದ ಆಸ್ತೀಕನೇ! ನಾನು ಮಾಡಿದ ಈ ಸರ್ಪಯಾಗವು ನಾನಾಪ್ರಕಾರವಾದ ಆಶ್ಚರ್ಯಗಳಿಗೆ ಕೇಂದ್ರವಾಗಿರುವುದೆಂದು ಭಾವಿಸುತ್ತೇನೆ. ಏಕೆಂದರೆ: ನನ್ನ ಶೋಕವನ್ನು ನಾಶಗೊಳಿಸುವಂತಹ ನನ್ನ ತಂದೆಯೇ ಇಲ್ಲಿಗೆ ಆಗಮಿಸಿದನು."

ಆಸ್ತೀಕನು ಹೇಳುತ್ತಾನೆ:

ಋಷಿರ್ದ್ವೈಪಾಯನೋ ಯತ್ರ ಪುರಾಣಸ್ತಪಸೋ ನಿಧಿಃ।
ಯಜ್ಞೇ ಕುರುಕುಲಶ್ರೇಷ್ಠ ತಸ್ಯ ಲೋಕಾವುಭೌ ಜಿತೌ ॥೧೨॥

"ಕುರುಕುಲಶ್ರೇಷ್ಠನೇ! ಪುರಾತನರಾದ, ತಪಸ್ಸಿಗೆ ನಿಧಿಪ್ರಾಯರಾದ ದ್ವೈಪಾಯನವ್ಯಾಸರು ಯಾವನ ಯಜ್ಞದಲ್ಲಿ ಉಪಸ್ಥಿತರಾಗಿರುವರೋ ಅವನು ಎರಡು ಲೋಕಗಳನ್ನೂ ಜಯಿಸುತ್ತಾನೆ. ಪಾಂಡುನಂದನನೇ! ನೀನು ವಿಚಿತ್ರವಾದ ಉಪಾಖ್ಯಾನವನ್ನು ಕೇಳಿದೆ. ಸರ್ಪಗಳೆಲ್ಲವೂ ಬೆಂದು ಬೂದಿಯಾಗಿ ನಿನ್ನ ಸತ್ಯಪರಾಯಣತೆಯ ಕಾರಣದಿಂದ ಒಂದು ರೀತಿಯಲ್ಲಿ ತಕ್ಷಕನು ಬದುಕಿಕೊಂಡನು. ನೀನು ಎಲ್ಲ ಋಷಿಗಳನ್ನೂ ಪೂಜಿಸಿ ಸತ್ಕರಿಸಿರುವೆ. ಮಹಾತ್ಮರಾದ ವ್ಯಾಸರ ಯೋಗಗತಿಯು ಎಷ್ಟು ಅಪಾರ ವಾದುದೆಂಬುದನ್ನು ಪ್ರತ್ಯಕ್ಷವಾಗಿಯೇ ನೋಡಿರುವೆ. ಪಾಪನಾಶಕವಾದ ಈ ಮಹಾಭಾರತದ ಕಥೆಯನ್ನು ಕೇಳಿ ಅಪಾರವಾದ ಪುಣ್ಯವನ್ನು ಗಳಿಸಿರುವೆ. ಉದಾರಹೃದಯರಾದ ಸತ್ಪುರುಷರ ದರ್ಶನದಿಂದ ನಿನ್ನ ಹೃದಯದಲ್ಲಿ ಸಂಶಯರೂಪವಾಗಿದ್ದ ಹಲವಾರು ಗಂಟುಗಳು ತಾವಾಗಿಯೇ ಬಿಚ್ಚಿಕೊಂಡುವು.

ಯೇ ಚ ಪಕ್ಷಧರಾ ಧರ್ಮೇ ಸದ್ವೃತ್ತರುಚಯಶ್ಚ ಯೇ ।
ಯಾನ್ದೃಷ್ಟ್ವಾ ಹೀಯತೇ ಪಾಪಂ ತೇಭ್ಯಃ ಕಾರ್ಯಾ ನಮಸ್ಕ್ರಿಯಾ ॥

ಯಾರು ಧರ್ಮದ ಪಕ್ಷಪಾತಿಗಳಾಗಿರುವರೋ, ಸದಾಚಾರದ ಪಾಲನೆ ಯಲ್ಲಿ ಅಭಿರುಚಿಯುಳ್ಳವರಾಗಿರುವರೋ, ಯಾರ ದರ್ಶನಮಾತ್ರದಿಂದ ಪಾಪಗಳೆಲ್ಲವೂ ನಾಶವಾಗುವುವೋ–ಅಂತಹ ಮಹಾತ್ಮರಿಗೆ ಅನುದಿನವೂ ನಮಸ್ಕಾರಮಾಡಬೇಕು."

ಸೌತಿಗಳು ಹೇಳುತ್ತಾರೆ:

"ಶೌನಕರೇ! ಜನಮೇಜಯನು ದ್ವಿಜಶ್ರೇಷ್ಠನಾದ ಆಸ್ತೀಕನಿಂದ ಈ ಮಾತನ್ನು ಕೇಳಿ ಮಹರ್ಷಿಗಳಾದ ವ್ಯಾಸರನ್ನು ಮತ್ತೆ-ಮತ್ತೆ ಪೂಜಿಸಿ ಸತ್ಕರಿಸಿದನು. ಬಳಿಕ ಧರ್ಮಜ್ಞನಾದ ಜನಮೇಜಯನು ಧರ್ಮದಿಂದ ಯಾವಾಗಲೂ ಚ್ಯುತರಾಗದ ವೈಶಂಪಾಯನರನ್ನು–ಧೃತರಾಷ್ಟ್ರನ ವನವಾಸದ ಉಳಿದಭಾಗವನ್ನು ಹೇಳುವಂತೆ–ಕೇಳಿಕೊಂಡನು."

ಇ೫ನೆಯ ಅಧ್ಯಾಯವು ಮುಗಿಯಿತು.

ವ್ಯಾಸರ ಆಜ್ಞೆಯಂತೆ ಧೃತರಾಷ್ಟ್ರನೇ ಮೊದಲಾದವರು ಪಾಂಡವರನ್ನು ಅರಣ್ಯದಿಂದ ಬೀಳ್ಕೊಟ್ಟುದು: ಯುಧಿಷ್ಠಿರನು ಪರಿವಾರದೊಡನೆ ಹಸ್ತಿನೆಗೆ ಹಿಂದಿರುಗಿದುದು.

ಜನಮೇಜಯನು ಹೇಳುತ್ತಾನೆ:

ದೃಷ್ಟ್ವಾ ಪುತ್ರಾಂಸ್ತಥಾ ಪೌತ್ರಾನ್ಸಾನುಬನ್ಧಾಞ್ಜನಾಧಿಪಃ।
ಧೃತರಾಷ್ಟ್ರಃ ಕಿಮಕರೋದ್ರಾಜಾ ಚೈವ ಯುಧಿಷ್ಠಿರಃ ॥೧॥

"ವೈಶಂಪಾಯನರೇ! ಧೃತರಾಷ್ಟ್ರನು ಪರಲೋಕಕ್ಕೆ ಹೋಗಿದ್ದ ತನ್ನ ಮಕ್ಕಳನ್ನೂ, ಮೊಮ್ಮಕ್ಕಳನ್ನೂ, ಬಂಧುಗಳನ್ನೂ ನೋಡಿದನಂತರ ಏನು ಮಾಡಿದನು? ಧರ್ಮರಾಜನು ಏನು ಮಾಡಿದನು?"

ವೈಶಂಪಾಯನರು ಹೇಳುತ್ತಾರೆ:

"ಜನಮೇಜಯ! ಮಹಾಶ್ಚರ್ಯಕರವಾದ ರೀತಿಯಲ್ಲಿ ಗತಿಸಿಹೋಗಿದ್ದ ಮಕ್ಕಳನ್ನು ಸಂದರ್ಶಿಸಿದ ರಾಜರ್ಷಿಯಾದ ಧೃತರಾಷ್ಟ್ರನು ಶೋಕರಹಿತನಾಗಿ ಆಶ್ರಮಕ್ಕೆ ಆಗಮಿಸಿದನು. ಅಲ್ಲಿಗೆ ಆಗಮಿಸಿದ್ದ ಇತರ ರಾಜರೂ ಮಹರ್ಷಿಗಳೂ ಧೃತರಾಷ್ಟ್ರನ ಅನುಜ್ಞೆಯನ್ನು ಪಡೆದು ಇಚ್ಛೆಬಂದಲ್ಲಿಗೆ ಪ್ರಯಾಣ ಮಾಡಿದರು. ಮಹಾತ್ಮರಾದ ಪಾಂಡವರು ವೇಗಯುಕ್ತರಾಗಿಯೂ ಬಹು ಸಂಖ್ಯಾಕರಾಗಿಯೂ ಇದ್ದ ಸೈನಿಕರೊಡನೆಯೂ, ಪತ್ನಿಯರೊಡನೆಯೂ, ಮಹಾತ್ಮನಾದ ಮಹೀಪತಿಯಾದ ಧೃತರಾಷ್ಟ್ರನನ್ನು ಅನುಸರಿಸಿ ಆಶ್ರಮಕ್ಕೆ ಹೋದರು. ಬ್ರಹ್ಮರ್ಷಿಗಳಾದ, ಲೋಕಪೂಜಿತರಾದ ಸತ್ಯವತಿಯ ಮಕ್ಕಳಾದ ವ್ಯಾಸರು ಆಶ್ರಮವನ್ನು ಸೇರಿದ ಧೃತರಾಷ್ಟ್ರನಿಗೆ ಹೇಳಿದರು:

"ಧೃತರಾಷ್ಟ್ರ! ಮಹಾಬಾಹುವೇ! ಕುರುನಂದನನೇ! ನೀನು ಜ್ಞಾನವೃದ್ಧರಾದ-ಪುಣ್ಯಕರ್ಮರಾದ ಋಷಿಗಳಿಂದಲೂ, ಶ್ರದ್ಧಾವಂತರಾದ ಕುಲವೃದ್ಧರಿಂದಲೂ, ವೇದ-ವೇದಾಂಗಗಳನ್ನು ತಿಳಿದವರಿಂದಲೂ ವಿಧ-ವಿಧವಾದ ಕಥೆಗಳನ್ನು ಹೇಳುವ ಧರ್ಮಜ್ಞರಾದ ಪ್ರಾಚೀನರಿಂದಲೂ ಅನೇಕ

ಧಾರ್ಮಿಕವಿಚಾರಗಳನ್ನು ಕೇಳಿ ತಿಳಿದುಕೊಂಡಿರುವೆ. ಇನ್ನಾದರೂ ನೀನು ಶೋಕಮಗ್ನನಾಗಬೇಡ. ದಿಷ್ಟೇ ನ ವ್ಯಥತೇ ಬುಧಃ–ದೈವಿಕವಾದ ಆಗು-ಹೋಗುಗಳ ವಿಷಯವಾಗಿ ವಿದ್ವಾಂಸನು ದುಃಖಪಡುವುದಿಲ್ಲ. ದೇವರ್ಷಿಗಳಾದ ನಾರದರಿಂದ ನೀನು ದೇವತೆಗಳ ರಹಸ್ಯವಿಷಯಗಳನ್ನು ಕೇಳಿರುವೆ. ಆ ಎಲ್ಲ ವೀರಕ್ಷತ್ರಿಯರೂ ಧರ್ಮಾನುಸಾರವಾಗಿ ಶಸ್ತ್ರಾಘಾತ ದಿಂದ ಪವಿತ್ರರಾಗಿ ಶುಭವಾದ ಗತಿಯನ್ನು ಹೊಂದಿರುತ್ತಾರೆ. ನೀನು ನೋಡಿದಂತೆಯೇ ನಿನ್ನ ಮಕ್ಕಳೆಲ್ಲರೂ ಸ್ವರ್ಗದಲ್ಲಿ ಸ್ವೇಚ್ಛಾವಿಹಾರಿ ಗಳಾಗಿದ್ದಾರೆ. ಧೀಮಂತನಾದ ಯುಧಿಷ್ಠಿರನು ಸಹೋದರರೊಡನೆಯೂ ಪತ್ನಿಯರೊಡನೆಯೂ ಸುಹೃಜ್ಜನರೊಡನೆಯೂ ಸ್ವತಃ ನಿನ್ನ ಸೇವೆಯಲ್ಲಿಯೇ ಇದ್ದುಬಿಟ್ಟಿದ್ದಾನೆ. ಪರಿವಾರದೊಡನೆ ಯುಧಿಷ್ಠಿರನು ಅರಣ್ಯಕ್ಕೆ ಬಂದು ಒಂದು ತಿಂಗಳ ಮೇಲಾಯಿತು. ಅವನನ್ನು ಈಗಲೇ ಕಳುಹಿಸಿಕೊಡು. ಅವನು ನಿಶ್ಚಿಂತೆಯಿಂದ ರಾಜ್ಯಭಾರವನ್ನು ಮಾಡಲಿ.

ಏತದ್ಧಿ ನಿತ್ಯಂ ಯತ್ನೇನ ಪದಂ ರಕ್ಷ್ಯಂ ನರಾಧಿಪ ।
ಬಹುಪ್ರತ್ಯರ್ಥಿಕಂ ಹ್ಯೇತದ್ರಾಜ್ಯಂ ನಾಮ ಕುರೂದ್ವಹ ॥೧೨॥

ಕುರುಶ್ರೇಷ್ಠನೇ! ರಾಜ್ಯವು ಯಾವಾಗಲೂ ಬಹುಶತ್ರುಗಳಿಂದ ಕೂಡಿ ರುವುದು. ಆದುದರಿಂದ ಅದನ್ನು ಯಾವಾಗಲೂ ಪ್ರಯತ್ನಪೂರ್ವಕವಾಗಿ ರಕ್ಷಿಸಬೇಕು." ಮಹಾತೇಜಸ್ವಿಗಳಾದ ವ್ಯಾಸರು ಹೀಗೆ ಹೇಳಲು ವಾಗ್ಮಿಯಾದ ಧೃತರಾಷ್ಟ್ರನು ಯುಧಿಷ್ಠಿರನನ್ನು ಹತ್ತಿರಕ್ಕೆ ಕರೆದು ಹೇಳಿದನು: "ಅಜಾತಶತ್ರುವೇ! ನಿನಗೆ ಮಂಗಳವಾಗಲಿ. ನಾನು ಹೇಳಲಿರುವುದನ್ನು ತಮ್ಮಂದಿರೊಡನೆ ಕೇಳು. ಮಹೀಪಾಲನೇ! ನಿನ್ನ ದಯೆಯಿಂದಾಗಿ ಈಗ ನಮ್ಮನ್ನು ಯಾವುದೇ ಶೋಕವೂ ಬಾಧಿಸುತ್ತಿಲ್ಲ. ಮಗು! ರಕ್ಷಕನಾದ ನಿನ್ನನ್ನು ಆಶ್ರಯಿಸಿಕೊಂಡು ಹಿಂದೆ ಹಸ್ತಿನಾಪಟ್ಟಣದಲ್ಲಿ ಎಷ್ಟು ಸುಖವಾಗಿದ್ದೆನೋ ಇಲ್ಲಿಯೂ ನಾನು ಅಷ್ಟೇ ಸುಖವಾಗಿದ್ದೇನೆ. ನನಗೆ ಪ್ರಿಯವಾದ ಕಾರ್ಯಗಳಲ್ಲಿಯೇ ಯಾವಾಗಲೂ ನಿರತನಾಗಿರುವ ನಿನ್ನಿಂದ ನಾನು ಪುತ್ರನಿಂದ ಪಡೆಯಬೇಕಾದ ಫಲವನ್ನು ಪೂರ್ಣವಾಗಿ ಪಡೆದಿರು ತ್ತೇನೆ. ಮಹಾಬಾಹುವೇ! ನಿನ್ನ ವಿಷಯದಲ್ಲಿ ನನಗೆ ಅತ್ಯಂತಪ್ರಿಯವಾದ

ಪ್ರೀತಿಯುಂಟಾಗಿದೆ. ಈಗ ನಿನ್ನ ವಿಷಯದಲ್ಲಿ ನನಗೆ ಸ್ವಲ್ಪವಾದರೂ ಕೋಪವಿಲ್ಲ. ಆದುದರಿಂದ ಶೀಘ್ರವಾಗಿ ನೀನು ಹಸ್ತಿನಾಪಟ್ಟಣಕ್ಕೆ ಪ್ರಯಾಣಮಾಡು. ನಿನ್ನನ್ನು ನೋಡಿಕೊಂಡೇ ಇದ್ದುಬಿಟ್ಟರೆ ನನ್ನ ತಪಸ್ಸು ಹಾಳಾಗುತ್ತದೆ. ನೀನು ಬರುವ ಮೊದಲು ನನ್ನ ಶರೀರವು ತಪಸ್ಸಿನಲ್ಲಿಯೇ ಮಗ್ನವಾಗಿದ್ದಿತು. ಆಹಾರಾದಿಗಳ ಪರಿವೆಯೇ ಇರುತ್ತಿರಲಿಲ್ಲ. ಆದರೆ ನಿನ್ನನ್ನು ನೋಡಿದಕೂಡಲೇ ಶರೀರದ ರಕ್ಷಣೆಗೆ ಲಕ್ಷ್ಯವು ಹೋಯಿತು. ತಪಸ್ಸಿನ ಕಡೆಗೆ ಲಕ್ಷ್ಯವಿಲ್ಲದೆಯೇ ಹೋಯಿತು. ನಿನ್ನ ತಾಯಿಯರಾದ ಗಾಂಧಾರೀ-ಕುಂತಿಯರು ಕೂಡ ನನ್ನಂತೆಯೇ ವ್ರತಾನುಷ್ಠಾನದಲ್ಲಿ ನಿರತರಾಗಿದ್ದಾರೆ. ಒಣಗಿಹೋದ ತರಗೆಲೆಗಳನ್ನೇ ತಿನ್ನುತ್ತಾ ಜೀವವನ್ನು ಧಾರಣೆ ಮಾಡಿಕೊಂಡಿದ್ದಾರೆ. ಇವರಿನ್ನು ಹೆಚ್ಚುಕಾಲ ಬದುಕಲಾರರು.

ಯುಧಿಷ್ಠಿರ! ನಿನ್ನ ಸಮಾಗಮದಿಂದಲೂ, ವ್ಯಾಸರ ತಪಸ್ಸಿನ ಬಲದಿಂದಲೂ ಲೋಕಾಂತರಗಳಿಗೆ ಹೋಗಿದ್ದ ದುರ್ಯೋಧನನೇ ಮೊದಲಾದ ಸಮಸ್ತಬಂಧುಗಳನ್ನೂ ನೋಡಿದೆನು. ಇದರಿಂದ ನನ್ನ ಜೀವಿತದ ಪ್ರಯೋಜನವೂ ಪೂರ್ಣವಾದಂತಾಯಿತು. ಈಗ ನಾನು ಕಠೋರವಾದ ತಪಸ್ಸಿನಲ್ಲಿ ತೊಡಗುತ್ತೇನೆ. ಇದಕ್ಕೆ ಅನುಮತಿಸುವುದು ನಿನಗೆ ಯೋಗ್ಯವಾಗಿದೆ ಮಹಾಬಾಹುವೇ! ಈಗ ಪಿತೃಗಳಿಗೆ ಪಿಂಡದಾನವೂ, ಯಶಸ್ಸೂ ಮತ್ತು ಕುಲವೂ ನಿನ್ನಲ್ಲಿಯೇ ಪ್ರತಿಷ್ಠಿತವಾಗಿವೆ. (ನಿನ್ನನ್ನೇ ಆಶ್ರಯಿಸಿರುತ್ತವೆ.) ಇಂದು ಅಥವಾ ನಾಳೆ ನೀನು ರಾಜಧಾನಿಗೆ ಪ್ರಯಾಣಮಾಡು. ಸಾವಕಾಶ ಮಾಡಬೇಡ. ಭರತಶ್ರೇಷ್ಠನೇ! ನೀನು ಅನೇಕಪ್ರಕಾರವಾಗಿ ರಾಜನೀತಿಗಳನ್ನು ಕೇಳಿರುವೆ. ನಾನು ನಿನಗೆ ಉಪದೇಶಮಾಡಬೇಕಾಗಿರುವುದು ಯಾವುದೂ ಕಾಣುತ್ತಿಲ್ಲ. ನೀನು ನನಗೆ ಬಹಳವಾಗಿ ಉಪಕಾರಮಾಡಿರುವೆ.”

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಹೀಗೆ ಹೇಳಿದ ಧೃತರಾಷ್ಟ್ರನಿಗೆ ಯುಧಿಷ್ಠಿರನು ಹೇಳಿದನು:

ನ ಮಾಮರ್ಹಸಿ ಧರ್ಮಜ್ಞ ಪರಿತ್ಯಕ್ತುಮನಾಗಸಮ್ ॥೨೨॥

"ಮಹಾರಾಜ! ನಿರಪರಾಧಿಯಾದ ನನ್ನನ್ನು ಪರಿತ್ಯಜಿಸುವುದು ನಿನಗೆ ಯೋಗ್ಯವಲ್ಲ.

ಕಾಮಂ ಗಚ್ಛನ್ತು ಮೇ ಸರ್ವೇ ಭ್ರಾತರೋಽನುಚರಾಸ್ತಥಾ।
ಭವನ್ತಮಹಮನ್ವಿಷ್ಯೇ ಮಾತರೌ ಚ ಯತವ್ರತಃ ॥೨೪॥

ನನ್ನ ಸಹೋದರರರೂ ಮತ್ತು ಅನುಯಾಯಿಗಳೂ ಹಸ್ತಿನಾಪಟ್ಟಣಕ್ಕೆ ಹೊರಟುಹೋಗಲಿ. ನಾನು ಮಾತ್ರ ವ್ರತನಿಷ್ಠನಾಗಿದ್ದು ನಿನ್ನ ಮತ್ತು ತಾಯಂದಿರ ಸೇವೆಯನ್ನು ಮಾಡಿಕೊಂಡಿರುತ್ತೇನೆ."

ಜನಮೇಜಯ! ಹೀಗೆ ಹೇಳಿದ ಯುಧಿಷ್ಠಿರನನ್ನು ಕುರಿತು ಗಾಂಧಾರಿಯು ಹೇಳಿದಳು:

ಮೈವಂ ಪುತ್ರ ಶೃಣುಷ್ವ ಚ ।
ತ್ವಯ್ಯಧೀನಂ ಕುರುಕುಲಂ ಪಿಣ್ಡಶ್ಚ ಶ್ವಶುರಸ್ಯ ಮೇ ॥೨೫॥
ಗಮ್ಯತಾಂ ಪುತ್ರ ಪರ್ಯಾಪ್ತಮೇತಾವತ್ಪೂಜಿತಾ ವಯಮ್ ।
ರಾಜಾ ಯದಾಹ ತತ್ಕಾರ್ಯಂ ತ್ವಯಾ ಪುತ್ರ ಪಿತುರ್ವಚಃ ॥೨೬॥

"ಪುತ್ರಕ! ನೀನು ಹೀಗೆ ಹೇಳಬಾರದು. ನಾನು ಹೇಳುವುದನ್ನು ಕೇಳು. ಈಗ ಕುರುಕುಲವೇ ನಿನ್ನ ಅಧೀನದಲ್ಲಿದೆ. ನನ್ನ ಮಾವನಾದ ವಿಚಿತ್ರವೀರ್ಯನಿಗೆ ಪಿಂಡಪ್ರದಾನಮಾಡುವ ಕಾರ್ಯವೂ ಈಗ ನಿನಗೇ ಸೇರಿದೆ. ನೀನು ನಮ್ಮನ್ನು ಇಲ್ಲಿಯವರೆಗೆ ಪರಿಪೂರ್ಣವಾಗಿ ಸತ್ಕರಿಸಿರುವೆ. ಯುಧಿಷ್ಠಿರ! ರಾಜನು ಹೇಳಿದಂತೆ ಮಾಡು. ಏಕೆಂದರೆ ಪಿತೃವಾಕ್ಯ ಪರಿಪಾಲನೆಯು ನಿನ್ನ ಮುಖ್ಯ ಕರ್ತವ್ಯವಾಗಿದೆ."

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಗಾಂಧಾರಿಯು ಹೀಗೆ ಹೇಳಿದ ಬಳಿಕ ಯುಧಿಷ್ಠಿರನು ಪ್ರೇಮಾಧಿಕ್ಯದಿಂದ ಕಣ್ಣುಗಳಲ್ಲಿ ತುಂಬಿಕೊಂಡಿದ್ದ ಕಣ್ಣೀರನ್ನು ಒರೆಸಿಕೊಳ್ಳುತ್ತಾ ರೋದನಮಾಡುತ್ತಿದ್ದ ಕುಂತಿಗೆ ಹೇಳಿದನು:

ವಿಸರ್ಜಯತಿ ಮಾಂ ರಾಜಾ ಗಾನ್ಧಾರೀ ಚ ಯಶಸ್ವಿನೀ ।
ಭವತ್ಯಾಂ ಬದ್ಧಚಿತ್ತಸ್ತು ಕಥಂ ಯಾಸ್ಯಾಮಿ ದುಃಖಿತಃ ॥೨೮॥

“ಅಮ್ಮ! ರಾಜನೂ, ಯಶಸ್ವಿನಿಯಾದ ಗಾಂಧಾರಿಯೂ ನನ್ನನ್ನು ಹೊರದೂಡುತ್ತಿದ್ದಾರೆ. ಆದರೆ ನನ್ನ ಮನಸ್ಸು ನಿನ್ನಲ್ಲಿಯೇ ಸೇರಿಹೋಗಿಬಿಟ್ಟಿದೆ. ನಾನು ಬಹಳ ದುಃಖಿತನಾಗಿದ್ದೇನೆ. ನಿನ್ನನ್ನು ಬಿಟ್ಟು ಹೇಗೆತಾನೇ ಹೋಗಲಮ್ಮಾ!

ನ ಚೋತ್ಸಹೇ ತಪೋವಿಘ್ನಂ ಕರ್ತುಂ ತೇ ಧರ್ಮಚಾರಿಣಿ।
ತಪಸೋ ಹಿ ಪರಂ ನಾಸ್ತಿ ತಪಸಾ ವಿನ್ದತೇ ಮಹತ್ ॥೨೯॥

ಧರ್ಮಚಾರಿಣಿಯೇ! ನಿನ್ನ ತಪಸ್ಸಿಗೆ ವಿಘ್ನವನ್ನುಂಟುಮಾಡುವುದರಲ್ಲಿ ನನಗೆ ಮನಸ್ಸಿಲ್ಲ. ತಪಸ್ಸಿಗಿಂತಲೂ ಅಧಿಕವಾದುದು ಬೇರೆ ಯಾವುದೂ ಇರುವುದಿಲ್ಲ. ನಿಷ್ಕಾಮಭಾವಪೂರ್ವಕವಾದ ತಪಸ್ಸಿನಿಂದ ಪರಬ್ರಹ್ಮ-ಪರಮಾತ್ಮನ ಪ್ರಾಪ್ತಿಯೂ ಆಗುತ್ತದೆ.

ಮಮಾಪಿ ನ ತಥಾ ರಾಜ್ಞಿ ರಾಜ್ಯೇ ಬುದ್ಧಿರ್ಯಥಾ ಪುರಾ।
ತಪಸ್ಯೇವಾನುರಕ್ತಂ ಮೇ ಮನಃ ಸರ್ವಾತ್ಮನಾ ತಥಾ ॥೩೦॥

ಮಹಾರಾಣಿ! ಹಿಂದಿನಂತೆ ಈಗ ನನ್ನ ಬುದ್ಧಿಯೂ ರಾಜಕಾರ್ಯಗಳಲ್ಲಿ ಉತ್ಸಾಹಪೂರ್ಣವಾಗಿಲ್ಲ. ನನ್ನ ಮನಸ್ಸು ಸರ್ವಪ್ರಕಾರದಿಂದಲೂ ತಪಸ್ಸಿನಲ್ಲಿಯೇ ಅನುರಕ್ತವಾಗಿದೆ.

ಶೂನ್ಯೇಯಂ ಚ ಮಹೀ ಕೃತ್ಸ್ನಾ ನ ಮೇ ಪ್ರೀತಿಕರೀ ಶುಭೇ।
ಬಾನ್ಧವಾ ನಃ ಪರಿಕ್ಷೀಣಾ ಬಲಂ ನೋ ನ ಯಥಾ ಪುರಾ ॥೩೧॥

ಸಮಗ್ರವಾದ ಈ ಭೂಮಂಡಲವೇ ನನಗೆ ಶೂನ್ಯವಾಗಿ ಕಾಣುತ್ತಿದೆ. ಇದು ನನಗೆ ಯಾವ ವಿಧದಲ್ಲಿಯೂ ಪ್ರೀತಿಯನ್ನುಂಟುಮಾಡುತ್ತಿಲ್ಲ. ನಮ್ಮ ಬಂಧುಗಳೆಲ್ಲರೂ ವಿನಾಶಹೊಂದಿದರು. ಹಿಂದಿನಂತೆ ಈಗ ನಮಗೆ ಸೈನ್ಯಬಲವೂ ಇಲ್ಲವಾಗಿದೆ.

ಪಞ್ಚಾಲಾಃ ಸುಭೃಶಂ ಕ್ಷೀಣಾಃ ಕಥಾಮಾತ್ರಾವಶೇಷಿತಾಃ।
ನ ತೇಷಾಂ ಕುಲಕರ್ತಾರಂ ಕಂಚಿತ್ಪಶ್ಯಾಮ್ಯಹಂ ಶುಭೇ ॥೩೨॥

ಪಾಂಚಾಲರೆಲ್ಲರೂ ಸಂಪೂರ್ಣವಾಗಿ ವಿನಾಶಹೊಂದಿದರು. ಅವರ ಕಥೆಯು ಮಾತ್ರವೇ ಉಳಿದಿದೆ. ಅವರ ಕುಲವನ್ನು ಉದ್ಧರಿಸುವ ಒಬ್ಬನನ್ನೂ ನಾನು ಕಾಣುತ್ತಿಲ್ಲ.

ಸರ್ವೇ ಹಿ ಭಸ್ಮಸಾನ್ನೀತಾಸ್ತೇ ದ್ರೋಣೇನ ರಣಾಜಿರೇ।
ಅವಶಿಷ್ಟಾಶ್ಚ ನಿಹತಾ ದ್ರೋಣಪುತ್ರೇಣ ವೈ ನಿಶಿ ॥೩೩॥

ಯುದ್ಧದಲ್ಲಿ ದ್ರೋಣರು ಪಾಂಚಾಲರೆಲ್ಲರನ್ನೂ ಭಸ್ಮೀಭೂತರನ್ನಾಗಿ ಮಾಡಿಬಿಟ್ಟರು. ಅಳಿದುಳಿದಿದ್ದ ಪಾಂಚಾಲರನ್ನು ಅಶ್ವತ್ಥಾಮನು ಅಂದಿನ ಘೋರರಾತ್ರಿಯಲ್ಲಿ ಸಂಹರಿಸಿದನು.

ಚೇದಯಶ್ಚೈವ ಮತ್ಸ್ಯಾಶ್ಚ ದೃಷ್ಟಪೂರ್ವಾಸ್ತಥೈವ ನಃ ।
ಕೇವಲಂ ವೃಷ್ಣಿಚಕ್ರಂ ಚ ವಾಸುದೇವಪರಿಗ್ರಹಾತ್।
ಯದ್ದೃಷ್ಟ್ವಾ ಸ್ಥಾತುಮಿಚ್ಛಾಮಿ ಧರ್ಮಾರ್ಥಂ ನಾರ್ಥಹೇತುತಃ ॥೩೪॥

ನಮ್ಮ ಸಂಬಂಧಿಗಳಾದ ಚೇದಿದೇಶೀಯರಾಗಲೀ ಮತ್ಸ್ಯದೇಶೀಯ ರಾಗಲೀ ಹಿಂದಿದ್ದಂತೆ ಈಗ ಇಲ್ಲ. ಕೇವಲ ಶ್ರೀಕೃಷ್ಣನ ಕೃಪಾಶ್ರಯದಿಂದಾಗಿ ವೃಷ್ಣಿವಂಶದ ವೀರರ ಸಮುದಾಯವು ಇಲ್ಲಿಯವರೆಗೂ ಸುರಕ್ಷಿತವಾಗಿದೆ. ಕೃಷ್ಣರಕ್ಷಿತರಾದ ಬಂಧುಗಳಾದ ಯಾದವರನ್ನು ನೋಡಿಕೊಂಡು ಧರ್ಮಕ್ಕಾಗಿ ಬಾಳಲು ಇಚ್ಛಿಸುತ್ತೇನೆ. ಬೇರೆ ಯಾವ ಪ್ರಯೋಜನಕ್ಕಾಗಿಯೂ ಅಲ್ಲ.

ಶಿವೇನ ಪಶ್ಯ ನಃ ಸರ್ವಾನ್ದುರ್ಲಭಂ ತವ ದರ್ಶನಮ್।
ಅವಿಷಹ್ಯಂ ಚ ರಾಜಾ ಹಿ ತೀವ್ರಂ ಚಾರಪ್ಸ್ಯತೇ ತಪಃ ॥೩೫॥

ಅಮ್ಮ! ನೀನು ನಮ್ಮೆಲ್ಲರನ್ನೂ ಮಂಗಳಮಯವಾದ ದೃಷ್ಟಿಯಿಂದ ನೋಡು. ಮುಂದೆ ನಿನ್ನ ದರ್ಶನವು ನಮಗೆ ದುರ್ಲಭವೇ ಸರಿ. ಈಗ ರಾಜನು ಸಹಿಸಲು ಅಶಕ್ಯವಾದ ಮತ್ತು ತೀವ್ರವಾದ ತಪಸ್ಸನ್ನು ಆರಂಭಿಸುತ್ತಾನೆ.'

ಜನಮೇಜಯ! ಯುಧಿಷ್ಠಿರನು ಕುಂತಿಗೆ ಹೇಳಿದ ಮಾತನ್ನು ಕೇಳಿ ಯೋಧರಿಗೆ ನಾಯಕನಾದ, ಮಹಾಬಾಹುವಾದ ಸಹದೇವನು ಕಂಬನಿದುಂಬಿದ ಕಣ್ಣುಗಳಿಂದ ಕೂಡಿ ಯುಧಿಷ್ಠಿರನಿಗೆ ಹೇಳಿದನು.

ನೋತ್ಸಹೇಽಹಂ ಪರಿತ್ಯಕ್ತುಂ ಮಾತರಂ ಭರತರ್ಷಭ ।
ಪ್ರತಿಯಾತು ಭವಾನ್ಕ್ಷಿಪ್ರಂ ತಪಸ್ತಪ್ಸ್ಯಾಮ್ಯಹಂ ವಿಭೋ ॥೩೭॥

ಇಹೈವ ಶೋಷಯಿಷ್ಯಾಮಿ ತಪಸೇದಂ ಕಲೇವರಮ್।
ಪಾದಶುಶ್ರೂಷಣೇ ರಕ್ತೋ ರಾಜ್ಞೋ ಮಾತ್ರೋಸ್ತಥಾನಯೋಃ ॥

"ಭರತಶ್ರೇಷ್ಠನೇ! ಅಣ್ಣ! ತಾಯಿಯನ್ನು ಬಿಟ್ಟು ಸರ್ವಥಾ ಬರಲಾರೆನು. ಪರಿವಾರಸಮೇತನಾಗಿ ನೀನು ಬೇಗನೆ ಹಸ್ತಿನಾಪಟ್ಟಣಕ್ಕೆ ಹೊರಡು. ನಾನು ಇಲ್ಲಿಯೇ ತಪಸ್ಸನ್ನು ಮಾಡಿಕೊಂಡಿದ್ದು ರಾಜನ ಮತ್ತು ತಾಯಿಯರ ಪಾದಸೇವೆಮಾಡುತ್ತಾ ಈ ನನ್ನ ಶರೀರವನ್ನು ಶೋಷಿಸುತ್ತೇನೆ."

ಜನಮೇಜಯ! ಸಹದೇವನ ಮಾತನ್ನು ಕೇಳಿದೊಡನೆಯೇ ಕುಂತಿಯು ಮಹಾಭುಜನಾದ ಅವನನ್ನು ಬಾಚಿತಬ್ಬಿಕೊಂಡು ಹೇಳಿದಳು:

ಗಮ್ಯತಾಂ ಪುತ್ರ ಮೈವಂ ತ್ವಂ ವೋಚಃ ಕುರು ವಚೋ ಮಮ ।
ಆಗಮಾ ವಃ ಶಿವಾಃ ಸನ್ತು ಸ್ವಸ್ಥಾ ಭವತ ಪುತ್ರಕಾಃ ॥೪೦॥

"ಮಗು! ಸಹದೇವ! ಹಾಗೆ ಹೇಳಬೇಡ. ಅಣ್ಣನ ಜೊತೆಯಲ್ಲಿ ಹಸ್ತಿನೆಗೆ ಹೋಗು. ನನ್ನ ಮಾತಿನಂತೆ ನಡೆದುಕೊ. ಮಕ್ಕಳೇ! ನಿಮ್ಮ ಮರುಪ್ರಯಾಣವು ಮಂಗಳವಾಗಲಿ. ನೀವೆಲ್ಲರೂ ಕ್ಷೇಮದಿಂದಿರಿ.

ಉಪರೋಧೋ ಭವೇದೇವಮಸ್ಮಾಕಂ ತಪಸಃ ಕೃತೇ ।
ತ್ವತ್ಸ್ನೇಹಪಾಶಬದ್ಧಾ ಚ ಹೀಯೇಯಂ ತಪಸಃ ಪರಾತ್ ।
ತಸ್ಮಾತ್ಪುತ್ರಕ ಗಚ್ಛ ತ್ವಂ ಶಿಷ್ಟಮಲ್ಪಂ ಚ ನಃ ಪ್ರಭೋ ॥೪೧॥

ನೀವೆಲ್ಲರೂ ಇಲ್ಲಿಯೇ ಇದ್ದುಬಿಟ್ಟರೆ ನಮ್ಮ ತಪಸ್ಸಿಗೆ ವಿಘ್ನವುಂಟಾಗುತ್ತದೆ. ಸಹದೇವ! ನೀನಿಲ್ಲಿಯೇ ಇದ್ದರೆ ನಿನ್ನ ಸ್ನೇಹಪಾಶದಿಂದ ಬಂಧಿಸಲ್ಪಡುವ ನಾನು ಶ್ರೇಷ್ಠವಾದ ತಪಸ್ಸಿನಿಂದ ವಂಚಿತಳಾಗುವೆನು. ನಮ್ಮ ಆಯುಷ್ಯವು ಸ್ವಲ್ಪ ಮಾತ್ರವೇ ಉಳಿದಿದೆ. ವ್ಯರ್ಥವಾಗಿ ಕಾಲಕಳೆಯಲು ಇದು ಸಮಯವಲ್ಲ. ಆದುದರಿಂದ, ಪ್ರಭುವೇ! ನೀನೂ ಇವರ ಜೊತೆಯಲ್ಲಿ ಹೋಗಿ ಬಾ."

ಜನಮೇಜಯ! ಹೀಗೆ ಕುಂತಿಯು ಅನೇಕ ಪ್ರಕಾರವಾಗಿ ಸಮಾಧಾನವನ್ನು ಹೇಳಿ ಸಹದೇವನ-ಅದರಲ್ಲಿಯೂ ವಿಶೇಷವಾಗಿ ಯುಧಿಷ್ಠಿರನ ಮನಸ್ಸನ್ನು ನಗರಕ್ಕೆ ಹೋಗಲು ಸ್ಥಿರಗೊಳಿಸಿದಳು.

ಬಳಿಕ ಕುರುಕುಲಶ್ರೇಷ್ಠರಾದ ಪಾಂಡವರು ತಾಯಿಯಿಂದಲೂ ರಾಜನಿಂದಲೂ ಅನುಮತಿಯನ್ನು ಪಡೆದು ಧೃತರಾಷ್ಟ್ರನಿಗೆ ಅಭಿವಾದನ ಪೂರ್ವಕವಾಗಿ ನಮಸ್ಕರಿಸುತ್ತಾ ಹೇಳಿದರು:

ರಾಜ್ಯಂ ಪ್ರತಿಗಮಿಷ್ಯಾಮಃ ಶಿವೇನ ಪ್ರತಿನನ್ದಿತಾಃ।
ಅನುಜ್ಞಾತಾಸ್ತ್ವಯಾ ರಾಜನ್ಗಮಿಷ್ಯಾಮೋ ವಿಕಲ್ಮಷಾಃ ॥೪೪॥



“ಮಹಾರಾಜ! ನಿನ್ನ ಶುಭವಾದ ಆಶೀರ್ವಾದಗಳಿಂದ ಆನಂದಿತ ರಾಗಿ ನಾವೆಲ್ಲರೂ ಕುಶಲರಾಗಿ ರಾಜಧಾನಿಗೆ ಪ್ರಯಾಣಮಾಡುತ್ತಿದ್ದೇವೆ.

ಪ್ರಯಾಣಮಾಡಲು ನಮಗೆ ಅನುಮತಿಯನ್ನು ದಯಪಾಲಿಸು. ನಿನ್ನ ಅನುಜ್ಞೆಯನ್ನು ಪಡೆದು ಮನಸ್ಸಿನಲ್ಲಿ ಯಾವ ವಿಧವಾದ ಕಲ್ಮಷವೂ ಇಲ್ಲದವರಾಗಿ ಇಲ್ಲಿಂದ ಪ್ರಯಾಣಮಾಡುತ್ತೇವೆ."

ಜನಮೇಜಯ! ಮಹಾತ್ಮನಾದ ಧರ್ಮರಾಜನು ಹೀಗೆ ಹೇಳಲು ರಾಜರ್ಷಿಯಾದ ಧೃತರಾಷ್ಟ್ರನು ಯುಧಿಷ್ಠಿರನನ್ನು ಅಭಿನಂದಿಸಿ ಪ್ರಯಾಣಹೊರಡಲು ಅನುಮತಿಸಿದನು.

ಧೃತರಾಷ್ಟ್ರನು ಬಲಿಷ್ಠರಲ್ಲಿ ಶ್ರೇಷ್ಠನಾದ ಭೀಮಸೇನನನ್ನೂ ಸಂತೈಸಿದನು. ಮೇಧಾವಿಯಾದ ಮತ್ತು ವೀರ್ಯವಂತನಾದ ಭೀಮಸೇನನೂ ಧೃತರಾಷ್ಟ್ರನ ಹಿತವಾಕ್ಯಗಳನ್ನು ಸೌಜನ್ಯದಿಂದಲೇ ಗ್ರಹಿಸಿದನು. ಬಳಿಕ ಧೃತರಾಷ್ಟ್ರನು ಅರ್ಜುನನನ್ನೂ ನಕುಲ-ಸಹದೇವರನ್ನೂ ಅನುಕ್ರಮವಾಗಿ ಆಲಿಂಗಿಸಿಕೊಂಡು ನೆತ್ತಿಯನ್ನು ಆಘ್ರಾಣಿಸಿ ಹಿತೋಕ್ತಿಗಳಿಂದ ಸಂತೈಸಿ ಪ್ರಯಾಣಮಾಡಲು ಅನುಮತಿಯನ್ನಿತ್ತನು. ಪಾಂಡವರು ಗಾಂಧಾರೀದೇವಿಗೂ ಅಭಿವಾದನ ಮಾಡಿ ಅವಳಿಂದಲೂ ಅನುಮತಿಯನ್ನು ಪಡೆದುಕೊಂಡರು. ತಾಯಿಯಾದ ಕುಂತೀದೇವಿಯು ಮಕ್ಕಳೆಲ್ಲರನ್ನೂ ಅನುಕ್ರಮವಾಗಿ ತಬ್ಬಿಕೊಂಡು ಅವರ ನೆತ್ತಿಯನ್ನು ಆಘ್ರಾಣಿಸಿದಳು. ಬಳಿಕ ಪಾಂಡವರು ಧೃತರಾಷ್ಟ್ರನನ್ನು ಪ್ರದಕ್ಷಿಣೆಮಾಡಿದರು. ಹಾಲುಕುಡಿಯುತ್ತಿರುವ ಕರುವನ್ನು ಹಿಂದಕ್ಕೆ ಸೆಳೆದು ಹಿಡಿದಂತೆಲ್ಲಾ ಅದು ಮುನ್ನುಗ್ಗಿಹೋಗುವಂತೆ–ಪಾಂಡವರು ಬಾರಿಬಾರಿಗೂ ರಾಜನ ಮುಖವನ್ನೇ ನಿರೀಕ್ಷಿಸುತ್ತಾ ಪ್ರದಕ್ಷಿಣೆಯನ್ನು ಮಾಡುತ್ತಲೇ ಇದ್ದರು. ದ್ರೌಪದಿಯೇ ಮೊದಲಾದ ಕೌರವಸ್ತ್ರೀಯರು ನ್ಯಾಯವಾದ ರೀತಿಯಲ್ಲಿ ಮಾವನಿಗೆ ನಮಸ್ಕಾರಮಾಡಿದರು. ಗಾಂಧಾರೀ-ಕುಂತಿಯರಿಬ್ಬರೂ ಸೊಸೆಯರನ್ನು ಆಲಿಂಗಿಸಿಕೊಂಡು ಅವರು ಮಾಡಬೇಕಾದ ಕರ್ತವ್ಯವನ್ನು ತಿಳಿಸಿಕೊಟ್ಟು ಆಶೀರ್ವದಿಸಿದರು. ಹೀಗೆ ಗಾಂಧಾರೀ ಮತ್ತು ಕುಂತಿಯರಿಂದ ಅನುಜ್ಞೆಯನ್ನು ಪಡೆದ ದ್ರೌಪದೀಪ್ರಮುಖರಾದ ಸ್ತ್ರೀಯರು ತಮ್ಮ ಗಂಡಂದಿರೊಡನೆ ಹಸ್ತಿನಾಪಟ್ಟಣಕ್ಕೆ ಪ್ರಯಾಣಮಾಡಿದರು. ಬಳಿಕ 'ಕುದುರೆಗಳನ್ನು ರಥಗಳಿಗೆ ಹೂಡಿರಿ'–ಎಂಬ ಸೂತರ ಶಬ್ದವೂ, ಕುದುರೆಗಳ ಕೆನೆಯುವ ಧ್ವನಿಯೂ, ಒಂಟೆಗಳ ಕೂಗೂ ಎಲ್ಲ ಕಡೆಗಳಿಂದಲೂ ಕೇಳಿ

ಬಂದಿತು. ಯುಧಿಷ್ಠಿರನು ತನ್ನ ಸಹೋದರರೊಡನೆಯೂ, ತನ್ನ ಮತ್ತು ತಮ್ಮಂದಿರ ಪತ್ನಿಯರೊಡನೆಯೂ, ಸೈನಿಕರೊಡನೆಯೂ, ಬಂಧುಗಳೊಡನೆಯೂ ಹಸ್ತಿನಾಪಟ್ಟಣಕ್ಕೆ ಹಿಂದಿರುಗಿದನು.”

ಇ೬ನೆಯ ಅಧ್ಯಾಯವು ಮುಗಿಯಿತು.

ಇ೭ನೆಯ ಅಧ್ಯಾಯ ನಾರದಾಗಮನಪರ್ವ

ಧೃತರಾಷ್ಟ್ರಾದಿಗಳು ಕಾಡುಗಿಚ್ಚಿಗೆ ಸಿಕ್ಕಿ ಸುಟ್ಟುಹೋದ ವಾರ್ತೆಯನ್ನು ನಾರದರಿಂದ ಕೇಳಿದ ಪಾಂಡವರ ದುಃಖ

ವೈಶಂಪಾಯನರು ಹೇಳುತ್ತಾರೆ:

ದ್ವಿವರ್ಷೋಪನಿವೃತ್ತೇಷು ಪಾಣ್ಡವೇಷು ಯದೃಚ್ಛಯಾ।
ದೇವರ್ಷಿರ್ನಾರದೋ ರಾಜನ್ನಾಜಗಾಮ ಯುಧಿಷ್ಠಿರಮ್ ॥೧॥

ಜನಮೇಜಯ! ಪಾಂಡವರು ಅರಣ್ಯದಿಂದ ಹಿಂದಿರುಗಿ ಎರಡು ವರ್ಷಗಳು ಕಳೆದನಂತರ ಒಂದು ದಿನ ದೇವರ್ಷಿಗಳಾದ ನಾರದರು ಆಕಸ್ಮಿಕವಾಗಿ ಯುಧಿಷ್ಠಿರನ ಅರಮನೆಗೆ ಆಗಮಿಸಿದರು. ಹಾಗೆ ಆಗಮಿಸಿದ ನಾರದರನ್ನು ಮಹಾಬಾಹುವಾದ ಕುರುರಾಜನಾದ ಯುಧಿಷ್ಠಿರನು ಯಥಾವಿಧಿಯಾಗಿ ಸತ್ಕರಿಸಿದನಂತರ ವಿಶ್ರಮಿಸಿಕೊಂಡು ಆಸನದಲ್ಲಿ ಕುಳಿತಿದ್ದ ವಾಗ್ಮಿಗಳಲ್ಲಿ ಶ್ರೇಷ್ಠರಾದ ನಾರದರೊಡನೆ ಹೇಳಿದನು:

“ಪೂಜ್ಯರೇ! ಬಹಳ ದಿವಸಗಳಿಂದ ನೀವು ಇಲ್ಲಿಗೆ ಆಗಮಿಸಲೇ ಇಲ್ಲ. ಬ್ರಾಹ್ಮಣೋತ್ತಮರೇ! ತಾವು ಕುಶಲಿಗಳಾಗಿರುವಿರಲ್ಲವೇ? ಶುಭವೇ ತಮಗೆ ಪ್ರಾಪ್ತವಾಗುತ್ತಿದೆಯಲ್ಲವೇ? ಈಗ ತಾವು ಯಾವ ಯಾವ ದೇಶಗಳನ್ನು ನೋಡಿಕೊಂಡು ಇಲ್ಲಿಗೆ ಆಗಮಿಸಿರುವಿರಿ? ನಾನು ಯಾವ ಕಾರ್ಯವನ್ನು ತಮಗೆ ಮಾಡಿಕೊಡಲಿ? ದ್ವಿಜಮುಖ್ಯರೇ! ಈ ವಿಷಯವನ್ನು ನನಗೆ ಹೇಳಿರಿ. ನಮ್ಮೆಲ್ಲರಿಗೂ ತಾವೇ ಪರಮಾಶ್ರಯರಾಗಿರುವಿರಿ.”

ನಾರದರು ಹೇಳುತ್ತಾರೆ:

“ಯುಧಿಷ್ಠಿರ! ನಿನ್ನನ್ನು ನೋಡಿ ಬಹಳ ಕಾಲವಾಯಿತೆಂದೇ ನಾನು

ಕೂಡ ತಪೋವನದಿಂದ ಇಲ್ಲಿಗೆ ಆಗಮಿಸಿದೆನು. ನಾನು ಇಲ್ಲಿಗೆ ಬರುವಾಗ ಅನೇಕ ಪುಣ್ಯತೀರ್ಥಗಳನ್ನೂ ಗಂಗಾನದಿಯನ್ನೂ ದರ್ಶನಮಾಡಿಕೊಂಡು ಬಂದೆನು."

ಯುಧಿಷ್ಠಿರನು ಹೇಳುತ್ತಾನೆ:

"ಪೂಜ್ಯರೇ! ಗಂಗಾತೀರನಿವಾಸಿಗಳಾದ ಪುರುಷರು-ಇತ್ತೀಚೆಗೆ ಮಹಾತ್ಮನಾದ ಧೃತರಾಷ್ಟ್ರನು ಕಠೋರವಾದ ತಪಸ್ಸಿನಲ್ಲಿ ನಿರತನಾಗಿರುವನೆಂದು ಹೇಳುತ್ತಿದ್ದಾರೆ. ತಾವೇನಾದರೂ ತಪೋವನದಲ್ಲಿ ಧೃತರಾಷ್ಟ್ರನನ್ನು ನೋಡಿದಿರಾ! ಕುರುಶ್ರೇಷ್ಠನು ಕುಶಲಿಯಾಗಿರುವನೇ? ಗಾಂಧಾರೀ, ಕುಂತೀ, ಸೂತನ ಮಗನಾದ ಸಂಜಯ-ಇವರೂ ಕುಶಲಿಗಳಾಗಿರುವರೇ? ಈಗ ನನ್ನ ತಂದೆಯಾದ ಧೃತರಾಷ್ಟ್ರರಾಜನು ಹೇಗಿದ್ದಾನೆ? ನೀವೇನಾದರೂ ರಾಜನನ್ನು ನೋಡಿದ್ದರೆ ಆ ವಿಷಯಗಳೆಲ್ಲವನ್ನೂ ನಿಮ್ಮಿಂದ ಕೇಳಿ ತಿಳಿಯಬೇಕೆಂದಿರುತ್ತೇನೆ."

ನಾರದರು ಹೇಳುತ್ತಾರೆ:

"ಮಹಾರಾಜ! ಆ ತಪೋವನದಲ್ಲಿ ಯಾವುದನ್ನು ನೋಡಿದೆನೋ ಮತ್ತು ಯಾವುದನ್ನು ಕೇಳಿದೆನೋ-ಆ ಎಲ್ಲವನ್ನೂ ಯಥಾವತ್ತಾಗಿಯೇ ಹೇಳುವೆನು; ಸ್ಥಿರಚಿತ್ತನಾಗಿ ಕೇಳು.

ನೀವೆಲ್ಲರೂ ತಪೋವನದಿಂದ ಹಿಂದಿರುಗಿದನಂತರ ಧೀಮಂತನಾದ ನಿಮ್ಮ ತಂದೆಯು ಗಾಂಧಾರೀ-ಕುಂತೀ-ಸಂಜಯರೊಡನೆಯೂ, ಯಾಜಕರೊಡನೆಯೂ, ಅಗ್ನಿಗಳೊಡನೆಯೂ ಕುರುಕ್ಷೇತ್ರದಿಂದ ಗಂಗಾದ್ವಾರಕ್ಕೆ (ಹರಿದ್ವಾರಕ್ಕೆ) ಪ್ರಯಾಣಮಾಡಿದನು. ಅಲ್ಲಿ ತಪೋಧನನಾದ ನಿನ್ನ ತಂದೆಯು ಕಠೋರವಾದ ತಪಸ್ಸನ್ನು ಆರಂಭಿಸಿದನು. ಬಾಯಲ್ಲಿ ಮರದಚೂರುಗಳನ್ನಿಟ್ಟುಕೊಂಡು ಗಾಳಿಯನ್ನೇ ಆಹಾರವನ್ನಾಗಿ ಸೇವಿಸುತ್ತಾ ಮೌನದಿಂದ ತಪಸ್ಸನ್ನು ಮಾಡುತ್ತಿದ್ದನು. ಮಹಾತಪಸ್ವಿಯಾಗಿದ್ದ ನಿನ್ನ ತಂದೆಯನ್ನು ಆ ತಪೋವನದಲ್ಲಿದ್ದ ಋಷಿಗಳೆಲ್ಲರೂ ಬಹಳವಾಗಿ ಗೌರವಿಸುತ್ತಿದ್ದರು. ಆ ಸಮಯದಲ್ಲಿ ಅವನ ಶರೀರದಲ್ಲಿ ಚರ್ಮ ಮತ್ತು ಮೂಳೆಗಳು ಮಾತ್ರವೇ ಉಳಿದಿದ್ದುವು. ಹಾಗೆಯೇ ಅವನು ಆರು

ಮಾಸಗಳನ್ನು ಕಳೆದನು. ರಾಜನು ಹೀಗೆ ಘೋರವಾದ ತಪಸ್ಸನ್ನು ಮಾಡುತ್ತಿದ್ದಾಗ ಗಾಂಧಾರಿಯು ನೀರನ್ನು ಮಾತ್ರ ಸೇವಿಸುತ್ತಿದ್ದಳು. ಕುಂತಿಯು ತಿಂಗಳಿಗೊಮ್ಮೆ ಆಹಾರವನ್ನು ತೆಗೆದುಕೊಳ್ಳುತ್ತಿದ್ದಳು. ಸಂಜಯನು ಆರನೆಯ ಹೊತ್ತಿನಲ್ಲಿ (ಎರಡು ದಿವಸಗಳು ಉಪವಾಸವಿದ್ದು ಮರುದಿನದ ರಾತ್ರಿಯಲ್ಲಿ) ಊಟಮಾಡುತ್ತಿದ್ದನು. ಯಾಜಕರು ಧೃತರಾಷ್ಟ್ರನ ಅಗ್ನಿಹೋತ್ರಾಗ್ನಿಗಳಲ್ಲಿ ಕಾಲಕಾಲಕ್ಕೆ ವಿಧಿವತ್ತಾಗಿ ಹೋಮಮಾಡುತ್ತಿದ್ದರು. ಆ ದಿವಸಗಳಲ್ಲಿ ಧೃತರಾಷ್ಟ್ರನು ಆ ಅರಣ್ಯದಲ್ಲಿ ಕೆಲವೊಮ್ಮೆ ಕಾಣಿಸಿಕೊಳ್ಳುತ್ತಿದ್ದನು. ಕೆಲವೊಮ್ಮೆ ಅದೃಶ್ಯನಾಗಿಬಿಡುತ್ತಿದ್ದನು. ಯಾವ ನಿಶ್ಚಿತವಾದ ಸ್ಥಾನವೂ ಇಲ್ಲದೇ ಅನಿಕೇತನಾಗಿ ರಾಜನು ಯಾವಾಗಲೂ ಅರಣ್ಯದಲ್ಲಿ ಸುತ್ತಾಡುತ್ತಿರುತ್ತಿದ್ದನು. ಗಾಂಧಾರಿ-ಕುಂತೀ-ಸಂಜಯರು ಅವನನ್ನೇ ಹಿಂಬಾಲಿಸಿಕೊಂಡು ಹೋಗುತ್ತಿದ್ದರು. ಸಮಪ್ರದೇಶಗಳಲ್ಲಿಯೂ, ಹಳ್ಳ-ತಿಟ್ಟುಗಳಲ್ಲಿಯೂ ಸಂಜಯನು ರಾಜನ ಕೈ ಹಿಡಿದುಕೊಂಡು ಹೋಗುತ್ತಿದ್ದನು. ಗಾಂಧಾರಿಗೆ ನಿಷ್ಕಳಂಕಳಾದ ಕುಂತಿಯು ಕಣ್ಣುಗಳಂತಿದ್ದಳು. (ಗಾಂಧಾರಿಯನ್ನು ಕುಂತಿಯು ಕರೆದೊಯ್ಯುತ್ತಿದ್ದಳು.) ಹೀಗೆಯೇ ಇರುತ್ತಿರಲಾಗಿ ಒಮ್ಮೆ ಧೀಮಂತನಾದ ರಾಜನು ಗಂಗಾನದಿಯ ತೀರಕ್ಕೆ ಹೋಗಿ ಗಂಗಾನದಿಯಲ್ಲಿ ಸ್ನಾನಮಾಡಿ ಆಶ್ರಮದ ಕಡೆ ಹೋಗುತ್ತಿದ್ದನು. ಆ ಸಮಯಕ್ಕೆ ಸರಿಯಾಗಿ ಬಿರುಗಾಳಿಯು ಬೀಸತೊಡಗಿತು. ದೊಡ್ಡದಾದ ಕಾಡುಗಿಚ್ಚು ಹೊತ್ತಿಕೊಂಡಿತು. ಕ್ಷಣಮಾತ್ರದಲ್ಲಿ ಅದು ತಪೋವನದ ಸುತ್ತಲೂ ಹರಡಿಕೊಂಡು ಗಿಡ-ಮರ-ಬಳ್ಳಿಗಳೇ ಮೊದಲಾಗಿ ಎಲ್ಲವನ್ನೂ ಸುಡತೊಡಗಿತು. ಆ ದಾವಾಗ್ನಿಯು ಅರಣ್ಯದ ಸುತ್ತಲೂ ಇದ್ದ ಮೃಗಗಳ ಸಮೂಹಗಳನ್ನೂ ಸರ್ಪಗಳನ್ನೂ ಅಪಾರಸಂಖ್ಯೆಯಲ್ಲಿ ಭಸ್ಮಮಾಡಿತು. ಕಾಡುಹಂದಿಗಳು ಬೆಂಕಿಯಿಂದ ತಪ್ಪಿಸಿಕೊಳ್ಳಲು ಓಡಿಹೋಗಿ ನೀರಿನಲ್ಲಿ ಬೀಳುತ್ತಿದ್ದುವು. ಆ ಅರಣ್ಯದಲ್ಲಿ ಕಾಡುಗಿಚ್ಚು ಎಲ್ಲೆಲ್ಲಿಯೂ ಹರಡುತ್ತಿರಲಾಗಿ ಧೃತರಾಷ್ಟ್ರಾದಿಗಳು ಅತಿಕಠಿನವಾದ ವ್ಯಸನಕ್ಕೊಳಗಾದರು.

ರಾಜನು ಅನೇಕ ದಿನಗಳವರೆಗೆ ನಿರಾಹಾರನಾಗಿದ್ದುದರಿಂದ ಪ್ರಾಣಶಕ್ತಿಯು ಸಂಪೂರ್ಣವಾಗಿ ಕ್ಷೀಣಿಸಿದ್ದು ಕಾಡುಗಿಚ್ಚಿನಿಂದ ತಪ್ಪಿಸಿಕೊಂಡು ಓಡಿಹೋಗಲು ಅಸಮರ್ಥನಾಗಿದ್ದನು. ಅಂತೆಯೇ ದುರ್ಬಲರೂ ಅತಿಕೃಶರೂ ಆಗಿದ್ದ ನಿನ್ನ ತಾಯಂದಿರೂ ಓಡಿಹೋಗಲು ಅಸಮರ್ಥರಾಗಿ

ದ್ದರು. ಬಳಿಕ ವಿಜಯಿಗಳಲ್ಲಿ ಶ್ರೇಷ್ಠನಾದ ಧೃತರಾಷ್ಟ್ರನು, ಬೆಂಕಿಯು ತನ್ನ ಸಮೀಪಕ್ಕೂ ಬರುತ್ತಿರುವುದನ್ನು ಕಂಡು ಸಂಜಯನಿಗೆ ಹೇಳಿದನು:

ಗಚ್ಛ ಸಂಜಯ ಯತ್ರಾಗ್ನಿರ್ನ ತ್ವಾಂ ದಹತಿ ಕರ್ಹಿಚಿತ್।
ವಯಮತ್ರಾಗ್ನಿನಾ ಯುಕ್ತಾ ಗಮಿಷ್ಯಾಮಃ ಪರಾಂ ಗತಿಮ್ ॥೨೩॥

"ಸಂಜಯ! ಆವರಿಸಿಕೊಂಡು ಬರುತ್ತಿರುವ ಈ ದಾವಾಗ್ನಿಯು ನಿನ್ನನ್ನು ದಹಿಸದಿರುವ ಸ್ಥಳಕ್ಕೆ ಈಗಲೇ ಹೊರಟುಹೋಗು. ನಾವಿಲ್ಲಿಯೇ ಅಗ್ನಿಯ ಜೊತೆಯಲ್ಲಿಯೇ ಇದ್ದು ಅದರಿಂದಲೇ ದಗ್ಧರಾಗಿ ಪರಮಗತಿಯನ್ನು ಹೊಂದುತ್ತೇವೆ."

ವಾಗ್ಮಿಗಳಲ್ಲಿ ಶ್ರೇಷ್ಠನಾದ ಸಂಜಯನು ರಾಜನ ಮಾತನ್ನು ಕೇಳಿ ಕಳವಳಗೊಂಡು ಹೇಳಿದನು:

ರಾಜನ್ಮೃತ್ಯುರನಿಷ್ಟೋಽಯಂ ಭವಿತಾ ತೇ ವೃಥಾಗ್ನಿನಾ।
ನ ಚೋಪಾಯಂ ಪ್ರಪಶ್ಯಾಮಿ ಮೋಕ್ಷಣೇ ಜಾತವೇದಸಃ ॥೨೫॥

"ಮಹಾರಾಜ! ಲೌಕಿಕಾಗ್ನಿಯಿಂದ ನಿನಗೆ ಮರಣವು ಸಂಭವಿಸುವುದು ಅನಿಷ್ಟವಾದುದು. (ನಿನ್ನ ಶರೀರದ ದಾಹಸಂಸ್ಕಾರವು ಆಹವನೀಯಾಗ್ನಿಯಿಂದಲೇ ಆಗಬೇಕಾಗಿದೆ.) ಈ ಸಮಯದಲ್ಲಿ ಕಾಡುಗಿಚ್ಚಿನಿಂದ ತಪ್ಪಿಸಿಕೊಳ್ಳಲು ನಾನು ಯಾವ ಉಪಾಯವನ್ನೂ ಕಾಣುತ್ತಿಲ್ಲ. ಮುಂದೆ ಮಾಡಬೇಕಾದ ಕಾರ್ಯವು ಯಾವುದೆಂಬುದನ್ನು ದಯಮಾಡಿ ಆಜ್ಞಾಪಿಸು."

ಜನಮೇಜಯ! ಸಂಜಯನು ಹೀಗೆ ಹೇಳಲು ರಾಜನು ಪುನಃ ಹೇಳಿದನು:

ನೈಷ ಮೃತ್ಯುರನಿಷ್ಟೋ ನೋ ನಿಃಸೃತಾನಾಂ ಗೃಹಾತ್ಸ್ವಯಮ್।
ಜಲಮಗ್ನಿಸ್ತಥಾ ವಾಯುರಥ ವಾಪಿ ವಿಕರ್ಷಣಮ್।
ತಾಪಸಾನಾಂ ಪ್ರಶಸ್ಯನ್ತೇ ಗಚ್ಛ ಸಂಜಯ ಮಾ ಚಿರಮ್ ॥೨೭॥

"ಸಂಜಯ! ನಾವು ಸ್ವೇಚ್ಛೆಯಿಂದಲೇ ಗೃಹವನ್ನು ಪರಿತ್ಯಜಿಸಿ ಅರಣ್ಯಕ್ಕೆ ಬಂದಿರುವೆವು. ಆದುದರಿಂದ ಈ ವಿಧವಾದ ಮರಣವು ನಮಗೆ ಅನಿಷ್ಟವಲ್ಲ. ತಪಸ್ವಿಗಳಿಗೆ ಜಲ, ಅಗ್ನಿ, ವಾಯು ಅಥವಾ ಉಪವಾಸ–

ಇವುಗಳ ಮೂಲಕ ಮರಣಹೊಂದುವುದು ಪ್ರಶಸ್ತವಾದುದು. ಆದುದರಿಂದ ನೀನೀಗಲೇ ಸಾವಕಾಶಮಾಡದೇ ಇಲ್ಲಿಂದ ಹೊರಟುಹೋಗು."

ಜನಮೇಜಯ! ಧೃತರಾಷ್ಟ್ರನು ಸಂಜಯನಿಗೆ ಹೀಗೆ ಹೇಳಿ ಮನಸ್ಸನ್ನು ಏಕಾಗ್ರಗೊಳಿಸಿ ಕುಂತೀ ಮತ್ತು ಗಾಂಧಾರಿಯರೊಡನೆ ಪೂರ್ವಾಭಿಮುಖ ವಾಗಿ ಕುಳಿತುಕೊಂಡನು. ರಾಜನು ಹೀಗೆ ಕುಳಿತುದನ್ನು ನೋಡಿ ಮೇಧಾವಿಯಾದ ಸಂಜಯನು ಅವನಿಗೆ ಪ್ರದಕ್ಷಿಣೆಯನ್ನು ಮಾಡಿ-'ಪ್ರಭುವೇ! 'ಯಂಕ್ಷ್ವಾತ್ಮಾನಂ' 'ಮನಸ್ಸನ್ನು ಆತ್ಮನಲ್ಲಿ ಸಂಯೋಜಿಸು' (ಯೋಗಯುಕ್ತ ನಾಗು)–ಎಂದು ಹೇಳಿದನು.



ವ್ಯಾಸಮಹರ್ಷಿಗಳ ಪುತ್ರನೂ, ವಿದ್ವಾಂಸನೂ ಆದ ರಾಜನು,

ಸಂಜಯನು ಹೇಳಿದಂತೆಯೇ ಇಂದ್ರಿಯಸಮುದಾಯವನ್ನು ನಿರೋಧಿಸಿ ಮನಸ್ಸನ್ನು ಆತ್ಮನಲ್ಲಿ ಲೀನಗೊಳಿಸಿ ಕಟ್ಟಿಗೆಯಂತೆ ನಿಶ್ಚೇಷ್ಟನಾದನು. ಮಹಾಭಾಗ್ಯಶಾಲಿಯಾದ ಗಾಂಧಾರಿಯೂ, ನಿನ್ನ ತಾಯಿಯಾದ ಕುಂತಿಯೂ, ತಂದೆಯಾದ ಧೃತರಾಷ್ಟ್ರರಾಜನೂ ಕಾಡುಗಿಚ್ಚಿನಲ್ಲಿಯೇ ಸೇರಿಹೋದರು. ಮಹಾಮಾತ್ರನಾದ ಸಂಜಯನು ಓಡಿಹೋಗಿ ದಾವಾಗ್ನಿಯಿಂದ ತಪ್ಪಿಸಿಕೊಂಡನು.

ತಪಸ್ವಿಗಳಿಂದ ಸಮಾವೃತನಾಗಿ ಕುಳಿತಿದ್ದ ಸಂಜಯನನ್ನು ನಾನು ಗಂಗಾತೀರದಲ್ಲಿ ನೋಡಿದೆನು. ಬುದ್ಧಿವಂತನೂ ತೇಜಸ್ವಿಯೂ ಆದ ಸಂಜಯನು ಈ ಎಲ್ಲ ವಿಷಯಗಳನ್ನೂ ಸುತ್ತಲೂ ಕುಳಿತಿದ್ದ ತಪಸ್ವಿಗಳಿಗೆ ಹೇಳಿ ಹಿಮವತ್ಪರ್ವತಕ್ಕೆ ಹೊರಟುಹೋದನು. ಯುಧಿಷ್ಠಿರ! ಹೀಗೆ ಮಹಾತ್ಮನಾದ ಕುರುರಾಜನೂ, ತಾಯಿಯಾದ ಗಾಂಧಾರೀ-ಕುಂತಿಯರೂ ನಿಧನಹೊಂದಿದರು. ನಾನು ಅರಣ್ಯದಲ್ಲಿ ಸಂಚರಿಸುತ್ತಿದ್ದಾಗ ಆಕಸ್ಮಿಕವಾಗಿ ರಾಜನ ಮತ್ತು ಆ ಇಬ್ಬರು ದೇವಿಯರ ಕಳೇಬರಗಳನ್ನು ನೋಡಿದೆನು. ರಾಜನೂ ಗಾಂಧಾರೀ-ಕುಂತಿಯರೂ ಕಾಡುಗಿಚ್ಚಿನಲ್ಲಿ ಮರಣಹೊಂದಿದ ರೆಂಬ ವಾರ್ತೆಯನ್ನು ಕೇಳಿ ಆ ತಪೋವನದಲ್ಲಿದ್ದ ತಪಸ್ವಿಗಳೆಲ್ಲರೂ ಅಲ್ಲಿಗೆ ಧಾವಿಸಿಬಂದರು. ಆ ಮೂವರಿಗೂ ಸದ್ಗತಿಯು ಪ್ರಾಪ್ತವಾಗಿರುವುದೆಂಬ ವಿಷಯದಲ್ಲಿ ಅವರಿಗೆ ಸಂದೇಹವೇ ಇಲ್ಲದಿದ್ದುದರಿಂದ ಅವರು ಧೃತರಾಷ್ಟ್ರಾದಿಗಳ ಮರಣಕ್ಕಾಗಿ ಶೋಕಪಡಲಿಲ್ಲ. ಪುರುಷಶ್ರೇಷ್ಠನೇ! ರಾಜನೂ ಮತ್ತು ದೇವಿಯರೂ ಹೇಗೆ ನಿಧನಹೊಂದಿದರೆಂಬ ಈ ಎಲ್ಲ ವಿಷಯಗಳನ್ನೂ ನಾನು ಅಲ್ಲಿಯೇ ಕೇಳಿದೆನು. ರಾಜೇಂದ್ರ! ನೀನು ಕೂಡ ಅವರ ಸಲುವಾಗಿ ದುಃಖಿಸಬಾರದು. ಏಕೆಂದರೆ: ಪೃಥಿವೀಪತಿಯಾದ ಧೃತರಾಷ್ಟ್ರನೂ, ಗಾಂಧಾರಿಯೂ ಮತ್ತು ಕುಂತಿಯೂ ತಾವಾಗಿಯೇ ಅಗ್ನಿಯಲ್ಲಿ ಸೇರಿಹೋದರು.”

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಧೃತರಾಷ್ಟ್ರನ ನಿರ್ಯಾಣವಾರ್ತೆಯನ್ನು ಕೇಳಿ ಮಹಾತ್ಮರಾದ ಎಲ್ಲ ಪಾಂಡವರಿಗೂ ಮಹಾಶೋಕವುಂಟಾಯಿತು.

ಅಂತಃಪುರದಲ್ಲಿ ಆರ್ತನಾದವುಂಟಾಯಿತು. ಧೃತರಾಷ್ಟ್ರನಿಗುಂಟಾದ ಅಂತಹ ಗತಿಯನ್ನು ಕೇಳಿ ಪಟ್ಟಣಿಗರೂ ಗೋಳಾಡಿದರು. ಅತ್ಯಂತದುಃಖಿತನಾದ ಯುಧಿಷ್ಠಿರನು ತಾಯಿಯನ್ನು ಜ್ಞಾಪಿಸಿಕೊಂಡು ಕೈಗಳೆರಡನ್ನೂ ಮೇಲೆತ್ತಿ ಕೊಂಡು-'ಅಯ್ಯೋ! ನನಗೆ ಧಿಕ್ಕಾರವಿರಲಿ'–ಎಂದು ಕೂಗಿಕೊಳ್ಳುತ್ತಾ ರೋದನಮಾಡಿದನು. ಕುಂತೀದೇವಿಯು ಹೀಗೆ ನಿಧನಹೊಂದಿದ ವಾರ್ತೆ ಯನ್ನು ಕೇಳಿ ಭೀಮಸೇನನೇ ಮೊದಲಾದ ಪಾಂಡವರೂ ರೋದನ ಮಾಡತೊಡಗಿದರು. ಅಂತಃಪುರದ ಕಡೆಯಿಂದಲೂ ಗಟ್ಟಿಯಾದ ಅಳುವಿನ ಶಬ್ದವು ಕೇಳಿಬರುತ್ತಿದ್ದಿತು. ಪುತ್ರಹೀನನೂ, ವೃದ್ಧನೂ ಆಗಿದ್ದ ಧೃತರಾಷ್ಟ್ರನೂ ತಪಸ್ವಿನಿಯಾದ ಗಾಂಧಾರಿಯೂ ಹೀಗೆ ಕಾಡುಗಿಚ್ಚಿನಲ್ಲಿ ಸಿಕ್ಕಿ ನಿಧನ ಹೊಂದಿದರೆಂಬುದನ್ನು ಕೇಳಿ ಎಲ್ಲರೂ ಬಹಳವಾಗಿ ಶೋಕಿಸಿದರು. ಸ್ವಲ್ಪಹೊತ್ತುಕಳೆದನಂತರ ಅಳುವಿನ ಶಬ್ದವು ಶಾಂತವಾಗಲಾಗಿ ಧರ್ಮರಾಜನು ಧೈರ್ಯದಿಂದ ಕಣ್ಣೀರನ್ನು ತಡೆಹಿಡಿದು (ಅಳುವನ್ನು ನಿಲ್ಲಿಸಿ) ಹೇಳತೊಡಗಿದನು."

ಇ೭ನೆಯ ಅಧ್ಯಾಯವು ಮುಗಿಯಿತು.

ಇ೮ನೆಯ ಅಧ್ಯಾಯ ನಾರದಾಗಮನಪರ್ವ (ಮುಂದುವರಿದಿದೆ.)

ಧೃತರಾಷ್ಟ್ರಾದಿಗಳು ಲೌಕಿಕಾಗ್ನಿಯಲ್ಲಿ ದಗ್ಧರಾದುದನ್ನೇ ಹೇಳಿಕೊಂಡು ನಾರದರಲ್ಲಿ ಯುಧಿಷ್ಠಿರನ ಪರಿತಾಪ

ಯುಧಿಷ್ಠಿರನು ಹೇಳುತ್ತಾನೆ:

ತಥಾ ಮಹಾತ್ಮನಸ್ತಸ್ಯ ತಪಸ್ಯುಗ್ರೇ ಚ ವರ್ತತಃ।
ಅನಾಥಸ್ಯೇವ ನಿಧನಂ ತಿಷ್ಠತ್ಸ್ವಸ್ಮಾಸು ಬನ್ಧುಷು ॥೧॥

"ಪೂಜ್ಯರೇ! ಆತ್ಮೀಯಬಂಧುಗಳಾದ ನಾವೆಲ್ಲರೂ ಇರುವಾಗ, ಕಠೋರತಪಸ್ಸಿನಲ್ಲಿ ತೊಡಗಿದ್ದ ಮಹಾತ್ಮನಾದ ಧೃತರಾಷ್ಟ್ರನ ನಿಧನವು ಗತಿಯೇ ಇಲ್ಲದವನ ರೀತಿಯಲ್ಲಿ ಆಗಿಹೋಯಿತು.

ದುರ್ವಿಜ್ಞೇಯಾ ಗತಿರ್ಬ್ರಹ್ಮನ್ಪುರುಷಾಣಾಂ ಮತಿರ್ಮಮ।
ಯತ್ರ ವೈಚಿತ್ರವೀರ್ಯೋಽಸೌ ದಗ್ಧ ಏವಂ ವನಾಗ್ನಿನಾ ॥೨॥

ಬ್ರಾಹ್ಮಣಶ್ರೇಷ್ಠರೇ! ಮನುಷ್ಯರ ಸ್ಥಿತಿ-ಗತಿಗಳನ್ನು ತಿಳಿಯುವುದು

ಬಹಳ ಕಷ್ಟಸಾಧ್ಯವೆಂದೇ ನನ್ನ ಅಭಿಪ್ರಾಯವಾಗಿದೆ. ವಿಚಿತ್ರವೀರ್ಯನ ಮಗನಾದ ಧೃತರಾಷ್ಟ್ರರಾಜನು ನಿರ್ಗತಿಕನಂತೆ ಕಾಡುಗಿಚ್ಚಿನಲ್ಲಿ ಸುಟ್ಟು ಹೋದನಲ್ಲವೇ?

ಯಸ್ಯ ಪುತ್ರಶತಂ ಶ್ರೀಮದಭವನ್ಬಾಹುಶಾಲಿನಃ।
ನಾಗಾಯುತಬಲೋ ರಾಜಾ ಸ ದಗ್ಧೋ ಹಿ ದವಾಗ್ನಿನಾ ॥೩॥

ಬಾಹುಬಲಶಾಲಿಯಾದ ರಾಜನಿಗೆ ಸಂಪದ್ಯುಕ್ತರಾದ ನೂರು ಮಂದಿ ಮಕ್ಕಳಿದ್ದರು. ರಾಜನೇ ಸ್ವತಃ ಹತ್ತುಸಾವಿರ ಆನೆಗಳ ಬಲವುಳ್ಳವನಾಗಿದ್ದನು. ಅಂತಹವನು ಕಾಡುಗಿಚ್ಚಿನಿಂದ ಸುಟ್ಟು ಭಸ್ಮವಾಗಿ ಹೋದನು.

ಯಂ ಪುರಾ ಪರ್ಯವೀಜನ್ತ ತಾಲವೃನ್ತೈರ್ವರಸ್ತ್ರಿಯಃ।
ತಂ ಗೃಧ್ರಾಃ ಪರ್ಯವೀಜನ್ತ ದಾವಾಗ್ನಿಪರಿಕಾಲಿತಮ್ ॥೪॥

ಹಿಂದೆ ಧೃತರಾಷ್ಟ್ರರಾಜನಿಗೆ ಸುಂದರಿಯರಾದ ಸ್ತ್ರೀಯರು ತಾಳೇಗರಿಯ ಬೀಸಣಿಗೆಗಳಿಂದ ಗಾಳಿಯನ್ನು ಬೀಸುತ್ತಿದ್ದರು. ಆದರೆ ಈಗ ಕಾಡುಗಿಚ್ಚಿನಿಂದ ಸುಟ್ಟುಹೋಗಿ ಹೇಳುವವರು ಕೇಳುವವರೇ ಇಲ್ಲದೆ ಬಿದ್ದಿರುವ ಅವನ ಶರೀರಕ್ಕೆ ರಣಹದ್ದುಗಳು ರೆಕ್ಕೆಗಳಿಂದ ಗಾಳಿಯನ್ನು ಬೀಸುತ್ತಿವೆ. (ಎಂತಹ ವಿಪರ್ಯಾಸವಿದು!)

ಸೂತಮಾಗಧಸಂಘೈಶ್ಚ ಶಯಾನೋ ಯಃ ಪ್ರಬೋಧ್ಯತೇ।
ಧರಣ್ಯಾಂ ಸ ನೃಪಃ ಶೇತೇ ಪಾಪಸ್ಯ ಮಮ ಕರ್ಮಭಿಃ ॥೫॥

ಹಿಂದೆ ಹಂಸತೂಲಿಕಾತಲ್ಪದಲ್ಲಿ ಮಲಗಿರುತ್ತಿದ್ದ ಅವನನ್ನು ಸೂತ-ಮಾಗಧರ ಸಮೂಹಗಳು ಗಾಯನಮಾಡುತ್ತಾ ಎಚ್ಚರ ಗೊಳಿಸುತ್ತಿದ್ದುವು. ಆದರೆ ಈಗ ಅದೇ ರಾಜನು ನಾನು ಮಾಡಿದ ಪಾಪಕರ್ಮಗಳ ಫಲವಾಗಿ ದಿಕ್ಕಿಲ್ಲದವನಂತೆ ನೆಲದ ಮೇಲೆ ಬಿದ್ದಿದ್ದಾನೆ.

ನ ಚ ಶೋಚಾಮಿ ಗಾನ್ಧಾರೀಂ ಹತಪುತ್ರಾಂ ಯಶಸ್ವಿನೀಮ್।
ಪತಿಲೋಕಮನುಪ್ರಾಪ್ತಾಂ ತಥಾ ಭರ್ತೃವ್ರತೇ ಸ್ಥಿತಾಮ್ ॥೬॥

ಯಶಸ್ವಿನಿಯಾದ ಗಾಂಧಾರಿಯು ಪುತ್ರರಿಂದ ವಿಹೀನಳಾಗಿದ್ದಳು. ಪಾತಿವ್ರತ್ಯಧರ್ಮದಲ್ಲಿಯೇ ನೆಟ್ಟ ಮನಸ್ಸುಳ್ಳ ಅವಳು ಪತಿಲೋಕವನ್ನು ಹೊಂದಿದ್ದಾಳೆ. ಅವಳ ವಿಷಯವಾಗಿ ನಾನು ಹೆಚ್ಚು ಶೋಕಪಡುವುದಿಲ್ಲ.

ಪೃಥಾಮೇವ ಚ ಶೋಚಾಮಿ ಯಾ ಪುತ್ರೈರೈಶ್ವರ್ಯಮೃದ್ಧಿಮತ್।
ಉತ್ಸೃಜ್ಯ ಸುಮಹದ್ದೀಪ್ತಂ ವನವಾಸಮರೋಚಯತ್ ॥೭॥

ಆದರೆ ನನ್ನ ತಾಯಿಯಾದ ಕುಂತಿಗಾಗಿ ಬಹಳ ದುಃಖಪಡುತ್ತಿದ್ದೇನೆ. ಸಮೃದ್ಧವಾದ ಮತ್ತು ಸಮುಜ್ವಲವಾದ ಪುತ್ರೈಶ್ವರ್ಯವನ್ನೂ ಪರಿತ್ಯಜಿಸಿ ವನವಾಸದಲ್ಲಿಯೇ ಅಭಿರುಚಿಯುಳ್ಳವಳಾಗಿ ಹೊರಟುಹೋದಳು.

ಧಿಗ್ರಾಜ್ಯಮಿದಮಸ್ಮಾಕಂ ಧಿಗ್ಬಲಂ ಧಿಕ್ಪರಾಕ್ರಮಮ್।
ಕ್ಷತ್ರಧರ್ಮಂ ಚ ಧಿಗ್ಯಸ್ಮಾನ್ಮೃತಾ ಜೀವಾಮಹೇ ವಯಮ್ ॥೮॥

ನಮ್ಮ ಈ ರಾಜ್ಯಕ್ಕೆ ಧಿಕ್ಕಾರವಿರಲಿ! ನಮ್ಮ ಬಲಕ್ಕೆ ಧಿಕ್ಕಾರವಿರಲಿ! ನಮ್ಮ ಪರಾಕ್ರಮಕ್ಕೆ ಧಿಕ್ಕಾರವಿರಲಿ! ಕ್ಷತ್ರಧರ್ಮಕ್ಕೂ ಧಿಕ್ಕಾರವಿರಲಿ! ಈ ಅನರ್ಥಗಳನ್ನು ತಡೆಯಲಾಗದ ನಾವು ಮೃತಪ್ರಾಯರೇ ಸರಿ. ಆದರೂ ಬದುಕಿದ್ದೇವೆ.

ಸುಸೂಕ್ಷ್ಮಾ ಕಿಲ ಕಾಲಸ್ಯ ಗತಿರ್ದ್ವಿಜವರೋತ್ತಮ ।
ಯತ್ಸಮುತ್ಸೃಜ್ಯ ರಾಜ್ಯಂ ಸಾ ವನವಾಸಮರೋಚಯತ್ ॥೯॥

ದ್ವಿಜಶ್ರೇಷ್ಠರೇ! ಕಾಲದ ಗತಿಯು ಅತ್ಯಂತಸೂಕ್ಷ್ಮವಷ್ಟೆ! ಇದನ್ನು ತಿಳಿದೇ ನನ್ನ ತಾಯಿಯು ರಾಜ್ಯವನ್ನು ಪರಿತ್ಯಜಿಸಿ ಅರಣ್ಯಕ್ಕೆ ಹೋಗಲು ಇಷ್ಟಪಟ್ಟಳು.

ಯುಧಿಷ್ಠಿರಸ್ಯ ಜನನೀ ಭೀಮಸ್ಯ ವಿಜಯಸ್ಯ ಚ ।
ಅನಾಥವತ್ಕಥಂ ದಗ್ಧಾ ಇತಿ ಮುಹ್ಯಾಮಿ ಚಿನ್ತಯನ್ ॥೧೦॥

ಯುಧಿಷ್ಠಿರ-ಭೀಮಾರ್ಜುನರ ತಾಯಿಯಾದವಳು ಅನಾಥಳಂತೆ ಹೇಗೆ ಕಾಡುಗಿಚ್ಚಿಗೆ ಸಿಕ್ಕಿ ಸತ್ತಳು? ಇದನ್ನೇ ಚಿಂತಿಸುತ್ತಾ ನಾನು ವಿಮೋಹಗೊಳ್ಳುತ್ತೇನೆ.

ವೃಥಾ ಸಂತರ್ಪಿತೋ ವಹ್ನಿಃ ಖಾಣ್ಡವೇ ಸವ್ಯಸಾಚಿನಾ।
ಉಪಕಾರಮಜಾನನ್ಸ ಕೃತಘ್ನ ಇತಿ ಮೇ ಮತಿಃ ॥೧೧॥

ಅರ್ಜುನನು ಅಗ್ನಿಗೆ ಖಾಂಡವವನವನ್ನು ಸುಡಲು ಅವಕಾಶ ಮಾಡಿಕೊಟ್ಟು ಅವನನ್ನು ತೃಪ್ತಿಗೊಳಿಸಿದುದು ವ್ಯರ್ಥವಾಯಿತೆಂದೇ ನಾನು

ಭಾವಿಸುತ್ತೇನೆ. ಆ ಉಪಕಾರವನ್ನು ಸ್ಮರಿಸದೆಯೇ ಅಗ್ನಿಯು ಅರ್ಜುನನ ತಾಯಿಯನ್ನೇ ಸುಟ್ಟನಾದ ಕಾರಣ ಅವನು ಕೃತಘ್ನನೇ ಸರಿ.

ಯತ್ರಾದಹತ್ಸ ಭಗವಾನ್ಮಾತರಂ ಸವ್ಯಸಾಚಿನಃ।
ಕೃತ್ವಾ ಯೋ ಬ್ರಾಹ್ಮಣಚ್ಛದ್ಮ ಭಿಕ್ಷಾರ್ಥೀ ಸಮುಪಾಗತಃ ।
ಧಿಗಗ್ನಿಂ ಧಿಕ್ಚ ಪಾರ್ಥಸ್ಯ ವಿಶ್ರುತಾಂ ಸತ್ಯಸಂಧತಾಮ್ ॥೧೨॥

ಹಿಂದೊಮ್ಮೆ ಅಗ್ನಿಯು ಬ್ರಾಹ್ಮಣನ ವೇಷದಲ್ಲಿ ಭಿಕ್ಷಾರ್ಥಿಯಾಗಿ ಅರ್ಜುನನ ಬಳಿಗೆ ಬಂದಿದ್ದನು. ಸತ್ಯಪ್ರತಿಜ್ಞನಾದ ಅರ್ಜುನನು ಅವನ ಅಪೇಕ್ಷೆಯಂತೆ ಖಾಂಡವವನವನ್ನು ಸುಡಲು ಅವಕಾಶಮಾಡಿಕೊಟ್ಟು ಅವನನ್ನು ತೃಪ್ತಿಗೊಳಿಸಿದನು. ಅದಕ್ಕೆ ಪ್ರತಿಫಲವಾಗಿ ಅಗ್ನಿಯು ಅರ್ಜುನನ ತಾಯಿಯನ್ನೇ ಸುಟ್ಟುಹಾಕಿದನು. ಅಗ್ನಿಗೂ ಧಿಕ್ಕಾರವಿರಲಿ! ಅರ್ಜುನನ ವಿಖ್ಯಾತವಾದ ಸತ್ಯಸಂಧತೆಗೂ ಧಿಕ್ಕಾರವಿರಲಿ!

ಇದಂ ಕಷ್ಟತರಂ ಚಾನ್ಯದ್ಭಗವನ್ಪ್ರತಿಭಾತಿ ಮೇ।
ವೃಥಾಗ್ನಿನಾ ಸಮಾಯೋಗೋ ಯದಭೂತ್ಪೃಥಿವೀಪತೇಃ ॥೧೩॥

ಪೂಜ್ಯರೇ! ಧೃತರಾಷ್ಟ್ರನಿಗೆ ನಿಷ್ಫಲವಾದ ಲೌಕಿಕಾಗ್ನಿಯೊಡನೆ ಸಮಾವೇಶವಾದುದೂ ಕೂಡ ಮತ್ತೊಂದು ಕಷ್ಟತರವಾದ ಸನ್ನಿವೇಶವೆಂದೇ ನನಗೆ ಭಾಸವಾಗುತ್ತದೆ.

ತಥಾ ತಪಸ್ವಿನಸ್ತಸ್ಯ ರಾಜರ್ಷೇಃ ಕೌರವಸ್ಯ ಹ ।
ಕಥಮೇವಂವಿಧೋ ಮೃತ್ಯುಃ ಪ್ರಶಾಸ್ಯ ಪೃಥಿವೀಮಿಮಾಮ್ ॥೧೪॥

ಭೂಮಂಡಲವನ್ನೇ ಆಳಿದ ರಾಜರ್ಷಿಯಾದ ತಪಸ್ವಿಯಾದ ಆ ಕುರುರಾಜನಿಗೆ ಈ ವಿಧವಾದ ಮರಣವು ಹೇಗೆ ಸಂಭವಿಸಿತು?

ತಿಷ್ಠತ್ಸು ಮನ್ತ್ರಪೂತೇಷು ತಸ್ಯಾಗ್ನಿಷು ಮಹಾವನೇ।
ವೃಥಾಗ್ನಿನಾ ಸಮಾಯುಕ್ತೋ ನಿಷ್ಠಾಂ ಪ್ರಾಪ್ತಃ ಪಿತಾ ಮಮ ॥೧೫॥

ಅಯ್ಯೋ ವಿಧಿಯೇ! ಆ ಮಹಾರಣ್ಯದಲ್ಲಿ ಮಂತ್ರಪೂತವಾದ ಅವನ ಮೂರು ಅಗ್ನಿಗಳೂ ಅವನೊಡನೆಯೇ ಇದ್ದಾಗ ಲೌಕಿಕಾಗ್ನಿಯಾದ ಕಾಡುಗಿಚ್ಚಿಗೆ ಸಿಕ್ಕಿಹಾಕಿಕೊಂಡು ನನ್ನ ತಂದೆಯು ನಿಧನಹೊಂದಿದನು.

ಮನ್ಯೇ ಪೃಥಾ ವೇಪಮಾನಾ ಕೃಶಾ ಧಮನಿಸಂತತಾ।
ಹಾ ತಾತ ಧರ್ಮರಾಜೇತಿ ಸಮಾಕ್ರನ್ದನ್ಮಹಾಭಯೇ ॥೧೬॥

ಕಾಡುಗಿಚ್ಚು ತನ್ನನ್ನು ಸಮೀಪಿಸುತ್ತಿದ್ದ ಮಹಾಭಯಂಕರವಾದ ಆ ಸಮಯದಲ್ಲಿ ಕೃಶಳಾದ, ನರ-ನಾಡಿಗಳನ್ನು ಮಾತ್ರವೇ ಹೊಂದಿದ್ದ ನನ್ನ ತಾಯಿಯಾದ ಕುಂತಿಯು ಗಡಗಡನೆ ನಡುಗುತ್ತಾ; 'ಹಾ ತಾತಾ! ಹಾ ಧರ್ಮರಾಜ!'–ಎಂದು ಕೂಗಿಕೊಳ್ಳುತ್ತಾ ಗೋಳಾಡಿರಬಹುದು–ಎಂದು ತಿಳಿಯುತ್ತೇನೆ.

ಭೀಮ ಪರ್ಯಾಪ್ನುಹಿ ಭಯಾದಿತಿ ಚೈವಾಭಿವಾಶತೀ।
ಸಮನ್ತತಃ ಪರಿಕ್ಷಿಪ್ತಾ ಮಾತಾಭೂನ್ಮೇ ದವಾಗ್ನಿನಾ ॥೧೭॥

'ಭೀಮಸೇನ! ಈ ಭಯಂಕರವಾದ ಕಾಡುಗಿಚ್ಚಿನಿಂದ ನನ್ನನ್ನು ಕಾಪಾಡು'–ಎಂದು ಕೂಗಿಕೊಳ್ಳುತ್ತಾ ಅರಣ್ಯದ ಸುತ್ತಲೂ ಎದ್ದು-ಬಿದ್ದು ಒದ್ದಾಡುತ್ತಿದ್ದ ನನ್ನ ತಾಯಿಯನ್ನು ದಾವಾಗ್ನಿಯು ಸುತ್ತಲೂ ಆವರಿಸಿ ಭಸ್ಮಮಾಡಿರಬಹುದು.

ಸಹದೇವಃ ಪ್ರಿಯಸ್ತಸ್ಯಾಃ ಪುತ್ರೇಭ್ಯೋಽಧಿಕ ಏವ ತು।
ನ ಚೈನಾಂ ಮೋಕ್ಷಯಾಮಾಸ ವೀರೋ ಮಾದ್ರವತೀಸುತಃ ॥೧೮॥

ಸಹದೇವನು ಅವಳಿಗೆ ಅತ್ಯಂತಪ್ರೀತಿಪಾತ್ರನಾದ ಮಗನಾಗಿದ್ದನು. ಎಲ್ಲ ಮಕ್ಕಳಿಗಿಂತಲೂ ಅವನನ್ನೇ ನನ್ನ ತಾಯಿಯು ಅಧಿಕವಾಗಿ ಪ್ರೀತಿಸುತ್ತಿದ್ದಳು. ಆದರೆ ವೀರನಾದ, ಮಾದ್ರಿಯ ಮಗನಾದ ಸಹದೇವನೂ ಅವಳನ್ನು ಆ ಮಹಾಸಂಕಟದಿಂದ ಪಾರುಮಾಡಲಿಲ್ಲ."

ಜನಮೇಜಯ! ಯುಧಿಷ್ಠಿರನ ಆ ವಿಲಾಪವನ್ನು ಎಲ್ಲರೂ ಕೇಳಿ ಒಬ್ಬರು ಮತ್ತೊಬ್ಬರನ್ನು ತಬ್ಬಿಕೊಂಡು ಗೋಳಾಡಿದರು. ಪ್ರಳಯಕಾಲದಲ್ಲಿ ಪಂಚ ಭೂತಗಳೂ ಪೀಡಿಸಲ್ಪಡುವಂತೆ–ಪಂಚಪಾಂಡವರು ದುಃಖಪೀಡಿತ ರಾದರು. ಗಟ್ಟಿಯಾಗಿ ಅಳುತ್ತಿದ್ದ ಪುರುಷಶ್ರೇಷ್ಠರಾದ ಪಾಂಡವರ ಅಳುವಿನ ಧ್ವನಿಯು ಪ್ರಾಸಾದದ ಆವರಣವೆಲ್ಲವನ್ನೂ ತುಂಬಿಕೊಂಡು ಹೊರಹೋಗಲಾರದೇ ಭೂಮ್ಯಂತರಿಕ್ಷಗಳಲ್ಲಿ ಪ್ರತಿಧ್ವನಿಸಿತು."

ಇ೮ನೆಯ ಅಧ್ಯಾಯವು ಮುಗಿಯಿತು.

ಗಂಗಾನದಿಯಲ್ಲಿ ಧೃತರಾಷ್ಟ್ರ-ಗಾಂಧಾರೀ-ಕುಂತಿಯರ ಅಸ್ಥಿಗಳ ವಿಸರ್ಜನೆ: ಯುಧಿಷ್ಠಿರನಿಂದ ಪ್ರತ್ಯೇಕವಾಗಿ ಶ್ರಾದ್ಧಕರ್ಮಾಚರಣೆ

ನಾರದರು ಹೇಳುತ್ತಾರೆ:

ನಾಸೌ ವೃಥಾಗ್ನಿನಾ ದಗ್ಧೋ ಯಥಾ ತತ್ರ ಶ್ರುತಂ ಮಯಾ।
ವೈಚಿತ್ರವೀರ್ಯೋ ನೃಪತಿಸ್ತತ್ತೇ ವಕ್ಷ್ಯಾಮಿ ಸುವ್ರತ ॥೧॥

"ಸುವ್ರತನೇ! ಯುಧಿಷ್ಠಿರ! ನೀನು ಭಾವಿಸಿರುವಂತೆ ವಿಚಿತ್ರವೀರ್ಯನ ಮಗನಾದ ಧೃತರಾಷ್ಟ್ರನು ಲೌಕಿಕಾಗ್ನಿಯಿಂದ ದಹಿಸಲ್ಪಡಲಿಲ್ಲ. ಈ ವಿಷಯದಲ್ಲಿ ನಾನು ಅಲ್ಲಿ ಕೇಳಿದ ವಾರ್ತೆಯನ್ನು ಹೇಳುವೆನು; ಕೇಳು:

ವಾಯುವನ್ನೇ ಆಹಾರವನ್ನಾಗಿ ಸೇವಿಸುತ್ತಿದ್ದ ಧೀಮಂತನಾದ ಧೃತರಾಷ್ಟ್ರನು ಅರಣ್ಯವನ್ನು ಪ್ರವೇಶಿಸುತ್ತಿದ್ದಂತೆ ಯಾಜಕರಿಂದ ಇಷ್ಟಿಯನ್ನು ಮಾಡಿಸಿ ಮೂರು ಅಗ್ನಿಗಳನ್ನೂ ವಿಸರ್ಜಿಸಿದನೆಂದು ನಾವು ಕೇಳಿದೆವು. ಯಾಜಕರಾದರೋ ಆ ಮೂರು ಅಗ್ನಿಗಳನ್ನೂ ನಿರ್ಜನವಾಗಿದ್ದ ಅರಣ್ಯಪ್ರದೇಶದಲ್ಲಿ ವಿಸರ್ಜಿಸಿ ಇಚ್ಛಾನುಸಾರವಾಗಿ ಹೊರಟುಹೋದರು. ಯಾಜಕರು ವಿಸರ್ಜಿಸಿದ್ದ ಆ ಅಗ್ನಿಯೇ ವಾಯುವಿನ ಸಹಾಯದಿಂದ ವೃದ್ಧಿಯನ್ನು ಹೊಂದಿ ಅರಣ್ಯದಲ್ಲೆಲ್ಲಾ ಹರಡಿಕೊಂಡಿತು. ಆ ಅಗ್ನಿಗಳಿಂದಲೇ ಆ ಅರಣ್ಯವು ಭಸ್ಮವಾಗಿಹೋಯಿತೆಂದು ನಾನು ಕಂಡ ತಪಸ್ವಿಗಳು ಹೇಳಿದರು. ನಾನು ನಿಮಗೆ ಈ ಹಿಂದೆಯೇ ಹೇಳಿದಂತೆ ಧೃತರಾಷ್ಟ್ರರಾಜನು ಗಂಗಾನದಿಯ ತೀರದಲ್ಲಿ ತನ್ನದೇ ಆದ ಅಗ್ನಿಯಲ್ಲಿ ಸಮಾವೇಶಹೊಂದಿದನು. ನಾನು ಭಾಗೀರಥಿಯ ತೀರದಲ್ಲಿ ಯಾವ-ಯಾವ ಋಷಿಗಳನ್ನು ಸಂದರ್ಶಿಸಿದೆನೋ–ಅವರೆಲ್ಲರೂ ನನ್ನೊಡನೆ ಹೀಗೆಯೇ ಹೇಳಿದರು. ಹೀಗೆ ಮಹೀಪತಿಯಾದ ಧೃತರಾಷ್ಟ್ರರಾಜನು ತನ್ನ ಅಗ್ನಿಯಲ್ಲಿಯೇ ಸಮಾವೇಶಹೊಂದಿದನು. ಆದುದರಿಂದ ನೀನು ಇನ್ನು ಮುಂದೆ ರಾಜನಿಗಾಗಿ ದುಃಖಪಡಬೇಡ. ಅವನು ಶ್ರೇಷ್ಠವಾದ ಗತಿಯನ್ನು ಈಗಾಗಲೇ ಹೊಂದಿದ್ದಾನೆ. ನಿನ್ನ ತಾಯಿಯೂ ಕೂಡ ಗುರುಜನರ ಶುಶ್ರೂಷೆಯಿಂದ

ಮಹಾಸಿದ್ಧಿಯನ್ನು ಪಡೆದಿರುತ್ತಾಳೆ. ಈ ವಿಷಯದಲ್ಲಿ ನನಗೆ ಎಳ್ಳಷ್ಟೂ ಸಂಶಯವಿಲ್ಲ. ಈಗ ನೀನು ಒಡಹುಟ್ಟಿದವರೊಡನೆ ಅವರೆಲ್ಲರಿಗೂ ತರ್ಪಣವನ್ನು ಕೊಡುವುದು ನಿನ್ನ ಕರ್ತವ್ಯವಾಗಿದೆ. ಈ ಕಾರ್ಯವನ್ನು ಈಗಲೇ ಇಲ್ಲಿಯೇ ಮಾಡುವವನಾಗು."

ವೈಶಂಪಾಯನರು ಹೇಳುತ್ತಾರೆ:

ಪಾರಿಕ್ಷಿತ! ನಾರದರು ಹೀಗೆ ಹೇಳಿದನಂತರ ಪಾಂಡವಧುರಂಧರನಾದ, ಪೃಥಿವೀಪಾಲನಾದ ಯುಧಿಷ್ಠಿರನು ಒಡಹುಟ್ಟಿದವರೊಡನೆಯೂ ಭಾರ್ಯೆಯೊಡನೆಯೂ ಗಂಗಾತೀರಕ್ಕೆ ಹೊರಟನು. ರಾಜಭಕ್ತಿಯನ್ನೇ ಮುಖ್ಯಕರ್ತವ್ಯವನ್ನಾಗಿ ಭಾವಿಸಿದ್ದ ಪಟ್ಟಣಿಗರೂ ಮತ್ತು ದೇಶದ ಜನರೂ ಒಂದೇ ವಸ್ತ್ರವನ್ನುಟ್ಟುಕೊಂಡು ಪಾಂಡವರೊಡನೆ ಗಂಗಾನದಿಯ ಸಮೀಪಕ್ಕೆ ಹೋದರು. ನರಶ್ರೇಷ್ಠರಾದ ಆ ಎಲ್ಲ ಪಾಂಡವರೂ ಗಂಗಾನದಿಯಲ್ಲಿ ಸ್ನಾನಮಾಡಿ ಯುಯುತ್ಸುವನ್ನು ಮುಂದೆ ಮಾಡಿಕೊಂಡು ಮಹಾತ್ಮನಾದ ಧೃತರಾಷ್ಟ್ರನಿಗೆ ತರ್ಪಣವನ್ನಿತ್ತರು. ವಿಧಿಪೂರ್ವಕವಾಗಿ ನಾಮ-ಗೋತ್ರಗಳನ್ನು ಹೇಳಿಕೊಂಡು ಅವರೆಲ್ಲರೂ ಗಾಂಧಾರಿಗೂ ಮತ್ತು ಕುಂತಿಗೂ ತರ್ಪಣವನ್ನಿತ್ತರು. ಆಶೌಚನಿವೃತ್ತಿಯ ಕಾರ್ಯವನ್ನು ನೆರವೇರಿಸುತ್ತಾ ಅವರೆಲ್ಲರೂ ನಗರದ ಹೊರಭಾಗದಲ್ಲಿಯೇ ಉಳಿದುಕೊಂಡರು. ಅನಂತರ ನರಶ್ರೇಷ್ಠನಾದ ಯುಧಿಷ್ಠಿರನು ಅಪರಕ್ರಿಯೆಯ ವಿಧಿ-ವಿಧಾನಗಳನ್ನು ಚೆನ್ನಾಗಿ ತಿಳಿದಿದ್ದ ವಿಶ್ವಾಸಪಾತ್ರರಾದ ಮನುಷ್ಯರನ್ನು–ಧೃತರಾಷ್ಟ್ರಾದಿಗಳು ಬೆಂಕಿಯಲ್ಲಿ ಬೆಂದುಹೋಗಿದ್ದ ಗಂಗಾದ್ವಾರಕ್ಕೂ ಕಳುಹಿಸಿ ಅಲ್ಲಿಯೇ ಅವರ ಅಪರಕ್ರಿಯೆಗಳೆಲ್ಲವನ್ನೂ ವಿಧಿವತ್ತಾಗಿ ಮಾಡುವಂತೆ ಆಜ್ಞಾಪಿಸಿದನು. ಅಲ್ಲದೇ ಮಹೀಪತಿಯಾದ ಯುಧಿಷ್ಠಿರನು ದಾನಕೊಡಲು ಯೋಗ್ಯವಾದ ಸಮಸ್ತಪದಾರ್ಥಗಳನ್ನೂ ಅವರಿಗೆ ದಾನಕೊಟ್ಟನು. ಆಶೌಚನಿವೃತ್ತಿಗಾಗಿ ಹತ್ತನೆಯ ಮತ್ತು ಹನ್ನೊಂದನೆಯ ದಿನಗಳಲ್ಲಿ ಮಾಡಬೇಕಾದ ಕರ್ಮಗಳೆಲ್ಲವನ್ನೂ ಮುಗಿಸಿ ಹನ್ನೆರಡನೆಯ ದಿನ ಧೃತರಾಷ್ಟ್ರಾದಿಗಳ ಸಲುವಾಗಿ ವಿಧಿವತ್ತಾಗಿ ಶ್ರಾದ್ಧಗಳನ್ನು ಮಾಡಿ ಬ್ರಾಹ್ಮಣರಿಗೆ ಅತಿಶಯವಾಗಿ ದಕ್ಷಿಣೆಗಳನ್ನು ಕೊಟ್ಟನು. ತೇಜಸ್ವಿಯಾದ ಯುಧಿಷ್ಠಿರನು ಧೃತರಾಷ್ಟ್ರ-ಗಾಂಧಾರೀ ಮತ್ತು ಕುಂತೀ ಈ ಮೂವರನ್ನೂ ಪ್ರತ್ಯೇಕ-ಪ್ರತ್ಯೇಕವಾಗಿಯೇ ಉದ್ದೇಶಿಸಿ

ಅವರವರ ಹೆಸರುಗಳನ್ನು ಹೇಳಿ ಚಿನ್ನ, ಬೆಳ್ಳಿ, ಹಸುಗಳು, ಬಹುಮೂಲ್ಯವಾದ ಹಾಸಿಗೆಗಳು–ಇವೆಲ್ಲವನ್ನೂ ಬ್ರಾಹ್ಮಣರಿಗೆ ದಾನಮಾಡಿದನು. ಯಾವ ಮನುಷ್ಯನು ಯಾವ ವಸ್ತುವನ್ನು ಎಷ್ಟೆಷ್ಟು ಅಪೇಕ್ಷಿಸುತ್ತಿದ್ದನೋ–ಅದನ್ನವನು ಪಡೆದುಕೊಳ್ಳುತ್ತಿದ್ದನು. ಹಾಸಿಗೆಗಳು, ಭೋಜನಸಾಮಗ್ರಿಗಳು, ಯಾನಗಳು, ಮಣಿಗಳು, ರತ್ನಗಳು, ಧನ, ಹೊದ್ದಿಕೆಗಳು, ಭೋಗಸಾಮಗ್ರಿಗಳು, ಸರ್ವಾಲಂಕಾರಭೂಷಿತೆಯರಾದ ದಾಸಿಯರು–ಈ ಎಲ್ಲವನ್ನೂ ಯುಧಿಷ್ಠಿರನು ಇಬ್ಬರು ತಾಯಿಯರ ಸಲುವಾಗಿ ದಾನಮಾಡಿದನು. ಹೀಗೆ ರಾಜನು ಹಲವು ಬಾರಿ ಶ್ರಾದ್ಧಗಳನ್ನು ಮಾಡಿ ದಾನಗಳನ್ನು ಕೊಟ್ಟು ಹಸ್ತಿನಾಪಟ್ಟಣವನ್ನು ಪ್ರವೇಶಿಸಿದನು.

ರಾಜನ ಆಜ್ಞಾನುಸಾರವಾಗಿ ಹರಿದ್ವಾರಕ್ಕೆ ಹೋಗಿದ್ದ ಪುರುಷರು ಧೃತರಾಷ್ಟ್ರ-ಗಾಂಧಾರೀ-ಕುಂತಿಯರ ಅಸ್ಥಿಗಳನ್ನು ಸಂಗ್ರಹಿಸಿಕೊಂಡು ಗಂಗಾತೀರಕ್ಕೆ ಆಗಮಿಸಿದರು. ಅಲ್ಲಿ ಅವರು ಮೂವರ ಅಸ್ಥಿಗಳನ್ನೂ ಒಂದೆಡೆಯಲ್ಲಿಟ್ಟು ವಿಧವಿಧವಾದ ಮಾಲೆಗಳಿಂದಲೂ ಗಂಧಗಳಿಂದಲೂ ಪೂಜಿಸಿ ಗಂಗೆಯಲ್ಲಿ ವಿಸರ್ಜಿಸಿ ಆ ವಿಷಯವನ್ನು ಯುಧಿಷ್ಠಿರನಿಗೆ ತಿಳಿಯ ಪಡಿಸಿದರು. ಪರಮರ್ಷಿಗಳಾದ ನಾರದರೂ ಧರ್ಮಾತ್ಮನಾದ ಯುಧಿಷ್ಠಿರ ರಾಜನನ್ನು ಸಮಾಧಾನಗೊಳಿಸಿ ಇಷ್ಟಬಂದ ಕಡೆಗೆ ಹೊರಟುಹೋದರು. ಮಹಾಭಾರತಯುದ್ಧವು ಮುಗಿದನಂತರ ಧೀಮಂತನಾದ ಪುತ್ರರಹಿತನಾದ ಧೃತರಾಷ್ಟ್ರನು ಜ್ಞಾತಿಗಳ (ಮಕ್ಕಳ), ಸಂಬಂಧಿಗಳ, ಮಿತ್ರರ, ಸಹೋದರರ ಮತ್ತು ಸ್ವಜನರ ಸಲುವಾಗಿ ದಾನಗಳನ್ನು ಕೊಡುತ್ತಾ ಹಸ್ತಿನಾಪಟ್ಟಣದಲ್ಲಿ ಹದಿನೈದು ವರ್ಷಗಳನ್ನು ಕಳೆದಿದ್ದನು. ಬಳಿಕ ವನವಾಸದಲ್ಲಿ ಮೂರು ವರ್ಷಗಳನ್ನು ಕಳೆದನು. (ಒಟ್ಟಿನಲ್ಲಿ ಮಹಾಭಾರತಯುದ್ಧವು ಮುಗಿದ ಮೇಲೆ ಹದಿನೆಂಟು ವರ್ಷಗಳ ಕಾಲ ಧೃತರಾಷ್ಟ್ರರಾಜನು ಜೀವಿಸಿದ್ದನು.)

ಜ್ಞಾತಿ-ಬಾಂಧವರೆಲ್ಲರನ್ನೂ ಕಳೆದುಕೊಂಡಿದ್ದ ಯುಧಿಷ್ಠಿರನು ಹೆಚ್ಚಿನ ಸಂತೋಷವಿಲ್ಲದಿದ್ದರೂ ರಾಜ್ಯಾಡಳಿತವನ್ನು ನಿರ್ವಹಿಸುತ್ತಿದ್ದನು."

೩೯ನೆಯ ಅಧ್ಯಾಯವು ಮುಗಿಯಿತು.

ಆಶ್ರಮವಾಸಿಕಪರ್ವವು ಮುಗಿಯಿತು.

ಸ್ವಸ್ತಿಪ್ರಜಾಭ್ಯಃ ಪರಿಪಾಲಯನ್ತಾಂ
ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ।
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
ಲೋಕಾಃ ಸಮಸ್ತಾಃ ಸುಖಿನೋ ಭವನ್ತು॥
ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ।
ದೇಶೋಽಯಂ ಕ್ಷೋಭರಹಿತೋ ಬ್ರಾಹ್ಮಣಾಃ ಸನ್ತು ನಿರ್ಭಯಾಃ॥
ಅಪುತ್ರಾಃ ಪುತ್ರಿಣಃ ಸನ್ತು ಪುತ್ರಿಣಃ ಸನ್ತು ಪೌತ್ರಿಣಃ।
ಅಧನಾಃ ಸಧನಾಃ ಸನ್ತು ಜೀವನ್ತು ಶರದಾಃ ಶತಮ್ ॥
ಕಾಯೇನ ವಾಚಾ ಮನಸೇನ್ದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್।
ಕರೋಮಿ ಯದ್ಯತ್ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ॥
ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತುತೇ ॥

ಹರಿಃ ಓಂ ಶ್ರೀಕೃಷ್ಣಾರ್ಪಣಮಸ್ತು ಓಂ ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು

ಓಂ ತತ್ಸತ್

ಆಶ್ರಮವಾಸಿಕಪರ್ವದ ಸಂಗ್ರಹ

ತತಸ್ತ್ವಾಶ್ರಮವಾಸಾಖ್ಯಂ ಪರ್ವಪಞ್ಚದಶಂ ಸ್ಮೃತಮ್।
ಯತ್ರ ರಾಜ್ಯಂ ಸಮುತ್ಸೃಜ್ಯ ಗಾನ್ಧಾರ್ಯಾ ಸಹಿತೋ ನೃಪಃ॥

ಧೃತರಾಷ್ಟ್ರೋಽಽಶ್ರಮಪದಂ ವಿದುರಶ್ಚ ಜಗಾಮ ಹ।
ಯಂ ದೃಷ್ಟ್ವಾ ಪ್ರಸ್ಥಿತಂ ಸಾಧ್ವೀ ಪೃಥಾಪ್ಯನುಯಯೌ ತದಾ॥

ಪುತ್ರರಾಜ್ಯಂ ಪರಿತ್ಯಜ್ಯ ಗುರುಶುಶ್ರೂಷಣೇ ರತಾ।
ತತ್ರ ರಾಜಾ ಹತಾನ್ಪುತ್ರಾನ್ಪೌತ್ರಾನನ್ಯಾಂಶ್ಚ ಪಾರ್ಥಿವಾನ್ ॥೨೪೭॥

ಲೋಕಾನ್ತರಗತಾನ್ವೀರಾನಪಶ್ಯತ್ಪುನರಾಗತಾನ್।
ಋಷೇಃ ಪ್ರಸಾದಾತ್ಕೃಷ್ಣಸ್ಯ ದೃಷ್ಟ್ವಾಶ್ಚರ್ಯಮನುತ್ತಮಮ್ ॥೨೪೮॥

ತ್ಯಕ್ತ್ವಾ ಶೋಕಂ ಸದಾರಶ್ಚ ಸಿದ್ಧಿಂ ಪರಮಿಕಾಂ ಗತಃ।
ಯತ್ರ ಧರ್ಮಂ ಸಮಾಶ್ರಿತ್ಯ ವಿದುರಃ ಸುಗತಿಂ ಗತಃ ॥೩೪೯॥

ಸಂಜಯಶ್ಚ ಮಹಾಮಾತ್ಯೋ ವಿದ್ವಾನ್ಗಾವಲ್ಗಣಿರ್ವಶೀ।
ದದರ್ಶ ನಾರದಂ ಯತ್ರ ಧರ್ಮರಾಜೋ ಯುಧಿಷ್ಠಿರಃ ॥೩೫೦॥

ನಾರದಾಚ್ಚೈವ ಶುಶ್ರಾವ ವೃಷ್ಣೀನಾಂ ಕದನಂ ಮಹತ್।
ಏತದಾಶ್ರಮವಾಸಾಖ್ಯಂ ಪರ್ವೋಕ್ತಂ ಮಹದದ್ಭುತಮ್॥

ದ್ವಿಚತ್ವಾರಿಂಶದಧ್ಯಾಯಾಃ ಪರ್ವೈತದಭಿಸಂಖ್ಯಯಾ।
ಸಹಸ್ರಮೇಕಂ ಶ್ಲೋಕಾನಾಂ ಪಞ್ಚಶ್ಲೋಕಶತಾನಿಚ ॥೩೫೨॥

ಷಡೇವ ಚ ತಥಾ ಶ್ಲೋಕಾಃ ಸಂಖ್ಯಾತಾಸ್ತತ್ತ್ವದರ್ಶಿನಾ।

(ಆದಿಪರ್ವ, ಅಧ್ಯಾಯ-೨)

ಇಲ್ಲಿ ಹೇಳಿರುವಂತೆ ಈ ಪರ್ವದ ಅಧ್ಯಾಯಗಳು ೪೨. ಶ್ಲೋಕಗಳು ೧೫೦೬. ನಾವು ಅನುವಾದಿಸಿರುವ ಪುಸ್ತಕದಲ್ಲಿರುವ ಅಧ್ಯಾಯಗಳು ೩೯. ಶ್ಲೋಕಗಳು ೧೧೦೭. ಭಂಡಾರ್ಕರ್ ರಿಸರ್ಚ್ ಇನ್ಸ್ಟಿಟ್ಯೂಟಿನವರು ಪ್ರಕಟಿಸಿರುವ ಪುಸ್ತಕದಲ್ಲಿ ಅಧ್ಯಾಯಗಳು ೪೭. ಶ್ಲೋಕಗಳು ೧೦೬೨.

ಪರಿಶಿಷ್ಟ

ಉಮಾ-ಮಹೇಶ್ವರಸಂವಾದ

ಆನುಶಾಸನಪರ್ವದ ೧೪೫ನೆಯ ಅಧ್ಯಾಯದಲ್ಲಿ ೬೪ನೆಯ ಶ್ಲೋಕದಿಂದ ಮುಂದಿನ ೧೨೦೯ ಶ್ಲೋಕಗಳು ಪ್ರಕ್ಷಿಪ್ತವೆಂದು ಪರಿಗಣಿಸಲ್ಪಟ್ಟಿವೆ. ಆದರೂ ವಿಷಯಗಳು ಉಪಯುಕ್ತವೂ ಸಂಗ್ರಹಯೋಗ್ಯವೂ ಆಗಿರುವುದರಿಂದ ಪರಿಶಿಷ್ಟದಲ್ಲಿ ಯಥಾವತ್ತಾಗಿ ಅನುವಾದಿಸಿದ್ದೇವೆ. ಶ್ಲೋಕಸಂಖ್ಯೆಯನ್ನೂ ಕೊಡಲಾಗಿದೆ.

ರಾಜಧರ್ಮದ ವರ್ಣನೆ

ಉಮೆಯು ಹೇಳುತ್ತಾಳೆ:

ದೇವದೇವ ನಮಸ್ತುಭ್ಯಂ ತ್ರಿಯಕ್ಷ ವೃಷಭಧ್ವಜ।
ಶ್ರುತಂ ಮೇ ಭಗವನ್ಸರ್ವಂ ತ್ವತ್ಪ್ರಸಾದಾನ್ಮಹೇಶ್ವರ ॥೬೫॥

"ದೇವದೇವನೇ! ತ್ರಿಲೋಚನನೇ! ವೃಷಭಧ್ವಜನೇ! ಪೂಜ್ಯನೇ! ಮಹೇಶ್ವರನೇ! ನಿನಗೆ ನಮಸ್ಕಾರವು. ನಿನ್ನ ಅನುಗ್ರಹದಿಂದಾಗಿ ನನಗೆ ಎಲ್ಲವೂ ತಿಳಿಯಿತು.

ನಿನ್ನ ಉತ್ತಮೋತ್ತಮವಾದ ಉಪದೇಶವನ್ನು ನಾನು ಬುದ್ಧಿಯ ಮೂಲಕವಾಗಿ ಸಂಗ್ರಹಿಸಿದೆನು. ಈಗ ನನಗೆ ಮನುಷ್ಯರ ವಿಷಯದಲ್ಲಿ ಒಂದು ಸಂದೇಹವುಂಟಾಗಿದೆ. ಅದಕ್ಕೆ ಸಮಾಧಾನವನ್ನು ನೀನೇ ಹೇಳಬೇಕಾಗಿದೆ.

ಸಾಮಾನ್ಯಮನುಷ್ಯನಿಗಿರುವಂತೆಯೇ ರಾಜನಿಗೂ ಪ್ರಾಣ-ತಲೆ-ಶರೀರರಚನೆಗಳು ಸಮಾನವಾಗಿಯೇ ಇವೆ. ಆದರೆ ಯಾವ ಕರ್ಮಫಲದಿಂದ ರಾಜನು ಎಲ್ಲರಿಗಿಂತಲೂ ಪ್ರಾಧಾನ್ಯವನ್ನು ಹೊಂದುತ್ತಾನೆ?

ಸ ಚಾಪಿ ದಣ್ಡಯನ್ಮರ್ತ್ಯಾನ್ಸರ್ತ್ಸಯನ್ವಿವಿಧಾನಪಿ।
ಪ್ರೇತ್ಯಭಾವೇ ಕಥಂ ಲೋಕಾಲ್ಲಭತೇ ಪುಣ್ಯಕರ್ಮಣಾಮ್।
ರಾಜವೃತ್ತಮಹಂ ತಸ್ಮಾಚ್ಛ್ರೋತುಮಿಚ್ಛಾಮಿ ಮಾನದ ॥೬೮॥

ಮನುಷ್ಯಲೋಕದಲ್ಲಿ ರಾಜ್ಯವನ್ನಾಳುವ ರಾಜನು ಪ್ರಜೆಗಳನ್ನು ನಾನಾ

ಪ್ರಕಾರವಾಗಿ ದಂಡಿಸುತ್ತಾನೆ ಮತ್ತು ಭಯಪಡಿಸುತ್ತಾನೆ. (ಜನರನ್ನು ನಾನಾಪ್ರಕಾರವಾಗಿ ಹಿಂಸಿಸುವ ಅವನು) ಮರಣಾನಂತರದಲ್ಲಿ ಪುಣ್ಯಾತ್ಮರು ಹೊಂದುವ ಲೋಕಗಳನ್ನು ಹೇಗೆ ಹೊಂದುತ್ತಾನೆ? ಮಾನದನೇ! ಈ ಸಂಶಯವನ್ನು ನಿವಾರಿಸಿಕೊಳ್ಳಲು ನಾನು ರಾಜರ ಆಚಾರ-ವ್ಯವಹಾರವನ್ನು ಕೇಳಲು ಬಯಸಿದ್ದೇನೆ."

ಈಶ್ವರನು ಹೇಳುತ್ತಾನೆ:

"ಶುಭಾನನೆಯೇ! ನಿನ್ನ ಅಪೇಕ್ಷೆಯಂತೆ ಈಗ ನಿನಗೆ ರಾಜಧರ್ಮವನ್ನು ಹೇಳುತ್ತೇನೆ. ಜಗತ್ತಿನ ಸಮಸ್ತವಾದ ಒಳ್ಳೆಯ ಅಥವಾ ಕೆಟ್ಟ ವ್ಯವಹಾರ ಗಳೆಲ್ಲವೂ ರಾಜನ ಅಧೀನದಲ್ಲಿಯೇ ಇರುತ್ತವೆ. ರಾಜ್ಯಪ್ರಾಪ್ತಿಯು ಮಹಾತಪಸ್ಸಿನ ಫಲವೆಂದು ಹೇಳಲ್ಪಟ್ಟಿದೆ. ಹಿಂದೆ ಪ್ರಪಂಚದಲ್ಲಿ ರಾಜ ನಿಲ್ಲದಿದ್ದಾಗ ಪ್ರಜೆಗಳ ಸಮೂಹವು ಮಹಾಕಷ್ಟಕ್ಕೀಡಾಯಿತು. ಪ್ರಜೆಗಳ ಆ ಸಂಕಟದ ಪರಿಸ್ಥಿತಿಯನ್ನು ನೋಡಿ ಬ್ರಹ್ಮನು ಮನುವನ್ನು ರಾಜ್ಯಸಿಂಹಾಸನ ದಲ್ಲಿ ಕುಳ್ಳಿರಿಸಿದನು. ಅಂದು ಮೊದಲ್ಗೊಂಡು ಶುಭಾಶುಭ ವ್ಯವಹಾರಗಳು ರಾಜನ ಅಧೀನದಲ್ಲಿವೆ. ರಾಜನ ಸದ್ವ್ಯವಹಾರವು ಜಗತ್ತಿಗೆ ಹೇಗೆ ಹಿತಕರವೆಂಬುದನ್ನು ಹೇಳುವೆನು; ಕೇಳು.

ಯಾವ ಕಾರಣದಿಂದಾಗಿ ರಾಜನು ದಂಡನೀತಿಯನ್ನು ಆಶ್ರಯಿಸಿ ಅವಸಾನಾನಂತರದಲ್ಲಿ ಸ್ವರ್ಗಕ್ಕೆ ಹೋಗುವನೆಂಬುದನ್ನೂ ಹೇಳುವೆನು. ಅವನ ವೀರ್ಯ-ಪರಾಕ್ರಮಗಳು ಹೇಗಿರಬೇಕೆಂಬುದನ್ನೂ ಮತ್ತು ಅವನು ಯಶಸ್ಸನ್ನು ಹೇಗೆ ಗಳಿಸಬೇಕೆಂಬುದನ್ನೂ ಹೇಳುವೆನು. ತಂದೆಯಿಂದ ಪ್ರಾಪ್ತವಾದ ರಾಜ್ಯವನ್ನಾಗಲೀ, ಪಿತಾಮಹ-ಪ್ರಪಿತಾಮಹರ ಕಾಲದಿಂದಲೂ ವಂಶಾನುಗತವಾಗಿ ಬಂದಿರುವ ರಾಜ್ಯವನ್ನಾಗಲೀ, ತಾನೇ ಪರಾಕ್ರಮದಿಂದ ಗೆದ್ದುಕೊಂಡ ರಾಜ್ಯವನ್ನಾಗಲೀ ರಾಜನು ರಾಜಧರ್ಮವನ್ನು ಆಶ್ರಯಿಸಿ ವಿಧಿವತ್ತಾಗಿ ಉಪಭೋಗಿಸಲು ಅರ್ಹನಾಗುತ್ತಾನೆ.

ಆತ್ಮಾನಮೇವ ಪ್ರಥಮಂ ವಿನಯೈರುಪಪಾದಯೇತ್।
ಅನುಭೃತ್ಯಾನ್ಪ್ರಜಾಃ ಪಶ್ಚಾದಿತ್ಯೇಷ ವಿನಯಕ್ರಮಃ ॥೭೫॥

ರಾಜನಾದವನು ಮೊದಲು ತಾನು ವಿನಯಶಾಲಿಯಾಗಿರಬೇಕು. (ಮನಸ್ಸನ್ನು ತಾನು ತಿದ್ದಿಕೊಳ್ಳಬೇಕು.) ಅನಂತರ ಸೇವಕರಿಗೂ ಪ್ರಜೆಗಳಿಗೂ

ಸನ್ಮಾರ್ಗದಲ್ಲಿ ನಡೆಯುವಂತೆ ಶಿಕ್ಷಣವನ್ನು ಕೊಡಬೇಕು. ಇದು ವಿನಯದ ಕ್ರಮವಾಗಿದೆ.

ಸ್ವಾಮಿನಂ ಚೋಪಮಾಂ ಕೃತ್ವಾ ಪ್ರಜಾಸ್ತದ್ವೃತ್ತಕಾಂಕ್ಷಯಾ।
ಸ್ವಯಂ ವಿನಯಸಂಪನ್ನಾ ಭವನ್ತೀಹ ಶುಭೇಕ್ಷಣೇ ॥೭೬॥

ಶುಭವಾದ ನೋಟವುಳ್ಳವಳೇ! ರಾಜನು ವಿನಯಶಾಲಿಯಾಗಿದ್ದರೆ ಅಂತಹ ಸ್ವಾಮಿಯನ್ನೇ ಆದರ್ಶನನ್ನಾಗಿ ಭಾವಿಸಿ ಪ್ರಜೆಗಳು ಕೂಡ ಅವನ ಸದ್ವೃತ್ತಿ-ಸದಾಚಾರಗಳನ್ನೇ ಅನುಸರಿಸುವ ಇಚ್ಛೆಯುಳ್ಳವರಾಗಿ ವಿನಯಸಂಪನ್ನರಾಗಿರುತ್ತಾರೆ.

ಸ್ವಸ್ಮಾತ್ಪೂರ್ವತರಂ ರಾಜಾ ವಿನಯತ್ಯೇವ ವೈ ಪ್ರಜಾಃ।
ಅಪಹಾಸ್ಯೋ ಭವೇತ್ತಾದೃಕ್ಸ್ವದೋಷಸ್ಯಾನವೇಕ್ಷಣಾತ್ ॥೭೭॥

ಯಾವ ರಾಜನು ತಾನು ತನ್ನನ್ನು ತಿದ್ದಿಕೊಳ್ಳುವ ಮೊದಲೇ ಪ್ರಜೆಗಳನ್ನು ತಿದ್ದಲು ಪ್ರಯತ್ನಿಸುವನೋ–ಅಂತಹ ರಾಜನು ತನ್ನಲ್ಲಿರುವ ದೋಷಗಳ ಅರಿವಿಲ್ಲದ ಕಾರಣ ಜನರ ಅಪಹಾಸ್ಯಕ್ಕೆ ಪಾತ್ರನಾಗುತ್ತಾನೆ.

ವಿದ್ಯಾಭ್ಯಾಸೈರ್ವೃದ್ಧಯೋಗೈರಾತ್ಮಾನಂ ವಿನಯಂ ನಯೇತ್।
ವಿದ್ಯಾ ಧರ್ಮಾರ್ಥಫಲಿನೀ ತದ್ವಿದೋ ವೃದ್ಧಸಂಜ್ಞಿತಾಃ ॥೭೮॥

ಧರ್ಮಾರ್ಥಗಳೆರಡನ್ನೂ ಫಲವಾಗಿ ಕೊಡುವ ವಿದ್ಯೆಯೇ ವಿದ್ಯೆ. ವಿದ್ಯಾಭ್ಯಾಸದಿಂದಲೂ-ಅಂತಹ ವಿದ್ಯೆಯನ್ನು ತಿಳಿದ ವೃದ್ಧರ ಸಹವಾಸ ದಿಂದಲೂ ತನ್ನನ್ನು ತಿದ್ದಿಕೊಳ್ಳಬೇಕು.

ಇನ್ದ್ರಿಯಾಣಾಂ ಜಯೋ ದೇವಿ ಅತ ಊರ್ಧ್ವಮುದಾಹೃತಃ।
ಅಜಯೇ ಸುಮಹಾನ್ದೋಷೋ ರಾಜಾನಂ ವಿನಿಪಾತಯೇತ್ ॥೭೯॥

ದೇವಿ! ಬಳಿಕ ರಾಜನು ಇಂದ್ರಿಯಗಳನ್ನು ಜಯಿಸಬೇಕು. ರಾಜನು ಇಂದ್ರಿಯಗಳನ್ನು ಜಯಿಸಿ ಸ್ವಾಧೀನಪಡಿಸಿಕೊಳ್ಳದಿದ್ದರೆ ಮಹಾದೋಷ ವುಂಟಾಗುತ್ತದೆ. ಈ ದೋಷವು ರಾಜನನ್ನು ರಾಜ್ಯದಿಂದಲೇ ಭ್ರಷ್ಟನನ್ನಾಗಿ ಮಾಡಿಬಿಡುತ್ತದೆ.

ಪಞ್ಚೈವ ಸ್ವವಶೇ ಕೃತ್ವಾ ತದರ್ಥಾನ್ಪಞ್ಚ ಶೋಷಯೇತ್।
ಷಡುತ್ಸೃಜ್ಯ ಯಥಾಯೋಗಂ ಜ್ಞಾನೇನ ವಿನಯೇನ ಚ ॥೮೦॥

ಶಾಸ್ತ್ರಚಕ್ಷುರ್ನಯಪರೋ ಭೂತ್ವಾ ಭೃತ್ಯಾನ್ಸಮಾಹರೇತ್ ॥೮೧॥

ಐದು ಇಂದ್ರಿಯಗಳನ್ನೂ ವಶದಲ್ಲಿಟ್ಟುಕೊಂಡು, ಐದು ಇಂದ್ರಿಯಗಳ ವಿಷಯಗಳನ್ನೂ ಶೋಷಿಸಬೇಕು. ಜ್ಞಾನ ಮತ್ತು ವಿನಯಗಳ ಮೂಲಕ ಸಂಪೂರ್ಣವಾಗಿ ಪ್ರಯತ್ನಿಸಿ ಕಾಮ-ಕ್ರೋಧಗಳೇ ಮೊದಲಾದ ಆರು ದೋಷಗಳನ್ನು ಪರಿತ್ಯಜಿಸಬೇಕು. ಶಾಸ್ತ್ರವನ್ನೇ ದೃಷ್ಟಿಯನ್ನಾಗಿ ಹೊಂದಿ (ಶಾಸ್ತ್ರವನ್ನೇ ಆಧಾರವನ್ನಾಗಿಟ್ಟುಕೊಂಡು) ನ್ಯಾಯಪರನಾಗಿ ಸೇವಕರನ್ನು ಸಂಗ್ರಹಿಸಬೇಕು.

ವೃತ್ತಶ್ರುತಕುಲೋಪೇತಾನುಪಧಾಭಿಃ ಪರೀಕ್ಷಿತಾನ್।
ಅಮಾತ್ಯಾನುಪಧಾತೀತಾನ್ಸಾಪಸರ್ಪಾಞ್ಜಿತೇನ್ದ್ರಿಯಾನ್ ॥೮೨॥
ಯೋಜಯೇತ ಯಥಾಯೋಗಂ ಯಥಾರ್ಹಂ ಸ್ವೇಷು ಕರ್ಮಸು ॥

ಯಾರು ಸದಾಚಾರಿಗಳಾಗಿಯೂ, ಶಾಸ್ತ್ರಜ್ಞಾನವುಳ್ಳವರಾಗಿಯೂ, ಉತ್ತಮಕುಲಪ್ರಸೂತರಾಗಿಯೂ ಇರುವರೋ ಮತ್ತು ರಾಜನ ಪರೀಕ್ಷೆಗೆ ಒಳಪಟ್ಟು ಉತ್ತೀರ್ಣರಾಗಿರುವರೋ, ಮೋಸ-ವಂಚನೆ ಇತ್ಯಾದಿಗಳಿಲ್ಲದೇ ಇರುವರೋ, ಅನೇಕ ಗೂಢಚಾರರನ್ನು ಹೊಂದಿರುವರೋ, ಜಿತೇಂದ್ರಿಯರೋ-ಅಂತಹವರನ್ನು ಅಮಾತ್ಯರನ್ನಾಗಿ ಮಾಡಿಕೊಂಡು ಅವರವರ ಯೋಗ್ಯತೆಗೆ ಅನುಸಾರವಾಗಿ ಯಥಾಯೋಗ್ಯವಾದ ಸ್ಥಾನಗಳಲ್ಲಿ ನಿಯಮಿಸಬೇಕು.

ಅಮಾತ್ಯಾ ಬುದ್ಧಿಸಮ್ಪನ್ನಾ ರಾಷ್ಟ್ರಂ ಬಹುಜನಪ್ರಿಯಮ್।
ದುರಾಧರ್ಷಂ ಪುರಶ್ರೇಷ್ಠಂ ಕೋಶಃ ಕೃಚ್ಛ್ರಸಹಃ ಸ್ಮೃತಃ ॥೮೪॥
ಅನುರಕ್ತಂ ಬಲಂ ಸಾಮ್ನಾಮದ್ವೈಧಂ ಮಿತ್ರಮೇವ ಚ ।
ಏತಾಃ ಪ್ರಕೃತಯಃ ಸ್ವೇಷು ಸ್ವಾಮೀ ವಿನಯತತ್ತ್ವವಿತ್ ॥೮೫॥

ಬುದ್ಧಿವಂತರಾದ ಮಂತ್ರಿಗಳು, ಬಹುಜನಪ್ರಿಯವಾದ ರಾಷ್ಟ್ರ, ಎದುರಿಸಲು ಅಸಾಧ್ಯವಾದ ಶ್ರೇಷ್ಠನಗರ ಅಥವಾ ದುರ್ಗ, ಆಪತ್ಕಾಲಗಳಲ್ಲಿ ಕಷ್ಟವನ್ನು ಎದುರಿಸಲು ಸಮರ್ಥವಾದ ಬೊಕ್ಕಸ, ಸಮನೀತಿಯ ಮೂಲಕವಾಗಿ ರಾಜನಲ್ಲಿಯೇ ವಿಶೇಷವಾಗಿ ಅನುರಕ್ತವಾದ ಸೈನ್ಯ, ಕಪಟಾಚರಣೆಯಿಂದ ಎರಡು ಬಗೆಯದಿರುವ ಮಿತ್ರ ಮತ್ತು ವಿನಯದ

ತತ್ತ್ವವನ್ನು ತಿಳಿದಿರುವ ಸ್ವಾಮೀ(ರಾಜ)–ಇವನ್ನು ಏಳು ಪ್ರಕೃತಿಗಳೆಂದು ಹೇಳುತ್ತಾರೆ.

ಪ್ರಜಾನಾಂ ರಕ್ಷಣಾರ್ಥಾಯ ಸರ್ವಮೇತದ್ವಿನಿರ್ಮಿತಮ್।
ಆಭಿಃ ಕರಣಭೂತಾಭಿಃ ಕುರ್ಯಾಲ್ಲೋಕಹಿತಂ ನೃಪಃ ॥೮೬॥

ಪ್ರಜೆಗಳ ರಕ್ಷಣೆಯ ಸಲುವಾಗಿಯೇ ಇವೆಲ್ಲದರ ನಿರ್ಮಾಣವಾಗಿದೆ. ಪ್ರಜೆಗಳ ರಕ್ಷಣೆಗೆ ಕಾರಣಭೂತವಾದ ಈ ಪ್ರಕೃತಿಗಳ ಸಹಯೋಗದಿಂದ ರಾಜನು ಲೋಕಕ್ಕೆ ಹಿತವನ್ನುಂಟುಮಾಡಬೇಕು.

ಆತ್ಮರಕ್ಷಾ ನರೇನ್ದ್ರಸ್ಯ ಪ್ರಜಾರಕ್ಷಾರ್ಥಮಿಷ್ಯತೇ।
ತಸ್ಮಾತ್ಸತತಮಾತ್ಮಾನಂ ಸಂರಕ್ಷೇದಪ್ರಮಾದವಾನ್ ॥೮೭॥

ಪ್ರಜೆಗಳನ್ನು ರಕ್ಷಿಸುವ ಸಲುವಾಗಿ ರಾಜನು ಆತ್ಮರಕ್ಷಣೆಯನ್ನು ಮಾಡಿಕೊಳ್ಳಬೇಕು. ಆದುದರಿಂದ ರಾಜನು ಯಾವಾಗಲೂ ಜಾಗರೂಕನಾಗಿರುತ್ತಾ ಆತ್ಮರಕ್ಷಣೆಯನ್ನು ಮಾಡಿಕೊಳ್ಳಬೇಕು.

ಭೋಜನಾಚ್ಛಾದನಸ್ನಾನಾದ್ಬಹಿರ್ನಿಷ್ಕ್ರಮಣಾದಪಿ।
ನಿತ್ಯಂ ಸ್ತ್ರೀಗಣಸಂಯೋಗಾದ್ರಕ್ಷೇದಾತ್ಮಾನಮಾತ್ಮವಾನ್ ॥೮೮॥

ಜಿತೇಂದ್ರಿಯನಾದ ರಾಜನು ಭೋಜನ, ವಸ್ತ್ರಗಳನ್ನು ಉಡುವುದು, ಸ್ನಾನ, ಸಂಚಾರ, ಸ್ತ್ರೀಯರ ಸಮುದಾಯದೊಡನೆ ಇರುವುದು–ಈ ಎಲ್ಲ ಸಮಯಗಳಲ್ಲಿಯೂ ಆತ್ಮರಕ್ಷಣೆಯನ್ನು ಮಾಡಿಕೊಳ್ಳಬೇಕು.

ಸ್ವೇಭ್ಯಶ್ಚೈವ ಪರೇಭ್ಯಶ್ಚ ಶಸ್ತ್ರಾದಪಿ ವಿಷಾದಪಿ।
ಸತತಂ ಪುತ್ರದಾರೇಭ್ಯೋ ರಕ್ಷೇದಾತ್ಮಾನಮಾತ್ಮವಾನ್ ॥೮೯॥

ಜಿತೇಂದ್ರಿಯನಾದ ರಾಜನು ಸ್ವಜನರಿಂದಲೂ, ಪರಜನರಿಂದಲೂ, ಶಸ್ತ್ರದಿಂದಲೂ, ವಿಷದಿಂದಲೂ, ಕೆಲವು ಸಮಯಗಳಲ್ಲಿ ಹೆಂಡತಿ-ಮಕ್ಕಳಿಂದಲೂ ಆತ್ಮರಕ್ಷಣೆಯನ್ನು ಯಾವಾಗಲೂ ಮಾಡಿಕೊಳ್ಳುತ್ತಿರಬೇಕು.

ಸರ್ವೇಭ್ಯ ಏವ ಸ್ಥಾನೇಭ್ಯೋ ರಕ್ಷೇದಾತ್ಮಾನಮಾತ್ಮವಾನ್।
ಪ್ರಜಾನಾಂ ರಕ್ಷಣಾರ್ಥಾಯ ಪ್ರಜಾಹಿತಕರೋ ಭವೇತ್ ॥೯೦॥

ಜಿತೇಂದ್ರಿಯನಾದ ರಾಜನು ಪ್ರಜೆಗಳ ರಕ್ಷಣೆಯ ಸಲುವಾಗಿ ಎಲ್ಲ ಸ್ಥಾನಗಳಿಂದಲೂ ಮತ್ತು ಎಲ್ಲ ಸಂದರ್ಭಗಳಲ್ಲಿಯೂ ಆತ್ಮರಕ್ಷಣೆಯನ್ನು ಮಾಡಿಕೊಳ್ಳುತ್ತಾ ಪ್ರಜೆಗಳಿಗೆ ಹಿತಕರನಾಗಿರಬೇಕು.

ಪ್ರಜಾಕಾರ್ಯಂ ತು ತತ್ಕಾರ್ಯಂ ಪ್ರಜಾಸೌಖ್ಯಂ ತು ತತ್ಸುಖಮ್ ।
ಪ್ರಜಾಪ್ರಿಯಂ ಪ್ರಿಯಂ ತಸ್ಯ ಸ್ವಹಿತಂ ತು ಪ್ರಜಾಹಿತಮ್ ।
ಪ್ರಜಾರ್ಥಂ ತಸ್ಯ ಸರ್ವಸ್ವಮಾತ್ಮಾರ್ಥಂ ನ ವಿಧೀಯತೇ ॥೯೨॥

ಪ್ರಜೆಗಳ ಕಾರ್ಯವೇ ರಾಜನ ಕಾರ್ಯವಾಗಿದೆ. ಪ್ರಜೆಗಳ ಸೌಖ್ಯವೇ ರಾಜನ ಸೌಖ್ಯವಾಗಿದೆ. ಪ್ರಜೆಗಳ ಪ್ರಿಯವೇ ಅವನಿಗೂ ಪ್ರಿಯವಾಗಿದೆ. ಪ್ರಜೆಗಳ ಹಿತವೇ ಅವನ ಹಿತವಾಗಿದೆ. ರಾಜನ ಸರ್ವಸ್ವವೂ ಪ್ರಜೆಗಳ ಸಲುವಾಗಿಯೇ ಇದೆ. ತನಗಾಗಿ ಯಾವುದೂ ಇಲ್ಲ.

ಪ್ರಕೃತೀನಾಂ ಹಿ ರಕ್ಷಾರ್ಥಂ ರಾಗದ್ವೇಷೌ ವ್ಯುದಸ್ಯ ಚ ।
ಉಭಯೋಃ ಪಕ್ಷಯೋರ್ವಾದಂ ಶ್ರುತ್ವಾ ಚೈವ ಯಥಾತಥಮ್ ॥೯೩॥
ತಮರ್ಥಂ ವಿಮೃಶೇದ್ಬುದ್ಧ್ಯಾ ಸ್ವಯಮಾತತ್ತ್ವದರ್ಶನಾತ್ ॥೯೪॥

ಪ್ರಜೆಗಳ ಹಿತಾರ್ಥವಾಗಿ ರಾಜನು ರಾಗ-ದ್ವೇಷಗಳನ್ನು ಬಿಡಬೇಕು. ವಿವಾದವನ್ನು ನಿರ್ಣಯಿಸುವುದರ ಮೊದಲು ಎರಡು ಪಕ್ಷಗಳ ವಾದ-ವಿವಾದಗಳನ್ನೂ ಯಥಾವತ್ತಾಗಿ ಕೇಳಬೇಕು. ಎರಡೂ ಪಕ್ಷಗಳಲ್ಲಿ ಯಾರದ್ದು ನ್ಯಾಯವಾದುದು; ಯಾರದ್ದು ನ್ಯಾಯಬಾಹಿರವಾದುದು– ಎಂಬುದು ದೃಢವಾಗಿ ತಿಳಿಯುವವರೆಗೂ ರಾಜನು ಅವರಿಬ್ಬರ ವಾದ-ವಿವಾದಗಳನ್ನು ಬುದ್ಧಿಯಿಂದ ಚೆನ್ನಾಗಿ ವಿಮರ್ಶಿಸುತ್ತಿರಬೇಕು.

ತತ್ತ್ವವಿದ್ಭಿಶ್ಚ ಬಹುಭಿಃ ಸಹಾಸೀನೋ ನರೋತ್ತಮೈಃ ।
ಕರ್ತಾರಮಪರಾಧಂ ಚ ದೇಶಕಾಲೌ ನಯಾನಯೌ ॥೯೫॥
ಜ್ಞಾತ್ವಾ ಸಮ್ಯಗ್ಯಥಾಶಾಸ್ತ್ರಂ ತತೋ ದಣ್ಡಂ ನಯೇನ್ನೃಪ ॥೯೬॥

ತತ್ತ್ವವನ್ನು ತಿಳಿದ ಅನೇಕ ಶ್ರೇಷ್ಠಪುರುಷರೊಡನೆ ಕುಳಿತು ಪರಾಮರ್ಶಿಸಿದನಂತರ ಅಪರಾಧಿ, ಅಪರಾಧ, ದೇಶ, ಕಾಲ, ನ್ಯಾಯ ಮತ್ತು ಅನ್ಯಾಯ–ಇವೆಲ್ಲವನ್ನೂ ಚೆನ್ನಾಗಿ ತಿಳಿದ ಬಳಿಕ ಶಾಸ್ತ್ರವು ವಿಧಿಸಿರುವ ರೀತಿಯಲ್ಲಿ ಅಪರಾಧಿಯನ್ನು ಶಿಕ್ಷಿಸಬೇಕು.

ಏವಂ ಕುರ್ವಂಲ್ಲಭೇದ್ಧರ್ಮಂ ಪಕ್ಷಪಾತವಿವರ್ಜನಾತ್ ।

ಪ್ರತ್ಯಕ್ಷಾಪ್ತೋಪದೇಶಾಭ್ಯಾಮನುಮಾನೇನ ವಾ ಪುನಃ।
ಬೋದ್ಧವ್ಯಂ ಸತತಂ ರಾಜ್ಞಾ ದೇಶವೃತ್ತಂ ಶುಭಾಶುಭಮ್ ॥೯೭॥

ಪಕ್ಷಪಾತವಿಲ್ಲದಂತೆ ಹೀಗೆ ನ್ಯಾಯವನ್ನು ನಿರ್ಣಯಿಸಿ ಅಪರಾಧಿಗಳನ್ನು ಶಿಕ್ಷಿಸುವ ರಾಜನು ಧರ್ಮಕ್ಕೆ ಭಾಗಿಯಾಗುತ್ತಾನೆ. ಪ್ರತ್ಯಕ್ಷವಾಗಿ ನೋಡಿಯೋ, ಆಪ್ತರ ಉಪದೇಶದ ಮೂಲಕವಾಗಿಯೋ, ಯುಕ್ತಿಯುಕ್ತವಾದ ತರ್ಕದಿಂದಲೋ ರಾಜನು ತನ್ನ ದೇಶದ ಶುಭಾಶುಭವೃತ್ತಾಂತಗಳನ್ನು ತಿಳಿದುಕೊಳ್ಳುತ್ತಿರಬೇಕು.

ಚಾರೈಃ ಕರ್ಮಪ್ರವೃತ್ತ್ಯಾ ಚ ತದ್ವಿಜ್ಞಾಯ ವಿಚಾರಯೇತ್।
ಅಶುಭಂ ನಿರ್ಹರೇತ್ಸದ್ಯೋ ಜೋಷಯೇಚ್ಛುಭಮಾತ್ಮನಃ ॥೯೮॥

ಗುಪ್ತಚಾರರ ಮೂಲಕ ಮತ್ತು ಕಾರ್ಯಪ್ರವೃತ್ತಿಯಿಂದ ದೇಶದ ಶುಭಾಶುಭವೃತ್ತಾಂತಗಳನ್ನು ತಿಳಿದುಕೊಂಡು ಅದರ ಬಗೆಗೆ ವಿಚಾರ ಮಾಡಬೇಕು. ಅಶುಭಗಳನ್ನು ಒಡನೆಯೇ ನಿವಾರಿಸಬೇಕು. ಹೀಗೆ ಮಾಡಿ ತಾನೂ ಶುಭಫಲವನ್ನು ಹೊಂದಬೇಕು.

ಗರ್ಹ್ಯಾನ್ವಿಗರ್ಹಯೇದ್ದೇವಿ ಪೂಜ್ಯಾನ್ಸಮ್ಪೂಜಯೇತ್ತಥಾ।
ದಣ್ಡ್ಯಾಂಶ್ಚ ದಣ್ಡಯೇದ್ದೇವಿ ನಾತ್ರ ಕಾರ್ಯಾ ವಿಚಾರಣಾ ॥೯೯॥

ದೇವಿ! ರಾಜನಾದವನು ನಿಂದನೀಯರನ್ನು ನಿಂದಿಸಲೇಬೇಕು. ಪೂಜನೀಯರನ್ನು ಗೌರವಿಸಬೇಕು. ಶಿಕ್ಷೆಗೆ ಯೋಗ್ಯರಾದ ಅಪರಾಧಗಳನ್ನು ಶಿಕ್ಷಿಸಲೇಬೇಕು. ಈ ವಿಷಯಗಳಲ್ಲಿ ಪುನಃ ವಿಚಾರಮಾಡಲೇಬಾರದು.

ಪಞ್ಚಾಪೇಕ್ಷಂ ಸದಾಮನ್ತ್ರಂ ಕುರ್ಯಾದ್ಬುದ್ಧಿಯುತೈರ್ನರೈಃ।
ಕುಲವೃತ್ತಶ್ರುತೋಪೇತೈರ್ನಿತ್ಯಂ ಮನ್ತ್ರಪರೋ ಭವೇತ್ ॥೧೦೦॥

ಮಂತ್ರಾಲೋಚನೆಯು ಯಾವಾಗಲೂ ಐವರನ್ನು ಅಪೇಕ್ಷಿಸುತ್ತದೆ. ಬುದ್ಧಿವಂತರಾದ, ಸತ್ಕುಲಪ್ರಸೂತರಾದ, ಸದಾಚಾರಪರರಾದ, ಶಾಸ್ತ್ರಜ್ಞಾನಸಂಪನ್ನರಾದ ಐವರೊಡನೆ ಸೇರಿಕೊಂಡು ಯಾವಾಗಲೂ ಮಂತ್ರಾಲೋಚನೆಯನ್ನು ಮಾಡುತ್ತಿರಬೇಕು.

ಕಾಮಕಾರೇಣ ವೈಮುಖ್ಯೈರ್ನ್ಯೈವ ಮನ್ತ್ರಮನಾ ಭವೇತ್।
ರಾಜಾ ರಾಷ್ಟ್ರಹಿತಾಪೇಕ್ಷಂ ಸತ್ಯಧರ್ಮಾಣಿ ಕಾರಯೇತ್ ॥೧೦೧॥

ಸ್ವೇಚ್ಛಾಚಾರಿಗಳಾಗಿ ರಾಜಕಾರ್ಯಗಳಿಂದ ವಿಮುಖರಾಗಿರುವವರೊಡನೆ ಮಂತ್ರಾಲೋಚನೆಯನ್ನು ಮಾಡಬೇಕೆಂಬ ಮನಸ್ಸನ್ನು ರಾಜನು ಇಟ್ಟುಕೊಳ್ಳ ಬಾರದು. ರಾಜನು ರಾಷ್ಟ್ರಹಿತವನ್ನೇ ಮುಖ್ಯವಾದ ಗುರಿಯನ್ನಾಗಿಟ್ಟುಕೊಂಡು ಸತ್ಯ-ಧರ್ಮಗಳನ್ನು ಪರಿಪಾಲಿಸಬೇಕು ಮತ್ತು ಇತರರನ್ನೂ ಸತ್ಯಧರ್ಮಗಳಿಗೆ ಅನುಸಾರವಾಗಿ ನಡೆದುಕೊಳ್ಳುವಂತೆ ಮಾಡಬೇಕು.

ಸರ್ವೋದ್ಯೋಗಂ ಸ್ವಯಂಕುರ್ಯಾದ್ದುರ್ಗಾದಿಷು ಸದಾ ನೃಪು।
ದೇಶವೃದ್ಧಿಕರಾನ್ಭೃತ್ಯಾನಪ್ರಮಾದೇನ ಕಾರಯೇತ್ ॥೧೦೨॥
ದೇಶಕ್ಷಯಕರಾನ್ಸರ್ವಾನಪ್ರಿಯಾಂಶ್ಚ ವಿಸರ್ಜಯೇತ್।
ಅಹನ್ಯಹನಿ ಸಮ್ಪಶ್ಯೇದನುಜೀವಗಣಂ ಸ್ವಯಮ್ ॥೧೦೩॥

ಜನರ ಮತ್ತು ದುರ್ಗಾದಿಗಳ ರಕ್ಷಣಾಕಾರ್ಯಗಳಲ್ಲಿ ರಾಜನೇ ಸ್ವತಃ ಕಾರ್ಯಪ್ರವೃತ್ತನಾಗಿರಬೇಕು. ದೇಶದ ಸಂಪತ್ತನ್ನು ಹೆಚ್ಚಿಸುವ ಸೇವಕರ ವಿಷಯದಲ್ಲಿ ಜಾಗರೂಕನಾಗಿದ್ದು ಅವರನ್ನು ಯಥಾಯೋಗ್ಯವಾದ ಕಾರ್ಯಗಳಲ್ಲಿ ನಿಯಮಿಸಬೇಕು. ದೇಶಕ್ಕೆ ಹಾನಿಯನ್ನುಂಟುಮಾಡುವ ಅಪ್ರಿಯರಾದವರನ್ನು ಪರಿತ್ಯಜಿಸಬೇಕು. ಯಾರು ರಾಜನ ಆಶ್ರಯದಿಂದ ಜೀವಿಕೆಯನ್ನು ನಡೆಸುತ್ತಿರುವರೋ–ಅಂತಹವರ ಯೋಗ-ಕ್ಷೇಮಗಳನ್ನು ರಾಜನು ಸ್ವತಃ ಪ್ರತಿದಿನವೂ ನೋಡಿಕೊಳ್ಳುತ್ತಿರಬೇಕು.

ಸುಮುಖಃ ಸುಪ್ರಿಯೋ ಭೂತ್ವಾ ಸಮ್ಯಗ್ವೃತ್ತಂ ಸಮಾಚರೇತ್।
ಅಧರ್ಮ್ಯಂ ಪರುಷಂ ತೀಕ್ಷ್ಣಂ ವಾಕ್ಯಂ ವಕ್ತುಂ ನ ಚಾರ್ಹತಿ ॥೧೦೪॥

ರಾಜನು ಪ್ರಜೆಗಳ ವಿಷಯದಲ್ಲಿ ಯಾವಾಗಲೂ ಪ್ರಸನ್ನಮುಖನಾಗಿ ಪರಮಪ್ರಿಯನಾಗಿ ಸದ್ವ್ಯವಹಾರವುಳ್ಳವನಾಗಿರಬೇಕು. ಪ್ರಜೆಗಳ ವಿಷಯ ದಲ್ಲಿ ಧರ್ಮಬಾಹಿರವಾದ, ಕಠೋರವಾದ ಮತ್ತು ತೀಕ್ಷ್ಣವಾದ ಮಾತುಗಳನ್ನು ಆಡುವುದು ಖಂಡಿತವಾಗಿಯೂ ಉಚಿತವಲ್ಲ.

ಅವಿಶ್ವಾಸ್ಯಂ ಹಿ ವಚನಂ ವಕ್ತುಂ ಸತ್ಸು ನ ಚಾರ್ಹತಿ।
ನರೇ ನರೇ ಗುಣಾನ್ದೋಷಾನ್ಸಮ್ಯಗ್ವೇದಿತುಮರ್ಹತಿ ॥೧೦೫॥

ಸತ್ಪುರುಷರ ಮಧ್ಯದಲ್ಲಿ ವಿಶ್ವಾಸಕ್ಕೆ ಅರ್ಹವಲ್ಲದ ಮಾತುಗಳನ್ನು ಆಡಬಾರದು. ಪ್ರತಿಯೊಬ್ಬ ಮನುಷ್ಯನ ಗುಣ-ದೋಷಗಳನ್ನೂ ಚೆನ್ನಾಗಿ ತಿಳಿದುಕೊಳ್ಳಬೇಕು.

ಸ್ವೇಙ್ಗಿತಂ ವೃಣುಯಾದ್ಧೈರ್ಯಾನ್ನ ಕುರ್ಯಾತ್ಕ್ಷುದ್ರಸಂವಿದಮ್।
ಪರೇಙ್ಗಿತಜ್ಞೋ ಲೋಕೇಷು ಭೂತ್ವಾ ಸಂಸರ್ಗಮಾಚರೇತ್ ॥೧೦೬॥

ತನ್ನ ಮನಸ್ಸಿನ ಅಭಿಪ್ರಾಯವನ್ನು ಧೈರ್ಯದಿಂದ ಗುಪ್ತವಾಗಿಟ್ಟುಕೊಳ್ಳಬೇಕು. ಕ್ಷುದ್ರವಾದ ಬುದ್ಧಿಯನ್ನು ತೋರಿಸಬಾರದು. ಅಥವಾ ಮನಸ್ಸಿನಲ್ಲಿ ಕ್ಷುದ್ರವಾದ ವಿಚಾರಗಳನ್ನು ಯೋಚಿಸಬಾರದು. ಇತರರ ಮನಸ್ಸಿನಲ್ಲಿರುವುದನ್ನು ಅರಿತು ಸತ್ಪುರುಷರೆಂದು ಕಂಡುಬಂದರೆ ಅವರೊಡನೆ ಸಂಪರ್ಕವನ್ನು ಇಟ್ಟುಕೊಳ್ಳಬೇಕು.

ಸ್ವತಶ್ಚ ಪರತಶ್ಚೈವ ಪರಸ್ಪರಭಯಾದಪಿ ।
ಅಮಾನುಷಭಯೇಭ್ಯಶ್ಚ ಸ್ವಾಃ ಪ್ರಜಾಃ ಪಾಲಯೇನ್ನೃಪಃ ॥೧೦೭॥

ರಾಜನು ತನ್ನ ಸಂಬಂಧವಾದ ಭಯದಿಂದಲೂ, ಇತರರ ಭಯದಿಂದಲೂ, ಪಾರಸ್ಪರಿಕವಾದ ಭಯದಿಂದಲೂ, ಅಮಾನುಷರ ಭಯದಿಂದಲೂ ಪ್ರಜೆಗಳನ್ನು ರಕ್ಷಿಸಬೇಕು.

ಲುಬ್ಧಾಃ ಕಠೋರಾಶ್ಚಾಪ್ಯಸ್ಯ ಮಾನವಾ ದಸ್ಯುವೃತ್ತಯಃ।
ನಿಗ್ರಹ್ಯಾ ಏವ ತೇ ರಾಜ್ಞಾ ಸಂಗೃಹೀತ್ವಾ ಯತಸ್ತತಃ ॥೧೦೮॥

ರಾಜನಾದವನು ಲುಬ್ಧರನ್ನೂ, ಕ್ರೂರಿಗಳನ್ನೂ, ಕಳ್ಳ-ಕಾಕರನ್ನೂ ಎಲ್ಲೆಂದರಲ್ಲಿ ಬಂಧಿಸಿ ನಿಗ್ರಹಿಸಬೇಕು.

ಕುಮಾರಾನ್ವಿನಯೈರೇವ ಜನ್ಮಪ್ರಭೃತಿ ಯೋಜಯೇತ್।
ತೇಷಾಮಾತ್ಮಗುಣೋಪೇತಂ ಯೌವರಾಜ್ಯೇನ ಯೋಜಯೇತ್ ॥

ರಾಜಕುಮಾರರನ್ನು ಹುಟ್ಟಿದಾಗಿನಿಂದಲೂ ವಿನಯಶೀಲರನ್ನಾಗಿ ಮಾಡಬೇಕು. ಅವರಲ್ಲಿ ಯಾರು ತನ್ನಲ್ಲಿರುವ ಗುಣಗಳಿಗೆ ಅನುರೂಪವಾದ ಗುಣಗಳುಳ್ಳವರಾಗಿರುವನೋ ಅಂತಹವನನ್ನು ಯುವರಾಜನನ್ನಾಗಿ ಮಾಡಬೇಕು.

ಅರಾಜಕಂ ಕ್ಷಣಮಪಿ ರಾಜ್ಯಂ ನ ಸ್ಯಾದ್ಧಿ ಶೋಭನೇ।
ಆತ್ಮನೋಽನುವಿಧಾನಾಯ ಯೌವರಾಜ್ಯಂ ಸದೇಷ್ಯತೇ ॥೧೧೦॥

ಶೋಭನಳೇ! ರಾಜ್ಯವು ರಾಜನಿಲ್ಲದೇ ಕ್ಷಣಮಾತ್ರವೂ ಇರಬಾರದು.

ಆದುದರಿಂದ ತನ್ನ ಬಳಿಕ ರಾಜನಾಗಲು ಯೋಗ್ಯನಾಗಿರುವ ಯುವರಾಜನೊಬ್ಬನನ್ನು ಯಾವಾಗಲೂ ಇಟ್ಟುಕೊಂಡಿರಬೇಕು.

ಕುಲಜಾನಾಂ ಚ ವೈದ್ಯಾನಾಂ ಶ್ರೋತ್ರಿಯಾಣಾಂ ತಪಸ್ವಿನಾಮ್।
ಅನ್ಯೇಷಾಂ ವೃತ್ತಿಯುಕ್ತಾನಾಂ ವಿಶೇಷಂ ಕರ್ತುಮರ್ಹತಿ।
ಆತ್ಮಾರ್ಥಂ ರಾಜ್ಯತನ್ತ್ರಾರ್ಥಂ ಕೋಶಾರ್ಥಂ ಚ ಸಮಾಚರೇತ್ ॥

ಸತ್ಕುಲಪ್ರಸೂತರನ್ನೂ, ವೈದ್ಯರನ್ನೂ, ಶ್ರೋತ್ರಿಯರನ್ನೂ, ತಪಸ್ವಿಗಳನ್ನೂ, ಬೇರೆ-ಬೇರೆ ಕುಶಲವೃತ್ತಿಗಳಲ್ಲಿರುವವರನ್ನೂ ರಾಜನಾದವನು ವಿಶೇಷವಾಗಿ ಸತ್ಕರಿಸಬೇಕು. ತನಗಾಗಿ, ರಾಜ್ಯದ ಹಿತಕ್ಕಾಗಿ ಮತ್ತು ಧನಸಂಗ್ರಹಕ್ಕಾಗಿ ರಾಜನು ಹೀಗೆ ಮಾಡಬೇಕು.

ಚತುರ್ಧಾ ವಿಭಜೇತ್ಕೋಶಂ ಧರ್ಮಭೃತ್ಯಾತ್ಮಕಾರಣಾತ್।
ಆಪದರ್ಥಂ ಚ ನೀತಿಜ್ಞೋ ದೇಶಕಾಲವಶೇನತು ॥೧೧೩॥

ನೀತಿಜ್ಞನಾದ ರಾಜನು ತನ್ನ ಕೋಶವನ್ನು ನಾಲ್ಕುಭಾಗಗಳನ್ನಾಗಿ ವಿಭಾಗಿಸಬೇಕು. ಒಂದು ಭಾಗವನ್ನು ಧರ್ಮದ ಸಲುವಾಗಿ, ಮತ್ತೊಂದು ಭಾಗವನ್ನು ಸೇವಕವರ್ಗದವರಿಗಾಗಿ, ಇನ್ನೊಂದು ಭಾಗವನ್ನು ತನಗಾಗಿ, ನಾಲ್ಕನೆಯ ಭಾಗವನ್ನು ದೇಶ-ಕಾಲಾನುಗುಣವಾಗಿ ಪ್ರಾಪ್ತವಾಗುವ ಆಪತ್ತುಗಳಿಗಾಗಿ ವಿನಿಯೋಗಿಸಬೇಕು.

ಅನಾಥಾನ್ವ್ಯಾಧಿತಾನ್ವೃದ್ಧಾನ್ಸ್ವದೇಶೇ ಪೋಷಯೇನ್ನೃಪಃ।
ಸನ್ಧಿಂ ಚ ವಿಗ್ರಹಂ ಚೈವ ತದ್ವಿಶೇಷಾಂಸ್ತಥಾ ಪರಾನ್।
ಯಥಾವತ್ಸಂವಿಮೃಶ್ಯೈವ ಬುದ್ಧಿಪೂರ್ವಂ ಸಮಾಚರೇತ್ ॥೧೧೪॥

ರಾಜನಾದವನು ದೇಶದಲ್ಲಿರುವ ಅನಾಥರನ್ನೂ, ರೋಗಿಗಳನ್ನೂ, ವೃದ್ಧರನ್ನೂ ತಾನೇ ಪೋಷಿಸಬೇಕು. ಸಂಧಿ-ವಿಗ್ರಹಗಳನ್ನೂ ರಾಜ್ಯಕ್ಕೆ ಸಂಬಂಧಿಸಿದ ಇತರ ವಿಶೇಷಕಾರ್ಯಗಳನ್ನೂ ಯಥಾವತ್ತಾಗಿ ಬುದ್ಧಿಪೂರ್ವಕವಾಗಿ ವಿಮರ್ಶಿಸಿ ಪ್ರಾರಂಭಿಸಬೇಕು.

ಸರ್ವೇಷಾಂ ಸಮ್ಪ್ರಿಯೋ ಭೂತ್ವಾ ಮಣ್ಡಲಂ ಸತತಂ ಚರೇತ್।
ಶುಭೇಷ್ವಪಿ ಚ ಕಾರ್ಯೇಷು ನ ಚೈಕಾನ್ತಃ ಸಮಾಚರೇತ್ ॥೧೧೫॥

ರಾಜನು ಎಲ್ಲರ ಪ್ರೀತಿಗೂ ಪಾತ್ರನಾಗಿದ್ದು ತನ್ನ ದೇಶದ ಮಂಡಲವನ್ನು (ವಿಧ-ವಿಧಭಾಗಗಳನ್ನು) ಸಂಚರಿಸುತ್ತಿರಬೇಕು. ದೇಶಕ್ಕೆ ಹಿತಕರವಾದ ಶುಭಕಾರ್ಯಗಳನ್ನು ಮಾಡುವಾಗ ಗುಟ್ಟಾಗಿ ಮಾಡಬಾರದು. (ಇತರರೊಡನೆ ಸಮಾಲೋಚಿಸಿ ಮಾಡಬೇಕು.)

ಸ್ವತಶ್ಚ ಪರತಶ್ಚೈವ ವ್ಯಸನಾನಿ ವಿಮೃಶ್ಯ ಸಃ।
ಪರೇಣ ಧಾರ್ಮಿಕಾನ್ಯೋಗಾನ್ನಾತೀಯಾದ್ದ್ವೇಷಲೋಭತಃ ॥೧೧೬॥

ತಾನಾಗಿಯೇ ಸಂಭವಿಸುವ ಮತ್ತು ಇತರರಿಂದ ಉಂಟಾಗಬಹುದಾದ ಸಂಕಟಗಳನ್ನು ವಿಮರ್ಶಿಸಬೇಕು. ದ್ವೇಷವಶನಾಗಿ ಅಥವಾ ಲೋಭವಶನಾಗಿ ಧಾರ್ಮಿಕಪುರುಷರೊಡನೆ ಸಂಬಂಧವನ್ನು ಬಿಡಬಾರದು.

ರಕ್ಷ್ಯತ್ವಂ ವೈ ಪ್ರಜಾಧರ್ಮಃ ಕ್ಷತ್ರಧರ್ಮಸ್ತು ರಕ್ಷಣಮ್।
ಕುನೃಪೈಃ ಪೀಡಿತಾಸ್ತಸ್ಮಾತ್ಪ್ರಜಾಃ ಸರ್ವತ್ರ ಪಾಲಯೇತ್ ॥೧೧೭॥

ರಕ್ಷಿಸಿಕೊಳ್ಳುವುದು ಪ್ರಜಾಧರ್ಮವಾಗಿದೆ. ರಕ್ಷಿಸುವುದು ಕ್ಷತ್ರಿಯಧರ್ಮವಾಗಿದೆ. ಆದುದರಿಂದ ದುಷ್ಟರಾಜರಿಂದ ಪೀಡಿತರಾಗುವ ಪ್ರಜೆಗಳನ್ನು ಸದ್ವ್ಯವಹಾರವುಳ್ಳ ರಾಜನು ಸರ್ವತ್ರ ರಕ್ಷಿಸಬೇಕು.

ವ್ಯಸನೇಭ್ಯೋ ಬಲಂ ರಕ್ಷೇನ್ನಯತೋ ವ್ಯಯತೋಽಪಿ ವಾ।
ಪ್ರಾಯಶೋ ವರ್ಜಯೇದ್ಯುದ್ಧಂ ಪ್ರಾಣರಕ್ಷಣಕಾರಣಾತ್ ॥೧೧೮॥

ಸಾಮದಾನಾದಿ ನೀತಿಯ ಮೂಲಕವಾಗಿ ಅಥವಾ ಹಣವನ್ನಾದರೂ ವ್ಯಯಿಸಿ ಸೈನಿಕರನ್ನು ಸಂಕಟದಿಂದ ಪಾರುಮಾಡಬೇಕು. ಪ್ರಾಣರಕ್ಷಣೆಯ ಸಲುವಾಗಿ ಸಾಮಾನ್ಯವಾಗಿ ಯುದ್ಧವನ್ನು ನಿಲ್ಲಿಸಬೇಕು.

ಕಾರಣಾದೇವ ಯೋದ್ಧವ್ಯಂ ನಾತ್ಮನಃ ಪರದೋಷತಃ।
ಸಂಯುದ್ಧೇ ಪ್ರಾಣಮೋಕ್ಷಶ್ಚ ತಸ್ಯ ಧರ್ಮಾಯ ಇಷ್ಯತೇ ॥೧೧೯॥

ಅನಿವಾರ್ಯಪ್ರಸಂಗವು ಬಂದರೆ ಮಾತ್ರ ಯುದ್ಧಮಾಡಬೇಕು. ತನ್ನಲ್ಲಿ ದೋಷವನ್ನಿಟ್ಟುಕೊಂಡು ಯುದ್ಧಮಾಡಬಾರದು. ಮತ್ತೊಬ್ಬರು ದೋಷಿಗಳೆಂದು ಭಾವಿಸಿಯೂ ಯುದ್ಧಮಾಡಬಾರದು. ಉತ್ತಮಯುದ್ಧದಲ್ಲಿ ಪ್ರಾಣತ್ಯಾಗಮಾಡುವುದೂ ಧರ್ಮಪ್ರಾಪ್ತಿಗೆ ಸಾಧನವಾಗುತ್ತದೆ.

ಅಭಿವ್ಯಕ್ತೋ ಬಲವತಾ ಕುರ್ಯಾದಾಪದ್ವಿಧಿಂ ನೃಪಃ।
ಅನುನೀಯ ತಥಾ ಸರ್ವಾನ್ಪ್ರಜಾನಾಂ ಹಿತಕಾರಣಾತ್ ॥೧೨೦॥
ಏಷ ದೇವಿ ಸಮಾಸೇನ ರಾಜಧರ್ಮಃ ಪ್ರಕೀರ್ತಿತಃ ॥೧೨೧॥

ಯಾವನಾದರೂ ಬಲಿಷ್ಠನಾದ ಶತ್ರುವು ಆಕ್ರಮಣವನ್ನು ನಡೆಸಿದರೆ–ಆ ಸಮಯದಲ್ಲಿ ರಾಜನು ಆಪತ್ಕಾಲದಲ್ಲಿ ಅನುಸರಿಸಬೇಕಾದ ಧರ್ಮವನ್ನು ಅನುಸರಿಸಬೇಕು. ಸಮಸ್ತಪ್ರಜೆಗಳ ಹಿತಕ್ಕಾಗಿ ಎಲ್ಲ ವಿರೋಧಿಗಳೊಡನೆಯೂ ಸಂಧಾನಮಾಡಿಕೊಳ್ಳಬೇಕು. ಪಾರ್ವತಿ! ಹೀಗೆ ನಾನು ನಿನಗೆ ಸಂಕ್ಷೇಪವಾಗಿ ರಾಜಧರ್ಮವನ್ನು ಹೇಳಿದ್ದೇನೆ.

ಏವಂ ಸಂವರ್ತಮಾನಸ್ತು ದಣ್ಡಯನ್ಭರ್ತ್ಸಯನ್ಪ್ರಜಾಃ।
ನಿಷ್ಕಲ್ಮಷಮವಾಪ್ನೋತಿ ಪದ್ಮಪತ್ರಮಿವಾಮ್ಭಸಾ ॥೧೨೨॥

ಪ್ರಜೆಗಳ ವಿಷಯದಲ್ಲಿ ಹೀಗೆ ವ್ಯವಹರಿಸುವ ರಾಜನು ಸಮಯಗಳಲ್ಲಿ ಪ್ರಜೆಗಳನ್ನು ದಂಡಿಸಿದರೂ ಭಯಪಡಿಸಿದರೂ–ತನ್ನಲ್ಲಿ ಬಿದ್ದ ನೀರಿನಿಂದ ಲಿಪ್ತವಾಗದ ಕಮಲದ ಎಲೆಯಂತೆ–ತಾನು ಯಾವುದೇ ವಿಧವಾದ ದೋಷದಿಂದಲೂ ಲಿಪ್ತನಾಗುವುದಿಲ್ಲ.

ಹೀಗೆ ವ್ಯವಹರಿಸುತ್ತಿರುವ ರಾಜನು ಕಾಲಾನುಗುಣವಾಗಿ ಮರಣವು ಸಂಭವಿಸಿದನಂತರ ಸ್ವರ್ಗಲೋಕಕ್ಕೆ ಹೋಗಿ ಅಲ್ಲಿ ದೇವತೆಗಳೊಡನೆ ಆನಂದಪಡುತ್ತಾನೆ.

ಯೋಧರ ಧರ್ಮ: ರಣಯಜ್ಞದಲ್ಲಿ ಪ್ರಾಣಬಿಡುವುದರ ಮಹಿಮೆ

ಯಾವ ರಾಜನು ನಾನಾವಿಧವಾದ ಭೋಗಸಾಮಗ್ರಿಗಳನ್ನೂ, ವಸ್ತ್ರಾಭರಣಗಳನ್ನೂ ಕೊಟ್ಟು ಮತ್ತೊಬ್ಬ ಯೋಧನನ್ನು ಸಹಾಯಕ್ಕೆ ಕರೆಯುವನೋ ಮತ್ತು ಅವನೊಡನೆ ಸಂಬಂಧವನ್ನು ಬೆಳೆಸಿ ಸಹಭೋಜನವನ್ನು ಮಾಡುವನೋ, ವಿಧವಿಧವಾದ ಸತ್ಕಾರಗಳಿಂದ ಸತ್ಕರಿಸುವನೋ–ಅಂತಹ ರಾಜನಿಗೆ ಶತ್ರುಗಳೊಡನೆ ಯುದ್ಧಮಾಡಬೇಕಾದ ಕಾಲವು ಸನ್ನಿಹಿತವಾದಾಗ ಸಹಾಯ-ಸತ್ಕಾರಗಳನ್ನು ಪಡೆದ ಯೋಧನು ಅವನಿಗೆ ಸಹಾಯಮಾಡುವ ಸಲುವಾಗಿ ಶಸ್ತ್ರವನ್ನು ಎತ್ತಿಹಿಡಿಯಬೇಕು. (ಯುದ್ಧಸನ್ನದ್ಧನಾಗಬೇಕು.)

ಹನ್ಯಮಾನೇಷ್ವಭಿಘ್ನತ್ಸು ಶೂರೇಷು ರಣಸಂಕಟೇ।
ಪೃಷ್ಠಂ ದತ್ತ್ವಾ ಚ ಯೇ ತತ್ರ ನಾಯಕಸ್ಯ ನರಾಧಮಾಃ ॥೧೨೬॥
ಅನಾಹತಾ ನಿವರ್ತನ್ತೇ ನಾಯಕೇ ಚಾಪ್ಯನೀಪ್ಸತಿ।
ತೇ ದುಷ್ಕೃತಂ ಪ್ರಪದ್ಯನ್ತೇ ನಾಯಕಸ್ಯಾಖಿಲಂ ನರಾಃ ॥೧೨೭॥
ಯಚ್ಚಾಸ್ತಿ ಸುಕೃತಂ ತೇಷಾಂ ಯುಜ್ಯತೇ ತೇನ ನಾಯಕಃ ॥೧೨೮॥

ಘೋರವಾದ ಯುದ್ಧದಲ್ಲಿ ಶೂರರು ಪರಸ್ಪರವಾಗಿ ಕೊಂದು-ಕೊಲ್ಲಲ್ಪಡುತ್ತಿರುವಾಗ ಯಾವ ನರಾಧಮರಾದ ಯೋಧರು ಸ್ವಲ್ಪವಾದರೂ ಗಾಯಗೊಳ್ಳದೇ ಸೇನಾಪತಿಯ ಇಚ್ಛೆಗೆ ವಿರುದ್ಧವಾಗಿ ಬೆನ್ನು ತಿರುಗಿಸಿಕೊಂಡು ರಣರಂಗದಿಂದ ಓಡಿಹೋಗುವರೋ–ಅವರು ಸೇನಾಪತಿಯ ಸಮಸ್ತಪಾಪ ಗಳನ್ನೂ ಪಡೆದುಕೊಳ್ಳುತ್ತಾರೆ. ಹಾಗೆ ಓಡಿಹೋಗುವ ಯೋಧರಲ್ಲಿ ಪುಣ್ಯಫಲವೇನಾದರೂ ಇದ್ದರೆ ಅದು ಸೇನಾನಾಯಕನಿಗೆ ಸೇರುತ್ತದೆ.

ಅಹಿಂಸಾ ಪರಮೋಧರ್ಮ ಇತಿ ಯೇಽಪಿ ನರಾ ವಿದುಃ।
ಸಂಗ್ರಾಮೇಷು ನ ಯುಧ್ಯನ್ತೇ ಭೃತ್ಯಾಶ್ಚೈವಾನುರೂಪತಃ ॥೧೨೯॥
ನರಕಂ ಯಾನ್ತಿ ತೇ ಘೋರಂ ಭರ್ತೃಪಿಣ್ಡಾಪಹಾರಿಣಃ ॥೧೩೦॥

ಅಹಿಂಸೆಯೇ ಪರಮಧರ್ಮ–ಎಂದು ತಿಳಿದಿರುವ ಯೋಧರೂ ಕೂಡ ತಮ್ಮ ಭರಣ-ಪೋಷಣೆಗಳಿಗೆ ಅನುರೂಪವಾಗಿ ಯುದ್ಧಗಳಲ್ಲಿ ಸ್ವಾಮಿಯ ಪರವಾಗಿ ಯುದ್ಧಮಾಡದಿದ್ದರೆ–ಸ್ವಾಮಿಯ ಅನ್ನವನ್ನು ಅಪಹರಿಸುವವರಾಗಿ ಅಂತಹವರು ಘೋರವಾದ ನರಕದಲ್ಲಿ ಬೀಳುತ್ತಾರೆ.

ಯಸ್ತು ಪ್ರಾಣಾನ್ಪರಿತ್ಯಜ್ಯ ಪ್ರವಿಶೇದುದ್ಯತಾಯುಧಃ।
ಸಂಗ್ರಾಮಮಗ್ನಿಪ್ರತಿಮಂ ಪತಂಗ ಇವ ನಿರ್ಭಯಃ ॥೧೩೧॥
ಸ್ವರ್ಗಮಾವಿಶತೇ ಜ್ಞಾತ್ವಾ ಯೋಧಸ್ಯ ಗತಿನಿಶ್ಚಯಮ್ ॥೧೩೨॥

ಯಾವನು ತನ್ನ ಪ್ರಾಣಗಳ ಮೇಲಿನ ಹಂಗನ್ನೂ ತೊರೆದು ಆಯುಧ ವನ್ನು ಹಿಡಿದು ಪತಂಗದ ಹುಳುವಿನಂತೆ ನಿರ್ಭಯನಾಗಿ ಅಗ್ನಿಸದೃಶವಾದ ಯುದ್ಧದಲ್ಲಿ ಪ್ರವೇಶಿಸುವನೋ ಮತ್ತು ಯೋಧರಿಗೆ ಲಭಿಸುವ ಉತ್ತಮ ವಾದ ಗತಿಯನ್ನು ತಿಳಿದು ಉತ್ಸಾಹಪೂರ್ವಕವಾಗಿ ಯುದ್ಧಮಾಡುವನೋ–

ಅಂತಹ ಯೋಧನು ಯುದ್ಧದಲ್ಲಿ ಮಡಿದರೂ ವೀರಸ್ವರ್ಗಕ್ಕೆ ಹೋಗುತ್ತಾನೆ.

ಯಸ್ತು ಸ್ವಂ ನಾಯಕಂ ರಕ್ಷೇದತಿಘೋರೇ ರಣಾಜ್ಗಣೇ।
ತಾಪಯನ್ನರಿಸೈನ್ಯಾನಿ ಸಿಂಹೋ ಮೃಗಗಣಾನಿವ ॥೧೩೩॥

ಆದಿತ್ಯ ಇವ ಮಧ್ಯಾಹ್ನೇ ದುರ್ನಿರೀಕ್ಷ್ಯೋ ರಣಾಜಿರೇ।
ನಿರ್ದಯೋ ಯಸ್ತು ಸಂಗ್ರಾಮೇ ಪ್ರಹರನ್ನುದ್ಯತಾಯುಧಃ।
ಯಜತೇ ಸ ತು ಪೂತಾತ್ಮಾ ಸಂಗ್ರಾಮೇಣ ಮಹಾಕ್ರತುಮ್ ॥೧೩೪॥

ಯಾವನು ರಣರಂಗದಲ್ಲಿ–ಮೃಗಗಳ ಸಮೂಹಕ್ಕೆ ತಾಪವನ್ನುಂಟು ಮಾಡುವ ಸಿಂಹದಂತೆ–ಶತ್ರುಸೈನಿಕರಿಗೆ ತಾಪವನ್ನುಂಟುಮಾಡುವನೋ ಮಧ್ಯಾಹ್ನಕಾಲದ ಸೂರ್ಯನಂತೆ ಶತ್ರುಗಳಿಂದ ನೋಡಲು ಅಸಾಧ್ಯ ನಾಗಿರುವನೋ, ಆಯುಧವನ್ನೆತ್ತಿಕೊಂಡು ನಿರ್ದಯನಾಗಿ ಶತ್ರುಗಳನ್ನು ಪ್ರಹರಿಸುವನೋ–ಅಂತಹ ಪೂತಾತ್ಮನಾದ ಯೋಧನು ಯುದ್ಧದ ಮೂಲಕ ಮಹಾಯಾಗವನ್ನೇ ಅನುಷ್ಠಾನಮಾಡಿದವನಾಗುತ್ತಾನೆ.

ವರ್ಮಕೃಷ್ಣಾಜಿನಂ ತಸ್ಯ ದನ್ತಕಾಷ್ಠಂ ಧನುಃಸ್ಮೃತಮ್।
ರಥೋವೇದಿರ್ಧ್ವಜೋ ಯೂಪಃ ಕುಶಾಶ್ಚ ರಥರಶ್ಮಯಃ ॥೧೩೫॥

ಮಾನೋ ದರ್ಪಸ್ತ್ವಹಂಕಾರಸ್ತ್ರಯಸ್ತ್ರೇತಾಗ್ನಯಃ ಸ್ಮೃತಾಃ।
ಪ್ರತೋದಶ್ಚ ಸ್ರುವಸ್ತಸ್ಯ ಉಪಾಧ್ಯಾಯೋ ಹಿ ಸಾರಥಿಃ ॥೧೩೬॥

ಸ್ರುಗ್ಭಾಣ್ಡಂ ಚಾಪಿ ಯತ್ಕಿಂಚಿದ್ಯಜ್ಞೋಪಕರಣಾನಿ ಚ।
ಆಯುಧಾನ್ಯಸ್ಯ ತತ್ಸರ್ವಂ ಸಮಿಧಃ ಸಾಯಕಾಃ ಸ್ಮೃತಾಃ ॥೧೩೭॥

ಯುದ್ಧದ ಮೂಲಕ ಯಾಗಮಾಡುವ ಯೋಧನಿಗೆ ಕವಚವೇ ಕೃಷ್ಣಾಜಿನ; ಧನುಸ್ಸೇ ದಂತಕಾಷ್ಠ; ರಥವೇ ವೇದಿ; ರಥದ ಧ್ವಜವೇ ಯೂಪ; ರಥದ ಕಡಿವಾಣಗಳೇ ದರ್ಭೆಗಳು; ಮಾನ-ದರ್ಪ ಮತ್ತು ಅಹಂಕಾರಗಳೇ ಮೂರು ಅಗ್ನಿಗಳು; ಚಾವಟಿಯೇ ಸ್ರುವ; ಸಾರಥಿಯೇ ಉಪಾಧ್ಯಾಯ; ಸಮಸ್ತವಾದ ಆಯುಧಗಳೇ ಸ್ರುಕ್-ಭಾಂಡ ಇವೇ ಮುಂತಾದ ಯಜ್ಞದ ಸಾಮಗ್ರಿಗಳು; ಬಾಣಗಳೇ ಸಮಿತ್ತುಗಳು.

ಸ್ವೇದಸ್ರವಶ್ಚ ಗಾತ್ರೇಭ್ಯಃ ಕ್ಷೌದ್ರಂ ತಸ್ಯ ಯಶಸ್ವಿನಃ।
ಪುರೋಡಾಶಾ ನೃಶೀರ್ಷಾಣಿ ರುಧಿರಂ ಚಾಹುತಿಃ ಸ್ಮೃತಾ ॥೧೩೮॥
ತೂಣಶ್ಚೈವ ಚರುರ್ಜ್ಞೇಯಾ ವಸೋರ್ಧಾರಾ ವಸಾಃ ಸ್ಮೃತಾಃ।
ಕ್ರವ್ಯಾಧಾ ಭೂತಸಂಘಾಶ್ಚ ತಸ್ಮಿನ್ಯಜ್ಞೇ ದ್ವಿಜಾತಯಃ।
ತೇಷಾಂ ಭಕ್ತಾನ್ನಪಾನಾನಿ ಹತಾ ನೃಗಜವಾಜಿನಃ ॥೧೩೯॥

ಯಶೋವಂತನಾದ ವೀರಯೋಧನ ಅವಯವಗಳಿಂದ ಹೊರ ಸೂಸುವ ಬೆವರೇ ಯಜ್ಞಸಂಬಂಧವಾದ ಮಧುವಾಗಿರುತ್ತದೆ. ಮನುಷ್ಯರ ಶಿರಸ್ಸುಗಳೇ ಪುರೋಡಾಶಗಳು; ರಕ್ತವೇ ಘೃತಾಹುತಿಗಳು; ಬತ್ತಳಿಕೆಗಳೇ ಚರುಗಳು; ಕೊಬ್ಬೇ ವಸೋರ್ಧಾರಾಹುತಿಗಳು; ಮಾಂಸಭಕ್ಷಕರಾದ ಭೂತಗಳೇ ಯಜ್ಞದ ಋತ್ವಿಜರು; ಸತ್ತುಹೋಗಿರುವ ಕಾಲಾಳುಗಳು, ಆನೆಗಳು ಮತ್ತು ಕುದುರೆಗಳೇ ಭೋಜನ ಮತ್ತು ಅನ್ನ-ಪಾನಗಳು.

ನಿಹತಾನಾಂ ತು ಯೋಧಾನಾಂ ವಸ್ತ್ರಾಭರಣಭೂಷಣಮ್।
ಹಿರಣ್ಯಂ ಚ ಸುವರ್ಣಂ ಚ ಯದ್ವೈ ಯಜ್ಞಸ್ಯ ದಕ್ಷಿಣಾ ॥೧೪೦॥

ಹತರಾಗಿರುವ ಯೋಧರ ವಸ್ತ್ರಾಭರಣ-ಭೂಷಣಗಳೇ ಯಜ್ಞದಕ್ಷಿಣೆಗಳಾದ ಹಿರಣ್ಯ-ಸುವರ್ಣಗಳಾಗಿವೆ.

ಯಸ್ತತ್ರ ಹನ್ಯತೇ ದೇವಿ ಗಜಸ್ಕನ್ಧಗತೋ ನರಃ।
ಬ್ರಹ್ಮಲೋಕಮವಾಪ್ನೋತಿ ರಣೇಷ್ವಭಿಮುಖೋ ಹತಃ ॥೧೪೧॥

ಆನೆಯ ಮೇಲೆ ಕುಳಿತು ಶತ್ರುವಿಗೆ ಅಭಿಮುಖವಾಗಿ ಯುದ್ಧಮಾಡುತ್ತಾ ಪ್ರಾಣವನ್ನು ನೀಗುವವನು ಬ್ರಹ್ಮಲೋಕಕ್ಕೆ ಹೋಗುತ್ತಾನೆ.

ರಥಮಧ್ಯಗತೋ ವಾಪಿ ಹಯಪೃಷ್ಠಗತೋಽಪಿ ವಾ।
ಹನ್ಯತೇ ಯಸ್ತು ಸಂಗ್ರಾಮೇ ಶಕ್ರಲೋಕೇ ಮಹೀಯತೇ ॥೧೪೨॥

ರಥದ ಮಧ್ಯದಲ್ಲಿ ಕುಳಿತು ಅಥವಾ ಕುದುರೆಯ ಮೇಲೆ ಕುಳಿತು ಯುದ್ಧಮಾಡಿ ಹತನಾದವನು ಇಂದ್ರಲೋಕದಲ್ಲಿ ಗೌರವಿಸಲ್ಪಡುತ್ತಾನೆ.

ಸ್ವರ್ಗೇ ಹತಾಃ ಪ್ರಪೂಜ್ಯನ್ತೇ ಹನ್ತಾ ತ್ವತ್ರೈವ ಪೂಜ್ಯತೇ ।
ದ್ವಾವೇತೌ ಸುಖಮೇಧೇತೇ ಹನ್ತಾ ಯಶ್ಚೈವ ಹನ್ಯತೇ ॥೧೪೩॥

ಯುದ್ಧದಲ್ಲಿ ಹತರಾದವರು ಸ್ವರ್ಗದಲ್ಲಿ ಪೂಜಿಸಲ್ಪಡುತ್ತಾರೆ. ಅವನನ್ನು ಕೊಂದವನು ಇಲ್ಲಿಯೇ ಗೌರವಿಸಲ್ಪಡುತ್ತಾನೆ. ಆದುದರಿಂದ ಯುದ್ಧದಲ್ಲಿ ಶತ್ರುಗಳನ್ನು ಕೊಲ್ಲುವವನು ಮತ್ತು ಕೊಲ್ಲಲ್ಪಡುವವನು–ಇಬ್ಬರೂ ಐಹಿಕ-ಆಮುಷ್ಮಿಕಸುಖಗಳನ್ನು ಅನುಭವಿಸುತ್ತಾರೆ.

ತಸ್ಮಾತ್ಸಂಗ್ರಾಮಮಾಸಾದ್ಯ ಪ್ರಹರ್ತವ್ಯಮಭೀತವತ್।
ನಿರ್ಭಯೋ ಯಸ್ತು ಸಂಗ್ರಾಮೇ ಪ್ರಹರೇದುದ್ಯತಾಯುಧಃ ॥೧೪೪॥

ಯಥಾ ನದೀಸಹಸ್ರಾಣಿ ಪ್ರವಿಷ್ಟಾನಿ ಮಹೋದಧಿಮ್।
ತಥಾ ಸರ್ವೇ ನ ಸಂದೇಹೋ ಧರ್ಮಾ ಧರ್ಮಭೃತಾಂ ವರಮ್ ॥

ಆದುದರಿಂದ ರಣರಂಗವನ್ನು ಪ್ರವೇಶಿಸಿ ವೀರಯೋಧನು ನಿರ್ಭಯವಾಗಿ ಶತ್ರುವನ್ನು ಸಂಹರಿಸಬೇಕು. ಹೀಗೆ ಯಾವ ಯೋಧನು ಆಯುಧವನ್ನೆತ್ತಿಕೊಂಡು ಶತ್ರುವನ್ನು ಸಂಹರಿಸುವನೋ ಧರ್ಮಾತ್ಮರಲ್ಲಿ ಶ್ರೇಷ್ಠನಾದ ಅಂತಹ ಯೋಧನನ್ನು–ಸಾವಿರಾರು ನದಿಗಳು ಸಮುದ್ರವನ್ನು ಪ್ರವೇಶಿಸುವಂತೆ–ಸಮಸ್ತಧರ್ಮಗಳೂ ಬಂದು ಸೇರುತ್ತವೆ. ಇದರಲ್ಲಿ ಸಂಶಯವೇ ಇಲ್ಲ.

ಧರ್ಮ ಏವ ಹತೋ ಹನ್ತಿ ಧರ್ಮೋ ರಕ್ಷತಿ ರಕ್ಷಿತಃ।
ತಸ್ಮಾದ್ಧರ್ಮೋ ನ ಹನ್ತವ್ಯಃ ಪಾರ್ಥಿವೇನ ವಿಶೇಷತಃ ॥೧೪೬॥

ಹಿಂಸೆಗೊಳಗಾದ ಧರ್ಮವು ಧರ್ಮಹಿಂಸಕನನ್ನು ವಿನಾಶಗೊಳಿಸುತ್ತದೆ. ರಕ್ಷಿಸಲ್ಪಟ್ಟ ಧರ್ಮವು ಧರ್ಮರಕ್ಷಕನನ್ನು ರಕ್ಷಿಸುತ್ತದೆ. ಆದುದರಿಂದ ವಿಶೇಷವಾಗಿ ರಾಜನಾದವನು ಧರ್ಮವನ್ನು ವಿನಾಶಗೊಳಿಸಬಾರದು.

ಪ್ರಜಾಃ ಪಾಲಯತೇ ಯತ್ರ ಧರ್ಮೇಣ ವಸುಧಾಧಿಪಃ।
ಷಟ್ಕರ್ಮನಿರತಾ ವಿಪ್ರಾಃ ಪೂಜ್ಯನ್ತೇ ಪಿತೃದೈವತೈಃ ॥೧೪೭॥

ನೈವ ತಸ್ಮಿನ್ನನಾವೃಷ್ಟಿರ್ನ ರೋಗಾ ನಾಪ್ಯುಪದ್ರವಾಃ।
ಧರ್ಮಶೀಲಾಃ ಪ್ರಜಾಃ ಸರ್ವಾಃ ಸ್ವಧರ್ಮನಿರತೇ ನೃಪೇ ॥೧೪೮॥

ಯಾವ ರಾಜ್ಯದಲ್ಲಿ ರಾಜನು ಧರ್ಮದಿಂದ ಪ್ರಜೆಗಳನ್ನು ಪರಿಪಾಲಿಸುವನೋ, ಪಿತೃಗಳೊಡನೆಯೂ ದೇವತೆಗಳೊಡನೆಯೂ ಷಟ್ಕರ್ಮನಿರತ

ರಾದ ಬ್ರಾಹ್ಮಣರು ಯಾವ ರಾಜ್ಯದಲ್ಲಿ ಪೂಜಿಸಲ್ಪಡುವರೋ–ಆ ದೇಶದಲ್ಲಿ ಅತಿವೃಷ್ಟಿಯಾಗಲೀ, ಅನಾವೃಷ್ಟಿಯಾಗಲೀ ಇರುವುದಿಲ್ಲ. ರೋಗಗಳಾಗಲೀ, ಉಪದ್ರವಗಳಾಗಲೀ ಇರುವುದಿಲ್ಲ. ರಾಜನು ಸ್ವಧರ್ಮನಿರತನಾಗಿದ್ದರೆ ಎಲ್ಲ ಪ್ರಜೆಗಳೂ ಧರ್ಮಶೀಲರಾಗಿಯೇ ಇರುತ್ತಾರೆ.

ಏಷ್ಟವ್ಯಃ ಸತತಂ ದೇವಿ ಯುಕ್ತಾಚಾರೋ ನರಾಧಿಪಃ।
ಛಿದ್ರಜ್ಞಶ್ಚೈವ ಶತ್ರೂಣಾಮಪ್ರಮತ್ತಃ ಪ್ರತಾಪವಾನ್ ॥೧೪೯॥

ತಮ್ಮ ರಾಜನು ಸದಾಚಾರಿಯೂ ಧರ್ಮನಿಷ್ಠನೂ ಆಗಿರಬೇಕೆಂದು ದೇಶದ ಪ್ರಜೆಗಳು ಯಾವಾಗಲೂ ಆಶಿಸುತ್ತಿರಬೇಕು. ಅಂತಹ ಪ್ರತಾಪವಂತನಾದ ರಾಜನು ಜಾಗರೂಕನಾಗಿದ್ದುಕೊಂಡು ಶತ್ರುಗಳಲ್ಲಿ ಛಿದ್ರಾನ್ವೇಷಣೆಯನ್ನು ಮಾಡುತ್ತಲೇ ಇರಬೇಕು.

ಕ್ಷುದ್ರಾಃ ಪೃಥಿವ್ಯಾಂ ಬಹವೋ ರಾಜ್ಞಾಂ ಬಹುವಿನಾಶಕಾಃ।
ತಸ್ಮಾತ್ಪ್ರಮಾದಂ ಸುಶ್ರೋಣೀ ನ ಕುರ್ಯಾತ್ಪಣ್ಡಿತೋ ನೃಪಃ ॥೧೫೦॥

ರಾಜರನ್ನು ಸಂಪೂರ್ಣವಾಗಿ ವಿನಾಶಗೊಳಿಸಬೇಕೆನ್ನುವ ಅನೇಕ ಕ್ಷುದ್ರಜನರು ಈ ಭೂಮಿಯಲ್ಲಿದ್ದಾರೆ. ಆದುದರಿಂದ ವಿದ್ವಾಂಸನಾದ ರಾಜನು ಆತ್ಮರಕ್ಷಣೆಯ ವಿಷಯದಲ್ಲಿ ಯಾವಾಗಲೂ ಅಪ್ರಮತ್ತನಾಗಿರಬೇಕು.

ತೇಷು ಮಿತ್ರೇಷು ತ್ಯಕ್ತೇಷು ತಥಾ ಮರ್ತ್ಯೇಷು ಹಸ್ತಿಷು।
ವಿಸ್ರಮ್ಭೋ ನೋಪಗನ್ತವ್ಯಃ ಸ್ನಾನಪಾನೇಷು ನಿತ್ಯಶಃ ॥೧೫೧॥

ಹಿಂದೆ ಪರಿತ್ಯಜಿಸಿಹೋದ ಸ್ನೇಹಿತರ ವಿಷಯದಲ್ಲಿ, ಕುಲ-ಗೋತ್ರಗಳು ತಿಳಿಯದ ಮನುಷ್ಯರ ವಿಷಯದಲ್ಲಿ ಮತ್ತು ಆನೆಗಳ ವಿಷಯದಲ್ಲಿ ಯಾವಾಗಲೂ ವಿಶ್ವಾಸವನ್ನಿಡಬಾರದು. ಹಾಗೆಯೇ ಸ್ನಾನ-ಪಾನಾದಿಗಳ ವಿಷಯದಲ್ಲಿಯೂ ನಿತ್ಯವೂ ಜಾಗರೂಕನಾಗಿರಬೇಕು.

ರಾಜ್ಞೋ ವಲ್ಲಭತಾಮೇತಿ ಕುಲಂ ಭಾವಯತೇ ಸ್ವಕಮ್।
ಯಸ್ತು ರಾಷ್ಟ್ರಹಿತಾರ್ಥಾಯ ಗೋಬ್ರಾಹ್ಮಣಕೃತೇ ಯಥಾ।
ಬನ್ದಿಗ್ರಹಾಯ ಮಿತ್ರಾರ್ಥೇ ಪ್ರಾಣಾಂಸ್ತ್ಯಜತಿ ದುಸ್ತ್ಯಜಾನ್ ॥೧೫೨॥

ಯಾವನು ರಾಷ್ಟ್ರದ ಹಿತಕ್ಕಾಗಿ, ಗೋ-ಬ್ರಾಹ್ಮಣರ ರಕ್ಷಣೆಗಾಗಿ

ಬಂಧನದಲ್ಲಿರುವ ನಿರಪರಾಧಿಯನ್ನು ಬಿಡಿಸುವ ಸಲುವಾಗಿ ಮತ್ತು ಮಿತ್ರನಸಲುವಾಗಿ–ಅತಿಕಷ್ಟದಿಂದ ಬಿಡಲು ಸಾಧ್ಯವಾಗುವ ಪ್ರಾಣಗಳನ್ನು ನಿರಾತಂಕವಾಗಿ ಪರಿತ್ಯಜಿಸುವನೋ–ಅಂತಹವನು ರಾಜನಿಗೆ ಪ್ರಿಯನಾಗುತ್ತಾನೆ. (ಅಂತಹವನನ್ನು ಮರಣಾನಂತರವೂ ರಾಜನು ಪ್ರಶಂಸೆಮಾಡುತ್ತಾನೆ.) ಸಾಹಸಪೂರ್ಣವಾದ ಅಂತಹ ಸತ್ಕಾರ್ಯದಿಂದ ಅವನು ತಾನು ಹುಟ್ಟಿದ ಕುಲವನ್ನೂ ಉದ್ಧರಿಸುತ್ತಾನೆ.

ಸರ್ವಕಾಮದುಘಾಂ ಧೇನುಂ ಧರಣೀಂ ಲೋಕಧಾರಿಣೀಮ್।
ಸಮುದ್ರಾನ್ತಾಂ ವರಾರೋಹೇ ಸಶೈಲವನಕಾನನಾಮ್ ॥೧೫೩॥
ದದ್ಯಾದ್ದೇವಿ ದ್ವಿಜಾತಿಭ್ಯೋ ವಸುಪೂರ್ಣಾಂ ವಸುಂಧರಾಮ್।
ನ ತತ್ಸಮಂ ವರಾರೋಹೇ ಪ್ರಾಣತ್ಯಾಗೀ ವಿಶಿಷ್ಯತೇ ॥೧೫೪॥

ಸಮಸ್ತಕಾಮನೆಗಳನ್ನೂ ಪೂರೈಸುವ ಧೇನುವನ್ನೂ, ಲೋಕವನ್ನೇ ಧರಿಸಿರುವ, ಸಮುದ್ರಾಂತವಾದ, ಶೈಲ-ವನ-ಕಾನನಗಳಿಂದ ಕೂಡಿರುವ, ಐಶ್ವರ್ಯದಿಂದ ಸಂಪನ್ನವಾದ ಭೂಮಿಯನ್ನೂ ಬ್ರಾಹ್ಮಣನಿಗೆ ದಾನಕೊಟ್ಟರೂ–ಆ ದಾನವು ಗೋ-ಬ್ರಾಹ್ಮಣರ ಸಲುವಾಗಿ, ರಾಷ್ಟ್ರಕ್ಕಾಗಿ ಪ್ರಾಣತ್ಯಾಗಮಾಡುವವನ ತ್ಯಾಗಕ್ಕೆ ಸಮಾನವಾಗುವುದಿಲ್ಲ. ಭೂದಾನ-ಗೋದಾನಗಳ ದಾನಿಗಳಿಗಿಂತಲೂ ಪ್ರಾಣತ್ಯಾಗಿಯೇ ವಿಶಿಷ್ಟನಾಗುತ್ತಾನೆ.

ಸಹಸ್ರಮಪಿ ಯಜ್ಞಾನಾಂ ಯಜತೇ ಚ ಧನರ್ಧಿಮಾನ್।
ಯಜ್ಞೈಸ್ತಸ್ಯ ಕಿಮಾಶ್ಚರ್ಯಂ ಪ್ರಾಣತ್ಯಾಗಃ ಸುದುಷ್ಕರಃ ॥೧೫೫॥

ಅಧಿಕವಾದ ಹಣವಿರುವವನು ಸಾವಿರಾರು ಯಜ್ಞಗಳನ್ನಾದರೂ ಮಾಡಬಲ್ಲನು. ಅದರಲ್ಲಿ ಆಶ್ಚರ್ಯವೇನಿದೆ? ಆದರೆ ಇತರರ ಸಲುವಾಗಿ ಪ್ರಾಣಗಳನ್ನು ಪರಿತ್ಯಾಗಮಾಡುವುದು ಸುದುಷ್ಕರವೇ ಸರಿ.

ತಸ್ಮಾತ್ಸರ್ವೇಷು ಯಜ್ಞೇಷು ಪ್ರಾಣಯಜ್ಞೋ ವಿಶಿಷ್ಯತೇ।
ಏವಂ ಸಂಗ್ರಾಮಯಜ್ಞಾಸ್ತೇ ಯಥಾರ್ಥಂ ಸಮುದಾಹೃತಾಃ ॥೧೫೬॥

ಆದುದರಿಂದ ಎಲ್ಲ ಯಜ್ಞಗಳಿಗಿಂತಲೂ ಪ್ರಾಣಯಜ್ಞವು (ಇತರರ ಹಿತಕ್ಕಾಗಿ ಪ್ರಾಣತ್ಯಾಗಮಾಡುವುದು) ವಿಶಿಷ್ಟವಾದುದು. ಹೀಗೆ ನಾನು ನಿನಗೆ ಸಂಗ್ರಾಮರೂಪವಾದ ಯಜ್ಞಗಳನ್ನು ಯಥಾವತ್ತಾಗಿ ಹೇಳಿರುತ್ತೇನೆ.

ರಾಜಧರ್ಮದ ವರ್ಣನೆ

ಪರಮೇಶ್ವರನು ಹೇಳುತ್ತಾನೆ:

ಸಮ್ಪ್ರಹಾಸಶ್ಚ ಭೃತ್ಯೇಷು ನ ಕರ್ತವ್ಯೋ ನರಾಧಿಪೈಃ।
ಲಘುತ್ವಂ ಚೈವ ಪ್ರಾಪ್ನೋತಿ ಆಜ್ಞಾ ಚಾಸ್ಯ ನಿವರ್ತತೇ ॥೧೫೭॥

ರಾಜನು ತನ್ನ ಸೇವಕರೊಡನೆ ಹಾಸ್ಯ-ಪರಿಹಾಸ್ಯಗಳಲ್ಲಿ ತೊಡಗಬಾರದು. ಹಾಗೆ ತೊಡಗಿದರೆ ರಾಜನು ಅಲ್ಪತನವನ್ನು (ಸಣ್ಣತನವನ್ನು) ಹೊಂದುತ್ತಾನೆ. ಅವನ ಆಜ್ಞೆಯನ್ನೂ ಸೇವಕರು ಪರಿಪಾಲಿಸುವುದಿಲ್ಲ.

ಭೃತ್ಯಾನಾಂ ಸಮ್ಪ್ರಹಾಸೇನ ಪಾರ್ಥಿವಃ ಪರಿಭೂಯತೇ।
ಅಯಾಚ್ಯಾನಿ ಚ ಯಾಚನ್ತಿ ಅವಕ್ತವ್ಯಂ ಬ್ರುವನ್ತಿ ಚ ॥೧೫೮॥

ಸೇವಕರೊಡನೆ ಹಾಸ್ಯ-ಪರಿಹಾಸ್ಯಗಳನ್ನು ಮಾಡುವುದರಿಂದ ರಾಜನು ತಿರಸ್ಕೃತನಾಗುತ್ತಾನೆ. ಸೇವಕರು ವಿಶೇಷವಾದ ಸಲಿಗೆಯಿಂದಾಗಿ ಕೇಳಬಾರದುದನ್ನು ಕೇಳುತ್ತಾರೆ. ಹೇಳಬಾರದುದನ್ನು ಹೇಳುತ್ತಾರೆ.

ಪೂರ್ವಮಪ್ಯುಚಿತೈರ್ಲಾಭೈಃ ಪರಿತೋಷಂ ನ ಯಾನ್ತಿ ತೇ।
ತಸ್ಮಾದ್ಭೃತ್ಯೇಷು ನೃಪತಿಃ ಸಮ್ಪ್ರಹಾಸಂ ವಿವರ್ಜಯೇತ್ ॥೧೫೯॥

ಹಿಂದಿನಂತೆಯೇ ಅವರಿಗೆ ಉಚಿತವಾದ ಧನ-ಧಾನ್ಯಾದಿಗಳು ಲಭಿಸುತ್ತಿದ್ದರೂ ಅದರಿಂದ ಅವರು ತೃಪ್ತರಾಗುವುದಿಲ್ಲ. ಆದುದರಿಂದ ರಾಜನು ಯಾವಾಗಲೂ ಸೇವಕರೊಡನೆ ಹಾಸ್ಯ-ಪರಿಹಾಸಗಳಲ್ಲಿ ತೊಡಗಬಾರದು.

ನ ವಿಶ್ವಸೇದವಿಶ್ವಸ್ತೇ ವಿಶ್ವಸ್ತೇ ನಾತಿ ವಿಶ್ವಸೇತ್।
ಸಗೋತ್ರೇಷು ವಿಶೇಷೇಣ ಸರ್ವೋಪಾಯೈರ್ನ ವಿಶ್ವಸೇತ್ ॥೧೬೦॥

ರಾಜನು ನಂಬಿಕೆಗೆ ಅನರ್ಹನಾದವರಲ್ಲಿ ವಿಶ್ವಾಸವನ್ನಿಡಬಾರದು. ನಂಬಿಕೆಗೆ ಅರ್ಹನಾದವನಲ್ಲಿಯೂ ಸಂಪೂರ್ಣವಾಗಿ ವಿಶ್ವಾಸವನ್ನಿಡಬಾರದು. ಅದರಲ್ಲಿಯೂ ವಿಶೇಷವಾಗಿ ಸಮಾನಗೋತ್ರದವರಲ್ಲಿ (ಜ್ಞಾತಿಗಳಲ್ಲಿ) ವಿಶ್ವಾಸವನ್ನಿಡಲೇಬಾರದು. ಸಮಸ್ತವಾದ ಉಪಾಯಗಳಿಂದಲೂ ಅವರನ್ನು ದೂರವಾಗಿಯೇ ಇಟ್ಟಿರಬೇಕು.

ವಿಶ್ವಾಸಾದ್ಭಯಮುತ್ಪನ್ನಂ ಹನ್ಯಾದ್ವೃಕ್ಷಮಿವಾಶನಿಃ।
ಪ್ರಮಾದಾದ್ಧನ್ಯತೇ ರಾಜಾ ಲೋಭೇನ ಚ ವಶೀಕೃತಃ।
ತಸ್ಮಾತ್ಪ್ರಮಾದಂ ಲೋಭಂ ಚ ನ ಚ ಕುರ್ಯಾನ್ನ ವಿಶ್ವಸೇತ್ ॥೧೬೧॥

ಸಿಡಿಲು ವೃಕ್ಷವನ್ನು ವಿನಾಶಗೊಳಿಸುವಂತೆ–ವಿಶ್ವಾಸದಿಂದ (ನಂಬಿದವನಿಂದ) ಹುಟ್ಟುವ ಭಯವು ರಾಜನನ್ನೇ ವಿನಾಶಗೊಳಿಸುತ್ತದೆ. ಎಚ್ಚರದಪ್ಪಿದ ರಾಜನೂ ಲೋಭವಶನಾದ ರಾಜನೂ ವಿನಾಶಹೊಂದುತ್ತಾರೆ. ಆದುದರಿಂದ ರಾಜನು ಪ್ರಮತ್ತನಾಗಿರಬಾರದು. ಲೋಭಕ್ಕೆ ವಶನಾಗಬಾರದು ಮತ್ತು ಯಾರ ಮೇಲೂ ಅತಿಯಾದ ವಿಶ್ವಾಸವನ್ನಿಡಬಾರದು.

ಭಯಾರ್ತಾನಾಂ ಭಯಾತ್ತ್ರಾತಾ ದೀನಾನುಗ್ರಹಕಾರಣಾತ್।
ಕಾರ್ಯಾಕಾರ್ಯವಿಶೇಷಜ್ಞೋ ನಿತ್ಯಂ ರಾಷ್ಟ್ರಹಿತೇ ರತಃ ॥೧೬೭॥

ರಾಜನು ಯಾವಾಗಲೂ ಭಯಪೀಡಿತರಾದವರನ್ನು ಭಯದಿಂದ ರಕ್ಷಿಸಬೇಕು. (ಅವರ ಭಯವನ್ನು ಹೋಗಲಾಡಿಸಬೇಕು.) ದೀನರನ್ನು ಅನುಗ್ರಹಬುದ್ಧಿಯಿಂದ ಕಾಣಬೇಕು. ಕರ್ತವ್ಯಾಕರ್ತವ್ಯಗಳನ್ನು ವಿಶೇಷ ರೀತಿಯಿಂದ ತಿಳಿದಿರಬೇಕು. ನಿತ್ಯವೂ ರಾಷ್ಟ್ರದ ಹಿತದಲ್ಲಿಯೇ ಆಸಕ್ತನಾಗಿರಬೇಕು.

ಸತ್ಯಸಂಧಃ ಸ್ಥಿತೋ ರಾಜ್ಯೇ ಪ್ರಜಾಪಾಲನತತ್ಪರಃ।
ಅಲುಬ್ಧೋ ನ್ಯಾಯವಾದೀ ಚ ಷಡ್ಭಾಗಮುಪಜೀವತಿ ॥೧೬೮॥

ರಾಜನಾದವನು ಯಾವಾಗಲೂ ತನ್ನ ಪ್ರತಿಜ್ಞೆಯನ್ನು ನಿಜವನ್ನಾಗಿ ಮಾಡಬೇಕು. ರಾಜ್ಯದಲ್ಲಿಯೇ ಇದ್ದುಕೊಂಡು ಯಾವಾಗಲೂ ಪ್ರಜಾಪಾಲನೆಯಲ್ಲಿಯೇ ನಿರತನಾಗಿರಬೇಕು. ಲೋಭಶೂನ್ಯನೂ ನ್ಯಾಯವಾದಿಯೂ ಆಗಿರಬೇಕು. ಪ್ರಜೆಗಳ ಆದಾಯದಲ್ಲಿ ಆರನೆಯ ಒಂದು ಭಾಗವನ್ನು ತೆಗೆದುಕೊಂಡು ಜೀವನವನ್ನು ನಿರ್ವಹಿಸಬೇಕು.

ಕಾರ್ಯಾಕಾರ್ಯವಿಶೇಷಜ್ಞಃ ಸರ್ವಂ ಧರ್ಮೇಣ ಪಶ್ಯತಿ।
ಸ್ವರಾಷ್ಟ್ರೇಷು ದಯಾಂ ಕುರ್ಯಾದಕಾರ್ಯೇ ನ ಪ್ರವರ್ತತೇ ॥೧೬೯॥

ಕರ್ತವ್ಯಾಕರ್ತವ್ಯಗಳನ್ನು ವಿಶೇಷರೀತಿಯಲ್ಲಿ ತಿಳಿದುಕೊಂಡಿರಬೇಕು. ಎಲ್ಲರನ್ನೂ ಧರ್ಮದೃಷ್ಟಿಯಿಂದಲೇ ನೋಡಬೇಕು. ತನ್ನ ರಾಷ್ಟ್ರದಲ್ಲಿ ವಾಸಮಾಡುವವರ ವಿಷಯದಲ್ಲಿ ಯಾವಾಗಲೂ ದಯಾಪರನಾಗಿರಬೇಕು. ಮಾಡಬಾರದ ಕಾರ್ಯಗಳಲ್ಲಿ ತೊಡಗಬಾರದು.

ಯೇ ಚೈವೈನಂ ಪ್ರಶಂಸನ್ತಿ ಯೇ ಚ ನಿನ್ದನ್ತಿ ಮಾನವಾಃ।
ಶತ್ರುಂ ಚ ಮಿತ್ರವತ್ಪಶ್ಯೇದಪರಾಧವಿವರ್ಜಿತಮ್ ॥೧೬೫॥

ರಾಜನು ತನ್ನನ್ನು ಪ್ರಶಂಸೆಮಾಡುವವರನ್ನೂ, ನಿಂದಿಸುವವರನ್ನೂ, ನಿರಪರಾಧಿಯಾದ ಶತ್ರುವನ್ನೂ ಮಿತ್ರನಂತೆಯೇ ಕಾಣಬೇಕು.

ಅಪರಾಧಾನುರೂಪೇಣ ದುಷ್ಟಂ ದಣ್ಡೇನ ಶಾಸಯೇತ್।
ಧರ್ಮಃ ಪ್ರವರ್ತತೇ ತತ್ರ ಯತ್ರ ದಣ್ಡರುಚಿರ್ನೃಪಃ ॥೧೬೬॥

ಅಪರಾಧಕ್ಕೆ ಅನುಗುಣವಾಗಿ ದುಷ್ಟಮನುಷ್ಯನನ್ನು ದಂಡದ ಮೂಲಕವಾಗಿ ಶಾಸನಮಾಡಬೇಕು. ರಾಜನು ಅಪರಾಧಿಗಳಿಗೆ ನ್ಯಾಯೋಚಿತವಾದ ಶಿಕ್ಷೆಯನ್ನು ಕೊಡುವುದರಲ್ಲಿ ಅಭಿರುಚಿಯುಳ್ಳವನಾಗಿದ್ದರೆ ಅಲ್ಲಿ ಧರ್ಮವು ಪ್ರಚಲಿತವಾಗುತ್ತದೆ.

ನಾಧರ್ಮೋ ವಿದ್ಯತೇ ತತ್ರ ಯತ್ರ ರಾಜಾ ಕ್ಷಮಾನ್ವಿತಃ।
ಅಶಿಷ್ಟಶಾಸನಂ ಧರ್ಮಃ ಶಿಷ್ಟಾನಾಂ ಪರಿಪಾಲನಮ್ ॥೧೬೭॥

ಯಾವ ರಾಜ್ಯದಲ್ಲಿ ರಾಜನು ಕ್ಷಮಾಶೀಲನಾಗಿರುವನೋ ಆ ರಾಜ್ಯದಲ್ಲಿ ಅಧರ್ಮವೇ ಇರುವುದಿಲ್ಲ. ದುಷ್ಟರನ್ನು ಶಿಕ್ಷಿಸುವುದೂ ಮತ್ತು ಶಿಷ್ಟರನ್ನು ಪರಿಪಾಲಿಸುವುದೂ ರಾಜಧರ್ಮವಾಗಿದೆ.

ವಧ್ಯಾಂಶ್ಚ ಘಾತಯೇದ್ಯಸ್ತು ಅವಧ್ಯಾನ್ಪರಿರಕ್ಷತಿ ॥೧೬೮॥

ರಾಜನು ವಧೆಗೆ ಅರ್ಹರಾದವರನ್ನು ವಧಿಸಬೇಕು. ವಧೆಗೆ ಅನರ್ಹರಾದವರನ್ನು ರಕ್ಷಿಸಬೇಕು.

ಅವಧ್ಯಾ ಬ್ರಾಹ್ಮಣಾ ಗಾವೋ ದೂತಾಶ್ಚೈವ ಪಿತಾ ತಥಾ।
ವಿದ್ಯಾಂ ಗ್ರಾಹಯತೇ ಯಶ್ಚ ಯೇ ಚ ಪೂರ್ವೋಪಕಾರಿಣಃ।
ಸ್ತ್ರಿಯಶ್ಚೈವ ನ ಹನ್ತವ್ಯಾ ಯಶ್ಚ ಸರ್ವಾತಿಥಿರ್ನರಃ ॥೧೬೯॥

ಬ್ರಾಹ್ಮಣರು, ಹಸುಗಳು, ದೂತರು, ತಂದೆ, ವಿದ್ಯಾಭ್ಯಾಸಮಾಡಿಸಿದ ಗುರು, ಹಿಂದೆ ಉಪಕಾರಮಾಡಿದವನು, ಸ್ತ್ರೀಯರು ಮತ್ತು ಎಲ್ಲರಿಗೂ ಅತಿಥಿಸತ್ಕಾರವನ್ನು ಮಾಡುವವನು-ಇವರೆಲ್ಲರೂ ಅವಧ್ಯರು.

ಧರಣೀಂ ಗಾಂ ಹಿರಣ್ಯಂ ಚ ಸಿದ್ಧಾನ್ನಂ ಚ ತಿಲಾನ್ಘೃತಮ್।
ದದನ್ನಿತ್ಯಂ ದ್ವಿಜಾತಿಭ್ಯೋ ಮುಚ್ಯತೇ ರಾಜಕಿಲ್ಬಿಷಾತ್ ॥೧೭೦॥

ಭೂಮಿ, ಗೋವು, ಚಿನ್ನ, ಸಿದ್ಧಪಡಿಸಿದ ಅನ್ನ, ಎಳ್ಳು, ತುಪ್ಪ–ಈ ವಸ್ತುಗಳನ್ನು ಪ್ರತಿನಿತ್ಯವೂ ಬ್ರಾಹ್ಮಣರಿಗೆ ದಾನಮಾಡುವ ರಾಜನು ಸಮಸ್ತಪಾಪಗಳಿಂದಲೂ ಮುಕ್ತನಾಗುತ್ತಾನೆ.

ಹೀಗೆ ಯಾವ ರಾಜನು ಯಾವಾಗಲೂ ರಾಷ್ಟ್ರದ ಹಿತದಲ್ಲಿಯೇ ನಿರತನಾಗಿರುವನೋ–ಅಂತಹವನ ರಾಷ್ಟ್ರ, ಧನ, ಧರ್ಮ, ಯಶಸ್ಸು ಮತ್ತು ಕೀರ್ತಿಗಳು ಹೆಚ್ಚುತ್ತಿರುತ್ತವೆ. ಅಂತಹ ರಾಜನು ಪಾಪಗಳಿಂದ ಲಿಪ್ತನಾಗುವುದಿಲ್ಲ ಮತ್ತು ಅಂತಹ ಸದ್ವ್ಯವಹಾರವುಳ್ಳ ರಾಜನಿಗೆ ಯಾವ ಅನರ್ಥಗಳೂ ಉಂಟಾಗುವುದಿಲ್ಲ.

ಷಡ್ಭಾಗಮುಪಯುಞ್ಜ್ಯಃ ಪ್ರಜಾ ರಾಜಾ ನ ರಕ್ಷತಿ।
ಸ್ವಚಕ್ರಪರಚಕ್ರಾಭ್ಯಾಂ ಧರ್ಮ್ಯೈರ್ವಾ ವಿಕ್ರಮೇಣ ವಾ ॥೧೭೨॥
ನಿರುದ್ಯೋಗೋ ನೃಪೋ ಯಶ್ಚ ಪರರಾಷ್ಟ್ರವಿಘಾತನೇ।
ಸ್ವರಾಷ್ಟ್ರಂ ನಿಷ್ಪ್ರತಾಪಸ್ಯ ಪರಚಕ್ರೇಣ ಹನ್ಯತೇ ॥೧೭೩॥

ಪ್ರಜೆಗಳ ಆದಾಯದಲ್ಲಿ ಆರನೆಯ ಒಂದು ಭಾಗವನ್ನು ತೆಗೆದುಕೊಂಡು ಯಾವ ರಾಜನು ತನ್ನ ರಾಜ್ಯದ ಪ್ರಜೆಗಳನ್ನು ಧರ್ಮಮಾರ್ಗಗಳಿಂದ ರಕ್ಷಿಸುವುದಿಲ್ಲವೋ, ಶತ್ರುರಾಷ್ಟ್ರದ ಆಕ್ರಮಣವನ್ನು ಪರಾಕ್ರಮದಿಂದ ಎದುರಿಸುವುದಿಲ್ಲವೋ, ಶತ್ರುರಾಷ್ಟ್ರವು ಆಕ್ರಮಿಸಿದ ಸಮಯದಲ್ಲಿ ಕಾರ್ಯಶೀಲನಾಗದೇ ಇರುವನೋ–ಅಂತಹ ಪ್ರತಾಪಹೀನನಾದ ರಾಜನು ತನ್ನ ರಾಷ್ಟ್ರವನ್ನು ಶತ್ರುಗಳ ಮೂಲಕ ವಿನಾಶಗೊಳಿಸುತ್ತಾನೆ.

ಯತ್ಪಾಪಂ ಪರಚಕ್ರಸ್ಯ ಪರರಾಷ್ಟ್ರಾಭಿಘಾತನೇ।
ತತ್ಪಾಪಂ ಸಕಲಂ ರಾಜಾ ಹತರಾಷ್ಟ್ರಃ ಪ್ರಪದ್ಯತೇ ॥೧೭೪॥

ಕಾರಣವಿಲ್ಲದೇ ಇತರರ ರಾಜ್ಯವನ್ನು ಆಕ್ರಮಣಮಾಡಿ ವಿನಾಶಮಾಡುವ ರಾಜನಿಗೆ ಯಾವ ಪಾಪವು ಪ್ರಾಪ್ತವಾಗುವುದೋ ಆ ಸಮಸ್ತಪಾಪವೂ ತನ್ನ ರಾಷ್ಟ್ರವನ್ನು ರಕ್ಷಿಸಿಕೊಳ್ಳಲು ಅಸಮರ್ಥನಾದ ರಾಜನಿಗೂ ಪ್ರಾಪ್ತವಾಗುತ್ತದೆ.

ಮಾತುಲಂ ಭಾಗಿನೇಯಂ ವಾ ಮಾತರಂ ಶ್ವಶುರಂ ಗುರುಮ್।
ಪಿತರಂ ವರ್ಜಯಿತ್ವೈಕಂ ಹನ್ಯಾದ್ಘಾತಕಮಾಗತಮ್ ॥೧೭೫॥

ಸೋದರಮಾವ, ಸೋದರಿಯ ಮಗ, ತಾಯಿ, ಮಾವ, ಗುರು ಮತ್ತು ತಂದೆ–ಇವರನ್ನು ಬಿಟ್ಟು ಬೇರೆ ಯಾರೇ ಆಗಲೀ ಕೊಲ್ಲುವ ಇಚ್ಛೆಯಿಂದ ಬಂದುದಾದರೆ–ಅಂತಹವನನ್ನು ಆತತಾಯಿಯೆಂದು ಭಾವಿಸಿ ಒಡನೆಯೇ ಸಂಹರಿಸಬೇಕು.

ಸ್ವಸ್ಯ ರಾಷ್ಟ್ರಸ್ಯ ರಕ್ಷಾರ್ಥಂ ಯುಧ್ಯಮಾನಸ್ತು ಯೋ ಹತಃ।
ಸಂಗ್ರಾಮೇ ಪರಚಕ್ರೇಣ ಶ್ರೂಯತಾಂ ತಸ್ಯ ಯಾ ಗತಿಃ ॥೧೭೬॥

ಪಾರ್ವತಿ! ತನ್ನ ರಾಷ್ಟ್ರದ ರಕ್ಷಣೆಗಾಗಿ ಶತ್ರುರಾಷ್ಟ್ರದ ಸೈನಿಕರೊಡನೆ ಯುದ್ಧಮಾಡುತ್ತಿರುವಾಗ ಹತನಾಗುವ ರಾಜನಿಗೆ ಯಾವ ಉತ್ತಮಗತಿಯು ಪ್ರಾಪ್ತವಾಗುವುದೆಂಬುದನ್ನು ಹೇಳುವೆನು; ಕೇಳು.

ವಿಮಾನೇ ತು ವರಾರೋಹೇ ಅಪ್ಸರೋಗಣಸೇವಿತೇ।
ಶಕ್ರಲೋಕಮಿತೋ ಯಾತಿ ಸಂಗ್ರಾಮೇ ನಿಹತೋ ನೃಪಃ ॥೧೭೭॥

ರಣರಂಗದಲ್ಲಿ ಹತನಾದ ರಾಜನು ಅಪ್ಸರೆಯರ ಸಮೂಹದಿಂದ ಸಂಸೇವಿತವಾದ ವಿಮಾನದಲ್ಲಿ ಕುಳಿತು ಇಂದ್ರನ ಲೋಕಕ್ಕೆ ಹೋಗುತ್ತಾನೆ.

ಯಾವನ್ತೋ ರೋಮಕೂಪಾಃ ಸ್ಯುಸ್ತಸ್ಯ ಗಾತ್ರೇಷು ಸುಂದರಿ।
ತಾವದ್ವರ್ಷಸಹಸ್ರಾಣಿ ಶಕ್ರಲೋಕೇ ಮಹೀಯತೇ ॥೧೭೮॥

ಅವನ ಶರೀರದಲ್ಲಿ ಎಷ್ಟು ರೋಮಕೂಪಗಳಿವೆಯೋ-ಅಷ್ಟು ಸಾವಿರ ವರ್ಷಗಳ ಕಾಲ ಇಂದ್ರಲೋಕದಲ್ಲಿ ಸಮ್ಮಾನಿತನಾಗುತ್ತಾನೆ.

ಯದಿ ವೈ ಮಾನುಷೇ ಲೋಕೇ ಕದಾಚಿದುಪಪದ್ಯತೇ।
ರಾಜಾ ವಾ ರಾಜಮಾತ್ರೋ ವಾ ಭೂಯೋ ಭವತಿ ವೀರ್ಯವಾನ್॥

ಒಂದು ವೇಳೆ ಅವನು ಯಾವಾಗಲಾದರೂ ಮನುಷ್ಯಲೋಕದಲ್ಲಿ ಹುಟ್ಟಬೇಕಾಗಿ ಬಂದರೆ-ರಾಜನಾಗಿಯೇ ಆಗಲೀ ರಾಜನಿಗೆ ಸದೃಶನಾಗಿಯೇ ಆಗಲೀ ಹುಟ್ಟುತ್ತಾನೆ.

ತಸ್ಮಾದ್ಯತ್ನೇನ ಕರ್ತವ್ಯಂ ಸ್ವರಾಷ್ಟ್ರಪರಿಪಾಲನಮ್।
ವ್ಯವಹಾರಾಶ್ಚ ಚಾರಾಶ್ಚ ಸತತಂ ಸತ್ಯಸಂಧತಾ ॥೧೮೦॥
ಅಪ್ರಮಾದಃ ಪ್ರಮೋದಶ್ಚ ವ್ಯವಸಾಯೇಽಪ್ಯಚಣ್ಡತಾ।
ಭರಣಂ ಚೈವ ಭೃತ್ಯಾನಾಂ ವಾಹನಾನಾಂ ಚ ಪೋಷಣಮ್ ॥೧೮೧॥

ಯೋಧಾನಾಂ ಚೈವ ಸತ್ಕಾರಃ ಕೃತೇ ಕರ್ಮಣ್ಯಮೋಘತಾ।
ಶ್ರೇಯ ಏವ ನರೇನ್ದ್ರಾಣಾಮಿಹ ಚೈವ ಪರತ್ರ ಚ ॥೧೮೨॥

ಆದುದರಿಂದ ರಾಜನು ಪ್ರಯತ್ನಪೂರ್ವಕವಾಗಿ ತನ್ನ ರಾಷ್ಟ್ರದ ರಕ್ಷಣೆಯನ್ನು ಮಾಡಬೇಕು. ರಾಜೋಚಿತವಾದ ವ್ಯವಹಾರವನ್ನು ಮಾಡಬೇಕು. ಚೆನ್ನಾಗಿ ಪರೀಕ್ಷಿಸಿದ ಗೂಢಚಾರರನ್ನು ಇಟ್ಟುಕೊಳ್ಳಬೇಕು. ಸತ್ಯ ಸಂಧನಾಗಿರಬೇಕು. ಅಜಾಗರೂಕನಾಗಿರಬಾರದು. ಪ್ರಸನ್ನಚಿತ್ತನಾಗಿರಬೇಕು.

ರಾಜಕಾರ್ಯಗಳನ್ನು ಮಾಡುವಾಗ ಕೋಪಗೊಳ್ಳಬಾರದು. ಸೇವಕರ ಮತ್ತು ಕುದುರೆ-ಆನೆ ಇತ್ಯಾದಿ ವಾಹನಗಳ ಭರಣ-ಪೋಷಣಗಳನ್ನು ಮಾಡಬೇಕು. ಯೋಧರನ್ನು ಯಥಾಯೋಗ್ಯವಾಗಿ ಸತ್ಕರಿಸಬೇಕು. ಯಾವುದೇ ಕಾರ್ಯವಾಗಲೀ ವ್ಯರ್ಥವಾಗಬಾರದು–ಇವೆಲ್ಲವೂ ರಾಜರ ಕರ್ತವ್ಯಗಳಾಗಿವೆ. ಹೀಗೆ ಮಾಡಿದರೆ ರಾಜರಿಗೆ ಇಹ-ಪರಗಳೆರಡರಲ್ಲಿಯೂ ಶ್ರೇಯಸ್ಸುಂಟಾಗುತ್ತದೆ.”

ಅಹಿಂಸೆ ಮತ್ತು ಇಂದ್ರಿಯಸಂಯಮಗಳ ಪ್ರಶಂಸೆ: ದೈವದ ಪ್ರಧಾನತೆ

ಉಮೆಯು ಹೇಳುತ್ತಾಳೆ:

"ದೇವದೇವನೇ! ಸರ್ವದೇವವಂದಿತನೇ! ಮಹಾದೇವನೇ! ಯಾವ ಯಾವ ಧರ್ಮರಹಸ್ಯಗಳಿರುವುವೋ–ಅವೆಲ್ಲವನ್ನೂ ಕೇಳಲು ಬಯಸುವೆನು. ಹೇಳುವ ಕೃಪೆಮಾಡು."

ಮಹೇಶ್ವರನು ಹೇಳುತ್ತಾನೆ:

ಅಹಿಂಸಾ ಪರಮೋ ಧರ್ಮೋ ಹ್ಯಹಿಂಸಾ ಪರಮಂ ಸುಖಮ್।
ಅಹಿಂಸಾ ಧರ್ಮಶಾಸ್ತ್ರೇಷು ಸರ್ವೇಷು ಪರಮಂ ಪದಮ್ ॥೧೮೪॥

"ಅಹಿಂಸೆಯೇ ಶ್ರೇಷ್ಠವಾದ ಧರ್ಮವಾಗಿದೆ. ಅಹಿಂಸೆಯೇ ಪರಮ ಸುಖಕರವೂ ಆಗಿದೆ. ಎಲ್ಲ ಧರ್ಮಶಾಸ್ತ್ರಗಳಲ್ಲಿಯೂ ಅಹಿಂಸೆಗೆ ಶ್ರೇಷ್ಠವಾದ ಸ್ಥಾನವಿದೆ.

ದೇವತಾತಿಥಿಶುಶ್ರೂಷಾ ಸತತಂ ಧರ್ಮಶೀಲತಾ।
ವೇದಾಧ್ಯಯನಯಜ್ಞಾಶ್ಚ ತಪೋ ದಾನಂ ದಮಸ್ತಥಾ ॥೧೮೫॥
ಆಚಾರ್ಯಗುರುಶುಶ್ರೂಷಾ ತೀರ್ಥಾಭಿಗಮನಂ ತಥಾ।
ಅಹಿಂಸಾಯಾ ವರಾರೋಹೇ ಕಲಾಂ ನಾರ್ಹನ್ತಿ ಷೋಡಶೀಮ್।
ಏತತ್ತೇ ಪರಮಂ ಗುಹ್ಯಮಾಖ್ಯಾತಂ ಪರಮಾರ್ಚಿತಮ್ ॥೧೮೬॥

ದೇವತೆಗಳ ಪೂಜೆ, ಅತಿಥಿಸತ್ಕಾರ, ಸತತವಾಗಿ ಧರ್ಮಶೀಲನಾಗಿರುವಿಕೆ, ವೇದಾಧ್ಯಯನ, ಯಜ್ಞ, ತಪಸ್ಸು, ದಾನ, ದಮ, ಆಚಾರ್ಯರ ಮತ್ತು ಗುರುಗಳ ಶುಶ್ರೂಷೆ, ತೀರ್ಥಯಾತ್ರೆ–ಇವು ಯಾವುವೂ ಅಹಿಂಸಾಧರ್ಮದ ಹದಿನಾರನೆಯ ಒಂದಂಶಕ್ಕೂ ಸಮವಲ್ಲ. ಅತ್ಯಂತರಹಸ್ಯವಾದ ಮತ್ತು ಪರಮಪೂಜ್ಯವಾದ ಈ ವಿಷಯವನ್ನು ನಿನಗೆ ಹೇಳಿದ್ದೇನೆ.

ನಿರುಣದ್ಧೀನ್ದ್ರಿಯಾಣ್ಯೇವ ಸ ಸುಖೀ ಸ ವಿಚಕ್ಷಣಃ।
ಇನ್ದ್ರಿಯಾಣಾಂ ನಿರೋಧೇನ ದಾನೇನ ಚ ದಮೇನ ಚ।
ನರಃ ಸರ್ವಮವಾಪ್ನೋತಿ ಮನಸಾ ಯದ್ಯದಿಚ್ಛತಿ ॥೧೮೭॥

ಯಾವನು ತನ್ನ ಇಂದ್ರಿಯಗಳನ್ನು ನಿರೋಧಿಸುವನೋ-ಅವನೇ ಸುಖಿಯು ಮತ್ತು ಅವನೇ ವಿದ್ವಾಂಸನು. ಇಂದ್ರಿಯಗಳ ನಿರೋಧದಿಂದಲೂ, ದಾನದಿಂದಲೂ, ಸಂಯಮದಿಂದಲೂ ಮನುಷ್ಯನು ಏನೇನನ್ನು ಬಯಸು ವನೋ–ಅವೆಲ್ಲವನ್ನೂ ಪಡೆದುಕೊಳ್ಳುತ್ತಾನೆ.

ಯತೋ ಯತೋ ಮಹಾಭಾಗೇ ಹಿಂಸಾ ಸ್ಯಾನ್ಮಹತೀ ತತಃ।
ನಿವೃತ್ತೋ ಮಧುಮಾಂಸಾಭ್ಯಾಂ ಹಿಂಸಾ ತ್ವಲ್ಪತರಾ ಭವೇತ್ ॥೧೮೮॥

ಯಾವ ಯಾವ ರೀತಿಗಳಿಂದ ಹೆಚ್ಚು ಹಿಂಸೆಯಾಗುವ ಸಂಭವವಿರುವುದೋ ಅವೆಲ್ಲವನ್ನೂ ಮನುಷ್ಯನು ಪರಿತ್ಯಜಿಸಬೇಕು. ಮಧುವನ್ನೂ ಮಾಂಸವನ್ನೂ ಪರಿತ್ಯಾಗಮಾಡಿದರೆ ಹಿಂಸೆಯು ಬಹಳವಾಗಿ ಕಡಿಮೆಯಾಗುತ್ತದೆ.

ನಿವೃತ್ತಿಃ ಪರಮೋ ಧರ್ಮಃ ನಿವೃತ್ತಿಃ ಪರಮಂ ಸುಖಮ್।
ಮನಸಾ ವಿನಿವೃತ್ತಾನಾಂ ಧರ್ಮಸ್ಯ ನಿಚಯೋ ಮಹಾನ್ ॥೧೮೯॥

ವಿಷಯಸುಖಗಳಿಂದ ಹಿಂದಕ್ಕೆ ಸರಿಯುವುದೇ (ನಿವೃತ್ತಿಮಾರ್ಗವೇ) ಶ್ರೇಷ್ಠವಾದ ಧರ್ಮ. ಅದೇ ಪರಮಸುಖವೂ ಆಗಿದೆ. ಮನಸ್ಸಿನಿಂದಲೇ ಯಾರು ವಿಷಯಸುಖಗಳನ್ನು ದೂರಮಾಡಿರುವರೋ ಅವರಿಗೆ ಪುಣ್ಯದರಾಶಿಯೇ ಲಭಿಸುತ್ತದೆ.

ಮನಃಪೂರ್ವಾಗಮಾ ಧರ್ಮಾ ಅಧರ್ಮಾಶ್ಚ ನ ಸಂಶಯಃ।
ಮನಸಾ ಬಧ್ಯತೇ ಚಾಪಿ ಮುಚ್ಯತೇ ಚಾಪಿ ಮಾನವಃ।
ನಿಗೃಹೀತೇ ಭವೇತ್ಸ್ವರ್ಗೋ ವಿಸೃಷ್ಟೇ ನರಕೋ ಧ್ರುವಃ ॥೧೯೦॥

ಧರ್ಮವಾಗಲೀ, ಅಧರ್ಮವಾಗಲೀ–ಅವು ಮೊದಲು ಮನಸ್ಸಿನಲ್ಲಿಯೇ ಹುಟ್ಟುತ್ತವೆ. ಇದರಲ್ಲಿ ಸಂಶಯವೇ ಇಲ್ಲ. ಆದುದರಿಂದ ಮನುಷ್ಯನು ಮನಸ್ಸಿನಿಂದಲೇ ಸಂಸಾರಬಂಧನದಲ್ಲಿ ಸಿಕ್ಕಿಕೊಳ್ಳುತ್ತಾನೆ. ಅದೇ ಮನಸ್ಸಿನ ಮೂಲಕವಾಗಿಯೇ ಸಂಸಾರಬಂಧನದಿಂದ ವಿಮುಕ್ತನೂ ಆಗುತ್ತಾನೆ. ಆದುದರಿಂದ ಮನಸ್ಸನ್ನು ನಿಗ್ರಹಿಸಿದರೆ ಸ್ವರ್ಗಪ್ರಾಪ್ತಿಯೂ ಸ್ವೇಚ್ಛೆಯಾಗಿರಲು ಬಿಟ್ಟುಬಿಟ್ಟರೆ ನರಕವೂ ನಿಶ್ಚಿತ.

ಜೀವಾಃ ಪುರಾಕೃತೇನೈವ ತಿರ್ಯಗ್ಯೋನಿಸರೀಸೃಪಾಃ।
ನಾನಾಯೋನಿಷು ಜಾಯನ್ತೇ ಸ್ವಕರ್ಮಪರಿವೇಷ್ಟಿತಾಃ ॥೧೯೧॥

ಜೀವಿಗಳು ಹಿಂದೆ ಮಾಡಿದ ಕರ್ಮಗಳ ಫಲವಾಗಿಯೇ ಪಶು-ಪಕ್ಷಿ-ಕೀಟಗಳೇ ಮೊದಲಾದ ತಿರ್ಯಗ್ಯೋನಿಗಳಲ್ಲಿ ಹುಟ್ಟುತ್ತವೆ. ಅವು ತಾವೇ ಮಾಡಿದ ಕರ್ಮಫಲಗಳಿಂದ ಸುತ್ತಲ್ಪಟ್ಟು ನಾನಾಯೋನಿಗಳಲ್ಲಿ ಹುಟ್ಟುತ್ತಲೇ ಇರುತ್ತವೆ.

ಜಾಯಮಾನಸ್ಯ ಜೀವಸ್ಯ ಮೃತ್ಯುಃ ಪೂರ್ವಂ ಪ್ರಜಾಯತೇ।
ಸುಖಂ ವಾ ಯದಿ ವಾ ದುಃಖಂ ಯಥಾಪೂರ್ವಕೃತಂ ತು ವಾ ॥

ಯಾವ ಜೀವವು ಜನ್ಮತಾಳಲಿರುವುದೋ ಆ ಜೀವದ ಮೃತ್ಯುವು ಅದು ಹುಟ್ಟುವುದಕ್ಕಿಂತಲೂ ಮೊದಲೇ ಸಿದ್ಧವಾಗಿರುತ್ತದೆ. ಮನುಷ್ಯನು ಹಿಂದಿನ ಜನ್ಮದಲ್ಲಿ ಮಾಡಿದ ಪಾಪ ಅಥವಾ ಪುಣ್ಯಕರ್ಮಗಳಿಗೆ ಅನುಸಾರವಾಗಿ ಈ ಜನ್ಮದಲ್ಲಿ ಸುಖವನ್ನಾಗಲೀ-ಕಷ್ಟವನ್ನಾಗಲೀ ಅನುಭವಿಸುತ್ತಾನೆ.

ಅಪ್ರಮತ್ತಃ ಪ್ರಮತ್ತೇಷು ವಿಧಿರ್ಜಾಗರ್ತಿ ಜನ್ತುಷು ।
ನ ಹಿ ತಸ್ಯ ಪ್ರಿಯಃ ಕಶ್ಚಿನ್ನ ದ್ವೇಷ್ಯೋ ನ ಚ ಮಧ್ಯಮಃ ॥೯೩॥

ಪ್ರಮಾದದಿಂದ ಎಚ್ಚರದಪ್ಪಿ ನಡೆಯುವ ಪ್ರಾಣಿಗಳಲ್ಲಿಯೂ ವಿಧಿಯು (ದೈವವು) ಅಪ್ರಮತ್ತವಾಗಿ ಪ್ರಾಣಿಯ ಕರ್ಮಗಳನ್ನೇ ಸದಾಕಾಲದಲ್ಲಿಯೂ ಅವಲೋಕಿಸುತ್ತಾ ಎಚ್ಚರವಾಗಿಯೇ ಇರುತ್ತದೆ. ವಿಧಿಗೆ ಅಥವಾ ದೈವಕ್ಕೆ ಪ್ರಿಯವಾದ ಜೀವವಾಗಲೀ, ದ್ವೇಷಿಯಾದ ಜೀವವಾಗಲೀ, ಮಧ್ಯಸ್ಥವಾದ ಜೀವವಾಗಲೀ ಇರುವುದಿಲ್ಲ. ವಿಧಿಯು ಎಲ್ಲ ಪ್ರಾಣಿಗಳನ್ನೂ ಸರ್ವಸಮಭಾವದಿಂದ ಕಾಣುತ್ತದೆ.

ಸಮಃ ಸರ್ವೇಷು ಭೂತೇಷು ಕಾಲಃ ಕಾಲಂ ನಿರೀಕ್ಷತೇ।
ಗತಾಯುಷೋ ಹ್ಯಾಕ್ಷಿಪತೇ ಜೀವಃ ಸರ್ವಸ್ಯ ದೇಹಿನಃ ॥೯೪॥

ಕಾಲವು ಸಮಸ್ತಪ್ರಾಣಿಗಳ ವಿಷಯದಲ್ಲಿಯೂ ಸಮಾನಭಾವದಿಂದಲೇ ಇರುತ್ತದೆ. ಅದು ಕಾಲವನ್ನೇ ನಿರೀಕ್ಷಿಸುತ್ತಿರುತ್ತದೆ. ಆಯುಷ್ಯವು ಮುಗಿದೊಡನೆಯೇ ಕಾಲವು ಪ್ರಾಣಿಗಳನ್ನು ಸಂಹಾರಮಾಡುತ್ತದೆ. ಸಮಸ್ತಪ್ರಾಣಿಗಳಿಗೂ ಕಾಲವೇ ಜೀವನದ ರೂಪದಲ್ಲಿರುತ್ತದೆ.

ತ್ರಿವರ್ಗದ ನಿರೂಪಣೆ: ಮಂಗಳದಾಯಕವಾದ ಆಚಾರ-ವ್ಯವಹಾರಗಳ ನಿರೂಪಣೆ

ಮಹೇಶ್ವರನು ಹೇಳುತ್ತಾನೆ:

ವಿದ್ಯಾ ವಾರ್ತಾ ಚ ಸೇವಾ ಚ ಕಾರುತ್ವಂ ನಾಟ್ಯತಾ ತಥಾ।
ಇತ್ಯೇತೇ ಜೀವನಾರ್ಥಾಯ ಮರ್ತ್ಯಾನಾಂ ವಿಹಿತಾಃ ಪ್ರಿಯೇ ॥೧೫॥

ಪ್ರಿಯಳಾದವಳೇ! ವಿದ್ಯೆ, ಕೃಷಿ, ಸೇವೆ, ಶಿಲ್ಪಕಲೆ ಮತ್ತು ಅಭಿನಯ-ಈ ಐದು ಮನುಷ್ಯರ ಜೀವನನಿರ್ವಹಣೆಯ ವೃತ್ತಿಗಳೆಂದು ವಿಹಿತವಾಗಿವೆ.

ವಿದ್ಯಾಯೋಗಸ್ತು ಸರ್ವೇಷಾಂ ಪೂರ್ವಮೇವ ವಿಧೀಯತೇ।
ಕಾರ್ಯಾಕಾರ್ಯಂ ವಿಜಾನನ್ತಿ ವಿದ್ಯಯಾ ದೇವಿ ನಾನ್ಯಥಾ ॥೧೬॥

ಎಲ್ಲ ಮನುಷ್ಯರಿಗೂ ವಿದ್ಯಾಯೋಗವು ಮೊದಲೇ ನಿಶ್ಚಿತವಾಗಿಬಿಟ್ಟಿರುತ್ತದೆ. ವಿದ್ಯಾಭ್ಯಾಸದಿಂದ ಮನುಷ್ಯರು ಕರ್ತವ್ಯಾಕರ್ತವ್ಯಗಳನ್ನು ತಿಳಿದುಕೊಳ್ಳುತ್ತಾರೆ. ಅದಲ್ಲದೇ ಬೇರೆಯ ಮಾರ್ಗವೇ ಇಲ್ಲ.

ವಿದ್ಯಯಾ ಸ್ಫೀಯತೇ ಜ್ಞಾನಂ ಜ್ಞಾನಾತ್ತತ್ತ್ವವಿದರ್ಶನಮ್।
ದೃಷ್ಟತತ್ತ್ವೋ ವಿನೀತಾತ್ಮ ಸರ್ವಾರ್ಥಸ್ಯ ಚ ಭಾಜನಮ್ ॥೧೭॥

ವಿದ್ಯೆಯಿಂದ ಜ್ಞಾನವೃದ್ಧಿಯಾಗುತ್ತದೆ. ಜ್ಞಾನದಿಂದ ತತ್ತ್ವದರ್ಶನವಾಗುತ್ತದೆ. ತತ್ತ್ವದರ್ಶನದಿಂದ ಮನುಷ್ಯನು ವಿನೀತವಾದ ಮನಸ್ಸನ್ನು ಹೊಂದಿ ಸಮಸ್ತಪುರುಷಾರ್ಥಗಳನ್ನೂ ಹೊಂದಲು ಯೋಗ್ಯನಾಗುತ್ತಾನೆ.

ಶಕ್ಯಂ ವಿದ್ಯಾವಿನೀತೇನ ಲೋಕೇ ಸಂಜೀವನಂ ಶುಭಮ್।
ಆತ್ಮಾನಂ ವಿದ್ಯಯಾ ತಸ್ಮಾತ್ಪೂರ್ವಂ ಕೃತ್ವಾ ತು ಭಾಜನಮ್।
ವಶ್ಯೇನ್ದ್ರಿಯೋ ಜಿತಕ್ರೋಧೋ ಭೂತಾತ್ಮಾನಂ ತು ಭಾವಯೇತ್ ॥

ವಿದ್ಯೆಯಿಂದ ವಿನಯಸಂಪನ್ನನಾದವನು ಲೋಕದಲ್ಲಿ ಶುದ್ಧಜೀವನವನ್ನು ನಡೆಸಲು ಸಾಧ್ಯವಾಗುತ್ತದೆ. ಆದುದರಿಂದ ಮನುಷ್ಯನು ವಿದ್ಯಾಸಂಪನ್ನನಾಗಿ, ವಿದ್ಯೆಯ ಮೂಲಕವಾಗಿ ಪುರುಷಾರ್ಥಗಳನ್ನು ಸಾಧಿಸುವ ಯೋಗ್ಯತೆಯನ್ನು ಪಡೆದುಕೊಂಡು, ಇಂದ್ರಿಯಗಳನ್ನು ವಶಪಡಿಸಿಕೊಂಡು

ಕ್ರೋಧವನ್ನು ಜಯಿಸಿ, ಸಕಲಪ್ರಾಣಿಗಳಿಗೂ ಆತ್ಮಭೂತನಾದ ಪರಮಾತ್ಮನನ್ನು ಚಿಂತಿಸಬೇಕು.

ಭಾವಯಿತ್ವಾ ತದಾತ್ಮಾನಂ ಪೂಜನೀಯಃ ಸತಾಮಪಿ।
ಕುಲಾನುವೃತ್ತಂ ವೃತ್ತಂ ವಾ ಪೂರ್ವಮಾತ್ಮಾ ಸಮಾಶ್ರಯೇತ್ ॥೧೯೯॥

ಪರಮಾತ್ಮನನ್ನೇ ಧ್ಯಾನಿಸುವ ಮನುಷ್ಯನು ಸತ್ಪುರುಷರಿಗೂ ಪೂಜನೀಯನಾಗಿರುತ್ತಾನೆ. ಜೀವಾತ್ಮನು (ಮನುಷ್ಯನು) ಮೊದಲು ಕುಲಪರಂಪರಾಗತವಾಗಿ ಬಂದ ಆಚಾರಗಳನ್ನೇ ಆಶ್ರಯಿಸಬೇಕು.

ಯದಿ ಚೇದ್ವಿದ್ಯಯಾ ಚೈವ ವೃತ್ತಿಂ ಕಾಂಕ್ಷೇದಥಾತ್ಮನಃ।
ರಾಜವಿದ್ಯಾಂ ತು ವಾ ದೇವಿ ಲೋಕವಿದ್ಯಾಮಥಾಪಿ ವಾ ॥೨೦೦॥
ತೀರ್ಥತಶ್ಚಾಪಿ ಗೃಹ್ಣೀಯಾಚ್ಛುಶ್ರೂಷಾದಿಗುಣೈರ್ಯುತಃ।
ಗ್ರನ್ಥತಶ್ಚಾರ್ಥತಶ್ಚೈವ ದೃಢಂ ಕುರ್ಯಾತ್ಪ್ರಯತ್ನತಃ ॥೨೦೧॥

ಒಂದು ವೇಳೆ ವಿದ್ಯೆಯಿಂದಲೇ ಜೀವಿಕೆಯನ್ನು ನಡೆಸುವ ಅಪೇಕ್ಷೆಯಿದ್ದರೆ-ಶುಶ್ರೂಷಾದಿ ಗುಣಗಳಿಂದ ಕೂಡಿದವನಾಗಿ ಗುರುವಿನಿಂದ ರಾಜವಿದ್ಯೆಯನ್ನಾಗಲೀ ಲೋಕವಿದ್ಯೆಯನ್ನಾಗಲೀ ಕಲಿತು, ಅದನ್ನು ಗ್ರಂಥದ ಮೂಲಕವಾಗಿಯೂ ಅರ್ಥದ ಮೂಲಕವಾಗಿಯೂ ಪ್ರಯತ್ನಪೂರ್ವಕವಾಗಿ ಅಭ್ಯಾಸಮಾಡಿ ದೃಢಪಡಿಸಿಕೊಳ್ಳಬೇಕು.

ಏವಂ ವಿದ್ಯಾಫಲಂ ದೇವಿ ಪ್ರಾಪ್ನುಯಾನ್ನಾನ್ಯಥಾ ನರಃ।
ನ್ಯಾಯಾದ್ವಿದ್ಯಾಫಲಾನೀಚ್ಛೇದಧರ್ಮಂ ತತ್ರ ವರ್ಜಯೇತ್ ॥೨೦೨॥

ಹೀಗೆ ಮಾಡಿದರೆ ಮನುಷ್ಯನು ವಿದ್ಯೆಯ ಫಲವನ್ನು ಪಡೆದುಕೊಳ್ಳುತ್ತಾನೆ. ನ್ಯಾಯವಾದ ರೀತಿಯಲ್ಲಿ ವಿದ್ಯೆಯ ಮೂಲಕವಾಗಿ ಫಲವನ್ನು ಪಡೆಯಲು ಬಯಸಬೇಕು. ವಿದ್ಯೆಯ ವಿಷಯದಲ್ಲಿ ಅಧರ್ಮವನ್ನು ಸರ್ವಥಾ ತ್ಯಾಗಮಾಡಬೇಕು.

ಯದಿಚ್ಛೇದ್ವಾರ್ತಯಾ ವೃತ್ತಿಂ ಕಾಂಕ್ಷೇತ ವಿಧಿಪೂರ್ವಕಮ್।
ಕ್ಷೇತ್ರೇ ಜಲೋಪಪನ್ನೇ ಚ ತದ್ಯೋಗ್ಯಂ ಕೃಷಿಮಾಚರೇತ್ ॥೨೦೩॥

ವಾರ್ತಾವೃತ್ತಿಯಿಂದ (ಕೃಷಿ-ವಾಣಿಜ್ಯಗಳಿಂದ) ಜೀವಿಕೆಯನ್ನು ನಡೆಸುವ

ಇಚ್ಛೆಯಿದ್ದರೆ, ನೀರಿನ ಆಸರೆಯಿರುವ ಕ್ಷೇತ್ರದಲ್ಲಿ ವಿಧಿಪೂರ್ವಕವಾಗಿ ಕೃಷಿಗೆ ಯೋಗ್ಯವಾದ ಕಾರ್ಯವನ್ನು ಮಾಡಬೇಕು.

ವಾಣಿಜ್ಯಂ ವಾ ಯಥಾಕಾಲಂ ಕುರ್ಯಾತ್ತದ್ದೇಶಯೋಗತಃ।
ಮೂಲ್ಯಮರ್ಥಂ ಪ್ರಯಾಸಂ ಚ ವಿಚಾರ್ಯೈವ ವ್ಯಯೋದಯೌ ॥

ಅಥವಾ ಯಥಾಯೋಗ್ಯವಾದ ಸಮಯದಲ್ಲಿ ದೇಶದ ಅವಶ್ಯಕತೆಗಳಿಗೆ ಅನುಸಾರವಾಗಿ ಪದಾರ್ಥ, ಅದರ ಮೌಲ್ಯ-ವ್ಯಯ, ಲಾಭ ಮತ್ತು ಪರಿಶ್ರಮ-ಇವುಗಳನ್ನು ಚೆನ್ನಾಗಿ ವಿಚಾರಮಾಡಿ ವ್ಯಾಪಾರಮಾಡಬೇಕು.

ಪಶುಸಂಜೀವನಂ ಚೈವ ದೇಶಗಃ ಪೋಷಯೇದ್ಧ್ರುವಮ್।
ಬಹುಪ್ರಕಾರಾ ಬಹವಃ ಪಶವಸ್ತಸ್ಯ ಸಾಧಕಾಃ ॥೨೦೫॥

ದೇಶವಾಸಿಯಾದ (ಗ್ರಾಮವಾಸಿಯಾದ) ಪುರುಷನು ಪಶುಗಳ ಪಾಲನೆ-ಪೋಷಣೆಗಳನ್ನು ಅವಶ್ಯವಾಗಿ ಮಾಡಬೇಕು. ಅನೇಕಪ್ರಕಾರವಾದ (ಅನೇಕ ಜಾತಿಯ) ಬಹುಸಂಖ್ಯಾತವಾದ ಪಶುಗಳೂ ಮನುಷ್ಯನ ಅರ್ಥಪ್ರಾಪ್ತಿಗೆ ಸಾಧಕಗಳಾಗುತ್ತವೆ.

ಯಃ ಕಶ್ಚಿತ್ಸೇವಯಾ ವೃತ್ತಿಂ ಕಾಂಕ್ಷೇತ ಮತಿಮಾನ್ನರಃ।
ಯತಾತ್ಮಾ ಶ್ರವಣೀಯಾನಾಂ ಭವೇದ್ವೈಸಮ್ಪ್ರಯೋಜಕಃ ॥೨೦೬॥

ಯಾವನಾದರೂ ಬುದ್ಧಿವಂತನಾದ ಮನುಷ್ಯನು ಸೇವೆಯಿಂದ ಜೀವನವನ್ನು ನಡೆಸಲು ಬಯಸಿದಲ್ಲಿ-ಅಂತಹವನು ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡಿರಬೇಕು. ಕೇಳಲು ಹಿತಕರವಾದ ಮೃದುವಾದ ಮಾತುಗಳನ್ನು ಆಡುತ್ತಿರಬೇಕು.

ಯಥಾ ಯಥಾ ಸ ತುಷ್ಯೇತ ತಥಾ ಸಂತೋಷಯೇತ್ತು ತಮ್।
ಅನುಜೀವಿಗುಣೋಪೇತಃ ಕುರ್ಯಾದಾತ್ಮಾನಮಾಶ್ರಿತಮ್ ॥೨೦೭॥

ಒಡೆಯನು ಯಾವ ರೀತಿಯಲ್ಲಿ ಸಂತುಷ್ಟನಾಗುವನೋ–ಅದೇ ರೀತಿಯಲ್ಲಿ ಅವನನ್ನು ಸಂತೋಷಗೊಳಿಸಬೇಕು. ಸೇವಕಗುಣದಿಂದ ಸಂಪನ್ನನಾದವನು ತನ್ನ ಒಡೆಯನ ಆಶ್ರಯದಲ್ಲಿಯೇ ಇರಬೇಕು.

ವಿಪ್ರಿಯಂ ನಾಚರೇತ್ತಸ್ಯ ಏಷಾ ಸೇವಾ ಸಮಾಸತಃ।
ವಿಪ್ರಯೋಗಾತ್ಪುರಾ ತೇನ ಗತಿಮನ್ಯಾಂ ನ ಲಕ್ಷಯೇತ್ ॥೨೦೮॥

ಒಡೆಯನಿಗೆ ಸಮ್ಮತವಲ್ಲದ ಕಾರ್ಯವನ್ನು ಯಾವಾಗಲೂ ಮಾಡಲೇಬಾರದು. ಅವನನ್ನು ಬಿಡುವ ಮೊದಲೇ ಬೇರೊಬ್ಬನನ್ನು ಒಡೆಯನನ್ನಾಗಿ ಆಶ್ರಯಿಸಬಾರದು. ಸಂಕ್ಷೇಪವಾಗಿ ಹೇಳುವುದಾದರೆ ಇದೇ ಸೇವಾಧರ್ಮದ ಲಕ್ಷಣವಾಗಿದೆ.

ಕಾರುಕರ್ಮ ಚ ನಾಟ್ಯಂ ಚ ಪ್ರಾಯಶೋ ನೀಚಯೋನಿಷು ।
ತಯೋರಪಿ ಯಥಾಯೋಗಂ ನ್ಯಾಯತಃ ಕರ್ಮವೇತನಮ್ ॥೨೦೯॥

ಶಿಲ್ಪ ಮತ್ತು ನಾಟ್ಯಗಳು ಸಾಮಾನ್ಯವಾಗಿ ನೀಚಯೋನಿಗಳಲ್ಲಿ ಹುಟ್ಟಿರುವವರ ಜೀವಿಕೆಯ ಸಾಧನಗಳಾಗಿವೆ. ಶಿಲ್ಪ ಮತ್ತು ನಾಟ್ಯಗಳಲ್ಲಿ ನಿಷ್ಣಾತರಾದವರೂ ಯಥಾಯೋಗ್ಯವಾಗಿ ಮಾಡಿದ ಕಾರ್ಯಕ್ಕೆ ನ್ಯಾಯವಾದ ರೀತಿಯಲ್ಲಿ ವೇತನವನ್ನು ಪಡೆಯಬೇಕು.

ಆರ್ಜವೇಭ್ಯೋಽಪಿ ಸರ್ವೇಭ್ಯಃ ಸ್ವಾರ್ಜವಾದ್ವೇತನಂ ಹರೇತ್।
ಅನಾರ್ಜವಾದಾಹರತಸ್ತತ್ತು ಪಾಪಾಯ ಕಲ್ಪತೇ ॥೨೧೦॥

ಸರಳವಾದ ವ್ಯವಹಾರವುಳ್ಳವನು ಎಲ್ಲರಿಂದಲೂ ಸರಳವಾದ ರೀತಿಯಲ್ಲಿಯೇ ವೇತನವನ್ನು ಪಡೆಯಬೇಕು. ಕುಟಿಲತೆಯಿಂದ (ಕೆಲಸವನ್ನೇ ಮಾಡದೇ ಕೆಲಸವನ್ನು ಮಾಡಿರುವುದಾಗಿ ಹೇಳಿಕೊಂಡು) ವೇತನವನ್ನು ಪಡೆಯುವುದು ಪಾಪಕ್ಕೆ ಕಾರಣವಾಗುತ್ತದೆ.

ಸರ್ವೇಷಾಂ ಪೂರ್ವಮಾರಮ್ಭಾಂಶ್ಚಿನ್ತಯೇನ್ನಯಪೂರ್ವಕಮ್।
ಆತ್ಮಶಕ್ತಿಮುಪಾಯಾಂಶ್ಚ ದೇಶಕಾಲೌ ಚ ಯುಕ್ತಿತಃ ॥೨೧೧॥
ಏವಮಾದೀನಿ ಸಂಚಿನ್ತ್ಯ ದೃಷ್ಟ್ವಾ ದೈವಾನುಕೂಲತಾಮ್।
ಅತಃ ಪರಂ ಸಮಾರಮ್ಭೇದ್ಯತ್ರಾತ್ಮಹಿತಮಾಹಿತಮ್ ॥೨೧೨॥

ಜೀವನನಿರ್ವಹಣೆಗೆ ಎಷ್ಟು ಉಪಾಯಗಳಿವೆಯೋ (ಸಾಧನಗಳಿವೆಯೋ) ಆ ಎಲ್ಲ ಉಪಾಯಗಳನ್ನೂ ಮೊದಲೇ ನ್ಯಾಯಪೂರ್ವಕವಾಗಿ ವಿಚಾರಮಾಡಬೇಕು. ತನ್ನಲ್ಲಿರುವ ಶಕ್ತಿ (ಆತ್ಮಬಲ), ಉಪಾಯ, ದೇಶ, ಕಾಲ, ಕಾರಣ, ಪ್ರವಾಸ, ಪ್ರಕ್ಷೇಪ, ಫಲೋದಯ–ಇವೇ ಮುಂತಾದ ವಿಷಯಗಳಲ್ಲಿ ಯುಕ್ತಿಪೂರ್ವಕವಾಗಿ ವಿಚಾರಮಾಡಿ, ದೈವಾನುಕೂಲ

ವನ್ನೂ ಗಮನಿಸಿ ಯಾವ ವೃತ್ತಿಯಿಂದ ತನ್ನ ಜೀವಿಕೆಯು ಸುಗಮವಾಗಿ ಸಾಧಿಸಲ್ಪಡುವುದೆಂದು ಕಂಡುಬರುವುದೋ–ಆ ವೃತ್ತಿಯನ್ನು ಆರಂಭಿಸ ಬೇಕು.

ವೃತ್ತಿಮೇವಂ ಸಮಾಸಾದ್ಯ ತಾಂ ಸದಾ ಪರಿಪಾಲಯೇತ್।
ದೈವಮಾನುಷವಿಘ್ನೇಭ್ಯೋ ನ ಪುನರ್ಭ್ರಶ್ಯತೇ ಯಥಾ ॥೨೧೩॥

ಹೀಗೆ ತನ್ನ ಜೀವನವೃತ್ತಿಯಲ್ಲಿ ತೊಡಗಿ ಆ ವೃತ್ತಿಯಲ್ಲಿಯೇ ಯಾವಾಗಲೂ ಆಸಕ್ತನಾಗಿಬೇಕು. ದೈವಿಕವಾದ ಮತ್ತು ಮನುಷ್ಯಸಂಬಂಧವಾದ ವಿಘ್ನಗಳಿಂದ ವೃತ್ತಿಯು ಪುನಃ ತಪ್ಪಿಹೋಗದ ರೀತಿಯಲ್ಲಿ ಜಾಗರೂಕನಾಗಿರಬೇಕು.

ಪಾಲಯನ್ವರ್ಧಯನ್ಭುಂಜಂಸ್ತಾಂ ಪ್ರಾಪ್ಯ ನ ವಿನಾಶಯೇತ್।
ಕ್ಷೀಯತೇ ಗಿರಿಸಂಕಾಶಮಶ್ನತೋ ಹ್ಯನಪೇಕ್ಷಯಾ ॥೨೧೪॥

ಅವಲಂಬಿಸಿದ ವೃತ್ತಿಯನ್ನು ರಕ್ಷಿಸಬೇಕು. ವೃದ್ಧಿಪಡಿಸುತ್ತಿರಬೇಕು ಮತ್ತು ಉಪಭೋಗಿಸುತ್ತಲೂ ಇರಬೇಕು. ಅವಲಂಬಿಸಿದ ವೃತ್ತಿಯೇ ವಿನಾಶವಾಗುವಂತೆ ಮಾಡಬಾರದು. ವೃತ್ತಿಯ ರಕ್ಷಣೆ ಮತ್ತು ವೃದ್ಧಿಗಳನ್ನು ಮಾಡದೇ ಉಪಭೋಗಿಸುತ್ತಲೇ ಇದ್ದರೆ ಪರ್ವತಸದೃಶವಾದ ಧನರಾಶಿಯೂ ಕೆಲವೇ ದಿವಸಗಳಲ್ಲಿ ಕರಗಿಹೋಗುತ್ತದೆ.

ಆಜೀವೇಭ್ಯೋ ಧನಂ ಪ್ರಾಪ್ಯ ಚತುರ್ಧಾ ವಿಭಜೇದ್ಬುಧಃ ।
ಧರ್ಮಾಯಾರ್ಥಾಯ ಕಾಮಾಯ ಆಪತ್ಪ್ರಶಮನಾಯ ಚ ॥೨೧೫॥

ವಿದ್ವಾಂಸನಾದ ಮನುಷ್ಯನು ಜೀವನನಿರ್ವಹಣೆಗಾಗಿ ಅವಲಂಬಿಸಿದ ವೃತ್ತಿಯಿಂದ ಧನವನ್ನು ಸಂಪಾದಿಸಿ ಅದನ್ನು ಧರ್ಮ, ಅರ್ಥ, ಕಾಮ ಮತ್ತು ಆಪತ್ತಿನ ನಿವಾರಣೆ-ಈ ನಾಲ್ಕು ಉದ್ದೇಶಗಳಿಗಾಗಿ ವಿಭಾಗಿಸಬೇಕು.

ಚತುರ್ಷ್ವಪಿ ವಿಭಾಗೇಷು ವಿಧಾನಂ ಶೃಣು ಭಾಮಿನಿ।
ಯಜ್ಞಾರ್ಥಂ ಚಾನ್ನದಾನಾರ್ಥಂ ದೀನಾನುಗ್ರಹಕಾರಣಾತ್ ॥೨೧೬॥
ದೇವಬ್ರಾಹ್ಮಣಪೂಜಾರ್ಥಂ ಪಿತೃಪೂಜಾರ್ಥಮೇವ ಚ।
ಮೂಲಾರ್ಥಂ ಸಂನಿವಾಸಾರ್ಥಂ ಕ್ರಿಯಾನಿತ್ಯೈಶ್ಚ ಧಾರ್ಮಿಕೈಃ।
ಏವಮಾದಿಷು ಚಾನ್ಯೇಷು ಧರ್ಮಾರ್ಥಂ ಸನ್ತ್ಯಜೇದ್ಧನಮ್ ॥೨೧೭॥

ಪಾರ್ವತಿ! ಗಳಿಸಿದ ಧನವನ್ನು ನಾಲ್ಕಾಗಿ ವಿಭಾಗಿಸಿದನಂತರ ವೆಚ್ಚಮಾಡಬೇಕಾದ ವಿಧಾನಗಳನ್ನು ಹೇಳುವೆನು; ಕೇಳು. ಯಜ್ಞಾಚರಣೆ, ದೀನ-ದಲಿತರ ಅನುಗ್ರಹ, ಅನ್ನದಾನ, ದೇವ-ಬ್ರಾಹ್ಮಣರ ಪೂಜೆ, ಪಿತೃಗಳ ಪೂಜೆ, ಮೂಲಧನದ ರಕ್ಷಣೆ, ಅನುದಿನವೂ ಸತ್ಕಾರ್ಯಗಳಲ್ಲಿಯೇ ನಿರತರಾದ ಧಾರ್ಮಿಕರೊಡನೆ ಸಹವಾಸ-ಇವೇ ಮುಂತಾದ ಇತರ ಸತ್ಕರ್ಮಗಳ ಸಲುವಾಗಿ ಧರ್ಮಕ್ಕಾಗಿ ವಿಭಕ್ತವಾಗಿರುವ ಧನವನ್ನು ವೆಚ್ಚಮಾಡಬೇಕು.

ಧರ್ಮಕಾರ್ಯೇ ಧನಂ ದದ್ಯಾದನವೇಕ್ಷ್ಯ ಫಲೋದಯಮ್।
ಐಶ್ವರ್ಯಸ್ಥಾನಲಾಭಾರ್ಥಂ ರಾಜವಾಲ್ಲಭ್ಯಕಾರಣಾತ್ ॥೨೧೮॥

ವಾರ್ತಾಯಾಂ ಚ ಸಮಾರಮ್ಭೇಽಮಾತ್ಯಮಿತ್ರಪರಿಗ್ರಹೇ।
ಆವಾಹೇ ಚ ವಿವಾಹೇ ಚ ಪೂರ್ಣಾನಾಂ ವೃತ್ತಿಕಾರಣಾತ್ ॥೨೧೯॥

ಅರ್ಥೋದಯಸಮಾವಾಪ್ತಾವನರ್ಥಸ್ಯ ವಿಘಾತನೇ।
ಏವಮಾದಿಷು ಚಾನ್ಯೇಷು ಅರ್ಥಾರ್ಥಂ ವಿಸೃಜೇದ್ಧನಮ್ ॥೨೨೦॥

ಫಲಪ್ರಾಪ್ತಿಯ ವಿಚಾರಮಾಡದೇ ಧರ್ಮಕಾರ್ಯಗಳಿಗಾಗಿ ಹಣವನ್ನು ದಾನಮಾಡಬೇಕು. ಐಶ್ವರ್ಯಪೂರ್ಣವಾದ ಸ್ಥಾನದ ಪ್ರಾಪ್ತಿಗಾಗಿ, ರಾಜನ ವಿಶ್ವಾಸವನ್ನು ಗಳಿಸುವ ಸಲುವಾಗಿ, ಕೃಷಿ-ಗೋರಕ್ಷಣೆ ಮತ್ತು ವಾಣಿಜ್ಯಗಳನ್ನು ಆರಂಭಿಸುವ ಸಲುವಾಗಿ, ಅಮಾತ್ಯರನ್ನೂ ಮತ್ತು ಮಿತ್ರರನ್ನೂ ಸಂಗ್ರಹಿಸುವ ಸಲುವಾಗಿ, ಆಮಂತ್ರಣ ಮತ್ತು ವಿವಾಹಗಳ ಸಲುವಾಗಿ, ಬಲಶಾಲಿಗಳ ವೃತ್ತಿಯ ಸಲುವಾಗಿ, ಧನದ ಉತ್ಪತ್ತಿ ಮತ್ತು ಪ್ರಾಪ್ತಿಯ ಸಲುವಾಗಿ, ಅನರ್ಥದ ನಿವಾರಣೆಯ ಸಲುವಾಗಿ ಮತ್ತು ಇತರ ಇದೇ ವಿಧವಾದ ಕಾರ್ಯಗಳಿಗಾಗಿ ಅರ್ಥಪ್ರಾಪ್ತಿಗಾಗಿ ವಿಭಾಗಿಸಿಟ್ಟಿರುವ ಧನವನ್ನು ವ್ಯಯಿಸಬಹುದು.

ಅನುಬನ್ಧಂ ಹೇತುಯುಕ್ತಂ ದೃಷ್ಟ್ವಾ ವಿತ್ತಂ ಪರಿತ್ಯಜೇತ್।
ಅನರ್ಥಂ ಬಾಧತೇ ಹ್ಯರ್ಥೋ ಅರ್ಥಂ ಚೈವ ಫಲಾನ್ವಿತ ॥೨೨೧॥

ಸರಿಯಾದ ಕಾರಣವು ಕಂಡುಬಂದಾಗ ಮಾತ್ರವೇ ಹಣವನ್ನು ವಿನಿಯೋಗಿಸಬೇಕು. ಅರ್ಥವು ಅನರ್ಥವನ್ನು ನಿವಾರಿಸುತ್ತದೆ ಮತ್ತು ಅಭೀಷ್ಟವಾದ ಫಲಗಳನ್ನೂ ಸಿದ್ಧಿಸಿಕೊಡುತ್ತದೆ.

ನಾಧನಾಃ ಪ್ರಾಪ್ನುವನ್ತ್ಯರ್ಥಂ ನರಾ ಯತ್ನಶತೈರಪಿ।
ತಸ್ಮಾದ್ಧನಂ ರಕ್ಷಿತವ್ಯಂ ದಾತವ್ಯಂ ಚ ವಿಧಾನತಃ ॥೨೨೨॥

ನಿರ್ಧನರಾದವರು ನೂರಾರು ಬಾರಿ ಪ್ರಯತ್ನಿಸಿದರೂ ಪ್ರಯೋಜನವನ್ನು ಹೊಂದಲಾರರು. ಆದುದರಿಂದ ಗಳಿಸಿದ ಹಣವನ್ನು ರಕ್ಷಿಸಬೇಕು. ವ್ಯವಸ್ಥಿತವಾಗಿ ದಾನಮಾಡಬೇಕು.

ಶರೀರಪೋಷಣಾರ್ಥಾಯ ಆಹಾರಸ್ಯ ವಿಶೇಷಣೇ।
ಏವಮಾದಿಷು ಚಾನ್ಯೇಷು ಕಾಮಾರ್ಥಂ ವಿಸೃಜೇದ್ಧನಮ್ ॥೨೨೩॥

ಶರೀರಪೋಷಣೆ, ವಿಶಿಷ್ಟವಾದ ಆಹಾರ–ಇವೇ ಮುಂತಾದ ಇತರ ಕಾರ್ಯಗಳಿಗೆ ಕಾಮಾರ್ಥವಾಗಿ ವಿಭಕ್ತವಾದ ಹಣವನ್ನು ವೆಚ್ಚಮಾಡ ಬಹುದು.

ವಿಚಾರ್ಯ ಗುಣದೋಷೌ ತು ತ್ರಯಾಣಾಂ ತತ್ರ ಸಂತ್ಯಜೇತ್।
ಚತುರ್ಥಂ ಸಂನಿದಧ್ಯಾಚ್ಚ ಆಪದರ್ಥಂ ಶುಚಿಸ್ಮಿತೇ ॥೨೨೪॥

ಗುಣ-ದೋಷಗಳನ್ನು ಸಂಪೂರ್ಣವಾಗಿ ವಿಚಾರಮಾಡಿ ಧರ್ಮ, ಅರ್ಥ ಮತ್ತು ಕಾಮಗಳಿಗೆ ಸಂಬಂಧಿಸಿದ ಧನದ ವಿಭಾಗಗಳನ್ನು ಆಯಾಸಂಬಂಧವಾದ ಕಾರ್ಯಗಳಲ್ಲಿ ವಿನಿಯೋಗಿಸಬೇಕು. ನಾಲ್ಕನೆಯ ಭಾಗವನ್ನು ಆಪತ್ಕಾಲಕ್ಕಾಗಿ ಸುರಕ್ಷಿತವಾಗಿಡಬೇಕು.

ರಾಜ್ಯಭ್ರಂಶವಿನಾಶಾರ್ಥಂ ದುರ್ಭಿಕ್ಷಾರ್ಥಂ ಚ ಶೋಭನೇ।
ಮಹಾವ್ಯಾಧಿವಿಮೋಕ್ಷಾರ್ಥಂ ವಾರ್ಧಕ್ಯಸ್ಯೈವ ಕಾರಣಾತ್ ॥೨೨೫॥
ಶತ್ರೂಣಾಂ ಪ್ರತಿಕಾರಾಯ ಸಾಹಸೈಶ್ಚಾಪ್ಯಮರ್ಷಣಾತ್।
ಪ್ರಸ್ಥಾನೇ ಚಾನ್ಯದೇಶಾರ್ಥಮಾಪದಾಂ ವಿಪ್ರಮೋಕ್ಷಣೇ।
ಏವಮಾದಿ ಸಮುದ್ದಿಶ್ಯ ಸಂನಿದಧ್ಯಾತ್ಸ್ವಕಂ ಧನಮ್ ॥೨೨೬॥

ಶೋಭನಳೇ! ರಾಜ್ಯಭ್ರಂಶವನ್ನು (ರಾಜ್ಯದಿಂದ ಗಡೀಪಾರಾಗುವುದನ್ನು) ತಪ್ಪಿಸಿಕೊಳ್ಳುವುದಕ್ಕೂ, ದುರ್ಭಿಕ್ಷದ ನಿವಾರಣೆಗಾಗಿಯೂ, ಮಹಾ ವ್ಯಾಧಿಯನ್ನು ಹೋಗಲಾಡಿಸಿಕೊಳ್ಳುವ ಸಲುವಾಗಿಯೂ, ಮುದಿತನದಲ್ಲಿ ಜೀವನನಿರ್ವಹಣೆಗಾಗಿಯೂ, ಸಾಹಸದಿಂದಲೂ ಮತ್ತು ಅಸಹನೆ

ಯಿಂದಲೂ ಶತ್ರುಗಳಿಗೆ ಪ್ರತೀಕಾರಮಾಡುವ ಸಲುವಾಗಿಯೂ, ವಿದೇಶಯಾತ್ರೆಯನ್ನು ಮಾಡುವ ಸಲುವಾಗಿಯೂ, ಆಕಸ್ಮಿಕವಾಗಿ ಒದಗುವ ಆಪತ್ತುಗಳನ್ನು ನಿವಾರಿಸಿಕೊಳ್ಳುವ ಸಲುವಾಗಿಯೂ–ಇದೇ ವಿಧವಾದ ಇನ್ನೂ ಹಲವಾರು ಉದ್ದೇಶಗಳಿಗಾಗಿ ತನ್ನದೇ ಆದ ಆಪದ್ಧನವನ್ನು ಇಟ್ಟುಕೊಳ್ಳಬೇಕು.

ಸುಖಮರ್ಥವತಾಂ ಲೋಕೇ ಕೃಚ್ಛ್ರಾಣಾಂ ವಿಪ್ರಮೋಕ್ಷಣಮ್।

ಲೋಕದಲ್ಲಿ ಧನವಂತರಿಗೆ ಕಷ್ಟನಿವಾರಣೆಯು ಸುಖವಾಗಿ ಆಗುತ್ತದೆ.

ಧನ್ಯಂ ಯಶಸ್ಯಮಾಯುಷ್ಯಂ ಸ್ವರ್ಗ್ಯಂ ಚ ಪರಮಂ ಯಶಃ।
ತ್ರಿವರ್ಗೋ ಹಿ ವಶೇ ಯುಕ್ತಃ ಸರ್ವೇಷಾಂ ಸಂವಿಧೀಯತೇ।
ತಥಾ ಸಂವರ್ತಮಾನಾಸ್ತು ಲೋಕಯೋರ್ಹಿತಮಾಪ್ನುಯುಃ ॥೨೨೮॥

ಧನವು ಯಶಸ್ಕರವೂ, ಆಯುರ್ವರ್ಧಕವೂ, ಸ್ವರ್ಗಪ್ರಾಪಕವೂ ಆಗಿದೆ. ಅಲ್ಲದೇ ಪರಮಯಶಸ್ಸಿನ ಸ್ವರೂಪವೂ ಆಗಿದೆ. ಧರ್ಮಾರ್ಥ-ಕಾಮಗಳೆಂಬ ತ್ರಿವರ್ಗಗಳನ್ನು ವಶದಲ್ಲಿಟ್ಟುಕೊಂಡರೆ ಆ ತ್ರಿವರ್ಗವು ಎಲ್ಲರಿಗೂ ಹಿತಕಾರಿಯಾಗುತ್ತದೆ. ಧನವನ್ನು ನಾಲ್ಕು ವಿಭಾಗಗಳನ್ನಾಗಿ ಮಾಡಿ ಮೇಲೆ ಹೇಳಿದಂತೆ ವ್ಯವಹರಿಸುವವರು ಇಹ-ಪರಗಳೆರಡರಲ್ಲಿಯೂ ಹಿತವನ್ನು ಸಾಧಿಸಿಕೊಳ್ಳುತ್ತಾರೆ.

ಕಾಲ್ಯೋತ್ಥಾನಂ ಚ ಶೌಚಂ ಚ ದೇವಬ್ರಾಹ್ಮಣಭಕ್ತಿತಃ।
ಗುರೂಣಾಮೇವ ಶುಶ್ರೂಷಾ ಬ್ರಾಹ್ಮಣೇಷ್ವಭಿವಾದನಮ್ ॥೨೨೯॥

ಪ್ರತ್ಯುತ್ಥಾನಂ ಚ ವೃದ್ಧಾನಾಂ ದೇವಸ್ಥಾನಪ್ರಣಾಮನಮ್।
ಆಭಿಮುಖ್ಯಂ ಪುರಸ್ಕೃತ್ಯ ಅತಿಥೀನಾಂ ಚ ಪೂಜನಮ್ ॥೨೩೦॥

ವೃದ್ಧೋಪದೇಶಕರಣಂ ಶ್ರವಣಂ ಹಿತಪಥ್ಯಯೋಃ।
ಪೋಷಣಂ ಭೃತ್ಯವರ್ಗಸ್ಯ ಸಾನ್ತ್ವದಾನಪರಿಗ್ರಹೈಃ ॥೨೩೧॥

ನ್ಯಾಯತಃ ಕರ್ಮಕರಣಮನ್ಯಾಯಾಹಿತವರ್ಜಿತಮ್।
ಸಮ್ಯಗ್ವೃತ್ತಂ ಸ್ವದಾರೇಷು ದೋಷಾಣಾಂ ಪ್ರತಿಷೇಧನಮ್ ॥೨೩೨॥

ಪುತ್ರಾಣಾಂ ವಿನಯಂ ಕುರ್ಯಾತ್ತತ್ತತ್ಕಾರ್ಯನಿಯೋಜನಮ್।
ವರ್ಜನಂ ಚಾಶುಭಾರ್ಥಾನಾಂ ಶುಭಾನಾಂ ಜೋಷಣಂ ತಥಾ ॥೨೩೩॥

ಕುಲೋಚಿತಾನಾಂ ಧರ್ಮಾಣಾಂ ಯಥಾವತ್ಪರಿಪಾಲನಮ್।
ಕುಲಸಂಧಾರಣಂ ಚೈವ ಪೌರುಷೇಣೈವ ಸರ್ವಶಃ।
ಏವಮಾದಿ ಶುಭಂ ಸರ್ವಂ ತಸ್ಯ ವೃತ್ತಮಿತಿ ಸ್ಥಿತಮ್ ॥೨೩೪॥

ಪ್ರಾತಃಕಾಲದಲ್ಲಿ ಏಳುವುದು; ಶೌಚ-ಸ್ನಾನಾದಿಗಳಿಂದ ಶುದ್ಧನಾಗುವುದು; ದೇವ-ಬ್ರಾಹ್ಮಣರ ವಿಷಯದಲ್ಲಿ ಭಕ್ತಿಭಾವದಿಂದಿರುವುದು; ಗುರುಜನರ ಸೇವೆ; ಬ್ರಾಹ್ಮಣರಿಗೆ ಅಭಿವಾದನಮಾಡುವುದು; ವೃದ್ಧರು ಬಂದರೆ ಮೇಲೆದ್ದುನಿಂತು ಅವರನ್ನು ಸ್ವಾಗತಿಸುವುದು; ದೇವತಾಮಂದಿರಗಳಿಗೆ ಹೋಗಿ ನಮಸ್ಕರಿಸುವುದು; ಅತಿಥಿಗಳನ್ನು ಎದುರ್ಗೊಂಡು ಯಥೋಚಿತವಾಗಿ ಸತ್ಕರಿಸುವುದು; ವೃದ್ಧರಿಂದ ಉಪದೇಶವನ್ನು ಪಡೆದು ಅದರಂತೆ ಆಚರಿಸುವುದು; ವೃದ್ಧರ ಹಿತಕರವೂ ಪಥ್ಯವೂ ಆದ ಮಾತುಗಳನ್ನು ಕೇಳುವುದು; ಸಾಂತ್ವನದಿಂದಲೂ ಇಷ್ಟವಾದ ವಸ್ತುಗಳ ಪ್ರದಾನದಿಂದಲೂ ಸೇವಕರನ್ನು ಪಾಲಿಸಿ ಪೋಷಿಸುವುದು; ನ್ಯಾಯಯುಕ್ತವಾದ ಕರ್ಮಗಳನ್ನು ಮಾಡುವುದು ಅನ್ಯಾಯವೂ ಅಹಿತಕರವೂ ಆದ ಕರ್ಮಗಳನ್ನು ತ್ಯಜಿಸುವುದು; ತನ್ನ ಪತ್ನಿಯರಲ್ಲಿ ಒಳ್ಳೆಯ ವ್ಯವಹಾರವನ್ನಿಟ್ಟುಕೊಳ್ಳುವುದು (ಪತ್ನಿಯರೊಡನೆ ಚೆನ್ನಾಗಿ ನಡೆದುಕೊಳ್ಳುವುದು); ದೋಷಗಳನ್ನು ನಿವಾರಿಸಿಕೊಳ್ಳುವುದು; ಸನ್ಮಾರ್ಗದಲ್ಲಿ ನಡೆಯುವಂತೆ ಮಕ್ಕಳಿಗೆ ಶಿಕ್ಷಣವನ್ನು ಕೊಡುವುದು; ಅವರನ್ನು ಭಿನ್ನಭಿನ್ನವಾದ ಅವಶ್ಯಕಕಾರ್ಯಗಳಲ್ಲಿ ನಿಯಮಿಸುವುದು; ಅನ್ಯಾಯಮಾರ್ಗದಲ್ಲಿ ಬರುವ ಅರ್ಥಗಳನ್ನು ಪರಿತ್ಯಾಗಮಾಡುವುದು; ನ್ಯಾಯೋಚಿತವಾದ ಮಾರ್ಗದಲ್ಲಿ ಪಡೆದ ಧನವನ್ನು ಉಪಭೋಗಿಸುವುದು; ಕುಲೋಚಿತವಾದ ಧರ್ಮಗಳನ್ನು ಯಥಾವತ್ತಾಗಿ ಪರಿಪಾಲಿಸುವುದು; ಪೌರುಷದಿಂದಲೇ ಕುಲವನ್ನು ರಕ್ಷಿಸುವುದು–ಇವೇ ಮುಂತಾದುವು ಶುಭಪ್ರದವಾದ ವ್ಯವಹಾರಗಳೆಂದೇ ಹೇಳಲ್ಪಟ್ಟಿವೆ.

ವೃದ್ಧಸೇವೀ ಭವೇನ್ನಿತ್ಯಂ ಹಿತಾರ್ಥಂ ಜ್ಞಾನಕಾಂಕ್ಷಯಾ।
ಪರಾರ್ಥಂ ನಾಹರೇದ್ದ್ರವ್ಯಮಾನಾಮನ್ತ್ರ್ಯತು ಸರ್ವದಾ ॥೨೩೫॥

ಅನುದಿನವೂ ತನ್ನ ಹಿತಕ್ಕಾಗಿಯೂ ಮತ್ತು ಜ್ಞಾನವೃದ್ಧಿಗಾಗಿಯೂ ವೃದ್ಧರನ್ನು ಸೇವಿಸಬೇಕು. ಇತರರ ವಸ್ತುಗಳನ್ನಾಗಲೀ ದ್ರವ್ಯವನ್ನಾಗಲೀ ಹೇಳದೇ ಕೇಳದೇ ತೆಗೆದುಕೊಳ್ಳಬಾರದು.

ನ ಯಾಚೇತ ಪರಾನ್ಧೀರಃ ಸ್ವಬಾಹುಬಲಮಾಶ್ರಯೇತ್ ।
ಸ್ವಶರೀರಂ ಸದಾ ರಕ್ಷೇದಾಹಾರಾಚಾರಯೋರಪಿ ।
ಹಿತಂ ಪಥ್ಯಂ ಸದಾಹಾರಂ ಜೀರ್ಣಂ ಭುಞ್ಜೀತ ಮಾತ್ರಯಾ ॥೨೩೮॥

ಧೀರನಾದ ಮನುಷ್ಯನು ಇತರರನ್ನು ಯಾಚಿಸಬಾರದು. ತನ್ನ ಬಾಹುಬಲದಲ್ಲಿಯೇ ವಿಶ್ವಾಸವನ್ನಿಡಬೇಕು. ಆಹಾರ ಮತ್ತು ಆಚಾರ-ವ್ಯವಹಾರಗಳಿಂದಲೂ ತನ್ನ ಶರೀರವನ್ನು ರಕ್ಷಿಸಿಕೊಳ್ಳಬೇಕು. ಹಿತವೂ, ಆರೋಗ್ಯಕವೂ, ಜೀರ್ಣಕಾರಿಯೂ ಆದ ಆಹಾರವನ್ನು ಮಿತವಾಗಿ ಎಷ್ಟು ಬೇಕೋ ಅಷ್ಟನ್ನು ಭುಂಜಿಸಬೇಕು.

ದೇವತಾತಿಥಿಸತ್ಕಾರಂ ಕೃತ್ವಾ ಸರ್ವಂ ಯಥಾವಿಧಿ।
ಶೇಷಂ ಭುಞ್ಜೀಚ್ಛುಚಿರ್ಭೂತ್ವಾ ನ ಚ ಭಾಷೇತ ವಿಪ್ರಿಯಮ್ ॥

ದೇವತೆಗಳ ಆರಾಧನೆಯನ್ನೂ ಅತಿಥಿಗಳಿಗೆ ಸತ್ಕಾರವನ್ನೂ ಯಥಾವಿಧಿಯಾಗಿ ಮಾಡಿ ಉಳಿದುದನ್ನು ಪರಿಶುದ್ಧನಾಗಿ ತಿನ್ನಬೇಕು. ಯಾರೊಡನೆಯೂ ಅಪ್ರಿಯವಾದ ಮಾತುಗಳನ್ನಾಡಬಾರದು.

ಪ್ರತಿಶ್ರಯಂ ಚ ಪಾನೀಯಂ ಬಲಿಂ ಭಿಕ್ಷಾಂ ಚ ಸರ್ವತಃ।
ಗೃಹಸ್ಥವಾಸೀ ವ್ರತವಾನ್ದದ್ಯಾದ್ಗಾಶ್ಚೈವ ಪೋಷಯೇತ್ ॥೨೩೯॥

ಗೃಹಸ್ಥನಾದ ಪುರುಷನು ಧರ್ಮಪಾಲನೆಯ ವ್ರತವನ್ನು ಕೈಗೊಂಡು ಅತಿಥಿಗೆ ಉಳಿದುಕೊಳ್ಳಲು ಸ್ಥಳವನ್ನೂ, ನೀರನ್ನೂ, ಉಪಹಾರವನ್ನೂ, ಭಿಕ್ಷೆಯನ್ನೂ ನೀಡಬೇಕು. ಗೋವುಗಳ ಪಾಲನೆ-ಪೋಷಣೆಗಳನ್ನು ಮಾಡಬೇಕು.

ಬಹಿರ್ನಿಷ್ಕ್ರಮಣಂ ಚೈವ ಕುರ್ಯಾತ್ಕಾರಣತೋಽಪಿ ವಾ।
ಮಧ್ಯಾಹ್ನೇ ವಾರ್ಧರಾತ್ರೇ ವಾ ಗಮನಂ ನೈವ ರೋಚಯೇತ್ ॥

ಯಾವುದಾದರೂ ವಿಶೇಷಕಾರಣದಿಂದ ಪರಸ್ಥಳಕ್ಕೆ ಪ್ರಯಾಣವನ್ನು ಮಾಡಬೇಕಾಗಬಹುದು. ಆದರೆ ಮಧ್ಯಾಹ್ನದ ವೇಳೆಯಲ್ಲಾಗಲೀ ಅರ್ಧರಾತ್ರಿಯಲ್ಲಾಗಲೀ ಹೊರಕ್ಕೆ ಹೊರಡಲು ಇಚ್ಛಿಸಬಾರದು.

ವಿಷಯಾನ್ನಾವಗಾಹೇತ ಸ್ವಶಕ್ತ್ಯಾ ತು ಸಮಾಚರೇತ್।
ಯಥಾಯವ್ಯಯತಾ ಲೋಕೇ ಗೃಹಸ್ಥಾನಾಂ ಪ್ರಪೂಜಿತಾ ॥೨೪೦॥

ವಿಷಯಸುಖಗಳಲ್ಲಿ ಮುಳುಗಬಾರದು. ತನ್ನ ಶಕ್ತಿಗೆ ಅನುಸಾರವಾಗಿ ಧರ್ಮಾಚರಣೆಯನ್ನು ಮಾಡಬೇಕು. ಆದಾಯಕ್ಕೆ ಅನುಗುಣವಾಗಿ ವೆಚ್ಚಮಾಡುವ ಗೃಹಸ್ಥರನ್ನು ಲೋಕವು ಪ್ರಶಂಸಿಸುತ್ತದೆ.

ಅಯಶಸ್ಕರಮರ್ಥಘ್ನಂ ಕರ್ಮ ಯತ್ಪರಪೀಡನಮ್।
ಭಯಾದ್ವಾ ಯದಿ ವಾ ಲೋಭಾನ್ನ ಕುರ್ವೀತ ಕದಾಚನ ॥೨೪೧॥

ಭಯದಿಂದಾಗಲೀ, ಲೋಭದಿಂದಾಗಲೀ–ಯಶಸ್ಸು ಮತ್ತು ಅರ್ಥಗಳ ನಾಶಕವಾದ ಮತ್ತು ಇತರರಿಗೆ ಪೀಡೆಯನ್ನುಂಟುಮಾಡುವ ಕೆಲಸವನ್ನು ಮಾಡಬಾರದು.

ಬುದ್ಧಿಪೂರ್ವಂ ಸಮಾಲೋಕ್ಯ ದೂರತೋ ಗುಣದೋಷತಃ।
ಆರಭೇತ ತದಾ ಕರ್ಮ ಶುಭಂ ವಾ ಯದಿ ವೇತರತ್ ॥೨೪೨॥

ಯಾವುದೇ ಕಾರ್ಯವನ್ನಾದರೂ–ಆ ಕಾರ್ಯದಲ್ಲಿರುವ ಗುಣ-ದೋಷಗಳನ್ನು ಬುದ್ಧಿಪೂರ್ವಕವಾಗಿ ವಿಚಾರಮಾಡಿ–ಆ ಕರ್ಮವು ಶುಭವೂ ಲಾಭದಾಯಕವೂ ಆಗಿದೆಯೆಂಬುದು ನಿಶ್ಚಿತವಾದರೆ–ಅದನ್ನು ಆರಂಭಿಸಬೇಕು. ದುಷ್ಟಕರ್ಮವೆಂದು ತಿಳಿದುಬಂದಲ್ಲಿ ಆರಂಭಿಸಬಾರದು.

ಆತ್ಮಸಾಕ್ಷೀ ಭವೇನ್ನಿತ್ಯಮಾತ್ಮನಸ್ತು ಶುಭಾಶುಭೇ।
ಮನಸಾ ಕರ್ಮಣಾ ವಾಚಾ ನ ಚ ಕಾಂಕ್ಷೇತ ಪಾತಕಮ್ ॥೨೪೩॥

ಶುಭಾಶುಭಕರ್ಮಗಳ ವಿಷಯದಲ್ಲಿ ತನ್ನ ಮನಸ್ಸಿಗೆ ತಾನೇ ಸಾಕ್ಷಿಯಾಗಬೇಕು. ಮನಸ್ಸಿನಿಂದಾಗಲೀ, ಮಾತಿನಿಂದಾಗಲೀ, ಕರ್ಮದಿಂದಾಗಲೀ ಪಾಪಮಾಡಲು ಇಚ್ಛಿಸಬಾರದು."

ನಾನಾಬಗೆಯ ಕರ್ಮಫಲಗಳ ವರ್ಣನೆ

ಉಮೆಯು ಹೇಳುತ್ತಾಳೆ:

ಸುರಾಸುರಪತೇ ದೇವ ವರದ ಪ್ರೀತಿವರ್ಧನ।
ಮಾನುಷೇಷ್ವೇವ ಯೇ ಕೇಚಿದಾಢ್ಯಾಃ ಕ್ಲೇಶವಿವರ್ಜಿತಾಃ ॥೨೪೪॥
ಭುಞ್ಜಾನಾ ವಿವಿಧಾನ್ಭೋಗಾನ್ದೃಶ್ಯನ್ತೇ ನಿರುಪದ್ರವಾಃ।
ಅಪರೇ ಕ್ಲೇಶಸಂಯುಕ್ತಾ ದರಿದ್ರಾ ಭೋಗವರ್ಜಿತಾಃ ॥೨೪೫॥

ಕಿಮರ್ಥಂ ಮಾನುಷೇ ಲೋಕೇ ನ ಸಮತ್ವೇನ ಕಲ್ಪಿತಾಃ।
ಏತಚ್ಛ್ರೋತುಂ ಮಹಾದೇವ ಕೌತೂಹಲಮತೀವ ಮೇ ॥೨೪೬॥

"ಸುರಾಸುರಪತಿಯೇ! ದೇವನೇ! ವರದನೇ! ಪ್ರೀತಿವರ್ಧನನೇ! ಪರಮೇಶ್ವರ! ಮನುಷ್ಯಲೋಕದಲ್ಲಿ ಕೆಲವರು ಯಾವ ವಿಧವಾದ ಕ್ಲೇಶವೂ ಇಲ್ಲದವರಾಗಿ, ವಿಧ-ವಿಧವಾದ ಭೋಗಗಳನ್ನು ಅನುಭವಿಸುತ್ತಾ ಯಾವ ಉಪದ್ರವಗಳೂ ಇಲ್ಲದೇ ಸಂತೋಷಭರಿತರಾಗಿ ಇರುವುದು ಕಂಡುಬರುತ್ತದೆ. ಮತ್ತೆ ಕೆಲವರು ಸರ್ವದಾ ಕ್ಲೇಶಗಳನ್ನು ಅನುಭವಿಸುತ್ತಾ ದರಿದ್ರರಾಗಿ ಸುಖೋಪಭೋಗಗಳಿಂದ ವಂಚಿತರಾಗಿರುವುದು ಕಂಡುಬರುತ್ತದೆ. ಯಾವ ಕಾರಣದಿಂದ ಮನುಷ್ಯಲೋಕದಲ್ಲಿ ಎಲ್ಲರೂ ಒಂದೇ ರೀತಿಯಲ್ಲಿರುವುದಿಲ್ಲ? ಒಬ್ಬೊಬ್ಬರಿಗೂ ಇಷ್ಟು ವ್ಯತ್ಯಾಸಗಳು ಏಕಿವೆ? ಮಹಾದೇವ! ಈ ವಿಷಯವನ್ನು ಕೇಳಲು ನನಗೆ ಹೆಚ್ಚಿನ ಕುತೂಹಲವುಂಟಾಗಿದೆ."

ಮಹೇಶ್ವರನು ಹೇಳುತ್ತಾನೆ:

ಯಾದೃಶಂ ಕುರುತೇ ಕರ್ಮ ತಾದೃಶಂ ಫಲಮಶ್ನುತೇ।
ಸ್ವಕೃತಸ್ಯ ಫಲಂ ಭುಙ್ಕ್ತೇ ನಾನ್ಯಸ್ತದ್ಭೋಕ್ತುಮರ್ಹತಿ ॥೨೪೭॥

"ದೇವಿ! ಜೀವನು ಯಾವ ವಿಧವಾದ ಕರ್ಮವನ್ನು ಮಾಡುವನೋ ಅದಕ್ಕೆ ಅನುಗುಣವಾದ ಫಲವನ್ನೇ ಉಪಭೋಗಿಸುತ್ತಾನೆ. ತಾನು ಮಾಡಿದ ಕರ್ಮದ ಫಲವನ್ನು ತಾನೇ ಅನುಭವಿಸಬೇಕೇ ಹೊರತು ಒಬ್ಬನ ಕರ್ಮಫಲವನ್ನು ಮತ್ತೊಬ್ಬನು ಉಪಭೋಗಿಸಲು ಸಾಧ್ಯವಿಲ್ಲ.

ಅಪರೇ ಧರ್ಮಕಾಮೇಭ್ಯೋ ನಿವೃತ್ತಾಶ್ಚ ಶುಭೇಕ್ಷಣೇ।
ಕದರ್ಯಾ ನಿರನುಕ್ರೋಶಾಃ ಪ್ರಾಯೇಣಾತ್ಮಪರಾಯಣಾಃ ॥೨೪೮॥
ತಾದೃಶಾ ಮರಣಂ ಪ್ರಾಪ್ತಾಃ ಪುನರ್ಜನ್ಮನಿ ಶೋಭನೇ।
ದರಿದ್ರಾಃ ಕ್ಲೇಶಭೂಯಿಷ್ಠಾ ಭವನ್ತ್ಯೇವ ನ ಸಂಶಯಃ ॥೨೪೯॥

ಯಾರು ಧರ್ಮ-ಕಾಮಗಳಿಂದ ನಿವೃತ್ತರಾಗಿರುವರೋ, ಲೋಭಿಗಳೋ, ಕ್ರೂರಿಗಳೋ, ಸಾಮಾನ್ಯವಾಗಿ ತಮ್ಮ ಶರೀರಪೋಷಣೆಯಲ್ಲಿಯೇ ಆಸಕ್ತರಾಗಿರುವರೋ (ಸ್ವಾರ್ಥಿಗಳೋ)–ಅಂತಹವರು ಮರಣಾನಂತರ

ಮರುಹುಟ್ಟಿನಲ್ಲಿ ದರಿದ್ರರೂ-ಹೆಚ್ಚು ಕ್ಲೇಶಯುಕ್ತರೂ ಆಗಿ ಹುಟ್ಟುತ್ತಾರೆ. ಇದರಲ್ಲಿ ಸಂಶಯವೇ ಇಲ್ಲ."

ಉಮೆಯು ಹೇಳುತ್ತಾಳೆ:

ಮಾನುಷೇಷ್ವಥ ಯೇ ಕೇಚಿದ್ಧನಧಾನ್ಯಸಮನ್ವಿತಾಃ।
ಭೋಗಹೀನಾಃ ಪ್ರದೃಶ್ಯನ್ತೇ ಸರ್ವಭೋಗೇಷು ಸತ್ಸ್ವಪಿ।
ನ ಭುಞ್ಜತೇ ಕಿಮರ್ಥಂ ತೇ ತನ್ಮೇ ಶಂಸಿತುಮರ್ಹಸಿ ॥೨೫೦॥

"ಮಹಾದೇವನೇ! ಮನುಷ್ಯರಲ್ಲಿ ಮತ್ತೆ ಕೆಲವರು ಧನ-ಧಾನ್ಯಗಳಿಂದ ಸಂಪನ್ನರಾಗಿದ್ದರೂ ಸಮಸ್ತವಾದ ಭೋಗಸಾಮಗ್ರಿಗಳನ್ನು ಹೊಂದಿದ್ದರೂ ಭೋಗಹೀನರಾಗಿರುತ್ತಾರೆ. ಅವರಲ್ಲಿರುವ ಯಾವ ಭೋಗ್ಯವಸ್ತುಗಳನ್ನೂ ಅವರೇಕೆ ಉಪಭೋಗಿಸುವುದಿಲ್ಲ? ಈ ವಿಷಯವನ್ನು ಹೇಳುವ ಕೃಪೆಮಾಡು."

ಪರಮೇಶ್ವರನು ಹೇಳುತ್ತಾನೆ:

ಪರೈಃ ಸಂಚೋದಿತಾ ಧರ್ಮಂ ಕುರ್ವತೇ ನ ಸ್ವಕಾಮತಃ।
ಧರ್ಮಶ್ರದ್ಧಾಂ ಬಹಿಷ್ಕೃತ್ಯ ಕುರ್ವನ್ತಿ ಚ ರುದನ್ತಿ ಚ ॥೨೫೧॥
ತಾದೃಶಾ ಮರಣಂ ಪ್ರಾಪ್ತಾಃ ಪುನರ್ಜನ್ಮನಿ ಶೋಭನೇ।
ಫಲಾನಿ ತಾನಿ ಸಮ್ಪ್ರಾಪ್ಯ ಭುಞ್ಜತೇ ನ ಕದಾಚನ ।
ರಕ್ಷನ್ತೋ ವರ್ಧಯನ್ತಶ್ಚ ಆಸತೇ ನಿಧಿಪಾಲವತ್ ॥೨೫೨॥

"ತನಗೆ ಇಷ್ಟವಿಲ್ಲದಿದ್ದರೂ ಯಾರು ಬೇರೆಯವರಿಂದ ಪ್ರೇರಿತರಾಗಿ ಧರ್ಮಶ್ರದ್ಧೆಯಿಲ್ಲದೇ ಧರ್ಮಕಾರ್ಯಗಳನ್ನು ಮಾಡುವರೋ, ಮಾಡಿದ ನಂತರ ದ್ರವ್ಯವು ವ್ಯಯವಾದುದಕ್ಕಾಗಿ ಅಳುವರೋ (ಪಶ್ಚಾತ್ತಾಪ ಪಡುವರೋ)–ಅಂತಹವರು ಮರಣಹೊಂದಿದನಂತರ ಪುನರ್ಜನ್ಮವನ್ನು ಪಡೆದು ಕಳೆದ ಜನ್ಮದಲ್ಲಿ ಮಾಡಿದ ಧರ್ಮಕಾರ್ಯಗಳಿಗೆ ಅನುಗುಣವಾಗಿ ಭೋಗಸಂಪತ್ತಿಗಳನ್ನೇನೋ ಪಡೆದುಕೊಳ್ಳುತ್ತಾರೆ. ಆದರೆ ಅದನ್ನು ಉಪಭೋಗಿಸಲು ಅವರಿಂದ ಸಾಧ್ಯವಾಗುವುದಿಲ್ಲ. ನಿಧಿಯನ್ನು ರಕ್ಷಿಸುವ ಅಧಿಕಾರಿಯಂತೆ ಅವರು ಐಶ್ವರ್ಯವನ್ನು ರಕ್ಷಿಸುತ್ತಲೂ ಅಭಿವೃದ್ಧಿ ಪಡಿಸುತ್ತಲೂ ಇರುತ್ತಾರೆ".

ಉಮೆಯು ಹೇಳುತ್ತಾಳೆ:

ಕೇಚಿದ್ಧನವಿಯುಕ್ತಾಶ್ಚ ಭೋಗಯುಕ್ತಾ ಮಹೇಶ್ವರ।
ಮಾನುಷಾಃ ಸಮ್ಪ್ರದೃಶ್ಯನ್ತೇ ತನ್ಮೇ ಶಂಸಿತುಮರ್ಹಸಿ ॥೨೫೩॥

"ಮಹೇಶ್ವರ! ಕೆಲವರು ಧನಹೀನರಾಗಿದ್ದರೂ ಭೋಗಯುಕ್ತ ರಾಗಿರುತ್ತಾರೆ. ಸುಖೋಪಭೋಗಗಳನ್ನು ಅನುಭವಿಸುತ್ತಿರುವುದೂ ಕಂಡುಬರುತ್ತದೆ. ಇದಕ್ಕೆ ಕಾರಣವೇನು? ಈ ವಿಷಯವನ್ನು ಹೇಳುವ ಕೃಪೆಮಾಡು".

ಮಹೇಶ್ವರನು ಹೇಳುತ್ತಾನೆ:

ನಿತ್ಯಂ ಯೇ ದಾತುಮನಸೋ ನರಾ ವಿತ್ತೇಷ್ವಸತ್ಸ್ವಪಿ।
ಕಾಲಧರ್ಮವಶಂ ಪ್ರಾಪ್ತಾಃ ಪುನರ್ಜನ್ಮನಿ ತೇ ನರಾಃ।
ಏತೇ ಧನವಿಹೀನಾಶ್ಚ ಭೋಗಯುಕ್ತಾ ಭವನ್ತ್ಯುತ ॥೨೫೪॥

"ಕೆಲವು ಜನರಿಗೆ ಐಶ್ವರ್ಯವಿರದಿದ್ದರೂ ಯಾವಾಗಲೂ ದಾನಕೊಡುವ ಮನಸ್ಸಿರುತ್ತದೆ. ಅಂತಹವರು ಮರಣಹೊಂದಿದನಂತರ ಪುನರ್ಜನ್ಮದಲ್ಲಿ ಧನಹೀನರಾಗಿದ್ದರೂ ಹಿಂದಿನಜನ್ಮದಲ್ಲಿ ದಾನಕೊಡುವ ಮನಸ್ಸಿದ್ದುದರ ಪರಿಣಾಮವಾಗಿ ಭೋಗಜೀವನವನ್ನು ನಡೆಸುತ್ತಾರೆ.

ಧರ್ಮದಾನೋಪದೇಶಂ ವಾ ಕರ್ತವ್ಯಮಿತಿ ನಿಶ್ಚಯಃ।
ಇತಿ ತೇ ಕಥಿತಂ ದೇವಿ ಕಿಂ ಭೂಯಃ ಶ್ರೋತುಮಿಚ್ಛಸಿ ॥೨೫೫॥

ಆದುದರಿಂದ ದಾನ-ಧರ್ಮಗಳ ಉಪದೇಶವನ್ನಾದರೂ ಮಾಡಬೇಕು. ಇದು ವಿದ್ವಾಂಸರ ನಿಶ್ಚಯವಾಗಿದೆ. ದೇವಿ! ನೀನು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ್ದೇನೆ. ಮುಂದೇನು ಕೇಳಲಿರುವೆ?"

ಪಾರ್ವತಿಯು ಹೇಳುತ್ತಾಳೆ:

ಭಗವನ್ದೇವದೇವೇಶ ತ್ರಿಯಕ್ಷ ವೃಷಭಧ್ವಜ।
ಮಾನುಷಾಸ್ತ್ರಿವಿಧಾ ದೇವ ದೃಶ್ಯನ್ತೇ ಸತತಂ ವಿಭೋ ॥೨೫೬॥

"ಪೂಜ್ಯನೇ! ದೇವತೆಗಳಿಗೂ ಈಶನಾದವನೇ! ಮುಕ್ಕಣ್ಣನೇ! ವೃಷಭಧ್ವಜನೇ! ವಿಭುವೇ! ಮಹಾದೇವ! ಪ್ರಪಂಚದಲ್ಲಿ ಮೂರುಬಗೆಯ ಮನುಷ್ಯರಿರುವುದು ಕಂಡುಬರುತ್ತದೆ.

ಆಸೀನಾ ಏವ ಭುಞ್ಜನ್ತೇ ಸ್ಥಾನೈಶ್ವರ್ಯಪರಿಗ್ರಹೈಃ।
ಅಪರೇ ಯತ್ನಪೂರ್ವಂ ತು ಲಭನ್ತೇ ಭೋಗಸಂಗ್ರಹಮ್ ॥೨೫೭॥

ಅಪರೇ ಯತಮಾನಾಶ್ಚ ನ ಲಭನ್ತೇ ತು ಕಿಂಚನ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೨೫೮॥

ಕೆಲವರು ಕುಳಿತಿರುವೆಡೆಯಲ್ಲಿಯೇ (ಯಾವ ಕಾರ್ಯವನ್ನೂ ಮಾಡದೇ) ಸ್ಥಾನ, ಐಶ್ವರ್ಯ, ಭೋಗವಸ್ತುಗಳ ಸಂಗ್ರಹ–ಇವೆಲ್ಲವನ್ನೂ ಗಳಿಸಿಕೊಂಡು ಸುಖೋಪಭೋಗಿಗಳಾಗಿರುತ್ತಾರೆ. ಕೆಲವರು ಪ್ರಯತ್ನ ಪೂರ್ವಕವಾಗಿ ಕಷ್ಟಪಟ್ಟು ಕೆಲಸಮಾಡಿ ಭೋಗಸಾಮಗ್ರಿಗಳನ್ನು ಸಂಗ್ರಹಿಸಿ ಕೊಂಡು ಉಪಭೋಗಿಸುತ್ತಾರೆ. ಕೆಲವರು ಎಷ್ಟೇ ಪ್ರಯತ್ನಪಟ್ಟರೂ- ಎಷ್ಟೇ ಕಾರ್ಯಮಾಡಿದರೂ ಏನನ್ನೂ ಪಡೆಯುವುದಿಲ್ಲ. ದರಿದ್ರರಾಗಿಯೇ ಉಳಿದಿರುತ್ತಾರೆ. ಯಾವ ಕರ್ಮವಿಪಾಕದಿಂದ ಹೀಗಾಗುತ್ತದೆ? ದಯಮಾಡಿ ಹೇಳು."

ಮಹೇಶ್ವರನು ಹೇಳುತ್ತಾನೆ:

"ಮಹಾಭಾಗ್ಯಳೇ! ನ್ಯಾಯವಾದುದನ್ನೇ ನೀನು ಕೇಳಿರುವೆ. ಇದರ ಕಾರಣವನ್ನು ಯಥವತ್ತಾಗಿ ಹೇಳುವೆನು; ಕೇಳು:

ಯೇ ಲೋಕೇ ಮಾನುಷಾ ದೇವಿ ದಾನಧರ್ಮಪರಾಯಣಾಃ ॥೨೫೯॥

ಪಾತ್ರಾಣಿ ವಿಧಿವಜ್ಜ್ಞಾತ್ವಾ ದೂರತೋಽಪ್ಯನುಮಾನತಃ।
ಅಭಿಗಮ್ಯ ಸ್ವಯಂ ತತ್ರ ಗ್ರಾಹಯನ್ತಿ ಪ್ರಸಾದ್ಯ ಚ ॥೨೬೦॥

ದಾನಾದಿ ಚೇಜ್ಜೈತೈರೇವ ತೈರವಿಜ್ಞಾತಮೇವ ವಾ।
ಪುನರ್ಜನ್ಮನಿ ತೇ ದೇವಿ ತಾದೃಶಾಃ ಶೋಭನಾ ನರಾಃ ॥೨೬೧॥

ಅಯತ್ನತಸ್ತು ತಾನ್ಯೇವ ಫಲಾನಿ ಪ್ರಾಪ್ನುವನ್ತ್ಯುತ।
ಆಸೀನಾ ಏವ ಭುಞ್ಜನ್ತೇ ಭೋಗಾನ್ಸುಕೃತಭೋಗಿನಃ ॥೨೬೨॥

ದೇವಿ! ಈ ಲೋಕದಲ್ಲಿ ಯಾರು ದಾನಧರ್ಮಪರಾಯಣ ರಾಗಿರುವರೋ–ಅವರು ಸತ್ಪಾತ್ರರು ಯಾರೆಂಬುದನ್ನು ವಿಧಿವತ್ತಾಗಿ ತಿಳಿದುಕೊಂಡು ಅಂತಹ ಸತ್ಪಾತ್ರರು ಎಷ್ಟೇ ದೂರದಲ್ಲಿದ್ದರೂ ಅನುಮಾನ

ಪ್ರಮಾಣಗಳಿಂದ ಸತ್ಪಾತ್ರರನ್ನು ತಿಳಿದು-ತಾವೇ ಸ್ವತಃ ಸತ್ಪುರುಷರ ಬಳಿಗೆ ಹೋಗಿ ಅವರನ್ನು ಪ್ರಸನ್ನಗೊಳಿಸಿ ತಾವು ಕೊಡಲಿಚ್ಛಿಸಿದ ದಾನವನ್ನು ಅವರು ಸ್ವೀಕರಿಸುವಂತೆ ಮಾಡುವರೋ, ಸತ್ಪಾತ್ರನಿಗೆ ಮುಂದಾಗಿ ತಿಳಿಸದೆಯೇ ಅವನ ಮನಸ್ಸಿನಲ್ಲಿರುವುದನ್ನು ತಿಳಿದು ದಾನಮಾಡುವರೋ–ಅಂತಹ ಪುಣ್ಯಪುರುಷರು ಪುನರ್ಜನ್ಮದಲ್ಲಿ ಹಾಗೆ ದಾನಕೊಟ್ಟುದರ ಫಲವಾಗಿ ಯಾವ ಪ್ರಯತ್ನವೂ ಇಲ್ಲದೇ ಕುಳಿತಿದ್ದ ಸ್ಥಳದಲ್ಲಿಯೇ ಬೇಕು ಬೇಕಾದುದೆಲ್ಲವನ್ನೂ ಪಡೆದುಕೊಂಡು ಉಪಭೋಗಿಸುತ್ತಾರೆ.

ಅಪರೇ ಯೇ ಚ ದಾನಾನಿ ದದತ್ಯೇವ ಪ್ರಯಾಚಿತಾಃ।
ಯದಾ ಯದಾರ್ಥಿನೇ ದತ್ತ್ವಾ ಪುನರ್ದಾನಂ ಚ ಯಾಚಿತಾಃ ॥೨೬೩॥
ತಾವತ್ಕಾಲಂ ತತೋ ದೇವಿ ಪುನರ್ಜನ್ಮನಿ ತೇ ನರಾಃ।
ಯತ್ನತಃ ಶ್ರಮಸಂಯುಕ್ತಾಃ ಪುನಸ್ತಾನ್ಪ್ರಾಪ್ನುವನ್ತಿ ಚ ॥೨೬೪॥

ಬೇರೆ ಕೆಲವರು ಯಾಚಕರು ದಾನವನ್ನು ಕೇಳಿದರೆ ಮಾತ್ರ ಕೊಡುತ್ತಾರೆ. ದೀನರು ಯಾಚಿಸುತ್ತಲೇ ಇರಬೇಕು. ಹಾಗೆ ಯಾಚಿಸಿದಾಗ ಮಾತ್ರ ಕೊಡುವವರೂ ಕೆಲವರಿದ್ದಾರೆ. ಅಂತಹವರು ಪುನರ್ಜನ್ಮದಲ್ಲಿ ಅದರ ಫಲವನ್ನು ಪಡೆದುಕೊಳ್ಳಲು ಪ್ರಯತ್ನಪೂರ್ವಕವಾಗಿ ಶ್ರಮಿಸುತ್ತಲೇ ಇರಬೇಕು. ಆಗ ಮಾತ್ರ ಅವರಿಗೆ ಹಿಂದಿನ ಜನ್ಮದಲ್ಲಿ ಮಾಡಿದ ದಾನಫಲವು ಸಿಕ್ಕುತ್ತದೆ.

ಯಾಚಿತಾ ಅಪಿ ಕೇಚಿತ್ತು ನ ದದತ್ಯೇವ ಕಿಂಚನ।
ಅಭ್ಯಸೂಯಾಪರಾ ಮರ್ತ್ಯಾ ಲೋಭೋಪಹತಚೇತಸಃ ॥೨೬೫॥
ತೇ ಪುನರ್ಜನ್ಮನಿ ಶುಭೇ ಯತನ್ತೋ ಬಹುಧಾ ನರಾಃ।
ನ ಪ್ರಾಪ್ನುವನ್ತಿ ಮನುಜಾ ಮಾರ್ಗನ್ತಸ್ತೇಽಪಿ ಕಿಂಚನ ॥೨೬೬॥

ಅಸೂಯಾಪರರಾದ ಪರಮಲೋಭಿಗಳಾದ ಕೆಲವರು ಹೇರಳವಾದ ಐಶ್ವರ್ಯವನ್ನು ಹೊಂದಿದ್ದರೂ ಯಾಚಕರು ಬಂದು ಅಂಗಲಾಚಿ ಬೇಡಿದರೂ ಸ್ವಲ್ಪವಾದರೂ ಕೊಡುವುದಿಲ್ಲ. ಅಂತಹ ಮನುಷ್ಯರು ಪುನರ್ಜನ್ಮದಲ್ಲಿ ಎಷ್ಟೇ ಪ್ರಯತ್ನಿಸಿದರೂ ಅತ್ಯಲ್ಪವಾದ ಧನವನ್ನೂ ಪಡೆದುಕೊಳ್ಳಲಾರರು. (ಬಹುಕಷ್ಟದಿಂದ ಅಹನ್ಯಹನಿ ಕಾಲಕ್ಷೇಪವನ್ನು ಮಾಡುತ್ತಿರುತ್ತಾರೆ.)

ನಾನುಪ್ತಂ ರೋಹತೇ ಸಸ್ಯಂ ತದ್ವದ್ದಾನಫಲಂ ವಿದುಃ।
ಯದ್ಯದ್ದದಾತಿ ಪುರುಷಸ್ತತ್ತತ್ಪ್ರಾಪ್ನೋತಿ ಕೇವಲಮ್।
ಇತಿ ತೇ ಕಥಿತಂ ದೇವಿ ಭೂಯಃ ಶ್ರೋತುಂ ಕಿಮಿಚ್ಛಸಿ ॥೨೬೭॥

ದೇವಿ! ಬೀಜವನ್ನು ಬಿತ್ತದೇ ಸಸಿಯು ಹುಟ್ಟುವುದಿಲ್ಲ. ಹಾಗೆಯೇ ದಾನಮಾಡದಿದ್ದರೆ ಯಾವ ಫಲವೂ ಸಿಕ್ಕುವುದಿಲ್ಲವೆಂದು ವಿದ್ವಾಂಸರು ತಿಳಿಯುತ್ತಾರೆ. ಈ ಜನ್ಮದಲ್ಲಿ ಏನೇನನ್ನು ದಾನಮಾಡುವನೋ ಮರುಹುಟ್ಟಿನಲ್ಲಿ ಅವೆಲ್ಲವನ್ನೂ ಪಡೆಯುತ್ತಾನೆ. ಹೀಗೆ ನಾನು ನೀನು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ್ದೇನೆ. ಪುನಃ ಏನನ್ನು ಕೇಳಲು ಬಯಸಿರುವೆ?"

ಉಮೆಯು ಹೇಳುತ್ತಾಳೆ:

ಭಗವನ್ಭಗನೇತ್ರಘ್ನ ಕೇಚಿದ್ವಾರ್ಧಕ್ಯಸಂಯುತಾಃ।
ಅಭೋಗಯೋಗ್ಯಕಾಲೇ ತು ಭೋಗಾಂಶ್ಚೈವ ಧನಾನಿ ಚ ॥೨೬೮॥
ಲಭನ್ತೇ ಸ್ಥವಿರಾ ಭೂತ್ವಾ ಭೋಗೈಶ್ವರ್ಯಂ ಯತಸ್ತತಃ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೨೬೯॥

"ಭಗದೇವತೆಯ ಕಣ್ಣನ್ನು ನಾಶಗೊಳಿಸಿದವನೇ! ಮಹಾದೇವನೇ! ಕೆಲವು ವೃದ್ಧರು ತಮಗೆ ಭೋಗಯೋಗ್ಯವಾದ ವಯಸ್ಸಲ್ಲದಿದ್ದರೂ ನಾನಾವಿಧವಾದ ಭೋಗಗಳನ್ನೂ ಐಶ್ವರ್ಯವನ್ನೂ ಹೊಂದಿರುತ್ತಾರೆ. ಮುದುಕರಾಗಿದ್ದರೂ ಎಲ್ಲೆಲ್ಲಿಂದಲೋ ಭೋಗೈಶ್ವರ್ಯಗಳನ್ನು ಪಡೆಯುತ್ತಲೇ ಇರುತ್ತಾರೆ. ಯಾವ ಕರ್ಮವಿಪಾಕದಿಂದ ಹೀಗಾಗುವುದೆಂಬುದನ್ನು ಹೇಳುವ ಕೃಪೆಮಾಡು."

ಮಹೇಶ್ವರನು ಹೇಳುತ್ತಾನೆ:

"ಪಾರ್ವತಿ! ನಾನು ಸಂತೋಷದಿಂದ ಈ ನಿನ್ನ ಪ್ರಶ್ನೆಗೆ ಉತ್ತರವನ್ನು ಹೇಳುವೆನು; ಏಕಾಗ್ರತೆಯಿಂದ ಕೇಳು.

ಧರ್ಮಕಾರ್ಯಂ ಚಿರಂ ಕಾಲಂ ವಿಸ್ಮೃತ್ಯ ಧನಸಂಯುತಾಃ।
ಪ್ರಾಣಾನ್ತಕಾಲೇ ಸಮ್ಪ್ರಾಪ್ತೇ ವ್ಯಾಧಿಭಿಶ್ಚ ನಿಪೀಡಿತಾಃ।
ಆರಭನ್ತೇ ಪುನರ್ಧರ್ಮಾನ್ದಾತುಂ ದಾನಾನಿ ವಾ ನರಾಃ ॥೨೭೦॥

ತೇ ಪುನರ್ಜನ್ಮನಿ ಶುಭೇ ಭೂತ್ವಾ ದುಃಖಪರಿಪ್ಲುತಾಃ।
ಅತೀತಯೌವನೇ ಕಾಲೇ ಸ್ಥವಿರತ್ವಮುಪಾಗತಾಃ ॥೨೭೨॥

ಲಭನ್ತೇ ಪೂರ್ವದತ್ತಾನಾಂ ಫಲಾನಿ ಶುಭಲಕ್ಷಣೇ।
ಏತತ್ಕರ್ಮಫಲಂ ದೇವಿ ಕಾಲಯೋಗಾದ್ಭವತ್ಯುತ ॥೨೭೩॥

ಧನಿಕರಾದ ಕೆಲವರು ಧರ್ಮಕಾರ್ಯಗಳನ್ನು ಬಹಳ ಕಾಲದವರೆಗೆ ಮರೆತೇಬಿಟ್ಟಿರುತ್ತಾರೆ. ರೋಗಗಳಿಂದ ಪೀಡಿತರಾಗಿ ಅಂತ್ಯಕಾಲವು ಸಮೀಪಿಸುತ್ತಲೇ ಧರ್ಮಕಾರ್ಯಗಳನ್ನು ಪ್ರಾರಂಭಿಸುತ್ತಾರೆ. ರೋಗಾದ್ಯುಪದ್ರವಗಳ ಪರಿಹಾರಕ್ಕಾಗಿ ಅನೇಕವಿಧವಾದ ದಾನಗಳನ್ನು ಕೊಡಲೂ ಪ್ರಾರಂಭಿಸುತ್ತಾರೆ. ಅಂತಹವರು ಅವಸಾನಹೊಂದಿದನಂತರ ಪುನರ್ಜನ್ಮದಲ್ಲಿ ಯೌವನವು ಕಳೆದುಹೋಗುವವರೆಗೂ ನಾನಾವಿಧವಾದ ಕಷ್ಟಕೋಟಲೆಗಳಲ್ಲಿ ಮುಳುಗಿ ದುಃಖಪಡುತ್ತಲೇ ಇರುತ್ತಾರೆ. ಮುದಿತನವನ್ನು ಹೊಂದಿದನಂತರ ಹಿಂದಿನ ಜನ್ಮದಲ್ಲಿ ಮುದಿವಯಸ್ಸಿನಲ್ಲಿಯೇ ಮಾಡಿದ ದಾನದ ಫಲವಾಗಿ ಅನುಭವಿಸಲು ಶಕ್ಯವಿಲ್ಲದಿದ್ದರೂ ನಾನಾಪ್ರಕಾರವಾದ ಸುಖೋಪಭೋಗ ಸಾಮಗ್ರಿಗಳನ್ನು ಪಡೆದುಕೊಳ್ಳುತ್ತಾರೆ. ದೇವಿ! ಈ ಕರ್ಮಫಲವು ಕಾಲಯೋಗದಿಂದ ಲಭಿಸುತ್ತದೆ."

ಉಮೆ:

ಭೋಗಯುಕ್ತಾ ಮಹಾದೇವ ಕೇಚಿದ್ವ್ಯಾಧಿಪರಿಪ್ಲುತಾಃ।
ಅಸಮರ್ಥಾಶ್ಚ ತಾನ್ಭೋಕ್ತುಂ ಭವನ್ತಿ ಕಿಲ ಕಾರಣಮ್ ॥೨೭೪॥

"ಮಹಾದೇವನೇ! ಕೆಲವರು ಯೌವನದಲ್ಲಿಯೇ ಸಕಲವಿಧವಾದ ಸುಖೋಪಭೋಗಸಾಮಗ್ರಿಗಳನ್ನು ಹೊಂದಿದ್ದರೂ ನಾನಾಪ್ರಕಾರವಾದ ರೋಗಗಳಿಂದ ಪೀಡತರಾಗಿ ಸುಖೋಪಭೋಗಗಳನ್ನು ಅನುಭವಿಸಲು ಅಸಮರ್ಥರಾಗಿರುತ್ತಾರೆ. ಇದಕ್ಕೇನು ಕಾರಣ?"

ಮಹೇಶ್ವರ:

ವ್ಯಾಧಿಯೋಗಪರಿಕ್ಲಿಷ್ಟಾ ಯೇ ನಿರಾಶಾಃ ಸ್ವಜೀವಿತೇ
ಆರಭನ್ತೇ ತದಾ ಕರ್ತುಂ ದಾನಾನಿ ಶುಭಲಕ್ಷಣೇ ॥೨೭೫॥

ತೇ ಪುನರ್ಜನ್ಮನಿ ಶುಭೇ ಪ್ರಾಪ್ಯ ತಾನಿ ಫಲಾನ್ಯುತ।
ಅಸಮರ್ಥಾಶ್ಚ ತಾನ್ಭೋಕ್ತುಂ ವ್ಯಾಧಿತಾಸ್ತೇ ಭವನ್ತ್ಯುತ ॥೨೭೬॥

"ಶುಭಲಕ್ಷಣಳೇ! ಕೆಲವರು ಅನೇಕವಿಧವಾದ ವ್ಯಾಧಿಗಳಿಂದ ನರಳುತ್ತಾ ಜೀವನದಲ್ಲಿಯೇ ನಿರಾಶೆಯುಳ್ಳವರಾಗಿರುತ್ತಾರೆ. ಅಂತಹವರು ಸುಹೃದರ ಪ್ರೇರಣೆಯಿಂದ ಆ ಸಮಯದಲ್ಲಿ ನಾನಾಧರ್ಮಕಾರ್ಯಗಳನ್ನು ಮಾಡಲು ಪ್ರಾರಂಭಿಸುತ್ತಾರೆ. ದಾನಗಳನ್ನು ಕೊಡಲು ಆರಂಭಿಸುತ್ತಾರೆ. ಮರುಹುಟ್ಟಿನಲ್ಲಿ ಅವರು ಮಾಡಿದ ದಾನದ ಫಲವಾಗಿ ಸುಖೋಪಭೋಗಯೋಗ್ಯವಾದ ಸಾಮಗ್ರಿಗಳನ್ನು ಪಡೆದುಕೊಂಡಿದ್ದರೂ ಹಿಂದಿನ ಜನ್ಮದಂತೆಯೇ ರೋಗಿಷ್ಠರಾಗಿ ಆ ಭೋಗಗಳನ್ನು ಉಪಭೋಗಿಸಲು ಅಸಮರ್ಥ ರಾಗುತ್ತಾರೆ."

ಉಮೆ:

ಭಗವನ್ದೇವದೇವೇಶ ಮಾನುಷೇಷ್ವೇವ ಕೇಚನ।
ರೂಪಯುಕ್ತಾಃ ಪ್ರದೃಶ್ಯನ್ತೇ ಶುಭಾಙ್ಗಾಃ ಪ್ರಿಯದರ್ಶನಾಃ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೨೭೭॥

"ಪೂಜ್ಯನೇ! ದೇವಾಧಿದೇವತೆಗಳಿಗೂ ಸ್ವಾಮಿಯೇ! ಮನುಷ್ಯರಲ್ಲಿ ಕೆಲವರು ಸುಂದರವಾದ ರೂಪವುಳ್ಳವರಾಗಿಯೂ ಶುಭಲಕ್ಷಣಗಳುಳ್ಳವ ರಾಗಿಯೂ ಮತ್ತು ನೋಡಲು ಪ್ರಿಯವಾದ ದರ್ಶನವುಳ್ಳವರಾಗಿಯೂ ಇರುತ್ತಾರೆ. ಯಾವ ಕರ್ಮವಿಪಾಕದಿಂದ ಅವರು ಹೀಗಿರುವರೆಂಬುದನ್ನು ಹೇಳುವ ಕೃಪೆಮಾಡು."

ಮಹೇಶ್ವರ:

"ಉಮೆ! ಈ ವಿಷಯವನ್ನು ನಾನು ಸಂತೋಷದಿಂದ ಯಥಾವತ್ತಾಗಿ ಹೇಳುತ್ತೇನೆ; ಏಕಾಗ್ರಚಿತ್ತಳಾಗಿ ಕೇಳು.

ಯೇ ಪುರಾ ಮಾನುಷಾ ದೇವಿ ಲಜ್ಜಾಯುಕ್ತಾಃ ಪ್ರಿಯಂವದಾಃ ॥
ಶಕ್ತಾಃ ಸುಮಧುರಾ ನಿತ್ಯಂ ಭೂತ್ವಾ ಚೈವ ಸ್ವಭಾವತಃ।
ಅಮಾಂಸಭೋಜಿನಶ್ಚೈವ ಸದಾ ಪ್ರಾಣಿದಯಾಯುತಾಃ ॥೨೭೮॥
ಪ್ರತಿಕರ್ಮಪ್ರದಾ ವಾಪಿ ವಸ್ತ್ರದಾ ಧರ್ಮಕಾರಣಾತ್।

ಭೂಮಿಶುದ್ಧಿಕರಾ ವಾಪಿ ಕಾರಣಾದಗ್ನಿಪೂಜಕಾಃ ||೨೮೦||
ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ತೇ ನರಾಃ|
ರೂಪೇಣ ಸ್ಪೃಹಣೀಯಾಸ್ತು ಭವನ್ತ್ಯೇವ ನ ಸಂಶಯಃ ||೨೮೧||

ದೇವಿ! ಹಿಂದಿನ ಜನ್ಮದಲ್ಲಿ ಯಾರು ಲಜ್ಜಾಯುಕ್ತರಾಗಿ, ಪ್ರಿಯವಾದ ಮಾತುಗಳನ್ನೇ ಆಡುತ್ತಾ, ಶಕ್ತರೂ ಮಧುರಸ್ವಭಾವದವರೂ ಆಗಿದ್ದು, ಸರ್ವದಾ ಸಮಸ್ತಪ್ರಾಣಿಗಳ ವಿಷಯದಲ್ಲಿಯೂ ದಯಾಪರರಾಗಿದ್ದರೋ, ಮಾಂಸಾಶಿಗಳಾಗಿರಲಿಲ್ಲವೋ, ಧರ್ಮದ ಸಲುವಾಗಿ ವಸ್ತ್ರಾಭರಣಗಳನ್ನು ದಾನವಾಗಿ ಕೊಟ್ಟಿದ್ದರೋ, ಭೂಮಿಯನ್ನು ಶುದ್ಧಿಗೊಳಿಸುತ್ತಿದ್ದರೋ, ಕರ್ತವ್ಯದ ಕಾರಣದಿಂದ ಅಗ್ನಿಪೂಜೆಯನ್ನು ಮಾಡುತ್ತಿದ್ದರೋ–ಅಂತಹ ಸದಾಚಾರಸಂಪನ್ನರಾಗಿದ್ದ ಮನುಷ್ಯರು ಪುನರ್ಜನ್ಮವನ್ನು ಹೊಂದಿ ರೂಪ-ಸೌಂದರ್ಯಗಳಿಂದ ಸ್ಪೃಹಣೀಯರಾಗಿರುತ್ತಾರೆ."

ಉಮೆ:

ವಿರೂಪಾಶ್ಚ ಪ್ರದೃಶ್ಯನ್ತೇ ಮಾನುಷೇಷ್ವೇವ ಕೇಚನ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ||೨೮೨||

"ಮಹಾದೇವನೇ! ಮನುಷ್ಯರಲ್ಲಿ ಕೆಲವರು ಅತ್ಯಂತಕುರೂಪಿಗಳೂ ಆಗಿರುತ್ತಾರೆ. ಯಾವ ಕರ್ಮವಿಪಾಕದಿಂದ ಅವರು ಕುರೂಪಿಗಳಾಗಿ ಹುಟ್ಟುತ್ತಾರೆಂಬುದನ್ನು ಹೇಳುವ ಕೃಪೆಮಾಡು."

ಮಹೇಶ್ವರ:

"ಕಲ್ಯಾಣಿ! ಅದಕ್ಕೂ ಕಾರಣಗಳನ್ನು ಹೇಳುವೆನು; ಏಕಾಗ್ರಚಿತ್ತಳಾಗಿ ಕೇಳು.

ರೂಪಯೋಗಾತ್ಪುರಾಮರ್ತ್ಯಾ ದರ್ಪಾಹಂಕಾರಸಂಯುತಾಃ ||೨೮೩||
ವಿರೂಪಹಾಸಕಾಶ್ಚೈವ ಸ್ತುತಿನಿನ್ದಾದಿಭಿರ್ಭೃಶಮ್|
ಪರೋಪತಾಪಿನಶ್ಚೈವ ಮಾಂಸಾದಾಶ್ಚ ತಥೈವ ಚ ||೨೮೪||
ಅಭ್ಯಸೂಯಾಪರಾಶ್ಚೈವ ಅಶುದ್ಧಾಶ್ಚ ತಥಾ ನರಾಃ|
ಏವಂಯುಕ್ತಸಮಾಚಾರಾ ಯಮಲೋಕೇ ಸುದಣ್ಡಿತಾಃ ||೨೮೫||

ಕಥಂಚಿತ್ಪ್ರಾಪ್ಯಮಾನುಷ್ಯಂ ತತ್ರ ತೇ ರೂಪವರ್ಜಿತಾಃ।
ವಿರೂಪಾಃ ಸಮ್ಭವನ್ತ್ಯೇವ ನಾಸ್ತಿ ತತ್ರ ವಿಚಾರಣಾ ॥೨೮೬॥

ಹಿಂದಿನ ಜನ್ಮದಲ್ಲಿ ಯಾರು ರೂಪಸಂಪನ್ನರಾಗಿದ್ದು ದರ್ಪ ಮತ್ತು ಅಹಂಕಾರಗಳಿಂದ ಮೆರೆಯುತ್ತಿದ್ದರೋ, ವಿರೂಪಿಗಳನ್ನು ಸ್ತುತಿ-ನಿಂದೆಗಳಿಂದ ಬಹಳವಾಗಿ ಹಾಸ್ಯಮಾಡುತ್ತಿದ್ದರೋ, ಇತರರಿಗೆ ಪರಿತಾಪವನ್ನು ಕೊಡುವುದೇ ಯಾರ ಸ್ವಭಾವವಾಗಿತ್ತೋ, ಮಾಂಸಾಹಾರಿಗಳಾಗಿದ್ದರೋ, ಅಸೂಯಾಪರರೂ ಅಪವಿತ್ರರೂ ಆಗಿದ್ದರೋ–ಅಂತಹ ಅನಾಚಾರಿಗಳಾದ ಮನುಷ್ಯರು ಅವಸಾನಾನಂತರ ಯಮನ ಲೋಕಕ್ಕೆ ಹೋಗಿ ನಾನಾವಿಧವಾದ ಶಿಕ್ಷೆಗಳನ್ನು ಅನುಭವಿಸಿ ಪಾಪಫಲಗಳೆಲ್ಲವೂ ಮುಗಿದನಂತರ ಅವರು ಬಹಳ ಕಷ್ಟದಿಂದ ಮನುಷ್ಯಜನ್ಮವನ್ನು ಪಡೆದುಕೊಂಡು ವಿರೂಪಿಗಳಾಗಿಯೂ ನೋಡಲು ಅಸಹ್ಯರಾಗಿಯೂ ಹುಟ್ಟುತ್ತಾರೆ. ಈ ವಿಷಯದಲ್ಲಿ ಪುನಃ ವಿಚಾರಮಾಡಬೇಕಾಗಿಯೇ ಇಲ್ಲ."

ಉಮೆ:

ಭಗವನ್ದೇವದೇವೇಶ ಕೇಚಿತ್ಸೌಭಾಗ್ಯಸಂಯುತಾಃ।
ರೂಪಭೋಗವಿಹೀನಾಶ್ಚ ದೃಶ್ಯನ್ತೇ ಪ್ರಮದಾಪ್ರಿಯಾಃ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೨೮೭॥

"ಪೂಜ್ಯನೇ! ದೇವಾಧಿದೇವತೆಗಳಿಗೂ ಈಶನೇ! ಸೌಭಾಗ್ಯವಂತರಾದ ಕೆಲವು ಮನುಷ್ಯರು ರೂಪ-ಭೋಗಗಳಿಂದ ಹೀನರಾಗಿದ್ದರೂ ನಾರಿಯರಿಗೆ ಪ್ರಿಯರಾಗಿರುತ್ತಾರೆ. ಯಾವ ಕರ್ಮಫಲದಿಂದ ಹೀಗಾಗುತ್ತಾರೆ? ದಯಮಾಡಿ ಹೇಳು."

ಮಹೇಶ್ವರ:

ಯೇ ಪುರಾ ಮಾನುಷಾ ದೇವಿ ಸೌಮ್ಯಶೀಲಾಃ ಪ್ರಿಯಂವದಾಃ।
ಸ್ವದಾರೈರೇವ ಸನ್ತುಷ್ಟಾ ದಾರೇಷು ಸಮವೃತ್ತಯಃ ॥೨೮೮॥
ದಾಕ್ಷಿಣ್ಯೇನೈವ ವರ್ತನ್ತೇ ಪ್ರಮದಾಸ್ವಪ್ರಿಯಾಸ್ವಪಿ।
ನ ತು ಪ್ರತ್ಯಾದಿಶನ್ತ್ಯೇವ ಸ್ತ್ರೀದೋಷಾನ್ಗುಣಸಂಶ್ರಿತಾನ್ ॥೨೮೯॥

ಅನ್ನಪಾನೀಯದಾಃ ಕಾಲೇ ನೃಣಾಂ ಸ್ವಾದುಪ್ರದಾಶ್ಚ ಯೇ।
ಸ್ವದಾರವ್ರತಿನಶ್ಚೈವ ಧೃತಿಮನ್ತೋ ನಿರತ್ಯಯಾಃ ॥೨೯೦॥
ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ।
ಮಾನುಷಾಸ್ತೇ ಭವನ್ತ್ಯೇವ ಸತತಂ ಸುಭಗಾ ಭೃಶಮ್।
ಅರ್ಥಾದ್ವೃತೇಽಪಿ ತೇ ದೇವಿ ಭವನ್ತಿ ಪ್ರಮದಾಪ್ರಿಯಾಃ ॥೨೯೧॥

"ಯಾವ ಮನುಷ್ಯರು ಹಿಂದಿನ ಜನ್ಮದಲ್ಲಿ ಸೌಮ್ಯಶೀಲರಾಗಿಯೂ ಪ್ರಿಯಂವದರಾಗಿಯೂ ಇದ್ದರೋ, ತಮ್ಮ ಪತ್ನಿಯರಲ್ಲಿಯೇ ಸಂತುಷ್ಟ ರಾಗಿದ್ದರೋ, ಹಲವಾರು ಪತ್ನಿಯರಿದ್ದರೂ ಎಲ್ಲರಲ್ಲಿಯೂ ಸಮಾನವಾದ ಪ್ರೀತಿಯುಳ್ಳವರಾಗಿದ್ದರೋ, ತನ್ನನ್ನು ಪ್ರೀತಿಮಾಡದಿರುವ ಸ್ತ್ರೀಯರ ವಿಷಯದಲ್ಲಿಯೂ ಉದಾರವಾದ ಭಾವನೆಯಿಂದ ಇದ್ದರೋ, ಸ್ತ್ರೀಯರದೋಷಗಳನ್ನು ಚರ್ಚಿಸುತ್ತಿರಲಿಲ್ಲವೋ, ಅವರಲ್ಲಿರುವ ಗುಣಗಳನ್ನೇ ಎತ್ತಿ ಹೇಳುತ್ತಿದ್ದರೋ, ಯುಕ್ತವಾದ ಸಮಯಗಳಲ್ಲಿ ಅನ್ನದಾನ-ಜಲದಾನಾದಿ ಗಳನ್ನು ಮಾಡುತ್ತಿದ್ದರೋ, ಅತಿಥಿಗಳಿಗೆ ರುಚಿಕರವಾದ ಅನ್ನವನ್ನು ಭೋಜನಮಾಡಿಸುತ್ತಿದ್ದರೋ, ತನ್ನ ಧರ್ಮಪತ್ನಿಯಲ್ಲಿ ಮಾತ್ರವೇ ಅನುರಕ್ತರಾಗಿರುವುದಾಗಿ ವ್ರತವನ್ನು ಕೈಗೊಂಡಿದ್ದರೋ, ಧೈರ್ಯವಂತರೂ ದುಃಖರಹಿತರೂ ಆಗಿದ್ದರೋ–ಅಂತಹ ಸದಾಚಾರಸಂಪನ್ನರು ಮರುಹುಟ್ಟಿ ನಲ್ಲಿ ಮನುಷ್ಯರಾಗಿಯೇ ಹುಟ್ಟಿ ಸೌಭಾಗ್ಯಶಾಲಿಗಳಾಗುತ್ತಾರೆ. ಅವರು ಐಶ್ವರ್ಯದಿಂದ (ರೂಪ-ಸೌಭಾಗ್ಯಗಳಿಂದ) ಹೀನರಾಗಿದ್ದರೂ ಪ್ರಮದೆ ಯರಿಗೆ ಪ್ರಿಯರಾಗಿರುತ್ತಾರೆ."

ಉಮೆ:

ದುರ್ಭಗಾಃ ಸಮ್ಪ್ರದೃಶ್ಯನ್ತೇ ಆರ್ಯಾ ಭೋಗಯುತಾ ಅಪಿ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೨೯೨॥

"ಪೂಜ್ಯನೇ! ಕೆಲವರು ಶ್ರೇಷ್ಠಪುರುಷರು ಭೋಗಗಳಿಂದ ಸಂಪನ್ನರಾಗಿದ್ದರೂ ಅದೃಷ್ಟಹೀನರಾಗಿರುವುದು ಕಂಡುಬರುತ್ತದೆ. ಯಾವ ಕರ್ಮಫಲದಿಂದ ಹೀಗಾಗುವುದೆಂಬುದನ್ನು ಹೇಳುವ ಕೃಪೆಮಾಡು."

ಮಹೇಶ್ವರ:

“ಪಾರ್ವತಿ! ಈ ವಿಷಯವನ್ನೂ ಹೇಳುವೆನು; ಏಕಾಗ್ರಚಿತ್ತಳಾಗಿ ಕೇಳು.

ಯೇ ಪುರಾ ಮನುಜಾ ದೇವಿ ಸ್ವದಾರೇಷ್ವನಪೇಕ್ಷಯಾ ॥೨೯೩॥
ಯಥೇಷ್ಟವೃತ್ತಯಶ್ಚೈವ ನಿರ್ಲಜ್ಜಾ ವೀತಸಂಭ್ರಮಾಃ।
ಪರೇಷಾಂ ವಿಪ್ರಿಯಕರಾ ವಾಙ್ಮನಃಕಾಯಕರ್ಮಭಿಃ ॥೨೯೪॥
ನಿರಾಶ್ರಯಾ ನಿರನ್ನಾದ್ಯಾಃ ಸ್ತ್ರೀಣಾಂ ಹೃದಯಕೋಪನಾಃ।
ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ತೇ ನರಾಃ ॥೨೯೫॥
ದುರ್ಭಗಾಸ್ತು ಭವನ್ತ್ಯೇವ ಸ್ತ್ರೀಣಾಂ ಹೃದಯವಿಪ್ರಿಯಾಃ।
ನಾಸ್ತಿ ತೇಷಾಂ ರತಿಸುಖಂ ಸ್ವದಾರೇಷ್ವಪಿ ಕಿಂಚನ ॥೨೯೬॥

ಯಾರು ಹಿಂದಿನ ಜನ್ಮದಲ್ಲಿ ತಮ್ಮ ಧರ್ಮಪತ್ನಿಯರನ್ನು ಅನಾದರಿಸಿ, ನಾಚಿಕೆಗೆಟ್ಟವರಾಗಿ, ಯಾರ ಭಯವೂ ಇಲ್ಲದೇ ಸ್ವೇಚ್ಛೆಯಿಂದ ವರ್ತಿಸುತ್ತಿದ್ದರೋ–ವಾಕ್ಕು, ಮನಸ್ಸು, ಶರೀರ ಮತ್ತು ಕಾರ್ಯಗಳ ಮೂಲಕವಾಗಿ ಇತರರಿಗೆ ಕೇಡನ್ನು ಮಾಡುತ್ತಿದ್ದರೋ, ಆಶ್ರಯವನ್ನೂ ಅನ್ನವನ್ನೂ ಕೊಡದೇ ಪತ್ನಿಯ ಹೃದಯದಲ್ಲಿ ಕೋಪವನ್ನುಂಟುಮಾಡುತ್ತಿದ್ದರೋ–ಸ್ತ್ರೀಯರ ಮನಸ್ಸಿಗೆ ಖೇದವನ್ನುಂಟುಮಾಡಿದ್ದ ಅಂತಹ ದುರಾಚಾರಿಗಳು ಅದೃಷ್ಟಹೀನರಾಗಿಯೇ ಹುಟ್ಟುತ್ತಾರೆ. ಅವರಿಗೆ ತಮ್ಮ ಪತ್ನಿಯರಲ್ಲಿಯೂ ರತಿಸುಖವು ಲಭಿಸುವುದಿಲ್ಲ.”

ಉಮೆ:

ಭಗವನ್ದೇವದೇವೇಶ ಮಾನುಷೇಷ್ವಪಿ ಕೇಚನ ।
ಜ್ಞಾನವಿಜ್ಞಾನಸಮ್ಪನ್ನಾ ಬುದ್ಧಿಮನ್ತೋ ವಿಚಕ್ಷಣಾಃ ॥೨೯೭॥
ದುರ್ಗತಾಸ್ತು ಪ್ರದೃಶ್ಯನ್ತೇ ಯತಮಾನಾ ಯಥಾವಿಧಿ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೨೯೮॥

“ಪೂಜ್ಯನೇ! ದೇವದೇವೇಶನೇ! ಮನುಷ್ಯರಲ್ಲಿ ಕೆಲವರು ಜ್ಞಾನ-ವಿಜ್ಞಾನಸಂಪನ್ನರಾಗಿದ್ದರೂ, ಬುದ್ಧಿವಂತರಾಗಿದ್ದರೂ, ವಿದ್ವಾಂಸರಾಗಿ

ದ್ದರೂ-ಮಹಾಪ್ರಯತ್ನಗಳನ್ನು ಮಾಡಿದರೂ ದುರ್ಗತಿಯನ್ನೂ ಹೊಂದುತ್ತಿರುವುದು ಕಂಡುಬರುತ್ತದೆ. ಯಾವ ಕರ್ಮಫಲದಿಂದ ಹೀಗಾಗುವುದೆಂಬುದನ್ನು ಹೇಳು."

ಮಹೇಶ್ವರ:

"ಕಲ್ಯಾಣಿ! ಹಾಗಾಗುವುದಕ್ಕೆ ಕಾರಣವನ್ನು ಹೇಳುವೆನು, ಕೇಳು.

ಯೇ ಪುರಾ ಮನುಜಾ ದೇವಿ ಶ್ರುತವನ್ತೋಽಪಿ ಕೇವಲಮ್ ॥೯೯॥
ನಿರಾಶ್ರಯಾ ನಿರಾನ್ನಾದ್ಯಾ ಭೃಶಮಾತ್ಮಪರಾಯಣಾಃ।
ತೇ ಪುನರ್ಜನ್ಮನಿ ಶುಭೇ ಜ್ಞಾನಬುದ್ಧಿಯುತಾ ಅಪಿ।
ನಿಷ್ಕಿಂಚನಾ ಭವನ್ತ್ಯೇವ ಅನುಪ್ತಂ ಹಿ ನ ರೋಹತಿ ॥೧೦೦॥

ಯಾವ ಮನುಷ್ಯರು ಹಿಂದಿನ ಜನ್ಮದಲ್ಲಿ ವಿದ್ವಾಂಸರಾಗಿದ್ದರೂ ಯಾರಿಗೂ ಆಶ್ರಯವನ್ನಾಗಲೀ ಅನ್ನವನ್ನಾಗಲೀ ಕೊಡುತ್ತಿರಲಿಲ್ಲವೋ, ತಮ್ಮ ಉದರಂಭರಣದಲ್ಲಿಯೇ ಯಾವಾಗಲೂ ಆಸಕ್ತರಾಗಿದ್ದರೋ–ಅಂತಹವರು ಮರುಹುಟ್ಟಿನಲ್ಲಿ ಜ್ಞಾನ-ವಿಜ್ಞಾನಸಂಪನ್ನರಾಗಿದ್ದರೂ ದರಿದ್ರರೇ ಆಗಿರುತ್ತಾರೆ. ಬೀಜವನ್ನು ಬಿತ್ತದೇ ಸಸಿಯು ಬೆಳೆಯಲಾರದಲ್ಲವೇ?"

ಉಮೆ:

ಮೂರ್ಖಾ ಲೋಕೇ ಪ್ರದೃಶ್ಯನ್ತೇ ದೃಢಮೂಲಾ ವಿಚೇತಸಃ।
ಜ್ಞಾನವಿಜ್ಞಾನರಹಿತಾಃ ಸಮೃದ್ಧಾಶ್ಚ ಸಮನ್ತತಃ।
ಕೇನ ವಿಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೧೦೧॥

"ದೇವೇಶನೇ! ಲೋಕದಲ್ಲಿ ಜ್ಞಾನ-ವಿಜ್ಞಾನದಿಂದ ರಹಿತರೂ, ಮೂರ್ಖರೂ, ಬುದ್ಧಿಗೆಟ್ಟವರೂ ಆಗಿದ್ದರೂ–ದೃಢಮೂಲರೂ ಮತ್ತು ಸಮೃದ್ಧರೂ ಆಗಿರುತ್ತಾರೆ. ಯಾವ ಕರ್ಮವಿಪಾಕದಿಂದ ಹೀಗಾಗುವುದೆಂಬುದನ್ನು ದಯಮಾಡಿ ಹೇಳು."

ಮಹೇಶ್ವರ:

ಯೇ ಪುರಾ ಮನುಜಾ ದೇವಿ ಬಾಲಿಶಾ ಅಪಿ ಸರ್ವತಃ।
ಸಮಾಚರನ್ತಿ ದಾನಾನಿ ದೀನಾನುಗ್ರಹಕಾರಣಾತ್ ॥೧೦೨॥

ಅಬುದ್ಧಿಪೂರ್ವಂ ವಾ ದಾನಂ ದದತ್ಯೇವ ತತಸ್ತತಃ।
ತೇ ಪುನರ್ಜನ್ಮನಿ ಶುಭೇ ಪ್ರಾಪ್ನುವನ್ತ್ಯೇವ ತತ್ತಥಾ ॥೩೦೩॥
ಪಣ್ಡಿತೋಽಪಣ್ಡಿತೋ ವಾಪಿ ಭುಙ್ಕ್ತೇ ದಾನಫಲಂ ನರಃ।
ಬುದ್ಧ್ಯಾನಪೇಕ್ಷಿತಂ ದಾನಂ ಸರ್ವಥಾ ತತ್ಫಲತ್ಯುತ ॥೩೦೪॥

"ಯಾವ ಮನುಷ್ಯರು ಹಿಂದಿನ ಜನ್ಮದಲ್ಲಿ ಹೆಚ್ಚು ಮೂರ್ಖರಾಗಿದ್ದರೂ ದೀನರಿಗೆ ಅನುಗ್ರಹಮಾಡುವ ಸಲುವಾಗಿ ಸರ್ವದಾ ದಾನಮಾಡುತ್ತಿದ್ದರೋ, ಆ ದಾನವು ಬುದ್ಧಿಪೂರ್ವಕವಾಗಿಯೇ ಮಾಡಿರದಿದ್ದರೂ- ಮರುಹುಟ್ಟಿನಲ್ಲಿ ಫಲವನ್ನು ಕೊಟ್ಟೇ ತೀರುತ್ತದೆ. ಪಂಡಿತನಾಗಲೀ, ಮೂರ್ಖನಾಗಲೀ ದಾನಮಾಡಿದ ಫಲವನ್ನಂತೂ ಪಡೆದೇ ತೀರುತ್ತಾನೆ. ಬುದ್ಧಿಪೂರ್ವಕವಾಗಿ ಮಾಡದೇ ಇರುವ ದಾನವೂ ಒಳ್ಳೆಯ ಫಲವನ್ನು ಕೊಟ್ಟೇ ಕೊಡುತ್ತದೆ."

ಉಮೆ:

ಭಗವನ್ದೇವದೇವೇಶ ಮಾನುಷೇಷು ಚ ಕೇಚನ।
ಮೇಧಾವಿನಃ ಶ್ರುತಿಧರಾ ಭವನ್ತಿ ವಿಶದಾಕ್ಷರಾಃ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೩೦೫॥

"ಪೂಜ್ಯನೇ! ದೇವದೇವೇಶನೇ! ಮನುಷ್ಯರಲ್ಲಿ ಕೆಲವರು ಒಮ್ಮೆ ಕೇಳಿದೊಡನೆಯೇ ಗ್ರಹಿಸುವ ಮೇಧಾವಿಗಳಾಗಿರುತ್ತಾರೆ ಮತ್ತು ಮಾತುಗಳನ್ನು ಸ್ಪಷ್ಟವಾಗಿ ಉಚ್ಚಾರಣೆಮಾಡುವವರೂ ಇರುತ್ತಾರೆ. ಯಾವ ಕರ್ಮಫಲದಿಂದ ಅವರು ಹೀಗೆ ಮೇಧಾವಿಗಳೂ ವಾಕ್ಪಟುತ್ವವುಳ್ಳವರೂ ಆಗುವರೆಂಬುದನ್ನು ಹೇಳು."

ಮಹೇಶ್ವರ:

ಯೇ ಪುರಾ ಮನುಜಾ ದೇವಿ ಗುರುಶುಶ್ರೂಷಕಾ ಭೃಶಮ್।
ಜ್ಞಾನಾರ್ಥಂ ತೇ ತು ಸಂಗೃಹ್ಯ ತೀರ್ಥಂ ತೇ ವಿಧಿಪೂರ್ವಕಮ್ ॥
ವಿಧಿನೈವ ಪರಾಂಶ್ಚೈವ ಗ್ರಾಹಯನ್ತಿ ಚ ನಾನ್ಯಥಾ।
ಅಶ್ಲಾಘಮಾನಾ ಜ್ಞಾನೇನ ಪ್ರಶಾನ್ತಾ ಯತವಾಚಕಾಃ ॥೩೦೭॥

ವಿದ್ಯಾಸ್ಥಾನಾನಿ ಯೇ ಲೋಕೇ ಸ್ಥಾಪಯನ್ತಿ ಚ ಯತ್ನತಃ।
ತಾದೃಶಾ ಮರಣಂ ಪ್ರಾಪ್ತಾಃ ಪುನರ್ಜನ್ಮನಿ ಶೋಭನೇ।
ಮೇಧಾವಿನಃ ಶ್ರುತಿಧರಾ ಭವನ್ತಿ ವಿಶದಾಕ್ಷರಾಃ ॥೩೦೮॥

"ದೇವಿ! ಹಿಂದಿನ ಜನ್ಮದಲ್ಲಿ ಯಾರು ಬಹಳವಾಗಿ ಗುರುಶುಶ್ರೂಷೆಯನ್ನು ಮಾಡಿದ್ದರೋ, ಜ್ಞಾನವನ್ನು ಸಂಪಾದಿಸಿಕೊಳ್ಳುವ ಸಲುವಾಗಿ ವಿಧಿಪೂರ್ವಕವಾಗಿ ಗುರುವಿನ ಆಶ್ರಯವನ್ನು ಪಡೆದಿದ್ದರೋ, ತಾವೂ ಕೂಡ ಜ್ಞಾನಿಗಳೆಂದು ಆತ್ಮಶ್ಲಾಘನೆಯನ್ನು ಮಾಡಿಕೊಳ್ಳುತ್ತಿರಲಿಲ್ಲವೋ, ಪ್ರಶಾಂತರೂ ಮೌನಿಗಳೂ ಆಗಿದ್ದರೋ, ಪ್ರಯತ್ನಪೂರ್ವಕವಾಗಿ ಲೋಕದ ಎಲ್ಲ ಕಡೆಗಳಲ್ಲಿಯೂ ವಿದ್ಯಾಲಯಗಳನ್ನು ಸ್ಥಾಪಿಸುತ್ತಿದ್ದರೋ–ಅಂತಹವರು ಮರಣಹೊಂದಿದನಂತರ ಮರುಹುಟ್ಟಿನಲ್ಲಿ ಕೇಳಿದ ಮಾತ್ರದಿಂದಲೇ ಗ್ರಹಿಸುವ ಮೇಧಾವಿಗಳೂ ಮತ್ತು ಸ್ಪಷ್ಟವಾಗಿ ಮಾತನಾಡುವವರೂ ಆಗುತ್ತಾರೆ."

ಉಮೆ:

ಅಪರೇ ಮಾನುಷಾ ದೇವ ಯತನ್ತೋಽಪಿ ಯತಸ್ತತಃ।
ಬಹಿಷ್ಕೃತಾಃ ಪ್ರದೃಶ್ಯನ್ತೇ ಶ್ರುತಿವಿಜ್ಞಾನಬುದ್ಧಿತಃ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೩೦೯॥

"ದೇವ! ಮತ್ತೆ ಕೆಲವು ಮನುಷ್ಯರು ಅಲ್ಲಲ್ಲಿ ಅಭ್ಯಾಸಕ್ಕಾಗಿ ಎಷ್ಟೇ ಪ್ರಯತ್ನಿಸಿದರೂ ಶ್ರುತಿ-ವಿಜ್ಞಾನಗಳಿಗೆ ಸಂಬಂಧಿಸಿದ ಬುದ್ಧಿಯಿಂದ ಬಹಿಷ್ಕೃತರಾಗಿರುವಂತೆಯೇ ಕಾಣುತ್ತಾರೆ. ಯಾವ ಕರ್ಮಫಲದಿಂದ ಹೀಗಾಗುವುದೆಂಬುದನ್ನು ಹೇಳುವ ಕೃಪೆಮಾಡು."

ಮಹೇಶ್ವರ:

ಯೇ ಪುರಾ ಮನುಜಾ ದೇವಿ ಜ್ಞಾನದರ್ಪಸಮನ್ವಿತಾಃ।
ಶ್ಲಾಘಮಾನಾಶ್ಚ ತತ್ಪ್ರಾಪ್ಯ ಜ್ಞಾನಾಹಙ್ಕಾರಮೋಹಿತಾಃ ॥೩೧೦॥
ವದನ್ತಿ ಯೇ ಪರಾನ್ನಿತ್ಯಂ ಜ್ಞಾನಾಧಿಕ್ಯೇನ ದರ್ಪಿತಾಃ।
ಜ್ಞಾನಾದಸೂಯಾಂ ಕುರ್ವನ್ತಿ ನ ಸಹನ್ತೇ ಹಿ ಚಾಪರಾನ್ ॥೩೧೧॥

ತಾದೃಶಾ ಮರಣಂ ಪ್ರಾಪ್ತಾಃ ಪುನರ್ಜನ್ಮನಿ ಶೋಭನೇ।
ಮಾನುಷ್ಯಂ ಸುಚಿರಾತ್ಪ್ರಾಪ್ಯ ತತ್ರ ಬೋಧವಿವರ್ಜಿತಾಃ।
ಭವನ್ತಿ ಸತತಂ ದೇವಿ ಯತನ್ತೋ ಹೀನಮೇಧಸಃ ||೩೧೨||

"ದೇವಿ! ಯಾರು ಹಿಂದಿನ ಜನ್ಮದಲ್ಲಿ ಜ್ಞಾನದರ್ಪದಿಂದ ಕೂಡಿದ್ದು ಜ್ಞಾನ-ವಿಜ್ಞಾನಪಂಡಿತರಾಗಿ ಆತ್ಮಪ್ರಶಂಸೆಯನ್ನು ಮಾಡಿಕೊಳ್ಳುತ್ತಿದ್ದರೋ, ಜ್ಞಾನಾಹಂಕಾರದಿಂದ ಮೋಹಿತರಾಗಿ ಇತರರನ್ನು ನಾನಾರೀತಿಯಲ್ಲಿ ಆಕ್ಷೇಪಿಸುತ್ತಿದ್ದರೋ, ಅಧಿಕವಾದ ಜ್ಞಾನದಿಂದ ದರ್ಪಿತರಾಗಿ ಇತರರಲ್ಲಿರುವ ಜ್ಞಾನದ ವಿಷಯದಲ್ಲಿ ಅಸೂಯೆಯುಳ್ಳವರಾಗಿದ್ದರೋ, ಇತರರೂ ತಮ್ಮಂತೆಯೇ ಜ್ಞಾನ-ವಿಜ್ಞಾನಪಂಡಿತರಾಗುವುದನ್ನು ಸಹಿಸುತ್ತಿರಲಿಲ್ಲವೋ– ಅಂತಹವರು ಮರಣಹೊಂದಿದನಂತರ ಬಹಳ ಕಾಲದ ಮೇಲೆ ಮನುಷ್ಯಜನ್ಮವನ್ನು ಪಡೆಯುತ್ತಾರೆ. ಅವರು ಎಷ್ಟೇ ಪ್ರಯತ್ನಿಸಿದರೂ ಹಿಂದಿನ ಜನ್ಮದಲ್ಲಿ ಮಾಡಿದ ಅಕಾರ್ಯಗಳಿಂದಾಗಿ ಬುದ್ಧಿರಹಿತರಾಗಿಯೇ ಇರುತ್ತಾರೆ. ಜ್ಞಾನವನ್ನು ಹೊಂದುವುದಿಲ್ಲ."

ಉಮೆ:

ಭಗವನ್ಪುರುಷಾಃ ಕೇಚಿತ್ಸರ್ವಕಲ್ಯಾಣಸಂಯುತಾಃ।
ಪುತ್ರೈರ್ದಾರೈರ್ಗುಣಯುತೈರ್ದಾಸೀದಾಸಪರಿಚ್ಛದೈಃ ||೩೧೩||
ಪರಸ್ಪರರ್ಧಿಸಂಯುಕ್ತಾಃ ಸ್ಥಾನೈಶ್ವರ್ಯಮನೋಹರೈಃ।
ವ್ಯಾಧಿಹೀನಾ ನಿರಾಬಾಧಾ ರೂಪಾರೋಗ್ಯಬಲೈರ್ಯುತಾಃ ||೩೧೪||
ಧನಧಾನ್ಯೇನ ಸಮ್ಪನ್ನಾಃ ಪ್ರಾಸಾದೈರ್ಯಾನವಾಹನೈಃ।
ಸರ್ವೋಪಭೋಗಸಂಯುಕ್ತಾ ನಾನಾಚಿತ್ರೈರ್ಮನೋಹರೈಃ ||೩೧೫||
ಜ್ಞಾತಿಭಿಃ ಸಹ ಮೋದನ್ತೇ ಅವಿಘ್ನಂ ತು ದಿನೇ ದಿನೇ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ||೩೧೬||

"ಪೂಜ್ಯನೇ! ಕೆಲವರು ಸಮಸ್ತಕಲ್ಯಾಣಗುಣಗಳಿಂದಲೂ ಸಂಪನ್ನರಾಗಿರುತ್ತಾರೆ. ಗುಣವಂತರಾದ ಪತ್ನೀ-ಪುತ್ರ-ಸೇವಕ-ಸೇವಕಿಯರಿಂದಲೂ ಕೂಡಿರುತ್ತಾರೆ. ಸ್ಥಾನ, ಐಶ್ವರ್ಯ, ಮನೋಹರವಾದ ಭೋಗಗಳಿಂದಲೂ

ಮತ್ತು ಪಾರಸ್ಪರಿಕವಾದ ಸಮೃದ್ಧಿಯಿಂದಲೂ ಯುಕ್ತರಾಗಿರುತ್ತಾರೆ. ರೋಗಹೀನರಾಗಿಯೂ, ನಿರಾಬಾಧರಾಗಿಯೂ, ರೂಪ-ಆರೋಗ್ಯ-ಬಲ-ಧನ-ಧಾನ್ಯಸಂಪನ್ನರಾಗಿಯೂ ಇರುತ್ತಾರೆ. ನಾನಾವಿಧವಾದ ಚಿತ್ರ-ವಿಚಿತ್ರ ವಾದ ಮನೋಹರವಾದ ಪ್ರಾಸಾದಗಳಿಂದಲೂ ಯಾನಗಳಿಂದಲೂ ಯುಕ್ತರಾಗಿರುತ್ತಾರೆ. ಸಮಸ್ತವಾದ ಭೋಗಗಳನ್ನೂ ಹೊಂದಿ, ಅನುದಿನವೂ ಜ್ಞಾತಿಗಳೊಡನೆ ಯಾವುದೇ ತಡೆಯೂ ಇಲ್ಲದೆ ಆನಂದಪಡುತ್ತಿರುತ್ತಾರೆ. ಯಾವ ಕರ್ಮಫಲದಿಂದ ಇವರಿಗೆ ಈ ಸುಖೋಪಭೋಗಗಳು ಲಭಿಸುವುದೆಂಬುದನ್ನು ಹೇಳುವ ಕೃಪೆಮಾಡು."

ಮಹೇಶ್ವರ:

"ದೇವಿ! ಆ ಎಲ್ಲ ವಿಷಯಗಳನ್ನೂ ಹೇಳುತ್ತೇನೆ; ಏಕಾಗ್ರಚಿತ್ತಳಾಗಿ ಕೇಳು.

ಯೇ ಪುರಾ ಮನುಜಾ ದೇವಿ ಆಢ್ಯಾ ವಾ ಇತರೇಽಪಿ ವಾ ॥೩೧೭॥

ಶ್ರುತವೃತ್ತಸಮಾಯುಕ್ತಾ ದಾನಕಾಮಾಃ ಶ್ರುತಿಪ್ರಿಯಾಃ।
ಪರೇಙ್ಗಿತಪರಾ ನಿತ್ಯಂ ದಾತವ್ಯಮಿತಿ ನಿಶ್ಚಿತಾಃ ॥೩೧೮॥

ಸತ್ಯಸಂಧಾಃ ಕ್ಷಮಾಶೀಲಾ ಲೋಭಮೋಹವಿವರ್ಜಿತಾಃ।
ದಾತಾರಃ ಪಾತ್ರತೋ ದಾನಂ ವ್ರತೈರ್ನಿಯಮಸಂಯುತಾಃ ॥೩೧೯॥

ಸ್ವದುಃಖಮಿವ ಸಂಸ್ಮೃತ್ಯ ಪರದುಃಖವಿವರ್ಜಿತಾಃ।
ಸೌಮ್ಯಶೀಲಾಃ ಶುಭಾಚಾರಾ ದೇವಬ್ರಾಹ್ಮಣಪೂಜಕಾಃ ॥೩೨೦॥

ಏವಂಶೀಲಸಮಾಚಾರಾಃ ಪುನರ್ಜನ್ಮನಿ ಶೋಭನೇ।
ದಿವಿ ವಾ ಭುವಿ ವಾ ದೇವಿ ಜಾಯನ್ತೇ ಕರ್ಮಭೋಗಿನಃ ॥೩೨೧॥

ಆಢ್ಯರಾಗಿರಲಿ; ದರಿದ್ರರಾಗಿರಲಿ–ಯಾರು ಹಿಂದಿನ ಜನ್ಮದಲ್ಲಿ ಶಾಸ್ತ್ರಜ್ಞಾನದಿಂದಲೂ ಸದಾಚಾರದಿಂದಲೂ ಯುಕ್ತರಾಗಿದ್ದರೋ, ದಾನ ಮಾಡುವ ಇಚ್ಛೆಯುಳ್ಳವರಾಗಿದ್ದರೋ, ಶಾಸ್ತ್ರಪ್ರೇಮಿಗಳಾಗಿದ್ದರೋ, ಇತರರ ಅಭಿಪ್ರಾಯವನ್ನು ತಿಳಿದು ಅವರ ಅಪೇಕ್ಷೆಯಂತೆ ದಾನಕೊಡ ಬೇಕೆಂದು ನಿಶ್ಚಯಿಸುತ್ತಿದ್ದರೋ–ಸತ್ಯಸಂಧರೂ, ಕ್ಷಮಾಶೀಲರೂ, ಲೋಭ-

ಮೋಹಗಳಿಂದ ರಹಿತರೂ-ಸತ್ಪಾತ್ರದಲ್ಲಿ ದಾನಮಾಡುವವರೂ-ವ್ರತನಿಯ ಮಾದಿಗಳಿಂದ ಯುಕ್ತರೂ ಆಗಿದ್ದರೋ, ತಮಗೆ ದುಃಖವಾಗುವಂತೆ ಇತರರಿಗೆ ದುಃಖವಾಗುವುದೆಂಬುದನ್ನು ಮನಗಂಡು ಇತರರಿಗೆ ದುಃಖ ವಾಗದಂತೆ ವರ್ತಿಸುತ್ತಿದ್ದರೋ, ಸೌಮ್ಯವಾದ ಶೀಲವುಳ್ಳವರೂ-ಮಂಗಳಕರ ವಾದ ಆಚಾರವುಳ್ಳವರೂ ದೇವ-ಬ್ರಾಹ್ಮಣರ ಪೂಜಕರೂ ಆಗಿದ್ದರೋ– ಅಂತಹ ಶೀಲ-ಸದಾಚಾರವುಳ್ಳವರು ಮರುಹುಟ್ಟಿನಲ್ಲಿ ಭೂಮಿಯಲ್ಲಿಯೂ ಸ್ವರ್ಗದಲ್ಲಿಯೂ ತಮ್ಮ ಶುಭಕರ್ಮಗಳ ಫಲವನ್ನು ಉಪಭೋಗಿಸುತ್ತಾರೆ.

ಮಾನುಷೇಷ್ವಪಿ ಯೇ ಜಾತಾಸ್ತಾದೃಶಾಃ ಸಮ್ಭವನ್ತಿ ತೇ।
ಯಾದೃಶಾಸ್ತು ತ್ವಯಾ ಪ್ರೋಕ್ತಾಃ ಸರ್ವೇ ಕಲ್ಯಾಣಸಂಯುತಾಃ ॥೩೨॥

ರೂಪಂ ದ್ರವ್ಯಂ ಬಲಂ ಚಾಯುರ್ಭೋಗೈಶ್ವರ್ಯಂ ಕುಲಂ ಶ್ರುತಮ್
ಇತ್ಯೇತತ್ಸರ್ವಸಾದ್ಗುಣ್ಯಂ ದಾನಾದ್ಭವತಿ ನಾನ್ಯಥಾ।
ತಪೋದಾನಮಯಂ ಸರ್ವಮಿತಿ ವಿದ್ಧಿ ಶುಭಾನನೇ ॥೩೩॥

ಶುಭಾನನೆಯೇ! ಮನುಷ್ಯರಾಗಿ ಹುಟ್ಟಿದವರು ನೀನು ಹೇಗೆ ವಿವರಿಸಿ ಹೇಳಿದೆಯೋ ಹಾಗೆಯೇ ಕಲ್ಯಾಣಯುಕ್ತರಾಗಿರುತ್ತಾರೆ. ರೂಪ, ದ್ರವ್ಯ, ಬಲ, ಆಯುಸ್ಸು, ಭೋಗ, ಐಶ್ವರ್ಯ, ಸತ್ಕುಲ, ವಿದ್ಯೆ–ಈ ಎಲ್ಲ ಸದ್ಗುಣಗಳೂ ದಾನದಿಂದಲೇ ಪ್ರಾಪ್ತವಾಗುತ್ತವೆ. ಎಲ್ಲವೂ ತಪಸ್ಸು ಮತ್ತು ದಾನಗಳ ಫಲಗಳೆಂದು ತಿಳಿ.”

ಉಮೆ:

ಅಥ ಕೇಚಿತ್ಪ್ರದೃಶ್ಯನ್ತೇ ಮಾನುಷೇಷ್ವೇವ ಮಾನುಷಾಃ।
ದುರ್ಗತಾಃ ಕ್ಲೇಶಭೂಯಿಷ್ಠಾ ದಾನಭೋಗವಿವರ್ಜಿತಾಃ ॥೩೪॥

ಭಯೈಸ್ತ್ರಿಭಿಃ ಸಮಾಯುಕ್ತಾ ವ್ಯಾಧಿಕ್ಷುದ್ಭಯಸಂಯುತಾಃ।
ದುಷ್ಕಲತ್ರಾಭಿಭೂತಾಶ್ಚ ಸತತಂ ವಿಘ್ನದರ್ಶಕಾಃ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೩೫॥

“ಪತಿದೇವನೇ! ಮನುಷ್ಯರಲ್ಲಿಯೇ ಕೆಲವರು ದುರ್ಗತಿಕರಾಗಿ, ಅತಿಯಾದ ಕ್ಲೇಶಗಳಿಂದ ಪೀಡಿತರಾಗಿ, ದಾನಮಾಡಲು ಅಸಮರ್ಥರಾಗಿ,

ಭೋಗಗಳಿಂದ ವಂಚಿತರಾಗಿ, ಆಧ್ಯಾತ್ಮಿಕ-ಆಧಿದೈವಿಕ-ಆಧಿಭೌತಿಕಗಳೆಂಬ ಮೂರು ವಿಧವಾದ ಭಯಗಳಿಂದಲೂ ಯುಕ್ತರಾಗಿ, ರೋಗ-ಹಸಿವು ಮತ್ತು ಭಯಗಳಿಂದ ಪೀಡಿತರಾಗಿ, ದುಷ್ಟೆಯರಾದ ಪತ್ನಿಯರಿಂದ ತಿರಸ್ಕೃತರಾಗಿ, ಯಾವಾಗಲೂ ಎಲ್ಲ ಕಾರ್ಯಗಳಲ್ಲಿಯೂ ವಿಘ್ನವನ್ನೇ ಕಾಣುತ್ತಾ ಇರುವುದು ಕಂಡುಬರುತ್ತದೆ. ಯಾವ ಕರ್ಮಫಲದಿಂದ ಹೀಗಾಗುತ್ತದೆಂಬುದನ್ನು ಹೇಳುವ ಕೃಪೆಮಾಡು."

ಮಹೇಶ್ವರ:

ಯೇ ಪುರಾ ಮನುಜಾ ದೇವಿ ಆಸುರಂ ಭಾವಮಾಶ್ರಿತಾಃ।
ಕ್ರೋಧಲೋಭಸಮಾಯುಕ್ತಾ ನಿರನ್ನಾದ್ಯಾಶ್ಚ ನಿಷ್ಕ್ರಿಯಾಃ ॥೩೨೬॥

ನಾಸ್ತಿಕಾಶ್ಚೈವ ಧೂರ್ತಾಶ್ಚ ಮೂರ್ಖಾಶ್ಚಾತ್ಮಪರಾಯಣಾಃ।
ಪರೋಪತಾಪಿನೋ ದೇವಿ ಪ್ರಾಯಶಃ ಪ್ರಾಣಿನಿರ್ದಯಾಃ ॥೩೨೭॥

ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ।
ಕಥಂಚಿತ್ಪ್ರಾಪ್ಯಮಾನುಷ್ಯಂ ತತ್ರ ತೇ ದುಃಖಪೀಡಿತಾಃ ॥೩೨೮॥

ಸರ್ವತಃ ಸಮ್ಭವನ್ತ್ಯೇವ ಪೂರ್ವಮಾತ್ಮಪ್ರಮಾದತಃ।
ಯಥಾ ತೇ ಪೂರ್ವಕಥಿತಾಸ್ತಥಾ ತೇ ಸಮ್ಭವನ್ತ್ಯುತ ॥೩೨೯॥

"ದೇವಿ! ಯಾರು ಹಿಂದಿನ ಜನ್ಮದಲ್ಲಿ ಆಸುರೀಭಾವವನ್ನು ಹೊಂದಿದ್ದರೋ, ಕ್ರೋಧ-ಲೋಭಗಳಿಂದ ಯುಕ್ತರಾಗಿದ್ದರೋ, ಊಟ-ಉಪಚಾರಗಳಿಂದ ವಂಚಿತರಾಗಿದ್ದರೋ, ಯಾವ ಕಾರ್ಯವನ್ನೂ ಮಾಡದೇ ಅಲಸರಾಗಿದ್ದರೋ, ನಾಸ್ತಿಕರಾಗಿದ್ದರೋ, ಧೂರ್ತರಾಗಿದ್ದರೋ, ಮೂರ್ಖರೂ-ಸ್ವಾರ್ಥಿಗಳೂ ಆಗಿದ್ದರೋ, ಇತರರಿಗೆ ಉಪದ್ರವಕೊಡುವುದರಲ್ಲಿಯೇ ಸಂತುಷ್ಟರಾಗಿದ್ದರೋ, ಪ್ರಾಯಶಃ ಪ್ರಾಣಿಗಳ ವಿಷಯದಲ್ಲಿ ನಿರ್ದಯರಾಗಿದ್ದರೋ–ಅಂತಹವರು ಯಾವಾಗಲಾದರೊಮ್ಮೆ ಮನುಷ್ಯಜನ್ಮವನ್ನು ಪಡೆದು ತಾವೇ ಮಾಡಿದ ದುಷ್ಕರ್ಮಗಳ ಫಲದಿಂದಾಗಿ ಸದಾ ದುಃಖಪೀಡಿತರಾಗಿರುತ್ತಾರೆ ಮತ್ತು ನೀನು ಈ ಹಿಂದೆ ವಿವರಿಸಿದ ದೋಷಗಳಿಂದ ಕೂಡಿರುತ್ತಾರೆ.

ಶುಭಾಶುಭಂ ಕೃತಂ ಕರ್ಮ ಸರ್ವದುಃಖಫಲೋದಯಮ್।
ಇತಿ ತೇ ಕಥಿತಂ ದೇವಿ ಭೂಯಃ ಶ್ರೋತುಂ ಕಿಮಿಚ್ಛಸಿ ॥೩೩೦॥

ಮನುಷ್ಯನು ಮಾಡಿದ ಪುಣ್ಯ-ಪಾಪಕರ್ಮಗಳೇ ಅವನ ಸುಖ-ದುಃಖಗಳಿಗೆ ಕಾರಣಗಳಾಗುತ್ತವೆ. ಹೀಗೆ ನಾನು ನಿನಗೆ ಎಲ್ಲವನ್ನೂ ಹೇಳಿರುತ್ತೇನೆ. ಪುನಃ ನೀನೇನನ್ನು ನನ್ನಿಂದ ಕೇಳಲು ಬಯಸುವೆ?"

ಅಂಧತ್ವ-ಬಧಿರತ್ವಗಳೇ ಮೊದಲಾದ ದೋಷಗಳಿಗೆ ಮತ್ತು ರೋಗಗಳಿಗೆ ಕಾರಣಗಳಾದ ದುಷ್ಕರ್ಮಗಳ ವರ್ಣನೆ

ಉಮೆ:

ಭಗವನ್ದೇವದೇವೇಶ ಮಮ ಪ್ರೀತಿವಿವರ್ಧನ।
ಜಾತ್ಯನ್ಧಾಶ್ಚೈವ ದೃಶ್ಯನ್ತೇ ಜಾತಾ ವಾ ನಷ್ಟಚಕ್ಷುಷಃ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೩೩೧॥

"ಪೂಜ್ಯನೇ! ದೇವಾಧಿದೇವತೆಗಳಿಗೂ ಈಶನೇ! ನನಗೆ ಪ್ರೀತಿ ಯನ್ನುಂಟುಮಾಡುವವನೇ! ಮಹಾದೇವನೇ! ಕೆಲವು ಕಡೆ ಹುಟ್ಟು ಕುರುಡರನ್ನೂ ಕಾಣುತ್ತೇವೆ. ಕೆಲವುಕಡೆ ಹುಟ್ಟಿದನಂತರ ಕಣ್ಣುಗಳನ್ನು ಕಳೆದುಕೊಂಡಿರುವವರನ್ನೂ ಕಾಣುತ್ತೇವೆ. ಯಾವ ಕರ್ಮಫಲದಿಂದ ಈ ವಿಧವಾದ ಅಂಧತ್ವವು ಪ್ರಾಪ್ತವಾಗುತ್ತದೆ? ಈ ಕರ್ಮರಹಸ್ಯವನ್ನು ದಯಮಾಡಿ ಹೇಳು."

ಮಹೇಶ್ವರ:

ಯೇ ಪುರಾ ಕಾಮಕಾರೇಣ ಪರವೇಶ್ಮಸು ಲೋಲುಪಾಃ।
ಪರಸ್ತ್ರಿಯೋಽಭಿವೀಕ್ಷನ್ತೇ ದುಷ್ಟೇನೈವ ಸ್ವಚಕ್ಷುಷಾ ॥೩೩೨॥
ಅನ್ಧೀಕುರ್ವನ್ತಿ ಯೇ ಮರ್ತ್ಯಾಃ ಕ್ರೋಧಲೋಭಸಮನ್ವಿತಾಃ।
ಲಕ್ಷಣಜ್ಞಾಶ್ಚ ರೂಪೇಷು ಅಯಥಾವತ್ಪ್ರದರ್ಶಕಾಃ ॥೩೩೩॥
ಏವಂಯುಕ್ತಸಮಾಚಾರಾಃ ಕಾಲಕರ್ಮವಶಾಸ್ತು ತೇ।
ದಣ್ಡಿತಾ ಯಮದಣ್ಡೇನ ನಿರಯಸ್ಥಾಶ್ಚಿರಂ ಪ್ರಿಯೇ ॥೩೩೪॥

"ಪ್ರಿಯಳೇ! ಯಾರು ಹಿಂದಿನ ಜನ್ಮದಲ್ಲಿ ಸ್ವೇಚ್ಛಾಚಾರಿಗಳಾಗಿ ಕಾಮಾ

ಭಿಭೂತರಾಗಿ ಇತರರ ಮನೆಗಳಲ್ಲಿ ಪರಸ್ತ್ರೀಲೋಲರಾಗಿದ್ದರೋ, ದುಷ್ಟವಾದ (ಕಾಮಾಭಿಭೂತವಾದ) ತಮ್ಮ ಕಣ್ಣುಗಳಿಂದ ಪರಸ್ತ್ರೀಯರನ್ನು ವೀಕ್ಷಿಸುತ್ತಿದ್ದರೋ, ಕ್ರೋಧ-ಲೋಭಗಳಿಂದ ಕೂಡಿದವರಾಗಿ ಇತರರ ಕಣ್ಣುಗಳನ್ನು ಕೀಳಿಸಿದ್ದರೋ, ತಾವೇ ಅತ್ಯಂತಲಕ್ಷಣಯುಕ್ತರೆಂದು ಭ್ರಮಿಸಿ ವ್ಯರ್ಥವಾಗಿ ಪ್ರದರ್ಶಿಸುತ್ತಿದ್ದರೋ–ಅಂತಹವರು ಕಾಲಧರ್ಮವನ್ನು (ಮರಣವನ್ನು) ಹೊಂದಿದನಂತರ ಯಮನ ದಂಡದಿಂದ ದಂಡಿಸಲ್ಪಟ್ಟವರಾಗಿ ಬಹಳ ಕಾಲದವರೆಗೆ ನರಕದಲ್ಲಿಯೇ ಇರುತ್ತಾರೆ.

ಯದಿ ಚೇನ್ಮಾನುಷಂ ಜನ್ಮ ಲಭೇರಂಸ್ತೇ ತಥಾಪಿ ವಾ।
ಸ್ವಭಾವತೋ ವಾ ಜಾತಾ ಅನ್ಧಾ ಏವ ಭವನ್ತಿ ತೇ।
ಅಭಿರೋಗಯುತಾ ವಾಪಿ ನಾಸ್ತಿ ತತ್ರ ವಿಚಾರಣಾ ॥೩೩೫॥

ಅನೇಕ ವರ್ಷಗಳ ಕಾಲ ನರಕವಾಸವನ್ನು ಅನುಭವಿಸಿದನಂತರ ಅವರೇನಾದರೂ ಮನುಷ್ಯಜನ್ಮವನ್ನು ಹೊಂದಿದರೆ ಹುಟ್ಟುಕುರುಡರಾಗಿ ಹುಟ್ಟುತ್ತಾರೆ ಅಥವಾ ಹುಟ್ಟಿದನಂತರ ಕುರುಡರಾಗುತ್ತಾರೆ. ಇಲ್ಲದಿದ್ದರೆ ನೇತ್ರರೋಗದಿಂದಾದರೂ ನರಳುತ್ತಿರುತ್ತಾರೆ. ಈ ವಿಷಯದಲ್ಲಿ ವಿಚಾರಮಾಡುವ ಅಗತ್ಯವೇ ಇಲ್ಲ."

ಉಮೆ:

ಮುಖರೋಗಯುತಾಃ ಕೇಚಿದ್ದೃಶ್ಯನ್ತೇ ಸತತಂ ನರಾಃ।
ದನ್ತಕಣ್ಠಕಪೋಲಸ್ಥೈರ್ವ್ಯಾಧಿಭಿರ್ಬಹುಪೀಡಿತಾಃ ॥೩೩೬॥
ಆದಿಪ್ರಭೃತಿ ವೈ ಮರ್ತ್ಯಾ ಜಾತಾ ವಾಪ್ಯಥ ಕಾರಣಾತ್।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೩೩೭॥

"ಪ್ರಭುವೇ! ಕೆಲವರು ಮುಖರೋಗದಿಂದ ಪೀಡಿತರಾಗಿರುತ್ತಾರೆ. ಕೆಲವರಿಗೆ ಹಲ್ಲುನೋವು ಸತತವಾಗಿರುತ್ತದೆ. ಕೆಲವರಿಗೆ ಕುತ್ತಿಗೆ-ಕೆನ್ನೆಗಳಲ್ಲಿ ಬಾಧೆಯಿರುತ್ತದೆ. ಕೆಲವರು ಹುಟ್ಟಿದ ಮೊದಲ್ಗೊಂಡು ರೋಗಪೀಡಿತರಾಗಿರುತ್ತಾರೆ. ಕೆಲವರಿಗೆ ಹುಟ್ಟಿದನಂತರ ರೋಗ-ರುಜಿನಾದಿಗಳು ಪ್ರಾರಂಭವಾಗುತ್ತವೆ. ಯಾವ ಕರ್ಮವಿಪಾಕದಿಂದ ಹೀಗೆಲ್ಲಾ ಆಗುವುದೆಂಬುದನ್ನು ಹೇಳುವ ಕೃಪೆಮಾಡು."

ಮಹೇಶ್ವರ:

“ದೇವಿ! ಕೇಳು. ಈ ವಿಷಯವನ್ನು ನಾನು ಸಂತೋಷದಿಂದ ಹೇಳುವೆನು.

ಕುವಕ್ತಾರಸ್ತು ಯೇ ದೇವಿ ಜಿಹ್ವಯಾ ಕಟುಕಂ ಭೃಶಮ್ ॥೩೩೮॥
ಅಸತ್ಯಂ ಪರುಷಂ ಘೋರಂ ಗುರೂನ್ಪ್ರತಿ ಪರಾನ್ಪ್ರತಿ।
ಜಿಹ್ವಾಬಾಧಾಂ ತದಾನ್ಯೇಷಾಂ ಕುರ್ವತೇ ಕೋಪಕಾರಣಾತ್ ॥೩೩೯॥
ಪ್ರಾಯಶೋಽನೃತಭೂಯಿಷ್ಠಾ ನರಾಃ ಕಾರ್ಯವಶೇನ ವಾ।
ತೇಷಾಂ ಜಿಹ್ವಾಪ್ರದೇಶಸ್ಥಾ ವ್ಯಾಧಯಃ ಸಮ್ಭವನ್ತಿ ತೇ ॥೩೪೦॥

“ಯಾರು ನಾಲಿಗೆಯಿಂದ ಕೆಟ್ಟಮಾತುಗಳನ್ನೂ ಕಠೋರವಾದ ಮಾತುಗಳನ್ನೂ ಆಡುವರೋ, ಸುಳ್ಳುಹೇಳುವರೋ, ಗುರುಜನರ ವಿಷಯದಲ್ಲಿಯೂ ಮತ್ತು ಇತರರ ವಿಷಯದಲ್ಲಿಯೂ ಕಠೋರವೂ ಕ್ರೂರವೂ ಆದ ಮಾತುಗಳನ್ನಾಡುವರೋ, ಕ್ರೋಧವಶರಾಗಿ ಮತ್ತೊಬ್ಬರ ನಾಲಿಗೆಯನ್ನು ಕತ್ತರಿಸುವರೋ, ಕಾರ್ಯವನ್ನು ಸಾಧಿಸಲು ಅತ್ಯಧಿಕವಾಗಿ ಸುಳ್ಳುಹೇಳುವರೋ–ಅಂತಹವರಿಗೆ ಮರುಹುಟ್ಟಿನಲ್ಲಿ ನಾಲಿಗೆಗೆ ಸಂಬಂಧಿಸಿದ ರೋಗಗಳು ಬರುತ್ತವೆ.

ಕುಶ್ರೋತಾರಸ್ತು ಯೇ ಚಾರ್ಥಂ ಪರೇಷಾಂ ಕರ್ಣನಾಶಕಾಃ।
ಕರ್ಣರೋಗಾನ್ಬಹುವಿಧಾಲ್ಲಭನ್ತೇ ತೇ ಪುನರ್ಭವೇ ॥೩೪೧॥

ಯಾರು ಪರದೋಷಗಳನ್ನೂ ಪರನಿಂದೆಯನ್ನೂ ಕೇಳುವರೋ ಮತ್ತು ಮತ್ತೊಬ್ಬರ ಕಿವಿಯನ್ನೂ ಹಾಳುಮಾಡುವರೋ ಅಂತಹವರು ಮರುಹುಟ್ಟಿನಲ್ಲಿ ಕಿವಿಗೆ ಸಂಬಂಧಿಸಿದಂತೆ ನಾನಾವಿಧವಾದ ರೋಗಗಳಿಗೆ ಈಡಾಗುತ್ತಾರೆ.

ದನ್ತರೋಗಶಿರೋರೋಗಕರ್ಣರೋಗಾಸ್ತಥೈವ ಚ।
ಅನ್ಯೇ ಮುಖಾಶ್ರಿತಾ ದೋಷಾಃ ಸರ್ವೇ ಚಾತ್ಮಕೃತಂ ಫಲಮ್॥

ಹೀಗೆಯೇ ಮನುಷ್ಯರಿಗೆ ದಂತರೋಗ, ಶಿರೋರೋಗ, ಕರ್ಣರೋಗ ಇವೇ ಮುಂತಾದ ಮುಖಕ್ಕೆ ಸಂಬಂಧಿಸಿದ ರೋಗಗಳೆಲ್ಲವೂ ಅವರು ಹಿಂದೆ ಮಾಡಿದ್ದ ದುಷ್ಕಾರ್ಯಗಳಿಂದಲೇ ಪ್ರಾಪ್ತವಾಗುತ್ತವೆ.”

ಉಮೆ:

ಪೀಡ್ಯನ್ತೇ ಸತತಂ ದೇವ ಮಾನುಷೇಷ್ವೇವ ಕೇಚನ।
ಕುಕ್ಷಿಪಕ್ಷಾಶ್ರಿತೈರ್ದೋಷೈರ್ವ್ಯಾಧಿಭಿಶ್ಚೋದರಾಶ್ರಿತೈಃ ॥೩೪೩॥

"ದೇವ! ಮನುಷ್ಯರಲ್ಲಿ ಕೆಲವರು ಜಠರ, ಪಕ್ಕೆ ಮೊದಲಾದ ಉದರಗಳಿಗೆ ಸಂಬಂಧಿಸಿದ ರೋಗಗಳಿಂದ ಪೀಡಿತರಾಗಿರುತ್ತಾರೆ.

ತೀಕ್ಷ್ಣಶೂಲೈಶ್ಚ ಪೀಡ್ಯನ್ತೇ ನರಾ ದುಃಖಪರಿಪ್ಲುತಾಃ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೩೪೪॥

ಕೆಲವರು ಅತಿತೀಕ್ಷ್ಣವಾದ ಹೊಟ್ಟೆನೋವಿನಿಂದ ನರಳುತ್ತಾ ದುಃಖದಲ್ಲಿ ಮುಳುಗಿಹೋಗಿರುತ್ತಾರೆ. ಯಾವ ಕರ್ಮಫಲದಿಂದ ಹೀಗಾಗುವುದೆಂಬುದನ್ನು ಹೇಳುವ ಕೃಪೆಮಾಡು."

ಮಹೇಶ್ವರ:

ಯೇ ಪುರಾ ಮನುಜಾ ದೇವಿ ಕಾಮಕ್ರೋಧವಶಾ ಭೃಶಮ್।
ಆತ್ಮಾರ್ಥಮೇವ ಚಾಹಾರಂ ಭುಞ್ಜನ್ತೇ ನಿರಪೇಕ್ಷಕಾಃ ॥೩೪೫॥

ಅಭಕ್ಷ್ಯಾಹಾರದಾನೈಶ್ಚ ವಿಶ್ವಸ್ತಾನಾಂ ವಿಷಪ್ರದಾಃ।
ಅಭಕ್ಷ್ಯಭಕ್ಷದಾಶ್ಚೈವ ಶೌಚಮಙ್ಗಲವರ್ಜಿತಾಃ ॥೩೪೬॥

ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ।
ಕಥಂಚಿತ್ಪ್ರಾಪ್ಯ ಮಾನುಷ್ಯಂ ತತ್ರ ತೇ ವ್ಯಾಧಿಪೀಡಿತಾಃ ॥೩೪೭॥

"ದೇವಿ! ಹಿಂದಿನ ಜನ್ಮದಲ್ಲಿ ಯಾರು ಕಾಮ-ಕ್ರೋಧಗಳಿಗೆ ವಶರಾಗಿ ಬೇರೆ ಯಾರನ್ನೂ ನಿರೀಕ್ಷಿಸದೇ ಆತ್ಮಾರ್ಥವಾಗಿಯೇ ಆಹಾರವನ್ನು ಸಿದ್ಧಪಡಿಸಿಕೊಂಡು ತಿನ್ನುತ್ತಿದ್ದರೋ, ತಿನ್ನಬಾರದುದನ್ನೂ ದಾನವಾಗಿ ಕೊಡುತ್ತಿದ್ದರೋ, ವಿಶ್ವಾಸವನ್ನಿಟ್ಟಿದ್ದವರಿಗೆ ವಿಷಹಾಕುತ್ತಿದ್ದರೋ, ತಿನ್ನಬಾರದುದನ್ನು ತಿನ್ನಲು ಕೊಡುತ್ತಿದ್ದರೋ, ಪರಿಶುದ್ಧ ಮತ್ತು ಮಂಗಳಕಾರ್ಯಗಳಿಂದ ರಹಿತರಾಗಿದ್ದರೋ–ಅಂತಹ ದುರಾಚಾರವುಳ್ಳವರು ಮರುಹುಟ್ಟಿನಲ್ಲಿ ಯಾವುದೋ ಅಲ್ಪವಾದ ಪುಣ್ಯವಿಶೇಷದಿಂದ ಮನುಷ್ಯತ್ವವನ್ನು ಹೊಂದಿದರೆ ನೀನು ಹೇಳಿದ ರೋಗಗಳಿಂದ ಪೀಡಿತರಾಗುತ್ತಾರೆ.

ತೈಸ್ತೈರ್ಬಹುವಿಧಾಕಾರೈರ್ವ್ಯಾಧಿಭಿರ್ದುಃಖಸಂಶ್ರಿತಾಃ।
ಭವನ್ತ್ಯೇವ ತಥಾ ದೇವಿ ಯಥಾ ಚೈವ ಕೃತಂ ಪುರಾ ॥೩೪೮॥

ನಾನಾವಿಧವಾದ ರೂಪ-ಲಕ್ಷಣಗಳಿರುವ ರೋಗಗಳಿಂದ ಪೀಡಿಸಲ್ಪಡುವ ಅವರು ದುಃಖದಲ್ಲಿ ಮುಳುಗಿಹೋಗುತ್ತಾರೆ. ಒಟ್ಟಿನಲ್ಲಿ ಹೇಳುವುದಾದರೆ ಜೀವಿಗಳು ಹಿಂದಿನ ಜನ್ಮದಲ್ಲಿ ಯಾವ ಕಾರ್ಯವನ್ನು ಮಾಡಿರುವರೋ ಅದಕ್ಕೆ ತಕ್ಕುದಾದ ಫಲಗಳನ್ನು ಜನ್ಮಾಂತರದಲ್ಲಿ ಪಡೆದೇ ತೀರುತ್ತಾರೆ."

ಉಮೆ:

ದೃಶ್ಯನ್ತೇ ಸತತಂ ದೇವ ವ್ಯಾಧಿಭಿರ್ಮೇಹನಾಶ್ರಿತೈಃ।
ಪೀಡ್ಯಮಾನಾಸ್ತಥಾ ಮರ್ತ್ಯಾ ಅಶ್ಮರೀಶರ್ಕರಾದಿಭಿಃ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೩೪೯॥

"ದೇವ! ಲೋಕದಲ್ಲಿ ಅನೇಕರು ಪ್ರಮೇಹರೋಗದಿಂದ ನರಳುತ್ತಿರುವುದು ಕಂಡುಬರುತ್ತದೆ. ಕೆಲವರು ಅಶ್ಮರೀರೋಗದಿಂದಲೂ (ಮೂತ್ರಕೋಶದಲ್ಲಿ ಕಲ್ಲಿರುವುದು), ಶರ್ಕರಾರೋಗದಿಂದಲೂ (ಮಧುಮೇಹ) ಪೀಡಿತರಾಗಿರುತ್ತಾರೆ. ಯಾವ ಕರ್ಮಫಲದಿಂದ ಅವರು ಇಂತಹ ರೋಗಗಳನ್ನು ಅನುಭವಿಸುತ್ತಾರೆ? ದಯಮಾಡಿ ಹೇಳು."

ಮಹೇಶ್ವರ:

ಯೇ ಪುರಾ ಮನುಜಾ ದೇವಿ ಪರದಾರಪ್ರಧರ್ಷಕಾಃ।
ತಿರ್ಯಗ್ಯೋನಿಷು ಧೂರ್ತಾ ವೈ ಮೈಥುನಾರ್ಥಂ ಚರನ್ತಿ ಚ ॥೩೫೦॥
ಕಾಮದೋಷೇಣ ಯೇ ಧೂರ್ತಾಃ ಕನ್ಯಾಸು ವಿಧವಾಸು ಚ ।
ಬಲಾತ್ಕಾರೇಣ ಗಚ್ಛನ್ತಿ ರೂಪದರ್ಪಸಮನ್ವಿತಾಃ ॥೩೫೧॥
ತಾದೃಶಾ ಮರಣಂ ಪ್ರಾಪ್ತಾಃ ಪುನರ್ಜನ್ಮನಿ ಶೋಭನೇ।
ಯದಿ ಚೇನ್ಮಾನುಷಂ ಜನ್ಮ ಲಭೇರಂಸ್ತೇ ತಥಾವಿಧಾಃ।
ಮೇಹನಸ್ಥೈಸ್ತತೋ ಘೋರೈಃ ಪೀಡನ್ತೇ ವ್ಯಾಧಿಭಿಃ ಪ್ರಿಯೇ ॥೩೫೨॥

"ದೇವಿ! ಯಾರು ಹಿಂದಿನ ಜನ್ಮದಲ್ಲಿ ಪರಸ್ತ್ರೀಯರ ಶೀಲಭಂಗಮಾಡಿ

ದ್ದರೋ, ಯಾವ ಧೂರ್ತರು ಪಶುಯೋನಿಯಲ್ಲಿ ಮೈಥುನಕ್ರಿಯೆಯನ್ನು ಮಾಡಿದ್ದರೋ, ಕಾಮಾಭಿಭೂತರಾದ ಯಾವ ಧೂರ್ತರು ರೂಪದ ದರ್ಪದಿಂದ ಕೂಡಿದವರಾಗಿ ಕನ್ಯೆಯರೊಡನೆ ಮತ್ತು ವಿಧವೆಯರೊಡನೆ ಸಮಾಗಮವನ್ನು ಬಲಾತ್ಕಾರಪೂರ್ವಕವಾಗಿ ಮಾಡಿದ್ದರೋ–ಅಂತಹವರು ಮರಣಹೊಂದಿದನಂತರ ಪುನರ್ಜನ್ಮದಲ್ಲಿ ಮನುಷ್ಯರಾಗಿ ಹುಟ್ಟಿದರೆ ಘೋರವಾದ ಪ್ರಮೇಹರೋಗಗಳಿಂದ ಪೀಡಿತರಾಗುತ್ತಾರೆ."

ಉಮೆ:

ಭಗವನ್ಮಾನುಷಾಃ ಕೇಚಿದ್ದೃಶ್ಯನ್ತೇ ಶೋಷಿಣಃ ಕೃಶಾಃ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೩೫೩॥

"ಪೂಜ್ಯನೇ! ಲೋಕದಲ್ಲಿ ಕೆಲವರು ಒಣಕಲು ಶರೀರವುಳ್ಳವರಾಗಿಯೂ ಕೃಶರಾಗಿಯೂ (ಕ್ಷಯರೋಗಪೀಡಿತರಾಗಿಯೂ) ಇರುತ್ತಾರೆ. ಯಾವ ಕರ್ಮಫಲದಿಂದ ಅವರು ಹೀಗಿರುವರೆಂಬುದನ್ನು ಹೇಳು."

ಮಹೇಶ್ವರ:

ಯೇ ಪುರಾ ಮನುಜಾ ದೇವಿ ಮಾಂಸಲುಬ್ಧಾಃ ಸುಲೋಲುಪಾಃ।
ಆತ್ಮಾರ್ಥಂ ಸ್ವಾದುಗೃದ್ಧಾಶ್ಚ ಪರಭೋಗೋಪತಾಪಿನಃ ॥೩೫೪॥
ಅಭ್ಯಸೂಯಾಪರಾಶ್ಚಾಪಿ ಪರಭೋಗೇಷು ಯೇ ನರಾಃ।
ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ ॥೩೫೫॥
ಶೋಷವ್ಯಾಧಿಯುತಾಸ್ತತ್ರ ನರಾ ಧಮನಿಸಂತತಾಃ।
ಭವನ್ತ್ಯೇವ ನರಾ ದೇವಿ ಪಾಪಕರ್ಮೋಪಭೋಗಿನಃ ॥೩೫೬॥

"ದೇವಿ! ಯಾರು ಹಿಂದಿನ ಜನ್ಮದಲ್ಲಿ ಮಾಂಸದಲ್ಲಿಯೇ ಹೆಚ್ಚಿನ ಅಭಿರುಚಿಯುಳ್ಳವರಾಗಿದ್ದರೋ, ಅತ್ಯಂತಲೋಲುಪರಾಗಿದ್ದರೋ, ತಮಗಾಗಿ ಮಾತ್ರವೇ ರುಚಿಕರವಾದ ಪದಾರ್ಥಗಳನ್ನು ಮಾಡಿಸಿಕೊಂಡು ತಿನ್ನುವವರಾಗಿದ್ದರೋ, ಇತರರು ಭೋಗಪಡುವುದನ್ನು ನೋಡಿ ಪರಿತಪಿಸುತ್ತಿದ್ದರೋ, ಇತರರ ಭೋಗಗಳಲ್ಲಿ ಅಸೂಯೆಯುಳ್ಳವರಾಗಿದ್ದರೋ–ಅಂತಹ ದುಷ್ಟವಾದ ಆಚಾರ-ವಿಚಾರಗಳಿದ್ದವರು ಮರುಹುಟ್ಟಿನಲ್ಲಿ ನರ-ನಾಡಿಗಳೆಲ್ಲವೂ ಎದ್ದುಕಾಣುವಂತಹ ಕೃಶಶರೀರಗಳಿಂದ

ಕೂಡಿರುತ್ತಾರೆ. ಹೀಗೆ ಅವರು ಪಾಪಕರ್ಮದ ಫಲವನ್ನು ಉಪಭೋಗಿಸುತ್ತಾರೆ."

ಉಮೆ:

ಭಗವನ್ಮಾನುಷಾಃ ಕೇಚಿತ್ಕ್ಲಿಶ್ಯನ್ತೇ ಕುಷ್ಠರೋಗಿಣಃ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೩೫೭॥

"ಪೂಜ್ಯನೇ! ಕೆಲವು ಮನುಷ್ಯರು ಕುಷ್ಠರೋಗದಿಂದ ಕ್ಲೇಶಪಡುತ್ತಿರುತ್ತಾರೆ. ಯಾವ ಕರ್ಮಫಲದಿಂದ ಹೀಗೆ ಅವರು ಹುಟ್ಟುವರೆಂಬುದನ್ನು ಹೇಳುವ ಕೃಪೆಮಾಡು."

ಮಹೇಶ್ವರ:

ಯೇ ಪುರಾ ಮನುಜಾ ದೇವಿ ಪರೇಷಾಂ ರೂಪನಾಶನಾಃ।
ಆಘಾತವಧಬನ್ಧೈಶ್ಚ ವೃಥಾ ದಣ್ಡೇನ ಮೋಹಿತಾಃ ॥೩೫೮॥
ಇಷ್ಟನಾಶಕರಾ ಯೇ ತು ಅಪಥ್ಯಾಹಾರದಾ ನರಾಃ।
ಚಿಕಿತ್ಸಕಾ ವಾ ದುಷ್ಟಾಶ್ಚ ದ್ವೇಷಲೋಭಸಮನ್ವಿತಾಃ ॥೩೫೯॥
ನಿರ್ದಯಾಃ ಪ್ರಾಣಿಹಿಂಸಾಯಾಂ ಮಲದಾಶ್ಚಿತ್ತನಾಶನಾಃ।
ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ।
ಯದಿ ವೈ ಮಾನುಷಂ ಜನ್ಮ ಲಭೇರಂಸ್ತೇಷು ದುಃಖಿತಾಃ ॥೩೬೦॥
ಅತ್ರ ತೇ ಕ್ಲೇಶಸಂಯುಕ್ತಾಃ ಕುಷ್ಠರೋಗಶತೈರ್ವೃತಾಃ।
ಕೇಚಿತ್ತ್ವಗ್ದೋಷಸಂಯುಕ್ತಾ ವ್ರಣಕುಷ್ಠೈಶ್ಚ ಸಂಯುತಾಃ ॥೩೬೧॥
ಶ್ವಿತ್ರಕುಷ್ಠಯುತಾ ವಾಪಿ ಬಹುಧಾ ಕುಷ್ಠಸಂಯುತಾಃ।
ಭವನ್ತ್ಯೇವ ನರಾ ದೇವಿ ಯಥಾ ಯೇನ ಕೃತಂ ಫಲಮ್ ॥೩೬೨॥

"ದೇವಿ! ಹಿಂದಿನ ಜನ್ಮದಲ್ಲಿ ಯಾರು ಮೋಹವಶರಾಗಿ ಆಘಾತ, ವಧ, ಬಂಧನ ಮತ್ತು ವ್ಯರ್ಥವಾದ ಶಿಕ್ಷೆಗಳ ಮೂಲಕವಾಗಿ ಇತರರನ್ನು ವಿರೂಪಗೊಳಿಸಿರುವರೋ, ಒಬ್ಬನ ಪ್ರಿಯವಸ್ತುವನ್ನು ಹಾಳುಮಾಡಿರುವರೋ, ವೈದ್ಯರಾಗಿದ್ದೂ ಇತರರಿಗೆ ಅಪಥ್ಯವಾದ ಅನುಪಾನವನ್ನು ಸೂಚಿಸಿರುವರೋ, ದ್ವೇಷ ಮತ್ತು ಲೋಭಗಳಿಂದ ಕೂಡಿದವರಾಗಿ

ದುಷ್ಟರಾಗಿದ್ದರೋ, ಪ್ರಾಣಿಗಳನ್ನು ಹಿಂಸಿಸುವುದರಲ್ಲಿ ನಿರ್ದಯರಾಗಿದ್ದರೋ, ಕಿಲುಬು ಮುಂತಾದ ಅಶುದ್ಧವಾದ ಪದಾರ್ಥಗಳನ್ನು ತಿನ್ನಲು ಕೊಟ್ಟು ಬುದ್ಧಿಯನ್ನು ವಿನಾಶಗೊಳಿಸಿರುವರೋ–ಅಂತಹ ದುಷ್ಟವಾದ ಆಚಾರ-ವಿಚಾರಗಳಿದ್ದ ಜನರು ಮರಣಾನಂತರ ಒಂದು ವೇಳೆ ಮನುಷ್ಯಜನ್ಮವನ್ನು ಹೊಂದಿದ್ದೇ ಆದರೆ ಆ ಜನ್ಮದಲ್ಲಿ ಸದಾ ದುಃಖಿಗಳಾಗಿಯೇ ಇರುತ್ತಾರೆ. ಕ್ಲೇಶದಾಯಕವಾದ ನೂರಾರು ಬಗೆಯ ಕುಷ್ಠರೋಗಗಳಿಂದ ಪೀಡಿತರಾಗಿರುತ್ತಾರೆ. ಕೆಲವರು ಚರ್ಮದ ರೋಗದಿಂದಲೂ, ಕೆಲವರು ವ್ರಣಕುಷ್ಠರೋಗದಿಂದಲೂ ನರಳುತ್ತಿರುತ್ತಾರೆ. ಕೆಲವರಿಗೆ ಕುಷ್ಠ-ಶ್ವಿತ್ರ (ತೊನ್ನು) ಎರಡು ರೋಗಗಳು ಇರುತ್ತವೆ. ಅವರು ಮಾಡಿದ ಕರ್ಮಗಳಿಗೆ ಅನುಸಾರವಾಗಿ ನಾನಾವಿಧವಾದ ಕುಷ್ಠರೋಗಗಳಿಗೆ ಈಡಾಗುತ್ತಾರೆ.”

ಉಮೆ:

ಭಗವನ್ಮಾನುಷಾಃ ಕೇಚಿದಙ್ಗಹೀನಾಶ್ಚ ಪಙ್ಗವಃ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೩೬೩॥

“ಪೂಜ್ಯನೇ! ಕೆಲವರು ಮನುಷ್ಯರು ಅಂಗಹೀನರಾಗಿಯೂ, ಹೆಳವರಾಗಿಯೂ ಇರುತ್ತಾರೆ. ಯಾವ ಕರ್ಮಫಲದಿಂದ ಅವರು ಹೀಗಾಗುತ್ತಾರೆಂಬುದನ್ನು ಹೇಳುವ ಕೃಪೆಮಾಡು.”

ಮಹೇಶ್ವರ:

ಯೇ ಪುರಾ ಮನುಜಾ ದೇವಿ ಲೋಭಮೋಹಸಮಾವೃತಾಃ।
ಪ್ರಾಣಿನಾಂ ಪ್ರಾಣಹಿಂಸಾರ್ಥಮಙ್ಗವಿಘ್ನಂ ಪ್ರಕುರ್ವತೇ ॥೩೬೪॥
ಶಸ್ತ್ರೇಣೋತ್ಕೃತ್ಯ ವಾ ದೇವಿ ಪ್ರಾಣಿನಾಂ ಚೇಷ್ಟನಾಶಕಾಃ।
ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ ॥೩೬೫॥
ತದಙ್ಗಹೀನಾ ವೈ ಪ್ರೇತ್ಯ ಭವನ್ತ್ಯೇವ ನ ಸಂಶಯಃ।
ಸ್ವಭಾವತೋ ವಾ ಜಾತಾ ವಾ ಪಙ್ಗವಸ್ತೇ ಭವನ್ತಿ ವೈ ॥೩೬೬॥

“ಹಿಂದಿನ ಜನ್ಮದಲ್ಲಿ ಯಾವ ಮನುಷ್ಯರು ಲೋಭ-ಮೋಹಗಳಿಂದ ಕೂಡಿದವರಾಗಿ ಪ್ರಾಣಿಗಳನ್ನು ಹಿಂಸಿಸಲು ಅವುಗಳ ಅಂಗಗಳನ್ನು ಕತ್ತರಿಸು

ತ್ತಿದ್ದರೋ, ಕತ್ತಿಯೇ ಮೊದಲಾದ ಆಯುಧಗಳಿಂದ ಕತ್ತರಿಸಿ ಅವುಗಳ ಚೇಷ್ಟೆಯನ್ನು ನಿಲ್ಲಿಸುತ್ತಿದ್ದರೋ (ಕೊಲ್ಲುತ್ತಿದ್ದರೋ)–ಅಂತಹ ಕೆಟ್ಟ ವ್ಯವಹಾರವಿದ್ದವರು ಪುನರ್ಜನ್ಮದಲ್ಲಿ ಮನುಷ್ಯರಾಗಿ ಹುಟ್ಟಿದರೆ ಆಯಾಯಾ ಅಂಗಗಳಿಂದ ಹೀನರಾಗಿಯೇ ಹುಟ್ಟುತ್ತಾರೆ. ಇದರಲ್ಲಿ ಸಂಶಯವೇ ಇಲ್ಲ. ಸಾಮಾನ್ಯವಾಗಿ ಅವರು ಹುಟ್ಟುವಾಗಲೇ ಅಂಗವಿಕಲರಾಗಿರುತ್ತಾರೆ ಅಥವಾ ಹುಟ್ಟಿದ ಮೇಲಾದರೂ ಅಂಗವಿಕಲರಾಗುತ್ತಾರೆ."

ಉಮೆ:

ಭಗವನ್ಮಾನುಷಾಃ ಕೇಚಿದ್ಗ್ರನ್ಥಿಭಿಃ ಪಿಲ್ಲಕೈಸ್ತಥಾ।
ಕ್ಲಿಶ್ಯಮಾನಾಃ ಪ್ರದೃಶ್ಯನ್ತೇ ತನ್ಮೇ ಶಂಸಿತುಮರ್ಹಸಿ ॥೩೬೭॥

"ಪೂಜ್ಯನೇ! ಕೆಲವರ ಶರೀರಗಳಲ್ಲಿ ಗಂಟುಗಳಿರುತ್ತವೆ. ಕೆಲವರ ಕಣ್ಣುಗಳಲ್ಲಿ ಯಾವಾಗಲೂ ಪಿಸಿರು ಸೋರುತ್ತಿರುತ್ತದೆ. ಅದರಿಂದ ಅವರು ನರಳುತ್ತಿರುತ್ತಾರೆ. ಯಾವ ಕರ್ಮಫಲದಿಂದ ಹೀಗಾಗುತ್ತಾರೆ? ಅದನ್ನು ಹೇಳುವ ಕೃಪೆಮಾಡು."

ಮಹೇಶ್ವರ:

ಯೇ ಪುರಾ ಮನುಜಾ ದೇವಿ ಗ್ರನ್ಥಿಭೇದಕರಾ ನೃಣಾಮ್।
ಮುಷ್ಟಿಪ್ರಹಾರಪರುಷಾ ನೃಶಂಸಾಃ ಪಾಪಕರ್ಮಿಣಃ ॥೩೬೮॥
ಪಾಟಕಾಸ್ತ್ರೋಟಕಾಶ್ಚೈವ ಶೂಲತುನ್ನಾಸ್ತಥೈವ ಚ।
ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ।
ಗ್ರನ್ಥಿಭಿಃ ಪಿಲ್ಲಕೈಶ್ಚೈವ ಕ್ಲಿಶ್ಯನ್ತೇ ಭೃಶದುಃಖಿತಾಃ ॥೩೬೯॥

"ದೇವಿ! ಹಿಂದಿನ ಜನ್ಮದಲ್ಲಿ ಯಾರು ಇತರರ ಸಂಧಿಬಂಧಗಳನ್ನು ಮುರಿದಿದ್ದರೋ, ಮುಷ್ಟಿಪ್ರಹಾರದಲ್ಲಿ ಕಾಠಿಣ್ಯದಿಂದ ವರ್ತಿಸುತ್ತಿದ್ದರೋ, ನಿರ್ದಯರಾಗಿದ್ದರೋ, ಯಾವಾಗಲೂ ಪಾಪಕರ್ಮಗಳಲ್ಲಿಯೇ ನಿರತರಾಗಿರುತ್ತಿದ್ದರೋ, ಹೊಡೆಯುವುದು-ಬಡಿಯುವುದು-ಕಡಿಯುವುದು ಇಂತಹ ದುಷ್ಟಕಾರ್ಯಗಳಲ್ಲಿಯೇ ನಿರತರಾಗಿದ್ದರೋ, ಶೂಲಗಳಿಂದ ಜನರನ್ನು ತಿವಿಯುವ ಸ್ವಭಾವವುಳ್ಳವರಾಗಿದ್ದರೋ–ಇಂತಹ ದುಷ್ಟವಾದ ವ್ಯವಹಾರವುಳ್ಳವರು ಮರುಹುಟ್ಟಿನಲ್ಲಿ ಗಂಟುರೋಗದಿಂದಲೂ ಕಣ್ಣಬೇನೆ ಯಿಂದಲೂ ನರಳುತ್ತಿರುತ್ತಾರೆ."

ಉಮೆ:

ಭಗವನ್ಮಾನುಷಾಃ ಕೇಚಿತ್ಪಾದರೋಗಸಮನ್ವಿತಾಃ।
ದೃಶ್ಯನ್ತೇ ಸತತಂ ದೇವ ತನ್ಮೇ ಶಂಸಿತುಮರ್ಹಸಿ ॥೩೭೦॥

"ಪೂಜ್ಯನೇ! ಮನುಷ್ಯರಲ್ಲಿ ಕೆಲವರು ಕಾಲಿನ ರೋಗದಿಂದ ನರಳುತ್ತಿರುವುದು ಕಂಡುಬರುತ್ತದೆ. ಯಾವ ಕರ್ಮಫಲದಿಂದ ಈ ರೋಗವು ಮನುಷ್ಯರಿಗೆ ಉಂಟಾಗುವುದೆಂಬುದನ್ನು ಹೇಳುವ ಕೃಪೆಮಾಡು."

ಮಹೇಶ್ವರ:

ಯೇ ಪುರಾ ಮನುಜಾ ದೇವಿ ಕ್ರೋಧಲೋಭಸಮನ್ವಿತಾಃ।
ಮನುಜಾ ದೇವತಾಸ್ಥಾನಂ ಸ್ವಪಾದೈರ್ಭ್ರಂಶಯನ್ತ್ಯುತ ॥೩೭೧॥
ಜಾನುಭಿಃ ಪಾರ್ಷ್ಣಿಭಿಶ್ಚೈವ ಪ್ರಾಣಿಹಿಂಸಾಂ ಪ್ರಕುರ್ವತೇ।
ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ।
ಪಾದರೋಗೈರ್ಬಹುವಿಧೈರ್ಬಾಧ್ಯನ್ತೇ ಶ್ವಪದಾದಿಭಿಃ ॥೩೭೨॥

"ಹಿಂದಿನ ಜನ್ಮದಲ್ಲಿ ಯಾರು ದೇವತೆಗಳಿರುವ ಸ್ಥಾನಕ್ಕೆ ಕಾಲು ತೊಳೆಯದೇ ಪಾದರಕ್ಷೆಗಳನ್ನು ತೆಗೆಯದೇ ಹೋಗಿ ಅಂತಹ ಪವಿತ್ರಸ್ಥಳಗಳನ್ನು ಭ್ರಷ್ಟಗೊಳಿಸಿದ್ದರೋ, ಕ್ರೋಧ-ಲೋಭಗಳಿಗೆ ವಶರಾಗಿ ಮಂಡಿಗಳಿಂದಲೂ ಹಿಮ್ಮಡಿಗಳಿಂದಲೂ ಪ್ರಹರಿಸಿ ಪ್ರಾಣಿಗಳನ್ನೂ ಹಿಂಸಿಸಿದ್ದರೋ– ಅಂತಹ ದುಷ್ಟಸ್ವಭಾವವುಳ್ಳವರು ಮರುಹುಟ್ಟಿನಲ್ಲಿ ಶ್ವಪದವೇ (ಆನೇಕಾಲು) ಮುಂತಾದ ಪಾದರೋಗಗಳಿಂದ ಪೀಡಿಸಲ್ಪಡುತ್ತಿರುತ್ತಾರೆ."

ಉಮೆ:

ಭಗವನ್ಮಾನುಷಾಃ ಕೇಚಿದ್ದೃಶ್ಯನ್ತೇ ಬಹವೋ ಭುವಿ।
ವಾತಜೈಃ ಪಿತ್ತಜೈ ರೋಗೈರ್ಯುಗಪತ್ಸಂನ್ನಿಪಾತಕೈಃ।
ರೋಗೈರ್ಬಹುವಿಧೈರ್ದೇವ ಕ್ಲಿಶ್ಯಮಾನಾಃ ಸುದುಃಖಿತಾಃ ॥೩೭೩॥
ಅಸಮಸ್ತೈ ಸಮಸ್ತೈಶ್ಚ ಆಢ್ಯಾ ವಾ ದುರ್ಗತಾಸ್ತಥಾ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೩೭೪॥

"ಪೂಜ್ಯನೇ! ಮನುಷ್ಯರಲ್ಲಿ ಅನೇಕರು ಪಿತ್ತ-ವಾತ-ಕಫಜನಿತವಾದ

ರೋಗಗಳಿಂದಲೂ, ಇವು ಮೂರೂ ಸೇರಿಕೊಂಡು ಬರುವ ಸಂನಿಪಾತರೋಗಗಳಿಂದಲೂ, ಬಹುವಿಧವಾದ ಇತರ ರೋಗಗಳಿಂದಲೂ ಕ್ಲೇಶಗೊಳಿಸಲ್ಪಟ್ಟು ದುಃಖಪಡುತ್ತಿರುತ್ತಾರೆ. ಅವರು ಧನವಂತರೇ ಆಗಿರಲಿ; ದರಿದ್ರರೇ ಆಗಿರಲಿ–ಮೇಲೆ ಹೇಳಿದ ಒಂದೊಂದು ರೋಗದಿಂದಾಗಲೀ ಸಮಸ್ತವಾದ ರೋಗಗಳಿಂದಾಗಲೀ ನರಳುತ್ತಿರುತ್ತಾರೆ. ಯಾವ ಕರ್ಮಫಲ ದಿಂದ ಮನುಷ್ಯರು ಹೀಗೆ ನರಳುವರೆಂಬುದನ್ನು ಹೇಳುವ ಕೃಪೆಮಾಡು.”

ಮಹೇಶ್ವರ:

“ಕಲ್ಯಾಣಿ! ಅದಕ್ಕೆ ಕಾರಣವನ್ನು ಹೇಳುವೆನು; ಕೇಳು.

ಯೇ ಪುರಾ ಮನುಜಾ ದೇವಿ ತ್ವಾಸುರಂ ಭಾವಮಾಶ್ರಿತಾಃ ॥೩೭೫॥
ಸ್ವವಶಾಃ ಕೋಪನಪರಾ ಗುರುವಿದ್ವೇಷಿಣಸ್ತಥಾ।
ಪರೇಷಾಂ ದುಃಖಜನಕಾ ಮನೋವಾಕ್ಕಾಯಕರ್ಮಭಿಃ ॥೩೭೬॥
ಛಿನ್ದನ್ಭಿನ್ದಂಸ್ತುದನ್ನೇವ ನಿತ್ಯಂ ಪ್ರಾಣಿಷು ನಿರ್ದಯಾಃ।
ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ।
ಯದಿ ವೈ ಮಾನುಷಂ ಜನ್ಮ ಲಭೇರಂಸ್ತೇ ತಥಾವಿಧಾಃ ॥೩೭೭॥

ಹಿಂದಿನ ಜನ್ಮದಲ್ಲಿ ಯಾರು ಆಸುರಭಾವವನ್ನಾಶ್ರಯಿಸಿ ಸ್ವಚ್ಛಂದಚಾರಿಗಳಾಗಿ ಕ್ರೋಧವಶರಾಗಿ ಗುರುಜನರನ್ನು ದ್ವೇಷಿಸುತ್ತಾ ಮನಸ್ಸು ಮಾತು ಮತ್ತು ಕರ್ಮಗಳಿಂದ ಇತರರಿಗೆ ದುಃಖವನ್ನುಂಟುಮಾಡಿದ್ದರೋ, ಪ್ರಾಣಿಗಳನ್ನು ಕಂಡಕಂಡಲ್ಲಿ ಕತ್ತರಿಸುತ್ತಾ, ತಲೆಗಳನ್ನು ಒಡೆಯುತ್ತಾ, ಕೊಚ್ಚುತ್ತಾ, ಯಾವಾಗಲೂ ಅವುಗಳ ವಿಷಯದಲ್ಲಿ ನಿರ್ದಯರಾಗಿ ವರ್ತಿಸಿದ್ದರೋ–ಅಂತಹ ದುಷ್ಟವಾದ ಆಚಾರ-ವ್ಯವಹಾರವಿದ್ದವರು ಮರುಹುಟ್ಟಿನಲ್ಲಿ ಮನುಷ್ಯಜನ್ಮವನ್ನೇನಾದರೂ ಪಡೆದುಕೊಂಡರೆ ನೀನು ಹೇಳಿದಂತಹ ರೋಗಗಳಿಗೆ ತುತ್ತಾಗುತ್ತಾರೆ.

ತತ್ರ ತೇ ಬಹುಭಿರ್ಘೋರೈಸ್ತಪ್ಯನ್ತೇ ವ್ಯಾಧಿಭಿಃ ಪ್ರಿಯೇ।
ಕೇಚಿಚ್ಚ ಛರ್ದಿಸಂಯುಕ್ತಾಃ ಕೇಚಿತ್ಕಾಸಸಮನ್ವಿತಾಃ ॥೩೭೮॥
ಜ್ವರಾತಿಸಾರತೃಷ್ಣಾಭಿಃ ಪೀಡ್ಯಮಾನಾಸ್ತಥಾ ಪರೇ।
ಪಾದಗುಲ್ಮೈಶ್ಚ ಬಹುಭಿಃ ಶ್ಲೇಷ್ಮದೋಷಸಮನ್ವಿತಾಃ ॥೩೭೯॥

ಪಾದರೋಗೈಶ್ಚ ವಿವಿಧೈರ್ವ್ರಣಕುಷ್ಠಭಗನ್ದರೈಃ।
ಆಢ್ಯಾ ವಾ ದುರ್ಗತಾ ವಾಪಿ ದೃಶ್ಯನ್ತೇ ವ್ಯಾಧಿಪೀಡಿತಾಃ ॥೩೮೦॥

ಪ್ರಿಯೇ! ಅಂತಹ ಪಾತಕಿಗಳು ಅನೇಕ ವಿಧವಾದ ಘೋರವ್ಯಾಧಿಗಳಿಂದ ಪರಿತಪಿಸುತ್ತಿರುತ್ತಾರೆ. ಕೆಲವರಿಗೆ ವಾಂತಿರೋಗವಿರುತ್ತದೆ. ಕೆಲವರಿಗೆ ಕೆಮ್ಮಲಿರುತ್ತದೆ. ಕೆಲವರಿಗೆ ಜ್ವರವಿರುತ್ತದೆ. ಕೆಲವರು ಅತಿಸಾರದಿಂದಲೂ, ತೃಷ್ಣಾರೋಗದಿಂದಲೂ ನರಳುತ್ತಿರುತ್ತಾರೆ. ಆಢ್ಯರೇ ಆಗಲೀ; ದರಿದ್ರರೇ ಆಗಲೀ ಕೆಲವರು ಪಾದರೋಗದಿಂದಲೂ, ಗುಲ್ಮರೋಗದಿಂದಲೂ, ವಿಧ-ವಿಧವಾದ ವ್ರಣಕುಷ್ಠಗಳಿಂದಲೂ, ಭಗಂದರರೋಗಗಳಿಂದಲೂ ಮೇಲೆ ಹೇಳಿದ ದುಷ್ಟಕರ್ಮಗಳ ಫಲವಾಗಿ ಪೀಡಿಸಲ್ಪಡುತ್ತಿರುತ್ತಾರೆ.

ಏವಮಾತ್ಮಕೃತಂ ಕರ್ಮ ಭುಞ್ಜತೇ ತತ್ರ ತತ್ರ ತೇ।
ಗೃಹೀತುಂ ನ ಚ ಶಕ್ಯಂ ಹಿ ಕೇನಚಿದ್ಧ್ಯಕೃತಂ ಫಲಮ್।
ಇತಿ ತೇ ಕಥಿತಂ ದೇವಿ ಭೂಯಃ ಶ್ರೋತುಂ ಕಿಮಿಚ್ಛಸಿ ॥೩೮೧॥

ಹೀಗೆ ತಾವೇ ಮಾಡಿದ ಕರ್ಮಗಳ ಫಲವನ್ನು ಆಯಾ ಶರೀರಗಳಲ್ಲಿಯೇ ಮನುಷ್ಯರು ಉಪಭೋಗಿಸುತ್ತಾರೆ. ಮಾಡದೆಯೇ ಇರುವ ಕರ್ಮಕ್ಕೆ ಯಾರೂ ಫಲಗಳನ್ನು ಹೊಂದಲಾರರು. ದೇವಿ! ಹೀಗೆ ನೀನು ಕೇಳಿದುದೆಲ್ಲಕ್ಕೂ ಉತ್ತರವನ್ನು ಕೊಟ್ಟಿದ್ದೇನೆ. ಮುಂದೇನನ್ನು ಕೇಳಬಯಸುವೆ.?”

ಉಮೆ:

ಭಗವನ್ದೇವದೇವೇಶ ಭೂತಪಾಲ ನಮೋಽಸ್ತು ತೇ।
ಹ್ರಸ್ವಾಙ್ಗಾಶ್ಚೈವ ವಕ್ರಾಙ್ಗಾಃ ಕುಬ್ಜಾ ವಾಮನಕಾಸ್ತಥಾ ॥೩೮೨॥
ಅಪರೇ ಮಾನುಷಾ ದೇವ ದೃಶ್ಯನ್ತೇ ಕುಣಿಬಾಹವಃ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೩೮೩॥

“ಪೂಜ್ಯನೇ! ದೇವದೇವೇಶನೇ! ಭೂತಪಾಲನೇ! ನಿನಗೆ ನಮಸ್ಕಾರವು. ಮನುಷ್ಯರಲ್ಲಿ ಕೆಲವರು ಹೆಚ್ಚು ಕುಳ್ಳರಾಗಿರುತ್ತಾರೆ. ಕೆಲವರ ಅಂಗಗಳು ವಕ್ರ-ವಕ್ರವಾಗಿರುತ್ತವೆ. ಕೆಲವರು ಕುಬ್ಜರೂ ವಾಮನರೂ ಆಗಿರುತ್ತಾರೆ. ಮತ್ತೆ ಕೆಲವು ಮನುಷ್ಯರ ತೋಳುಗಳು ಬಹಳ ಗಿಡ್ಡಾಗಿರುತ್ತವೆ. ಯಾವ ಕರ್ಮಫಲದಿಂದ ಮನುಷ್ಯರು ಹೀಗೆ ಹುಟ್ಟುವರೆಂಬುದನ್ನು ಹೇಳುವ ಕೃಪೆಮಾಡು.”

ಮಹೇಶ್ವರ:

ಯೇ ಪುರಾ ಮನುಜಾ ದೇವಿ ಲೋಭಮೋಹಸಮನ್ವಿತಾಃ।
ಧಾನ್ಯಮಾನಾನ್ವಿಕುರ್ವನ್ತಿ ಕ್ರಯವಿಕ್ರಯಕಾರಣಾತ್ ॥೩೮೪॥
ತುಲಾದೋಷಂ ತಥಾ ದೇವಿ ಧೃತಮಾನೇಷು ನಿತ್ಯಶಃ।
ಅರ್ಧಾಪಕರ್ಷಣಾಚ್ಚೈವ ಸರ್ವೇಷಾಂ ಕ್ರಯವಿಕ್ರಯೇ ॥೩೮೫॥
ಅಙ್ಗದೋಷಕರಾ ಯೇ ತು ಪರೇಷಾಂ ಕೋಪಕಾರಣಾತ್।
ಮಾಂಸಾದಾಶ್ಚೈವ ಯೇ ಮೂರ್ಖಾ ಅಯಥಾವತ್ಪ್ರಥಾಃ ಸದಾ ॥
ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ।
ಹ್ರಸ್ವಾಙ್ಗಾ ವಾಮನಾಶ್ಚೈವ ಕುಬ್ಜಾಶ್ಚೈವ ಭವನ್ತಿ ತೇ ॥೩೮೭॥

"ದೇವಿ! ಯಾರು ಹಿಂದಿನ ಜನ್ಮದಲ್ಲಿ ಲೋಭ-ಮೋಹಗಳಿಂದ ಕೂಡಿ ಮಾರುವ ಸಲುವಾಗಿ ಧಾನ್ಯಗಳನ್ನು ಅಳತೆಮಾಡುವಾಗ ಬಳ್ಳವನ್ನು ಸರಿಯಾಗಿ ಹಿಡಿಯದೇ ಮೋಸಮಾಡಿರುವರೋ ಮತ್ತು ತೂಕಮಾಡಲು ತಕ್ಕಡಿಯನ್ನು ಹಿಡಿಯುವಾಗ ಸರಿಯಾಗಿ ಹಿಡಿದು ತೂಕಮಾಡದೇ–ಕೊಳ್ಳುವಾಗ ಹೆಚ್ಚು ತೂಗುವಂತೆಯೂ ಮಾರುವಾಗ ಕಡಿಮೆ ತೂಗುವಂತೆಯೂ ಮಾಡಿರುವರೋ, ಇತರರ ಮೇಲಿನ ಕೋಪದ ಕಾರಣದಿಂದ ಅಂಗಗಳಲ್ಲಿ ದೋಷವನ್ನು ಉಂಟುಮಾಡಿರುವರೋ, ಕೈ-ಕಾಲುಗಳನ್ನು ಕತ್ತರಿಸಿ ಹಾಕಿರುವರೋ, ಮಾಂಸವನ್ನು ತಿನ್ನುತ್ತಿದ್ದರೋ, ಯಾವಾಗಲೂ ಸುಳ್ಳನ್ನೇ ಹೇಳುತ್ತಿದ್ದರೋ–ಅಂತಹ ದುಷ್ಟವಾದ ಆಚಾರ-ವಿಚಾರವುಳ್ಳ ಜನರು ಮರುಹುಟ್ಟಿನಲ್ಲಿ ಹ್ರಸ್ವವಾದ ಅಂಗವುಳ್ಳವರೂ, ವಾಮನರೂ, ಕುಬ್ಜರೂ ಆಗಿ ಹುಟ್ಟುತ್ತಾರೆ."

ಉಮೆ:

ಭಗವನ್ಮಾನುಷಾಃ ಕೇಚಿದ್ದೃಶ್ಯನ್ತೇ ಮಾನುಷೇಷು ವೈ ।
ಉನ್ಮತ್ತಾಶ್ಚ ಪಿಶಾಚಾಶ್ಚ ಪರ್ಯಟನ್ತೋ ಯತಸ್ತತಃ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೩೮೮॥

"ಪೂಜ್ಯನೇ! ಮನುಷ್ಯರಲ್ಲಿಯೇ ಕೆಲವರು ಹುಚ್ಚರಂತೆಯೂ ಪಿಶಾಚಿಗಳಂತೆಯೂ ಅಲ್ಲಲ್ಲಿ ಸುತ್ತುತ್ತಿರುತ್ತಾರೆ. ಯಾವ ಕರ್ಮಫಲದಿಂದ ಅವರು ಹೀಗಾಗುತ್ತಾರೆಂಬುದನ್ನು ಹೇಳುವ ಕೃಪೆಮಾಡು."

ಮಹೇಶ್ವರ:

ಯೇ ಪುರಾ ಮನುಜಾ ದೇವಿ ದರ್ಪಾಹಙ್ಕಾರಸಂಯುತಾಃ।
ಬಹುಧಾ ಪ್ರಲಪನ್ತ್ಯೇವ ಹಸನ್ತಿ ಚ ಪರಾನ್ಭೃಶಮ್ ॥೩೮೯॥
ಮೋಹಯನ್ತಿ ಪರಾನ್ಭೋಗೈರ್ಮದನೈರ್ಲೋಭಕಾರಣಾತ್।
ವೃದ್ಧಾನ್ಗುರೂಂಶ್ಚ ಯೇ ಮೂರ್ಖಾ ವೃಥೈವಾಪಹಸನ್ತಿ ಚ ॥೩೯೦॥
ಶೌಣ್ಡಾ ವಿದಗ್ಧಾಃ ಶಾಸ್ತ್ರೇಷು ತಥೈವಾನೃತವಾದಿನಃ।
ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ।
ಉನ್ಮತ್ತಾಶ್ಚ ಪಿಶಾಚಾಶ್ಚ ಭವನ್ತ್ಯೇವ ನ ಸಂಶಯಃ ॥೩೯೧॥

"ದೇವಿ! ಹಿಂದಿನ ಜನ್ಮದಲ್ಲಿ ಯಾರು ದರ್ಪಾಹಂಕಾರಗಳಿಂದ ಯುಕ್ತರಾಗಿ ವ್ಯರ್ಥವಾಗಿ ಪ್ರಲಾಪಗಳನ್ನು ಮಾಡಿರುವರೋ, ಇತರರನ್ನು ನೋಡಿ ನಗುತ್ತಿದ್ದರೋ, ಲೋಭದ ಕಾರಣದಿಂದ ಇತರರಿಗೆ ಮಾದಕ ಪದಾರ್ಥಗಳನ್ನು ತಿನ್ನಲು ಕೊಟ್ಟು ಮೋಹಗೊಳಿಸಿರುವರೋ, ಯಾವ ಮೂರ್ಖರು ವೃದ್ಧರನ್ನೂ ಗುರುಜನರನ್ನೂ ವೃಥಾ ಹಾಸ್ಯಮಾಡಿರುವರೋ, ಶಾಸ್ತ್ರಜ್ಞಾನದಲ್ಲಿ ಪಾಂಡಿತ್ಯವನ್ನು ಹೊಂದಿದ್ದೂ ಸುಳ್ಳುಹೇಳಿರುವರೋ– ಅಂತಹ ದುಷ್ಟವಾದ ಆಚಾರ-ವ್ಯವಹಾರವುಳ್ಳ ಜನರು ಮರುಹುಟ್ಟಿನಲ್ಲಿ ಉನ್ಮತ್ತರಂತೆಯೂ, ಪಿಶಾಚಿಗಳಂತೆಯೂ ಅಲ್ಲಲ್ಲಿ ಸುತ್ತಾಡುತ್ತಿರುತ್ತಾರೆ. ಇದರಲ್ಲಿ ಸಂಶಯವೇ ಇಲ್ಲ."

ಉಮೆ:

ಭಗವನ್ಮಾನುಷಾಃ ಕೇಚಿನ್ನಿರಪತ್ಯಾಃ ಸುದುಃಖಿತಾಃ।
ಯತನ್ತೋ ನ ಲಭನ್ತ್ಯೇವ ಅಪತ್ಯಾನಿ ಯತಸ್ತತಃ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೩೯೨॥

"ಪೂಜ್ಯರೇ! ಪ್ರಪಂಚದಲ್ಲಿ ಕೆಲವರು ಸಂತಾನವಿಲ್ಲದೇ ಹೆಚ್ಚು ದುಃಖಿಗಳಾಗಿರುತ್ತಾರೆ. ಪೂಜೆ-ಪುರಸ್ಕಾರ, ಹೋಮ-ಹವನಾದಿಗಳ ಮೂಲಕವಾಗಿ ಎಷ್ಟೇ ಪ್ರಯತ್ನಿಸಿದರೂ ಅವರು ಸಂತಾನವನ್ನು ಹೊಂದುವುದೇ ಇಲ್ಲ. ಯಾವ ಕರ್ಮಫಲದಿಂದ ಅವರು ಸಂತಾನಹೀನರಾಗುತ್ತಾರೆಂಬುದನ್ನು ಹೇಳುವ ಕೃಪೆಮಾಡು."

ಮಹೇಶ್ವರ:

ಯೇ ಪುರಾ ಮನುಜಾ ದೇವಿ ಸರ್ವಪ್ರಾಣಿಷು ನಿರ್ದಯಾಃ ।
ಘ್ನನ್ತಿ ಬಾಲಾಂಶ್ಚ ಭುಞ್ಜನ್ತೇ ಮೃಗಾಣಾಂ ಪಕ್ಷಿಣಾಮಪಿ ॥೩೯೩॥
ಗುರುವಿದ್ವೇಷಿಣಶ್ಚೈವ ಪರಪುತ್ರಾಭ್ಯಸೂಯಕಾಃ।
ಪಿತೃಪೂಜಾಂ ನ ಕುರ್ವನ್ತಿ ಯಥೋಕ್ತಾಂ ಚಾಷ್ಟಕಾದಿಭಿಃ ॥೩೯೪॥
ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ।
ಮಾನುಷ್ಯಂ ಸುಚಿರಾತ್ಪ್ರಾಪ್ಯ ನಿರಪತ್ಯಾ ಭವನ್ತಿ ತೇ।
ಪುತ್ರಶೋಕಯುತಾಶ್ಚಾಪಿ ನಾಸ್ತಿ ತತ್ರ ವಿಚಾರಣಾ ॥೩೯೫॥

"ದೇವಿ! ಯಾರು ಹಿಂದಿನ ಜನ್ಮದಲ್ಲಿ ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ದಯಾಶೂನ್ಯರಾಗಿ ಮೃಗ-ಪಕ್ಷಿಗಳ ಮರಿಗಳನ್ನು ಕೊಂದು ತಿನ್ನುತ್ತಿದ್ದರೋ, ಗುರುಜನರನ್ನು ದ್ವೇಷಿಸುತ್ತಿದ್ದರೋ, ಇತರರ ಮಕ್ಕಳನ್ನು ನೋಡಿ ಅಸೂಯೆಪಡುತ್ತಿದ್ದರೋ, ಶಾಸ್ತ್ರೋಕ್ತವಾದ ಅಷ್ಟಕಾಶ್ರಾದ್ಧಾದಿಗಳ ಮೂಲಕವಾಗಿ ಪಿತೃಗಳನ್ನು ಪೂಜಿಸಿರುವುದಿಲ್ಲವೋ–ಅಂತಹ ದುಷ್ಟವಾದ ಆಚಾರ-ವಿಚಾರವುಳ್ಳವರು ಬಹಳ ಕಾಲಾನಂತರ ಮನುಷ್ಯರಾಗಿ ಹುಟ್ಟಿದರೂ ಹಿಂದಿನ ಕರ್ಮಫಲಕ್ಕೆ ಅನುಸಾರವಾಗಿ ಸಂತಾನಹೀನರೂ ಪುತ್ರಶೋಕ ಪೀಡಿತರೂ ಆಗುತ್ತಾರೆ. ಈ ವಿಷಯವನ್ನು ವಿಮರ್ಶಿಸಬೇಕಾದ ಅಗತ್ಯವೇ ಇಲ್ಲ."

ಉಮೆ:

ಭಗವನ್ಮಾನುಷಾಃ ಕೇಚಿತ್ಪ್ರದೃಶ್ಯನ್ತೇ ಸುದುಃಖಿತಾಃ।
ಉದ್ವೇಗವಾಸನಿರತಾಃ ಸೋದ್ವೇಗಾಶ್ಚ ಯತವ್ರತಾಃ ॥೩೯೬॥
ನಿತ್ಯಂ ಶೋಕಸಮಾವಿಷ್ಟಾ ದುರ್ಗತಾಶ್ಚ ತಥೈವ ಚ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೩೯೭॥

"ಪೂಜ್ಯನೇ! ಈ ಪ್ರಪಂಚದಲ್ಲಿ ಕೆಲವರು ಯಾವಾಗಲೂ ದುಃಖ ಪಡುತ್ತಲೇ ಇರುವುದು ಕಂಡುಬರುತ್ತದೆ. ಅವರು ಯಾವಾಗಲೂ ಉದ್ವೇಗ ವನ್ನುಂಟುಮಾಡುವ ವಾತಾವರಣದಲ್ಲಿಯೇ ಇರುತ್ತಾರೆ. ಸದಾ ಉದ್ವಿಗ್ನ ರಾಗಿರುತ್ತಾರೆ. ಸಂಯಮಪೂರ್ವಕವಾಗಿ ವ್ರತಾದಿಗಳನ್ನು ಮಾಡುತ್ತಿದ್ದರೂ ನಿತ್ಯವೂ ಶೋಕಮಗ್ನರಾಗಿಯೂ ಮತ್ತು ಅತ್ಯಂತದುಃಸ್ಥಿತಿಯಲ್ಲಿಯೂ

ಇರುತ್ತಾರೆ. ಯಾವ ಕರ್ಮಫಲದ ಕಾರಣದಿಂದ ಅವರು ಹೀಗಾಗುತ್ತಾರೆಂಬುದನ್ನು ಹೇಳುವ ಕೃಪೆಮಾಡು.”

ಮಹೇಶ್ವರ:

ಯೇ ಪುರಾ ಮನುಜಾ ನಿತ್ಯಮುತ್ಕೋಚನಪರಾಯಣಾಃ।
ಭೀಷಯನ್ತಿ ಪರಾನ್ನಿತ್ಯಂ ವಿಕುರ್ವನ್ತಿ ತಥೈವ ಚ ॥೯೮॥
ಋಣವೃದ್ಧಿಕರಾಶ್ಚೈವ ದರಿದ್ರೇಭ್ಯೋ ಯಥೇಷ್ಟತಃ।
ಯೇ ಶ್ವಭಿಃ ಕ್ರೀಡಮಾನಾಶ್ಚ ತ್ರಾಸಯನ್ತಿ ವನೇ ಮೃಗಾನ್ ॥೯೯॥
ಪ್ರಾಣಿಹಿಂಸಾಂ ತಥಾ ದೇವಿ ಕುರ್ವನ್ತಿ ಚ ಯತಸ್ತತಃ।
ಯೇಷಾಂ ಗೃಹೇಷು ವೈ ಶ್ವಾನಃ ತ್ರಾಸಯನ್ತಿ ವೃಥಾ ನರಾನ್ ॥೪೦೦॥
ಏವಂಯುಕ್ತಸಮಾಚಾರಾಃ ಕಾಲಧರ್ಮಗತಾಃ ಪುನಃ।
ಪೀಡಿತಾ ಯಮದಣ್ಡೇನ ನಿರಯಸ್ಥಾಶ್ಚಿರಂ ಪ್ರಿಯೇ ॥೪೦೧॥
ಕಥಂಚಿತ್ಪ್ರಾಪ್ಯ ಮಾನುಷ್ಯಂ ತತ್ರ ತೇ ದುಃಖಸಂಯುತಾಃ।
ಕುದೇಶೇ ದುಃಖಭೂಯಿಷ್ಠೇ ವ್ಯಾಘಾತಶತಸಂಕುಲೇ।
ಜಾಯನ್ತೇ ತತ್ರ ಶೋಚನ್ತಃ ಸೋದ್ವೇಗಾಶ್ಚ ಯತಸ್ತತಃ ॥೪೦೨॥

“ದೇವಿ! ಯಾವ ಮನುಷ್ಯರು ನಿತ್ಯವೂ ಲಂಚಪಡೆಯುವುದರಲ್ಲಿಯೇ ನಿರತರಾಗಿರುವರೋ, ಇತರರನ್ನು ಹೆದರಿಸುತ್ತಾ ಅವರ ಮನಸ್ಸಿನಲ್ಲಿ ವ್ಯಾಕುಲವನ್ನುಂಟುಮಾಡುತ್ತಾ ಇರುವರೋ, ತಮ್ಮ ಇಚ್ಛಾನುಸಾರವಾಗಿ ಬಡ್ಡಿಯನ್ನು ಹೆಚ್ಚಿಸುತ್ತಾ ಬಡವರ ಋಣಭಾರವನ್ನು ಹೆಚ್ಚುಮಾಡುವರೋ, ನಾಯಿಗಳ ಜೊತೆಯಲ್ಲಿ ಆಟವಾಡುತ್ತಾ (ಬೇಟೆಯಾಡುತ್ತಾ) ಅರಣ್ಯ ದಲ್ಲಿರುವ ಮೃಗಗಳನ್ನು ಭಯಪಡಿಸುವರೋ, ಎಲ್ಲೆಂದರಲ್ಲಿ ಪ್ರಾಣಿಹಿಂಸೆ ಯನ್ನು ಮಾಡುವರೋ, ಯಾರ ಮನೆಯಲ್ಲಿರುವ ನಾಯಿಗಳು ಇತರರನ್ನು ವೃಥಾ ಭಯಪಡಿಸುವುವೋ–ಇಂತಹ ದುಷ್ಟವಾದ ಆಚಾರ-ವಿಚಾರವಿರುವ ಜನರು ಮರಣಹೊಂದಿದನಂತರ ಯಮದಂಡದಿಂದ ಪೀಡಿಸಲ್ಪಟ್ಟವರಾಗಿ ಚಿರಕಾಲದವರೆಗೆ ನರಕದಲ್ಲಿ ಇರುತ್ತಾರೆ. ಅನೇಕವರ್ಷಗಳು ಕಳೆದ ನಂತರ ಹೇಗೋ ಮನುಷ್ಯರಾಗಿ ಹುಟ್ಟಿ ಅವರು ಕೆಟ್ಟ ವಾತಾವರಣ ವಿರುವ, ದುಃಖವೇ ಹೆಚ್ಚಾಗಿರುವ, ನೂರಾರು ವ್ಯಾಘಾತಗಳಿಂದ

ಸಮಾಕುಲವಾದ ಸ್ಥಳದಲ್ಲಿ ಹುಟ್ಟುತ್ತಾರೆ ಮತ್ತು ಯಾವಾಗಲೂ ದುಃಖಿಗಳಾಗಿಯೂ ಉದ್ವಿಗ್ನರಾಗಿಯೂ ಇರುತ್ತಾರೆ."

ಉಮೆ:

ಭಗವನ್ಭಗನೇತ್ರಘ್ನ ಮಾನುಷೇಷು ಚ ಕೇಚನ।
ಕ್ಲೀಬಾ ನಪುಂಸಕಾಶ್ಚೈವ ದೃಶ್ಯನ್ತೇ ಷಣ್ಡಕಾಸ್ತಥಾ ॥೪೦೩॥
ನೀಚಕರ್ಮರತಾ ನೀಚಾ ನೀಚಸಖ್ಯಾಸ್ತಥಾ ಭುವಿ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೪೦೪॥

"ಪೂಜ್ಯನೇ! ಭಗದೇವತೆಯ ಕಣ್ಣುಗಳನ್ನು ಅಪಹರಿಸಿದವನೇ! ಮಹಾದೇವನೇ! ಮನುಷ್ಯರಲ್ಲಿ ಕೆಲವರು ಹೇಡಿಗಳಾಗಿಯೂ, ನಪುಂಸಕರಾಗಿಯೂ, ಷಂಡರಾಗಿಯೂ ಇರುವುದು ಕಂಡುಬರುತ್ತದೆ. ನೀಚರೂ, ನೀಚವಾದ ಕರ್ಮಗಳನ್ನು ಮಾಡುವವರೂ, ನೀಚರ ಜೊತೆಯಲ್ಲಿಯೇ ಯಾವಾಗಲೂ ಇರುವವರೂ ಈ ಭೂಮಿಯಲ್ಲಿ ಅನೇಕರಿದ್ದಾರೆ. ಯಾವ ಕರ್ಮಫಲದಿಂದ ಅವರು ನಪುಂಸಕರಾಗಿಯೂ, ನೀಚರಾಗಿಯೂ ಹುಟ್ಟುತ್ತಾರೆಂಬುದನ್ನು ಹೇಳುವ ಕೃಪೆಮಾಡು."

ಮಹೇಶ್ವರ:

"ಕಲ್ಯಾಣಿ! ಇದಕ್ಕೆ ಕಾರಣವನ್ನು ಹೇಳುವೆನು; ಏಕಾಗ್ರಚಿತ್ತಳಾಗಿ ಕೇಳು:

ಯೇ ಪುರಾ ಮನುಜಾ ಭೂತ್ವಾ ಘೋರಕರ್ಮರತಾಸ್ತಥಾ ॥೪೦೫॥
ಪಶುಪುಂಸ್ತ್ವೋಪಘಾತೇನ ಜೀವನ್ತಿ ಚ ರಮನ್ತಿ ಚ।
ಏವಂಯುಕ್ತಸಮಾಚಾರಾಃ ಕಾಲಧರ್ಮಂ ಗತಾಸ್ತು ತೇ ॥೪೦೬॥
ದಣ್ಡಿತಾ ಯಮದಣ್ಡೇನ ನಿರಯಸ್ಥಾಶ್ಚಿರಂ ಪ್ರಿಯೇ।
ಯದಿ ಚೇನ್ಮಾನುಷಂ ಜನ್ಮ ಲಭೇರಂಸ್ತೇ ತಥಾವಿಧಾಃ।
ಕ್ಲೀಬಾ ವರ್ಷವರಾಶ್ಚೈವ ಷಣ್ಡಕಾಶ್ಚ ಭವನ್ತಿ ತೇ ॥೪೦೭॥

ಹಿಂದಿನ ಜನ್ಮದಲ್ಲಿ ಘೋರವಾದ ಕರ್ಮದಲ್ಲಿ ನಿರತರಾಗಿ ಯಾವ ಮನುಷ್ಯರು ಪಶುಗಳ ಪುರುಷತ್ವವನ್ನು ಹರಣಮಾಡಿ (ಹೋರಿಗಳ ಬೀಜ ಒಡೆದು) ಅದರಿಂದಲೇ ಜೀವಿಸುತ್ತಿದ್ದರೋ ಮತ್ತು ಆನಂದಿಸುತ್ತಿದ್ದರೋ–

ಅಂತಹ ದುಷ್ಟವಾದ ಆಚಾರ-ವಿಚಾರವುಳ್ಳವರು ಮರಣಹೊಂದಿದನಂತರ ಯಮದಂಡದಿಂದ ದಂಡನೆಯನ್ನು ಪಡೆದು ಬಹಳ ಕಾಲದವರೆಗೆ ನರಕದಲ್ಲೇ ಇರುತ್ತಾರೆ. ಅಂತಹವರೇನಾದರೂ ಒಮ್ಮೆ ಮನುಷ್ಯಜನ್ಮವನ್ನು ಪಡೆದರೆ ಹೇಡಿಗಳೂ, ನಪುಂಸಕರೂ, ಷಂಡರೂ ಆಗಿ ಹುಟ್ಟುತ್ತಾರೆ."

ಸ್ತ್ರೀಣಾಮಪಿ ತಥಾ ದೇವಿ ಯಥಾ ಪುಂಸಾಂ ತು ಕರ್ಮಜಮ್।
ಇತಿ ತೇ ಕಥಿತಂ ದೇವಿ ಭೂಯಃ ಶ್ರೋತುಂ ಕಿಮಿಚ್ಛಸಿ ॥೪೦೮॥

ದೇವಿ! ಪುರುಷರು ಹೇಗೆ ತಾವು ಮಾಡಿದ ಕರ್ಮಗಳಿಗೆ ಅನುಸಾರವಾಗಿ ಫಲವನ್ನು ಪಡೆಯುವರೋ–ಸ್ತ್ರೀಯರೂ ಹಾಗೆಯೇ ತಾವು ಮಾಡಿದ ಕರ್ಮಗಳಿಗೆ ಅನುಸಾರವಾಗಿ ಫಲವನ್ನು ಪಡೆಯುತ್ತಾರೆ. ಹೀಗೆ ನಿನಗೆ ಎಲ್ಲವನ್ನೂ ಹೇಳಿದ್ದೇನೆ. ಪುನಃ ಮತ್ತೇನನ್ನು ಕೇಳಲು ಬಯಸಿರುವೆ?"

* * *

ಮಹತ್ತ್ವಪೂರ್ಣವಾದ ವಿಷಯಗಳ ವಿವೇಚನೆ

ಉಮೆ:

ಭಗವನ್ದೇವದೇವೇಶ ಪ್ರಮದಾ ವಿಧವಾ ಭೃಶಮ್।
ದೃಶ್ಯನ್ತೇ ಮಾನುಷೇ ಲೋಕೇ ಸರ್ವಕಲ್ಯಾಣವರ್ಜಿತಾಃ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೪೦೯॥

"ಪೂಜ್ಯನೇ! ದೇವಾಧಿದೇವತೆಗಳಿಗೂ ಈಶನೇ! ಪರಮೇಶ್ವರನೇ! ಲೋಕದಲ್ಲಿ ಹೆಚ್ಚು ಮಂದಿ ಸ್ತ್ರೀಯರು ವಿಧವೆಯರಾಗಿ ಸಮಸ್ತವಾದ ಮಂಗಳಕಾರ್ಯಗಳಿಂದಲೂ ವಂಚಿತರಾಗಿರುವುದು ಕಂಡುಬರುತ್ತದೆ. ಯಾವ ಕರ್ಮವಿಪಾಕದಿಂದ ಸ್ತ್ರೀಯರು ವಿಧವೆಯರಾಗುತ್ತಾರೆ? ಈ ವಿಷಯವನ್ನು ಹೇಳುವ ಕೃಪೆಮಾಡು."

ಮಹೇಶ್ವರ:

ಯಾಃ ಪುರಾ ಮನುಜಾ ದೇವಿ ಬುದ್ಧಿಮೋಹಸಮನ್ವಿತಾಃ।
ಕುಟುಮ್ಬಂ ತತ್ರ ವೈ ಪತ್ಯುರ್ನಾಶಯನ್ತಿ ವೃಥಾ ತಥಾ ॥೪೧೦॥
ವಿಷದಾಶ್ಚಾಗ್ನಿದಾಶ್ಚೈವ ಪತೀನ್ಪ್ರತಿ ಸುನಿರ್ದಯಾಃ।
ಅನ್ಯಾಸಾಂ ಹಿ ಪತೀನ್ಯಾನ್ತಿ ಸ್ವಪತೀನ್ದ್ವೇಷ್ಯಕಾರಣಾತ್ ॥೪೧೧॥

ಏವಂಯುಕ್ತಸಮಾಚಾರಾ ಯಮಲೋಕೇ ಸುದಣ್ಡಿತಾಃ।
ನಿರಯಸ್ಥಾಶ್ಚಿರಂ ಕಾಲಂ ಕಥಂಚಿತ್ಪ್ರಾಪ್ಯ ಮಾನುಷಮ್।
ತತ್ರ ತಾ ಭೋಗರಹಿತಾ ವಿಧವಾಶ್ಚ ಭವನ್ತಿ ವೈ ॥೪೦೨॥

"ದೇವಿ! ಹಿಂದಿನ ಜನ್ಮದಲ್ಲಿ ಯಾವ ಸ್ತ್ರೀಯರು ವಿಮೋಹಗೊಂಡ ಬುದ್ಧಿಯಿಂದ ಕೂಡಿದವರಾಗಿ ಗಂಡನ ಕುಟುಂಬವನ್ನೇ ಹಾಳುಮಾಡಿರುವರೋ, ವಿಷವನ್ನಿಡುತ್ತಿದ್ದರೋ, ಬೆಂಕಿಯಿಡುತ್ತಿದ್ದರೋ, ಗಂಡನ ವಿಷಯದಲ್ಲಿ ಕಠೋರಭಾವದಿಂದಿದ್ದರೋ, ಗಂಡಂದಿರನ್ನು ದ್ವೇಷಿಸುವ ಕಾರಣದಿಂದ ಇತರ ಸ್ತ್ರೀಯರ ಪತಿಯರೊಡನೆ ಸಹವಾಸಮಾಡುತ್ತಿದ್ದರೋ–ಅಂತಹ ದುಷ್ಟವಾದ ಆಚಾರ-ವಿಚಾರವುಳ್ಳ ಸ್ತ್ರೀಯರು ಅವಸಾನಾನಂತರ ಯಮನ ಲೋಕದಲ್ಲಿ ಕಠಿಣವಾದ ಶಿಕ್ಷೆಯನ್ನು ಪಡೆದು ಬಹಳ ಕಾಲದವರೆಗೆ ನರಕದಲ್ಲಿದ್ದು ಅನಂತರ ಬಹಳ ಕಷ್ಟದಿಂದ ಮನುಷ್ಯಜನ್ಮವನ್ನು ಪಡೆದರೂ ಭೋಗಾದಿಗಳಿಂದ ವಂಚಿತರಾಗಿ ವಿಧವೆಯರಾಗುತ್ತಾರೆ."

ಉಮೆ:

ಭಗವನ್ದೇವದೇವೇಶ ಮಾನುಷೇಷ್ವೇವ ಕೇಚನ।
ದಾಸಭೂತಾಃ ಪ್ರದೃಶ್ಯನ್ತೇ ಸರ್ವಕರ್ಮಪರಾ ಭೃಶಮ್ ॥೪೧೩॥
ಆಘಾತಭರ್ತ್ಸನಸಹಾಃ ಪೀಡ್ಯಮಾನಾಶ್ಚ ಸರ್ವಶಃ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೪೧೪॥

"ಪೂಜ್ಯನೇ! ದೇವದೇವೇಶನೇ! ಮಹಾದೇವನೇ! ಮನುಷ್ಯರಲ್ಲಿ ಕೆಲವರು ಕೇವಲ ದಾಸಭಾವವನ್ನು ಹೊಂದಿರುವುದು ಕಂಡುಬರುತ್ತದೆ. ಅವರು ಯಾವಾಗಲೂ ಎಲ್ಲ ವಿಧವಾದ ಕಾರ್ಯಗಳಲ್ಲಿಯೂ ತೊಡಗಿರುತ್ತಾರೆ. ಹೊಡೆತ, ಬೆದರಿಕೆಗಳನ್ನು ಸಹಿಸಿಕೊಳ್ಳುತ್ತಾರೆ. ಎಲ್ಲ ಕಡೆಗಳಿಂದಲೂ ಪೀಡಿಸಲ್ಪಡುತ್ತಿರುತ್ತಾರೆ. ಯಾವ ಕರ್ಮಫಲದಿಂದ ಇವರು ಹೀಗಿರುವರೆಂಬುದನ್ನು ಹೇಳುವ ಕೃಪೆಮಾಡು."

ಮಹೇಶ್ವರ:

"ಕಲ್ಯಾಣಿ! ಅವರು ಹಾಗೆ ದಾಸಭಾವವನ್ನು ಹೊಂದಿ ನಾನಾವಿಧವಾದ ಕಷ್ಟಗಳನ್ನು ಅನುಭವಿಸುವುದಕ್ಕೆ ಕಾರಣವೇನೆಂಬುದನ್ನು ಹೇಳುವೆನು; ಕೇಳು:

ಯೇ ಪುರಾ ಮನುಜಾ ದೇವಿ ಪರೇಷಾಂ ವಿತ್ತಹಾರಕಾಃ ॥೪೧೫॥
ಋಣವೃದ್ಧಿಕರಂ ಕೌರ್ಯಾನ್ನ್ಯಾಸದತ್ತಂ ತಥೈವ ಚ।
ನಿಕ್ಷೇಪಕಾರಣಾದ್ದತ್ತಪರದ್ರವ್ಯಾಪಹಾರಿಣಃ ॥೪೧೬॥
ಪ್ರಮಾದಾದ್ವಿಸ್ಮೃತಂ ನಷ್ಟಂ ಪರೇಷಾಂ ಧನಹಾರಕಾಃ।
ವಧಬನ್ಧಪರಿಕ್ಲೇಶೈರ್ದಾಸತ್ವಂ ಕುರ್ವತೇ ಪರಾನ್ ॥೪೧೭॥
ತಾದೃಶಾ ಮರಣಂ ಪ್ರಾಪ್ತಾ ದಣ್ಡಿತಾ ಯಮಶಾಸನೈಃ।
ಕಥಂಚಿತ್ಪ್ರಾಪ್ಯ ಮಾನುಷ್ಯಂ ತತ್ರ ತೇ ದೇವಿ ಸರ್ವಥಾ ॥೪೧೮॥
ದಾಸಭೂತಾ ಭವಿಷ್ಯನ್ತಿ ಜನ್ಮಪ್ರಭೃತಿ ಮಾನವಾಃ।
ತೇಷಾಂ ಕರ್ಮಾಣಿ ಕುರ್ವನ್ತಿ ಯೇಷಾಂ ತೇ ಧನಹಾರಕಾಃ।
ಆಸಮಾಪ್ತೇಃ ಸ್ವಪಾಪಸ್ಯ ಕುರ್ವನ್ತೀತಿ ವಿನಿಶ್ಚಯಃ ॥೪೧೯॥

ಯಾರು ಹಿಂದಿನ ಜನ್ಮದಲ್ಲಿ ಇತರರ ಐಶ್ವರ್ಯವನ್ನು ಅಪಹರಿಸಿರುವರೋ, ಬಡ್ಡಿಗಾಗಿ ಕೊಟ್ಟ ಸಾಲದ ಹಣವನ್ನೂ ಹಿಂದಕ್ಕೆ ಕೊಟ್ಟಿರಲಿಲ್ಲವೋ, ತಮ್ಮಲ್ಲಿ ನಂಬಿಕೆಯಿಂದ ಇಟ್ಟುಕೊಂಡಿರಲು ಕೊಟ್ಟ ಹಣವನ್ನೂ ಕ್ರೌರ್ಯದಿಂದ ಅಪಹರಿಸಿದ್ದರೋ, ಪ್ರಮಾದದಿಂದ ಮರೆತ ಅಥವಾ ನಷ್ಟವಾಗಿ ಹೋದ ಇತರರ ಐಶ್ವರ್ಯವನ್ನು ಅಪಹರಿಸಿದ್ದರೋ, ವಧ-ಬಂಧ-ಪರಿಕ್ಲೇಶಾದಿಗಳಿಂದ ಇತರರನ್ನು ದಾಸರನ್ನಾಗಿ ಮಾಡಿಕೊಳ್ಳುತ್ತಿದ್ದರೋ–ಅಂತಹವರು ಮರಣಹೊಂದಿದನಂತರ ಯಮನ ಶಾಸನದಿಂದ ದಂಡಿಸಲ್ಪಟ್ಟವರಾಗಿ ಅನೇಕವರ್ಷಗಳ ಕಾಲ ನರಕದಲ್ಲಿದ್ದು ಕಡೆಗೆ ಮನುಷ್ಯರಾಗಿ ಹುಟ್ಟಿದರೂ ಹುಟ್ಟಿದಾಗಿನಿಂದಲೇ ದಾಸಭಾವವನ್ನು ಹೊಂದಿರುತ್ತಾರೆ. ಕಳೆದ ಜನ್ಮದಲ್ಲಿ ಯಾರ ಹಣವನ್ನು ಇವರು ಅಪಹರಿಸಿದ್ದರೋ ಅವರಿಗೇ ದಾಸರಾಗಿ ಅವರ ಕಾರ್ಯವನ್ನು ಮಾಡುತ್ತಿರುತ್ತಾರೆ. ಪಾಪವು ಸಂಪೂರ್ಣವಾಗಿ ಪರಿಹಾರವಾಗುವವರೆಗೂ ಅವರು ಇದೇ ಕಾರ್ಯವನ್ನೇ ಮಾಡುತ್ತಿರಬೇಕಾಗುತ್ತದೆ.

ಪಶುಭೂತಾಸ್ತಥಾ ಚಾನ್ಯೇ ಭವನ್ತಿ ಧನಹಾರಕಾಃ।
ತತ್ತಥಾ ಕ್ಷೀಯತೇ ಕರ್ಮ ತೇಷಾಂ ಪೂರ್ವಾಪರಾಧಜಮ್ ॥೪೨೦॥

ಇತರರ ಐಶ್ವರ್ಯವನ್ನು ಅಪಹರಿಸಿದವರು ಕೆಲವು ವೇಳೆ ಪಶುಗಳಾಗಿಯೂ ಹುಟ್ಟಿ ಧನಿಕನ ಸೇವೆಯನ್ನು ಮಾಡುತ್ತಿರುತ್ತಾರೆ. ಹಾಗೆ ಮಾಡುವುದರಿಂದಲೇ ಅವರು ಪೂರ್ವಜನ್ಮದಲ್ಲಿ ಮಾಡಿದ ಪಾಪವು ಕ್ಷೀಣಿಸುತ್ತದೆ.

ಕಿಂ ತು ಮೋಕ್ಷವಿಧಿಸ್ತೇಷಾಂ ಸರ್ವಥಾ ತತ್ಪ್ರಸಾದನಮ್।
ಅಯಥಾವನ್ಮೋಕ್ಷಕಾಮಃ ಪುನರ್ಜನ್ಮನಿ ಚೇಷ್ಯತೇ ॥೪೨೧॥

ಆದರೆ ಧನವಂತನನ್ನು ಪ್ರಸನ್ನಗೊಳಿಸುವುದರಿಂದಲೂ ಆ ಋಣದಿಂದ ಮುಕ್ತನಾಗಬಹುದು. ಆದರೆ ಹೀಗೆ ಋಣದ ಮುಕ್ತಿಯನ್ನು ಪಡೆಯಲಾಗದಿದ್ದರೆ ಪುನರ್ಜನ್ಮವನ್ನು ಹೊಂದಿ ಅವನ ಸೇವೆಮಾಡಿಯೇ ಆ ಋಣವನ್ನು ತೀರಿಸಬೇಕಾಗುತ್ತದೆ.

ಮೋಕ್ಷಕಾಮೀ ಯಥಾನ್ಯಾಯಂ ಕುರ್ವನ್ಕರ್ಮಾಣಿ ಸರ್ವಶಃ।
ಭರ್ತುಃ ಪ್ರಸಾದಮಾಕಾಂಕ್ಷೇದಾಯಾಸಾನ್ಸರ್ವಥಾ ಸಹನ್ ॥೪೨೨॥

ಪರವಿತ್ತಾಪಹಾರದಿಂದ ಮುಕ್ತಿಯನ್ನು ಬಯಸುವವನು ನ್ಯಾಯೋಚಿತವಾದ ರೀತಿಯಲ್ಲಿ ಒಡೆಯನು ಹೇಳಿದ ಎಲ್ಲ ಕಾರ್ಯಗಳನ್ನೂ ಮಾಡುತ್ತಾ ಪರಿಶ್ರಮವನ್ನು ಸಹಿಸಿಕೊಂಡು ಸ್ವಾಮಿಯ ಪ್ರಸನ್ನತೆಯನ್ನೇ ನಿರೀಕ್ಷಿಸುತ್ತಿರಬೇಕು.

ಪ್ರೀತಿಪೂರ್ವಂ ತು ಯೋ ಭರ್ತ್ರಾ ಮುಕ್ತೋ ಮುಕ್ತಃ ಸ ಪಾವನಃ।
ತಥಾಭೂತಾನ್ಕರ್ಮಕರಾನ್ಸದಾ ಸಂತೋಷಯೇತ್ಪತಿಃ ॥೪೨೩॥

ಯಜಮಾನನು ಯಾವ ಸೇವಕನನ್ನು ಪ್ರಸನ್ನತೆಯಿಂದ ಮುಕ್ತಿಗೊಳಿಸುವನೋ ಆ ಸೇವಕನು ಮುಕ್ತನೂ ಆಗುತ್ತಾನೆ; ಪಾವನನೂ ಆಗುತ್ತಾನೆ. ಯಜಮಾನನು ಕೂಡ ಅಂತಹ ವಿನಯಶೀಲರಾದ ಸೇವಕರನ್ನು ಸದಾ ಸಂತೋಷಗೊಳಿಸುತ್ತಿರಬೇಕು.

ಯಥಾರ್ಹಂ ಕಾರಯೇತ್ಕರ್ಮ ದಣ್ಡಂ ಕಾರಣತಃ ಕ್ಷಿಪೇತ್।
ವೃದ್ಧಾನ್ಬಾಲಾಂಸ್ತಥಾ ಕ್ಷೀಣಾನ್ಪಾಲಯನ್ಧರ್ಮಮಾಪ್ನುಯಾತ್।
ಇತಿ ತೇ ಕಥಿತಂ ದೇವಿ ಭೂಯಃ ಶ್ರೋತುಂ ಕಿಮಿಚ್ಛಸಿ ॥೪೨೪॥

ಸೇವಕನಿಂದ ಯಥಾಯೋಗ್ಯವಾದ ಕಾರ್ಯಗಳನ್ನು ಮಾಡಿಸಿಕೊಳ್ಳಬೇಕು. ವಿಶೇಷವಾದ ಕಾರಣವಿದ್ದರೆ ಮಾತ್ರ ಅವನನ್ನು ಶಿಕ್ಷಿಸಬೇಕು.

ವೃದ್ಧರನ್ನೂ, ಬಾಲಕರನ್ನೂ, ದುರ್ಬಲರನ್ನೂ ಪರಿಪಾಲನೆಮಾಡುತ್ತಾ ಪುಣ್ಯವನ್ನು ಹೊಂದಬೇಕು. ದೇವಿ! ನಿನಗೆ ನಾನು ಎಲ್ಲವನ್ನೂ ಹೇಳಿರುವೆನು; ಮತ್ತೇನನ್ನು ಕೇಳಬಯಸುವೆ?"

ಉಮೆ:

ಭಗವನ್ಭುವಿ ಮರ್ತ್ಯಾನಾಂ ದಣ್ಡಿತಾನಾಂ ನರೇಶ್ವರೈಃ।
ದಣ್ಡೇನೈವ ಕೃತೇನೇಹ ಪಾಪನಾಶೋ ಭವೇನ್ನ ವಾ।
ಏತನ್ಮಯಾ ಸಂಶಯಿತಂ ತದ್ಭವಾಂಶ್ಚೇತ್ತುಮರ್ಹತಿ ॥೪೨೫॥

"ಪೂಜ್ಯನೇ! ಭೂಮಿಯಲ್ಲಿ ರಾಜರಿಂದ ಅವರವರ ಅಪರಾಧಕ್ಕೆ ಅನುಗುಣವಾಗಿ ಶಿಕ್ಷಿಸಲ್ಪಡುವ ಮನುಷ್ಯರಿಗೆ ಆ ಶಿಕ್ಷೆಯಿಂದಲೇ ಅವರು ಮಾಡಿದ ಪಾಪವು ನಾಶವಾಗುವುದೇ ಅಥವಾ ಇಲ್ಲವೇ? ಈ ವಿಷಯದಲ್ಲಿ ನನಗೆ ಸಂಶಯವುಂಟಾಗಿದೆ. ಇದನ್ನು ನಿವಾರಿಸು."

ಮಹೇಶ್ವರ:

ಸ್ಥಾನೇ ಸಂಶಯಿತಂ ದೇವಿ ಶೃಣು ತತ್ತ್ವಂ ಸಮಾಹಿತಾ।
ಯೇ ನೃಪೈರ್ದಣ್ಡಿತಾ ಭೂಮಾವಪರಾಧಾಪದೇಶತಃ।
ಯಮಲೋಕೇ ನ ದಣ್ಡ್ಯನ್ತೇ ತತ್ರ ತೇ ಯಮದಣ್ಡನೈಃ ॥೪೨೬॥

"ದೇವಿ! ನಿನ್ನ ಸಂಶಯವು ಸರಿಯಾಗಿದೆ. ಏಕಾಗ್ರಚಿತ್ತಳಾಗಿ ಯಥಾವತ್ತಾದ ಉತ್ತರವನ್ನು ಕೇಳು. ಈ ಲೋಕದಲ್ಲಿ ರಾಜರು ಮನುಷ್ಯರಿಗೆ ಯಾವುದಾದರೂ ಅಪರಾಧವನ್ನು ನಿರ್ದೇಶಿಸಿ ತಕ್ಕ ಶಿಕ್ಷೆಯನ್ನು ವಿಧಿಸಿದ್ದರೆ–ಯಮಲೋಕದಲ್ಲಿ ಯಮದಂಡಗಳ ಮೂಲಕ ಆ ಅಪರಾಧಕ್ಕೆ ಶಿಕ್ಷೆಯು ವಿಧಿಸಲ್ಪಡುವುದಿಲ್ಲ. (ಒಂದು ಅಪರಾಧಕ್ಕೆ ಭೂಲೋಕದಲ್ಲಿ ದಂಡನೆಯಾಗಿದ್ದರೆ ಅದೇ ಅಪರಾಧಕ್ಕೆ ಯಮನ ಲೋಕದಲ್ಲಿ ಪುನಃ ಶಿಕ್ಷೆಯಾಗುವುದಿಲ್ಲ.)

ಅದಣ್ಡಿತಾ ವಾ ಯೇ ತಥ್ಯಾ ಮಿಥ್ಯಾ ವಾ ದಣ್ಡಿತಾ ಭುವಿ।
ತಾನ್ಯಮೋ ದಣ್ಡಯತ್ಯೇವ ಸ ಹಿ ವೇದ ಕೃತಾಕೃತಮ್ ॥೪೨೭॥

ಈ ಲೋಕದಲ್ಲಿ ಯಾರು ಸತ್ಯವಾಗಿ ಶಿಕ್ಷೆಗೆ ಒಳಗಾಗಿಲ್ಲವೋ ಅಥವಾ ನೆಪಮಾತ್ರಕ್ಕೆ ಶಿಕ್ಷಿಸಲ್ಪಡುವರೋ ಅಂತಹವರನ್ನು ಯಮನು ಶಿಕ್ಷಿಸಿಯೇ ಶಿಕ್ಷಿಸುತ್ತಾನೆ. ಅವನು, ಮಾನವನು ಮಾಡಿದುದನ್ನೂ ಮಾಡದಿರುವುದನ್ನೂ ಸರಿಯಾಗಿ ತಿಳಿದಿರುತ್ತಾನೆ.

ನಾತಿಕ್ರಮೇದ್ಯಮಂ ಕಶ್ಚಿತ್ಕರ್ಮ ಕೃತ್ವೇಹ ಮಾನುಷಃ।
ರಾಜಾ ಯಮಶ್ಚ ಕುರ್ವಾತೇ ದಣ್ಡಮಾತ್ರಂ ತು ಶೋಭನೇ ॥೪೨೮॥

ಯಾವನೊಬ್ಬನೂ ಪಾಪವನ್ನು ಮಾಡಿ ಯಮನನ್ನು ಮೀರಿಹೋಗಲು ಸಾಧ್ಯವಾಗುವುದಿಲ್ಲ. ರಾಜ ಮತ್ತು ಯಮ ಇಬ್ಬರೂ ಅಪರಾಧಕ್ಕೆ ತಕ್ಕುದಾದ ಶಿಕ್ಷೆಗಳನ್ನು ಕೊಡುತ್ತಾರೆ.

ನಾಸ್ತಿ ಕರ್ಮಫಲಚ್ಛೇತ್ತಾ ಕಶ್ಚಿಲ್ಲೋಕತ್ರಯೇಽಪಿ ಚ।
ಇತಿ ತೇ ಕಥಿತಂ ಸರ್ವಂ ನಿರ್ವಿಶಙ್ಕಾ ಭವ ಪ್ರಿಯೇ ॥೪೨೯॥

ಪ್ರಿಯಳೇ! ಮೂರುಲೋಕಗಳಲ್ಲಿ ಕರ್ಮಫಲವನ್ನು ಕತ್ತರಿಸಿಹಾಕುವವನು (ಅನುಭವಿಸದೇ ಇರುವವನು) ಯಾವನೂ ಇರುವುದಿಲ್ಲ. ಹೀಗೆ ನಿನಗೆ ಎಲ್ಲವನ್ನೂ ಹೇಳಿದ್ದೇನೆ. ಈ ವಿಷಯದಲ್ಲಿ ಸಂದೇಹಿಸಬೇಡ."

ಉಮೆ:

ಕಿಮರ್ಥಂ ದುಷ್ಕೃತಂ ಕೃತ್ವಾ ಮಾನುಷಾ ಭುವಿ ನಿತ್ಯಶಃ ।
ಪುನಸ್ತತ್ಕರ್ಮನಾಶಾಯ ಪ್ರಾಯಶ್ಚಿತ್ತಾನಿ ಕುರ್ವತೇ ॥೪೩೦॥

"ಪ್ರಭುವೇ! ಈ ಪ್ರಪಂಚದಲ್ಲಿ ಮನುಷ್ಯರು ಪಾಪಕರ್ಮಗಳನ್ನು ಮಾಡಿ ಪುನಃ ಆ ಪಾಪಗಳ ನಿವಾರಣೆಗಾಗಿ ಪ್ರಾಯಶ್ಚಿತ್ತಗಳನ್ನು ಏಕೆ ಮಾಡಿಕೊಳ್ಳುತ್ತಾರೆ? (ದುಷ್ಕರ್ಮಗಳನ್ನು ಮಾಡದಿರುವುದೇ ಒಳ್ಳೆಯದಲ್ಲವೇ?)

ಸರ್ವಪಾಪಹರಂ ಚೇತಿ ಹಯಮೇಧಂ ವದನ್ತಿ ಚ ।
ಪ್ರಾಯಶ್ಚಿತ್ತಾನಿ ಚಾನ್ಯಾನಿ ಪಾಪನಾಶಾಯ ಕುರ್ವತೇ।
ತಸ್ಮಾನ್ಮಯಾ ಸಂಶಯಿತಂ ತ್ವಂ ತಚ್ಛೇತ್ತುಮಿಹಾರ್ಹಸಿ ॥೪೩೧॥

ಅಶ್ವಮೇಧವು ಸರ್ವಪಾಪಗಳನ್ನೂ ಪರಿಹರಿಸತಕ್ಕುದೆಂದು ಹೇಳುತ್ತಾರೆ. ಪಾಪಗಳ ನಿರಸನಕ್ಕಾಗಿ ಇನ್ನೂ ಅನೇಕವಿಧವಾದ ಪ್ರಾಯಶ್ಚಿತ್ತಗಳನ್ನು ಮಾಡಿಕೊಳ್ಳುತ್ತಾರೆ. (ನೀನು ಮಾತ್ರ ಮೂರು ಲೋಕಗಳಲ್ಲಿಯೂ ಕರ್ಮಫಲಕ್ಕೆ ನಾಶವೇ ಇಲ್ಲವೆಂದು ಹೇಳಿರುವೆ.) ಈ ಕಾರಣದಿಂದಲೇ ನನಗೆ ಸಂಶಯವುಂಟಾಗಿದೆ. ಈ ನನ್ನ ಸಂಶಯವನ್ನು ನಿವಾರಿಸುವ ಕೃಪೆಮಾಡು."

ಮಹೇಶ್ವರ:

"ದೇವಿ! ನೀನು ಸಂಶಯಗೊಳ್ಳಬೇಕಾದ ವಿಷಯದಲ್ಲಿಯೇ ಸಂದೇಹಗೊಂಡಿರುವೆ. ಹಿಂದಿನ ವಿದ್ವಾಂಸರಿಗೂ ಈ ವಿಷಯದಲ್ಲಿ ಮಹತ್ತಾದ ಸಂದೇಹವೇ ಇದೆ.

ದ್ವಿಧಾ ತು ಕ್ರಿಯತೇ ಪಾಪಂ ಸದ್ಭಿಶ್ಚಾಸದ್ಭಿರೇವ ಚ ।
ಅಭಿಸಂಧಾಯ ವಾ ನಿತ್ಯಮನ್ಯಥಾ ವಾ ಯದೃಚ್ಛಯಾ ॥೪೩೨॥

ಸತ್ಪುರುಷರೇ ಆಗಲೀ, ಅಸತ್ಪುರುಷರೇ ಆಗಲೀ-ಎರಡು ಬಗೆಯ ಪಾಪಗಳನ್ನು ಮಾಡುತ್ತಾರೆ. ಮಾಡುತ್ತಿರುವುದು ಪಾಪಕಾರ್ಯವೆಂದು ತಿಳಿದಿದ್ದರೂ, ಅನುದಿನವೂ ಅದೇ ಪಾಪಕರ್ಮವನ್ನೇ ಉದ್ದೇಶ ಪೂರ್ವಕವಾಗಿಯೇ ಮಾಡುವುದು ಒಂದು ವಿಧ. ದೈವೇಚ್ಛೆಯಿಂದ ಆಕಸ್ಮಿಕವಾಗಿ ಅರಿವಿಲ್ಲದೇ ಪಾಪಮಾಡುವುದು ಮತ್ತೊಂದು ವಿಧ.

ಕೇವಲಂ ಚಾಭಿಸಂಧಾಯ ಸಂರಮ್ಭಾಚ್ಚ ಕರೋತಿ ಯತ್।
ಕರ್ಮಣಸ್ತಸ್ಯ ನಾಶಸ್ತು ನ ಕಥಂಚನ ವಿದ್ಯತೇ ॥೪೩೪॥

ಕೋಪದಿಂದ ಉದ್ದೇಶಪೂರ್ವಕವಾಗಿಯೇ ಯಾವನು ಪಾಪಕರ್ಮವನ್ನು ಮಾಡುವನೋ–ಆ ಪಾಪಕರ್ಮದ ಫಲವು ಯಾವುದೇ ಕಾರಣದಿಂದಲೂ ನಾಶವಾಗುವುದಿಲ್ಲ.

ಅಭಿಸಂಧಿಕೃತಸ್ಯೈವ ನೈವ ನಾಶೋಽಸ್ತಿ ಕರ್ಮಣಃ।
ಅಶ್ವಮೇಧಸಹಸ್ರೈಶ್ಚ ಪ್ರಾಯಶ್ಚಿತ್ತಶತೈರಪಿ ॥೪೩೫॥
ಅನ್ಯಥಾ ಯತ್ಕೃತಂ ಪಾಪಂ ಪ್ರಮಾದಾದ್ವಾ ಯದೃಚ್ಛಯಾ।
ಪ್ರಾಯಶ್ಚಿತ್ತಾಶ್ವಮೇಧಾಭ್ಯಾಂ ಶ್ರೇಯಸಾ ತತ್ಪ್ರಣಶ್ಯತಿ ॥೪೩೬॥

ಉದ್ದೇಶಪೂರ್ವಕವಾಗಿಯೇ ಮಾಡಿದ ದುಷ್ಕರ್ಮಕ್ಕೆ ಅಥವಾ ದುಷ್ಕರ್ಮಫಲಕ್ಕೆ ನಾಶವೆಂಬುದೇ ಇಲ್ಲ. ಹಲವು ಸಾವಿರ ಅಶ್ವಮೇಧಗಳಿಂದಾಗಲೀ, ಹಲವು ನೂರು ಪ್ರಾಯಶ್ಚಿತ್ತಗಳಿಂದಾಗಲೀ ಆ ಪಾಪವು ನಾಶವಾಗುವುದಿಲ್ಲ. (ಅದನ್ನು ಅನುಭವಿಸಿಯೇ ಕಳೆದುಕೊಳ್ಳಬೇಕು.) ಪ್ರಮಾದದಿಂದಲೋ, ಆಕಸ್ಮಿಕವಾಗಿಯೋ ಮಾಡಿದ ಪಾಪವು ಪ್ರಾಯಶ್ಚಿತ್ತದಿಂದಲೂ, ಅಶ್ವಮೇಧಯಾಗದಿಂದಲೂ ಅಥವಾ ಬೇರೆ ಯಾವುದೇ ಶ್ರೇಯಸ್ಕರವಾದಕರ್ಮಗಳಿಂದಲೂ ವಿನಾಶವಾಗುತ್ತದೆ. ದೇವಿ! ಪಾಪ

ಕರ್ಮದ ಸ್ವರೂಪವನ್ನು ಹೀಗೆ ತಿಳಿಯಬೇಕು. ಈ ವಿಷಯದಲ್ಲಿ ಸಂದೇಹಿಸಬೇಡ. ಹೀಗೆ ನಾನು ನಿನಗೆ ಎಲ್ಲವನ್ನೂ ಹೇಳಿದ್ದೇನೆ. ಮತ್ತೇನನ್ನು ಕೇಳಲು ಬಯಸುವೆ?"

ಉಮೆ:

ಭಗವನ್ದೇವದೇವೇಶ ಮಾನುಷಾಶ್ಚೇತರಾ ಅಪಿ।
ಮ್ರಿಯನ್ತೇ ಮಾನುಷಾ ಲೋಕೇ ಕಾರಣಾಕಾರಣಾದಪಿ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೪೩೮॥

"ಪೂಜ್ಯನೇ! ದೇವಾಧಿದೇವತೆಗಳಿಗೂ ಈಶನೇ! ಮನುಷ್ಯರೂ ಮತ್ತು ಇತರ ಪ್ರಾಣಿಗಳೂ ಯಾವುದಾದರೂ ಕಾರಣಗಳಿಂದ ಸಾಯುತ್ತಾರೆ. ಕೆಲವು ವೇಳೆ ಯಾವ ಕಾರಣವೂ ಇಲ್ಲದೆಯೇ ಸಾಯುತ್ತಾರೆ. ಯಾವ ಕರ್ಮಫಲದಿಂದ ಹೀಗಾಗುವುದೆಂಬುದನ್ನು ಹೇಳುವ ಕೃಪೆಮಾಡು."

ಮಹೇಶ್ವರ:

ಯೇ ಪುರಾ ಮನುಜಾ ದೇವಿ ಕಾರಣಾಕಾರಣಾದಪಿ।
ಯಥಾಸುಭಿರ್ವಿಯುಜ್ಯನ್ತೇ ಪ್ರಾಣಿನಃ ಪ್ರಾಣಿನಿರ್ದಯಾಃ ॥೪೩೯॥
ತಥೈವ ತೇ ಪ್ರಾಪ್ನುವನ್ತಿ ಯಥೈವಾತ್ಮಕೃತಂ ಫಲಮ್।
ವಿಷದಾಸ್ತು ವಿಷೇಣೈವ ಶಸ್ತ್ರೈಃ ಶಸ್ತ್ರೇಣ ಘಾತಕಾಃ ॥೪೪೦॥

"ದೇವಿ! ನಿರ್ದಯರಾದ ಯಾವ ಮನುಷ್ಯರು ಹಿಂದೆ ಕಾರಣವಿದ್ದೋ ಅಥವಾ ಕಾರಣವಿಲ್ಲದೆಯೋ ನಿರ್ದಯದಿಂದ ಪ್ರಾಣಿಗಳ ಪ್ರಾಣಗಳನ್ನು ನೀಗಿರುವರೋ ಅವರು ಅದೇ ರೀತಿಯಲ್ಲಿಯೇ ತಮ್ಮ ಪ್ರಾಣಗಳನ್ನು ಕಳೆದುಕೊಳ್ಳುತ್ತಾರೆ. ಪ್ರಾಣಿಗಳಿಗೆ ವಿಷವಿಟ್ಟು ಸಾಯಿಸಿದವರು ವಿಷದಿಂದಲೇ ಪ್ರಾಣಬಿಡುತ್ತಾರೆ. ಶಸ್ತ್ರಗಳಿಂದ ಪ್ರಾಣಿಗಳನ್ನು ಹತ್ಯೆಮಾಡಿದ ಘಾತಕರು ಶಸ್ತ್ರಪ್ರಹಾರದಿಂದಲೇ ಪ್ರಾಣಬಿಡುತ್ತಾರೆ.

ಇತಿ ಸತ್ಯಂ ಪ್ರಜಾನೀಹಿ ಲೋಕೇ ತತ್ರ ವಿಧಿಂ ಪ್ರತಿ।
ಕರ್ಮಕರ್ತಾ ನರೋಽಭೋಕ್ತಾ ಸ ನಾಸ್ತಿ ದಿವಿ ವಾ ಭುವಿ ॥೪೪೧॥

ಲೋಕದಲ್ಲಿ ಕರ್ಮವಿಧಿಯ ವಿಷಯವಾಗಿ ಈ ಸತ್ಯವಿಷಯವನ್ನು ನೀನು ಸ್ಪಷ್ಟವಾಗಿ ತಿಳಿಯಬೇಕು. ಕರ್ಮವನ್ನು ಮಾಡಿ ಫಲವನ್ನು ಅನುಭವಿಸದೇ ಇರುವ ಪುರುಷನು ಭೂಮಿಯಲ್ಲೂ ಇಲ್ಲ; ಸ್ವರ್ಗದಲ್ಲೂ ಇಲ್ಲ.

ನ ಶಕ್ಯಂ ಕರ್ಮ ಚಾಭೋಕ್ತುಂ ಸದೇವಾಸುರಮಾನುಷೈಃ।
ಕರ್ಮಣಾ ಗ್ರಥಿತೋ ಲೋಕ ಆದಿಪ್ರಭೃತಿ ವರ್ತತೇ ॥೪೪೨॥

ದೇವ-ಅಸುರ-ಮನುಷ್ಯರಲ್ಲಿ ಯಾರೇ ಆಗಲೀ ಕರ್ಮಫಲವನ್ನು ಉಪಭೋಗಿಸದೇ ಇರಲು ಶಕ್ಯವೇ ಇಲ್ಲ. ಆದಿಕಾಲದಿಂದಲೂ ಲೋಕವು ಕರ್ಮದಿಂದಲೇ ಕಟ್ಟಲ್ಪಟ್ಟಿದೆ.

ಏತದುದ್ದೇಶತಃ ಪ್ರೋಕ್ತಂ ಕರ್ಮಪಾಕಫಲಂ ಪ್ರತಿ।
ಯದನ್ಯಚ್ಚ ಮಯಾ ನೋಕ್ತಂ ಯಸ್ಮಿಂಸ್ತೇ ಕರ್ಮಸಂಗ್ರಹೇ ॥೪೪೩॥
ಬುದ್ಧಿತರ್ಕೇಣ ತತ್ಸರ್ವಂ ತಥಾ ವೇದಿತುಮರ್ಹಸಿ।
ಕಥಿತಂ ಶ್ರೋತುಕಾಮಾಯಾ ಭೂಯಃ ಶ್ರೋತುಂ ಕಿಮಿಚ್ಛಸಿ ॥

ದೇವಿ! ಈ ಕರ್ಮವಿಪಾಕದ ಫಲವನ್ನು ನಾನು ಸಂಗ್ರಹವಾಗಿ ಹೇಳಿದ್ದೇನೆ. ಈ ಕರ್ಮಸಂಗ್ರಹದ ವಿಷಯದಲ್ಲಿ ನಾನು ಯಾವುದನ್ನು ಹೇಳಲಿಲ್ಲವೋ ಅವೆಲ್ಲವನ್ನೂ ನೀನು ಬುದ್ಧಿಯಲ್ಲಿ ತರ್ಕಮಾಡಿ ನಿರ್ಧರಿಸಿಕೊಂಡು ತಿಳಿದುಕೊಳ್ಳಬೇಕಾಗಿದೆ. ಈ ಸೂಕ್ಷ್ಮವಿಷಯವನ್ನು ಕೇಳಲು ಬಯಸಿದ್ದ ನಿನಗೆ ಎಲ್ಲವನ್ನೂ ಹೇಳಿದ್ದೇನೆ. ಮತ್ತೇನನ್ನು ಕೇಳಲು ಬಯಸುವೆ?”

ಉಮೆ:

ಭಗವನ್ಭಗನೇತ್ರಘ್ನ ಮಾನುಷಾಣಾಂ ವಿಚೇಷ್ಟಿತಮ್।
ಸರ್ವಮಾತ್ಮಕೃತಂ ಚೇತಿ ಶ್ರುತಂ ಮೇ ಭಗವನ್ಮತಮ್ ॥೪೪೪॥
ಲೋಕೇ ಗ್ರಹಕೃತಂ ಸರ್ವಂ ಮತ್ವಾ ಕರ್ಮ ಶುಭಾಶುಭಮ್।
ತದೇವ ಗ್ರಹನಕ್ಷತ್ರಂ ಪ್ರಾಯಶಃ ಪರ್ಯುಪಾಸತೇ।
ಏಷ ಮೇ ಸಂಶಯೋ ದೇವ ತಂ ಮೇ ತ್ವಂ ಛೇತ್ತುಮರ್ಹಸಿ ॥

“ಪೂಜ್ಯನೇ! ಭಗನೇತ್ರವಿನಾಶಕನೇ! ಮಹಾದೇವನೇ! ‘ಮನುಷ್ಯರು ಮಾಡುವುದೆಲ್ಲವೂ ತಮ್ಮ-ತಮ್ಮ ಕರ್ಮಫಲಗಳ ಅನುಸಾರವಾಗಿಯೇ ಇರುತ್ತದೆ’-ಎಂದು ನಿನ್ನ ಅಭಿಪ್ರಾಯವನ್ನು ನಾನು ಕೇಳಿದೆನು. ಆದರೆ ಶುಭಾಶುಭಫಲಗಳೆಲ್ಲವೂ ಗ್ರಹಗಳ ಪ್ರಭಾವದಿಂದ ಉಂಟಾಗುವುದೆಂದು ಭಾವಿಸಿ ಲೋಕದಲ್ಲಿ ಪ್ರಾಯಶಃ ಎಲ್ಲರೂ ಗ್ರಹ-ನಕ್ಷತ್ರಗಳನ್ನೇ

ಆರಾಧಿಸುತ್ತಾರೆ. ಹೀಗೆ ಅವರು ಭಾವಿಸುವುದು ಸರಿಯೇ? ಎಂಬ ವಿಷಯದಲ್ಲಿ ನನಗೆ ಸಂಶಯವುಂಟಾಗಿದೆ. ದಯಮಾಡಿ ಈ ನನ್ನ ಸಂಶಯವನ್ನು ನಿವಾರಿಸು."

ಪರಮೇಶ್ವರ:

"ದೇವಿ! ನೀನು ಸಂಶಯಪಡಬೇಕಾದ ವಿಷಯದಲ್ಲಿಯೇ ಸಂದೇಹ ವನ್ನು ಸೂಚಿಸಿರುವೆ. ಇದರ ತತ್ತ್ವದ ನಿರ್ಣಯವೇನೆಂಬುದನ್ನು ಕೇಳು.

ನಕ್ಷತ್ರಾಣಿ ಗ್ರಹಾಶ್ಚೈವ ಶುಭಾಶುಭನಿವೇದಕಾಃ।
ಮಾನವಾನಾಂ ಮಹಾಭಾಗೇ ನ ತು ಕರ್ಮಕರಾಃ ಸ್ವಯಮ್ ॥೪೪॥

ಮಹಾಭಾಗಳೇ! ನಕ್ಷತ್ರ-ಗ್ರಹಗಳು ಮಾನವನಿಗೆ ಶುಭಾಶುಭಫಲ ಗಳನ್ನು ಮುಂದಾಗಿ ಸೂಚಿಸುತ್ತವೆ. ಅವು ತಾವಾಗಿಯೇ ಯಾವ ಕರ್ಮಗಳನ್ನೂ ಮಾಡುವುದಿಲ್ಲ.

ಪ್ರಜಾನಾಂ ತು ಹಿತಾರ್ಥಾಯ ಶುಭಾಶುಭವಿಧಿಂ ಪ್ರತಿ।
ಅನಾಗತಮತಿಕ್ರಾನ್ತಂ ಜ್ಯೋತಿಶ್ಚಕ್ರೇಣ ಬೋಧ್ಯತೇ ॥೪೪೮॥

ಪ್ರಜೆಗಳ ಹಿತಾರ್ಥವಾಗಿ ಮುಂದಾಗುವ ಮತ್ತು ಹಿಂದೆ ಕಳೆದುಹೋದ ಶುಭಾಶುಭಫಲಗಳು ಜ್ಯೋತಿಶ್ಚಕ್ರದ (ಗ್ರಹ-ನಕ್ಷತ್ರಮಂಡಲದ) ಮೂಲಕ ವಾಗಿ ಬೋಧಿಸಲ್ಪಡುತ್ತವೆ.

ಕಿಂ ತು ತತ್ರ ಶುಭಂ ಕರ್ಮ ಸುಗ್ರಹೈಸ್ತು ನಿವೇದ್ಯತೇ।
ದುಷ್ಕೃತಸ್ಯಾಶುಭೈರೇವ ಸಮವಾಯೋ ಭವೇದಿತಿ ॥೪೪೯॥

ಅದರಲ್ಲಿ ಶುಭಕರ್ಮಗಳು ಶುಭನಕ್ಷತ್ರಗಳ ಮೂಲಕವಾಗಿ ತಿಳಿದುಬರುತ್ತವೆ. ದುಷ್ಕರ್ಮಗಳು ದುಷ್ಟವಾದ ಗ್ರಹಗಳ ಮೂಲಕವಾಗಿ ತಿಳಿದುಬರುತ್ತವೆ.

ಕೇವಲಂ ಗ್ರಹನಕ್ಷತ್ರಂ ನ ಕರೋತಿ ಶುಭಾಶುಭಮ್।
ಸರ್ವಮಾತ್ಮಕೃತಂ ಕರ್ಮ ಲೋಕವಾದೋ ಗ್ರಹಾ ಇತಿ ॥೪೫೦॥

ಕೇವಲ ಗ್ರಹ-ನಕ್ಷತ್ರಗಳೇ ಶುಭಾಶುಭಫಲಗಳನ್ನು ಉಂಟು ಮಾಡುವುದಿಲ್ಲ. ಎಲ್ಲ ಕರ್ಮಫಲಗಳೂ ತಾನು ಮಾಡಿದ್ದೇ ಆಗಿರುತ್ತವೆ. ಆದರೆ ಲೋಕದಲ್ಲಿ–'ಈ ಗ್ರಹದಿಂದ ಹೀಗಾಯಿತು; ಆ ಗ್ರಹದಿಂದ ಹೀಗಾಯಿತು'–ಎಂತಾಗಿ ಹೇಳುತ್ತಾರೆ."

ಉಮೆ:

ಭಗವನ್ವಿವಿಧಂ ಕರ್ಮ ಕೃತ್ವಾ ಜನ್ತುಃ ಶುಭಾಶುಭಮ್।
ಕಿಂ ತಯೋಃ ಪೂರ್ವಕತರಂ ಭುಙ್ಕ್ತೇ ಜನ್ಮಾನ್ತರೇ ಪುನಃ।
ಏಷ ಮೇ ಸಂಶಯೋ ದೇವ ತಂ ಮೇ ತ್ವಂ ಛೇತ್ತುಮರ್ಹಸಿ॥

"ಪೂಜ್ಯನೇ! ಜೀವನು ನಾನಾವಿಧವಾದ ಶುಭಾಶುಭಕರ್ಮಗಳನ್ನು ಮಾಡಿ ಮರಣಹೊಂದುತ್ತಾನೆ. ಅವನು ಜನ್ಮಾಂತರವನ್ನು ಪಡೆದನಂತರ ಮೊದಲು ಶುಭಕರ್ಮಗಳ ಫಲವನ್ನು ಅನುಭವಿಸುವನೋ ಅಥವಾ ದುಷ್ಕರ್ಮಗಳ ಫಲವನ್ನು ಅನುಭವಿಸುವನೋ? ಈ ಸಂಶಯವು ನನಗುಂಟಾಗಿದೆ. ಇದನ್ನು ನಿರಸನಗೊಳಿಸುವ ಕೃಪೆಮಾಡು."

ಮಹೇಶ್ವರ:

"ದೇವಿ! ಯಾವ ಪ್ರಕರಣದಲ್ಲಿ ಸಂದೇಹಪಡಬೇಕೋ ನೀನೂ ಅಲ್ಲಿಯೇ ಸಂದೇಹಪಟ್ಟಿರುವೆ. ಆ ವಿಷಯವನ್ನು ನಾನು ನಿನಗೆ ಯಥಾವತ್ತಾಗಿ ಹೇಳುತ್ತೇನೆ.

ಅಶುಭಂ ಪೂರ್ವಮಿತ್ಯಾಹುರಪರೇ ಶುಭಮಿತ್ಯಪಿ।
ಮಿಥ್ಯಾ ತದುಭಯಂ ಪ್ರೋಕ್ತಂ ಕೇವಲಂ ತದ್ಬ್ರವೀಮಿ ತೇ ॥೪೫೩॥

ಕೆಲವರು ಅಶುಭಫಲವನ್ನೇ ಮನುಷ್ಯನು ಮೊದಲು ಉಪಭೋಗಿಸುವನು-ಎನ್ನುತ್ತಾರೆ. ಕೆಲವರು ಶುಭಫಲವನ್ನೇ ಮನುಷ್ಯನು ಮೊದಲು ಉಪಭೋಗಿಸುವನು-ಎನ್ನುತ್ತಾರೆ. ಈ ಎರಡು ಮಾತುಗಳೂ ಅಸತ್ಯವೇ ಸರಿ. ಸತ್ಯವು ಯಾವುದೆಂಬುದನ್ನು ನಿನಗೆ ಹೇಳುತ್ತೇನೆ.

ಭುಞ್ಜಾನಾಶ್ಚಾಪಿ ದೃಶ್ಯನ್ತೇ ಕ್ರಮಶೋ ಭುವಿ ಮಾನವಾಃ।
ಋದ್ಧಿಂ ಹಾನಿಂ ಸುಖಂ ದುಃಖಂ ತತ್ಸರ್ವಮಭಯಂ ಭಯಮ್ ॥

ಭೂಮಂಡಲದಲ್ಲಿ ಜನರು ಕ್ರಮವಾಗಿ ಎರಡು ಪ್ರಕಾರವಾದ (ಶುಭಾಶುಭಕರ್ಮಗಳ) ಫಲಗಳನ್ನು ಅನುಭವಿಸುತ್ತಿರುತ್ತಾರೆ. ಒಮ್ಮೆ ಧನದ ಸಮೃದ್ಧಿಯಿರುತ್ತದೆ; ಮತ್ತೊಮ್ಮೆ ಧನಹೀನರಾಗಿರುತ್ತಾರೆ; ಕೆಲವು ವೇಳೆ ಸುಖಿಗಳಾಗಿರುತ್ತಾರೆ; ಕೆಲವು ವೇಳೆ ದುಃಖಿಗಳಾಗಿರುತ್ತಾರೆ; ಕೆಲವು ವೇಳೆ ಭಯರಹಿತರಾಗಿರುತ್ತಾರೆ; ಕೆಲವು ವೇಳೆ ಭಯಗೊಂಡಿರುತ್ತಾರೆ.

ದುಃಖಾನ್ಯನುಭವನ್ತ್ಯಾಢ್ಯಾ ದರಿದ್ರಾಶ್ಚ ಸುಖಾನಿ ಚ ।
ಯೌಗಪದ್ಯಾದ್ಧಿ ಭುಞ್ಜಾನಾ ದೃಶ್ಯನ್ತೇ ಲೋಕಸಾಕ್ಷಿಕಮ್ ॥೪೫೪॥

ಐಶ್ವರ್ಯವಂತರು ದುಃಖಗಳನ್ನು ಅನುಭವಿಸುತ್ತಾರೆ. ದರಿದ್ರರಾಗಿರತಕ್ಕವರು ಸುಖಗಳನ್ನು ಅನುಭವಿಸುತ್ತಾರೆ. ಹೀಗೆ ಜನರು ಸುಖ-ದುಃಖಗಳೆರಡನ್ನೂ ಜೊತೆಯಲ್ಲಿಯೇ ಅನುಭವಿಸುವುದು ಕಂಡುಬರುತ್ತದೆ. ಜಗತ್ತೇ ಇದಕ್ಕೆ ಸಾಕ್ಷಿಯಾಗಿದೆ.

ನರಕೇ ಸ್ವರ್ಗಲೋಕೇ ಚ ನ ತಥಾ ಸಂಸ್ಥಿತಿಃ ಪ್ರಿಯೇ।
ನಿತ್ಯಂ ದುಃಖಂ ಹಿ ನರಕೇ ಸ್ವರ್ಗೇ ನಿತ್ಯಂ ಸುಖಂ ತಥಾ ॥೪೫೫॥

ಆದರೆ ನರಕದಲ್ಲಿಯೂ ಮತ್ತು ಸ್ವರ್ಗದಲ್ಲಿಯೂ ಈ ವಿಧವಾದ ವ್ಯವಸ್ಥೆಯಿಲ್ಲ. ನರಕದಲ್ಲಿ ಸದಾ ದುಃಖವೇ ಇರುತ್ತದೆ. ಸ್ವರ್ಗದಲ್ಲಿ ಸದಾ ಸುಖವೇ ಇರುತ್ತದೆ.

ತತ್ರಾಪಿ ಸುಮಹದ್ದುಃಖ್ಯಾ ಪೂರ್ವಮಲ್ಪಂ ಪುನಃ ಶುಭೇ।
ಏತತ್ತೇ ಸರ್ವಮಾಖ್ಯಾತಂ ಕಿಂ ಭೂಯಃ ಶ್ರೋತುಮಿಚ್ಛಸಿ ॥೪೫೬॥

ಅಲ್ಲಿಯೂ ಕೂಡ ಪಾಪಫಲವೂ ಅಧಿಕವಾಗಿದ್ದರೆ ಮೊದಲು ನರಕವಾಸವನ್ನು ಮಾಡಬೇಕಾಗುತ್ತದೆ. ಪುಣ್ಯಫಲವು ಅಧಿಕವಾಗಿದ್ದರೆ ಮೊದಲು ಸ್ವರ್ಗಸುಖವನ್ನು ಅನುಭವಿಸಬೇಕಾಗುತ್ತದೆ. ಯಾವ ಫಲವು ಕಡಿಮೆಯಾಗಿರುವುದೋ ಅದನ್ನು ಕಡೆಯಲ್ಲಿ ಅನುಭವಿಸಬೇಕಾಗುತ್ತದೆ. ದೇವಿ! ಹೀಗೆ ನಾನೆಲ್ಲವನ್ನೂ ನಿನಗೆ ಹೇಳಿದ್ದೇನೆ. ಪುನಃ ನೀನೇನು ಕೇಳಲು ಬಯಸಿರುವೆ?"

ಉಮೆ:

ಭಗವನ್ಪ್ರಾಣಿನೋ ಲೋಕೇ ಮ್ರಿಯನ್ತೇ ಕೇನ ಹೇತುನಾ।
ಜಾತಾ ಜಾತಾ ನ ತಿಷ್ಠನ್ತಿ ತನ್ಮೇ ಶಂಸಿತುಮರ್ಹಸಿ ॥೪೫೭॥

"ಪೂಜ್ಯನೇ! ಪ್ರಾಣಿಗಳು ಯಾವ ಕಾರಣದಿಂದ ಮರಣಹೊಂದುತ್ತವೆ? ಹುಟ್ಟಿದನಂತರ ಅವು ಇಲ್ಲೇ ಏಕೆ ಶಾಶ್ವತವಾಗಿ ಇರುವುದಿಲ್ಲ? ಈ ವಿಷಯವನ್ನು ಹೇಳುವ ಕೃಪೆಮಾಡು."

ಮಹೇಶ್ವರ:

ತದಹಂ ತೇ ಪ್ರವಕ್ಷ್ಯಾಮಿ ಶೃಣು ಸತ್ಯಂ ಸಮಾಹಿತಾ।
ಆತ್ಮಾ ಕರ್ಮಕ್ಷಯಾದ್ದೇಹಂ ಯಥಾ ಮುಞ್ಚತಿ ತಚ್ಛೃಣು ॥೪೫೮॥

“ಉಮೇ! ಇದರ ಸತ್ಯಸಂಗತಿಯನ್ನು ನಿನಗೆ ಹೇಳುತ್ತೇನೆ. ಏಕಾಗ್ರಚಿತ್ತಳಾಗಿ ಕೇಳು. ಕರ್ಮವು ಕ್ಷಯಿಸಿದೊಡನೆಯೇ ಆತ್ಮನು ಈ ದೇಹವನ್ನು ಹೇಗೆ ಬಿಟ್ಟುಹೋಗುವನೆಂಬುದನ್ನು ಕೇಳು.

ಶರೀರಾತ್ಮ ಸಮಾಹಾರೋ ಜನ್ತುರಿತ್ಯಭಿಧೀಯತೇ।
ತತ್ರಾತ್ಮಾನಂ ನಿತ್ಯಮಾಹುರನಿತ್ಯಂ ಕ್ಷೇತ್ರಮುಚ್ಯತೇ ॥೪೫೯॥

ಶರೀರ ಮತ್ತು ಆತ್ಮಗಳ (ಜಡ ಮತ್ತು ಚೇತನಗಳ) ಸಮಾವೇಶವನ್ನೇ ಪ್ರಾಣೀ ಎಂದು ಕರೆಯುತ್ತಾರೆ. ಈ ಎರಡರಲ್ಲಿ ಆತ್ಮನನ್ನು ನಿತ್ಯನೆಂದೂ-ಕ್ಷೇತ್ರವನ್ನು (ಶರೀರವನ್ನು) ಅನಿತ್ಯವೆಂದೂ ಹೇಳುತ್ತಾರೆ.

ಏವಂ ಕಾಲೇನ ಸಂಕ್ರಾನ್ತಂ ಶರೀರಂ ಜರ್ಜರೀಕೃತಮ್।
ಅಕರ್ಮಯೋಗ್ಯಂ ಸಂಶೀರ್ಣಂ ತ್ಯಕ್ತ್ವಾ ದೇಹೀ ತತೋ ವ್ರಜೇತ್ ॥

ಆತ್ಮನು-ಕಾಲದಿಂದ ಸಮಾಕ್ರಾಂತವಾದ (ಕಾಲದ ಹಿಡಿತಕ್ಕೆ ಸಿಕ್ಕಿದ), ಜೀರ್ಣವಾಗಿ ಮಾಡಲ್ಪಟ್ಟ, ಕಾರ್ಯವನ್ನು ಮಾಡಲು ಅಯೋಗ್ಯವಾದ, ಸಂಪೂರ್ಣವಾಗಿ ಗಳಿತವಾಗಿರುವ ಶರೀರವನ್ನು ಪರಿತ್ಯಜಿಸಿ ಹೊರಟುಹೋಗುತ್ತಾನೆ.

ನಿತ್ಯಸ್ಯಾನಿತ್ಯಸಂತ್ಯಾಗಾಲ್ಲೋಕೇ ತನ್ಮರಣಂ ವಿದುಃ।
ಕಾಲಂ ನಾತಿಕ್ರಮೇರನ್ಹಿ ಸದೇವಾಸುರಮಾನವಾಃ ॥೪೬೧॥

ನಿತ್ಯನಾದ ಜೀವಾತ್ಮನು ಅನಿತ್ಯವಾದ ಶರೀರವನ್ನು ತ್ಯಜಿಸಿ ಹೋಗುವುದನ್ನೇ ಲೋಕದಲ್ಲಿ ‘ಮರಣ’–ಎಂದು ಭಾವಿಸುತ್ತಾರೆ. ದೇವತೆಗಳಾಗಲೀ, ಅಸುರರಾಗಲೀ, ಮನುಷ್ಯರಾಗಲೀ ಬೇರೆ ಯಾರೇ ಆಗಲೀ–ಕಾಲವನ್ನು ಅತಿಕ್ರಮಿಸಲಾರರು.

ಯಥಾಕಾಶೇ ನ ತಿಷ್ಠೇತ ದ್ರವ್ಯಂ ಕಿಂಚಿದಚೇತನಮ್।
ತಥಾ ಧಾವತಿ ಕಾಲೋಽಯಂ ಕ್ಷಣಂ ಕಿಂಚಿನ್ನ ತಿಷ್ಠತಿ ॥೪೬೨॥

ಯಾವ ರೀತಿಯಲ್ಲಿ ಆಕಾಶದಲ್ಲಿ ಅಚೇತನವಾದ ಯಾವುದೇ ವಸ್ತುವೂ ಕ್ಷಣಕಾಲವಾದರೂ ನಿಂತಿರುವುದಿಲ್ಲವೋ ಹಾಗೆಯೇ ಈ ಕಾಲವು ಕ್ಷಣವಾದರೂ ನಿಲ್ಲದೆಯೇ ಮುಂದು-ಮುಂದು ಓಡುತ್ತಲೇ ಇರುತ್ತದೆ.

ಸ ಪುನರ್ಜಾಯತೇಽನ್ಯತ್ರ ಶರೀರಂ ನವಮಾವಿಶನ್।
ಏವಂ ಲೋಕಗತಿರ್ನಿತ್ಯಮಾದಿಪ್ರಭೃತಿ ವರ್ತತೇ ॥೪೬೩॥

ಒಂದು ಜೀರ್ಣವಾದ ಶರೀರವನ್ನು ಪರಿತ್ಯಜಿಸಿದ ಜೀವಾತ್ಮನು ನೂತನವಾದ ಶರೀರವನ್ನು ಪ್ರವೇಶಿಸಿ ಮತ್ತೊಂದು ಕಡೆ ಹುಟ್ಟುತ್ತಾನೆ. ಆದಿಕಾಲದಿಂದಲೂ ಲೋಕಗತಿಯು ಹೀಗೆಯೇ ನಡೆದುಕೊಂಡು ಬರುತ್ತಿದೆ."

ಉಮೆ:

ಭಗವನ್ಪ್ರಾಣಿನೋ ಬಾಲಾ ದೃಶ್ಯನ್ತೇ ಮರಣಂ ಗತಾಃ।
ಅತಿವೃದ್ಧಾಶ್ಚ ಜೀವನ್ತೋ ದೃಶ್ಯನ್ತೇ ಚಿರಜೀವಿನಃ ॥೪೬೪॥

"ಪೂಜ್ಯನೇ! ಈ ಪ್ರಪಂಚದಲ್ಲಿ ಬಾಲ್ಯಾವಸ್ಥೆಯಲ್ಲಿಯೇ ಪ್ರಾಣಿಗಳು ಸಾಯುವುದು ಕಂಡುಬರುತ್ತದೆ. ಅತಿವೃದ್ಧರಾಗಿರುವವರೂ ಚಿರಂಜೀವಿಗಳಾಗಿರುವುದೂ ಕಂಡುಬರುತ್ತದೆ.

ಕೇವಲಂ ಕಾಲಮರಣಂ ನ ಪ್ರಮಾಣಂ ಮಹೇಶ್ವರ ।
ತಸ್ಮಾನ್ಮೇ ಸಂಶಯಂ ಬ್ರೂಹಿ ಪ್ರಾಣಿನಾಂ ಜೀವಕಾರಣಮ್ ॥೪೬೫॥

ಆದುದರಿಂದ ಕಾಲಮರಣವೇ (ವೃದ್ಧಾವಸ್ಥೆಯಲ್ಲಿಯೇ ಮರಣವೆಂಬುದು) ಪ್ರಮಾಣವಾಗುವುದಿಲ್ಲ. ಪ್ರಾಣಿಗಳ ಜೀವದ ವಿಷಯದಲ್ಲಿ ಉಂಟಾಗಿರುವ ಈ ನನ್ನ ಸಂಶಯವನ್ನು ನಿವಾರಿಸಿ."

ಪರಮೇಶ್ವರ:

"ದೇವಿ! ಇದರ ಕಾರಣವನ್ನು ಕೇಳು. ಈ ವಿಷಯದಲ್ಲಿ ಒಂದೇ ಒಂದು ನಿರ್ಣಯವಿದೆ.

ಯಾವತ್ಪೂರ್ವಕೃತಂ ಕರ್ಮ ತಾವಜ್ಜೀವತಿ ಮಾನವಃ।
ತತ್ರ ಕರ್ಮವಶಾದ್ಬಾಲಾ ಮ್ರಿಯನ್ತೇ ಕಾಲಸಂಕ್ಷಯಾತ್ ॥೪೬೬॥

ಚಿರಂ ಜೀವನ್ತಿ ವೃದ್ಧಾಶ್ಚ ತಥಾ ಕರ್ಮಪ್ರಮಾಣತಃ।
ಇತಿ ತೇ ಕಥಿತಂ ದೇವಿ ನಿರ್ವಿಶಙ್ಕಾ ಭವ ಪ್ರಿಯೇ ॥೪೬೮॥

ದೇವಿ! ಪ್ರಾರಬ್ಧಕರ್ಮಗಳು ಎಲ್ಲಿಯವರೆಗೆ ಇರುತ್ತವೆಯೋ ಅಲ್ಲಿಯವರೆಗೂ ಮನುಷ್ಯನು ಜೀವಿಸಿರುತ್ತಾನೆ. ಕರ್ಮಕ್ಕೆ ಅಧೀನನಾಗಿ ಪ್ರಾರಬ್ಧಕರ್ಮಗಳ ಫಲವನ್ನು ಉಪಭೋಗಿಸುವ ಕಾಲವು ಮುಗಿದುಹೋದರೆ ಬಾಲಕನಾದರೂ ಮರಣಹೊಂದುತ್ತಾನೆ. ಹಾಗೆಯೇ ಪ್ರಾರಬ್ಧಕರ್ಮಗಳ ಫಲೋಪಭೋಗಗಳ ಕಾಲವು ಮುಗಿಯದಿದ್ದರೆ ಮುದುಕನಾದರೂ ಚಿರಂಜೀವಿಯಾಗಿರುತ್ತಾನೆ. (ಕರ್ಮೋಪಭೋಗಕಾಲಕ್ಕೆ ಅನುಸಾರವಾಗಿ ಪ್ರಾಣಿಗಳು ಜೀವಿಸಿರುತ್ತವೆ.) ಹೀಗೆ ಈ ವಿಷಯವನ್ನು ನಾನು ನಿನಗೆ ಹೇಳಿದ್ದೇನೆ. ನಿಃಶಂಕಳಾಗಿರು."

ಉಮೆ:

ಭಗವನ್ಕೇನ ವೃತ್ತೇನ ಭವನ್ತಿ ಚಿರಜೀವಿನಃ।
ಅಲ್ಪಾಯುಷೋ ನರಾಃ ಕೇನ ತನ್ಮೇ ಶಂಸಿತುಮರ್ಹಸಿ ॥೪೬೯॥

"ಪೂಜ್ಯನೇ! ಯಾವ ವಿಧವಾದ ಆಚಾರಗಳನ್ನು ಆಚರಿಸುವುದರಿಂದ ಮನುಷ್ಯರು ಚಿರಂಜೀವಿಗಳಾಗಿರುತ್ತಾರೆ? ಹಾಗೆಯೇ ಯಾವ ಕಾರಣದಿಂದ ಅಲ್ಪಾಯುಗಳಾಗುತ್ತಾರೆ? ಈ ವಿಷಯವನ್ನು ಹೇಳುವ ಕೃಪೆಮಾಡು."

ಪರಮೇಶ್ವರ:

"ದೇವಿ! ಅತ್ಯಂತರಹಸ್ಯವಾದ ಈ ವಿಷಯವು ಮನುಷ್ಯರಿಗೆ ಬಹಳ ಹಿತಕರವಾಗಿದೆ. ಯಾವ ಸದಾಚಾರದಿಂದ ಸಂಪನ್ನರಾದ ಮನುಷ್ಯರು ಚಿರಂಜೀವಿಗಳಾಗಿರುವರೆಂಬುದನ್ನು ಹೇಳುವೆನು; ಕೇಳು.

ಅಹಿಂಸಾ ಸತ್ಯವಚನಮಕ್ರೋಧಃ ಶಾನ್ತಿರಾರ್ಜವಮ್।
ಗುರೂಣಾಂ ನಿತ್ಯಶುಶ್ರೂಷಾ ವೃದ್ಧಾನಾಮಪಿ ಪೂಜನಮ್ ॥೪೭೦॥
ಶೌಚಾದಕಾರ್ಯಸಂತ್ಯಾಗಃ ಸದಾ ಪಥ್ಯಸ್ಯ ಭೋಜನಮ್।
ಏವಮಾದಿ ಗುಣಂ ವೃತ್ತಂ ನರಾಣಾಂ ದೀರ್ಘಜೀವಿನಾಮ್ ॥೪೭೧॥

ಅಹಿಂಸೆ, ನಿಜ ಹೇಳುವುದು, ಕೋಪಗೊಳ್ಳದಿರುವುದು, ಶಾಂತಿ, ಸರಳತೆ, ಗುರುಜನರ ನಿತ್ಯಸೇವೆ, ವೃದ್ಧರ ಸೇವೆ, ಪಾವಿತ್ರ್ಯವನ್ನೇ ಮುಖ್ಯ

ಧ್ಯೇಯವನ್ನಾಗಿಟ್ಟುಕೊಂಡು ಮಾಡಬಾರದ ಕಾರ್ಯಗಳನ್ನು ಮಾಡದೇ ಇರುವುದು, ಹಿತವಾದ ಅನ್ನವನ್ನು ಭೋಜನಮಾಡುವುದು-ಇವೇ ಮೊದಲಾದ ಗುಣ-ಚಾರಿತ್ರ್ಯಗಳು ದೀರ್ಘಾಯುಗಳಿಗಿರುತ್ತವೆ.

ತಪಸಾ ಬ್ರಹ್ಮಚರ್ಯೇಣ ರಸಾಯನನಿಷೇವಣಾತ್।
ಉದಗ್ರಸತ್ತ್ವಾ ಬಲಿನೋ ಭವನ್ತಿ ಚಿರಜೀವಿನಃ ॥೪೭೩॥

ತಪಸ್ಸಿನಿಂದಲೂ, ಬ್ರಹ್ಮಚರ್ಯೆಯಿಂದಲೂ, ರಸಾಯನ (ಜರಾ-ವ್ಯಾಧಿನಾಶಕವಾದ ಔಷಧ) ಸೇವನೆಯಿಂದಲೂ ಮನುಷ್ಯರು ಅಧಿಕಧೈರ್ಯಶಾಲಿಗಳೂ, ಬಲಿಷ್ಠರೂ, ಚಿರಂಜೀವಿಗಳೂ ಆಗುತ್ತಾರೆ.

ಸ್ವರ್ಗೇ ವಾ ಮಾನುಷೇ ವಾಪಿ ಚಿರಂ ತಿಷ್ಠನ್ತಿ ಧಾರ್ಮಿಕಾಃ।
ಅಪರೇ ಪಾಪಕರ್ಮಾಣಃ ಪ್ರಾಯಶೋಽನೃತವಾದಿನಃ ॥೪೭೪॥

ಹಿಂಸಾಪ್ರಿಯಾ ಗುರುದ್ವಿಷ್ಟಾ ನಿಷ್ಕ್ರಿಯಾಃ ಶೌಚವರ್ಜಿತಾಃ।
ನಾಸ್ತಿಕಾ ಘೋರಕರ್ಮಾಣಃ ಸತತಂ ಮಾಂಸಪಾನಪಾಃ ॥೪೭೫॥

ಪಾಪಾಚಾರಾ ಗುರುದ್ವಿಷ್ಟಾಃ ಕೋಪನಾಃ ಕಲಹಪ್ರಿಯಾಃ।
ಏವಮೇವಾಶುಭಾಚಾರಾಸ್ತಿಷ್ಠನ್ತಿ ನಿರಯೇ ಚಿರಮ್।
ತಿರ್ಯಗ್ಯೋನೌ ತಥಾತ್ಯನ್ತಮಲ್ಪಾಸ್ತಿಷ್ಠನ್ತಿ ಮಾನವಾಃ ॥೪೭೬॥

ಧರ್ಮಾತ್ಮರಾದ ಮನುಷ್ಯರು ಸ್ವರ್ಗದಲ್ಲೇ ಇರಲಿ, ಭೂಮಿಯಲ್ಲಿಯೇ ಇರಲಿ–ಅವರು ದೀರ್ಘಕಾಲದವರೆಗೂ ತಮ್ಮ-ತಮ್ಮ ಸ್ಥಾನಗಳಲ್ಲಿರುತ್ತಾರೆ. ಅವರನ್ನು ಬಿಟ್ಟು ಉಳಿದ ಪಾಪಕರ್ಮಿಗಳು ಎಂದರೆ-ಪ್ರಾಯಶಃ ಸುಳ್ಳು ಹೇಳುವವರು, ಹಿಂಸೆಯಲ್ಲಿಯೇ ಆಸಕ್ತಿಯುಳ್ಳವರು, ಗುರುಜನರನ್ನು ದ್ವೇಷಿಸುವವರು, ಯಾವ ಕಾರ್ಯವನ್ನೂ ಮಾಡದಿರುವ ಅಲಸರು, ಶೌಚಾಚಾರಗಳಿಂದ ರಹಿತರಾಗಿರುವವರು, ನಾಸ್ತಿಕರು, ಘೋರವಾದ ಕಾರ್ಯಗಳನ್ನು ಮಾಡುವವರು, ಸತತವಾಗಿ ಮದ್ಯ-ಮಾಂಸಗಳನ್ನು ಸೇವಿಸುವವರು, ಪಾಪಯುಕ್ತವಾದ ಆಚಾರ-ವ್ಯವಹಾರವುಳ್ಳವರು, ಗುರು ದ್ವೇಷಕ್ಕೆ ಗುರಿಯಾದವರು, ಕೋಪಿಷ್ಠರು, ಕಲಹಪ್ರಿಯರು–ಇವರೇ ಮುಂತಾದ ಅಶುಭವಾದ ಆಚಾರವುಳ್ಳವರು ಬಹಳ ಕಾಲದವರೆಗೆ ನರಕ ದಲ್ಲಿಯೇ ಇರುತ್ತಾರೆ. ಅನಂತರ ಬಹುಕಾಲದವರೆಗೆ ಪಶು-ಪಕ್ಷಿಗಳಾಗಿರುತ್ತಾರೆ. ಮನುಷ್ಯಜನ್ಮದಲ್ಲಿ ಅಲ್ಪಾಯುಗಳಾಗಿರುತ್ತಾರೆ.

ತಸ್ಮಾದಲ್ಪಾಯುಷೋ ಮರ್ತ್ಯಾಸ್ತಾದೃಶಾಃ ಸಮ್ಭವನ್ತಿ ತೇ।
ಅಗಮ್ಯದೇಶಗಮನಾದಪಥ್ಯಾನಾಂ ಚ ಭೋಜನಾತ್।
ಆಯುಃಕ್ಷಯೋ ಭವೇನ್ನೄಣಾಮಾಯುಃಕ್ಷಯಕರಾ ಹಿ ತೇ ॥೪೭೭॥

ಈ ಕಾರಣದಿಂದಲೇ ಮನುಷ್ಯರು ಅಲ್ಪಾಯುಗಳಾಗಿರುತ್ತಾರೆ. ಹೋಗಬಾರದ ಸ್ಥಳಕ್ಕೆ ಹೋಗುವುದರಿಂದಲೂ ಅಪಥ್ಯವಾದುದನ್ನು ಊಟಮಾಡುವುದರಿಂದಲೂ ಮನುಷ್ಯರ ಆಯುಷ್ಯವು ಕ್ಷೀಣಿಸುತ್ತದೆ. ಇವು ಮನುಷ್ಯರ ಆಯುಸ್ಸಿನ ನಾಶಕಗಳು.

ಭವನ್ತ್ಯಲ್ಪಾಯುಷಸ್ತೈಸ್ತೈರನ್ಯಥಾ ಚಿರಜೀವಿನಃ।
ಏತತ್ತೇ ಕಥಿತಂ ಸರ್ವಂ ಭೂಯಃ ಶ್ರೋತುಂ ಕಿಮಿಚ್ಛಸಿ ॥೪೭೮॥

ಮೇಲೆ ಹೇಳಿದ ಕಾರಣಗಳಿಂದ ಮನುಷ್ಯರು ಅಲ್ಪಾಯುಗಳಾಗುತ್ತಾರೆ. ಈ ವಿಧವಾದ ಅವಗುಣಗಳಿಲ್ಲದಿದ್ದರೆ ಚಿರಜೀವಿಗಳಾಗುತ್ತಾರೆ. ದೇವಿ! ಹೀಗೆ ನಿನಗೆ ಮನುಷ್ಯರ ಆಯುಷ್ಯದ ವಿಷಯವಾಗಿ ಎಲ್ಲವನ್ನೂ ಹೇಳಿರುತ್ತೇನೆ. ಪುನಃ ಮತ್ತೇನನ್ನು ಕೇಳಲು ಬಯಸಿರುವೆ?”

ಉಮೆ:

ದೇವದೇವ ಮಹಾದೇವ ಶ್ರುತಂ ಮೇ ಭಗವನ್ನಿದಮ್।
ಆತ್ಮನೋ ಜಾತಿಸಮ್ಬನ್ಧಂ ಬ್ರೂಹಿ ಸ್ತ್ರೀಪುರುಷಾನ್ತರೇ ॥೪೭೯॥

“ದೇವದೇವನೇ! ಮಹಾದೇವನೇ! ಪೂಜ್ಯನೇ! ನೀನು ಹೇಳಿದುದೆಲ್ಲವನ್ನೂ ಕೇಳಿದೆನು. ಈಗ ನೀನು ಸ್ತ್ರೀ-ಪುರುಷರೆಂಬ ವ್ಯತ್ಯಾಸದಲ್ಲಿ ಆತ್ಮನಿಗಿರುವ ಜಾತಿಸಂಬಂಧವನ್ನು ಹೇಳು.

ಸ್ತ್ರೀಪ್ರಾಣಃ ಪುರುಷಪ್ರಾಣ ಏಕಃ ಸ ಪೃಥಗೇವ ವಾ।
ಏಷ ಮೇ ಸಂಶಯೋ ದೇವ ತಂ ಮೇ ಛೇತ್ತುಂ ತ್ವಮರ್ಹಸಿ ॥

ಸ್ತ್ರೀಪ್ರಾಣ (ಹೆಂಗಸರ ಆತ್ಮ) ಮತ್ತು ಪುರುಷರ ಪ್ರಾಣ (ಪುರುಷರ ಆತ್ಮ) ಎರಡೂ ಒಂದೇ ಆಗಿರುವುದೇ? ಅಥವಾ ಬೇರೆಯಾಗಿರುವುದೇ? ಈ ವಿಷಯದಲ್ಲಿ ನನಗೆ ಸಂಶಯವುಂಟಾಗಿದೆ. ಈ ನನ್ನ ಸಂಶಯವನ್ನು ನಿವಾರಿಸುವ ಕೃಪೆಮಾಡು.”

ಮಹೇಶ್ವರ:

ನಿರ್ವಿಕಾರಃ ಸದೈವಾತ್ಮಾ ಸ್ತ್ರೀತ್ವಂ ಪುಂಸ್ತ್ವಂ ನ ಚಾತ್ಮನಿ।
ಕರ್ಮಪ್ರಕಾರೇಣ ತಥಾ ಜಾತ್ಯಾಂ ಜಾತ್ಯಾಂ ಪ್ರಜಾಯತೇ ॥೪೮೦॥

ಕೃತ್ವಾ ತು ಪೌರುಷಂ ಕರ್ಮ ಸ್ತ್ರೀ ಪುಮಾನಪಿ ಜಾಯತೇ।
ಸ್ತ್ರೀಭಾವಯುಕ್ತಪುಮಾನ್ಕೃತ್ವಾ ಕರ್ಮಣಾ ಪ್ರಮದಾ ಭವೇತ್ ॥೪೮೧॥

"ದೇವಿ! ಜೀವಾತ್ಮನು ಯಾವಾಗಲೂ ನಿರ್ವಿಕಾರನು. ಅವನು ಪುರುಷನೂ ಅಲ್ಲ. ಸ್ತ್ರೀಯೂ ಅಲ್ಲ. ಅವನು ಕರ್ಮಕ್ಕೆ ಅನುಸಾರವಾಗಿ ಭಿನ್ನ-ಭಿನ್ನ ಜಾತಿಗಳಲ್ಲಿ ಹುಟ್ಟುತ್ತಾನೆ. ಪುರುಷೋಚಿತವಾದ ಕಾರ್ಯಗಳನ್ನೇ ಮಾಡುತ್ತಿದ್ದರೆ ಸ್ತ್ರೀಯು ಪುರುಷನಾಗಿ ಹುಟ್ಟಬಹುದು. ಸ್ತ್ರೀಭಾವನೆಗಳಿಂದ ಯುಕ್ತನಾದ ಪುರುಷನು ಹೆಂಗಸರು ಮಾಡುವ ಕಾರ್ಯಗಳನ್ನೇ ಮಾಡುತ್ತಿದ್ದರೆ ಮುಂದೆ ಹೆಂಗಸಾಗಿಯೂ ಹುಟ್ಟಬಹುದು."

ಉಮೆ:

ಭಗವನ್ಸರ್ವಲೋಕೇಶ ಕರ್ಮಾತ್ಮಾ ನ ಕರೋತಿ ಚೇತ್।
ಕೋಽನ್ಯಃ ಕರ್ಮಕರೋ ದೇಹೇ ತನ್ಮೇ ತ್ವಂ ವಕ್ತುಮರ್ಹಸಿ ॥೪೮೨॥

"ಸರ್ವಲೋಕೇಶ್ವರನೇ! ಪೂಜ್ಯನೇ! ಮಹಾದೇವನೇ! ನೀನು ಹೇಳಿದಂತೆ ಶರೀರದಲ್ಲಿರುವ ಆತ್ಮನು ಯಾವ ಕಾರ್ಯವನ್ನೂ ಮಾಡದಿದ್ದರೆ ಬೇರೆ ಯಾವನು ಕರ್ಮಗಳನ್ನು ಮಾಡುತ್ತಾನೆ? ಈ ವಿಷಯವನ್ನು ಹೇಳುವ ಕೃಪೆಮಾಡು."

ಮಹೇಶ್ವರ:

ಶೃಣು ಭಾಮಿನಿ ಕರ್ತಾರಮಾತ್ಮಾ ಹಿ ನ ಚ ಕರ್ಮಕೃತ್।
ಪ್ರಕೃತ್ಯಾ ಗುಣಯುಕ್ತೇನ ಕ್ರಿಯತೇ ಕರ್ಮ ನಿತ್ಯಶಃ ॥೪೮೪॥

"ಭಾಮಿನಿ! ಶರೀರದಲ್ಲಿ ಕರ್ಮಗಳನ್ನು ಯಾರು ಮಾಡುವರೆಂಬುದನ್ನು ಹೇಳುವೆನು; ಕೇಳು. ಆತ್ಮನಂತೂ ಕರ್ಮವನ್ನು ಮಾಡತಕ್ಕವನಲ್ಲ. ಗುಣಗಳಿಂದ ಯುಕ್ತವಾದ ಪ್ರಕೃತಿಯಿಂದ ಆತ್ಮನು ಕರ್ಮಗಳನ್ನು ಮಾಡಿಸುತ್ತಾನೆ.

ಶರೀರಂ ಪ್ರಾಣಿನಾಂ ಲೋಕೇ ಯಥಾ ಪಿತ್ತಕಫಾನಿಲೈಃ।
ವ್ಯಾಪ್ತಮೇಭಿಸ್ತ್ರಿಭಿರ್ದೋಷೈಸ್ತಥಾ ವ್ಯಾಪ್ತಂ ತ್ರಿಭಿರ್ಗುಣೈಃ ॥೪೮೫॥

ಪ್ರಾಣಿಗಳ ಶರೀರವು ಯಾವ ರೀತಿಯಲ್ಲಿ ವಾತ-ಪಿತ್ತ-ಕಫಗಳಿಂದ ಯುಕ್ತವಾಗಿರುವುದೋ–ಅದೇ ರೀತಿಯಲ್ಲಿ ಮೂರು ಗುಣಗಳಿಂದಲೂ ವ್ಯಾಪ್ತವಾಗಿದೆ.

ಸತ್ತ್ವಂ ರಜಸ್ತಮಶ್ಚೈವ ಗುಣಾಸ್ತ್ವೇತೇ ಶರೀರಿಣಃ।
ಪ್ರಕಾಶಾತ್ಮಕಮೇತೇಷಾಂ ಸತ್ತ್ವಂ ಸತತಮಿಷ್ಯತೇ ॥೪೮೬॥
ರಜೋ ದುಃಖಾತ್ಮಕಂ ತತ್ರ ತಮೋ ಮೋಹಾತ್ಮಕಂ ಸ್ಮೃತಮ್।
ತ್ರಿಭಿರೇತೈರ್ಗುಣೈರ್ಯುಕ್ತಂ ಲೋಕೇ ಕರ್ಮ ಪ್ರವರ್ತತೇ ॥೪೮೭॥

ಸತ್ತ್ವ, ರಜಸ್ಸು ಮತ್ತು ತಮಸ್ಸು–ಈ ಮೂರು ಮನುಷ್ಯನಲ್ಲಿರುವ ಮೂರು ಗುಣಗಳಾಗಿವೆ. ಈ ಮೂರರಲ್ಲಿ ಸತ್ತ್ವಗುಣವು ಪ್ರಕಾಶಸ್ವರೂಪ ವೆಂದು ಹೇಳಲ್ಪಟ್ಟಿದೆ. ರಜೋಗುಣವನ್ನು ದುಃಖರೂಪವೆಂದೂ, ತಮೋಗುಣವನ್ನು ಮೋಹಸ್ವರೂಪವೆಂದೂ ಹೇಳುತ್ತಾರೆ. ಈ ಮೂರು ಗುಣಗಳಿಂದ ಯುಕ್ತವಾದ ಕರ್ಮಗಳೇ ಲೋಕದಲ್ಲಿ ಪ್ರವೃತ್ತವಾಗಿವೆ.

ಸತ್ಯಂ ಪ್ರಾಣಿದಯಾ ಶೌಚಂ ಶ್ರೇಯಃ ಪ್ರೀತಿಃ ಕ್ಷಮಾ ದಮಃ।
ಏವಮಾದಿ ತಥಾನ್ಯಚ್ಚ ಕರ್ಮಸಾತ್ತ್ವಿಕಮುಚ್ಯತೇ ॥೪೮೮॥

ಸತ್ಯ, ಪ್ರಾಣಿದಯೆ, ಪವಿತ್ರತೆ, ಶ್ರೇಯಸ್ಸು, ಪ್ರೀತಿ, ಕ್ಷಮೆ, ಜಿತೇಂದ್ರಿಯತೆ-ಇವೇ ಮುಂತಾದ ಇನ್ನೂ ಇತರ ಕರ್ಮಗಳು ಸಾತ್ತ್ವಿಕಕರ್ಮಗಳೆನಿಸಿಕೊಳ್ಳುತ್ತವೆ.

ದಾಕ್ಷ್ಯಂ ಕರ್ಮಪರತ್ವಂ ಚ ಲೋಭೋ ಮೋಹೋ ವಿಧಿಂ ಪ್ರತಿ।
ಕಲತ್ರಸಙ್ಗೋ ಮಾಧುರ್ಯಂ ನಿತ್ಯಮೈಶ್ವರ್ಯಲುಬ್ಧತಾ।
ರಜಸಶ್ಚೋದ್ಭವಂ ಚೈತತ್ಕರ್ಮ ನಾನಾವಿಧಂ ಸದಾ ॥೪೮೯॥

ದಕ್ಷತೆ, ಕಾರ್ಯಪರಾಯಣತೆ, ಲೋಭ, ಅದೃಷ್ಟವನ್ನು ಕುರಿತು ಮೋಹ, ಸ್ತ್ರೀಸಂಗ, ಮಾಧುರ್ಯ, ಸದಾ ಐಶ್ವರ್ಯಲೋಭ–ಇವೇ ಮುಂತಾದ ನಾನಾಪ್ರಕಾರವಾದ ಕರ್ಮಗಳೂ ಮತ್ತು ಭಾವನೆಗಳೂ ರಜಸ್ಸಿನಿಂದ ಹುಟ್ಟಿದುವುಗಳು.

ಅನೃತಂ ಚೈವ ಪಾರುಷ್ಯಂ ಧೃತಿರ್ವಿದ್ವೇಷಿತಾ ಭೃಶಮ್।
ಹಿಂಸಾಸತ್ಯಂ ಚ ನಾಸ್ತಿಕ್ಯಂ ನಿದ್ರಾಲಸ್ಯಭಯಾನಿ ಚ।
ತಮಸಶ್ಚೋದ್ಭವಂ ಚೈತತ್ಕರ್ಮ ಪಾಪಯುತಂ ತಥಾ ॥೯೦॥

ಸುಳ್ಳುಹೇಳುವುದು, ಕಠಿಣತೆ (ವಿವೇಚನಾರಹಿತವಾದ ಭಂಡ ಧೈರ್ಯ), ದ್ವೇಷ, ಹಿಂಸೆ, ಅಸತ್ಯ, ನಾಸ್ತಿಕ್ಯ, ನಿದ್ರೆ, ಆಲಸ್ಯ, ಮತ್ತು ಭಯ-ಇವುಗಳೂ ಮತ್ತು ಪಾಪಯುಕ್ತವಾದ ಕರ್ಮಗಳೂ ತಮೋಗುಣದಿಂದ ಹುಟ್ಟಿದುವುಗಳು.

ತಸ್ಮಾದ್ಗುಣಮಯಃ ಸರ್ವಃ ಕಾರ್ಯಾರಮ್ಭಃ ಶುಭಾಶುಭಃ।
ತಸ್ಮಾದಾತ್ಮಾನಮವ್ಯಗ್ರಂ ವಿದ್ಧ್ಯಕರ್ತಾರಮವ್ಯಯಮ್ ॥೯೧॥

ಆದುದರಿಂದ ಸಮಸ್ತವಾದ ಶುಭಾಶುಭಕರ್ಮಗಳ ಕಾರ್ಯರಂಭಗಳೂ ಈ ಮೂರು ಗುಣಗಳಿಂದಲೇ ವ್ಯಾಪ್ತವಾಗಿವೆ. ಮನುಷ್ಯನ ಕಾರ್ಯತತ್ಪರತೆಗೆ ಈ ಮೂರು ಗುಣಗಳೇ ಕಾರಣಗಳಾಗಿವೆ. ಆತ್ಮನು ಅವ್ಯಗ್ರನೂ, ಅಕರ್ತನೂ ಮತ್ತು ಅವಿನಾಶಿಯೂ ಆಗಿರುವನೆಂದು ತಿಳಿ.

ಸಾತ್ತ್ವಿಕಾಃ ಪುಣ್ಯಲೋಕೇಷು ರಾಜಸಾ ಮಾನುಷೇ ಪದೇ।
ತಿರ್ಯಗ್ಯೋನೌ ಚ ನರಕೇ ತಿಷ್ಠೇಯುಸ್ತಾಮಸಾ ನರಾಃ ॥೯೨॥

ಸಾತ್ತ್ವಿಕರು ಪುಣ್ಯಲೋಕಗಳಲ್ಲಿಯೂ, ರಾಜಸರು ಮನುಷ್ಯಲೋಕದಲ್ಲಿಯೂ ಇರುತ್ತಾರೆ. ತಾಮಸಗುಣವುಳ್ಳ ಮನುಷ್ಯರು ಮುಂದೆ ತಿರ್ಯಗ್ಯೋನಿಗಳಲ್ಲಿ ಹುಟ್ಟುತ್ತಾರೆ ಅಥರಾ ನರಕದಲ್ಲಿರುತ್ತಾರೆ."

ಉಮೆ:

ಕಿಮರ್ಥಮಾತ್ಮಾ ಭಿನ್ನೇಽಸ್ಮಿನ್ದೇಹೇ ಶಸ್ತ್ರೇಣ ವಾ ಹತೇ।
ಸ್ವಯಂ ಪ್ರಯಾಸ್ಯತಿ ತದಾ ತನ್ಮೇ ಶಂಸಿತುಮರ್ಹಸಿ ॥೯೩॥

"ಪರಮೇಶ್ವರ! ಈ ಶರೀರವು ಭಗ್ನವಾಗಿಹೋದರೆ ಅಥವಾ ಶಸ್ತ್ರದಿಂದ ಕತ್ತರಿಸಲ್ಪಟ್ಟರೆ–ಶರೀರದಲ್ಲಿರುವ ಆತ್ಮನು ತಾನಾಗಿಯೇ ಏಕೆ ಹೊರಟು ಹೋಗುತ್ತಾನೆ? ಈ ವಿಷಯವನ್ನು ವಿವರಿಸಿ ಹೇಳುವ ಕೃಪೆಮಾಡು."

ಮಹೇಶ್ವರ:

"ಕಲ್ಯಾಣಿ! ಇದಕ್ಕೆ ಕಾರಣವನ್ನು ಹೇಳುವೆನು; ಏಕಾಗ್ರಚಿತ್ತಳಾಗಿ ಕೇಳು. ಈ ವಿಷಯದಲ್ಲಿ ಸೂಕ್ಷ್ಮಬುದ್ಧಿಯುಳ್ಳ ವಿದ್ವಾಂಸರೂ ವಿಮೋಹಿತರಾಗುತ್ತಾರೆ.

ಕರ್ಮಕ್ಷಯೇ ತು ಸಮ್ಪ್ರಾಪ್ತೇ ಪ್ರಾಣಿನಾಂ ಜನ್ಮಧಾರಿಣಾಮ್।
ಉಪದ್ರವೋ ಭವೇದ್ದೇಹೇ ಯೇನ ಕೇನಾಪಿ ಹೇತುನಾ ॥೯೫॥
ತನ್ನಿಮಿತ್ತಂ ಶರೀರೀ ತು ಶರೀರಂ ಪ್ರಾಪ್ಯ ಸಂಕ್ಷಯಮ್।
ಅಪಯಾತಿ ಪರಿತ್ಯಜ್ಯ ತತಃ ಕರ್ಮವಶೇನ ಸಃ ॥೯೬॥

ಈ ಲೋಕದಲ್ಲಿ ಜನ್ಮಧಾರಿಗಳಾದ ಪ್ರಾಣಿಗಳಿಗೆ ಪ್ರಾರಬ್ಧಕರ್ಮಗಳನ್ನು ಉಪಭೋಗಿಸಬೇಕಾದ ಕಾಲವು ಮುಗಿಯಲು ಬಂದಾಗ ಯಾವುದಾದರೂ ಕಾರಣದಿಂದ ದೇಹಕ್ಕೆ ರೋಗಾದಿ ಉಪದ್ರವವುಂಟಾಗುತ್ತದೆ. ಆ ಕಾರಣದಿಂದ ಶರೀರವು ಕ್ಷಯಿಸಿದಾಗ ಕರ್ಮವಶನಾಗಿರುವ ಶರೀರಿಯು (ಜೀವನು) ಉಪದ್ರವದಿಂದ ಜೀರ್ಣವಾದ ಆ ಶರೀರವನ್ನು ಪರಿತ್ಯಾಗಮಾಡಿ ಹೊರಟುಬಿಡುತ್ತಾನೆ.

ದೇಹಃ ಕ್ಷಯತಿ ನೈವಾತ್ಮಾ ವೇದನಾಭಿರ್ನ ಚಾಲ್ಯತೇ।
ತಿಷ್ಠೇತ್ಕರ್ಮಫಲಂ ಯಾವದ್ವ್ರಜೇತ್ಕರ್ಮಕ್ಷಯೇ ಪುನಃ ॥೯೭॥

ಶರೀರವು ಕ್ಷೀಣಿಸುವುದೇ ಹೊರತು ಆತ್ಮನು ಕ್ಷೀಣಿಸುವುದಿಲ್ಲ. ಆತ್ಮನು ವೇದನಾದಿಗಳಿಂದಲೂ ವಿಚಲಿತನಾಗುವುದಿಲ್ಲ. ಕರ್ಮಗಳ ಫಲಗಳ ಶೇಷವು ಎಲ್ಲಿಯವರೆಗಿರುವುದೋ ಅಲ್ಲಿಯವರೆಗೂ ಅವನು ಆ ಶರೀರದಲ್ಲಿರುತ್ತಾನೆ. ಕರ್ಮಕ್ಷಯವಾದೊಡನೆಯೇ ಅವನು ಆ ದೇಹದಿಂದ ಹೊರಟುಬಿಡುತ್ತಾನೆ.

ಆದಿಪ್ರಭೃತಿ ಲೋಕೇಽಸ್ಮಿನ್ನೇವಮಾತ್ಮಗತಿ ಸ್ಮೃತಾ।
ಏತತ್ತೇ ಕಥಿತಂ ದೇವಿ ಕಿಂ ಭೂಯಃ ಶ್ರೋತುಮಿಚ್ಛಸಿ ॥೯೮॥

ಆದಿಕಾಲದಿಂದಲೂ ಈ ಲೋಕದಲ್ಲಿ ಆತ್ಮನ ಗತಿಯು ಹೀಗೆಯೇ ಇರುತ್ತದೆ. ಈ ವಿಷಯವನ್ನು ನಿನಗೆ ಹೇಳಿದ್ದೇನೆ. ಪುನಃ ಮತ್ತೇನನ್ನು ಕೇಳಬಯಸುವೆ?"

ನಾಲ್ಕುವಿಧವಾದ ಪ್ರಾಣಿಗಳ ನಿರೂಪಣೆ: ಹಿಂದಿನ ಜನ್ಮದ ಸ್ಮರಣೆಯ ರಹಸ್ಯ: ದೈವ, ಪುರುಷಾರ್ಥ ಮತ್ತು ಪುನರ್ಜನ್ಮಗಳ ವಿವೇಚನೆ

ಉಮೆ:

ಭಗವನ್ದೇವದೇವೇಶ ಕರ್ಮಣೈವ ಶುಭಾಶುಭಮ್।
ಯಥಾಯೋಗಂ ಫಲಂ ಜನ್ತುಃ ಪ್ರಾಪ್ನೋತೀತಿ ವಿನಿಶ್ಚಯಃ ॥೯೯॥

"ಪೂಜ್ಯನೇ! ದೇವದೇವೇಶನೇ! ಮಹಾದೇವನೇ! ಜೀವನು ತನ್ನ ಕರ್ಮಗಳಿಂದಲೇ ಶುಭಾಶುಭಫಲಗಳನ್ನು ಪಡೆಯುತ್ತಾನೆ. ಇದು ನಿಶ್ಚಿತವಾದಂತಾಯಿತು.

ಪರೇಷಾಂ ವಿಪ್ರಿಯಂ ಕುರ್ವನ್ಯಥಾ ಸಮ್ಪ್ರಾಪ್ನುಯಾಚ್ಛುಭಮ್।
ಯದೇತದಸ್ಮಿಂಶ್ಚೇದ್ದೇಹೇ ತನ್ಮೇ ಶಂಸಿತುಮರ್ಹಸಿ ॥೫೦೦॥

ಇತರರಿಗೆ ತೊಂದರೆಯನ್ನು ಮಾಡಿದರೂ ಈ ಶರೀರದಲ್ಲಿರುವ ಜೀವಾತ್ಮನು ಹೇಗೆ ಶುಭಫಲವನ್ನು ಹೊಂದುತ್ತಾನೆ? ಈ ವಿಷಯವನ್ನು ಹೇಳುವ ಕೃಪೆಮಾಡು."

ಮಹೇಶ್ವರ:

ತದಪ್ಯಸ್ತಿ ಮಹಾಭಾಗೇ ಅಭಿಸಂಧಿಬಲಾನ್ನೃಣಾಮ್।
ಹಿತಾರ್ಥಂ ದುಃಖಮನ್ಯೇಷಾಂ ಕೃತ್ವಾ ಸುಖಮವಾಪ್ನುಯಾತ್ ॥೫೦೧॥

"ಮಹಾಭಾಗ್ಯಶಾಲಿನಿಯೇ! ಶುಭಸಂಕಲ್ಪದ ಬಲದಿಂದ ಮನುಷ್ಯರ ಹಿತಾರ್ಥವಾಗಿ ಇತರರಿಗೆ ದುಃಖವನ್ನುಂಟುಮಾಡಿದರೂ ಮನುಷ್ಯನು ಸುಖವನ್ನು ಹೊಂದುವ ಪ್ರಸಂಗಗಳೂ ಇವೆ.

ದಣ್ಡಯನ್ಭರ್ತ್ಸಯನ್ರಾಜಾ ಪ್ರಜಾಃ ಪುಣ್ಯಮವಾಪ್ನುಯಾತ್।
ಗುರುಃ ಸನ್ತರ್ಜಯಞ್ಶಿಷ್ಯಾನ್ಭರ್ತಾ ಭೃತ್ಯಜನಾನ್ಸ್ವಕಾನ್ ॥೫೦೨॥

ರಾಜನು (ಅಪರಾಧಿಗಳಾದ) ಪ್ರಜೆಗಳನ್ನು ದಂಡಿಸುವುದರಿಂದಲೂ ಭಯಪಡಿಸುವುದರಿಂದಲೂ ಪುಣ್ಯವನ್ನು ಹೊಂದುತ್ತಾನೆ. ವಿದ್ಯಾಗುರುವು ಶಿಷ್ಯರನ್ನು ಭಯಪಡಿಸುತ್ತಾ ಅವರು ವಿದ್ಯಾವಂತರಾಗುವಂತೆ ಮಾಡಿ

ಪುಣ್ಯಾತ್ಮನಾಗುತ್ತಾನೆ. ಯಜಮಾನನು ಸೇವಕರನ್ನು ಸಮಯೋಚಿತವಾಗಿ ಗದರಿಸುವುದರಿಂದಲೂ ದಂಡಿಸುವುದರಿಂದಲೂ ಸುಖಿಯಾಗುತ್ತಾನೆ.

ಉನ್ಮಾರ್ಗಪ್ರತಿಪನ್ನಾಂಶ್ಚ ಶಾಸ್ತಾ ಧರ್ಮಫಲಂ ಲಭೇತ್।
ಚಿಕಿತ್ಸಕಶ್ಚ ದುಃಖಾನಿ ಜನಯನ್ನಿತಮಾಪ್ನುಯಾತ್ ॥೫೦೩॥

ಕೆಟ್ಟಮಾರ್ಗವನ್ನು ಹಿಡಿದುಹೋಗುತ್ತಿರುವವರನ್ನು ದಂಡಿಸುವ ರಾಜನು ಧರ್ಮದ ಫಲವನ್ನು ಹೊಂದುತ್ತಾನೆ. ವೈದ್ಯನು ರೋಗಿಗೆ ಕಹಿಯಾದ ಔಷಧಗಳನ್ನು ಕೊಡುವುದರ ಮೂಲಕ ಅಥವಾ ಚುಚ್ಚುಮದ್ದನ್ನು ಕೊಡುವುದರ ಮೂಲಕ ದುಃಖವನ್ನೇ ಉಂಟುಮಾಡುತ್ತಾನೆ. ಆದರೆ ಹೀಗೆ ತೊಂದರೆಪಡಿಸುವುದರಿಂದ ರೋಗಿಗೆ ರೋಗವು ಗುಣವಾಗಿ ಸುಖವೇ ಉಂಟಾಗುತ್ತದೆ. ವೈದ್ಯನಿಗೆ ಧರ್ಮಫಲವುಂಟಾಗುತ್ತದೆ.

ಏವಮನ್ಯೇ ಸುಮನಸೋ ಹಿಂಸಕಾಃ ಸ್ವರ್ಗಮಾಪ್ನುಯುಃ।
ಏಕಸ್ಮಿನ್ನಿಹತೇ ಭದ್ರೇ ಬಹವಃ ಸುಖಮಾಪ್ನುಯುಃ।
ತಸ್ಮಿನ್ಹತೇ ಭವೇದ್ಧರ್ಮಃ ಕುತ ಏವ ತು ಪಾತಕಮ್ ॥೫೦೪॥

ಹೀಗೆಯೇ ಶುದ್ಧಾಂತಃಕರಣರಾಗಿ ಎಲ್ಲರ ಹಿತದೃಷ್ಟಿಯಿಂದ ಯಾರಿಗಾದರೂ ಹಿಂಸೆಯನ್ನುಂಟುಮಾಡಿದರೂ ಅದರಿಂದ ಅವರು ಸ್ವರ್ಗವನ್ನೇ ಹೊಂದುತ್ತಾರೆ. ಒಬ್ಬ ದುಷ್ಟನು ಹತನಾದರೆ ಅನೇಕರಿಗೆ ಸುಖವುಂಟಾಗುತ್ತದೆ. ಅಂತಹ ದುಷ್ಟನನ್ನು ಕೊಲ್ಲುವುದರಿಂದಲೇ ಧರ್ಮಪ್ರಾಪ್ತಿಯಾಗುತ್ತದೆ. ಹೀಗಿರುವಾಗ ಪಾಪವೆಲ್ಲಿ ಬರುತ್ತದೆ?

ಅಭಿಸಂದೇರಜಿಹ್ಮತ್ವಾಚ್ಛುದ್ಧೇ ಧರ್ಮಸ್ಯ ಗೌರವಾತ್।
ಏತತ್ಕೃತ್ವಾ ತು ಪಾಪೇಭ್ಯೋ ನ ದೋಷಂ ಪ್ರಾಪ್ನುಯುಃ ಕ್ವಚಿತ್॥

ಕುಟಿಲವಾದ ಉದ್ದೇಶವಿಲ್ಲದುದರ ಕಾರಣದಿಂದ, ಧರ್ಮವನ್ನು ಗೌರವಿಸಬೇಕೆಂಬುದರ ಕಾರಣದಿಂದ ಪಾಪಿಗಳ ವಿಷಯದಲ್ಲಿ ಮನಶ್ಶುದ್ಧಿಯಿಂದ ಹೀಗೆ ವರ್ತಿಸುವುದರಿಂದ ಜನರು ಯಾವ ಪಾಪವನ್ನೂ ಹೊಂದುವುದಿಲ್ಲ."

ಉಮೆ:

ಚತುರ್ವಿಧಾನಾಂ ಜನ್ತೂನಾಂ ಕಥಂ ಜ್ಞಾನಮಿಹ ಸ್ಮೃತಮ್।
ಕೃತ್ರಿಮಂ ತತ್ಸ್ವಭಾವಂ ವಾ ತನ್ಮೇ ಶಂಸಿತುಮರ್ಹಸಿ ॥೫೦೬॥

“ಮಹಾದೇವನೇ! ಈ ಪ್ರಪಂಚದಲ್ಲಿರುವ ನಾಲ್ಕು ವಿಧವಾದ ಪ್ರಾಣಿಗಳಿಗೂ ಜ್ಞಾನವು ಹೇಗೆ ಪ್ರಾಪ್ತವಾಗುತ್ತದೆ? ಆ ಜ್ಞಾನವು ಕೃತ್ರಿಮವೇ ಅಥವಾ ಸ್ವಾಭಾವಿಕವೇ? ಇದನ್ನು ಹೇಳುವ ಕೃಪೆಮಾಡು.”

ಮಹೇಶ್ವರ:

ಸ್ಥಾವರಂ ಜಙ್ಗಮಂ ಚೇತಿ ಜಗದ್ದ್ವಿವಿಧಮುಚ್ಯತೇ ।
ಚತಸ್ರೋ ಯೋನಯಸ್ತತ್ರ ಪ್ರಜಾನಾಂ ಕ್ರಮಶೋ ಯಥಾ ॥೫೦೭॥

“ಪಾರ್ವತಿ! ಈ ಜಗತ್ತು ಸ್ಥಾವರ ಮತ್ತು ಜಂಗಮ ಎಂಬುದಾಗಿ ಎರಡು ಭಾಗವಾಗಿರುವುದೆಂದು ಹೇಳುತ್ತಾರೆ. ಇದರಲ್ಲಿ ಪ್ರಜಾಸೃಷ್ಟಿಗೆ ನಾಲ್ಕು ಯೋನಿಗಳಿವೆ. ಜರಾಯುಜ, ಅಂಡಜ, ಸ್ವೇದಜ ಮತ್ತು ಉದ್ಭಿಜ್ಜ-ಇವೇ ಆ ನಾಲ್ಕು ಪ್ರಕಾರಗಳು.

ತೇಷಾಮುದ್ಭಿದಜಾ ವೃಕ್ಷಾ ಲತಾವಲ್ಲ್ಯಶ್ಚ ವೀರುಧಃ।
ದಂದಶೂಕಾದಯಶ್ಚಾನ್ಯೇ ಸ್ವೇದಜಾಃ ಕ್ರಿಮಿಜಾತಯಃ ॥೫೦೮॥

ವೃಕ್ಷ, ಲತೆ, ಬಳ್ಳಿ, ಹುಲ್ಲು–ಇವುಗಳನ್ನು ಉದ್ಭಿಜ್ಜಗಳೆನ್ನುತ್ತಾರೆ. ಕ್ರಿಮಿಜಾತಿಗೆ ಸೇರಿದ ನೊಣ, ಹೇನು ಮುಂತಾದುವುಗಳು ಸ್ವೇದಜಗಳು.

ಪಕ್ಷಿಣಶ್ಛಿದ್ರಕರ್ಣಾಶ್ಚ ಪ್ರಾಣಿನಸ್ತ್ವಣ್ಡಜಾ ಮತಾಃ ।
ಮೃಗವ್ಯಾಲಮನುಷ್ಯಾಂಶ್ಚ ವಿದ್ಧಿ ತೇಷಾಂ ಜರಾಯುಜಾನ್ ॥೫೦೯॥

ರೆಕ್ಕೆಗಳಿರುವ, ಕಿವಿಯ ಬಳಿಯಲ್ಲಿ ರಂಧ್ರವಿರುವ ಪ್ರಾಣಿಗಳನ್ನು ಅಂಡಜಗಳೆನ್ನುತ್ತಾರೆ. ಮೃಗಗಳು, ಹುಲಿಯೇ ಮೊದಲಾದ ಹಿಂಸ್ರಪ್ರಾಣಿಗಳು, ಮನುಷ್ಯರು-ಇವರಲ್ಲರೂ ಜರಾಯುಜರೆಂದು ತಿಳಿ.

ಹೀಗೆ ಆತ್ಮನು ಈ ನಾಲ್ಕು ಜಾತಿಯನ್ನು ಆಶ್ರಯಿಸಿಕೊಂಡಿದ್ದಾನೆ.

ತಥಾ ಭೂಮ್ಯಮ್ಬುಸಂಯೋಗಾದ್ಭವನ್ತ್ಯುದ್ಭಿದಜಾಃ ಪ್ರಿಯೇ।
ಶೀತೋಷ್ಣಯೋಸ್ತು ಸಂಯೋಗಾಜ್ಜಾಯನ್ತೇ ಸ್ವೇದಜಾಃ ಪ್ರಿಯೇ॥೫೧೦॥

ಪ್ರಿಯಳೇ! ಭೂಮಿ ಮತ್ತು ನೀರಿನ ಸಂಯೋಗದಿಂದ ವೃಕ್ಷವೇ ಮೊದಲಾದ ಉದ್ಭಿಜ್ಜಪ್ರಾಣಿಗಳು ಹುಟ್ಟುತ್ತವೆ. ಶೀತೋಷ್ಣಗಳ ಸಂಯೋಗದಿಂದ ಸೊಳ್ಳೆ, ಹೇನು ಮೊದಲಾದ ಸ್ವೇದಜಪ್ರಾಣಿಗಳು ಹುಟ್ಟುತ್ತವೆ.

ಅಣ್ಡಜಾಶ್ಚಾಪಿ ಜಾಯನ್ತೇ ಸಂಯೋಗಾತ್ಕ್ಲೇದಬೀಜಯೋಃ।
ಶುಕ್ಲಶೋಣಿತಸಂಯೋಗಾತ್ಸಮ್ಭವನ್ತಿ ಜರಾಯುಜಾಃ।
ಜರಾಯುಜಾನಾಂ ಸರ್ವೇಷಾಂ ಮಾನುಷಂ ಪದಮುತ್ತಮಮ್॥೫೧೧॥

ಕ್ಲೇದ ಮತ್ತು ಬೀಜಗಳ ಸಂಯೋಗದಿಂದ ಪಕ್ಷಿಯೇ ಮೊದಲಾದ ಅಂಡಜಪ್ರಾಣಿಗಳು ಹುಟ್ಟುತ್ತವೆ. ಶುಕ್ಲ ಮತ್ತು ಶೋಣಿತಗಳ ಸಂಯೋಗದಿಂದ ಮೃಗಗಳೇ ಮೊದಲಾದ ಜರಾಯಜಪ್ರಾಣಿಗಳು ಹುಟ್ಟುತ್ತವೆ. ಜರಾಯುಜಪ್ರಾಣಿಗಳಲ್ಲಿ ಮನುಷ್ಯನ ಸ್ಥಾನವೇ ಶ್ರೇಷ್ಠವಾದುದು.

ದೇವಿ! ನಾನು ಇನ್ನು ಮುಂದೆ ತಮಸ್ಸಿನ ಉತ್ಪತ್ತಿಯನ್ನು ಹೇಳುವೆನು. ಏಕಾಗ್ರಚಿತ್ತಳಾಗಿ ಕೇಳು.

ದ್ವಿವಿಧಂ ಹಿ ತಮೋ ಲೋಕೇ ಶಾರ್ವರಂ ದೇಹಜಂ ತಥಾ।
ಜ್ಯೋತಿರ್ಭಿಶ್ಚ ತಮೋ ಲೋಕೇ ನಾಶಂ ಗಚ್ಛತಿ ಶಾರ್ವರಮ್।
ದೇಹಜಂ ತು ತಮೋ ಲೋಕೇ ತೈಃ ಸಮಸ್ತೈರ್ನ ಶಾಮ್ಯತಿ ॥

ಲೋಕದಲ್ಲಿ ರಾತ್ರಿಯ ಸಂಬಂಧವಾದ ತಮಸ್ಸು ಮತ್ತು ದೇಹದಲ್ಲಿ ಹುಟ್ಟುವ ತಮಸ್ಸು ಎಂದು ಎರಡು ವಿಧವಾದ ತಮಸ್ಸುಗಳಿವೆ. ರಾತ್ರಿಯ ಸಂಬಂಧವಾದ ತಮಸ್ಸು ಜ್ಯೋತಿಗಳ ಮೂಲಕವಾಗಿ ನಾಶಹೊಂದುತ್ತದೆ. ಆದರೆ ದೇಹದಲ್ಲಿ ಹುಟ್ಟಿರುವ ತಮಸ್ಸು ಸಮಸ್ತವಾದ ಜ್ಯೋತಿಗಳು ಬೆಳಗಿದರೂ ನಾಶಹೊಂದುವುದಿಲ್ಲ.

ತಮಸಸ್ತಸ್ಯ ನಾಶಾರ್ಥಂ ನೋಪಾಯಮಧಿಜಗ್ಮಿವಾನ್।
ತಪಶ್ಚಚಾರ ವಿಪುಲಂ ಲೋಕಕರ್ತಾ ಪಿತಾಮಹಃ ॥೫೧೫॥

ಲೋಕಕರ್ತೃವಾದ ಪಿತಾಮಹನಾದ ಬ್ರಹ್ಮನು ದೇಹಜವಾದ ತಮಸ್ಸನ್ನು ವಿನಾಶಗೊಳಿಸಲು ಯಾವ ಉಪಾಯವನ್ನೂ ಕಾಣದೇ ವಿಪುಲವಾಗಿ ತಪಸ್ಸನ್ನು ಮಾಡಿದನು.

ಚರತಸ್ತು ಸಮುದ್ಭೂತಾ ವೇದಾಃ ಸಾಙ್ಗಾಃ ಸಹೋತ್ತರಾಃ।
ತಾಲ್ಲಬ್ಧ್ವಾ ಮುಮುದೇ ಬ್ರಹ್ಮಾ ಲೋಕಾನಾಂ ಹಿತಕಾಮ್ಯಯಾ।
ದೇಹಜಂ ತತ್ತಮೋ ಘೋರಂ ವೇದೈರೇವ ವಿನಾಶಿತಮ್ ॥೫೧೬॥

ಹಾಗೆಯೇ ಅವನು ತಪಸ್ಸುಮಾಡುತ್ತಿದ್ದಾಗ ಅವನ ಮುಖದಿಂದ, ಆರು ಅಂಗಗಳಿಂದಲೂ ಮತ್ತು ಉಪನಿಷತ್ತುಗಳಿಂದಲೂ ಯುಕ್ತವಾದ

ನಾಲ್ಕು ವೇದಗಳು ಪ್ರಾದುರ್ಭವಿಸಿದುವು. ಆ ವೇದಗಳನ್ನು ಪಡೆದು ಬ್ರಹ್ಮನು ಆನಂದಭರಿತನಾದನು. ಲೋಕಗಳ ಹಿತಾರ್ಥವಾಗಿ ದೇಹದಲ್ಲಿ ಹುಟ್ಟಿದ ತಮಸ್ಸನ್ನು ಬ್ರಹ್ಮನು ತಪಸ್ಸಿನಿಂದ ಪಡೆದುಕೊಂಡ ವೇದಗಳಿಂದಲೇ ವಿನಾಶಗೊಳಿಸಿದನು.

ಕಾರ್ಯಾಕಾರ್ಯಮಿದಂ ಚೇತಿ ವಾಚ್ಯಾವಾಚ್ಯಮಿದಂ ತ್ವಿತಿ।
ಯದಿ ಚೇನ್ನ ಭವೇಲ್ಲೋಕೇ ಶ್ರುತಂ ಚಾರಿತ್ರದೈಶಿಕಮ್।
ಪಶುಭಿರ್ನಿರ್ವಿಶೇಷಂ ತು ಚೇಷ್ಟನ್ತೇ ಮಾನುಷಾ ಅಪಿ ॥೫೧೭॥

ವೇದಗಳು-'ಇದು ಕಾರ್ಯ' 'ಇದು ಅಕಾರ್ಯ'-ಎಂಬುದನ್ನು ನಿರ್ದೇಶಿಸುತ್ತವೆ. 'ಇದನ್ನು ಹೇಳಬೇಕು' 'ಇದನ್ನು ಹೇಳಬಾರದು'-ಎಂಬುದನ್ನೂ ಸೂಚಿಸುತ್ತವೆ. (ವಿಧಿ-ನಿಷೇಧಗಳನ್ನು ಹೇಳುತ್ತವೆ) ಈ ಪ್ರಪಂಚದಲ್ಲಿ ಸದಾಚಾರದ ವಿಷಯವಾಗಿ ಗುರುವಿನ ರೂಪದಲ್ಲಿದ್ದು ಉಪದೇಶಿಸುವ ಶ್ರುತಿಯೇ ಇಲ್ಲದೇ ಹೋಗಿದ್ದರೆ ಮನುಷ್ಯರು ಕೂಡ ಪಶುಗಳಂತೆಯೇ ಸ್ವೇಚ್ಛಾಚಾರಿಗಳಾಗಿ ಇದ್ದುಬಿಡುತ್ತಿದ್ದರು.

ಯಜ್ಞಾದೀನಾಂ ಸಮಾರಮ್ಭಃ ಶ್ರುತೇನೈವ ವಿಧೀಯತೇ।
ಯಜ್ಞಸ್ಯ ಫಲಯೋಗೇನ ದೇವಲೋಕಃ ಸಮೃದ್ಧ್ಯತೇ ॥೫೧೮॥

ವೇದಗಳ ಮೂಲಕವಾಗಿಯೇ ಯಜ್ಞಾದಿ ಸಮಾರಂಭಗಳು ನಡೆಯುತ್ತವೆ. ಯಜ್ಞದ ಫಲಯೋಗದಿಂದ ದೇವಲೋಕವು ಸಮೃದ್ಧಿಯನ್ನು ಹೊಂದುತ್ತದೆ. (ದೇವತೆಗಳು ಪ್ರಸನ್ನರಾಗುತ್ತಾರೆ.)

ಪ್ರೀತಿಯುಕ್ತಾಃ ಪುನರ್ದೇವಾ ಮಾನುಷಾಣಾಂ ಭವನ್ತ್ಯುತ।
ಏವಂ ನಿತ್ಯಂ ಪ್ರವರ್ಧೇತೇ ರೋದಸೀ ಚ ಪರಸ್ಪರಮ್ ॥೫೧೯॥

ಅದರಿಂದ ಪ್ರೀತಿಯುಕ್ತರಾದ ದೇವತೆಗಳು ಮನುಷ್ಯರಿಗೆ ಹಿತಕಾರಿಗಳಾಗುತ್ತಾರೆ. ಹೀಗೆ ಭೂಲೋಕ-ಸ್ವರ್ಗಲೋಕಗಳು ಪರಸ್ಪರಸಹಕಾರ ಅಥವಾ ಸಹಯೋಗದಿಂದ ವೃದ್ಧಿಹೊಂದುತ್ತವೆ.

ಲೋಕಸಂಧಾರಣಂ ತಸ್ಮಾಚ್ಛ್ರುತಮಿತ್ಯವಧಾರಯ।
ಜ್ಞಾನಾದ್ವಿಶಿಷ್ಟಂ ಜನ್ತೂನಾಂ ನಾಸ್ತಿ ಲೋಕತ್ರಯೇಽಪಿ ಚ ॥೫೨೦॥

ಆದುದರಿಂದ ಶ್ರುತಿಯು ಧರ್ಮದಲ್ಲಿ ಪ್ರವೃತ್ತಿಯನ್ನು ಉಂಟು ಮಾಡುವ ಮೂಲಕ ಲೋಕವನ್ನೇ ಧರಿಸಿರುವುದೆಂದು ತಿಳಿ. ಮೂರು

ಲೋಕಗಳಲ್ಲಿಯೂ ಪ್ರಾಣಿಗಳಿಗೆ ಜ್ಞಾನಕ್ಕಿಂತಲೂ ಹೆಚ್ಚಿನದು ಬೇರೆ ಯಾವುದೂ ಇಲ್ಲ.

ಸಮ್ಪ್ರಗೃಹ್ಯ ಶ್ರುತಂ ಸರ್ವಂ ಕೃತಕೃತ್ಯೋ ಭವತ್ಯುತ।
ಉಪರ್ಯುಪರಿ ಮರ್ತ್ಯಾನಾಂ ದೇವವತ್ಸಮ್ಪ್ರಕಾಶತೇ ॥೫೨೧॥

ಎಲ್ಲ ವೇದಗಳ ಯಥಾರ್ಥಜ್ಞಾನವನ್ನು ಹೊಂದಿದ ದ್ವಿಜನು ಕೃತಕೃತ್ಯನಾಗುತ್ತಾನೆ. ವೇದವಿದನಾದ ಬ್ರಾಹ್ಮಣನು ಎಲ್ಲ ಮಾನವರಿಗಿಂತಲೂ ಮೇಲ್ಮೆಯನ್ನು ಹೊಂದಿ ದೇವತೆಯಂತೆಯೇ ಪ್ರಕಾಶಿಸುತ್ತಾನೆ.

ಕಾಮಂ ಕ್ರೋಧಂ ಭಯಂ ದರ್ಪಮಜ್ಞಾನಂ ಚೈವ ಬುದ್ಧಿಜಮ್।
ತಚ್ಛ್ರುತಂ ನುದತಿ ಕ್ಷಿಪ್ರಂ ಯಥಾ ವಾಯುರ್ಬಲಾಹಕಾನ್ ॥೫೨೨॥

ಯಾವ ರೀತಿಯಲ್ಲಿ ಗಾಳಿಯು ಮೇಘಗಳನ್ನು ಬಹಳ ಬೇಗ ಚದುರಿಸಿಬಿಡುವುದೋ–ಅದೇ ರೀತಿಯಲ್ಲಿ ವೇದ-ಶಾಸ್ತ್ರಗಳ ಅಧ್ಯಯನ ದಿಂದ ಉಂಟಾದ ಜ್ಞಾನವು ಕಾಮ, ಕ್ರೋಧ, ಭಯ, ದರ್ಪ, ಬೌದ್ಧಿಕವಾದ ಅಜ್ಞಾನ-ಈ ಎಲ್ಲವನ್ನೂ ದೂರೀಕರಿಸುತ್ತದೆ.

ಅಲ್ಪಮಾತ್ರಂ ಕೃತೋ ಧರ್ಮೋ ಲಭೇಜ್ಜ್ಞಾನವತಾ ಮಹಾನ್।
ಮಹಾನಪಿ ಕೃತೋ ಧರ್ಮೋ ಹ್ಯಜ್ಞಾನಾನ್ನಿಷ್ಫಲೋ ಭವೇತ್ ॥೫೨೩॥

ಜ್ಞಾನಿಯು ಮಾಡಿದ ಅತ್ಯಲ್ಪಧರ್ಮಕಾರ್ಯವೂ ಮಹಾಫಲದಾಯಕ ವಾಗುತ್ತದೆ. ಅಜ್ಞಾನದಿಂದ ಮಾಡಿದ ಮಹಾಧರ್ಮಕಾರ್ಯವೂ ನಿಷ್ಫಲವಾಗುತ್ತದೆ.”

ಉಮೆ:

ಭಗವನ್ಮಾನುಷಾಃ ಕೇಚಿಜ್ಜಾತಿಸ್ಮರಣಸಂಯುತಾಃ।
ಕಿಮರ್ಥಮಭಿಜಾಯನ್ತೇ ಜಾನನ್ತಃ ಪೌರ್ವದೈಹಿಕಮ್ ॥೫೨೪॥

“ಪೂಜ್ಯನೇ! ಕೆಲವರಿಗೆ ಪೂರ್ವಜನ್ಮದ ಸ್ಮರಣೆಯಿರುತ್ತದೆ. ಅವರು ಹಿಂದಿನ ಜನ್ಮದ ಸ್ಮರಣೆಯನ್ನಿಟ್ಟುಕೊಂಡು ಏಕೆ ಹುಟ್ಟುತ್ತಾರೆ? ಈ ವಿಷಯವನ್ನು ದಯಮಾಡಿ ಹೇಳು.”

ಮಹೇಶ್ವರ:

“ಉಮೆ! ಇದರ ತತ್ತ್ವವನ್ನು ಹೇಳುತ್ತೇನೆ. ಏಕಾಗ್ರಚಿತ್ತಳಾಗಿ ಕೇಳು.

ಯೇ ಮೃತಾಃ ಸಹಸಾ ಮರ್ತ್ಯಾ ಜಾಯನ್ತೇ ಸಹಸಾ ಪುನಃ।
ತೇಷಾಂ ಪೌರಾಣಿಕೋಽಭ್ಯಾಸಃ ಕಂಚಿತ್ಕಾಲಂ ಹಿ ತಿಷ್ಠತಿ ॥೫೨೫॥

ಯಾವ ಮನುಷ್ಯರು ಹಠಾತ್ತಾಗಿ ಸತ್ತು ಕೂಡಲೇ ಹುಟ್ಟುವರೋ (ಈ ಲೋಕದಲ್ಲಿಯೇ ಅತ್ಯಲ್ಪಕಾಲದಲ್ಲಿಯೇ ಪುನಃ ಹುಟ್ಟುವರೋ) ಅಂತಹವರಿಗೆ ಹಿಂದಿನ ಜನ್ಮದ ಸ್ಮರಣೆ ಮತ್ತು ನಡವಳಿಕೆಗಳು ಸ್ವಲ್ಪಕಾಲದವರೆಗೆ ಇರುತ್ತವೆ.

ತಸ್ಮಾಜ್ಜಾತಿಸ್ಮರಾ ಲೋಕೇ ಜಾಯನ್ತೇ ಬೋಧಸಂಯುತಾಃ।
ತೇಷಾಂ ವಿವರ್ಧತಾಂ ಸಂಜ್ಞಾ ಸ್ವಪ್ನವತ್ಸಾ ಪ್ರಣಶ್ಯತಿ।
ಪರಲೋಕಸ್ಯ ಚಾಸ್ತಿತ್ವೇ ಮೂಢಾನಾಂ ಕಾರಣಂ ತ್ವಿದಮ್ ॥೫೨೬॥

ಹಿಂದಿನ ಜನ್ಮದ ಸ್ಮರಣೆಯನ್ನಿಟ್ಟುಕೊಂಡು ಹುಟ್ಟುವುದರಿಂದ ಅವರನ್ನು-'ಜಾತಿಸ್ಮರರು'-ಎಂದೂ ಕರೆಯುತ್ತಾರೆ. ಅವರು ದೊಡ್ಡವರಾಗುತ್ತಿದ್ದಂತೆಲ್ಲಾ ಅವರ ಹಿಂದಿನ ಜನ್ಮದ ಸ್ಮರಣೆಯೂ ಸ್ವಪ್ನದೋಪಾದಿಯಲ್ಲಿ ಅಳಿಸಿಹೋಗುತ್ತಿರುತ್ತದೆ. ಇಂತಹ ಘಟನೆಗಳು ಮೂರ್ಖರಾದ ಮನುಷ್ಯರಿಗೆ ಪರಲೋಕವಿರುವುದೆಂಬ ವಿಶ್ವಾಸವನ್ನುಂಟುಮಾಡಲು ಕಾರಣಗಳಾಗುತ್ತವೆ."

ಉಮೆ:

ಭಗವನ್ಮಾನುಷಾಃ ಕೇಚಿನ್ಮೃತಾ ಭೂತ್ವಾಪಿ ಸಮ್ಪ್ರತಿ।
ನಿವರ್ತಮಾನಾ ದೃಶ್ಯನ್ತೇ ದೇಹೇಷ್ವೇವ ಪುನರ್ನರಾಃ ॥೫೨೭॥

"ಪೂಜ್ಯನೇ! ಕೆಲವರು ಮನುಷ್ಯರು ಸತ್ತಮೇಲೆ ಕೂಡ ಹಿಂದಿರುಗಿ ಬಂದು ಪುನಃ ದೇಹದೊಳಗೆ ಸೇರಿಕೊಂಡು ಬದುಕಿರುವುದು ಈ ಲೋಕದಲ್ಲಿ ಕಂಡುಬರುತ್ತದೆ. ಅದಕ್ಕೆ ಕಾರಣವನ್ನು ಹೇಳುವ ಕೃಪೆಮಾಡು."

ಮಹೇಶ್ವರ:

"ಶೋಭನಳೇ! ಅದಕ್ಕೆ ಕಾರಣವನ್ನೂ ನಿನಗೆ ಹೇಳುತ್ತೇನೆ. ಏಕಾಗ್ರಚಿತ್ತಳಾಗಿ ಕೇಳು.

ಪ್ರಾಣೈರ್ವಿಯುಜ್ಯಮಾನಾನಾಂ ಬಹುತ್ವಾತ್ಪ್ರಾಣಿನಾಂ ಕ್ಷಯೇ।
ತಥೈವ ನಾಮಸಾಮಾನ್ಯಾದ್ಯಮದೂತಾ ನೃಣಾಂ ಪ್ರತಿ ॥೫೨೮॥

ವಹನ್ತಿ ತೇ ಕ್ವಚಿನ್ಮೋಹಾದನ್ಯಂ ಮರ್ತ್ಯಂ ತು ಧಾರ್ಮಿಕಾಃ।
ನಿರ್ವಿಕಾರಂ ಹಿ ತತ್ಸರ್ವಂ ಯಮೋ ವೇದ ಕೃತಾಕೃತಮ್ ॥೫೨೯॥

ಪ್ರಾಣಿಗಳೂ ಅಪರಿಮಿತಸಂಖ್ಯೆಯಲ್ಲಿವೆ. ಅಂತೆಯೇ ಏಕಕಾಲದಲ್ಲಿಯೇ ಪ್ರಾಣಗಳಿಂದ ವಿಯೋಗಹೊಂದುವವರೂ ಅಗಣಿತವಾದ ಸಂಖ್ಯೆಯಲ್ಲೇ ಇರುತ್ತಾರೆ. ಮೇಲಾಗಿ ಹೀಗೆ ಏಕಕಾಲದಲ್ಲಿ ಪ್ರಾಣಗಳನ್ನು ತೊರೆಯುವ ಅನೇಕರ ಹೆಸರುಗಳೂ ಒಂದೇ ಆಗಿರುತ್ತವೆ. ಅಂತಹ ಸಂದರ್ಭಗಳಲ್ಲಿ ಕೆಲವೊಮ್ಮೆ ಧಾರ್ಮಿಕರಾದ ಯಮಭಟರು ಅದೇ ಹೆಸರಿನ ಬೇರಯವನನ್ನು, (ಅವನಿಗೆ ಆಯುಷ್ಯವು ಮುಗಿಯದಿದ್ದರೂ) ಮೋಹವಶರಾಗಿ ಕೊಂಡೊಯ್ಯುತ್ತಾರೆ. ಆದರೆ ಯಮಧರ್ಮನು ನಿರ್ವಿಕಾರಭಾವದಿಂದ ತನ್ನ ದೂತರಲ್ಲಿ–'ಯಾರೇನು ಮಾಡಿದರು? ಏನು ಮಾಡಲಿಲ್ಲ? ಪ್ರಮಾದವನ್ನು ಯಾರೆಸಗಿದ್ದಾರೆ?'–ಈ ಎಲ್ಲ ವಿಷಯಗಳನ್ನೂ ತಿಳಿದಿರುತ್ತಾನೆ.

ತಸ್ಮಾತ್ಸಂಯಮನೀಂ ಪ್ರಾಪ್ಯ ಯಮೇನೈಕೇನ ಮೋಕ್ಷಿತಾಃ।
ಪುನರೇವಂ ನಿವರ್ತನ್ತೇ ಶೇಷಂ ಭೋಕ್ತುಂ ಸ್ವಕರ್ಮಣಃ।
ಸ್ವಕರ್ಮಣ್ಯಸಮಾಪ್ತೇ ತು ನಿವರ್ತನ್ತೇ ಹಿ ಮಾನವಾಃ ॥೫೩೦॥

ಪ್ರಮಾದವಶದಿಂದ ಯಮಭಟರಿಂದ ಒಯ್ಯಲ್ಪಟ್ಟು ಯಮನ ಪಟ್ಟಣವನ್ನು ಸೇರಿದ ಜನರು ಒಡನೆಯೇ ಯಮನಿಂದ ಬಿಡುಗಡೆಯನ್ನು ಹೊಂದಿ ತಮ್ಮ ಪ್ರಾರಬ್ಧಕರ್ಮದ ಉಳಿದ ಭಾಗವನ್ನು ಉಪಭೋಗಿಸಲು ಹಿಂದಿರುಗಿ ಬಂದು ತಮ್ಮ ಶರೀರದೊಳಗೆ ಸೇರಿಕೊಳ್ಳುತ್ತಾರೆ. ಕರ್ಮಫಲದ ಭೋಗವು ಮುಗಿಯದಿದ್ದ ಮನುಷ್ಯರು ಹೀಗೆ ಪುನಃ ಹಿಂತಿರುಗಿ ಬರುತ್ತಾರೆ."

ಉಮೆ:

ಭಗವನ್ಸುಪ್ತಮಾತ್ರೇಣ ಪ್ರಾಣಿನಾಂ ಸ್ವಪ್ನದರ್ಶನಮ್।
ಕಿಂ ತತ್ಸ್ವಭಾವಮನ್ಯದ್ವಾ ತನ್ಮೇ ಶಂಸಿತುಮರ್ಹಸಿ ॥೫೩೧॥

"ಪೂಜ್ಯನೇ! ಮಲಗಿದೊಡನೆಯೇ ಪ್ರಾಣಿಗಳಿಗೆ ಸ್ವಪ್ನವು ಬೀಳುತ್ತದೆ. ಹಾಗೆ ಸ್ವಪ್ನಬೀಳುವುದು ಸ್ವಾಭಾವಿಕವೇ? ಅಥರಾ ಬೇರೆ ಯಾವುದಾದರೂ ಕಾರಣದಿಂದ ಬೀಳುವುದೇ? ಈ ವಿಷಯವನ್ನು ನನಗೆ ಹೇಳುವ ಕೃಪೆಮಾಡು."

ಮಹೇಶ್ವರ:

ಸುಪ್ತಾನಾಂ ತು ಮನಶ್ಚೇಷ್ಟಾ ಸ್ವಪ್ನ ಇತ್ಯಭಿಧೀಯತೇ।
ಅನಾಗತಮತಿಕ್ರಾನ್ತಂ ಪಶ್ಯತೇ ಸಂಚರನ್ಮನಃ ॥೫೩೨॥

"ಪ್ರಿಯಳೇ! ಪ್ರಾಣಿಗಳು ಮಲಗಿರುವಾಗ ಮನಸ್ಸು ಮಾಡುವ ಚೇಷ್ಟೆಯೇ ಸ್ವಪ್ನವೆನಿಸಿಕೊಳ್ಳುತ್ತದೆ. ತಾನಾಗಿ ಸ್ವೇಚ್ಛೆಯಿಂದ ಸಂಚರಿಸುವ ಆ ಮನಸ್ಸು ಹಿಂದೆ ನಡೆದುಹೋದುದನ್ನೂ ಮುಂದೆ ನಡೆಯುವುದನ್ನೂ ನೋಡುತ್ತದೆ.

ನಿಮಿತ್ತಂ ಚ ಭವೇತ್ತಸ್ಮಾತ್ಪ್ರಾಣಿನಾಂ ಸ್ವಪ್ನದರ್ಶನಮ್।
ಏತತ್ತೇ ಕಥಿತಂ ದೇವಿ ಭೂಯಃ ಶ್ರೋತುಂ ಕಿಮಿಚ್ಛಸಿ ॥೫೩೩॥

ಆದುದರಿಂದ ಪ್ರಾಣಿಗಳು ಸ್ವಪ್ನದರ್ಶನವು ಮುಂದಾಗುವುದನ್ನು ಸೂಚಿಸುವ ನಿಮಿತ್ತವೆಂದೂ ಹೇಳುತ್ತಾರೆ. ದೇವಿ! ಹೀಗೆ ನಿನಗೆ ಎಲ್ಲವನ್ನೂ ಹೇಳಿದ್ದೇನೆ. ಮತ್ತೇನನ್ನು ಕೇಳಲು ಬಯಸಿರುವೆ?"

ಉಮೆ:

ಭಗವನ್ಸರ್ವಭೂತೇಶ ಲೋಕೇ ಕರ್ಮಕ್ರಿಯಾಪಥೇ।
ದೈವಾತ್ಪ್ರವರ್ತತೇ ಸರ್ವಮಿತಿ ಕೇಚಿದ್ವ್ಯವಸ್ಥಿತಾಃ ॥೫೩೪॥

"ಪೂಜ್ಯನೇ! ಸರ್ವಭೂತೇಶನೇ! ಲೋಕದಲ್ಲಿ ದೈವದ ಪ್ರೇರಣೆಯಿಂದಲೇ ಎಲ್ಲ ಕಾರ್ಯಗಳೂ ನಡೆಯುತ್ತವೆಯೆಂದು ಕೆಲವರು ನಿಶ್ಚಯಿಸಿ ಹೇಳುತ್ತಾರೆ.

ಅಪರೇ ಚೇಷ್ಟಯಾ ಚೇತಿ ದೃಷ್ಟ್ವಾ ಪ್ರತ್ಯಕ್ಷತಃ ಕ್ರಿಯಾಮ್।
ಪಕ್ಷಭೇದೇ ದ್ವಿಧಾ ಚಾಸ್ಮಿನ್ಸಂಶಯಸ್ಥಂ ಮನೋ ಮಮ।
ತತ್ತ್ವಂ ವದ ಮಹಾದೇವ ಶ್ರೋತುಂ ಕೌತೂಹಲಂ ಹಿ ಮೇ ॥

ಮಹಾದೇವನೇ! ಪ್ರತ್ಯಕ್ಷವಾಗಿ ಮಾನವನು ಮಾಡುತ್ತಿರುವ ಕಾರ್ಯವನ್ನು ನೋಡಿ ಮನುಷ್ಯಪ್ರಯತ್ನದಿಂದಲೇ ಎಲ್ಲವೂ ನಡೆಯುವುದೆಂದೂ ದೈವದ ಪ್ರೇರಣೆಯಾಗಲೀ ಸಹಯೋಗವಾಗಲೀ ಇಲ್ಲವೆಂದೂ ಕೆಲವರು ಹೇಳುತ್ತಾರೆ. ಈ ಎರಡು ಮತಭೇದಗಳಿಂದಾಗಿ ನನ್ನ ಮನಸ್ಸಿನಲ್ಲಿ ಸಂಶಯವುಂಟಾಗಿ ಈ ವಿಷಯದಲ್ಲಿ ಯಾವುದು ಯಥಾರ್ಥವಾದುದೆಂಬುದನ್ನು ತಿಳಿಯುವ ಕುತೂಹಲವುಂಟಾಗಿದೆ. ದಯಮಾಡಿ ಹೇಳು."

ಮಹೇಶ್ವರ:

"ದೇವಿ! ಈ ವಿಷಯವನ್ನು ನಿನಗೆ ಯಥಾವತ್ತಾಗಿ ಹೇಳುತ್ತೇನೆ. ಏಕಾಗ್ರಚಿತ್ತಳಾಗಿ ಕೇಳು.

ಲಕ್ಷ್ಯತೇ ದ್ವಿವಿಧಂ ಕರ್ಮ ಮಾನುಷೇಷ್ವೇವ ತಚ್ಛೃಣು।
ಪುರಾಕೃತಂ ತಯೋರೇಕಮೈಹಿಕಂ ತ್ವಿತರತ್ತಥಾ ॥೫೩೬॥

ದೇವಿ! ಮನುಷ್ಯರಲ್ಲಿಯೇ ಎರಡು ಪ್ರಕಾರವಾದ ಕರ್ಮಗಳು ಇರುವುದು ಕಂಡುಬರುತ್ತದೆ. ಅದರಲ್ಲೊಂದು ಹಿಂದೆ ಮಾಡಿದ ಕರ್ಮ. ಮತ್ತೊಂದು ಈಗ ಮಾಡುತ್ತಿರುವ ಕರ್ಮ.

ಲೌಕಿಕಂ ತು ಪ್ರವಕ್ಷ್ಯಾಮಿ ದೈವಮಾನುಷನಿರ್ಮಿತಮ್।
ಕೃಷೌ ತು ದೃಶ್ಯತೇ ಕರ್ಮ ಕರ್ಷಣಂ ವಪನಂ ತಥಾ ॥೫೩೭॥

ರೋಪಣಂ ಚೈವ ಲವನಂ ಯಚ್ಚಾನ್ಯತ್ಪೌರುಷಂ ಸ್ಮೃತಮ್।
ದೈವಾದಸಿದ್ಧಿಶ್ಚ ಭವೇದ್ದುಷ್ಕೃತಂ ಚಾಸ್ತಿ ಪೌರುಷೇ ॥೫೩೮॥

ಈಗ ನಾನು ದೈವಸಹಾಯ ಮತ್ತು ಮನುಷ್ಯಪ್ರಯತ್ನ–ಈ ಎರಡೂ ಸೇರುವುದರಿಂದ ಮಾತ್ರವೇ ಸಿದ್ಧಿಸಬಹುದಾದ ಲೌಕಿಕಕರ್ಮಗಳನ್ನು ಹೇಳುತ್ತೇನೆ. ಕೃಷಿಯಲ್ಲಿ ನೇಗಿಲಿನಿಂದ ಉಳುವುದು, ಬಿತ್ತುವುದು, ಬೆಳೆಸುವುದು, ಕುಯ್ಯುವುದು-ಇವೆಲ್ಲವೂ ಮನುಷ್ಯನು ಮಾಡಬೇಕಾದ ಕೆಲಸಗಳಾಗಿವೆ. ಆದರೆ ಫಲವನ್ನು ಕೊಡುವುದು ದೈವ. ಬಿತ್ತಿದ ಬೀಜವು ಮೊಳಕೆಯಾಗದೆಯೂ ಇರಬಹುದು. ಮನುಷ್ಯನು ಮಾಡಿದುದರಲ್ಲಿ ದೋಷವೂ ಇರಬಹುದು.

ಸುಯತ್ನಾಲ್ಲಭ್ಯತೇ ಕೀರ್ತಿರ್ದುರ್ಯತ್ನಾದಯಶಸ್ತಥಾ।
ಏವಂ ಲೋಕಗತಿರ್ದೇವಿ ಆದಿಪ್ರಭೃತಿ ವರ್ತತೇ ॥೫೩೯॥

ಒಳ್ಳೆಯ ಪ್ರಯತ್ನದಿಂದ ಕಾರ್ಯಸಿದ್ಧಿಗಾಗಿ ಯತ್ನಿಸಿದರೆ ಕೀರ್ತಿ ಯುಂಟಾಗುತ್ತದೆ. ಕೆಟ್ಟ ಮಾರ್ಗದಲ್ಲಿ ಕಾರ್ಯಸಿದ್ಧಿಗೆ ಯತ್ನಿಸಿದರೆ ಅಪ ಯಶಸ್ಸುಂಟಾಗುತ್ತದೆ. ಆದಿಕಾಲದಿಂದಲೂ ಲೋಕದ ವ್ಯವಸ್ಥೆಯೇ ಹೀಗಿದೆ.

ರೋಪಣಂ ಚೈವ ಲವನಂ ಯಚ್ಚಾನ್ಯತ್ಪೌರುಷಂ ಸ್ಮೃತಮ್।
ಕಾಲೇ ವೃಷ್ಟಿಃ ಸುವಾಪಂ ಚ ಪ್ರರೋಹಃ ಪಙ್ಕ್ತಿರೇವ ಚ।
ಏವಮಾದಿ ತು ಯಚ್ಚಾನ್ಯತ್ತದ್ದೈವತಮಿತಿ ಸ್ಮೃತಮ್ ॥೫೪೦॥

ಬೀಜಬಿತ್ತುವುದು, ಕೊಯ್ಯುವುದು ಇತ್ಯಾದಿಗಳು-ಮನುಷ್ಯನ ಕಾರ್ಯಗಳಾಗಿರುತ್ತವೆ. ಆದರೆ ಸಮಯದಲ್ಲಿ ಮಳೆಗರೆಯುವುದು, ಬಿತ್ತಿದ ನಂತರ ಮಳೆಯ ನೀರಿನಿಂದ ಒಳ್ಳೆಯ ಪರಿಣಾಮವನ್ನು ಹೊಂದಿ ಮೊಳೆಯುವುದು, ಸಸ್ಯಗಳು ಸಾಲುಗಟ್ಟಿ ನಿಲ್ಲುವುದು-ಇವೇ ಮುಂತಾದುವು ದೈವಾನುಕೂಲದಿಂದಲೇ ಆಗತಕ್ಕ ಕಾರ್ಯಗಳಾಗಿವೆಯೆಂದು ಹೇಳುತ್ತಾರೆ.

ಪಞ್ಚಭೂತಸ್ಥಿತಿಶ್ಚೈವ ಜ್ಯೋತಿಷಾಮಯನಂ ತಥಾ।
ಅಬುದ್ಧಿಗಮ್ಯಂ ಯನ್ಮರ್ತ್ಯೈರ್ಹೇತುಭಿರ್ವಾ ನ ವಿದ್ಯತೇ ॥೫೪೧॥
ತಾದೃಶಂ ಕಾರಣಂ ದೈವಂ ಶುಭಂ ವಾ ಯದಿ ವೇತರತ್।
ಯಾದೃಶಂ ಚಾತ್ಮನಾ ಶಕ್ಯಂ ತತ್ಪೌರುಷಮಿತಿ ಸ್ಮೃತಮ್ ॥೫೪೨॥

ಪಂಚಭೂತಗಳ ಸ್ಥಿತಿ, ಗ್ರಹ-ನಕ್ಷತ್ರಗಳ ಚಲನ-ವಲನಗಳು ಮತ್ತು ಮನುಷ್ಯನ ಬುದ್ಧಿಗೆ ಎಟುಕದ, ಊಹೆಗೂ ಸಿಕ್ಕದ ಕರ್ಮಗಳು ಶುಭವಾಗಲೀ ಅಶುಭವಾಗಲೀ ದೈವದ್ದೆಂದು ಹೇಳುತ್ತಾರೆ. ಮನುಷ್ಯರಿಗೆ ಸ್ವತಃ ಮಾಡಲು ಯಾವುದು ಸಾಧ್ಯವಾಗುವುದೋ ಅಂತಹ ಕಾರ್ಯವನ್ನು ಪೌರುಷವೆನ್ನುತ್ತಾರೆ.

ಕೇವಲಂ ಫಲನಿಷ್ಪತ್ತಿರೇಕೇನ ತು ನ ಶಕ್ಯತೇ।
ಪೌರುಷೇಣೈವ ದೈವೇನ ಯುಗಪದ್ಗ್ರಥಿತಂ ಪ್ರಿಯೇ ॥೫೪೩॥

ಕೇವಲ ದೈವದಿಂದಲೂ ಫಲವು ಸಿದ್ಧಿಸುವುದಿಲ್ಲ; ಕೇವಲ ಪೌರುಷ ದಿಂದಲೂ ಫಲವು ಸಿದ್ಧಿಸುವುದಿಲ್ಲ. ಪ್ರತಿಯೊಂದು ಕಾರ್ಯಸಿದ್ಧಿಯೂ ಏಕಕಾಲದಲ್ಲಿ ಪುರುಷಪ್ರಯತ್ನ ಮತ್ತು ದೈವಸಹಾಯ–ಇವೆರಡರ ಜೋಡಣೆಯಿಂದ ಆಗುತ್ತದೆ.

ತಯೋಃ ಸಮಾಹಿತಂ ಕರ್ಮ ಶೀತೋಷ್ಣಂ ಯುಗಪತ್ತಥಾ।
ಪೌರುಷಂ ತು ತಯೋಃ ಪೂರ್ವಮಾರಬ್ಧವ್ಯಂ ವಿಜಾನತಾ।
ಆತ್ಮನಾ ತು ನ ಶಕ್ಯಂ ಹಿ ತಥಾ ಕೀರ್ತಿಮವಾಪ್ನುಯಾತ್ ॥೫೪೪॥

ದೈವಯೋಗ ಮತ್ತು ಪೌರುಷ-ಇವೆರಡರ ಸಮಾನಕಾಲದ ಸಹಯೋಗದಿಂದ–ಶೀತೋಷ್ಣಗಳೆರಡರ ಸಹಯೋಗದಿಂದ ಹಿತಕರವಾದ ವಾತಾವರಣವುಂಟಾಗುವಂತೆ–ಹಿತಕರವಾದ ರೀತಿಯಲ್ಲಿ ಕಾರ್ಯಸಿದ್ಧಿಯಾ ಗುತ್ತದೆ. ಆದರೆ ವಿದ್ವಾಂಸನಾದವನು ಮೊದಲು ಕಾರ್ಯವನ್ನು ಆರಂಭಿಸ

ಬೇಕು. ಯಾವುದೇ ಕಾರ್ಯಸಾಧನೆಗೂ ಮೊದಲು ಪುರುಷ ಪ್ರಯತ್ನವಾಗಲೇಬೇಕು. ಆರಂಭಿಸದೆಯೇ ತಾನಾಗಿಯೇ ಯಾವ ಕಾರ್ಯವೂ ಆಗಿಬಿಡುವುದಿಲ್ಲ. ಹಾಗೆ ಕಾರ್ಯವನ್ನಾರಂಭಿಸಿದ ಮನುಷ್ಯನು ದೈವದ ಸಹಾಯವನ್ನು ಪಡೆದರೆ ಕೀರ್ತಿವಂತನಾಗುತ್ತಾನೆ.

ಖನನಾನ್ಮಥನಾಲ್ಲೋಕೇ ಜಲಾಗ್ನಿಪ್ರಾಪಣಂ ತಥಾ।
ತಥಾ ಪುರುಷಕಾರೇ ತು ದೈವಸಮ್ಪತ್ಸಮಾಹಿತಾ ॥೫೪೫॥

ಲೋಕದಲ್ಲಿ ನೆಲವನ್ನು ತೋಡುವುದರಿಂದ ನೀರೂ, ಕಾಷ್ಠಗಳನ್ನು ಮಥಿಸುವುದರಿಂದ ಅಗ್ನಿಯೂ ಉಂಟಾಗುವಂತೆ ಪುರುಷಪ್ರಯತ್ನವನ್ನು ಮಾಡಿದರೆ ದೈವದ ಸಹಯೋಗವು ಸಿಕ್ಕಿಯೇ ಸಿಕ್ಕುತ್ತದೆ.

ನರಸ್ಯಾಕುರ್ವತಃ ಕರ್ಮ ದೈವಸಮ್ಪನ್ನ ಲಭ್ಯತೇ।
ತಸ್ಮಾತ್ಸರ್ವಸಮಾರಮ್ಭೋ ದೈವಮಾನುಷನಿರ್ಮಿತಃ ॥೫೪೬॥

ಕೆಲಸವನ್ನೇ ಮಾಡದಿರುವವನಿಗೆ ದೈವಸಹಾಯವೆಂದಿಗೂ ಸಿಕ್ಕುವುದಿಲ್ಲ. ಆದುದರಿಂದ ಎಲ್ಲ ಕಾರ್ಯಗಳೂ ದೈವಾನುಕೂಲ ಮತ್ತು ಪುರುಷಪ್ರಯತ್ನ–ಇವೆರಡನ್ನೂ ಅವಲಂಬಿಸಿವೆ."

ಉಮೆ:

ಭಗವನ್ಸರ್ವಲೋಕೇಶ ಲೋಕನಾಥ ವೃಷಧ್ವಜ।
ನಾಸ್ತ್ಯಾತ್ಮಾ ಕರ್ಮಭೋಕ್ತೇತಿ ಮೃತೋ ಜನ್ತುರ್ನ ಜಾಯತೇ ॥

"ಪೂಜ್ಯನೇ! ಸರ್ವಲೋಕೇಶನೇ! ಲೋಕನಾಥನೇ! ವೃಷಧ್ವಜನೇ! ಕರ್ಮಫಲವನ್ನು ಉಪಭೋಗಿಸುವನೆಂದು ಹೇಳುವ ಜೀವಾತ್ಮನೆಂಬ ವಸ್ತುವು ಯಾವುದೂ ಇಲ್ಲ. ಆದುದರಿಂದ ಸತ್ತ ಪ್ರಾಣಿಯು ಪುನಃ ಹುಟ್ಟುವುದಿಲ್ಲ.

ಸ್ವಭಾವಾಜ್ಜಾಯತೇ ಸರ್ವಂ ಯಥಾ ವೃಕ್ಷಫಲಂ ತಥಾ।
ಯಥೋರ್ಮಯಃ ಸಮ್ಭವನ್ತಿ ತಥೈವ ಜಗದಾಕೃತಿಃ ॥೫೪೮॥

ವೃಕ್ಷದಲ್ಲಿ ಫಲವು ಹೇಗೆ ಬಿಡುವುದೋ, ಸಮುದ್ರದಲ್ಲಿ ಅಲೆಗಳು ಹೇಗೆ ಹುಟ್ಟುವುವೋ–ಅದೇ ರೀತಿಯಲ್ಲಿ ಸ್ವಾಭಾವಿಕವಾಗಿಯೇ ಜಗತ್ತೆಂಬ (ಜಗತ್ತಿನ) ಆಕಾರವು ಪ್ರಕಟಗೊಳ್ಳುತ್ತದೆ.

ತಪೋ ದಾನಾನಿ ಯತ್ಕರ್ಮ ತತ್ರ ತದ್ದೃಶ್ಯತೇ ವೃಥಾ।
ನಾಸ್ತಿ ಪೌನರ್ಭವಂ ಜನ್ಮ ಇತಿ ಕೇಚಿದ್ವ್ಯವಸ್ಥಿತಾಃ ॥೫೪೯॥

ತಪಸ್ಸು, ದಾನ–ಇವೇ ಮುಂತಾದ ಕರ್ಮಗಳೆಲ್ಲವೂ ವ್ಯರ್ಥವಾಗಿಯೇ ಕಾಣುತ್ತವೆ. ಜೀವಾತ್ಮನಿಗೆ ಪುನರ್ಜನ್ಮವೆಂಬುದೇ ಇಲ್ಲ–ಹೀಗೆ ಕೆಲವರು ಸಿದ್ಧಾಂತಿಸಿದ್ದಾರೆ.

ಪರೋಕ್ಷವಚನಂ ಶ್ರುತ್ವಾ ನ ಪ್ರತ್ಯಕ್ಷಸ್ಯ ದರ್ಶನಾತ್।
ತತ್ಸರ್ವಂ ನಾಸ್ತಿ ನಾಸ್ತೀತಿ ಸಂಶಯಸ್ಥಾಸ್ತಥಾ ಪರೇ ॥೫೫೦॥
ಪಕ್ಷಭೇದಾನ್ತರೇ ಚಾಸ್ಮಿಂಸ್ತತ್ತ್ವಂ ಮೇ ವಕ್ತುಮರ್ಹಸಿ।
ಉಕ್ತಂ ಭಗವತಾ ಯತ್ತು ತತ್ತು ಲೋಕಸ್ಯ ಸಂಸ್ಥಿತಿಃ ॥೫೫೧॥

'ಪುನರ್ಜನ್ಮವಿದೆ. ಜೀವಾತ್ಮನು ನಾಶಹೊಂದುವುದಿಲ್ಲ. ಅವನೇ ಕರ್ಮಭೋಗಿಯು'–ಇವೆಲ್ಲವೂ ವೇದಗಳಲ್ಲಿ ಹೇಳಿರುವ ಪರೋಕ್ಷವಚನಗಳು. ಪ್ರತ್ಯಕ್ಷಪ್ರಮಾಣಗಳಲ್ಲ. ಈ ಕಾರಣದಿಂದಲೇ-'ಪರಮಾರ್ಥವೂ ಇಲ್ಲ. ಜನ್ಮವೂ ಇಲ್ಲ. ಎಲ್ಲವೂ ಸ್ವಾಭಾವಿಕವಾಗಿ ನಡೆಯುತ್ತಿದೆ'–ಎಂಬುದಾಗಿ ಅನೇಕರು ಆತ್ಮದ ಅಸ್ತಿತ್ವದಲ್ಲಿ ಸಂಶಯಗೊಂಡಿರುತ್ತಾರೆ. ಅಸ್ತಿ ಅಥವಾ ನಾಸ್ತಿ ಎಂಬ ಈ ಎರಡು ಪಕ್ಷಭೇದಗಳಲ್ಲಿ ಸತ್ಯಸಂಗತಿಯನ್ನು ಹೇಳುವ ಕೃಪೆಮಾಡು. ನೀನು ಏನು ಹೇಳುವೆಯೋ ಅದೇ ಲೋಕದ ಸ್ಥಿತಿಯೆಂದು ನಾನು ಭಾವಿಸಿದ್ದೇನೆ."

ನಾರದರು ಹೇಳುತ್ತಾರೆ:

ಮಹರ್ಷಿಗಳೇ! ರುದ್ರಾಣಿಯ ಈ ಪ್ರಶ್ನೆಯನ್ನು ಕೇಳಿ ಮುನಿಗಳ ಸಮೂಹವು ಕುತೂಹಲಾವಿಷ್ಟವಾಗಿ ಮಹೇಶ್ವರನ ಉತ್ತರವನ್ನು ಕೇಳಲು ಏಕಾಗ್ರಚಿತ್ತದಿಂದ ಕುಳಿತಿತು.

ಮಹೇಶ್ವರ:

ನೈತದಸ್ತಿ ಮಹಾಭಾಗೇ ಯದ್ವದನ್ತೀಹ ನಾಸ್ತಿಕಾಃ।
ಏತದೇವಾಭಿಶಸ್ತಾನಾಂ ಶ್ರುತವಿದ್ವೇಷಿಣಾಂ ಮತಮ್ ॥೫೫೨॥

"ಮಹಾಭಾಗಳೇ! ನಾಸ್ತಿಕರು ಹೇಳುವ ಈ ಮಾತು ಯುಕ್ತವಲ್ಲ. ಇದು ಮಹಾಪಾಪಿಗಳ ಮತ್ತು ಶಾಸ್ತ್ರವಿದ್ವೇಷಿಗಳ ಅಭಿಪ್ರಾಯವಾಗಿದೆ.

ಸರ್ವಮರ್ಥಂ ಶ್ರುತಂ ದೃಷ್ಟಂ ಯತ್ಪ್ರಾಗುಕ್ತಂ ಮಯಾ ತವ ।
ತದಾಪ್ರಭೃತಿ ಮರ್ತ್ಯಾನಾಂ ಶ್ರುತಮಾಶ್ರಿತ್ಯ ಪಣ್ಡಿತಾಃ ॥೫೫೪॥
ಕಾಮಾನ್ಸಂಛಿದ್ಯ ಪರಿಘಾನ್ಧೃತ್ವಾ ವೈ ಪರಮಾಸನಾಃ ।
ಅಭಿಯಾನ್ತ್ಯೇವ ತೇ ಸ್ವರ್ಗಂ ಪಶ್ಯನ್ತಃ ಕರ್ಮಣಃ ಫಲಮ್ ॥೫೫೫॥

ಪಾರ್ವತಿ! ಈ ಹಿಂದೆ ನಾನು ನಿನಗೆ ಏನು ಹೇಳಿರುವೆನೋ–ಆ ಎಲ್ಲ ವಿಷಯಗಳೂ ಶಾಸ್ತ್ರಸಮ್ಮತವೂ ಮತ್ತು ಅನುಭವಕ್ಕೆ ವೇದ್ಯವೂ ಆಗಿವೆ. ವಿಶ್ವವು ಆರಂಭವಾದಾಗಿನಿಂದ ಮನುಷ್ಯರಲ್ಲಿ ಯಾರು ಪಂಡಿತರಾಗಿರುವರೋ ಅವರು ವೇದ-ಶಾಸ್ತ್ರಗಳನ್ನೇ ಆಶ್ರಯಿಸಿ, ಪರಿಘಾಯುಧರೂಪವಾದ ಕಾಮನೆಗಳೆಲ್ಲವನ್ನೂ ಕಡಿದುಹಾಕಿ, ಧೈರ್ಯವನ್ನು ತಳೆದು, ಶ್ರೇಷ್ಠವಾದ ಆಸನದಲ್ಲಿ ಕುಳಿತು ಧ್ಯಾನಮಗ್ನರಾಗಿ, ಕರ್ಮಗಳ ಫಲವನ್ನು ಪ್ರತ್ಯಕ್ಷವಾಗಿಯೇ ನೋಡುತ್ತಾ ಸ್ವರ್ಗಲೋಕಕ್ಕೆ ಹೋಗುತ್ತಿರುತ್ತಾರೆ.

ಏವಂ ಶ್ರದ್ಧಾಭವಂ ಲೋಕೇ ಪರತಃ ಸುಮಹತ್ಫಲಮ್।
ಬುದ್ಧಿಃ ಶ್ರದ್ಧಾ ಚ ವಿನಯಃ ಕರಣಾನಿ ಹಿತೈಷಿಣಾಮ್ ॥೫೫೬॥

ಹೀಗೆ ವೇದ-ಶಾಸ್ತ್ರಗಳ ವಚನಗಳಲ್ಲಿ ಶ್ರದ್ಧೆಯನ್ನಿಟ್ಟು ಆಚರಿಸುವ ಕಾರ್ಯಗಳು ಪರಲೋಕದಲ್ಲಿ ಮಹಾಫಲದಾಯಕಗಳಾಗುತ್ತವೆ. ಹಿತವನ್ನು ಬಯಸುವವರಿಗೆ ಬುದ್ಧಿ, ಶ್ರದ್ಧೆ ಮತ್ತು ವಿನಯಗಳು ಆತ್ಮೋನ್ನತಿಗೆ ಕರಣ (ಸಾಧನ) ಗಳಾಗುತ್ತವೆ.

ತಸ್ಮಾತ್ಸ್ವರ್ಗಾಭಿಗನ್ತಾರಃ ಕತಿಚಿತ್ಸ್ವಭವನ್ನರಾಃ।
ಅನ್ಯೇ ಕರಣಹೀನತ್ವಾನ್ನಾಸ್ತಿಕ್ಯಂ ಭಾವಮಾಶ್ರಿತಾಃ ॥೫೫೭॥

ಆದುದರಿಂದ ಸ್ವಲ್ಪವೇ ಜನರು ಮೇಲೆ ಹೇಳಿದ ಸಾಧನೆಗಳಲ್ಲಿ ಸಂಪನ್ನರಾಗಿ ಸ್ವರ್ಗವೇ ಮೊದಲಾದ ಪುಣ್ಯಲೋಕಗಳಿಗೆ ಹೋಗುತ್ತಾರೆ. ಉಳಿದವರು ಯಾವ ಸಾಧನೆಯನ್ನೂ ಮಾಡದೇ ನಾಸ್ತಿಕಭಾವವನ್ನು ಅವಲಂಬಿಸುತ್ತಾರೆ.

ಶ್ರುತಿವಿದ್ವೇಷಿಣೋ ಮೂರ್ಖಾ ನಾಸ್ತಿಕಾ ದೃಢನಿಶ್ಚಯಾಃ।
ನಿಷ್ಕ್ರಿಯಾಸ್ತು ನಿರನ್ನಾದಾಃ ಪತನ್ತ್ಯೇವಾಧಮಾಂ ಗತಿಮ್ ॥೫೫೮॥

ವೇದವಿದ್ವೇಷಿಗಳಾದ, ಮೂರ್ಖರಾದ, ದೃಢವಾದ ನಿಶ್ಚಯವಿಲ್ಲದ ನಾಸ್ತಿಕರು ಕ್ರಿಯಾಹೀನರಾಗಿ ತಿನ್ನಲು ಅನ್ನವಿಲ್ಲದವರಾಗಿ ಪರಮಪಾಪಿಗಳಾಗಿ ಅವಸಾನಾನಂತರದಲ್ಲಿ ಅಧೋಗತಿಯನ್ನು ಹೊಂದುತ್ತಾರೆ.

ನಾಸ್ತ್ಯಸ್ತೀತಿ ಪುನರ್ಜನ್ಮ ಕವಯೋಽಪ್ಯತ್ರ ಮೋಹಿತಾಃ।
ನಾಭಿಗಚ್ಛನ್ತಿ ತನ್ನಿತ್ಯಂ ಹೇತುವಾದಶತೈರಪಿ ॥೫೫॥

'ಪುನರ್ಜನ್ಮವು ಇದೆ ಅಥವಾ ಇಲ್ಲ'-ಎಂಬ ವಿಷಯದಲ್ಲಿ ವಿದ್ವಾಂಸರೂ ವಿಮೋಹಿತರಾಗುತ್ತಾರೆ. ನೂರಾರು ಹೇತುವಾದಗಳಿಂದಲೂ ಅವರು ಇದರ ನಿಶ್ಚಯಾಂಶವನ್ನು ತಿಳಿಯಲಾರರು.

ಏಷಾ ಬ್ರಹ್ಮಕೃತಾ ಮಾಯಾ ದುರ್ವಿಜ್ಞೇಯಾ ಸುರಾಸುರೈಃ।
ಕಿಂ ಪುನರ್ಮಾನವೈರ್ಲೋಕೇ ಜ್ಞಾತುಕಾಮೈಃ ಕುಬುದ್ಧಿಭಿಃ ॥೫೬॥

ಇದು ಬ್ರಹ್ಮನೇ ಸೃಷ್ಟಿಸಿರುವ ಮಾಯೆಯ ಪ್ರಭಾವವಾಗಿದೆ. ದೇವಾಸುರರಿಗೂ ಇದನ್ನು ಅರಿಯುವುದು ಕಷ್ಟಸಾಧ್ಯವೇ ಸರಿ. ಹೀಗಿರುವಾಗ ಕುತ್ಸಿತವಾದ ಬುದ್ಧಿಯಿಂದ ಕೂಡಿರುವ ಮನುಷ್ಯರು ಇದನ್ನು ತಿಳಿಯಬೇಕೆಂದರೆ ಹೇಗೆ ತಾನೇ ಸಾಧ್ಯವಾಗುತ್ತದೆ?

ಕೇವಲಂ ಶ್ರದ್ಧಯಾ ದೇವಿ ಶ್ರುತಿಮಾತ್ರನಿವಿಷ್ಟಯಾ।
ತತೋಽಸ್ತೀತ್ಯೇವ ಮನ್ತವ್ಯಂ ತಥಾ ಹಿತಮವಾಪ್ನುಯಾತ್ ॥೫೭॥

ಕೇವಲ ವೇದವಚನಗಳಲ್ಲಿ ಪೂರ್ಣವಾಗಿ ಶ್ರದ್ಧೆಯನ್ನಿಟ್ಟು ಪರಲೋಕವೂ ಇದೆ; ಪುನರ್ಜನ್ಮವೂ ಇದೆ–ಎಂದು ತಿಳಿಯಬೇಕು. ಇದರಿಂದಲೇ ಆಸ್ತಿಕನು ಸುಖವನ್ನು ಹೊಂದುತ್ತಾನೆ.

ದೈವಗುಹ್ಯೇಷು ಚಾನ್ಯೇಷು ಹೇತುರ್ದೇವಿ ನಿರರ್ಥಕಃ।
ಬಧಿರಾನ್ಧವದೇವಾತ್ರ ವರ್ತಿತವ್ಯಂ ಹಿತೈಷಿಣಾ।
ಏತತ್ತೇ ಕಥಿತಂ ದೇವಿ ಋಷಿಗುಹ್ಯಂ ಪ್ರಜಾಹಿತಮ್ ॥೫೮॥

ದೇವತಾಸಂಬಂಧವಾದ ಇತರ ರಹಸ್ಯವಿಷಯಗಳಲ್ಲಿಯೂ ಯುಕ್ತಿವಾದವು (ತರ್ಕವು) ನಿರರ್ಥಕವಾಗುತ್ತದೆ. ತಮ್ಮ ಹಿತವನ್ನು ಬಯಸುವವರು ಹೇತುವಾದದ ವಿಷಯದಲ್ಲಿ ಕುರುಡರು-ಕಿವುಡರಂತೆಯೇ ಇರಬೇಕು. ಋಷಿರಹಸ್ಯವೂ ಮತ್ತು ಪ್ರಜೆಗಳಿಗೆ ಹಿತಕರವೂ ಆದ ಈ ವಿಷಯವನ್ನು ನಿನಗೆ ಹೇಳಿರುತ್ತೇನೆ." (ಮುಂದುವರಿಯುವುದು)

ಒಂಭತ್ತನೆಯ ಸಂಪುಟವು ಮುಗಿಯಿತು.

License No. WPP-13 Licensed to Post without pre-payment of postage
Posted at Thayagaraja Nagar Post Office

Reg. No. K.R.N.U. 86, BHARATHA DARSHANA R.N. 13245/57



Edited by : "Viswamitra", Printed & Published by
K. S. Kowshik at Bharatha Darshana Press, Bangalore - 560 028.